ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯ

(ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ
ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ)

ಸಂಪುಟ - ೧

(ಅಧ್ಯಾಯಗಳು : ೧ ರಿಂದ ೯ ರವರೆಗೆ)

ಸಂಪಾದನೆ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶಕರು:

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

'ಪಾಜಕ', ನಂ. 67, 50 ಅಡಿ ರಸ್ತೆ, ಹನುಮಂತನಗರ,
ಬೆಂಗಳೂರು - 560 019.

Śrīmadānandatīrthabhagavatpāda-praṇīta MAHĀBHĀRATATĀTPARYANIRṆAYA (Volume 1 : Adhyāya 1 to 9) — critically edited with Kannada rendering, explanatory notes and extracts from various Sanskrit Glosses by Vidyāvācaspati, Darśanaratnam, Sacchāstravicakṣaṇaratnam, Pravacanācārya, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapraviṇa, Gītāratnākara, Tattvavācaspati, Jñānaratnākara (and Recipient of Karnataka State Sanskrit Award-1999 & Karnataka Rajyotsava Award-2002 and Śrī Vidyāmānya-Mahāpraśasti of Śrī Pejavar Mutt, Udupi) **Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** "Pajaka",No.67, Fifty Feet Road, Hanumanthanagar, Bangalore - 560019.

Phone : 2660 2802
2662 2345.

Internet : www.vyasamadhwa.org

E-mail : info@vyasamadhwa.org

First Edition : 2004
Pages : 768 (lvi+712)

© **Dr. Vyasanakere Prabhanjanacharya**

Typeset by :
Rayiprāṇa Impressions and
Śrī VyāsaMadhva Samśodhana Pratiṣṭhāna

Printed at :
Rāṣṭrotthāna Mudraṇālaya,
Bangalore -19.

ವಿಷಯ ಸೂಚೀ

ಮುನ್ನುಡಿ xxxiii - lvi

ಮಹಾಭಾರತತಾತ್ಪರ್ಯನಿರ್ಣಯ ೧ – ೭೧೨
(ಅಧ್ಯಾಯ ೧ರಿಂದ ೯)

ಅಧ್ಯಾಯ – ೧ (ಸರ್ವಶಾಸ್ತ್ರಾರ್ಥನಿರ್ಣಯಃ) ೧–೧೦೧
(ಸೃಷ್ಟಿಯ ಪ್ರಾರಂಭ, ಶ್ರೀಹರಿಯ ಅಪೂರ್ವ ಮಹಿಮೆ, ಸಚ್ಛಾಸ್ತ್ರಗಳು, ಭಗವತತ್ವಗಳು, ಪಂಚಭೇದಗಳು, ಮೋಕ್ಷಸಾಧನಗಳು, ತಾರತಮ್ಯ)

ಮಂಗಲಾಚರಣೆ (೧) ೧
ಸೃಷ್ಟಿಯ ಆದಿಯಲ್ಲಿ ಭಗವತ್ಸ್ಥಿತಿಯ ವರ್ಣನೆ (೨) ೬
ಭಗವದುದರದಲ್ಲಿ ತ್ರಿವಿಧ ಜೀವರು ಇರುವ ರೀತಿ (೩) ೭
ಸೃಷ್ಟಿಯ ಪ್ರಯೋಜನ (೫) ೧೦
ವಾಸುದೇವ - ಜಯಾ ರೂಪಗಳು (೬) ೧೧
ಸಂಕರ್ಷಣ ಪ್ರದ್ಯುಮ್ನ ರೂಪಗಳು (೭) ೧೧
ಅನಿರುದ್ಧ ರೂಪ (೮) ೧೨
ಅನಿರುದ್ಧಸೃಷ್ಟಿಯ ಉಪಕ್ರಮ (೯) ೧೩
ಭಗವಂತನ ಬಗೆಬಗೆಯ ರೂಪಗಳು (೧೦) ೧೪
ಶ್ರೀಹರಿಯ ಅಪೂರ್ವ ಮಹಿಮೆ (೧೧) ೧೫
ಶ್ರೀಹರಿಯು ದೇಶತಃ, ಕಾಲತಃ, ಗುಣತಃ ಅನಂತ (೧೨) ೧೬
ಶ್ರೀಹರಿಯು ಸ್ವತಂತ್ರ - ಇತರರು ಅಸ್ವತಂತ್ರರು (೧೩) ೧೭
ಶ್ರೀಹರಿ ಹಾಗೂ ಜೀವರ ಬಿಂಬ ಪ್ರತಿಬಿಂಬ ಭಾವ (೧೪) ೧೭
ಲಕ್ಷ್ಮಾ್ಯದಿಗಳ ಪ್ರತಿಬಿಂಬಭಾವ (೧೫) ೧೯
ಗುಣತಾರತಮ್ಯದ ಬಗೆ (೧೬) ೨೦
ಮುಕ್ತಿಯಲ್ಲೂ ತಾರತಮ್ಯ (೧೭) ೨೧
ಜೀವ ತ್ರೈವಿಧ್ಯ (೧೮) ೨೧

ಜೀವರು ಅನಂತ (೧೯) ೨೨
ಶ್ರೀಹರಿಯ ಗುಣಗಳು ಅನಂತ (೨೦) ೨೩
ಹರಿಯೊಂದಿಗೆ ಇತರರಿಗೆ ಸಾಮ್ಯ ಐಕ್ಯಗಳು ಅಸಾಧ್ಯ (೨೧) ೨೪
ಸಕಲ ಶಾಸ್ತ್ರಗಳ ಸಾರ ಶ್ರೀಹರಿಯ ಪಾರಮ್ಯವೇ (೨೨) ೨೪
ಶ್ರೀಹರಿ ಸರ್ವೋತ್ತಮತ್ವಾದಿಗಳ ಬಗ್ಗೆ ಪ್ರಮಾಣ ಸಂಕಲನ (೨೩) ೨೫
ಜೀವೇಶ್ವರಭೇದ ಐದು ಕಾರಣದಿಂದಾದುದು (೨೪) ೩೧
ಹರಿಸರ್ವೋತ್ತಮತ್ವಾದಿ ಪ್ರಮೇಯದ ಉಪಸಂಹಾರ (೨೯) ೩೨
ಸಚ್ಛಾಸ್ತ್ರಗಳು - ಬ್ರಹ್ಮಸೂತ್ರ (೩೦) ೩೩
ವೈಷ್ಣವ ಪುರಾಣಗಳೂ, ಮನ್ವಾದಿ ಸ್ಮೃತಿಗಳೂ ಪ್ರಮಾಣವೇ (೩೨) ೩೪
ಇತರ ಶಾಸ್ತ್ರಗಳು ಮೋಹಕ (೩೪) ೩೫
ವೇದವಾಕ್ಯಗಳಿಗೂ ವಿಷ್ಣುಪರತ್ವವೇ ತಾತ್ಪರ್ಯ (೩೬) ೩೬
ಅವತಾರಗಳಲ್ಲಿ ಮೋಹಕಾರ್ಯ (೩೭) ೩೭
ಬಗೆಬಗೆಯ ಮೋಹಕ ಕಾರ್ಯಗಳು (೩೮) ೩೭
ಶ್ರೀಹರಿಯು ಸಕಲದೋಷದೂರ (೪೦) ೩೮
ಶಾಸ್ತ್ರದ ಮಹಾತಾತ್ಪರ್ಯ (೪೧) ೩೮
ಬ್ರಹ್ಮಸೂತ್ರಗಳು ನಿರ್ಣಾಯಕ (೪೨) ೩೯
ಬ್ರಹ್ಮಸೂತ್ರಗಳ ಹಿರಿಮೆ (೪೩) ೪೨
ಬ್ರಹ್ಮಸೂತ್ರಗಳ ಸಾರ (೪೪) ೪೨
ಮೋಹಶಾಸ್ತ್ರದ ಬಗ್ಗೆ ವರಾಹ ಹಾಗೂ ಬ್ರಹ್ಮಾಂಡಪುರಾಣಗಳ ಆಧಾರ (೪೮) ೪೧
ಸ್ಕಾಂದ ಪುರಾಣದ ಉದಾಹರಣೆ (೫೨) ೪೩
ಮೋಹಕವಿಚಾರಗಳು? (೫೩) ೪೩
ಪದ್ಮಪುರಾಣದ ಉಲ್ಲೇಖ - ವಿಷ್ಣುಕೃತ ಶಿವಪೂಜೆಯ ರಹಸ್ಯ (೫೬) ೪೫
ಶಿವನಿಗೆ ವಿಷ್ಣು ನೀಡಿದ ವರ (೫೭) ೪೫
ವೈಷ್ಣವ ಶಾಸ್ತ್ರಗಳಲ್ಲಿ ಇತರರ ಸರ್ವೋತ್ತಮತ್ವ ಬಂದಿಲ್ಲ (೫೯) ೪೬
ವೇದಗಳು ನಿರ್ದೋಷ (೬೦) ೪೭
ಶ್ರೀಹರಿಸರ್ವೋತ್ತಮತ್ವ ಸಾರುವ ವೇದವಾಕ್ಯಗಳು (೬೧) ೪೭

ಪಂಚಭೇದಗಳ ನಿರೂಪಣೆ (೬೮) ೫೪
ವಿಷ್ಣುವಿನ ಸ್ವಗತಭೇದವಿವರ್ಜಿತತ್ವ (೬೯) ೫೫
ಪಂಚಭೇದಗಳು (೭೦) ೫೫
ದೇವತಾತಾರತಮ್ಯ (೭೨) ೫೬
ಬ್ರಹ್ಮ ವಾಯುಗಳು ಸಮ -
ಅದರಂತೆ ಗರುಡ, ಶೇಷ, ರುದ್ರರು ಪರಸ್ಪರ ಸಮರು (೭೩) ೫೮
ಲಕ್ಷ್ಮೀನಾರಾಯಣರ ಹಿರಿಮೆ (೭೪) ೫೯
ಶ್ರೀಹರಿ ಪ್ರಸಾದವೇ ಮೋಚಕ (೭೭) ೬೧
ಮೋಕ್ಷನಿಡುವವನು ವಿಷ್ಣುಮಾತ್ರ (೭೮) ೬೨
ಮೋಕ್ಷ ಸಾಧನಗಳು (೭೯) ೬೩
ಪಂಚಭೇದಜ್ಞಾನದ ಅಗತ್ಯ (೮೧) ೬೩
ಶ್ರೀಹರಿಯ ಅವತಾರಗಳ ಬಗ್ಗೆ ಸರಿಯಾದ ಪರಿಜ್ಞಾನದ ಅಗತ್ಯ (೮೨) ೬೪
ಸೃಷ್ಟ್ಯಾದಿ ಸಕಲವೂ ಶ್ರೀಹರಿಯಿಂದಲೇ (೮೩) ೬೪
ವೇದಾದಿ ಸಕಲ ಶಾಸ್ತ್ರಗಳ ಪರಿಜ್ಞಾನವೂ ಅಗತ್ಯ (೮೪) ೬೫
ಭಕ್ತಿಯ ಲಕ್ಷಣ (೮೫) ೬೬
ಜೀವ ತ್ರೈವಿಧ್ಯದ ವಿವರ (೮೬) ೬೭
ಮುಕ್ತಿತಮಸ್ಸುಗಳ ಪ್ರಧಾನ ಸಾಧನ (೮೮) ೬೮
ಅಸುರರಿಗೆ ತಮಃಪ್ರಾಪ್ತಿಯ ಖಚಿತ ಲಕ್ಷಣ (೯೦) ೬೯
ಬಿಂಬ ರೂಪದ ಉಪಾಸನೆಯಿಂದಲೇ ಅಪರೋಕ್ಷಜ್ಞಾನ (೯೧) ೭೦
ಗುಣೋಪಾಸನೆಯಲ್ಲಿ ವೈವಿಧ್ಯ (೯೨) ೭೦
ಋಜುಗಳ ಲಕ್ಷಣ (೯೩) ೭೧
ಪ್ರತಿ ಪದವಿಗೂ ಪ್ರತ್ಯೇಕ ಗಣಗಳು - ಅಯೋಗ್ಯ ಕಾಮನೆ ನಿಷಿದ್ಧ (೯೪) ೭೨
ಉಪಾಸನೆಯ ಬಗೆ (೯೬) ೭೩
ಶ್ರೀಹರಿಯು ಸತ್ಯಸಂಕಲ್ಪ (೯೭) ೭೩
ದಾನಾದಿಗಳು ಭಕ್ತಿಗೆ ಸಾಧನಗಳು - ಭಕ್ತಿಯೇ ಮುಕ್ತಿಗೆ ಸಾಧನ (೯೮) ೭೪
ಶ್ರುತಿ ವಾಕ್ಯಗಳ ಉಲ್ಲೇಖ (೯೯) ೭೫

ಜ್ಞಾನದಿಂದಲೇ ಮೋಕ್ಷ (೧೦೧) ೭೭
ಹರಿಭಕ್ತಿಯಂತೆ ದೇವತಾಭಕ್ತಿ, ಗುರುಭಕ್ತಿಗಳೂ ತಾರಕ (೧೦೨) ೭೮
ಭಕ್ತಿಯಿಂದಲೇ ಮೋಕ್ಷ - ಮುಕ್ತಿಯಲ್ಲೂ ಭಕ್ತಿ (೧೦೩) ೭೮
ವೇದೋಕ್ತ ಭಕ್ತಿಲಕ್ಷಣ (೧೦೪) ೭೯
ಭಕ್ತರ ಹಿರಿಮೆ (೧೦೫) ೮೦
ಭಕ್ತಿಯ ಹಿರಿಮೆಗೆ ಗೀತಾವಾಕ್ಯ (೧೦೭) ೮೧
ದೈತ್ಯರು ಅನಾದಿ ದ್ವೇಷಿಗಳು (೧೦೮) ೮೨
ತಮಸ್ಸಿನಲ್ಲೂ ಹರಿದ್ವೇಷ (೧೦೯) ೮೨
ನವವಿಧ ದ್ವೇಷಗಳು (೧೧೦) ೮೩
ನಿರ್ಮಲಭಕ್ತಿಯ ಹಿರಿಮೆ (೧೧೨) ೮೪
ಭಕ್ತಿಯು ಸ್ವಭಾವದ ಗುಣ (೧೧೪) ೮೫
ಭಕ್ತಿಯಿಂದಲೇ ಹರಿತುಷ್ಟಿ - ಭಕ್ತಿಯಲ್ಲೂ ತಾರತಮ್ಯ (೧೧೫) ೮೬
ದ್ವೇಷದಲ್ಲೂ ಬಹುಬಗೆ (೧೧೭) ೮೭
ಭಕ್ತಿಯ ಪ್ರಭೇದಗಳು (೧೧೮) ೮೮
ದ್ವಾತ್ರಿಂಶಲ್ಲಕ್ಷಣಗಳು (೧೨೦) ೮೯
ಗುರುಲಕ್ಷಣ - ಬ್ರಹ್ಮದೇವರೇ ಮುಖ್ಯಗುರು (೧೨೧) ೮೯
ಕಲಿಯು ಸಮಗ್ರ ದುರ್ಲಕ್ಷಣೋಪೇತ (೧೨೨) ೯೧
ಗುರುಲಕ್ಷಣ - ಗುರುಪ್ರಸಾದದ ಮಹಿಮೆ (೧೨೩) ೯೨
ಗುರ್ವನುಗ್ರಹವಿಲ್ಲದ ವಿದ್ಯೆ ಫಲಿಸದು (೧೨೫) ೯೩
ಸ್ವಾವರರಿಗೂ ಗುರುತ್ವ (೧೨೬) ೯೪
ಬಿಂಬರೂಪದ ದರ್ಶನದಿಂದ ಮುಕ್ತಿ - ಕರ್ಮಕ್ಷಯ (೧೨೭) ೯೪
ಜ್ಞಾನಿಗೆ ಮೋಕ್ಷ ನಿಶ್ಚಿತ (೧೨೮) ೯೭
ಮಾರ್ಗನಿರೂಪಣೆ (೧೨೯) ೯೭
ಮುಕ್ತಿಯಲ್ಲೂ ಆಧೀನ್ಯ (೧೩೦) ೯೮
ಅಸುರರಲ್ಲೂ ಪ್ರತ್ಯೇಕ ಗಣಗಳು (೧೩೧) ೯೯
ಬ್ರಹ್ಮದೇವರ ಜೀವೋತ್ತಮತ್ವ (೧೩೨) ೧೦೦

ಅಧ್ಯಾಯೋಪಸಂಹಾರ (೧೩೩) ೧೦೦
ಗ್ರಂಥಕಾರರು (೧೩೪) ೧೦೦
ಗ್ರಂಥ ಮಹಿಮೆ (೧೩೫) ೧೦೧

ಅಧ್ಯಾಯ - ೨ (ಭಾರತವಾಕ್ಯೋದ್ಧಾರಃ) **೧೦೨-೨೪೨**
(ಮಹಾಭಾರತದ ಹಿರಿಮೆ, ನಿರ್ಣಯದ ಅಗತ್ಯ, ಕ್ಷತ್ರಿಯಾದಿಗಳಲ್ಲಿ ತಾರತಮ್ಯದ ಕ್ರಮ, ಸ್ತ್ರೀಯರಲ್ಲಿ ತಾರತಮ್ಯ, ಮಹಾಭಾರತದ ಶ್ಲೋಕಗಳ ವಿವರಣೆ)

ಮಂಗಲಾಚರಣೆ (೧) ೧೦೨
ಅಧ್ಯಾಯದ ವಿಷಯ (೨) ೧೦೩
ಗ್ರಂಥವಿಪ್ಲವಕ್ಕೆ ಕಾರಣಗಳು (೩) ೧೦೩
ನಿರ್ಣಯರಚನೆಗೆ ಕಾರಣ - ರಚನೆಗೆ ಅರ್ಹತೆ (೫) ೧೦೫
ಮಹಾಭಾರತವು ಸಕಲ ಶಾಸ್ತ್ರಗಳ ನಿರ್ಣಯ - ಮಹಾಭಾರತದ ತುಲಾಭಾರ (೯) ೧೦೬
ಮಹಾಭಾರತದ ನಿರ್ವಚನ (೧೧) ೧೦೭
ಮಹಾಭಾರತದಿಂದ ತತ್ತ್ವನಿರ್ಣಯದ ಕ್ರಮ (೧೨) ೧೦೮
ವಿಷ್ಣುವೇ ಸಕಲರಿಗೂ ಜ್ಞಾನಪ್ರದಾತ (೧೩) ೧೦೯
ಭೀಮನಿಂದ ತಿಳಿಯುವ ತತ್ತ್ವ (೧೫) ೧೧೧
ವಾಯುದೇವರು ಶ್ರೀಹರಿಯ ಪ್ರಧಾನ ಅಂಗ (೧೬) ೧೧೨
ಕ್ಷತ್ರಿಯರಲ್ಲಿ ಬಲವೇ ನಿರ್ಣಾಯಕ (೧೭) ೧೧೨
ನೈಸರ್ಗಿಕ ಬಲವೇ ಪ್ರಧಾನ (೧೮) ೧೧೩
ದೇವತೆಗಳಲ್ಲೂ ಬಲವೇ ನಿರ್ಣಾಯಕ (೧೯) ೧೧೪
ಬಲದ ಹಿರಿಮೆಗೆ ಕಾರಣ (೨೦) ೧೧೪
ಹರಿಪ್ರೀತಿಗೆ ಕಾರಣವಾಗುವ ಬಲವೇ ನಿರ್ಣಾಯಕ (೨೨) ೧೧೫
ಬ್ರಾಹ್ಮಣರಿಗೆ ಜ್ಞಾನವೇ ಪ್ರಧಾನ (೨೩) ೧೧೬
ಶ್ರೀಹರಿಯ ಬಲಕಾರ್ಯ ಜ್ಞಾನಕಾರ್ಯದ ರೂಪಗಳು (೨೪) ೧೧೭
ಶ್ರೀಹರಿಯ ಸಾಕ್ಷಾದವತಾರಗಳು (೨೫) ೧೧೮

ಶ್ರೀಹರಿಯ ವಿಶೇಷಾವೇಶದ ರೂಪಗಳು (೨೯) ೧೨೩
ಹನುಮಂತ, ಭೀಮಸೇನರೇ ಶ್ರೀಹರಿಯ ಪ್ರಧಾನ ಕಾರ್ಯಸಾಧಕರು (೩೪) ೧೨೫
ಬ್ರಹ್ಮ ವಾಯುಗಳು ಸಮರು (೩೫) ೧೨೬
ರೂಪವೇ ಸ್ತ್ರೀಯರ ಯೋಗ್ಯತೆಗೆ ಆಧಾರ (೩೬) ೧೨೬
ರೂಪದ ಪ್ರಾಧಾನ್ಯಕ್ಕೆ ಕಾರಣ (೩೭) ೧೨೭
ನೈಸರ್ಗಿಕ ರೂಪವೇ ನಿಜವಾದ ರೂಪ (೩೮) ೧೨೭
ಅಸುರಸ್ತ್ರೀಯರ ರೂಪವು ವರಾದಿಗಳ ಫಲ (೩೯) ೧೨೮
ರುಗ್ಮಿಣಿಯು ಸ್ತ್ರೀಯರಲ್ಲಿ ಸರ್ವೋತ್ತಮಳು (೪೦) ೧೨೯
ದ್ರೌಪದಿ ಲಕ್ಷ್ಮಿಯ ಅನಂತರದ ಹಿರಿಯಳು (೪೧) ೧೨೯
ದ್ರೌಪದಿಯ ಭಗವತ್ಕಾರ್ಯದ ರೀತಿ (೪೨) ೧೨೯
ಬಲರಾಮ, ಅರ್ಜುನಾದಿಗಳು ಅನಂತರದವರು (೪೩) ೧೨೯
ಹನುಮಂತನ ಅನಂತರ ಲಕ್ಷ್ಮಣಾದಿಗಳು (೪೪) ೧೨೯
ರಾಮರೂಪ, ಕೃಷ್ಣರೂಪಗಳ ವಿಶೇಷ ಹಿರಿಮೆ (೪೫) ೧೩೩
ಪ್ರಾದುರ್ಭಾವದ್ವಯದಲ್ಲಿ ಸಾಧನನಿರ್ಣಯ (೪೬) ೧೩೪
ಕೃಷ್ಣರೂಪದ ವಿಶೇಷ ಹಿರಿಮೆ - ಮಹಾಭಾರತದ ವಿಶೇಷ ಹಿರಿಮೆ (೪೮) ೧೩೫
ಮಹಾಭಾರತದಲ್ಲಿ ರಾಮಾಯಣ (೫೦) ೧೩೬
ಮಾರ್ಕಂಡೇಯ ಪುರಾಣದಲ್ಲಿ ಮಹಾಭಾರತದ ಪ್ರಶಂಸೆ (೫೨) ೧೩೭
ವಾಯುಪ್ರೋಕ್ತಾದಿಗಳಲ್ಲಿ ಮಹಾಭಾರತದ ಪ್ರಶಂಸೆ (೫೪) ೧೩೯
ಮಹಾಭಾರತದಲ್ಲಿ ಬಂದಿರುವಂತೆ ಶಾಸ್ತ್ರಾರ್ಥನಿರ್ಣಯ (೫೭) ೧೪೨
ಮಹಾಭಾರತದ ಮಂಗಲಾಚರಣಶ್ಲೋಕ (೫೮) ೧೪೩
ಮಂಗಲಾಚರಣ ಶ್ಲೋಕದ ಪೂರ್ವಾರ್ಧದ ಅರ್ಥವಿವರಣೆ (೫೯) ೧೪೪
ಮಂಗಲಾಚರಣ ಶ್ಲೋಕದ ಉತ್ತರಾರ್ಧದ ಅರ್ಥವಿವರಣೆ (೬೦) ೧೪೬
ಮಂಗಲಶ್ಲೋಕದ ತಾತ್ಪರ್ಯ (೬೧) ೧೪೮
ಮಹಾಭಾರತದ ಕೆಲವು ಶ್ಲೋಕಗಳ ವಿವರಣೆ (೬೨) ೧೪೯
ಸೃಷ್ಟಿ, ಲಯಗಳ ಅಂತರಾರ್ಥ (೬೩) ೧೫೦
ಮುಕ್ತಿ ನೀಡುವುದೇ ದೇವತೆಗಳ ಸೃಷ್ಟಿ (೬೪) ೧೫೧

ತಮಃಪ್ರಾಪ್ತಿಯೇ ಅಸುರರಿಗೆ ಲಯ (೬೫) ೧೫೧
ಮಹಾಭಾರತದ ಪ್ರಧಾನ ಸಂದೇಶ (೬೬) ೧೫೨
ಮಹಾಭಾರತವು ನಾರಾಯಣ ಕಥೆ (೬೭) ೧೫೩
ಶ್ರೀಹರಿಯು ಮಹಾಭಾರತದಲ್ಲಿ ವರ್ಣಿತನಾಗಿರುವ ಪರಿ (೬೮) ೧೫೪
ಶ್ರೀಹರಿಸರ್ವೋತ್ತಮತ್ವದ ಪ್ರಯೋಜನ (೬೯) ೧೫೪
ಮಹಾಭಾರತ ನಿರ್ಣಯಕ್ಕೆ ಪ್ರತಿಜ್ಞೆ (೭೦) ೧೫೫
ಹರಿವಂಶದ ವಾಕ್ಯಗಳ ಉಲ್ಲೇಖ (೭೧) ೧೫೬
ಮಹಾಭಾರತದಲ್ಲಿ ಹರಿಸರ್ವೋತ್ತಮತ್ವ (೭೨) ೧೫೭
ಹರಿಸ್ಮರಣೆ ಮುಖ್ಯವಿಧಿ - ವಿಸ್ಮರಣೆ ಮುಖ್ಯ ನಿಷೇಧ (೭೩) ೧೫೭
ಶ್ರೀಹರಿಯು ಅಗಮ್ಯ ಮಹಿಮ (೭೪) ೧೫೮
ಹರಿಯನ್ನು ಹರಿಯೇ ಬಲ್ಲ (೭೫) ೧೫೯
ಶ್ರೀಹರಿಯ ಜಗದ್ವ್ಯಾಪಾರದ ಪರಿ (೭೬) ೧೫೯
ಶ್ರೀಹರಿಯು ಅಪ್ರಮೇಯ (೭೭) ೧೬೦
ಶ್ರೀಹರಿಯು ವಸುದೇವಾದಿಗಳ ಪುತ್ರನಲ್ಲ (೭೮) ೧೬೦
ಶ್ರೀಹರಿಗೆ ಜನನ ಮರಣಾದಿದೋಷಗಳಿಲ್ಲ (೭೯) ೧೬೧
ಶ್ರೀಹರಿಯ ಲೋಕವಿಡಂಬನೆಯ ಪರಿ (೮೦) ೧೬೨
ಶ್ರೀಹರಿಯ ಅಸುರ ಮೋಹನದ ರೀತಿ (೮೧) ೧೬೨
ಶ್ರೀಹರಿಯ ಸಕಲ ಪ್ರಾದುರ್ಭಾವಗಳು ಅಪ್ರಾಕೃತ (೮೪) ೧೬೪
ಅಸುರರಂತೆ ಸಜ್ಜನರಿಗೂ ಮೋಹಕವಿಸುವ ಪರಿ (೮೫) ೧೬೪
ಶ್ರೀಹರಿಸರ್ವೋತ್ತಮತ್ವಾದಿ ಪ್ರಮೇಯಗಳ ಬಗ್ಗೆ
ಗೀತಾವಾಕ್ಯಗಳ ಉಲ್ಲೇಖ (೮೬) ೧೬೬
ಶ್ರೀಹರಿಯ ಜಗಜ್ಜನ್ಮಾದಿ ಕರ್ತೃತ್ವ (೮೭) ೧೬೭
ಮೂರ್ಖರು ಮೋಹಗೊಳ್ಳುವ ಪರಿ (೮೮) ೧೬೮
ಅಸುರರಿಗೆ ದೊರೆಯುವ ದುಷ್ಫಲ (೮೯) ೧೬೯
ಮಹಾತ್ಮರ ಚಿಂತನೆಯ ಕ್ರಮ (೯೦) ೧೬೯
ಅರ್ಜುನನ ಮಾಡಿದ ಸ್ತೋತ್ರದಲ್ಲಿ ಶ್ರೀಹರಿಸರ್ವೋತ್ತಮತ್ವ (೯೧) ೧೭೦

ಜ್ಞಾನದ ಹಿರಿಮೆ (೯೨) ೧೭೦
ಮಹಾಲಕ್ಷ್ಮಿ ಜಗತ್ತಿನ ತಾಯಿ (೯೩) ೧೭೧
ಶ್ರೀಹರಿಯ ಕ್ಷರಾಕ್ಷರ ಪುರುಷೋತ್ತಮತ್ವ (೯೪) ೧೭೨
ದೈವೀಸಂಪತ್ತು ಆಸುರೀ ಸಂಪತ್ತುಗಳ ವಿವೇಚನೆ (೯೯) ೧೭೩
ಅಸುರರ ಉಪಾಸನೆಯ ಪರಿ (೧೦೦) ೧೭೪
ಹರಿದ್ವೇಷಿಗಳಿಗೆ ದೊರಕುವ ಅಧೋಗತಿ (೧೦೩) ೧೭೭
ಸಾತ್ವಿಕಜ್ಞಾನದ ಲಕ್ಷಣ (೧೦೫) ೧೭೭
ಸಕಲ ಶಾಸ್ತ್ರಗಳ ರಹಸ್ಯ (೧೦೬) ೧೭೭
ಪಂಚರಾತ್ರವು ನಾರಾಯಣಕೃತ (೧೦೮) ೧೭೯
ಪಂಚರಾತ್ರದ ಹಿರಿಮೆ (೧೦೯) ೧೭೯
ಪಂಚರಾತ್ರಜ್ಞಾನದ ಮಹಿಮೆ (೧೧೦) ೧೮೦
ಮಹಾಭಾರತದಲ್ಲಿ ಜೀವೇಶ್ವರಭೇದ (೧೧೧) ೧೮೧
ವೈಶಂಪಾಯನ ಉವಾಚ :
ಬ್ರಹ್ಮನು ಶಿವನಿಗೆ ಹೇಳಿದ ಹರಿಮಹಿಮೆ (೧೧೩) ೧೮೩
ಭೀಮ ಹೇಳಿದ ಶ್ರೀಹರಿಯ ಗುಣಗಳ ಆನಂತ್ಯ (೧೧೫) ೧೮೩
ಶ್ರೀಕೃಷ್ಣ ಯುಧಿಷ್ಠಿರನಿಗೆ ತಿಳಿಸಿದ ಹರಿಸರ್ವೋತ್ತಮತ್ವ (೧೧೭) ೧೮೫
ಭವಿಷ್ಯತ್ಪರ್ವದಲ್ಲಿ ಬಂದಿರುವ ಭಾರತದ ತಾತ್ಪರ್ಯ (೧೧೯) ೧೮೬
ಸಮಾಧಿ ಮೊದಲಾದ ಮೂರು ಭಾಷೆಗಳ ಲಕ್ಷಣ (೧೨೧) ೧೮೭
ವಾಯುದೇವರು ಶ್ರೀಹರಿಯ ಪ್ರಥಮಾಂಗರು - ದ್ವಿತೀಯಾಂಗ ಭಾರತಿ (೧೨೪) ೧೯೨
ಭಾರತಿಯ ಅವತಾರಗಳು (೧೨೬) ೧೯೨
ಶೇಷಾದಿಗಳು ಶ್ರೀಹರಿಯ ತೃತೀಯಾಂಗರು (೧೨೭) ೧೯೩
ಪ್ರದ್ಯುಮ್ನಾದಿಗಳು ಶ್ರೀಹರಿಯ ಸೇವೆಗೆ ಅಂಗ (೧೨೯) ೧೯೪
ಭಾಗವತದಲ್ಲಿ ಶ್ರೀಹರಿಯ ಅವತಾರರಹಸ್ಯದ ನಿರೂಪಣೆ (೧೩೦) ೧೯೫
ಶ್ರೀಹರಿಗೆ ಸೀತಾವಿಯೋಗಾದಿಗಳು ಸರ್ವಥಾ ಇಲ್ಲ (೧೩೭) ೧೯೭
ಶಿವಾದಿಗಳ ಪೂಜೆ ಅಸುರಮೋಹಕ (೧೩೩) ೧೯೮
ಶ್ರೀವಿಷ್ಣುಸರ್ವೋತ್ತಮತ್ವವೇ ಸಕಲ ಶಾಸ್ತ್ರಗಳ ನಿರ್ಣಯ (೧೩೫) ೨೦೦

ಮಹಾಭಾರತದ ಅರ್ಥತ್ರೈವಿಧ್ಯ (೧೩೬) ೨೦೦
ಮನ್ವಾದಿ ಅರ್ಥತ್ರಯ (೧೩೭) ೨೦೨
ಮಹಾಭಾರತದ ಆಸ್ತೀಕಾರ್ಥದ ವಿವರಣೆ (೧೩೮) ೨೦೪
ಮನ್ವಾದ್ಯರ್ಥದ ವಿವರಣೆ (೧೩೯) ೨೦೬
ಔಪರಿಚರಾರ್ಥದ ವಿವರಣೆ (೧೪೦) ೨೦೮
ಭೀಮ ಹತ್ತು ಗುಣಗಳ ಸಂಕೇತ (೧೪೧) ೨೦೯
ದ್ರೌಪದಿ ಸರ್ವವಿದ್ಯೆಯ ಸಂಕೇತ (೧೪೨) ೨೧೧
ದುರ್ಯೋಧನ ಅಜ್ಞಾನಾದಿಗಳ ಸ್ವರೂಪ -
ದುಃಶಾಸನ ಮಿಥ್ಯಾಜ್ಞಾನದ ಸಂಕೇತ (೧೪೩) ೨೧೨
ಶಕುನಿ ನಾಸ್ತಿಕ್ಯದ ಸಂಕೇತ -
ಕೌರವರು ದೋಷಗಳ ಸಂಕೇತ ಅಶ್ವತ್ಥಾಮ ಅಹಂಕಾರದ ಸಂಕೇತ (೧೪೪) ೨೧೨
ದ್ರೋಣಾದಿಗಳು ಇಂದ್ರಿಯಗಳು -
ಕುರುಪಾಂಡವ ಸೈನಿಕರು ಪಾಪಪುಣ್ಯಗಳು ವಿಷ್ಣು ಸರ್ವನಿಯೋಜಕ (೧೪೫) ೨೧೨
ಮಹಾಭಾರತದ ಅಧ್ಯಾತ್ಮಾರ್ಥ (೧೪೬) ೨೧೫
ಮಹಾಭಾರತದ ಅರ್ಥ ದುರ್ಗಮ (೧೪೭) ೨೧೬
ಮಹಾಭಾರತದಲ್ಲಿ ವಾಯುಜೀವೋತ್ತಮತ್ವ (೧೪೯) ೨೧೭
ಹನುಮಂತನ ಜೀವೋತ್ತಮತ್ವ (೧೫೦) ೨೧೮
ಬಳಿತ್ಥಾಸೂಕ್ತದಲ್ಲಿ ವಾಯುಮಹಿಮೆ (೧೫೧) ೨೧೯
ಬಳಿತ್ಥಾಸೂಕ್ತದಲ್ಲಿ ಅವತಾರತ್ರಯ (೧೫೨) ೨೨೦
ಬಳಿತ್ಥಾಸೂಕ್ತದಲ್ಲಿ ಮಧ್ವಾವತಾರದ ಕಾರ್ಯ (೧೫೩) ೨೨೦
ಮಧ್ವರೂಪದಿಂದ ಮಾಡಿದ ಪರಮತಖಂಡನೆ (೧೫೪) ೨೨೧
ಮಧ್ವರಿಗೆ ಗರ್ಭವಾಸಾದಿ ದುಃಖಗಳಿಲ್ಲ - ಅವರ ಪೂರ್ಣಪ್ರಜ್ಞತ್ವ (೧೫೫) ೨೨೨
ವಾಯುಜೀವೋತ್ತಮತ್ವ (೧೫೬) ೨೨೨
ವಾಯುದೇವರು ರುದ್ರಾದಿಗಳಿಗೂ ಬಲ (೧೫೭) ೨೨೩
ವಾಯುದೇವರ ಹಿರಿಮೆ (೧೫೮) ೨೨೪
ಭೀಮಸೇನ ಸಮೋ ನಾಸ್ತಿ (೧೫೯) ೨೨೭

ಯುಧಿಷ್ಠಿರ ಸಾರಿದ ಭೀಮನ ಹಿರಿಮೆ (೧೬೧) ೨೨೮
ದುರ್ಯೋಧನ ತಿಳಿಸಿದ ಭೀಮನ ಮಹಿಮೆ (೧೬೨) ೨೨೮
ಶ್ರೀಕೃಷ್ಣ ಮಾಡಿದ ಭೀಮಪ್ರಶಂಸೆ (೧೬೬) ೨೩೦
ದ್ರೌಪದಿಯ ಮಹಾಮಹಿಮೆ (೧೬೯) ೨೩೨
ಭೀಮನ ಅನಂತರ ಬಲರಾಮ (೧೭೨) ೨೩೪
ಭೀಮ ಬಲರಾಮರ ಅನಂತರ ಅರ್ಜುನ (೧೭೪) ೨೩೫
ಅರ್ಜುನನ ಹಿರಿಮೆಯ ರಹಸ್ಯ (೧೭೭) ೨೩೬
ಅಧ್ಯಾಯದ ಉಪಸಂಹಾರ (೧೭೯) ೨೩೮

ಅಧ್ಯಾಯ - ೩

(ಸರ್ಗಾನುಸರ್ಗಪ್ರಲಯ ಪ್ರಾದುರ್ಭಾವನಿರ್ಣಯಃ) ೨೪೩-೩೨೨

(ಮುಂದುವರೆದ ಜಗತ್ಸೃಷ್ಟಿ, ಬ್ರಹ್ಮ ವಾಯು ಮೊದಲಾದವರ ಉತ್ಪತ್ತಿ, ಬ್ರಹ್ಮಾಂಡಸೃಷ್ಟಿ, ಶ್ರೀಹರಿಯ ಮತ್ಸ್ಯಾದಿ ಅವತಾರಗಳು, ಶ್ರೀರಾಮಾವತಾರ)

ಶ್ರೀವ್ಯಾಸಸ್ತುತಿ (೧) ೨೪೩
ಶ್ರೀರಾಮಸ್ತುತಿ (೨) ೨೪೬
ಶ್ರೀಕೃಷ್ಣಸ್ತುತಿ (೩) ೨೪೮
ನಾರಾಯಣಂ ನಮಸ್ಕೃತ್ಯ ಶ್ಲೋಕ ಹಾಗೂ ಅದರ ಅರ್ಥವಿವರಣೆ (೪) ೨೫೦
ಜಯ ಎಂದರೆ ಭಾರತ, ನರೋತ್ತಮ ಎಂದರೆ ವಾಯು (೫) ೨೫೦
ನಾರಾಯಣ ವ್ಯಾಸರು ವಾಚ್ಯ ವಕ್ಯಗಳು (೬) ೨೫೧
ನರ ಉಪಸಾಧಕ, ದೇವಿ ಮಹಾಲಕ್ಷ್ಮಿ (೭) ೨೫೧
ವಿಷಯೋಪಕ್ರಮ (೮) ೨೫೪
ಮುಂದುವರೆದ ಜಗತ್ಸೃಷ್ಟಿ - ಬ್ರಹ್ಮೋತ್ಪತ್ತಿ (೯) ೨೫೫
ಸಂಕರ್ಷಣಜಯಾಪುತ್ರನಾಗಿ ವಾಯು (೧೦) ೨೫೬
ಪ್ರದ್ಯುಮ್ನ ಕೃತಿಯರಿಂದ ಸರಸ್ವತಿ ಭಾರತಿಯರ ಸೃಷ್ಟಿ (೧೧) ೨೫೭
ಬ್ರಹ್ಮ ವಾಯುಗಳಿಂದ ಶೇಷ ಗರುಡರ ಸೃಷ್ಟಿ (೧೨) ೨೫೮
ವಿಷ್ವಕ್ಸೇನನ ಉತ್ಪತ್ತಿ (೧೪) ೨೬೦

ಅನಿರುದ್ಧನಿಂದ ತತ್ತ್ವಸೃಷ್ಟಿ (೧೫) ೨೬೧
ಮಹತ್ತತ್ತ್ವ, ಅಹಂಕಾರ ತತ್ತ್ವ, ಬುದ್ಧಿತತ್ತ್ವದ ಸೃಷ್ಟಿ (೧೬) ೨೬೨
ಮನಸ್ಸು ಮೊದಲಾದವುಗಳ ಸೃಷ್ಟಿ (೧೭) ೨೬೩
ಬ್ರಹ್ಮದೇವರಿಂದ ಸಕಲ ದೇವತೆಗಳ ಸೃಷ್ಟಿ (೧೮) ೨೬೫
ವಾಸುದೇವನಿಂದ ಮಾಯೆಯಲ್ಲಿ ವಿಷ್ಣುವಿನ
ಬ್ರಹ್ಮ ವಿಷ್ಣು ಶಿವ ರೂಪಗಳ ಪ್ರಾದುರ್ಭಾವ (೧೯) ೨೬೭
ಬ್ರಹ್ಮಾಂಡಸೃಷ್ಟಿಗಾಗಿ ದೇವತೆಗಳ ಪ್ರಾರ್ಥನೆ (೨೦) ೨೬೮
ಬ್ರಹ್ಮಾಂಡ ಸೃಷ್ಟಿ (೨೧) ೨೬೯
ನಾಭಿಕಮಲದಿಂದ ಬ್ರಹ್ಮದೇವರ ಉತ್ಪತ್ತಿ (೨೨) ೨೬೯
ವಾಯುಜೀವೋತ್ತಮತ್ವದ ನಿರೂಪಣೆ (೨೩) ೨೭೦
ಬ್ರಹ್ಮದೇವರಿಂದ ಲೋಕಸೃಷ್ಟಿ ಹಾಗೂ ಶಿವಾದಿ ದೇವತಾಸೃಷ್ಟಿ (೨೫) ೨೭೩
ದೇವತಾತಾರತಮ್ಯದ ಜ್ಞಾಪಕವಾದ ಸೃಷ್ಟಿ (೨೯) ೨೭೬
ಗುಣಗಳ ಅಭಿಭವಕ್ಕೆ ಕಾರಣಗಳು (೩೦) ೨೭೬
ಪ್ರಳಯ ಕಾಲದಲ್ಲಿ ಶ್ರೀಹರಿಯ ಇರುವಿಕೆಯ ರೀತಿ (೩೧) ೨೭೮
ಶ್ರೀಹರಿಯಿಂದ ಜಗತ್ಸೃಷ್ಟಿಯ ಪುನರಾವೃತ್ತಿ - ಜೀವಾದಿಗಳ ನಿತ್ಯತ್ವ (೩೨) ೨೭೯
ಜಗತ್ಪ್ರವಾಹದ ರೀತಿ (೩೩) ೨೮೦
ಶ್ರೀಹರಿಯ ಸೃಷ್ಟಿಕರ್ತೃತ್ವಾದಿಗಳ ಪರಿಜ್ಞಾನದ ಫಲ (೩೪) ೨೮೧
ಕಶ್ಯಪರಿಂದ ಪುನಃ ದೇವತೆಗಳ ಅವತಾರ (೩೬) ೨೮೨
ಶ್ರೀಹರಿಯ ವರಾಹಾವತಾರ (೩೭) ೨೮೩
ಹಿರಣ್ಯಕಶಿಪು ಹಿರಣ್ಯಾಕ್ಷರು (೩೮) ೨೮೪
ವರಾಹನಿಂದ ಹಿರಣ್ಯಾಕ್ಷನ ವಧೆ (೩೯) ೨೮೫
ಮತ್ಸ್ಯರೂಪದಿಂದ ಹಯಗ್ರೀವಾಸುರನ ವಧೆ (೪೦) ೨೮೬
ಮತ್ಸ್ಯಾವತಾರ (೪೧) ೨೮೭
ನರಸಿಂಹಾವತಾರಕ್ಕಾಗಿ ಸುರರ ಪ್ರಾರ್ಥನೆ (೪೨) ೨೮೮
ಸಮುದ್ರಮಥನಕಾಲದಲ್ಲಿ ಮಂದರ ಧರಿಸಿದ ಕೂರ್ಮ (೪೪) ೨೮೯
ವಾಮನಾವತಾರ (೪೫) ೨೯೦

ಬಲಿಯನ್ನು ಯಾಚಿಸಲು ಕಾರಣ (೪೭) ೨೯೧
ಪರಶುರಾಮಾವತಾರಕ್ಕಾಗಿ ಪ್ರಾರ್ಥನೆ (೪೮) ೨೯೨
ಪರಶುರಾಮಾವತಾರ (೫೧) ೨೯೩
ರಾವಣ ಕುಂಭಕರ್ಣರ ಜನನ - ವರಪ್ರಾಪ್ತಿ (೫೨) ೨೯೪
ರಾಮಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ (೫೪) ೨೯೬
ಕಾಲಗಣನೆ - ಬ್ರಹ್ಮದೇವರ ದಿನ (೫೬) ೨೯೭
ಮಧುಕೈಟಭರ ವಧೆ (೫೮) ೨೯೭
ಶ್ರೀರಾಮಾವತಾರ (೬೩) ೩೦೨
ನರ ವಾನರರಾಗಿ ದೇವತೆಗಳ ಅವತಾರ (೬೪) ೩೦೪
ಹನುಮಂತನಾಗಿ ವಾಯು- ವಾಲಿಯಾಗಿ ಇಂದ್ರ (೬೫) ೩೦೫
ಸುಗ್ರೀವ, ಜಾಂಬವಂತರ ಉತ್ಪತ್ತಿ (೬೬) ೩೦೭
ತಾರ ಮೊದಲಾದವರ ಜನನ (೬೮) ೩೦೮
ಸುಷೇಣನಾಗಿ ವರುಣ, ಮೈಂದ ವಿವಿದರಾಗಿ ಅಶ್ವಿನೀ ದೇವತೆಗಳು,
ನೀಲನಾಗಿ ಅಗ್ನಿ, ಭರತನಾಗಿ ಕಾಮ (೭೨) ೩೧೦
ಶ್ರೀಹರಿಯ ಚಕ್ರ, ಶಂಖಾದಿ ರೂಪದಲ್ಲಿ ಮಹಾಲಕ್ಷ್ಮಿ (೭೩) ೩೧೧
ಗದೆಯಾಗಿ ವಾಯು- ಶಾರ್ಙ್ಗವಾಗಿ ಸರಸ್ವತಿ ಇತ್ಯಾದಿ (೭೪) ೩೧೨
ಚಕ್ರಾದಿಗಳ ಅವಾಂತರ ದೇವತೆಗಳು (೭೫) ೩೧೪
ಭರತ, ಶತ್ರುಘ್ನ, ಲಕ್ಷ್ಮಣರ ಅವತಾರ (೭೬) ೩೧೪
ದಶರಥನ ನಾಲ್ವರು ಪುತ್ರರು (೭೭) ೩೧೭
ವಾಸುದೇವಾದಿ ನಾಲ್ಕು ರೂಪಗಳು ದಶರಥನ ಪುತ್ರರಾಗಿ (೭೮) ೩೧೭
ಕಾರ್ತವೀರ್ಯಾರ್ಜುನಾದಿಗಳಲ್ಲಿ ಶ್ರೀಹರಿಯ ವಿಶೇಷ ಸನ್ನಿಧಾನ (೭೯) ೩೧೮
ಸೀತೆಯಾಗಿ ಮಹಾಲಕ್ಷ್ಮಿಯ ಪ್ರಾದುರ್ಭಾವ (೮೦) ೩೧೯
ಅಧ್ಯಾಯೋಪಸಂಹಾರ (೮೧) ೩೨೧
ಸರ್ಗಭೇದದ ಬಗ್ಗೆ ನಿರ್ಣಯ (೮೨) ೩೨೨

ಅಧ್ಯಾಯ - ೪ (ಶ್ರೀರಾಮಚರಿತೇ ಅಯೋಧ್ಯಾಪ್ರವೇಶಃ) ೩೨೩-೩೭೫
(ತಾಟಕಾವಧೆ, ಸುಬಾಹುವಧೆ, ಮಾರೀಚನಿಗ್ರಹ, ಅಹಲ್ಯೋದ್ಧಾರ, ಶಿವಧನುರ್ಭಂಗ, ಸೀತಾಕಲ್ಯಾಣ, ರಾಮಪರಶುರಾಮರ ಸಮಾಗಮ)

ಶ್ರೀರಾಮ ಬೆಳೆದದ್ದು ಲೋಕದೃಷ್ಟಿಯಿಂದ (೧) ೩೨೩
ರಾಮನ ಮುಖದರ್ಶನದಿಂದ ಮೋಕ್ಷಾನಂದ (೨) ೩೨೫
ಪುರಜನರಿಗೂ ಪರಮಾನಂದ (೩) ೩೨೬
ವಿಶ್ವಾಮಿತ್ರರ ಆಗಮನ (೪) ೩೨೭
ವಿಶ್ವಾಮಿತ್ರರೊಡನೆ ರಾಮಲಕ್ಷ್ಮಣರು (೫) ೩೨೯
ಅಸ್ತ್ರಪಡೆದು ಅನುಗ್ರಹಿಸಿದ ಶ್ರೀರಾಮ (೬) ೩೩೦
ತಾಟಕಾಸಂಹಾರ - ಸುಬಾಹುವಧೆ (೭) ೩೩೨
ಸಮುದ್ರದಲ್ಲಿ ಬಿದ್ದ ಮಾರೀಚ (೮) ೩೩೩
ಸೀತಾ ಸ್ವಯಂವರಕ್ಕೆಂದು ವಿದೇಹದತ್ತ (೯) ೩೩೪
ಅಹಲ್ಯೋದ್ಧಾರ (೧೦) ೩೩೫
ರಾಮ ದರ್ಶನದಿಂದ ವಿದೇಹದ ಜನರಿಗೆ ಆದ ಆನಂದ (೧೨) ೩೪೦
ಶ್ರೀರಾಮ ಲಕ್ಷ್ಮಣ ವಿಶ್ವಾಮಿತ್ರರನ್ನು ಸ್ವಾಗತಿಸಿದ ಜನಕರಾಜ (೧೪) ೩೪೨
ರಾಮನೇ ಅಳಿಯ (೧೫) ೩೪೩
ಶಿವ ಧನುಸ್ಸಿನ ಇತಿಹಾಸ (೧೬) ೩೪೩
ಜನಕರಾಜನಿಗೆ ಶಿವಧನುಃ ಪ್ರಾಪ್ತಿ (೧೭) ೩೪೪
ಶಿವಧನುಸ್ಸಿನ ಹಿರಿಮೆ (೧೮) ೩೪೪
ಶಿವ ಧನುಸ್ಸು ಕಟ್ಟಿದವರಿಗೆ ಸೀತೆ (೧೯) ೩೪೫
ಶಿವ ಧನುಸ್ಸನ್ನು ಎತ್ತಲಾಗದ ದೈತ್ಯದಾನವಾದಿಗಳು (೨೦) ೩೪೬
ರಾವಣಾದಿಗಳ ಪರಾಭವ (೨೧) ೩೪೬
ಜನಕರಾಜನಿಗೆ ಬ್ರಹ್ಮನ ವಿಶೇಷವರ (೨೨) ೩೪೭
ಶಿವಧನುಸ್ಸು ಕಟ್ಟಿದ ಶ್ರೀರಾಮ (೨೪) ೩೪೮
ಶಿವಧನುರ್ಭಂಗ (೨೫) ೩೪೯

ಬಲಿಯನ್ನು ಯಾಚಿಸಲು ಕಾರಣ (೪೭) ೨೯೧
ಪರಶುರಾಮಾವತಾರಕ್ಕಾಗಿ ಪ್ರಾರ್ಥನೆ (೪೮) ೨೯೨
ಪರಶುರಾಮಾವತಾರ (೫೧) ೨೯೩
ರಾವಣ ಕುಂಭಕರ್ಣರ ಜನನ - ವರಪ್ರಾಪ್ತಿ (೫೨) ೨೯೪
ರಾಮಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ (೫೪) ೨೯೬
ಕಾಲಗಣನೆ - ಬ್ರಹ್ಮದೇವರ ದಿನ (೫೬) ೨೯೭
ಮಧುಕೈಟಭರ ವಧೆ (೫೮) ೨೯೭
ಶ್ರೀರಾಮಾವತಾರ (೬೩) ೩೦೨
ನರ ವಾನರರಾಗಿ ದೇವತೆಗಳ ಅವತಾರ (೬೪) ೩೦೪
ಹನುಮಂತನಾಗಿ ವಾಯು- ವಾಲಿಯಾಗಿ ಇಂದ್ರ (೬೫) ೩೦೫
ಸುಗ್ರೀವ, ಜಾಂಬವಂತರ ಉತ್ಪತ್ತಿ (೬೬) ೩೦೭
ತಾರ ಮೊದಲಾದವರ ಜನನ (೬೮) ೩೦೮
ಸುಷೇಣನಾಗಿ ವರುಣ, ಮೈಂದ ವಿವಿದರಾಗಿ ಅಶ್ವಿನೀ ದೇವತೆಗಳು,
ನೀಲನಾಗಿ ಅಗ್ನಿ , ಭರತನಾಗಿ ಕಾಮ (೭೨) ೩೧೦
ಶ್ರೀಹರಿಯ ಚಕ್ರ, ಶಂಖಾದಿ ರೂಪದಲ್ಲಿ ಮಹಾಲಕ್ಷ್ಮಿ (೭೩) ೩೧೧
ಗದೆಯಾಗಿ ವಾಯು- ಶಾರ್ಙ್ಗವಾಗಿ ಸರಸ್ವತಿ ಇತ್ಯಾದಿ (೭೪) ೩೧೨
ಚಕ್ರಾದಿಗಳ ಅವಾಂತರ ದೇವತೆಗಳು (೭೫) ೩೧೪
ಭರತ, ಶತ್ರುಘ್ನ, ಲಕ್ಷ್ಮಣರ ಅವತಾರ (೭೬) ೩೧೪
ದಶರಥನ ನಾಲ್ವರು ಪುತ್ರರು (೭೭) ೩೧೭
ವಾಸುದೇವಾದಿ ನಾಲ್ಕು ರೂಪಗಳು ದಶರಥನ ಪುತ್ರರಾಗಿ (೭೮) ೩೧೭
ಕಾರ್ತವೀರ್ಯಾರ್ಜುನಾದಿಗಳಲ್ಲಿ ಶ್ರೀಹರಿಯ ವಿಶೇಷ ಸನ್ನಿಧಾನ (೭೯) ೩೧೮
ಸೀತೆಯಾಗಿ ಮಹಾಲಕ್ಷ್ಮಿಯ ಪ್ರಾದುರ್ಭಾವ (೮೦) ೩೧೯
ಅಧ್ಯಾಯೋಪಸಂಹಾರ (೮೧) ೩೨೧
ಸರ್ಗಭೇದದ ಬಗ್ಗೆ ನಿರ್ಣಯ (೮೨) ೩೨೨

ಅಧ್ಯಾಯ - ೪ (ಶ್ರೀರಾಮಚರಿತೇ ಅಯೋಧ್ಯಾಪ್ರವೇಶಃ) ೩೨೩-೩೭೫
(ತಾಟಕಾವಧೆ, ಸುಬಾಹುವಧೆ, ಮಾರೀಚನಿಗ್ರಹ, ಅಹಲ್ಯೋದ್ಧಾರ, ಶಿವಧನುರ್ಭಂಗ, ಸೀತಾಕಲ್ಯಾಣ, ರಾಮಪರಶುರಾಮರ ಸಮಾಗಮ)

ಶ್ರೀರಾಮ ಬೆಳೆದದ್ದು ಲೋಕದೃಷ್ಟಿಯಿಂದ (೧) ೩೨೩
ರಾಮನ ಮುಖದರ್ಶನದಿಂದ ಮೋಕ್ಷಾನಂದ (೨) ೩೨೫
ಪುರಜನರಿಗೂ ಪರಮಾನಂದ (೩) ೩೨೬
ವಿಶ್ವಾಮಿತ್ರರ ಆಗಮನ (೪) ೩೨೭
ವಿಶ್ವಾಮಿತ್ರರೊಡನೆ ರಾಮಲಕ್ಷ್ಮಣರು (೫) ೩೨೯
ಅಸ್ತ್ರಪಡೆದು ಅನುಗ್ರಹಿಸಿದ ಶ್ರೀರಾಮ (೬) ೩೩೦
ತಾಟಕಾಸಂಹಾರ - ಸುಬಾಹುವಧೆ (೭) ೩೩೨
ಸಮುದ್ರದಲ್ಲಿ ಬಿದ್ದ ಮಾರೀಚ (೮) ೩೩೩
ಸೀತಾ ಸ್ವಯಂವರಕ್ಕೆಂದು ವಿದೇಹದತ್ತ (೯) ೩೩೪
ಅಹಲ್ಯೋದ್ಧಾರ (೧೦) ೩೩೫
ರಾಮ ದರ್ಶನದಿಂದ ವಿದೇಹದ ಜನರಿಗೆ ಆದ ಆನಂದ (೧೨) ೩೪೦
ಶ್ರೀರಾಮ ಲಕ್ಷ್ಮಣ ವಿಶ್ವಾಮಿತ್ರರನ್ನು ಸ್ವಾಗತಿಸಿದ ಜನಕರಾಜ (೧೪) ೩೪೨
ರಾಮನೇ ಅಳಿಯ (೧೫) ೩೪೩
ಶಿವ ಧನುಸ್ಸಿನ ಇತಿಹಾಸ (೧೬) ೩೪೩
ಜನಕರಾಜನಿಗೆ ಶಿವಧನುಃ ಪ್ರಾಪ್ತಿ (೧೭) ೩೪೪
ಶಿವಧನುಸ್ಸಿನ ಹಿರಿಮೆ (೧೮) ೩೪೪
ಶಿವ ಧನುಸ್ಸು ಕಟ್ಟಿದವರಿಗೆ ಸೀತೆ (೧೯) ೩೪೫
ಶಿವ ಧನುಸ್ಸನ್ನು ಎತ್ತಲಾಗದ ದೈತ್ಯದಾನವಾದಿಗಳು (೨೦) ೩೪೬
ರಾವಣಾದಿಗಳ ಪರಾಭವ (೨೧) ೩೪೬
ಜನಕರಾಜನಿಗೆ ಬ್ರಹ್ಮನ ವಿಶೇಷವರ (೨೨) ೩೪೭
ಶಿವಧನುಸ್ಸು ಕಟ್ಟಿದ ಶ್ರೀರಾಮ (೨೪) ೩೪೮
ಶಿವಧನುರ್ಭಂಗ (೨೫) ೩೪೯

ಧನುರ್ಭಂಗದ ಲೀಲೆ (೨೬) ೩೪೯
ಶ್ರೀರಾಮನನ್ನು ಕಂಡ ಸೀತೆ (೨೭) ೩೫೦
ಸೀತೆಯಿಂದ ರಾಮನಿಗೆ ಮಾಲಾರ್ಪಣೆ (೨೮) ೩೫೧
ಸೀತಾರಾಮರ ದರ್ಶನದಿಂದ ಜಗತ್ತಿಗಾದ ಆನಂದ (೨೯) ೩೫೧
ದಶರಥನಿಗೆ ಆಹ್ವಾನ (೩೦) ೩೫೨
ಮಿಥಿಲೆಗೆ ಆಗಮಿಸಿದ ದಶರಥ (೩೧) ೩೫೩
ಸೀತಾರಾಮರ ಕಲ್ಯಾಣ (೩೨) ೩೫೩
ವಿವಾಹ ನೋಡಿ ನಲಿದ ದೇವವೃಂದ (೩೩) ೩೫೪
ಸ್ವಯಂವರಕ್ಕೆ ಬಾರದೆ ಕಲ್ಯಾಣಕ್ಕೆ ಬಂದ ದೇವತೆಗಳು (೩೪) ೩೫೫
ಲಕ್ಷ್ಮೀಕಲ್ಯಾಣದಂತಿದ್ದ ಸೀತಾಕಲ್ಯಾಣ (೩೫) ೩೫೫
ಜನಕರಾಜನಿಂದ ಶ್ರೀರಾಮನಿಗೆ ಸಮ್ಮಾನ (೩೬) ೩೫೬
ಲಕ್ಷ್ಮಣಾದಿಗಳ ವಿವಾಹ (೩೮) ೩೫೭
ಅಯೋಧ್ಯೆಯತ್ತ ಸಕುಟುಂಬನಾಗಿ ದಶರಥ (೩೯) ೩೫೭
ಪರಶುರಾಮರ ಆಗಮನ (೪೦) ೩೫೮
ರಾಮನಿಗೆ ಪರಶುರಾಮ ನೀಡಿದ ಆಹ್ವಾನ - ದಶರಥನ ಭಯ (೪೧) ೩೫೯
ಪರಶುರಾಮನ ಆಂತರ್ಯ (೪೩) ೩೬೦
ಶಾರ್ಙ್ಗ ಪಿನಾಕಗಳ ಕಥೆ (೪೪) ೩೬೧
ಹರಿಹರರ ಸಮರ (೪೫) ೩೬೧
ಸ್ಥಾಣುವಾದ ಹರ (೪೬) ೩೬೨
ಹರಿಯೇ ಪರ ಎಂದ ದೇವವೃಂದ (೪೭) ೩೬೨
ಕೈಲಾಸಕ್ಕೆ ತೆರಳಿದ ಹರ (೪೯) ೩೬೨
ಪಿನಾಕಕ್ಕಿಂತ ಕೋಟಿಪಟ್ಟು ಮಿಗಿಲಾದ ಶಾರ್ಙ್ಗ (೫೦) ೩೬೫
ಶಾರ್ಙ್ಗವನ್ನು ಪೂರೈಸಿದಲ್ಲಿ ರಾಮ ಶ್ರೀಹರಿಯೇ ಸರಿ (೫೧) ೩೬೫
ಶಾರ್ಙ್ಗ ಪೂರೈಸಿದ ರಾಮ (೫೨) ೩೬೬
ಶ್ರೀಹರಿಯ ಬಲ ಅನಂತ (೫೩) ೩೬೬
ಪರಶುರಾಮ ಹೇಳಿದ ಅತುಲನ ಕಥೆ (೫೪) ೩೬೭

ಅತುಲನಿಗಿದ್ದ ಬ್ರಹ್ಮನ ವರ (೫೫) ೩೬೮
ಅತುಲನ ಸಂಹಾರಕ್ಕೆಂದು ಪರಶುರಾಮ ಮಾಡಿದ ನಾಟಕ (೫೬) ೩೬೮
ಅತುಲನಿಗಿದ್ದ ಶಿವನ ವರ - ಬೂದಿಯಾದ ಅತುಲ (೫೭) ೩೬೮
ರಾಮ ಪರಶುರಾಮ ಇಬ್ಬರೂ ಶ್ರೀಹರಿಯೇ (೫೮) ೩೭೧
ರಾಮನಲ್ಲಿ ಐಕ್ಯನಾದ ಪರಶುರಾಮ (೬೧) ೩೭೩
ಮತ್ತೆ ಹೊರನಡೆದ ಪರಶುರಾಮ (೬೨) ೩೭೩
ಅಯೋಧ್ಯೆಯಲ್ಲಿ ಸೀತಾರಾಮರು (೬೩) ೩೭೪
ರಾಮನ ಕಾರ್ಯಗಳು ಇತರರಿಗೆ ಅಸಾಧ್ಯ (೬೫) ೩೭೫

ಅಧ್ಯಾಯ - ೫ (ಶ್ರೀರಾಮಚರಿತೇ ಹನೂಮದ್ದರ್ಶನಮ್) ೩೭೬-೪೩೫

(ವನಗಮನ, ಭರತನ ರಾಮಭಕ್ತಿ, ವಾಯಸಪ್ರಸಂಗ, ಶರಭಂಗನಿಗೆ ಸದ್ಗತಿ, ವಿರಾಧವಧೆ, ಮಾರೀಚವಧೆ, ಸೀತಾಕೃತಿ, ಕಬಂಧ ಶಬರಿಯರ ಉದ್ಧಾರ)

ಶ್ರೀರಾಮನ ಪಟ್ಟಾಭಿಷೇಕದ ಸಿದ್ಧತೆ - ಮಂಥರೆಯಿಂದ ವಿಘ್ನ (೧) ೩೭೬
ಮಂಥರೆಯ ಪೂರ್ವೇತಿಹಾಸ (೨) ೩೭೭
ದೇವಕಾರ್ಯಕ್ಕೆಂದು ಸೀತಾಲಕ್ಷ್ಮಣರೊಂದಿಗೆ ಶ್ರೀರಾಮನ ವನಗಮನ (೩) ೩೭೯
ಗುಹ ಭರದ್ವಾಜರ ಶ್ರೀರಾಮಭಕ್ತಿ (೪) ೩೮೧
ದಶರಥನ ನಿರ್ಯಾಣ - ಭರತಾಗಮನ (೫) ೩೮೨
ಶ್ರೀರಾಮನ ಬಳಿ ಭರತ (೬) ೩೮೩
ಶ್ರೀರಾಮನ ವಚನ - ಭರತನ ಪ್ರತಿಜ್ಞೆಗಳು (೭) ೩೮೪
ಪಾದುಕಾಪಟ್ಟಾಭಿಷೇಕ (೮) ೩೮೫
ಜಯಂತ ವಾಯಸದ ಕಥೆ (೯) ೩೮೭
ಕುರಂಗನ ವಧೆ (೧೨) ೩೮೯
ಕಾಕಾಸುರನ ಹಿನ್ನೆಲೆ (೧೩) ೩೯೦
ದಂಡಕವನದಲ್ಲಿ ಶ್ರೀರಾಮ (೧೭) ೩೯೩
ಶರಭಂಗನಿಗೆ ಸದ್ಗತಿ (೧೮) ೩೯೪
ವಿರಾಧನ ಉದ್ಧಾರ (೨೦) ೩೯೬

ಅಗಸ್ತ್ಯರು ನೀಡಿದ ಶಾಙ್ಗಧನುಸ್ಸಿನ ಸ್ವೀಕಾರ (೨೨) ೩೯೮
ಶೂರ್ಪನಖಿಯ ಹಿನ್ನೆಲೆ (೨೪) ೩೯೯
ಶ್ರೀರಾಮನ ಬಳಿ ಶೂರ್ಪನಖಿ (೨೫) ೪೦೧
ಶೂರ್ಪನಖಿಯ ಕಿವಿ ಮೂಗುಗಳನ್ನು ಕತ್ತರಿಸಿದ್ದು (೨೬) ೪೦೨
ಖರ, ತ್ರಿಶಿರಸ್ಸು, ದೂಷಣಾದಿಗಳ ವಧೆ (೨೭) ೪೦೩
ಶ್ರೀರಾಮನ ಕಾರ್ಯ ದ್ವಂದ್ವ ದ್ವಂದ್ವವಾದದ್ದು (೨೮) ೪೦೪
ಮಾರೀಚನ ಬಳಿಗೆ ರಾವಣ (೨೯) ೪೦೫
ರಾವಣನಿಗೆ ಮಾರೀಚನ ಉಪದೇಶ (೩೦) ೪೦೬
ಮಾರೀಚನನನ್ನು ಬೆದರಿಸಿದ ರಾವಣ (೩೧) ೪೦೭
ಮಾಯಾಮೃಗವಾಗಿ ಮಾರೀಚ (೩೨) ೪೦೮
ಸೀತಾರಾಮರ ಲೋಕವಿಡಂಬನೆ (೩೩) ೪೦೯
ರಾಮನಿಂದ ಮಾರೀಚನ ವಧೆ (೩೪) ೪೧೦
ಲಕ್ಷ್ಮೀನಾರಾಯಣರ ವಿನೋದಲೀಲೆ (೩೫) ೪೧೧
ಮಹಾಲಕ್ಷ್ಮಿಗೆ ಅಜ್ಞಾನವೇ ? (೩೬) ೪೧೨
ರಾವಣನಿಂದ ಸೀತಾಕೃತಿಯ ಅಪಹರಣ (೩೭) ೪೧೩
ಸೀತಾಕೃತಿಯಲ್ಲಿ ಇಂದ್ರ - ಜಟಾಯುವಧೆ (೩೮) ೪೧೭
ದೇವಕಾರ್ಯಕ್ಕಾಗಿ ರಾವಣನನ್ನು ಉಳಿಸಿದ ಹನುಮಂತ (೩೯) ೪೧೯
ಅಶೋಕವನದಲ್ಲಿ ಸೀತಾಕೃತಿ - ಶ್ರೀರಾಮನ ಸೀತಾನ್ವೇಷಣೆಯ ನಾಟಕ (೪೦) ೪೨೦
ಜಟಾಯುವಿಗೆ ಸದ್ಗತಿ (೪೧) ೪೨೧
ಕಬಂಧನ ಉದ್ಧಾರ (೪೨) ೪೨೨
ಶಬರಿಗೆ ಸದ್ಗತಿ (೪೪) ೪೨೫
ಋಷ್ಯಮೂಕದಲ್ಲಿ ಹನೂಮದ್ದರ್ಶನ (೪೫) ೪೨೬
ಶ್ರೀರಾಮ ಹನುಮಂತರ ಅನ್ಯೋನ್ಯತೆ (೪೬) ೪೨೭
ಶ್ರೀಹರಿಯೆ ಆದ ರಾಮನಿಗೆ ಕಪಿಗಳ ಸಹಾಯವೇ! (೪೯) ೪೩೧
ಹನುಮಂತನಿಂದ ಸುಗ್ರೀವಾದಿಗಳಿಗೆ ಧೈರ್ಯ (೫೦) ೪೩೨

ಅಧ್ಯಾಯ - ೬ (ಶ್ರೀರಾಮಚರಿತೇ ಹನೂಮದ್ವರ್ಣನಮ್) ೪೩೬-೪೮೪

(ರಾಮಸುಗ್ರೀವರ ಸಖ್ಯ, ಶ್ರೀರಾಮನಿಂದ ಸಪ್ತತಾಲಗಳ ಭೇದನ, ವಾಲಿವಧೆ, ಕಪಿಗಳ ಪ್ರೇಷಣ, ಹನುಮಂತನಿಂದ ಅಂಗದಾದಿಗಳಿಗೆ ಉಪದೇಶ, ಸಂಪಾತಿ ಪ್ರಸಂಗ, ಸಮುದ್ರತರಣಕ್ಕೆ ಇತರರ ಅಸಾಮರ್ಥ್ಯ, ಹನೂಮದ್ವರ್ಣನ)

ವಾಯುವಾಹನನಾಗಿ ಸುಗ್ರೀವನ ಬಳಿಗೆ ಶ್ರೀರಾಮ (೧) ೪೩೬
ಶ್ರೀರಾಮ ಸುಗ್ರೀವರ ಸಖ್ಯ (೨) ೪೩೭
ವಾಲಿವಧೆಗೆ ಶ್ರೀರಾಮನ ಸಮ್ಮತಿ (೩) ೪೩೮
ದುಂದುಭಿಯ ದೇಹದಿಂದ ರಸಾತಲದಲ್ಲಿನ ದೈತ್ಯರ ಸಂಹಾರ (೪) ೪೩೯
ಸಪ್ತತಾಲಗಳ ಭಂಜನಕ್ಕೆ ಸುಗ್ರೀವನ ಪ್ರಾರ್ಥನೆ (೬) ೪೪೧
ಶ್ರೀರಾಮನಿಂದ ಸಪ್ತತಾಲರೂಪದ ದೈತ್ಯರ ಸಂಹಾರ (೮) ೪೪೨
ಪಾತಾಳದಲ್ಲಿನ ಕುಮುದಿ ರಾಕ್ಷಸರ ಸಂಹಾರ (೧೦) ೪೪೪
ಮೊದಲ ಬಾರಿಗೆ ವಾಲಿಯನ್ನು ಕೊಲ್ಲದೆ ಬಿಟ್ಟ ಶ್ರೀರಾಮ (೧೨) ೪೪೬
ಸೋದರರ ಮಧ್ಯ ಇತರರ ಮಧ್ಯಪ್ರವೇಶ ಅನುಚಿತ (೧೪) ೪೪೮
ಶ್ರೀರಾಮನಿಗೆ ಅಜ್ಞಾನವೇ (೧೭) ೪೫೦
ಸುಗ್ರೀವನ ಕೊರಳಲ್ಲಿ ಹನುಮಂತ ಹಾಕಿದ ಲತಾಮಾಲೆ - ವಾಲಿವಧೆ (೧೮) ೪೫೧
ವಾಲಿವಧೆಯ ಹಿನ್ನೆಲೆ (೧೯) ೪೫೨
ಶ್ರೀರಾಮನಿಗೆ ಶರಣಾದ ವಾಲಿ (೨೨) ೪೫೫
ಕಪಿರಾಜನಾಗಿ ಸುಗ್ರೀವ (೨೩) ೪೫೭
ಸುಗ್ರೀವನಿಗೆ ಹನುಮಂತನ ಉಪದೇಶ (೨೪) ೪೫೮
ಹನುಮಂತ ನಡೆಸಿದ ಕಪಿಸಮ್ಮೇಳನ (೨೬) ೪೬೦
ಲಕ್ಷ್ಮಣನ ಮೂಲಕ ಸುಗ್ರೀವನಿಗೆ ಶ್ರೀರಾಮ ಸಂದೇಶ (೨೮) ೪೬೨
ಸುಗ್ರೀವನ ಶ್ರೀರಾಮಶರಣಾಗತಿ (೩೦) ೪೬೩
ಸೀತಾಕೃತಿಯ ಅನ್ವೇಷಣೆಗೆ ಕಪಿಸೇನೆ (೩೨) ೪೬೪
ಹನುಮಂತನಿಗೆ ಶ್ರೀರಾಮನ ಸಂದೇಶ (೩೩) ೪೬೪
ಇತರ ದಿಕ್ಕಿನ ಕಪಿಗಳ ಪುನರಾಗಮನ (೩೫) ೪೬೬

ಮಯಬಿಲದಲ್ಲಿ ಕಪಿವೃಂದ (೩೬) ೪೬೬
ಅಂಗದನಿಗೆ ತಾರನ ದುರುಪದೇಶ (೩೭) ೪೬೭
ತಾರನ ಮಾತಿಗೆ ತಲೆಬಾಗಿದ ಅಂಗದಾದಿಗಳು (೪೦) ೪೬೮
ಕಪಿಗಳಿಗೆ ಹನುಮಂತನ ಉಪದೇಶ (೪೩) ೪೭೦
ಹನುಮಂತನ ಹಿತೋಕ್ತಿಯಿಂದ
ಕಪಿಗಳ ಸೀತಾಕೃತಿಯ ಅನ್ವೇಷಣೆಯ ಕಾರ್ಯ (೪೬) ೪೭೨
ಸಮುದ್ರತೀರದಲ್ಲಿ ಕಪಿಗಳ ಪ್ರಾಯೋಪವೇಶ (೪೭) ೪೭೩
ಶ್ರೀರಾಮಕಥಾಶ್ರವಣದಿಂದ ರೆಕ್ಕೆ ಪಡೆದ ಸಂಪಾತಿ (೪೮) ೪೭೪
ಸಂಪಾತಿಯಿಂದ ಸೀತಾಕೃತಿಯ ವಿವರ (೫೧) ೪೭೬
ಸಮುದ್ರ ಹಾರಲಾಗದ ಕಪಿವೃಂದ (೫೨) ೪೭೭
ಜಾಂಬವಂತನ ಶಕ್ತಿಹ್ರಾಸಕ್ಕೆ ಕಾರಣ (೫೪) ೪೭೯
ಅಂಗದನಿಗೂ ಆಗದ ಸಮುದ್ರತರಣ (೫೫) ೪೭೯
ಜಾಂಬವಂತನಿಂದ ಹನುಮಂತನ ಪ್ರಾರ್ಥನೆ (೫೬) ೪೮೦
ಹನುಮಂತನ ಸಮುದ್ರತರಣ ನಿಶ್ಚಯ (೫೯) ೪೮೩

ಅಧ್ಯಾಯ - ೭ (ಶ್ರೀರಾಮಚರಿತೇ ಹನೂಮತ್ಪ್ರತಿಯಾನಮ್) ೪೮೫-೫೨೩

**(ಸಮುದ್ರತರಣ, ಮೈನಾಕಪ್ರಸಂಗ, ಸುರಸೆಯ ಪರಾಜಯ, ಸಿಂಹಿಕಾವಧೆ,
ಲಂಕಿಣಿಯ ಪರಾಜಯ, ಸೀತಾಕೃತಿಯ ದರ್ಶನ, ಅಂಗುಲೀಯಕಪ್ರದಾನ,
ಅಶೋಕವನಧ್ವಂಸ, ರಾವಣಸೇನೆಯ ಸಂಹಾರ, ಅಕ್ಷಕುಮಾರವಧ,
ಬ್ರಹ್ಮಾಸ್ತ್ರಪ್ರಯೋಗ, ರಾವಣನಿಗೆ ಸಂದೇಶ, ಲಂಕಾದಹನ, ಚೂಡಾಮಣಿಪ್ರದಾನ)**

ಸಮುದ್ರತರಣದ ಸಡಗರ (೧) ೪೮೫
ಮೇಲೆದ್ದು ಬಂದ ಮೈನಾಕಪರ್ವತ (೨) ೪೮೭
ಸುರಸೆಯ ಪರಾಭವ (೪) ೪೮೯
ಸಿಂಹಿಕಾಹನನ (೭) ೪೯೩
ಲಂಬ(ತ್ರಿಕೂಟ)ಗಿರಿಯಲ್ಲಿ ಹನುಮಂತ (೮) ೪೯೪
ಲಂಕಿಣಿಯ ಪರಾಜಯ (೯) ೪೯೫

ಹನುಮಂತನಿಂದ ಸೀತಾನ್ವೇಷಣೆಯ ನಾಟಕ (೧೦) ೪೯೬
ಅಶೋಕವನದಲ್ಲಿ ಸೀತಾಕೃತಿಯ ದರ್ಶನ -
ಅಂಗುಲೀಯಕಪ್ರದಾನ - ಚೂಡಾಮಣಿಸ್ವೀಕಾರ (೧೧) ೪೯೭
ಹನುಮಂತನ ವಿಡಂಬನೆಯ ಮರ್ಮ (೧೪) ೪೯೯
ಅಶೋಕವನ ಧ್ವಂಸ (೧೭) ೫೦೧
ರಾಕ್ಷಸ ಸೇನೆಯ ಸಂಹಾರ (೧೮) ೫೦೨
ರಾವಣನ ಮಂತ್ರಿಪುತ್ರರು ಯಮನೆಡೆಗೆ -
ಸೈನ್ಯದ ಮೂರನೆಯಭಾಗ ಮಡಿಯಿತು (೨೨) ೫೦೪
ಅಕ್ಷಕುಮಾರನ ವಧೆ (೨೪) ೫೦೫
ಭಾವಿಬ್ರಹ್ಮನಿಗೆ ಬ್ರಹ್ಮಾಸ್ತ್ರದ ಅಂಜಿಕೆಯೇ! (೩೨) ೫೦೯
ರಾಮಶತ್ರುವಿನ ಸಭೆಯಲ್ಲಿ ಶ್ರೀರಾಮದೂತ (೩೫) ೫೧೧
ರಾವಣನಿಗೆ ಹನುಮಂತನು ನೀಡಿದ ಎಚ್ಚರಿಕೆ (೩೭) ೫೧೩
ಹನುಮಂತನ ಬಾಲದಲ್ಲಿ ಬೆಂಕಿಯ ವಿಲಾಸ (೪೨) ೫೧೫
ಬಾಲದ ಬೆಂಕಿಗೆ ಲಂಕೆಯ ಆಹುತಿ (೪೫) ೫೧೭
ಸಮುದ್ರತರಣ ಮುಗಿಯಿತು - ಭಾವಿಮಧ್ವರಿಂದ 'ಮಧುವನ'ಭಂಗ (೪೮) ೫೧೯
ಸರ್ವೋತ್ತಮನ ಪದತಲದಲ್ಲಿ ಜೀವೋತ್ತಮ –
ಜಗಜ್ಜನಕನ ಅಡಿದಾವರೆಯಲ್ಲಿ ಜಗಜ್ಜನನಿಯ ಚೂಡಾಮಣಿ (೪೯) ೫೨೦
ಭಾವಿಬ್ರಹ್ಮನಿಗೆ ಪರಬ್ರಹ್ಮನ ಆಲಿಂಗನ (೫೦) ೫೨೧

ಅಧ್ಯಾಯ - ೮ (ಯುದ್ಧಕಾಂಡಕಥಾನಿರೂಪಣಮ್) ೫೨೪-೬೩೪

(ವಿಭೀಷಣನ ಶರಣಾಗತಿ, ಸೇತುನಿರ್ಮಾಣ,ಯುದ್ಧಾರಂಭ, ಅತಿಕಾಯಾದಿಗಳ ಸಂಹಾರ, ಕುಂಭಕರ್ಣನವಧೆ,ಸಂಜೀವನಾನಯನ, ಇಂದ್ರಜಿತ್ ಸಂಹಾರ, ರಾವಣವಧೆ,ಸೀತಾಗಮನ, ರಾಮಪಟ್ಟಾಭಿಷೇಕ, ಹನುಮತ್‌ಪ್ರಶಂಸೆ)

ಶ್ರೀರಾಮನ ಲಂಕಾದಿಗ್ವಿಜಯ (೧) ೫೨೪
ದರ್ಭಶಯನನಾದ ರಾಮ (೨) ೫೨೫
ವಿಭೀಷಣನ ಆಗಮನ (೩) ೫೨೫

ವಿಭೀಷಣನ ಸ್ವೀಕಾರಕ್ಕೆ ಜಾಂಬವದಾದಿಗಳ ಅಸಮ್ಮತಿ (೪) ೫೨೬
ವಿಭೀಷಣನನ್ನು ಸ್ವೀಕರಿಸಲು ಹನುಮಂತನ ಸಮ್ಮತಿ (೫) ೫೨೬
ಹನುಮನ ಮತವೇ ಹರಿಯ ಮತವು (೬) ೫೨೭
ರಾಮನ ಹಿರಿಮೆ (೭) ೫೨೮
ವಿಭೀಷಣನಿಗೆ ಲಂಕಾಧಿಪತ್ಯ (೮) ೫೨೯
ಚಿರಂಜೀವಿಯಾದ ವಿಭೀಷಣ (೯) ೫೩೦
ರಾಮನ ಕೋಪಕ್ಕೆ ಮಣಿದ ವರುಣ (೧೦) ೫೩೧
ವರುಣ ಮಾಡಿದ ಶ್ರೀರಾಮಸ್ತವನ - ಸೇತು ನಿರ್ಮಾಣಕ್ಕೆ ಪ್ರಾರ್ಥನೆ (೧೧) ೫೩೨
ಶ್ರೀರಾಮ ಮಾಡಿದ ಅಪೂರ್ವ ದೈತ್ಯಸಂಹಾರ (೧೩) ೫೩೩
ಸೇತು ನಿರ್ಮಾಣ (೧೪) ೫೩೩
ಲಂಕೆಗೆ ಪ್ರಯಾಣ (೧೫) ೫೩೪
ಕಂಪಿಸಿದ ರಾವಣ (೧೬) ೫೩೪
ಅಂಗದ ರಾಯಭಾರ (೧೭) ೫೩೫
ಸಮರಕ್ಕೆ ಆಗಮಿಸಿದ ರಾವಣ (೧೮) ೫೩೬
ರಾವಣನನ್ನು ಆಕ್ರಮಿಸಿದ ಶ್ರೀರಾಮ (೧೯) ೫೩೬
ಹನುಮಂತನಿಂದ ಇಂದ್ರಜಿತ್ತಿನ ಪರಾಜಯ - ಪ್ರಹಸ್ತನ ವಧೆ (೨೧) ೫೩೭
ಪ್ರಹಸ್ತನನ್ನು ಕೊಂದ ನೀಲ ವಿಭೀಷಣರು (೨೨) ೫೩೮
ಹನುಮಂತನಿಂದ ಧೂಮ್ರಾಕ್ಷನ ವಧೆ (೨೩) ೫೩೮
ಹನುಮಂತನಿಂದ ಸತ್ತ ಅಕಂಪನ (೨೪) ೫೩೯
ರಾತ್ರಿಯಲ್ಲಿ ಲಂಕಾದಹನ (೨೫) ೫೩೯
ಕುಂಭನಿಕುಂಭಾದಿಗಳ ಆಗಮನ (೨೬) ೫೩೯
ಸುಗ್ರೀವನಿಂದ ಕುಂಭನ ಸಂಹಾರ (೨೭) ೫೪೦
ನಿಕುಂಭನ ಪರಾಕ್ರಮ (೨೮) ೫೪೦
ಚಂದ್ರಸೂರ್ಯರೂ ಕಂಪಿಸಿದರು (೨೯) ೫೪೦
ನಿಕುಂಭನನ್ನು ಎದುರಿಸಿದ ಹನುಮಂತ (೩೦) ೫೪೧
ಹನುಮಂತನ ಅಪೂರ್ವ ಪರಾಕ್ರಮ (೩೧) ೫೪೧

ರಣಯಜ್ಞದಲ್ಲಿ ನಿಕುಂಭನ ಆಹುತಿ (೩೨) ೫೪೨
ಸುಪ್ತಘ್ನ ಮೊದಲಾದ ರಾವಣನ ಮಂತ್ರಿಗಳ ವಧೆ (೩೫) ೫೪೩
ರಾವಣಪುತ್ರರ ಆಗಮನ (೩೭) ೫೪೩
ಅಂಗದನಿಂದ ನರಾಂತಕನ ಸಂಹಾರ (೩೮) ೫೪೩
ದೇವತಾಂತಕನ ಪರಾಕ್ರಮ (೪೩) ೫೪೫
ಅಂಗದನನ್ನು ಮೂರ್ಛೆಗೊಳಿಸಿದ ದೇವಾಂತಕ (೪೫) ೫೪೫
ಸುಗ್ರೀವನನ್ನು ಸೋಲಿಸಿದ ದೇವಾಂತಕ (೪೬) ೫೪೫
ಹನುಮಂತನಿಂದ ದೇವಾಂತಕನ ಸಂಹಾರ (೪೯) ೫೪೬
ಹನುಮಂತನಿಂದ ತ್ರಿಶಿರಸ್ಸಿನ ಸಂಹಾರ (೫೩) ೫೪೭
ಮತ್ತ ಯುದ್ಧೋನ್ಮತ್ತ ಮೊದಲಾದವರು ಹನುಮಂತನಿಗೆ ಆಹುತಿ (೫೪) ೫೪೭
ಅತಿಕಾಯನ ಆಗಮನ (೫೫) ೫೪೭
ಅತಿಕಾಯ ಮತ್ತೊಬ್ಬ ಕುಂಭಕರ್ಣ (೫೬) ೫೪೮
ಲಕ್ಷ್ಮಣ ಅತಿಕಾಯನ ಯುದ್ಧ (೫೭) ೫೪೮
ಇಮ್ಮಡಿ ಮುಮ್ಮಡಿಯಾದ ಅತಿಕಾಯ (೫೯) ೫೪೯
ಲಕ್ಷ್ಮಣನಿಗೆ ವಾಯುದೇವ ನೀಡಿದ ಸೂಚನೆ (೬೦) ೫೪೯
ಬ್ರಹ್ಮಾಸ್ತ್ರದಿಂದಲೇ ಅತಿಕಾಯನ ಸಾವು (೬೧) ೫೪೯
ಬ್ರಹ್ಮಾಸ್ತ್ರದಿಂದ ಅತಿಕಾಯನ ವಧೆ (೬೨) ೫೫೦
ಯುದ್ಧಕ್ಕೆ ರಾವಣನ ಸಿದ್ಧತೆ (೬೩) ೫೫೦
ಮಕರಾಕ್ಷನ ಮರಣಯಾತ್ರೆ (೬೪) ೫೫೧
ಮಕರಾಕ್ಷನ ಪರಾಕ್ರಮ (೬೫) ೫೫೧
ರಾಮ ಮಕರಾಕ್ಷರ ಯುದ್ಧ (೬೭) ೫೫೧
ಶ್ರೀರಾಮನಿಂದ ಮಕರಾಕ್ಷನ ಸಂಹಾರ (೬೮) ೫೫೨
ಯುದ್ಧಕ್ಕೆ ನಡೆದ ರಾವಣ (೭೦) ೫೫೩
ಗಜ ಗವಾಕ್ಷಾದಿಗಳ ಪರಾಕ್ರಮ (೭೨) ೫೫೩
ರಾವಣನ ಪರಾಕ್ರಮ (೭೩) ೫೫೪
ಅಂಗದನನ್ನು ಮೂರ್ಛೆಗೊಳಿಸಿದ ರಾವಣ (೭೫) ೫೫೪

ಸುಗ್ರೀವನೂ ಮೂರ್ಛಿತನಾದ (೭೬) ೫೫೪
ರಾವಣನಿಗೆ ಹನುಮಂತನ ಮುಷ್ಟಿಪ್ರಹಾರ (೭೭) ೫೫೫
'ಹನುಮಂತನಿಗೆ ಸಾಟಿಯಿಲ್ಲ' ಎಂದ ರಾವಣ (೭೮) ೫೫೫
ನೀಲನ ಪರಾಕ್ರಮ (೮೧) ೫೫೭
ಪರಾಜಿತನಾದ ನೀಲ (೮೨) ೫೫೮
ಲಕ್ಷ್ಮಣ ರಾವಣರ ಯುದ್ಧ (೮೩) ೫೫೮
ಮೂರ್ಛಿತನಾದ ಲಕ್ಷ್ಮಣ (೮೪) ೫೫೯
ಲಕ್ಷ್ಮಣನಿಂದ ಮೂಲರೂಪದ ಸ್ಮರಣೆ (೮೬) ೫೫೯
ಭೂಮಿ ಚಲಿಸಿದರೂ ಅಲುಗದ ಲಕ್ಷ್ಮಣ (೮೭) ೫೫೯
ಆದಿಶೇಷನ ವೈಭವ (೮೮) ೫೬೦
ಹನುಮಂತನಿಂದ ಮೂರ್ಛಿತನಾದ ರಾವಣ (೮೯) ೫೬೦
ಲಕ್ಷ್ಮಣನನ್ನು ರಾಮನ ಬಳಿಗೆ ಎತ್ತಿಕೊಂಡೊಯ್ದ ಹನುಮಂತ (೯೧) ೫೬೧
ರಾಮಸ್ಪರ್ಶದಿಂದ ಲಕ್ಷ್ಮಣನ ಉದ್ಧಾರ (೯೨) ೫೬೨
ರಾಮ ರಾವಣರ ಯುದ್ಧ (೯೩) ೫೬೨
ರಾವಣನ ಪರಾಕ್ರಮ (೯೪) ೫೬೩
ರಾಮ ವಾಹನವಾದ ಹನುಮಂತ (೯೫) ೫೬೩
ರಾಮನ ಅದ್ಭುತ ಪರಾಕ್ರಮ (೯೬) ೫೬೩
ರಾಮನಿಂದ ರಾವಣನಿಗೆ ಜೀವದಾನ (೯೭) ೫೬೪
ಕುಂಭಕರ್ಣನನ್ನು ಎಚ್ಚರಿಸುವ ನಿಶ್ಚಯ (೯೮) ೫೬೪
ಕೊನೆಗೂ ಎದ್ದ ಕುಂಭಕರ್ಣ (೯೯) ೫೬೪
ಕುಂಭಕರ್ಣನ ಮಾಂಸಭೋಜನ ರಕ್ತಪಾನ (೧೦೦) ೫೬೫
ಕುಂಭಕರ್ಣನಿಗೆ ರಾವಣನ ಪ್ರಾರ್ಥನೆ (೧೦೧) ೫೬೫
ರಾವಣನನ್ನು ತೆಗಳಿದ ಕುಂಭಕರ್ಣ (೧೦೨) ೫೬೬
ರಾವಣನಿಗೆ ಕುಂಭಕರ್ಣನ ಹಿತೋಕ್ತಿ (೧೦೩) ೫೬೬
ಸಹಾಯ ನೀಡಲು ರಾವಣನ ಯಾಚನೆ - ಕುಂಭಕರ್ಣನ ಸಮ್ಮತಿ (೧೦೪) ೫೬೬
ಸಮರಕ್ಕೆ ನಡೆದ ಕುಂಭಕರ್ಣ - ಕಪಿಗಳ ಪಲಾಯನ (೧೦೫) ೫೬೭

ಕಪಿಗಳನ್ನು ನುಂಗಿದ ಕುಂಭಕರ್ಣ (೧೦೬) ೫೬೭
ಅಂಗದ ಜಾಂಬವಾದಿಗಳ ವ್ಯರ್ಥಪ್ರಯತ್ನ (೧೦೮) ೫೬೮
ಸುಗ್ರೀವನೂ ಬಿದ್ದ (೧೧೦) ೫೬೮
ಕುಂಭಕರ್ಣನ ಸೆರೆಯಲ್ಲಿ ಸುಗ್ರೀವ (೧೧೨) ೫೬೯
ಸುಗ್ರೀವನ ರಕ್ಷಣೆಗೆ ಹನುಮಂತ (೧೧೩) ೫೬೯
ಎಚ್ಚೆತ್ತ ಸುಗ್ರೀವ - ಸುಗ್ರೀವನಿಂದ ಕುಂಭಕರ್ಣನ ಮೂಗು ಹೋಯಿತು (೧೧೫) ೫೭೦
ಕಿವಿಗಳನ್ನು ಕತ್ತರಿಸಿದ ಸುಗ್ರೀವನ ಪರಾಕ್ರಮ (೧೧೬) ೫೭೦
ಕುಂಭಕರ್ಣನಿಂದ ಶೂಲಪ್ರಯೋಗ (೧೧೭) ೫೭೧
ಹನುಮಂತನಿಂದ ಸುಗ್ರೀವನ ಪ್ರಾಣರಕ್ಷಣೆ (೧೧೮) ೫೭೧
ಹನುಮಂತನ ಪೆಟ್ಟಿಗೆ ಮೂರ್ಛಿತನಾದ ಕುಂಭಕರ್ಣ (೧೨೦) ೫೭೨
ಕುಂಭಕರ್ಣನನ್ನು ಶ್ರೀರಾಮನಿಗೆ ಮೀಸಲಿಟ್ಟ ಹನುಮಂತ (೧೨೧) ೫೭೨
ರಾಮನೆಡೆಗೆ ಕುಂಭಕರ್ಣ (೧೨೪) ೫೭೩
ಕುಂಭಕರ್ಣ ಮುಂದುವರಿಸಿದ ಕಪಿಭಕ್ಷಣ (೧೨೫) ೫೭೩
ತನ್ನವರನ್ನೂ ತಿನ್ನುತ್ತಿದ್ದ ಕುಂಭಕರ್ಣ (೧೨೬) ೫೭೪
ಲಕ್ಷ್ಮಣನನ್ನು ಲೆಕ್ಕಿಸದ ಕುಂಭಕರ್ಣ (೧೨೭) ೫೭೪
ರಾಮ ಕುಂಭಕರ್ಣರ ಯುದ್ಧ (೧೨೮) ೫೭೫
ಐದು ಬಾಣಗಳಿಗೆ ತುಂಡುತುಂಡಾದ ಕುಂಭಕರ್ಣ (೧೩೦) ೫೭೬
ಸಾಗರ ಉಕ್ಕೇರಿತು (೧೩೧) ೫೭೬
ಕುಂಭಕರ್ಣನ ಮಹಾಕಾಯ (೧೩೨) ೫೭೬
ರಾವಣ ಕೇಳಿದ ಕುಂಭಕರ್ಣನ ನಿಧನವಾರ್ತೆ (೧೩೪) ೫೭೭
ಇಂದ್ರಜಿತ್ತಿನ ಆಗಮನ (೧೩೫) ೫೭೮
ನಾಗಪಾಶಗಳಿಂದ ಕಪಿವೃಂದದ ಬಂಧನ (೧೩೭) ೫೭೮
ಗರುಡನಿಗೆ ಹರಿ ನೀಡಿದ ಸೇವಾವಕಾಶ (೧೩೮) ೫೭೮
ಇಂದ್ರಜಿತ್ತನ್ನು ಹೊಗಳಿದ ರಾವಣ (೧೪೩) ೫೮೦
ಗರುಡನಿಂದ ನಾಗಪಾಶಗಳ ಮೋಚನೆ (೧೪೪) ೫೮೧
ಮತ್ತೆ ಎದ್ದ ಕಪಿವೃಂದ (೧೪೫) ೫೮೧

ಇಂದ್ರಜಿತ್ತಿನಿಂದ ಮತ್ತೊಮ್ಮೆ ಅಸ್ತ್ರಪ್ರಯೋಗ (೧೪೬) ೫೮೨
ಮತ್ತೆಮ್ಮೆಮರೆತ ಕಪಿವೃಂದ (೧೪೮) ೫೮೨
ಜಾಂಬವಂತ ತಿಳಿಸಿದ ಹನುಮಂತನ ಮಹಿಮೆ (೧೫೦) ೫೮೩
ಸಂಜೀವನ ತರಲು ಜಾಂಬವಂತನ ಕೋರಿಕೆ (೧೫೨) ೫೮೪
ರಾಮಬಾಣದಂತೆ ತೆರಳಿದ ಹನುಮಂತ (೧೫೪) ೫೮೫
ಸಂಜೀವನ ಕಿತ್ತದ ಹನುಮಂತ (೧೫೫) ೫೮೬
ಸಂಜೀವನ ತಂದ ಹನುಮಂತ (೧೫೬) ೫೮೭
ಮತ್ತೆ ಬದುಕಿದ ಕಪಿವೃಂದ (೧೫೭) ೫೮೭
ಸಕಲರಿಂದ ಹನುಮಂತನ ಪ್ರಶಂಸೆ - ದೇವತೆಗಳಿಂದ ಪುಷ್ಪವೃಷ್ಟಿ (೧೫೮) ೫೮೮
ಸಂಜೀವನ ಮರಳಿ ಸ್ವಸ್ಥಾನಕ್ಕೆ (೧೫೯) ೫೮೮
ಮರಳಿ ಯುದ್ಧಕ್ಕೆ ಕಪಿವೃಂದ (೧೬೦) ೫೮೯
ಭೀತನಾದ ಇಂದ್ರಜಿತ್ತು (೧೬೧) ೫೯೦
ಮತ್ತೊಮ್ಮೆ ಅವನಿಂದ ಕಪಿಗಳ ಬಂಧನ (೧೬೨) ೫೯೧
ಹೇಡಿಯ ಮೇಲೆ ಬ್ರಹ್ಮಾಸ್ತ್ರ ತರವಲ್ಲ (೧೬೩) ೫೯೧
ಎಲ್ಲಿದ್ದರೂ ಕೋಲ್ಲುವ ರಾಮಬಾಣ (೧೬೪) ೫೯೨
ರಾಮನಿಗೆ ಅಂಜಿ ಇಂದ್ರಜಿತ್ತಿನ ಪಲಾಯನ (೧೬೫) ೫೯೩
ವಿಜ್ಞಾನಾಸ್ತ್ರವಾದ ರಾಮಬಾಣ (೧೬೭) ೫೯೩
ಮತ್ತೊಮ್ಮೆ ಕಪಿಗಳ ಉಜ್ಜೀವನ (೧೬೮) ೫೯೪
ಶ್ರೀರಾಮನ ಮೇಲೆ ದೇವತೆಗಳಿಂದ ಪುಷ್ಪವೃಷ್ಟಿ (೧೬೯) ೫೯೫
ಇಂದ್ರಜಿತ್ತಿನ ವಧೆಗೆ ವಿಭೀಷಣನ ಪ್ರಾರ್ಥನೆ (೧೭೦) ೫೯೫
ಇಂದ್ರಜಿತ್ತಿನ ಸಂಹಾರಕ್ಕೆ ಲಕ್ಷ್ಮಣನಿಗೆ ಆದೇಶ (೧೭೨) ೫೯೬
ಲಕ್ಷ್ಮಣ ಇಂದ್ರಜಿತ್ತುಗಳ ಯುದ್ಧ (೧೭೩) ೫೯೭
ಲಕ್ಷ್ಮಣನಿಂದ ಇಂದ್ರಜಿತ್ತಿನ ವಧೆ (೧೭೫) ೫೯೭
ಇಂದ್ರಜಿತ್ತಿನ ಸಾವಿನಿಂದ ತತ್ತರಿಸಿದ ರಾವಣ (೧೭೬) ೫೯೮
ಯುದ್ಧಕ್ಕೆ ನಡೆದ ರಾವಣ (೧೭೭) ೫೯೮
ರಾವಣನ ಮೂಲಬಲ (೧೭೮) ೫೯೮

ಮೂಲಬಲದಿಂದ ಕಂಗೆಟ್ಟ ಕಪಿವೃಂದ (೧೮೧) ೫೯೯
ಮೂಲಬಲಕ್ಕಿದ್ದ ಬ್ರಹ್ಮವರ (೧೮೨) ೬೦೦
ಶ್ರೀರಾಮನ ವಿಶ್ವರೂಪ - ರಾವಣನ ಮೂಲಬಲದ ಸಂಹಾರ (೧೮೩) ೬೦೦
ರಣರಂಗದಲ್ಲಿ ರಾವಣನ ಮಂತ್ರಿಗಳು (೧೮೫) ೬೦೧
ಮಹೋದರನ ಪರಾಕ್ರಮ (೧೮೬) ೬೦೩
ಕುಂಭಕರ್ಣ ಮತ್ತೆ ಬಂದನೇ! (೧೮೮) ೬೦೩
ಅಂಗದನಿಂದ ಮಹೋದರನ ಸಂಹಾರ (೧೮೯) ೬೦೩
ಅಂಗದನಿಂದ ಮಹಾಪಾರ್ಶ್ವನ ಸಂಹಾರ (೧೯೧) ೬೦೪
ವಿರೂಪನೇತ್ರ, ಯೂಪನೇತ್ರರಿಂದ ಅಂಗದನ ಪರಾಭವ (೧೯೩) ೬೦೪
ಸುಗ್ರೀವನಿಂದ ಅವರಿಬ್ಬರ ಸಂಹಾರ -
ರಾವಣನಿಂದ ಸುಗ್ರೀವನ ಮೂರ್ಛೆ (೧೯೫) ೬೦೫
ಮತ್ತೊಮ್ಮೆ ರಾವಣ ಲಕ್ಷ್ಮಣರ ಯುದ್ಧ (೧೯೬) ೬೦೫
ರಾವಣನಿಂದ ಶಕ್ತ್ಯಾಯುಧ ಪ್ರಯೋಗ (೧೯೭) ೬೦೫
ಮೂರ್ಛಿತನಾದ ಲಕ್ಷ್ಮಣ (೧೯೮) ೬೦೬
ಹನುಮಂತನಿಂದ ಲಕ್ಷ್ಮಣನ ಉದ್ಧಾರ (೧೯೯) ೬೦೬
ಮತ್ತೊಮ್ಮೆ ಸಂಜೀವನಾನಯನ - ಕಪಿಗಳಿಗೆ ಜೀವದಾನ (೨೦೦) ೬೦೭
ಸಂಜೀವನದಿಂದ ರಾಕ್ಷಸರೇಕೆ ಬದುಕಲಿಲ್ಲ? (೨೦೪) ೬೦೮
ಸಂಜೀವನದಿಂದ ಕಪಿಗಳಿಗೆ ಪೂರ್ಣಾರೋಗ್ಯ (೨೦೫) ೬೦೯
ರಾಮ ರಾವಣರ ಯುದ್ಧ (೨೦೬) ೬೧೦
ರಾಮಸೇವೆಗೆಂದು ಇಂದ್ರ ಕಳುಹಿಸಿದ ರಥ (೨೦೭) ೬೧೦
ಶ್ರೀರಾಮನಿಂದ ದಶಕಂಠನ ದಶಶಿರಸ್ಸುಗಳ ಛೇದ (೨೦೯) ೬೧೧
ಮತ್ತೆ ಬೆಳೆದ ರಾವಣನ ತಲೆಗಳು -
ರಾಮಬಾಣಕ್ಕೆ ಧರೆಗುರುಳಿದ ರಾವಣ (೨೧೦) ೬೧೧
ಬ್ರಹ್ಮಾದಿಗಳಿಂದ ಶ್ರೀರಾಮಸ್ತುತಿ (೨೧೧) ೬೧೨

ಬ್ರಹ್ಮ ಮಾಡಿದ ಶ್ರೀರಾಮಸ್ತೋತ್ರ (೨೧೨) ೬೧೨
ರಾಮನನ್ನು ಯುದ್ಧಕ್ಕೆ ಕರೆದ ಶಿವ (೨೧೪) ೬೧೪
ಧರೆಗುರುಳಿದ ಹರ (೨೧೯) ೬೧೪
ಶಿವ ಮಾಡಿದ ಶ್ರೀರಾಮಸ್ತೋತ್ರ (೨೨೦) ೬೧೫
ಇಂದ್ರಾದಿಗಳು ಮಾಡಿದ ಶ್ರೀರಾಮಸ್ತುತಿ (೨೨೧) ೬೧೬
ಬೆಂಕಿಗೆ ಸೀತಾಕೃತಿ - ಸೀತಾದೇವಿಯ ಆಗಮನ (೨೨೨) ೬೧೬
ಶ್ರೀರಾಮನಿಂದ ಸೀತಾಪರಿಗ್ರಹ (೨೨೩) ೬೧೭
ಸುಷೇಣನಿಂದ ಕಪಿವೃಂದಕ್ಕೆ ಚಿಕಿತ್ಸೆ (೨೨೪) ೬೧೮
ಸತ್ತವರೂ ಬದುಕಿದರು - ದಶರಥನೂ ಬಂದು ತೆರಳಿದ (೨೨೫) ೬೧೮
ವಿಭೀಷಣ ಪಟ್ಟಾಭಿಷೇಕ - ಅಯೋಧ್ಯೆಗೆ ಶ್ರೀರಾಮ (೨೨೬) ೬೨೦
ಭರತನ ಅಗ್ನಿಪ್ರವೇಶವನ್ನು ತಡೆದ ಹನುಮಂತ (೨೨೭) ೬೨೦
ಭರತನಿಂದ ಶ್ರೀರಾಮನಿಗೆ ಭವ್ಯಸ್ವಾಗತ (೨೨೮) ೬೨೦
ಶ್ರೀರಾಮನ ಪುರಪ್ರವೇಶ (೨೩೦) ೬೨೧
ಕಪಿವೃಂದಕ್ಕೆ ಶ್ರೀರಾಮನ ಅನುಗ್ರಹ (೨೩೧) ೬೨೧
ಸಕಲರಿಗೂ ಮುಕ್ತಿ (೨೩೨) ೬೨೨
ಶ್ರೀರಾಮ ಕೊಂಡಾಡಿದ ಹನುಮಂತನ ಹಿರಿಮೆ (೨೩೩) ೬೨೨
ರಾವಣನನ್ನು ಜಯಿಸಿದ್ದ ವಾಲಿ ಕಾರ್ತವೀರ್ಯಾರ್ಜುನರು (೨೩೪) ೬೨೪
ಕಪಿಲ ವಾಮನರಿಂದ ರಾವಣನ ಪರಾಭವ -
ಹನುಮಂತನ ಮೂರುಕೋಟಿ ರೂಪಗಳು (೨೩೭) ೬೨೫
ರಾಮ ಹನುಮಂತರ ಜಯ ಸ್ವಾಭಾವಿಕ (೨೩೯) ೬೨೯
ಹನುಮಂತನಿಗೆ ಸಹಭೋಗ ಪ್ರದಾನ (೨೪೦) ೬೨೯
ಸಹಭೋಗವೆಂದರೇನು? (೨೪೧) ೬೩೦
ಹನುಮಂತ ಬೇಡಿದ ವರ (೨೪೨) ೬೩೦
ಶ್ರೀರಾಮ ಹನುಮಂತನಿಗೆ ಮಾಡಿದ ವಿಶೇಷಾನುಗ್ರಹ (೨೪೮) ೬೩೩

ಅಧ್ಯಾಯ - ೯ (ಶ್ರೀರಾಮಸ್ವಧಾಮಪ್ರವೇಶಃ) ೬೩೫-೭೧೫

(ರಾಮರಾಜ್ಯ, ಶಂಬೂಕವಧೆ, ಲವಣಾಸುರವಧೆ, ಸೀತಾಪರಿತ್ಯಾಗದ ನಾಟಕ, ದುರ್ವಾಸಪರಾಭವ, ಲಕ್ಷ್ಮಣನ ನಿರ್ಯಾಣ, ಶ್ರೀರಾಮಪರಂಧಾಮಗಮನ)

ಯುವರಾಜನಾಗಲು ನಿರಾಕರಿಸಿದ ಲಕ್ಷ್ಮಣ (೧) ೬೩೫

ಲಕ್ಷ್ಮಣನ ಕೋರಿಕೆ (೨) ೬೩೫

ಭರತನಿಗೆ ಯೌವರಾಜ್ಯ (೩) ೬೩೬

ರಾಮರಾಜ್ಯದ ವರ್ಣನೆ (೪) ೬೩೬

ಬ್ರಹ್ಮಾದಿ ವಂದಿತನಾಗಿ ಶ್ರೀರಾಮ (೧೨) ೬೪೦

ಸೀತಾರಾಮರ ವಿಹಾರ (೧೩) ೬೪೦

ಸರ್ವವಂದ್ಯನಾದ ರಾಮ (೧೫) ೬೪೧

ಹದಿಮೂರುಸಾವಿರ ವರ್ಷಗಳ ರಾಮರಾಜ್ಯ (೧೬) ೬೪೨

ಲವಕುಶರ ಜನನ - ಲವಣಾಸುರನ ವಧೆ (೧೭) ೬೪೨

ಭರತನಿಂದ ಕೋಟಿತ್ರಯರಾಕ್ಷಸರ ಸಂಹಾರ (೧೮) ೬೪೪

ವಿಪ್ರಪುತ್ರನ ಅಕಾಲಮರಣ (೧೯) ೬೪೫

ಶೂದ್ರ ತಪಸ್ವಿಯ ಪೂರ್ವೇತಿಹಾಸ - ಶಂಬೂಕವಧೆ (೨೦) ೬೪೫

ಶ್ವೇತ ಸಮರ್ಪಿಸಿದ ಮಾಲೆ (೨೨) ೬೪೭

ಅಗಸ್ತ್ಯರ ಮೂಲಕ ಮಾಲಾರ್ಪಣೆ (೨೬) ೬೪೯

ಸುರಾಣಕರ ಇತಿಹಾಸ (೨೭) ೬೪೯

ಸುರಾಣಕರು ಕೇಳಿದ ವಿಚಿತ್ರವರ (೨೮) ೬೫೦

ಸೀತಾರಾಮರ ವಿಯೋಗ ಚಿಂತನೆಯಿಂದ ತಮಸ್ಸು (೨೯) ೬೫೦

ಸುರಾಣಕರು ಮಾಡಿದ ರಾಮನಿಂದೆ (೩೦) ೬೫೧

ಸುರಾಣಕರ ಮೋಹನಕ್ಕಾಗಿ ಸೀತಾಪರಿತ್ಯಾಗದ ನಾಟಕ (೩೧) ೬೫೧

ಭುವಿಯಲ್ಲಿ ಮಾಯವಾದ ಭೂಮಿಜಾತೆ (೩೪) ೬೫೩

ಬ್ರಹ್ಮವರದ ಹಿರಿಮೆ (೩೫) ೬೫೪

ಬ್ರಹ್ಮವರವನ್ನು ವಾಯು ಉಲ್ಲಂಘಿಸುವ ರಹಸ್ಯ (೩೭) ೬೫೫
ರುದ್ರಾದಿ ವಾಕ್ಯಗಳು ಪೂರ್ಣ ನಡೆಯವು (೩೮) ೬೫೬
ವಿಷ್ಣುವಚನವು ಸದಾ ಸತ್ಯ (೩೯) ೬೫೬
ಸೀತಾರಾಮರ ಅನನ್ಯದಾಂಪತ್ಯ (೪೦) ೬೫೮
ಶ್ರೀರಾಮ ಮಾಡಿದ ಅನೇಕ ಯಜ್ಞಗಳು (೪೧) ೬೫೮
ಶ್ರೀರಾಮನ ಕಾರ್ಯಗಳು ಅನ್ಯರಿಗೆ ಅಶಕ್ಯ (೪೩) ೬೫೯
ಬ್ರಹ್ಮಲೋಕದಂತಾದ ಭೂಲೋಕ (೪೪) ೬೬೧
ಪರಂಧಾಮಕ್ಕೆ ತೆರಳಲು ರುದ್ರನ ಮೂಲಕ ದೇವತೆಗಳ ಪ್ರಾರ್ಥನೆ (೪೫) ೬೬೨
ಏಕಾಂತದಲ್ಲಿ ಶಿವ ಮಾಡಿದ ಶ್ರೀರಾಮನ ಪ್ರಾರ್ಥನೆ (೪೬) ೬೬೨
ಶಿವನನ್ನೇ ಕಳುಹಿಸಿದ ರಹಸ್ಯ (೪೭) ೬೬೪
ಶಿವ ಮಾಡಿದ ಶ್ರೀರಾಮ ಪ್ರಾರ್ಥನೆ (೪೮) ೬೬೪
ದುರ್ವಾಸರ ಆಗಮನ (೪೯) ೬೬೫
ದುರ್ವಾಸರ ವಿಚಿತ್ರ ಕೋರಿಕೆಯನ್ನು ಪೂರೈಸಿದ ಶ್ರೀರಾಮ (೫೦) ೬೬೬
ದುರ್ವಾಸರ ಪರಾಭವ (೫೧) ೬೬೭
ಕುಂತಿ ದುರ್ವಾಸರನ್ನು ಜಯಿಸಿದ್ದು ವರಬಲದಿಂದ (೫೨) ೬೬೭
ದ್ವಾರಪಾಲಕನಾಗಿ ಲಕ್ಷ್ಮಣ (೫೩) ೬೬೮
ಲಕ್ಷ್ಮಣ ದುರ್ವಾಸರನ್ನು ತಡೆಯದಿದ್ದಕ್ಕೆ ಕಾರಣ (೫೫) ೬೬೯
ಲಕ್ಷ್ಮಣ ಪರಿತ್ಯಾಗದ ರಹಸ್ಯ (೫೭) ೬೭೦
ಶ್ರೀರಾಮನ ಪರಂಧಾಮಗಮನ (೫೯) ೬೭೨
ಮುಕ್ತಿಗೆ ರಾಮ ನೀಡಿದ ಆಹ್ವಾನ (೬೦) ೬೭೨
ಮೋಕ್ಷ ಬಯಸಿ ತೆರಳಿದ ಜೀವಿವೃಂದ (೬೧) ೬೭೩
ರಾಮರಾಜ್ಯದಲ್ಲಿ ಕುಶ - ಕಪಿರಾಜ್ಯದಲ್ಲಿ ಅಂಗದ (೬೨) ೬೭೪
ಹನುಮಂತನಿಗೆ ಶ್ರೀರಾಮನ ವಿಶೇಷ ಆದೇಶ (೬೩) ೬೭೫
ಹನುಮಂತನಿಗೆ ಚಿರಂಜೀವಿತ್ವ (೬೫) ೬೭೫
ಹನುಮಂತನಿಗೆ ಸಕಲ ಲೋಕವೂ ಗಮ್ಯ (೬೬) ೬೭೫
ರಾಮನ ಎದುರು ಸದಾ ಹನುಮಂತ (೬೭) ೬೭೬

ಹನುಮಂತ ಸತ್ಯಸಂಕಲ್ಪ (೬೮) ೬೭೬
ಹನುಮಂತ ಮಾಡಿದ ಶ್ರೀರಾಮಸ್ತವನ (೬೯) ೬೭೭
ರಾಮನ ಹಿಂದೆ ನಡೆದವರು (೭೩) ೬೭೮
ರಾಮನ ಹಿಂದೆ ತೆರಳಿದವರೆಲ್ಲ ಬ್ರಹ್ಮಜ್ಞಾನಿಗಳೇ (೭೪) ೬೭೯
ಶ್ರೀರಾಮನ ಅದ್ಭುತ ರೂಪ (೭೫) ೬೮೦
ಹೊಳೆಯುವ ಕಿರೀಟ - ಸುಂದರ ಮುಖ (೭೬) ೬೮೦
ಕರ್ಣಕುಂಡಲ ತುಟಿ ಹಾಗೂ ನಾಲಿಗೆಗಳ ವೈಭವ (೭೭) ೬೮೦
ಮನೋಹರ ಕಂಠ ಭುಜಗಳು (೭೮) ೬೮೧
ವಿಶಿಷ್ಟ ಬಾಹುಗಳು - ಬಲಗೈಯಲ್ಲಿ ಬಾಣ (೭೯) ೬೮೧
ಶ್ರೀರಾಮನ ಬಾಣವಾಗಿ ವಾಯುದೇವ (೮೦) ೬೮೧
ಶತ್ರುಘ್ನನಿಂದ ಲವಣಾಸುರ ಸಂಹಾರ - ಮಧುರೆಯ ನಿರ್ಮಾಣ (೮೧) ೬೮೨
ಬಾಣವಾಗಿ ವಾಯು - ಶಾರ್ಙ್ಗವಾಗಿ ಸರಸ್ವತಿ (೮೨) ೬೮೨
ರಾಮನ ಬಾಹುಭೂಷಣಗಳು (೮೩) ೬೮೨
ಎದೆಯಲ್ಲಿ ಕಂಗೊಳಿಸುವ ವನಮಾಲೆ ಮಹಾಲಕ್ಷ್ಮಿಯರು (೮೪) ೬೮೩
ವಲಿತ್ರಯಭೂಷಿತವಾದ ಉದರ - ತೊಟ್ಟ ಪೀತಾಂಬರ (೮೫) ೬೮೩
ಅಪೂರ್ವವಾದ ತೊಡೆಗಳು ಮೊಳಕಾಲುಗಳು, ಜಂಘೆ, ಪಾದಗಳು (೮೬) ೬೮೩
ನೀಲವರ್ಣದ ರಾಮ (೮೭) ೬೮೩
ಶ್ರೀರಾಮನ ಪ್ರಯಾಣ ವೈಭವ (೮೮) ೬೮೪
ಹನುಮಂತ ಮೊದಲಾದವರಿಂದ ಛತ್ರಾದಿ ಧಾರಣ -
ಪ್ರತ್ಯಕ್ಷ ಕಾಣಿಸಿಕೊಂಡ ಸೀತೆ (೮೯) ೬೮೫
ಚಕ್ರಶಂಖಾದಿ ರೂಪದಲ್ಲಿ ಭರತಶತ್ರುಘ್ನರು (೯೦) ೬೮೬
ಎಡದಲ್ಲಿ ನರರು - ಬಲದಲ್ಲಿ ವಾನರರು (೯೧) ೬೮೭
ಪರಂಧಾಮಕ್ಕೆ ತೆರಳಿದ ಶ್ರೀರಾಮ (೯೨) ೬೮೭
ಬ್ರಹ್ಮಾದಿಗಳಿಂದ ಶ್ರೀರಾಮನ ಅನುಸರಣೆ (೯೩) ೬೮೮
ಬ್ರಹ್ಮ ಒಪ್ಪಿಸಿದ ಸದ್ಗತಿಯ ವರದಿ (೯೪) ೬೮೮
ಕೈಕೇಯಿಗೂ ಸದ್ಗತಿ - ನಿಕೃತಿಮಂಥರೆಯರಿಗೆ ದುರ್ಗತಿ (೯೫) ೬೮೮

ಸುರಾಣಕರಿಗೂ ತಮಸ್ಸು - ಇತರ ದೈತ್ಯರಿಗೂ ಸಹ (೯೯) ೬೯೧
ರಾಮನ ಹಿಂದೆ ಬಂದವರಿಗೆ ಸದ್ಗತಿ (೧೦೧) ೬೯೧
ಬ್ರಹ್ಮದೇವರ ಜಗದ್ಗುರುತ್ವ (೧೦೪) ೬೯೨
ರಾಮನನ್ನು ಅನುಸರಿಸಿದವರಿಗೆ ಸಾಂತಾನಿಕಲೋಕ (೧೦೬) ೬೯೩
ಸಾಂತಾನಿಕಲೋಕದ ವೈಭವ (೧೦೭) ೬೯೪
ದೇವಾಂಶರಿಗೆ ಮೂಲರೂಪಪ್ರಾಪ್ತಿ (೧೦೮) ೬೯೫
ಇಲ್ಲಿಯೇ ಉಳಿದ ಮೈಂದ ವಿವಿದರು (೧೦೯) ೬೯೫
ಮೈಂದವಿವಿದರು ಮಾಡಿದ್ದ ಅಪರಾಧ (೧೧೦) ೬೯೬
ಅಂಗದ ಕುಶರಿಗೂ ಸದ್ಗತಿ (೧೧೨) ೬೯೭
ಕುಬೇರನ ಸೇನಾಪತಿಯಾಗಿ ವಿಭೀಷಣ (೧೧೩) ೬೯೭
ಜಾಂಬವತಿಯ ಉತ್ಪತ್ತಿಗಾಗಿ ಜಾಂಬವಂತ (೧೧೪) ೬೯೮
ವಿವಿಧ ಲೋಕಗಳಲ್ಲಿ ಶ್ರೀರಾಮನ ರೂಪಗಳು (೧೧೫) ೬೯೯
ಬದರಿಯಲ್ಲಿ ಹನುಮಂತ (೧೧೮) ೭೦೦
ಹನುಮಂತನ ಶ್ರೀರಾಮಸೇವೆ (೧೧೯) ೭೦೧
ಕಿಂಪುರುಷದಲ್ಲಿ ಹನುಮಂತ (೧೨೦) ೭೦೧
ಹನುಮಂತ ಮಾಡಿದ ರಾಮಾಯಣಗಾನ (೧೨೧) ೭೦೨
ಕ್ಷೀರ ಸಾಗರದಲ್ಲಿ ಶ್ರೀರಾಮ (೧೨೨) ೭೦೩
ಶ್ರೀರಾಮಕಥೆಯ ಆಕರಗಳು (೧೨೪) ೭೦೪
ನಿರ್ಣಯದ ವೈಶಿಷ್ಟ್ಯ (೧೨೫) ೭೦೪
ವ್ಯತ್ಯಾಸ ಪ್ರಭೇದದ ನಿರೂಪಣೆ - ಪುರುಷವ್ಯತ್ಯಾಸ (೧೨೯) ೭೦೬
ಕಾಲವ್ಯತ್ಯಾಸದ ನಿರೂಪಣೆ (೧೩೩) ೭೦೭
ತ್ರಿಭಾಷಾದಿಗಳ ವಿವರಣೆ (೧೩೭) ೭೦೯
ವ್ಯತ್ಯಾಸಾದಿ ಸಪ್ತಭೇದಗಳು (೧೩೯) ೭೧೦

*****

ಮುನ್ನುಡಿ

ಇತಿಹಾಸಪುರಾಣಭ್ದೇರ್ಭವಚ್ಚಾತ್ಪ್ರಿಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ನ ಸೇವತೇ।।(ಸುಮಧ್ವವಿಜಯ ೧೫/೭೬)

ಶ್ರೀಮಧ್ವಾಚಾರ್ಯರು ಮತ್ತು ಅವರ ಕೃತಿಗಳು

ಮಹಾಭಾರತತಾತ್ಪರ್ಯನಿರ್ಣಯವನ್ನು ರಚಿಸಿದ ಶ್ರೀಮಧ್ವಾಚಾರ್ಯರು (ಕ್ರಿ.ಶ. ೧೨೦೦–೧೨೭೯) ಜಗತ್ತು ಕಂಡ ಅಪ್ರತಿಮ ತತ್ತ್ವಜ್ಞಾನಿಗಳು; ಅಪಾರ ಪ್ರತಿಭೆ, ಅನುಪಮಪಾಂಡಿತ್ಯ, ಸಲ್ಲಕ್ಷಣಭರಿತದೇಹ, ಅಪಾರಭಗವದ್ಭಕ್ತಿಮತ್ತು ಆರ್ತ ಜನರ ಸಂಕಷ್ಟವನ್ನು ಪರಿಹರಿಸಿ ಸಂತುಷ್ಟರನ್ನಾಗಿಸುವ ಕಾರುಣ್ಯ ಮೊದಲಾದ ಸದ್ಗುಣಗಳಿಂದಾಗಿ ಅವರು ವಿಶ್ವದ ಅದ್ವಿತೀಯ ತತ್ತ್ವಪ್ರಸಾರಕಗುರುಗಳಾಗಿ ಮಾನ್ಯರಾಗಿದ್ದಾರೆ. ಅವತರಿಸಿದ್ದು ಉಡುಪಿಯ ಬಳಿಯ ಚಿಕ್ಕಹಳ್ಳಿ ಪಾಜಕದಲ್ಲಿ, ಸ್ವೀಕರಿಸಿದ್ದು ಸರ್ವೋನ್ನತವಾದ ಪರಮಹಂಸಾಶ್ರಮವನ್ನು, ಪಾಲಿಸಿದ್ದು ಹಂಸನಾಮಕ ಪರಮಾತ್ಮನ ಪರಂಪರೆಯ ವೇದಾಂತ ಪೀಠವನ್ನು, ಸಂಚರಿಸಿದ್ದು ಅಸೇತುಹಿಮಾಚಲ ಪರ್ಯಂತ (ಮತ್ತು ಅದಕ್ಕೂ ಆಚೆಯ ಉತ್ತರಬದರಿಯವರೆಗೆ), ಬರೆದದ್ದು ಸಕಲಶಾಸ್ತ್ರಗಳ ಸಾರರೂಪವಾದ ಸರ್ವಮೂಲ ಗ್ರಂಥಗಳನ್ನು, ಉಪದೇಶಿಸಿದ್ದು ಸಕಲ ಶಾಸ್ತ್ರಗಳ ಮರ್ಮವನ್ನು; ತೋರಿಸಿದ್ದು ಪರಗತಿಯ ರಾಜಮಾರ್ಗವನ್ನು; ನೆಲೆಸಿದ್ದು ಸಕಲ ಜಿಜ್ಞಾಸುಗಳ ಮನೋಮಂದಿರ–ದಲ್ಲಿ, ಪ್ರವರ್ತಿಸಿದ್ದು ಅನಾದಿವೈಷ್ಣವವೇದಾಂತವಾದ ತತ್ತ್ವವಾದವನ್ನು; ಬೆಳೆಸಿದ್ದು ಅಂತಹ ಸತ್ಪರಂಪರೆಯನ್ನು, ತತ್ತ್ವಪ್ರಸಾರಕ್ಕಾಗಿ ಸ್ಥಾಪಿಸಿದ್ದು ಒಂಭತ್ತು ಪೀಠಗಳನ್ನು, ಸಂಪಾದಿಸಿದ್ದು ಪದ್ಮನಾಭತೀರ್ಥರು, ನರಹರಿತೀರ್ಥರು, ತ್ರಿವಿಕ್ರಮಪಂಡಿತಾಚಾರ್ಯರು ಮೊದಲಾದ ಶ್ರೇಷ್ಠಶಿಷ್ಯವರ್ಗವನ್ನು, ಉಡುಪಿಯಲ್ಲಿ ಪ್ರತಿಷ್ಠಾಪಿಸಿದ್ದು ದ್ವಾರಕೆಯಿಂದ ತಮಗಾಗಿ ಒಲಿದುಬಂದ ಶ್ರೀರುಕ್ಮಿಣೀಕರಾರ್ಚಿತಶ್ರೀಕೃಷ್ಣಪ್ರತಿಮೆಯನ್ನು, ಇಂದೂ ನೆಲೆಸಿರುವುದು ಉತ್ತರಬದರಿಯ ಶ್ರೀವೇದವ್ಯಾಸದೇವರ ಸನ್ನಿಧಾನದಲ್ಲಿ – ಇದಿಷ್ಟು, ಸಂಕ್ಷಿಪ್ತವಾಗಿ ಅವರ ಜೀವನಗಾಥೆ.

ಶ್ರೀಪದ್ಮನಾಭತೀರ್ಥರಂತಹ ಪರಮಹಂಸರು, ತ್ರಿವಿಕ್ರಮಪಂಡಿತಾಚಾರ್ಯರಂತಹ ಗೃಹಸ್ಥಶ್ರೇಖರರು, ಜಯಸಿಂಹರಾಜನಂತಹ ಅರಸ, ಕಲ್ಯಾಣೀದೇವಿಯಂತಹ ಮಹಿಳಾಮಣಿಗಳು ಮೊದಲಾದ ಅಸಂಖ್ಯಶಿಷ್ಯವರ್ಗ ಅವರ ಉಪದೇಶಧಾರೆಯಲ್ಲಿ ಮಿಂದು ಪುನೀತವಾಯಿತು. ಜಿಜ್ಞಾಸುಗಳಾಗಿ, ಆರ್ತರಾಗಿ ಬಂದ ಯಾರನ್ನೂ ದೂರಮಾಡದೆ ಕರುಣೆಯಿಂದ ಕರೆದು ಉದ್ಧಾರದ

ಶ್ರೀಮಧ್ವಾಚಾರ್ಯರ ಕಾಲದ ಬಗ್ಗೆ ಮಾಹಿತಿಗಳನ್ನು ನಮ್ಮ ಪ್ರಕಾಶನದ 'ಶ್ರೀಮಧ್ವಾಚಾರ್ಯರ ಕಾಲನಿರ್ಣಯ' ಕೃತಿಯಲ್ಲಿ ಕೊಡಲಾಗಿದೆ.

ಹಾದಿತೋರಿದ ವಿಶ್ವಗುರು ಅವರು. ವೇದವೇದಾಂತಗಳಿರಲಿ, ಶಿಕ್ಷಾವ್ಯಾಕರಣಾದಿ–ವೇದಾಂಗಗಳಿರಲಿ, ತರ್ಕಮೀಮಾಂಸೆಗಳಿರಲಿ, ಸಂಗೀತ ಶಾಸ್ತ್ರವಿರಲಿ, ವಿವಿಧಭಾಷಾಪ್ರಪಂಚ–ವಿರಲಿ, ಕವಿತಾಪ್ರತಿಭೆಯಿರಲಿ ಎಲ್ಲದರಲ್ಲೂ ಅವರು ಪರಿಪೂರ್ಣಪ್ರಮತಿ. ಗಂಗಾನದಿಯ ಮೇಲೆ ನಡೆಯಬಲ್ಲ, ಹಿಮಾಲಯ ಪರ್ವತಶ್ರೇಣಿಯಲ್ಲಿ ಹಾರುತ್ತಾ ಸಾಗಬಲ್ಲ, ಭಾರದ ಬಂಡೆಗಳನ್ನು ಒಂದೇ ಕೈಯಲ್ಲಿ ಎತ್ತಿ ಬೇಕಾದ ಸ್ಥಳದಲ್ಲಿ ಇರಿಸಬಲ್ಲ, ಎಂತಹ ಜಟ್ಟಿಗಳನ್ನು ಸುಮ್ಮನೆ ಕುಳಿತಿದ್ದೇ ಪರಾಭವಗೊಳಿಸಬಲ್ಲ, ವಿಧರ್ಮೀಯರನ್ನೂ ತತ್ತ್ವಾರ್ಥಗರ್ಭಿತ ಅಪೂರ್ವ ಮಾತುಗಾರಿಕೆಯಿಂದ ಕ್ಷಣಕಾಲದಲ್ಲೇ ಪ್ರಭಾವಿತರನ್ನಾಗಿಸಬಲ್ಲ, ಅನ್ಯಾದೃಶ ಯೋಗಶಕ್ತಿ ಅವರದ್ದು. ಶ್ರೀರಾಘವೇಂದ್ರ ಸ್ವಾಮಿಗಳು ತಮ್ಮ ಪ್ರಾತಃಸಂಕಲ್ಪಗದ್ಯದಲ್ಲಿ ವರ್ಣಿಸಿರುವಂತೆ ಶ್ರೀಮಧ್ವಾಚಾರ್ಯರು **ಸಂಸಿದ್ಧಸಪ್ತಕೋಟಿಮಹಾಮಂತ್ರರಾದ ಯೋಗಿರಾಜರು.**

ಅವರ ಕೃತಿಗಳು ಹಾಗೂ ಅವರ ಮೆಲೆ ರಚಿತವಾಗಿರುವ ಕೃತಿಗಳಿಂದ ತಿಳಿದುಬರುವಂತೆ ಅವರು ಅನುಪಮವಿದ್ವಾಂಸರು, ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡ ದಾರ್ಶನಿಕರು, ಸರಸಕವಿಗಳು, ವೇದದ್ರಷ್ಟಾರಋಷಿಗಳು, ತತ್ತ್ವೋಪದೇಶಕ ಗುರುಗಳು, ಅದ್ವಿತೀಯವಾಗ್ಮಿಗಳು, ವೈವಿಧ್ಯಮಯ ಗ್ರಂಥಕಾರರು, ಅಪೂರ್ವಸಂಶೋಧಕರು, ಅಪ್ರತಿಮ ವಾದಕೋವಿದರು, ಅಪೂರ್ವ ಅನುಭಾವಿಗಳು, ತತ್ತ್ವಜ್ಞಾನದ ರಸಋಷಿಗಳು, ಸಕಲಭಾಷಾಕೋವಿದರಾದ ಭಾಷಿಗರು, ಅಪೂರ್ವಭಾಷಾಶಾಸ್ತ್ರಜ್ಞರು, ಮಹಾತಪಸ್ವಿಗಳು, ಅನುಪಮಗಾನಕೋವಿದರು, ಪುರಾತತ್ತ್ವ ಶಾಸ್ತ್ರಜ್ಞರು, ಮೀಮಾಂಸಾದಿಸಕಲಶಾಸ್ತ್ರವಿಶಾರದರು, ಸಮರ್ಥ ಆಡಳಿತಗಾರರು, ಅಸಾಮಾನ್ಯ ಸಂಘಟನಕಾರರು ಮತ್ತು ವಿಶಾಲಹೃದಯದ ಸಮಾಜಸುಧಾರಕರು. ಅವರು ನಿಜವಾದ ಅರ್ಥದಲ್ಲಿ ಸರ್ವಜ್ಞರು, ಸಕಲಕಲಾಕೋವಿದರು ಆಗಿದ್ದ ಮಹಾನುಭಾವರು. ದ್ವಾತ್ರಿಂಶಲ್ಲಕ್ಷಣಭರಿತವಾದ ಅವರ ಆಕೃತಿ ಕಲಿಯುಗದ ಏಕೈಕ ದಾಖಲೆ. ಐವತ್ತು ಟನ್ನುಗಳಷ್ಟು ಭಾರದ ಬೃಹತ್ತಾದ ಶಿಲೆಯನ್ನು ಒಂದೇ ಕೈಯಿಂದ ಭದ್ರಾನದಿಯ ಪ್ರವಾಹಮಧ್ಯದಲ್ಲಿ ಇರಿಸಿದ ಅವರ ದೈಹಿಕಸಾಮರ್ಥ್ಯ ಊಹಾತೀತವಾದದ್ದು.

ಅವರ ಗ್ರಂಥರಾಶಿಯೂ ವೈವಿಧ್ಯಮಯವಾದದ್ದು. ಆರಂಭದ ತತ್ತ್ವಜಿಜ್ಞಾಸುಗಳನ್ನು ಆಳವಾದ ಚಿಂತನೆಗೆ ಅಣಿಗೊಳಿಸಲು ಪ್ರಮಾಣಲಕ್ಷಣ, ಕಥಾಲಕ್ಷಣ, ತತ್ತ್ವಸಂಖ್ಯಾನ, ತತ್ತ್ವವಿವೇಕ, ಉಪಾಧಿಖಂಡನ, ಮಾಯಾವಾದಖಂಡನ, ಪ್ರಪಂಚಮಿಥ್ಯಾತ್ವಾನುಮಾನ–ಖಂಡನ, ತತ್ತ್ವೋದ್ಯೋತ, ವಿಷ್ಣುತತ್ತ್ವವಿನಿರ್ಣಯ ಮತ್ತು ಕರ್ಮನಿರ್ಣಯ ಎಂಬ ದಶಪ್ರಕರಣಗಳು, ವೇದರಹಸ್ಯವೆಂದು ಮಾನ್ಯವಾದ ಉಪನಿಷತ್ತುಗಳ ರಹಸ್ಯವನ್ನು ಅನಾವರಣ–ಗೊಳಿಸುವ (ಈಶ, ಕೇನ, ಕಠ, ಷಟ್ಪ್ರಶ್ನ, ಮುಂಡಕ, ಮಾಂಡೂಕ, ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಎಂಬ) ದಶೋಪನಿಷತ್ತುಗಳ ಭಾಷ್ಯಗಳು,

ಅತ್ಯುನ್ನತಶಾಸ್ತ್ರಕೃತಿಯಾದ ಬ್ರಹ್ಮಸೂತ್ರಗಳ ಮೇಲೆ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಅಣುಭಾಷ್ಯ ಮತ್ತು ನ್ಯಾಯವಿವರಣ ಎಂಬ ನಾಲ್ಕು ಕೃತಿಗಳು, ಪುರಾಣಪ್ರಸ್ಥಾನದ ಮೇಲಿನ ಭಾಷ್ಯರೂಪವಾಗಿ ಶ್ರೀಮದ್ಭಾಗವತ ಮಹಾಪುರಾಣದ ಮೇಲೆ ರಚಿತವಾಗಿರುವ ಭಾಗವತ–ತಾತ್ಪರ್ಯನಿರ್ಣಯ, ವೇದಗಳಿಗಿಂತ ಮಿಗಿಲೆನ್ನಿಸಿದ ಮಹಾಭಾರತದ ಮೇಲೆ ಮಹಾಭಾರತ–ತಾತ್ಪರ್ಯನಿರ್ಣಯವೆಂಬ ಅನುಪಮ ಸಂಶೋಧನವಿಮರ್ಶನ ಕೃತಿ ಹಾಗೂ ಅದರ ಸಾರಸಂಗ್ರಹರೂಪವಾದ ಚಿತ್ರಕಾವ್ಯ ಯಮಕಭಾರತ, ಮಹಾಭಾರತಪಾರಿಜಾತದ ಸಕಲತತ್ತ್ವಗಳ ಮಧುವಾದ ಭಗವದ್ಗೀತೆಯ ಮೇಲೆ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯ ಎಂಬ ಎರಡು ಕೃತಿಗಳು, ಅಪೌರುಷೇಯ ವೇದಗಳಲ್ಲಿ ಪ್ರಥಮಗಣ್ಯವಾದ ಋಗ್ವೇದದ ಮೇಲೆ ಅಧ್ಯಾತ್ಮಾದಿ ಅರ್ಥತ್ರಯಗಳನ್ನು ವಿವೇಚಿಸುವ ಋಗ್ಭಾಷ್ಯ, ತತ್ತ್ವಜ್ಞಾನದ ಸಾಧನೆ ಮತ್ತು ಅನುಷ್ಠಾನಕ್ಕೆ ನೆರವಾಗುವ ತತ್ತ್ವಗಳನ್ನು ನಿರೂಪಿಸುವ ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ, ಜಯಂತೀನಿರ್ಣಯ, ಪ್ರಣವಕಲ್ಪ, ತಂತ್ರಸಾರಸಂಗ್ರಹ ಎಂಬ ಆಚಾರಗ್ರಂಥಗಳು ಮತ್ತು ಕೊನೆಯದಾಗಿ ತಾವು ಪ್ರತಿಪಾದಿಸಿದ ಸಕಲತತ್ತ್ವಗಳನ್ನು ಅನುಸಂಧಾನಕ್ಕೆ ತಂದುಕೊಂಡು ಪರತತ್ತ್ವವಾದ ಭಗವಂತನನ್ನು ಪರಿಪರಿಯಾಗಿ ಸ್ತುತಿಸಲು ಅನುವು ಮಾಡಿಕೊಡುವ ದ್ವಾದಶಸ್ತೋತ್ರ ಮತ್ತು ನಖಸ್ತುತಿ (ಮತ್ತು ಕಂದುಕಸ್ತುತಿ) ಎಂಬ ಸ್ತೋತ್ರರತ್ನಗಳು – ಇವಿಷ್ಟು ಸರ್ವಮೂಲವೆಂದು ಪರಂಪರೆ ಕಾಪಾಡಿಕೊಂಡುಬಂದಿರುವ ಅವರ ಅಮೌಲ್ಯಕೃತಿಗಳು.

ಸರಳತೆ, ಸ್ಪಷ್ಟತೆ, ಗಾಂಭೀರ್ಯ, ಅಡಕವಾದ ನಿರೂಪಣೆ, ಪ್ರಮಾಣೋದಾಹರಣ ಹಾಗೂ ಯುಕ್ತಿವೈಭವಗಳು ಅವರ ಕೃತಿಗಳ ವಿಶಿಷ್ಟಲಕ್ಷಣಗಳು. ಜಗತ್ತಿನ ಬೇರಾವ ಗ್ರಂಥಕಾರರ ಕೃತಿಗಳಲ್ಲೂ ಕಾಣಸಿಗದ ನಿರಂತರ ಪ್ರಮಾಣೋದಾಹರಣೆ ಅವರ ಗ್ರಂಥಗಳ ಅಸಾಮಾನ್ಯ ಹಿರಿಮೆ. ಶಬ್ದವಿನ್ಯಾಸದಲ್ಲಿ ವಾಮನನಾಗಿದ್ದು ಅರ್ಥವೈಭವದಲ್ಲಿ ತ್ರಿವಿಕ್ರಮನಾಗಿರುವುದು ಅವರ ಎಲ್ಲ ಬರವಣಿಗೆಯ ಅಸಾಧಾರಣಲಕ್ಷಣ.

★★★★★★

ಶ್ರೀಮಧ್ವಾಚಾರ್ಯರ ಕೃತಿಗಳು (ಸರ್ವಮೂಲಗ್ರಂಥಗಳು)

ಗೀತಾಪ್ರಸ್ಥಾನಗ್ರಂಥಗಳು :

ಶ್ರೀಮದ್ಭಗವದ್ಗೀತಾಭಾಷ್ಯ ಶ್ರೀಮದ್ಭಗವದ್ಗೀತಾತಾತ್ಪರ್ಯನಿರ್ಣಯ

ಸೂತ್ರಪ್ರಸ್ಥಾನಗ್ರಂಥಗಳು :

ಶ್ರೀಮದ್ಬ್ರಹ್ಮಸೂತ್ರಭಾಷ್ಯ
ಶ್ರೀಮದ್ಬ್ರಹ್ಮಸೂತ್ರಾನುವ್ಯಾಖ್ಯಾನ

ಶ್ರೀಮದ್ಬ್ರಹ್ಮಸೂತ್ರಾಣುಭಾಷ್ಯ
ಶ್ರೀಮದ್ಬ್ರಹ್ಮಸೂತ್ರಾನುವ್ಯಾಖ್ಯಾನ್ಯಾಯವಿವರಣ

ಉಪನಿಷತ್ಪ್ರಸ್ಥಾನಗ್ರಂಥಗಳು :

ಐತರೇಯೋಪನಿಷದ್ಭಾಷ್ಯ	**ಛಾಂದೋಗ್ಯೋಪನಿಷದ್ಭಾಷ್ಯ**
ಬೃಹದಾರಣ್ಯಕೋಪನಿಷದ್ಭಾಷ್ಯ	**ಈಶಾವಾಸ್ಯೋಪನಿಷದ್ಭಾಷ್ಯ**
ತಲವಕಾರೋಪನಿಷದ್ಭಾಷ್ಯ	**ಷಟ್ಪ್ರಶ್ನೋಪನಿಷದ್ಭಾಷ್ಯ**
ಕಾಠಕೋಪನಿಷದ್ಭಾಷ್ಯ	**ಆಥರ್ವಣಿಕೋಪನಿಷದ್ಭಾಷ್ಯ**
ಮಾಂಡೂಕೋಪನಿಷದ್ಭಾಷ್ಯ	**ತೈತ್ತಿರೀಯೋಪನಿಷದ್ಭಾಷ್ಯ**

ಶ್ರುತಿಪ್ರಸ್ಥಾನಗ್ರಂಥ :

ಋಗ್ಭಾಷ್ಯ

---

೧. ಸಂನ್ಯಾಸಪದ್ಧತಿ, ತಿಥಿನಿರ್ಣಯ, ಸೂರ್ಯಸಿದ್ಧಾಂತವಚನ ಹಾಗೂ ಭಾಧಾತುವ್ಯಾಖ್ಯಾನ ಎಂಬ ಮತ್ತೆ ಕೆಲವು ಗ್ರಂಥಗಳು ಸಹ ಶ್ರೀಮಧ್ವಾಚಾರ್ಯಪ್ರಣೀತವೆಂಬುದಾಗಿ ತಿಳಿದುಬರುವುದು. ಇವುಗಳಲ್ಲದೆ ಅವರ ರಚನೆ ಎನ್ನಲಾಗಿರುವ ಕೆಲವು ಬಿಡಿಶ್ಲೋಕಗಳು ಸಹ ಪ್ರಸಿದ್ಧವಾಗಿವೆ :

ರಾಮೋಽಖಿಲಾನಂದತನುಃ ಸ ಏವ ಭೀಮೋಽತಿಪಾಪೇಷು ದುರಂತವೀರ್ಯಃ।
ಕಾಮಃ ಸ ಏವಾಜಿತಕಾಮಿನೀಷು ಸೋಮಃ ಸ ಏವಾತ್ಮಪದಾಶ್ರಿತೇಷು ॥
[೧]**ಚಂಚಲೋಽಯಂ ಮನೋಮೀನಃ ಸಮಾನೇಯೋ ಹರಿಸ್ಥಲೇ।**
ವಿಷಯೋದಕಸಂಚಾರೀ ಸುಯತ್ನುಡಿಶಾಹೃತಃ ॥

[೨]**"ಬಿಲ್ವಮಂಗಲಃ ಸಾಧುಃ"**[೩] ಎಂಬ ವಾಕ್ಯವೊಂದು ಸಹ ಶ್ರೀಮಧ್ವಾಚಾರ್ಯಕೃತ ಎಂಬುದಾಗಿ ಪ್ರಸಿದ್ಧವಾಗಿದೆ. ಇವರು ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವೊಂದನ್ನು ಸಹ ರಚಿಸಿರುವ ಬಗ್ಗೆಯೂ [೪]ಉಲ್ಲೇಖವಿದೆ.

೧,೨. ಇವುಗಳಿಗೆ ಶ್ರೀವಾದಿರಾಜತೀರ್ಥರ ವ್ಯಾಖ್ಯಾನವಿರುವುದಾಗಿ ಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥ ಮಠದ ಶ್ರೀನಾರಾಯಣತೀರ್ಥರು ಉಲ್ಲೇಖಿಸಿದ್ದಾರೆ; ಹೆಚ್ಚಿನ ವಿವರಗಳಿಗೆ ತತ್ತ್ವವಾದ ಡಿಸೆಂಬರ್ ೧೯೮೧ರ ಸಂಚಿಕೆಯಲ್ಲಿನ 'ಒಂದು ಅಪೂರ್ವ ದಾಖಲೆ' ಎಂಬ ನನ್ನ ಲೇಖನವನ್ನು ನೋಡಬಹುದು.

೩. 'ಬಿಲ್ವಮಂಗಲಃ ಸಾಧುಃ' ಎಂಬ ವಾಕ್ಯಕ್ಕೆ ಶ್ರೀಸತ್ಯಪರಾಯಣತೀರ್ಥರು ಹಾಗೂ ಶ್ರೀವೈಕುಂಠವಲ್ಲಭ-ತೀರ್ಥಶಿಷ್ಯ ಶ್ರೀವಿಜ್ಞಾನತೀರ್ಥರು ವ್ಯಾಖ್ಯಾನ ರಚಿಸಿದ್ದು, ಅವುಗಳಲ್ಲಿ ಶ್ರೀಸತ್ಯಪರಾಯಣತೀರ್ಥರ ವ್ಯಾಖ್ಯಾನ ಪ್ರಕಟಿತವಾಗಿದೆ; ಶ್ರೀವಿಜ್ಞಾನತೀರ್ಥರ ವ್ಯಾಖ್ಯಾನವು ನಮ್ಮ ಪ್ರಕಾಶನದಿಂದ ಪ್ರಕಾಶಿತವಾಗಿದೆ.

೪. ದಿವ್ಯಗೇಯವಿದಗ್ರೋಽಸೌ ಸರ್ವಜ್ಞ ಇತಿ ಯಾಚಿತಃ।
ವಿದ್ವದ್ಭಿರತ್ರ ಕೃತವಾನ್ ಗಾನಶಾಸ್ತ್ರಂ ಸುದುರ್ಲಭಮ್॥ –ಸುಮಧ್ವವಿಜಯಭಾವಪ್ರಕಾಶಿಕಾ (೧೦/೫೩)

ಇತಿಹಾಸಪ್ರಸ್ಥಾನಗ್ರಂಥಗಳು :

ಮಹಾಭಾರತತಾತ್ಪರ್ಯನಿರ್ಣಯ ಯಮಕಭಾರತ

ಪುರಾಣಪ್ರಸ್ಥಾನಗ್ರಂಥ :

ಭಾಗವತತಾತ್ಪರ್ಯನಿರ್ಣಯ

ಪ್ರಕರಣಗ್ರಂಥಗಳು :

ತತ್ತ್ವಸಂಖ್ಯಾನ ತತ್ತ್ವವಿವೇಕ
ತತ್ತ್ವೋದ್ಯೋತ ವಿಷ್ಣುತತ್ತ್ವವಿನಿರ್ಣಯ
ಪ್ರಮಾಣಲಕ್ಷಣ ಕಥಾಲಕ್ಷಣ
ಉಪಾಧಿಖಂಡನ ಮಾಯಾವಾದಖಂಡನ
ಪ್ರಪಂಚಮಿಥ್ಯಾತ್ವಾನುಮಾನಖಂಡನ ಕರ್ಮನಿರ್ಣಯ

ಆಚಾರಗ್ರಂಥಗಳು :

ತಂತ್ರಸಾರಸಂಗ್ರಹ ಸದಾಚಾರಸ್ಮೃತಿ
ಜಯಂತೀನಿರ್ಣಯ ಕೃಷ್ಣಾಮೃತಮಹಾರ್ಣವ
ಪ್ರಣವಕಲ್ಪ

ಸ್ತೋತ್ರಕೃತಿಗಳು :

ನಖಸ್ತುತಿ ದ್ವಾದಶಸ್ತೋತ್ರ ಕಂದುಕಸ್ತುತಿ[೧]

*****

ಮಹಾಭಾರತತಾತ್ಪರ್ಯನಿರ್ಣಯ

ಇಂತಹ ಮಹಾಭಾರತ ರಾಮಾಯಣಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ ಏಕಮಾತ್ರ ದಾರ್ಶನಿಕರು ಎಂಬುದು ಆಚಾರ್ಯಶ್ರೀಮಧ್ವರ ವೈಶಿಷ್ಟ್ಯ. ಇತರ ಆಚಾರ್ಯರು ಇವುಗಳಿಂದ ಕೆಲವು ವಾಕ್ಯಗಳನ್ನು ಉಲ್ಲೇಖಿಸಿದ್ದರೂ, ಆ ಕೃತಿಗಳ ಸಮಗ್ರ ವಿವರಣೆಗೆ ಹೊರಟಿಲ್ಲ; ತಾತ್ತ್ವಿಕ ವಿವೇಚನೆಯಂತೂ ದೂರದ ಮಾತೇ. ಇಂತಹ ಸನ್ನಿವೇಶದಲ್ಲಿ ಶ್ರೀಮದಾಚಾರ್ಯರ ಕೃತಿ ಜಿಜ್ಞಾಸುವೃಂದಕ್ಕೆ ಮಾಡಿರುವ ಉಪಕಾರ ಅನುಪಮ. ಮಹಾಭಾರತತಾತ್ಪರ್ಯನಿರ್ಣಯವು ಶ್ರೀಮದಾಚಾರ್ಯರ ಕೃತಿಗಳಲ್ಲೆಲ್ಲಾ ಗಾತ್ರದಲ್ಲಿ ಅತ್ಯಂತ ಹಿರಿದಾದ ಕೃತಿ. ಐದುಸಾವಿರ ಶ್ಲೋಕಗಳಿಗಿಂತಲೂ ಹೆಚ್ಚಿನ ವ್ಯಾಪ್ತಿಯ ಅಂತಹ ಶ್ಲೋಕರೂಪದ ಕೃತಿ ಸಮಗ್ರ ಸಂಸ್ಕೃತ ಸಾಹಿತ್ಯದಲ್ಲೇ ವಿರಳ. ಮಹಾಭಾರತ, ರಾಮಾಯಣಗಳ ಸಮಗ್ರ ವಿಶ್ಲೇಷಣೆಯನ್ನು ಒಟ್ಟು ಮೂವತ್ತೆರಡು ಅಧ್ಯಾಯಗಳಲ್ಲಿ ಈ ಕೃತಿ ಒದಗಿಸುತ್ತಿದೆ.

ಮೊದಲ ಅಧ್ಯಾಯ ಸಕಲಶಾಸ್ತ್ರ ಪ್ರಮೇಯಗಳ ಸಂಕಲವಾದ 'ಸರ್ವಶಾಸ್ತ್ರಾರ್ಥ–ನಿರ್ಣಯ'. ಎರಡನೆಯದು ಅದಕ್ಕೆ ಸಂವಾದಿಯಾಗಿ ಮಹಾಭಾರತದ ವಾಕ್ಯಗಳನ್ನು ಉದ್ಧರಿಸಿ ಕೊಡುವ 'ಸುವಾಕ್ಯೋದ್ಧಾರ'. ಮೂರನೆಯದು ಭಗವಂತನ ವರಾಹಾದಿ ಅವತಾರಗಳ ವೈಭವವನ್ನೂ, ಶ್ರೀರಾಮಪ್ರಾದುರ್ಭಾವವನ್ನೂ ನಿರೂಪಿಸುವ 'ಸರ್ಗಾನುಸರ್ಗಲಯಪ್ರಾದು–ರ್ಭಾವನಿರ್ಣಯ'. ಮೂರನೆಯ ಅಧ್ಯಾಯದಲ್ಲಿ ಪ್ರಾರಂಭವಾಗುವ ರಾಮಕಥಾನಿರ್ಣಯ ನಾಲ್ಕನೆಯದರಿಂದ ಮುಂದುವರೆದು ಒಂಭತ್ತನೆಯ ಅಧ್ಯಾಯದಲ್ಲಿ ಮುಕ್ತಾಯವಾಗುತ್ತದೆ. ಹತ್ತನೆಯದು ಮಹಾಭಾರತದ ಕರ್ತೃವಾದ ವೇದವ್ಯಾಸರ ಅವತಾರದ ಬಗ್ಗೆ ಸಮಗ್ರ ಮಾಹಿತಿಗಳನ್ನು ಒದಗಿಸುವ ಮಹತ್ತ್ವದ ಅಧ್ಯಾಯ. ಹನ್ನೊಂದರಿಂದ ಮೂವತ್ತೆರಡರವರೆಗಿನ ಇತರ ಅಧ್ಯಾಯಗಳೆಲ್ಲ ಮಹಾಭಾರತ ನಿರ್ಣಯಕ್ಕೆ ಮೀಸಲು. ಇದಿಷ್ಟು ಕೃತಿಯ ಸ್ಥೂಲ ಪರಿಚಯ.

ಇದನ್ನು ಅವರು ರಚಿಸಿದ್ದು ಸ್ವತಃ ಕೃತಿಕರ್ತೃಗಳಾದ ಶ್ರೀವೇದವ್ಯಾಸರ ಆದೇಶದಂತೆ. ಪ್ರಥಮ ಬಾರಿಗೆ ಉತ್ತರಬದರಿಯಲ್ಲಿ ಅವರು ಶ್ರೀವೇದವ್ಯಾಸ–ನಾರಾಯಣರನ್ನು ಸಂದರ್ಶಿಸಿದಾಗ ಅವರು ಇವರಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಲು ಆದೇಶಿಸಿದರೆ, ದ್ವಿತೀಯಬಾರಿಯ ಬದರೀಯಾತ್ರೆಯಲ್ಲಿ ಅವರು ಬ್ರಹ್ಮಸೂತ್ರಭಾಷ್ಯವನ್ನು ಸಮರ್ಪಿಸಿದಾಗ, ಅವರು ಮಹಾ–ಭಾರತಕ್ಕೂ ತಾತ್ಪರ್ಯನಿರ್ಣಯವೊಂದನ್ನು ರಚಿಸಲು ಆದೇಶ ನೀಡಿದರು. ಅದರ ಫಲವಾಗಿ ರಚಿತವಾದ ಕೃತಿ ಮಹಾಭಾರತತಾತ್ಪರ್ಯನಿರ್ಣಯ.

ಸ್ವತಃ ಶ್ರೀಮದಾಚಾರ್ಯರು ತಮ್ಮ ಕೃತಿಯಲ್ಲಿ ಇದರ ರಚನೆಯ ಹಿನ್ನೆಲೆಯನ್ನು ವಿವರ–ವಾಗಿಯೇ ನೀಡಿರುವರು. ಇದು ರಚಿತವಾದ ಸ್ಥಳ ಉಡುಪಿ ಎಂಬ ಮಾತು ಅಣುಮಧ್ವಚರಿತದಲ್ಲಿ ಬಂದಿದೆ.

ಮಹಾಭಾರತ ರಚಿಸಿದ ಶ್ರೀವೇದವ್ಯಾಸರ ಆದೇಶದಿಂದಲೇ ರಚಿತವಾದ ಅನನ್ಯಕೃತಿ ಮಹಾಭಾರತತಾತ್ಪರ್ಯನಿರ್ಣಯ. ಮೂಲಕಾರರು ವೇದವ್ಯಾಸರಾದರೆ, ತಾತ್ಪರ್ಯನಿರ್ಣಯ ರಚಿಸಿದ ಶ್ರೀಮಧ್ವಾಚಾರ್ಯರು ನಿಜವಾದ ಅಭಿನವವೇದವ್ಯಾಸರು.

ಈ ಕೃತಿಯ ಬಗ್ಗೆ ಸಮಗ್ರ ಪರಿಚಯಾತ್ಮಕವಾದ ವಿವರಗಳನ್ನು ಕೊನೆಯ ಸಂಪುಟದಲ್ಲಿ ನೀಡಲಾಗಿದೆ. ಇದರ ವೈಶಿಷ್ಟ್ಯಗಳನ್ನೂ ಅಲ್ಲಿಯೇ ವಿವರಿಸಲಾಗಿದೆ. ಪ್ರತಿ ಸಂಪುಟದ ಮುನ್ನುಡಿ–ಯಲ್ಲಿ ಆ ಸಂಪುಟದಲ್ಲಿನ ಅಧ್ಯಾಯಗಳ ವಿವರಗಳನ್ನೂ, ವಿಶೇಷಾಂಶಗಳನ್ನೂ ನೀಡಲಾಗಿದೆ.

ಪ್ರಸ್ತುತ ಸಂಪುಟದಲ್ಲಿ ಬಂದಿರುವ ವಿವರಗಳು ಪ್ರಧಾನವಾಗಿ ರಾಮಾಯಣಕ್ಕೆ ಸಂಬಂಧಿಸಿದ್ದು. ಮುಖ್ಯವಾಗಿ ಮೂರನೆಯ ಅಧ್ಯಾಯದ ೬೩ನೇ ಶ್ಲೋಕದಿಂದ ಒಂಭತ್ತನೆಯ

ಅಧ್ಯಾಯದ ಮುಕ್ತಾಯದವರೆಗಿನ ಭಾಗವನ್ನು ರಾಮಾಯಣತಾತ್ಪರ್ಯನಿರ್ಣಯ ಎಂದು ವ್ಯವಹರಿಸಬಹುದು. ಮುಖ್ಯವಾಗಿ ಹಯಗ್ರೀವಪ್ರೋಕ್ತವಾದ ಮೂಲರಾಮಾಯಣದ ವಿವರ–ಗಳನ್ನು ಆಧರಿಸಿ ಈ ಭಾಗ ರಚಿತವಾಗಿದೆ ಎಂಬುದನ್ನು ಅವರೇ ತಿಳಿಸಿರುವರು. ವಾಲ್ಮೀಕಿ–ರಾಮಾಯಣವೂ ಆ ಮೂಲರಾಮಾಯಣದ ಸಂಕ್ಷಿಪ್ತ ಆವಿಷ್ಕಾರ ಎಂಬ ಮಾತು ಮತ್ಸ್ಯಪುರಾಣದಲ್ಲಿದೆ. ಇದರಿಂದಾಗಿ ಇದು ವಾಲ್ಮೀಕಿರಾಮಾಯಣವನ್ನು ಅಧ್ಯಯನ ಮಾಡುವವರಿಗೂ ಮಾರ್ಗದರ್ಶಕವಾದ ವಿಶಿಷ್ಟಕೃತಿಯಾಗಿ ಮಾನ್ಯವಾಗುವುದು.

ಪ್ರತಿ ಸಂಪುಟದಲ್ಲಿನ ಅಧ್ಯಾಯಗಳ ವಿವರ ಹೀಗಿದೆ :

ಪ್ರಥಮಸಂಪುಟ – ಅಧ್ಯಾಯಗಳು : ೧ ರಿಂದ ೯

ದ್ವಿತೀಯಸಂಪುಟ – ಅಧ್ಯಾಯಗಳು : ೧೦ ರಿಂದ ೧೭

ತೃತೀಯಸಂಪುಟ – ಅಧ್ಯಾಯಗಳು : ೧೮ ರಿಂದ ೨೧

ಚತುರ್ಥಸಂಪುಟ – ಅಧ್ಯಾಯಗಳು : ೨೨ ರಿಂದ ೨೬

ಪಂಚಮಸಂಪುಟ – ಅಧ್ಯಾಯಗಳು : ೨೭ ರಿಂದ ೩೨

★★★★★★

ಮೊದಲನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೩೫)

ಪ್ರಥಮಾಧ್ಯಾಯವು ಅದರ ಹೆಸರಿನಿಂದಲೇ ತಿಳಿಸುವಂತೆ ಸರ್ವಶಾಸ್ತ್ರತಾತ್ಪರ್ಯ–ನಿರ್ಣಯ. ಭಗವಂತನಾದ ನಾರಾಯಣನು ಸೃಷ್ಟಿಗೆ ಸಂಕಲ್ಪಿಸಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೂಪಗಳನ್ನು ಸ್ವೀಕರಿಸಿದ. ಮಹಾಲಕ್ಷ್ಮಿ ಕ್ರಮವಾಗಿ ಮಾಯಾ, ಜಯಾ, ಕೃತಿ ಮತ್ತು ಶಾಂತಿ ಎಂಬ ರೂಪಗಳನ್ನು ಹೊಂದಿದರು ಎಂದು ತಿಳಿಸುತ್ತ ಭಗವಂತನ ಗುಣಪೂರ್ಣತ್ವ, ದೋಷದೂರತ್ವ, ಸರ್ವಸ್ವಾತಂತ್ರ್ಯ, ಸ್ವಗತಭೇದವಿವರ್ಜಿತತ್ವ, ಅನಂತ್ಯ ಮೊದಲಾದ ಬಹುಬಗೆಯ ವೈಭವವನ್ನು ನಿರೂಪಿಸಿ ಅವನ್ನೆಲ್ಲ ವೇದೇತಿಹಾಸಪುರಾಣಾದಿಗಳಿಂದ ಸಮರ್ಥಿಸಿರುವರು[೧]. ಜೀವರು ಭಗವಂತನ ಪ್ರತಿಬಿಂಬರು. ಜೀವತ್ರೈವಿಧ್ಯವು ಅನಾದಿನಿತ್ಯ. ಋಗಾದಿಸಪ್ತಶಾಸ್ತ್ರಗಳು ಸ್ವತಃಪ್ರಮಾಣಗ್ರಂಥಗಳು. ಬ್ರಹ್ಮಸೂತ್ರ ನಿರ್ಣಾಯಕ ಗ್ರಂಥ. ಈ ಶಾಸ್ತ್ರಗಳಿಗನುಗುಣವಾದ ಸಕಲ ಸ್ಮೃತಿಗಳೂ ಪ್ರಮಾಣಗಳು. ಶ್ರೀಹರಿಯ ಸರ್ವೋತ್ತಮತ್ವವೇ

---

೧. ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ ರಾಮಾಯಣೈಃ ಸಹಿತಭಾರತಪಂಚರಾತ್ರೈಃ।
ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥ –(೧/೨೨)

ಸಕಲ ಶ್ರುತಿಸ್ಮೃತಿಗಳ ಮಹಾತಾತ್ಪರ್ಯ. ಪಾಶುಪತಾದಿ ಆಗಮಗಳು ಅಪ್ರಮಾಣ. ಇತರ ಶಾಸ್ತ್ರಗಳಲ್ಲೂ ವಿಷ್ಣುಸರ್ವೋತ್ತಮತ್ವ ಪ್ರತಿಪಾದಿತ. ಜಗತ್ತು [೧]ಸತ್ಯವಾದುದು. [೨]ಪಂಚಭೇದಗಳೂ ಸತ್ಯ. ತಾರತಮ್ಯಜ್ಞಾನ ಸದಾಗಮಗಳ ಪರಿಜ್ಞಾನ, ಭಕ್ತಿ ಭಗವದವತಾರಾದಿಗಳ ಪರಿಜ್ಞಾನ ಮೋಕ್ಷಸಾಧನೆಗೆ ಅತ್ಯಾವಶ್ಯಕ. ತ್ರಿವಿಧ ಜೀವರಿಗೆ ಲಭಿಸುವ ಗತಿಯು ಸಹ ಮೋಕ್ಷ, ನಿತ್ಯಸಂಸಾರ ಹಾಗೂ ತಮಸ್ಸು ಎಂಬುದಾಗಿ ಮೂರು ಬಗೆಯದು. ದಾನತೀರ್ಥಯಾತ್ರಾದಿಗಳು ಭಕ್ತಿಗೆ ಸಾಧನ. ಹರಿಭಕ್ತಿಯೇ ಮುಕ್ತಿಗೆ ಸಾಧನ, ಹರಿದ್ವೇಷ ತಮಸ್ಸಿಗೆ ಸಾಧನ. ಅದು ಒಂಭತ್ತು ಬಗೆ. ಮೋಕ್ಷದಲ್ಲೂ ತಾರತಮ್ಯ. ಸಮಗ್ರಗುರುಲಕ್ಷಣೋಪೇತರಾದ ಬ್ರಹ್ಮದೇವರೇ ಮುಖ್ಯಗುರುಗಳು, ದ್ವಾತ್ರಿಂಶ–ಲ್ಲಕ್ಷಣಗಳ ವಿವರ, ಹರ್ಯನುಗ್ರಹದಂತೆ ಗುರ್ವನುಗ್ರಹವೂ ಅಪೇಕ್ಷಿತ. ಅಪರೋಕ್ಷಜ್ಞಾನವೇ ಖಚಿತ ಮುಕ್ತಿಸಾಧನ. ಜೀವರು ಮಾತ್ರವಲ್ಲದೇ ಆಯಾ ಪದವಿಗೆ ಯೋಗ್ಯವಾದ ಅಧಿಕಾರಿಕ ಜೀವರೂ ಅನಂತ. ಬ್ರಹ್ಮಾದಿಗಳಂತೆ ಕಲ್ಯಾದಿಗಳೂ ಅನಂತ. ತಾತ್ಪರ್ಯನಿರ್ಣಯದ ಪರಿಜ್ಞಾನವೇ [೩]ವಿಷ್ಣುಪ್ರೀತಿಗೆ ಸಾಧಕ. ಶ್ರೀಹರಿಯ [೪]ಆಜ್ಞೆಯಿಂದಲೇ ರಚಿತವಾದ ಕೃತಿಯೆಂಬುದು ಇದರ ಹಿರಿಮೆ. ಇದೇ ಮೊದಲಾದ ವಿವರಗಳು ಈ ಅಧ್ಯಾಯದ ಮುಖ್ಯಾಂಶಗಳು. ಶ್ರೀಮದಾಚಾರ್ಯರ ಅಣುಭಾಷ್ಯವು ಬ್ರಹ್ಮಸೂತ್ರಭಾಷ್ಯದ ಸಂಗ್ರಹವಾದರೆ ಈ ಅಧ್ಯಾಯವು ಅಣುಭಾಷ್ಯದ ವಿಸ್ತಾರದಂತಿದೆ. ಸಮಗ್ರ ಮಧ್ವದರ್ಶನದ ಸಂಗ್ರಹ ಪರಿಜ್ಞಾನಕ್ಕೆ ಇದು ಪ್ರಧಾನ ಆಕರ.

---

೧. ಸತ್ಯಾ ವಿಷ್ಣೋರ್ಗುಣಾಸ್ಸರ್ವೇ ಸತ್ಯಾ ಜೀವೇಶಯೋರ್ಭಿದಾ ।
ಸತ್ಯೋ ಮಿಥೋ ಜೀವಭೇದಃ ಸತ್ಯಂ ಚ ಜಗದೀದೃಶಮ್ ॥
ಅಸತ್ಯಃ ಸ್ವಗತೋ ಭೇದೋ ವಿಷ್ಣೋರ್ನಾನ್ಯದಸತ್ಕಮ್ ।
ಜಗತ್ಪ್ರಾಹುಃ ಸತ್ಯೋಽಯಂ ಪಂಚಭೇದಸಮನ್ವಿತಃ ॥ – (೧/೬೮, ೬೯)

೨. ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಮ್ ।
ಜಡೇಶಯೋರ್ಜಡಾನಾಂ ಚ ಜಡಜೀವಭಿದಾ ತಥಾ ॥
ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವಶಃ ।
ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ ॥ – (೧/೭೦, ೭೧)

೩. ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಽಸೌ ॥ – (೧/೧೩೫)

೪. ಇತ್ಯೃಗ್ಯಜುಃಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥
ವಿಷ್ಣ್ವಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥ – (೧/೧೩೩, ೧೩೪)

ಎರಡನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೮೨)

ಪ್ರಥಮಾಧ್ಯಾಯದಲ್ಲಿ ಮಾಡಿದ ಸರ್ವಶಾಸ್ತ್ರಾರ್ಥನಿರ್ಣಯವನ್ನು ಈ ಅಧ್ಯಾಯದಲ್ಲಿ ಮಹಾಭಾರತ ವಾಕ್ಯಗಳಿಂದ ಸ್ಫುಟಪಡಿಸಿರುವರು. ಮೊದಲಿಗೆ ಗ್ರಂಥವಿಪ್ಲವಕ್ಕೆ ಪ್ರಕ್ಷೇಪಾದಿಗಳು ಕಾರಣವೆಂದು ತಿಳಿಸಿ, ಮಹಾಭಾರತದ ಹಿರಿಮೆಯನ್ನು ಬ್ರಹ್ಮಾಂಡಪುರಾಣದ ವಾಕ್ಯಗಳಿಂದ ಸಾಧಿಸಿರುವರು. ಬಳಿಕ ವ್ಯಾಸಕೃಷ್ಣರ ನಿದರ್ಶನದಿಂದ ಹರಿಸರ್ವೋತ್ತಮತ್ವವನ್ನೂ ಭೀಮನ ನಿದರ್ಶನದಿಂದ ವಾಯುಜೀವೋತ್ತಮತ್ವವನ್ನೂ ತಿಳಿಸಿ, ಬಲರಾಮಾದಿಗಳ ನಿದರ್ಶನದಿಂದ ಶೇಷಾದಿದೇವತೆಗಳ ತಾರತಮ್ಯಕ್ರಮವನ್ನು ವಿಶ್ಲೇಷಿಸಿರುವರು. ಬ್ರಾಹ್ಮಣರ ಯೋಗ್ಯತಾನಿರ್ಣಯಕ್ಕೆ ಜ್ಞಾನವು ಸಾಧನವಾಗಿರುವಂತೆ ಕ್ಷತ್ರಿಯರ ತಾರತಮ್ಯ ಪರಿಜ್ಞಾನಕ್ಕೆ ಬಲ [೧]ಪ್ರಧಾನ ಸಾಧನ. ಅಂತಹ ಬಲವೂ ಸಹ ವರ, ಶಸ್ತ್ರಾಸ್ತ್ರಗಳ ಬಲವಾಗಿರದೇ ಸಹಜ ಬಲವೇ ಆಗಿರಬೇಕು. ಬಲಕಾರ್ಯಕ್ಕೆ ತೊಡಗಿದ ದ್ರೋಣಾದಿಬ್ರಾಹ್ಮಣರಲ್ಲೂ ಯೋಗ್ಯತೆಯ ನಿರ್ಣಯಕ್ಕೆ ಬಲವೇ ಸಾಧನ. ಸ್ತ್ರೀಯರಲ್ಲಿ ರೂಪವೇ[೨] ನಿರ್ಣಾಯಕ. ಅದೂ ಸಹ ಬಲದಂತೆ ಸಹಜರೂಪವಾಗಿರಬೇಕೇ ಹೊರತು ವರಾದಿಜನ್ಯವಾಗಿರಕೂಡದು[೩]. ಇದರಿಂದ ಅಪಾರ ರೂಪವತಿಯರಾದ ರುಗ್ಮಿಣಿ ಸತ್ಯಭಾಮೆಯರು, ಬಳಿಕ ದ್ರೌಪದಿ ಶ್ರೇಷ್ಠರೆನ್ನಿಸುವರು. ರಾಮಾವತಾರ ಕೃಷ್ಣಾವತಾರಗಳೆರಡೂ ಸಕಲದೇವತೆಗಳ ಭಗವತ್ಕಾರ್ಯಸಾಧನೆಗೆ ವಿಶೇಷ ಅವಕಾಶವಿತ್ತ ಅವತಾರಗಳು. ಅದರಿಂದಾಗಿಯೇ ಈ ಎರಡು ಅವತಾರಗಳಿಗೆ ವಿಶೇಷ ಮಹತ್ವ. ಅನಂತರದ್ದು ಎಂಬ ಕಾರಣದಿಂದ ಕೃಷ್ಣಾವತಾರ ರಾಮಾವತಾರಕ್ಕಿಂತಲೂ ಹೆಚ್ಚಾಗಿ ದೇವತೆಗಳಿಗೆ ಅವಕಾಶ ಕಲ್ಪಿಸಿದ ವಿಶಿಷ್ಟ ಅವತಾರ. ಅದಕ್ಕೆಂದೇ ಕೃಷ್ಣಾವತಾರದ ಹಿರಿಮೆಯನ್ನು ನಿರೂಪಿಸುವ ಮಹಾಭಾರತಕ್ಕೆ ರಾಮಾಯಣಕ್ಕಿಂತ ಹೆಚ್ಚು ಪ್ರಾಶಸ್ತ್ಯ. ಮಹಾಭಾರತದಲ್ಲಿ [೪]ರಾಮಾಯಣಕಥೆಯೂ ಬಂದಿರುವುದು ಮತ್ತೊಂದು ವಿಶೇಷ. ಹೀಗೆ ಮಹಾಭಾರತ ಸರ್ವಶ್ರೇಷ್ಠ ಕೃತಿಯೆಂಬುದನ್ನು ಮಾರ್ಕಂಡೇಯ

---

೧. ಅನ್ಯತ್ರ ಬ್ರಾಹ್ಮಣಾನಾಂ ತು ಪ್ರಮಾಣಂ ಜ್ಞಾನಮೇವ ಹಿ ।
ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ವಿಷ್ಣುಕಾರ್ಯತಾ ॥ –(೨/೨೩)

೨. ಯತ್ರ ರೂಪಂ ತತ್ರ ಗುಣಾಃ ಭಕ್ತ್ಯಾದ್ಯಾಃ ಸ್ತ್ರೀಷು ನಿತ್ಯಶಃ ।
ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋ ಹಿ ತತ್ ॥ – (೨/೩೬)

೩. ಬಲಂ ನೈಸರ್ಗಿಕಂ ತಚ್ಚೇದ್ವರಾಸ್ತ್ರಾದೇಸ್ತದನ್ಯಥಾ ।
ಅನ್ಯಾವೇಶನಿಮಿತ್ತಂ ಚೇದ್ಬಲಮನ್ಯತ್ಕೃತಂ ಹಿ ತತ್ ॥ – (೨/೧೮)

೪. ಉಕ್ತಾ ರಾಮಕಥಾ ऽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಭಾರತೇ ನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್ ॥ – (೨/೫೦)

ಮೊದಲಾದ ಇತರ ಪುರಾಣಗಳೂ ಉಲ್ಲೇಖಿಸಿವೆ. ಇಂತಹ ಮಹಾಭಾರತವನ್ನು ರಚಿಸಿದ ವ್ಯಾಸರಂತೂ ಸಾಕ್ಷಾತ್ ಶ್ರೀಹರಿಯೇ ಆಗಿರುವರು. ಇಷ್ಟು ವಿವರಗಳನ್ನು ನೀಡಿ ಬಳಿಕ ಮಹಾಭಾರತದ ಮಂಗಲಶ್ಲೋಕವನ್ನು ಉದಾಹರಿಸಿ ಅದರ ಅರ್ಥವನ್ನು ಅದರಂತೆ ಇನ್ನೂ ಕೆಲವು ಶ್ಲೋಕಗಳನ್ನೂ ವಿವರಿಸಿ ಬಳಿಕ ಮಹಾಭಾರತದ ವಿಭಿನ್ನ ಸ್ಥಳಗಳಲ್ಲಿನ, ಭಗವದ್ಗೀತೆಯಲ್ಲಿನ ವಿಷ್ಣುಸರ್ವೋತ್ತಮತ್ವಾದಿ ಪ್ರಮೇಯಗಳನ್ನು ತಿಳಿಸುವ ಶ್ಲೋಕಗಳನ್ನು ಉಲ್ಲೇಖಿಸಿರುವರು. ಮಹಾಭಾರತದ ಅರ್ಥವೈವಿಧ್ಯವನ್ನು ಮಹಾಭಾರತ ಹಾಗೂ ಭವಿಷ್ಯತ್ಪರ್ವದ ವಚನಗಳಿಂದ ನಿರೂಪಿಸಿರುವುದು ಇಲ್ಲಿಯ ಇನ್ನೊಂದು ವಿಶೇಷ. ಮಹಾಭಾರತವು ಸಮಾಧಿ ದರ್ಶನ ಮತ್ತು ಗುಹ್ಯ ಎಂಬ ಭಾಷಾತ್ರೈವಿಧ್ಯದಿಂದ ಕೂಡಿರುವುದನ್ನು ನಿರೂಪಿಸಿ ಅದರ ಮನ್ವಾದಿ, ಆಸ್ತೀಕಾದಿ ಮತ್ತು ಉಪರಿಚರಾದಿ ಅರ್ಥಗಳನ್ನು ವಿವರಿಸಿರುವರು. ಪಾಂಡವರ ಪಕ್ಷದವರು ಪುಣ್ಯದ ಸಂಕೇತವಾದರೆ ಕೌರವ ಪಕ್ಷದವರು ಪಾಪಗಳ ಸಂಕೇತ ಎಂದು ನಿರೂಪಿಸಿ ಮಹಾಭಾರತ ದುರ್ವಿಜ್ಞೇಯವಾದ ಅಧ್ಯಾತ್ಮಾರ್ಥಗರ್ಭಿತ ಎಂಬುದನ್ನು ಪ್ರತಿಪಾದಿಸಿರುವರು. ಮುಂದೆ ಬಳಿತ್ಥಾಸೂಕ್ತವನ್ನು ಉಲ್ಲೇಖಿಸಿ ವಾಯುಜೀವೋತ್ತಮತ್ವವನ್ನು ಸಮರ್ಥಿಸಿ ಅದಕ್ಕೆ ಸಂವಾದಿಯಾಗಿ ಕೃಷ್ಣ, ಯುಧಿಷ್ಠಿರ, ದುರ್ಯೋಧನ ಮೊದಲಾದವರು ಹೇಳಿದ ಮಹಾಭಾರತದಲ್ಲಿನ ವಾಕ್ಯಗಳನ್ನು ಉಲ್ಲೇಖಿಸಿರುವರು. ಅದರಂತೆ ದ್ರೌಪದಿ ಹಾಗೂ ಬಲರಾಮಾರ್ಜುನಾದಿಗಳ ತಾರತಮ್ಯಕ್ರಮವನ್ನು ಸಾರುವ ವಾಕ್ಯಗಳನ್ನು ಉದಾಹರಿಸಿ ಅಂತಹ ವಾಕ್ಯಗಳು ಅಸಂಖ್ಯವಾಗಿದ್ದು ತಾವು [೧]ದಿಗ್ದರ್ಶನ ಮಾತ್ರ ಮಾಡಿರುವುದಾಗಿ ತಿಳಿಸಿ ಅಧ್ಯಾಯವನ್ನು ಉಪಸಂಹರಿಸಿರುವರು.

ಮೂರನೆಯ ಅಧ್ಯಾಯ (ಶ್ಲೋಕಸಂಖ್ಯೆ : ೮೨)

ಸರ್ಗಾನುಸರ್ಗಲಯಪ್ರಾದುರ್ಭಾವನಿರ್ಣಯ ಎಂಬ ಹೆಸರಿನ ಈ ಅಧ್ಯಾಯದಲ್ಲಿ ಮೊದಲಿಗೆ ವ್ಯಾಸ, ರಾಮ, ಕೃಷ್ಣರ ಸ್ತುತಿಯೂ, ಅನಂತರ 'ನಾರಾಯಣಂ ನಮಸ್ಕೃತ್ಯ' ಎಂಬ ಭಾರತ ಶ್ಲೋಕದ ಅರ್ಥ ವಿವರಣೆಯೂ ಬಂದಿದೆ. ಮುಂದೆ ಪ್ರಥಮಾಧ್ಯಾಯದಲ್ಲಿ ನಿರೂಪಿಸ-ತೊಡಗಿದ್ದ ಸೃಷ್ಟಿಕ್ರಮ ಮುಂದುವರೆದಿದೆ. ವಾಸುದೇವ ಮಾಯೆಯರಿಂದ ಬ್ರಹ್ಮನೂ, ಸಂಕರ್ಷಣ ಜಯಾದೇವಿಯಿಂದ ವಾಯುವೂ, ಪ್ರದ್ಯುಮ್ನ ಕೃತಿಯರಿಂದ ಪ್ರಧಾನ, ಶ್ರದ್ಧಾನಾಮಕರಾದ ಸರಸ್ವತೀಭಾರತಿಯರು ಜನಿಸಿದ್ದನ್ನು ತಿಳಿಸಿ ಮುಂದೆ ಬ್ರಹ್ಮಸರಸ್ವತಿಯರಿಂದಲೂ ಸೂತ್ರಶ್ರದ್ಧೆ-ಯರಿಂದಲೂ ಶಿವಾದಿದೇವತೆಗಳ ಉತ್ಪತ್ತಿ ವಾಸುದೇವರೂಪದ ಶ್ರೀಹರಿಯಿಂದ ಮಾಯಾರೂಪದ

---

೧. ಇತ್ಯಾದ್ಯನಂತವಾಕ್ಯಾನಿ ಸಂತ್ಯೇವಾರ್ಥೇ ವಿವಕ್ಷಿತೇ ।
ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ ॥ – (೨/೧೭೯)

ಮಹಾಲಕ್ಷ್ಮಿಯಲ್ಲಿ ತ್ರಿಮೂರ್ತಿ ರೂಪಗಳ ಪ್ರಾದುರ್ಭಾವ ನಿರೂಪಿತವಾಗಿವೆ. ಬಳಿಕ ದೇವತೆಗಳ ಪ್ರಾರ್ಥನೆಯಂತೆ ಶ್ರೀಹರಿಯಿಂದ ಬ್ರಹ್ಮಾಂಡ ಸೃಷ್ಟಿ, ಅವನ ನಾಭಿಕಮಲದಿಂದ ಬ್ರಹ್ಮೋತ್ಪತ್ತಿ ಅಹಂಶ್ರೇಯೋವಿವಾದದಿಂದ ಸಿದ್ಧವಾದ ವಾಯುಜೀವೋತ್ತಮತ್ವ, ಬ್ರಹ್ಮದೇವರಿಂದ ಲೋಕಗಳ ಸೃಷ್ಟಿ, ಶಿವಾದಿದೇವತೆಗಳ ಸೃಷ್ಟಿ ನಿರೂಪಿತವಾಗಿದೆ. ಮುಂದೆ ಜಗತ್ಪ್ರವಾಹ[೧] ಅನಾದಿ ನಿತ್ಯ ಎಂದು ತಿಳಿಸಿ ಇದರ ಪರಿಜ್ಞಾನ [೨]ಮೋಕ್ಷಸಾಧಕ ಎಂದು ಉಕ್ತವಾಗಿದೆ. ಬಳಿಕ ಕಶ್ಯಪರಿಂದ ದೇವತೆಗಳ ಅವತಾರಗಳನ್ನೂ ತಿಳಿಸಿ ಶ್ರೀಹರಿಯ ವರಾಹ, ಮತ್ಸ್ಯ, ನೃಸಿಂಹ, ಕೂರ್ಮ, ವಾಮನ ಹಾಗೂ ಪರಶುರಾಮಾವತಾರಗಳ ಕಾರ್ಯವನ್ನು ನಿರೂಪಿಸಿರುವರು. ಮುಂದೆ ರಾಮಾವತಾರವನ್ನು ನಿರೂಪಿಸಿ, ಹನುಮಂತ ಸುಗ್ರೀವ ಮೊದಲಾದ ರೂಪಗಳಿಂದ ವಾಯು, ಸೂರ್ಯ ಮೊದಲಾದ ದೇವತೆಗಳು ಕ್ರಮವಾಗಿ ಅವತರಿಸಿದ ವಿವರವನ್ನು ನೀಡಿರುವರು. ಶ್ರೀಹರಿಯ ಚಕ್ರಶಂಖಾದಿಗಳ ಅಭಿಮಾನಿದೇವತೆಗಳ ವಿವರವನ್ನು ನೀಡಿ ಲಕ್ಷ್ಮಣ, ಭರತ, ಶತ್ರುಘ್ನರಾಗಿ ಶೇಷ, ಕಾಮ, ಅನಿರುದ್ಧರು ಕ್ರಮವಾಗಿ ಅವತರಿಸಿದ್ದನ್ನು ತಿಳಿಸಿ, ಸೀತಾಪ್ರಾದುರ್ಭಾವವನ್ನು ನಿರೂಪಿಸಿ, ಸರ್ಗಾನುಸರ್ಗಗಳ ವಿವರಗಳ ಮಹತ್ತ್ವದ ನಿರೂಪಣೆಯೊಂದಿಗೆ ಅಧ್ಯಾಯವನ್ನು ಮುಕ್ತಾಯ–ಮಾಡಿರುವರು.

ನಾಲ್ಕನೆಯ ಅಧ್ಯಾಯ (ಶ್ಲೋಕಸಂಖ್ಯೆ : ೬೫)

ಶ್ರೀರಾಮಾವತಾರದ ಹಿರಿಮೆ, ಶ್ರೀರಾಮನಿಂದಾದ ತಾಟಕಾಸಂಹಾರ, ವಿಶ್ವಾಮಿತ್ರ–ಯಜ್ಞಸಂರಕ್ಷಣೆ, ಅಹಲ್ಯೋದ್ಧಾರ, ಶಿವಧನುರ್ಭಂಗ ಸೀತಾಕಲ್ಯಾಣ, ಲಕ್ಷ್ಮಣಾದಿಗಳ ವಿವಾಹ ಮತ್ತು ರಾಮ ಪರಶುರಾಮರ ಸಮಾಗಮದ ವಿವರಗಳಿಂದ ಕೂಡಿದ ಬಾಲಕಾಂಡದ ಕಥೆಯನ್ನು ಈ ಅಧ್ಯಾಯದಲ್ಲಿ ನಿರ್ಣಯಿಸಿರುವರು.

ಶ್ರೀರಾಮನಿಗೆ ವೃದ್ಧ್ಯಾದಿದೋಷಗಳಿಲ್ಲ. ಅವನು ವಿಶ್ವಾಮಿತ್ರರಿಂದ ಅಸ್ತ್ರಗಳನ್ನು ಸ್ವೀಕರಿಸಿದ್ದು ಆ ಮುನಿಯನ್ನು ಅನುಗ್ರಹಿಸಲೆಂದೇ ಹೊರತು ತನ್ನ ಪ್ರಯೋಜನಕ್ಕಲ್ಲ. ಅಹಲ್ಯೆಯನ್ನು ಶ್ರೀರಾಮ ಉದ್ಧರಿಸಿದ್ದು ಅವಳು ಅಪರಾಧಿಯಲ್ಲ ಎಂದು ಗಮನಿಸಿಯೇ. ಶ್ರೀರಾಮ ಶಿವಧನುರ್ಭಂಗವನ್ನು ಮಾಡಿದ್ದು ಅವನ ಸರ್ವೋತ್ತಮತ್ವಕ್ಕೆ ದ್ಯೋತಕ. ಶ್ರೀರಾಮಸೀತೆಯರು

---

೧. ಯಥಾ ಸಮುದ್ರಾತ್ ಸರಿತಃ ಪ್ರಜಾತಾಃ ಪುನಸ್ತಮೇವ ಪ್ರವಿಶಂತಿ ಶಶ್ವತ್ ।
ಏವಂ ಹರೇರ್ನಿತ್ಯಜಗತ್ಪ್ರವಾಹಸ್ತಮೇವ ಚಾಸೌ ಪ್ರವಿಶತ್ಯಜಸ್ರಮ್ ॥ –(೩/೩೩)

೨. ಏವಂ ವಿದುರ್ಯೇ ಪರಮಾಮನಂತಾಮಜಸ್ರಶಕ್ತಿಂ ಪುರುಷೋತ್ತಮಸ್ಯ ।
ತಸ್ಯ ಪ್ರಸಾದಾದಥ ದಗ್ಧದೋಷಾಸ್ತಮಾಪ್ನುವಂತ್ಯಾಶು ಪರಂ ಸುರೇಶಮ್ ॥ –(೩/೩೪)

ನಿತ್ಯದಂಪತಿಗಳು ಮೊದಲಾದ ತಾತ್ವಿಕ ವಿಷಯಗಳು ಇದರಲ್ಲಿ ಬಂದಿವೆ. ಸೀತೆ ಸಾಕ್ಷಾತ್ ವಿಷ್ಣುಪತ್ನಿಯಾದ ಮಹಾಲಕ್ಷ್ಮಿ ಎಂದು ತಿಳಿದಿದ್ದ ದೇವತೆಗಳಾರೂ ಆ ಸ್ವಯಂವರ ಕಾರ್ಯದಲ್ಲಿ ಯತ್ನಿಸಿರಲಿಲ್ಲ ಎಂಬ ಇಲ್ಲಿಯ ವಿಶೇಷಾಂಶ ಗಮನಾರ್ಹ (೪/೩೪):

ವಿಜಾನಮಾನಾ ಜಗತಾಂ ಹಿ ಮಾತರಂ ಪುರಾऽರ್ಥಿತುಂ ನಾಯಯುರತ್ರ ದೇವತಾಃ ॥

ಅದರಂತೆ ಜನಕರಾಜನಿಗಿದ್ದ ಬ್ರಹ್ಮವರದಿಂದಾಗಿ ಶಿವಧನುಸ್ಸಿನ್ನು ಕಟ್ಟುವುದಕ್ಕೆ ವಿಫಲರಾದ ರಾವಣಾದಿಗಳು ಅವನನ್ನು ಯುದ್ಧದಲ್ಲಿ ಎದುರಿಸಿರಲಿಲ್ಲ ಎಂಬುದು ಇಲ್ಲಿಯ ಮತ್ತೊಂದು ಮುಖ್ಯಾಂಶ (೪/೨೧):

ಸಂಸ್ವಿನ್ನಗಾತ್ರಾಃ ಪರಿವೃತ್ತನೇತ್ರಾ ದಶಾನನಾದ್ಯಾಃ ಪತಿತಾ ವಿಮೂರ್ಛಿತಾಃ ।
ತಥಾऽಪಿ ಮಾಂ ಧರ್ಷಯಿತುಂ ನ ಶೇಕುಃ ಸುತಾಕೃತೇ ತೇ ವಚನಾತ್ ಸ್ವಯಂಭುವಃ ॥

ಜನಕರಾಜ ಶ್ರೀರಾಮನ ಪತ್ನಿಯಾಗಲೆಂದೇ ಸೀತಾಸ್ವಯಂವರವನ್ನು ಯೋಜಿಸಿದ್ದರಿಂದ ಅದು ಅವನಿಗೆ ದೋಷವಾಗಲಿಲ್ಲ ಎಂಬುದು ಇದಕ್ಕೆ ಪೂರಕವಾದ ಮತ್ತೊಂದು ವಿಶೇಷ ಹದಿನೇಳನೆಯ ಅಧ್ಯಾಯದಲ್ಲಿದೆ :

ಅಪಾಂಪತಿಶ್ಚ ಮೈಥಿಲಃ ಸ್ವಯಂವರಂಕೃತಾವಪಿ ।
ಹರಿಂ ವಿನಿಶ್ಚಯಾದಿಯಂ ವ್ರಜೇದಿತಿ ಸ್ಮ ಚಕ್ರತುಃ ॥ – (೧೭/೬೦)

ರಾಮನಿಂದ ಪರಶುರಾಮಗರ್ವಭಂಗವಾಯಿತೆಂದು ಪ್ರಚಲಿತ ನಂಬಿಕೆ ಸಂಪೂರ್ಣವಾಗಿ ಶಾಸ್ತ್ರವಿರುದ್ಧ ಎಂಬುದನ್ನು ಇದರಲ್ಲಿ ವಿಶೇಷವಾಗಿ ನಿರೂಪಿಸಿರುವರು. ಪರಶುರಾಮ ರಾಮನಿಗೆ ತಿಳಿಸಿದ್ದು ''ಶಿವಧನುರ್ಭಂಗಮಾಡಿದ ನೀನು ನನ್ನ ಕೈಯಲ್ಲಿರುವ ಈ ವಿಷ್ಣುಧನುಸ್ಸನ್ನು ಕಟ್ಟಿದೆ– ಯಾದಲ್ಲಿ ಸಾಕ್ಷಾತ್ ವಿಷ್ಣುವೇ ಎಂಬುದು ಲೋಕಕ್ಕೆ ತಿಳಿಯುವುದು'' ಎಂದು. ಹಾಗೆ ಹೇಳುವ ಮೂಲಕ ಅದನ್ನು ಹಿಡಿದ ತಾವು ಸಾಕ್ಷಾತ್ ವಿಷ್ಣುವೆಂಬುದಾಗಿ ತಿಳಿಸಿರುವರು. ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬರಾದ ಅವರು ಹಾಗೆ ತಿಳಿಸಿದ್ದು ಯಥಾರ್ಥವೇ ಆಗಿತ್ತು ಹೀಗೆ ರಾಮ, ಪರಶುರಾಮರು ಇಬ್ಬರು ಒಬ್ಬರೇ ವಿಷ್ಣುವಾದಾಗ ಇಲ್ಲಿ ಸೋಲುಗೆಲುವಿನ ಪ್ರಶ್ನೆ ಎಲ್ಲಿದೆ? ಇನ್ನು ಅವರಿಬ್ಬರ ಅಂತಹ ವರ್ತನೆಗೆ ಕಾರಣ ಹನುಮಂತ ಭೀಮರ ಸಮಾಗಮಪ್ರಸಂಗದಲ್ಲಿ ಬಂದಿರುವಂತೆ [೧]ಲೋಕವಿಡಂಬನೆ ಮತ್ತು ಅಸುರಮೋಹನ ಮಾತ್ರ. ಶಿವನ ವರದಿಂದ ಪರಶುರಾಮನ ಉದರದಲ್ಲಿ ಮೋಕ್ಷ ಪಡೆಯಲೆಂದು ಕುಳಿತಿದ್ದ ಅತುಲನೆಂಬ ಅಸುರನ ಸಂಹಾರ ಆ

---

೧. ನಿರಂತರಾನಂದವಿಬೋಧಸಾರಃ ಸ ಜಾನಮಾನೋऽಖಿಲಮಾದಿಪೂರುಷಃ ।
ವದನ್ ಶ್ರುತೀನೀವ ವಿನೋದತೋ ಹರಿಃ ಸ ಏಕ ಏವ ದ್ವಿತನುರ್ಮುಮೋದ ॥ – (೪/೫೯)

ಪ್ರಸಂಗದ ಮುಖ್ಯ [೧]ಉದ್ದೇಶವಾಗಿತ್ತು, ವಿಷ್ಣು ಸೋತ ಎಂದು ತಿಳಿದಾಗಲೇ ಅವನಿಗೆ ಸಾವು ಎಂಬುದಾಗಿ ಅತುಲನಿಗೆ ಬ್ರಹ್ಮನ ವರ ಇದ್ದದ್ದರಿಂದ ಹಾಗೆ ನಟಿಸಿದ ಎಂದು ತಾತ್ಪರ್ಯ. ಅಂತೂ ಅತುಲನ ಸಾವಿಗೆ ಅವನು ಪರಶುರಾಮ ಸೋತ ಎಂದು ತಪ್ಪಾಗಿ ತಿಳಿದದ್ದೇ ಮುಖ್ಯಕಾರಣವಾಯಿತು. ರಾಮಾಯಣದ ಈ ಪ್ರಸಂಗವನ್ನು ಪರಶುರಾಮಗರ್ವಭಂಗವೆಂದು ತಪ್ಪಾಗಿ ತಿಳಿಯುವವರಿಗೆಲ್ಲ ವಿನಾಶವೇ ಖಚಿತ ಎಂಬುದು ಇಲ್ಲಿಯ ಧ್ವನಿ.

ಐದನೆಯ ಅಧ್ಯಾಯ (ಶ್ಲೋಕಸಂಖ್ಯೆ : ೫೧)

ಈ ಅಧ್ಯಾಯದ ಮೊದಲ ಹದಿನಾರು ಶ್ಲೋಕಗಳಲ್ಲಿ ಅಯೋಧ್ಯಾಕಾಂಡ ಹಾಗೂ ಅನಂತರದ ಶ್ಲೋಕಗಳಲ್ಲಿ ಅರಣ್ಯಕಾಂಡಗಳ ನಿರ್ಣಯ ಬಂದಿದೆ. ರಾಮಪಟ್ಟಾಭಿಷೇಕದ ಸಿದ್ಧತೆ, ಅದಕ್ಕೆ ಮಂಥರೆಯಿಂದ ಪ್ರೇರಿತಳಾದ ಕೈಕೇಯಿಯಿಂದ ವಿಘ್ನ, ಸೀತಾಲಕ್ಷ್ಮಣರೊಂದಿಗೆ ಶ್ರೀರಾಮನ ವನಗಮನ, ಗುಹ ಭರದ್ವಾಜರ ರಾಮಭಕ್ತಿ, ದಶರಥನ ನಿರ್ಯಾಣ, ಭರತನಿಗೆ ಶ್ರೀರಾಮ ಸುವರ್ಣ ಪಾದುಕೆಗಳನ್ನು ನೀಡಿ ಅನುಗ್ರಹಿಸಿದ್ದು, ಅವುಗಳನ್ನು ಸಿಂಹಾಸನದ ಮೇಲಿರಿಸಿ ಭರತನ ರಾಜ್ಯಭಾರ, ಜಯಂತವಾಯಸದ ಪ್ರಸಂಗ, ಶರಭಂಗರಿಗೆ ಸದ್ಗತಿ, ವಿರಾಧವಧೆ, ದಂಡಕಾರಣ್ಯದಲ್ಲಿ ಶೂರ್ಪನಖಿಯ ಕಿವಿಮೂಗುಗಳ ಛೇದನ, ಖರದೂಷಣಾದಿಗಳ ಸಂಹಾರ, ಮಾಯಾಮೃಗ ರೂಪದ ಮಾರೀಚನ ವಧೆ, ರಾವಣನಿಂದ ಸೀತಾಕೃತಿಯ ಅಪಹರಣ, ಜಟಾಯುವಿಗೆ ಸದ್ಗತಿ, ರಾಮನ ಸೀತಾನ್ವೇಷಣೆಯ ನಟನೆ, ಕಬಂಧನ ಉದ್ಧಾರ, ಶಬರಿಗೆ ಸದ್ಗತಿ, ಶ್ರೀರಾಮಾದಿಗಳ ಋಷ್ಯಮೂಕಗಮನ, ಹನುಮತ್ಸಂದರ್ಶನ – ಇವು ಈ ಅಧ್ಯಾಯದ ಮುಖ್ಯ ವಿವರಗಳು.

ಶ್ರೀರಾಮನು ವನವಾಸ ಕೈಗೊಂಡದ್ದು ಲೋಕಶಿಕ್ಷಣ ಹಾಗೂ ರಾವಣಾದಿ ಅಸುರರ ಸಂಹಾರಕ್ಕೆಂದೇ ಹೊರತು ಮಂಥರೆಯ ಕುತಂತ್ರಕ್ಕೆ ಬಲಿಯಾಗಿ ಅಲ್ಲ. ಜಯಂತವಾಯಸದ ಪ್ರಸಂಗದಲ್ಲಿ ಶ್ರೀರಾಮನ ವಿಷ್ಣುತ್ವ ಮತ್ತು ಅವನ ಸರ್ವೋತ್ತಮತ್ವಗಳು ಪ್ರತಿಪಾದಿತ. ಇವೇ ಮೊದಲಾದ ವಿಚಾರಗಳು ಇದರಲ್ಲಿ ಬಂದಿದೆ. ಮಂಥರೆ ಮೂಲತಃ [೨]ಅಲಕ್ಷ್ಮಿ ವರದಿಂದ

---

೧. ಪುರಾ ವರೋಽನೇನ ಶಿವೋಪಲಂಭತೋ ಮುಮುಕ್ಷಯಾ ವಿಷ್ಣುತನುಪ್ರವೇಶನಮ್ ।
ಸ ತೇನ ರಾಮೋದರಗೋ ಬಹಿರ್ಗತಸ್ತದಾಜ್ಞಯೈವಾಶು ಬಭೂವ ಭಸ್ಮಸಾತ್ ॥ – (೪/೫೭)

೧. ಪೂರ್ವಂ ಕ್ಷೀರಾಬ್ಧಿಜಾತಾ ಕಥಮಪಿ ತಪಸೈವಾಪ್ಸರಸ್ತ್ವಂ ಪ್ರಯಾತಾ
ತಾಂ ನೇತುಂ ತತ್ತಪೋಽಂಧಂ ಕಮಲಜನಿರುವಾಚಾಶು ರಾಮಾಭಿಷೇಕಮ್ ।
ಭೂತ್ವಾ ದಾಸೀ ವಿಲುಂಪ ಸ್ವಗತಿಮಪಿ ತತಃ ಕರ್ಮಣಾ ಪ್ರಾಪ್ಸ್ಯಸೇ ತ್ವಂ
ಸೇತ್ಯುಕ್ತಾ ಮಂಥರಾऽऽಸೀತ್ ತದನು ಕೃತವತ್ಯೇವ ಚೈತತ್ ಕುಕರ್ಮ ॥ – (೫/೨)

ಅಪ್ಸರೆಯಾಗಿದ್ದ ಅವಳು ಮಂಥರೆಯಾಗಿ ಜನಿಸಿ ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವೆಸಗಿ ತಮಸ್ಸಿಗೆ ತೆರಳಿದಳು. ವಾಲ್ಮೀಕಿರಾಮಾಯಣದಲ್ಲಿ ಅಸ್ಪಷ್ಟವಾಗಿರುವ ಈ ವಿವರ ಇಲ್ಲಿ ಸ್ಫುಟಪಟ್ಟಿದೆ. ಜಯಂತವಾಯಸದಲ್ಲಿ [೧]ಕುರಂಗನೆಂಬ ಅಸುರ ಶಿವನ ವರದಿಂದ ಅವಿಚ್ಛನಾಗಿದ್ದರಿಂದ ಅವನಿಗೆ ಸೀತೆಯನ್ನು ಕೆಣಕುವ ದುರ್ಬುದ್ಧಿ ಹುಟ್ಟಿತ್ತು ಎಂಬ ಅನೇಕ ವಿವರಗಳು ಇಲ್ಲಿ ಬಂದಿದೆ. ವಿರಾಧವಧೆಯ ಪ್ರಸಂಗವನ್ನೆಲ್ಲ ಅವನ ಪೂರ್ವೋತ್ತರಗಳ ಸಮೇತ ಎರಡೇ ಶ್ಲೋಕಗಳಲ್ಲಿ ಇಲ್ಲಿ ಸಂಗ್ರಹಿಸಿರುವ ರೀತಿ ಇಲ್ಲಿ ಅಪೂರ್ವವಾದುದು (೫/೨೦, ೨೧):

ರಾಮೋಽಪಿ ತತ್ರ ದದೃಶೇ ಧನದಸ್ಯ ಶಾಪಾದ್ಗಂಧರ್ವಮುರ್ವಶಿರತೇರಥ ಯಾತುಧಾನೀಮ್ ।
ಪ್ರಾಪ್ತಂ ದಶಾಂ ಸಪದಿ ತುಂಬುರುನಾಮಧೇಯಂ ನಾಮ್ನಾ ವಿರಾಧಮಪಿ ಶರ್ವವರಾದವಧ್ಯಮ್ ॥
ಭಂಕ್ತ್ವಾಽಸ್ಯ ಬಾಹುಯುಗಲಂ ಬಿಲಗಂ ಚಕಾರ ಸಮ್ಮಾನಯನ್ ವಚನಮಂಬುಜಜನ್ಮನೋಽಸೌ ।
ಪ್ರಾದಾಚ್ಚ ತಸ್ಯ ಸುಗತಿಂ ನಿಜಗಾಯಕಸ್ಯ ಭಕ್ಷಾರ್ಥಮಂಸಕಮಿತೋಽಪಿ ಸಹಾನುಜೇನ ॥

ರಾವಣ ಅಪಹರಿಸಿದ್ದು ಸೀತಾಕೃತಿಯನ್ನೇ ಹೊರತು ಸೀತೆಯನ್ನಲ್ಲ ಎಂಬುದು ಈ ಅಧ್ಯಾಯದ ಅತ್ಯಂತ ಪ್ರಮುಖವಾದ ಘಟ್ಟ. ಸೀತೆ ಸಾಕ್ಷಾತ್ ಮಹಾಲಕ್ಷ್ಮಿ, ಅಪ್ರಾಕೃತಶರೀರದ ಅವ್ಯಕ್ತತತ್ತ್ವದ ಅಭಿಮಾನಿದೇವತೆ. ಕಟಾಕ್ಷಮಾತ್ರದಿಂದ ಬ್ರಹ್ಮರುದ್ರಾದಿಸಮಸ್ತವಿಶ್ವದ ಸೃಷ್ಟ್ಯಾದಿಸಮಸ್ತಕಾರ್ಯಗಳನ್ನೂ ನಿರ್ವಹಿಸಬಲ್ಲ ಮಹಾಸಮರ್ಥರು ಅವರು. ಅಜ್ಞಾನ, ಅಸಾಮರ್ಥ್ಯಾದಿ ಯಾವ ದೋಷಗಳೂ ಅವರಲ್ಲಿ ಲೇಶಮಾತ್ರಕ್ಕೂ ಇಲ್ಲ (೫/೩೬):

ಕ್ವಾಜ್ಞಾನಮಾಪದಪಿ ಮಂದಕಟಾಕ್ಷಮಾತ್ರಾತ್ ಸರ್ಗಸ್ಥಿತಿಪ್ರಲಯಸಂಸೃತಿಮೋಕ್ಷಹೇತೋಃ ।
ದೇವ್ಯಾ ಹರೇಃ ಕಿಮು ವಿಡಂಬನಮಾತ್ರಮೇತದ್ವಿಕ್ರೀಡತೋಃ ಸುರನರಾದಿವದೇವ ತಸ್ಮಾತ್ ॥

ಇಂತಹ ಅವಳನ್ನು ಅಪಹರಿಸಲಿರಲಿ ಸ್ಪರ್ಶಿಸಲೂ ಸಹ ರಾವಣಾದಿ ಯಾರಿಗೂ ಸರ್ವಥಾ ಅಶಕ್ಯ. ಶ್ರೀರಾಮನ ಸಂಕಲ್ಪವನ್ನು ಅರಿತ ಸೀತೆ ರಾವಣ ಅಪಹರಣಕ್ಕೆಂದು ಆಗಮಿಸುತ್ತಲೇ ತನ್ನ ಆಕೃತಿಯನ್ನು ನಿರ್ಮಿಸಿ ಅದನ್ನು ಅಲ್ಲಿರಿಸಿ ತಾನು ಕೈಲಾಸಕ್ಕೆ ತೆರಳಿ, ಅಲ್ಲಿ ಶಿವಪಾರ್ವತಿಯರಿಂದ ಪೂಜಿತಳಾಗಿ ನೆಲೆಸಿದಳು. ಇಂದ್ರ ಪ್ರವೇಶಿಸಿದ್ದ ಸೀತಾಕೃತಿಯನ್ನು ರಾವಣ ಅಪಹರಿಸಿದ:

ತಸ್ಯಾಸ್ತು ತಾಂ ಪ್ರತಿಕೃತಿಂ ಪ್ರವಿವೇಶ ಶಕ್ರೋ ದೇವ್ಯಾಶ್ಚ ಸನ್ನಿಧಿಯುತಾಂ ವ್ಯವಹಾರಸಿದ್ಧ್ಯೈ ।
ಆದಾಯ ತಾಮಥ ಯಯೌ ರಜನೀಚರೇಂದ್ರೋ ..... ॥ – (೫/೩೮)

ಮಾಯಾಮೃಗದ ಮೂಲಕ ಮಾಯಾಸನ್ಯಾಸಿಯ ರೂಪದಲ್ಲಿ ಬಂದಿದ್ದ ರಾವಣನಿಗೆ ದೊರಕಿದ್ದು ಮಾಯಾಸೀತೆಯೇ ಎಂಬುದು ನ್ಯಾಯಪ್ರಾಪ್ತವೂ ಆಗಿದೆ ಎಂಬುದು ಇಲ್ಲಿಯ ವಿಶೇಷ.

---

೧. ಪುನಃ ಪ್ರಯಾತಃ ಶರಣಂ ರಘೂತ್ತಮಂ ವಿಸರ್ಜಿತಸ್ತೇನ ನಿಹತ್ಯ ಚಾಸುರಮ್ ।
ತದಕ್ಷಿಗಂ ಸಾಕ್ಷಿಕಮಕ್ಷವಧ್ಯಂ ಪ್ರಸಾದತಶ್ಚಂದ್ರವಿಭೂಷಣಸ್ಯ ॥ – (೫/೧೨)

ಹನುಮಂತನ ಹೊರತು ಇತರರಾರೂ ರಾಮನನ್ನು ಯಥಾರ್ಥವಾಗಿ ತಿಳಿಯಲಾರರು ಎಂಬುದು ಸುಗ್ರೀವಾದಿಗಳ ಪ್ರಸಂಗದಿಂದ ಸುವೇದ್ಯ ಎಂಬ ತತ್ತ್ವವನ್ನು ತಿಳಿಸುತ್ತ ಹನುಮಂತನ ಜೀವೋತ್ತಮತ್ವವನ್ನು ಪ್ರತಿಪಾದಿಸಿರುವುದು ಇಲ್ಲಿಯ ಮುಖ್ಯಾಂಶ (೫/೪೬–೪೮):

ದೇಹೇऽಪಿ ಯತ್ರ ಪವನೋऽತ್ರ ಹರಿರ್ಯತೋऽಸೌ ತತ್ಕೈವ ವಾಯುರಿತಿ ವೇದವಚಃ ಪ್ರಸಿದ್ಧಮ್ ।
ಕಸ್ಮಿನ್ ವಹಂತ್ವಿತಿ ತಥೈವ ಹಿ ಸೋऽವತಾರೇ ತಸ್ಮಾತ್ ಸ ಮಾರುತಿಕೃತೇ ರವಿಜಂ ರರಕ್ಷ ॥
ಏವಂ ಸ ಕೃಷ್ಣತನುರರ್ಜುನಮಪ್ಯರಕ್ಷದ್ಭೀಮಾರ್ಥಮೇವ ತದರಿಂ ರವಿಜಂ ನಿಹತ್ಯ ।
ಪೂರ್ವಂ ಹಿ ಮಾರುತಿಮವಾಪ ರವೇಃ ಸುತೋऽಯಂ ತೇನಾಸ್ಯ ವಾಲಿನಮಹನ್ ರಘುಪಃ ಪ್ರತೀಪಮ್ ॥
ಏವಂ ಸುರಾಶ್ಚ ಪವನಸ್ಯ ವಶೇ ಯತೋऽತಃ ಸುಗ್ರೀವಮತ್ರ ತು ಪರತ್ರ ಚ ಶಕ್ರಸೂನುಮ್ ।
ಸರ್ವೇ ಶ್ರಿತಾ ಹನುಮತಸ್ತದನುಗ್ರಹಾಯ ತತ್ಯಾಗಮದ್ರಘುಪತಿಃ ಸಹ ಲಕ್ಷ್ಮಣೇನ ॥

ಆರನೆಯ ಅಧ್ಯಾಯ (ಶ್ಲೋಕಸಂಖ್ಯೆ : ೫೯)

ಕಿಷ್ಕಿಂಧಾಕಾಂಡದ ನಿರ್ಣಯ ಈ ಅಧ್ಯಾಯದಲ್ಲಿದೆ. ಹನುಮಂತನ ಮೂಲಕ ಶ್ರೀರಾಮ ಸುಗ್ರೀವರ ಸಖ್ಯ, ಶ್ರೀರಾಮನಿಂದ ದುಂದುಭಿಶರೀರದ ಕ್ಷೇಪಣ, ಸಪ್ತತಾಲವೃಕ್ಷದ ವಿನಾಶ, ವಾಲಿಯ ವಧೆ, ಸುಗ್ರೀವಾಭಿಷೇಕ, ಸೀತಾನ್ವೇಷಣೆಗಾಗಿ ಕಪಿವೃಂದದ ಪ್ರಯಾಣ, ಮಯಬಿಲದಲ್ಲಿ ಅಂಗದಾದಿಕಪಿಗಳ ಪ್ರವೇಶ, ರಾಮಕಾರ್ಯವನ್ನು ಕೈಬಿಡಲು ತಾರನ ಪ್ರಚೋದನೆ, ಅದಕ್ಕೆ ಹನುಮಂತನ ಪ್ರತಿಭಟನೆ, ಕಪಿಗಳಿಗೆ ಜ್ಞಾನೋದಯ, ಸಮುದ್ರತೀರದಲ್ಲಿ ಕಪಿಗಳ ಪ್ರಾಯೋಪವೇಶ, ರಾಮಕಥಾಗಾನ, ಸಂಪಾತಿಗೆ ರೆಕ್ಕೆಗಳು ಮರಳಿ ಹುಟ್ಟಿದ್ದು, ಅವನು ತಿಳಿಸಿದ ಸೀತಾವಾರ್ತೆ, ಕಪಿಗಳ ಸಮುದ್ರತರಣದ ಸಾಮರ್ಥ್ಯದ ವಿಶ್ಲೇಷಣೆ, ಜಾಂಬುವಂತನ ಪ್ರಾರ್ಥನೆಯಂತೆ ಸಾಗರತರಣಕ್ಕೆ ಹನುಮಂತನ ನಿಶ್ಚಯ – ಇವು ಈ ಅಧ್ಯಾಯದ ಮುಖ್ಯವಿಷಯಗಳು.

ರಾಮ ಚಿಮ್ಮಿದ ದುಂದುಭಿಯ ಶರೀರ ರಸಾತಲಲೋಕದಲ್ಲಿದ್ದ ಶಿವವರದಿಂದ ಅವಧ್ಯನಾಗಿದ್ದ ಅಸಂಖ್ಯರಾಕ್ಷಸರನ್ನು [೧]ಸಂಹರಿಸಿದ್ದು, ಸಪ್ತತಾಲಗಳ ರೂಪದಲ್ಲಿದ್ದವರು ಬ್ರಹ್ಮವರ ಹೊಂದಿ ಬ್ರಹ್ಮತ್ವ ಪಡೆಯಲೆಂದು ತಪೋನಿರತರಾಗಿದ್ದ [೨]ದೈತ್ಯರು ಎಂಬುದು, ಅವರನ್ನು ಕೊಂದ

---

೧. ವೀಕ್ಷ್ಯೈವ ತಾಂ ನಿಪತಿತಾಮಥ ರಾಮದೇವಃ ಸೋऽಂಗುಷ್ಠಮಾತ್ರಚಲನಾದತಿಲೀಲಯೈವ ।
ಸಂಪ್ರಾಸ್ಯ ಯೋಜನಶತೇऽಥ ತಯೈವ ಚೋರ್ವ್ಯಾಂ ಸರ್ವಾನ್ ವಿದಾರ್ಯ ದಿತಿಜಾನಹನದ್ರಸಾಸ್ಥಾನ್ ॥
– (೬/೪)

೨. ಶ್ರುತ್ವಾऽಸ್ಯ ವಾಕ್ಯಮವಮೃಶ್ಯ ದಿತೇಃ ಸುತಾಂಸ್ತಾನ್ ಧಾತುರ್ವರಾದಖಿಲಪುಂಭರಭೇದ್ಯರೂಪಾನ್ ।
ಬ್ರಹ್ಮತ್ವಮಾಪ್ತುಮಚಲಂ ತಪಸಿ ಪ್ರವೃತ್ತಾನೇಕೇಷುಣಾ ಸಪದಿ ತಾನ್ ಪ್ರಬಭೇದ ರಾಮಃ ॥ – (೬/೮)

ಬಾಣ ಪಾತಾಲದಲ್ಲಿದ್ದ ಬ್ರಹ್ಮವರರಕ್ಷಿತರಾಗಿದ್ದ ಕುಮುದಿಗಳು ಎಂಬ ರಾಕ್ಷಸರನ್ನು [೧]ಸಂಹರಿಸಿದ್ದು, ರಾಮ ವಾಲಿಯನ್ನು ಮೊದಲ ಬಾರಿಗೆ ಸಂಹರಿಸದೇ ಬಿಟ್ಟದ್ದು, ಬಂಧುಜನಗಳಲ್ಲಿ ವೈರ ಹುಟ್ಟಿದಾಗ ಇತರರು ಅವರಲ್ಲಿ ಒಬ್ಬರ ಪಕ್ಷವನ್ನು ನಿಗ್ರಹಿಸಲು ಆತುರ ತೋರಬಾರದು ಎಂಬ [೨]ತತ್ತ್ವವನ್ನು ತಿಳಿಸಲೆಂದೇ ಹೊರತು ಅಜ್ಞಾನದಿಂದಲ್ಲ ಎಂಬುದು, ಹನುಮಂತ ಮಾಲೆ ಹಾಕಿದ ಬಳಿಕವೇ ಶ್ರೀರಾಮ ಸುಗ್ರೀವನನ್ನು ಗುರುತಿಸುವ ಮೂಲಕ ಹನುಮಂತನ ಅನುಗ್ರಹಕ್ಕೆ ಪಾತ್ರರಾಗುವವರನ್ನು ಮಾತ್ರವೇ ತಾನು ಭಕ್ತರೆಂಬುದಾಗಿ [೩]ಗುರುತಿಸುವನೆಂಬುದು, ವಾಲಿಯನ್ನು ಸಂಹರಿಸಲು ಮುಖ್ಯಕಾರಣ ಅವನು ಹನುಮಂತನನ್ನು ತೊರೆದಿದ್ದ ಎಂಬುದು, ಸುಗ್ರೀವ ಮೊದಲಾದವರು ಹಾದಿತಪ್ಪಿದಾಗ ಅವರನ್ನು ಸನ್ಮಾರ್ಗದಲ್ಲಿ ತೊಡಗಿಸಿದ್ದು ಹನುಮಂತ ಎಂಬುದನ್ನೂ, ಹನುಮಂತನೊಬ್ಬನೇ [೪]ಕಾರ್ಯಸಾಧಕ ಎಂಬುದನ್ನೂ, ಶ್ರೀರಾಮ ಅವನ ಕೈಗೆ ತನ್ನ ಅಂಗುಲೀಯಕ[೫] ನೀಡಿದ ಎಂಬುದು, ಹನುಮಂತನು ಎಂದೂ ಶ್ರೀಹರಿಯ ವಿರೋಧವನ್ನು ಸಹಿಸಲಾರ[೬] ಎಂಬುದು ಈ ಅಧ್ಯಾಯದಲ್ಲಿ ಪ್ರತಿಪಾದಿತವಾದ ವಿಶೇಷ ಪ್ರಮೇಯಗಳು.

---

೧. ಭತ್ವಾ ಚ ತಾನ್ ಸಗಿರಿಕುಂ ಭಗವತ್ಪ್ರಮುಕ್ತಃ ಪಾತಾಲಸಪ್ತಕಮಥಾತ್ರ ಚ ಯೇ ತ್ವವಧ್ಯಾಃ।
ನಾಮ್ನಾಽಸುರಾಃ ಕುಮುದಿನೋಽಬ್ಜವಾಕ್ಯರಕ್ಷಾಃ ಸರ್ವಾಂಶ್ಚ ತಾನದಹದಾಶು ಶರಃ ಸ ಏಕಃ ॥ –(೬/೧೦)

೨. ಸೌಭ್ರಾತ್ರಮೇಷ ಯದಿ ವಾಂಛತಿ ವಾಲಿನೈವ ನಾಹಂ ನಿರಾಗಸಮಥಾಗ್ರಜನಿಂ ಹನಿಷ್ಯೇ।
ದೀರ್ಘಃ ಸಹೋದರಗತೋ ನ ಭವೇದ್ಧಿ ಕೋಪೋ ದೀರ್ಘೋಽಪಿ ಕಾರಣಮೃತೇ ವಿನಿವರ್ತತೇ ಚ ॥
ಕೋಪಃ ಸಹೋದರಜನೇ ಪುನರಂತಕಾಲೇ ಪ್ರಾಯೋ ನಿವೃತ್ತಿಮುಪಗಚ್ಛತಿ ತಾಪಕಶ್ಚ।
ಏಕಸ್ಯ ಭಂಗ ಇತಿ ನೈವ ರುಚಿತ್ಯಪಾಸ್ತದೋಷೋ ನಿಹಂತುಮಿಹ ಯೋಗ್ಯ ಇತಿ ಸ್ಮ ಮೇನೇ ॥
ತಸ್ಮಾನ್ನ ಬಂಧುಜನಗೇ ಜನಿತೇ ವಿರೋಧೇ ಕಾರ್ಯೋ ವಧಸ್ತದನುಬಂಧಿಭರಾಶ್ವಿತೀಹ।
ಧರ್ಮಂ ಪ್ರದರ್ಶಯಿತುಮೇವ ರವೇಃ ಸುತಸ್ಯ ಭಾವೀ ನ ತಾಪ ಇತಿ ವಿಚ್ಚ ನ ತಂ ಜಘಾನ ॥ –(೬/೧೪-೧೬)

೩. ರಾಮಾಜ್ಞಯೈವ ಲತಯಾ ರವಿಜೇ ವಿಭಕ್ತೇ ವಾಯೋಃ ಸುತೇನ ರಘುಪೇಣ ಶರೇ ಪ್ರಮುಕ್ತೇ।
ಶ್ರುತ್ವಾಽಸ್ಯ ಶಬ್ದಮತುಲಂ ಹೃದಿ ತೇನ ವಿದ್ಧ ಇಂದ್ರಾತ್ಮಜೋ ಗಿರಿರಿವಾಪತದಾಶು ಸನ್ನಃ ॥ – (೬/೧೮)

ಸುಗ್ರೀಮಸ್ಯ ತದಾ ಮಾಲಾಂ ಹನುಮಾನ್ ಕಂಠ ಆಸಜತ್ ॥ – ಭಾರತ (ವನ. ೨೮೦/೩೩)

೪. ಸಮಸ್ತದಿಕ್ಷು ಪ್ರಹಿತೇಷು ತೇಷು ಪ್ರಭುರ್ಹನೂಮಂತಮಿದಂ ಬಭಾಷೇ।
ನ ಕಶ್ಚಿದೀಶಸ್ತ್ವದೃತೇಽಸ್ತಿ ಸಾಧನೇ ಸಮಸ್ತಕಾರ್ಯಪ್ರವರಸ್ಯ ಮೇಽಸ್ಯ ॥ – (೬/೩೩)

೫. ಅತಸ್ತ್ವಮೇವ ಪ್ರತಿಯಾಹಿ ದಕ್ಷಿಣಾಂ ದಿಶಂ ಸಮಾದಾಯ ಮದಂಗುಲೀಯಕಮ್।
ಇತೀರಿತೋಽಸೌ ಪುರುಷೋತ್ತಮೇನ ಯಯೌ ದಿಶಂ ತಾಂ ಯುವರಾಜಯುಕ್ತಃ ॥ – (೬/೩೪)

೬. ವಿಜ್ಞಾತಮೇತದ್ಧಿ ಮಯಾಽಂಗದಸ್ಯ ರಾಜ್ಯಾಯ ತಾರಾಭಿಹಿತಂ ಹಿ ವಾಕ್ಯಮ್।
ಸಾಧ್ಯಂ ನ ಚೈತನ್ನ ಹಿ ವಾಯುಸೂನೂ ರಾಮಪ್ರತೀಪಂ ವಚನಂ ಸಹೇತ ॥ – (೬/೪೩)

ಏಳನೆಯ ಅಧ್ಯಾಯ (ಶ್ಲೋಕಸಂಖ್ಯೆ : ೫೦)

ಸುಂದರಕಾಂಡನಿರ್ಣಯ ಈ ಅಧ್ಯಾಯದಲ್ಲಿ ಬಂದಿದೆ. ಹನುಮಂತನು ಶ್ರೀರಾಮನಿಗೆ ವಂದಿಸಿ ಹಾರಿದ್ದು ಮೈನಾಕ ಪ್ರಸಂಗ, ಸುರಸೆಯ ಪರಾಭವ, ಸಿಂಹಿಕೆಯ ವಧೆ, ಲಂಕಿಣಿಯ ಪರಾಭವ, ಹನುಮಂತನಿಂದ ಸೀತಾನ್ವೇಷಣೆಯ ನಟನೆ, ಸೀತಾಕೃತಿಯ ಸಂದರ್ಶನ, ಅಂಗುಲೀಯಕಪ್ರದಾನ, ಚೂಡಾಮಣಿಸ್ವೀಕಾರ, ಅಶೋಕವನಧ್ವಂಸ, ರಾಕ್ಷಸಸೇನೆಯ ಸಂಹಾರ, ರಾವಣನ ಮಂತ್ರಿಗಳ ವಧೆ, ಅಕ್ಷಕುಮಾರನ ವಧೆ, ಇಂದ್ರಜಿತ್ತಿನಿಂದ ಬ್ರಹ್ಮಾಸ್ತ್ರಪ್ರಯೋಗ, ಅದಕ್ಕೆ ಹನುಮಂತ ಸಿಕ್ಕಂತೆ ವರ್ತಿಸಿದ್ದು, ರಾವಣಸಭೆಯ ಪ್ರವೇಶ, ರಾವಣನ ಪ್ರಶ್ನೆ, ಹನುಮಂತ ತಿಳಿಸಿದ ರಾಮಸಂದೇಶ, ರಾವಣ ಹನುಮಂತನ ಬಾಲಕ್ಕೆ ಅಗ್ನಿಸ್ಪರ್ಶ ಮಾಡಿಸಿದ್ದು, ಅದರಿಂದಲೇ ಹನುಮಂತ ಮಾಡಿದ ಲಂಕಾದಹನ, ಪುನಃ ಸಾಗರತರಣ, ಕಪಿಗಳ ಸಂದರ್ಶನ, ಮಧುವನ ಭಕ್ಷಣ, ಚೂಡಾಮಣಿ ಪ್ರದಾನ, ಹನುಮಂತನಿಗೆ ಶ್ರೀರಾಮನ ಆಲಿಂಗನ – ಇವು ಈ ಅಧ್ಯಾಯದ ಮುಖ್ಯ ವಿಷಯಗಳು.

ವಾಲ್ಮೀಕಿರಾಮಾಯಣದಲ್ಲಿ ೬೮ ಅಧ್ಯಾಯಗಳಷ್ಟು ವ್ಯಾಪ್ತಿಯ ಸುಂದರಕಾಂಡದ ವಿವರ ಈ ಅಧ್ಯಾಯದಲ್ಲಿ ಕೇವಲ ೫೦ ಶ್ಲೋಕಗಳಲ್ಲಿ ಅಲ್ಲಿಗಿಂತ ಹೆಚ್ಚಿನ ಅಪೂರ್ವ ಮಾಹಿತಿಗಳೊಂದಿಗೆ ನಿರೂಪಿತವಾಗಿರುವುದು ವಿಶೇಷ. ಹನುಮಂತನಿಗೆ ಎಂದೂ ಶ್ರಮವಿಲ್ಲ; ಅವನು [೧]ನಿಃಸೀಮಬಲ ಎಂಬ ಇಲ್ಲಿಯ ನಿರೂಪಣೆ ಉಪನಿಷತ್ತಿನ ತತ್ತ್ವ.

ಸುರಸೆಯ ನಿಗ್ರಹ ಜಿಹ್ವಾಚಾಪಲ್ಯದ ನಿಗ್ರಹಕ್ಕೆ ಸಂಕೇತದಂತಿದೆ. ಅಕ್ಷಕುಮಾರ ರಾವಣನ ವೈಯಕ್ತಿಕಬಲದಲ್ಲಿ ಮೂರನೆಯ ಅಂಶ. ಹನುಮಂತ ಬ್ರಹ್ಮಾಸ್ತ್ರಕ್ಕೆ ಸಿಕ್ಕಿದಂತೆ ವರ್ತಿಸಿದ್ದು ಬ್ರಹ್ಮನನ್ನು [೨]ಗೌರವಿಸಲೆಂದು ಮಾತ್ರ. ಹನುಮಂತ ಲಂಕೆಯನ್ನು ದಹಿಸಿದ್ದು ತನ್ನ ಬಾಲದ ಬೆಂಕಿಯಿಂದ. ಶ್ರೀರಾಮ ಹನುಮಂತನಿಗೆ ನೀಡಿದ ಆಲಿಂಗನ ಇತರರಾರಿಗೂ ನೀಡದ ಮಹಾಭಾಗ್ಯ – ಮೊದಲಾದವುಗಳು ಇಲ್ಲಿಯ ನಿರ್ಣಯದ ವಿಶೇಷಾಂಶಗಳು.

ಸಮರ್ಥನಾಗಿದ್ದರೂ ಹನುಮಂತ ರಾವಣ, ಇಂದ್ರಜಿತ್ತುಗಳನ್ನು ಸಂಹರಿಸದೇ ಇರಲು ಇಲ್ಲಿ ವಿಶೇಷಕಾರಣವನ್ನು[೩] ನೀಡಲಾಗಿದೆ.

---

೧. ನೈವಾತ್ರ ವಿಶ್ರಮಣಮೈಚ್ಛದವಿಶ್ರಮೋಽಸೌ ನಿಃಸೀಮಪೌರುಷಬಲಸ್ಯ ಕುತಃ ಶ್ರಮೋಽಸ್ಯ ।
ಆಶ್ಲಿಷ್ಯ ಪರ್ವತವರಂ ಸ ದದರ್ಶ ಗಚ್ಛನ್ ದೇವೈಸ್ತುನಾಗಜನನೀಂ ಪ್ರಹಿತಾಂ ವರೇಣ ॥ – (೭/೪)

೨. ಮಯಾ ವರಾ ವಿಲಂಘಿತಾ ಹ್ಯನೇಕಶಃ ಸ್ವಯಂಭುವಃ ।
ಸ ಮಾನನೀಯ ಏವ ಮೇ ತತೋಽತ್ರ ಮಾನಯಾಮ್ಯಹಮ್ ॥ – (೭/೩೩)

೩. ನಿಧಾರ್ಯ ಏವ ರಾವಣಃ ಸ ರಾಘವಸ್ಯ ನಾನ್ಯಥಾ ।
ಯದೀಂದ್ರಜಿನ್ಮಯಾ ಹತೋ ನ ಚಾಸ್ಯ ಶಕ್ತಿರೀಕ್ಷ್ಯತೇ ॥ – (೭/೨೭)

ಎಂಟನೆಯ ಅಧ್ಯಾಯ (ಶ್ಲೋಕಸಂಖ್ಯೆ : ೨೪೮)

ಸಮಗ್ರ ಯುದ್ಧಕಾಂಡದ ನಿರ್ಣಯ ಈ ಅಧ್ಯಾಯದಲ್ಲಿದೆ. ಲಂಕೆಗೆ ಶ್ರೀರಾಮನ ಜೈತ್ರ-ಯಾತ್ರೆ, ಸಮುದ್ರತೀರದಲ್ಲಿ ಶ್ರೀರಾಮನ ದರ್ಭಶಯನ, ವಿಭೀಷಣಶರಣಾಗತಿ, ವಿಭೀಷಣನಿಗೆ ಕಲ್ಪಾಯುರ್ದಾನ ಹಾಗೂ ಲಂಕಾರಾಜ್ಯ, ಸಮುದ್ರನ ಶರಣಾಗತಿ, ರಾಮನ ಬಾಣದಿಂದ ಸಮುದ್ರದೊಳಗಿದ್ದ ದೈತ್ಯರ ವಿನಾಶ, ಹನುಮಂತನ ನೇತೃತ್ವದಲ್ಲಿ ಸೇತುಬಂಧನ, ಲಂಕಾಪ್ರವೇಶ, ಅಂಗದನ ರಾಯಭಾರ, ಯುದ್ಧಾರಂಭ, ನೀಲ ವಿಭೀಷಣರಿಂದ ಪ್ರಹಸ್ತನ ವಧೆ, ಅಂಗದನಿಂದ ವಜ್ರದಂಷ್ಟ್ರನ ಸಂಹಾರ, ಹನುಮಂತನಿಂದ ಧೂಮ್ರನೇತ್ರನ ಸಂಹಾರ, ಅಕಂಪನನ ವಧೆ, ನಿಕುಂಭ, ಕುಂಭಾದಿಗಳ ಸಂಹಾರ, ರಾವಣನ ಮಂತ್ರಿಗಳ ಸಂಹಾರ, ಯುದ್ಧೋನ್ಮತ್ತ ಮೊದಲಾದವರ ಸಂಹಾರ, ಅಂಗದನಿಂದ ನರಾಂತಕ, ಹನುಮಂತನಿಂದ ಸುರಾಂತಕರ ಸಂಹಾರ, ತ್ರಿಶಿರಸ್ಸಿನ ಸಂಹಾರ, ಲಕ್ಷ್ಮಣನಿಂದ ಅತಿಕಾಯನ ಸಂಹಾರ, ಶ್ರೀರಾಮನಿಂದ ಮಕರಾಕ್ಷನ ಸಂಹಾರ, ರಾವಣನ ಪರಾಕ್ರಮ, ಮುಷ್ಟಿಯುದ್ಧದಲ್ಲಿ ಹನುಮಂತನಿಂದ ರಾವಣನ ಪರಾಭವ, ನೀಲನ ಪರಾಕ್ರಮ, ರಾವಣ ಲಕ್ಷ್ಮಣರ ಯುದ್ಧದಲ್ಲಿ ಲಕ್ಷ್ಮಣನ ಮೂರ್ಛೆ, ಶ್ರೀರಾಮ ಹನುಮಂತರಿಂದ ಲಕ್ಷ್ಮಣನ ಉದ್ಧಾರ, ರಾಮರಾವಣಯುದ್ಧದಲ್ಲಿ ರಾವಣನ ಪರಾಭವ, ಕುಂಭಕರ್ಣನ ಪರಾಕ್ರಮ, ಹನುಮಂತನಿಂದ ಸುಗ್ರೀವನ ರಕ್ಷಣೆ, ರಾಮನಿಂದ ಕುಂಭಕರ್ಣನ ಸಂಹಾರ, ಇಂದ್ರಜಿತ್ತಿನ ನಾಗಪಾಶಗಳಿಂದ ಕಪಿಗಳ ಬಂಧನ, ಗರುಡನಿಂದ ಉರಗಬಂಧದ ವಿಮೋಚನೆ, ಮತ್ತೊಮ್ಮೆ ಇಂದ್ರಜಿತ್ತಿನಿಂದ ನಾಗಪಾಶಗಳಿಂದ ಬಂಧನ, ಹನುಮಂತ ಸಂಜೀವನದಿಂದ ಕಪಿಗಳ ರಕ್ಷಣೆ, ಮತ್ತೊಮ್ಮೆ ಇಂದ್ರಜಿತ್ತಿನ ಪರಾಕ್ರಮ, ಶ್ರೀರಾಮನಿಂದ ಇಂದ್ರಜಿತ್ತಿನ ಪರಾಭವ, ಲಕ್ಷ್ಮಣನಿಂದ ಇಂದ್ರಜಿತ್ತಿನ ಸಂಹಾರ, ಶ್ರೀರಾಮನಿಂದ ರಾವಣನ ಮೂಲಬಲದ ಸಂಹಾರ, ಮತ್ತೊಮ್ಮೆ ರಾವಣನಿಂದ ಲಕ್ಷ್ಮಣನ ಮೂರ್ಛೆ, ಸಂಜೀವನವನ್ನು ಪುನಃ ತಂದು ಹನುಮಂತನಿಂದ ಲಕ್ಷ್ಮಣನ ಸಂರಕ್ಷಣೆ, ರಾಮ ರಾವಣರ ಯುದ್ಧ, ಶ್ರೀರಾಮನಿಂದ ರಾವಣನ ಸಂಹಾರ, ಬ್ರಹ್ಮಾದಿಗಳು ಮಾಡಿದ ರಾಮಸ್ತುತಿ, ರಾಮನಿಂದ ಶಿವನ ಪರಾಭವ, ಸೀತಾಕೃತಿಯ ಅಗ್ನಿಪ್ರವೇಶ, ಶ್ರೀರಾಮನಿಂದ ಸೀತಾಪರಿಗ್ರಹ, ಮೃತವಾನರರನ್ನು ಶ್ರೀರಾಮ ಬದುಕಿಸಿದ್ದು, ಅಯೋಧ್ಯಾಗಮನ, ಹನುಮಂತನ ಮೂಲಕ ಭರತನಿಗೆ ಶ್ರೀರಾಮಾಗಮನದ ವಾರ್ತಾಶ್ರವಣ, ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮನಿಂದ ಕಪಿಗಳಿಗೆ ಅಭಿನಂದನೆ, ಶ್ರೀರಾಮನಿಂದ ಹನುಮಂತನ ಪ್ರಶಂಸೆ, ಸಹಭೋಗ ಪ್ರದಾನ, ಹನುಮಂತ ರಾಮನಲ್ಲಿ ಬೇಡಿದ [೧]ಪರಮಭಕ್ತಿಯ ವರ, ಶ್ರೀರಾಮನಿಂದ

---

೧. ಯಸ್ತೇ ಕಥಾಸೇವಕ ಏವ ಸರ್ವದಾ ಸದಾ ರತಿಸ್ತ್ವಯ್ಯಚಲೈಕಭಕ್ತಿಃ ।
ಸ ಜೀವಮಾನೋ ನ ಪರಃ ಕಥಂಚಿತ್ ತಜ್ಜೀವನಂ ಮೇऽಸ್ತ್ವಧಿಕಂ ಸಮಸ್ಯಾತ್ ॥
ಪ್ರವರ್ಧತಾಂ ಭಕ್ತಿರಲಂ ಕ್ಷಣೇ ಕ್ಷಣೇ ತ್ವಯೀಶ ಮೇ ಹ್ಯಾಸವಿವರ್ಜಿತಾ ಸದಾ ।
ಅನುಗ್ರಹಸ್ತೇ ಮಯಿ ಚೈವಮೇವ ನಿರೂಪಧೌ ತೌ ಮಮ ಸರ್ವಕಾಮಃ ॥ – (೨/೨೪೬, ೨೪೭)

ಹನುಮಂತನಿಗೆ ಬ್ರಹ್ಮಪದ[೧] ಪ್ರದಾನ – ಇವು ಈ ಅಧ್ಯಾಯದಲ್ಲಿ ಬಂದಿರುವ ಮುಖ್ಯ–ವಿಷಯಗಳು.

ಶ್ರೀರಾಮನು ದರ್ಭಶಾಯಿಯಾಗಲು ಕಾರಣ, ಶ್ರೀರಾಮನ ಅಪಾರ ಮಹಿಮೆ, ರಾವಣ ಮಾಡಿದ ಹನುಮಂತನ [೨]ಪ್ರಶಂಸೆ, ಲಕ್ಷ್ಮಣನ ಮೂಲರೂಪದ ಹಿರಿಮೆಯ ವರ್ಣನೆ, ಸುಗ್ರೀವನು ಕುಂಭಕರ್ಣನ ಬಂಧನಕ್ಕೆ ಒಳಗಾದಾಗ ಹನುಮಂತ ಮಾಡಿದ ಚಿಂತನೆಯ ಸಾರ, ಹನುಮಂತ ರಾವಣಕುಂಭಕರ್ಣರನ್ನು [೩]ಕೊಲ್ಲದಿರಲು ಕಾರಣ, ಹನುಮಂತ ಸಂಜೀವನ ತಂದ ವೈಭವ, ಶ್ರೀರಾಮ ಇಂದ್ರಜಿತ್ತನ್ನು ಕೊಲ್ಲದಿರಲು ಕಾರಣ, ರಾವಣನ ಮೂಲಬಲವನ್ನು ರಾಮ ವಿಶ್ವರೂಪ–ವನ್ನು ತಾಳಿ ಸಂಹರಿಸಿದ್ದು, ಬ್ರಹ್ಮಕೃತ [೪]ರಾಮಸ್ತುತಿ, ರಾವಣನನ್ನು ವಿರೋಧಿಸಿ ಪರಾಭವಗೊಂಡ ಶಿವ, ರಾಮನು ಸೀತಾಕೃತಿಯನ್ನು ಸ್ವೀಕರಿಸದೆ ಸೀತೆಯನ್ನೇ ಸ್ವೀಕರಿಸಿದ [೫]ರಹಸ್ಯ, ಶ್ರೀರಾಮ ಮಾಡಿದ ಹನುಮಂತನ ಪ್ರಶಂಸೆ, ಹನುಮಂತ ರಾಮನಲ್ಲಿ ವರ ಬೇಡಿದ ರೀತಿ – ಇವು ಈ ಅಧ್ಯಾಯದಲ್ಲಿನ ಪ್ರಮುಖ ಘಟ್ಟಗಳು.

ಒಂಭತ್ತನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೪೧)

ಈ ಅಧ್ಯಾಯ ಉತ್ತರಕಾಂಡದ ನಿರ್ಣಯ. ಭರತನಿಗೆ ಯೌವರಾಜ್ಯ, ಶ್ರೀರಾಮರಾಜ್ಯದ ವರ್ಣನೆ, ಶ್ರೀರಾಮಸೀತೆಯರ ವಿಹಾರ, ಲವಕುಶರ ಜನನ, ಶತ್ರುಘ್ನನಿಂದ ಲವಣಾಸುರನ ಸಂಹಾರ, ಭರತನಿಂದ ಮೂರುಕೋಟಿ ಅಸುರರ ಸಂಹಾರ, ರಾಮನು ಲೋಕಶಿಕ್ಷಣಕ್ಕಾಗಿ ಮಾಡಿದ

---

೧. ಇತೀರಿತಸ್ತಸ್ಯ ದದೌ ಸ ತದ್ವ್ಯಯಂ ಪದಂ ವಿಧಾತುಃ ಸಕಲೈಶ್ಚ ಶೋಭನಮ್ ।
ಸಮಾಶ್ಲಿಷಚ್ಚಿನಮಥಾರ್ದ್ರಯಾ ಧಿಯಾ ಯಥೋಚಿತಂ ಸರ್ವಜನಾನಪೂಜಯತ್ ॥ – (೮/೨೪೮)

೨. ಸ ಲಬ್ಧಸಂಜ್ಞಃ ಪ್ರಶಶಂಸ ಮಾರುತಿಂ ತ್ವಯಾ ಸಮೋ ನಾಸ್ತಿ ಪುಮಾನ್ ಹಿ ಕಶ್ಚಿತ್ ।
ಕಃ ಪ್ರಾಪಯೇದನ್ಯ ಇಮಾಂ ದಶಾಂ ಮಾಂ ..... ॥ – (೮/೭೮)

೩. ವಿಚಿಂತಯಾಮಾಸ ತತೋ ಹನೂಮಾನ್ ಮಯೈವ ಹಂತುಂ ಸಮರೇ ಹಿ ಶಕ್ಯಃ ।
ಅಸೌ ತಥಾ ಽಷ್ಯೇನಮಹಂ ನ ಹನ್ಮಿ ಯಶೋ ಹಿ ರಾಮಸ್ಯ ದೃಢಂ ಪ್ರಕಾಶಯನ್ ॥
ಅನನ್ಯವಧ್ಯಂ ತಮಿಮಂ ನಿಹತ್ಯ ಸ್ವಯಂ ಸ ರಾಮೋ ಯಶ ಆಹರೇತ ।
ದತ್ತೋ ವರೋ ದ್ವಾರಪಯೋಃ ಸ್ವಯಂ ಚ ಜನಾರ್ದನೇನೈವ ಪುರಾತನಶ್ಚ ॥ – (೮/೧೨೧, ೧೨೨)

೪. ಜಿತಂ ಜಿತಂ ತೇ ಽಜಿತ ಲೋಕಭಾವನ ಪ್ರಪನ್ನಪಾಲಾಯ ನತಾಃ ಸ್ಮ ತೇ ವಯಮ್ ॥
ತ್ವಮೇಕ ಈಶೋ ಽಸಿ ನ ಚಾದಿರಂತಸ್ತವೇಡ್ಯ ಕಾಲೇನ ತಥೈವ ದೇಶತಃ । (ಇತ್ಯಾದಿ) – (೮/೨೧೨-೨೧೭)

೫. ಜಾನನ್ ಗಿರೀಶಾಲಯಗಾಂ ಸ ಸೀತಾಂ ಸಮಗ್ರಹೀತ್ ಪಾವಕಸಂಪ್ರದತ್ತಾಮ್ ।
ಮುಮೋದ ಸಂಪ್ರಾಪ್ಯ ಚ ತಾಂ ಸ ರಾಮಃ ಸಾ ಚೈವ ದೇವೀ ಭಗವಂತಮಾಪ್ಯ ॥ – (೮/೨೨೩)

ಅಪೂರ್ವಯಜ್ಞಗಳು, ಶಂಬೂಕನ ಸಂಹಾರ ಹಾಗೂ ಅವನ ಪೂರ್ವ ವೃತ್ತಾಂತ, ಶ್ವೇತರಾಜ ಅಗಸ್ತ್ಯರ ಮೂಲಕ ಶ್ರೀರಾಮನಿಗೆ ಮಾಲೆಯನ್ನು ಸಮರ್ಪಿಸಿದ್ದು, ಸುರಾಣಕರ ವೃತ್ತಾಂತ, ಸೀತಾಪರಿತ್ಯಾಗದ ರಹಸ್ಯ, ರಾಮನ ಯಜ್ಞಭೂಮಿಯಲ್ಲಿ ಸೀತೆಯ ಭೂಮಿಪ್ರವೇಶ, ಶ್ರೀರಾಮ ಪರಂಧಾಮಕ್ಕೆ ತೆರಳಲು ಬ್ರಹ್ಮಾದಿಗಳಿಂದ ಪ್ರೇಷಿತನಾದ ಶಿವನ ಪ್ರಾರ್ಥನೆ, ಶ್ರೀರಾಮನು ದುರ್ವಾಸರಿಗೆ ಅನ್ನ ನೀಡಿ ಅವರ ಪ್ರತಿಜ್ಞೆಯನ್ನು ಭಂಗಪಡಿಸಿದ್ದು, ಲಕ್ಷ್ಮಣನ ಅವತಾರಸಮಾಪ್ತಿ, ಶ್ರೀರಾಮನ ಪರಂಧಾಮಗಮನನಿಶ್ಚಯ, ಸಕಲರಿಗೂ ಮುಕ್ತಿನೀಡುವ ಶ್ರೀರಾಮನ ಆಹ್ವಾನ, ರಾಮರಾಜ್ಯದ ಉತ್ತರಾಧಿಕಾರಿಗಳಾಗಿ ಕುಶಲವರು, ಶ್ರೀರಾಮನು ಹನುಮಂತನಿಗೆ ನೀಡಿದ ಸಂದೇಶ, ಶ್ರೀರಾಮನ ಪರಂಧಾಮಗಮನ, ಶ್ರೀರಾಮನ ಅದ್ಭುತ ವರ್ಣನೆ, ಶ್ರೀರಾಮನ ಪರಂಧಾಮಗಮನವೈಭವ, ಪರಂಧಾಮಪ್ರವೇಶ, ಬ್ರಹ್ಮದೇವರು ರಾಮನಿಗೆ ಒಪ್ಪಿಸಿದ ಗತಿದಾನದ ವರದಿ, ರಾಮನ ಹಿಂದೆ ತೆರಳಿದವರಿಗೆಲ್ಲ ಸಾಂತಾನಿಕಲೋಕಪ್ರಾಪ್ತಿ, ರಾಮನ ಹಿಂದೆ ನಡೆಯದೇ ಭೂಲೋಕದಲ್ಲೇ ಉಳಿದ ಮೈಂದ ವಿವಿದರು, ಕುಬೇರನ ಸೇನಾಪತಿಯಾಗಿ ವಿಭೀಷಣ, ಜಾಂಬವತಿಯ ಉತ್ಪತ್ತಿಗೆಂದು ಜಾಂಬವಂತನ ತಪಶ್ಚರ್ಯೆ, ವಿವಿಧ ಲೋಕಗಳಲ್ಲಿ ಶ್ರೀರಾಮರೂಪಗಳ ಸನ್ನಿಧಿಯ ವಿವರ, ಶ್ರೀರಾಮನ ಶ್ವೇತದ್ವೀಪಗಮನ, ಬದರಿ ಕಿಂಪುರುಷಗಳಲ್ಲಿ ರಾಮರೂಪದ ವೈಭವ, ರಾಮಕಥೆಯ ಆಕರಗಳು, ನಿರ್ಣಯದ ಹಿರಿಮೆ, ಪುರುಷವ್ಯತ್ಯಾಸ, ಕಾಲವ್ಯತ್ಯಾಸಾದಿಗಳಿಗೆ ನಿದರ್ಶನ, ಭಾಷಾತ್ರಯ, ರೀತಿಶತಕ, [೧]ವ್ಯತ್ಯಾಸಾದಿಸಪ್ತಭೇದಗಳ ಪರಿಜ್ಞಾನದ ಆವಶ್ಯಕತೆ, ಸಪ್ತಭೇದಗಳ ವಿವರ, ರಾಮಕಥಾಶ್ರವಣದ ಫಲಶ್ರುತಿ – ಇವು ಈ ಅಧ್ಯಾಯದಲ್ಲಿ ಬಂದಿರುವ ಮುಖ್ಯ ವಿಷಯಗಳು.

---

೧. 'ಗೋಮೂತ್ರೀ' ನಾಮ ಗಚ್ಛತೋ ವೃಷಭಸ್ಯ ಮೂತ್ರಂ ಯಥಾ ವಕ್ರಾಕಾರೇಣ ತಿಷ್ಠತಿ ತಥಾ ಕಾಂಚಿತ್ ಕಥಾಮಾರಭ್ಯ ಮಧ್ಯೇ ತದಸಂಬದ್ಧಕಥಾಂ ಕಥಯಿತ್ವಾ ಪುನಸ್ತದನುಕೂಲಕಥಾಕಥನಂ । ಯಥಾ ಕೃಷ್ಣಕಥಾಕಥಕೇ ದಶಮಸ್ಕಂಧೇ 'ದೇವಾಸುರಮನುಷ್ಯೇಷು ಯೇ ಭಜಂತ್ಯಶಿವಂ ಶಿವಂ' 'ವಿತರ್ಕಃ ಸಮಭೂತ್ತೇಷಾಂ ತ್ರಿಷ್ವಧೀಶೇಷು ಕೋ ಮಹಾನ್' । 'ತದಂತೇ ಬೋಧಯಾಂಚಕ್ರುಃ ಸಮ್ರಾಜಮಿವ ಬಂದಿನಃ' ಇತ್ಯಾದಿಕಾಂ ಪ್ರಾಸಂಗಿಕಕಥಾಮುಕ್ತ್ವಾ ಪುನಃ ಕೃಷ್ಣಕಥಾಯಾಃ ಕಥನಮ್ । ಪ್ರಘಸಃ 'ಘಸ್ ಆಸ್ವಾದನೇ' ಇತಿ ಧಾತೋಃ ವಕ್ತವ್ಯಕಥಾಯಾಃ ಭಕ್ಷಣಮಿವ ಅನಿರೂಪಣಮ್ । ಯಥಾ ಹರಿವಂಶೇ ವಿಸ್ಮೃತಕೈಲಾಸಯಾತ್ರಾದಿಕೃಷ್ಣಕಥಾಕಥಕದಶಮಸ್ಕಂಧೇ ವಿಸ್ತರೇಣಾನಿರೂಪಣಮ್ । ಕಸ್ಯಾಶ್ಚಿತ್ ಕಥಾಯಾಃ ಗ್ರಂಥಾಂತರೋಕ್ತಾಭಿಪ್ರಾಯೇಣ ಸರ್ವಥಾಽನಿರೂಪಣಂ ಚ । ಅಥವಾ 'ಪಿಬತ ಭಾಗವತಂ ರಸಮಾಲಯಂ' 'ತತ್ಕಥಾಂ ಸುಮಹತ್ಪುಣ್ಯಾಂ । ಧನ್ಯಾಂ ಸ್ವಸ್ತ್ಯಯನೀಂ ಶಿವಾಂ ।' 'ವಾಸುದೇವ ಕಥಾಪ್ರಶ್ನಃ ಪುರುಷಾಂಸ್ತ್ರೀನ್ ಪುನಾತಿ ಹಿ।' 'ನ ಚ ನಿರ್ಭಾರತೋ ಭವೇತ್ । ಮಹತ್ವಾತ್ ಭಾರವತ್ವಾಚ್ಚ ಮಹಾಭಾರತಮುಚ್ಯತೇ ।' ಇತ್ಯಾದಿನೋಚ್ಯಮಾನಕಥಾಯಾಃ ತತ್ರ ತತ್ರಾಸ್ವಾದನಮಿತಿ ಯಥಾಸ್ಥಿತಂ ತಥಾಽಸ್ತ್ವರ್ಥಗ್ರಹಣಮ್ । ಉಕ್ಷಣಂ ನಾಮ ಗೋಮಯಪ್ರೋಕ್ಷಣಮಿವ ಕಥಾಯಾಸ್ತತ್ರ ತತ್ರ ವಿಕ್ಷಿಪ್ತ ಕಥನಮ್ । ಸುಧುರಃ – ಸುಷ್ಠು ಧೂರ್ತ್ಯಾ ಪಾರಃ ಯತ್ರ ಸ ಸುಧುರಃ । ಯಥಾ 'ವಾಸುದೇವಪರಾ ವೇದಾಃ ವಾಸುದೇವಪರಾ ಮಖಾಃ । ವಾಸುದೇವಪರಾ ಯೋಗಾಃ ವಾಸುದೇವಪರಾ ಕ್ರಿಯಾಃ । ವಾಸುದೇವಪರಂ ಜ್ಞಾನಂ ವಾಸುದೇವಪರಂ

ರಾಮರಾಜ್ಯದ ೌವರ್ಣನೆ, ಈ ಅಧ್ಯಾಯದ ಪ್ರಾರಂಭದಲ್ಲಿ ಬರುವ ಅಪೂರ್ವ ಭಾಗ. ಶಂಬೂಕವಧೆ ರಾಮನ ಬಗ್ಗೆ ತಪ್ಪುಕಲ್ಪನೆ ಹುಟ್ಟಿಸುವ ಒಂದು ಪ್ರಸಂಗ. ಅದನ್ನು ಜನ ರಾಮ ಒಬ್ಬ ಶೂದ್ರ ತಪಸ್ವಿಯನ್ನು ಕೊಂದ ಕಥೆಯೆಂದೇ ಭಾವಿಸಿರುವರು. ಆದರೆ ಅವನು ಅವನು ಶೂದ್ರರೂಪದಲ್ಲಿದ್ದ ಒಬ್ಬ ಅಸುರ. ಜಂಘ ಎಂದು ಅವನ ಹೆಸರು. ಪಾರ್ವತಿಯನ್ನು ಕುರಿತು

ತಪಃ । ವಾಸುದೇವಪರಾ ಧರ್ಮಾ ವಾಸುದೇವಪರಾ ಗತಿಃ । ವಿಶ್ವತಃ ಪಾಣಿಪಾದಂ ತತ್ ವಿಶ್ವತೋSಕ್ಷಿಶಿರೋಮುಖಮ್ । ವಿಶ್ವತಃ ಶ್ರುತಿಮಲ್ಲೋಕೇ ವಿಶ್ವಮಾವೃತ್ಯ ತಿಷ್ಠತಿ । ಸರ್ವಜ್ಞಃ ಸರ್ವಗಃ ಸರ್ವಃ ಸರ್ವದಃ ಸರ್ವಭಾವನಃ । ಸರ್ವಶಾಸ್ತಾ ಸರ್ವಸಾಕ್ಷೀ ಪೂಜ್ಯಃ ಸರ್ವಸ್ಯ ಸರ್ವದೃಕ್ । ಸರ್ವಶಕ್ತಿಃ ಸರ್ವಸಾರಃ ಸರ್ವಾತ್ಮಾ ಸರ್ವತೋ ಮುಖಃ । ಸರ್ವವಾಸಃ ಸರ್ವರೂಪಃ ಸರ್ವಾದಿಃ ಸರ್ವದುಃಖಹಾ । ಸರ್ವಾರ್ಥಃ ಸರ್ವತೋ ಭದ್ರಃ ಸರ್ವಕಾರಣಕಾರಣಮ್ । ಸರ್ವಾತಿಶಾಯಿಕಃ ಸರ್ವಾಧ್ಯಕ್ಷಃ ಸರ್ವೇಶ್ವರೇಶ್ವರಃ ।' ಇತ್ಯಾದಿ । ಸಾಧಿಷ್ಠಾನಸ್ತುತಿಂ ವಿನಾ ಕೇವಲಂ ವಿಷ್ಣೋಃ ಸ್ತುತಿಃ ಯತ್ರ ಸ ಸಾಧುಃ । ಯಥಾ ''ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ'' ''ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ'' ಇತ್ಯಾದಿಕಾ ॥ –(ವಾ.)

ಯಥಾ ಗಚ್ಛತೋ ಬಲೀವರ್ದಸ್ಯ ಮೂತ್ರಂ ತಿರ್ಯಗ್ ಗಚ್ಛತಿ । ತಥಾ ಕೃಷ್ಣ ಕಥಾಂ ವಕ್ತುಂ ಉಪಕ್ರಮ್ಯ ಪಾಂಡವಕಥಾಕಥನಂ ಪಾಂಡವಕಥಾಂ ವಕ್ತುಮುಪಕ್ರಮ್ಯ ಕೃಷ್ಣಕಥಾಕಥನಂ ಗೋಮೂತ್ರೀತ್ಯರ್ಥಃ । ಯಥಾ ಗೌರೇಕದೈವ ಬಹುತೃಣಾನಿ ಭೆಕ್ಷಯಿತ್ವಾ ಪಶ್ಚಾತ್ ರೋಮಂಥನಂ ಕರೋತಿ, ತಥಾ ಪ್ರಥಮತಃ ಸರ್ವಾಂ ಭಾರತಕಥಾಂ ಸಂಕ್ಷಿಪ್ಯ ಉಕ್ತ್ವಾ ತದನಂತರಂ ವಿಸ್ತರೇಣ ಭಾರತಾದಿಕಥಾಕಥನಂ ಪ್ರಘಸ ಇತ್ಯರ್ಥಃ । ಯಥೋದಕೇ ಸಿಕ್ತೇ ಏಕದೈವ ಸರ್ವೇSಪಿ ಬಿಂದವಃ ಭೂಮೌ ಪತಂತಿ ತಥಾ ಏಕದೈವ ಅನೇಕಾರ್ಥಕಥನಂ ಇತ್ಯರ್ಥಃ । ಸುಷ್ಠು ಧೂರ್ತ್ಯಾ ಪಾರಃ ಅರ್ಥಕಥನೇ ಯತ್ರ ಸಃ ಸುಧುರಃ । ಸಾಧುಃ ಸಾಧಿಷ್ಠಾನಸ್ತುತಿಂ ವಿನಾ ಕೇವಲವಿಷ್ಣೋರೇವ ಸ್ತುತಿಃ ಯತ್ರ ಸಃ ಸಾಧುಃ ॥ –(ಚೆ.)

೨. ಪ್ರಶಾಸತೀಶೇ ಪೃಥಿವೀ ಬಭೂವ ವಿರಿಂಚಿಲೋಕಸ್ಯ ಸಮಾ ಗುಣೋನ್ನತೌ ।
ಜನೋSಖಿಲೋ ವಿಷ್ಣುಪರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ॥
ಗುಣೈಶ್ಚ ಸರ್ವೈರುದಿತಾಶ್ಚ ಸರ್ವೇ ಯಥಾಯಥಾ ಯೋಗ್ಯತಯೋಚ್ಚನೀಚಾಃ ।
ಸಮಸ್ತರೋಗಾದಿಭಿರುಜ್ಝಿತಾಶ್ಚ ಸರ್ವೇ ಸಹಸ್ರಾಯುಷ ಊರ್ಜಿತಾ ಧನೈಃ ॥
ಸರ್ವೇ ಜನಾ ನಿತ್ಯಬಲೋಪಪನ್ನಾ ಯಥೇಷ್ಟಸಿದ್ಧ್ಯಾ ಚ ಸದೋಪಪನ್ನಾಃ ।
ಸಮಸ್ತದೋಷೈಶ್ಚ ಸದಾ ವಿಹೀನಾಃ ಸರ್ವೇ ಸುರೂಪಾಶ್ಚ ಸದಾ ಮಹೋತ್ಸವಾಃ ॥
ಸರ್ವೇ ಮನೋವಾಕ್ತನುಭಿಃ ಸದೈವ ವಿಷ್ಣುಂ ಯಜಂತೇ ನತು ಕಂಚಿದನ್ಯಮ್ ।
ಸಮಸ್ತರತ್ನೋದ್ಧರಿತಾ ಚ ಪೃಥ್ವೀ ಯಥೇಷ್ಟಧಾನ್ಯಾ ಬಹುದುಗ್ಧಗೋಮತೀ ॥
ಸಮಸ್ತಗಂಧಾಶ್ಚ ಸದಾSತಿಹೃದ್ಯಾ ರಸಾ ಮನೋಹಾರಿಣ ಏವ ತತ್ರ ।
ಶಬ್ದಾಶ್ಚ ಸರ್ವೇ ಶ್ರವಣಾತಿಹಾರಿಣಃ ಸ್ಪರ್ಶಾಶ್ಚ ಸರ್ವೇ ಸ್ಪರ್ಶೇಂದ್ರಿಯಪ್ರಿಯಾಃ ॥
ನ ಕಸ್ಯಚಿದ್ದುಃಖಮಭೂತ್ ಕಥಂಚಿನ್ನ ವಿತ್ತಹಾನಿಶ್ಚ ಬಭೂವ ಕಶ್ಚನ ।
ನಾಧರ್ಮಶೀಲೋ ನ ಚ ಕಶ್ಚನಾಪ್ರಜೋ ನ ದುಷ್ಪ್ರಜೋ ನೈವ ಕುಭಾರ್ಯಕಶ್ಚ ॥
ಸ್ತ್ರಿಯೋ ನ ಚಾಸನ್ ವಿಧವಾಃ ಕಥಂಚಿನ್ನ ವೈ ಪುಮಾಂಸೋ ವಿಧುರಾ ಬಭೂವುಃ ।
ನಾನಿಷ್ಟಯೋಗಶ್ಚ ಬಭೂವ ಕಸ್ಯಚಿನ್ನ ಚೇಷ್ಟಹಾನಿರ್ನ ಚ ಪೂರ್ವಮೃತ್ಯುಃ ॥
ಯಥೇಷ್ಟಮಾಲ್ಯಾಭರಣಾನುಲೇಪನಾಃ ಯಥೇಷ್ಟಪಾನಾಶನವಾಸಸೋSಖಿಲಾಃ ।
ಬಭೂವುರೀಶೇ ಜಗತಾಂ ಪ್ರಶಾಸತಿ ಪ್ರಕೃಷ್ಟಧರ್ಮೇಣ ಜನಾರ್ದನೇ ನೃಪೇ ॥ –(೯/೪-೧೧)

ತಪಸ್ಸು ಮಾಡಿ ಒಂದು ಕಲ್ಪ ಆಯುಷ್ಯವನ್ನು ಪಡೆದು ತಪಸ್ಸಿನಲ್ಲಿ ತೊಡಗಿದ್ದ. ಪಾರ್ವತೀಪತಿ–ಯಾಗುವುದು ಅವನ ಉದ್ದೇಶವಾಗಿತ್ತು, ಅವನ ದುರುದ್ದೇಶದ ಫಲವಾಗಿ ಬ್ರಾಹ್ಮಣಪುತ್ರ ಮೃತನಾಗಿದ್ದ. ರಾಮ ಅವನನ್ನು ಸಂಹರಿಸಿದ್ದು ಶೂದ್ರನೆಂಬ ಕಾರಣದಿಂದಲ್ಲ, ಕೇವಲ ತಪಸ್ಸು ಮಾಡಿದ್ದಕ್ಕೂ ಅಲ್ಲ, ಪಾರ್ವತೀಪತಿಯಾಗುವಂತಹ ಹೀನಬಯಕೆಯನ್ನು ಹೊಂದಿ ಹಾಗೆ ತಪಸ್ಸು ಮಾಡಿದ್ದಕ್ಕೆ ಅವನಿಗೆ ವಿಧಿಸಿದ ಶಿಕ್ಷೆ ಅದಾಗಿತ್ತು ಎಂಬುದು ವಾಸ್ತವ. ರಾಮಾಯಣದ ಅತ್ಯಂತ ಜಟಿಲವಾದ ಈ ತಾತ್ವಿಕ ಸಮಸ್ಯೆಯನ್ನು ವರ್ಣದ್ವೇಷದ ಸಮಸ್ಯೆಯೆಂಬಂತೆ ಕೆಲವರು ಕಂಡಿರುವುದುಂಟು. ಅದಕ್ಕೆ ಆಚಾರ್ಯ ಶ್ರೀಮಧ್ವರು ನೀಡಿದ ಅಪೂರ್ವ ತಾತ್ವಿಕ ಪರಿಹಾರವಿದು:

ಜಂಘನಾಮಾऽಸುರಃ ಪೂರ್ವಂ ಗಿರಿಜಾವರದಾನತಃ ।
ಬಭೂವ ಶೂದ್ರಃ ಕಲ್ಪಾಯುಃ ಸ ಲೋಕಕ್ಷಯಕಾಮ್ಯಯಾ ॥
ತಪಶ್ಚಚಾರ ದುರ್ಬುದ್ಧಿರಿಚ್ಛನ್ ಮಾಹೇಶ್ವರಂ ಪದಮ್ ।
ಅವಧ್ಯವಧ್ಯಂ ತಂ ತಸ್ಮಾಜ್ಜಘಾನ ಪುರುಷೋತ್ತಮಃ ॥ – (೯/೨೦-೨೧)

ಉತ್ತರಕಾಂಡದಲ್ಲಿನ ಮತ್ತೊಂದು ಪ್ರಧಾನಸಮಸ್ಯೆ ಸೀತಾಪರಿತ್ಯಾಗ. ಪರಮಪತಿವ್ರತೆ–ಯಾದ ಸೀತೆಯಂತಹ ಪತ್ನಿಯನ್ನು ಶ್ರೀರಾಮ ಹಾಗೆ ನಿಷ್ಕರುಣೆಯಾಗಿ ಯಾವನೋ ಒಬ್ಬನ ಮಾತಿನಿಂದ ತ್ಯಜಿಸಿ ಸ್ತ್ರೀಸಂಕುಲಕ್ಕೇ ಅಪಚಾರಮಾಡಿದ ಎಂಬುದು ಕೆಲವರ ಆಕ್ಷೇಪ. ಆದರೆ ಶ್ರೀರಾಮಸೀತೆಯರದು ನಿತ್ಯಾವಿಯೋಗದ ಪರಿಶುದ್ಧದಾಂಪತ್ಯ. ರಾಮ ಸೀತೆಯನ್ನು ಪರಿತ್ಯಜಿಸಿ–ದ್ದಲ್ಲ; ಪರಿತ್ಯಜಿಸಿದಂತೆ ಮಾಡಿದ ನಾಟಕ. ಲಕ್ಷ್ಮೀನಾರಾಯಣರ ವಿಯೋಗಚಿಂತನೆಯ ಹೊರತು ಬೇರಾವ ಕಾರಣದಿಂದಲೂ ಸುರಾಣಕರೆಂಬ ದೈತ್ಯರು ದುರ್ಗತಿಗೆ ತೆರಳುವಂತಿರಲಿಲ್ಲ; ಲೋಕ–ಕಂಟಕರಾದ ಅವರು ಈ ಪ್ರಸಂಗದಿಂದ ಲಕ್ಷ್ಮೀನಾರಾಯಣರೇ ಆದ ರಾಮಸೀತೆಯರಲ್ಲಿ ವಿಯೋಗಚಿಂತನೆ ಮಾಡಿ ದುರ್ಗತಿಗೆ ತೆರಳುವಂತಾಗಲಿ ಎಂಬುದಕ್ಕಾಗಿ ಅವರಿಬ್ಬರೂ ಮಾಡಿದ ನಟನೆ ಮಾತ್ರ ಎಂಬುದು ಇದರ ಹಿಂದಿನ ರಹಸ್ಯ:

ಬ್ರಹ್ಮವಾಕ್ಯಮೃತಮೇವ ಕಾರಯನ್ ಪಾತಯಂಸ್ತಮಸಿ ಚಾಂಧ ಆಸುರಾನ್ ।
ನಿತ್ಯಮೇವ ಸಹಿತೋऽಪಿ ಸೀತಯಾ ಸೋऽಜ್ಞಸಾಕ್ಷಿಕಮಭೂದ್ವಿಯುಕ್ತವತ್ ॥ – (೯/೩೩)

ಶ್ವೇತರಾಜನಿಗೆ ಮಾಲೆನ್ನು ನೇರವಾಗಿ ಅರ್ಪಿಸಲು ತಿಳಿಸದೇ ಅಗಸ್ತ್ಯರ ಮೂಲಕ ತಲುಪಿಸಿದ್ದಕ್ಕೆ ಕಾರಣ ಇಲ್ಲಿ ಉಕ್ತವಾಗಿದೆ :

ಶ್ವೇತದತ್ತಾಂ ತಥಾ ಮಾಲಾಮಗಸ್ತ್ಯಾದಾಪ ರಾಘವಃ ।
ಅಸನ್ನಯಜ್ಞಕೃಚ್ಛ್ರೇತೋ ರಾಜಾ ಕ್ಷುದ್ವಿನಿವರ್ತನಮ್ ॥
ಕುರ್ವನ್ ಸ್ವಮಾಂಸೈರ್ಧಾತ್ರೋಕ್ತೋ ಮಾಲಾಂ ರಾಮಾರ್ಥಮಾರ್ಪಯತ್ ।
ಅಗಸ್ತ್ಯಾಯ ನ ಸಾಕ್ಷಾತ್ ತು ರಾಮೇ ದದ್ಯಾದಯಂ ನೃಪಃ ॥
ಕ್ಷುದಭಾವಮಾತ್ರಫಲದಂ ನ ಸಾಕ್ಷಾದ್ರಾಘವೇऽರ್ಪಿತಮ್ ।
ಕ್ಷುದಭಾವಮಾತ್ರಮಾಕಾಂಕ್ಷನ್ ಮಾಮಸೌ ಪರಿಪೃಚ್ಛತಿ ॥

ವ್ಯವಧಾನತಸ್ತತೋ ರಾಮೇ ದದ್ಯಾಚ್ಛ್ವೇತ ಇತಿ ಪ್ರಭುಃ ।
ಮತ್ವಾ ಬ್ರಹ್ಮಾऽದಿತನ್ಮಾಲಾಂ ಪ್ರದಾತುಂ ಕುಂಭಯೋನಯೇ ॥ – (೯/೨೨-೨೫)

ದುರ್ವಾಸರ ಪ್ರತಿಜ್ಞಾಭಂಗ ಶ್ರೀರಾಮನ ಸರ್ವೋತ್ತಮತ್ವಕ್ಕೆ ದ್ಯೋತಕವಾದ ಮತ್ತೊಂದು ಪ್ರಸಂಗ ಎಂಬುದು ನಿರ್ಣಯ (೯/೫೦, ೫೧).

ವಿಷ್ಣು ಬ್ರಹ್ಮ ಹಾಗೂ ಶಿವ ಮೊದಲಾದವರ ವರಗಳಲ್ಲಿನ ತಾರತಮ್ಯದ ವಿವರ ಇಲ್ಲಿಯ ಮತ್ತೊಂದು ಮಹತ್ವದ ಭಾಗ. ಬ್ರಹ್ಮದೇವರು ರಾಮನಿಗೆ ಒಪ್ಪಿಸಿದ ಗತಿದಾನದ ವರದಿಯಲ್ಲಿ ಭರತನ ತ್ಯಾಗದ ಹಿರಿಮೆ ಹಾಗೂ ಕೈಕೇಯಿಯಲ್ಲಿ ನಿಕೃತಿಯೆಂಬ ರಾಕ್ಷಸಿಯ ಆವೇಶವಿದ್ದ ವಿವರ ನಿರೂಪಿತವಾಗಿದೆ:

ಮಾತೃಣಾಂ ಚಾಪಿ ತಲ್ಲೋಕಸ್ತ್ವಯುತಾಬ್ದಾದಿತೋऽಗ್ರತಃ ।
ಅನರ್ಹಾಯಾಸ್ತ್ವಯಾऽऽಜ್ಞಪ್ತಾ ಕೈಕೇಯ್ಯಾ ಅಪಿ ಸದ್ಗತಿಃ ॥
ಸೂತ್ವಾ ತು ಭರತಂ ನೈಷಾ ಗಚ್ಛೇತ ನಿರಯಾನಿತಿ ।
ತಥಾऽಪಿ ಸಾ ಯದಾವೇಶಾಚ್ಚಕಾರ ತ್ವಯ್ಯತೋಭನಮ್ ॥
ನಿಕೃತಿರ್ನಾಮ ಸಾ ಕ್ಷಿಪ್ತಾ ಮಯಾ ತಮಸಿ ಶಾಶ್ವತೇ ।
ಕೈಕೇಯೀ ತು ಚಲಾನ್ ಲೋಕಾನ್ ಪ್ರಾಪ್ತಾ ನೈವಾಚಲಾನ್ ಕ್ವಚಿತ್ ॥
ಪಶ್ಚಾದ್ಭಕ್ತಿಮತೀ ಯಸ್ಮಾತ್ ತ್ವಯಿ ಸಾ ಯುಕ್ತಮೇವ ತತ್ ।
ಮಂಥರಾ ತು ತಮಸ್ಯಂಧೇ ಪಾತಿತಾ ದುಷ್ಪಚಾರಿಣೀ ॥ – (೯/೯೫-೯೮)

ಮೈಂದ ವಿವಿದರು ರಾಮನ ಹಿಂದೆ ತೆರಳದೆ ಇಲ್ಲಿಯೇ ಉಳಿಯಲು ಕಾರಣವೂ ಇಲ್ಲಿ ಉಕ್ತವಾಗಿದೆ. ಇಲ್ಲಿ ಬಂದಿರುವ ಶ್ರೀರಾಮರೂಪದ ವರ್ಣನೆ ಧ್ಯಾನಕ್ಕೆ ತುಂಬಾ ಉಪಯುಕ್ತ. ಇಲ್ಲಿನ ರಾಮಾಯಣದ ಆಕರಗಳ ಉಲ್ಲೇಖವೂ ಅಪೂರ್ವವಾದದ್ದು:

ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ ।
ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ ॥ – (೯/೧೨೪)

ನಿರ್ಣಯದ ವೈಶಿಷ್ಟ್ಯ, ಪುರುಷವ್ಯತ್ಯಾಸಾದಿಗಳ ನಿರೂಪಣೆ, ಸಪ್ತಭೇದಗಳ ವಿವರ – ಈ ಅಧ್ಯಾಯದ ವಿಶೇಷಾಂಶಗಳು.

ಹೀಗೆ ಈ ಅಧ್ಯಾಯದೊಂದಿಗೆ ರಾಮಾಯಣತಾತ್ಪರ್ಯನಿರ್ಣಯ ಮುಕ್ತಾಯವಾಗುವುದು. ಮಹಾಭಾರತದಲ್ಲಿ ರಾಮಾಯಣದ ಕಥೆಯೂ ಬಂದಿದೆ ಎಂಬ ಕಾರಣದಿಂದ ಅದರ ನಿರ್ಣಯವನ್ನೂ ಮಾಡಿರುವ ಆಚಾರ್ಯರು ರಾಮಾಯಣವು ಮಹಾಭಾರತಕ್ಕಿಂತ ಮುನ್ನವೇ ನಡೆದದ್ದು ಎಂಬ ಕಾರಣದಿಂದ ಮಹಾಭಾರತನಿರ್ಣಯಕ್ಕಿಂತ ಮುನ್ನವೇ ಅದನ್ನು ಮಾಡಿರುವರು. ಶ್ರೀರಾಮಾವತಾರವಾದದ್ದು ನವಮಿಯಂದು. ಶ್ರೀರಾಮ ಒಲಿಯುವುದು ನವವಿಧ ಭಕ್ತಿಗೆ. ಶ್ರೀರಾಮನ ಅವತಾರಕ್ಕಾಗಿ ದಶರಥರಾಜ ಯಜ್ಞ ಮಾಡಿದ್ದು ಒಂಭತ್ತು ಸಾವಿರ ವರ್ಷಗಳ ಕಾಲ.

ರಾಮಾಯಣಶ್ರವಣಕ್ಕೆ ವಿಹಿತವಾಗಿರುವುದು ನವಾಹ ವಿಧಿ. ಇವನ್ನೆಲ್ಲ ಸೂಚಿಸಲೋ ಎಂಬಂತೆ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ರಾಮಕಥೆಯ ನಿರ್ಣಯವನ್ನು ಒಂಭತ್ತನೆಯ ಅಧ್ಯಾಯದೊಂದಿಗೆ ಮುಕ್ತಾಯ ಮಾಡಿರುವರು ಎಂಬ ವಿಶೇಷವನ್ನು ಗುರುತಿಸಬಹುದು.

******

ಪ್ರಸುತ್ತ ಕೃತಿಯಲ್ಲಿ ಮೂಲಶ್ಲೋಕಗಳು, ಅದರ ಅನುವಾದ, ವಿವರಣೆ, ಸಂವಾದಿಯಾದ ಮೂಲಗ್ರಂಥಗಳ ಶ್ಲೋಕಗಳು, ಅಡಿಟಿಪ್ಪಣಿಯಲ್ಲಿ ವ್ಯಾಖ್ಯಾನಗಳ ವಿಶೇಷಾಂಶಗಳು ಮೊದಲಾದವುಗಳನ್ನು ಕೊಡಲಾಗಿದೆ. ಇತರ ವಿಶೇಷಾಂಶಗಳನ್ನು ಕೊನೆಯ ಸಂಪುಟದ ಮುನ್ನುಡಿಯಲ್ಲಿ ಕಾಣಬಹುದು.

******

ಮಹಾಭಾರತತಾತ್ಪರ್ಯನಿರ್ಣಯವನ್ನು ಅನುವಾದಿಸಿ ದಶಕಗಳೇ ಕಳೆದಿದ್ದರೂ ಸಹ ಆರ್ಥಿಕಸೌಲಭ್ಯದ ಕೊರತೆಯಿಂದಾಗಿ ಅದು ಬೆಳಕು ಕಾಣಲು ಸಾಧ್ಯವಾಗಿರಲಿಲ್ಲ. ಶ್ರೀಹರಿಗುರು–ಸೇವಾಪರಾಯಣರಾದ **ಶ್ರೀಮತಿ ಶುಭಾ ರಂಗನಾಥ್** ಮತ್ತು **ಶ್ರೀ ಡಿ.ಎಸ್.ರಂಗನಾಥ್** ದಂಪತಿಗಳು ಇದರ ಪ್ರಕಾಶನಕ್ಕೆ ಮುಂದೆ ಬಂದದ್ದರಿಂದ ಇದು ಈಗ ಬೆಳಕು ಕಾಣಲು ಸಾಧ್ಯವಾಗಿದೆ.

ಈ ದಂಪತಿಗಳು ನ್ಯೂಯಾರ್ಕ್‌ನಲ್ಲಿ ೧೧–೦೯–೨೦೦೧ರಂದು ಸಂಭವಿಸಿದ ವಿಶ್ವ ವಾಣಿಜ್ಯಕೇಂದ್ರದ ದುರಂತದಲ್ಲಿ ತಮ್ಮನ್ನು ಅಗಲಿದ ತರುಣನೂ, ಅಸಾಧಾರಣ ಪ್ರತಿಭಾಶಾಲಿಯೂ, ವಿನಯಾದಿಗುಣಸಂಪನ್ನನೂ, ವಿಶೇಷಕಾರ್ಯಕುಶಲನೂ, ಶ್ರೀಹರಿಗುರುಭಕ್ತನೂ ಆಗಿದ್ದ ಅವರ ಸುಪುತ್ರ **ಶ್ರೀನಿವಾಸ ಶ್ರೇಯಸ್** (೦೪/೦೧/೧೯೭೫ – ೧೧/೦೯/೨೦೦೧), ಬಿ.ಇ.(ಎಲೆಕ್ಟ್ರಾನಿಕ್ಸ್), (ಸೀನಿಯರ್ ಸಿಸ್ಟಮ್ಸ್ ಮ್ಯಾನೇಜರ್, ವಿಪ್ರೋ ಟೆಕ್ನಾಲಜಿ, ಬೆಂಗಳೂರು) – ಈತನ ಚಿರಸ್ಮರಣೆಗಾಗಿ, ಶ್ರೀಹರಿಲೋಕಪ್ರಾಪ್ತಿಗಾಗಿ ಪ್ರಸುತ್ತ ಈ ಮಹಾಭಾರತತಾತ್ಪರ್ಯನಿರ್ಣಯ ಅನುವಾದದ ಸಮಗ್ರ ಪ್ರಕಾಶನ ವೆಚ್ಚವನ್ನು ಭರಿಸಿ ಸೇವೆ ಸಲ್ಲಿಸಿರುವರು. ಮುಂದಿನ ಭಾಗಗಳನ್ನೂ ಸಹ ಇದೇ ರೀತಿ ಪ್ರಕಾಶನ ಪಡಿಸಲು ಅವರು ಸಂಕಲ್ಪಿಸಿ, ಶ್ರೀಹರಿಗುರುಗಳ ಸೇವೆಯನ್ನು ತುಂಬಾ ಶ್ರೇಷ್ಠಮಟ್ಟದಲ್ಲಿ ಮಾಡುತ್ತಿರುವರು. ಇಂತಹ ಅನುಪಮ ಪುಣ್ಯಕಾರ್ಯಕ್ಕಾಗಿ ಈ ದಂಪತಿಗಳನ್ನು ನಮ್ಮ ಪ್ರತಿಷ್ಠಾನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಅವರ ಸುಪುತ್ರನ ಸದ್ಗತಿಪ್ರಾಪ್ತಿಗಾಗಿ ಪ್ರಾರ್ಥಿಸುವಲ್ಲಿ ತಾನೂ ಭಾಗಿಯಾಗಿದೆ.

ಬೆಂಗಳೂರು — ವ್ಯಾಸನಕೆರೆ ಪ್ರಭಂಜನಾಚಾರ್ಯ

ತಾರಣ – ಬಲಿಪ್ರತಿಪತ್ (ದೀಪಾವಳಿ)

೧೩–೧೧–೨೦೦೪, ಶನಿವಾರ

॥ ಶ್ರೀಃ ॥

ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯಃ

॥ ಶ್ರೀಮದ್ವನುಮಧ್ರೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ಅಧ್ಯಾಯ - ೧

(ಸರ್ವಶಾಸ್ತ್ರಾರ್ಥನಿರ್ಣಯಃ)

(ಸೃಷ್ಟಿಯ ಪ್ರಾರಂಭ, ಶ್ರೀಹರಿಯ ಅಪೂರ್ವ ಮಹಿಮೆ, ಸಚ್ಛಾಸ್ತ್ರಗಳು, ಭಗವತತ್ವಗಳು,ಪಂಚಭೇದಗಳು, ಮೋಕ್ಷ ಸಾಧನಗಳು, ತಾರತಮ್ಯ)

ಮಂಗಲಾಚರಣೆ

ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯತಿಪ್ರದಾಯ ।
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ-
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥ ೧ ॥

ಅನುವಾದ: ಪರಿಪೂರ್ಣಗುಣಸಾಗರನೂ, ಜಗತ್ತಿಗೆ ಸೃಷ್ಟಿ, ಸ್ಥಿತಿ, ಪ್ರಲಯ ಮತ್ತು ಉತ್ಕೃಷ್ಟಪ್ರೇರಣೆಗಳನ್ನು ಉಂಟುಮಾಡುವವನೂ, ಜ್ಞಾನನೀಡುವವನೂ, ಸುರರಿಗೆ ಸುಖಕ್ಕೂ ಅಸುರರಿಗೆ ದುಃಖಕ್ಕೂ (ಮಿಶ್ರರಿಗೆ ದುಃಖಸಹಿತಸುಖಕ್ಕೂ) ಮುಖ್ಯಕಾರಣನೂ, ವಿಶಿಷ್ಟವೂ ವಿಲಕ್ಷಣವೂ ಆದ ರೀತಿಯಲ್ಲಿ ಸರ್ವತ್ರ ವ್ಯಾಪ್ತನೂ ಆದ ನಾರಾಯಣನೆ ನಿನಗೆ ವಂದನೆ, ವಂದನೆ.

ವಿವರಣೆ: ೧) ಶ್ರೀಮಧ್ವಾಚಾರ್ಯರು ಮಹಾಭಾರತಪ್ರತಿಪಾದ್ಯನೂ, ವ್ಯಾಸರೂಪದಿಂದ ಮಹಾಭಾರತವನ್ನು ರಚಿಸಿದವನೂ, ತಮಗೆ ಮಹಾಭಾರತತಾತ್ಪರ್ಯನಿರ್ಣಯವನ್ನು ರಚಿಸಲು ಆದೇಶವಿತ್ತವನೂ ಆದ ಶ್ರೀನಾರಾಯಣನಿಗೆ ವಂದಿಸುವ ಮೂಲಕ 'ಮಹಾಭಾರತ-ತಾತ್ಪರ್ಯನಿರ್ಣಯ'ವೆಂಬ ಈ ಗ್ರಂಥವನ್ನು ಹೀಗೆ ಪ್ರಾರಂಭಿಸುತ್ತಿರುವರು.

---

೧. ಹರೌ ಪರಮಾದರಯುಕ್ತವಂದನಸ್ಯೈವ ಮಂಗಲತ್ವಸೂಚನಾಯ ವಿಷ್ಣುಬಾಹುಲ್ಯೇ ಮಂಗಲಬಾಹುಲ್ಯ ಸೂಚನಾಯ ಚ ದ್ವಿರುಕ್ತಿಃ । -(ವಾ.)

೨) 'ಮಹಾಭಾರತತಾತ್ಪರ್ಯನಿರ್ಣಯ'ವು ಮಹಾಭಾರತ, ರಾಮಾಯಣ, ಹರಿವಂಶ, ಭಾಗವತದಶಮಸ್ಕಂಧ ಮೊದಲಾದ ಅನೇಕ ಮೂಲಗ್ರಂಥಗಳ ಅರ್ಥನಿರ್ಣಯಕ್ಕಾಗಿ ರಚಿತವಾಗಿರುವ ಅಪೂರ್ವಗ್ರಂಥ; 'ಸರ್ವಮೂಲ'ವೆಂದು ಪ್ರಸಿದ್ಧವಾಗಿರುವ ಅವರ ಮೂವತ್ತೇಳು ಗ್ರಂಥಗಳಲ್ಲಿ ಗಾತ್ರದಲ್ಲಿ ಇದು ಅತ್ಯಂತ ದೊಡ್ಡದು; ಒಟ್ಟು ೩೨ ಅಧ್ಯಾಯಗಳೂ, ಐದುಸಾವಿರಕ್ಕಿಂತ ಹೆಚ್ಚು ಶ್ಲೋಕಗಳೂ ಇದರಲ್ಲಿವೆ; ಇದರ ಮೊದಲನೆಯ ಅಧ್ಯಾಯದಲ್ಲಿ ಸರ್ವಶಾಸ್ತ್ರಾರ್ಥನಿರ್ಣಯವೂ, ಎರಡನೆಯ ಅಧ್ಯಾಯದಲ್ಲಿ ಸರ್ವಶಾಸ್ತ್ರಾರ್ಥನಿರ್ಣಯಕ್ಕೆ ಸಂವಾದಿಯಾದ ಮಹಾಭಾರತ ಶ್ಲೋಕಗಳ ಸಂಗ್ರಹವೂ ಬಂದಿದ್ದು ಮೂರನೆಯ ಅಧ್ಯಾಯದಲ್ಲಿ ಆದಿಯಿಂದ ರಾಮಾವತಾರದವರೆಗಿನ ಜಗತ್ಸೃಷ್ಟಿಯ ಕ್ರಮವೂ, ವರಾಹಾದಿ ಅವತಾರಗಳು ಶ್ರೀರಾಮಾವತಾರವೂ ವರ್ಣಿತವಾಗಿವೆ; ನಾಲ್ಕರಿಂದ ಒಂಭತ್ತರವರೆಗಿನ ಒಟ್ಟು ಆರು ಅಧ್ಯಾಯಗಳಲ್ಲಿ ಸಮಗ್ರರಾಮಾಯಣನಿರ್ಣಯವೂ, ಹತ್ತನೆಯ ಅಧ್ಯಾಯದಲ್ಲಿ ಶ್ರೀವೇದವ್ಯಾಸಾವತಾರವರ್ಣನೆಯೂ ಬಂದಿವೆ; ಹನ್ನೊಂದರಿಂದ ಮೂವತ್ತೆರಡನೆಯವರೆಗಿನ ಉಳಿದ ಇಪ್ಪತ್ತೆರಡು ಅಧ್ಯಾಯಗಳಲ್ಲಿ ಮಹಾಭಾರತನಿರ್ಣಯವು ಹರಿವಂಶ, ಶ್ರೀಮದ್ಭಾಗವತ ದಶಮಸ್ಕಂಧಗಳ ನಿರ್ಣಯಸಮೇತ ನಿರೂಪಿತವಾಗಿದೆ.

---

೧. ನಾರಾಯಣೇನಾಭಿಹಿತೋ ಬದರ್ಯಾಂ ತಸ್ಯೈವ ಶಿಷ್ಯೋ ಜಗದೇಕಭರ್ತುಃ। – (೩೨/೧೦೮)

೧. 'ಣಮು ಪ್ರಹ್ವೀಭಾವೇ ಶಬ್ದೇ ಚ' ಇತಿ ವಚನಾತ್ ವಪುಷಿ ಮನಸಿ ಚ ಪ್ರಹ್ವೀಭಾವಂ ವಚಸಿ ನಾರಾಯಣಾದಿ ಪುಣ್ಯನಾಮೋಚ್ಚಾರಣಂ ಚ ಸೂಚಯಿತುಂ ನಮಃ ಪದೇನೈವ ಸ್ವಮಂಗಲಮಭ್ಯಧತ್ತ। – (ವಾ.)

೧. ತ್ರಿವಿಧಾ ಹಿ ದೇವತಾ ವಂದ್ಯಾ ಭವತಿ। ವಿಶಿಷ್ಟಾऽಧಿಕೃತೇಷ್ಟಾ ಚೇತಿ – ನ್ಯಾಯಸುಧಾ

೧. ಅಥವಾ ನಾಯಂ ನಾರಾಯಣಶಬ್ದಃ ಡಿತ್ಥಾದಿ ಶಬ್ದ ಇವ ಭಗವತಿ ಸಾಂಕೇತಿಕೋ ಘಟಾದಿಶಬ್ದ ಇವ ರೂಢಿಮಾತ್ರಪ್ರವೃತ್ತಃ। ಕಿಂತು ವಿಶಿಷ್ಟಗುಣಾನ್ ವ್ಯಾಚಷ್ಟೇ। – ನ್ಯಾಯಸುಧಾ

೧. ಸ್ವೇನಾಪರೋಕ್ಷೀಕೃತಾಯೈವ ನಾರಾಯಣಾಯ ವಂದನಮಿದಂ ನ ತು ಅನ್ಯವತ್ ಪರೋಕ್ಷೀಕೃತಾಯೇತಿ ಸೂಚನಾಯ 'ತೇ ನಮಃ' ಇತ್ಯುಕ್ತಮ್। ಪ್ರತ್ಯಗಾತ್ಮನಾ ಸ್ವಹೃದಿ ದೃಶ್ಯಮಾನಾಯ ತುಭ್ಯಂ ನಮಃ ಇತ್ಯರ್ಥಃ। – (ವಾ.)

೧. ಗ್ರಂಥಕರಣಕಾಲೇऽಪಿ ಅಪರೋಕ್ಷೀಕೃತಭಗವದ್ರೂಪತ್ವಾತ್ 'ತೇ' ಇತ್ಯುಕ್ತಮ್। – (ಜ.)

೧. ಗುಣಾನಾಂ ಪ್ರತ್ಯೇಕಂ ಪರಿಪೂರ್ಣತ್ವೋಕ್ತ್ಯಾಽಽಕೈಕ ಗುಣಾನಾಮಪಿ ಅನ್ಯೇಷ್ವಸಂಭವೇನಾತಿ-

ವ್ಯಾಪ್ತ್ಯಾದಿ ದೋಷಾಭಾವಾತ್ ಅನಂತಾನಿ ಲಕ್ಷಣಾನಿ ಸಂಗೃಹೀತಾನಿ ಏಕೇನೈವ ಲಕ್ಷಣೇನ ಲಕ್ಷ್ಯನಿರ್ಧಾರಣಸಂಭವೇऽಪಿ ಅನಂತಲಕ್ಷಣಕಥನಂ ಭಗವತೋ ಜೀವೇಭ್ಯೋ ಅತ್ಯಂತ ವ್ಯಾವೃತ್ತಿಸಾಧನಾರ್ಥಮ್। ಇತರಾಸಾಧಾರಣಾನಂತಶುಭಗುಣವತ್ತ್ವೇನ ಭಗವತೋ ಮಹಾಮಾಹಾತ್ಮ್ಯಬೋಧನಾರ್ಥಂ ಚ। – (ವಾ.)

ಉತ್ಪತ್ತಿಃ ಕೇಷಾಂಚಿಜ್ಜಡಾನಾಂ ಅಭೂತ್ವಾಭಾವಿತ್ವಮ್। ಕೇಷಾಂಚಿಜ್ಜೀವಾನಾಂ ಶರೀರಸಂಬಂಧಃ। ಕೇಷಾಂಚಿಜ್ಜಡಾನಾಂ ಉಪಚಯಃ। ಕೇಷಾಂಚಿಜ್ಜೀವಾನಾಂ ಪರಾಧೀನವಿಶೇಷಾವಾಪ್ತಿಃ। – (ಜ.)

ಲಯಶ್ಚ ಕೇಷಾಂಚಿನ್ನುತಃ। ಕೇಷಾಂಚಿಚ್ಛರೀರವಿಯೋಗಃ। ಕೇಷಾಂಚಿದುಪಚಯನಾಶಃ। ಕೇಷಾಂಚಿದತಿಸಾಮಿಪ್ಯಮ್। ಪಾಲನಂ ತು ಸರ್ವೇಷಾಂ ಸಮಮ್। ನಿತ್ಯಾನಿತ್ಯ ಸತ್ತಾಯಾಸ್ತದಧೀನತ್ವಾತ್। – (ಜ.)

೩) ಇಲ್ಲಿಯ ನಾರಾಯಣನವನವನು ಗ್ರಂಥಾರಂಭಕ್ಕೆ ಅವಶ್ಯವಾದ ಮಂಗಲಾಚರಣೆ–ಯಾಗಿದೆ; 'ಅಖಣಾಶ್ಮಸಮ'ರಾದ ಶ್ರೀವಾಯುದೇವರ ಅವತಾರರಾದ ಶ್ರೀಮದಾಚಾರ್ಯರಿಗೆ ವಿಘ್ನಗಳ ಭಯ ಎಂದೂ ಇಲ್ಲವಾದರೂ ನಿರ್ವಿಘ್ನಪರಿಸಮಾಪ್ತಿಗಾಗಿ ವಿಹಿತರೀತಿಯ ಮಂಗಲವು ಅವಶ್ಯ ಎಂಬ ತತ್ತ್ವವನ್ನು ಶಿಷ್ಯರಿಗೆ ತಿಳಿಸುವ ಸಲುವಾಗಿಯೇ ಈ ರೀತಿ ಮಂಗಲವನ್ನು ಆಚರಿಸಿರುವರು.

೪) 'ನವೋ ನಮಃ' ಎಂಬ ದ್ವಿರುಕ್ತಿಯು ನಮಸ್ಕಾರದ ಹಿಂದಿನ ಪರಮಾದರವನ್ನು ಸೂಚಿಸುವುದು; ವಿಘ್ನಬಾಹುಲ್ಯಪರಿಹಾರಕ್ಕೆ ಮಂಗಲಬಾಹುಲ್ಯವು ಅತ್ಯವಶ್ಯ ಎಂಬುದೂ ಇಲ್ಲಿ ಧ್ವನಿತ. 'ಣಮು ಪ್ರಹ್ವತ್ವೇ ಶಬ್ದೇ ಚ' ಎಂದು ಧಾತುಪಾಠವಿರುವುದರಿಂದ, ಇಲ್ಲಿಯ ನಮ್ರತೆ ದೇಹ ಮನಸ್ಸು ಎರಡಕ್ಕೂ ಅನ್ವಯಿಸುತ್ತದೆ; ಆದ್ದರಿಂದ ಒಟ್ಟಾಗಿ ಇಲ್ಲಿ ಕಾಯಿಕ, ವಾಚನಿಕ ಮತ್ತು ಮಾನಸಿಕ ಎಂಬ ತ್ರಿವಿಧಮಂಗಲವನ್ನೂ ಆಚರಿಸಿದಂತೆ ಆಗಿದೆ.

೫) 'ವಿಶಿಷ್ಟ,, ಇಷ್ಟ ಮತ್ತು ಗ್ರಂಥಪ್ರತಿಪಾದ್ಯ ಎಂಬುದಾಗಿ ನಮ್ಯ ದೇವತೆ ಮೂರುವಿಧ; ನಾರಾಯಣನು ಸರ್ವೋತ್ತಮನಾದ್ದರಿಂದ ವಿಶಿಷ್ಟದೇವತೆ; ಜೀವೋತ್ತಮರಾದ ಶ್ರೀಮದಾಚಾರ್ಯರಿಗೆ ಇಷ್ಟದೇವತೆ; ಮಹಾಭಾರತಕ್ಕೆ ಪ್ರತಿಪಾದ್ಯದೇವತೆ; ಆದ್ದರಿಂದ ಇಲ್ಲಿ ಅವನನ್ನು ವಂದಿಸಿರುವುದು ತ್ರಿವಿಧ ದೇವತಾನಮನವೂ ಆಗಿರುವುದು ವಿಶೇಷ.

---

೧. ಉನ್ನಿಯತಿಃ ತತ್ತ್ವದೇವೇಷು ಸ್ಥಿತ್ವಾ ತಾನ್ ಪ್ರೇರಯಿತ್ವಾ ऽಸ್ಯ ಪ್ರೇರಣಮ್ ।

೧. ಜ್ಞಾನಪ್ರದಾಯೇತ್ಯುಪಲಕ್ಷಣಮ್ । ಅಜ್ಞಾನಪ್ರದಾಯೇತ್ಯಪಿ ಗ್ರಾಹ್ಯಮ್ । ಯದ್ವಾ ಜ್ಞಾನಪ್ರದೇನ ಸಜ್ಞಾನಂ ಮಿಥ್ಯಾಜ್ಞಾನಂ ಚ ಗ್ರಾಹ್ಯಮ್ । ಜ್ಞಾನಪ್ರದಾನಂ ಚೇತನಮಾತ್ರಸಾಧಾರಣಮ್ । –(ಜ.)

ಉತ್ತಮಾಧಿಕಾರಿಣಾಂ ಉತ್ತಮಂ ಜ್ಞಾನಮ್ । ಮಧ್ಯಮಾಧಿಕಾರಿಣಾಂ ಮಧ್ಯಮಂ ಜ್ಞಾನಮ್ । ಅಧಮಾಧಿಕಾರಿಣಾಂ ಅಧಮಂ ಜ್ಞಾನಮಿತಿ ಜ್ಞಾನೇ ವಿವೇಕಸೂಚನಾಯ ಜಡೇಷು ಜ್ಞಾನಪ್ರದತ್ವಾಯೋಗೇನ ಚ ಜ್ಞಾನಪ್ರದತ್ವಸ್ಯ ಸೃಷ್ಟ್ಯಾದಿತಃ ಪೃಥಗುಕ್ತಿಃ । ಜ್ಞಾನಸಾಮಾನ್ಯಪದಂ ಚ । –(ವಾ.)

೧. ವಿಬುಧಾಸುರಪದಾಭ್ಯಾಂ ಸದಸತೌ ಉಚ್ಯೇತೇ। –(ಜ.)

೧. ವಿಬುಧಪದಮಸುರಪದಂ ಚ ಅಜಹತ್ಸ್ವಾರ್ಥಲಕ್ಷಣಯಾ ಉತ್ತಮಜೀವಾನಧಮಜೀವಾಂಶ್ಚ ಸಂಗೃಹ್ಣಾತಿ। ಉಭಾಭ್ಯಾಮುಭಯಸ್ವಭಾವಾಃ ಮಧ್ಯಮಜೀವಾಶ್ಚ ಸಂಗೃಹೀತಾಃ । ಉತ್ತರಶ್ಲೋಕೇ ಮನುಜಪದೇನ ಮಧ್ಯಮಾನಾಮಪಿ ವಕ್ಷ್ಯಮಾಣತ್ವಾತ್। –(ವಾ.)

ಸುಖಿನೋ ಭಾವಃ ಸೌಖ್ಯಮ್ । ಸ್ವಾಭಾವಿಕಸುಖಮಿತಿ ಯಾವತ್ । ಮತುಪಾ ಸುಖೇ ಪ್ರಾಶಸ್ತ್ಯೇ ಸ್ವರೂಪೇಣೈವ ।ತೇನ ವಿಶೇಷಶಕ್ತ್ಯಾ ಸುಖಿತ್ವಂ ಸುಖಿತ್ವಂ ಚ ಭವತೀತಿ ಸೂಚನಾಯ ಸೌಖ್ಯಪದಂ ಪ್ರಾಯೋಜಿ । ಉತ್ತಮೇಷ್ವಧಮೇಷು ಚ ಪ್ರತ್ಯೇಕಂ ಸುಖದುಃಖಯೋಃ ಕಾರಣತ್ವಂ ಚ ಸಂಗೃಹೀತುಂ ಸಮಸ್ತಪದಮ್ । ಪ್ರಷ್ಟತ್ವಾದೀನಾಂ ಚ ಭಗವದ್ಗುಣತ್ವಾತ್ ಪ್ರಾಚೀನಲಕ್ಷಣೇ ಸಾಮಾನ್ಯೇನೋಕ್ತಾನಾಂ ಗುಣಾನಾಂ ಚ ಪ್ರಪಂಚನಂ ಉತ್ತರವಿಶೇಷಣಚತುಷ್ಟಯೇನ ಕೃತಂ ಭವತೀತಿ ಸಕಲಮತಿಮಂಗಲಂಮ್ । –(ವಾ.)

೬) 'ನಾರಾಯಣ' ಎಂಬ ಪದವು ಕೇವಲ ಸಾಂಕೇತಿಕವಲ್ಲ; ರೂಢವೂ ಅಲ್ಲ; ಆದರೆ ಅನ್ವರ್ಥಕ; ಗುಣಪೂರ್ಣ, ದೋಷದೂರ, ಜ್ಞಾನಗಮ್ಯ. ಮುಕ್ತಪ್ರಾಪ್ಯ ಮೊದಲಾದ ಅರ್ಥಗಳಿಂದಾಗಿ ಬ್ರಹ್ಮಮೀಮಾಂಸಾಶಾಸ್ತ್ರದ ನಾಲ್ಕುಅಧ್ಯಾಯಗಳ ಅರ್ಥವೂ ಆಗಿದೆ. 'ಪ್ರಲಯಜಲದಲ್ಲಿ ಪವಡಿಸಿದವನು' ಎಂಬ ಅರ್ಥದಿಂದಾಗಿ ಅವನ ಸರ್ವೋತ್ತಮತ್ವಕ್ಕೂ ಗಮಕ; ಅವನ ಕ್ಷರಾಕ್ಷರಪುರುಷೋತ್ತಮತ್ವವೂ ಇದರಿಂದ ಸೂಚಿತ; ಮೇಲಾಗಿ ಮಹಾಭಾರತ ಪ್ರತಿಪಾದ್ಯನಾದ ಶ್ರೀಕೃಷ್ಣನೂ ಅವನೇ; ಅದನ್ನು ಬರೆದ ಶ್ರೀವೇದವ್ಯಾಸರೂ ಅವನೇ; ಶ್ರೀಮದಾಚಾರ್ಯರಿಗೆ 'ಮಹಾಭಾರತತಾತ್ಪರ್ಯನಿರ್ಣಯ'ವನ್ನು ರಚಿಸಲು ಆದೇಶವಿತ್ತವನೂ ಅವನೇ. ಆದ್ದರಿಂದ ಇಲ್ಲಿಯ 'ನಾರಾಯಣ' ಪದವು ಅತ್ಯಂತ ಸಾರ್ಥಕವಾದುದು. ನಾರಯಣ ಶಬ್ದಕ್ಕೆ ದರಹಳಿ ಶ್ರೀನಿವಾಸಾಚಾರ್ಯರು ೭೨ ಅರ್ಥಗಳನ್ನು, ಶ್ರೀವಿಜಯೀಂದ್ರತೀರ್ಥರು ೧೦೮ ಅರ್ಥಗಳನ್ನು ಬರೆದಿರುವರು.

೭) ಪರಮಾತ್ಮನು ತಮಗೆ ಇತರರಂತೆ ಪರೋಕ್ಷನಲ್ಲ ; ಸದಾ ಅಪರೋಕ್ಷ ಎಂಬುದನ್ನು 'ತೇ'–(ನಿನಗೆ) ಎಂಬ ಪದದಿಂದ ತಿಳಿಸಿರುವರು; 'ನಿನಗೆ' ಎಂದು ಹೇಳುವುದು ಸಾಕ್ಷಾತ್ತಾಗಿ ಕಾಣುವ ವ್ಯಕ್ತಿಗೇ ತಾನೇ?

೮) **'ಪರಿಪೂರ್ಣಗುಣಾರ್ಣವಾಯ'** – ಇಲ್ಲಿ 'ಪರಿಪೂರ್ಣಗುಣಗಳು' ಎಂದರೆ ಸರ್ವ–ಕಾಲ ಸರ್ವದೇಶಗಳಲ್ಲೂ ನಿರವಧಿಕವಾಗಿ ಪೂರ್ಣವಾಗಿರುವ ಗುಣಗಳು ಎಂದರ್ಥ. ಪರಮಾತ್ಮನ ಅಂತಹ ಗುಣಗಳು ಅನಂತ ಎಂಬುದು 'ಸಮುದ್ರ'ದ ಉಪಮೆಯಿಂದ ಸೂಚಿತವಾಗಿದೆ.

೯) 'ಉನ್ನಿಯತಿ' ಎಂದರೆ 'ಉತ್ಕೃಷ್ಟಪ್ರೇರಣೆ' ಎಂದರ್ಥ; 'ಪ್ರೇರಕತ್ವ'ವು ತತ್ತ್ವಾಭಿಮಾನಿದೇವತೆಗಳಿಗೂ ಸಹ ಇದೆ; ಆದರೆ ಅದು ಸ್ವತಂತ್ರವಾದುದಲ್ಲ; ಸಮಗ್ರವೂ ಅಲ್ಲ;

---

೧. ಕಾಲಾದ್ಯಷ್ಟಾದಿ ಸಾಧಾರಣಕಾರಣಾದಿವ್ಯವಚ್ಛೇದಾಯ ಸದಿತಿ ವಿಶೇಷಣಮ್ ।
'ಸಚ್ಛಬ್ದ ಉತ್ತಮಂ ಬ್ರೂಯಾದಿ'ತಿ ವಚನಾದುತ್ತಮಕಾರಣಾಯೇತ್ಯರ್ಥಃ । –(ವಾ.)
ನ ಚ ಕರ್ಮವಿಮಾಮಲಕಾಲಗುಣಪ್ರಭೃತೀಶಮಚಿತ್ತನು ತದ್ಧಿಯತಃ । –ದ್ವಾದಶಸ್ತೋತ್ರ(೩/೬)

೧. ಸ್ವತಂತ್ರತ್ವಾತ್ ಭಗವತ್ತತೇಃ ಪರತಂತ್ರಗಮನಾದಿತತಿತೋಽಪಿ ವೈಲಕ್ಷಣ್ಯಸೂಚನಾಯ ಪರೋದೀರಿತ ಸಕಲವಸ್ತ್ವಾತ್ಮಕರೂಪತತಿನಿರಾಕರಣಾಯ ಚ ವೀತ್ಯುಪಸರ್ಗಃ । ವಿ ವಿಶೇಷೇಣ ವಿಲಕ್ಷಣತಯಾ ಚ ತತಾಯ ಇತ್ಯರ್ಥಃ। – ಭಾವಪ್ರಕಾಶಿಕಾ

೧. ಗುಣಾನಾಂ ಪ್ರತ್ಯೇಕಂ ಪರಿಪೂರ್ಣತ್ವೋಕ್ತ್ಯಾ ಏಕೈಕಗುಣಾನಾಮಪಿ ಅನ್ಯೇಷ್ವಸಂಭವೇನ ಅತಿವ್ಯಾಪ್ತ್ಯಾದಿ-ದೋಷಾಭಾವಾತ್ ಅನಂತಾನಿ ಲಕ್ಷಣಾನಿ ಸಂಗೃಹೀತಾನಿ । – (ವಾ)

೧. ಸ್ರಷ್ಟೃತ್ವಾದೀನಾಂ ಚ ಭಗವದ್ಗುಣತ್ವಾತ್ ಪ್ರಾಚೀನಲಕ್ಷಣೇ ಸಾಮಾನ್ಯೇನೋಕ್ತಾನಾಂ ಚ ಪ್ರಪಂಚನಂ ಚೋತ್ತರವಿಶೇಷಣಚತುಷ್ಟಯೇನ ಕೃತಂ ಭವತೀತಿ ಸಕಲಮತಿಮಂಗಲಮ್। –(ವಾ)

ಅವರಲ್ಲೂ ನಿಂತು ಪ್ರೇರಿಸುವ ನಾರಾಯಣನು ಸಕಲರಿಗೂ, ಸರ್ವದಾ, ಸರ್ವತ್ರ, ಸರ್ವರೀತಿಯಲ್ಲಿ ಸ್ವತಂತ್ರಪ್ರೇರಕನಾಗಿರುವನು ಎಂಬ ಭಾವವು 'ಉತ್' ಎಂಬ ಉಪಸರ್ಗದಿಂದ ಸೂಚಿತ.

೧೪ 'ಜ್ಞಾನಪ್ರದಾಯ' ಎಂಬುದಕ್ಕೆ ಸಾತ್ವಿಕರಿಗೆ ಸುಜ್ಞಾನವನ್ನೂ, ತಾಮಸರಿಗೆ ಮಿಥ್ಯಾಜ್ಞಾನವನ್ನೂ, ರಾಜಸರಿಗೆ ಸಂಶಯಜ್ಞಾನವನ್ನೂ ಕೊಡುವವನು ಎಂದರ್ಥ; 'ಜ್ಞಾನಂ ಪ್ರಕರ್ಷೇಣ ದದಾತಿ', 'ಜ್ಞಾನಂ ಪ್ರಕರ್ಷೇಣ ದ್ಯತಿ(ಖಂಡಯತಿ)' ಎಂಬ ವ್ಯುತ್ಪತ್ತಿಗಳಿಂದ (ಜ್ಞಾನಪ್ರದಾಯ) ಎಂಬ ಪದದಲ್ಲೇ ಈ ಅರ್ಥ ಅಡಗಿದೆ.

೧೧) ವಿಬುಧ ಮತ್ತು ಅಸುರ ಎಂಬ ಪದಗಳಿಗೆ ಇಲ್ಲಿ ಕ್ರಮವಾಗಿ ಸಾತ್ವಿಕರು ಮತ್ತು ತಾಮಸರು ಎಂಬ ಭಾವ ವಿವಕ್ಷಿತ; ರಾಜಸರು ಇಲ್ಲಿ ಉಪಲಕ್ಷಿತ; ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ತ್ರಿವಿಧಚೇತನರಿಗೆ ಕ್ರಮವಾಗಿ ಮೋಕ್ಷ, ನಿತ್ಯಸಂಸಾರ ಮತ್ತು ಅಂಧಂತಮಸ್ಸು ಎಂಬ ಫಲಗಳನ್ನು ಕೊಡುವವನು ಎಂದು ಭಾವ.

೧೨) ಜೀವರ ಸುಖ, ದುಃಖಾದಿಗಳಿಗೆ ಕಾಲ ಅದೃಷ್ಟ ಮೊದಲಾದ ಇತರ ಅನೇಕ ಕಾರಣಗಳು ಸಹ ಇದ್ದರೂ, ಅವಕ್ಕೂ ಕಾರಣನಾದ ಪರಮಾತ್ಮನೇ ಎಲ್ಲಕ್ಕಿಂತಲೂ 'ಉತ್ತಮ ಕಾರಣ' ಎಂಬುದು ಇಲ್ಲಿ 'ಸತ್' ಎಂಬ ವಿಶೇಷಣದಿಂದ ಸೂಚಿತವಾಗಿದೆ. ('ಸಚ್ಛಬ್ದಃ ಉತ್ತಮಂ ಬ್ರೂಯಾತ್')

೧೩) ಪರಮಾತ್ಮನ ವ್ಯಾಪ್ತಿಯು ದೇಶ, ಕಾಲಾದಿಗಳಂತೆ ಸಾಮಾನ್ಯವ್ಯಾಪ್ತಿಯಾಗಿರದೆ, ವಿಶಿಷ್ಟವೂ, ವಿಲಕ್ಷಣವೂ ಆಗಿದೆ ಎಂಬುದು 'ವಿ' ಉಪಸರ್ಗದಿಂದ ಸೂಚಿತವಾಗಿದೆ; ದೇಶತಃ, ಕಾಲತಃ, ಗುಣತಃ ಎಂಬುದಾಗಿ ಅವನ ವ್ಯಾಪ್ತಿ ತ್ರಿವಿಧವಾದುದು ಎಂದು ಭಾವ. ಸರ್ವತ್ರ ವ್ಯಾಪ್ತನಾದವನಿಗೆ ಸರ್ವಕಾರಣತ್ವವು ಯುಕ್ತವಾಗಿದೆ ಎಂದೂ ಭಾವ.

೧೪) **'ಪರಿಪೂರ್ಣಗುಣಾರ್ಣವಾಯ'** – ಎಂಬ ಪದದಿಂದ ಸಮನ್ವಾಯಾಧ್ಯಾಯ, ಅವಿರೋಧಾಧ್ಯಾಯಗಳ ಭಾವವೂ, **ಜ್ಞಾನಪ್ರದಾಯ** ಎಂಬುದರಿಂದ ಸಾಧನಾಧ್ಯಾಯದ ಭಾವವೂ, **ವಿಬುಧಾಸುರಸೌಖ್ಯದುಃಖಸತ್ಕಾರಣಾಯ** ಎಂಬ ಪದದಿಂದ ಫಲಾಧ್ಯಾಯದ ಅರ್ಥವೂ ಸೂಚಿತವಾಗಿರುವುದರಿಂದ ಈ ಶ್ಲೋಕವು ಬ್ರಹ್ಮಸೂತ್ರಾರ್ಥಸಂಗ್ರಹರೂಪವೂ ಆಗಿದೆ.

೧೫) ಗುಣಗಳನ್ನು ಪ್ರತ್ಯೇಕವಾಗಿ ಪ್ರತಿಯೊಂದೂ ಪರಿಪೂರ್ಣ ಎಂದು ಕರೆದಿರುವುದರಿಂದ ಒಂದೊಂದು ಗುಣವೂ ಇತರರಿಗೆ ಅಸಂಭಾವಿತವಾದ್ದರಿಂದ ಅತಿವ್ಯಾಪ್ತ್ಯಾದಿ ದೋಷವಿಲ್ಲದಂತೆ ಪ್ರತ್ಯೇಕವಾಗಿಯೇ ನಾರಾಯಣನ ಲಕ್ಷಣವಾಗಿದ್ದು ಅವನಿಗೆ ಅನಂತಲಕ್ಷಣಗಳು ಸಹ ಇದರಿಂದ ಸಂಗೃಹೀತವಾಗಿವೆ.

೧೬) **'ಪರಿಪೂರ್ಣಗುಣಾರ್ಣವಾಯ'** ಎಂಬ ಪ್ರಥಮವಿಶೇಷಣಕ್ಕೆ ಇತರ ಲಕ್ಷಣಗಳು ವಿವರಣರೂಪವೂ ಆಗಿವೆ.

೧೭) ಇಲ್ಲಿ ಹೇಳಿರುವ ಕಾರ್ಯಗಳಲ್ಲಿ ಸೃಷ್ಟಿ, ಸ್ಥಿತಿ, ಲಯ ಮತ್ತು ಉನ್ನಿಯತಿ ಎಂಬ ನಾಲ್ಕು ಜಡ ಮತ್ತು ಚೇತನ ಎರಡಕ್ಕೂ ಸಮಾನ; ಜ್ಞಾನ ಎಂಬುದು ಚೇತನರಿಗೆ ಮಾತ್ರ; ಕೇವಲ ಸುಖವು ಸಾತ್ವಿಕರಿಗೆ, ಕೇವಲದುಃಖ ತಾಮಸರಿಗೆ ಮೊದಲಾಗಿ ತಿಳಿಯಬೇಕು.

೧೮) ಇದು ಮಹಾಭಾರತಾದಿ ಸಕಲಗ್ರಂಥಗಳ ಮಹಾತಾತ್ಪರ್ಯವೂ ಆಗಿದೆ.

ಸೃಷ್ಟಿಯ ಆದಿಯಲ್ಲಿ ಭಗವತ್ಸ್ಥಿತಿಯ ವರ್ಣನೆ

ಆಸೀದುದಾರಗುಣವಾರಿಧಿರಪ್ರಮೇಯೋ
ನಾರಾಯಣಃ ಪರತಮಃ ಪರಮಾತ್ ಸ ಏಕಃ ।
ಸಂಶಾಂತಸಂವಿದಖಿಲಂ ಜಠರೇ ನಿಧಾಯ
ಲಕ್ಷ್ಮೀಭುಜಾಂತರಗತಃ ಸ್ವರತೋಽಪಿ ಚಾಗ್ರೇ ॥ ೨ ॥

ಅ: ಅಪ್ರಮೇಯನೂ, ಉತ್ತಮರಾದ ಬ್ರಹ್ಮಾದಿಗಳಿಗಿಂತಲೂ ಉತ್ತಮರಾದ ಮಹಾಲಕ್ಷ್ಮಿಗಿಂತ ಶ್ರೇಷ್ಠನೂ ಆದ ನಾರಾಯಣನು ತಾನೊಬ್ಬನೇ ಸಕಲಜಗತ್ತಿನ ಸೃಷ್ಟಿಗಿಂತ ಮುಂಚೆ ತನ್ನ ಬುದ್ಧಿಯಲ್ಲಿ ಅಡಗಿದ ಜ್ಞಾನ ಉಳ್ಳವನಾಗಿ ಸಕಲ ಜಗತ್ತನ್ನೂ ತನ್ನ ಉದರದಲ್ಲಿರಿಸಿಕೊಂಡವನಾಗಿ, ಮಹಾಲಕ್ಷ್ಮಿಯ ತೋಳುಗಳ ಮಧ್ಯೆ ಸ್ವರತನಾಗಿಯೇ ಇದ್ದ.

ವಿ: ೧) ಮಂಗಲಶ್ಲೋಕದಲ್ಲಿ ತಿಳಿಸಿದ ನಾರಾಯಣನ ಜಗತ್ಸೃಷ್ಟ್ಯಾದಿಕರ್ತೃತ್ವವನ್ನು ವಿವರಿಸಲು ಹೊರಟ ಶ್ರೀಮದಾಚಾರ್ಯರು ಈ ಶ್ಲೋಕದಲ್ಲಿ ಸರ್ವಸೃಷ್ಟಿಕರ್ತನಾದ ನಾರಾಯಣನು ತಾನು ಸೃಷ್ಟಿಸುವ ಸಕಲ ಜಗತ್ತಿಗಿಂತಲೂ ಮುಂಚೆ ಇದ್ದ ಪರಿಯನ್ನು ತಿಳಿಸಿರುವರು.

೨) ಪ್ರಲಯಕಾಲದಲ್ಲಿ ನಾರಾಯಣನೊಬ್ಬನೇ ಇದ್ದ; ಅವನು ಅನಂತಗುಣಸಾಗರ; ಅಪ್ರಮೇಯ; ಬ್ರಹ್ಮಾದಿಗಳಿಗಿಂತ ಉತ್ತಮರಾದ ಮಹಾಲಕ್ಷ್ಮಿಗಿಂತಲೂ ಉತ್ತಮ; ಆದ್ದರಿಂದಲೇ

---

೨. ಉಪದೇಶ್ಯಾನಾಂ ಬ್ರಹ್ಮಾದೀನಾಂ ಪ್ರಲಯೇ ಅಭಾವಾತ್ ಸ್ವನಿಯಮ್ಯ ಜಗತೋ ಅಭಾವಾಚ್ಚ ಸ್ವಬುದ್ಧಿಸ್ಥಾನಂತವೇದಪ್ರತಿಬೋಧನಾಯ ಹೃದ್ಯೇವ ಸಮ್ಯಕ್ ನಿಗೂಢಾ ಸಂವಿತ್ ಯಸ್ಯ ಸ ತಥೋಕ್ತಃ । – (ವಾ.)

೨ ಸಂಶಾಂತಾ ವಿನಷ್ಟಾಸಂವಿತ್ ಜ್ಞಾನಂ ಯಸ್ಯ ತದಖಿಲಂ ಜಗತ್। – (ಜ.)

೨. ಲಕ್ಷ್ಮ್ಯಾಲಿಂಗನೇನ ತಸ್ಯಾ ಆನಂದಾಭಿವ್ಯಕ್ತಿರೂಪಪ್ರಯೋಜನಸದ್ಭಾವೇಽಪಿ ಭಗವತಃ ಸದಾಭಿವ್ಯಕ್ತಾನಂದರೂಪತ್ವೇನ ತದಪಿ ನಾಸ್ತೀತಿ ಸೂಚನಾಯ ಸ್ವರತ ಇತ್ಯುಕ್ತಮ್ । ತಸ್ಯಾಂ ಸುಷ್ಠು ಆರತಃ ಸ್ವಸ್ಮಿನ್ನೇವ ರತಃ ಆನಂದಮನುಭವನ್ನಿತ್ಯರ್ಥಃ । – (ವಾ.)

ಸರ್ವೋತ್ತಮ; ಆಗ ಬ್ರಹ್ಮಾದಿ ಸ್ಥಾವರಜಂಗಮಾತ್ಮಕವಾದ ಜಗತ್ತೆಲ್ಲ ಅವನ ಉದರದಲ್ಲಿತ್ತು ಅವನು ಲಕ್ಷ್ಮ್ಯಾಲಿಂಗಿತನಾಗಿದ್ದರೂ ಸ್ವರಮಣ.

೩) ಉದರದಲ್ಲಿದ್ದ ಇತರ ಜಗತ್ತಿಗಿಂತಲೂ ಅವನನ್ನು ಆಲಿಂಗಿಸಿಕೊಂಡಿದ್ದ ಮಹಾಲಕ್ಷ್ಮಿಯು ಶ್ರೇಷ್ಠರು; ಆಲಿಂಗಿತನಾದ ನಾರಾಯಣನು ಸರ್ವೋತ್ತಮನು ಎಂದೂ ಭಾವ.

೪) **ಸಂಶಾಂತಸಂವಿತ್:** ಉಪದೇಶಕ್ಕೆ ಅರ್ಹರಾದ ಬ್ರಹ್ಮಾದಿ ಅಧಿಕಾರಿಗಳೆಲ್ಲರು ಉದರದಲ್ಲಿದ್ದರಿಂದ ಪರಮಾತ್ಮನು ಎಲ್ಲ ಜ್ಞಾನವನ್ನು ತನ್ನ ಬುದ್ಧಿಯಲ್ಲೇ ಅಡಗಿಸಿಕೊಂಡಿದ್ದನು.

'ಸಂಶಾತಸಂವಿತ್' ಎಂಬುದನ್ನು 'ಜಗತ್' ಎಂಬುದಕ್ಕೆ ವಿಶೇಷಣವಾಗಿಯೂ ಅನ್ವಯ ಮಾಡಿಕೊಳ್ಳಬಹುದು. ಆಗ ಅದಕ್ಕೆ 'ವಿನಷ್ಟ ಜ್ಞಾನವಾಗಿದ್ದ ಜಗತ್ತನ್ನು' ಎಂದು ಅರ್ಥವಾಗುವುದು.

೫) ನಾರಾಯಣನನ್ನು ಆಲಿಂಗಿಸಿಕೊಂಡಿದ್ದರಿಂದ ಆನಂದವು ಮಹಾಲಕ್ಷ್ಮಿಗೇ ಹೊರತು ನಾರಾಯಣನಿಗಲ್ಲ ಎಂದರ್ಥ; ಅವನು ಸ್ವರತ ಸ್ವರಮಣ.

ಭಗವದುದರದಲ್ಲಿ ತ್ರಿವಿಧ ಜೀವರು ಇರುವ ರೀತಿ

ತಸ್ಯೋದರಸ್ಥಜಗತಃ, ಸದಮಂದಸಾಂದ್ರ-
ಸ್ವಾನಂದತುಷ್ಟವಪುಷೋಽಪಿ ರಮಾರಮಸ್ಯ ।
ಭೂತ್ಯೈ ನಿಜಾಶ್ರಿತಜನಸ್ಯ ಹಿ ಸೃಜ್ಯಸೃಷ್ಟಾ-
ವೀಕ್ಷಾ ಬಭೂವ ಪರನಾಮನಿಮೇಷಕಾಂತೇ ॥ ೩ ॥

ಅ: ಸಕಲಜಗತ್ತನ್ನೂ ತನ್ನ ಉದರದಲ್ಲಿ ಧರಿಸಿದ ಆ ನಾರಾಯಣನಿಗೆ, ಅವನು ನಿರ್ದೋಷವೂ ಪೂರ್ಣವೂ ವ್ಯಾಪ್ತವೂ ಸ್ವರೂಪಭೂತವೂ ಆದ ಆನಂದದಿಂದ ಸಂತೃಪ್ತ

---

೩. ರಮಾಯಾಃ ಮಮ ಭರ್ತಾ ಏತಾದೃಶೈಶ್ಚರ್ಯವಾನಿತಿ ಹರ್ಷೋದ್ರೇಕ ಏವ ಭೂತಿಃ ಅನ್ಯೇಷಾಂ ಸತ್ಯಲೋಕಾದಿಪ್ರಾಪ್ತಿರೇವ ಭೂತಿರಿತಿ ಜ್ಞೇಯಮ್ । –(ವಾ.)

೩. ನ ಪ್ರಯೋಜನವತ್ತ್ವಾತ್ -ಈಶ್ವರಪ್ರವೃತ್ತೇಃ ಸರ್ವತ್ರ ಸ್ವಪ್ರಯೋಜನಹೀನತ್ವಾತ್। –ತತ್ತ್ವನಿರ್ಣಯಟೀಕಾ। –(ಬ್ರಹ್ಮಸೂತ್ರ)

೩. ಅತಃ ಸೋಽಯಂ ನಿಮೇಷಃ ಹರೇರುಪಚಾರಾದೇವ ನ ತು ಸ್ವಭಾವಾದಿತಿ ತಮಿಮಂ ನಿಮೇಷಂ ಕುತ್ಸಯಿತುಂ ಕ ಶಬ್ದಃ –(ವಾ.)

ಕಾಲೋಽಯಂ ದ್ವಿಪರಾರ್ಧಾಖ್ಯೋ ನಿಮೇಷ ಉಪಚರ್ಯತೇ ।
ಅವ್ಯಾಕೃತಸ್ಯಾನಂತಸ್ಯ ಹ್ಯನಾದೇರ್ಜಗದಾತ್ಮನಃ । –ಭಾಗವತತಾತ್ಪರ್ಯ

ದೇಹನಾದರೂ, ತನ್ನನ್ನು ಆಶ್ರಯಿಸಿ ಕೊಂಡಿರುವ ಸುಜೀವಸಮೂಹದ ಕಲ್ಯಾಣಕ್ಕೋಸ್ಕರವಾಗಿ 'ಪರ' ಎಂಬ ಹೆಸರಿನ ಪ್ರಲಯಕಾಲದ ಕೊನೆಯಲ್ಲಿ, ಸೃಷ್ಟಿಗೆ ಯೋಗ್ಯವಾದ ವಸ್ತುಗಳನ್ನು ಸೃಷ್ಟಿಸುವ ವಿಷಯದಲ್ಲಿ ಇಚ್ಛೆ ಉಂಟಾಯಿತು.

ವಿ: ೧) ಭಗವಂತನು ಸ್ವತಃ ಸದಾ ಜ್ಞಾನಾನಂದಾದಿ ಸಕಲಗುಣಪೂರ್ಣನಾದ್ದರಿಂದ ನಿತ್ಯತೃಪ್ತ; ಅವನಿಗೆ ಜಗತ್ಸೃಷ್ಟಿಯಿಂದ ಆಗಬೇಕಾದದ್ದೇನೂ ಇಲ್ಲ; ಆದರೂ ತನ್ನನ್ನು ಆಶ್ರಯಿಸಿದ ರಮಾಬ್ರಹ್ಮಾದಿ ಸಚ್ಚೇತನರ ಐಶ್ವರ್ಯಕ್ಕೋಸ್ಕರ ಸೃಷ್ಟಿಕಾರ್ಯಕ್ಕೆ ಇಚ್ಛಿಸಿದ ಎಂದರ್ಥ.

೨) ಶ್ರೀಹರಿಯನ್ನು ಸದಾ ಆಶ್ರಯಿಸಿದ ರಮಾದೇವಿಯು ನಿತ್ಯಮುಕ್ತಳಾದ್ದರಿಂದ 'ನನ್ನ ಪತಿಯಾದ ಶ್ರೀಹರಿಯು ಇಂತಹ ಅದ್ಭುತ ಐಶ್ವರ್ಯಶಾಲಿ' ಎಂಬ ಹರ್ಷೋದ್ರೇಕವೇ ಅವರಿಗೆ ಲಭಿಸುವ ಐಶ್ವರ್ಯ; ಬ್ರಹ್ಮಾದಿ ಇತರರಿಗೆ ಸತ್ಯಲೋಕಾದಿ ಪ್ರಾಪ್ತಿರೂಪ ಐಶ್ವರ್ಯ ಎಂದು ಭಾವ. ಜಗತ್ಸೃಷ್ಟಿಯು ಉಪಲಕ್ಷಕ, ಭಗವಂತನ ಸಕಲ ಕಾರ್ಯಗಳೂ ಹೀಗೆಯೇ ಪರಪ್ರಯೋಜನ–ಕ್ಕೋಸ್ಕರವೇ ಹೊರತು ಸ್ವಪ್ರಯೋಜನಕ್ಕಾಗಿ ಅಲ್ಲ ಎಂದು ಭಾವ.

೩) 'ಪರ' ಕಾಲ ಎಂದರೆ 'ಬ್ರಹ್ಮದೇವರ ನೂರುವರ್ಷಗಳ ಕಾಲ' ಎಂದರ್ಥ. ಒಟ್ಟು ಪ್ರಲಯಕಾಲದ ಅವಧಿಯೂ ಇಂತಹ ಪರಕಾಲವೇ ಆಗಿದೆ. 'ಇಂತಹ ಪರಕಾಲ' ಮಹಾವಿಷ್ಣುವಿಗೆ ಒಂದು 'ನಿಮೇಷ' ಕಾಲ ಮಾತ್ರ. ಈ 'ನಿಮೇಷ'ವೆಂಬುದೂ ಔಪಚಾರಿಕ ಮಾತ್ರ ಎಂದು ತಿಳಿಸಲು ಕುತ್ಸನಾರ್ಥಕವಾದ 'ಕ' ಶಬ್ದವನ್ನು ಪ್ರಯೋಗಿಸಿರುವರು. ಇದರ ವಿವರಣೆ ಮುಂದೆ ಬಂದಿದೆ(೩/೫೬, ೫೭).

ದೃಷ್ಟ್ವಾ ಸ ಚೇತನಗಣಾನ್ ಜಠರೇ ಶಯಾನಾನ್
ಆನಂದಮಾತ್ರವಪುಷಃ ಸೃತಿವಿಪ್ರಮುಕ್ತಾನ್ ।
ಧ್ಯಾನಂ ಗತಾನ್ ಸೃತಿಗತಾಂಶ್ಚ ಸುಷುಪ್ತಿಸಂಸ್ಥಾನ್
ಬ್ರಹ್ಮಾದಿಕಾನ್ ಕಲಿಪರಾನ್ ಮನುಜಾಂಸ್ತಥೈಕ್ಷತ್ ॥ ೪ ॥

ಅ: ಆ ನಾರಾಯಣನು ತನ್ನ ಉದರದಲ್ಲಿ ಮಲಗಿದ್ದ ಚೇತನರ ಸಮುದಾಯವನ್ನು, ಪುನಃ ಸಂಸಾರದಿಂದ ಸಂಪೂರ್ಣವಾಗಿ ಮುಕ್ತರಾದಂತಹ ಕೇವಲ ಸ್ವರೂಪಾನಂದವನ್ನೇ ಶರೀರವನ್ನಾಗಿ ಉಳ್ಳ ಧ್ಯಾನನಿರತರಾದ ಉತ್ತಮಮುಕ್ತರನ್ನು, ಹಾಗೆಯೇ ಸಂಸಾರದಲ್ಲಿರುವ ಬ್ರಹ್ಮಾದಿ ಸಜ್ಜೀವರನ್ನೂ, ಕಲಿಪರ್ಯಂತರಾದ ಅಧಮಜೀವರನ್ನೂ, ಮಧ್ಯಮಜೀವರನ್ನೂ ನಿದ್ರಾನಿರತರನ್ನಾಗಿ ನೋಡಿದ; ಹಾಗೆಯೇ ಉಳಿದ ಮಧ್ಯಮ ಮತ್ತು ಅಧಮಮುಕ್ತರನ್ನು ಅವರು ಹೇಗಿದ್ದರೋ ಹಾಗೆಯೇ ನೋಡಿದ.

ಏಃ ೧) ಭಗವದುದರದಲ್ಲಿ ಅನೇಕ ತೆರನಾಗಿ ಇದ್ದ ಜೀವರನ್ನು ಭಗವಂತನು ಕಂಡ ರೀತಿಯನ್ನು ಈ ಶ್ಲೋಕದಲ್ಲಿ ವಿವರಿಸಿರುವರು.

೨) 'ಇಲ್ಲಿ **ಸೃತಿವಿಪ್ರಮುಕ್ತರು**' ಎಂದರೆ 'ಲಿಂಗದೇಹದಿಂದ ಬಿಡುಗಡೆ ಹೊಂದಿದ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ತ್ರಿವಿಧ ಜೀವರು ಎಂದರ್ಥ. ಧ್ಯಾನನಿರತರಾದ ಮುಕ್ತರು ಎಂದರೆ ಉತ್ತಮಮುಕ್ತರು ಎಂದೂ, ಸುಷುಪ್ತಿನಿರತಜೀವರು ಎಂದರೆ ಸಂಸಾರಿಜೀವರು ಎಂದೂ ಅರ್ಥ. '**ಬ್ರಹ್ಮಾದಿಕಾನ್**', '**ಮನುಜಾನ್**' ಮತ್ತು '**ಕಲಿಪರಾನ್**' ಎಂಬ ಪದಗಳು ಕ್ರಮವಾಗಿ ಉತ್ತಮ, ಮಧ್ಯಮ, ಮತ್ತು ಅಧಮ ಸಂಸಾರಿ ಜೀವರನ್ನೂ ತಿಳಿಸುತ್ತವೆ. 'ತಥಾ' ಎಂಬ ಪದವು ಕಲ್ಯಾದಿ ಅಧಮ ಮುಕ್ತರನ್ನು ಕೇವಲ ದುಃಖಸ್ವರೂಪರನ್ನಾಗಿಯೂ, ನಿತ್ಯಸಂಸಾರಿಗಳೆಂಬ ಮಧ್ಯಮ ಮುಕ್ತರನ್ನು ಸುಖದುಃಖಮಿಶ್ರಸ್ವರೂಪರನ್ನಾಗಿಯೂ ನೋಡಿದನು ಎಂಬುದನ್ನು ತಿಳಿಸುತ್ತದೆ, ಈ ಎರಡುವಿಧ ಮುಕ್ತರ ಅವಸ್ಥೆಯನ್ನು ದುರವಸ್ಥೆ ಎಂಬ ಕಾರಣದಿಂದ ಉಪೇಕ್ಷೆಯಿಂದ ನೋಡಿದನು ಎಂದು ತಿಳಿಸಲು 'ತಥಾ ಐಕ್ಷತ್' ಎಂಬ ಸಾಮಾನ್ಯ ಪದವನ್ನು ಪ್ರಯೋಗಿಸಿರುವರು.

೩) 'ಬ್ರಹ್ಮದೇವರು' ಪರಾಂತಕಾಲದಲ್ಲಿ ಮುಕ್ತರಾಗಿರುವುದರಿಂದ ಅವರು ಮುಕ್ತ-ಗಣದಲ್ಲೇ ಸೇರುವರು. ವಾಯುದೇವರು ಪ್ರಲಯಕಾಲದಲ್ಲೂ ಪ್ರತಿಭಾತಪರಾವರರಾದ್ದರಿಂದ ಅವರಿಗೆ ಸುಷುಪ್ತಿ ಇಲ್ಲ; ಆದ್ದರಿಂದ 'ಬ್ರಹ್ಮಾದಿಕಾನ್' ಎಂಬಲ್ಲಿನ 'ಬ್ರಹ್ಮಾದಿ' ಶಬ್ದಕ್ಕೆ 'ಅತದ್ಗುಣ-ಸಂವಿಜ್ಞಾನಬಹುವ್ರೀಹಿ'ಯಿಂದ 'ರುದ್ರಾದಿ ಜೀವರು' ಎಂದೇ ಅರ್ಥ;

೪) ಅಥವಾ 'ಬೃಹಸ್ಪತಿಃ ಪುರೋಧಾಶ್ಚ ಬ್ರಹ್ಮಾ ಚ ಬ್ರಹ್ಮಣಸ್ಪತಿಃ' ಎಂದು ಕೋಶವಿರುವುದರಿಂದ 'ಬ್ರಹ್ಮ' ಶಬ್ದಕ್ಕೆ 'ಬೃಹಸ್ಪತಿ' ಎಂದೂ ಅರ್ಥ ಮಾಡಬಹುದು. ಆಗ 'ಆದಿ' ಶಬ್ದದಿಂದ ರುದ್ರಾದಿ ಉತ್ತಮ ಜೀವರನ್ನೂ ಬೃಹಸ್ಪತ್ಯವರರಾದ ಇತರ ಸಕಲ ಸಜ್ಜೀವರನ್ನೂ ಗ್ರಹಿಸಬೇಕು.

---

೪. ತತ್ರ ಸ್ವರೂಪಭೂತಸುಖದುಃಖಮಿಶ್ರಮಧ್ಯಮಾನಾಂ ಸ್ವರೂಪಮಾತ್ರದುಃಖಮಾತ್ರಭರಿತಾಧಮನಾಂ ಚಾವಸ್ಥಾದ್ವಯಂ ದುರವಸ್ಥಾರೂಪತಯಾ ಹೀನತ್ವೇನ ಭಗವತಾऽಪ್ಯುಪೇಕ್ಷಯೈವ ದೃಷ್ಟಮಿತಿ ಸೂಚನಾಯ 'ತಥಾ ಇತಿ' ಸಾಮಾನ್ಯತೋऽವಕ್ಷ್ಯನ್। -(ವಾ.)

೪. ಅತೋ ಅತದ್ಗುಣಸಂವಿಜ್ಞಾನಬಹುವ್ರೀಹಿಣಾ ಬ್ರಹ್ಮಾದಿಪದೇನ ರುದ್ರಾದ್ಯುತ್ತಮಜೀವಾ ಏವ ಗೃಹ್ಯಂತೇ। -(ವಾ.)

'ಬ್ರಹ್ಮಾದಯೋ ಬ್ರಹ್ಮಪುತ್ರಾಃ। ಇತಿ ಚತುರ್ಥಸ್ಕಂಧ ತಾತ್ಪರ್ಯಾತ್। -(ಜ.)

೪. ಭಾಗವತತಾತ್ಪರ್ಯೋದ್ಧೃತ ಅಭಿಧಾನವಾಕ್ಯ। -(೩/೨೭/೭)

೪. ಅಥವಾ ಬ್ರಹ್ಮಶಬ್ದೇನ ಬೃಹಸ್ಪತಿರ್ಗ್ರಾಹ್ಯಃ। ಆದಿಪದೇನ ತದುತ್ತಮಾಃ ಕೇಚಿದವರಾಃ ಸರ್ವೇ ಗ್ರಾಹ್ಯಾಃ ನಾಮತಸ್ತದ್ಗ್ರಹಣಂ ತು ದೇವಪುರೋಹಿತತ್ವಾತ್। -(ಜ.)

ಸೃಷ್ಟಿಯ ಪ್ರಯೋಜನ

ಸ್ರಕ್ಷ್ಯೇ ಹಿ ಚೇತನಗಣಾನ್ ಸುಖದುಃಖಮಧ್ಯ-
ಸಂಪ್ರಾಪ್ತಯೇ ತನುಭೃತಾಂ ವಿಹೃತಿಂ ಮಮೇಚ್ಛನ್ ।
ಸೋಽಯಂ ವಿಹಾರ ಇಹ ಮೇ ತನುಭೃತ್ಸ್ವಭಾವ-
ಸಂಭೂತಯೇ ಭವತಿ ಭೂತಿಕೃದೇವ ಭೂತ್ಯಾಃ ॥ ೫ ॥

ಅ: ನನ್ನ ವಿಹಾರವನ್ನು ಬಯಸಿ ನಾನು ಚೇತನಗಣಗಳನ್ನು ಅವರವರ ಸ್ವರೂಪ-ಭೂತವಾದ ಸುಖ, ದುಃಖ ಮತ್ತು ದುಃಖಮಿಶ್ರಸುಖ ಇವುಗಳ ಸಂಪ್ರಾಪ್ತಿಗಾಗಿ ಸೃಷ್ಟಿಸುವೆ. ಅಂತಹ ಈ ನನ್ನ ವಿಹಾರವು ಈ ಸಂಸಾರದಲ್ಲಿ ತ್ರಿವಿಧಜೀವರಿಗೆ ಅವರವರ ಸ್ವಭಾವದ ಪೂರ್ಣಾಭಿವ್ಯಕ್ತಿಗೂ ಮಹಾಲಕ್ಷ್ಮಿಯ ಐಶ್ವರ್ಯಕ್ಕೂ ಸಾಧನವಾಗುವುದು.

ವಿ: ೧) ಭಗವಂತನ ಸೃಷ್ಟಿ ಕಾರ್ಯದ ಪ್ರಯೋಜನವನ್ನು ಸ್ವತಃ ಭಗವಂತನು ಸಂಕಲ್ಪಿಸಿದ ರೀತಿಯಲ್ಲೇ ಈ ಶ್ಲೋಕದಲ್ಲಿ ತಿಳಿಸಿರುವರು. ಭಗವಂತನ ಸೃಷ್ಟಿಯು ಸಾತ್ವಿಕ, ರಾಜಸ, ತಾಮಸ ಎಂಬ ತ್ರಿವಿಧ ಜೀವರಿಗೆ ಅವರವರ ಪೂರ್ಣ ಸ್ವರೂಪಾಭಿವ್ಯಕ್ತಿಗೂ, ಜಡಪ್ರಕೃತಿಗೆ ಅನೇಕ ವಿಧ ವಿಕಾರಕ್ಕೂ, ಮಹಾಲಕ್ಷ್ಮಿಗೆ ತತ್ತನ್ನಿಯಾಮಕವಾದ ಬಹುರೂಪಗಳ ಸ್ವೀಕಾರಕ್ಕೂ ಸಾಧನ; ಅವನಿಗೆ ಮಾತ್ರ ಇದರಿಂದ ಯಾವುದೇ ಪ್ರಯೋಜನವೂ ಆಗಬೇಕಿಲ್ಲ; ಇದೆಲ್ಲ ಅವನಿಗೆ ಕ್ರೀಡೆ ಮಾತ್ರ ಎಂದು ಭಾವ.

೨) ಭಗವಂತನು ಮಾಡುವ ಸೃಷ್ಟಿ, 'ಶುದ್ಧಸೃಷ್ಟಿ, ಪರಾಧೀನ ವಿಶೇಷಾವಾಪ್ತಿ-ರೂಪಸೃಷ್ಟಿ, ಮಿಶ್ರಸೃಷ್ಟಿ ಮತ್ತು ಕೇವಲಸೃಷ್ಟಿ' ಎಂಬುದಾಗಿ ನಾಲ್ಕು ವಿಧ; ಶುದ್ಧಸೃಷ್ಟಿ ಎಂದರೆ ಲೋಕೋಪಕಾರಕ್ಕಾಗಿ ನಿರ್ವಿಕಾರವಾದ ಭಗವದ್ರೂಪಗಳ ಪ್ರಾದುರ್ಭಾವ; ಮಹಾಲಕ್ಷ್ಮಿ ಮೊದಲಾದವರು ಭಗವದಾಜ್ಞೆಯಿಂದ ಸೃಷ್ಟಿಯ ಆರಂಭದಲ್ಲಿ ಪ್ರಕೃತಿಸ್ವಾಮಿತ್ವ ಮೊದಲಾದ ವಿಶೇಷಗಳನ್ನು ಪಡೆಯುವುದು – ಪರಾಧೀನ ವಿಶೇಷಾವಾಪ್ತಿರೂಪಸೃಷ್ಟಿ; ಸ್ವರೂಪತಃ ಉತ್ಪತ್ತಿ-

---

೫. ನಿಯಮ್ಯಪ್ರಕೃತೇಃ ನಿಯಾಮಕಲಕ್ಷ್ಮ್ಯಾ ಅಪಿ ಭೂತಿಕೃತ್ । ಮಹದಾದಿರೂಪೇಣ ಬಹುತ್ವಕೃತ್ । ನಿಯಾಮಕಾನೇಕರೂಪಕೃದೇವ ಚ ಭವತಿ ॥ – (ಜ)

೫. ನಿಯತಾ – ನಿತ್ಯಾ , ನಿತ್ಯಾವಿಯೋಗಿನೀ । – (ವಾ)

೫. ಭೂತಿಃ – ಮಹಾಲಕ್ಷ್ಮ್ಯಾಃ – (ನ್ಯಾಯಸುಧಾ)

ಅನೇನ ಲಕ್ಷ್ಮೀರೂಪ ಮಾಯಾತತ್ತ್ವೇನ ಮಾಯೀ ಭಗವಾನ್ । ನ ತು ಪರಾಭಿಮತ ಭ್ರಾಮಕಮಾಯಯಾ ಇತಿ ಸೂಚಯತಿ ॥ – (ವಾ)

ರಹಿತರಾದ ಜೀವಚೇತನಗಳು ಬಾಹ್ಯದೇಹ ಸಂಬಂಧವನ್ನು ಹೊಂದುವುದು ಮಿಶ್ರಸೃಷ್ಟಿ; ಮಡಿಕೆ, ವಸ್ತ್ರ ಮೊದಲಾದ ಪದಾರ್ಥಗಳು ಹೊಸದಾಗಿ ಹುಟ್ಟಿಬರುವುದು ಕೇವಲ ಸೃಷ್ಟಿ.

೩) **'ಭೂತ್ಯಾಃ ಭೂತಿಕೃದೇವ'** ಎಂಬಲ್ಲಿ 'ಭೂತಿ' ಪದದಿಂದ ನಿಯಮ್ಯವಾದ ಜಡಪ್ರಕೃತಿ ಮತ್ತು ನಿಯಾಮಕವಾದ ಚೇತನ ಪ್ರಕೃತಿ ಮಹಾಲಕ್ಷ್ಮೀ ಎಂಬ ಎರಡು ಪ್ರಕೃತಿಗಳೂ ಗ್ರಾಹ್ಯ; ಜಡಪ್ರಕೃತಿಗೆ 'ಭೂತಿ' ಎಂದರೆ ಘಟಾದಿರೂಪೇಣ ಬಹುವಿಧ ವಿಕಾರ; ಮಹಾಲಕ್ಷ್ಮಿಗೆ 'ಭೂತಿ' ಎಂದರೆ ಜಡಪ್ರಕೃತಿಯ ವಿಕಾರಗಳಿಗೆ ನಿಯಾಮಕವಾದ ಬಹುರೂಪಗಳ ಧಾರಣೆ ಎಂದು ಅರ್ಥ.

ವಾಸುದೇವ - ಜಯಾ ರೂಪಗಳು

ಇತ್ಥಂ ವಿಚಿಂತ್ಯ ಪರಮಃ ಸ ತು ವಾಸುದೇವ-
ನಾಮಾ ಬಭೂವ ನಿಜಮುಕ್ತಿಪದಪ್ರದಾತಾ ।
ತಸ್ಯಾಜ್ಞಯೈವ ನಿಯತಾऽಥ ರಮಾऽಪಿ ರೂಪಂ
ಬಭ್ರೇ ದ್ವಿತೀಯಮಪಿ ಯತ್ ಪ್ರವದಂತಿ ಮಾಯಾಮ್ ॥ ೬ ॥

ಅ: ಹೀಗೆ ಆಲೋಚಿಸಿ ಸರ್ವೋತ್ತಮನಾದ ನಾರಾಯಣನು ತನ್ನವರಿಗೆ ನಿತ್ಯವಾದ ಮೋಕ್ಷಪದವನ್ನು ನೀಡುವ ವಾಸುದೇವ ಎಂಬ ಹೆಸರುಳ್ಳ ರೂಪವುಳ್ಳವನಾದನು; ಅನಂತರ ಆ ಭಗವಂತನಿಗೆ ಅಧೀನರಾದ ಮಹಾಲಕ್ಷ್ಮಿಯು ನಾರಾಯಣನ ಆಜ್ಞೆಯಿಂದ 'ಎರಡನೆಯ ರೂಪವನ್ನು ಧರಿಸಿದಳು; ಅದನ್ನು 'ಮಾಯಾ' ಎನ್ನುವರು.

ವಿ: ನಾರಾಯಣನು ತನ್ನ ಭಕ್ತರಿಗೆ ಮೋಕ್ಷವನ್ನು ನೀಡಲು 'ವಾಸುದೇವ' ಎಂಬ ರೂಪವನ್ನೂ ಮಹಾಲಕ್ಷ್ಮಿಯು ಅದಕ್ಕೆ ಪತ್ನಿಯಾದ 'ಮಾಯಾ' ಎಂಬ ರೂಪವನ್ನೂ ಧರಿಸಿದರು ಎಂದು ಭಾವ.

ಸಂಕರ್ಷಣ ಪ್ರದ್ಯುಮ್ನ ರೂಪಗಳು

ಸಂಕರ್ಷಣಶ್ಚ ಸ ಬಭೂವ ಪುನಃ ಸುನಿತ್ಯಃ
ಸಂಹಾರಕಾರಣವಪುಸ್ತದನುಜ್ಞಯೈವ ।
ದೇವೀ ಜಯೇತ್ಯನುಬಭೂವ ಸ ಸೃಷ್ಟಿಹೇತೋಃ
ಪ್ರದ್ಯುಮ್ನತಾಮುಪಗತಃ ಕೃತಿತಾಂ ಚ ದೇವೀ ॥ ೭ ॥

---

೬. 'ವಾಸುದೇವೋ ವಾ ಇದಮಗ್ರ ಆಸೀತ್' ಎಂಬ ಶ್ರುತಿಗೆ ವಾಸುದೇವರೂಪವೇ ಮೊದಲು ಪ್ರಾದುರ್ಭಾವವಾದ ಭಗವದ್ರೂಪ ಎಂಬ ಅರ್ಥವನ್ನೂ ಶ್ರೀನರಹರಿತೀರ್ಥರು ಬರೆದಿರುವರು.

ಅ: ಆ ನಾರಾಯಣನು ಪುನಃ ಸನಾತನವೂ, ಸಂಹಾರಕಾರಣವೂ ಆದ 'ಸಂಕರ್ಷಣ' ರೂಪಿಯಾದ; ಅವನನ್ನನುಸರಿಸಿ, ಅವನ ಆಜ್ಞೆಯಿಂದಲೇ ರಮಾದೇವಿಯು 'ಜಯಾ' ಎಂಬ ರೂಪವನ್ನು ಧರಿಸಿದರು; ಅನಂತರ ಆ ನಾರಾಯಣನು ಸೃಷ್ಟಿಕಾರ್ಯಕ್ಕೆಂದು ಪ್ರದ್ಯುಮ್ನ ರೂಪವನ್ನು ಹೊಂದಿದ; ಮತ್ತು ಮಹಾಲಕ್ಷ್ಮಿಯು 'ಕೃತಿ' ಎಂಬ ರೂಪವನ್ನು ಧರಿಸಿದರು.

ವಿ: ೧) ಮುಕ್ತಿಪ್ರದಾನಕ್ಕೆಂದು ವಾಸುದೇವರೂಪವನ್ನು ಧರಿಸಿದ ನಾರಾಯಣನು, ಸಂಹಾರ–ಕಾರ್ಯಕ್ಕಾಗಿ ಸಂಕರ್ಷಣ ರೂಪವನ್ನೂ, ಸೃಷ್ಟಿ ಕಾರ್ಯಕ್ಕಾಗಿ ಪ್ರದ್ಯುಮ್ನರೂಪವನ್ನೂ ಧರಿಸಿದ; ಅವನಿಗೆ ಅಧೀನರಾದ ಮಹಾಲಕ್ಷ್ಮಿಯು ಅವನ ಆಜ್ಞೆಯಿಂದಲೇ ಅವನನ್ನನುಸರಿಸಿ ಕ್ರಮವಾಗಿ ಜಯಾ ಮತ್ತು ಕೃತಿ ಎಂಬ ರೂಪಗಳನ್ನು ಧರಿಸಿದರು.

೨) ಇಲ್ಲಿ 'ಸಂಕರ್ಷಣ' ರೂಪವು 'ಸುನಿತ್ಯ' ಎಂದರೆ 'ಸನಾತನವಾದುದು' ಎಂದರ್ಥ; 'ಅನಿತ್ಯತ್ವ, ದೇಹಹಾನಿ, ಅಪೂರ್ಣಗುಣತ್ವ, ದುಃಖ ಪ್ರಾಪ್ತಿ' ಎಂಬ ನಾಲ್ಕು ವಿಧ ನಾಶಗಳಲ್ಲಿ ಯಾವುದೂ ಅವನಿಗೆ ಎಂದೂ ಇಲ್ಲ ಎಂದು ಭಾವ. ಅವನ ಇತರ ಸಕಲರೂಪಗಳೂ ಸಹ ಹೀಗೆಯೇ 'ಸುನಿತ್ಯ' ಎಂಬುದನ್ನು ಗಮನಿಸಬೇಕು.

ಅನಿರುದ್ಧ ರೂಪ

ಸ್ಥಿತ್ಯೈ ಪುನಃ ಸ ಭಗವಾನನಿರುದ್ಧನಾಮಾ
ದೇವೀ ಚ ಶಾಂತಿರಭವಚ್ಛರದಾಂ ಸಹಸ್ರಮ್ ।
ಸ್ಥಿತ್ವಾ ಸ್ವಮೂರ್ತಿಭಿರಮೂಭಿರಚಿಂತ್ಯಶಕ್ತಿಃ
ಪ್ರದ್ಯುಮ್ನರೂಪಕ ಇಮಾಂಶ್ಚರಮಾತ್ಮನೇऽದಾತ್ ॥ ೮ ॥

---

೭. ಸುನಿತ್ಯಃ ಜೀವವತ್ ದೇಹನಾಶಾದಿರೂಪನಾಶರಹಿತ ಇತ್ಯರ್ಥಃ – (ವಾ)

ತೇನ ಸುನಿತ್ಯಪದೇನ ಸನಾತನತಾ ಉಚ್ಯತೇ ಧ್ವಂಸಾಪ್ರತಿಯೋಗಿತಾ ಮಾತ್ರಂ ನೋಚ್ಯತೇ । – (ಜ)

೭. ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿರಪೂರ್ಣತಾ । ನಾಶಶ್ಚತುರ್ವಿಧಃ ಪ್ರೋಕ್ತಃ ತದಭಾವೋ ಹರೇಃ ಸದಾ।
–ಗೀತಾತಾತ್ಪರ್ಯೋದಾಹೃತ ಪರಮಶ್ರುತಿ (೨/೧೭)

೮. 'ಶರದಾಂ ಸಹಸ್ರಂ' ಇತ್ಯನೇನ ಮಾನುಷಶರತ್ಸಹಸ್ರಂ ಸಂಗೃಹ್ಯತೇ । – (ವಾ)

ಮಾನುಷೇಣ ಮಾನೇನ ಶರದಾಂ ವರ್ಷಾಣಾಂ ಸಹಸ್ರಂ ಸ್ಥಿತ್ವಾ। – (ಜ)

ಅ: ಆ ನಾರಾಯಣನು ಪುನಃ ವಿಶ್ವಪಾಲನೆಗಾಗಿ ಅನಿರುದ್ಧರೂಪನಾದ; ಮಹಾಲಕ್ಷ್ಮಿಯು 'ಶಾಂತಿ' ಎಂಬ ರೂಪವನ್ನು ಧರಿಸಿದರು; ಸಹಸ್ರವರ್ಷಗಳ ಕಾಲ ತನ್ನ ಈ ರೂಪದೊಂದಿಗೆ ಇದ್ದು ಅಚಿಂತ್ಯ ಶಕ್ತಿಶಾಲಿಯಾದ ಪ್ರದ್ಯುಮ್ನ ರೂಪದ ನಾರಾಯಣ ಸೃಷ್ಟಿಗೆ ಅರ್ಹರಾದ ಜೀವರನ್ನು ಕೊನೆಯದಾದ ಅನಿರುದ್ಧರೂಪಕ್ಕೆ ನೀಡಿದ.

ವಿ: ಪಾಲನಕಾರ್ಯಕ್ಕಾಗಿ ಶ್ರೀಹರಿಯು ಅನಿರುದ್ಧರೂಪವನ್ನೂ, ಮಹಾಲಕ್ಷ್ಮಿಯು 'ಶಾಂತಿ'ರೂಪವನ್ನೂ ಧರಿಸಿದರು; ನಾಲ್ಕು ರೂಪಗಳನ್ನು ಧರಿಸಿದ ಮೇಲೆ ಮನುಷ್ಯಮಾನದ ಒಂದು ಸಾವಿರ ವರ್ಷಗಳ ಅನಂತರ ಸೃಷ್ಟಿಗೆ ಯೋಗ್ಯರಾದ ಜೀವರನ್ನು ತನ್ನ ಉದರದಿಂದ ತೆಗೆದು ಪ್ರದ್ಯುಮ್ನರೂಪದ ನಾರಾಯಣನು ತನ್ನ ಅನಿರುದ್ಧರೂಪಕ್ಕೆ ಒಪ್ಪಿಸಿದ.

ಅನಿರುದ್ಧಸೃಷ್ಟಿಯ ಉಪಕ್ರಮ

ನಿರ್ದೇಹಕಾನ್ ಸ ಭಗವಾನನಿರುದ್ಧನಾಮಾ
ಜೀವಾನ್ ಸ್ವಕರ್ಮಸಹಿತಾನುದರೇ ನಿವೇಶ್ಯ ।
ಚಕ್ರೇ ಽಥ ದೇಹಸಹಿತಾನ್ ಕ್ರಮಶಃ ಸ್ವಯಂಭು-
ಪ್ರಾಣಾತ್ಮಶೇಷಗರುಡೇಶಮುಖಾನ್ ಸಮಗ್ರಾನ್ ॥ ೯ ॥

ಅ: ಅನಿರುದ್ಧನಾಮಕನಾದ ಆ ಶ್ರೀಹರಿ ಲಿಂಗದೇಹವ್ಯತಿರಿಕ್ತವಾದ ಅನ್ಯದೇಹವನ್ನು ಹೊಂದಿರದವರೂ, ತಮ್ಮ ಕರ್ಮಗಳಿಂದ ಯುಕ್ತರೂ ಆದ ಆ ಚತುರ್ಮುಖಬ್ರಹ್ಮ, ವಾಯು, ಶೇಷ, ಗರುಡ, ರುದ್ರ ಮೊದಲಾದ ಜೀವರನ್ನು ತನ್ನ ಉದರದಲ್ಲಿ ಇರಿಸಿಕೊಂಡು ಅವರೆಲ್ಲರನ್ನೂ ಕ್ರಮವಾಗಿದೇಹಯುಕ್ತರನ್ನಾಗಿ ಮಾಡಿದ.

ವಿ: ೧) ಅನಿರುದ್ಧನಾಮಕ ಪರಮಾತ್ಮನು ಪ್ರದ್ಯುಮ್ನರೂಪದಿಂದ ಕೊಡಲ್ಪಟ್ಟ ಜೀವರಿಗೆ ಸೂಕ್ಷ್ಮದೇಹವನ್ನು ನೀಡಿದ ವಿವರ ಈ ಶ್ಲೋಕದಲ್ಲಿದೆ.

---

೯. ಬ್ರಹ್ಮಾಂಡಾಂತಃ ಸ್ತ್ರೀಪುರುಷಸಾಪೇಕ್ಷಾ ಸೃಷ್ಟಿಃ ಪ್ರದ್ಯುಮ್ನಾತ್ । ಕಾಮಾಂತರ್ಯಾಮೀ ಸ ಭಗವಾನ್ ಮಿಥೋ ರಾಗಂ ಜನಯಿತ್ವಾ ಪುಂಭ್ಯಃ ಸ್ತ್ರೀಷು ಸಂತಾನಪರಂಪರಾಂ ಜನಯತಿ । ಅನಿರುದ್ಧಸ್ತು ಇದಾನೀಂ ಅನಂತಾನಂತ-ಜೀವಾನಾಂ ಸ್ವಶಕ್ತೈವ ಸ್ತ್ರೀನಿರಪೇಕ್ಷಂ ಶುದ್ಧಪ್ರಕೃತ್ಯಂಶನಿರ್ಮಿತಲಿಂಗದೇಹಮಾತ್ರಾವರಕಸೂಕ್ಷ್ಮದೇಹರೂಪಾಂ ಸೃಷ್ಟಿಂ ಸ್ವದೇಹಾಂತರೇವ ಕರೋತಿ । –(ವಾ)

೯. ಲಿಂಗದೇಹಾನಾಂ ಪ್ರಲಯೇ ಽಪಿ ವಿದ್ಯಮಾನತ್ವಾತ್ ಲಿಂಗದೇಹಾತಿರಿಕ್ತದೇಹರಹಿತಾನ್ –(ವಾ)

೯. ದೇಹಸಹಿತಾನ್ ಲಿಂಗದೇಹಾವರಕಸೂಕ್ಷ್ಮದೇಹಾಂತರಸಹಿತಾನ್। –(ವಾ)

೯. ಇಯಮಷ್ಟೇಕಾ ಸೂಕ್ಷ್ಮತರಾ ಮಿಶ್ರಸೃಷ್ಟಿರಿತಿ ಜ್ಞೇಯಮ್ –(ವಾ)

೨) ಬ್ರಹ್ಮಾಂಡದೊಳಗೆ ನಡೆಯುವ ಸ್ತ್ರೀಪುರುಷಸಾಪೇಕ್ಷವಾದ ಸೃಷ್ಟಿ ಪ್ರದ್ಯುಮ್ನನಿಂದ; ಕಾಮಾಂತರ್ಯಾಮಿಯಾದ ಆ ಪ್ರದ್ಯುಮ್ನನು ಸ್ತ್ರೀ ಪುರುಷರಲ್ಲಿ ಪರಸ್ಪರ ಅನುರಾಗ ಹುಟ್ಟಿಸಿ ಸೃಷ್ಟಿ ಮಾಡಿಸುವನು.

೩) ಇಲ್ಲಿ ಅನಿರುದ್ಧನು ಸ್ತ್ರೀ ನಿರಪೇಕ್ಷವಾಗಿ ಲಿಂಗದೇಹಕ್ಕೆ ಆವರಕವಾಗುವ ಮತ್ತೊಂದು ದೇಹವನ್ನು ಕೊಟ್ಟು, ಅವರನ್ನು ಪುನಃ ಪ್ರದ್ಯುಮ್ನನಿಗೆ ಒಪ್ಪಿಸುವನು. ಅಲ್ಲಿಂದ ಸೃಷ್ಟಿ ಮುಂದುವರಿಯುವುದು; ಅದು ಪ್ರದ್ಯುಮ್ನಸೃಷ್ಟಿ; ಇದು ಅನಿರುದ್ಧಸೃಷ್ಟಿ; ಆದ್ದರಿಂದ ಪಾಲನೆಗಾಗಿ ಸ್ವೀಕರಿಸಿದ ಅನಿರುದ್ಧರೂಪದಿಂದ ಸೃಷ್ಟಿಕಾರ್ಯ ಹೇಗೆ ಎಂದು ಶಂಕಿಸಬೇಕಿಲ್ಲ.

೪) ಇಲ್ಲಿ 'ನಿರ್ದೇಹಕಾನ್' ಎಂದರೆ, 'ಲಿಂಗದೇಹವನ್ನು ಹೊರತು ಬೇರೊಂದು ದೇಹವನ್ನೂ ಹೊಂದಿರದ' ಎಂದರ್ಥ.

೫) 'ದೇಹಸಹಿತಾನ್' ಎಂದರೆ ಲಿಂಗದೇಹಕ್ಕೆ ಆವರಕವಾಗುವ ಮತ್ತೊಂದು ಸೂಕ್ಷ್ಮ-ದೇಹದಿಂದ ಕೂಡಿದವರನ್ನಾಗಿ ಎಂದರ್ಥ.

೬) ಈ ಸೃಷ್ಟಿಯು ಒಂದು ರೀತಿಯಲ್ಲಿ ಸೂಕ್ಷ್ಮತರವಾದ ಮಿಶ್ರಸೃಷ್ಟಿಯೇ ಆಗಿದೆ.

ಭಗವಂತನ ಬಗೆಬಗೆಯ ರೂಪಗಳು

ಪಂಚಾತ್ಮಕಃ ಸ ಭಗವಾನ್ ದ್ವಿಷಡಾತ್ಮಕೋಽಭೂತ್
ಪಂಚದ್ವಯೀ ಶತಸಹಸ್ರಪರೋಽಮಿತಶ್ಚ।
ಏಕಃ ಸಮೋಽಪ್ಯಖಿಲದೋಷಸಮುಜ್ಝಿತೋಽಪಿ
ಸರ್ವತ್ರ ಪೂರ್ಣಗುಣಕೋಽಪಿ ಬಹೂಪಮೋಽಭೂತ್ ॥ ೧೦ ॥

ಅ: (ನಾರಾಯಣಾದಿ) ಪಂಚರೂಪಿಯಾದ ಆ ಭಗವಂತನು, (ಕೇಶವಾದಿ) ದ್ವಾದಶ ರೂಪನಾದನು; ಮತ್ತು (ಮತ್ಸ್ಯಾದಿ)ದಶರೂಪಿಯೂ, (ನಾರಾಯಣಾದಿ)ಶತರೂಪಿಯೂ, (ವಿಶ್ವಾದಿ)ಸಹಸ್ರರೂಪಿಯೂ, (ಪರಾದಿ)ಬಹುರೂಪಿಯೂ, (ಅಜಾದಿ)ಅನಂತರೂಪಿಯೂ,

---

೧೦. ವಿಶ್ವಾದಿ ವಿಷ್ಣುಸಹಸ್ರನಾಮೋಕ್ತಸಾವಿರರೂಪಗಳು.

೧೦. ಸ ಏವ ದಶಧಾ ಪ್ರೋಕ್ತೋ ವಿಷ್ಣುರ್ಮತ್ಸ್ಯಾದಿರೂಪಕಃ।
ಶತಂ ನಾರಾಯಣಾದ್ಯಾತ್ಮಾ ವಿಶ್ವಾದ್ಯಾತ್ಮಾ ಸಹಸ್ರಕಃ।
ಪರಾದಿರೂಪೋ ಬಹುಧಾ ಸೋಽನಂತಾತ್ಮಾಽಜಿತಾದಿಕಃ॥ – ಬ್ರಹ್ಮಪುರಾಣ

೧೦. ಪರಶಬ್ದೇನ ಅಷ್ಟಾದಶಸ್ಥಾನಗತಾ ಸಂಖ್ಯಾಚೋಚ್ಯತೇ। ತದುಕ್ತಂ ವಾಯುಪುರಾಣೇ।
ಸ್ಥಾನಂ ದಶಗುಣಂ ವಿದ್ಯಾದೇಕಂ ದಶಶತಂ ತತಃ। ಸಹಸ್ರಮಯುತಂ ತಸ್ಮಾನ್ನಿಯುತಂ ಪ್ರಯುತಂ ತತಃ।

ಆದನು; ಅವನು ಒಬ್ಬನೇ ಆದರೂ ಸರ್ವರೂಪಗಳಲ್ಲೂ ಸಮನೇ ಅದರೂ, ಸಕಲ ರೂಪಗಳಲ್ಲೂ ಸಕಲದೋಷರಹಿತನೂ ಪೂರ್ಣಗುಣಶಾಲಿಯೂ ಆದರೂ ಬಹುವಾದಂತೆ ಆದನು.

ಎ: ೧) ಹಿಂದೆ ಸಂಕ್ಷೇಪವಾಗಿ ಹೇಳಿದ ಶುದ್ಧಸೃಷ್ಟಿಯ ವಿವರಣೆ ಈ ಶ್ಲೋಕದಲ್ಲಿದೆ.

೨) ನಾರಾಯಣಾದಿ ಶತರೂಪಗಳ ವಿವರ 'ನಾರಾಯಣಾಷ್ಟೋತ್ತರ ಶತನಾಮಸ್ತೋತ್ರ' ಎಂಬುದಾಗಿ ವರಾಹಪುರಾಣ ಚಾತುರ್ಮಾಸ್ಯದಲ್ಲಿ ಉಕ್ತವಾಗಿದೆ.

೩) ಇಲ್ಲಿ 'ಪರ' ಎಂಬುದು 'ಪರ' ಎಂಬ ಹದಿನೆಂಟನೆಯ ಸಂಖ್ಯೆಯನ್ನು ಸೂಚಿಸುವ ಪದವೂ ಆಗಿದೆ.

೪) ಭಗವಂತನ ಬಹುತ್ವವು (ಭೇದ ಪ್ರತಿನಿಧಿಯಾದ) 'ವಿಶೇಷ ಬಲದಿಂದಲೇ' ಹೊರತು ಜೀವರ ಬಹುರೂಪಗಳಂತಹುದಲ್ಲ.

ಶ್ರೀಹರಿಯ ಅಪೂರ್ವ ಮಹಿಮೆ

ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ
ನಿಶ್ಚೇತನಾತ್ಮಕಶರೀರಗುಣೈಶ್ಚ ಹೀನಃ ।
ಆನಂದಮಾತ್ರಕರಪಾದಮುಖೋದರಾದಿಃ
ಸರ್ವತ್ರ ಚ ಸ್ವಗತಭೇದವಿವರ್ಜಿತಾತ್ಮಾ ॥ ೧೧ ॥

ಅರ್ಬುದಂ ನ್ಯರ್ಬುದಂ ಚೈವ ವೃಂದಂ ಚೈವ ತತಃ ಪರಮ್ ।
ಖರ್ವಂ ಚೈವ ನಿಖರ್ವಂ ಚ ಶಂಖಂ ಪದ್ಮಂ ತಥೈವ ಚ ।
ಸಮುದ್ರೋ ಮಧ್ಯಮಂತಶ್ಚ ಪರಾರ್ಧಂ ಪರಮೇವ ಚ ।
ಏವಮಷ್ಟಾದಶೈತಾನಿ ಪದಾನಿ ಗಣನಾವಿಧೌ ।
ಕಲ್ಪಸಂಖ್ಯಾಪ್ರವರ್ತಸ್ತು ಪರಾರ್ಧೋ ಬ್ರಹ್ಮಣಃ ಸ್ಮೃತಃ ।
ತಾವಚ್ಚೇಷೋ ಽಸ್ಯ ಕಾಲೋ ಽಸ್ಯ ತದಂತೇ ಪ್ರತಿಸೃಜ್ಯತೇ ।
ಪರಾರ್ಧಂ ದ್ವಿಗುಣಂ ಚಾಪಿ ಪರಮಾಹುರ್ಮನೀಷಿಣಃ ॥ – (ಜ)

ಅಜಹತ್ಸ್ವಾರ್ಥಲಕ್ಷಣಯಾ ಪರಪದಂ ಪರಾದಿಬಹುರೂಪೋಪಲಕ್ಷಕಮ್ । ದ್ವಂದ್ವಾದುಪರಿ ಏಕವದ್ಭಾವಃ। ಬಹುತ್ವಂ ಚ ಸಹಸ್ರಾದುಪರಿ ಅಯುತನಿಯುತಾದಿರೂಪಾ ಕಾಚನ ಸಂಖ್ಯಾ । – (ವಾ)

೧೦. ಬಹೂನಾಂ ಸ್ವಭಾವತೋ ಬಹೂನಾಂ ಜೀವಾದೀನಾಮುಪಮಾ ಯಸ್ಯ ಸಃ ತಥೋಕ್ತಃ ವಿಶೇಷಶಕ್ತಿ ಪ್ರಸಾಧಿತಮೇವ ಬಹುತ್ವಂ ಭಗವತಃ । ನ ತು ಜೀವಾನಾಮಿವ ಸ್ವಾಭಾವಿಕಂ ಬಹುತ್ವಮ್ । ಅತೋ ನ ಭೇದಶಂಕೇತಿ ಭಾವಃ । – (ವಾ)

ಅ: ಆ ಪರಮಾತ್ಮನು ದೋಷರಹಿತವೂ ಪೂರ್ಣವೂ ಆದ ಗುಣಗಳನ್ನೇ ದೇಹವನ್ನಾಗಿ ಉಳ್ಳವನು; ಸ್ವತಂತ್ರನು; ಜಡಶರೀರರಹಿತನು ಮತ್ತು ಪ್ರಕೃತಿಯ ಗುಣಗಳಿಂದ ರಹಿತನು; ಕೇವಲ ಆನಂದಸ್ವರೂಪವಾದ ಹಸ್ತ, ಪಾದ, ಮುಖ, ಉದರಾದಿಗಳನ್ನು ಹೊಂದಿರುವವನು; ಮತ್ತು ಸರ್ವತ್ರ ಸ್ವಗತಭೇದವಿವರ್ಜಿತನು.

ವಿ: ೧) ಸಕಲಸದಾಗಮಗಳಿಂದ ಸಿದ್ಧವಾದ ಭಗವಂತನ ಸ್ವರೂಪವು ಇಲ್ಲಿ ವರ್ಣಿತವಾಗಿದೆ ಅವನದು ಸದಾ ಅಪ್ರಾಕೃತಶರೀರ;ಸತ್ತ್ವಾದಿಪ್ರಾಕೃತಗುಣಗಳಿಂದ ರಹಿತ.

೨) ಸ್ವತಂತ್ರ ಎಂದರೆ 'ಸ್ವರೂಪ, ಪ್ರಮಿತಿ ಮತ್ತು ಪ್ರವೃತ್ತಿ ಎಂಬ ಮೂರುವಿಧ' ಅಸ್ವಿತ್ವದಲ್ಲೂ ಪರಾಧೀನನಲ್ಲದವನು ಎಂದರ್ಥ.

೩) 'ಸ್ವಗತಭೇದ' ಎಂದರೆ ತನಗೂ ತನ್ನ ಗುಣಕ್ರಿಯಾದಿ ಧರ್ಮಗಳಿಗೂ ರೂಪರೂಪಗಳಿಗೂ, ಹಸ್ತಪಾದಾದಿ ಅವಯವಗಳಿಗೂ ಇರುವ ಭೇದ ಎಂದರ್ಥ; ಇಂತಹ ಭೇದವು ಭಗವಂತನ ಅನಂತರೂಪಗಳಲ್ಲಿ ಎಂದೂ ಇಲ್ಲವಾದ್ದರಿಂದ ಅವನು '**ಸ್ವಗತಭೇದವಿವರ್ಜಿತ**'.

ಶ್ರೀಹರಿಯು ದೇಶತಃ, ಕಾಲತಃ, ಗುಣತಃ ಅನಂತ

ಕಾಲಾಚ್ಚ ದೇಶಗುಣತೋಽಸ್ಯ ನ ಚಾದಿರಂತೋ
ವೃದ್ಧಿಕ್ಷಯೌ ನ ತು ಪರಸ್ಯ ಸದಾತನಸ್ಯ ।
ನೈತಾದೃಶಃ ಕ್ವಚ ಬಭೂವ ನ ಚೈವ ಭಾವ್ಯೋ
ನಾಸ್ಯೋತ್ತರಃ ಕಿಮು ಪರಾತ್ ಪರಮಸ್ಯ ವಿಷ್ಣೋಃ ॥ ೧೨ ॥

ಅ: ಸದಾ ಒಂದೇ ತೆರನಾಗಿರುವ ಸರ್ವೋತ್ತಮನಾದ ಈ ಭಗವಂತನಿಗೆ ಕಾಲದಿಂದಾಗಲೀ, ದೇಶ ಮತ್ತು ಗುಣಗಳಿಂದಾಗಲೀ, ಮೊದಲಾಗಲೀ ಕೊನೆಯಾಗಲೀ ಇಲ್ಲ; ವೃದ್ಧಿ ಮತ್ತು ಕ್ಷಯಗಳೂ ಇಲ್ಲ; ಬ್ರಹ್ಮಾದಿಗಳಿಗಿಂತ ಉತ್ತಮಳಾದ ಮಹಾಲಕ್ಷ್ಮಿಗೂ ಮಿಗಿಲಾದ ಈ ವಿಷ್ಣುವಿಗೆ ಸಮನಾದವನು ಎಲ್ಲೂ ಈ ಹಿಂದೆ ಆಗಿಲ್ಲ; ಮುಂದೆ ಆಗುವುದಿಲ್ಲ; ಈಗಲೂ ಇಲ್ಲವೇ ಇಲ್ಲ; ಹೀಗೆ ಸಮನೇ ಇವನಿಗೆ ಇಲ್ಲದಿರುವಾಗ ಉತ್ತಮನು ಇಲ್ಲ ಎಂದು ಹೇಳಬೇಕೇ?

---

೧೧. ಸ್ವರೂಪಪ್ರಮಿತಿಪ್ರವೃತ್ತಿಲಕ್ಷಣಸತ್ತಾತ್ರೈವಿಧ್ಯೇ ಪರಾನಪೇಕ್ಷಂ ಸ್ವತಂತ್ರಮ್ । – ತತ್ತ್ವಸಂಖ್ಯಾನಟೀಕಾ
ಸ್ವೇಚ್ಛಾನುಸಾರಿತಾಮೇವ ಸ್ವಾತಂತ್ರ್ಯಂ ಹಿ ವಿದೋ ವಿದುಃ – (ಅನುವ್ಯಾಖ್ಯಾನ)

೧೨. ಆದಿಃ ಪೂರ್ವಾವಧಿಃ ಅಂತಃ ಉತ್ತರಾವಧಿಃ । – (ವಾ. ಮತ್ತು ಜ.)

೧೨. ನನ್ವಸ್ಯ ಕೈಮುತ್ಯನ್ಯಾಯಸ್ಯ ಭಂಗೋ ಲಕ್ಷ್ಮ್ಯಾಮಿತಿ ಚೇನ್ನ । ತದ್ಗುಣವತ್ತ್ವೇ ಸತಿ ತದಧಿಕಗುಣೋ ಹಿ ಅಧಿಕಃ ಉಚ್ಯತೇ । ತಥಾ ಸತಿ ಯ ಏವ ತದಧಿಕಃ ಸ ಏವ ತತ್ಸಮಃ ಇತಿ ತದೇತತ್ ಸೂಚಿತಂ ಆಚಾರ್ಯೇಣ 'ಬಲೇನ ವಿದ್ಯಮಾನಾಽಪಿ ನ ಸಮಸ್ತತ್ವತಿಂ ವಿನಾ' ಇತಿ ತತ್ತ್ವನಿರ್ಣಯ ವಾಕ್ಯಮುದ್ಧರತಾ । –(ಜ.)

ವಿ: ೧) ಭಗವತ್ಸ್ವರೂಪದ ವರ್ಣನೆಯು ಇಲ್ಲಿ ಮುಂದುವರೆದಿದೆ.

೨) ಭಗವಂತನು ಕಾಲತಃ ದೇಶತಃ ಗುಣತಃ ಪೂರ್ಣನಾಗಿರುವುದರಿಂದ ಇವನಿಗೆ ಆದಿ ಅಂತ್ಯಗಳಾಗಲೀ, ವೃದ್ಧಿಕ್ಷಯಗಳಾಗಲಿ ಎಂದೂ ಇಲ್ಲ ಎಂದು ಭಾವ.

೩) ಸಮನೇ ಇಲ್ಲದಿರುವಾಗ ಉತ್ತಮನು ಇರುವುದಿಲ್ಲ ಎಂಬುದು ಕೈಮುತ್ಯಸಿದ್ಧ.

ಶ್ರೀಹರಿಯು ಸ್ವತಂತ್ರ - ಇತರರು ಅಸ್ವತಂತ್ರರು

ಸರ್ವಜ್ಞ ಈಶ್ವರತಮಃ ಸ ಚ ಸರ್ವಶಕ್ತಿಃ
ಪೂರ್ಣಾವ್ಯಯಾತ್ಮಬಲಚಿತ್ಸುಖವೀರ್ಯಸಾರಃ ।
ಯಸ್ಯಾಜ್ಞಯಾರಹಿತಮಿಂದಿರಯಾ ಸಮೇತಂ
ಬ್ರಹ್ಮೇಶಪೂರ್ವಕಮಿದಂ ನ ತು ಕಸ್ಯ ಚೇಶಮ್ ॥ ೧೩ ॥

ಅ: ಆ ಭಗವಂತ ಸರ್ವಜ್ಞ; ನಿಯಾಮಕರಾದ ಲಕ್ಷ್ಮೀ ಬ್ರಹ್ಮಾದಿಗಳಿಗೂ ನಿಯಾಮಕ; ಸರ್ವಸಮರ್ಥ; ಪರಿಪೂರ್ಣವೂ, ನಾಶರಹಿತವೂ, ಸ್ವರೂಪಭೂತವೂ ಆದ ಬಲ, ಜ್ಞಾನ, ಆನಂದ, ವೀರ್ಯ ಮೊದಲಾದುವುಗಳಿಂದಾಗಿ ಸರ್ವಶ್ರೇಷ್ಠ; ಅವನ ಅಪ್ಪಣೆ ಇಲ್ಲದೆ ಮಹಾಲಕ್ಷ್ಮೀಸಮೇತವಾದ ಬ್ರಹ್ಮರುದ್ರಾದಿ ಮೊದಲಾದವರಿಂದ ಕೂಡಿದ ಈ ಸಮಸ್ತಜಗತ್ತು ಯಾವುದಕ್ಕೂ ಸಮರ್ಥವಾಗದು.

ವಿ: ೧) ಪರಮಾತ್ಮನು ಸರ್ವಜ್ಞನೂ, ಮುಖ್ಯನಿಯಾಮಕನೂ, ಸರ್ವಸಮರ್ಥನೂ ಸಕಲಗುಣಪೂರ್ಣನೂ ಆದ ಸರ್ವೋತ್ತಮ; ಅವನೊಬ್ಬನೇ ಸ್ವತಂತ್ರ; ರಮಾ ಬ್ರಹ್ಮಾದಿ ಇತರ ಸಮಸ್ತರೂ ಅಸ್ವತಂತ್ರರು.

೨) 'ತೇನ ವಿನಾ ತೃಣಮಪಿ ನ ಚಲತಿ' ಎಂದು ಶ್ರುತಿ ಇದೆ; ಅವನ ಅಪ್ಪಣೆ ಇಲ್ಲದೆ ರಮಾದಿ ಯಾರೂ ಚಲಿಸಲಾರರು ಎಂಬ ಇಲ್ಲಿಯ ಭಾವ ಅದಕ್ಕೆ ವ್ಯಾಖ್ಯಾನರೂಪ.

ಶ್ರೀಹರಿ ಹಾಗೂ ಜೀವರ ಬಿಂಬ ಪ್ರತಿಬಿಂಬ ಭಾವ

ಆಭಾಸಕೋऽಸ್ಯ ಪವನಃ ಪವನಸ್ಯ ರುದ್ರಃ
ಶೇಷಾತ್ಮಕೋ ಗರುಡ ಏವ ಚ ಶಕ್ರಕಾಮೌ ।
ವೀಂದ್ರೇಶಯೋಸ್ತದಪರೇ ತ್ವನಯೋಶ್ಚ ತೇಷಾ-
ಮೃಷ್ಯಾದಯಃ ಕ್ರಮಶ ಊನಗುಣಾಃ ಶತಾಂಶಾತ್ ॥ ೧೪ ॥

ಅ: ಶ್ರೀಹರಿಗೆ ಶ್ರೀವಾಯುದೇವರು ಪ್ರತಿಬಿಂಬ; ಶ್ರೀವಾಯುದೇವರಿಗೆ ಮುಂದೆ ಶೇಷಪದವಿಗೆ ಬರುವ ರುದ್ರ ಮತ್ತು ಗರುಡ ಇಬ್ಬರೂ ಪ್ರತಿಬಿಂಬರು; ಗರುಡ ಮತ್ತು ರುದ್ರರಿಗೆ ಇಂದ್ರ ಮತ್ತು ಕಾಮರು ಪ್ರತಿಬಿಂಬರು; ಅವರಿಗೆ ಋಷಿಗಳೇ ಮೊದಲಾದವರೂ ಪ್ರತಿಬಿಂಬರು; ಪ್ರತಿಬಿಂಬರೆನಿಸುವವರು ಬಿಂಬರಾದವರಿಗಿಂತ ಗುಣತಃ ಶತಾಂಶ ನ್ಯೂನರು.

ವಿ: ೧) ಈಶ–ಜೀವರಲ್ಲಿರುವ ಬಿಂಬ–ಪ್ರತಿಬಿಂಬ ಭಾವದ ವಿವರಗಳು ಇಲ್ಲಿವೆ.

೨) 'ಆಭಾಸಕ' ಎಂದರೆ 'ಪ್ರತಿಬಿಂಬ' ಎಂದರ್ಥ; ಬಿಂಬದೊಂದಿಗೆ ಸ್ವಲ್ಪ ಸಾದೃಶ್ಯ–ವನ್ನೂ, ಸಂಪೂರ್ಣ ಆಧೀನ್ಯವನ್ನೂ ಹೊಂದಿರುವುದು ಪ್ರತಿಬಿಂಬಪದದಿಂದ ವಿವಕ್ಷಿತವಾದ ಅರ್ಥ. ಪ್ರತಿಬಿಂಬದ ಜ್ಞಾನವು ಬಿಂಬಜ್ಞಾನಕ್ಕೆ ಸಹಕಾರಿಯಾಗುವಂತೆ, ಪ್ರತಿಬಿಂಬಭೂತವಾದ ಬ್ರಹ್ಮಾದಿದೇವತಾತಾರತಮ್ಯಜ್ಞಾನ ವಿಷ್ಣುಸರ್ವೋತ್ತಮತ್ವಕ್ಕೆ ಗಮಕವೂ ಆಗಿದೆ.

೩) ಇಲ್ಲಿ 'ಪವನ' ಶಬ್ದದಿಂದ ಪೂರ್ವಪವನರಾದ 'ಬ್ರಹ್ಮದೇವರೂ' ವಿವಕ್ಷಿತ.

ಲಕ್ಷ್ಮ್ಯಾದಿಗಳ ಪ್ರತಿಬಿಂಬಭಾವ

ಆಭಾಸಕಾ ತ್ವಥ ರಮಾऽಸ್ಯ ಮರುತ್ಸ್ವರೂಪಾತ್
ಶ್ರೇಷ್ಠಾऽಪ್ಯಜಾತ್ ತದನು ಗೀಃ ಶಿವತೋ ವರಿಷ್ಠಾ।
ತಸ್ಯಾ ಉಮಾ ವಿಪತಿನೀ ಚ ಗಿರಸ್ತಯೋಸ್ತು
ಶಚ್ಯಾದಿಕಾಃ ಕ್ರಮಶ ಏವ ಯಥಾ ಪುಮಾಂಸಃ ॥ ೧೫ ॥

ಅ: ಬ್ರಹ್ಮದೇವರಿಗಿಂತಲೂ ಶ್ರೇಷ್ಠಳಾದ ಮಹಾಲಕ್ಷ್ಮಿಯು ಸ್ತ್ರೀಯರಲ್ಲಿ ಪರಮಾತ್ಮನ ಮುಖ್ಯ ಪ್ರತಿಬಿಂಬ; ರುದ್ರದೇವರಿಗಿಂತ ಶ್ರೇಷ್ಠರಾಗಿರುವ ಸರಸ್ವತಿಭಾರತಿಯರು ಆ

---

೧೪. ಭಾನಮಸಿತ್ವಮಪಿ ಚೈವಾಸಮಂತಾದ್ಧತಸ್ತತಃ।
ಜೀವ ಆಭಾಸ ಉದ್ದಿಷ್ಟಃ ಪರಮಾತ್ಮನಃ।
ನ ಜಲಾಯತ್ತಸೂರ್ಯಾದಿಪ್ರತಿಬಿಂಬೋಪಮತ್ವತಃ।
ತದಧೀನತ್ವಮೇವೇತಿ ಕಿಂಚಿತ್ಸಾದೃಶ್ಯಮೇವ ವಾ। – ಅನುವ್ಯಾಖ್ಯಾನ(೩/೨/೧೮)
ಛಾಯಾ ಯಥಾ ಪುಂಸದೃಶೀ ಪುಮಧೀನಾ ಚ ದೃಶ್ಯತೇ।
ಏವಮೇವಾತ್ಮಕಾಃ ಸರ್ವೇ ಬ್ರಹ್ಮಾದ್ಯಾಃ ಪರಮಾತ್ಮನಃ। – (ಶ್ರುತಿ, ಅ.ವ್ಯಾ.)

೧೪. ಅಪರೇ ಅಹಂಕಾರಿಕಪ್ರಾಣಾನಿರುದ್ಧಾದಿಚಂದ್ರಸೂರ್ಯಾದಯಃ। –(ಜ.)

೧೫. ಛಾಯಾ ವಿಷ್ಣೋಃ ರಮಾಸ್ತ್ಯಾಶ್ಚಾಯಾ ಧಾತಾ ವಿಶೇಷಕೌ।
ತಸ್ಯೇಂದ್ರಕಾಮೌ ಚ ತಯೋಸ್ತಯೋರಪ್ಯಖಿಲಾ ಅಪಿ। –(ಶ್ರುತಿ) ಅನುವ್ಯಾಖ್ಯಾನ

ಮಹಾಲಕ್ಷ್ಮಿಗೆ ಪ್ರತಿಬಿಂಬರು; ಸರಸ್ವತಿ ಭಾರತಿಯರಿಗೆ ಪಾರ್ವತೀ ಸುಪರ್ಣಿಯರು ಪ್ರತಿಬಿಂಬರು; ಅವರಿಗೆ ಶಚೀದೇವಿಯೇ ಮೊದಲಾದ ಸ್ತ್ರೀಯರು, ಪುರುಷರು ಹೇಗೆ ಗುಣಕ್ರಮಾನುಸಾರವಾಗಿ ಸ್ವೋತ್ತಮರಾದವರಿಗೆ ಪ್ರತಿಬಿಂಬರಾಗಿರುವರೋ, ಹಾಗೆಯೇ ಬಿಂಬ-ಪ್ರತಿಬಿಂಬ ಭಾವದಿಂದ ಕೂಡಿರುವರು.

ವಿ: ೧) ಪುರುಷರಂತೆ ಸ್ತ್ರೀಯರಲ್ಲೂ ಸಹ ಬಿಂಬ ಪ್ರತಿಬಿಂಬ ಭಾವವು ಇರುವ ಬಗೆಯನ್ನು ಈ ಶ್ಲೋಕದಲ್ಲಿ ವಿವರಿಸಿರುವರು.

೨) ಪುರುಷರ ಬಿಂಬ–ಪ್ರತಿಬಿಂಬ ಭಾವಕ್ಕೂ, ಸ್ತ್ರೀಯರಲ್ಲಿನ ಬಿಂಬ–ಪ್ರತಿಭಾವಕ್ಕೂ ಇರುವ ವಿಶೇಷವು 'ತು' ಶಬ್ದದಿಂದ ಸೂಚಿತವಾಗಿದೆ.

೩) 'ಗೀಃ' ಎಂಬ ಪದದಿಂದ ಸರಸ್ವತಿ ಮತ್ತು ಭಾರತೀ ಇಬ್ಬರೂ ವಿವಕ್ಷಿತ.

೪) ಬ್ರಹ್ಮ ವಾಯುಗಳಂತೆ ಮಹಾಲಕ್ಷ್ಮಿಯು ಪರಮಾತ್ಮನ ಪ್ರತಿಬಿಂಬರಾದರೂ, ಅವರು ಬ್ರಹ್ಮ ವಾಯುಗಳಿಗಿಂತ ತುಂಬಾ ಶ್ರೇಷ್ಠರು, ಅದರಂತೆ ಶ್ರೀಹರಿಗೆ ದ್ವಿತೀಯ ಪ್ರತಿಬಿಂಬರಾದ ಸರಸ್ವತಿ–ಭಾರತಿಯರು ಪುರುಷವರ್ಗದಲ್ಲಿ ದ್ವಿತೀಯ ಪ್ರತಿಬಿಂಬರಾದ ಗರುಡಶೇಷ–ರುದ್ರರಿಗಿಂತಲೂ ಉತ್ತಮರು.

೫) ಇಲ್ಲಿ 'ಯಥಾ ಪುಮಾಂಸಃ' ಎಂಬ ದೃಷ್ಟಾಂತವು, ಸ್ತ್ರೀಯರು ಸಹ ಪುರುಷರಂತೆ ಯಥಾಯೋಗ್ಯವಾಗಿ ಪರಸ್ಪರ ಬಿಂಬಪ್ರತಿಬಿಂಬ ಭಾವವನ್ನು ಹೊಂದಿರುವರು ಎಂಬಷ್ಟಕ್ಕೆ ಸೀಮಿತವಾಗಿದೆ ಎಂಬುದನ್ನು ವ್ಯಾಖ್ಯಾನಕಾರರು ಸ್ಪಷ್ಟಪಡಿಸಿರುವರು. ಪುರುಷರ ಕ್ರಮವೂ

---

೧೫. ಆ ಈಷತ್‌ಸ್ವನಿಷ್ಠಾದೃಶ್ಯೇನ ಭಾಸಕಃ ಸ್ವಬಿಂಬರೂಪಾನುಮಾಪಕಃ । ಅತ ಏವ ಹಿ ದರ್ಪಣಸ್ಥಪ್ರತಿಮುಖ-ದರ್ಶನೇನ ಸ್ವಮುಖಮವಲೋಕಯಂತಿ । – (ವಾ.)

ಆ ಈಷತ್ ಭಾಸತೇ ಪ್ರಕಾಶತೇ ಇತ್ಯಾಭಾಸಃ ಏವ ಪ್ರತಿಬಿಂಬಃ । ಸ ಚ ತದಧೀನಃ ತತ್ಸದೃಶಶ್ಚ ದೃಷ್ಟಃ । –(ಜ.)

೧೫. ತು ಶಬ್ದಃ ಆಭಾಸತ್ವೇ ಪೂರ್ವೋಕ್ತಾದಪಿ ವಿಶೇಷೋಽಸ್ತೀತಿ ಸೂಚಯತಿ – (ಜ.)

೧೫. 'ಪುರುಷಾನಂತರಂ ಸ್ತ್ರೀ' ಇತಿ ನಿಯಮೋ ನಾಸ್ತಿ । ಉಮಾಪ್ರತಿಬಿಂಬಾಯಾಃ ಶಚ್ಯಾಃ ಪ್ರಾಣಾವರತ್ವ-ದರ್ಶನಾತ್ । ಏವಮನ್ಯಾಸು । – (ಜ.)

೧೫. 'ಯಥಾ ಪುಮಾಂಸಃ' ಪುಂಸಾಂ ಯಥಾऽನ್ಯೋನ್ಯಂ ಬಿಂಬಪ್ರತಿಬಿಂಬಭಾವಃ ತಥಾ ನಾರೀಣಾಮಪಿ ಸ್ವಸ್ವಯೋಗ್ಯತಾನುಸಾರೇಣ ಮಿಥಃ ಬಿಂಬಪ್ರತಿಬಿಂಬಭಾವೋऽಸ್ತೀತಿ ಬಿಂಬಪ್ರತಿಬಿಂಬತ್ವಮಾತ್ರೇ ದೃಷ್ಟಾಂತಃ । ನ ತು ಪುರುಷಕ್ರಮ ಇವ ನಾರೀಣಾಮಪ್ಯೇಕಪ್ರಕಾರಕ್ರಮಃ । ....ಅತಃ ಸ್ವಸ್ವಯೋಗ್ಯತಾನುಸಾರೇಣ ಬಿಂಬ = ಪ್ರತಿ-ಬಿಂಬತ್ವಮಾತ್ರೇಣ ದೃಷ್ಟಾಂತಃ । ಅತ ಏವ ಮನುಪತ್ನೀತಃ ತತ್ಸಮಾನದಕ್ಷಪತ್ನ್ಯಾಃ ಪ್ರಸೂತೇರತಿನೀಚತ್ವಮ್ । – (ವಾ.)

ಸ್ತ್ರೀಯರ ಕ್ರಮವೂ ಒಂದೇ ತೆರನಾಗಿಲ್ಲ ; ವಾಣಿಯ ಪ್ರತಿಬಿಂಬರಾದ ಉಮಾದೇವಿಯು ರುದ್ರದೇವರಿಗಿಂತ ಕಡಿಮೆಯವರಾದ ಇಂದ್ರದೇವರಿಗಿಂತ ಉತ್ತಮರಾಗಿರುವಂತೆ, ಉಮಾ–ಪ್ರತಿಬಿಂಬರಾದ ಶಚೀದೇವಿಯು ಇಂದ್ರದೇವರಿಗಿಂತ ಕಡಿಮೆಯವರಾದ ಅಹಂಕಾರಿಕ ಪ್ರಾಣನಿಗಿಂತ ಉತ್ತಮರಾಗಿಲ್ಲ ; ಆದ್ದರಿಂದ ಪುರುಷರು ಯಾರಿಂದ ಉತ್ತಮರೋ, ಅವರ ಸ್ತ್ರೀಯರೂ ಅವರಿಂದ ಉತ್ತಮರೆಂದು ನಿಯಮವಿಲ್ಲ. ಅಹಂಕಾರಿಕ ಪ್ರಾಣನಿಗಿಂತ ಅವರಳಾದ ಶಚಿಯಲ್ಲೂ, ಮನುವಿಗಿಂತ ಅವರನಾದ ಪ್ರವಹನಗಿಂತಲೂ ಕಡಿಮೆಯಾದ ಮನುಪತ್ನಿ ಶತರೂಪಾದೇವಿಯಲ್ಲೂ, ಗುರುವಿಗಿಂತಲೂ ಅವರನಾದ ಅನೇಕ ಪುರುಷರಿಗಿಂತಲೂ ಕಡಿಮೆಯಾದ ತಾರೆಯಲ್ಲೂ, ವರುಣನಿಗಿಂತಲೂ, ಅವರರಾದ ಅನೇಕ ಪುರುಷರಿಗಿಂತಲೂ ಕಡಿಮೆಯಾದ ಗಂಗೆಯಲ್ಲೂ ಈ ನಿಯಮವು ಕಂಡಿಲ್ಲ ಎಂಬುದು ಇದಕ್ಕೆ ಗಮಕ. ಸ್ವಾಯಂಭುವ–ಮನು ಮತ್ತು ದಕ್ಷಪ್ರಜಾಪತಿ ಇಬ್ಬರೂ ಸಮಾನರಾದರೂ, ಮನುಪತ್ನಿಯಾದ ಶತರೂಪಾ–ದೇವಿಗಿಂತಲೂ, ದಕ್ಷಪತ್ನಿಯಾದ ಪ್ರಸೂತಿಯು ತುಂಬಾ ಅವರಳಾಗಿರುವುದೂ ಗಮನಾರ್ಹ.

ಗುಣತಾರತಮ್ಯದ ಬಗೆ

ತಾಭ್ಯಶ್ಚತೇ ಶತಗುಣೈರ್ದಶತೋ ವರಿಷ್ಠಾಃ
ಪಂಚೋತ್ತರೈರಪಿ ಯಥಾ ಕ್ರಮಶಃ ಶ್ರುತಿಸ್ಥಾಃ ।
ಶಬ್ದೋ ಬಹುತ್ವವಚನಃ ಶತಮಿತ್ಯತಶ್ಚ
ಶ್ರುತ್ಯಂತರೇಷು ಬಹುಧೋಕ್ತಿವಿರುದ್ಧತಾ ನ ॥ ೧೬ ॥

ಅ: ಆ ಪುರುಷರಲ್ಲಿ ಕೆಲವರು ಸ್ತ್ರೀಯರಿಗಿಂತ ನೂರುಗುಣ ಅಧಿಕರು; ಇನ್ನೂ ಕೆಲವರು ಹತ್ತುಗುಣಗಳಿಂದ ಶ್ರೇಷ್ಠರು; ಮತ್ತೆ ಕೆಲವರು ಹದಿನೈದುಗುಣಗಳಿಂದ ಉತ್ತಮರು; ಈ ಶ್ರೇಷ್ಠ್ಯಕ್ರಮವನ್ನು ಶ್ರುತಿಯಲ್ಲಿ ಹೇಳಿರುವಂತೆ ತಿಳಿಯಬೇಕು; ಶತ ಎಂಬ ಶಬ್ದಕ್ಕೆ ಬಹುತ್ವವೆಂದು ಅರ್ಥವನ್ನು ತಿಳಿದಾಗ, ವಿಭಿನ್ನಶ್ರುತಿಗಳಲ್ಲಿ ಗುಣಗಳ ವ್ಯತ್ಯಾಸವನ್ನು ಅನೇಕ ರೀತಿಯಲ್ಲಿ ಹೇಳಿದ್ದರೂ ವಿರೋಧಕ್ಕೆ ಅವಕಾಶವಿರುವುದಿಲ್ಲ.

ವಿ: ೧) ಎಲ್ಲಾ ಪುರುಷರು ಸ್ತ್ರೀಯರಿಗಿಂತ ಇಂತಿಷ್ಟೇ ಗುಣಗಳಿಂದ ಅಧಿಕರಾಗಿರಬೇಕೆಂಬ ನಿಯಮವಿಲ್ಲ. ವ್ಯತ್ಯಾಸ ನೂರು, ಹತ್ತು ಮತ್ತು ಹದಿನೈದು ಮೊದಲಾಗಿ ಅನೇಕತೆರನಾಗಿರಬಹುದು.

---

೧೬. ಶತಂ ಶತಸಹಸ್ರಂ ತು ಸರ್ವಮಕ್ಷಯ್ಯವಾಚಕಮ್ । – (ಮಹಾಭಾರತ)

ಅವರವರ ವಿಷಯದಲ್ಲಿ ಶ್ರುತಿಗಳು ಯಾವ ರೀತಿಯಲ್ಲಿ ಹೇಳಿರುವುದೋ ಅದೇ ರೀತಿಯಲ್ಲಿ ತಿಳಿಯಬೇಕು.

೨) ಕೆಲವೊಮ್ಮೆ ಶ್ರುತಿಗಳಲ್ಲಿ ಇಬ್ಬರಲ್ಲಿರುವ ಅಂತರವನ್ನು ವಿಭಿನ್ನರೀತಿಯಲ್ಲಿ ಹೇಳಿರುವಂತೆ ಕಂಡುಬರುವುದೂ ಉಂಟು. ಉದಾಹರಣೆಗೆ ತೈತ್ತಿರೀಯದಲ್ಲಿ ರುದ್ರದೇವರಿಗಿಂತ ಬ್ರಹ್ಮದೇವರು ನೂರುಗುಣಗಳಿಂದ ಅಧಿಕರು ಎಂದು ಹೇಳಿದ್ದರೆ, ಛಾಂದೋಗ್ಯದಲ್ಲಿ ಇನ್ನೂರು ಗುಣಗಳಿಂದ ಅಧಿಕರು ಎಂದು ಹೇಳಿದೆ. ಆದರೆ ಇಲ್ಲಿ ಮೊದಲನೇ ಶತ ಎಂಬುದಕ್ಕೆ 'ನೂರು' ಎಂದು ಅರ್ಥ ಮಾಡಿಕೊಳ್ಳದೇ 'ಬಹಳ' ಎಂದು ಅರ್ಥಮಾಡಿಕೊಂಡರೆ ಯಾವ ವಿರೋಧಕ್ಕೂ ಅವಕಾಶವಿರುವುದಿಲ್ಲ.

ಮುಕ್ತಿಯಲ್ಲೂ ತಾರತಮ್ಯ

ತೇಷಾಂ ಸ್ವರೂಪಮಿದಮೇವ ಯತೋಽಥ ಮುಕ್ತಾ-
ವಪ್ಯೇವಮೇವ ಸತತೋಚ್ಚವಿನೀಚರೂಪಾಃ ।
ಶಬ್ದಃ ಶತಂ ದಶ ಸಹಸ್ರಮಿತಿ ಸ್ಮ ಯಸ್ಮಾತ್
ತಸ್ಮಾನ್ನ ಹೀನವಚನೋಽಥ ತತೋಽಗ್ರ್ಯರೂಪಾಃ ॥ ೧೭ ॥

ಅ: ಈ ತಾರತಮ್ಯ ಅವರ ಸ್ವರೂಪಭೂತವೇ ಆಗಿರುವುದರಿಂದ ಮುಕ್ತಿಯಲ್ಲೂ ಅವರು ಯಾವಾಗಲೂ ನೀಚೋಚ್ಚ ಭಾವದಿಂದಲೇ ಇರುವರು; 'ದಶ ಶತಂ ಸಹಸ್ರಂ' ಎಂದು ಶ್ರುತಿಯೇ ಇರುವುದರಿಂದ 'ಶತ' ಎಂಬ ಶಬ್ಧವು ಅಲ್ಪತ್ವವಾಚಕವಾಗಿಲ್ಲ; ಆದ್ದರಿಂದ ತುಂಬಾ ಉತ್ತಮರನ್ನು ಶತಗುಣಾಧಿಕರು ಎಂದಷ್ಟೇ ಕೆಲವೆಡೆ ಕರೆದಿದ್ದರೂ ಅವರು ಶ್ರೇಷ್ಠವಾದ ಸ್ವರೂಪದವರೇ ಆಗಿರುವರು.

ವಿ: ಜೀವರ ತಾರತಮ್ಯವು ಸ್ವಾಭಾವಿಕವಾದ್ದರಿಂದ ಅದು ಸಂಸಾರದಲ್ಲಿ ಹೇಗೋ ಮುಕ್ತಿಯಲ್ಲೂ ಸದಾ ಹಾಗೆಯೇ ಇರುವುದು ಎಂದು ಭಾವ.

ಜೀವ ತ್ರೈವಿಧ್ಯ

ಏವಂ ನರೋತ್ತಮಪರಾಸ್ತು ವಿಮುಕ್ತಿಯೋಗ್ಯಾ
ಅನ್ಯೇ ಚ ಸಂಸೃತಿಪರಾ ಅಸುರಾಸ್ತಮೋಗಾಃ ।
ಏವಂ ಸದೈವ ನಿಯಮಃ ಕ್ವಚಿದನ್ಯಥಾ ನ
ಯಾವನ್ನ ಪೂರ್ತಿರುತ ಸಂಸೃತಿಗಾಃ ಸಮಸ್ತಾಃ ॥ ೧೮ ॥

27/04/07

ಅ: ಹೀಗೆ ವಾಯುದೇವರನ್ನು ಆಶ್ರಯಿಸುವವರು ಮುಕ್ತಿಯೋಗ್ಯರು, ಇತರರು ನಿತ್ಯಸಂಸಾರಿಗಳು; ಅಸುರರು ತಮೋಯೋಗ್ಯರು. ಇದು ಸದಾ ಇರುವ ನಿಯಮ; ಎಲ್ಲೂ ಬದಲಾಗದು. ಸಾಧನೆ ಪೂರೈಸುವವರೆಗೂ ಸಕಲರೂ ಸಂಸಾರದಲ್ಲಿರುವರು.

ವಿ: ೨) ಇಲ್ಲಿ 'ಪೂರ್ತಿ' ಎಂದರೆ ಅವರವರಿಗೆ ಯೋಗ್ಯವಾದ ಸಾಧನ ಸಂಪೂರ್ತಿ ಎಂದರ್ಥ.

ಜೀವರು ಅನಂತ

ಪೂರ್ತಿಶ್ಚ ನೈವ ನಿಯಮಾದ್ಭವಿತಾ ಹಿ ಯಸ್ಮಾತ್
ತಸ್ಮಾತ್ ಸಮಾಪ್ತಿಮಪಿ ಯಾಂತಿ ನ ಜೀವಸಂಘಾಃ ।
ಆನಂತ್ಯಮೇವ ಗಣಶೋಽಸ್ತಿ ಯತೋ ಹಿ ತೇಷಾ-
ಮಿತ್ಥಂ ತತಃ ಸಕಲಕಾಲಗತಾ ಪ್ರವೃತ್ತಿಃ ॥ ೧೯ ॥

ಅ: ಸಾಧನಸಂಪೂರ್ತಿಯು ಸಕಲರಿಗೂ ಶ್ರೀಹರಿನಿಯಮದಿಂದಾಗಿ ಏಕಕಾಲಕ್ಕೆ ಆಗುವುದಿಲ್ಲವಾದ್ದರಿಂದ ಜೀವರ ಸಮೂಹಗಳು ಸಮಾಪ್ತಿಯನ್ನು ಎಂದೂ ಹೊಂದುವುದೇ ಇಲ್ಲ; ಜೀವರಿಗೆ ಆನಂತ್ಯವು ಗಣಶಃ ಇರುವುದರಿಂದಾಗಿ, ಹೀಗೆ ಸೃಷ್ಟ್ಯಾದಿರೂಪ ಪ್ರವೃತ್ತಿಯು ಸಕಲಕಾಲಗಳಲ್ಲಿಯೂ ಇದ್ದೇ ಇರುವುದು.

---

೧೭. ಸತ್ತಾಪ್ರತೀತಿಕಾರ್ಯೇಷು ಪುಮಧೀನೋ ಯಥೇಯತೇ ।
ಆಭಾಸ ಏವಂ ಪುರುಷಾಃ ಮುಕ್ತಾಶ್ಚ ಪರಮಾತ್ಮನಃ । – ಶ್ರುತಿಃ (ಅನುವ್ಯಾಖ್ಯಾನ– ೩/೨/೧೮)

೧೮. ಚತುರಾನನಪೂರ್ವವಿಮುಕ್ತಗಣಾ ಹರಿಮೇತ್ಯ ತು ಪೂರ್ವವದೇವ ಸದಾ ।
ನಿಯತೋಚ್ಚವಿನೀಚತಯೈವ ನಿಜಾಂ ಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ । –ದ್ವಾದಶಸ್ತೋತ್ರ ೩,೭

೧೯. ಯಾವನ್ನ ಪೂರ್ತಿರಿತ್ಯತ್ರ ಪೂರ್ತಿಃ ಸ್ವಯೋಗ್ಯಸಾಧನಸಂಪೂರ್ತಿರುತ ತಾವತ್ ಸಮಸ್ತಾಸ್ತ್ರಿವಿಧಾ ಜೀವಾ ಅಪಿ ಸಂಸೃತಿಗಾ ಇತ್ಯರ್ಥಃ । – (ವಾ)

೧೯. ಯಥೈವ ಕಾಲನಿಯಮಃ ಸುರಾದಿನಿಯಮಸ್ತಥಾ।
ತಸ್ಮಾನ್ನಾನೀದೃಶಂ ಕ್ವಾಪಿ ವಿಶ್ವಮೇತದ್ಭವಿಷ್ಯತಿ । – ಪುರಾಣವಾಕ್ಯ

'ಧಾತಾ ಯಥಾಪೂರ್ವಮಕಲ್ಪಯತ್ ।' – ಶ್ರುತಿಃ

'ಅನಂತ್ಯಮೇವ ಗಣಶಃ' ಇತ್ಯತ್ರ ಬ್ರಹ್ಮಪದಯೋಗ್ಯಜೀವಗಣಾಃ ರುದ್ರಪದಯೋಗ್ಯಜೀವಗಣಾಃ ಇಂದ್ರಪದಯೋಗ್ಯಜೀವಗಣಾಃ' ಇತ್ಯಾದಿನಾ ಗಣೈರಾನಂತಮಸ್ತಿ। ಅನೇನ ಪ್ರಕಾರೇಣ ಗಣಾನಾಮಪ್ಯಾನಂತ್ಯಮಸ್ತಿ। ಗಣಾಂತರ್ಗತಜೀವಾನಾಮಾನಂತ್ಯಮಸ್ತೀತಿ ಭಾವಃ । – (ವಾ)

ಎ: ಜೀವರ ಸಂಖ್ಯೆಯು ಗಣಶಃ ಅನಂತ ಎಂದರೆ ಸಾತ್ವಿಕರು, ರಾಜಸರು ಮತ್ತು ತಾಮಸರು ಎಂಬ ತ್ರಿವಿಧಜೀವರು ಪ್ರತ್ಯೇಕವಾಗಿ ಅನಂತಸಂಖ್ಯಾಕರು; ಮಾತ್ರವಲ್ಲದೆ ಮುಕ್ತಿಯೋಗ್ಯ ಜೀವರಲ್ಲಿಯೂ ಋಜುಗಣ, ರುದ್ರಗಣ, ಇಂದ್ರಗಣ ಮೊದಲಾಗಿ ಪ್ರತಿಯೊಂದು ಗುಂಪಿನ ಜೀವರೂ, ತಮೋಯೋಗ್ಯ ಜೀವರಲ್ಲಿಯ ಕಲ್ಯಾದಿ ಗಣಗಳೂ ಸಹ ಪ್ರತ್ಯೇಕ ಪ್ರತ್ಯೇಕವಾಗಿಯೇ ಅನಂತಸಂಖ್ಯಾಕನಾಗಿರುವರು, ಕಾಲಾನಂತ್ಯಕ್ಕಿಂತ ಜೀವಾನಂತ್ಯವು ಮಿಗಿಲಾದುದು ಎಂದು ಭಾವ.

ಶ್ರೀಹರಿಯ ಗುಣಗಳು ಅನಂತ

ಏತೈಃ ಸುರಾದಿಭಿರತಿಪ್ರತಿಭಾದಿಯುಕ್ತೈ-
ರ್ಯುಕ್ತೈಸ್ಸಹೈವ ಸತತಂ ಪ್ರವಿಚಿಂತಯದ್ಭಿಃ ।
ಪೂರ್ತೇರಚಿಂತ್ಯಮಹಿಮಃ ಪರಮಃ ಪರಾತ್ಮಾ
ನಾರಾಯಣೋಽಸ್ಯ ಗುಣವಿಸ್ತತಿರನ್ಯಗಾ ಕ್ವ ॥ ೨೦ ॥

ಅ: ಅತ್ಯಂತ ಹೆಚ್ಚಿನ ಪ್ರತಿಭೆ ಮೊದಲಾದ ಗುಣಗಳಿಂದ ಕೂಡಿದಂತಹ ಇಂತಹ ಸಕಲದೇವತೆಗಳೂ ಸತತವಾಗಿ ಚಿಂತಿಸುತ್ತಿದ್ದರೂ ಪೂರ್ಣನಾದ್ದರಿಂದ ಸರ್ವೋತ್ತಮನೂ ಸರ್ವಸ್ವಾಮಿಯೂ ಆದ ಶ್ರೀಹರಿಯು ಅವರ ಚಿಂತನೆಗೂ ಎಟುಕದ ಮಹಾಮಹಿಮ-ನಾಗಿರುವನು; ಇಂತಹ ಅವನ ಗುಣವಿಸ್ತಾರವು ಇತರೆಡೆಗಳಲ್ಲಿ ಎಂತಿರುವುದು?

ಎ: ದೇವತೆಗಳು ಸಹಜವಾಗಿಯೇ ಪ್ರತಿಭಾದಿಗುಣಸಂಪನ್ನರು; ಸದಾ ವೇದಾದಿಸಚ್ಛಾಸ್ತ್ರ ವಿಚಾರಶೀಲರು; ಇವರೆಲ್ಲ ಒಟ್ಟಾಗಿ ಸೇರಿ ಸದಾಕಾಲವೂ ಪರಮಾತ್ಮನನ್ನು ಚಿಂತಿಸುತ್ತಿದ್ದರೂ, ಅವನ ಮಹಿಮೆ ಇವರಾರಿಗೂ ಸಾಕಲ್ಯವಾಗಿ ಗೋಚರಿಸಿಲ್ಲ; ಚಿಂತನೆಗೂ ಎಟುಕದಂತಹ ಇವನ

---

೨೦. ಸಂತತಂ ಚಿಂತಯೇನಂತಂ ಅಂತಕಾಲೇ ವಿಶೇಷತಃ ।
ನೈವೋದಾಪುರ್ಗುಣಂತೋಽಂತಂ ಯದ್ಗುಣಾನಾಮಜಾದಯಃ । –(ದ್ವಾದಶಸ್ತೋತ್ರ)

ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ॥ – (ಭಾಗವತ ೨/೭/೪೦)

ಗಾಯನ್ ಗುಣಾನ್ ದಶಶತಾನನ ಆದಿದೇವಃ ।
ಶೇಷೋಽಧುನಾಽಪಿ ಸಮವಸ್ಯತಿ ನಾಸ್ಯ ಪಾರಮ್ । – (ಭಾಗವತ)

ಬ್ರಹ್ಮೇಶಾನಾದಿಭಿರ್ದೇವೈಃ ಸಮೇತೈರ್ಯದ್ಗುಣಾಂಶಕಃ ।
ನಾವಸಾಯಯಿತುಂ ಶಕ್ಯೋ ವ್ಯಾಚಕ್ಷಾಣೈಶ್ಚ ಸರ್ವದಾ । – ಮಹಾಭಾರತ

ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ । –ಋ.(೧/೧೫೫/೧)

ಗುಣವಿಸ್ತಾರ ಬೇರೆಯವರಿಗೆ ಹೇಗೆ ತಾನೇ ಬಂದೀತು? ಆದ್ದರಿಂದ ಶ್ರೀಹರಿಯೇ ಸರ್ವೋತ್ತಮ; ಸರ್ವಸ್ವಾಮಿ ಎಂದು ಭಾವ.

ಹರಿಯೊಂದಿಗೆ ಇತರರಿಗೆ ಸಾಮ್ಯ ಐಕ್ಯಗಳು ಅಸಾಧ್ಯ

ಸಾಮ್ಯಂ ನ ಚಾಸ್ಯ ಪರಮಸ್ಯ ಚ ಕೇನ ಚಾಪ್ಯಂ
ಮುಕ್ತೇನ ಚ ಕ್ವಚಿದತಸ್ತ್ವಭಿದಾ ಕುತೋಽಸ್ಯ ।
ಪ್ರಾಪ್ಯೇತ ಚೇತನಗಣೈಃ ಸತತಾಸ್ವತಂತ್ರೈಃ
ನಿತ್ಯಸ್ವತಂತ್ರವಪುಷಃ ಪರಮಾತ್ ಪರಸ್ಯ ॥ ೨೧ ॥

ಅ: ಈ ಪರಮಾತ್ಮನೊಂದಿಗೆ ಸಾಮ್ಯವನ್ನು ಜೀವೋತ್ತಮನಾದ ಮುಕ್ತಬ್ರಹ್ಮನೂ, ಎಂದೂ ಹೊಂದಲಾರ; ಎಂದ ಮೇಲೆ ಸದಾ ಅಸ್ವತಂತ್ರ ಇತರ ಚೇತನಸಮುದಾಯಗಳು ನಿತ್ಯ ಸ್ವತಂತ್ರದೇಹನೂ ಬ್ರಹ್ಮಾದಿಗಳಿಗಿಂತ ಶ್ರೇಷ್ಠಳಾದ ಮಹಾಲಕ್ಷ್ಮಿಗಿಂತಲೂ ಉತ್ತಮನೂ ಆದ ಇವನೊಂದಿಗೆ ಅಭೇದವನ್ನು ಹೇಗೆ ತಾನೇ ಹೊಂದಿಯಾವು?

ವಿ: ೧) ಜೀವೋತ್ತಮರಾದ ಬ್ರಹ್ಮದೇವರಿಗೇ ಶ್ರೀಹರಿಯ ಸಾಮ್ಯ ಅಶಕ್ಯವಾಗಿರುವಾಗ, ಅಸ್ವತಂತ್ರರಾದ ಇತರ ಜೀವರು ಅವನೊಂದಿಗೆ ಐಕ್ಯಪಡೆಯುವುದೆಂತು ಎಂದರ್ಥ. ಸಾಮ್ಯವೇ ಅಶಕ್ಯವಾಗಿರುವಾಗ, ಐಕ್ಯ ಸರ್ವಥಾ ಅಶಕ್ಯವೆಂಬುದು ಕೈಮುತ್ಯಸಿದ್ಧ.

೨) ಐಕ್ಯ ನಿರಾಸದಿಂದ ಅದ್ವೈತಮತವೂ, ಸಾಮ್ಯನಿರಾಸದಿಂದ ವಿಶಿಷ್ಟಾದ್ವೈತಮತವೂ ನಿರಸ್ತ ಎಂದು ತಿಳಿಯಬೇಕು

ಸಕಲ ಶಾಸ್ತ್ರಗಳ ಸಾರ ಶ್ರೀಹರಿಯ ಪಾರಮ್ಯವೇ

ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ
ರಾಮಾಯಣೈಃ ಸಹಿತಭಾರತಪಂಚರಾತ್ರೈಃ ।
ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈ-
ರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥ ೨೨ ॥

---

೨೨. ಶಾಸ್ತ್ರವಚನೈಃ – ಸರ್ವೋತ್ತಮತ್ವಾನುಕೂಲಪುರಾಣಸ್ಮೃತ್ಯಾದಿಶಾಸ್ತ್ರವಚನೈಃ -(ವಾ)

೨೨. ರಾಮಾಯಣೈಃ – ರಾಮಾಯಣಗತವಾಕ್ಯೈಃ ಯದ್ವಾ ಪ್ರಕಾರಾಂತರೇಣ ಬಹೂನಾಂ ರಾಮಾಯಣಾನಾಂ ಸತ್ತ್ವಾದ್ ಬಹುವಚನಂ -(ಜ)

ಅ: ಈ ವಿಷಯವೇ ಸಕಲವೇದವಾಕ್ಯಗಳಿಂದಲೂ ಭಾರತಪಂಚರಾತ್ರರಾಮಾಯಣ-ಗಳಿಂದಲೂ, ತತ್ತ್ವಸೂತ್ರಸಮೇತವಾದ ಇತರ ಶಾಸ್ತ್ರವಚನಗಳಿಂದಲೂ, ಸದಾ ಶ್ರೀಹರಿಯಿಂದ ಸಾಭಿಪ್ರಾಯವಾಗಿ ನಿರ್ಣಯಿಸಲ್ಪಟ್ಟಿದೆ.

ವಿ: ೧) ಈವರೆಗೆ ಹೇಳಿದ ಸಕಲವಿಷಯಗಳಿಗೂ ಆಧಾರವಾದ ಪ್ರಮಾಣಗಳ ವಿವರವನ್ನು ಇಲ್ಲಿ ಸಂಗ್ರಹಿಸಲಾಗಿದೆ.

೨) ಇಲ್ಲಿ ಶಾಸ್ತ್ರವಚನಗಳು ಎಂದರೆ ಹರಿಸರ್ವೋತ್ತಮತ್ವಕ್ಕೆ ಅನುಕೂಲವಾದ ಪುರಾಣ ಸ್ಮೃತಿ ಮೊದಲಾದವುಗಳ ವಚನಗಳು ಎಂದರ್ಥ.

೩) **ರಾಮಾಯಣೈಃ ಸಹಿತಭಾರತಪಂಚರಾತ್ರೈಃ** ಎಂಬಲ್ಲಿನ ಬಹುವಚನಕ್ಕೆ ರಾಮಾಯಣಗತ, ಭಾರತ, ಪಂಚರಾತ್ರಗತ ವಚನಗಳಿಂದ ಎಂದು ಅರ್ಥ; ಪ್ರತಿಕಲ್ಪದಲ್ಲೂ ರಾಮಾಯಣ, ಭಾರತ, ಪಂಚರಾತ್ರಾದಿಗಳು ಇರುವುದರಿಂದ ಅವೆಲ್ಲವುಗಳನ್ನು ಗ್ರಹಿಸಬೇಕು ಎಂಬ ದೃಷ್ಟಿಯಿಂದಲೂ ಸಹ ಇಲ್ಲಿಯ ಬಹುವಚನವು ಸಾರ್ಥಕವಾಗಿದೆ. **ತತ್ತ್ವಸೂತ್ರೈಃ** ಎಂಬುದಕ್ಕೂ ಸಹ ಇದೇ ರೀತಿ ಅರ್ಥ ಮಾಡಿಕೊಳ್ಳಬೇಕು.

೪) ಶಾಸ್ತ್ರಕಾರರಾದ ಶ್ರೀವೇದವ್ಯಾಸರಿಗೆ ಅವುಗಳಲ್ಲಿ ಮಹಾತಾತ್ಪರ್ಯವಿರುವುದನ್ನು 'ಸಹೃದಯಂ' ಎಂಬ ಪದದಿಂದ ಸೂಚಿಸಿರುವರು.

೫) ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಈ ನಾಲ್ಕು ವೇದಗಳು;ರಾಮಾಯಣ, ಭಾರತ ಮತ್ತು ಪಂಚರಾತ್ರ ಈ ಮೂರೂ ಇತಿಹಾಸಗಳು; ಒಟ್ಟಾಗಿ ಈ ಏಳು 'ಸದಾಗಮ'ಶಬ್ದವಾಚ್ಯವಾದ ಮಹಾಪ್ರಮಾಣಗಳು. ಅನ್ಯಶಾಸ್ತ್ರವಚನಗಳು ಎಂದರೆ, ಈ ಏಳಕ್ಕೆ ಅನುಕೂಲವಾದ ಭಾಗವತಾದಿ ಪುರಾಣಗಳು ಎಂದರ್ಥ.

ಶ್ರೀಹರಿ ಸರ್ವೋತ್ತಮತ್ವಾದಿಗಳ ಬಗ್ಗೆ ಪ್ರಮಾಣ ಸಂಕಲನ

ನಾರಾಯಣಸ್ಯ ನ ಸಮಃ, ಪುರುಷೋತ್ತಮೋಽಹಂ,
ಜೀವಾಕ್ಷರೇ ಹ್ಯಧಿಗತೋಽಸ್ಮಿತತೋಽನ್ಯದಾರ್ತಮ್, ।
ಮುಕ್ತೋಪಸೃಪ್ಯ, ಇಹ ನಾಸ್ತಿ ಕುತಶ್ಚ ಕಶ್ಚಿ-,
ನ್ನಾನೇವ, ಧರ್ಮಪೃಥಗಾತ್ಮದೃಗೇತ್ಯಧೋ ಹಿ, ॥ ೨೩ ॥

---

೨೨. ಸಹೃದಯಂ – ಸಾಭಿಪ್ರಾಯಂ – (ವಾ, ಜ)

ಅ: 'ನಾರಾಯಣನಿಗೆ ಸಮರಿಲ್ಲ', 'ಸಕಲ ಜೀವರ ಮತ್ತು ಮಹಾಲಕ್ಷ್ಮಿಯ ಹೃದಯದಲ್ಲಿ ಅವರಿಗಿಂತ ಉತ್ತಮನಾಗಿ ನೆಲೆಸಿರುವುದರಿಂದ ನಾನೇ ಪುರುಷೋತ್ತಮನಾಗಿರುವೆ', 'ಅವನನ್ನು ಬಿಟ್ಟು ಇತರರೆಲ್ಲ ದುಃಖಿಗಳು', 'ಮುಕ್ತಜೀವರು ಇವನನ್ನು ಹೊಂದುವರು', 'ಇವನು ಸ್ವಗತಭೇದವಿವರ್ಜಿತ', 'ಇವನಲ್ಲಿ ಭೇದ ಕಾಣುವವನೂ ಮತ್ತು ಇವನಿಗೂ ಇವನ ಧರ್ಮಾದಿಗಳಿಗೂ ಭೇದಕಾಣುವವನೂ ಅಧೋಗತಿಯನ್ನೇ ಹೊಂದುವನು.'

ವಿ: ೧) ಮೇಲೆ ಹೇಳಿದ ಪ್ರಮಾಣಗ್ರಂಥಗಳಿಂದ ಕೆಲವು ವಾಕ್ಯಗಳನ್ನು ಇಲ್ಲಿಂದ ಮುಂದಿನ ಎಂಟು ಶ್ಲೋಕಗಳಲ್ಲಿ ಸೂಚಿಸುತ್ತಿರುವರು.

ಇಲ್ಲಿ ಸೂಚಿತವಾಗಿರುವ ಪ್ರಮಾಣವಾಕ್ಯಗಳ ಪೂರ್ಣಪಾಠ ಹೀಗಿದೆ;

(೧) **ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ।**
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥– ಭಾರತ (೧/೧/೧೮)

(೨) **ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ।**
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ – (ಗೀತಾ ೧೫/೧೮)

(೩) **ತತೋಽನ್ಯದಾರ್ತಮ್** –(ಶ್ರುತಿಃ)

(೪) **ಮುಕ್ತೋಪಸೃಪ್ಯವ್ಯಪದೇಶಾತ್** - (ಬ್ರಹ್ಮಸೂತ್ರ ೧/೩/೨)

(೫) **ನೇಹನಾನಾಸ್ತಿ ಕಿಂಚನ** –(ಕಠ ಶ್ರುತಿಃ)

(೬) **ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ।** – ಕಠ (೪/೧೦)

(೭) **ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ।**
ಏವಂ ಧರ್ಮಾನ್ ಪೃಥಕ್ ಪಶ್ಯನ್ ತಾನೇವಾನುಧಾವತಿ ॥ –(ಕಠಶ್ರುತಿ ೪/೧೪)

---

೨೨. ಋಗ್ಯಜುಃಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ । –(ಸ್ಕಂದಪುರಾಣ)

೨೨. ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ । –(ಸ್ಕಂದಪುರಾಣ)

ಯೇಚಾನುಯಾಯಿನಸ್ತೇಷಾಂ ಸರ್ವೇ ತೇ ಚ ಸದಾಗಮಾಃ । –(ಬ್ರಹ್ಮಾಂಡಪುರಾಣ)

೨೩. ಇಹ ಬ್ರಹ್ಮಣಿ ಶ್ರೌತನಾನಾಪದೋಕ್ತಭೇದಃ, ಕಶ್ಚಿತ್‌ಕಶ್ಚಿದಪ್ಯವತಾರಭೇದೋ ವಾ, ಗುಣಗುಣಭೇದೋ ವಾ, ಅವಯವಭೇದೋ ವಾ, ಅನ್ಯೋನ್ಯಂ ವಿರೋಧರೂಪಭೇದೋ ವಾ, ವೈಲಕ್ಷಣ್ಯರೂಪಭೇದೋ ವಾ, ವಿನಾಶರೂಪಭೇದೋ ವಾ, ವ್ಯಾಪ್ತತ್ವಾತ್ ಸ್ಥಾನಭೇದೋ ವಾ, ನಾಸ್ತೀತಿ ಸೂಚಕವಾಕ್ಯಸ್ಯಾರ್ಥಃ । – (ವಾ)

೨) ಪರಮಾತ್ಮನಲ್ಲಿ 'ಯಾವುದೇ ಭೇದ'ವಿಲ್ಲ ಎಂದರೆ, ಅವನ ಅವತಾರಗಳಲ್ಲಿ ಪರಸ್ಪರ ಭೇದವಾಗಲೀ, ಗುಣಗುಣಿರೂಪ ಭೇದವಾಗಲೀ, ಅವಯವ ಅವಯವಿರೂಪ ಭೇದವಾಗಲೀ, ವೈಲಕ್ಷಣ್ಯರೂಪ ಭೇದವಾಗಲೀ, ವಿನಾಶರೂಪಭೇದವಾಗಲೀ, ಸ್ಥಾನಭೇದರೂಪ ಭೇದವಾಗಲೀ ಇಲ್ಲ ಎಂದರ್ಥ.

'ಆಭಾಸ ಏವ' ಪೃಥಗೀಶತ ಏಷ ಜೀವೋ
ಮುಕ್ತಸ್ಯ ನಾಸ್ತಿ ಜಗತೋ ವಿಷಯೇ ತು ಶಕ್ತಿಃ ।
ಮಾತ್ರಾ ಪರೋಽಸಿ ನ ತು ತೇಽಶ್ನುವತೇ ಮಹಿತ್ವಂ
ಷಾಡ್ಗುಣ್ಯವಿಗ್ರಹಸುಪೂರ್ಣಗುಣೈಕದೇಹ ॥ ೨೪ ॥

ಅ: 'ಜೀವನು ಪರಮಾತ್ಮನ ಪ್ರತಿಬಿಂಬನು' 'ಅವನಿಗಿಂತ ಭಿನ್ನನು', 'ಮುಕ್ತಜೀವನಿಗೆ ಜಗನ್ನಿರ್ಮಾಣಾದಿ ಸಾಮರ್ಥ್ಯವಿರುವುದಿಲ್ಲ'; 'ಪರಮಾತ್ಮನೇ ನೀನು ದೇಶಕಾಲಗಳಿಗೆ ಅತೀತನಾದವನು'; 'ಈ ಜೀವರೆಂದೂ ನಿನ್ನ ಮಹಿಮೆಯನ್ನು ಹೊಂದಲಾರರು'; 'ಐಶ್ವರ್ಯಾದಿ ಷಡ್ಗುಣಮಯದೇಹನೇ ! ಪರಿಪೂರ್ಣಗುಣಗಳನ್ನೇ ಶರೀರವನ್ನಾಗಿ ಹೊಂದಿರುವವನೇ !'

ಏ: ಇಲ್ಲಿ ಗೃಹೀತವಾಗಿರುವ ಪ್ರಮಾಣಗಳು ಕ್ರಮವಾಗಿ ಹೀಗಿವೆ :

(೧) ಆಭಾಸ ಏವ ಚ । – (ಬ್ರಹ್ಮಸೂತ್ರ ೨/೩/೫೦)

(೨) ಪೃಥಗುಪದೇಶಾತ್ । – (ಬ್ರಹ್ಮಸೂತ್ರ ೨/೩/೨೮)

(೩) ಜಗದ್ವ್ಯಾಪಾರವರ್ಜ್ಯಮ್। – (ಬ್ರಹ್ಮಸೂತ್ರ ೪/೪/೧೭)

(೪) ಪರೋ ಮಾತ್ರಯಾ ತನ್ವಾ ವ್ಯಧಾನ ನ ತೇ ಮಹಿತ್ವಮನ್ವಶ್ನುವಂತಿ । – (ಶ್ರುತಿ)

(೫) ಜಿತಂತೇ ಪುಂಡರೀಕಾಕ್ಷ ಪೂರ್ಣಷಾಡ್ಗುಣ್ಯವಿಗ್ರಹ । – (ಜಿತಂತೇ ಸ್ತೋತ್ರ)

(೬) ಸಚ್ಚಿದಾನಂದರೂಪಾಯ ವರೇಣ್ಯಾಯ ನಮೋ ನಮಃ ॥ – (ಪಂಚರಾತ್ರ)

(೭) ಸುಪೂರ್ಣಗುಣೈಕದೇಹ ಇತ್ಯನೇನ ತಸ್ಯ ಪ್ರಿಯಮೇವ ಶಿರಃ । ಮೋದೋ ದಕ್ಷಿಣಃ ಪಕ್ಷಃ। ಪ್ರಮೋದ ಉತ್ತರ ಪಕ್ಷಃ। ಆನಂದ ಆತ್ಮಾ। ಬ್ರಹ್ಮ ಪುಚ್ಛಂ ಪ್ರತಿಷ್ಠಾ। ಇತಿ ಬ್ರಹ್ಮವಲ್ಲೀಸ್ಥ ಶ್ರುತಿಂ, ಆನಂದೋ ಬ್ರಹ್ಮೇತಿ ವ್ಯಜಾನಾತ್, ಇತಿ ಭೃಗುವಲ್ಲೀಸ್ಥ ಶ್ರುತಿಂ, ವಿದಿತೋಽಸಿ ಭವಾನ್ ಸಾಕ್ಷಾತ್ ಪುರುಷಃ ಪ್ರಕೃತೇಃ ಪರಃ । ಕೇವಲಾನುಭವಾನಂದಸ್ವರೂಪಃ ಸರ್ವಬುದ್ಧಿದೃಕ್ ॥ ಇತಿ ಭಾಗವತೋಕ್ತವಸುದೇವವಾಕ್ಯಂ 'ಜ್ಞಾನಿನೋ ಜ್ಞಾನಯಜ್ಞೇನ ಯಜಂತಿ ಜ್ಞಾನವಿಗ್ರಹಮ್। ಇತಿ ತತ್ಪೈವೋಕ್ತಾಕ್ರೂರವಾಕ್ಯಂ', ಆನಂದಮೂರ್ತಿಮುಪಗುಹ್ಯ ಜಹುಸ್ತದಾಧಿಂ । ದೋರ್ಭ್ಯಾಂ ಸ್ತನಾಂತರಗತಂ ಪರಿರಭ್ಯ ಗಾಢಮಾನಂದಮೂರ್ತಿಮಜಹಾದತಿ ದೀರ್ಘತಾಪಂ ಇತಿ ಶುಕವಾಕ್ಯಂ ಚ ಸಂಗೃಹ್ಣಾತಿ । – (ವಾ)

ಮಾಹಾತ್ಮ್ಯದೇಹ ಸ್ಮೃತಿಮುಕ್ತಗತ್ತೇ ಶಿವಶ್ಚ
ಬ್ರಹ್ಮಾ ಚ ತದ್ಗುಣಗತೌ ನ ಕಥಂಚನೇಶೌ ।
ನ ಶ್ರೀಃ ಕುತಸ್ತದಪರೇಽಸ್ಯ ಸುಖಸ್ಯ ಮಾತ್ರಾ-
ಮಶ್ನಂತಿ ಮುಕ್ತಸುಗಣಾಶ್ಚ ಶತಾವರೇಣ ॥ ೨೫ ॥

ಅ: ''ಮಹಿಮಾಯುಕ್ತವಾದ ಶರೀರವುಳ್ಳವನೇ''! ''ಸಂಸಾರ ಮತ್ತು ಮೋಕ್ಷ ಈ ಎರಡಕ್ಕೂ ಸ್ವಾಮಿಯೇ,'' ''ರಮಾದೇವಿಯಾಗಲೀ, ಬ್ರಹ್ಮನಾಗಲೀ, ರುದ್ರನಾಗಲೀ ಅವನ ಗುಣಗಳನ್ನು ಪೂರ್ಣವಾಗಿ ಅರಿಯುವಲ್ಲಿ ಯಾವ ರೀತಿಯಲ್ಲೂ ಸಮರ್ಥರಲ್ಲ ಉಳಿದವರ ಪಾಡೇನು?'' ಮುಕ್ತರ ಗುಂಪುಗಳು ಸಹ ಈ ಪರಮಾತ್ಮನ ಆನಂದಲೇಶವನ್ನೇ ಶತಗುಣಹೀನ ಕ್ರಮದಲ್ಲಿ ಅನುಭವಿಸುವವು.

ವಿ: ಇಲ್ಲಿ ಗೃಹೀತವಾಗಿರುವ ಪ್ರಮಾಣ ವಾಕ್ಯಗಳು ಈ ತೆರನಾಗಿವೆ:

(೧) ಮಾಹಾವಿಭೂತೇ ಮಾಹಾತ್ಮ್ಯಶರೀರ
— (ಮೋಕ್ಷಧರ್ಮ-ಭಾರತ ೩೩೮/೧೭೪-೫)

(೨) ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ —(ಸ್ಕಂದ ಪುರಾಣ)
ಉತಾಮೃತಸ್ಯೇಶಾನೋ ಯದನ್ನೇನಾತಿರೋಹತಿ —(ಪುರುಷ ಸೂಕ್ತ)

(೩) ಸೋಽಮೃತಸ್ಯಾಭಯಸ್ಯೇತೋ ಮರ್ತ್ಯಮನ್ನಂ ಯದತ್ಯಗಾತ್।
ವರಂ ವರಯ ಭದ್ರಂ ತೇ ಋತೇ ಕೈವಲ್ಯಮಾತ್ಮನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥ —(ಭಾಗವತ ೧೦/೫೧/೨೦)

(೪) ನಾಂತಂ ಗುಣಾನಾಮಗುಣಸ್ಯ ಜಗ್ಮುರ್ಯೋಗೇಶ್ವರಾ ಯೇ ಭವಪಾದ್ಮಮುಖ್ಯಾಃ।
— (ಭಾಗವತ)

(೫) ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವ ॥
— ಶ್ರುತಿಃ (ಅಂಭೃಣೀ ಸೂಕ್ತ)

---

೨೫. ಮಾಹಾತ್ಮ್ಯದೇಹ ಇತ್ಯಸ್ಯ ಸಹಸ್ರಶೀರ್ಷತ್ವಂ ಸರ್ವವ್ಯಾಪ್ತತ್ವಂ ಮುಖಾದ್ಯವಯವೈಃ ಇಂದ್ರಾಗ್ನಿಚಂದ್ರ-ಸೂರ್ಯಪ್ರಾಣಭೂಮ್ಯಂತರಿಕ್ಷದ್ಯೌದಿಗಾಧೀನಾಂ ಸ್ರಷ್ಟೃತ್ವಂ, ಮಾತೃಯೋನೇರ್ನಿಃಸಾರಣದಶಾಯಾಮೇವ ಶ್ರೀವತ್ಸಕೌಸ್ತುಭಶಂಖಗದಾದಿಸ್ವಮೂಲರೂಪದಿವ್ಯಲಕ್ಷಣವತ್ತ್ವಂ ಶೈಶವೇಽಪಿ ಜಗದುದರವತ್ತ್ವಂ, ಗೋಕುಲಸ್ಥ ಬಹುತರರಜ್ಜುಭಿರಪ್ಯಬದ್ಧತ್ವಂ, ತದೈವ ಗಿರ್ಯುದ್ಧಾರಕತ್ವಂ, ಸೌತ್ಯಕರ್ತೃಸೂಕ್ಷ್ಮದೇಹಸ್ಯೈವ ದಿಗಂತವ್ಯಾಪ್ತ- ದೇಹತ್ವಂ ಬ್ರಹ್ಮೇಶಾದಿಸಕಲದೇವಾದ್ಯಾಧಾರತ್ವಮಿತ್ಯಾದಿ ಮಹಾಮಹಾತ್ಮ್ಯಂ ದೇಹೇ ಯಸ್ಯ ತತ್ಸಂಬುದ್ಧಿಃ ಹೇ ಮಾಹಾತ್ಮ್ಯದೇಹ। ಅನೇನ ಪುರುಷಸೂಕ್ತಭಾಗವತಗೀತಾದಿಪ್ರಮಾಣಾನಿ ಸಂಗೃಹೀತಾನಿ। — (ವಾ)

(೬) ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ – (ಶ್ರುತಿಃ)

ಸೈಷಾऽऽನಂದಸ್ಯಮೀಮಾಂಸಾ ಭವತಿ – (ಶ್ರುತಿಃ)

ಆಭಾಸಕ್ಯಾಭಾಸಪರಾವಭಾಸ-
ರೂಪಾಣ್ಯಜಸ್ರಾಣಿ ಚ ಚೇತನಾನಾಮ್ ।
ವಿಷ್ಣೋಃಸದೈವಾತಿವಶಾತ್ ಕದಾಽಪಿ
ಗಚ್ಛಂತಿ ಕೇಶಾದಿಗಣಾ ನ ಮುಕ್ತೌ ॥ ೨೬ ॥

ಅ: ವಿಷ್ಣುವಿಗೆ ಮುಖ್ಯಪ್ರತಿಬಿಂಬರಾದ ಶ್ರೀವಾಯುದೇವರು, ಅವರಿಗೆ ಪ್ರತಿಬಿಂಬರಾದ ಶ್ರೀರುದ್ರದೇವರು, ಮತ್ತು ಅವರಿಗೆ ಪ್ರತಿಬಿಂಬರಾದ ಇಂದ್ರದೇವರು ಮತ್ತು ಅವರಿಗೆ ಪ್ರತಿಬಿಂಬರಾದ ಪ್ರಾಣ ದಕ್ಷ ಮೊದಲಾದವರು ಇವೇ ಮೊದಲಾದ ಚೇತನರ ರೂಪಗಳು ನಿತ್ಯವಾಗಿವೆ; ಬ್ರಹ್ಮರುದ್ರ ಮೊದಲಾದ ಜೀವರ ಸಮೂಹಗಳು ಮುಕ್ತಿಯಲ್ಲೂ ಸದಾ ವಿಷ್ಣುವಿಗೆ ಅತ್ಯಂತ ವಶವಾಗಿರುವುದರಿಂದ ಅವರೆಲ್ಲಾ ಎಂದೂ ಅವನನ್ನು ಅತಿಕ್ರಮಿಸಿ ಹೋಗಲಾರರು.

ವಿ: ೧) ಭಗವಂತನಿಗೆ ಪ್ರತಿಬಿಂಬರಾದ ಬ್ರಹ್ಮರುದ್ರಾದಿ ಸಕಲಚೇತನರೂ ಸಂಸಾರದಲ್ಲೂ ಮುಕ್ತಿಯಲ್ಲೂ ಸದಾ ಮಹಾವಿಷ್ಣುವಿನ ಅಧೀನರಾಗಿರುವರು. ಇವರಾರೂ ಅವನನ್ನು ಎಂದೂ ಅತಿಕ್ರಮಿಸಿ ಹೋಗಲಾರರು.

೨) ಇಲ್ಲಿ ವಿವಕ್ಷಿತವಾದ ಬ್ರಹ್ಮಾದಿ ಮನುಷ್ಯೋತ್ತಮವರೆಗಿನ ಪ್ರತಿಬಿಂಬತ್ವವು ಜ್ಞಾನಾನಂದಾದಿ ಗುಣಗಳೊಂದಿಗಿನ ಸಾದೃಶ್ಯಮಾತ್ರ ನಿಮಿತ್ತವೂ ತದಧೀನತ್ವನಿಮಿತ್ತವೂ ಆಗಿದೆ;

---

೨೬. ಸ್ವಶರೀರಾಂತರ್ಗತವಿಚಿತ್ರಭಗವದಾಕಾರಸದೃಶಾಕಾರವತ್ತ್ವಮಾತ್ರೇಣ ಯತ್ಪ್ರತಿಬಿಂಬತ್ವಮುಕ್ತಂ ತದತ್ರ ನ ವಿಚಾರ್ಯತೇ । ಕಿಂತು ಜ್ಞಾನಾನಂದಾದಿಗುಣಮಾತ್ರಸಾದೃಶ್ಯೇನ ತದಧೀನತ್ವೇನ ಚ ಬ್ರಹ್ಮಾದಿನರೋತ್ತಮಾಂತಶುಭಜೀವಾನಾಂ ಯತ್ಪ್ರತಿಬಿಂಬತ್ವಂ ತದತ್ರ ವಿಚಾರ್ಯತೇ। ತತ್ರೋಕ್ತಮಾಕಾರಸಾಮ್ಯಂ ನಾತ್ರ ವಿವಕ್ಷಿತಮ್ । – (ವಾ)

೨೬. ಸ್ವಸ್ವಬಿಂಬರೂಪಾಣಾಮೇವ ಸರ್ವೇ ಜೀವಾ ಅಧೀನಾಃ । ನ ತ್ವಬಿಂಬ ಭಗವದಾದಿ ರೂಪಾಣಾಮಪೀತಿ ಶಂಕಾಪರಿಹಾರಾಯ ಸೌತ್ಪಾಭಾಸಪದಸೂಚಿತಮಿದಮಪ್ಯಾಭಾಸತ್ವಂ ವಿಚಾರ್ಯತೇ ಇತ್ಯನುಸಂಧೇಯಮ್ । ಅತ ಏವೈತೇ ಕ್ರಮಿಕಾಭಾಸಾ ಇತಿ ವಿವೇಕೋ ದ್ರಷ್ಟವ್ಯಃ। – (ವಾ)

೨೬. ''ಮಾರುತೇ ವೇಧಸಿ ಬ್ರಧ್ನೇ ಪುಂಸಿ ಕಃ ಕಂ ಶಿರೋऽಂಬುನೋಃ ।'' ಇತಿ ವಚನಾತ್ ಪ್ರಲಯಕಾಲೀನಜಲರೂಪಾ ಶ್ರೀಃ ಬ್ರಹ್ಮಾ ಚ ಕಶಬ್ದೇನೈವೋಚ್ಯತೇ। – (ವಾ)

೨೬. ಆಭಾಸಕೇತ್ಯಾದಿ ಶ್ರುತಿವಚನಮೇವ। ನ ಸ್ವವಚನಮ್ । –(ವಾ)

ಅವರವರ ಶರೀರಾಂತರ್ಗತವಾದ ವಿಚಿತ್ರಭಗವದಾಕಾರಸದೃಶಆಕಾರವನ್ನು ಹೊಂದಿರುವಿಕೆ ಎಂಬ ಪ್ರತಿಬಿಂಬತ್ವವಲ್ಲ;

೩) ಸರ್ವಜೀವರೂ ತಮ್ಮ ತಮ್ಮ ಬಿಂಬರೂಪಗಳಿಗೆ ಮಾತ್ರ ಅಧೀನರು, ಬಿಂಬವಾಗದ ಇವರ ಭಗವದ್ರೂಪಗಳಿಗಲ್ಲ ಎಂದು ಸಹ ತಿಳಿಯಕೂಡದು, ಸರ್ವಜೀವರೂ ಸರ್ವ–ಭಗವದ್ರೂಪಗಳಿಗೂ ಸದಾ ಒಂದೇ ರೀತಿಯಲ್ಲಿ ಅಧೀನರು.

೪) 'ಕೇಶಾದಿಗಣಾ' ಎಂಬ ಪದದಲ್ಲಿನ 'ಕ' ಶಬ್ದವು ಪ್ರಲಯಕಾಲೀನ ಜಲರೂಪದ ಮಹಾಲಕ್ಷ್ಮಿಯನ್ನು ಮತ್ತು ಬ್ರಹ್ಮದೇವರನ್ನು ಸಹ ಸೂಚಿಸುವುದು.

೫) ಈ ಸಮಗ್ರ ಶ್ಲೋಕ ಒಂದು ಶ್ರುತಿವಾಕ್ಯ.

ಯಸ್ಮಿನ್ ಪರೇಽನ್ಯೇಽಪ್ಯಜಜೀವಕೋಶಾ
ನಾಹಂ ಪರಾಯುರ್ನ ಮರೀಚಿಮುಖ್ಯಾಃ ।
ಜಾನಂತಿ ಯದ್ಗುಣಗಣಾನ್ ನ ರಮಾದಯೋಽಪಿ
ನಿತ್ಯಃ ಸ್ವತಂತ್ರ ಉತ ಕೋಽಸ್ತಿ ತದನ್ಯ ಈಶಃ ✓ **॥ ೨೭ ॥**

ಅ: ಆ ಸರ್ವೋತ್ತಮನಾದ ಶ್ರೀಹರಿಯಲ್ಲಿ ಇತರ ಅನಂತಬ್ರಹ್ಮಾಂಡಗಳೂ ನೆಲೆಸಿವೆ; ಅವನ ಗುಣರಾಶಿಗಳನ್ನು ನಾನಾಗಲೀ, ಬ್ರಹ್ಮನಾಗಲೀ, ಮರೀಚಿ ಮೊದಲಾದ ಮಹರ್ಷಿ-ಗಳಾಗಲೀ ಎಂದೂ ಸಾಕಲ್ಯೇನ ತಿಳಿಯಲಾರೆವು; ಮಹಾಲಕ್ಷ್ಮಿ ಮೊದಲಾದವರು ಅರಿತಿಲ್ಲ. ಅವನ ಹೊರತು ನಿತ್ಯನೂ, ಸ್ವತಂತ್ರನೂ, ಸರ್ವಸಮರ್ಥನೂ ಆದವನು ಬೇರೆ ಯಾವನಿರುವನು?

ವಿ: ಇದರಲ್ಲಿ ಸೂಚಿತವಾಗಿರುವ ಭಾಗವತಶ್ಲೋಕಗಳು ಹೀಗಿವೆ:–

ವಯಂ ನ ತಾತ ಪ್ರಭವಾಮ ಭೂಮ್ನೋ ಭವಂತಿ ಕಾಲೇ ನ ಭವಂತಿ ಹೀದೃಶಾಃ ।
ಯಸ್ಮಿನ್ ಪರೇಽನ್ಯೇಽಪ್ಯಜಜೀವಕೋಶಾಃ ಸಹಸ್ರಶೋ ಯತ್ರ ವಯಂ ಭ್ರಮಾಮಃ ॥

– ಭಾಗವತ (೮/೪/೫೬)

– (ಇದು ದುರ್ವಾಸರನ್ನು ಕುರಿತು ರುದ್ರದೇವರು ಹೇಳಿದ ಮಾತು).

ನಾಹಂ ಪರಾಯುರ್ಋಷಯೋ ನ ಮರೀಚಿಮುಖ್ಯಾಃ ।
ಜಾನಂತಿ ಯದ್ವಿರಚಿತಂ ಖಲು ಸತ್ತ್ವಸಂಪ್ಲವಾಃ ॥ – ಭಾಗವತ (೮/೧೨/೧೦)

''ಅಜಜೀವಕೋಶಾಃ–ಎಂದರೆ ಬ್ರಹ್ಮಾಂಡಗಳು ಎಂದರ್ಥ.

---

೨೭. 'ಅಜಸ್ಯ ಬ್ರಹ್ಮಣಃ ಜೀವಕೋಶಾಃ ಜೀವಾನಾಂ ಕೋಶಸ್ಥಾನೀಯಾಃ ಬ್ರಹ್ಮಾಂಡಾನಿ'' – (ವಾ)

ಜೀವೇಶ್ವರಭೇದ ಐದು ಕಾರಣದಿಂದಾದುದು

ನೈವೈಕ ಏವ ಪುರುಷಃ ಪುರುಷೋತ್ತಮೋಽಸಾ-
ವೇಕಃ ಕುತಃ ಸ ಪುರುಷೋ ಯತ ಏವ ಜಾತ್ಯಾ
ಅರ್ಥಾಚ್ಛ್ರುತೇಶ್ಚ ಗುಣತೋ ನಿಜರೂಪತಶ್ಚ
ನಿತ್ಯಾನ್ಯ ಏವ ಕಥಮಸ್ಮಿ ಸ ಇತ್ಯಪಿ ಸ್ಯಾತ್ ॥ ೨೮ ॥

ಅ: ಚೇತನನು ಒಬ್ಬನೇ ಅಲ್ಲ; ಅನೇಕ ಚೇತನರಿರುವರು; ಶ್ರೀಹರಿಯೇ ಪುರುಷೋತ್ತಮ; ಅವನು ಈ ಜೀವರೊಂದಿಗೆ ಹೇಗೆ ಅಭಿನ್ನನಾದಾನು? ಅವನು ಈಶ್ವರಜಾತಿಗೆ ಸೇರಿದವನು, ಆಪ್ತಕಾಮ; 'ದ್ವಾಸುಪರ್ಣಾ' ಇತ್ಯಾದಿ ಶ್ರುತಿಗಳಿಂದಲೂ ಭಿನ್ನನೆಂದೇ ಹೇಳಲ್ಪಟ್ಟವನು, ಅನಂತಗುಣಪೂರ್ಣ ಮತ್ತು ಸರ್ವತ್ರವ್ಯಾಪ್ತಸ್ವರೂಪನು ಈ ಕಾರಣಗಳಿಂದಾಗಿ ಸದಾ ಸಕಲಜೀವರಿಂದಲೂ ಭಿನ್ನವಾಗಿರುವನು; ಅಂತಹ ಭಗವಂತನೇ ನಾನಾಗಿರುವೆನು ಎಂದು ಹೇಳುವುದು ಹೇಗೆ ಯುಕ್ತವಾದೀತು?

ವಿ: ೧) ಇಲ್ಲಿ ಗೃಹೀತವಾಗಿರುವ ವಾಕ್ಯಗಳು ಕ್ರಮವಾಗಿ ಹೀಗಿವೆ :

ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ।
ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ॥

– ಮೋಕ್ಷಧರ್ಮ (ಮಹಾಭಾರತ ೩೫೦/೨)

ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಂ ॥

– ಮೋಕ್ಷಧರ್ಮಪರ್ವ (ಮಹಾಭಾರತ ೩೫೦/೩)

ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋಽರ್ಥತಃ ।
ಕಥಮಸ್ಮಿ ಸ ಇತ್ಯೇವ ಸಂಬಂಧಃ ಸ್ಯಾದಸಂಹಿತಃ ॥

– ಮೋಕ್ಷಧರ್ಮಪರ್ವ (ಮಹಾಭಾರತ ೨೧೮/೩೫)

(ಇವೆಲ್ಲ ಮಹಾಭಾರತ ಮೋಕ್ಷಧರ್ಮಪರ್ವದಲ್ಲಿ ಜನಮೇಜಯರಾಜನ ಪ್ರಶ್ನೆಗಳಿಗೆ ವೈಶಂಪಾಯನರು ನೀಡಿದ ಉತ್ತರರೂಪ ಶ್ಲೋಕಗಳು).

---

೨೮. ಸುವಿರುದ್ಧಸ್ವರೂಪತ್ವಾಜ್ಜೀವಾದನ್ಯತಮೋ ಹರಿಃ । – ಇತಿ ವಾಮನೇ (ಭಾ. ತಾ. ೭/೨/೩೮)

ಅಲ್ಪಸಂಪೂರ್ಣಶಕ್ತಿತ್ವಾತ್ ಅಲ್ಪಸಂಪೂರ್ಣಸುಖತ್ವತಃ ।
ಅಲ್ಪಸಂಪೂರ್ಣದರ್ಶಿತ್ವಾನ್ನ ಸಾಮ್ಯಂ ಜೀವಕೃಷ್ಣಯೋಃ – ಇತಿ ಬ್ರಹ್ಮಾಂಡೇ (ಭಾ.ತಾ.೧೦/೭೫/೪೨)

೨) ಇಲ್ಲಿ 'ಜಾತಿತಃ' ಎಂದರೆ 'ಈಶ್ವರತ್ವಜಾತಿಯಿಂದಾಗಿ' ಎಂದರ್ಥ.

ಅಲ್ಪಶಕ್ತಿತ್ವ, ಅಲ್ಪಜ್ಞತ್ವ, ಪರಾಧೀನತೆ, ಅಪೂರ್ಣತ್ವ ಅನ್ಯಾಶ್ರಯತ್ವ ಇವುಗಳು ಜೀವಜಾತಿಯ ಲಕ್ಷಣಗಳು; ಸರ್ವಶಕ್ತಿತ್ವ, ಸರ್ವಜ್ಞತ್ವ, ಸ್ವತಂತ್ರತ್ವ, ಪೂರ್ಣತ್ವ, ಸರ್ವಾಶ್ರಯತ್ವ ಇವು ಈಶ್ವರಜಾತಿಯ ಲಕ್ಷಣಗಳು; ಹೀಗೆ ವಿಭಿನ್ನಜಾತಿಯ ಜೀವ ಮತ್ತು ಈಶ್ವರರು ಅಭಿನ್ನರಾಗಲು ಹೇಗೆ ತಾನೆ ಸಾಧ್ಯ? ಎಂದು ಭಾವ.

೩) ಅರ್ಥಾತ್– ಪರಮಾತ್ಮನು ತನ್ನ ಸ್ವಶಕ್ತಿಯಿಂದಲೇ ಸಕಲಪ್ರಯೋಜನಗಳನ್ನು ಸದಾ ಹೊಂದಿರುವ ಪೂರ್ಣಪುರುಷ; ಜೀವನು ಎಂದೂ ಹಾಗಲ್ಲ.

೪) ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನ್ಯೋ ಅಭಿಚಾಕಶೀತಿ ॥ ಶ್ರುತಿಃ

ಇತ್ಯಾದಿ ಅಸಂಖ್ಯಶ್ರುತಿಗಳಲ್ಲಿ ಜೀವೇಶ್ವರಭೇದವೇ ಉಕ್ತವಾಗಿದೆ.

೫) ಗುಣತಃ – ಪರಮಾತ್ಮನು ಜ್ಞಾನಾನಂದಾದಿ ಅಪರಿಮಿತ ಗುಣಪೂರ್ಣನು; ಜೀವರು ಅಲ್ಪಗುಣಕರು.

ಇಷ್ಟೆಲ್ಲಾ ಕಾರಣಗಳಿಂದಾಗಿ ಜೀವೇಶ್ವರೈಕ್ಯವು ಎಂದೂ ಅಸಂಗತವೇ ಸರಿ ಎಂದು ಭಾವ. ಇದು 'ಅಭಿದಾ ಕುತೋಽಸ್ಯ' ಮತ್ತು 'ಪರತಮಃ ಪರಮಾತ್ ಸ ಏಕಃ' ಎಂಬುದಕ್ಕೆ ಪ್ರಮಾಣ.

ಹರಿಸರ್ವೋತ್ತಮತ್ವಾದಿ ಪ್ರಮೇಯದ ಉಪಸಂಹಾರ

ಸರ್ವೋತ್ತಮೋ ಹರಿರಿದಂ ತು ತದಾಜ್ಞಯೈವ
ಚೇತ್ತುಂ[೨೯] ಕ್ಷಮಂ ಸ ತು ಹರಿಃ ಪರಮಃ ಸ್ವತಂತ್ರಃ ।
ಪೂರ್ಣಾವ್ಯಯಾಗಣಿತನಿತ್ಯಗುಣಾರ್ಣವೋಽಸಾ-
ವಿತ್ಯೇವ ವೇದವಚನಾನಿ ಪರೋಕ್ತಯಶ್ಚ ॥ ೨೯ ॥

ಅ: ಶ್ರೀಹರಿಯು ಸರ್ವೋತ್ತಮ; ಈ ಸಕಲ ಜಗತ್ತು ಅವನ ಆಜ್ಞೆಯಿಂದಲೇ ಜ್ಞಾನವನ್ನು ಪಡೆಯಲು ಸಮರ್ಥವಾಗಿದೆ, ಅವನಾದರೋ ಸರ್ವಶ್ರೇಷ್ಠನೂ, ಸ್ವತಂತ್ರನೂ, ಪೂರ್ಣವೂ, ಹ್ರಾಸರಹಿತವೂ, ಅನಂತವೂ, ನಿತ್ಯವೂ ಆದ ಗುಣಗಳಿಂದ ಸಾಗರ; ಈ ರೀತಿಯಾಗಿ ವೇದವಚನಗಳೂ, ಭಗವದುಕ್ತಿಗಳೂ ಸಾರುತ್ತಿವೆ.

---

೨೯. ಚಿತಿಸಂಜ್ಞಾನೇ ಇತಿ ಧಾತೋಃ ವೇತ್ತುಮ್ । – (ವಾ)

ಎ: 'ನಿರ್ದೋಷಪೂರ್ಣಗುಣವಿಗ್ರಹ' ಇತ್ಯಾದಿಯಾದ ತಮ್ಮ ಮಾತುಗಳಿಗೆ 'ಅಥೋऽ–ಯಮೇವ' ಎಂಬುದಾಗಿಪ್ರಮಾಣಗಳನ್ನು ಉದಾಹರಿಸಲು ಪ್ರಾರಂಭಿಸಿದ ಶ್ರಮದಾಚಾರ್ಯರು ಆ ವಿಷಯವನ್ನು ಹೀಗೆ ಉಪಸಂಹರಿಸಿರುವರು. ಇದು 'ಗತಿಸಾಮಾನ್ಯಾತ್' ಎಂಬ ಸೂತ್ರದ ಅರ್ಥ.

ಸಚ್ಛಾಸ್ತ್ರಗಳು - ಬ್ರಹ್ಮಸೂತ್ರ

ಋಗಾದಯಶ್ಚ ಚತ್ವಾರಃ ಪಂಚರಾತ್ರಂ ಚ ಭಾರತಮ್ ।
ಮೂಲರಾಮಾಯಣಂ ಬ್ರಹ್ಮಸೂತ್ರಂ ಮಾನಂ ಸ್ವತಃ ಸ್ಮೃತಮ್ ॥ ೩೦ ॥

ಅವಿರುದ್ಧಂ ತು ಯತ್ ತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ ।
ಏತದ್ವಿರುದ್ಧಂ ಯತ್ ತು ಸ್ಯಾನ್ನ ತನ್ಮಾನಂ ಕಥಂಚನ ॥ ೩೧ ॥

ಅ: ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂಬ ನಾಲ್ಕು, ಪಂಚರಾತ್ರ, ಮಹಾಭಾರತ, ಮೂಲರಾಮಾಯಣ ಮತ್ತು ಬಹ್ಮಸೂತ್ರ ಇವು ಸ್ವತಃ ಪ್ರಮಾಣವಾದ ಗ್ರಂಥಗಳು. ಇವಕ್ಕೆ ವಿರುದ್ಧವಾಗಿಲ್ಲದ ಅನುಕೂಲವಾದ ಸಕಲಗ್ರಂಥಗಳೂ ಪ್ರಮಾಣವೇ ಆಗಿವೆ; ಇವುಗಳಿಗೆ ವಿರುದ್ಧವಾದದ್ದು ಮಾತ್ರ ಯಾವರೀತಿಯಲ್ಲೂ ಪ್ರಮಾಣವಲ್ಲ.

ವಿ: ೧) ಋಗಾದಿ ನಾಲ್ಕು ವೇದಗಳು – ಅಪೌರುಷೇಯ ಗ್ರಂಥಗಳು. ಮಹಾಭಾರತ, ಮೂಲರಾಮಾಯಣ ಮತ್ತು ಪಂಚರಾತ್ರ ಈ ಮೂರೂ ಇತಿಹಾಸಗಳು. ಇವುಗಳಲ್ಲಿ ಮಹಾಭಾರತವು ವ್ಯಾಸಕೃತ; ಮೂಲರಾಮಾಯಣವು ಹಯಗ್ರೀವಕೃತ ಮತ್ತು ಪಂಚರಾತ್ರವು ನಾರಾಯಣಕೃತ. ಒಟ್ಟಾಗಿ ಈ ಏಳು ನಿರ್ಣೇಯಶಾಸ್ತ್ರವೆಂದು ಪ್ರಸಿದ್ಧವಾದ ಗ್ರಂಥಗಳು. ಮಹಾಭಾರತವು ಲಕ್ಷಶ್ಲೋಕಾತ್ಮಕವಾದುದು; ಪಂಚರಾತ್ರ ಮತ್ತು ಮೂಲರಾಮಾಯಣಗಳು ಶತಕೋಟಿಶ್ಲೋಕಾತ್ಮಕ ಗ್ರಂಥಗಳು.

---

೩೧. ಪಂಚರಾತ್ರಂ ಭಾರತಂ ಚ ಮೂಲರಾಮಾಯಣಂ ತಥಾ ।
ಇತಿಹಾಸ ಇತಿ ಪ್ರೋಕ್ತೋ ಬ್ರಾಹ್ಮಾದ್ಯ ಚ ಪುರಾಣಕಮ್ । – ಬೃಹದ್ಭಾಷ್ಯ (೩/೫)

೩೧. 'ಅವಿರುದ್ಧಂ ಯತ್ತ್ವಸ್ಯ' ಇತ್ಯನೇನ ಕಿಂ ಸಂಗೃಹೀತಮಿತಿ ನ ಶಂಕನೀಯಮ್ । ಅವೈಷ್ಣವಪುರಾಣಾದಿಷು ವಿದ್ಯಮಾನವೇದಾನುಕೂಲವಾಕ್ಯಾನಾಮೇತದನುಕೂಲಭಾಷ್ಯಾನುವ್ಯಾಖ್ಯಾನಾದಿಶಿಷ್ಟಕೃತಗ್ರಂಥಾನಾಂ ಚ ಸಂಗ್ರಾ-ಹ್ಯತ್ವಸೂಚನಾಯ ಸಾರ್ಥಕ್ಯಾತ್ । – (ವಾ)

೨) ದೈವೀಮೀಮಾಂಸಾ, ಕರ್ಮಮೀಮಾಂಸಾ ಮತ್ತು ಬ್ರಹ್ಮಮೀಮಾಂಸಾ ಎಂಬ ಮೂರು ಮೀಮಾಂಸೆಗಳಲ್ಲಿ ಒಂದಾದ ಬ್ರಹ್ಮಮೀಮಾಂಸೆಯೇ ಬ್ರಹ್ಮಸೂತ್ರ; ಈ ಮೂರಕ್ಕೆ ನಿರ್ಣಾಯಕಶಾಸ್ತ್ರ ಎಂದೂ ಹೆಸರು. ಇವುಗಳಲ್ಲಿ ಮಾತ್ರವಲ್ಲದೆ ಸಕಲ ನಿರ್ಣೀಯ ನಿರ್ಣಾಯಕ ಶಾಸ್ತ್ರಗಳಲ್ಲೂ ಬ್ರಹ್ಮಸೂತ್ರವೇ ಮಿಗಿಲು. ಇದರಲ್ಲಿ ಒಟ್ಟು ೨೨೨ ಅಧಿಕರಣಗಳೂ ೫೬೪ ಸೂತ್ರಗಳೂ ಇವೆ. ಇದರಲ್ಲಿ ಒಟ್ಟು ನಾಲ್ಕು ಅಧ್ಯಾಯಗಳು ಇದ್ದು ಅವುಗಳಿಗೆ ಕ್ರಮವಾಗಿ ಸಮನ್ವಯಾಧ್ಯಾಯ, ಅವಿರೋಧಾಧ್ಯಾಯ, ಸಾಧನಾಧ್ಯಾಯ ಮತ್ತು ಫಲಾಧ್ಯಾಯ ಎಂದು ಹೆಸರು.

೩) ಸ್ವತಃ ಪ್ರಮಾಣಗ್ರಂಥಗಳೆಂದರೆ ತಮ್ಮ ಪ್ರಾಮಾಣ್ಯದ ಸಿದ್ಧಿಗಾಗಿ ಬೇರೊಂದು ಪ್ರಮಾಣವನ್ನು ಅವಲಂಬಿಸದೆ ಇರುವ ಗ್ರಂಥಗಳು ಎಂದು ಅರ್ಥ. ವೇದಗಳೂ ಅಪೌರುಷೇಯವಾದ್ದರಿಂದ ಅವುಗಳಲ್ಲಿ ಅಪ್ರಾಮಾಣ್ಯಕ್ಕೆ ಕಾರಣವಾಗುವ ದೋಷಗಳ ಪ್ರಸಕ್ತಿಯೇ ಇಲ್ಲ; ಇತಿಹಾಸಗಳು ಪ್ರಮಾಣವೆಂದು ವೇದಗಳಿಂದ ಅಂಗೀಕೃತವಾಗಿರುವುದರಿಂದ ಅವುಗಳಿಗೆ ಅಪ್ರಾಮಾಣ್ಯದ ಶಂಕೆ ಇಲ್ಲ; ಬ್ರಹ್ಮಸೂತ್ರವು ಶ್ರುತಿಮೂಲತ್ವದೊಂದಿಗೆ ಯುಕ್ತಿಮೂಲತ್ವ ಮತ್ತು ಆಪ್ತಿಮೂಲತ್ವಗಳನ್ನೂ ನಿರವಧಿಕವಾಗಿ ಹೊಂದಿರುವುದರಿಂದ ಪರಮಪ್ರಮಾಣವಾಗಿದೆ.

೪) ಇಲ್ಲಿಂದ ಪ್ರಾರಂಭಿಸಿ ೪೭ನೇ ಶ್ಲೋಕದವರೆಗಿನ ವಾಕ್ಯಗಳು 'ಭವಿಷ್ಯತ್ಪರ್ವ'ವೆಂಬ ಉಪಪುರಾಣಕ್ಕೆ ಸೇರಿವೆ.

೫) 'ಅವಿರುದ್ಧಂ ತು ಯತ್ತ್ವಸ್ಯ' ಎಂಬ ಮಾತಿನಿಂದ ಅವೈಷ್ಣವ ಪುರಾಣಗಳಲ್ಲಿರುವ ವೇದಾನುಕೂಲವಾಕ್ಯಗಳೂ, ಮತ್ತು ಅದರಂತೆ ಅನುಗುಣವಾಗಿರುವ ಭಾಷ್ಯ, ಅನುವ್ಯಾಖ್ಯಾನ ಮೊದಲಾದ ಸಕಲಶಿಷ್ಟಕೃತ ಗ್ರಂಥಗಳೂ ಗೃಹೀತವಾಗಿವೆ.

ವೈಷ್ಣವ ಪುರಾಣಗಳೂ, ಮನ್ವಾದಿ ಸ್ಮೃತಿಗಳೂ ಪ್ರಮಾಣವೇ

ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಮಕತ್ವತಃ ।
ಪ್ರಮಾಣಾನ್ಯೇವ ಮನ್ವಾದ್ಯಾಃ ಸ್ಮೃತಯೋಽಪ್ಯನುಕೂಲತಃ ॥ ೩೨ ॥

ಏತೇಷು ವಿಷ್ಣೋರಾಧಿಕ್ಯಮುಚ್ಯತೇಽನ್ಯಸ್ಯ ನ ಕ್ವಚಿತ್ ।
ಅತಸ್ತದೇವ ಮಂತವ್ಯಂ ನಾನ್ಯಥಾ ತು ಕಥಂಚನ ॥ ೩೩ ॥

---

೩೨. ಅನುಕೂಲತಃ ಅನುಕೂಲತ್ವಾತ್ । – (ವಾ)

೩೨. ಪುರಾಣಾನಾಂ ಸ್ಮೃತೀನಾಂ ಚ ಸರ್ವತ್ರ ಪ್ರಾಮಾಣ್ಯಭಾವಾನ್ನ ಪಂಚರಾತ್ರಾದಿಭಿಃ ಸಹ ಪಾಠ ಇತಿ ಭಾವಃ । – (ವಾ)

ಅ: ಪಂಚರಾತ್ರೋಕ್ತ ವಿಷಯಗಳನ್ನೇ ಪ್ರತಿಪಾದಿಸುವ ಕಾರಣದಿಂದಾಗಿ ವೈಷ್ಣವ-ಪುರಾಣಗಳು ಪ್ರಮಾಣಗಳೇ ಆಗಿವೆ. ಅದರಂತೆ, ವೇದಾದಿ ಸ್ವತಃಪ್ರಮಾಣಗ್ರಂಥಗಳಿಗೆ ಅನುಕೂಲವಾಗಿರುವುದರಿಂದ ಮನುಸ್ಮೃತಿ ಮೊದಲಾದ ಸ್ಮೃತಿಗಳು ಸಹ ಪ್ರಮಾಣಗಳೇ ಆಗಿವೆ. ಈ ಎಲ್ಲಾ ಗ್ರಂಥಗಳಲ್ಲೂ ವಿಷ್ಣುವಿನ ಸರ್ವೋತ್ತಮತ್ತ್ವವೇ ಪ್ರತಿಪಾದಿತವಾಗಿದೆ; ಬೇರೆಯವುಗಳಿಗೆ ಅಂತಹ ಉತ್ತಮತ್ತ್ವವು ಎಲ್ಲೂ ಉಕ್ತವಾಗಿಲ್ಲ; ಆದ್ದರಿಂದ ವಿಷ್ಣುಸರ್ವೋತ್ತಮತ್ತ್ವವನ್ನೇ ತತ್ತ್ವವೆಂದು ತಿಳಿಯಬೇಕು; ಬೇರೆ ರೀತಿಯಲ್ಲಿ ಸರ್ವಥಾ ತಿಳಿಯಕೂಡದು.

ವಿ: ೧) ಪುರಾಣಗಳು ಮತ್ತು ಸ್ಮೃತಿಗಳು ಪಂಚರಾತ್ರಾದಿಗಳಂತೆ ಸರ್ವತ್ರ ಪ್ರಾಮಾಣ್ಯ ಹೊಂದಿಲ್ಲ; ಎಂಬ ಕಾರಣದಿಂದ ಇವುಗಳನ್ನು ಅವುಗಳ ಜೊತೆ ಸೇರಿಸಿ ಹೇಳಿಲ್ಲ.

೨) ಪಂಚರಾತ್ರ ಮತ್ತು ವೈಷ್ಣವ ಪುರಾಣಗಳಲ್ಲಿ ಪ್ರತಿಪಾದ್ಯವಾಗಿರುವ ವಿಷ್ಣು-ಸರ್ವೋತ್ತಮತ್ವಾದಿ ಪ್ರಮೇಯಗಳು ಒಂದೇ ಆಗಿರುವುದರಿಂದ **'ಪಂಚರಾತ್ರಾತ್ಮಕತ್ವತಃ'** ಎಂದು ಕರೆದಿರುವರು.

ಇತರ ಶಾಸ್ತ್ರಗಳು ಮೋಹಕ

ಮೋಹಾರ್ಥಾನ್ಯನ್ಯಶಾಸ್ತ್ರಾಣಿ ಕೃತಾನ್ಯೇವಾಜ್ಞಯಾ ಹರೇಃ ।
ಅತಸ್ತೇಷೂಕ್ತಮಗ್ರಾಹ್ಯಮಸುರಾಣಾಂ ತಮೋಗತೇಃ ॥ ೩೪ ॥

ಯಸ್ಮಾತ್ ಕೃತಾನಿ ತಾನೀಹ ವಿಷ್ಣುನೋಕ್ತೈಃ ಶಿವಾದಿಭಿಃ ।
ಏಷಾಂ ಯನ್ನ ವಿರೋಧಿ ಸ್ಯಾತ್ ತತ್ಪ್ರೋಕ್ತಂ ತನ್ನ ವಾರ್ಯತೇ ॥ ೩೫ ॥

ಅ: ಮೋಹಕವಾದ ಪಾಶುಪಾತಾದಿ ಇತರ ಶಾಸ್ತ್ರಗಳು ಸಹ ಅಸುರರ ತಮಃಪ್ರಾಪ್ತಿಗೋಸ್ಕರ ಶ್ರೀಹರಿಯ ಆಜ್ಞೆಯಿಂದಲೇ ರಚಿತವಾಗಿವೆ; ಆದ್ದರಿಂದ ಅವುಗಳಲ್ಲಿ ಉಕ್ತವಾದದ್ದು ಅಗ್ರಾಹ್ಯ; ಅವು ವಿಷ್ಣುವಿನಿಂದ ಆಜ್ಞಪ್ತರಾದ ರುದ್ರಾದಿಗಳಿಂದ ಪ್ರಣೀತವಾದ್ದರಿಂದ, ಅವುಗಳಲ್ಲಿ ಬಂದಿರುವ ವೇದಾದಿ ಸಚ್ಛಾಸ್ತ್ರಗಳಿಗೆ ವಿರೋಧವಾಗದ ವಿಚಾರ ಏನಿದ್ದರೂ ಗ್ರಾಹ್ಯವೇ ಸರಿ ಎಂದು ಭಾವ.

---

೩೫. ಪಂಚರಾತ್ರೇಷು ವೈಷ್ಣವಪುರಾಣೇಷು ಚ ಪ್ರತಿಪಾದ್ಯಮಾನವಿಷ್ಣುಸರ್ವೋತ್ತಮತ್ವಾದೇರರ್ಥಸ್ಯೈಕ್ಯಾತ್ 'ಪಂಚರಾತ್ರಾತ್ಮಕತ್ವತಃ' ಇತ್ಯುಕ್ತಮ್ । ಅರ್ಥೈಕ್ಯಾತ್ ಶಬ್ದೇಽಪ್ಯೈಕ್ಯವ್ಯವಹಾರ ಇತಿ ಭಾವಃ । –ವಾ

೩೪. ಅನ್ಯಶಾಸ್ತ್ರಾಣಿ – ಪಾಶುಪತಾದೀನಿ ಶಾಸ್ತ್ರಾಣಿ । – (ವಾ)

ವೇದವಾಕ್ಯಗಳಿಗೂ ವಿಷ್ಣುಪರತ್ವವೇ ತಾತ್ಪರ್ಯ

ವಿಷ್ಣ್ವಧಿಕ್ಯವಿರೋಧೀನಿ ಯಾನಿ ವೇದವಚಾಂಸ್ಯಪಿ ।
ತಾನಿ ಯೋಜ್ಯಾನ್ಯಾನುಕೂಲ್ಯಾದ್ವಿಷ್ಣ್ವಧಿಕ್ಯಸ್ಯ ಸರ್ವಶಃ ॥ ೩೬ ॥

ಅ: ವಿಷ್ಣುಸರ್ವೋತ್ತಮತ್ವಕ್ಕೆ ವಿರೋಧಿಯಂತೆ ತೋರುವ ವೇದವಾಕ್ಯಗಳನ್ನು ಸಹ ಸರ್ವಪ್ರಕಾರದಿಂದಲೂ ವಿಷ್ಣುಸರ್ವೋತ್ತಮತ್ವಕ್ಕೆ ಅನುಕೂಲವಾಗುವಂತೆಯೇ ಯೋಜಿಸಿ-ಕೊಳ್ಳಬೇಕು.

ವಿ: ೧) ಜನಿತೋತ ವಿಷೋ೯:– ಎಂಬ ವೇದವಾಕ್ಯದಲ್ಲಿ ವಿಷ್ಣುವಿಗೆ ಜನಕ ಎಂಬ ರೀತಿಯಲ್ಲಿ ಪವಮಾನನನ್ನು ಸ್ತುತಿಸಲಾಗಿದೆ; ಇದರಲ್ಲಿ ವಿಷ್ಣುವಿಗೆ 'ಉತ್ಪತ್ತಿ' ಎಂಬ ದೋಷವಿದೆ ಎಂದು ಭಾಸವಾಗುತ್ತದೆ; ಆದರೆ ವಿಷ್ಣುವು ಸಕಲ ಜಗಜ್ಜನ್ಮಾದಿಕರ್ತನಾಗಿರುವ ಅನಾದಿಮಹಾಪುರುಷ ಎಂಬುದು ವೇದಗಳಿಂದಲೇ ಸಿದ್ಧವಾಗಿರುವುದರಿಂದ ಅದಕ್ಕೆ ಆ ಅರ್ಥ ಮಾಡಕೂಡದು ಎಂದರ್ಥ.

೨) ಶ್ರೀಛಲಾರಿಯವರು ಇಲ್ಲಿ'ವಿಷ್ಣು' ಶಬ್ದಕ್ಕೆ'ಯಜ್ಞೋ ವೈ ವಿಷ್ಣುಃ' ಎಂಬ ಶ್ರುತಿಯ ಆಧಾರದಿಂದ 'ಯಜ್ಞ' ಎಂದು ಅರ್ಥಮಾಡಿರುವರು; ಆಗ ಉತ್ಪತ್ತಿಯು ಯಜ್ಞಕ್ಕೇ ಹೊರತು ವಿಷ್ಣುವಿಗಲ್ಲ ಎಂದರ್ಥವಾಗುವುದರಿಂದ, ವಿಷ್ಣುವಿಗೆ ಜನನರೂಪದೋಷಕ್ಕೆ ಅವಕಾಶ–ವಿರುವುದಿಲ್ಲ.

೩) ಶ್ರೀವಾದಿರಾಜರು ಭಾವಪ್ರಕಾಶಿಕೆಯಲ್ಲಿ–

ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾ ಪೃಥಿವ್ಯಾಃ
ಜನಿತಾऽಗ್ನೇರ್ಜನಿತಾ ಸೂರ್ಯಸ್ಯ ಜನಿತೇಂದ್ರಸ್ಯ ಜನಿತೋತ ವಿಷೋ೯: ॥

– ಎಂಬ ಸಮಗ್ರಮಂತ್ರವಿರುವುದರಿಂದ, 'ವಿಷೋ೯: ಮತೀನಾಂ ಜನಿತಾ' ಎಂದೂ ಅರ್ಥವಾಗುತ್ತದೆ; ಅದರಂತೆ ವಿಷ್ಣುವಿಷಯಕವಾದ ತತ್ತ್ವಜ್ಞಾನವನ್ನು ಯೋಗ್ಯಜನರಿಗೆ ಹುಟ್ಟಿಸಿಕೊಡುವವನು ಪವಮಾನ ಎಂದು ಅರ್ಥವಾಗುವುದರಿಂದ ಅಲ್ಲಿ ವಿಷ್ಣುವಿಗೆ ದೋಷ ಹೇಳುವ ಪ್ರಸಕ್ತಿಯೇ ಇಲ್ಲ.

೪) ಜನಕ ಎಂದರೆ ಪ್ರಕಾಶಕ ಎಂದು ಅರ್ಥವಿರುವುದರಿಂದ ಶ್ರೀವಾಯುದೇವರು ಅಸನ್ಮತಗಳಿಂದ ಮರೆಯಾಗಿದ್ದ ವಿಷ್ಣುತತ್ತ್ವವನ್ನು ಜಗತ್ತಿಗೆ ಪುನಃ ಪ್ರಕಾಶಗೊಳಿಸಿದ್ದರಿಂದ ಅವರು

---

೩೬. ಅತೋ ದೋಷವಚೋ ಯತ್ರ ತದ್ವಾಕ್ಯಮವರಂ ವದೇತ್ । – (ಋಗ್ಭಾಷ್ಯ)

೩೬. ಮಖೋ ವಿಷ್ಣುರಿಂದುರಿತಿ ಯಜ್ಞನಾಮಸು ಪಾಠಾತ್ । – (ಋಗ್ಭಾಷ್ಯಟಿಪ್ಪಣಿ, ಪತ್ರ ೨೫೫)

ಆ ಅರ್ಥದಲ್ಲಿ ಜನಕರಾಗಿದ್ದಾರೆ; ಈ ಅರ್ಥದಲ್ಲಿ ಅವರಿಗೆ ಜನಕತ್ವ ಒಪ್ಪಿಕೊಂಡರೂ ವಿಷ್ಣುವಿಗೆ ದೋಷರೂಪವಾದ ಜನನವು ಇಲ್ಲವೆಂದೇ ಸಿದ್ಧವಾಗುವುದು.

೫) 'ಯಸ್ತಾ ವಿಜಾನಾತ್ ಸ ಪಿತುಷ್ಪಿತಾऽऽಸತ್' ಎಂಬ ಶ್ರುತಿಯಲ್ಲಿ ಭಗವತ್ತತ್ತ್ವವನ್ನು ಯಥಾರ್ಥವಾಗಿ ತಿಳಿದವನನ್ನೂ ಅವನ ಜನಕ ಎಂದು ವ್ಯವಹರಿಸಲಾಗಿದೆ; ಅದರಂತೆ ವಿಷ್ಣುತತ್ತ್ವವನ್ನು ಜೀವಕೋಟಿಯಲ್ಲಿ ಅತ್ಯಂತ ಗಾಢವಾಗಿ ಬಲ್ಲವರಾದ್ದರಿಂದ ವಾಯುದೇವರಿಗೆ ವಿಷ್ಣುಜನಕರೆಂದು ಕರೆಯಬಹುದು. ಈ ಅರ್ಥದಲ್ಲೂ ವಿಷ್ಣುವಿಗೆ ದೋಷರೂಪವಾದ ಜನನದ ಪ್ರಸಕ್ತಿ ಇಲ್ಲವಾಗುತ್ತದೆ.

೬) ಇದೇ ರೀತಿಯಾಗಿ ಇಂತಹ ಸಕಲವಚನಗಳಿಗೂ ಮುಖ್ಯವಾಗಿ ವಿಷ್ಣುಸರ್ವೋತ್ತಮತ್ವ–ದಲ್ಲೇ ಮಹಾತಾತ್ಪರ್ಯವೆಂದು ಸಿದ್ಧವಾಗುವುದು.

ಅವತಾರಗಳಲ್ಲಿ ಮೋಹಕಾರ್ಯ

ಅವತಾರೇಷು ಯತ್ಕಿಂಚಿದ್ದರ್ಶಯೇನ್ನರವದ್ಧರಿಃ ।
ತಚ್ಚಾಸುರಾಣಾಂ ಮೋಹಾಯ ದೋಷಾ ವಿಷ್ಣೋರ್ನ ಹಿ ಕ್ವಚಿತ್ ॥ ೩೭ ॥

ಅ: ತನ್ನ ಅವತಾರಗಳಲ್ಲಿ ಶ್ರೀಹರಿಯು ಮನುಷ್ಯನಂತೆ ಕೆಲವೊಮ್ಮೆ ತನ್ನನ್ನು ತೋರಿಸಿಕೊಳ್ಳುವುದುಂಟು. ಅದೆಲ್ಲ ಅಸುರಜನರಿಗೆ ಭ್ರಾಂತಿಯನ್ನುಂಟು ಮಾಡಲಿ-ಕ್ಕೋಸ್ಕರವೇ ಆಗಿದೆ; ವಿಷ್ಣುವಿಗೆ ದೋಷಗಳು ಎಲ್ಲೂ ಇಲ್ಲವಷ್ಟೇ !

ವಿ: ಸೀತಾವಿಯೋಗ, ತನ್ನಿಮಿತ್ತ ರೋದನಾದಿಗಳು ಮೊದಲಾದ ಕಾರ್ಯಗಳು ವಿಷ್ಣುವಿಗೆ ದೋಷಗಳನ್ನು ಹೇಳುವಂತೆ ತೋರುವುದುಂಟು; ಆದರೆ ಅದೆಲ್ಲ ಅವನು ಅಸುರಜನರ ಮೋಹನಕ್ಕಾಗಿ ಮಾಡಿದ ನಟನೆಯೇ ಹೊರತು ಅವನಿಗೆ ವಾಸ್ತವವಾಗಿ ವಿಯೋಗ, ರೋದನ ಮೊದಲಾದ ಯಾವ ದೋಷಗಳೂ ಸರ್ವಥಾ ಇಲ್ಲ ಎಂದು ಭಾವ.

ಬಗೆಬಗೆಯ ಮೋಹಕ ಕಾರ್ಯಗಳು

ಅಜ್ಞತ್ವಂ ಪಾರವಶ್ಯಂ ವಾ ವೇಧಭೇದಾದಿಕಂ ತಥಾ ।
ತಥಾ ಪ್ರಾಕೃತದೇಹತ್ವಂ ದೇಹತ್ಯಾಗಾದಿಕಂ ತಥಾ ॥ ೩೮ ॥

ಅನೀಶತ್ವಂ ಚ ದುಃಖಿತ್ವಂ ಸಾಮ್ಯಮನ್ಯೈಶ್ಚ ಹೀನತಾಮ್ ।
ಪ್ರದರ್ಶಯತಿ ಮೋಹಾಯ ದೈತ್ಯಾದೀನಾಂ ಹರಿಃ ಸ್ವಯಮ್ ॥ ೩೯ ॥

ಅ: ಅಜ್ಞಾನ, ಪಾರತಂತ್ರ್ಯ, ವೇಧ, ಭೇದ ಇವುಗಳನ್ನು, ಪ್ರಾಕೃತದೇಹ ಹೊಂದುವುದು, ದೇಹತ್ಯಾಗ ಮೊದಲಾದವುಗಳನ್ನು, ಅಸಾಮರ್ಥ್ಯ, ದುಃಖಿತ್ವ, ಇತರರೊಂದಿಗೆ ಸಾಮ್ಯ, ಹೀನತ್ವ ಇಂತಹವುಗಳನ್ನು ದೈತ್ಯಾದಿಗಳ ಮೋಹನಕ್ಕೆಂದು ಶ್ರೀಹರಿಯು ತಾನಾಗಿಯೇ ತೋರಿಸುವನು.

ವಿ: ಇವುಗಳು ಅಸುರಮೋಹಕವಾಗಿರುವಂತೆ, ಲೋಕವಿಡಂಬನವು ಆಗಿವೆ.

ಶ್ರೀಹರಿಯು ಸಕಲದೋಷದೂರ

ನ ತಸ್ಯ ಕಶ್ಚಿದ್ದೋಷೋಽಸ್ತಿ ಪೂರ್ಣಾಖಿಲಗುಣೋ ಹ್ಯಸೌ ।
ಸರ್ವದೇಹಸ್ಥರೂಪೇಷು ಪ್ರಾದುರ್ಭಾವೇಷು ಚೇಶ್ವರಃ ॥ ೪೦ ॥

ಅ: ಶ್ರೀಹರಿಗೆ ಯಾವುದೇ ದೋಷವೂ ಇಲ್ಲ; ಅವನು ಸಕಲದೇಹಗತವಾದ ರೂಪಗಳಲ್ಲೂ ಮತ್ತು ಪ್ರಾದುರ್ಭಾವಗಳಲ್ಲೂ ಪರಿಪೂರ್ಣವಾದ ಸಕಲಗುಣಗಳನ್ನು ಹೊಂದಿರುವನು;

ವಿ: ಭಗವಂತನ ಸಕಲ ರೂಪಗಳೂ ಸಕಲ ರೀತಿಯಲ್ಲೂ ಪರಿಪೂರ್ಣವಾದವುಗಳು ಎಂದು ಭಾವ. ಇಲ್ಲಿ ಪೂರ್ಣ–ಎಂದರೆ 'ದೇಶತಃ ಕಾಲತಃ ವ್ಯಾಪ್ತ' ಎಂದು ಅರ್ಥ.

ಶಾಸ್ತ್ರದ ಮಹಾತಾತ್ಪರ್ಯ

ಬ್ರಹ್ಮಾದ್ಯಭೇದಃ ಸಾಮ್ಯಂ ವಾ ಕುತಸ್ತಸ್ಯ ಮಹಾತ್ಮನಃ ।
ಯದೇವಂ ವಾಚಕಂ ಶಾಸ್ತ್ರಂ ತದ್ಧಿ ಶಾಸ್ತ್ರಂ ಪರಂ ಮತಮ್ ॥ ೪೧ ॥

ಅ: ಆ ಮಹಾಮಹಿಮನಾದ ಭಗವಂತನಿಗೆ ಬ್ರಹ್ಮಾದಿಗಳೊಂದಿಗೆ ಐಕ್ಯವಾಗಲೀ, ಸಾಮ್ಯವಾಗಲೀ ಎಲ್ಲಿಯದು? ಹೀಗೆ ಹೇಳುವ ಶಾಸ್ತ್ರವೇ ಉತ್ತಮವಾದ ಶಾಸ್ತ್ರವೆಂದು (ಬಲ್ಲವರ) ಅಭಿಮತ.

---

೩೯. ವೇಧಶಬ್ದೇನ ಅಂತಃಕ್ಷತಗ್ರಹಣಮ್ । ಭೇದಶಬ್ದೇನ ಬಹಿಃಕ್ಷತಗ್ರಹಣಮ್ । – (ಸ.)

೩೯. ಪ್ರಾಕೃತೋ ದೇಹೋ ಯಸ್ಯ ಸಃ ಪಾಕೃತದೇಹಃ ತಸ್ಯ ಭಾವಃ ಪ್ರಾಕೃತದೇಹತ್ವಮ್ । – (ಜ.)

೪೦. ದೇಶತಃ ಕಾಲತಃ ಪೂರ್ಣಾ ವ್ಯಾಪ್ತಾಃ ಸಮಗ್ರಾ ಗುಣಾ ಯಸ್ಯೇತಿ । – (ಜ.)

೪೧. ಅಜ್ಞತ್ವಾದಿ ಮೋಹಾರ್ಥಮಿತಿ ವಾಚಕಮ್ । – (ಜ.)

ಬ್ರಹ್ಮಸೂತ್ರಗಳು ನಿರ್ಣಾಯಕ

ನಿರ್ಣಯಾಯೈವ ಯತ್ ಪ್ರೋಕ್ತಂ ಬ್ರಹ್ಮಸೂತ್ರಂ ತು ವಿಷ್ಣುನಾ ।
ವ್ಯಾಸರೂಪೇಣ ತದ್ಗ್ರಾಹ್ಯಂ ತತ್ರೋಕ್ತಾಃ ಸರ್ವನಿರ್ಣಯಾಃ ॥ ೪೨ ॥

ಅ: ವೇದವ್ಯಾಸರೂಪದ ವಿಷ್ಣುವಿನಿಂದ ಸಕಲ ಶಾಸ್ತ್ರಗಳ ನಿರ್ಣಯಕ್ಕೆಂದೇ ರಚಿತವಾದ ಬ್ರಹ್ಮಸೂತ್ರವು ಸರ್ವರೀತಿಯಲ್ಲೂ ಗ್ರಾಹ್ಯವಾದ ಶಾಸ್ತ್ರ; ಅದರಲ್ಲಿ ಸಕಲನಿರ್ಣಯಗಳೂ ಉಕ್ತವಾಗಿವೆ.

ಬ್ರಹ್ಮಸೂತ್ರಗಳ ಹಿರಿಮೆ

ಯಥಾರ್ಥವಚನಾನಾಂ ಚ ಮೋಹಾರ್ಥಾನಾಂ ಚ ಸಂಶಯಮ್ ।
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ ।
ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ॥ ೪೩ ॥

ಅ: ಯಥಾರ್ಥವಚನ ಹಾಗೂ ಮೋಹಕವಚನಗಳಿಂದ ಉಂಟಾಗುವ ಸಂಶಯವನ್ನು ಪರಿಹರಿಸಲೆಂದೇ ಭಗವಂತನು ಬ್ರಹ್ಮಸೂತ್ರವನ್ನು ರಚಿಸಿದ; ಆದ್ದರಿಂದ ಆ ಬ್ರಹ್ಮಸೂತ್ರದಲ್ಲಿ ಹೇಳಿದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡೇ ಇತರ ಸಕಲಶಾಸ್ತ್ರಗಳ ಅರ್ಥವನ್ನು ನಿರ್ಣಯಿಸಬೇಕು.

ವಿ: ಸಕಲಶಾಸ್ತ್ರಾರ್ಥನಿರ್ಣಯಕ್ಕಾಗಿಯೇ ಶ್ರೀನಾರಾಯಣನು ಶ್ರೀವೇದವ್ಯಾಸರೂಪದಿಂದ ಬ್ರಹ್ಮಸೂತ್ರಗಳನ್ನು ರಚಿಸಿದ ವಿಷಯವನ್ನು ಶ್ರೀಮದಾಚಾರ್ಯರು ಬ್ರಹ್ಮಸೂತ್ರಭಾಷ್ಯ ಮತ್ತು ಅನುವ್ಯಾಖ್ಯಾನಗಳ ಆರಂಭದಲ್ಲಿ ವಿವರಿಸಿರುವರು (೧/೧/೧).

ಬ್ರಹ್ಮಸೂತ್ರಗಳ ಸಾರ

ಸರ್ವದೋಷವಿಹೀನತ್ವಂ ಗುಣೈಃ ಸರ್ವೈರುದೀರ್ಣತಾ ॥ ೪೪ ॥
ಅಭೇದಃ ಸರ್ವರೂಪೇಷು ಜೀವಭೇದಃ ಸದೈವ ಚ ।
ವಿಷ್ಣೋರುಕ್ತಾನಿ ಸೂತ್ರೇಷು ಸರ್ವವೇದೇಡ್ಯತಾ ತಥಾ ॥ ೪೫ ॥

ತಾರತಮ್ಯಂ ಚ ಮುಕ್ತಾನಾಂ ವಿಮುಕ್ತಿರ್ವಿದ್ಯಯಾ ತಥಾ ।
ತಸ್ಮಾದೇತದ್ವಿರುದ್ಧಂ ಯನ್ಮೋಹಾರ್ಥಂ ತದುದಾಹೃತಮ್ ॥ ೪೬ ॥

ಅ: ಸಕಲದೋಷರಹಿತತ್ವ, ಸರ್ವಗುಣಪರಿಪೂರ್ಣತ್ವ, ತನ್ನ ಸಕಲರೂಪಗಳಲ್ಲೂ ಅಭೇದ, ಸರ್ವದಾ ಸರ್ವಜೀವರಿಂದ ಭಿನ್ನತ್ವ, ಸರ್ವವೇದಪ್ರತಿಪಾದತ್ವ, ಮುಕ್ತರಲ್ಲೂ ತಾರತಮ್ಯ, ಜ್ಞಾನದಿಂದಲೇ ಮೋಕ್ಷ ಈ ಪ್ರಮೇಯಗಳು ಬ್ರಹ್ಮಸೂತ್ರಗಳಲ್ಲಿ ಹೇಳಲ್ಪಟ್ಟವೆ; ಆದ್ದರಿಂದ ಇವುಗಳಿಗೆ ವಿರುದ್ಧವಾದದ್ದು ಮೋಹನದ ಉದ್ದೇಶದಿಂದ ಕೂಡಿದ ಮಾತು ಎಂದು ಹೇಳಲ್ಪಟ್ಟಿದೆ.

ವಿ: ೧) ನಾರಾಯಣನ ಸರ್ವಗುಣಪೂರ್ಣತ್ವ ಸರ್ವದೋಷದೂರತ್ವ ಮೊದಲಾದ ಬ್ರಹ್ಮಸೂತ್ರೋಕ್ತ ಪ್ರಮೇಯಗಳಿಗೆ ವಿರುದ್ಧವಾದ ಯಾವುದೇ ಶಾಸ್ತ್ರವಚನವನ್ನು ಅಸುರ–ಮೋಹನಾರ್ಥಕವೆಂದೇ ತಿಳಿಯಬೇಕು ಎಂದು ಭಾವ.

೨)ಸರ್ವದೋಷವಿಹೀನತ್ವವು ಅವಿರೋಧಾಧ್ಯಾಯವೆಂಬ ಎರಡನೆಯ ಅಧ್ಯಾಯದಲ್ಲೂ, ಸರ್ವಗುಣಪೂರ್ಣತ್ವವು ಸಮನ್ವಯಾಧ್ಯಾಯವೆಂಬ ಮೊದಲ ಅಧ್ಯಾಯದಲ್ಲೂ ಉಕ್ತವಾಗಿದೆ. ಉಳಿದ ವಿಷಯಗಳು ಈ ಕೆಳಕಂಡ ಸೂತ್ರಗಳಲ್ಲಿ ವಿಶೇಷವಾಗಿ ಪ್ರತಿಪಾದಿತವಾಗಿವೆ.

೩) ಹಾಗೆ ಬ್ರಹ್ಮಸೂತ್ರಗಳನ್ನು ರಚಿಸಿದ ವಿವರ ಹತ್ತನೆಯ ಅಧ್ಯಾಯದಲ್ಲಿ ಬಂದಿದೆ.

೧. ಭಗವದ್ರೂಪಗಳಲ್ಲಿ ಅಭೇದಪ್ರತಿಪಾದಕ ಸೂತ್ರಗಳು:

(೧) ನ ಸ್ಥಾನತೋऽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ। –(೩/೨/೧೧)

೨. ಜೀವಭೇದಪ್ರತಿಪಾದಕಸೂತ್ರಗಳು :

(೧) ಭೇದವ್ಯಪದೇಶಾಚ್ಚಾನ್ಯಃ - (೧/೧/೨೧)

(೨) ಶಾರೀರಶ್ಚೋಭಯೋऽಪಿ ಹಿ ಭೇದೇನೈನಮಧೀಯತೇ -(೧/೨/೨೦)

(೩) ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ। -(೧/೨/೨೨)

(೪) ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ। -(೧/೩/೪೨)

(೫) ಪೃಥಗುಪದೇಶಾತ್ । -(೨/೩/೨೮)

---

೪೩. ಸಂಶಯಂ – ಉಭಯೋಃ ಶ್ರುತಿವಾಕ್ಯಯೋರರ್ಥಭೇದಸಂಶಯಮ್ । ಯದ್ವಾ ಉಭಯೋರ್ವಾಕ್ಯಯೋಃ ಶ್ರವಣೇನ ಜಾತಂ ಜನಾನಾಂ ಸಂಶಯಮ್। –(ವಾ)

ಯಥಾರ್ಥವಚನಾನಾಂ ಚ ಮೋಹಾರ್ಥಾನಾಂ ಚ ವಿಪ್ರತಿಪತ್ತ್ಯಾ ಜಾತಂ ಸಂಶಯಮ್ । –(ಜ)

೪೪. ಸರ್ವದೋಷೋಜ್ಝಿತಸ್ತಸ್ಮಾದ್ಭಗವಾನ್ ಪುರುಷೋತ್ತಮಃ। –(ಅಣುಭಾಷ್ಯ)

೪೬. ಅತೋऽನಂತಗುಣೋ ವಿಷ್ಣುರ್ಯಚ್ಛಬ್ದಾಯೋಗವೃತ್ತಯಃ। –(ಅಣುಭಾಷ್ಯ)

೩. ಸರ್ವವೇದಪ್ರತಿಪಾದ್ಯತ್ವ ಪ್ರತಿಪಾದಕ ಸೂತ್ರಗಳು :

(೧) ಶಾಸ್ತ್ರಯೋನಿತ್ವಾತ್ । -(೧/೧/೩)

(೨) ತತ್ತು ಸಮನ್ವಯಾತ್ । -(೧/೧/೪)

(೩) ಈಕ್ಷತೇರ್ನಾಶಬ್ದಮ್ । -(೧/೧/೫)

೪. ಮುಕ್ತತಾರತಮ್ಯ ಪ್ರತಿಪಾದಕ ಸೂತ್ರಗಳು :

(೧) ಇಯದಾಮನನಾತ್ । -(೩/೩/೩೫)

(೨) ಮನಃ ಪ್ರಾಣ ಉತ್ತರಾತ್ । -(೪/೨/೪)

(೩) ಸೋಽಧ್ಯಕ್ಷೇ ತದುಪಗಮಾದಿಭ್ಯಃ ।

೫. ಜ್ಞಾನದಿಂದಲೇ ಮುಕ್ತಿ ಎಂದು ತಿಳಿಸುವ ಸೂತ್ರ :

(೧) ವಿದ್ಯೈವ ತು ನಿರ್ಧಾರಣಾತ್ । -(೩/೩/೪೮)

ತಸ್ಮಾದ್ಯೇ ಯೇ ಗುಣಾ ವಿಷ್ಣೋರ್ಗ್ರಾಹ್ಯಾಸ್ತೇ ಸರ್ವ ಏವ ತು ।
ಇತ್ಯಾದ್ಯುಕ್ತಂ ಭಗವತಾ ಭವಿಷ್ಯತ್ಪರ್ವಣಿ ಸ್ಫುಟಮ್ ॥ ೪೭ ॥

ಅ: ಆದ್ದರಿಂದ ವಿಷ್ಣುವಿನ ಗುಣಗಳು ಎಂಬುದಾಗಿ ಯಾವುವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆಯೋ ಅವೆಲ್ಲವೂ ಗ್ರಾಹ್ಯವೇ; ಇವೇ ಮೊದಲಾಗಿ ಭಗವಂತನಾದ ಶ್ರೀವೇದವ್ಯಾಸರಿಂದ ಭವಿಷ್ಯತ್ಪರ್ವದಲ್ಲಿ ಸ್ಫುಟವಾಗಿ ಉಕ್ತವಾಗಿವೆ.

ವಿ : 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬುದಾಗಿ ವೇದದಲ್ಲಿ ವಿಷ್ಣುವಿಗೆ ಅಣುತ್ವ, ಮಹತ್ವವೆಂಬ ಗುಣಗಳು ಹೇಳಲ್ಪಟ್ಟಿವೆ. ವಿರುದ್ಧವೆಂಬ ಕಾರಣದಿಂದ ಇವುಗಳಲ್ಲಿ ಯಾವ ಒಂದನ್ನೂ ತ್ಯಜಿಸಕೂಡದು ಎಂದು ಭಾವ.

ಮೋಹಶಾಸ್ತ್ರದ ಬಗ್ಗೆ ವರಾಹ ಹಾಗೂ ಬ್ರಹ್ಮಾಂಡಪುರಾಣಗಳ ಆಧಾರ

ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ ಮೋಹಯಿಷ್ಯತಿ ।
ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ॥ ೪೮ ॥

---

೪೭. ಯೇ ಯೇ ಗುಣಾ ಅಣುತ್ವಮಹತ್ತ್ವಾದಯ ಉಕ್ತಾಸ್ತೇ ಸರ್ವ ಏವ ಗ್ರಾಹ್ಯಾಃ ನ ತು ವಿರೋಧಾದೇಕೋಽಪಿ ತ್ಯಾಜ್ಯಃ । -(ವಾ)

ಅತಥ್ಯಾನಿ ವಿತಥ್ಯಾನಿ ದರ್ಶಯಸ್ವಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚ ಮಾಂ ಕುರು ॥ ೪೯ ॥

ಇತಿ ವಾರಾಹವಚನಂ ಬ್ರಹ್ಮಾಂಡೋಕ್ತಂ ತಥಾ ಪರಮ್ ।
ಅಮೋಹಾಯ ಗುಣಾ ವಿಷ್ಣೋರಾಕಾರಶ್ಚಚ್ಛರೀರತಾ ॥ ೫೦ ॥

ನಿರ್ದೋಷತ್ವಂ ತಾರತಮ್ಯಂ ಮುಕ್ತಾನಾಮಪಿ ಚೋಚ್ಯತೇ ।
ಏತದ್ವಿರುದ್ಧಂ ಯತ್ ಸರ್ವಂ ತನ್ಮೋಹಾಯೇತಿ ನಿರ್ಣಯಃ ॥ ೫೧ ॥

ಅ: ''ಎಲೈ ಮಹಾಬಾಹುವಾದ ರುದ್ರನೇ ! ನಾನು ಜನರನ್ನು ಮೋಹಗೊಳಿಸುವಂತಹ ಮೋಹಕಶಾಸ್ತ್ರವನ್ನು ಕೂಡಲೇ ಸೃಷ್ಟಿಸುವೆ; ನೀನು ಸಹ ಇಂತಹ ಮೋಹಕ ಶಾಸ್ತ್ರವನ್ನು ಇತರರಿಂದ ಮಾಡಿಸು ಮತ್ತು ನೀನು ಕೂಡ ಮಾಡು, ಎಲೈ ಮಹಾಭುಜನೇ ! ಎಲ್ಲೂ ಇಲ್ಲದಿರುವ ವಿಷಯಗಳನ್ನು, ವಿಪರೀತ ವಿಚಾರಗಳನ್ನೂ ತೋರಿಸು; ನನ್ನನ್ನು ಮರೆ ಮಾಡು; ನಿನ್ನನ್ನು ಪ್ರಕಾಶಗೊಳಿಸಿಕೊ''.

– ಹೀಗೆ ವರಾಹಪುರಾಣದ ವಚನವಿದೆ; ಬ್ರಹ್ಮಾಂಡಪುರಾಣದಲ್ಲಿ ಉಕ್ತವಾದ ಶ್ರೇಷ್ಠವಾದ ವಚನವೂ ಹಾಗೆಯೇ ಇದೆ.

---

೪೯. ಪ್ರಕಾಶಂ – ಪ್ರಸಿದ್ಧಂ – (ವಾ., ಜ.)

ಅಪ್ರಕಾಶಂ – ಅಪ್ರಸಿದ್ಧಂ – (ವಾ., ಜ.)

೪೯. ಅತಥ್ಯಾನಿ ಕುತ್ಸಾಪ್ಯವಿದ್ಯಮಾನಾನಿ ಲಿಂಗಮೂಲಮಾರ್ಗಣಂ ಅಸಕೃದ್ಭಸ್ಮಧಾರಣಾದಿನಾ ಕೈಲಾಸ-ಪ್ರಾಪ್ತ್ಯಾದೀನಿ । – (ಜ.)

೪೯. ವಿತಥ್ಯಾನಿ ತ್ವತ್ತೋ ವಿಪರೀತೇ ಮಯಿ ತಥ್ಯಾನಿ ಸರ್ವಜ್ಞತ್ವಾದೀನಿ। – (ವಾ.)

ವಿತಥ್ಯಾನಿ ವ್ಯಧಿಕರಣತಯಾ ವಿದ್ಯಮಾನಾನಿ। ಅಥವಾ ವಿಷ್ಣೌ ತಥ್ಯಾನಿ ಸರ್ವಜ್ಞತ್ವಾದೀನಿ। –(ಜ.)

೫೦. ವರಾಹಪುರಾಣ ಅ. ೧೨, ಶ್ಲೋ. ೨೩ (ವೇಂಕಟೇಶ್ವರ ಸ್ಟೀಮ್‌ಪ್ರೆಸ್, ಮುಂಬೈ)

೫೦. ಮೋಹಂ – ಮೋಹಕಗ್ರಂಥಃ ಬೌದ್ಧಶಾಸ್ತ್ರಮ್ । ಯದ್ವಾ ಮೋಹಯತೀತಿ ಮೋಹಃ ಕೈಲಾಸಯಾತ್ರಾದಿಃ । – (ವಾ.)

ಮೋಹಮುತ್ಪದ್ಯತೇ ಅನೇನೇತಿ ಮೋಹೋ ನಟನಂ ವಚನಂ ವಾ । – (ಜ.)

''ವಿಷ್ಣುವಿನ ಗುಣಗಳು, ಆಕಾರ, ಜ್ಞಾನಾತ್ಮಕವಾದ ಶರೀರವನ್ನು ಹೊಂದಿರುವಿಕೆ, ನಿರ್ದೋಷತ್ವ, ಮುಕ್ತರಲ್ಲಿಯ ತಾರತಮ್ಯ, ಇವುಗಳಿಗೆ ವಿರುದ್ಧವಾದ ಎಲ್ಲವೂ ಅಸುರ-ಮೋಹನಕ್ಕೆಂದೇ ಎಂದು ನಿರ್ಣಯ''.

ವಿ: ೧) ವಿಷ್ಣುವಿನ ಆಜ್ಞೆಯಂತೆ ರುದ್ರದೇವರು ವಿಷ್ಣುವಿನ ಸರ್ವೋತ್ತಮತ್ವಕ್ಕೆ ವಿರುದ್ಧವಾದ ವಿಚಾರಗಳನ್ನು ತಿಳಿಸುವ ಪಾಶುಪತಾದಿ ಶಾಸ್ತ್ರಗಳನ್ನು ರಚನೆ ಮಾಡಿದರು; ದಧೀಚಿಮೋದಲಾದ ಮುನಿಗಳಿಂದಲೂ ರಚನೆ ಮಾಡಿಸಿದರು. ಆದ್ದರಿಂದ ಅವುಗಳಿಗೆ ಅಪ್ರಾಮಾಣ್ಯವೂ, ವಿಷ್ಣುಸರ್ವೋತ್ತಮತ್ವವನ್ನು ತಿಳಿಸುವ ಶಾಸ್ತ್ರಕ್ಕೆ ಪ್ರಾಮಾಣ್ಯವೂ ಸಿದ್ಧವಾಗುವುವು; ಆದ್ದರಿಂದ ವಿಷ್ಣುವಿನ ಗುಣಪೂರ್ಣತ್ವ ದೋಷದೂರತ್ವಾದಿಗಳನ್ನು ತಿಳಿಸುವ ಶಾಸ್ತ್ರವು ಮಾತ್ರ ಯಥಾರ್ಥವೇ ಆಗಿದೆ; ಎಂದು ಈ ಪ್ರಮಾಣಗಳಿಂದ ತಿಳಿಯುವುದು ಎಂದು ಭಾವ.

೨) 'ಮೋಹಂ'– ಎಂದರೆ 'ಮೋಹಕಶಾಸ್ತ್ರ' ಎಂದೂ, 'ಮೋಹಕವಾದ ಕೈಲಾಸಯಾತ್ರಾದಿ ಕಾರ್ಯಗಳು' ಎಂದೂ ಅರ್ಥ.

೩) 'ಅತಥ್ಯಾನಿ' ಎಂದರೆ ಎಲ್ಲೂ ಇಲ್ಲದಿರುವ ಲಿಂಗಮೂಲಾನ್ವೇಷಣೆ, ಅನೇಕಸಲ ಭಸ್ಮಧಾರಣ ಮಾಡಿ ಕೈಲಾಸಗಮನ ಮೊದಲಾದವುಗಳು ಎಂದೂ, ಏತಥ್ಯಾನಿ ಎಂಬುದಕ್ಕೆ ಹೇಳಿದಲ್ಲಿ ಅಲ್ಲದೆ ಬೇರೆ ಕಡೆ ಇರುವ ಎಂದೂ ಅರ್ಥ.

ಸ್ಕಾಂದ ಪುರಾಣದ ಉದಾಹರಣೆ

ಸ್ಕಾಂದೇಽಪ್ಯುಕ್ತಂ ಶಿವೇನೈವ ಷಣ್ಮುಖಾಯೈವ ಸಾದರಮ್ ।
ಶಿವಶಾಸ್ತ್ರೇಽಪಿ ತದ್ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿ ಯತ್ ॥ ೫೨ ॥

ಅ: ಸ್ಕಾಂದಪುರಾಣದಲ್ಲೂ, ಶಿವನಿಂದಲೇ ಷಣ್ಮುಖನಿಗೆ ಆದರಪೂರ್ವಕವಾಗಿ ಹೇಳಲ್ಪಟ್ಟಿದೆ. ಸ್ಕಾಂದಪುರಾಣವು ಶೈವಪುರಾಣವಾದರೂ ಭಗವದವತಾರರಾದ ವೇದವ್ಯಾಸರ ಶಾಸ್ತ್ರಕ್ಕೆ ಅನುಗುಣವಾದ್ದರಿಂದ ಅದು ಗ್ರಾಹ್ಯವಾಗಿದೆ.

ಮೋಹಕವಿಚಾರಗಳು?

ಪರಮೋ ವಿಷ್ಣುರೇವೈಕಃ ತಜ್ಜ್ಞಾನಂ ಮೋಕ್ಷಸಾಧನಮ್ ।
ಶಾಸ್ತ್ರಾಣಾಂ ನಿರ್ಣಯಸ್ತ್ವೇಷಸ್ತದನ್ಯೋಮೋಹನಾಯ ಹಿ ॥ ೫೩ ॥

ಜ್ಞಾನಂ ವಿನಾ ತು ಯಾ ಮುಕ್ತಿಃ ಸಾಮ್ಯಂ ಚ ಮಮ ವಿಷ್ಣುನಾ ।
ತೀರ್ಥಾದಿಮಾತ್ರತೋ ಜ್ಞಾನಂ ಮಮಾಧಿಕ್ಯಂ ಚ ವಿಷ್ಣುತಃ ॥ ೫೪ ॥

ಅಭೇದಶ್ಚಾಸ್ಮದಾದೀನಾಂ ಮುಕ್ತಾನಾಂ ಹರಿಣಾ ತಥಾ ।
ಇತ್ಯಾದಿ ಸರ್ವಂ ಮೋಹಾಯ ಕಥ್ಯತೇ ಪುತ್ರ ನಾನ್ಯಥಾ ॥ ೫೫ ॥

ಅ: ''ವಿಷ್ಣು ಒಬ್ಬನೇ ಸರ್ವೋತ್ತಮ; ಅವನ ಜ್ಞಾನವೇ ಮುಕ್ತಿಗೆ ಸಾಧನ; ಇದು ಸಕಲ ಶಾಸ್ತ್ರಗಳ ನಿರ್ಣಯ; ಇದಕ್ಕೆ ಅನುಗುಣವಾಗಿಲ್ಲದ್ದೆಲ್ಲ ಮೋಹಕ್ಕೆಂದೇ ಹೇಳಲ್ಪಟ್ಟಿದೆ; ಜ್ಞಾನವಿಲ್ಲದೆ ಮುಕ್ತಿ ನನಗೂ ವಿಷ್ಣುವಿಗೂ ಸಾಮ್ಯ, ತೀರ್ಥಯಾತ್ರೆ ಮೊದಲಾದವುಗಳಿಂದಲೇ ಅಪರೋಕ್ಷ-ಜ್ಞಾನ; ವಿಷ್ಣುವಿಗಿಂತಲೂ ನನ್ನದೇ ಆಧಿಕ್ಯ, ನಮ್ಮೆಲ್ಲರ ಅಭೇದ ಮತ್ತು ಮುಕ್ತಿಯಲ್ಲಿ ಹರಿಯೊಂದಿಗೆ ಐಕ್ಯ ಇವೆಲ್ಲವೂ, ಎಲೈ ಪುತ್ರನೆ ಮೋಹನಕ್ಕೆಂದೇ ಹೇಳಲ್ಪಟ್ಟ ವಿಷಯಗಳು; ಬೇರೆ ಉದ್ದೇಶದಿಂದಲ್ಲ''.

ವಿ: ೧) ಸ್ಕಾಂದಪುರಾಣವು ಶೈವಶಾಸ್ತ್ರವಾದರೂ ಅದರಲ್ಲಿನ ಇಂತಹ ಮಾತುಗಳು ಗ್ರಾಹ್ಯವಾಗಿವೆ; ಎಂಬುದನ್ನು **'ಅಪಿ'** ಶಬ್ದದಿಂದ ತಿಳಿಸಿರುವರು ಇವೆಲ್ಲ ಭಗವಚ್ಛಾಸ್ತ್ರಕ್ಕೆ ಅನುಗುಣವಾಗಿರುವುದೇ ಇದಕ್ಕೆ ಕಾರಣ; ಈ ಮಾತುಗಳನ್ನಾಡುವ ರುದ್ರದೇವರು ತಂದೆ; ಹೇಳಿದ್ದು ಮಗನಾದ ಷಣ್ಮುಖನಿಗೆ; ಆದ್ದರಿಂದ ವಕ್ತ್ರಾನುಕೂಲ್ಯ, ಶ್ರೋತ್ರಾನುಕೂಲ್ಯಗಳು, ಬಂದಂತಾಯಿತು; ಆದರದಿಂದ ಹೇಳಿದ್ದರಿಂದ ಪ್ರಸಂಗಾನುಕೂಲ್ಯವೂ ಇದೆ ಎಂದಾಯಿತು. ಹೀಗೆ ಆಪ್ತನಿಶ್ಚಯದ ಕಾರಣದಿಂದಾಗಿ ಈ ಮಾತುಗಳು ಗ್ರಾಹ್ಯ ಎಂದರ್ಥ.

೨) ಜ್ಞಾನವಿಲ್ಲದೆ ಮೋಕ್ಷ, ವಿಷ್ಣುವಿಗೆ ರುದ್ರಸಾಮ್ಯ ಅಥವಾ ರುದ್ರೈಕ್ಯ; ತೀರ್ಥಯಾತ್ರೆ ಮೊದಲಾದ ಇತರ ಸಾಧನಗಳಿಂದಲೇ ಅಪರೋಕ್ಷಜ್ಞಾನಪ್ರಾಪ್ತಿ; ಜೀವಜೀವರ ಅಭೇದ ಹಾಗು ಜೀವೇಶ್ವರಭೇದ ಇವೆಲ್ಲವೂ ಅಯಥಾರ್ಥ ಎಂದು ಭಾವ.

೩) **'ತದನ್ಯನ್ಮೋಹನಾಯ ಹಿ'**, **'ಇತ್ಯಾದಿ ಸರ್ವಂ ಮೋಹಾಯ ಕಥ್ಯತೇ'** ಮತ್ತು **'ನಾನ್ಯಥಾ'** ಎಂಬುದಾಗಿ ಮೂರುಬಾರಿ ವಿಷ್ಣುಪಾರವಶ್ಯಕ್ಕೆ ವಿರುದ್ಧವಾದ ವಿಚಾರಗಳನ್ನು

---

೫೫. ಈ ವಾಕ್ಯಗಳು ಪದ್ಮಪುರಾಣದಲ್ಲೂ ಉಪಲಬ್ಧವಿವೆ. – (ಉತ್ತರಖಂಡ ಅ. ೭೧, ಶ್ಲೋ. ೧೧೪–೧೧೬)

೫೫. ವಕ್ಷ್ಯಶ್ರೋತೃಪ್ರಸಕ್ತೀನಾಂ ಯದಾಪ್ತಿರನುಕೂಲತಾ । – 'ಅನುವ್ಯಾಖ್ಯಾನ'

೫೫. ಷಣ್ಮುಖಾಯೈವ ನತು ತತ್ಸುಮೀಪಸ್ಥಃ ಕಂಚನಾಯೋಗ್ಯೋ ಽಪ್ಯಸ್ತೀತಿ ಏವಕಾರಾರ್ಥಃ । – (ವಾ)

೫೫. ಏವಕಾರಸ್ತು ವಕ್ತರಿ ಅಜ್ಞಾನಾದಿದೋಷಂ ವಕ್ತವ್ಯಾಂಶೇ ನಿವಾರಯತಿ । ಶ್ರೋತರಿ ಅಯೋಗ್ಯತಾಂ ಚ ನಿವಾರಯತಿ । ಅತ ಏವ ಅಂತೇ ऽಪಿ ಪುತ್ರೇತಿ ಸಂಬೋಧನಮ್ ॥ – (ಜ)

ನಿರಾಕರಿಸಿರುವುದರಿಂದ, ರುದ್ರದೇವರಿಗೆ ಪರಮತಖಂಡನೆಯ ಬಗ್ಗೆ ಇರುವ ಆದರವೂ ವ್ಯಕ್ತವಾಗುವುದು.

೪) ಪುತ್ರ ಎಂಬ ಇಲ್ಲಿಯ ಸಂಬೋಧನೆಯು ಆದರಸೂಚಕವಾಗಿದೆ.

ಪದ್ಮಪುರಾಣದ ಉಲ್ಲೇಖ - ವಿಷ್ಣುಕೃತ ಶಿವಪೂಜೆಯ ರಹಸ್ಯ

ಉಕ್ತಂ ಪದ್ಮಪುರಾಣೇ ಚ ಶೈವ ಏವ ಶಿವೇನ ತು ।
ಯದುಕ್ತಂ ಹರಿಣಾ ಪೂರ್ವಮುಮಾಯೈ ಪ್ರಾಹ ತದ್ಧರಃ ॥ ೫೬ ॥

ಅ: ಪದ್ಮಪುರಾಣದ ಶೈವಭಾಗದಲ್ಲೇ, ಶಿವನಿಂದಲೇ ಹೇಳಲ್ಪಟ್ಟಿದೆ. ಹಿಂದೆ ಶ್ರೀಹರಿಯು ತನಗೆ ತಿಳಿಸಿದ್ದನ್ನೇ ಅವರು ಉಮಾದೇವಿಗೆ ಹೀಗೆಂದು ತಿಳಿಸಿದರು.

ಶಿವನಿಗೆ ವಿಷ್ಣು ನೀಡಿದ ವರ

ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ।
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥ ೫೭ ॥

ಸ್ವಾಗಮೈಃ ಕಲ್ಪಿತೈಸ್ತ್ವಂ ಚ ಜನಾನ್ ಮದ್ವಿಮುಖಾನ್ ಕುರು ।
ಮಾಂ ಚ ಗೋಪಯ ಯೇನ ಸ್ಯಾತ್ ಸೃಷ್ಟಿರೇಷೋತ್ತರಾಧರಾ ॥ ೫೮ ॥

ಅ: ''ಎಲೈ ಶಂಭುವೇ! ಕೃತ, ತ್ರೇತಾ ಮತ್ತು ದ್ವಾಪರ ಎಂಬ ಯುಗಗಳಲ್ಲಿ ಮನುಷ್ಯರೇ ಮೊದಲಾದವರಲ್ಲಿ ಒಂದಂಶದಿಂದ ಅವತರಿಸಿ ನಾನು ನಿನ್ನನ್ನು ಸದಾ ಆರಾಧಿಸಿ ವರವನ್ನು ಸ್ವೀಕರಿಸುವೆ; ಕಲ್ಪಿತವಾದ ನಿನ್ನ ಶಾಸ್ತ್ರಗಳಿಂದ ಜನರನ್ನು ನನಗೆ ವಿಮುಖರನ್ನಾಗಿ ಮಾಡು; ಇದರಿಂದ ಕೃತಾದಿಯುಗಗಳಲ್ಲಿ ಉತ್ತಮಮಾರ್ಗವನ್ನು ಅವಲಂಬಿಸಿದ ದೈತ್ಯರು ಅಧಮ ಮಾರ್ಗಾವಲಂಬಿಗಳಾಗಿ ನಾಶಹೊಂದುವರು''.

---

೫೮. ಸೃಷ್ಟಿರೇಷೋತ್ತರಾಧರಾ ಇತ್ಯತ್ರ ಉತ್ತರಾಃ ಕೃತಯುಗಾದೌ ಉತ್ತಮಮಾರ್ಗೇ ಪ್ರವರ್ತಮಾನಾಃ ದೈತ್ಯಾಃ ಅಧರಾಃ ಅಧಮಮಾರ್ಗಸ್ಥಾಃ ಯಸ್ಯಾಂ ಸಾ ತಥೋಕ್ತಾ ಯೇನ ಮಯಾ ತ್ವಯಾ ಚ ಕೃತವಿಪರೀತಾಚಾರೇಣ। – (ವಾ.)

೫೮. ದ್ವಿವಿಧಂ ಪದ್ಮಪುರಾಣಂ ಪೂರ್ವಕಾಂಡಂ ಉತ್ತರಕಾಂಡಂ ಚೇತಿ । ತತ್ರ ಪೂರ್ವಕಾಂಡಂ ಪೂರ್ವಪಕ್ಷಃ। ಸಾತ್ವಿಕಗರುಡಾದಿಪಂಚಪುರಾಣಾದಿವಿರುದ್ಧಾರ್ಥಬೋಧಕತ್ವಾತ್। ಉತ್ತರಕಾಂಡಂ ತು ಸಿದ್ಧಾಂತಃ । ಉಕ್ತಸಾತ್ವಿಕ-ಪಂಚಪುರಾಣಾನುಕೂಲತ್ವಾತ್ । ಅತಃ ಪಾದ್ಮಪುರಾಣೇ ಶೈವೇ ಇತಿ ಪ್ರೋಕ್ತಂ ಶಿವಪ್ರತಿಪಾದಕಪೂರ್ವಕಾಂಡೇ ಇತ್ಯರ್ಥಃ। – (ವಾ.)

ವಿ: ೧) ಪದ್ಮಪರಾಣವು ಸಾತ್ವಿಕ ಪುರಾಣವಾಗಿದ್ದರೂ, ಅದರಲ್ಲಿ ಪೂರ್ವಕಾಂಡ ಮತ್ತು ಉತ್ತರಕಾಂಡ ಎಂಬುದಾಗಿ ಎರಡು ವಿಧಗಳಿವೆ; ಅವುಗಳಲ್ಲಿ ಪೂರ್ವಕಾಂಡವು ಗರುಡ ಮೊದಲಾದ ಇತರ ಐದು ಸಾತ್ವಿಕಪುರಾಣಗಳಿಗೆ ವಿರುದ್ಧವಾದ ವಿಷಯಗಳನ್ನು ಹೇಳುವುದರಿಂದಾಗಿ, ಪೂರ್ವಪಕ್ಷ ಭಾಗವೆನ್ನಿಸಿದೆ; ಆ ಐದು ಪುರಾಣಗಳಿಗೆ ಅನುಗುಣವಾಗಿರುವುದರಿಂದ ಉತ್ತರಕಾಂಡವು ಸಿದ್ಧಾಂತ ಭಾಗವಾಗಿದೆ; ಇಲ್ಲಿ ಉದಾಹರಿಸಲ್ಪಡುವ ವಾಕ್ಯವು ಶಿವಪ್ರತಿಪಾದಕ ಪೂರ್ವಕಾಂಡದಲ್ಲಿಯದು ಎಂದು ತಿಳಿಸಲು 'ಶೈವೇ' ಎಂಬ ಪದವನ್ನು ಪ್ರಯೋಗಿಸಿರುವರು ಎಂದು ವಾದಿರಾಜೀಯದಲ್ಲಿದೆ.

೨) ಪತಿಯಾದ ರುದ್ರದೇವರು ತಮ್ಮ ಸತಿಯಾದ ಉಮಾದೇವಿಗೆ ಹೇಳಿದ ಮಾತು ಎಂಬ ಕಾರಣದಿಂದ ಹಿಂದೆ ಹೇಳಿದಂತೆ ಆಪ್ತ ನಿಶ್ಚಯವಗುವುದರಿಂದ ಇದು ವಿಶೇಷವಾಗಿ ಗ್ರಾಹ್ಯ ಎಂದು ಭಾವ.

೩) ಈ ಭಾಗ ಪದ್ಮಪುರಾಣದ ಎಲ್ಲ ಮುದ್ರಿತ ಪ್ರತಿಗಳಲ್ಲೂ, ವಾಸುದೇವಸಹಸ್ರ-ನಾಮದಲ್ಲೂ ಉಪಲಬ್ಧ.

ವೈಷ್ಣವ ಶಾಸ್ತ್ರಗಳಲ್ಲಿ ಇತರರ ಸರ್ವೋತ್ತಮತ್ವ ಬಂದಿಲ್ಲ

ನ ಚ ವೈಷ್ಣವಶಾಸ್ತ್ರೇಷು ವೇದೇಷ್ವಪಿ ಹರೇಃ ಪರಃ ।
ಕ್ವಚಿದುಕ್ತೋಽನ್ಯಶಾಸ್ತ್ರೇಷು ಪರಮೋ ವಿಷ್ಣುರೀರಿತಃ ॥ ೫೯ ॥

ಅ: ಆದರೆ ವೈಷ್ಣವಶಾಸ್ತ್ರಗಳಲ್ಲಾಗಲೀ, ವೇದಗಳಲ್ಲಾಗಲೀ, ಶ್ರೀಹರಿಗಿಂತ ಮತ್ತೊಬ್ಬ ಪರನು ಎಲ್ಲೂ ಉಕ್ತವಾಗಿಲ್ಲ; ಆದರೆ ಇತರ ಶಾಸ್ತ್ರಗಳಲ್ಲಿ ಸಹ ಕೆಲವೆಡೆ ವಿಷ್ಣುವೇ ಸರ್ವೋತ್ತಮನೆಂದು ಹೇಳಲ್ಪಟ್ಟಿದೆ.

ವಿ: ೧) ವೈಷ್ಣವಶಾಸ್ತ್ರಗಳಲ್ಲಿ ವಿಷ್ಣುಸರ್ವೋತ್ತಮತ್ವ ಮಾತ್ರವೇ ಉಕ್ತವಾಗಿದೆ. ಅದರಂತೆ ಶೈವಾದಿಶಾಸ್ತ್ರಗಳಲ್ಲೂ ಅಲ್ಲಲ್ಲಿ ವಿಷ್ಣುಸರ್ವೋತ್ತಮತ್ವವು ಪ್ರತಿಪಾದಿತವಾಗಿದೆ; ಹೀಗೆ ಸಕಲ ಶಾಸ್ತ್ರಗಳಲ್ಲಿ ಉಕ್ತವಾದ ವಿಷ್ಣುಸರ್ವೋತ್ತಮತ್ವವೇ ಗ್ರಾಹ್ಯ; ವೈಷ್ಣವಶಾಸ್ತ್ರಗಳಿಗೆ ವಿರುದ್ಧವಾದ ಇತರ ಶಾಸ್ತ್ರಗಳಲ್ಲೂ ಸರ್ವತ್ರ ಹೇಳಲ್ಪಡದ ಶಿವಾದಿ ಸರ್ವೋತ್ತಮತ್ವವು ಅಗ್ರಾಹ್ಯ ಎಂದು ಭಾವ.

---

೫೯. ಅನ್ಯಶಾಸ್ತ್ರೇಷು ಶೈವಶಾಸ್ತ್ರೇಷು । ಈರಿತಃ – ಕ್ವಚಿತ್ ಭಾಗೇ ಈರಿತಃ । ಅತಸ್ತತ್ ಸ್ವವಿರುದ್ಧತ್ವಾತ್ ನ ವೇದಾದಿವತ್ ಸರ್ವತ್ರ ವಿಶ್ವಸನೀಯಮಿತಿ ಭಾವಃ । – (ವಾ.)

ವೈಷ್ಣವೇಷು ವಿಷ್ಣೋಃ ಶಿವಸ್ಯಾಪಿ ಪರತ್ವಂ ಶೈವೇ ಚ ಶಿವಸ್ಯ ವಿಷ್ಣೋಶ್ಚೋತ್ತಮತ್ವಮುಚ್ಯತೇ । ಏವಂ ಸತಿ ನಿರ್ಣಯಃ ಕಥಮಿತ್ಯತ ಆಹ । ನ ಚೇತ್ ತಥಾ ಚ ಶೈವಶಾಸ್ತ್ರಂ ಸ್ವವಚನವಿರೋಧಾದೇವಾಪ್ರಮಾಣಮಿತಿ ಭಾವಃ । – (ಜ.)

ತನಗೇ ವಿರುದ್ಧವಾಗಿ ಹೇಳಿಕೆಕೊಡುವ ಇತರ ಶಾಸ್ತ್ರಗಳು ವೇದಾದಿಗಳಂತೆ ಸರ್ವತ್ರ ಮಾನ್ಯವಲ್ಲ– ವೆಂದೂ ಭಾವ.

೨) ಈ ಬಗ್ಗೆ ವಿಶೇಷ ವಿವರಗಳು ಕಾಳೀಸ್ವಯಂವರ ಪ್ರಸಂಗದಲ್ಲಿ ಬಂದಿವೆ(೨೦/೧೫–೨೫).

ವೇದಗಳು ನಿರ್ದೋಷ

ನಿರ್ದೋಷತ್ವಾಚ್ಚ ವೇದಾನಾಂ ವೇದೋಕ್ತಂ ಗ್ರಾಹ್ಯಮೇವ ಹಿ ।
ವೇದೇಷ್ವಪಿ ಪರೋ ವಿಷ್ಣುಃ ಸರ್ವಸ್ಮಾದುಚ್ಯತೇ ಸದಾ ॥ ೬೦ ॥

ಅ: ವೇದಗಳು ನಿರ್ದೋಷವಾಗಿರುವುದರಿಂದ, ವೇದೋಕ್ತವಾದದ್ದು ಗ್ರಾಹ್ಯವೇ ಸರಿ; ವೇದಗಳಲ್ಲಾದರೋ ಸಕಲರಿಗಿಂತಲೂ ವಿಷ್ಣುವೇ ಸರ್ವೋತ್ತಮನು ಎಂದೇ ಸದಾ ಹೇಳಲ್ಪಟ್ಟಿದೆ.

ಶ್ರೀಹರಿಸರ್ವೋತ್ತಮತ್ವ ಸಾರುವ ವೇದವಾಕ್ಯಗಳು

***''ಅಸ್ಯ ದೇವಸ್ಯ ಮೀಳ್ಹುಷೋ ವಯಾ**
ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ ।
ವಿದೇ ಹಿ ರುದ್ರೋ ರುದ್ರಿಯಂ ಮಹಿತ್ವಂ
ಯಾಸಿಷ್ಟಂ ವರ್ತಿರಶ್ವಿನಾವಿರಾವತ್'' ॥ ೬೧ ॥

---

೬೦. ನಿರ್ದೋಷತ್ವಾದಪೌರುಷೇತ್ವೇನ ವಕ್ತ್ರಾದಿನಿಬಂಧನದೋಷರಹಿತತ್ವಾತ್ । –(ಜ)

೬೧. ಮಹ ಸೇಚನೇ ಇತಿ ಧಾತೋಃ । –(ವಾ)

೬೧. ವಿಷ್ಣೋ – ಇಷು ಇಚ್ಛಾಯಾಮಿತಿ ಧಾತೋಃ ಆ ಸಮಂತಾದಪ್ರತಿಹತೇಚ್ಛಸ್ಯ। –(ವಾ)

೬೧. ಅಸ್ಯ – ಸಕಲಜಗದ್ಧಿನ್ವತ್ವೇನ ಅಕಾರಶಬ್ದವಾಚ್ಯಸ್ಯ ವಿಷ್ಣೋಃ । –(ವಾ)

೬೧. ಪ್ರಭೃಥೇ – ಪ್ರಕರ್ಷೇಣ ಭರಣೇ । 'ತೃತೀಯೋऽತಿಶಯೇ' ಇತಿ ಸೂತ್ರಾತ್ ಭೃತಮೇವ ಭೃಥಂ ತಸ್ಮಿನ್ನುದರಭರಣೇ ಕೃತೇ ಸತಿ ಸಂಪೂರ್ಣಪೂಜಾಯಾಮಿತ್ಯರ್ಥಃ । –(ವಾ)

೬೧. ಇರಾವತ್ – 'ಇರೇತ್ಯನ್ನನಾಮಿ' ಇತಿ ಬ್ರಾಹ್ಮಣವಚನಾತ್ ಅನ್ನವತ್ ಯಜ್ಞಾಹುತಿರೂಪಾನ್ನವತ್' ಇತಿ ಯಾವತ್ । –(ವಾ)

೬೧. ವರ್ತಿಃ – ವರ್ತನಮ್ । ವೃತ್ ವರ್ತನೇ ಇತಿ ಧಾತೋಃ ಸರ್ವೇಃ ಪದವತ್ ನಪುಂಸಕಪದಮಿದಮ್ । ಔಣಾದಿಕೇ ಡಿಸನ್‌ಪ್ರತ್ಯಯೇ ಕೃತೇ ಸತಿ ಜಾತಮ್ । –(ವಾ)

* ಋಗ್ವೇದ (೭/೪೦/೫)

ಅ: ಭಕ್ತರು ಅಪೇಕ್ಷಿಸುವ ಸಕಲಪುರುಷಾರ್ಥಗಳನ್ನು ನೀಡುವ, ಸರ್ವಾತ್ಮನಾ ಅಪ್ರತಿಹತವಾದ ಸಂಕಲ್ಪವುಳ್ಳ; ಕ್ರೀಡಾದಿಗುಣವಿಶಿಷ್ಟನಾದ; ಸಕಲಜಗತ್ತಿನಿಂದ ಭಿನ್ನನಾದ್ದರಿಂದಾಗಿ ಅಕಾರವಾಚ್ಯನಾಗಿರುವ; ವಿಷ್ಣುವಿಗೆ ಯಜ್ಞಾರ್ಹವಾದ ಹವಿಸ್ಸುಗಳಿಂದ; ಸಂಪೂರ್ಣಪೂಜೆಯನ್ನು ಸಲ್ಲಿಸಿದ್ದರಿಂದಾಗಿ (ಅಹಂಕಾರರೂಪದಿಂದ) ಬಂಧಕರಾದ ರುದ್ರದೇವರು; ರುದ್ರಸಂಬಂಧಿಯಾದ ಮಹಿಮೆಯನ್ನು ಪಡೆದರಲ್ಲವೆ; (ಆದ್ದರಿಂದ) ಎಲೈ ಅಶ್ವಿನೀದೇವತೆಗಳೇ ನೀವಿಬ್ಬರೂ ಸಹ ವಿಷ್ಣುವಿಗೆ ಸಂಪೂರ್ಣಪೂಜೆಯನ್ನು ಸಲ್ಲಿಸಿದ್ದರಿಂದಲೇ (ಯಜ್ಞಾಹುತಿರೂಪ) ಅನ್ನವನ್ನು ಹೊಂದಿರುವ (ಪದವಿ)ಯನ್ನು ಪಡೆದಿರುವಿರಿ.

ವಿ: ೧) ಮಹಾಸಮರ್ಥರಾದ ರುದ್ರದೇವರು ಸಹ ವಿಷ್ಣುವನ್ನು ಅರ್ಚಿಸಿದ್ದರಿಂದಲೇ ಹಿರಿಮೆಯನ್ನು ಪಡೆದಿರುವರು; ಎಂದಮೇಲೆ ಅವರಿಗಿಂತ ತುಂಬಾ ಕಡಿಮೆಯವರಾದ ಅಶ್ವಿನೀದೇವತೆಗಳು ಆ ವಿಷ್ಣುವಿನ ಆರಾಧನೆಯಿಂದಲೇ ಯಜ್ಞಭೋಕ್ತೃತ್ವವನ್ನು ಪಡೆದಿರುವರೆಂದು ಬೇರೆ ಹೇಳಬೇಕಿಲ್ಲವೆಂದು ಭಾವ; ಅರ್ಚ್ಯ ಮತ್ತು ಅರ್ಚಕರಲ್ಲಿ ಅರ್ಚ್ಯನೇ ಶ್ರೇಷ್ಠನೆಂಬುದು ಸರ್ವಜನಪ್ರಸಿದ್ಧವಾದ ವಿಷಯ; ವಿಷ್ಣ್ವರ್ಚಕರಾದ ರುದ್ರಾದಿ ಸಕಲರಿಗಿಂತಲೂ ಅವರಿಂದ ಅರ್ಚ್ಯನಾದ ವಿಷ್ಣುವೇ ಶ್ರೇಷ್ಠನೆಂಬುದು ಸಿದ್ಧ.

೨) ಇಲ್ಲಿಂದ ೭ನೇ ಶ್ಲೋಕದವರೆಗಿನ ಮಾತುಗಳು ಶ್ರುತಿವಾಕ್ಯಗಳಾಗಿವೆ.

★''ಸ್ತುಹಿ ಶ್ರುತಂ ಗರ್ತಸದಂ ಯುವಾನಂ
ಮೃಗನ್ನ ಭೀಮಮುಪಹಂತುಮುಗ್ರಮ್'' ।
★★''ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್'' ॥ ೬ ॥

---

೬೧. ರುದ್ರಿಯಂ–ರುದ್ರಸಂಬಂಧಿ – ಸಮುದ್ರಿಯಮಿತಿವತ್ ಇದಮಪಿ ಪದಂ ಬೋದ್ಧವ್ಯಮ್ । –(ವಾ)

೬೧. ಮಹಿತ್ವಂ – ಮಹಿಮಾನಂ –(ವಾ)

೬೧. ಯಾಸಿಷ್ಟಂ – ಅಯಾಸಿಷ್ಟಂ ಪ್ರಾಪ್ತವಂತೌ ಸ್ಥಃ । –(ವಾ)

೬೧. ಶ್ರೀಟೀಕಾಕೃತ್ಪಾದರು ಈ ಶ್ರುತಿಯ ಅರ್ಥವನ್ನು ವಿಷ್ಣುತತ್ತ್ವನಿರ್ಣಯಟೀಕೆಯ ದ್ವಿತೀಯಪರಿಚ್ಛೇದ- ದಲ್ಲಿ ತಿಳಿಸಿರುವರು.

★ ಋಗ್ವೇದ (೨/೩೩/೧೧); ★★ ಋಗ್ವೇದ (೧೦/೧೨೫/೫)

೬೨. ಮೃಡಾಚರಿತ್ರೇ ರುದ್ರ ಸ್ತುವಾನೋ ಅನ್ಯಂ ತೇ ಅಸ್ಮನ್ನಿವಪಂತು ಸೇನಾಃ । (ಎಂಬುದು ಈ ಮಂತ್ರದ ಉತ್ತರಾರ್ಧ)

ಅ: ''(ಎಲೈ ರುದ್ರನೇ) ಗರ್ತಸದಂ-(ಹೃದಯ) ಗುಹೆಯಲ್ಲಿ ನೆಲೆಸಿರುವ, ನಿತ್ಯ-ತರುಣನಾದ, ಸಿಂಹದಂತೆ ಭಯಂಕರವಾದ; ಶತ್ರುಗಳ ಬಳಿಗೆ ಹೋಗಿ ಸಂಹರಿಸುವ ಸ್ವಭಾವವುಳ್ಳ, ಶತ್ರುಭಯಂಕರನಾದ, ಶ್ರುತಿಪ್ರತಿಪಾದ್ಯನಾದ, ನರಸಿಂಹನನ್ನು ಸ್ತುತಿಸು''; ''ನಾನು ಯಾರನ್ನು ರುದ್ರನನ್ನು ಮಾಡಲು ಬಯಸುವೆನೋ ಅವನನ್ನು ರುದ್ರನನ್ನಾಗಿಸುವೆನು; ಯಾರನ್ನು ಬ್ರಹ್ಮನನ್ನಾಗಿ, ಋಷಿಯನ್ನಾಗಿ, ಉತ್ತಮಮೇಧಾವಿಯನ್ನಾಗಿ ಮಾಡಬಯಸುವೆನೋ, ಅವನನ್ನು ಬ್ರಹ್ಮನನ್ನಾಗಿ, ಋಷಿಯನ್ನಾಗಿ, ಉತ್ತಮಮೇಧಾವಿಯನ್ನಾಗಿ ಮಾಡುವೆನು''.

ವಿ: ೧) ಇದರಲ್ಲಿ ಪೂರ್ವಾರ್ಧವು ಋಗ್ವೇದದ ಗೃತ್ಸಮದ ಋಷಿಗಳ ವಚನ; ಉತ್ತರಾರ್ಧವು ಅದೇ ಋಗ್ವೇದದ ಅಂಭೃಣೀಸೂಕ್ತದ ಮಹಾಲಕ್ಷ್ಮೀವಚನ.

೨) ನರಸಿಂಹ ರೂಪದ ಶ್ರೀಹರಿಯನ್ನು ಇಲ್ಲಿ ಶಿವಾಂತರ್ಯಾಮಿ, ಶಿವನಿಂದ ಸ್ತುತ್ಯ ಎಂದು ವರ್ಣಿಸಿರುವುದರಿಂದಲೂ, ಶಿವಾದಿಗಳಿಂದ ಅವಧ್ಯರಾದ ದೈತ್ಯರನ್ನು ಅವನು ವಧಿಸಿದವ-ನಾದ್ದರಿಂದಲೂ ಶಿವನಿಂದ ಅವನು ಅತ್ಯಂತ ಭಿನ್ನನೆಂದೂ ಅವನಿಗಿಂತ ಉತ್ತಮನೆಂದೂ ಆದ್ದರಿಂದಲೇ ಸರ್ವೋತ್ತಮನೆಂದೂ ಸಿದ್ಧವಾಗುವುದು.

೩) ಬ್ರಹ್ಮರುದ್ರಾದಿ ದೇವತೆಗಳು ವಿಷ್ಣುಪತ್ನಿಯಾದ ಮಹಾಲಕ್ಷ್ಮಿಯ ಅಧೀನರಾದ್ದರಿಂದ; ಲಕ್ಷ್ಮೀಪತಿಯಾದ ಮಹಾವಿಷ್ಣುವು ಅವರೆಲ್ಲರಿಗಿಂತಲೂ ಉತ್ತಮನು ಎಂದು ಭಾವ.

---

೬೨. ಗುಹಾಯಾಂ ಸದಃ ಸದನಂ ಯಸ್ಯ ತಮ್ । ಷದಲ್ಋಶರಣಗತ್ಯವಸಾದನೇಷ್ವಿತಿಧಾತೋಃ ಪಚಾದ್ಯಚ ಕೃತೇ ಸದ ಇತ್ಯಕಾರಾಂತಂ ಪದಂ ಭವತಿ । -(ವಾ.)

೬೩. ಯುವಾನಂ=ನಿತ್ಯಂ ಯೌವನವಯಸಿ ಸ್ಥಿತಮ್ । ಅಸಾಧಾರಣ್ಯೇನ ವ್ಯಪದೇಶಾ ಭವಂತೀತಿ ವಚನಾತ್ । -(ವಾ.)

೬೪. ಮೃಗಂ ನ – ಮೃಗಮಿವ ಸಿಂಹಮಿವ ಭೀಮಂ ಭಯಂಕರಂ ನರಸಿಂಹಮಿತ್ಯರ್ಥಃ। ನ ಶಬ್ದಃ ಉಪಮಾಯಾಂ 'ವ್ಯತ್ಯಯೋ ಬಹುಲ'ಮಿತಿ ವಚನಾತ್ ಮೃಗಮಿತ್ಯುಕ್ತಮ್ । ಭೀಮತ್ವೇ ದೃಷ್ಟಾಂತೀಕೃತೇನ ಸ ಚ ಮೃಗಃ ಸಿಂಹ ಇತ್ಯಪಿ ಲಭ್ಯತೇ । -(ವಾ.)

೬೫. ಉಪಹತ್ನುಂ – ಸಿಂಹತ್ವಾತ್ ಶತ್ರೂಣಾಂ ಸಮೀಪಂ ಗತ್ವಾ ಗತ್ವಾ ಹನನಶೀಲಮ್ । ಇತಸ್ತತಃ ಉತ್ಪ್ಲುತ್ಯೋತ್ಪ್ಲುತ್ಯ ಹಿರಣ್ಯಕಶಿಪೋಃ ಸೇನಾಹಂತಾರಮಿತ್ಯರ್ಥಃ । ಹಿರಣ್ಯಕಶಿಪೋಃ ಸ್ವಾಂಕ ಏವ ಹನನಾತ್ ಸಮೀಪೇ ಹಂತಾರಂ ವಾ । ಸಮೀಪಸ್ಥ ಪ್ರಹ್ಲಾದಸ್ಯಾಹನನಾನನಾದ್ಧಯೋ ಪಪನ್ನಾಮೇವ ಹಂತಾರಂ ವಾ । -(ವಾ.)

೬೬. ಅನೇನ ಶಿವಾಂತರ್ಯಾಮಿತ್ವಾತ್ ಶಿವಸ್ತುತ್ಯತ್ವಾಚ್ಚ ಶಿವಾದಿಭಿರಪ್ಯವಧ್ಯದೈತ್ಯವಧಕರ್ತೃತ್ವಾಚ್ಚ ಶಿವಾದತ್ಯಂತ-ಭೇದಃ ತದುತ್ತಮತ್ವಂ ಸರ್ವೋತ್ತಮತ್ವಂ ಚ ಸಿದ್ಧಮ್ ।

೬೭. ಅನೇನ ವಿಷ್ಣುಭಾರ್ಯಾಧೀನಾನಾಂ ಬ್ರಹ್ಮರುದ್ರಾದೀನಾಂ ವಿಷ್ಣ್ವಧೀನತ್ವಂ ಸುತರಾಂ ಸಿದ್ಧ್ಯತೀತಿ ಹೃದಯಮ್ । ವ್ಯಾಪ್ಯವ್ಯಾಪ್ಯಸ್ಯ ಸುತರಾಂ ವ್ಯಾಪ್ಯತ್ವಾತ್, ಇತಿ ಹಿ ನ್ಯಾಯವಿದೋ ವದಂತಿ । -(ವಾ.)

ಏಕೋ ನಾರಾಯಣ ಆಸೀನ್ನ ಬಹ್ಮಾ ನ ಚ ಶಂಕರಃ ।
ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ ॥ ೬೩ ॥

ಅ: ಪ್ರಳಯಕಾಲದಲ್ಲಿ ನಾರಾಯಣನೊಬ್ಬನೇ ಇದ್ದನು; ಚತುರ್ಮುಖ ಬ್ರಹ್ಮನಾಗಲೀ, ಶಿವನಾಗಲೀ ಇರಲಿಲ್ಲ; ವಾಸುದೇವನೊಬ್ಬನೇ ಈ ಸೃಷ್ಟಿಯ ಮೊದಲಲ್ಲಿ ಇದ್ದವನು; ಬ್ರಹ್ಮನಾಗಲೀ ಶಿವನಾಗಲೀ ಅಲ್ಲ.

ವಿ: ವಿಷ್ಣುತತ್ತ್ವವಿನಿರ್ಣಯ ಗ್ರಂಥದಲ್ಲಿ (ಪರಿಚ್ಛೇದ ೨) ಉಲ್ಲೇಖಿತವಾಗಿರುವಂತೆ ಈ ಶ್ರುತಿಗಳ ಸಮಗ್ರಪಾಠ ಕ್ರಮವಾಗಿ ಹೀಗಿದೆ :

೧. **'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ ।**
ಸ ಮುನಿರ್ಭೂತ್ವಾ ಸಮಚಿಂತಯತ್। ತತ ಏತೇ ವ್ಯಜಾಯಂತ ।
ವಿಶ್ವೋ ಹಿರಣ್ಯಗರ್ಭೋಽಗ್ನಿರ್ಯಮೋ ವರುಣರುದ್ರೇಂದ್ರಾಃ' ಇತಿ ।

೨. **'ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ ।**
ನೇಂದ್ರಸೂರ್ಯೌ ನ ಚ ಗುಹೋ ನ ಸೋಮೋ ನ ವಿನಾಯಕಃ ।'

ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।
ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥ ೬೪ ॥

ಅ: ಯಾವಾಗ ಜೀವನು ಹಿರಣ್ಯವರ್ಣನಾದ ಜಗತ್ಕರ್ತೃವಾದ ಸರ್ವೇಶ್ವರನಾದ, ಪೂರ್ಣಷಡ್ಗುಣನಾದ ಚತುರ್ಮುಖಬ್ರಹ್ಮನ ಉತ್ಪತ್ತಿಗೆ ಕಾರಣನಾದ, ಬ್ರಹ್ಮಾದಿದೇವತೆಗಳಿಗಿಂತಲೂ ಉತ್ತಮಳಾದ ಮಹಾಲಕ್ಷ್ಮಿಯನ್ನು ತನ್ನ ಪತ್ನಿಯಾಗಿ ಹೊಂದಿರುವ ನಾರಾಯಣನನ್ನು

---

೬೩. ಇದಮಗ್ರ ಇತ್ಯೇಕಂ ಪದಮ್ । ಅಸ್ಯ ಜಗತೋಽಗ್ರೇ ಪ್ರಳಯಕಾಲೇ ಇತ್ಯರ್ಥಃ । –(ವಾ)

೬೪. ಪಶ್ಯತೀತಿ ಪಶ್ಯೋ ಜೀವಃ । ಪಚಾದ್ಯಚಿ ಕೃತೇ ಪಶ್ಯ ಇತ್ಯಪಿ ರೂಪಂ ಭವತಿ । –(ವಾ)

೬೪. ಪುರವಃ – ಪೂರ್ಣಾಃ ; ಷಾಃ – ಷಡ್ಗುಣಾಃ ಯಸ್ಯೇತಿ ಪುರುಷಃ - ಪೂರ್ಣಷಡ್ಗುಣಃ । – (ವಾ)

೬೪. ಪರಾ – ಬ್ರಹ್ಮಾದಿಭ್ಯೋಽಪ್ಯುತ್ತಮಾ ಮಾ ಲಕ್ಷ್ಮೀಃ ಪತ್ನೀ ಯಸ್ಯ ತಂ – ಪರಮಮ್ । – (ವಾ)

೬೪. ಚೇತನತ್ವಾದಿನಾ ಈಷತ್ಸಾಮ್ಯಸ್ಯ ಸಂಸಾರೇಽಪಿ ವಿದ್ಯಮಾನತ್ವಾತ್ ಪರಮಮಿತ್ಯುಕ್ತಮ್ । – (ವಾ)

೬೪. ಅಪ್ರಾರಬ್ಧಪುಣ್ಯಪಾಪಂ ವಿಧೂಯ । – (ಜ.)
ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ। – ಗೀತಾ (೨/೫೦)

ಕಣ್ಣಾರೆ ಕಾಣುವನೋ ಆಗಲೇ ಅವಿದ್ಯೆಯಿಂದ ರಹಿತನಾಗಿ ಪುಣ್ಯಪಾಪಗಳನ್ನು ತೊರೆದು ನಿರ್ದುಃಖತ್ವ ನಿತ್ಯಾನಂದತ್ವ ನಿರಂಜನತ್ವ ನಿಃಸಂಸಾರತ್ವಾದಿರೂಪಸಾಮ್ಯವನ್ನು ಹೊಂದುವನು.

ವಿ : ೧) ಜೀವನಿಗೆ ಭಗವತ್ಸಾಕ್ಷಾತ್ಕಾರದಿಂದಲೇ ಮೋಕ್ಷ; ವಿಷ್ಣುವು ಕರ್ತೃತ್ವಾದಿ ಗುಣಭರಿತನೇ ಹೊರತು ನಿರ್ಗುಣನಲ್ಲ; ಅವನು ಸರ್ವೋತ್ತಮ. ಮುಕ್ತಿಯಲ್ಲೂ ಜೀವರಿಗೆ ಲಭಿಸುವುದು ಅವನ ಪರಮಸಾಮ್ಯವೇ ಹೊರತು ಸರ್ವಸಾಮ್ಯವಾಗಲೀ, ಐಕ್ಯವಾಗಲೀ ಅಲ್ಲ ಎಂಬ ಪ್ರಮೇಯಗಳು ಇಲ್ಲಿ ನಿರೂಪಿತವಾಗಿವೆ.

೨) ಇಲ್ಲಿ 'ಪಶ್ಯಃ'– ಎಂದರೆ 'ಜೀವ ಎಂದೂ, 'ಪುರುಷಃ' – ಎಂದರೆ 'ಪೂರ್ಣಷಡ್ಗುಣನಾದ ಪರಮಾತ್ಮ' ಎಂದೂ, 'ಬ್ರಹ್ಮಯೋನಿ' ಎಂದರೆ 'ಚತುರ್ಮುಖನಿಗೆ ಕಾರಣ' ಎಂದೂ, 'ನಿರಂಜನಃ' – ಎಂದರೆ ಅವಿದ್ಯಾರಹಿತನೆಂದೂ, 'ಪರಮಸಾಮ್ಯಂ' ಎಂದರೆ 'ನಿರ್ದುಃಖತ್ವ ನಿರಂಜನತ್ವ ನಿತ್ಯಾನಂದತ್ವ ನಿಃಸಂಸಾರತ್ವರೂಪಸಾಮ್ಯ' ವೆಂದೂ ಅರ್ಥ।

೩)'ಹಿರಣ್ಯವರ್ಣೋ ಹೇಮಾಂಗಃ' – ಎಂಬುದಾಗಿ ವಿಷ್ಣುಸಹಸ್ರನಾಮದಲ್ಲೂ 'ಹಿರಣ್ಮಯವಪುಃ' ಎಂಬುದಾಗಿ 'ಗಾಯತ್ರೀಧ್ಯಾನ'ಶ್ಲೋಕದಲ್ಲೂ ಬಂದಿರುವುದರಿಂದ 'ರುಗ್ಮವರ್ಣ' ಎಂದರೆ 'ನಾರಾಯಣ' ಎಂದೇ ಅರ್ಥ.

೪) ಪರಮಂ ಎಂಬುದು 'ಪುರುಷ' ಎಂಬುದಕ್ಕೂ 'ಸಾಮ್ಯ' ಎಂಬುದಕ್ಕೂ ವಿಶೇಷಣ; ಪುರುಷನಿಗೆ ವಿಶೇಷಣವಾದಾಗ 'ಲಕ್ಷ್ಮೀಪತಿ' ಎಂದೂ, 'ಸಾಮ್ಯ'ಕ್ಕೆ ವಿಶೇಷಣವಾದಾಗ 'ಪರಮ ಸಾಮ್ಯ' ಎಂದೂ ಅರ್ಥ.

೫)ಪುಣ್ಯಪಾಪಗಳನ್ನು ತೊರೆದು ಎಂಬುದಕ್ಕೆ ಪ್ರಾರಬ್ಧವಲ್ಲದ ಪುಣ್ಯಪಾಪಗಳನ್ನು ಕಳೆದುಕೊಂಡು ಎಂದು ಅರ್ಥ; ಪ್ರಾರಬ್ಧವು ಅವಶ್ಯಭೋಕ್ತವ್ಯವಾಗಿದೆ.

೬) ಇದು ಅಥರ್ವಣೋಪನಿಷತ್ತಿನ ವಾಕ್ಯ (೫/೩).

ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।
ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ ॥ ೬೫ ॥

---

೬೫. ತತ್ರಾಪಿ ಲಕ್ಷ್ಮ್ಯಾದಿಭೋಗಸ್ಯ ನಿರವಧಿಕಪರಮಾತ್ಮಪರಮಾನಂದಭೋಗಸ್ಯ ಚ ಮುಕ್ತೇಷ್ವಸಂಭವಾತ್ ಸ್ವಸ್ವಯೋಗ್ಯಮೌಕ್ತವಿಷಯ ಏವ ಗ್ರಾಹ್ಯಃ । ಅತ ಏವ ಕಾಮ್ಯಂತೇ ಇತಿ ಕಾಮಾಃ ಇತಿ ವ್ಯುತ್ಪತ್ತ್ಯಾ ಕಾಮನಾಯೋಗ್ಯ-ವಿಷಯಬೋಧಕಪದಮೇವೋಕ್ತಮ್ । –(ವಾ)

೬೫. ಬ್ರಹ್ಮಣಾ-ಪರಬ್ರಹ್ಮಣಾ ಸಹ । 'ಬ್ರಹ್ಮವಿದಾಪ್ನೋತಿ ಪರಂ', 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತಿ ತಸ್ಯೈವ ಪ್ರಸ್ತುತತ್ವಾತ್ । –(ವಾ)

೬೬. ಅನೇನ ಬ್ರಹ್ಮಣಾ ಸಹೇತ್ಯುಕ್ತ್ಯಾ ಮುಕ್ತಾವಪಿ ನಾಭೇದ ಇತಿ ಸಿದ್ಧಮ್ । – (ವಾ)

ಅವಧಾರಣೇ ಫಶಬ್ದಃ ಸ್ಯಾತ್ ಸಾರಮಾತ್ರಂ ತು ಸಾರಫಮ್ । –ಇತಿ ಶಬ್ದನಿರ್ಣಯೇ (ಭಾಗವತತಾತ್ಪರ್ಯ)

ಅ: ಯಾವನು ಹೃದಯಗುಹೆಯಲ್ಲಿನ ಹೃತ್ಪದ್ಮಾಕಾಶದಲ್ಲಿ ನೆಲೆಸಿರುವ ನಾರಾಯಣನನ್ನು ಅರಿಯುವನೋ, ಅವನು ಮೋಕ್ಷಾನಂತರದಲ್ಲಿ ಸರ್ವಜ್ಞನಾದ ಆ ಪರಬ್ರಹ್ಮನೊಂದಿಗೆ ಸ್ವಯೋಗ್ಯವಾದ ಸರ್ವವಿಷಯಗಳನ್ನು ಭುಂಜಿಸುವನು.

ವಿ: ೧)ಇಲ್ಲಿಯ 'ಬ್ರಹ್ಮವಿದಾಪ್ನೋತಿ ಪರಮ್ ''ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಮಾತುಗಳಿಂದ ಪರಬ್ರಹ್ಮನೇ ಪ್ರಸ್ತುತನಾಗಿರುವುದರಿಂದ ಇಲ್ಲಿಯ 'ಬ್ರಹ್ಮಣಾ' ಎಂಬುದಕ್ಕೆ 'ಪರಬ್ರಹ್ಮಣಾ' ಎಂದೇ ಅರ್ಥ.

೨) ಕಾಮಾನ್' ಎಂಬುದಕ್ಕೆ 'ಕಾಮ್ಯಂತೇ ಇತಿ ಕಾಮಾಃ' ಎಂಬ ವ್ಯುತ್ಪತ್ತಿಯಿಂದ ಅವರವರಿಗೆ ಏಹಿತವಾದ ವಿಷಯಗಳನ್ನು ಎಂದು ಅರ್ಥ.

೩) 'ಬ್ರಹ್ಮಣಾ ಸಹ' 'ಪರಬ್ರಹ್ಮನೊಂದಿಗೆ' ಎಂದು ಉಕ್ತವಾಗಿರುವುದರಿಂದ ಮುಕ್ತಿಯಲ್ಲೂ ಜೀವಬ್ರಹ್ಮರಿಗೆ ಭೇದವೇ ಹೊರತು ಅಭೇದವಲ್ಲ ಎಂದು ಭಾವ.

೪) ಇದು ತೈತ್ತಿರೀಯೋಪನಿಷತ್ತಿನ ವಾಕ್ಯ.(೨/೧)

★''ಪ್ರ ಘಾ ನ್ವಸ್ಯ ಮಹತೋ ಮಹಾನಿ
ಸತ್ಯಾಸತ್ಯಸ್ಯ ಕರಣಾನಿ ವೋಚಮ್'' ।
★★''ಸತ್ಯಮೇನಮನು ವಿಶ್ವೇ ಮದಂತಿ
ರಾತಿಂ ದೇವಸ್ಯ ಗೃಣತೋ ಮಘೋನಃ'' ॥ ೬೬ ॥

---

೬೬. ಘ – ಏವ । ಸತ್ಯಾನ್ಯೇವ ನ ತು ಕದಾಚಿದಸತ್ಯಾನೀತ್ಯೇವಕಾರಾರ್ಥಃ । ಸತ್ಯತಾವಧಾರಣಸ್ಯ ದೀರ್ಘ-ಕಾಲೀನತ್ವಸೂಚನಾಯ ಸಂಹಿತಾಯಾಂ 'ಘಾ' ಇತಿ ದೀರ್ಘಃ । -ವಾ

೬೬. 'ಸುಪಾಂ ಸುಲುಕ್' ಇತಿ ವಿಭಕ್ತಿಲೋಪೇ ಸತಿ ಸತ್ಯಾನೀತಿ ಸಿದ್ಧ್ಯತಿ । —ವಾ

೬೬. ಪ್ರವೋಚಂ ಪ್ರಾವೋಚಮ್ । ನು – ಏವ ಪ್ರಾವೋಚಮೇವ । ವಚನೇ ಪ್ರಕರ್ಷೋ ನಾಮ ತತ್ತ್ವವೇದಕಲಕ್ಷಣಂ ಪ್ರಾಮಾಣ್ಯಮೇವ । –(ವಾ)

೬೬. ಮದಂತಿ – ಹರ್ಷಂ ಕುರ್ವಂತಿ । 'ಮದಿ ಹರ್ಷ' ಇತಿ ಧಾತೋಃ । —ವಾ

★ ಋಗ್ವೇದ – (೨/೧೫/೧); ★★ ಋಗ್ವೇದ (೪/೧೭/೫)

೬೬. ತಥಾ ದಾತಾ ಭಗವಾನ್ ಸತ್ಯಃ । ಏವಂ ದಾನಂ ಚ ಸತ್ಯಮ್ । ದೇಯಂ ತ್ರೈಲೋಕ್ಯಮಪಿ ಸತ್ಯಮ್ । ಅನ್ಯಥಾ ವಿಪ್ರಲಂಭಕದಾತೃವತ್ ದಾತೈವಾಪಹಾಸ್ಯಃ ಸ್ಯಾತ್ । ಅತೋ ಭಗವಾನ್ ಸರ್ವಮಸ್ಮದ್ಯೋಗಾರ್ಹಂ ಜಗಚ್ಚ ಯುಕ್ತಿಬಲಾದೇವ ಪಾರಮಾರ್ಥಿಕಸತ್ಯಮಿತಿ ಹರ್ಷಂ ಕುರ್ವಂತೀತಿ ಭಾವಃ । ಸರ್ವದೇವಾನಾಮಪಿ ಸಂಗ್ರಹಾಯ ಸ್ವರಿತಸ್ವರಃ । –(ವಾ)

ಅ: ಪಾರಮಾರ್ಥಿಕಸತ್ಯನೂ, ಸರ್ವೋತ್ತಮನೂ, ಆದ ಶ್ರೀಹರಿಯ ಶ್ರೇಷ್ಠವಾದ ಜಗತ್ಸೃಷ್ಟ್ಯಾದಿ ಪಾಲಕತ್ವ ಮೊದಲಾದ ಕರ್ಮಗಳನ್ನು ನಾನು ಸತ್ಯವಾದವುಗಳು ಎಂಬುದಾಗಿಯೇ ಹೇಳಿರುವೆನು, ತನ್ನನ್ನು ಸ್ತುತಿಸುವ ಇಂದ್ರನಿಗೆ ಬಲಿಯನ್ನು ಸೋಲಿಸಿ ಮೂರು ಲೋಕಗಳನ್ನು ನೀಡುವ ಅವನ ಕಾರ್ಯವನ್ನು ಸಕಲದೇವತೆಗಳೂ, ಪಾರಮಾರ್ಥಿಕ ಸತ್ಯ ವೆಂಬುದಾಗಿಯೇ ತಿಳಿದು ಹರ್ಷಪಡುವರು.

ಎ: ೧) ಇಲ್ಲಿ 'ಕರಣಾನಿ' ಎಂದರೆ ಅವನ ಸೃಷ್ಟ್ಯುಪಯುಕ್ತವಾದ ಕಣ್ಣು ಹಸ್ತ ಮೊದಲಾದ ದಶೇಂದ್ರಿಯಗಳನ್ನು, ಭೂಮಿ, ಪರ್ವತ ಮೊದಲಾದ ಕಾರ್ಯಗಳನ್ನು ಅಥವಾ ಜೀವರಲ್ಲಿ ಅಸಂಭಾವಿತವಾದ ಸರ್ವಜ್ಞತ್ವ ಸರ್ವೇಶ್ವರತ್ವ ಸರ್ವಶಕ್ತಿತ್ವ ಮೊದಲಾದ ಭಗವಲ್ಲಕ್ಷಣಗಳನ್ನು ಅನಾದ್ಯನಂತ ಕಾಲೀನವಾದ ಮಹೀಧರಾದಿ ರೂಪ ಕಾರ್ಯ ಸೃಷ್ಟಿಯಲ್ಲಿ ಅಂತರಂಗಸಾಧನವಾಗಿರುವ ಮಣ್ಣು ಮೊದಲಾದ ಉಪಾದಾನಗಳನ್ನು.

೨) ಪರಬ್ರಹ್ಮನ ಸ್ವರೂಪ ಮಾತ್ರವಲ್ಲದೆ ಅವನ ಸೃಷ್ಟ್ಯಾದಿ ಕರ್ಮಗಳೂ, ಕರಚರಣಾದಿ ಇಂದ್ರಿಯಗಳನ್ನು ಹೊಂದಿರುವ ಆಕಾರವೂ, ಸಾರ್ವಜ್ಞ್ಯಾದಿ ಗುಣಗಳೂ, ಪ್ರಮಾಣ ಮತ್ತು ಪ್ರಮೇಯರೂಪವಾದ ಸಕಲ ಜಗತ್ತೂ ಸಹ ಸತ್ಯವೆಂಬುದನ್ನು ಈ ಶ್ರುತಿಯು ಪ್ರತಿಪಾದಿಸುತ್ತದೆ.

೩) 'ಘ' ಎಂದರೆ 'ಏವ' ಎಂದರ್ಥ; ಸತ್ಯತ್ವ ನಿಶ್ಚಯವು ದೀರ್ಘಕಾಲೀನವಾದುದು ಎಂಬುದನ್ನು ಸೂಚಿಸಲು ಸಂಹಿತೆಯಲ್ಲಿ 'ಘಾ' ಎಂಬುದಾಗಿ ದೀರ್ಘ ಬಂದಿದೆ.

೪) 'ಸುಪಾಂ ಸುಲುಕ್' ಎಂಬ ಸೂತ್ರದಿಂದ ವಿಭಕ್ತಿ ಲೋಪವಾಗಿ 'ಸತ್ಯಾನಿ' ಎಂಬುದು 'ಸತ್ಯಾ' ಎಂದಾಗಿದೆ.

★''ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ
ವಸುಸ್ಪಾರ್ಹಮುತ ಜೇತೋತ ದಾತಾ'' ।
★★''ಸತ್ಯಃ ಸೋ ಅಸ್ಯ ಮಹಿಮಾ
ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ'' ॥ ೬೭ ॥

---

೬೭. ಚಿಕೇತ – ಕೃತವಾನ್ –(ವಾ)

೬೭. ಸತ್ಯಮಿತ್ – ಸತ್ಯಮೇವ। –(ವಾ)

★ ಋಗ್ವೇದ (೧೦/೫೫/೬); ★★ ಋಗ್ವೇದ (೮/೩/೪)

ಅ: ಅಭಿಲಷಿತವಾದ ಮೂರು ಲೋಕಗಳೇ ಮೊದಲಾದ ವಸ್ತುಗಳನ್ನು ಬಲಿಯಿಂದ ಗೆದ್ದವನೂ, ಅದನ್ನು ಇಂದ್ರನಿಗೆ ಇತ್ತವನೂ, ಆದ ಆ ಭಗವಂತನು ಏನನ್ನು ಮಾಡಿರುವನೋ ಅದೆಲ್ಲಾ ಸತ್ಯವೇ ಆಗಿದೆ; ಎಂದೂ ವ್ಯರ್ಥವಲ್ಲ; ವಿಪ್ರಪ್ರಧಾನವಾದ ಯಜ್ಞಗಳಲ್ಲಿ ಸುಖವನ್ನು ಉದ್ದೇಶಿಸಿ ಅವನ ಮಹಿಮೆಯನ್ನು ನಾನು ಸ್ತುತಿಸುವೆ. ಅವನ ಮಹಿಮೆ ಸತ್ಯವಾದುದು.

ವಿ: ೧) ಯಜ್ಞ ಭೋಕ್ತೃವೂ, ಯಜ್ಞಫಲಪ್ರದನೂ, ಯಜ್ಞೇಶ್ವರನೂ, ಯಜ್ಞರಕ್ಷಕನೂ ಆದ ವಿಷ್ಣುವಿನ ಮಹಿಮೆ ಸತ್ಯವಾದುದು ಎಂದು ಭಾವ.

೨) ತಾನು ನಿರ್ಮಿಸುವ ಜಗತ್ತು ಅಸತ್ಯವಾದರೆ ಅದನ್ನು ನಿರ್ಮಿಸುವ ಭಗವಂತನದು ಕೌಶಲವಾಗುವುದಿಲ್ಲ; ಅಂತಹ ಜಗತ್ತನ್ನು ಬಲಿಯಿಂದ ಜಯಿಸಲು ಇಂದ್ರನಿಗೆ ನೀಡಲು ಅವತಾರವೆತ್ತಿದ್ದುಸಹ ವ್ಯರ್ಥವಾಗುತ್ತಿತ್ತು; ಆದ್ದರಿಂದ ಜಗತ್ತು ಸತ್ಯ ಎಂದು ಭಾವ.

ಪಂಚಭೇದಗಳ ನಿರೂಪಣೆ

ಸತ್ಯಾ ವಿಷ್ಣೋರ್ಗುಣಾಸ್ಸರ್ವೇ ಸತ್ಯಾ ಜೀವೇಶಯೋರ್ಭಿದಾ ।
ಸತ್ಯೋ ಮಿಥೋ ಜೀವಭೇದಃ ಸತ್ಯಂ ಚ ಜಗದೀದೃಶಮ್ ॥ ೬೮ ॥

---

೬೭. ಮೋಘಂ ನ । ಅಪಾರ್ಥಂ ನ । ಸ್ವಕೃತಕೃಷೇರಪಾರ್ಥತ್ವೇ ಕೃಷೀವಲಸ್ಯ ದೈನ್ಯವತ್ ಸ್ವಕೃತಜಗತೋಽಸತ್ಯತ್ವೇ ಕರ್ತುರ್ಭಗವತ ಏವ ಅಕುಶಲತ್ವಂ ಸ್ಯಾತ್ । ಜಯಾಯ ದಾನಾಯ ಚ ಸ್ವಾವತಾರೋಽಪಿ ವ್ಯರ್ಥಃ ಸ್ಯಾದಿತಿ ಸೂಚನಾಯ ಸತ್ಯಮೇವೇತ್ಯುಕ್ತಮ್ । –(ವಾ)

೬೭. ವಸು – ತ್ರೈಲೋಕ್ಯಾದಿ ವಸ್ತು। –(ವಾ)

೬೭. ಸ್ಪಾರ್ಹಂ – ಸ್ಪೃಹಾಯೋಗ್ಯಮ್ । –(ವಾ)

೬೭. ಜೇತಾ – ಬಲೇರ್ಜೇತಾ। – (ವಾ)

೬೭. ದಾತೋತ – ಇಂದ್ರಾಯ ದಾತಾ ಚ । –(ವಾ)

೬೭. ಗೃಣೇ – ಸ್ತೌಮಿ ಇದಂ ವಿಷ್ಣುರ್ವಿಚಕ್ರಮೇ ಇತ್ಯಾದಿನಾ ಸ್ತೌಮಿ । –(ವಾ)

೬೭. ಶವಃ – ಸುಖಂ, ದ್ವಿತೀಯಾಬಲಾದೇವ ಉದ್ದಿಶ್ಯೇತಿ ಲಭ್ಯತೇ ।

೬೭. ಯಜ್ಞಭುಗ್ ಯಜ್ಞಫಲದೋ ಯಜ್ಞೇಶೋ ಯಜ್ಞಭಾವನಃ ।
ಯಜ್ಞತ್ರಾತಾ ಯಜ್ಞಪುಮಾನ್ ವನಮಾಲೀ ದ್ವಿಜಪ್ರಿಯಃ । – ಇತಿ ವಾಸುದೇವಸಹಸ್ರನಾಮಸು ಪಾಠಾತ್ ಅಸ್ಯ ಯಜ್ಞಭೋಕ್ತುರ್ಯಜ್ಞಫಲಪ್ರದಸ್ಯ ಯಜ್ಞರಕ್ಷಕಸ್ಯಾಪಿ ವಿಷ್ಣೋಃ ಸ ಮಹಿಮಾ ಸತ್ಯಃ ಇತ್ಯರ್ಥಃ। – (ವಾ)

ಅ: ವಿಷ್ಣುವಿನ ಸಕಲ ಗುಣಗಳು ಸತ್ಯ; ಜೀವೇಶ್ವರರ ಭೇದವು ಸತ್ಯ; ಜೀವಜೀವರ ಪರಸ್ಪರ ಭೇದವೂ ಸತ್ಯ; ಈ ತೆರನಾದ ಜಗತ್ತು ಸಹ ಸತ್ಯ.

ವಿ: ೧) ವಿಷ್ಣುವಿನ ಗುಣಗಳು ಅನಂತ; ಮಾತ್ರವಲ್ಲದೆ ಸತ್ಯವೂ ಆಗಿವೆ; ಜೀವಜೀವರ ಭೇದ ಮತ್ತು ಜಗತ್ತು ಸಹ ಸತ್ಯ; ಜಗತ್ತು ಮಿಥ್ಯೆಯಾದಲ್ಲಿ ವಿಷ್ಣುವಿನ ಜಗತ್ಕರ್ತೃತ್ವಾದಿ ಗುಣಗಳೂ ಮಿಥ್ಯೆಯಾಗಬೇಕಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರವನ್ನು ಈ ಮೂಲಕ ಕೊಡಲಾಗಿದೆ.

೨) ಈದೃಶಂ– ಇಂತಹ; ಇಂತಹ ಎಂದರೆ 'ಅರ್ಥಕ್ರಿಯಾಕಾರಿಯಾಗಿರುವ' ಎಂದು ಅರ್ಥ.

ವಿಷ್ಣುವಿನ ಸ್ವಗತಭೇದವಿವರ್ಜಿತತ್ವ

ಅಸತ್ಯಃ ಸ್ವಗತೋ ಭೇದೋ ವಿಷ್ಣೋರ್ನಾನ್ಯದಸತ್ಯಕಮ್ ।
ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದಸಮನ್ವಿತಃ ॥ ೬೯ ॥

ಅ: ವಿಷ್ಣುವಿನಲ್ಲಿರುವ ಸಕಲಭೇದಗಳೂ ಅಸತ್ಯ; ಇತರ ಯಾವುದೂ ಅಸತ್ಯವಲ್ಲ; ಪಂಚಭೇದಗಳಿಂದ ಯುಕ್ತವಾದ ಈ ಜಗತ್ಪ್ರವಾಹವು ಸತ್ಯವೇ ಆಗಿದೆ.

ವಿ: ೧) ವಿಷ್ಣುವಿನಲ್ಲಿ ಯಾವ ಭೇದಗಳೂ ಇಲ್ಲವೆಂದರೆ, ಅವನ ರೂಪರೂಪಗಳಲ್ಲಾಗಲೀ, ಗುಣ, ಅವಯವ ಮೊದಲಾದವುಗಳಲ್ಲಾಗಲೀ, ಯಾವುದೇ ಭೇದವೂ ಇಲ್ಲ. ಅವನು 'ಸ್ವಗತ–ಭೇದವಿವರ್ಜಿತ' ಎಂದು ಭಾವ (೧/೧೧).

೨) ಈಗಿನ ಜಗತ್ತಿನಂತೆ ಅನಾದಿ ಮತ್ತು ಅನಂತ ಕಾಲದ ಜಗತ್ತುಗಳು ಸಹ ಸತ್ಯವಾಗಿವೆ ಎಂಬುದನ್ನು 'ಜಗತ್ಪ್ರವಾಹವು ಸತ್ಯ' ಎಂಬ ಮಾತು ಸೂಚಿಸುತ್ತದೆ.

ಪಂಚಭೇದಗಳು

ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಮ್ ।
ಜಡೇಶಯೋರ್ಜಡಾನಾಂ ಚ ಜಡಜೀವಭಿದಾ ತಥಾ ॥ ೭೦ ॥

---

೬೮. ಈದೃಶಂ ಅರ್ಥಕ್ರಿಯಾಸೂಪಯುಜ್ಯಮಾನಮ್ । –(ವಾ.)

೬೯. ಭೇದಾನಾಮನಂತತ್ವೇಽಪಿ ರಾಶ್ಯಪೇಕ್ಷಯಾ 'ಪಂಚಭೇದಸಮನ್ವಿತಃ' ಇತ್ಯುಕ್ತಂ –(ಜ.)

೬೯. ಇದಾನೀಂತನಜಗದ್ವತ್ ಅನಾದ್ಯನಂತಕಾಲೀನಸಕಲಜಗಂತ್ಯಪಿ ಸತ್ಯಾನೀತ್ಯಾಹ । ಜಗತ್ಪ್ರವಾಹ ಇತಿ ।– (ವಾ.)

೬೯. 'ಪ್ರಪಂಚೋ ಭೇದಪಂಚಕಃ' ಎಂಬ ವಿಷ್ಣುತತ್ತ್ವನಿರ್ಣಯದ ಮಾತೂ ಇಲ್ಲಿಗಮನಾರ್ಹ.

ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವಶಃ ।
ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ ॥ ೭೧ ॥

ಅ: ಜೀವೇಶ್ವರಭೇದ, ಜೀವಜೀವಭೇದ, ಜಡೇಶ್ವರಭೇದ, ಜಡಜಡಭೇದ ಮತ್ತು ಜಡಜೀವಭೇದ ಎಂಬ ಈ ಪಂಚಭೇದಗಳು ನಿತ್ಯವಾಗಿವೆ; ಸಕಲಅವಸ್ಥೆಗಳಲ್ಲೂ ಸಕಲರೀತಿಯಲ್ಲೂ ಇವು ಸತ್ಯ; ಮುಕ್ತರಾದ ಮೇಲೂ ಸಹ ತಾರತಮ್ಯವು ಎಂದೂ ಇಲ್ಲವಾಗುವುದಿಲ್ಲ.

ವಿ: ೧) ಪಂಚಭೇದ ಮತ್ತು ತಾರತಮ್ಯಗಳು ಈ ಶ್ಲೋಕಗಳಲ್ಲಿ ಪ್ರತಿಪಾದಿತವಾಗಿವೆ;

೨) ಐದು ತೆರನಾದ ಭೇದವು ಅನಾದಿ ನಿತ್ಯವೂ ಸತ್ಯವೂ ಆಗಿದೆ. ಯಾವುದೇ ಅವಸ್ಥೆಯಲ್ಲಿ ಯಾವುದೇ ಕಾರಣಕ್ಕೂ ಇದು ತಪ್ಪುವುದಿಲ್ಲ.

೩) ಜೀವರಲ್ಲಿ ಭೇದದೊಂದಿಗೆ ತಾರತಮ್ಯವೂ ಇದ್ದು ಅದು ಮುಕ್ತರಾದ ಮೇಲೂ ಸಹಾ ಇದ್ದೇ ಇರುವುದು. ಅದಕ್ಕೆಂದೂ ಭಂಗವಿಲ್ಲ.

೪) ಇಲ್ಲಿ ಪಂಚಭೇದಗಳು ಎಂದರೆ ಜೀವರು ಮತ್ತು ಪರಮಾತ್ಮನಿಗೆ ಭೇದ, ಜೀವರಲ್ಲಿ ಪರಸ್ಪರಭೇದ, ಜಡ ಮತ್ತು ಪರಮಾತ್ಮನಿಗೆ ಭೇದ, ಜಡಗಳಲ್ಲಿ ಪರಸ್ಪರಭೇದ, ಜಡಗಳು ಮತ್ತು ಜೀವರಿಗೆ ಭೇದ.

೫) 'ಸರ್ವಾವಸ್ಥಾಸು' ಎಂದರೆ ಸೃಷ್ಟಿಪ್ರಲಯಪಾಲನಾದಿ ಸಕಲ ಅವಸ್ಥೆಗಳಲ್ಲೂ ಎಂದು ಅರ್ಥ.

ದೇವತಾತಾರತಮ್ಯ

ಕ್ಷಿತಿಪಾ ಮನುಷ್ಯಗಂಧರ್ವಾ ದೇವಾಶ್ಚ ಪಿತರಶ್ಚಿರಾಃ ।
ಆಜಾನಜಾಃ ಕರ್ಮಜಾಶ್ಚ ದೇವಾ ಇಂದ್ರಃ ಪುರಂದರಃ ।
ರುದ್ರಃ ಸರಸ್ವತೀ ವಾಯುರ್ಮುಕ್ತಾಃ ಶತಗುಣೋತ್ತರಾಃ ॥ ೭೨ ॥

---

೭೧. ಯದ್ವಾ 'ಇಮೇ ಚ ಪಂಚಭೇದಾಃ' ಸರ್ವಾವಸ್ಥಾಸು ಸೃಷ್ಟಿಪ್ರಲಯಪಾಲನಾದ್ಯವಸ್ಥಾಸು । –(ವಾ.)

೭೨. ಸಾಮಾನ್ಯಪಿತೃಭ್ಯಃ ಪೂರ್ವಮೇವ ಸೃಷ್ಟತ್ವಾತ್ ಚಿರಾ ಇತ್ಯುಚ್ಯಂತೇ । -(ವಾ)

೭೨ ಗಂಧರ್ವೇಷು ದ್ವೈವಿಧ್ಯವತ್ ಪಿತೃಷ್ವಪಿ ದ್ವೈವಿಧ್ಯಮಸ್ತೀತಿ ಜ್ಞೇಯಮ್ । –(ವಾ)

ಅ: 'ಮನುಷ್ಯೋತ್ತಮರು, ಚಕ್ರವರ್ತಿಗಳು, ಮನುಷ್ಯಗಂಧರ್ವರು, ದೇವಗಂಧರ್ವರು, ಪಿತೃಗಳು, ಚಿರಪಿತೃಗಳು, ಆಜಾನಜದೇವತೆಗಳು, ಕರ್ಮಜ ದೇವತೆಗಳು, ದೇವತೆಗಳು, ದಕ್ಷ (ಬೃಹಸ್ಪತಿ) ಮತ್ತು ಇಂದ್ರ, ರುದ್ರ, ಸರಸ್ವತಿ ಮತ್ತು ವಾಯು' ಈ ಕ್ರಮದಲ್ಲಿ ಮುಕ್ತರು ಕ್ರಮವಾಗಿ ನೂರುಗುಣಗಳಿಂದ ಅಧಿಕರಾಗಿರುವರು;

ವಿ: ೧) ಇಲ್ಲಿ 'ಕ್ಷಿತಿಪ' ಪದದಿಂದ ಮನುಷ್ಯೋತ್ತಮರನ್ನೂ ಗ್ರಹಿಸಬೇಕು.

೨) 'ದೇವಾಶ್ಚ ಪಿತರಶ್ಚಿರಾಃ' ಎಂಬಲ್ಲಿ 'ದೇವ' ಶಬ್ದಕ್ಕೆ 'ದೇವಗಂಧರ್ವರು' ಎಂದೂ 'ಪಿತರಃ' ಎಂಬುದಕ್ಕೆ 'ಸಾಮಾನ್ಯ ಪಿತೃಗಳು' ಎಂದೂ, 'ಚಿರಾಃ' ಎಂಬುದಕ್ಕೆ 'ಚಿರಪಿತೃಗಳು' ಎಂದೂ ಅರ್ಥ.

೩) ಸಾಮಾನ್ಯ ಪಿತೃಗಳಿಗಿಂತಲೂ ಮುಂಚೆಯೇ ಸೃಷ್ಟರಾದವರು ಎಂಬ ಕಾರಣದಿಂದ 'ಚಿರಪಿತೃ'ಗಳಿಗೆ ಆ ಹೆಸರು ಬಂದಿದೆ; ಗಂಧರ್ವರಲ್ಲಿ 'ಮನುಷ್ಯಗಂಧರ್ವರು', 'ದೇವಗಂಧರ್ವರು' ಎಂದು ದ್ವೈವಿಧ್ಯ ಇರುವಂತೆ ಪಿತೃಗಳಲ್ಲೂ 'ಸಾಮಾನ್ಯ ಪಿತೃಗಳು' ಮತ್ತು 'ಚಿರಪಿತೃಗಳು' ಎಂಬುದಾಗಿ ದ್ವೈವಿಧ್ಯವಿದೆ ಎಂದು ತಿಳಿಯಬೇಕು.

೪) ದೇವಕುಲದಲ್ಲಿ ಜನಿಸಿ, ಜನನಕಾಲದಿಂದಲೂ ದೇವತೆಗಳಾದವರಿಗೆ 'ಆಜಾನಜ ದೇವತೆ'ಗಳೆಂದೂ, ತಮ್ಮ ವಿಶಿಷ್ಟ ಕರ್ಮಗಳಿಂದ ದೇವತ್ವವನ್ನು ಪಡೆದವರಿಗೆ 'ಕರ್ಮಜ ದೇವತೆ'ಗಳೆಂದೂ ತತ್ತ್ವಾಭಿಮಾನಿ ದೇವತೆಗಳೇ ಆಗಿರುವವರಿಗೆ 'ದೇವತೆಗಳು' ಎಂದೂ ಹೆಸರು.

---

೭೨. ಆಜಾನಜಾಃ – ಜನನಮಾರಭ್ಯ ದೇವತ್ವೇನ ಜಾತಾಃ ದೇವಪುತ್ರತ್ವಾದೇವ ದೇವಾಃ ಜಯಂತಾದ್ಯಾಃ।-(ವಾ)

೭೩. ಕರ್ಮಜಾಃ ಕರ್ಮಣಾ ದೇವತ್ವಂ ಪ್ರಾಪ್ತಾಃ ಪೃಥ್ವಾದ್ಯಾಃ। –(ವಾ)

೭೪. ದೇವಾಃ – ಉತ್ಪತ್ತಿಂ ಕರ್ಮ ಚ ವಿನಾ ಸ್ವಭಾವೇನೈವ ದೇವಾಃ। –(ವಾ)

೭೫. ತಾರತಮ್ಯಗಣನಾಯಾಂ ಸ್ಪಷ್ಟಮುಕ್ತದೇವೇಭ್ಯೋऽತಿರಿಕ್ತಾಃ ಶತಸ್ಥದೇವಾಃ। –(ವಾ)

೭೬. ಆಜಾನಜದೇವತೆಗಳಿಗೆ ಅನಾಖ್ಯಾತದೇವತೆಗಳೆಂದೂ ಹೆಸರು:

ಅನಾಖ್ಯಾತಾ ದೇವತಾಸ್ತು ಜಾತಾ ದೇವಕುಲೇ ಚ ಯಾಃ।
ಆಜಾನದೇವತಾಸ್ತಾ ಹಿ ತೇಭ್ಯೋऽನ್ಯಾಃ ಕರ್ಮದೇವತಾಃ।
ಬಲ್ಯಾದ್ಯಾ ಅಂತರಾ ಪ್ರಾಪ್ತದೇವತಾಃ ಕರ್ಮದೇವತಾಃ।
ತಾಭ್ಯಶ್ಚತಾತ್ತ್ವಿಕಾ ದೇವಾಃ ಸೃಷ್ಟ್ಯಾದೌ ದೇವತಾಂ ಗತಾಃ। –ಯಜುಃಸಂಹಿತಾ

ತೇಭ್ಯೋ ದಕ್ಷಸ್ತ್ವಿಂದ್ರನಾಮಾ ಸ ಹೀಂದುಂ ರಾವಯತ್ ಪುರಾ।

ಇಂದ್ರಪುತ್ರನಾದ ಜಯಂತ ಮೊದಲಾದವರು ಆಜಾನಜದೇವತೆಗಳು; ಬಲಿ ಪೃಥು ಮೊದಲಾದವರು ಕರ್ಮಜದೇವತೆಗಳು; ಮತ್ತು ಇತರ ಪ್ರಧಾನದೇವತೆಗಳು ಶತಸ್ಥದೇವತೆಗಳು ಎಂದೂ ತಿಳಿಯಬೇಕು.

೫) ಇಲ್ಲಿ 'ಇಂದ್ರಃ' ಎಂದರೆ ದಕ್ಷಪ್ರಜಾಪತಿ ಅಥವಾ ದೇವಗುರುವಾದ 'ಬೃಹಸ್ಪತಿ' ಎಂದೂ, 'ಪುರಂದರ' ಎಂದರೆ ದೇವೇಂದ್ರ ಎಂದೂ ಅರ್ಥ.

೬) ದೇವಗಂಧರ್ವರಲ್ಲಿ ನೂರು ಜನರು ಆಜಾನಜದೇವತೆಗಳಿಗೆ ಸಮಾನರು; ಎಂಟು ಜನ ಕರ್ಮಜದೇವತೆಗಳಿಗೆ ಸಮಾನರು; ಹೀಗೆ ಒಟ್ಟು ನೂರೆಂಟು ಜನಗಳನ್ನು ಬಿಟ್ಟು ಇತರ ದೇವಗಂಧರ್ವರು ಪಿತೃಗಳಿಗಿಂತ ನೂರುಗುಣ ಕಡಿಮೆ ಎಂದರ್ಥ.

೭) ಪಿತೃಗಳಲ್ಲಿ ಎಂಟುಜನರ ಹೊರತು ಇತರರು ಆಜಾನಜದೇವತೆಗಳಿಗಿಂತ ಶತಾವರರು; ಎಂಟುಜನ ಪಿತೃಗಳಲ್ಲಿ ಏಳುಜನರು ಕರ್ಮಜದೇವತೆಗಳಿಗೆ ಸಮಾನರು; ವಿಶ್ವಾಮಿತ್ರರು ಬ್ರಹ್ಮಪುತ್ರವಸಿಷ್ಠರಿಗೆ ಸಮಾನ.

೮) 'ಮನುಷ್ಯಗಂಧರ್ವ' ಮತ್ತು 'ದೇವಗಂಧರ್ವ' ಎಂಬ ಉಭಯವಿಧ ಗಂಧರ್ವರೂ ದೇವದೂತರುಗಳಾಗಿರುವರು; ದೇವತೆಗಳಿಂದ ಸಾಕ್ಷಾತ್ ಆಜ್ಞಾಪಿಸಲ್ಪಡುವವರು 'ದೇವ–ಗಂಧರ್ವರು', ಪರಮುಖೇನ ಆಜ್ಞಾಪಿಸಲ್ಪಡುವವರು ಮನುಷ್ಯಗಂಧರ್ವರು.

ಬ್ರಹ್ಮ ವಾಯುಗಳು ಸಮ - ಅದರಂತೆ ಗರುಡ, ಶೇಷ, ರುದ್ರರು ಪರಸ್ಪರ ಸಮರು

ಏಕೋ ಬ್ರಹ್ಮಾ ಚ ವಾಯುಶ್ಚ ವೀಂದ್ರೋ ರುದ್ರಸಮಸ್ತಥಾ ।
ಏಕೋ ರುದ್ರಸ್ತಥಾ ಶೇಷೋ ನ ಕಶ್ಚಿದ್ವಾಯುನಾ ಸಮಃ ॥ ೭೩ ॥

---

೭೨. ತಸ್ಮಾತ್ ಬೃಹಸ್ಪತಿರ್ನಾಮ ಮಹೇಂದ್ರತ್ವಾತ್ ಪುರಂದರಃ । –ಯಜುಃಸಂಹಿತಾ

೭೨. ಕರ್ಮದೇವಗಣಾ ಅಷ್ಟಗಂಧರ್ವಾಸ್ತ್ವರೇ ಶತಮ್ ।
ಆಜಾನದೇವಾಸ್ತೇಭ್ಯೋಽನ್ಯೇ ಪಿತೃಭ್ಯಶ್ಚ ಶತಾವರಾಃ । –ಬೃಹದಾರಣ್ಯಕೋಪನಿಷದ್ಭಾಷ್ಯ

೭೨. ಪಿತೃಣಾಂ ಸಪ್ತಕಂ ಯತ್ತತ್ ಕರ್ಮದೇವಸಮಂ ಮತಮ್ ।
ವಿಶ್ವಾಮಿತ್ರೋ ಬ್ರಹ್ಮಪುತ್ರಸಮೋ ಮುನಿರುದಾಹೃತಃ ।
ಆಚಾರ್ಯಃ ಪಿತೃಣಾಂ ಚಾಸೌ ಪಿತೃಭಿಃ ಸಹ ಪಠ್ಯತೇ । –ಬೃಹದಾರಣ್ಯಕೋಪನಿಷದ್ಭಾಷ್ಯ

೭೨. ಪರಮುಖೇನ ದೇವಪ್ರೇಷ್ಯಾಃ ದೇವಗಂಧರ್ವಾಃ ।

೭೨. ದೇವಗಂಧರ್ವಾಃ ಸ್ವಮುಖೇನ ದೇವಪ್ರೇಷ್ಯಾಃ । –(ಜ)

ಲಕ್ಷ್ಮೀನಾರಾಯಣರ ಹಿರಿಮೆ

ಮುಕ್ತೇಷು ಶ್ರೀಸ್ಥಾ ವಾಯೋಃ ಸಹಸ್ರಗುಣಿತಾ ಗುಣೈಃ ।
ತತೋಽನಂತಗುಣೋ ವಿಷ್ಣುರ್ನ ಕಶ್ಚಿತ್ ತತ್ಸಮಃ ಸದಾ ॥ ೭೪ ॥

ಅ: ಬ್ರಹ್ಮ ಮತ್ತು ವಾಯು ಒಂದೇ ಆಗಿರುವರು; ಗರುಡ ಶಿವನಿಗೆ ಸಮ; ಶಿವ ಮತ್ತು ಶೇಷರು ಒಂದೇ; ಮುಕ್ತರಲ್ಲಿ ವಾಯುವಿಗೆ ಸಮರಾದವರು ಯಾರೂ ಇಲ್ಲ; ವಾಯುವಿಗಿಂತಲೂ ಮಹಾಲಕ್ಷ್ಮಿಯು ಗುಣಗಳಲ್ಲಿ ಕೋಟಿಪಟ್ಟು ಮಿಗಿಲು; ಅವರಿಗಿಂತಲೂ ವಿಷ್ಣುವು ಅನಂತಪಟ್ಟು ಮಿಗಿಲಾದವನು. ಅವನಿಗೆ ಸಮರು ಎಂದೂ ಯಾರೂ ಇಲ್ಲ.

ವಿ: ೧) ಹಿಂದೆ ಹೇಳಿದ ತಾರತಮ್ಯದಲ್ಲಿ ಬ್ರಹ್ಮ ಮತ್ತು ಗರುಡಶೇಷರು ಬಂದಿಲ್ಲ ಎಂದು ಶಂಕಿಸಬೇಕಿಲ್ಲ; ಏಕೆಂದರೆ ವಾಯುಬ್ರಹ್ಮರೂ, ಶಿವಶೇಷರೂ ಒಂದೇ ಆಗಿರುವರು; ಗರುಡನು ಶಿವನಿಗೆ ಸಮ ಎಂದು ಭಾವ. (ಅದರಂತೆ ಇಲ್ಲಿ 'ಸರಸ್ವತಿ', 'ಭಾರತಿಯರು' ಸಹ ಒಂದೇ ಆದ್ದರಿಂದ ಭಾರತಿಯ ಉಲ್ಲೇಖ ಬಂದಿಲ್ಲವೆಂಬ ಶಂಕೆ ಬೇಕಿಲ್ಲ)

೨) 'ಬ್ರಹ್ಮವಾಯುಗಳು' ಒಂದೇ ಎಂದರೆ ವಾಯುದೇವರು ಮುಂದೆ ಬ್ರಹ್ಮಪದವಿಗೆ ಬರುವವರು ಆದ್ದರಿಂದ ಸಮರು ಎಂದು ಅರ್ಥವೇ ಹೊರತು, ಇಬ್ಬರೂ ಸ್ವರೂಪತಃ ಅಭಿನ್ನರು ಎಂದು ಅರ್ಥವಲ್ಲ, ಶಿವಶೇಷರು 'ಒಂದೇ' ಎಂಬುದಕ್ಕೂ ಇದರಂತೆ 'ಶಿವನು ಮುಂದೆ ಶೇಷಪದವಿಗೆ ಬರುವ ನಿಮಿತ್ತ ಇಬ್ಬರೂ ಸಮ ಎಂದೇ ಅರ್ಥ.

೩) 'ವಾಯುದೇವರಿಗೆ ಯಾರೂ ಸಮರಿಲ್ಲ' ಎಂದರೆ ಅವರೇ ಸರ್ವಜೀವೋತ್ತಮರು ಎಂದರ್ಥ; ಇಂದ್ರಪದವಿಯನ್ನು ಹೊಂದದಿದ್ದರೂ ಕಾಮನು ಇಂದ್ರನಿಗೆ ಸಮನಾಗಿರುವಂತೆ ವಾಯುದೇವರಿಗೆ ಬೇರೆ ಯಾರಾದರೂ ಸಮರು ಇರುವರೋ ಎಂಬ ಪ್ರಶ್ನೆಗೂ ಇದೇ ಉತ್ತರವಾಗಿದೆ. ವಾಯುದೇವರಿಗೆ ಯಾವ ರೀತಿಯಲ್ಲೂ ಇನ್ನೊಬ್ಬ ಸಮದೇವತೆಯು ಋಜುಭಿನ್ನರಲ್ಲಿ ಇಲ್ಲವೆಂದು ಭಾವ.

---

೭೩. ಬ್ರಹ್ಮವಾಯ್ವೋರೇಕತ್ವಾತ್ ನ ಪೃಥಗ್ಗ್ರಹಣಂ ವಾಯೋರ್ಬ್ರಹ್ಮಪದಪ್ರಾಪ್ತೇರೇವ ಬ್ರಹ್ಮೈಕ್ಯೋಕ್ತಿಃ ನ ತು ಸ್ವರೂಪೈಕ್ಯಾದಿತಿ ಜ್ಞೇಯಮ್ । –(ವಾ)

೭೩. ಸ್ವಪದಯೋಗ್ಯಾನ್ ವಿನಾ ಯಥೇಂದ್ರಾದೇಃ ಕಾಮಾದಿಃ ಸಮೋಽಸ್ತಿ । ತಥಾ ಕಿಂ ವಾಯೋರಪೀತಿ ಜಿಜ್ಞಾಸಾಯಾಮಾಹ । ನೇತಿ । –(ವಾ)

೭೪. ತೇಭ್ಯಸ್ತು ಶ್ರೀಃ ಸಮಸ್ತೇಭ್ಯೋ ಗುಣೈಃ ಕೋಟಿಗುಣೋತ್ತರಾ । –ಬೃಹದಾರಣ್ಯಕೋಪನಿಷದ್ಭಾಷ್ಯ

ಶತ, ಸಾಹಸ್ರ, ಮೊದಲಾದವುಗಳು 'ಬಹುತ್ವವಾಚಕಗಳು' ಎಂದು ಹಿಂದೆ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.

೭೪. ಉತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ । –ನಖಸ್ತುತಿ (ಶ್ಲೋ. ೨)

೪) 'ಇಲ್ಲಿ ರಮಾದೇವಿಯು ವಾಯುವಿಗಿಂತ 'ಸಹಸ್ರಗುಣತಾ' ಎಂದರೆ ಕೋಟಿಗುಣ ಮಿಗಿಲು ಎಂದರ್ಥ; ಕೇವಲ ಸಾವಿರಗುಣ ಎಂದರ್ಥವಲ್ಲ; 'ಸಹಸ್ರಗುಣತಾ' ಎಂಬುದಕ್ಕೆ ಹಿಂದೆ ಹೇಳಿದಂತೆ ಒಂದೊಂದು ಗುಣದಲ್ಲೂ ಕೋಟಿ ಪಟ್ಟು ಮಿಗಿಲು ಎಂದೂ ಅರ್ಥ.

೫) ವಿಷ್ಣುವಿಗೆ ಸಮರೇ ಇಲ್ಲ ಎಂದ ಮೇಲೆ 'ಉತ್ತಮರೂ ಇಲ್ಲ' ಎಂಬುದು ಕೈಮುಕ್ಯಸಿದ್ಧ.

೬) 'ಅನಂತಗುಣ' ಎಂಬುದಕ್ಕೆ ಅನಂತಪಟ್ಟು ಮಿಗಿಲಾದವನು, 'ಅನಂತಗುಣ–ಪೂರ್ಣನು' ಎಂದು ಅರ್ಥ.

ಇತ್ಯಾದಿವೇದವಾಕ್ಯಂ ವಿಷ್ಣೋರುತ್ಕರ್ಷಮೇವ ವಕ್ಷ್ಯಚ್ಛೈಃ ।
ತಾತ್ಪರ್ಯಂ ಮಹದತ್ರೋತ್ಯುಕ್ತಂ ಯೋ ಮಾಮಿತಿ ಸ್ವಯಂ ತೇನ ॥ ೭೫ ॥

ಅ: ಇವೇ ಮೊದಲಾದ ವೇದವಾಕ್ಯಗಳು ವಿಷ್ಣುವಿನ ಸರ್ವೋತ್ತಮತ್ವವನ್ನೇ ಸ್ಫುಟವಾಗಿ ಸಾರುತ್ತಿವೆ; 'ಇದರಲ್ಲೇ ಮಹಾತಾತ್ಪರ್ಯ' ಎಂಬುದಾಗಿ 'ಯೋ ಮಾಮೇವಂ' ಇತ್ಯಾದಿ ಮಾತುಗಳಿಂದ ಸ್ವತಃ ಆ ಕೃಷ್ಣರೂಪದ ಭಗವಂತನಿಂದಲೇ ತಿಳಿಸಲ್ಪಟ್ಟಿದೆ.

ವಿ: ೧) ವೇದವಾಕ್ಯಗಳಿಂದ ಮಾತ್ರವಲ್ಲದೆ ವೇದಪ್ರತಿಪಾದ್ಯನಾದ ಭಗವಂತನ ವಚನದಿಂದಲೂ ವಿಷ್ಣುಸರ್ವೋತ್ತಮತ್ವಾದಿಗಳೇ ಸಕಲಶಾಸ್ತ್ರಗಳ ಮಹಾತಾತ್ಪರ್ಯ ಎಂಬುದಾಗಿ ಪ್ರತಿಪಾದಿತವಾಗಿದೆ ಎಂದು ಭಾವ.

೨) ಉಚ್ಚೈಃ– ಎಂಬುದಕ್ಕೆ ದೃಢವಾಗಿ ಸ್ಫುಟವಾಗಿ ಎಂದು ಅರ್ಥ; ನಿರವಕಾಶವಾಗಿ, ಸಮಾಧಿಭಾಷೆಯಿಂದಲೇ 'ಸಾಧು' ಎಂಬ ವೈಖರಿಯಿದಲೇ ಮಹಾತಾತ್ಪರ್ಯಪೂರ್ವಕವಾಗಿ ಸಾರುತ್ತಿವೆ ಎಂದು ಭಾವ.

೩) 'ಯೋ ಮಾಮೇವಂ' ಎಂಬ ವಚನದ ಪೂರ್ಣ ಪಾಠ ಹೀಗಿದೆ:

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥ – ಗೀತಾ(೧೫/೧೯)

(ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥) -(ಗೀತಾ ೧೫/೨೦)

ಭೂಮ್ನೋ ಜ್ಯಾಯಸ್ತ್ವಮಿತ್ಯುಕ್ತಂ ಸೂತ್ರೇಷು ನಿರ್ಣಯಾತ್ ತೇನ ।
ತತ್ಪ್ರೀತ್ಯೈವ ಚ ಮೋಕ್ಷಃ ಪ್ರಾಪ್ಯಸ್ತೇನೈವ ನಾನ್ಯೇನ ॥ ೭೬ ॥

ಅ: ಬಹುಸೂತ್ರಾತ್ಮಕವಾದ ಬಹ್ಮಸೂತ್ರದಲ್ಲೂ ಸ್ವತಃ ಆ ಶ್ರೀಹರಿಯಿಂದ ' ಗುಣಗಳಲ್ಲಿ ಭೂಮಗುಣಕ್ಕೆ ಪ್ರಾಧಾನ್ಯ' ಎಂಬುದಾಗಿ ನಿರ್ಣಯಿಸಿ ಹೇಳಲ್ಪಟ್ಟಿದೆ; ಅವನ ಪರಮ ಪ್ರೀತಿಯಿಂದಲೇ ಮೋಕ್ಷವು ಹೊಂದಲ್ಪಡಲು ಸಾಧ್ಯ, ಇತರ ಸಾಧನಗಳಿಂದಲ್ಲ.

ಏ: ೧) ಯಾದವಕೃಷ್ಣರೂಪಿಯಾದ ಶ್ರೀಹರಿಯಿಂದ 'ಯೋ ಮಾಮೇವಂ' ಎಂಬುದಾಗಿ ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿರುವಂತೆ, ವಾಸಿಷ್ಠಕೃಷ್ಣರೂಪಿಯಾದ ಆ ಶ್ರೀಹರಿಯಿಂದಲೇ ಸ್ವತಃ ಬ್ರಹ್ಮಸೂತ್ರಗಳಲ್ಲೂ ಈ ವಿಷಯವು ನಿರ್ಣಯಿಸಿ ಹೇಳಲ್ಪಟ್ಟಿದೆ; ಭಗವದ್ಗೀತೆಯು (ವಿಷ್ಣುಸಹಸ್ರನಾಮದೊಂದಿಗೆ) ನಿರ್ಣೇಯಶಾಸ್ತ್ರಗಳಲ್ಲಿ ಸರ್ವೋತ್ಕೃಷ್ಟಗ್ರಂಥವಾದರೆ, ಬ್ರಹ್ಮ-ಸೂತ್ರವು ನಿರ್ಣಾಯಕಶಾಸ್ತ್ರದಲ್ಲಿ ಸರ್ವೋತ್ಕೃಷ್ಟಶಾಸ್ತ್ರ; ಶ್ರೀಮದಾಚಾರ್ಯರು, ಆ ಎರಡೂ ಶಾಸ್ತ್ರಗಳಿಂದಲೂ ಶ್ರೀವಿಷ್ಣುಸರ್ವೋತ್ತಮತ್ವವು ಸಕಲಶಾಸ್ತ್ರಗಳ ಮಹಾತಾತ್ಪರ್ಯವೆಂದು ಘೋಷಿಸಲ್ಪಟ್ಟಿದೆ ಎಂದು ತಿಳಿಸಿರುವರು.

॥ ಓಂ ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಚ ದರ್ಶಯತಿ ಓಂ ॥ (೩/೩/೫೯)

– ಎಂಬುದು ಸಮಗ್ರ ಸೂತಪಾಠ.

೨) ಇದರ ಅರ್ಥವನ್ನು ಶ್ರೀಮದಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲೂ, ಜಯ-ತೀರ್ಥರು ತತ್ತ್ವಪ್ರಕಾಶಿಕಾ ಮತ್ತು ಮಾಯಾವಾದಖಂಡನಟೀಕಾ ಗ್ರಂಥಗಳಲ್ಲಿ ವಿವರಿಸಿರುವರು.

೩) 'ಸೂತ್ರೇಷು' ಎಂಬ ಪದದಿಂದ ಈ ಕೆಳಗಿನ ಬ್ರಹ್ಮಸೂತ್ರಗಳು ವಿವಕ್ಷಿತವಾಗಿದೆ ಎಂದು ವಾದಿರಾಜೀಯದಲ್ಲಿದೆ,

(೧) ಜನ್ಮಾದ್ಯಸ್ಯಯತಃ । – (೧/೧/೧)

(೨) ದುಭ್ವಾದ್ಯಾಯತನಂ ಸ್ವಶಬ್ದಾತ್ । – (೧/೩/೧)

(೩) ಅಕ್ಷರಮಂಬರಾಂತಧೃತೇಃ । – (೧/೩/೧೦)

(೪) ಸರ್ವೋಪೇತಾ ಚ ತದ್ದರ್ಶನಾತ್ – (೨/೧/೩೧)

ಶ್ರೀಹರಿ ಪ್ರಸಾದವೇ ಮೋಚಕ

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ-
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ ೭೭ ॥

ಅ: ಈ ಪರಮಾತ್ಮನು ವ್ಯಾಖ್ಯಾನದಿಂದಾಗಲೀ, ತೀಕ್ಷ್ಣಬುದ್ಧಿಯಿಂದಾಗಲೀ ಬಹುತರವಾದ ಶ್ರವಣದಿಂದಾಗಲೀ, ಲಭ್ಯನಾಗುವುದಿಲ್ಲ; ತಾನು ಯಾರಿಗೆ ಒಲಿಯುವನೊ ಅವರಿಗೆ ಲಭಿಸುವನು; ಅಂತಹವನಿಗೆ ತನ್ನ ಸ್ವಾಭಾವಿಕರೂಪವನ್ನು ತೋರಿಸಿಕೊಡುವನು.

ವಿ: ೧) ಭಗವತ್ಪ್ರೀತಿಯಿಂದಲೇ ಮೋಕ್ಷ; ಅನ್ಯಸಾಧನಗಳಿಂದಲ್ಲ ಎಂಬುದಕ್ಕೆ ಕಠೋಪನಿಷತ್ತಿನ ವಾಕ್ಯವನ್ನು ಪ್ರಮಾಣವಾಗಿ ಕೊಟ್ಟಿರುವರು,

೨) ಪ್ರವಚನಾದಿಗಳು ಜ್ಞಾನಸಾಧನೆಯ ಶ್ರೇಷ್ಠಸಾಧನಗಳಾದರೂ ಅವನು ಪ್ರೀತನಾಗದೆ ಕೇವಲ ಅವುಗಳಿಂದ ಮಾತ್ರವೇ ಎಂದೂ ಮೋಕ್ಷ ದೊರೆಯುವುದಿಲ್ಲ ಎಂದು ಭಾವ.

೩) ವರಣ – ಎಂದರೆ ತನ್ನವನನ್ನಾಗಿ ಸ್ವೀಕರಿಸುವುದು ಎಂದರ್ಥ.

ಮೋಕ್ಷನಿಡುವವನು ವಿಷ್ಣು ಮಾತ್ರ

ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ ।
ಮೋಕ್ಷೋ ಜ್ಞಾನಂ ಚ ಕ್ರಮಶೋ ಮುಕ್ತಿಗೋ ಭೋಗ ಏವ ಚ ।
ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇತ್ ॥ ೭೮ ॥

ಅ: ವಿಷ್ಣುವೇ ಮೋಕ್ಷವನ್ನು ನೀಡುವವನು; ಅವನ ಅನುಜ್ಞೆಯಿಂದ ವಾಯುವೂ ಮೋಕ್ಷವನ್ನು ನೀಡುವನು; ಮೋಕ್ಷ, ಜ್ಞಾನ, ಮುಕ್ತಿಯಲ್ಲಿನ ಭೋಗ ಮತ್ತು ಭಕ್ತಿ, ವೈರಾಗ್ಯ

---

೭೭. ಜ್ಞಾನಸ್ವಭಾವತೋऽಪಿ ಸ್ಯಾನ್ಮುಕ್ತಿಃ ಕಸ್ಯಾಪಿ ಹಿ ಕ್ವಚಿತ್ । –ಅನುವ್ಯಾಖ್ಯಾನ(೧/೧/೧)

೭೭. ವರಣಂ ನಾಮ ಸ್ವೀಯತಯಾऽಂಗೀಕಾರಃ । ಪ್ರಸಾದ ಇತ್ಯರ್ಥಃ । –ಮಾ

೭೭. ಯಸ್ಯ ಪ್ರಸಾದಾತ್ಪರಮಾರ್ತಿರೂಪಾದಸ್ಮಾತ್ಸಂಸಾರಾನ್ಮುಚ್ಯತೇ ನಾಪರೇಣ ।
ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ ।
ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ । (ನಾರಾಯಣಶ್ರುತಿ) – ವಿ.ತ.ನಿ.

೭೮. ಇಲ್ಲಿಂದ ೧೦೦ನೇ ಶ್ಲೋಕದವರೆಗಿನ ವಾಕ್ಯಗಳು 'ಭವಿಷ್ಯತ್ಪರ್ವ'ಕ್ಕೆ ಸೇರಿವೆ.

೭೮. ಏವಂ ವಾಯುರ್ಹಿ ಮೋಕ್ಷದಃ । – (ಬೃಹದ್ಭಾಷ್ಯ)

೭೮. ಚ ಶಬ್ದಾತ್ರಮಾಪಿ ದಾತ್ರೀ ಉಕ್ತಮೋಕ್ಷಾದೀನಾಮ್ । –(ಜ)

೭೮. ದ್ವಿತೀಯೋ ಅನುಕ್ತಭಕ್ತಿವೈರಾಗ್ಯಾದೀನಾಮ್ । –(ಜ)

೭೮. ವಿಶ್ವಸ್ಥಿತಿ...ಬಂಧಮೋಕ್ಷಾಃ । ಯಸ್ಯಾಪಾಂಗಲವ ಮಾತ್ರತ ಊರ್ಜಿತಾ ಶ್ರೀಃ ... – ದ್ವಾದಶಸ್ತೋತ್ರ (೭/೧)

ಇವೆಲ್ಲವೂ ಕಡಿಮೆಯವರಿಗೆ ಕ್ರಮವಾಗಿ ಅವರಿಗಿಂತ ಉತ್ತಮರಾದವರ ಅನುಗ್ರಹದಿಂದಲೇ ಲಭಿಸುವವು; ಬೇರೆರೀತಿಯಲ್ಲಲ್ಲ.

ಎ: ೧) ರಮಾದೇವಿಯೂ ಸಹ ವಿಷ್ಣ್ವನುಜ್ಞೆಯಿಂದ ಮೋಕ್ಷ ಕೊಡಬಲ್ಲರು ಎಂಬುದನ್ನು 'ಚ' ಶಬ್ದದಿಂದ ಸೂಚಿಸಿರುವರು. ವಾಯುದೇವರಿಗೇ ಮೋಕ್ಷದಾತೃತ್ವವನ್ನು ಹೇಳಿದ ಮೇಲೆ ಅವರಿಗಿಂತ ಕೋಟಿಗುಣಗಳಿಂದ ಉತ್ತಮರಾದ ಮಹಾಲಕ್ಷ್ಮಿಗೆ ಮೋಕ್ಷದಾತೃತ್ವವು ಕೈಮುತ್ಯಸಿದ್ಧವೆಂದೂ ತಿಳಿಯಬೇಕು ('ಶ್ರಿಯಂ ವಸಾನಾ ಅಮೃತತ್ವಮಾಯನ್' – ಶ್ರುತಿ).

೨) ವಾಯುದೇವರು ಮೋಕ್ಷನೀಡುವರು ಎಂದರೆ ಭಗವಂತನನ್ನು ಪ್ರಾರ್ಥಿಸಿ ಮೋಕ್ಷ ಕೊಡಿಸುವರು ಎಂದರ್ಥ.

ಮೋಕ್ಷ ಸಾಧನಗಳು

ಸರ್ವೇಷಾಂ ಚ ಹರಿರ್ನಿತ್ಯಂ ನಿಯಂತಾ ತದ್ವಶಾಃ ಪರೇ ॥ ೭೯ ॥
ತಾರತಮ್ಯಂ ತತೋ ಜ್ಞೇಯಂ ಸರ್ವೋತ್ಕೃಷ್ಟತ್ವಂ ಹರೇಸ್ತಥಾ ।
ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ಕಥಂಚನ (1) ॥ ೮೦ ॥

ಅ: ಶ್ರೀಹರಿಯೇ ಎಲ್ಲರಿಗೂ ನಿತ್ಯದಲ್ಲೂ ನಿಯಾಮಕ; ಇತರರೆಲ್ಲ ಅವನ ಅಧೀನರು; ದೇವತಾತಾರತಮ್ಯ ಮತ್ತು ಹರಿಯ ಸರ್ವೋತ್ತಮತ್ವಗಳನ್ನು ತಿಳಿಯಲೇಬೇಕು. ಇವುಗಳಿಲ್ಲದೆ ಯಾರಿಗೂ ಯಾವ ರೀತಿಯಲ್ಲೂ ಮುಕ್ತಿ ಆಗದು.

ಪಂಚಭೇದಜ್ಞಾನದ ಅಗತ್ಯ

ಪಂಚಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವ ಚ । (2)
ನಿರ್ದೋಷತ್ವಂ ಗುಣೋದ್ರೇಕಂ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥ ೮೧ ॥

ಅ: ಪಂಚಭೇದಗಳನ್ನು ತಿಳಿದು, ವಿಷ್ಣುವಿನ ಸ್ವಗತಭೇದಾಭಾವವನ್ನು, ನಿರ್ದೋಷತ್ವವನ್ನು, ಗುಣಪೂರ್ಣತ್ವವನ್ನು ತಿಳಿದರೇ ಮುಕ್ತಿ; ಬೇರೆ ರೀತಿಯಲ್ಲಿ ಅಲ್ಲ.

---

೭೯. ದೇವದೈತ್ಯರ ತಾರತಮ್ಯವು । ಪಾವಮಾನಿಮತಾನುಗರಿಗೆ ।
ಕೇವಲಾವಶ್ಯಕವು ತಿಳಿವುದು ಸರ್ವಕಾಲದಲಿ ॥ –(ಹರಿಕಥಾಮೃತಸಾರ)

೮೧. ಸ್ವಾಭೇದಂ–ಸ್ವಾವಯವಾನಾಂ ಸ್ವಾವತಾರಾಣಾಂ ಅಭೇದಮೇವ ಜ್ಞಾತ್ವಾ ನ ತು ಭೇದಾಭೇದಮ್ । ಸ್ಥಿತಸ್ಯೇತಿ ಶೇಷಃ । –(ಜ)

೮೧. ಚಶಬ್ದೇನ ದೇವಾವತಾರಾನವತಾರಾಂಶ್ಚ ಜ್ಞಾತ್ವೇತಿ ಗ್ರಾಹ್ಯಮ್ । –(ಜ)

ವಿ: ೧) ಮೋಕ್ಷವು ಲಭಿಸುವುದು ಪಂಚಭೇದಗಳ ಪರಿಜ್ಞಾನ ಮತ್ತು ವಿಷ್ಣುವಿನ ಸ್ವಗತ–ಭೇದವಿವರ್ಜಿತತ್ವ, ನಿರ್ದೋಷತ್ವ ಮತ್ತು ಗುಣಪೂರ್ಣತ್ವಗಳ ಪರಿಜ್ಞಾನಗಳಿಂದಲೇ ಹೊರತು, ಬೇರೆ ಯಾವ ಸಾಧನಗಳಿಂದಲೂ ಅಲ್ಲ ಎಂದು ಭಾವ.

೨) ವಿಷ್ಣುವಿನ ಸ್ವಾಭೇದವೆಂದರೆ ಅವನ ರೂಪರೂಪಗಳಲ್ಲಿ, ಗುಣಕ್ರಿಯಾದಿಗಳಲ್ಲಿ ಯಾವುದೇ ರೀತಿಯಲ್ಲಿ ಭೇದವಿಲ್ಲದಿರುವಿಕೆ ಸ್ವಗತಭೇದವಿವರ್ಜಿತತ್ವ ಎಂದು ಅರ್ಥ.

ಶ್ರೀಹರಿಯ ಅವತಾರಗಳ ಬಗ್ಗೆ ಸರಿಯಾದ ಪರಿಜ್ಞಾನದ ಅಗತ್ಯ

ಅವತಾರಾನ್ ಹರೇರ್ಜ್ಞಾತ್ವಾನಾವತಾರಾ ಹರೇಶ್ಚ ಯೇ ।
ತದಾವೇಶಾಂಸ್ತಥಾ ಸಮ್ಯಕ್ ಜ್ಞಾತ್ವಾಮುಕ್ತಿರ್ನ ಚಾನ್ಯಥಾ ॥ ೮೨ ॥

ಅ: ಹರಿಯ ಅವತಾರಗಳನ್ನೂ, ಯಾವುವು ಹರಿಯ ಅವತಾರಗಳಲ್ಲ ಎಂಬುದನ್ನೂ, ಅದರಂತೆ ಅವನ ಆವೇಶಗಳನ್ನು ಸಹ ಸರಿಯಾಗಿ ತಿಳಿದರೇ ಮೋಕ್ಷ; ಇಲ್ಲವಾದಲ್ಲಿ ಇಲ್ಲ.

ವಿ: ಇತರ ದೇವತೆಗಳ ಅವತಾರಾದಿಗಳನ್ನು ಸಹ ಹೀಗೆ ಯಥಾರ್ಥವಾದ ರೀತಿಯಲ್ಲೇ ತಿಳಿಯಬೇಕು ಎಂಬುದನ್ನು 'ಚ' ಕಾರದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ಸೃಷ್ಟ್ಯಾದಿ ಸಕಲವೂ ಶ್ರೀಹರಿಯಿಂದಲೇ

ಸೃಷ್ಟಿರಕ್ಷಾಹೃತಿಜ್ಞಾನನಿಯತ್ಯಜ್ಞಾನಬಂಧನಾನ್ ।
ಮೋಕ್ಷಂ ಚ ವಿಷ್ಣುತಸ್ತ್ವೇವ ಜ್ಞಾತ್ವಾಮುಕ್ತಿರ್ನ ಚಾನ್ಯಥಾ ॥ ೮೩ ॥

ಅ: ಸೃಷ್ಟಿ, ಸ್ಥಿತಿ, ಸಂಹಾರ, ಜ್ಞಾನ, ನಿಯಮನ, ಅಜ್ಞಾನ, ಬಂಧನ ಮತ್ತು ಮೋಕ್ಷ ಇವುಗಳನ್ನೆಲ್ಲ ವಿಷ್ಣುವಿನಿಂದಲೇ ಎಂದು ತಿಳಿದರೆ ಮೋಕ್ಷ; ಇಲ್ಲವಾದಲ್ಲಿ ಇಲ್ಲ.

ವಿ: ೧) ಈ ಸಕಲ ಕಾರ್ಯಗಳಲ್ಲಿ ಪ್ರತಿಯೊಂದು ಸಹ ವಿಷ್ಣುವಿನಿಂದಲೇ ಆಗುವವು ಎಂಬ ಪರಿಜ್ಞಾನವೇ ಮೋಕ್ಷಸಾಧನ; ಇವುಗಳಲ್ಲಿ ಯಾವ ಒಂದನ್ನು ಸಹ ವಿಷ್ಣುವಿನ ಹೊರತು ಇತರರು ಮಾಡುವರು ಎಂದು ತಿಳಿಯಕೂಡದು ಎಂದು ಭಾವ. ಇತರರು ಮಾಡುವುದು ಅವನ ಅನುಮತಿಯಿಂದ, ಪ್ರೇರಣೆಯಿಂದ; ಸ್ವತಂತ್ರವಾಗಿ ಅಲ್ಲ.

---

೮೩. ವಿಷ್ಣುತಃ ಏವ ಸ್ವಾತಂತ್ರ್ಯೇಣ । ಅನ್ಯೇಚ್ಛಸ್ತುತದಾಜ್ಞಯಾ ತತ್ಪ್ರೇರಣಯಾ ಚ । –(ಜ)

೮೩. ಬಧ್ನಂತೀತಿ ಬಂಧನಾಃ । ಕಾಮಕರ್ಮಾದ್ಯಾಃ । ತಾಂಶ್ಚ । –(ವಾ)

ಬಂಧನಂ ಬಂಧಃ । ಬಂಧನಂ ಯೈಸ್ತೇ ಕಾಮಕ್ರೋಧಾದಯಃ । –(ಜ)

೨) ಇದು 'ಜನ್ಮಾದ್ಯಸ್ಯ ಯತಃ' – ಎಂಬ ಬ್ರಹ್ಮಸೂತ್ರದ ಅರ್ಥವೂ ಆಗಿದೆ.

೩) ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ । ಎಂಬ ಈಶ್ಯಾವಾಸ್ಯೋಪನಿಷತ್ತಿನ ವಾಕ್ಯ ಮತ್ತು ಅದರ ಭಾಷ್ಯಗಳಲ್ಲಿ ಯಾವ ಒಂದು ಕಾರ್ಯಕ್ಕೂ ವಿಷ್ಣುವಿನ ಕರ್ತೃತ್ವವನ್ನು ತಿಳಿಯದೆ ಹೋದರೂ ಅಂಧಂತಮಸ್ಸೇ ಫಲ ಎಂದು ನಿರೂಪಿತವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

೪) ಇಲ್ಲಿ 'ಬಂಧನ' ಎಂದರೆ ಬಂಧಕವಾದ ಕಾಮ್ಯಕರ್ಮ ಮೊದಲಾದವುಗಳು ಎಂದರ್ಥ.

ವೇದಾದಿ ಸಕಲ ಶಾಸ್ತ್ರಗಳ ಪರಿಜ್ಞಾನವೂ ಅಗತ್ಯ

ವೇದಾಂಶ್ಚ ಪಂಚರಾತ್ರಾಣಿ ಸೇತಿಹಾಸಪುರಾಣಕಾನ್ ।
ಜ್ಞಾತ್ವಾ ವಿಷ್ಣುಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್ ॥ ೮೪ ॥

ಅ: ವೇದಗಳನ್ನು ಇತಿಹಾಸಪುರಾಣಸಮೇತವಾದ ಪಂಚರಾತ್ರಗಳನ್ನು 'ವಿಷ್ಣುಪರ' ಎಂದು ತಿಳಿದರೆ ಮಾತ್ರವೇ ಮುಕ್ತನಾಗಲು ಸಾಧ್ಯ; ಇಲ್ಲವಾದರೆ ಇಲ್ಲ.

ವಿ: ೧) ವೇದ, ಪಂಚರಾತ್ರ, ಇತಿಹಾಸ ಮತ್ತು ಪುರಾಣಗಳನ್ನು ಎಂದರೆ ಸಕಲ ಸಚ್ಛಾಸ್ತ್ರಗಳನ್ನು ವಿಷ್ಣುಸರ್ವೋತ್ತಮತ್ವಪ್ರತಿಪಾದಕವೆಂದು ತಿಳಿದಾಗಲೇ ಮೋಕ್ಷ; ಇಲ್ಲವಾದರೆ ಇಲ್ಲ ಎಂದು ಭಾವ.

೨) ಇದು 'ಶಾಸ್ತ್ರಯೋನಿತ್ವಾತ್', 'ಅಧ್ಯಯನಮಾತ್ರವತಃ' ಎಂಬ ಬ್ರಹ್ಮಸೂತ್ರಗಳ ಅರ್ಥವಾಗಿದ್ದು ಯಥೋಚಿತ ಶಾಸ್ತ್ರಾಧ್ಯಯನದಿಂದ ಲಭಿಸುವ ಬ್ರಹ್ಮಜ್ಞಾನದಿಂದಲೇ ಮೋಕ್ಷ ಎಂಬುದನ್ನು ಸೂಚಿಸುತ್ತಿದೆ.

೩) ಸರ್ವವೇದಾಂತಪ್ರತ್ಯಯಾಧಿಕರಣದ ಅರ್ಥವೂ ಇದರಲ್ಲಿ ಸಂಗೃಹೀತವಾಗಿದೆ.

---

೮೪. ನ ಚ ತತ್ರತತ್ರೋಕ್ತ್ಯೈಕದೇಶಜ್ಞಾನಮಾತ್ರೇಣ ಭವತಿ ಮುಕ್ತಿಃ । ಸಾರ್ವತ್ರಿಕಗುಣೋಪಸಂಹಾರೋ ಹಿ ಭಗವತಾ ಗುಣೋಪಸಂಹಾರಪಾದೇऽಭಿಹಿತಃ । ಆನಂದಾದಯಃ ಪ್ರಧಾನಸ್ಯ ಇತ್ಯಾದಿನಾ । ತಥಾ ಚಾನ್ಯತ್ರ -

ಅಪೌರುಷೇಯವೇದೇಷು ವಿಷ್ಣುವೇದೇಷು ಚೈವ ಹಿ ।
ಸರ್ವತ್ರ ಯೇ ಗುಣಾಃ ಪ್ರೋಕ್ತಾಃ ಸಂಪ್ರದಾಯಾಗತಾಶ್ಚ ಯೇ ॥
ಸರ್ವೈಸ್ತೈಃ ಸಹ ವಿಜ್ಞಾಯ ಯೇ ಪಶ್ಯಂತಿ ಪರಂ ಹರಿಮ್ ।
ತೇಷಾಮೇವ ಭವೇನ್ಮುಕ್ತಿರ್ನಾನ್ಯಥಾ ತು ಕಥಂಚನ ॥ ಇತಿ ಗಾರುಡೇ । – ಗೀತಾಭಾಷ್ಯ (೩/೪೩)

೮೪. ಇತಿಹಾಸಶಬ್ದೇನ ಮಹಾಭಾರತಂ ರಾಮಾಯಣಂ ಚ ಗ್ರಾಹ್ಯಮ್ । ಕುರುಪಾಂಡವನ್ಯಾಯೇನ । -(ಜ)

ಭಕ್ತಿಯ ಲಕ್ಷಣ

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥ ೮೫ ॥

ಅ: ಮಾಹಾತ್ಮ್ಯಜ್ಞಾನಪೂರ್ವಕವೂ, ಅಚಲವೂ, ಇತರ ಸರ್ವವಿಷಯಗಳಿಗಿಂತ ಅಧಿಕವೂ, ಆದ ಪ್ರೇಮವೇ ಭಕ್ತಿ ಎಂದು ಕರೆಯಲ್ಪಟ್ಟಿದೆ; ಇಂಥಹ ಭಕ್ತಿಯಿಂದಲೇ ಮೋಕ್ಷ; ಇತರ ಸಾಧನಗಳಿಂದಲ್ಲ.

ವಿ: ೧) ಭಕ್ತಿಯ ಲಕ್ಷಣವನ್ನು ತುಂಬಾ ಪರಿಣಾಮಕಾರಿಯಾಗಿ ತಿಳಿಸುವ ಶ್ಲೋಕವಿದು. ಬ್ರಹ್ಮಸೂತ್ರಗಳ ಸಾಧನಾಧ್ಯಾಯದ ದ್ವಿತೀಯಪಾದದಲ್ಲಿ ಹೇಳಿದ ರೀತಿಯಲ್ಲಿ ಭಗವಂತನ ಜಾಗ್ರದಾದಿ ಸರ್ವಾವಸ್ಥಾಪ್ರೇರಕತ್ವ, ಸ್ವಗತಭೇದವಿವರ್ಜಿತತ್ವ ಮೊದಲಾದ ಮಾಹಾತ್ಮ್ಯವನ್ನು ತಿಳಿದು ಅವನಲ್ಲಿ ಮಾಡುವ ಅಚಲವೂ, ಸರ್ವಾಧಿಕವೂ ಆದ ಪರಮಪ್ರೀತಿಯೇ ಭಕ್ತಿ ಎನ್ನಿಸುವುದು.

೨) 'ಸುದೃಢ' ಎಂದರೆ ಸತ್ತರು ಬದಲಾಗದ ಎಂದರ್ಥ

೩) ಸರ್ವತೋಽಧಿಕಃ – ಎಂದರೆ ಸ್ರಕ್, ಚಂದನ, ಸ್ತ್ರೀ ಮೊದಲಾದ ಇತರ ಸಕಲ ವಸ್ತುಗಳಲ್ಲಿರುವುದಕ್ಕಿಂತ ಮಿಗಿಲಾದ ಎಂದರ್ಥ.

೪) ಶ್ರೀಜಯತೀರ್ಥರು ನ್ಯಾಯಸುಧೆಯಲ್ಲಿ ಈ ಶ್ಲೋಕದ ವಿವರಣೆಯನ್ನು ಹೀಗೆ ನೀಡಿರುವರು :

''ಪರಮೇಶ್ವರಭಕ್ತಿರ್ನಾಮನಿರವಧಿಕಾನಂತಾನವದ್ಯಕಲ್ಯಾಣಗುಣತ್ವಜ್ಞಾನಪೂರ್ವಕಃ ಸ್ವಾತ್ಮಾತ್ಮೀಯಸಮಸ್ತವಸ್ತುಭ್ಯೋಽನೇಕಗುಣಾಧಿಕೋ ಅಂತರಾಯಸಹಸ್ರೇಣಾಪ್ಯಪ್ರತಿಬದ್ಧೋ ನಿರಂತರಪ್ರೇಮಪ್ರವಾಹಃ''

---

೮೫. ಮಾಹಾತ್ಮ್ಯಜ್ಞಾನಂ – 'ಸಂಧ್ಯೇ ಸೃಷ್ಟಿರಾಹ ಹಿ' ಇತ್ಯಾದಿಸೂತ್ರೋಕ್ತರೀತ್ಯಾ ದಿನೇ ದಿನೇ ಸರ್ವಾಪೇಕ್ಷಿತಸುಖಕರಸ್ವಾಪ್ತಪದಾರ್ಥಸ್ರಷ್ಟೃತ್ವಸುಷುಪ್ತಿದಾತೃತ್ವಜಾಗ್ರತ್ಪವರ್ತಕತ್ವರೂಪಂ ಯನ್ಮಾಹಾತ್ಮ್ಯಂ ತಜ್ಜ್ಞಾನಪೂರ್ವಮಿತ್ಯರ್ಥಃ। –(ವಾ)

ಮಾಹಾತ್ಮ್ಯಂ ಜಗತ್ಸರ್ಜನಾದಿಸುಷುಪ್ತ್ಯಾದಿದಾತೃತ್ವಂ ತಜ್ಜ್ಞಾನಪೂರ್ವಃ। –(ಜ)

೮೫. ಸುದೃಢಃ – ಮರಣೇಽಪ್ಯಚಾಲ್ಯಮಾನಃ – (ವಾ.) ಮರಣೇಽಪ್ಯಚಾಲ್ಯಃ – (ಜ)

೮೫. ಸರ್ವತೋಽಧಿಕಃ ಸ್ರಕ್ಚಂದನವನಿತಾದಿವಿಷಯೇಭ್ಯೋಽಪ್ಯಧಿಕಃ। –(ವಾ)

ಸರ್ವತಃ ಸ್ತ್ರೀಪುತ್ರಾದಿಭ್ಯಃ। –(ಜ)

ಜೀವ ತ್ರೈವಿಧ್ಯದ ವಿವರ

ತ್ರಿವಿಧಾ ಜೀವಸಂಘಾಸ್ತು ದೇವಮಾನುಷದಾನವಾಃ ।
ತತ್ರ ದೇವಾ ಮುಕ್ತಿಯೋಗ್ಯಾ ಮಾನುಷೇಷೂತ್ತಮಾಸ್ತಥಾ ॥ ೮೬ ॥

ಮಧ್ಯಮಾ ಮಾನುಷಾ ಯೇ ತು ಸೃತಿಯೋಗ್ಯಾಃ ಸದೈವ ಹಿ ।
ಅಧಮಾ ನಿರಯಾಯೈವ ದಾನವಾಸ್ತು ತಮೋಲಯಾಃ ॥ ೮೭ ॥

ಅ: ದೇವತೆಗಳು, ಮನುಷ್ಯರು ಮತ್ತು ದಾನವರು ಎಂಬುದಾಗಿ ಜೀವಸಮೂಹಗಳು ಮೂರು ವಿಧ; ಅವರಲ್ಲಿ ದೇವತೆಗಳು ಮತ್ತು ಮನುಷ್ಯೋತ್ತಮರು ಮುಕ್ತಿಯೋಗ್ಯರು; ಮಧ್ಯಮಮನುಷ್ಯರು ಸರ್ವದಾ ಸಂಸಾರಕ್ಕೆ ಯೋಗ್ಯರು; ಅಧಮಮನುಷ್ಯರು ತಮಸ್ಸಿಗೆ ಯೋಗ್ಯರು; ದಾನವರು ಅಂಧಂತಮಸ್ಸನ್ನು ಹೊಂದುವರು.

ವಿ: ೧) ಸಾತ್ವಿಕರು, ರಾಜಸರು ಮತ್ತು ತಾಮಸರು ಎಂಬುದಾಗಿ ಜೀವರು ತ್ರಿವಿಧ; ಸಾತ್ವಿಕರು ಮುಕ್ತಿಯೋಗ್ಯರು, ರಾಜಸರು ನಿತ್ಯಸಂಸಾರಿಗಳು ಮತ್ತು ತಾಮಸರು ತಮೋಯೋಗ್ಯರು ಎಂದು ಭಾವ.

೨) **ದೇವಮಾನುಷದಾನವಾಃ** – ಎಂಬಲ್ಲಿ ದೇವ ಶಬ್ದದಿಂದ ಮನುಷ್ಯೋತ್ತಮರು ಉಪಲಕ್ಷಿತ; ಮನುಷ್ಯರು ಎಂದರೆ ಮಧ್ಯಮಮನುಷ್ಯರು ಎಂದರ್ಥ; ದಾನವ ಶಬ್ದದಿಂದ ಮನುಷ್ಯಾಧಮರು ಉಪಲಕ್ಷಿತ.

೩) 'ನಿರಯ' ಎಂದರೆ ಸಾಮಾನ್ಯವಾಗಿ 'ನರಕ' ಎಂದರ್ಥ; ಆದರೆ ಇಲ್ಲಿ ತಮೋಯೋಗ್ಯರ ಪ್ರಸಕ್ತಿ ಬಂದಿರುವುದರಿಂದ ಇಲ್ಲಿಯ ನಿರಯ ಶಬ್ದಕ್ಕೆ 'ತಮಸ್ಸು' ಎಂದೇ ಅರ್ಥ; ಅದರಂತೆ ತಮಸ್ಸು ಎಂಬುದಕ್ಕೆ ಅಂಧತಾಮಿಸ್ರ ಎಂದೂ ಅರ್ಥ.

---

೮೬. ಧಾಪ್ರತ್ಯಯೇನಾವಾಂತರಭೇದೋಽಷ್ಯಸ್ತೀತಿ ಜ್ಞಾಪಯತಿ । –(ಜ.)

೮೭. ತಮಸ್ಯೇವ ತಾಮಿಸ್ರಃ ಅಂಧತಾಮಿಸ್ರ ಇತ್ಯವಾಂತರಭೇದೋಽಸ್ತಿ । ತತ್ರಾತಿನಿಬಿಡತಮೋ ಯತ್ರ ಸೋಽಂಧತಾಮಿಸ್ರ ಇತ್ಯುಚ್ಯತೇ । ತತಃ ಈಷತ್ತಮೋ ಯತ್ರ ಸ ತಾಮಿಸ್ರ ಉಚ್ಯತೇ । ತಸ್ಯೈವ ನಿರ್ಗತ-ಮಯನಮುದ್ಗಮನಂ ಯಸ್ಮಾದಿತಿ ವ್ಯುತ್ಪತ್ತ್ಯಾ ನಿರಯ ಇತಿ ನಾಮ । ತತ್ರ ಮನುಷ್ಯಾಧಮಾಃ ತೇಭ್ಯೋಽಪ್ಯಧಮಾಃ ಕೇಚನ ದಾನವಾಶ್ಚ ತಾಮಿಸ್ರಾಖ್ಯೇ ನಿರಯೇ ಪತಂತಿ । ಅಧಮಾಧಮಾಃ ಕಲ್ಯಾದ್ಯಾಸ್ತು ಅಂಧತಾಮಿಸ್ರೇ ಪತಂತೀತಿ ಭಾವೇನಾಹ ಅಧಮಾ ಇತಿ । ಅತ ಏವ ದಾನವಾಸ್ತ್ವಿತಿ ತು ಶಬ್ದಃ । ತಾಮಿಸ್ರಾಂಧಾದಿಕಾಖ್ಯೇ ತಮಸಿ ಸುಬಹುಲಂ ದುಃಖಯಸ್ಯನ್ಯಥಾಜ್ಞಾನ್' ಇತಿ ಪ್ರಾಚಾಂ ವಾಚಶ್ಚ ।ಅನ್ಯಥಾ ಪಾಪಫಲಸ್ಯ ಪಾಪಕಾರಿಭಿರುತ್ತಮಮಧ್ಯಮಜೀವೈರಪಿ ಗಮ್ಯತ್ವಾತ್ 'ಅಧಮಾ ನಿರಯಾಯೈವ ಇತಿ' ನ ಘಟತೇ ಇತಿ ಜ್ಞೇಯಮ್ । –(ವಾ)

ಮುಕ್ತತಮಸ್ಸುಗಳ ಪ್ರಧಾನ ಸಾಧನ

ಮುಕ್ತಿರ್ನಿತ್ಯಾ ತಮಶ್ಚೈವ ನಾವೃತ್ತಿಃ ಪುನರೇತಯೋಃ ।
ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನ ॥ ೮೮ ॥

ನಾಸುರಾಣಾಂ ತಥಾ ಮುಕ್ತಿಃ ಕದಾಚಿತ್ ಕೇನಚಿತ್ ಕ್ವಚಿತ್ ।
ಮಾನುಷಾಣಾಂ ಮಧ್ಯಮಾನಾಂ ನ ಚೈತದ್ದ್ವಯಮಾಪ್ಯತೇ ॥ ೮೯ ॥

ಅ: ಮುಕ್ತಿಯು ನಿತ್ಯವಾದುದು ಮತ್ತು ತಮಸ್ಸು ಸಹ ನಿತ್ಯವಾದುದು; ಇವೆರಡರಿಂದ ಪುನಃ ಹಿಂದಿರುಗುವಂತಿಲ್ಲ; ದೇವತೆಗಳಿಗೆ ಎಂದೂ ಯಾವ ರೀತಿಯಲ್ಲೂ ನರಕವಾಗಲೀ, ತಮಸ್ಸಾಗಲೀ ಆಗದು; ಅದರಂತೆ ಅಸುರರಿಗೆ ಎಂದೂ ಯಾವ ಕಾರಣದಿಂದಲೂ ಎಲ್ಲೂ ಮುಕ್ತಿಯೂ ಆಗುವುದಿಲ್ಲ; ಮಧ್ಯಮಮನುಷ್ಯರಿಗೆ(ನಿತ್ಯಸಂಸಾರಿಗಳಿಗೆ) ಇವೆರಡೂ ಲಭಿಸುವುದಿಲ್ಲ.

ವಿ: ೧) ಮುಕ್ತಿ ಮತ್ತು ತಮಸ್ಸು ಎರಡೂ ನಿತ್ಯ; ಅಲ್ಲಿಗೆ ಹೋದವರು ಎಂದೂ ಮರಳುವುದಿಲ್ಲ; ದೇವತೆಗಳಿಗೆ ಯಾವ ಕಾರಣದಿಂದಲೂ ನರಕವಾಗಲಿ, ತಮಸ್ಸಾಗಲೀ ಆಗುವುದಿಲ್ಲ; ಅಸುರರಿಗೆ ಎಂದೂ ಮುಕ್ತಿಯು ದೊರೆಯುವುದಿಲ್ಲ; ನಿತ್ಯಸಂಸಾರಿಗಳಿಗೆ ಸ್ವರೂಪಭೂತವಾದ ಸುಖದುಃಖಗಳ ಅನುಭವವು ಸಹ ನಿತ್ಯವೇ ಆಗಿದೆ; ಅವರಿಗೆ ಸ್ವರ್ಗ, ನರಕ, ಭೂಮಿಗಳೆಂಬ ಅನಿತ್ಯಲೋಕಗಳಲ್ಲಿ ಸಂಚಾರವು ಉಂಟು; ಆದ್ದರಿಂದ ಅವರ ಲೋಕವನ್ನು ನಿತ್ಯ ಎಂದು ಕರೆದಿಲ್ಲ.

೨) 'ಅನಾವೃತ್ತಿಃ ಶಬ್ದಾತ್ ಅನಾವೃತ್ತಿಃ ಶಬ್ದಾತ್' ಎಂಬ ಬ್ರಹ್ಮಸೂತ್ರಕ್ಕೆ ಮತ್ತು ನ ಚ ಪುನರಾವರ್ತತೇ ಎಂಬ ವೇದಗಳಿಗೆ ಇದು ವಿವರಣ ರೂಪವಾಗಿದೆ; ಅಲ್ಲಿ ಮೋಕ್ಷನಿತ್ಯತ್ವಕ್ಕೆ ಈ ಸೂತ್ರ ಹೊರಟಿದ್ದರೂ, ಅದರಂತೆ ತಮಸ್ಸು ಸಹ ನಿತ್ಯಲೋಕ ಎಂಬ ಅರ್ಥವು ಸಹ ಅದರಿಂದ ಧ್ವನಿತವಾಗಿದೆ ಎಂದು ತಿಳಿಯಬೇಕು.

---

೮೮. ಸ್ವರ್ಗಾದಿರಿವ ಮುಕ್ತಿಸ್ತಮಶ್ಚಾನಿತ್ಯೇ ಕಿಮ್ । ನೇತ್ಯಾಹ । ಮುಕ್ತಿರಿತಿ । ಮಧ್ಯಮಜೀವಾನಾಂ ಸ್ವರೂಪಭೂತ-ಸುಖದುಃಖಾತ್ಮಕನರಕಾನುಭವಸ್ಯ ನಿತ್ಯತ್ವೇಽಪಿ 'ತ್ರಿದಿವನಿರಯಭೂಗೋಚರಾನ್' ಇತ್ಯನಿತ್ಯಲೋಕೇಷ್ವೇವ ಸಂಚಾರೋಕ್ತ್ಯಾಲೋಕನಿತ್ಯತ್ವಾಭಾವಾತ್ ದ್ವಯೋರೇವ ಲೋಕಯೋರ್ನಿತ್ಯತ್ವೋಕ್ತಿರಿತಿ ಜ್ಞೇಯಮ್ । -(ವಾ)

೮೮. ಕಥಂಚನ ಮಹಾಪಾತಕೇನಾಪಿ। -(ವಾ)

೮೯. ಮಾನುಷಾಣಾಮಿತಿ ಷಷ್ಠೀ ತೃತೀಯಾರ್ಥೇ। -(ಜ)

೩) ಸ್ವರ್ಗ ಮತ್ತು ನರಕಗಳಿಗೆ ಹೋದವರು ಪಾಪಕರ್ಮವನ್ನು ಅನುಭವಿಸಿದ ಅನಂತರ ಅವುಗಳಿಂದ ಮರಳುವರು; ಆದರೆ ಮೋಕ್ಷ ಮತ್ತು ತಮಸ್ಸುಗಳಿಗೆ ಹೋದವರು ಮರಳುವುದಿಲ್ಲ ಎಂಬುದು ವಿಶೇಷ.

ಅಸುರರಿಗೆ ತಮಃಪ್ರಾಪ್ತಿಯ ಖಚಿತ ಲಕ್ಷಣ

ಅಸುರಾಣಾಂ ತಮಃಪ್ರಾಪ್ತಿಸ್ತದಾ ನಿಯಮತೋ ಭವೇತ್ ।
ಯದಾ ತು ಜ್ಞಾನಿಸದ್ಭಾವೇ ನೈವ ಗೃಹ್ಣಂತಿ ತತ್ಪರಮ್ ॥ ೯೦ ॥

ಅ: ತಿಳಿಸಿಕೊಡಬಲ್ಲ ಜ್ಞಾನಿಗಳು ಇರುವಾಗಲೂ ಸಹ ಯಾರು ಉತ್ತಮನಾದ ನಾರಾಯಣನೆಂಬ ವಸ್ತುವನ್ನು ತಿಳಿದುಕೊಳ್ಳುವುದೇ ಇಲ್ಲವೋ, ಅಂತಹ ಅಸುರರಿಗೆ ನಿಯಮೇನ ತಮಸ್ಸು ಪ್ರಾಪ್ತವಾಗುವುದು.

ವಿ: ೧) ಭಗವತ್ತತ್ತ್ವವನ್ನು ಉಪದೇಶಿಸಬಲ್ಲ ಜ್ಞಾನಿಗಳು ದೊರೆತಾಗಲೂ ತತ್ತ್ವಜ್ಞಾನವನ್ನು ಹೊಂದದ ಜನರು ತಮೋಯೋಗ್ಯರು ಎಂದು ಭಾವ.

೨) ಅನಂತಜೀವರಿರುವಾಗ 'ಇವರು ಅಸುರರು', 'ಇವರಿಗೆ ತಮಸ್ಸು'; ಎಂದು ನಿರ್ಣಯಿಸಿಕೊಳ್ಳುವ ಉಪಾಯವನ್ನು ಈ ಶ್ಲೋಕದಲ್ಲೂ, ಇವರು ದೇವತೆಗಳು, ಇವರಿಗೆ ಮುಕ್ತಿ ಎಂದು ನಿರ್ಣಯಿಸಿಕೊಳ್ಳುವ ಉಪಾಯವನ್ನು ಮುಂದಿನ ಶ್ಲೋಕದಲ್ಲೂ ತಿಳಿಸಿರುವರು.

೩) ಇಲ್ಲಿ 'ನ ಗೃಹ್ಣಂತಿ' 'ತಿಳಿದುಕೊಳ್ಳುವುದಿಲ್ಲ' ಎಂದರೆ ಜ್ಞಾನಿಗಳಲ್ಲಿನ ದ್ವೇಷದಿಂದಾಗಿ, ಜ್ಞಾನದಲ್ಲಿನ ಅವಿಶ್ವಾಸದಿಂದಾಗಿ ಶ್ರೀಹರಿಯಲ್ಲಿನ ಪ್ರದ್ವೇಷದಿಂದಾಗಿ ಜ್ಞಾನಿಮುಖಗಳಿಂದ ಕೇಳಿ ತಮ್ಮ ಹೃದಯದಲ್ಲಿ ಇರಿಸಿಕೊಳ್ಳುವುದಿಲ್ಲ ಎಂದು ಅರ್ಥ. ಆಗ ಅಂತಹವರನ್ನು ಅಸುರರೆಂದೂ, ಅವರಿಗೆ ತಮಸ್ಸಾಗುವುದೆಂದೂ ನಿರ್ಣಯಿಸಲು ಶಕ್ಯವಾಗುತ್ತದೆ.

೪) ಸತ್ಸಮಾಗಮವು ಇಲ್ಲದಿರುವ ಕಾರಣದಿಂದ ಕೆಲವೊಮ್ಮೆ ಉತ್ತಮರು ಸಹ ಹರಿಸರ್ವೋತ್ತಮತ್ವಜ್ಞಾನವನ್ನು ಹೊಂದದಿರುವ ಸಂಭವವುಂಟು; ಅದಕ್ಕೇ ಇಲ್ಲಿ **'ಜ್ಞಾನಿಸದ್ಭಾವೇ'** ಎಂದು ಹೇಳಿರುವರು.

---

೯೦. ಜ್ಞಾನಿಸದ್ಭಾವೇ – ದ್ವಾತ್ರಿಂಶಲ್ಲಕ್ಷಣಾದಿಲಕ್ಷಿತಜ್ಞಾನಿನಃ ।

೯೦. ಜ್ಞಾನಿಷು ವಿದ್ವೇಷಾತ್ ಜ್ಞಾನೇ ಅವಿಶ್ವಾಸಾತ್ ಹರೌ ಪ್ರದ್ವೇಷಾಚ್ಚನೈವ ಗೃಹ್ಣಂತಿ –(ವಾ)

೯೦. ಸತ್ಸಮಾಗಮಾಭಾವಾತ್ ಉತ್ತಮಾನಾಮಪಿ ಕದಾಚಿತ್ ಹರಿಜ್ಞಾನಾಭಾವಸಂಭವಾತ್ 'ಜ್ಞಾನಿಸದ್ಭಾವೇ' ಇತ್ಯುಕ್ತಮ್ । –(ವಾ)

೫) ಭೀಷ್ಮದ್ರೋಣಾದಿ ಗುರುಹಿರಿಯರು, ನಾರದಾದಿ ಋಷಿಗಳು, ವಿದುರಾದಿ ಹಿತೈಷಿಗಳು, ತಂದೆತಾಯಿಗಳು ಕೊನೆಗೆ ಸಾಕ್ಷಾತ್ ಶ್ರೀಕೃಷ್ಣನೇ ತಿಳಿಸಿದರೂ ತತ್ತ್ವಜ್ಞಾನವನ್ನು ತಿಳಿಯದೆ ಹಾಳಾದ ದುರ್ಯೋಧನ ಇದಕ್ಕೆ ಉತ್ತಮ ನಿದರ್ಶನ. ಅದರಂತೆ ರಾವಣಾದಿಗಳು ಸಹ.

ಬಿಂಬ ರೂಪದ ಉಪಾಸನೆಯಿಂದಲೇ ಅಪರೋಕ್ಷಜ್ಞಾನ

ತದಾ ಮುಕ್ತಿಶ್ಚ ದೇವಾನಾಂ ಯದಾ ಪ್ರತ್ಯಕ್ಷಗೋ ಹರಿಃ ।
ಸ್ವಯೋಗ್ಯಯೋಪಾಸನಯಾ ತನ್ವಾ ತದ್ಯೋಗ್ಯಯಾ ತಥಾ ॥ ೯೦ ॥

ಅ: ತಮಗೆ ವಿಹಿತವಾದ ಉಪಾಸನೆಯಿಂದ ಅವರ ಅಪರೋಕ್ಷಜ್ಞಾನಕ್ಕೆ ವಿಹಿತವಾದ ರೂಪದಿಂದ ಯಾವಾಗ ಶ್ರೀಹರಿಯು ಪ್ರತ್ಯಕ್ಷ ಗೋಚರಿಸುವನೋ ಆಗ ದೇವತೆಗಳಿಗೆ ಮುಕ್ತಿಯು ಲಭಿಸುವುದು.

ವಿ: ೧) ಸ್ವಯೋಗ್ಯ ಬಿಂಬರೂಪದ ಉಪಾಸನೆಯನ್ನು ವಿಹಿತರೀತಿಯಲ್ಲಿ ಮಾಡುವ ಸಜ್ಜೀವಿಗಳಿಗೆ ಶ್ರೀಹರಿಯು ಬಿಂಬಾಪರೋಕ್ಷವನ್ನಿತ್ತು ಮುಕ್ತಿಯನ್ನು ಕರುಣಿಸುವನು ಎಂದು ಭಾವ.

೨) ಇಲ್ಲಿ **'ದೇವಾನಾಂ'** ಎಂಬಲ್ಲಿ 'ದೇವ' ಪದದಿಂದ ಮನುಷ್ಯೋತ್ತಮರೂ ಉಪಲಕ್ಷಿತ.

೩) **'ಸ್ವಯೋಗ್ಯಯೋಪಾಸನಯಾ'** ಎಂದು ಹೇಳಿದ್ದರಿಂದ 'ಉಪಾಸನೆಯಲ್ಲಿ ವೈಚಿತ್ರ್ಯವುಂಟು' ಎಂಬ ತತ್ತ್ವವೂ ಸೂಚಿತ.

೪) ಪರಾಂತಕಾಲದಲ್ಲೇ ಬ್ರಹ್ಮಾದಿಗಳಿಗೆ ಮುಕ್ತಿ ಮತ್ತು ಕಲ್ಯಾದಿಗಳಿಗೆ ತಮಸ್ಸು ಎಂದು ಸಿದ್ಧಾಂತರಹಸ್ಯ.

ಗುಣೋಪಾಸನೆಯಲ್ಲಿ ವೈವಿಧ್ಯ

ಸರ್ವೈರ್ಗುಣೈರ್ಬ್ರಹ್ಮಣಾ ತು ಸಮುಪಾಸ್ಯೋ ಹರಿಃ ಸದಾ ।
ಆನಂದೋ ಜ್ಞಃ ಸದಾತ್ಮೇತಿ ಹ್ಯುಪಾಸ್ಯೋ ಮಾನುಷೈರ್ಹರಿಃ ।
ಯಥಾಕ್ರಮಂ ಗುಣೋದ್ರೇಕಾತ್ ತದನ್ಯೈರಾವಿರಿಂಚತಃ ॥ ೯೨ ॥

---

೯೦. ಪರಂ ಉತ್ತಮಂ ತತ್ ನಾರಾಯಣಾಖ್ಯಂ ವಸ್ತು। – (ವಾ.)

೯೦ ಪರಂ ಸರ್ವೋತ್ತಮಂ ತತ್ ಬ್ರಹ್ಮ। – (ಜ.)

೯೧. ಸ್ವಯೋಗ್ಯಯೋಪಸನಯೇತಿ ಉಪಾಸನಾಯಾಂ ವೈಚಿತ್ರ್ಯಂ ಸೂಚಿತಮ್ । – (ವಾ.)

೯೧. ಪರಾಂತಕಾಲೇ ಏವ ಬ್ರಹ್ಮಾದೀನಾಂ ಮುಕ್ತಿಃ ಕಲ್ಯಾದೀನಾಂ ತಮಶ್ಚೇತಿ ಸಿದ್ಧಾಂತರಹಸ್ಯಮ್ । – (ವಾ.)

ಅ: ಶ್ರೀಹರಿಯು ಸದಾಕಾಲವೂ ಬ್ರಹ್ಮದೇವರಿಂದ ಸರ್ವಗುಣಗಳಿಂದ ಉಪಾಸ್ಯನಾಗಿರುವನು; ಮನುಷ್ಯರಿಂದ ಆನಂದ, ಸರ್ವಜ್ಞ, ಸತ್ ಮತ್ತು ಆತ್ಮ ಎಂಬುದಾಗಿ ಉಪಾಸ್ಯ; ಬ್ರಹ್ಮದೇವರವರೆಗಿನ ಇತರ ದೇವತೆಗಳಿಂದ ಅವರವರ ಯೋಗ್ಯತಾಕ್ರಮಕ್ಕೆ ಅನುಗುಣವಾಗಿ ತಮಗೆ ವಿಹಿತವಾದ ಹೆಚ್ಚಿನ ಗುಣಗಳಿಂದ ಉಪಾಸ್ಯ.

ವಿ: ಇಲ್ಲಿ ಸರ್ವಗುಣಗಳಿಂದ ಎಂದರೆ ಅನಂತವೇದೋಕ್ತವಾದ ಸರ್ವಗುಣಗಳಿಂದ ಎಂದೂ, ಆನಂದ, ಜ್ಞ, ಸತ್, ಆತ್ಮಾ ಎಂಬುದಕ್ಕೆ ಆನಂದಸ್ವರೂಪ, ಜ್ಞಾನಸ್ವರೂಪ, ನಿರ್ದೋಷ ಮತ್ತು ಸ್ವಾಮಿ ಎಂದೂ ಭಾವ :

ಸಚ್ಚಿದಾನಂದ ಆತ್ಮೇತಿ ಮಾನುಷೈಸ್ತು ಸುರೇಶ್ವರೈಃ ।
ಯಥಾಕ್ರಮಂ ಬಹುಗುಣೈರ್ಬ್ರಹ್ಮಣಾ ತ್ವಖಿಲೈರ್ಗುಣೈಃ ॥ – ಅಣುಭಾಷ್ಯ

ಋಜುಗಳ ಲಕ್ಷಣ

ಬ್ರಹ್ಮತ್ವಯೋಗ್ಯಾ ಋಜವೋ ನಾಮ ದೇವಾಃ ಪೃಥಗ್ಗಣಾಃ ।
ತೈರೇವಾಪ್ಯಂ ತತ್ಪದಂ ತು ನೈವಾನ್ಯೈಃ ಸಾಧನೈರಪಿ ॥ ೯೩ ॥

ಅ: ಋಜುಗಳೆಂಬವರು ಬ್ರಹ್ಮಪದವಿಗೆ ಯೋಗ್ಯರಾದ ಪ್ರತ್ಯೇಕಗುಂಪಿನ ದೇವತೆಗಳು; ಆ ಪದವಿ ಅವರಿಂದ ಮಾತ್ರವೇ ಪಡೆಯಲು ಸಾಧ್ಯ; ಇತರ ಜೀವರಿಗೆ ಯಾವ ಸಾಧನಗಳಿಂದಲೂ ಆ ಪದವಿ ದೊರೆಯದು.

ವಿ: ೧) ಚತುರ್ಮುಖಬ್ರಹ್ಮಪದವಿಗೆ ಅರ್ಹರಾದ ಒಂದು ಗುಂಪಿನ ಜೀವರಿಗೆ 'ಋಜುಗಳು' ಎಂದು ಹೆಸರು; ಆ ಪದವಿಯು ಋಜುಭಿನ್ನರಿಗೆ ಎಂದೂ ಲಭಿಸುವುದಿಲ್ಲ ಎಂದು ಭಾವ.

---

೯೨. 'ನೇಕ್ಷಾ ಕ್ವಚನ ಬಾಧ್ಯತೇ' ಇತಿ ವಚನಾತ್ । –(ಜ.)

೯೨ ಮಾನುಷೈಃ – ಮಾನುಷೋತ್ತಮೈಃ । –(ಜ.)

೯೨. ತದನ್ಯೈಃ – ಮಾನುಷೋತ್ತಮವ್ಯತಿರಿಕ್ತೈಃ । –(ವ್ಯಾ)

೯೨. ಆವಿರಿಂಚತಃ – ವಿರಿಂಚಿಪರ್ಯಂತವಿದ್ಯಮಾನೈಃ ಋಷಿಗಂಧರ್ವಾದ್ಯುತ್ತಮಜೀವೈಃ ಗುಣೋದ್ರೇಕಾತ್ ಸ್ವಸ್ವಯೋಗ್ಯಗುಣಬಾಹುಲ್ಯಾದುಪಾಸ್ಯ ಇತಿ ಸಂಬಂಧಃ । –(ವಾ.)

೯೨. ಸರ್ವೈಃ – ಅನಂತವೇದೋಕ್ತಗುಣೈರಿತ್ಯರ್ಥಃ । –(ವಾ.)

೯೩. ನನು ಮಾನುಷಾದೀನಾಮೇವ ತಪಆದಿನಾ ಕದಾಚಿತ್ ಬ್ರಹ್ಮತ್ವಸಂಭವೇ ವ್ಯರ್ಥೋ ವಿಭಾಗ ಇತ್ಯತ ಆಹ ಬ್ರಹ್ಮತ್ವಯೋಗ್ಯಾ ಇತಿ । –(ವಾ.)

೨) ಬ್ರಹ್ಮ ಪದವಿಯೇ 'ಋಜು' ಭಿನ್ನರಾದವರಿಗೆ ದೊರೆಯುವುದಿಲ್ಲ; ಪರಬ್ರಹ್ಮಪದವಿ ಋಜುಗಳಿಗೂ ಲಭಿಸುವುದಿಲ್ಲ; ಎಂದ ಮೇಲೆ ಜೀವೇಶ್ವರಭೇದ, ಜೀವರ ತಾರತಮ್ಯ ಅಬಾಧಿತ ಎಂದರ್ಥ.

ಪ್ರತಿ ಪದವಿಗೂ ಪ್ರತ್ಯೇಕ ಗಣಗಳು - ಅಯೋಗ್ಯ ಕಾಮನೆ ನಿಷಿದ್ಧ

ಏವಂ ಸರ್ವಪದಾನಾಂ ಚ ಯೋಗ್ಯಾಃ ಸಂತಿ ಪೃಥಗ್ಗಣಾಃ ।
ತಸ್ಮಾದನಾದ್ಯನಂತಂ ಹಿ ತಾರತಮ್ಯಂ ಚಿದಾತ್ಮನಾಮ್ ॥ ೯೪ ॥

ತಚ್ಚ ನೈವಾನ್ಯಥಾ ಕರ್ತುಂ ಶಕ್ಯಂ ಕೇನಾಪಿ ಕುತ್ರಚಿತ್ ।
ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ॥ ೯೫ ॥

ಅ: ಹೀಗೆ ಸಕಲಪದವಿಗಳಿಗೂ ಸಹ ಆಯಾಪದವಿಗೆ ಅರ್ಹರಾದ ಜೀವರ ಸಮೂಹಗಳು ಪ್ರತ್ಯೇಕವಾಗಿಯೇ ಇವೆ; ಆದ್ದರಿಂದ ಜೀವರ ತಾರತಮ್ಯವು ಅನಾದಿ ಮತ್ತು ಅನಂತ; ಅದು ಯಾವನಿಂದಲೂ ಎಲ್ಲೂ ವ್ಯತ್ಯಾಸಗೊಳಿಸಲು ಅಶಕ್ಯ. ತನಗೆ ಯೋಗ್ಯವಲ್ಲದ ಪದವಿಯನ್ನು ಬಯಸುವ ಪುರುಷ ಪತನ ಹೊಂದುವನು; ಸಂಶಯವೇ ಇಲ್ಲ.

ವಿ: ೧) ಬ್ರಹ್ಮಪದವಿಗೆ ಅರ್ಹರಾಗಿ 'ಋಜುಗಳು' ಇರುವಂತೆ, ರುದ್ರಾದಿ ಇತರ ಸಕಲ ದೇವತಾದಿ ಪದವಿಗಳಿಗೂ ಸಹ ಆಯಾ ಪದವಿಗೆ ಅರ್ಹರಾದ ಪ್ರತ್ಯೇಕ ಗುಂಪಿನ ಚೇತನರು ಇರುವರು; ಆಯಾ ಪದವಿಗೆ ಅರ್ಹರಾದ ಜೀವರಿಗೆ ಮಾತ್ರವೇ ಆಯಾ ಪದವಿಗಳು ಸಾಧನಗಳಿಂದ ದೊರೆಯುತ್ತವೆ. ಆದ್ದರಿಂದ ಚೇತನರ ತಾರತಮ್ಯ ಅನಾದಿನಿತ್ಯವಾಗಿದೆ; ಇದು ಎಲ್ಲೂ ಯಾರಿಂದಲೂ ಬದಲಿಸಲ್ಪಡಲು ಅಶಕ್ಯ. ತನಗೆ ಸಲ್ಲದ ಉತ್ತಮಪದವಿಯನ್ನು ಹೊಂದಲು ಶಕ್ಯವಿಲ್ಲ; ಮಾತ್ರವಲ್ಲದೆ, ಅಂತಹ ಅಪೇಕ್ಷೆಯನ್ನು ಪಡುವ ಜೀವನು ತನ್ನ ಸ್ಥಾನದಿಂದಲೂ ಸಹ ಚ್ಯುತನಾಗಿ ಬಿಡುವನು.

೨) ವಸಿಷ್ಠಮುನಿಗಳ ಸಾಮ್ಯವನ್ನು ಬಯಸಿ ತಪಃಕ್ಷಯವನ್ನು ಹೊಂದಿದ ಮಾಂಡವ್ಯರು ಮೊದಲಾದವರು ಅಯೋಗ್ಯಕಾಮನೆಯಿಂದ ಅನರ್ಥವನ್ನು ಕಂಡವರಿಗೆ ನಿದರ್ಶನವಾಗಿರುವರು.

---

೯೫. ನ ಕೇವಲಂ ಸ್ವೋತ್ತಮಪದಪ್ರಾಪ್ತಿರಶಕ್ಯಾ, ಅಪಿ ತು ತದಿಚ್ಛಯಾऽಪ್ಯನರ್ಥೋऽಸ್ತೀತ್ಯಾಹ । ಅಯೋಗ್ಯಮಿತಿ। –(ವಾ)
ಅಯೋಗ್ಯೋಪಾಸನಾಕರ್ತುರನರ್ಥಶ್ಚ ಭವಿಷ್ಯತಿ। –(ಭಾ. ತಾ)

ಉಪಾಸನೆಯ ಬಗೆ

ತಸ್ಮಾದ್ಯೋಗ್ಯಾನುಸಾರೇಣ ಸೇವ್ಯೋ ವಿಷ್ಣುಃ ಸದೈವ ಹಿ ।
ಅಚ್ಛಿದ್ರಸೇವನಾಚ್ಚೈವ ನಿಷ್ಕಾಮತ್ವಾಚ್ಚ ಯೋಗ್ಯತಃ ।
ದ್ರಷ್ಟುಂ ಶಕ್ಯೋ ಹರಿಃ ಸರ್ವೈರ್ನಾನ್ಯಥಾ ತು ಕಥಂಚನ ॥ ೯೬ ॥

ಅ: ಆದ್ದರಿಂದ ತಮ್ಮ ಯೋಗ್ಯತೆಗೆ ಅನುಸಾರವಾಗಿ ಸಕಲರೂ ಸರ್ವದಾ ವಿಷ್ಣುವನ್ನು ಸೇವಿಸಲೇಬೇಕು; ಮಧ್ಯೆ ಮಧ್ಯೆ ವಿಚ್ಛೇದವಿಲ್ಲದ ಧ್ಯಾನದಿಂದಲೂ ಯೋಗ್ಯತೆಗೆ ತಕ್ಕ ನಿಷ್ಕಾಮತ್ವದಿಂದಲೂ ಶ್ರೀಹರಿಯನ್ನು ಅವರವರ ಯೋಗ್ಯತೆಗೆ ತಕ್ಕಂತೆ ಕಾಣಲು ಸಾಧ್ಯ; ಇತರ ಯಾವ ಸಾಧನಗಳಿಂದಲೂ ಅವನ ಅಪರೋಕ್ಷಜ್ಞಾನವು ಸಾಧ್ಯವಾಗದು.

ವಿ: ಪ್ರತಿಯೊಬ್ಬರೂ ತಮ್ಮ ಯೋಗ್ಯತೆಗೆ ತಕ್ಕಂತೆ ಶ್ರೀಹರಿಯನ್ನು ಉಪಾಸನೆ ಮಾಡಬೇಕು. ತೈಲಧಾರೆಯಂತೆ ನಿರಂತರ ಧ್ಯಾನವು ಅವನ ದರ್ಶನಕ್ಕೆ ಸಾಧನ; ಫಲೇಚ್ಛೆಯನ್ನು ತೊರೆಯುವುದು ಸಹ ಭಗವದ್ದರ್ಶನಕ್ಕೆ ಸಹಕಾರಿಯಾದ ಮತ್ತೊಂದು ಸಾಧನವಾಗಿದೆ. ಸಕಲ ನಿತ್ಯನೈಮಿತ್ತಿಕ ಕಾರ್ಯಗಳನ್ನು ಸ್ವರ್ಗಾದಿ ಇತರ ಫಲಗಳನ್ನು ಅಪೇಕ್ಷಿಸದೆ ಕೇವಲ ವಿಷ್ಣುಪ್ರೀತ್ಯರ್ಥವಾಗಿ ಆಚರಿಸುವುದೇ ನಿಜವಾದ ನಿಷ್ಕಾಮತ್ವ.

ಶ್ರೀಹರಿಯು ಸತ್ಯಸಂಕಲ್ಪ

ನಿಯಮೋಽಯಂ ಹರೇರ್ಯಸ್ಮಾನ್ನೋಲ್ಲಂಘ್ಯಃ ಸರ್ವಚೇತನೈಃ ।
ಸತ್ಯಸಂಕಲ್ಪತೋ ವಿಷ್ಣುರ್ನಾನ್ಯಥಾ ತು ಕರಿಷ್ಯತಿ ॥ ೯೭ ॥

ಅ: ಇದು ಶ್ರೀಹರಿಯ ನಿಯಮವಾಗಿರುವುದರಿಂದ, ಸಕಲಚೇತನರಿಂದಲೂ ಎಂದೂ ಉಲ್ಲಂಘಿಸಲ್ಪಡಲು ಶಕ್ಯವಿಲ್ಲ; ಆ ವಿಷ್ಣುವಾದರೋ ಸತ್ಯಸಂಕಲ್ಪನಾಗಿರುವುದರಿಂದ ಇದನ್ನು ಅವನು ಸಹ ಬದಲಾಯಿಸುವುದಿಲ್ಲ.

---

೯೬. ಛಿದ್ರಂ ಮಧ್ಯೇ ಮಧ್ಯೇ ವಿಚ್ಛೇದಃ । ಸೇವನಂ ಧ್ಯಾನಮ್ । ತೈಲಧಾರಾವದಚ್ಛಿನ್ನಧ್ಯಾನಮಿತ್ಯರ್ಥಃ । ಸ್ವಕೃತಸಂಧ್ಯಾವಂದನಯಜ್ಞದಾನಾದಿಕರ್ಮಣಾಂ ನಿರ್ಗತಃ ಕಾಮಃ ಫಲೇಚ್ಛಾ ಯಸ್ಯ ಸ ನಿಷ್ಕಾಮಃ । ತಸ್ಯ ಭಾವಃ ನಿಷ್ಕಾಮತ್ವಮ್ । ತಸ್ಮಾತ್ ವಿಷ್ಣುಪ್ರೀತ್ಯರ್ಥಮೇವ ನಿತ್ಯನೈಮಿತ್ತಿಕಕರ್ಮಾಣಿ ಕಾರ್ಯಾಣಿ । ಸ್ವರ್ಗಕಾಮಃ ಪಶುಕಾಮಃ ಇತ್ಯಾದಿನೋಕ್ತತತ್ಫಲಂ ನಾಪೇಕ್ಷ್ಯಮ್ । 'ವಿವಿದಿಷಂತಿ ಯಜ್ಞೇನ ದಾನೇನ ತಪಸಾऽನಾಶಕೇನ' ಇತಿ ಶ್ರುತೇಃ । ನಿಷ್ಕಾಮಕರ್ಮಾಪಿ ಜ್ಞಾನೇ ಸಹಕಾರ್ಯಂತರಮಿತಿಭಾವಃ । ಯೋಗ್ಯತಃ– ಯೋಗ್ಯತ್ವಾತ್ । –(ವಾ)

೯೬. ಯೋಗ್ಯತಃ– ಯೋಗ್ಯತಾಯಾ ಃ । ಭಾವಪ್ರಧಾನೋ ನಿರ್ದೇಶಃ । ಹೇತೌ ಪಂಚಮೀ –(ಜ)

ವಿ: ಇದು ಸ್ವತಂತ್ರನಾದ ಶ್ರೀಹರಿಯ ನಿಯಮವಾದ್ದರಿಂದ ಅಸ್ವತಂತ್ರರಾದ ಇತರ ಯಾರೂ ಇದನ್ನು ಮೀರುವಂತಿಲ್ಲ; ತನ್ನದೇ ಆದ ಈ ನಿಯಮವನ್ನು ಸತ್ಯಸಂಕಲ್ಪನಾದ ಅವನೂ ಬದಲಾಯಿಸುವುದಿಲ್ಲ; ಆದ್ದರಿಂದ ತಾರತಮ್ಯಾದಿ ಸಕಲ ತತ್ತ್ವಗಳೂ ಶಾಶ್ವತ ಸತ್ಯಗಳು ಎಂದು ಭಾವ.

ದಾನಾದಿಗಳು ಭಕ್ತಿಗೆ ಸಾಧನಗಳು - ಭಕ್ತಿಯೇ ಮುಕ್ತಿಗೆ ಸಾಧನ

ದಾನತೀರ್ಥತಪೋಯಜ್ಞಪೂರ್ವಾಃ ಸರ್ವೇಽಪಿ ಸರ್ವದಾ ।
ಅಂಗಾನಿಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ।
ಭವಿಷ್ಯತ್ಪರ್ವವಚನಮಿತ್ಯೇತದಖಿಲಂ ಪರಮ್ ॥ ೯೮ ॥

ಅ: ದಾನ, ತೀರ್ಥಯಾತ್ರೆ, ತಪಸ್ಸು, ಯಜ್ಞ ಮೊದಲಾದ ಇತರ ಸಕಲ ಸಾಧನಗಳು ಸಹ ಶ್ರೀಹರಿಯ ನಿರಂತರ ಧ್ಯಾನ, ಭಕ್ತಿಗಳಿಗೆ ಅಂಗಗಳು; ಭಕ್ತಿಯೊಂದೇ ಮುಕ್ತಿಗೆ ಪ್ರಮುಖ

---

೯೭. ನಿಯಮಃ – ನಿಯಮನಂ ಆಜ್ಞಾ । –(ವಾ)

ಪ್ರಬಲೈರಪಿ ರಾಕ್ಷಸೈರ್ನಾಯಂ ಕ್ರಮಃ ಉಲ್ಲಂಘ್ಯ ಇತ್ಯತ್ರ ಹೇತುಮಾಹ । ನಿಯಮೋಽಯಮಿತಿ ।
-(ವಾ)

೯೭. ನನು ಹರೇರ್ನಿಯಮಸ್ಯಾನ್ಯೈರನುಲ್ಲಂಘ್ಯತ್ವೇಽಪಿ ವಿಷ್ಣುನೈವ ಸ್ವನಿಯಮಃ ಅನ್ಯಥಾಕ್ರಿಯತಾಮ್ । ತತ್ರ ತಸ್ಯ ಸಾಮರ್ಥ್ಯಾದಿತ್ಯತ ಆಹ ಸತ್ಯೇತಿ । ಅನ್ಯಥಾ ಸ್ವಕೃತನಿಯಮಸ್ಯ ಅನ್ಯಥಾತ್ವಮ್ । –(ಜ)

ಸತ್ಯಸಂಕಲ್ಪತಃ – ಸತ್ಯಸಂಕಲ್ಪತ್ವಾತ್ । – (ವಾ)

೯೮. ಭಕ್ತಿ ಜ್ಞಾನಾಭ್ಯಾಂ ಮುಚ್ಯತೇ ಇತ್ಯಯುಕ್ತಮ್ । ಕ್ವಚಿದ್ದಾನಾದಿನಾಽಪಿ ಮೋಕ್ಷಾದಿಶ್ರವಣಾದಿತ್ಯತ ಆಹ। ದಾನೇತಿ। –(ವಾ)

೯೮. ಹರಿಸೇವಾಯಾಂ ಹರೇರ್ನೈರಂತರ್ಯೇಣ ಧ್ಯಾನಾಖ್ಯಸೇವಾಯಾಂ ಭಕ್ತೌ ಚೇತ್ಯಪಿ ಗ್ರಾಹ್ಯಮ್ । 'ಕರ್ಮಣಾ ಜ್ಞಾನಮಾತನೋತಿ' ಇತಿ ಶ್ರುತೇರಂತಃಕರಣಶುದ್ಧಿದ್ವಾರಾ ಜ್ಞಾನಾಂಗಾನಿ ದಾನಾದೀನೀತಿ ಭಾವಃ । ಏಕಾ – ಮುಖ್ಯಾ । ಜ್ಞಾನವೈರಾಗ್ಯಯೋರಪಿ ಮುಕ್ತ್ಯರ್ಥಮಪೇಕ್ಷಿತತ್ವಾದೇಕೇತ್ಯುಕ್ತಮ್ । –(ವಾ)

೯೮. ಅಖಿಲಂ ಅಖಿಲಾರ್ಥಪ್ರತಿಪಾದಕಂ ಯದ್ಧರೇಃ ಸರ್ವೋತ್ತಮತ್ವಪ್ರತಿಪಾದಕತ್ವಾತ್ । ಪರಂ – ಉತ್ತಮಮ್ । ಭವಿಷತ್ಪರ್ವವಚನಸ್ಯ ಪೂರ್ವಮಪಿ ಪ್ರಮಾಣತ್ವೇನೋಕ್ತತ್ವಾದಿದಂ ಪರಂ ದ್ವಿತೀಯಮಿತಿ ವಾ । ...ಯದ್ವಾ ಇತೀದಂ ಭವಿಷತ್ಪರ್ವವಚನಮ್ । ಏತದ್ವಕ್ಷ್ಯಮಾಣಂ ಪರಂ ಅಪೌರುಷೇಯತ್ವೇನ ನಿರ್ದೋಷಮ್ । ಖಿಲಂ ಉಚ್ಛಿನ್ನಂ ನ ಭವತೀತಿ ಅಖಿಲಂ ಪಠ್ಯಮಾನಂ ದೇವಾಃ ಮುಕ್ತಿಯೋಗ್ಯಾಃ ಅಸುರಾಃ ತಮೋಗಾಃ ಮನುಷ್ಯಮಧ್ಯಮಾ ನಿತ್ಯಸಂಸಾರಿಣಃ ಇತ್ಯೇತನ್ನಿಯಮಮಪಹಾಯ ಅಯೋಗ್ಯೇಚ್ಛಾಯಾಮಧಃಪಾತಃ ಇತ್ಯರ್ಥಪ್ರತಿಪಾದಕಂ ವಚನಮಸ್ತಿ।
–(ಜ)

ಸಾಧನ; ಈವರೆಗೆ ಹೇಳಿದ ವಚನಗಳೆಲ್ಲವೂ ಭವಿಷ್ಯತ್ಪರ್ವವೆಂಬ ಗ್ರಂಥದ ಉತ್ತಮ ವಚನಗಳು.

ಏಃ ಶಾಸ್ತ್ರಗಳಲ್ಲೂ ಕೆಲವೆಡೆ ದಾನ, ತೀರ್ಥಯಾತ್ರೆ, ಯಜ್ಞ ಮೊದಲಾದವುಗಳಿಂದ ಮೋಕ್ಷವಾಗುವುದೆಂಬ ವಾಕ್ಯಗಳುಂಟು; ಆದರೆ ಅವುಗಳ ಹೃದಯ ಅವೆಲ್ಲ ಮುಕ್ತಿಸಾಧನವಾದ ಭಕ್ತಿಗೆ ಸಾಧನಗಳೇ ಹೊರತು ಸಾಕ್ಷಾತ್ ಮೋಕ್ಷಸಾಧನಗಳಲ್ಲ ಎಂಬುದೇ ಆಗಿದೆ ಎಂದು ಭಾವ.

ಶ್ರುತಿ ವಾಕ್ಯಗಳ ಉಲ್ಲೇಖ

★''ಶೃಣ್ವೇ ವೀರ ಉಗ್ರಮುಗ್ರಂ ದಮಾಯ-
ನ್ನನ್ಯಮನ್ಯಮತಿನೇನೀಯಮಾನಃ ।
ಏಧಮಾನದ್ವಿಳುಭಯಸ್ಯ ರಾಜಾ
ಚೋಷ್ಕೂಯತೇ ವಿಶ ಇಂದ್ರೋ ಮನುಷ್ಯಾನ್'' ॥ ೯೯ ॥

ಅ: ವೀರನೂ, ಪರಮೈಶ್ವರ್ಯಶಾಲಿಯೂ ಆದ ನಾರಾಯಣನು ಲೋಕೋಪದ್ರವ-ಕಾರಕವಾದ ಕ್ರೂರಕಾರ್ಯಗಳನ್ನು ಮಾಡುವ ದೈತ್ಯಜನರನ್ನು ಕ್ರೂರವಾಗಿ ದಂಡಿಸುವವನೂ, ಕ್ರೂರವಲ್ಲದ ಸಾತ್ವಿಕಸ್ವಭಾವದ ಜೀವರನ್ನು ಸಂಸಾರವನ್ನು ದಾಟಿಸಿ, ಅತಿಶಯಿತ ಸ್ಥಾನಕ್ಕೆ

---

೯೮. ಯಾನಿ ತೀರ್ಥಾದಿನಾಕ್ಯಾನಿ ಕರ್ಮಾದಿವಿಷಯಾಣಿ ಚ ।
ಸ್ತಾವಕಾನ್ಯೇವ ತಾನಿ ಸ್ಯುರಜ್ಞಾನಾಂ ಮೋಹಕಾನಿ ವಾ ।
ಭವೇನ್ಮೋಕ್ಷಸ್ತುಮದ್ದ್ವೇಷ್ಟೇರ್ನಾನ್ಯತಸ್ತು ಕಥಂಚನ । –ಇತಿ ನಾರದೀಯೇ
ಅತೋ ಅಪರೋಕ್ಷಜ್ಞಾನಾದೇವ ಮೋಕ್ಷಃ । ಕರ್ಮ ತು ತತ್ಸಾಧನಮೇವ । –ಗೀತಾಭಾಷ್ಯ(೩/೨೦)

೯೯. ದಮನಸ್ಯ ದೀರ್ಘಕಾಲೀನತ್ವಸೂಚನಾಯ ಸಂಹಿತಾಯಾಂ ದೀರ್ಘಃ –(ವಾ)

೯೯. ಅತಿನೇನೀಯಮಾನಃ । ಸಂಸಾರಮತಿಕ್ರಾಮಯನ್ ಅತಿಶಯಿತಸ್ಥಾನಂ ನಯನ್ ವಾ । –(ಜ)

೯೯. ಭಕ್ತಂ ಬಲಿಂ ಕಸ್ಮಾದಧೋಲೋಕಮನಯದಿತ್ಯತ ಉಕ್ತಂ – ಏಧಮಾನದ್ವಿಡಿತಿ । ಏಧಮಾನಂ ಉಗ್ರತಪಆದಿಶಕ್ತ್ಯಾ ವರ್ಧಮಾನಂ ದ್ವೇಷ್ಟಿ ತದತಿಕ್ರಮಂ ನ ಸಹತೇ ಇತಿ ಸ ತಥೋಕ್ತಃ । ಅತ ಏವ ಸ್ವಾಧಿಕಗರುಡದ್ರೋಹಕರ್ತುಃ ಕಾಲಿಯಸ್ಯ ಮರ್ದನಮ್ । ಉಭಯೋರಂತೇ ಮಹದೈಶ್ವರ್ಯದಾನಾತ್ ತಾತ್ಕಾಲಿಕ ಏವ ದ್ವೇಷೋ ನ ತು ದೈತ್ಯಾದಾವಿವ ಸದಾತನ ಇತಿ ಜ್ಞೇಯಮ್ । –(ವಾ)

೯೯. ಚೋಷ್ಕೂಯತೇ ಸ್ವರೂಪಭೂತಸುಖದುಃಖಾಖ್ಯನಿತ್ಯಸಂಸಾರೇ ಏವ ಪ್ರವರ್ತಯತಿ । 'ಚುಕೂ ಪರಿವರ್ತನೇ' ಇತಿ ಧಾತುಃ । –(ವಾ)

★ ಋಗ್ವೇದ (೬/೪೭/೧೬))

ಕರೆದೊಯ್ಯುವವನೂ ಆಗಿರುವನು ಎಂಬುದಾಗಿ ಕೇಳಲ್ಪಟ್ಟಿದೆ; ಅವನು ದೇವ, ದೈತ್ಯ ರೂಪವಾದ ಈ ಎರಡು ವರ್ಗಗಳಿಗೂ ನಿಯಾಮಕನಾಗಿರುವನು; ಉಗ್ರವಾದ ತಪಸ್ಸು ಮೊದಲಾದವುಗಳ ಆಚರಣೆಯಿಂದ ತಮ್ಮ ಯೋಗ್ಯತೆಗೆ ಮೀರಿದ ಪುಣ್ಯವನ್ನು ಸಂಪಾದಿಸುವ ಜನಗಳನ್ನು ಇವನು ಮೆಚ್ಚುವುದಿಲ್ಲ; ಕೃಷಿಕರಂತೆ ಕೇವಲ ತಮ್ಮ ಉದರಂಭರಣಾದಿಗಳಿಗೆ ಉಪಯುಕ್ತವಾದ ಮಧ್ಯಮಮಾರ್ಗದಲ್ಲಿ ರತರಾಗುವ ರಾಜಸಜೀವರನ್ನು ಇವನು ನಿತ್ಯಸಂಸಾರದಲ್ಲಿ ಪ್ರವರ್ತನೆ ಮಾಡಿಸುವನು.

ವಿಃ ೧) ಜೀವತ್ರೈವಿಧ್ಯ ಮತ್ತು ಅವರಿಗೆ ಲಭಿಸುವ ಕ್ರಮವಾದ ಗತಿತ್ರೈವಿಧ್ಯಗಳನ್ನು ಈ ಶ್ರುತಿಯಿಂದ ಸಮರ್ಥಿಸಿರುವರು.

೨) ಇಲ್ಲಿ 'ಉಗ್ರವಾಗಿ ದಂಡಿಸುವನು' ಎಂದರೆ ಅಂಧಂತಮಸ್ಸಿಗೆ ಹಾಕಿ ಶಿಕ್ಷಿಸುವನು ಎಂದೂ 'ಸಂಸಾರದಿಂದ ದಾಟಿಸುವನು' ಎಂದರೆ ನಿತ್ಯಸುಖರೂಪವಾದ ಮುಕ್ತಿಯನ್ನು ಕರುಣಿಸುವನು ಎಂದೂ ಅರ್ಥ.

೩) 'ದವಾಯನ್' ಎಂದರೆ 'ದಮಯನ್' ಎಂದು ಅರ್ಥ; 'ಮ' ಎಂಬ ಹ್ರಸ್ವಕ್ಕೆ ಬದಲಾಗಿ 'ಮಾ' ಎಂಬ ದೀರ್ಘಪ್ರಯೋಗವು ಅಸುರರಿಗೆ ಸಿಕ್ಕುವ ತಮಸ್ಸು ನಿತ್ಯವಾದುದು ಎಂಬ ತತ್ತ್ವವನ್ನು ಸೂಚಿಸುವುದು.

೪) ಬಲಿ, ಕಾಲಿಯ, ಮಾಂಡವ್ಯ ಮೊದಲಾದವರು ಭಗವದ್ಭಕ್ತರೇ ಆದರೂ ಅವರು ಒಂದುಕಾಲಕ್ಕೆ ತಮ್ಮ ಯೋಗ್ಯತೆಗೂ ಮಿಗಿಲಾದ ಪುಣ್ಯವನ್ನು ಸಂಪಾದನೆ ಮಾಡಿದ್ದರಿಂದ, ಶ್ರೀಹರಿಯು ಅವರನ್ನು ನಿಗ್ರಹಿಸಿ ಅವರ ಆ ಪುಣ್ಯವನ್ನು ನಾಶಮಾಡಿ ಅನಂತರ ಉದ್ಧರಿಸಿದನು ಎಂದು ಭಾವ.

★"ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ
ವಿತರ್ತುರಾಣೋ ಅಪರೇಭಿರೇತಿ ।
ಅನಾನುಭೂತೀರವಧೂನ್ವಾನಃ
ಪೂರ್ವೀರಿಂದ್ರಃ ಶರದಸ್ತರ್ತರೀತಿ" ॥ ೧೦೦ ॥

---

೯೯. ವಿಶಃ ಕೃಷೀವಲಾದಿರಿವ ಪ್ರಾಯಃ ಸ್ವೋದರಪೂರಣೋಪಯುಕ್ತಮಧ್ಯಮಮಾರ್ಗಮೇವ ವಿಶಂತೀತಿ ವಿಶಃ। ವಿಶೋ ಮನುಷ್ಯಾನ್ । ದೈತ್ಯಾದಿವನ್ನಾತ್ಯುಗ್ರಾನ್ । ದೇವಾದಿವನ್ನಾತಿ ಶಾಂತಾನ್ । ಯದ್ವಾ ಕದಾಚಿದಧಮಾನ್ ವಿಶಂತಿ। ಕದಾಚಿದುತ್ತಮಾನ್ ವಿಶಂತೀತಿ ವಿಶೋ ಮಧ್ಯಮಜೀವಾನ್ ।

★ ಋಗ್ವೇದ (೬/೪೭/೧೭) ;

ಅ: ಪರಮೈಶ್ವರ್ಯವಂತನಾದ ನಾರಾಯಣನು ಮೊದಲು ಹೇಳಲ್ಪಟ್ಟ ದೈತ್ಯರ ಸ್ನೇಹಭಾವಗಳನ್ನು ದೂರದಿಂದಲೇ ನಾಶಪಡಿಸುವನು; ಮತ್ತು ವಿಶೇಷ ತ್ವರೆಮಾಡುತ್ತ ಅನಂತರ ಹೇಳಲ್ಪಟ್ಟ ದೇವತೆಗಳಿಂದ ಆರಾಧಿತನಾಗುವನು. ಭಗವದನುಭವರಹಿತರಾದ ತಾಮಸರನ್ನು ಅಧೋಲೋಕವಾದ ತಮಸ್ಸಿನಲ್ಲಿ ಬೀಳಿಸುವನು; ರಾಜಸರನ್ನು ಸಂಸಾರದಲ್ಲಿ ಸುತ್ತಿಸುವನು; ಇವನು ಹಿಂದಿನ ಸಂವತ್ಸರಗಳನ್ನು ಹೀಗೆಯೇ ಕಳೆದಿರುವನು; ಮುಂದಿನ ಸಂವತ್ಸರಗಳನ್ನೂ ಹೀಗೆಯೇ ಕಳೆಯುವನು (ಈಗಲೂ ಹಾಗೆಯೇ ಮಾಡುತ್ತಿರುವನು ಸಹ).

ಏ: ಹಿಂದೆ ಹೇಳಿದ ಜೀವತ್ಕೈವಿಧ್ಯವನ್ನು ಸಮರ್ಥಿಸುವ ಮತ್ತೊಂದು ಶ್ರುತಿವಾಕ್ಯವಿದು.

ಜ್ಞಾನದಿಂದಲೇ ಮೋಕ್ಷ

★''ತಮೇವಂ ವಿದ್ವಾನಮೃತ ಇಹ ಭವತಿ
ನಾನ್ಯಃ ಪಂಥಾ ಅಯನಾಯ ವಿದ್ಯತೇ''।
★★''ತಮೇವಂ ವಿದಿತ್ವಾತಿಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇ ಅಯನಾಯ'' ॥ ೧೦೧ ॥

---

೧೦೦. ಪರಾವೃಣಕ್ತಿ – ದೂರತಃ ಛಿನತ್ತಿ। ವೃಜ್ ಛೇದನೇ ಇತಿ ಧಾತೋಃ। ದೈತ್ಯೈಃ ಸೇವಾಯಾಂ ಕೃತಾಯಾಮಪಿ ಸುರಾಣಕೇಷ್ವಿವ ಕೇನಚಿದುಪಾಯೇನ ಸೇವಾಮೇವ ಛಿನತ್ತಿ। ಅತಸ್ತೇಷಾಂ ನ ಕದಾಪ್ಯೂರ್ಧ್ವಗತಿರಿತಿ ಭಾವಃ। –(ವಾ)

೧೦೦. ವಿತರ್ತುರಾಣಃ – ವಿಶೇಷೇಣ ತ್ವರಮಾಣಃ। -(ವಾ); ತ್ವರಾವಾನ್। -(ಜ)

೧೦೦. ಅನಾನುಭೂತೀಃ – ಭಗವದನುಭವರಹಿತಾನ್ । ಅನುಭವಾಭಾವಃ ಸದಾತನಃ ಇತಿ ಸೂಚನಾಯ ನ ಚಿದೀರ್ಘಃ। ನ ಕೇವಲಮುಗ್ರಾಃ ಕಿಂತು ಭಗವದನುಭವರಹಿತಾಶ್ಚ। –(ವಾ.)

೧೦೦. ಅವಧೂನ್ವಾನಃ – ಅಧೋಲೋಕೇ ತಮಸಿ ಧೂನ್ವಾನಃ । ಅನೇನ ದಮನಂ ನೈಹಿಕಂ ಕಿಂತು ಅಧೋಲೋಕೋತ್ತರಕಾಲೀನಂ ಯಾತನಾರೂಪಮಿತಿ ಸೂಚಿತಮ್। –(ವಾ.)

೧೦೦. ಪೂರ್ವಿರಿತಿ ಅತೀತಪ್ರಯೋಗಂ ತರ್ತರೀತಿ ವರ್ತಮಾನಪ್ರಯೋಗಂ ಚ ಕುರ್ವಂತ್ಯಾಃ ಕ್ರಿಯೋಪಲಕ್ಷಣಯಾ ಭವಿಷ್ಯತ್ಕಾಲೋಪಲಕ್ಷಣಯಾ ಚ ಕಾಲತ್ರಯೇಽಪಿ ತರಣಮಭಿಪ್ರೇತಮ್। ಅನ್ಯಥಾ ಇಂದ್ರಃ ಇತ್ಯುಕ್ತಪರಮೇಶ್ವರತ್ವಸ್ಯ ಕಾಲಾಂತರೇ ಹಾನಿಃ ಸ್ಯಾದಿತಿ ಜ್ಞೇಯಮ್। –(ವಾ.)

೧೦೧. ಏವಂ ಸಹಸ್ರಶೀರ್ಷತ್ವಾದಿ ಪ್ರಕಾರೇಣ। –(ವಾ.; ಜ.)

೧೦೧. ಪಂಥಾಃ – ಸಾಧನಮ್। –(ಜ)

೧೦೧. ಅಯನಾಯ – ಮೋಕ್ಷಾಯ। –(ವಾ. ಜ.)

★ ತೈತ್ತಿರೀಯ ಆರಣ್ಯಕ(೩/೧೨/೭; ೧೩/೧) ; ★★ ಶ್ವೇತಾಶ್ವತರೋಪನಿಷತ್ (೩/೮) ;

ಅ: 'ಆ ಭಗವಂತನನ್ನು ಹೀಗೆ ತಿಳಿದವನು ಮಾತ್ರವೇ ಮುಕ್ತನಾಗುವನು; ಮುಕ್ತಿಗೆ ಬೇರೊಂದು ಸಾಧನ ಇಲ್ಲವೇ ಇಲ್ಲ'; 'ಅವನನ್ನು ಹೀಗೆ ತಿಳಿದೇ ಮುಕ್ತಿಯನ್ನು ಪಡೆಯುವನು; ಬೇರೊಂದು ಹಾದಿ ಮೋಕ್ಷಕ್ಕೆ ಇಲ್ಲವೇ ಇಲ್ಲ.'

ವಿ: 'ವಿಮುಕ್ತಿರ್ವಿದ್ಯಯಾ ತಥಾ' ಜ್ಞಾನವೇ ಮೋಕ್ಷಕ್ಕೆ ಸಾಧನ ಎಂಬ ಮಾತಿಗೆ ಇದು ಪ್ರಮಾಣ.

ಹರಿಭಕ್ತಿಯಂತೆ ದೇವತಾಭಕ್ತಿ ಗುರುಭಕ್ತಿಗಳೂ ತಾರಕ

★''ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ'' ॥ ೧೦೨ ॥

ಅ: ಯಾವನಿಗೆ ದೇವನಾದ ಶ್ರೀಹರಿಯಲ್ಲಿ ಪರಮ ಭಕ್ತಿಯೂ, ದೇವತೆಗಳಲ್ಲೂ ಗುರುಗಳಲ್ಲೂ ತಾರತಮ್ಯಪೂರ್ವಕವಾದ ಭಕ್ತಿಯೂ ಇರುವುದೋ ಅಂತಹ ಮಹಾತ್ಮನಿಗೆ ಮಾತ್ರವೇ ಶಾಸ್ತ್ರದಲ್ಲಿ ಹೇಳಲ್ಪಟ್ಟ(ಹಾಗೂ ಹೇಳಲ್ಪಡದಿರುವ) ವಿಷಯಗಳು ಸ್ಫುರಿಸುವವು.

ವಿ: ಮುಮುಕ್ಷುವಾದವನಿಗೆ ಹರಿಭಕ್ತಿಯಂತೆ ತಾರತಮ್ಯಕ್ರಮದಲ್ಲಿ ದೇವತಾಭಕ್ತಿ ಮತ್ತು ಗುರುಭಕ್ತಿಗಳೂ ಸಹ ಅತ್ಯವಶ್ಯವೆಂಬ ವಿಚಾರವು ಇಲ್ಲಿ ನಿರೂಪಿತವಾಗಿದೆ. ಇಲ್ಲಿ **'ದೇವೇ'** ಮತ್ತು **'ಗುರೌ'** ಎಂಬ ಶಬ್ದಗಳಿಗೆ **'ಸಾಮಾನ್ಯೇ ಏಕವಚನಂ'** ಎಂಬ ನ್ಯಾಯದಿಂದ **'ದೇವೇಷು'**, **'ಗುರುಷು'** ಎಂದು ಅರ್ಥ.

ಭಕ್ತಿಯಿಂದಲೇ ಮೋಕ್ಷ - ಮುಕ್ತಿಯಲ್ಲೂ ಭಕ್ತಿ

ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿರ್ಮೋಕ್ಷಾಯ ಕೇವಲಾ ।
ಮುಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದಸ್ವರೂಪಿಣೀ ॥ ೧೦೩ ॥

---

೧೦೧. ಅತಿಮೃತ್ಯುಂ – ಮೃತ್ಯುಮತಿಕ್ರಮ್ಯ ವರ್ತಮಾನಂ ಮೋಕ್ಷಮ್ । –(ವಾ.)
ಅತಿಮೃತ್ಯುಂ – ಮೃತ್ಯುಂ ಸಂಸಾರಂ ಅತ್ಯೇತಿ । –(ಜ)

೧೦೧. ವಿದ್ಯಯಾऽಮೃತಮಶ್ನುತೇ । –(ಈಶಾವಾಶ್ಯೋಪನಿಷತ್)

೧೦೨. ದೇವೇ ಪರಾ ಭಕ್ತಿರಿತಿ ವದತಾ ಗುರೌ ನ ತಾದೃಶೀ ಭಕ್ತಿಃ । ಯಥಾತಥೇತಿ ತು ದಾರ್ಢ್ಯಮಾತ್ರೇ ದೃಷ್ಟಾಂತ ಇತಿ ಸೂಚಿತಮ್ । –(ವಾ)

೧೦೨. ಯಥಾ – ಯೋಗ್ಯತಾನುಸಾರೇಣ ದೇವೇ – ದೇವೇಷು ಚ । ಸಾಮಾನ್ಯೇ ಏಕವಚನಮ್ । ತಥಾಶಬ್ದಃ ಸಮುಚ್ಚಯೇ । ಯಥಾ ತಥಾ ಶಬ್ದಾವಾವರ್ತನೀಯೌ । ಗುರುಷು ಚ । –(ಜ)

★ ಶ್ವೇತಾಶ್ವತರೋಪನಿಷತ್ (೬/೨೩)

ಅ: ಇತರ ಎಲ್ಲವೂ ಭಕ್ತಿಗೋಸ್ಕರ; ಭಕ್ತಿಯು ಕೇವಲ ಮೋಕ್ಷಕ್ಕೆಂದೇ ವಿಹಿತ; ಮುಕ್ತರಿಗೂ ಸಹ ಭಕ್ತಿಯು ನಿತ್ಯಾನಂದಸ್ವರೂಪವಾಗಿ ಇದ್ದೇ ಇರುವುದು.

ವಿ: ೧) ಶಾಸ್ತ್ರಗಳಲ್ಲಿ ದಾನ, ತೀರ್ಥಯಾತ್ರೆ ಮೊದಲಾದವುಗಳನ್ನು ಮೋಕ್ಷಸಾಧನ ಎಂದು ಹೇಳಿರುವುದು ಅವೆಲ್ಲ ಮೋಕ್ಷಕ್ಕೆ ಪ್ರಧಾನಸಾಧನವಾದ ಭಕ್ತಿಯನ್ನು ಹೊಂದಲು ಸಾಧನ ಎಂಬ ಅರ್ಥದಲ್ಲೇ ಹೊರತು, ಅವೇ ಸಾಕ್ಷಾತ್ ಸಾಧನ ಎಂಬ ಅರ್ಥದಲ್ಲಿ ಅಲ್ಲ; ಆದರೆ ಭಕ್ತಿಯು ಮಾತ್ರ ಮೋಕ್ಷಕ್ಕೆ ಖಚಿತಸಾಧನವೇ ಆಗಿದೆ;

೨) ಇಂತಹ ಭಕ್ತಿಯು ಜೀವರು ಮುಕ್ತರಾದ ಮೇಲೂ ಇದ್ದೇ ಇರುವುದು; ಮುಕ್ತಿಗೆ ಮುಂಚಿತವಾಗಿ ಇರುವ ಭಕ್ತಿಯು ಮುಕ್ತಿಗೆ ಸಾಧನರೂಪವಾದರೆ, ಮುಕ್ತಿಯಲ್ಲಿನ ಭಕ್ತಿಯು ಮಾತ್ರ ಮುಕ್ತರ ನಿತ್ಯಾನಂದಸ್ವರೂಪವಾಗಿದ್ದು ಸಿದ್ಧಿಯೇ ಆಗಿದೆ (ಇದರ ಬಗ್ಗೆ ವಿವರಗಳು ಶ್ಲೋ: ೧೧೫ ಮತ್ತು ೧೧೬ ರಲ್ಲಿವೆ).

ವೇದೋಕ್ತ ಭಕ್ತಿಲಕ್ಷಣ

ಜ್ಞಾನಪೂರ್ವಃ ಪರಃ ಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ ।
ಇತ್ಯಾದಿ ವೇದವಚನಂ ಸಾಧನಪ್ರವಿಧಾಯಕಮ್ ॥ ೧೦೪ ॥

ಅ: ಜ್ಞಾನಪೂರ್ವಕವೂ ತುಂಬಾ ಹೆಚ್ಚಿನದೂ, ಸುದೃಢವೂ ಆದ ಸ್ನೇಹವೇ 'ಭಕ್ತಿ' ಎನ್ನಿಸುವುದು. ಇವೇ ಮೊದಲಾದ ವೇದವಚನಗಳು ಸಾಧನವನ್ನು ತಿಳಿಸಿಕೊಡುವಂತಹವು.

---

೧೦೨. ಯಥಾ ದೇವೇ ದೇವಯೋಗ್ಯಾ ತಥಾ ಗುರೌ ಗುರುಯೋಗ್ಯಾ ಇತ್ಯರ್ಥಃ । – ಸುಧಾ

೧೦೨. ಅರ್ಥಾ – ಶಮದಮಾದಯಃ । ಮಹಾನ್ ಆತ್ಮಜ್ಞಾನಂ ಯಸ್ಯೇತಿ । –(ಜ)

೧೦೩. ಫಲಪ್ರಾಪ್ತ್ಯನಂತರಂ ಸಾಧಕತ್ವಾದ್ಭಕ್ತಿರ್ನಿವರ್ತತೇ ಕಿಮಿತಿ ಜಿಜ್ಞಾಸಾಯಾಮಾಹ । ಮುಕ್ತಾನಾಮಪೀತಿ । -(ವಾ)

೧೦೩. "ಆ ಪ್ರಾಯಣಾತ್ ತತ್ರಾಪಿ ಹಿ ದೃಷ್ಟಮ್" (೪/೧/೧೨) ಎಂಬ ಬ್ರಹ್ಮಸೂತ್ರದಲ್ಲಿ ಇದು ನಿರ್ಣೀತವಾಗಿದ್ದು, ಅದರ ಭಾಷ್ಯದಲ್ಲಿ ಇದರ ಇತರ ವಿವರಗಳು ದೊರೆಯುತ್ತವೆ.

೧೦೩. ಭಕ್ತಿಶ್ಚಾನಂತಕಾಲೀನಾ ಪರಮೇ ಬ್ರಹ್ಮಣಿ ಸ್ಫುಟಮ್ ।
ಆ ವಿಮುಕ್ತೇರ್ವಿಧಿರ್ನಿತ್ಯಂ ಸ್ವತ ಏವ ತತಃ ಪರಮ್ । - ಇತಿ ಚ ಬ್ರಾಹ್ಮಂಡೇ -(ಬ್ರಹ್ಮಸೂತ್ರಭಾಷ್ಯ)

೧೦೪. ಮಾಹಾತ್ಮ್ಯಜ್ಞಾನಪೂರ್ವಃ ಸ್ತ್ರೀಪುತ್ರಾದಿಭ್ಯಃ ಪರಃ ಶ್ರೇಷ್ಠಃ ನಿತ್ಯಃ ಸುದೃಢಃ । –(ಜ)

೧೦೪. ತಮೇವಮಿತ್ಯಾದಿ ವೇದವಾಕ್ಯಂ ಸಾಧನಪ್ರವಿಧಾಯಕಂ ಭವತೀತಿ ಶೇಷಃ । – (ಜ)

ವಿಃ 'ಮಾಹಾತ್ಮಜ್ಞಾನಪೂರ್ವಸ್ತು' (ಶ್ಲೋ.೮೬) ಎಂಬ ಭವಿಷ್ಯತ್ಪರ್ವದ ಶ್ಲೋಕವು ಈ ಶ್ರುತಿವಾಕ್ಯಕ್ಕೆ ವಿವರಣರೂಪವಾಗಿದೆ.

ಭಕ್ತರ ಹಿರಿಮೆ

ನಿಃಶೇಷಧರ್ಮಕರ್ತಾऽಪ್ಯಭಕ್ತಸ್ತೇ ನರಕೇ ಹರೇಃ ।
ಸದಾ ತಿಷ್ಠತಿ ಭಕ್ತಶ್ಚೇದ್ ಬ್ರಹ್ಮಹಾऽಪಿ ವಿಮುಚ್ಯತೇ ॥ ೧೦೫ ॥

ಅ: ''ಎಲೈ ಶ್ರೀಹರಿಯೆ! ನಿನ್ನಲ್ಲಿ ಭಕ್ತನಾಗದವನು ಸಕಲಧರ್ಮಗಳನ್ನು ತಪ್ಪದೆ ಆಚರಿಸಿದರೂ ಸಹ ನರಕದಲ್ಲೆ ಸದಾ ನೆಲೆಸುವನು; ಆದರೆ ನಿನ್ನ ಭಕ್ತನಾದವನು ಬ್ರಹ್ಮಹತ್ಯೆ ಮಾಡಿದರೂ ಸಹ ಮುಕ್ತನೇ ಆಗುವನು.''

ಧರ್ಮೋ ಭವತ್ಯಧರ್ಮೋऽಪಿ ಕೃತೋ ಭಕ್ತ್ಯೈಸ್ತವಾಚ್ಯುತ ।
ಪಾಪಂ ಭವತಿ ಧರ್ಮೋऽಪಿ ಯೋ ನ ಭಕ್ತ್ಯೈಃ ಕೃತೋ ಹರೇ ॥ ೧೦೬ ॥

ಅ: ''ಅಚ್ಯುತ ! ನಿನ್ನ ಭಕ್ತರಿಂದ ಮಾಡಲ್ಪಡುವ ಅಧರ್ಮವೂ ಧರ್ಮವಾಗುವುದು; ಶ್ರೀಹರಿ! ನಿನ್ನ ಭಕ್ತರಲ್ಲದವರಿಂದ ಆಚರಿಸಲ್ಪಡುವ ಧರ್ಮವೂ ಸಹ ಅಧರ್ಮವಾಗುವುದು''.

ವಿಃ ೧) ಭಕ್ತಿಯೇ ಶ್ರೇಷ್ಠ ಮೋಕ್ಷಸಾಧನ ಎಂಬುದನ್ನು ಸ್ಮೃತಿವಾಕ್ಯಗಳಿಂದಲೂ ಇಲ್ಲಿ ಸಮರ್ಥಿಸುತ್ತಿರುವರು.

೨) ಸಾಮಾನ್ಯವಾಗಿ ಭಕ್ತರು ಅಧರ್ಮವನ್ನಾಗಲಿ ಅಭಕ್ತರು ಧರ್ಮವನ್ನಾಗಲೀ ಆಚರಿಸುವುದಿಲ್ಲ; ಕೆಲವೊಮ್ಮೆ ಪ್ರಾರಬ್ಧವಶಾತ್ ಅಧಿಕಪುಣ್ಯಾದಿ ಕಾರಣದಿಂದ ಅಜಾಮಿಳನಂತಹ ಭಕ್ತರು ಅಧರ್ಮವನ್ನು ಆಚರಿಸಿದರೂ ಅವರು ಅದರ ಲೇಪಕ್ಕೆ ಒಳಗಾಗದೆ ಮುಕ್ತರೇ ಆಗುವರು;

೩) ಅದರಂತೆ ದುರ್ಯೋಧನಾದಿ ಅಭಕ್ತರು ಪುಂಡರೀಕಯಾಗಾದಿ ಧರ್ಮಕಾರ್ಯ–ಗಳನ್ನು ಆಚರಿಸಿದರೂ ಅವುಗಳ ಮುಖ್ಯಫಲ ಅವರಿಗೆ ದೊರಕದೆ ಕೊನೆಗೆ ಅವರು ತಮಸ್ಸನ್ನೇ ಹೊಂದುವರು ಎಂದು ಭಾವ.

೪) ಕೆಲವೊಮ್ಮೆ ಭಕ್ತರು ಅಧರ್ಮವನ್ನು ಮಾಡಿದಂತೆ ತೋರಿದರೂ ಅದು ನಿಜವಾಗಿ ಅಧರ್ಮವಾಗಿರುವುದಿಲ್ಲ; ಅದರ ಹಿನ್ನೆಲೆಯಾಗಿ ಧರ್ಮವೇ ಇರುತ್ತದೆ ಎಂದೂ; ಅದರಂತೆ ಅಭಕ್ತರು ಧರ್ಮಕಾರ್ಯಗಳನ್ನು ಮಾಡಿದಂತೆ ಕಂಡರೂ ಅದರ ಹಿನ್ನೆಲೆಯಲ್ಲಿ ವಾಸ್ತವವಾಗಿ ದ್ವೇಷವು ತುಂಬಿರುವುದರಿಂದ ಅದು ಅಧರ್ಮವೇ ಆಗಿರುತ್ತದೆ ಎಂಬ ಅರ್ಥವೂ ವಿವಕ್ಷಿತ.

೫) ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥

—ಎಂದು ಭಗವದ್ಗೀತೆಯ ಶ್ಲೋಕಗಳಲ್ಲಿ ಬಂದಿರುವಂತೆ (೯/೩೦–೩೧) ಅಧಿಕಪುಣ್ಯದ ಕಾರಣದಿಂದಾಗಿ ಒಂದುವೇಳೆ ಹರಿಯಭಕ್ತರು ಅಧರ್ಮವನ್ನು ಆಚರಿಸಿದರೂ ಅದು ಅವರಿಗೆ ಮುಕ್ತಿಗೆ ಪ್ರತಿಬಂಧಕವಾಗುವುದಿಲ್ಲ ಎಂಬ ಭಾವವೂ ಇಲ್ಲಿದೆ;

೬) ಅಧಿಕಪುಣ್ಯದಿಂದ ಹೀಗೆ ದುರಾಚಾರಿಯಾಗುವ ಸಂಭವ ದೇವಾಂಶರಾದ ಮಹಾಭಕ್ತರಿಗೇ ಹೊರತು ಸಾಮಾನ್ಯ ಭಕ್ತರಿಗಲ್ಲ; ಸಾಮಾನ್ಯ ಭಕ್ತರು ಅಧರ್ಮ ಮಾಡಿದರೆ ಅದು ಬಂಧಕವೇ ಆಗುತ್ತದೆ, ಎಂಬುದನ್ನು ಸಹ ಇಲ್ಲಿ ಗಮನಿಸಬೇಕು.

ಭಕ್ತಿಯ ಹಿರಿಮೆಗೆ ಗೀತಾವಾಕ್ಯ

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥ ೧೦೬ ॥

---

೧೦೬. ಅಚ್ಯುತ! ತವ ಭಕ್ತ್ಯೈಃ ಕೃತಃ ಅಧರ್ಮೋಽಪಿ ಅಧರ್ಮವತ್ ಪ್ರತೀಯಮಾನಃ ಬ್ರಹ್ಮಹತ್ಯಾದಿಃ ಧರ್ಮಃ ಧರ್ಮಸಾಧ್ಯಫಲಸಾಧನಂ ಭವತಿ । ನ ಭಕ್ತ್ಯೈಃ ಅಭಕ್ತ್ಯೈಃ ಭಕ್ತವಿರೋಧಿಭಿರ್ವಾ ಕೃತಃ ಧರ್ಮೋಽಪಿ ಯಜ್ಞಾದಿಃ ಪಾಪಂ ಪಾಪಫಲಸಾಧನಂ ಭವತಿ । –(ಜ)

೧೦೬. ನ ಭವತ್ಯೇವ ಪ್ರಾಯಸ್ತದ್ಭಕ್ತೋ ದುರಾಚಾರಃ । ತಥಾಪಿ ಬಹುಪುಣ್ಯೇನ ಯದಿ ಕಥಂಚಿದ್ಭವತಿ ತರ್ಹಿ ಸ ಸಾಧುರೇವ ಮಂತವ್ಯಃ । ಕುತಃ । ಕ್ಷಿಪ್ರಂ ಭವತಿ ಧರ್ಮಾತ್ಮಾ । ದೇವದೇವಾಂಶಾದಿಷ್ವೇವಂ ಚೈತದ್ಭವತಿ । ಉಕ್ತಂ ಚ ಶಾಂಡಿಲ್ಯಶಾಖಾಯಾಂ–

ನಾವಿರತೋ ದುಶ್ಚರಿತಾನ್ನಾಭಕ್ತೋ ನಾಸಮಾಹಿತಃ ।
ಸಮ್ಯಗ್ಭಕ್ತೋ ಭವೇತ್ ಕಶ್ಚಿತ್ ವಾಸುದೇವೇಽಮಲಾಶಯಃ ।
ದೇವರ್ಷಯಸ್ತದಂಶಾಶ್ಚ ಭವಂತಿ ಕ್ವಚ ಜ್ಞಾನತಃ । - ಗೀತಾಭಾಷ್ಯ ೯/೩೦

೧೦೬. ಕ್ವಚಿತ್ ಪಾಪಂ ಚ ಪುಣ್ಯಾನಾಂ ವೃದ್ಧಯೇ ಭವತಿ ಸ್ಫುಟಮ್ ।
ವೃತ್ರಹತ್ಯಾ ಯಥೇಂದ್ರಸ್ಯ ಜಾತಾ ಧರ್ಮಸ್ಯ ವೃದ್ಧಯೇ ।
ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಮ್ ।
ಪಾಪಂ ಯತ್ ಪುಣ್ಯಮೇವೈತದಸುರಾಣಾಂ ವಿಲೋಮತಃ ।
– ಎಂಬ ೨೨ ನೇ ಅಧ್ಯಾಯದಲ್ಲಿನ ಮಾತುಗಳನ್ನು ಇಲ್ಲಿ ಗಮನಿಸಬಹುದು -ಶ್ಲೋ.೩೬೦–೩೬೧

ಅ: ಪರಂತಪ! ಅರ್ಜುನ! ಈ ತೆರನಾದ ನನ್ನನ್ನು ಅನನ್ಯಭಕ್ತಿಯಿಂದ ಮಾತ್ರವೇ ಯಥಾರ್ಥವಾಗಿ ತಿಳಿಯಲು, ಕಾಣಲು, ಮತ್ತು ಪ್ರವೇಶಿಸಲು ಸಾಧ್ಯ.

ವಿ: ಭಕ್ತಿಯು ಸಾಧನೋತ್ತಮ ಎಂಬುದನ್ನು ಈ ಗೀತಾಶ್ಲೋಕದಿಂದಲೂ ಸಮರ್ಥಿಸಿರುವರು.

ದೈತ್ಯರು ಅನಾದಿ ದ್ವೇಷಿಗಳು

ಅನಾದಿದ್ವೇಷಿಣೋ ದೈತ್ಯಾ ವಿಷ್ಣೌ ದ್ವೇಷೋ ವಿವರ್ಧಿತಃ।
ತಮಸ್ಯಂಧೇ ಪಾತಯತಿ ದೈತ್ಯಾನಂತೇ ವಿನಿಶ್ಚಯಾತ್ ॥ ೧೦೮ ॥

ಅ: ದೈತ್ಯರು ಶ್ರೀಹರಿಯ ಅನಾದಿದ್ವೇಷಿಗಳು; ವಿಷ್ಣುವಿನಲ್ಲಿ ವಿಶೇಷವಾಗಿ ಹೆಚ್ಚುತ್ತಾ ಹೊಗುವ ಅಂತಹ ದ್ವೇಷವು ಕೊನೆಗೆ ಆ ದೈತ್ಯರನ್ನು ಅಂಧಂತಮಸ್ಸಿನಲ್ಲಿ ಬೀಳಿಸುವುದು.

ವಿ: ೧) ವಿಷ್ಣುದ್ವೇಷವು ಖಚಿತವಾಗಿ ತಮಸ್ಸಾಧನ ಎಂಬುದನ್ನು ಈ ಸ್ಮೃತಿವಾಕ್ಯವು ತಿಳಿಸುತ್ತದೆ.

೨) ಇಲ್ಲಿ 'ಅಂತೇ' ಎಂದರೆ ಅವರವರಿಗೆ ಯೋಗ್ಯವಾದಷ್ಟು ಹರಿದ್ವೇಷವು ಆಯಾ ದೈತ್ಯರಿಗೆ ಪೂರ್ಣವಾಗಿ ವೃದ್ಧಿಯಾದ ಮೇಲೆ ಎಂದು ಅರ್ಥ; ಬ್ರಹ್ಮದೇವರ ದಿನಪ್ರಳಯದ ಕೊನೆಗೆ ಎಂದೂ ಸಹ ಅರ್ಥ.

೩) ಜನಾರ್ದನಭಟ್ಟರು ದೈತ್ಯರ ತಮಃಪ್ರಾಪ್ತಿಯ ಕಾಲದ ಬಗ್ಗೆ ಅನೇಕ ವಿಶೇಷವಿಚಾರಗಳನ್ನು ಈ ಶ್ಲೋಕದ ವ್ಯಾಖ್ಯಾನದಲ್ಲಿ ತಿಳಿಸಿರುವರು.

ತಮಸ್ಸಿನಲ್ಲೂ ಹರಿದ್ವೇಷ

ಪೂರ್ಣದುಃಖಾತ್ಮಕೋ ದ್ವೇಷಃ ಸೋಽನಂತೋ ಹ್ಯವತಿಷ್ಠತೇ।
ಪತಿತಾನಾಂ ತಮಸ್ಯಂಧೇ ನಿಶ್ಶೇಷಸುಖವರ್ಜಿತೇ ॥ ೧೦೯ ॥

---

೧೦೭. ನ ವಿದ್ಯತೇ ಅನ್ಯಃ ವಿಷಯೋ ಯಸ್ಯಾಃ ಸಾ ಅನನ್ಯಾ।
ಯಾದೃಶೀ ತತ್ರ ಭಕ್ತಿಃ ಸ್ಯಾತ್ತಾದೃಶ್ಯನ್ಯತ್ರ ನೈವ ಚೇತ್।
ಅನನ್ಯಭಕ್ತಿಃ ಸಾ ಜ್ಞೇಯಾ ವಿಷ್ಣುವೇವ ಚ ಸಾ ಭವೇತ್। –ನ್ಯಾಯಸುಧಾ

೧೦೭. ಅನನ್ಯಯಾ ರಮಾಬ್ರಹ್ಮಾದಿಷು ಕ್ರಿಯಮಾಣಾಯಾ ಭಕ್ತೇರತಿಶಯಿತಯಾ ಭಕ್ತ್ಯಾ –(ಜ)

೧೦೭. ತತ್ತ್ವೇನ ಯಥಾವತ್ ಪರೋಕ್ಷೇಣ ಜ್ಞಾತುಮ್। ಅಪರೋಕ್ಷೇಣ ದ್ರಷ್ಟುಮ್। ಮುಕ್ತಾಃ ಪ್ರವೇಷ್ಟುಂ ಶಕ್ಯಃ। –(ಜ)

ಅ: ಸುಖರಹಿತವಾದ ಅಂಧಂತಮಸ್ಸಿನಲ್ಲಿ ಬಿದ್ದವರಿಗೆ ಪೂರ್ಣದುಃಖಾತ್ಮಕವಾದ ಶಾಶ್ವತದ್ವೇಷವು ಶ್ರೀಹರಿಯಲ್ಲಿ ಸದಾ ಇರುವುದು.

ಏ: ಮುಕ್ತರಾದವರಿಗೆ ಮುಕ್ತಿಯಲ್ಲೂ ಶ್ರೀಹರಿಭಕ್ತಿಯು ಸುಖರೂಪವಾಗಿ ನಿತ್ಯ–ವಾಗಿರುವಂತೆ, ಅಂಧಂತಮಸ್ಸಿನಲ್ಲಿ ಬಿದ್ದವರಿಗೆ ಶ್ರೀಹರಿದ್ವೇಷವೂ ಪೂರ್ಣದುಃಖರೂಪವಾಗಿ ಸದಾ ಇರುವುದು ಎಂದು ಭಾವ.

ನವವಿಧ ದ್ವೇಷಗಳು

ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ ।
ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ ॥ ೧೧೦ ॥

ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ ।
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ॥ ೧೧೧ ॥

ಅ: ಪರಮಾತ್ಮನಲ್ಲಿ ಜೀವಾಭೇದಜ್ಞಾನ; ನಿರ್ಗುಣತ್ವಜ್ಞಾನ, ಅಪೂರ್ಣಗುಣ– ಯುಕ್ತತ್ವ-ಜ್ಞಾನ, ಬ್ರಹ್ಮಾದಿಗಳೊಂದಿಗೆ ಸಾಮ್ಯಜ್ಞಾನ, ಬ್ರಹ್ಮಾದಿಗಳೇ ಹರಿಗಿಂತ ಅಧಿಕರು ಎಂಬ ಜ್ಞಾನ, ಶ್ರೀಹರಿಯ ರೂಪರೂಪಗಳಲ್ಲೂ ಗುಣಕ್ರಿಯಾದಿಗಳಲ್ಲೂ ಭೇದಜ್ಞಾನ, ಶ್ರೀಹರಿಯ ಅವತಾರಗಳಲ್ಲೂ ಹುಟ್ಟುಸಾವುಗಳನ್ನು ತಿಳಿಯುವ ಮಿಥ್ಯಾಜ್ಞಾನ, ವಿಷ್ಣುಭಕ್ತರ ದ್ವೇಷ;

---

೧೧೦. ಜೀವೇಶ್ವರಾಭೇದಃ । ತೇನ ತಜ್ಜ್ಞಾನಮುಪಲಕ್ಷತೇ । ಅಗ್ರೇಽಪಿ ಜ್ಞಾನೋಪಲಕ್ಷಕತಾ ಜ್ಞೇಯಾ । -(ಜ)

೧೧೦. ತದ್ಗತಃ – ತದವಯಗತಃ ತದವತಾರಗತೋ ವಾ ಭೇದಃ । –(ಜ)

೧೧೧. ಪ್ರಾದುರ್ಭಾವವಿಪರ್ಯಾಸಃ – ಪ್ರಾದುರ್ಭಾವೇಷು ಅವತಾರೇಷು ವಿಪರ್ಯಾಸಃ । ಉತ್ಪನ್ನತ್ವ ಮೃತತ್ವ ಪ್ರಾಕೃತತ್ವಾದಿ ಭ್ರಮ ಇತ್ಯರ್ಥಃ । -(ವಾ)

ಜೀವಾಭೇದ ಇತ್ಯಾರಭ್ಯ ಪ್ರಾದುರ್ಭಾವವಿಪರ್ಯಾಸ ಇತ್ಯಂತಂ ಅಭೇದಾದಿ ಪದೈಸ್ತತ್ತದ್ವಿಷಯಕಂ ಜ್ಞಾನಮುಪಲಕ್ಷ್ಯತೇ । –(ವಾ)

೧೧೧. ಭಕ್ತಿದೋಷೋ ಹ್ಯಸೌ ಯನ್ನ ತದ್ಭಕ್ತೇಷ್ವಪಿ ಭಕ್ತಿಮಾನ್ । -(ಅನುವ್ಯಾಖ್ಯಾನ)

೧೧೧. ಪ್ರಾದುರ್ಭಾವವಿಪರ್ಯಾಸಃ – ಅವತಾರಸ್ಯ ಅನವತಾರತ್ವಜ್ಞಾನಮ್ । ಅನವತಾರಸ್ಯ ಅವತಾರತ್ವಜ್ಞಾನಮ್ । ತದ್ಭಕ್ತಾನಾಂ ಹರಿಭಕ್ತಾನಾಂ ದ್ವೇಷೋ ವಿರೋಧ ಏವ । ದ್ವೇಷನಿಂದನಯೋಃ ಸ್ವರೂಪೇಣೈವ ದ್ವೇಷತ್ವಂ ನ ತ್ವೇತಜ್ಜ್ಞಾನಸ್ಯ ಇತಿ ಏವಕಾರೇಣ ಜ್ಞಾಪಯತಿ । –(ಜ)

೧೧೧. ತಸ್ಯ ವಿಷ್ಣೋಃ ಸರ್ವೋತ್ತಮತ್ವಗುಣಪೂರ್ಣತ್ವಾದಿಪ್ರತಿಪಾದಕಪ್ರಮಾಣಸ್ಯ ನಿಂದಾ । ಕಲ್ಪಿತವಿಷಯತ್ವ-ಕಥನಮ್ । –(ಜ)

ವಿಷ್ಣುಸರ್ವೋತ್ತಮತ್ವಾದಿ ಪ್ರಮೇಯಗಳನ್ನು ತಿಳಿಸುವ ವೇದಾದಿಪ್ರಮಾಣಗಳ ನಿಂದನೆ, ಎಂಬ ಈ ಒಂಭತ್ತು ಸಹ 'ದ್ವೇಷಗಳು' ಎಂದು ಜ್ಞಾನಿಗಳ ಮತ.

ವಿ: ೧) ಪರಮಾತ್ಮನನ್ನು ಜೀವರಿಂದ ಅಭಿನ್ನನೆಂದು ತಿಳಿಯುವುದು, ನಿರ್ಗುಣ ಎಂದು ತಿಳಿಯುವುದು, ಪೂರ್ಣಗುಣನಲ್ಲ (ಗುಣಪೂರ್ಣನಲ್ಲ) ಎಂದು ತಿಳಿಯುವುದು, ಅವನಿಂದ ಭಿನ್ನರಾದ ಬ್ರಹ್ಮರುದ್ರಾದಿಗಳನ್ನು ಅವನಿಗೆ ಸಮರೆಂದು ಅಥವಾ ಅಧಿಕರೆಂದು ತಿಳಿಯುವುದು, ಅವನಿಗೂ ಅವನ ರೂಪಗುಣಕ್ರಿಯಾಅವಯವಾದಿಗಳಿಗೆ ಭೇದವನ್ನು ತಿಳಿಯುವುದು, ಅವನ ಅವತಾರಗಳನ್ನು ಹುಟ್ಟು ಮೊದಲಾದವುಗಳನ್ನು ಹೊಂದಿದ ಪ್ರಾಕೃತರೂಪಗಳೆಂದಾಗಲೀ ಅಥವಾ ಅವತಾರಗಳಾದ ರಾಮ, ಕೃಷ್ಣಾದಿಗಳನ್ನು ಅವತಾರವಲ್ಲವೆಂದಾಗಲೀ, ಅವತಾರಗಳಲ್ಲದ ಪೃಥು, ಬಲರಾಮ ಮೊದಲಾದವರನ್ನು ಅವತಾರಗಳೆಂದಾಗಲೀ ತಪ್ಪಾಗಿ ತಿಳಿಯುವುದು, ಅವನ ಭಕ್ತರಾದ ವೈಷ್ಣವರನ್ನು ವಿರೋಧಿಸುವುದು ಮತ್ತು ಅವನ ಸರ್ವೋತ್ತಮತ್ವಾದಿಗಳನ್ನು ಪ್ರತಿಪಾದಿಸುವ ವೇದಾದಿ ಸಚ್ಛಾಸ್ತ್ರಗಳನ್ನು ಅಪ್ರಮಾಣ (ಕಲ್ಪಿತ, ಅತತ್ತ್ವಾವೇದಕ) ಮೊದಲಾಗಿ ನಿಂದಿಸುವುದು ಸಹ 'ದ್ವೇಷ'ಗಳೆನ್ನಿಸುತ್ತವೆ.

೨) ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ ಸಖ್ಯ ಮತ್ತು ಆತ್ಮನಿವೇದನ ಎಂಬವು 'ನವವಿಧಭಕ್ತಿ'ಗಳಾಗಿರುವಂತೆ, ಇವು ನವವಿಧದ್ವೇಷಗಳಾಗಿವೆ ಎಂದು ತಿಳಿಯಬೇಕು.

ನಿರ್ಮಲಭಕ್ತಿಯ ಹಿರಿಮೆ

ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ ।
ಅನಾದಿಭಕ್ತಿರ್ದೇವಾನಾಂ ಕ್ರಮಾದ್ವೃದ್ಧಿಂ ಗತೈವ ಸಾ ॥ ೧೧೨ ॥

ಅಪರೋಕ್ಷದೃಶೇರ್ಹೇತುರ್ಮುಕ್ತಿಹೇತುಶ್ಚ ಸಾ ಪುನಃ ।
ಸೈವಾನಂದಸ್ವರೂಪೇಣ ನಿತ್ಯಾ ಮುಕ್ತೇಷು ತಿಷ್ಠತಿ ॥ ೧೧೩ ॥

---

೧೧೧. ಮತಾಃ ಸಂಮತಾಃ ಪ್ರಾಮಾಣಿಕಾನಾಮಿತ್ಯರ್ಥಃ । –(ಜ)

೧೧೧. ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ । – ಭಾಗವತ

೧೧೨. ಅಮಲಾ ಭಕ್ತಿಶ್ಚತತ್ಸಾಧನಮ್ । –(ಶ್ರೀವ್ಯಾಸರಾಜರು)

ಅ: ಈ ನವವಿಧದ್ವೇಷಗಳಿಂದ ರಹಿತವಾದ ಭಕ್ತಿಯೇ ನಿಜವಾದ 'ಭಕ್ತಿ' ಎಂಬುದು ನಿಶ್ಚಿತ; ದೇವತೆಗಳಿಗೆ(ಸಾತ್ವಿಕಚೇತನರಿಗೆ) ಇಂತಹ ಭಕ್ತಿಯು ಅನಾದಿಕಾಲದಿಂದಲೂ ಇರುತ್ತದೆ; ಅದು ಕ್ರಮವಾಗಿ ಹೆಚ್ಚುತ್ತಾ ಅಪರೋಕ್ಷಜ್ಞಾನಕ್ಕೂ, ಅನಂತರ ಇನ್ನೂ ಹೆಚ್ಚಿ ಮುಕ್ತಿಗೂ ಕಾರಣವಾಗುವುದು; ಮುಕ್ತರಲ್ಲಿ ಆ ಭಕ್ತಿಯು ಆನಂದರೂಪದಿಂದ ಸದಾ ಇರುವುದು.

ಎ: ಸಾತ್ವಿಕಜೀವರಿಗೆ ಭಕ್ತಿಯು ಸ್ವರೂಪಭೂತವಾದ್ದರಿಂದ ಅನಾದಿಕಾಲದಿಂದಲೂ ಇದ್ದೇ ಇರುವುದು; ಅದು ಸಂಸಾರದಲ್ಲಿ ಯೋಗ್ಯಸಾಧನಗಳಿಂದ ಅಭಿವೃದ್ಧಿ ಹೊದುತ್ತಾ ಕೊನೆಗೆ ಅಪರೋಕ್ಷಜ್ಞಾನಕ್ಕೆ ಕಾರಣವಾಗುತ್ತದೆ; ಅಪರೋಕ್ಷದ ಅನಂತರದ ಸಾಧನಗಳಿಂದ ಅದು ಇನ್ನೂ ಹೆಚ್ಚಿ ಮುಕ್ತಿಗೆ ಸಾಧನವಾಗುತ್ತದೆ; ಮುಕ್ತಿಯಲ್ಲೂ ಭಕ್ತಿಯು ಪೂರ್ಣಪ್ರಮಾಣದಲ್ಲಿ ಇದ್ದೇ ಇರುತ್ತದೆ. ಆದರೆ ಅಲ್ಲಿ ಅದು ಸಾಧನರೂಪವಾಗಿರದೆ ಫಲರೂಪವಾಗಿರುವುದು ಎಂದು ಭಾವ.

ಭಕ್ತಿಯು ಸ್ವಭಾವದ ಗುಣ

ಯಥಾ ಶೌಕ್ಲ್ಯಾದಿಕಂ ರೂಪಂ ಗೋರ್ಭವತ್ಯೇವ ಸರ್ವದಾ ।
ಸುಖಜ್ಞಾನಾದಿಕಂ ರೂಪಮೇವಂ ಭಕ್ತೇರ್ನ ಚಾನ್ಯಥಾ ॥ ೧೧೪ ॥

---

೧೧೩. ಭಕ್ತ್ಯಾ ಜ್ಞಾನಂ ತತೋ ಭಕ್ತಿಸ್ತತೋ ದೃಷ್ಟಿಸ್ತತಶ್ಚ ಸಾ ।
ತತೋ ಮುಕ್ತಿಸ್ತತೋ ಭಕ್ತಿಃ ಸೈವ ಸ್ಯಾತ್ ಸುಖರೂಪಿಣೀ ॥ -(ಅನುವ್ಯಾಖ್ಯಾನ ೩/೪/೪೧)

೧೧೩. ಭಕ್ತೇರಪಿ ಜೀವಸ್ವರೂಪತ್ವಾತ್ ಆನಂದಜ್ಞಾನಾದೀನಾಮಪಿ ಜೀವಸ್ವರೂಪತ್ವಾತ್ ಸೈವಾನಂದ-ಸ್ವರೂಪೇಣೇತ್ಯುಕ್ತಮ್ । -(ಜ)

೧೧೪. ಯಥಾ ಸರ್ವದಾ ವಿದ್ಯಮಾನಂ ಶೌಕ್ಲ್ಯಾದಿಕಂ ಗೋಃ ಗೋಪಿಂಡಸ್ಯ ರೂಪಂ ಸ್ವರೂಪಂ ಯಾವದ್ವಸ್ತು-ವಿದ್ಯಮಾನತ್ವೇನ ಸವಿಶೇಷಾಭಿನ್ನತ್ವಾತ್ । ಏವಂ ಮುಕ್ತೌ ಆನಂದಜ್ಞಾನಭಕ್ತ್ಯಾದೀನಾಂ ಜೀವೇನ ಸಹ ಅನ್ಯೋನ್ಯಂ ಚ ಸವಿಶೇಷಾಭಿನ್ನತ್ವಾತ್ ಭಕ್ತೇರಪ್ಯಾನಂದರೂಪತ್ವಮಿತಿ ಭಾವಃ । ಅನ್ಯಥಾ ಕೇವಲಮತ್ಯಂತಾಭೇದೇನ ನ ಇತ್ಯರ್ಥಃ । ತಥಾಸತಿ ಅಪರ್ಯಾಯಶಬ್ದವಾಚ್ಯತ್ವಂ ನ ಸ್ಯಾತ್ । ಅತ್ಯಂತಾಭೇದೇ ಹಿ ಘಟಕರೀಕಕಲಶಾದಿಶಬ್ದೇಷು ಪರ್ಯಾಯೇಣೈವ ವಾಚ್ಯತಾ । ನ ತು ಸಹಪ್ರಯೋಗಃ । ಪೌನರುಕ್ತ್ಯಪ್ರಸಂಗಾತ್ । ಜ್ಞಾನಾನಂದಭಕ್ತ್ಯಾದಿಶಬ್ದಾಸ್ತು ನ ಪರ್ಯಾಯೇಣ ಪ್ರಯುಜ್ಯಂತೇ । ಅಪಿ ತು ಸಹೈವ ಪ್ರಯುಜ್ಯಂತೇ । ಇದಂ ಚ ಅಪರ್ಯಾಯಶಬ್ದವಾಚ್ಯತ್ವಂ ಭಿನ್ನೇಷು ಘಟಪಟಾದಿಷು ಭಿನ್ನಾಭಿನ್ನೇಷು ಮೃದ್ಘಟಾದಿಷು ಚ ಭೇದೇನೈವ ನಿರ್ವೋಢುಂ ಶಕ್ಯತೇ । ಭೇದರಹಿತತಯಾ ಅಭಿನ್ನೇಷು ಸ್ವರೂಪಭೂತಜ್ಞಾನಾನಂದಾದಿಷು ಮತ್ಸ್ಯಕೂರ್ಮಾದ್ಯವತಾರೇಷು ಭಗವತೋ ಹಸ್ತಪಾದಾದಿಷು ಚ ನ ತಥಾ । ಕಿಂತು ಭೇದಪ್ರತಿನಿಧಿತ್ವಾತ್ ಏಕಸತ್ವೇಽಪ್ಯರನಾಶಾಖ್ಯಭೇದಾಸಾಧಾರಣಕಾರ್ಯಂ ವಿನಾ ತದಿತರ ಸಕಲಭೇದಕಾರ್ಯಕಾರಿಣಾ ವಿಶೇಷೇಣೈವ ಸರ್ವತ್ರ ನಿರ್ವಾಹ್ಯಮಿತಿ ಜ್ಞೇಯಮ್ । -(ವಾ)

ಅ: ಶುಕ್ಲತ್ವ ಮೊದಲಾದವುಗಳು ಗೋವಿಗೆ ಹೇಗೆ ಸರ್ವದಾ ಅದರ ಸ್ವರೂಪವೇ ಆಗಿವೆಯೋ ಹಾಗೆ ಸುಖ, ಜ್ಞಾನಾದಿಗಳು ಸರ್ವದಾ ಭಕ್ತಿಯ ಸ್ವರೂಪವೇ ಆಗಿವೆ; ಬೇರೆ ತೆರನಾಗಿ ಅಲ್ಲ.

ವಿ: ಗೋವಿಗೆ ಶುಕ್ಲತ್ವಾದಿಗಳು ಅದು ಇರುವವರೆಗೂ ಇರುವ ಯಾವದ್ದ್ರವ್ಯಭಾವಿ–ಗುಣಗಳಾಗಿರುವುದರಿಂದ ಅವು ಗೋವಿನೊಂದಿಗೆ ಸವಿಶೇಷಾಭಿನ್ನವಾಗಿರುವಂತೆ ಮುಕ್ತಿಯಲ್ಲಿ ಯಾವದ್ದ್ರವ್ಯಭಾವಿಯಾಗಿರುವ ಭಕ್ತಿ ಸುಖ ಜ್ಞಾನಾದಿಗಳು ಸಹ ಅನ್ಯೋನ್ಯವಾಗಿಯೂ ಜೀವ–ನಿಂದಲೂ ಸವಿಶೇಷಾಭಿನ್ನವಾಗಿದೆ; ಆದ್ದರಿಂದ ಭಕ್ತಿಯು ಆನಂದರೂಪವೆಂಬುದು ಯುಕ್ತವಾಗುತ್ತದೆ ಎಂದು ಭಾವ.

ಭಕ್ತಿಯಿಂದಲೇ ಹರಿತುಷ್ಟಿ – ಭಕ್ತಿಯಲ್ಲೂ ತಾರತಮ್ಯ

ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ ।
ಸ ಏವ ಮುಕ್ತಿದಾತಾ ಚ ಭಕ್ತಿಸ್ತತ್ರೈವ ಕಾರಣಮ್ ॥ ೧೧೫ ॥

ಬ್ರಹ್ಮಾದೀನಾಂ ಚ ಮುಕ್ತಾನಾಂ ತಾರತಮ್ಯೇ ತು ಕಾರಣಮ್ ।
ತಾರತಮ್ಯಸ್ಥಿತಾऽನಾದಿರ್ನಿತ್ಯಾ ಭಕ್ತಿರ್ನ ಚೇತರತ್ ॥ ೧೧೬ ॥

ಅ: ವಿಷ್ಣುವು ಪ್ರಸನ್ನನಾಗುವುದು ಭಕ್ತಿಯಿಂದಲೇ ಹೊರತು ಬೇರೆ ಯಾವುದರಿಂದಲೂ ಅಲ್ಲ; ಅವನೇ ಮುಕ್ತಿದಾತನು; ಮತ್ತು ಅವನಲ್ಲಿ ಮಾಡುವ ಭಕ್ತಿಯೇ ಮುಕ್ತಿಗೆ ಮುಖ್ಯಸಾಧನ.

ಈ ಭಕ್ತಿಯು ಬ್ರಹ್ಮಾದಿಗಳ ಮತ್ತು ಮುಕ್ತರ ತಾರತಮ್ಯಕ್ಕೂ ಕಾರಣವಾಗಿದೆ; ಇದು ತಾರತಮ್ಯಕ್ರಮದಲ್ಲಿ ಇದ್ದು, ಅನಾದಿಯೂ ನಿತ್ಯವೂ ಆಗಿದೆ; ತಾರತಮ್ಯಕ್ಕೆ ಕಾರಣವಾದುದು ಇಂತಹ ಭಕ್ತಿಯೇ ಹೊರತು ಇತರ ಯಾವುದೂ ಅಲ್ಲ.

ವಿ: ೧) 'ಭಗವತ್ಪ್ರಸಾದವೇ ಮುಕ್ತಿಗೆ ಸಾಧನ'ವೆಂದು ಶಾಸ್ತ್ರಗಳು ಸಾರಿರುವುದರಿಂದ, ಭಕ್ತಿಯಿಂದಲೇ ಮುಕ್ತಿ ಎಂಬುದು ಹೇಗೆ ಕೂಡುತ್ತದೆ ಎಂಬುದಕ್ಕೆ ಇದು ಉತ್ತರವಾಗಿದೆ.

---

೧೧೫. ಭಕ್ತ್ಯೈವ ಮುಚ್ಯತೇ ಇತ್ಯಯುಕ್ತಂ ಮುಕ್ತೇರ್ಭಗವತ್ಪ್ರಸಾದೈಕಸಾಧ್ಯತ್ವಾತ್ । ಇತಿ ಚೇತ್ । ಸತ್ಯಮ್ । ಭಗವತ್ತುಷ್ಟಿಶ್ಚತಯೈವೇತ್ಯಾಹ । ಭಕ್ತ್ಯೈವೇತಿ । -(ವಾ)

೧೧೬. ತಾರತಮ್ಯೇ ಚ ಸೈವ ಪ್ರಯೋಜಿಕಾ ಇತ್ಯಾಹ । ಬ್ರಹ್ಮಾದೀನಾಮಿತಿ । -(ಜ)

೧೧೬. ಇತರತ್ ಕರ್ಮಾದಿ ನ ತಾರತಮ್ಯಕಾರಣಮಿತ್ಯರ್ಥಃ । -(ಜ)

ಭಗವತ್ಪ್ರಸಾದವೇ ಮೋಕ್ಷಸಾಧನವಾಗಿದ್ದರೂ ಭಗವಂತನು ಪ್ರಸನ್ನನಾಗುವುದು ಇಂತಹ ನಿರ್ಮಲ ಭಕ್ತಿಗೇ. ಆದ್ದರಿಂದ 'ಭಕ್ತಿಯೇ ಪ್ರಮುಖ ಮುಕ್ತಿಸಾಧನ' ಎಂಬುದಕ್ಕೆ ವಿರೋಧವಿಲ್ಲ ಎಂದು ಭಾವ.

೨) ಮುಕ್ತಿ ಕೊಡುವವನು ಶ್ರೀಹರಿಯಾದ್ದರಿಂದ ಅವನಲ್ಲೇ ಪರಮಭಕ್ತಿಯನ್ನು ಮಾಡಬೇಕು ಎಂದು ಭಾವ.

೩) ದೇವತಾತಾರತಮ್ಯಕ್ಕೆ ಮುಖ್ಯಕಾರಣವಾಗಿರುವ ಧರ್ಮವು 'ಭಕ್ತಿ'ಯೇ ಆಗಿದೆ. ಬ್ರಹ್ಮವಾಯುಗಳು ಜೀವೋತ್ತಮರಾಗಿರಲು ಅವರು ಇತರ ಯಾವುದೇ ಜೀವರಿಗಿಂತಲೂ ಹೆಚ್ಚಿನ ಭಕ್ತಿಯನ್ನು ಶ್ರೀಹರಿಯಲ್ಲಿ ಹೊಂದಿರುವುದೇ ಸಾಕ್ಷಿ; ಅನಂತರದ ಭಕ್ತರು ಸರಸ್ವತಿ–ಭಾರತಿಯರಾದ್ದರಿಂದ ತಾರತಮ್ಯದಲ್ಲಿ ಅವರ ಸ್ಥಾನ ಅನಂತರದ್ದು; ಸಕಲ ಶೇಷರುದ್ರರ ಭಕ್ತಿ ಅವರ ಭಕ್ತಿಗಿಂತ ಕಡಿಮೆಯಾದ್ದರಿಂದ ಅವರು ತಾರತಮ್ಯದಲ್ಲಿ ಅವರಿಗಿಂತಲೂ ಕಡಿಮೆ; ಇತ್ಯಾದಿಯಾಗಿ ತಿಳಿಯಬೇಕು ಎಂದು ಭಾವ. ಭಕ್ತಿಗೆ ತಕ್ಕಂತೆ ಕರ್ಮಾದಿ ಇತರ ಸಾಧನಗಳೂ ತಾರತಮ್ಯಕ್ಕೆ ಜ್ಞಾಪಕವಾದರೂ, ಭಕ್ತಿಯ ಸ್ಥಾನವೇ ಪ್ರಧಾನ ಎಂದರ್ಥ.

೪) ತಾರತಮ್ಯಕ್ಕೆ ಕಾರಣವಾಗಿರುವ ಭಕ್ತಿಯು ಆಯಾ ಜೀವರಿಗೆ ಅನಾದಿಯೂ ನಿತ್ಯವೂ ಆಗಿರುವುದರಿಂದ ತಾರತಮ್ಯವು ಸಹ ಅನಾದಿ ಮತ್ತು ನಿತ್ಯ ಎಂದು ಭಾವ.

ದ್ವೇಷದಲ್ಲೂ ಬಹುಬಗೆ

ಮಾನುಷೇಷ್ವಧಮಾಃ ಕಿಂಚಿದ್ ದ್ವೇಷಯುಕ್ತಾಃ ಸದಾ ಹರೌ ।
ದುಃಖಿನಿಷ್ಠಾಸ್ತತಸ್ತೇऽಪಿ ನಿತ್ಯಮೇವ ನ ಸಂಶಯಃ ॥ ೧೧೭ ॥

ಅ: ಮನುಷ್ಯರಲ್ಲಿ ಅಧಮರಾದವರು ಶ್ರೀಹರಿಯಲ್ಲಿ ಸದಾ ಸ್ವಲ್ಪವಾದರೂ ದ್ವೇಷವನ್ನು ಹೊಂದಿಯೇ ಇರುವರು; ಆದ್ದರಿಂದ ಅವರೆಲ್ಲ ದುಃಖಿಗಳೇ ಆಗಿರುವರು; ಸಂಶಯವಿಲ್ಲ.

ವಿ: ಸಾತ್ವಿಕರಿಗೆ ಹರಿಭಕ್ತಿಯು ಮೂಲಭೂತಲಕ್ಷಣವಾಗಿರುವಂತೆ, ತಾಮಸರಿಗೆ ಹರಿದ್ವೇಷವು ಮೂಲಭೂತಲಕ್ಷಣವಾಗಿದೆ. ಸಾತ್ವಿಕರಲ್ಲಿ ಬ್ರಹ್ಮದೇವರಿಗೆ ಪರಮಭಕ್ತಿಯಿದ್ದು ಇತರರಿಗೆ ಸ್ವಲ್ಪವಾದರೂ ಭಕ್ತಿಯಿರುವಂತೆ, ತಾಮಸರಲ್ಲಿ ಕಲಿಯದು ಪರಮದ್ವೇಷವಾಗಿದ್ದು ಇತರರಿಗೆ ಸ್ವಲ್ಪವಾದರೂ ದ್ವೇಷ ಇದ್ದೇ ಇರುವುದು; ತಾಮಸರ ದ್ವೇಷ ನಿತ್ಯವಾದ್ದರಿಂದ ಅವರಿಗೆಂದೂ ಸಹಜಭಕ್ತಿಗೆ ಅವಕಾಶವೇ ಇಲ್ಲ; ಆದ್ದರಿಂದ ಅವರಿಗೆಂದೂ ಸುಖಕ್ಕೆ ಅವಕಾಶವೇ ಇಲ್ಲ; ಅವರಿಗೆ ಬರೀ ದುಃಖಮಾತ್ರ ಎಂದು ಭಾವ.

---

೧೧೭. ಕಿಂಚಿತ್ – ಕಲ್ಯಾದಪೇಕ್ಷಯಾ । ಸದೇತ್ಯನೇನ ಮಧ್ಯೇ ಮಧ್ಯೇ ಭಕ್ತೇಃ ಕದಾऽಪಿ ನಾವಕಾಶ ಇತಿ ಸೂಚಯತಿ । ತೇನ ಮಧ್ಯಮಜೀವೇಭ್ಯೋ ವೈಲಕ್ಷಣ್ಯಂ ಸಿದ್ಧಮಿತಿ ಭಾವಃ । –(ವಾ)

ಭಕ್ತಿಯ ಪ್ರಭೇದಗಳು

ಮಧ್ಯಮಾ ಮಿಶ್ರಭೂತತ್ವಾನ್ನಿತ್ಯಂ ಮಿಶ್ರಫಲಾಃ ಸ್ಮೃತಾಃ ।
ಕಿಂಚಿದ್ಭಕ್ತಿಯುತಾ ನಿತ್ಯಮುತ್ತಮಾಸ್ತೇನ ಮೋಕ್ಷಿಣಃ ॥ ೧೧೮ ॥

ಬ್ರಹ್ಮಣಃ ಪರಮಾ ಭಕ್ತಿಃ ಸರ್ವೇಭ್ಯಃ ಪರಮಸ್ತತಃ ।
ಇತ್ಯಾದೀನಿ ಚ ವಾಕ್ಯಾನಿ ಪುರಾಣೇಷು ಪೃಥಕ್ ಪೃಥಕ್ ॥ ೧೧೯ ॥

ಅ: ಮನುಷ್ಯಮಧ್ಯಮರು(ರಾಜಸರು) ವಿಷ್ಣುಸರ್ವೋತ್ತಮತ್ವಾದಿ ತತ್ತ್ವಗಳಲ್ಲಿ ಸದಾ ಸಂದೇಹಯುಕ್ತರಾದ ಕಾರಣದಿಂದಾಗಿ ಅವರು ಸುಖದುಃಖಮಿಶ್ರಿತವಾದ ಫಲವನ್ನೇ ಹೊಂದುವರು; ಮುಕ್ತಿಯೋಗ್ಯರಾದ ಮನುಷ್ಯೋತ್ತಮರು (ಸಾತ್ವಿಕರು) ಮಾತ್ರವೇ ಶ್ರೀಹರಿಯಲ್ಲಿ ಸದಾ ಸ್ವಲ್ಪವಾದರೂ ಭಕ್ತಿಯನ್ನು ಹೊಂದಿರುವವರಾಗಿದ್ದು ಮೋಕ್ಷ ಹೊಂದುವವರಾಗಿರುವವರು. ಬ್ರಹ್ಮದೇವರ ಭಕ್ತಿಯು ಮಾತ್ರ ಇತರ ಸಕಲ ಜೀವರಿಗಿಂತಲೂ ಸದಾ ಉತ್ಕೃಷ್ಟವಾಗಿರುವುದು ಇವೇ ಮೊದಲಾದ ವಾಕ್ಯಗಳು ಪುರಾಣಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬಂದಿವೆ.

ವಿ: ೧) ರಾಜಸರದು ಮಿಶ್ರಫಲವಾಗಿರಲು ಅವರ ಜ್ಞಾನವು ಸದಾ ಸಂದೇಹಯುಕ್ತವಾಗಿರುವುದೇ ಕಾರಣ; ಎಂದು ಭಾವ. ಇಲ್ಲಿ 'ಮಿಶ್ರಭೂತತ್ವ' ಎಂದರೆ 'ಸಂದೇಹ ಜ್ಞಾನ' ಎಂದು ಅರ್ಥವೇ ಹೊರತು ದ್ವೇಷಭಕ್ತಿಗಳ ಮಿಶ್ರಣ ಎಂದು ಅರ್ಥವಲ್ಲ.

---

೧೧೯. ಉದಾಹೃತವಾಕ್ಯಾನೇವ ಆದಿಭೂತಾನಿ ಏಷಾಂ ತಾನಿ ಏವಮಾದೀನ್ಯನ್ಯಾನಿ ಚ ಪುರಾಣೇಷು ಪೃಥಕ್ ಪೃಥಕ್ ಸಂತಿ। -(ಜ)

೧೧೯. ಮಿಶ್ರಭೂತತ್ವಾತ್ ವಿಷ್ಣೋರುತ್ಕರ್ಷೇ ಸಂದೇಹವತ್ತ್ವಾತ್ ಸಂದೇಹಸ್ಯ ಕೋಟಿದ್ವಯತ್ವೇನ ಮಿಶ್ರತ್ವಮ್ । ಯದ್ವಾ ಮಾಹಾತ್ಮ್ಯಜ್ಞಾನೇ ಸಂದೇಹವತ್ತ್ವೇನ ಭಕ್ತೇರ್ಮಿಶ್ರತ್ವಮ್ । ತದ್ವತ್ತ್ವೇನ ಮಿಶ್ರಭೂತತ್ವಮ್ । ಅನ್ಯಾಧಿಕ್ಯಸ್ಯ ಅಭಾವಜ್ಞಾನಸಹಿತ ವಿಷ್ಣೋಃ ಸರ್ವಾತ್ಮನಾSSಧಿಕ್ಯಜ್ಞಾನೇ ಸಂದೇಹತ್ವೇನ ವಾ ಮಿಶ್ರಭೂತತ್ವಮ್ । ನ ತು ದ್ವೇಷಭಕ್ತಿಮಿಶ್ರತ್ವಮ್ । ಅಜ್ಞಸ್ಯ ರಾಜಸತಾಮಸಸ್ಯಾಪಿ ದ್ವೇಷಹೀನತೋಕ್ತೇಃ। -(ಜ)

ತ್ರೈವಿದ್ಯಮಾತ್ರಾ ವಿಷ್ಣೋರ್ಯೇ ಸರ್ವಾಧಿಕ್ಯೇ ಸಸಂಶಯಾಃ ।
ಅನ್ಯಾಧಿಕ್ಯಂ ನ ಮನ್ಯಂತೇ ಶ್ರೀಶಾದ್ರಾಜಸರಾಜಸಾಃ ।
ಅಜ್ಞಾ ವಿಷ್ಣೋರ್ದ್ವೇಷಹೀನಾ ಸರ್ವೇ ರಾಜಸತಾಮಸಾಃ । -(ಗೀತಾತಾತ್ಪರ್ಯ)

೧೧೯. ಮಿಶ್ರಫಲಾಃ—ಸ್ವರ್ಗನರಕಭೂಪ್ರಾಪ್ತಿರೂಪಫಲಾಃ।

೧೧೯. ತ್ರಿದಿವನಿರಯಭೂಗೋಚರಾನ್ ನಿತ್ಯಬದ್ಧಾನ್ । -(ವಾಯುಸ್ತುತಿ)

೨) 'ಮಿಶ್ರಫಲ' ಎಂದರೆ 'ಸ್ವರ್ಗ ನರಕ ಭೂಪ್ರಾಪ್ತಿ'ರೂಪ ಫಲ ಎಂದರ್ಥ.

ದ್ವಾತ್ರಿಂಶಲ್ಲಕ್ಷಣಗಳು

ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧಪರಿಮಂಡಲಃ ।
ಸಪ್ತಪಾದಶ್ಚತುರ್ಹಸ್ತೋ ದ್ವಾತ್ರಿಂಶಲ್ಲಕ್ಷಣೈರ್ಯುತಃ ॥ ೧೨೦ ॥

ಗುರುಲಕ್ಷಣ - ಬ್ರಹ್ಮದೇವರೇ ಮುಖ್ಯಗುರು

ಅಸಂಶಯಃ ಸಂಶಯಚ್ಛಿದ್ ಗುರುರುಕ್ತೋ ಮನೀಷಿಭಿಃ ।
ತಸ್ಮಾದ್ಬ್ರಹ್ಮಾ ಗುರುರ್ಮುಖ್ಯಃ ಸರ್ವೇಷಾಮೇವ ಸರ್ವದಾ ।
ಅನ್ಯೇಽಪಿ ಸ್ವಾತ್ಮನೋ ಮುಖ್ಯಾಃ ಕ್ರಮಾದ್ಗುರವ ಈರಿತಾಃ ॥ ೧೨೧ ॥

ಅ: ತೊಂಬತ್ತಾರು ಅಂಗುಲದಷ್ಟು ಎತ್ತರವನ್ನೂ ನಲವತ್ತೆಂಟು ಅಂಗುಲದಷ್ಟು ಉದರದ ಸುತ್ತಳತೆಯನ್ನೂ ಏಳು ಹೆಜ್ಜೆಗಳಷ್ಟು ಎತ್ತರವನ್ನೂ ಮತ್ತು ಮೂವತ್ತೆರಡು ಲಕ್ಷಣಗಳನ್ನೂ ಹೊಂದಿರುವವನೂ, ತತ್ತ್ವದಲ್ಲಿ ಯಾವುದೇರೀತಿಯ ಸಂಶಯರಹಿತನೂ, ಜಿಜ್ಞಾಸುಗಳ ಸಂಶಯವನ್ನು ಪರಿಹರಿಸಬಲ್ಲವನೂ ಆದವನು 'ಗುರು' ಎಂಬುದಾಗಿ ಜ್ಞಾನಿಗಳು ಹೇಳುವರು; ಆದ್ದರಿಂದ (ಇಂತಹ ಸಕಲಲಕ್ಷಣಗಳನ್ನು ಪೂರ್ಣವಾಗಿ ಹೊಂದಿರುವ)ಬ್ರಹ್ಮದೇವರೇ ಸರ್ವದಾ ಸರ್ವರಿಗೂ ಮುಖ್ಯ 'ಗುರು'ಗಳಾಗಿರುವರು. ಅದರಂತೆ ತನಗಿಂತ (ಜ್ಞಾನಭಕ್ತ್ಯಾದಿ-ಗುಣಗಳಲ್ಲಿ) ಉತ್ತಮರಾದ ಇತರರೆಲ್ಲರೂ ಸಹ ಗುರುಗಳೆಂದೇ ಕರೆಯಲ್ಪಟ್ಟಿರುವರು.

ವಿ: ೧) **'ಷಣ್ಣವತ್ಯಂಗುಲಃ', 'ಸಪ್ತಪಾದಃ'** ಮತ್ತು **'ಚತುರ್ಹಸ್ತಃ'** ಎಂಬ ಮೂರೂ ಸಹ ದೇಹದ ಒಟ್ಟು ಎತ್ತರಕ್ಕೂ, 'ನ್ಯಗ್ರೋಧಪರಿಮಂಡಲಃ' ಎಂಬುದು ಸುತ್ತಳತೆಗೂ ಅನ್ವಯಿಸುತ್ತವೆ.

---

೧೨೦. ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧಪರಿಮಂಡಲಃ ।
ಸಪ್ತಪಾದಶ್ಚತುರ್ಹಸ್ತಃ ಸ ದೇವೈರಪಿ ಪೂಜ್ಯತೇ । –ಭಾಗವತತಾತ್ಪರ್ಯ

ದ್ವಾತ್ರಿಂಶಲ್ಲಕ್ಷಣೈರ್ಯುಕ್ತಃ ತೀಕ್ಷ್ಣದಂಷ್ಟ್ರಶ್ಚ ಸೌಮ್ಯದೃಕ್ ।
ಘೋರರುಕ್ ಚೇತಿ ಪುರುಷಃ ಸ ಸರ್ವಜ್ಞ ಉದಾಹೃತಃ । (ಇತಿ ಅಧ್ಯಾತ್ಮೇ) –ಭಾಗವತತಾತ್ಪರ್ಯ

೧೨೧. ನ್ಯಗ್ರೋಧ ಇತಿ ಪದೇನ ಅಷ್ಟಚತ್ವಾರಿಂಶದಂಗುಲಯೋ ಗೃಹ್ಣಂತೇ । ಔನ್ನತ್ಯಾರ್ಧಪ್ರಮಾಣೇನ ಮಂಡಲಾಕಾರವಾನಿತ್ಯರ್ಥಃ ।

'ವ್ಯಾಮೋ ಬಾಹ್ವೋಃ ಸಕರಯೋಸ್ತತಯೋಸ್ತಿರ್ಯಗಂತರಮ್ ।'
'ವ್ಯಾಮೋ ವಟಶ್ಚನ್ಯಗ್ರೋಧಾ'ವಿತ್ಯಭಿಧಾನಾತ್ । –(ವಾ)

೨) 'ನ್ಯಗ್ರೋಧ' ಪ್ರಮಾಣವೆಂದರೆ 'ಮಾರು' ಎಂದರ್ಥ.

೩) ದ್ವಾತ್ರಿಂಶಲ್ಲಕ್ಷಣಗಳನ್ನು ಲಕ್ಷಣಗ್ರಂಥದ ಶ್ಲೋಕವನ್ನು ಉದಾಹರಿಸಿ ವಾದಿರಾಜೀಯದಲ್ಲಿ ವಿವರಿಸಲಾಗಿದೆ :

ಪಂಚದೀರ್ಘಃ ಪಂಚಸೂಕ್ಷ್ಮಃ ಸಪ್ತರಕ್ತಃ ಷಡುನ್ನತಃ ।
ತ್ರಿಪೃಥುಸ್ತ್ರಿಷು ಗಂಭೀರೋ ದ್ವಾತ್ರಿಂಶಲ್ಲಕ್ಷಣಸ್ತ್ವತಿ ॥

ಭುಜಗಳು, ಕಣ್ಣುಗಳು, ಗಲ್ಲ, ಮೊಣಕಾಲು ಮತ್ತು ಉಗುರುಗಳು – ಈ ಐದೂ ದೀರ್ಘವಾಗಿರಬೇಕು.

ಚರ್ಮ, ಕೇಶ, ಬೆರಳುಗಳು, ಹಲ್ಲುಗಳು ಮತ್ತು ಅಂಗುಲಿಪರ್ವಗಳು – ಈ ಐದೂ ಸೂಕ್ಷ್ಮವಾಗಿರಬೇಕು.

ಅಂಗೈಗಳು, ಅಂಗಾಲುಗಳು, ಕಣ್ಣುಗಳ ತುದಿಗಳು, ತಾಲು(ಅಂಗುಳ), ನಾಲಿಗೆ (ಕೆಳ)ತುಟಿ ಮತ್ತು ಉಗುರುಗಳು – ಈ ಏಳೂ ಕೆಂಪಾಗಿರಬೇಕು.

ಎದೆ, ಕುಕ್ಷಿ, ಅಲಕ, ಭುಜಗಳು, ಕೈಗಳು ಮತ್ತು ಮುಖ – ಈ ಆರೂ ಉನ್ನತವಾಗಿರಬೇಕು.

ಹಣೆ ಸೊಂಟ ಮತ್ತು ಎದೆ – ಈ ಮೂರೂ ವಿಶಾಲವಾಗಿರಬೇಕು.

ಜಂಘೆಗಳು(ಹರಡಿಗಳು), ಕತ್ತು ಮತ್ತು ಮೇಹನ – ಈ ಮೂರೂ ಚಿಕ್ಕದಿರಬೇಕು.

ಸ್ವರ, ಸತ್ತ್ವ ಮತ್ತು ನಾಭಿ – ಈ ಮೂರೂ ಗಂಭೀರ(ಆಳ)ವಾಗಿರಬೇಕು.

೪) ಋಜುಗಳು ಮಾತ್ರವೇ ದ್ವಾತ್ರಿಂಶಲ್ಲಕ್ಷಣೋಪೇತರಾದ ಮುಖ್ಯಗುರುಗಳು; ಅವರಿಗೆ ಅವತಾರದಲ್ಲೂ ದ್ವಾತ್ರಿಂಶಲ್ಲಕ್ಷಣಗಳು ಇರುವುದು ವಿಶೇಷ.

ದ್ವಾತ್ರಿಂಶಲ್ಲಕ್ಷಣೈಃ ಸಮ್ಯಕ್ ಯುಕ್ತಾ ವಾಯುತ್ವಯೋಗ್ಯತಾಃ ।
ನಿಯಮೇನೈವ ವಿಷ್ಣೋಸ್ತು ಪ್ರಾದುರ್ಭಾವಾ ವಿಶೇಷತಃ ॥

– ಬೃಹದಾರಣ್ಯಕೋಪನಿಷದ್ಭಾಷ್ಯ

ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಂ – ಮ.ಭಾ.ತಾ.ನಿ.(೧೨/೧೩೪)

ನ ಮುಖೇ ನೇತ್ರಯೋರ್ವಾಪಿ ಲಲಾಟೇ ಚ ಭ್ರುವೋಸ್ತಥಾ ।
ಅನ್ಯೇಷ್ವಪಿ ಚ ಗಾತ್ರೇಷು ದೋಷಃ ಸಂವಿದಿತಃ ಕ್ವಚಿತ್ ॥ – ವಾ.ರಾ.(೪/೩/೩೦)

'ಸಂಪೂರ್ಣಲಕ್ಷಣಚಣಂ' – ಸುಮಧ್ವವಿಜಯ (೨/೨೫)

೫) ಗುರುಲಕ್ಷಣಗಳನ್ನು ಹೀಗೆ ತಿಳಿಸುತ್ತಿರುವ ಶ್ರೀಮದಾಚಾರ್ಯರು ಸ್ವತಃ ದ್ವಾತ್ರಿಂಶಲ್ಲಕ್ಷಣೋಪೇತರಾದ ಮುಖ್ಯಗುರುಗಳು ಎಂಬುದನ್ನು ಗಮನಿಸಬೇಕು. ಅವರು ದ್ವಾತ್ರಿಂಶಲ್ಲಕ್ಷಣೋಪೇತರಾಗಿದ್ದ ವಿವರ ಸುಮಧ್ವವಿಜಯಾದಿ ಗ್ರಂಥಗಳಲ್ಲಿ ಉಕ್ತವಾಗಿದೆ.

'ಪ್ರತ್ಯಕ್ಷಮೇವ ಚೈತಲ್ಲ ಣಂ ದೃಶ್ಯತೇ ಭಗವತಿ ಭಾಷ್ಯಕಾರೇ'

– ತತ್ತ್ವಪ್ರದೀಪ(ತ್ರಿವಿಕ್ರಮಪಂಡಿತಾಚಾರ್ಯರು ಪು. ೧೭)

ಕಲಿಯು ಸಮಗ್ರ ದುರ್ಲಕ್ಷಣೋಪೇತ

ಕ್ರಮಾಲ್ಲಕ್ಷಣಹೀನಾಶ್ಚ ಲಕ್ಷಣಾಲಕ್ಷಣೈಃ ಸಮಾಃ ।
ಮಾನುಷಾ ಮಧ್ಯಮಾಃ ಸಮ್ಯಕ್ ದುರ್ಲಕ್ಷಣಯುತಃ ಕಲಿಃ ॥ ೧೨೨ ॥

ಅ: ಕ್ರಮವಾಗಿ ಕಡಿಮೆಲಕ್ಷಣಗಳನ್ನು ಹೊಂದಿರುವವರು ಸಹ ಗುರುಗಳೆನ್ನಿಸುವರು. ಆದರೆ ರಾಜಸರು (ಮನುಷ್ಯಮಧ್ಯಮರು)ಲಕ್ಷಣ ಮತ್ತು ದುರ್ಲಕ್ಷಣಗಳನ್ನು ಸಮಸಮನಾಗಿ ಹೊಂದಿರುವರು; ಕಲಿಯು ಸಲ್ಲಕ್ಷಣಗಳಲ್ಲಿ ಒಂದನ್ನೂ ಹೊಂದದೆ ಕೇವಲ ದುರ್ಲಕ್ಷಣಗಳನ್ನೇ ಹೊಂದಿರುವನು.

ವಿ: ೧) ಸಲ್ಲಕ್ಷಣಗಳನ್ನು ಹೆಚ್ಚಾಗಿ ಹೊಂದಿ ಸ್ವಲ್ಪ ದುರ್ಲಕ್ಷಣಗಳನ್ನು ಸಹ ಋಜುಭಿನ್ನರಾದ ಸಜ್ಜೀವರು ಹೊಂದಿರುವರು; ಆದರೆ ಇವರು ಸ್ವೋತ್ತಮರಾಗಿದ್ದಲ್ಲಿ ಅವರಿಗೂ ಗುರುತ್ವವು

---

೧೨೨. ಲಕ್ಷಣಂ ಬಹು । ಅಲಕ್ಷಣಂ ತು ಈಷದೀಷದೇವೇತಿ ಭಾವಃ । –(ವಾ)

೧೨೨. ತದನ್ಯೇಷಾಂ ಗುರುತ್ವಯೋಗ್ಯತೈವ ನಾಸ್ತೀತಿ ಭಾವೇನಾಹ । –(ವಾ)

೧೨೨. ಲಕ್ಷಣಹೀನತ್ವಮುಕ್ತಂ ಬೃಹದ್ಭಾಷ್ಯೇ –

ದ್ವಾತ್ರಿಂಶಲ್ಲಕ್ಷಣೈಃ ಸಮ್ಯಕ್ ಯುಕ್ತಾ ವಾಯುತ್ವಯೋಗ್ಯಕಾಃ ।
ನಿಯಮೇನೈವ ವಿಷ್ಣೋಸ್ತು ಪ್ರಾದುರ್ಭಾವಾ ವಿಶೇಷತಃ ।
ಸಹಸ್ರಾರೇಣ ಚಕ್ರೇಣ ಚಿಹ್ನಿತಾ ದಕ್ಷಿಣೇಕರೇ ।
ಗದಯಾ ऽಷ್ಟಾಸಯಾ ಚೈವ ಶತಾವರ್ತೇನ ಕಂಬುನಾ ।
ವಾಮೇ ಕರೇ ತಥಾ ऽಬ್ಜೇನ ಸಹಸ್ರದಲಶೋಭಿನಾ ।
ಅಷ್ಟಾವಿಂಶಲ್ಲಕ್ಷಣೈಶ್ಚ ಗಿರೀಶಪದಯೋಗಿನಃ ।
ಚತುರ್ವಿಂಶತಿಮಾರಭ್ಯ ಷೋಡಶಾದಾಸುರಾಃ ಸ್ಮೃತಾಃ ।
ಅಷ್ಟಕಾದ್ಯಷಯಃ ಪ್ರೋಕ್ತಾಸ್ತದೂನಾಶ್ಚಕ್ರವರ್ತಿನಃ । – ಇತಿ ಪೈಂಗಿಶ್ರುತಿ

ಬ್ರಹ್ಮವಿಷ್ಣೂ ಹಿ ಸರ್ವಸ್ಯ ಲೋಕೇಷ್ವಾಪ್ತತಮೌ ಮತೌ ।
ಆಪ್ತಾಸ್ತದಿತರೇ ಜ್ಞೇಯಾ ದೇವಾ ಮುನಯ ಏವ ಚ ।

– ಇತಿ ವಿಷ್ಣುಸಂಹಿತಾಯಾಂ (ತತ್ತ್ವಪ್ರದೀಪ, ಪು. ೧೮)

೧೨೨. ಅವೈಷ್ಣವೋಪದಿಷ್ಟೇನ ಮಂತ್ರೇಣ ನ ಪರಾ ಗತಿಃ । –ಪದ್ಮಪುರಾಣ

೧೨೨. ಸಮ್ಯಕ್ ದುರ್ಲಕ್ಷಣಯುತತ್ವಂ ನಾಮ ಲಕ್ಷಣಾಭಾವವಿಶಿಷ್ಟಸರ್ವದುರ್ಲಕ್ಷಣವತ್ವಮ್ । – (ಜ)

ಉಂಟು; ರಾಜಸಜೀವರಿಗೆ ಸಲ್ಲಕ್ಷಣ ಮತ್ತು ದುರ್ಲಕ್ಷಣಗಳು ಸಮಸಮವಾಗಿ ಇರುವುವು; ಆದ್ದರಿಂದ ಅವರಿಗೆ ಗುರುತ್ವ ಯೋಗ್ಯತೆಯೇ ಯಾವ ಕಾಲಕ್ಕೂ ಇಲ್ಲ. ತಾಮಸಜೀವರಿಗೆ ಸಲ್ಲಕ್ಷಣಗಳು ಇರುವುದೇ ಇಲ್ಲ; ದುರ್ಲಕ್ಷಣಗಳು ಮಾತ್ರ ಕ್ರಮವಾಗಿ ಅಧಿಕಸಂಖ್ಯೆಯಲ್ಲಿ ಇದ್ದೇ ಇರುತ್ತವೆ; ಎಲ್ಲ ರೀತಿಯ ದುರ್ಲಕ್ಷಣಗಳನ್ನು ಪೂರ್ಣಪ್ರಮಾಣದಲ್ಲಿ ಹೊಂದಿರುವವನು 'ಕಲಿ'. ರಾಜಸಜೀವರಿಗೇ ಗುರುತ್ವಯೋಗ್ಯತೆ ಇಲ್ಲವೆಂದ ಮೇಲೆ ತಾಮಸರಿಗೆ ಅದರ ಪ್ರಸಕ್ತಿ ಎಂದೂ ಇಲ್ಲವೆಂಬುದು ಕೈಮುತ್ಯಸಿದ್ಧ ಎಂದು ಭಾವ.

೨) ಸಕಲಸಲ್ಲಕ್ಷಣಗಳನ್ನು ಸಾಕಲ್ಯೇನ ಹೊಂದಿರುವವ ಋಜುಗಳು ಜೀವೋತ್ತಮರಾಗಿರುವಂತೆ, ಸಕಲ ದುರ್ಲಕ್ಷಣಗಳನ್ನು ಹೊಂದಿರುವ ಕಲಿಯು 'ಜೀವಾಧಮ'ನಾಗಿರುವನು ಎಂದು ತಿಳಿಯಬೇಕು.

೩)ಇಂದ್ರಾವತಾರನಾದ ಅರ್ಜುನನಲ್ಲಿಯೂ ಕೆಲವು ದುರ್ಲಕ್ಷಣಗಳಿದ್ದುವೆಂದು ಹೇಳಿರುವುದರಿಂದ, ಕೆಲವು ದುರ್ಲಕ್ಷಣಗಳಿದ್ದರೂ ಅವುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಕ್ಷಣಗಳಿದ್ದರೆ, ಅವರು ಸಾತ್ವಿಕರೆಂದೇ ಭಾವ.

ಗುರುಲಕ್ಷಣ - ಗುರುಪ್ರಸಾದದ ಮಹಿಮೆ

ಸಮ್ಯಗ್ಲಕ್ಷಣಸಂಪನ್ನೋ ಯದ್ದದ್ಯಾತ್ ಸುಪ್ರಸನ್ನಧೀಃ ॥ ೧೨೩ ॥
ಶಿಷ್ಯಾಯ ಸತ್ಯಂ ಭವತಿ ತತ್ ಸರ್ವಂ ನಾತ್ರ ಸಂಶಯಃ ।
ಅಗಮ್ಯತ್ವಾದ್ಧರಿಸ್ತಸ್ಮಿನ್ನಾವಿಷ್ಟೋ ಮುಕ್ತಿದೋ ಭವೇತ್ ॥ ೧೨೪ ॥

---

೧೨೨. ದುರ್ಲಕ್ಷಣಯುತಾಶ್ಚೇತಿ ಜ್ಞೇಯಮ್ । ಅರ್ಜುನಾದೇರ್ದುರ್ಲಕ್ಷಣಯುತತ್ವೇನ ಕಥನಾತ್ ।

ಭ್ರಾತಾ ತೇ ದೀರ್ಘಪಿಂಡಿಕಃ ।– – ಮ. ಭಾ. ತಾ. ನಿ (೩೦/೧೨೩)

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಸ್ತಥಾऽಧಿಕ್ಯಂ ದುರ್ಲಕ್ಷಣಮಥಾರ್ಜುನೇ । – ಮ. ಭಾ. ತಾ. ನಿ.(೩೦/೧೨೮)

೧೨೨. ಸ್ವೋತ್ತಮಾಸ್ತು ಕ್ರಮೇಣೈವ ಸರ್ವೇಷಾಂ ಗುರವಃ ಸ್ಮೃತಾಃ ।
ಉಪದೇಶೋ ಬ್ರಹ್ಮಣಸ್ತು ಸರ್ವೇಷಾಮೇವ ಮುಕ್ತಯೇ । – ಅನುವ್ಯಾಖ್ಯಾನ (೩/೩/೨೦೮, ೨೦೯)

೧೨೩. ಇಲ್ಲಿ 'ಪ್ರಧಾನವದೇವ ಹಿ ತದುಕ್ತಂ' (೩/೩/೪೪) ಮತ್ತು 'ಲಿಂಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ' (೩/೩/೪೫) ಎಂಬ ಸೂತ್ರ ಮತ್ತು ಅದರ ಭಾಷ್ಯಗಳನ್ನು ಗಮನಿಸಬೇಕು:

ಸಮ್ಯಗ್ಗುರುಪ್ರಸಾದಶ್ಚ ಮುಖ್ಯತೋ ದೃಷ್ಟಿಕಾರಣಮ್ ।
ಶ್ರವಣಾದಿ ಚ ಕರ್ತವ್ಯಂ ನಾನ್ಯಥಾ ದರ್ಶನಂ ಕ್ವಚಿತ್ ॥

ಅ: ಸಲ್ಲಕ್ಷಣಭರಿತನಾದ ಗುರು ಶಿಷ್ಯನಿಗೆ ಪ್ರಸನ್ನಮನಸ್ಕನಾಗಿ ನೀಡುವುದೆಲ್ಲ ಸಫಲವಾಗುವುದು; ಈ ವಿಷಯದಲ್ಲಿ ಸಂದೇಹವೇ ಬೇಡ; ತಾನು ಸಾಕ್ಷಾತ್ ಅಗಮ್ಯನಾದ್ದರಿಂದ ಶ್ರೀಹರಿಯು ಗುರುವಿನಲ್ಲಿ ಆವೇಶಿಸಿ ಮುಕ್ತಿಯನ್ನು ನೀಡುವನು.

ವಿ: ೧) ಗುರುವು ಲಕ್ಷಣಭರಿತನಾಗಿರಬೇಕು; ಪ್ರಸನ್ನಚಿತ್ತನಾಗಿ ಉಪದೇಶಿಸಬೇಕು; ಆಗ ಮಾತ್ರವೇ ಅವರ ಉಪದೇಶವು ಫಲಿಸುವುದು ಎಂದು ಭಾವ. ಅವರು ಪ್ರಸನ್ನಚಿತ್ತರಾಗಿ ಉಪದೇಶಿಸುವಂತೆ ಶಿಷ್ಯನು ಗುರುಗಳನ್ನು ಸೇವಾದಿಗಳಿಂದ ಸಂತೋಷಪಡಿಸಬೇಕು ಎಂಬ ತತ್ತ್ವವೂ ಇಲ್ಲಿ ಸೂಚಿತವಾಗಿದೆ.

೨) ಶ್ರೀಹರಿಯು ಅಗೋಚರನಾದ್ದರಿಂದ ವಿದ್ಯೋಪದೇಶಕ ಗುರುಗಳಲ್ಲಿ ಸ್ವತಃ ಸನ್ನಿಹಿತನಾಗಿ ಅವರ ಮೂಲಕ ಭಕ್ತರಿಗೆ ಅನುಗ್ರಹಿಸುವನು; ಸ್ವಾತಂತ್ರ್ಯವು ಮಾತ್ರ ಸದಾ ಅವನದೇ ಎಂದು ಭಾವ.

ಗುರ್ವನುಗ್ರಹವಿಲ್ಲದ ವಿದ್ಯೆ ಫಲಿಸದು

ನಾತಿಪ್ರಸನ್ನಹೃದಯೋ ಯದ್ದದ್ಯಾದ್ ಗುರುರಪ್ಯಸೌ ।
ನ ತತ್ ಸತ್ಯಂ ಭವೇತ್ ತಸ್ಮಾದರ್ಚನೀಯೋ ಗುರುಃ ಸದಾ ॥ ೧೨೫ ॥

ಅ: ಸಾಕ್ಷಾತ್ ಗುರುವೇ ಆಗಿದ್ದರೂ ಪ್ರಸನ್ನಮನಸ್ಸಿನಿಂದ ನೀಡದಿದ್ದಲ್ಲಿ ಅಂತಹ ಉಪದೇಶವು ಫಲಕಾರಿಯಾಗಲಾರದು; ಆದ್ದರಿಂದ ಗುರುಗಳನ್ನು ಸದಾ ಆರಾಧಿಸಲೇಬೇಕು.

ವಿ: ೧) ಸ್ವತಃ ಬ್ರಹ್ಮದೇವರು ಇಂದ್ರ ಮತ್ತು ವಿರೋಚನ ಇಬ್ಬರಿಗೂ ಉಪದೇಶ ನೀಡಿದರೂ, ಅವರು ಪ್ರಸನ್ನಚಿತ್ತರಾಗಿ ಉಪದೇಶಿಸಿದ್ದರಿಂದ ಅದು ಇಂದ್ರದೇವರಿಗೆ ತತ್ತ್ವಜ್ಞಾನದ ದಾರ್ಢ್ಯಕ್ಕೆ ಕಾರಣವಾಯಿತು; ಹಾಗೆ ಪ್ರಸನ್ನರಾಗಿ ಉಪದೇಶಿಸದ್ದರಿಂದ ವಿರೋಚನನಿಗೆ ಅವರ ಮಾತು ಮಿಥ್ಯಾಜ್ಞಾನವನ್ನೇ ದೃಢಪಡಿಸಿತು. ಎಂಬ ಛಾಂದೋಗ್ಯೋಪನಿಷತ್ತಿನ ಕಥೆಯನ್ನು ಇಲ್ಲಿ ಸ್ಮರಿಸಬಹುದು.

---

೧೨೪. ನನು 'ಮಸ್ತಕೇ ಹಸ್ತಪಂಕಜಮ್ । ನಿಧಾಯೋತ್ತೀರ್ಯ ಸಂಸಾರಾತ್ ಸುಖೀಭವ ಹರೇಃ ಪ್ರಿಯಃ' ಇತಿ ಗುರುಣಾ ಶಿಷ್ಯಾಯ ಆಶೀರ್ವಾದೋ ದೇಯ ಇತ್ಯಾಚಾರಕಾಂಡೇ ಕಥ್ಯತೇ । ತದಪಿ ಸತ್ಯಂ ಭವತಿ ಚೇತ್ ಮುಕ್ತಿದತ್ತಂ ಭಗವಲ್ಲಕ್ಷಣಂ ಗುರಾವತಿವ್ಯಾಪ್ತ । ನ ಚೇದುಕ್ತಮಯುಕ್ತಂ ಸ್ಯಾದಿತ್ಯತ ಆಹ । ಅಗಮ್ಯತ್ವಾದಿತಿ । -(ವಾ)

೧೨೫. ಗುರುಶಿಷ್ಯಯೋರಯೋಗ್ಯತ್ವಾದ್ಗುರುವೃತ್ತೇರಪೂರ್ತಿತಃ ।
ಅಪ್ರಸಾದಾದ್ಗುರೋರ್ವಿದ್ಯಾ ನ ತಥೋಕ್ತಫಲಪ್ರದಾ । – ಭಾಗವತತಾತ್ಪರ್ಯ

೧೨೫. ಶ್ರೀವಾದಿರಾಜರ ಭಾವಪ್ರಕಾಶಿಕೆಯನ್ನು ನೋಡಿ.

೨) ಹೀಗೆ ಸಫಲಾಧ್ಯಯನಕ್ಕೆ ಗುರ್ವನುಗ್ರಹವು ಅತ್ಯಂತ ಅವಶ್ಯವಾದ್ದರಿಂದ ಶ್ರದ್ಧಾ-ಭಕ್ತಿಗಳಿಂದ ಯೋಗ್ಯರೀತಿಯಲ್ಲಿ ಗುರುಗಳನ್ನು ಆರಾಧಿಸಲೇಬೇಕು ಎಂದು ಭಾವ.

ಸ್ವಾವರರಿಗೂ ಗುರುತ್ವ

ಸ್ವಾವರಾಣಾಂ ಗುರುತ್ವಂ ತು ಭವೇತ್ ಕಾರಣತಃ ಕ್ವಚಿತ್ ।
ಮರ್ಯಾದಾರ್ಥಂ ತೇಽಪಿ ಪೂಜ್ಯಾ ನ ತು ಯದ್ವತ್ ಪರೋ ಗುರುಃ ।
ಇತ್ಯೇತತ್ ಪಂಚರಾತ್ರೋಕ್ತಂ ಪುರಾಣೇಷ್ವನುಮೋದಿತಮ್ ॥ ೧೨೬ ॥

ಅ: ಕಾರಣಾಂತರದಿಂದಾಗಿ ತನಗಿಂತ ಕಡಿಮೆಯವರಿಗೂ ಒಮ್ಮೊಮ್ಮೆ ಗುರುತ್ವವು ಬರಬಹುದು. ಆಗ ಶಾಸ್ತ್ರಮರ್ಯಾದೆಗೋಸ್ಕರ ಅವರನ್ನೂ ಸಹ ಪೂಜಿಸಲೇಬೇಕು; ಆದರೆ ಅವರನ್ನು ಸ್ವೋತ್ತಮಗುರುಗಳಂತೆ ಪೂಜಿಸಬೇಕಿಲ್ಲ. ಇದೆಲ್ಲ 'ಪಂಚರಾತ್ರ'ದಲ್ಲಿ ಉಕ್ತವಾಗಿದೆ; ಪುರಾಣಗಳಲ್ಲಿ ಅನುಮೋದಿತವಾಗಿದೆ.

ವಿ: ೧) ದೇವಗುರುಗಳು ಎಂಬ ನಿಮಿತ್ತದಿಂದಾಗಿ ಬೃಹಸ್ಪತ್ಯಾಚಾರ್ಯರಿಗೆ ಇಂದ್ರದೇವರ ಗುರುತ್ವವು ಇದೆ; ಆದರೆ ಅವರು ತಾರತಮ್ಯದಲ್ಲಿ ಸ್ವರೂಪತಃ ಇಂದ್ರನಿಗಿಂತ ಕಡಿಮೆ-ಯಾಗಿರುವರು; ಇಂತಹ ಪ್ರಸಂಗಗಳಲ್ಲಿ ಅವರನ್ನೂ ಗುರುಗಳಂತೆ ಗೌರವಿಸಬೇಕು. ಆದರೆ ಸ್ವೋತ್ತಮಗುರುಗಳಿಗೆ ಸಲ್ಲಿಸುವಂತಹ ಉತ್ತಮಗೌರವವನ್ನು ಸಲ್ಲಿಸಬೇಕಿಲ್ಲ ಎಂದು ಭಾವ.

೨) ಧರ್ಮರಾಜನು ಅಣ್ಣನೆಂಬ ಕಾರಣದಿಂದಲೂ, ದ್ರೋಣರಿಗೆ ಅಸ್ತ್ರವಿದ್ಯಾ-ಗುರುಗಳೆಂಬ ಕಾರಣದಿಂದಲೂ ಒಂದು ರೀತಿಯಲ್ಲಿ ಭೀಮಸೇನದೇವರು ಗೌರವಿಸುತ್ತಿದ್ದರು; ಆದರೆ ನಿಜಕ್ಕೂ ಅವರಿಗಿಂತಲೂ ತಾವೇ ಉತ್ತಮರು ಎಂದು ಅವರು ಬಲ್ಲವರಾದ್ದರಿಂದ ವಿಶೇಷಪ್ರಸಂಗಗಳಲ್ಲಿ ಅವರನ್ನು ಅತಿಕ್ರಮಿಸುತ್ತಲೂ ಇದ್ದರು ಎಂಬ ವಿವರಗಳನ್ನು ಇಲ್ಲಿ ಸ್ಮರಿಸಬಹುದು.

ಬಿಂಬರೂಪದ ದರ್ಶನದಿಂದ ಮುಕ್ತಿ - ಕರ್ಮಕ್ಷಯ

ಯದಾ ಮುಕ್ತಿಪ್ರದಾನಾಯ ಸ್ವಯೋಗ್ಯಂ ಪಶ್ಯತಿ ಧ್ರುವಮ್ ।
ರೂಪಂ ಹರೇಸ್ತದಾ ತಸ್ಯ ಸರ್ವಪಾಪಾನಿ ಭಸ್ಮಸಾತ್ ।
ಯಾಂತಿ ಪೂರ್ವಾಣ್ಯುತ್ತರಾಣಿ ನ ಶ್ಲೇಷಂ ಯಾಂತಿ ಕಾನಿಚಿತ್ ॥ ೧೨೭ ॥

ಅ: ತನಗೆ ಮುಕ್ತಿನೀಡಲು ಯೋಗ್ಯವಾದ ಹರಿಯ ರೂಪವನ್ನು ಯಾವಾಗ ಸಾಕ್ಷಾತ್ಕರಿಸಿ-ಕೊಳ್ಳುವನೋ ಆಗ ಅವನ ಹಿಂದಿನ ಸಕಲಪಾಪಗಳು ಭಸ್ಮವಾಗುವವು; ಮುಂದಿನ ಕೆಲವು ಪಾಪಗಳು ಲೇಪವಾಗವು.

ಎ ೧) ಭಗವದ್ರೂಪಸಾಕ್ಷಾತ್ಕಾರದಿಂದ ಮುಕ್ತಿ ಎನ್ನುವುದಾದರೆ, ರಾಮ, ಕೃಷ್ಣ ಮೊದಲಾದ ರೂಪಗಳನ್ನು ಕಣ್ಣಾರೆ ಕಂಡ ಅಸುರರು ಸಹ ಏತಕ್ಕೆ ಮುಕ್ತರಾಗುವುದಿಲ್ಲ? ಮತ್ತು ಬ್ರಹ್ಮದರ್ಶನದ ಅನಂತರವೂ ಸಹ ಅನುಭವಿಸಬೇಕಾದ ಅನೇಕ ಪಾಪಕರ್ಮಗಳು ಇರುವುದರಿಂದ ಮುಕ್ತಿಯು ಹೇಗಾದೀತು ? ಎಂಬ ಎರಡು ಪ್ರಶ್ನೆಗಳಿಗೆ ಇಲ್ಲಿ ಉತ್ತರವಿದೆ.

೨) ಭಗವದ್ರೂಪದರ್ಶನದಿಂದ ಮುಕ್ತಿ ಎಂದರೆ ತನಗೆ ಬಿಂಬರೂಪಿಯಾದ ಭಗವದ್ರೂಪದ ದರ್ಶನದಿಂದ ಮುಕ್ತಿ ಎಂದರ್ಥ. ಆದ್ದರಿಂದ ರಾಮ, ಕೃಷ್ಣ ಮೊದಲಾದ ಭಗವದವತಾರಗಳನ್ನು ಕಣ್ಣಾರೆ ಕಂಡರು ಅಸುರರಿಗೆ ಮುಕ್ತಿಯಾಗದು ಎಂದು ಭಾವ.

---

೧೨೭. ಭಗವದಪರೋಕ್ಷಜ್ಞಾನಾನ್ಮೋಕ್ಷ ಇತ್ಯುಕ್ತಮ್ । ತದಾ ರಾಮಕೃಷ್ಣಾದ್ಯವತಾರದರ್ಶಿನಾಮಸುರಾಣಾಂ ಕುತೋ ನ ಮುಕ್ತಿಃ । ಭೋಕ್ತವ್ಯಪಾಪಾನಾಮನಂತತ್ವಾತ್ ಕಥಂ ಮುಕ್ತಿರಿತಿ ಚೋದ್ಯದ್ವಯಂ ಪರಿಹರತಿ । –(ವಾ)

೧೨೭. ಹರೇರಾಪರೋಕ್ಷ್ಯಾನ್ಮುಕ್ತಿರಿತ್ಯುಕ್ತಮ್ । ತದಯುಕ್ತಮ್ । ದೈತ್ಯಾದೀನಾಂ ರಾಮಾದ್ಯಪರೋಕ್ಷೇಽಪಿ ಮೋಕ್ಷಾದರ್ಶನಾತ್ । ಪಾಪಾನಾಂ ಪ್ರತಿಬಂಧಕಾನಾಂ ಸತ್ತ್ವಾಚ್ಚ । ಇತ್ಯತ ಆಹ । ಯದೇತಿ –(ಜ)

೧೨೭. 'ಮುಕ್ತಿಪ್ರದಾನಾಯ' ಮುಕ್ತಿಪ್ರದಾತುಂ ಸ್ವಯೋಗ್ಯಂ ಬಿಂಬಮೂರ್ತ್ಯಾದಿ ಹರೇಃ ರೂಪಂ ಪಶ್ಯತಿ ತದಾ ತಸ್ಯ ದ್ರಷ್ಟುಃ । -(ಜ)

೧೨೭. ಸ್ವಸ್ಯ ಮುಕ್ತಿಪ್ರದಾನಾಯ ಯೋಗ್ಯಂ ರೂಪಂ ಪಶ್ಯತೀತಿ ಅರ್ಥಕ್ರಮೇಣ ಸಂಬಂಧೋ ಜ್ಞೇಯಃ । ಯಸ್ಯ ಕಸ್ಯಚಿದ್ಭಗವದ್ರೂಪಸ್ಯ ದರ್ಶನಾನ್ನ ಮುಕ್ತಿಃ । ಕಿಂತು ಸ್ವಬಿಂಬರೂಪದರ್ಶನಾದೇವ ಮುಕ್ತಿರಿತಿ ಪ್ರಾಚೀನಶಂಕಾಯಾಃ ಪರಿಹಾರಃ ಸೂಚಿತಃ । ದ್ವಿತೀಯಸ್ಯೋತ್ತರಂ ಸ್ಪಷ್ಟಮ್ ।

೧೨೭. ಪೂರ್ವಪಾಪಾನಿ ಅಪ್ಯಾರಬ್ಧಾನಿ । ಜ್ಞಾನೋತ್ತರಕಾಲಮಪಿ ಉತ್ತಮದೇಹಾದಿಜನ್ಯಪಾಪಸ್ಯ ಶ್ಲೇಷೋಽಸ್ತಿ । ಅತಃ ಕಾನಿಚಿದಿತ್ಯುಕ್ತಮ್ । – (ವಾ)

ತಸ್ಯಾಪ್ಯಾರಬ್ಧಕಾರ್ಯಸ್ಯ ನ ವಿನಾಶೋಽಸ್ತಿ ಕುತ್ರಚಿತ್ ।
ಆರಬ್ಧ್ಯೋಶ್ಚ ನಾಶಃ ಸ್ಯಾದಲ್ಪಯೋಃ ಪುಣ್ಯಪಾಪಯೋಃ । –ಇತಿ ನಾರಾಯಣತಂತ್ರೇ(ಭಾಷ್ಯ)

೧೨೭. ಸರ್ವೇಽಪಿ ಪುರುಷಾರ್ಥಾಃ ಸ್ಯುರ್ಜ್ಞಾನಾದೇವ ನ ಸಂಶಯಃ ।
ನ ಲಿಪ್ಯತೇ ಜ್ಞಾನವಾಂಶ್ಚ ಸರ್ವದೋಷೈರಪಿ ಕ್ವಚಿತ್ ।
ಗುಣದೋಷೈಃ ಸುಖಸ್ಯಾಪಿ ವೃದ್ಧಿಹ್ರಾಸೌ ವಿಮುಕ್ತಿಗೌ ।
ನೃಣಾಂ ಸುರಾಣಾಂ ಮುಕ್ತೌ ತು ಸುಖಂ ಕ್ಲೃಪ್ತಂ ಯಥಾಕ್ರಮಮ್ ।
ಪ್ರಾರಬ್ಧಕರ್ಮಣೋಽನ್ಯಸ್ಯ ಜ್ಞಾನಾದೇವ ಪರಿಕ್ಷಯಃ ।
ಅನಿಷ್ಟಸ್ಯೋಭಯಸ್ಯಾಪಿ ಸರ್ವಸ್ಯಾನ್ಯಸ್ಯ ಭೋಗತಃ । –ಅಣುಭಾಷ್ಯ

ಅನಭೀಷ್ಟಮನಾರಬ್ಧಂ ಪುಣ್ಯಮಪ್ಯಸ್ಯ ನಶ್ಯತಿ ।
ಕಿಮು ಪಾಪಂ ಪರಬ್ರಹ್ಮಜ್ಞಾನಿನೋ ನಾತ್ರ ಸಂಶಯಃ । –ಇತಿಪಾದ್ಮೇ(ಸೂತ್ರಭಾಷ್ಯ)

ತಥೋಪಾಸ್ಯಾಂಜಸಾ ದೃಷ್ಟಂ ಬ್ರಹ್ಮಪಾಪಂ ಚ ಭಸ್ಮಸಾತ್ ।
ಕರೋತಿ ನಿಖಿಲಂ ಪೂರ್ವಂ ಪಾಶಾಬ್ಧೇಸ್ಯಾಪ್ಯಸಂಗತಾಮ್ ।
ಕರೋತಿ ತದ್ದ್ವಿಷತ್ಸ್ವೇವಂ ಪುಣ್ಯನಾಶೋಽಪ್ಯಸಂಗತಾ । –ಅನುವ್ಯಾಖ್ಯಾನ

೩) ಅಪರೋಕ್ಷಜ್ಞಾನವು ಲಭಿಸುತ್ತಿದ್ದಂತೆ, ಪ್ರಾರಬ್ಧಕರ್ಮವನ್ನು ಹೊರತು ಸಂಚಿತ ಎಂಬ ಪೂರ್ವಕರ್ಮಗಳೆಲ್ಲ ಬೂದಿಯಾಗುತ್ತವೆ; ಆಗಾಮಿ ಎಂಬ ಅನಂತರದ ಕರ್ಮಗಳು ಲೇಪವಾಗುವುದಿಲ್ಲ; ಪ್ರಾರಬ್ಧವು ಕಳೆಯುತ್ತಿದ್ದಂತೆಯೇ ಮುಕ್ತಿಯು ಲಭಿಸುವುದು ಎಂದು ಭಾವ. 'ಆಗಾಮಿ ಕರ್ಮಗಳಲ್ಲಿ ಸ್ವೋತ್ತಮದ್ರೋಹಾದಿ ಜನ್ಯವಾದ ಪಾಪಗಳಿಗೆ ಮಾತ್ರ ಲೇಪ ಉಂಟೇ ಉಂಟು' ಎಂಬುದನ್ನು ಸೂಚಿಸಲು 'ಸಕಲ' ಎನ್ನದೇ 'ಕಾನಿಚಿತ್' ಎಂದಿರುವರು.

೪) ಪಾಪಗಳೊಂದಿಗೆ ಅನಿಷ್ಟಪುಣ್ಯವೂ ಸಹ ಆಗ ನಾಶವಾಗುವುದು ಎಂದು ತಿಳಿಯಬೇಕು.

೫) ಇಷ್ಟಪುಣ್ಯವು ಸಹ ಕಾಮ್ಯ ಮತ್ತು ಅಕಾಮ್ಯ ಎಂಬುದಾಗಿ ಎರಡುವಿಧ; ಅವುಗಳಲ್ಲಿ ಕಾಮ್ಯಪುಣ್ಯವನ್ನು ಪುತ್ರಾದಿಗಳೂ ಆಪ್ತರೂ ಹೊಂದುವರು; ಅಕಾಮ್ಯವಾದ ಅಗ್ನಿಹೋತ್ರಾದಿಗಳು ಅಪರೋಕ್ಷಜ್ಞಾನಸಾಧನವಾಗಿರುವುದರಿಂದ ಅವು ನಾಶವಾಗುವುದಿಲ್ಲ.

---

೧೨೭. ಸುಕೃತಮಪ್ಯಪ್ರಿಯಂ ಮಾನುಷ್ಯಾದಿ ಫಲಂ ಜಹಾತಿ । ನ ಬೃಹತ್ಫಲರಪ್ಯುಪಾಸನಾದಿ ನಿಮಿತ್ತಮ್ ।
...ಉಭಯಕ್ಷಯಶ್ರುತಿರಪ್ಯನಿಷ್ಟವಿಷಯಾ । ನ ಹೀಷ್ಟಪುಣ್ಯಕ್ಷಯೇ ಕಿಂಚಿತ್ ಪ್ರಯೋಜಮ್।

–(ಗೀತಾಭಾಷ್ಯ)

ವಿಕರ್ಮಲೇಪೋ ನೈವಾಸ್ತಿ ಸಮ್ಯಗ್ ದೃಷ್ಟಿಮತಾಂ ಕ್ವಚಿತ್ ।
ಗುಣಹಾನಿಶ್ಚ ನೈವಾಸ್ತಿ ಬ್ರಹ್ಮಣಸ್ತ್ವವಿಕರ್ಮತಃ ।
ದೇವಾನಾಮಪಿ ನ ಪ್ರಾಯಃ ಕ್ಲೃಪ್ತಸ್ಯ ತು ಕಥಂಚನ ।
ಪ್ರಾಪ್ತಹ್ರಾಸೋ ಭವೇತ್ ಕ್ವಾಪಿ ಮಹತಾ ತು ವಿಕರ್ಮಣಾ ।
ತಥಾಪಿ ತತ್ ಕ್ಲೃಪ್ತಮೇವ ತಸ್ಮಾನ್ನ ನಿಯಮೋಜ್ಜಿತಿಃ ।
ಚಂದ್ರಸುಗ್ರೀವಯೋಶ್ಚೈವ ಸ್ವೋಚ್ಚದಾರಪರಿಗ್ರಹಾತ್ ।
ಪ್ರಾಪ್ತಹಾನಿರಭೂನ್ನೈವ ಕ್ಲೃಪ್ತಹಾನಿಃ ಕಥಂಚನ ।
ಹ್ರಾಸೋऽಪಿ ಮಾನುಷಾದೀನಾಮಾನಂದಸ್ಯ ವಿಕರ್ಮಣಾ ।
ಭವೇನ್ಮುಕ್ತೌ ವಿಶೇಷೇಣ ಸ್ವೋಚ್ಚಾನಾಮಪರಾಧತಃ । –(ಅನುವ್ಯಾಖ್ಯಾನ)

೧೨೭. ಪಾಪಾನೀತ್ಯುಪಲಕ್ಷಣಮ್ । ಪುಣ್ಯಾನ್ಯಕಾಮಾನಿ ಸುಖಾಧಿಕ್ಯಹೇತುಭೂತಾನಿ ಸುಖಾಭಿವ್ಯಕ್ತಿಜನಕಾನಿ ತಾನಿ ಶ್ಲೇಷಮಾಯಾಂತಿ । ಕಾಮ್ಯಾನಿ ಯಾನಿ ತಾನಿ ಪುತ್ರಾದಯಃ ದಾಯಮುಪಯಂತಿ । ಪಾರಬ್ಧಸ್ಯ ಚ ಭೋಗಾದೇವ ನಾಶಃ ಕಸ್ಯಚಿತ್ । ಕಿಂಚಿದ್ಭುಕ್ತಸ್ಯ ಪ್ರಾರಬ್ಧಸ್ಯೋಪಮರ್ದಶ್ಚ।

ಏವಂ ಹೀನಂ ಬ್ರಹ್ಮ ಪಶ್ಯತಾಂ ದೈತ್ಯಾನಾಂ ಅನುತ್ಥಾನ ಪಾತೇ ಪ್ರತ್ಯಾಸನ್ನೇ ಪಾತಾರ್ಥಂ ಪೂರ್ವಸ್ಯ ಪುಣ್ಯಸ್ಯ ನಾಶೋ ಭವತಿ । ಉತ್ತರಸ್ಯಾಶ್ಲೇಷಶ್ಚ ಭವತಿ । –(ಜ)

೧೨೭. ಶ್ಲೇಷಂ ನ ಯಾಂತಿ । ಸ್ವಫಲನರಕಾದಿಸಂಬಂಧವತ್ವಂ ಕರ್ತುಂ ನ ಸಮರ್ಥಾನಿ ಭವಂತಿ । ಕಾನಿಚಿತ್ ಸ್ವೋತ್ತಮದ್ರೋಹಾದೀನಿ ಸಂಬಂಧವಂತ್ಯಪಿ ಅಶುಚಿತ್ವ ಅಸಂಭಾಷ್ಯತ್ವ ಅಪಾಂಕ್ತೇಯತ್ವ ನರಕದುಃಖ-ರೂಪಫಲಪ್ರದಾನಿ ನ ಭವಂತಿ ।

ಜ್ಞಾನಿಗೆ ಮೋಕ್ಷ ನಿಶ್ಚಿತ

ಮೋಕ್ಷಶ್ಚ ನಿಯತಸ್ತಸ್ಮಾತ್ ಸ್ವಯೋಗ್ಯಹರಿದರ್ಶನೇ ।
ಭವಿಷ್ಯತ್ಪರ್ವವಚನಮಿತ್ಯೇತತ್ ಸೂತ್ರಗಂ ತಥಾ ।
ಶ್ರುತಿಶ್ಚ ತತ್ಪರಾ ತದ್ವತ್ ತದ್ಯಥೇತ್ಯವದತ್ ಸ್ಫುಟಮ್ ॥ ೧೨೮ ॥

ಅ: ಆದ್ದರಿಂದ ಸ್ವಯೋಗ್ಯವಾದ ಬಿಂಬರೂಪಿ ಶ್ರೀಹರಿಯ ದರ್ಶನವಾದ ಮೇಲೆ ಮೋಕ್ಷವು ಲಭಿಸುವುದು ಖಚಿತ ಎಂದು ಭವಿಷ್ಯತ್ಪರ್ವವಚನ; ಈ ಪ್ರಮೇಯವು ಬ್ರಹ್ಮಸೂತ್ರದಲ್ಲೂ ಇದೆ. 'ತದ್ಯಥಾ' ಎಂದು ಸ್ಪುಟವಾಗಿ ಹೇಳಿರುವುದರಿಂದ ಶ್ರುತಿಯೂ ಸಹ ಇದನ್ನೇ ತಿಳಿಸುವುದು.

ಎ: ೧) ಬಿಂಬರೂಪಿಯಾದ ಭಗವಂತನ ದರ್ಶನವಾದ ಮೇಲೆ ಮೋಕ್ಷವು ಖಚಿತ; ಯಾವ ಕಾರಣದಿಂದಲೂ ಅದು ತಪ್ಪದು ಎಂದು ಭಾವ.

೨) ಇಲ್ಲಿ ಗೃಹೀತವಾಗಿರುವ ಬ್ರಹ್ಮಸೂತ್ರ ಮತ್ತು 'ಶ್ರುತಿ'ಗಳು ಹೀಗಿವೆ :

॥ ಓಂ ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ಓಂ ॥

– ಬ್ರಹ್ಮಸೂತ್ರ

'ತದ್ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ । **-(ಶ್ರುತಿಃ)**

(ಕಮಲದ ನಾಳಕ್ಕೆ ನೀರು ಅಂಟಿಕೊಳ್ಳದಿರುವಂತೆ, ಬ್ರಹ್ಮಜ್ಞಾನಿಗೆ ಪಾಪವು ಲೇಪವಾಗುವುದಿಲ್ಲ ಎಂದು ಭಾವ).

ಮಾರ್ಗನಿರೂಪಣೆ

ಮುಕ್ತಾಸ್ತು ಮಾನುಷಾ ದೇವಾನ್ ದೇವಾ ಇಂದ್ರಂ ಸ ಶಂಕರಮ್ ।
ಸ ಬ್ರಹ್ಮಾಣಂ ಕ್ರಮೇಣೈವ ತೇನ ಯಾಂತ್ಯಖಿಲಾ ಹರಿಮ್ ॥ ೧೨೯ ॥

---

೧೨೮. ಯೋಗ್ಯೋಪಾಸಂ ವಿನಾ ನೈವ ಮೋಕ್ಷಃ ಕಸ್ಯಾಪಿ ಸೇತ್ಸ್ಯತಿ । –ಭಾ. ತಾ

೧೨೮. 'ಏತತ್ ಸೂತ್ರಗಂ' ಇತ್ಯಸ್ಯ ಏತತ್ ಪ್ರಮೇಯಂ ಸೂತ್ರಗಮ್ । ...ಸೂತ್ರಗತಮಿತ್ಯರ್ಥಃ । –(ವಾ)

ತಥಾ ಪದರ್ಥಪ್ರತಿಪಾದಕಂ ಸೂತ್ರಗಂ ವಚನಂ ಚಾಸ್ತಿ। –(ಜ)

೧೨೯. ಶೇಷಗರುಡಮಾರ್ಗೌ ದ್ವೌ । ತತ್ರ ಯದಾ ಇಂದ್ರಪ್ರವೇಶಃ ತದಾ ರುದ್ರಶಬ್ದೇನ ಗರುಡಃ ಯದಾ ಕಾಮಪ್ರವೇಶಃ ತದಾ ರುದ್ರಶಬ್ದೇನ ಶೇಷೋ ಗ್ರಾಹ್ಯಃ । –(ವಾ)

ಅ: ಮುಕ್ತರಾಗುವ ಮನುಷ್ಯರು ದೇವತೆಗಳನ್ನೂ, ದೇವತೆಗಳು ಇಂದ್ರನನ್ನೂ, ಇಂದ್ರನು ಗರುಡನನ್ನೂ ಹೊಂದುವರು. ಅನಂತರ ಶೇಷನು ಬ್ರಹ್ಮದೇವರನ್ನು ಹೊಂದುವನು. ಆ ಬ್ರಹ್ಮದೇವರೊಂದಿಗೆ ಕೂಡಿಕೊಂಡು ಅವರ ನೇತೃತ್ವದಲ್ಲಿ ಇವರೆಲ್ಲರೂ ಶ್ರೀಹರಿಯನ್ನು ಹೊಂದುವರು.

ವಿ: ೧) ಮನುಷ್ಯರು ಮೊದಲು ಯಮಧರ್ಮನನ್ನು ಹೊಂದಿ ಆತನ ಮೂಲಕ ದ್ವಾರದೇವತೆಗಳನ್ನು ತಲುಪುವರು.

೨) 'ಶಂಕರಂ' ಎಂಬ ಪದಕ್ಕೆ ಈ ಪ್ರಸಂಗದಲ್ಲಿ 'ಶೇಷ' ಎಂದು ಅರ್ಥ.

೩) ಗರುಡಮಾರ್ಗ, ಶೇಷಮಾರ್ಗಗಳ ವಿವರಣೆ ಅನುವ್ಯಾಖ್ಯಾನದಲ್ಲಿ ಬಂದಿದೆ.

ಮುಕ್ತಿಯಲ್ಲೂ ಅಧೀನ್ಯ

ಉತ್ತರೋತ್ತರವಶ್ಯಾಶ್ಚ ಮುಕ್ತಾ ರುದ್ರಪುರಃಸರಾಃ ।
ನಿರ್ದೋಷಾ ನಿತ್ಯಸುಖಿನಃ ಪುನರಾವರ್ತಿವರ್ಜಿತಾಃ ।
ಸ್ವೇಚ್ಛಯೈವ ರಮಂತೇऽತ್ರ ನಾನಿಷ್ಟಂ ತೇಷು ಕಿಂಚನ ॥ ೧೩೦ ॥

ಅ: ಶೇಷದೇವರೇ ಮೊದಲಾದ ಮುಕ್ತರುಗಳೆಲ್ಲ ತಮಗಿಂತ ಉತ್ತಮರಾಗಿರುವವರಿಗೆ ಅಧೀನರಾಗಿರುವರು; ದೋಷರಹಿತರಾಗಿರುವರು, ಸದಾ ಸುಖಿಗಳಾಗಿರುವರು; ಅಲ್ಲಿಂದ

---

೧೩೦. ಯಥಾ ಸಂಕಲ್ಪಭೋಗಾಶ್ಚ ಚಿದಾನಂದಶರೀರಿಣಃ ।
ಜಗತ್ಸೃಷ್ಟ್ಯಾದಿವಿಷಯೇ ಮಹಾಸಾಮರ್ಥ್ಯಮಪ್ಯತೇ ।
ಯಥೇಷ್ಟಶಕ್ತಿಮಂತಶ್ಚ ವಿನಾ ಸ್ವಾಭಾವಿಕೋತ್ತಮಾನ್ ।
ಅನನ್ಯವಶಗಾಶ್ಚೈವ ವೃದ್ಧಿಹ್ರಾಸವಿವರ್ಜಿತಾಃ ।
ದುಃಖಾದಿರಹಿತಾ ನಿತ್ಯಂ ಮೋದಂತೇऽವಿರತಂ ಸುಖಮ್ । –ಅಣುಭಾಷ್ಯ

೧೩೦. ಸ್ವಾಧಿಕಾನಾಂ ವಶತ್ವಾತ್ತು ಪರಮಂ ಸುಖಮೇವ ತು ।
ತದನ್ಯೇಷಾಂ ವಶೇ ಯಸ್ತು ಕಿಂ ಸುಖಂ ತಸ್ಯ ಭಣ್ಯತಾಮ್ ।
ಸ್ವಾಧಿಕಾನಾಂ ವಶತ್ವಂ ಚ ತೇಷು ಭಕ್ತಿಮತಃ ಸುಖಮ್ ।
ತದನ್ಯೇಷಾಂ ತು ದುಃಖಸ್ಯ ತಸ್ಮಾದ್ಭಕ್ತೋऽಧಿಕೋ ಭವೇತ್। –ಭಾ.ತಾ.

೧೩೦. 'ಅನಾವೃತ್ತಿಃ ಶಬ್ದಾತ್ ಅನಾವೃತ್ತಿಃ ಶಬ್ದಾತ್' –ಬ್ರಹ್ಮಸೂತ್ರ (೪/೪/೨೩)

೧೩೦. 'ಸಂಕಲ್ಪಾದೇವ ತಚ್ಛ್ರುತೇಃ'। –ಬ್ರಹ್ಮಸೂತ್ರ (೪/೪/೮)

ಅವರೆಂದೂ ಮರಳುವುದೇ ಇಲ್ಲ; ಅವರು ಯಥೇಷ್ಟವಾಗಿ ಅಲ್ಲಿ ವಿಹರಿಸುವರು; ಅವರಲ್ಲಿ ಯಾವುದೇ ಅನಿಷ್ಟವೂ ಅಲ್ಲಿ ಇರುವುದಿಲ್ಲ.

ವಿ: ೧) 'ಮುಕ್ತಿಯಲ್ಲಿ ಸರ್ವರಿಗೂ ಸಾಮ್ಯವಿರುತ್ತದೆ; ತಾರತಮ್ಯಕ್ಕೆ ಅವಕಾಶವಿಲ್ಲ; ಮೋಕ್ಷದಲ್ಲಿ ಸುಖವೇ ಇರುವುದಿಲ್ಲ; ಅದು ದುಃಖಾಭಾವರೂಪವಾದದ್ದು ಮಾತ್ರ' ಎಂಬ ವಾದಗಳನ್ನು ಇಲ್ಲಿ ನಿರಾಕರಿಸಿರುವರು.

೨) ಮುಕ್ತಿಯಲ್ಲಿ ತಾರತಮ್ಯವು ಇದ್ದೇ ಇರುವುದು; ಯಥಾಯೋಗ್ಯವಾಗಿ ಪೂರ್ಣವೂ, ನಿತ್ಯವೂ ಆದ ಸುಖವೂ ಇರುವುದು; ಅದು ನಿತ್ಯ ಎಂದು ಭಾವ.

೩) 'ರುದ್ರಪುರಃಸರಾಃ' ಎಂಬಲ್ಲಿನ 'ರುದ್ರಶಬ್ದಕ್ಕೆ 'ಶೇಷ' ಎಂದು ಅರ್ಥ. ಮುಕ್ತಿಯಲ್ಲಿ 'ರುದ್ರ'ಪದವಿ ಇರುವುದೇ ಇಲ್ಲ.

ಅಸುರರಲ್ಲೂ ಪ್ರತ್ಯೇಕ ಗಣಗಳು

ಅಸುರಾಃ ಕಲಿಪರ್ಯಂತಾ ಏವಂ ದುಃಖೋತ್ತರೋತ್ತರಾಃ ।
ಕಲಿರ್ದುಃಖಾಧಿಕಸ್ತೇಷು ತೇಽಪ್ಯೇವಂ ಬ್ರಹ್ಮವದ್ಗಣಾಃ ।
ತಥಾಽನ್ಯೇಽಪ್ಯಸುರಾಃ ಸರ್ವೇ ಗಣಾ ಯೋಗ್ಯತಯಾ ಸದಾ ॥ ೧೩೧ ॥

ಅ: 'ಕಲಿ'ಯವರೆಗಿನ ಅಸುರರು ಹೀಗೆಯೇ ಕ್ರಮವಾಗಿ ಹೆಚ್ಚು ಹೆಚ್ಚಾಗಿ ದುಃಖಿಗಳಾಗಿರುವರು; ಅವರಲ್ಲೆಲ್ಲಾ ಕಲಿಯೇ ಹೆಚ್ಚು ದುಃಖಿಯು; ಕಲಿಪದವಿಗೆ ಯೋಗ್ಯರಾದ ಜೀವರು ಸಹ ಬ್ರಹ್ಮಪದವಿಗೆ ಯೋಗ್ಯರಾದ ಜೀವರಂತೆ ಪ್ರತ್ಯೇಕ ಗಣದವರಾಗಿರುವರು. ಅದರಂತೆ ಇತರ ಆಯಾ ಗಣಗಳಿಗೆ ಯೋಗ್ಯರಾದ ಅಸುರಜೀವರು ಸಹ ಪ್ರತ್ಯೇಕವಾಗಿಯೇ ಇರುವರು.

---

೧೩೧. ತೇಽಪಿ – ಕಲಿಪದಯೋಗ್ಯಾ ಅಪಿ । –(ವಾ.)

೧೩೧. ತೇಽಪಿ – ಭಾವಿಕಲಯಃ ತತ್ಪದಯೋಗ್ಯಾಃ ಬ್ರಹ್ಮಪದಯೋಗ್ಯಋಜುವದ್ಗಣಾಃ ಸಮೂಹಾಃ ಸಂತಿ। -(ವಾ.)

೧೩೧. ಯಥಾ ರುದ್ರಾದಿಗಣಾಃ ಅನ್ಯೇ ಕಲೇರನ್ಯೇ ದ್ವಾಪರಾದಯಃ ಸರ್ವೇಽಸುರಾ ಯೋಗ್ಯತಯಾ ಗಣಾಃ ಬಹವಃ ಸದಾ ಸಂತಿ । –(ಜ.)

೧೩೧. 'ಏವಂ ಸರ್ವಪದಾನಾಂ ಚ ಯೋಗ್ಯಾಃ ಸಂತಿ ಪೃಥಗ್ಗಣಾಃ'(ಶ್ಲೋ. ೯೫) – ಎಂದು ಈ ಮೊದಲೇ ಹೇಳಿರುವುದನ್ನು ಸಹ ಇಲ್ಲಿ ಗಮನಿಸಬೇಕು.

ವಿಃ ೧) ದೇವತೆಗಳಲ್ಲಿ ತಾರತಮ್ಯವಿರುವಂತೆ ಅಸುರರಲ್ಲಿಯೂ ತಾರತಮ್ಯವಿದೆ; ಕ್ರಮೇಣ ಸುಖಾಧಿಕ್ಯವು ಮೇಲಿನ ದೇವತೆಗಳಲ್ಲಿರುವಂತೆ, ಕ್ರಮವಾಗಿ ದುಃಖಾಧಿಕ್ಯವು ಅಸುರರಲ್ಲಿರುತ್ತದೆ; ಅತ್ಯಂತ ಹೆಚ್ಚುದುಃಖಿಯಾದ ಕಲಿಯೇ ಜೀವಾಧಮ.

೨) ಬ್ರಹ್ಮಪದವಿಗೆ ಯೋಗ್ಯರಾದ 'ಋಜು'ಗಳೆಂಬ ಜೀವರ ಪ್ರತ್ಯೇಕ ಗುಂಪು ಇರುವಂತೆ ಕಲಿಪದವಿಗೆ ಯೋಗ್ಯರಾದ ಅಸುರಜೀವರ ಪ್ರತ್ಯೇಕ ಗುಂಪೇ ಉಂಟು; ಅವರು ಸಹ ಸಂಖ್ಯೆಯಲ್ಲಿ 'ಅನಂತ'ರಾಗಿರುವರು.

೩) ದ್ವಾಪರಾದಿ ಇತರ ಪದವಿಗೆ ಅರ್ಹರಾದ ಅಸುರಜೀವರು ಸಹ ಹೀಗೆ ಪ್ರತ್ಯೇಕವಾಗಿ ಗಣಶಃ ಅನಂತ ಸಂಖ್ಯಾಕರಾಗಿರುವರು.

ಬ್ರಹ್ಮದೇವರ ಜೀವೋತ್ತಮತ್ವ

ಬ್ರಹ್ಮೈವ ಸರ್ವಜೀವೇಭ್ಯಃ ಸದಾ ಸರ್ವಗುಣಾಧಿಕಃ ।
ಮುಕ್ತೋಽಪಿ ಸರ್ವಮುಕ್ತಾನಾಮಾಧಿಪತ್ಯೇ ಸ್ಥಿತಃ ಸದಾ ।
ಆಶ್ರಯಸ್ತಸ್ಯ ಭಗವಾನ್ ಸದಾ ನಾರಾಯಣಃ ಪ್ರಭುಃ ॥ ೧೩೨ ॥

ಅ: ಬ್ರಹ್ಮದೇವರು ಸರ್ವಜೀವರಿಗಿಂತಲೂ ಸದಾ ಸರ್ವಗುಣಗಳಲ್ಲೂ ಶ್ರೇಷ್ಠರಾಗಿರುವರು; ಹಾಗೆಯೇ ಮುಕ್ತಬ್ರಹ್ಮರು ಇತರ ಎಲ್ಲ ಮುಕ್ತರ ಒಡೆತನವನ್ನು ಸದಾ ಹೊಂದಿರುವರು. ಈ ಬ್ರಹ್ಮದೇವರಿಗೆ ಸದಾ ಭಗವಂತನೂ ಸರ್ವಸ್ವಾಮಿಯೂ ಆದ ನಾರಾಯಣನೇ ಸದಾ ಆಶ್ರಯ.

ವಿಃ ಇತರ ಸಕಲಜೀವರಿಗಿಂತಲೂ ಶ್ರೇಷ್ಠರಾದ್ದರಿಂದ ಬ್ರಹ್ಮದೇವರು 'ಜೀವೋತ್ತಮ' ಎಂದೂ, ಅವರಿಗೂ ಸ್ವಾಮಿಯಾದ ನಾರಾಯಣನೇ 'ಸರ್ವೋತ್ತಮ' ಎಂದೂ ಭಾವ.

ಅಧ್ಯಾಯೋಪಸಂಹಾರ

ಇತ್ಯೃಗ್ಯಜುಃಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥ ೧೩೩ ॥

ಗ್ರಂಥಕಾರರು

ವಿಷ್ಣ್ವಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥ ೧೩೪ ॥

ಅ: 'ಪೂರ್ಣಪ್ರಜ್ಞ' ಎಂಬ ಹೆಸರಿನ 'ಆನಂದತೀರ್ಥ' ಎಂಬ ಜ್ಞಾನಿಗಳಿಂದ ಮಹಾ-ವಿಷ್ಣುವಿನ ಆಜ್ಞೆಯಿಂದಾಗಿ, ಅವನ ಅನುಗ್ರಹಬಲದ ಹಿರಿಮೆಯಿಂದಲೇ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಪಂಚರಾತ್ರವೆಂಬ ಇತಿಹಾಸ ಇವೆಲ್ಲವು-ಗಳಿಂದಲೂ, ಪುರಾಣಗಳಿಂದಲೂ, ಇತರ ಶಾಸ್ತ್ರಗಳಿಂದಲೂ ಈ ತೆರನಾಗಿ ನಿರ್ಣಯವು ಮಾಡಲ್ಪಟ್ಟಿತು.

ವಿ: ೧) ಇಲ್ಲಿ **'ವಿದುಷಾ'** ಎಂಬ ಪದವು **'ವಿದ್ವಾನ್ ಮಧ್ವಃ'**(ಋಗ್ವೇದ) ಎಂಬ ಶ್ರುತಿವಾಕ್ಯವನ್ನು ಜ್ಞಾಪಿಸುತ್ತದೆ.

೨) ಇವುಗಳಲ್ಲಿ **'ಪೂರ್ಣಪ್ರಜ್ಞ'** ಎಂಬುದು ಅವರ ಆಶ್ರಮನಾಮ; **'ಆನಂದತೀರ್ಥ'** ಎಂಬುದು ಪೀಠನಾಮ.

ಗ್ರಂಥ ಮಹಿಮೆ

ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಽಸೌ ॥ ೧೩೫ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಸರ್ವಶಾಸ್ತ್ರಾರ್ಥನಿರ್ಣಯೋನಾಮ ಪ್ರಥಮೋಽಧ್ಯಾಯಃ ॥ ೧ ॥

ಅ: ಮಹಾವಿಷ್ಣುವಿನ ಅನುಜ್ಞೆಯನ್ನು ಪಡೆದೇ ಸಕಲಶಾಸ್ತ್ರಗಳ ಉತ್ತಮವಾದ ನಿರ್ಣಯವನ್ನು ನಾವು ತಿಳಿಸಿರುವೆವು; ಇದನ್ನು ತಿಳಿದಾಗಲೆ ಭಗವಂತನಾದ ಈ ವಿಷ್ಣುವನ್ನು ಹೊಂದಲು ಸಾಧ್ಯ.

ವಿ: ೧) ಸಕಲಶಾಸ್ತ್ರಗಳಿಂದಲೂ ವಿಷ್ಣುವೇ ಪ್ರತಿಪಾದಿತನಾಗಿದ್ದರೂ, ಅಂತಹ ಶಾಸ್ತ್ರಗಳಿಂದ ಅವನು ಹೇಗೆ ಪ್ರತಿಪಾದಿತನಾಗಿರುವನು ಎಂದು ನಿರ್ಣಯಿಸಿಕೊಂಡಾಗ ಮಾತ್ರವೇ ಅವನನ್ನು ತಿಳಿಯಲು ಸಾಧ್ಯ.

೨) ಅಂತಹ ನಿರ್ಣಯವನ್ನು ಅವನ ಅನುಗ್ರಹದಿಂದಲೇ ಶ್ರೀಮದಾಚಾರ್ಯರು ರಚಿಸಿರುವರು; ಆದ್ದರಿಂದ ಈ ಮಹಾಭಾರತತಾತ್ಪರ್ಯನಿರ್ಣಯ ಗ್ರಂಥವನ್ನು ತಿಳಿದರೆ ಮಾತ್ರವೇ ಆ ವಿಷ್ಣುವನ್ನು ಹೊಂದಲು ಸಾಧ್ಯ ಎಂದು ಭಾವ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಸರ್ವಶಾಸ್ತ್ರಾರ್ಥನಿರ್ಣಯ'ವೆಂಬ ಮೊದಲನೆಯ ಅಧ್ಯಾಯ ಮುಗಿಯಿತು ॥ ೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೨

(ಭಾರತವಾಕ್ಯೋದ್ಧಾರಃ)

(ಮಹಾಭಾರತದ ಹಿರಿಮೆ, ನಿರ್ಣಯದ ಅಗತ್ಯ, ಕ್ಷತ್ರಿಯಾದಿಗಳಲ್ಲಿ ತಾರತಮ್ಯದ ಕ್ರಮ, ಸ್ತ್ರೀಯರಲ್ಲಿ ತಾರತಮ್ಯ, ಮಹಾಭಾರತದ ಶ್ಲೋಕಗಳ ವಿವರಣೆ)

ಮಂಗಲಾಚರಣೆ

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನಃ ॥ ೧ ॥

ಅ: ಚಿಂತನೆಗೆ ಎಟುಕದವನೂ, ಸಕಲ ದೇವತೆಗಳಿಂದಲೂ ಸರ್ವೋತ್ತಮತ್ವೇನ ವಂದ್ಯನೂ, ಬ್ರಹ್ಮದೇವರು ಮೊದಲಾದ ಉತ್ತಮದೇವತೆಗಳಿಗೆ ಗುರುವೂ, ಸಜ್ಜನರ ಅಭೀಷ್ಟವನ್ನು ಈಡೇರಿಸುವವನೂ, ಗುಣಗಣಗಳ ಸಾಗರನೂ, ಸದಾ ಸಕಲದೋಷ-ದೂರನೂ, ಪುಂಡರೀಕಾಕ್ಷನೂ, ಲಕ್ಷ್ಮೀಪತಿಯೂ, ನಮ್ಮೆಲ್ಲರಿಗೂ ಜ್ಞಾನಪ್ರದನೂ ಆದ ಶ್ರೀಹರಿಯು ಸರ್ವೋತ್ಕೃಷ್ಟನಾಗಿರುವನು.

---

೧. ಜಯೇರ್ಜಯಾಭಿಭವಯೋರಾದ್ಯೇಽರ್ಥೇಽಸಾವಕರ್ಮಕಃ ।
ಉತ್ಕರ್ಷಪ್ರಾಪ್ತಿರಾದ್ಯೋಽರ್ಥೋ ದ್ವಿತೀಯೇಽರ್ಥೇ ಸಕರ್ಮಕಃ। – ಮಾಯಾವಾದಖಂಡನಟೀಕಾ

೧. ಹರಿಃ = ಸಕಲದುರ್ಜನಸಂಹಾರೀ। – (ವಾ)

ಹರಿಃ = ಹರತಿ ಪಾಪಮಿತಿ ಪ್ರತಿಬಂಧಕಪಾಪನಾಶಕಃ। –(ಜ)

೧. ಸ್ವಗತಾನಂತಮಾಹಾತ್ಮ್ಯಸಹಿತತಯಾ ಚಿಂತಯಿತುಮಶಕ್ಯಃ। –(ವಾ)

೧. ಅರಂ ದೋಷಂ ನಯಂತಿ ನಾಶಯಂತೀತಿ ಅರ್ಣಾಂಸಿ ಪುಣ್ಯಜಲಾನಿ । 'ನೀಙ್ ಪ್ರಾಪಣೇ' ಇತಿ ಧಾತೋಃ ಕರ್ತ್ರರ್ಥೇ ಔಣಾದಿಕೇ ಡಪ್ರತ್ಯಯೇ ಕೃತೇ ಸತಿ ನಿಷ್ಪನ್ನಮಿದಂ ಪದಮ್ । ದ್ವೌ ಚಾಪರೌ ವರ್ಣವಿಕಾರನಾಶೌ ಇತಿ ವಚನಾತ್ ನಿರುಕ್ತತ್ವಾತ್ ಪದಾಂತಾಕಾರಲೋಪಃ । ನಿಖಿಲಗುಣಗಣಾ ಏವ ಅರ್ಣಾಂಸಿ ಯಸ್ಯ ಸ ತಥೋಕ್ತಃ ನಿಖಿಲಗುಣಗಣಾರ್ಣವ ಇತ್ಯುಕ್ತಂ ಭವತಿ । ವರ್ಣವಾಚಕಾರ್ಣಪದವತ್ ಜಲವಾಚಕಮಪ್ಯಕಾರಾಂತಮರ್ಣಪದಂ ವಾ। –(ವಾ.)

ಅರ್ಣ ಇತ್ಯುದಕನಾಮ। ತತೋ 'ಮತ್ವರ್ಥೇ ತದ್ಧಿತಾ' ಇತಿ ಡಪ್ರತ್ಯಯ ಇತಿ ಋಗ್ಭಾಷ್ಯಟೀಕೋಕ್ತೇಃ।
– (ಜ)

ವಿ: ೧) 'ಸಕಲದುರ್ಜನಸಂಹಾರಿ' 'ಪಾಪನಾಶಕ' ಮೊದಲಾದ ಅನೇಕಾರ್ಥಗಳು 'ಹರಿ' ಶಬ್ದಕ್ಕೆ ಉಂಟು.

೨) ಈ ಶ್ಲೋಕವು ಮಹಾಭಾರತದ ಮಂಗಲ ಶ್ಲೋಕವಾದ 'ನಾರಾಯಣಂ ಸುರಗುರುಂ' ಎಂಬುದಕ್ಕೆ ವ್ಯಾಖ್ಯಾನರೂಪವಾಗಿದೆ.

ಅಧ್ಯಾಯದ ವಿಷಯ

ಉಕ್ತಃ ಪೂರ್ವಾಧ್ಯಾಯೇ ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ ।
ಅಥ ಭಾರತವಾಕ್ಯಾನ್ಯೇತೈರೇವಾಧ್ಯವಸ್ಯಂತೇ ॥ ೨ ॥

ಅ: ಹಿಂದಿನ ಅಧ್ಯಾಯದಲ್ಲಿ ಶಾಸ್ತ್ರಗಳ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾದ ದಿವ್ಯ ನಿರ್ಣಯ ಹೇಳಲ್ಪಟ್ಟಿತು; ಈಗ ಮಹಾಭಾರತದ ವಾಕ್ಯಗಳು ಈ ಉತ್ತಮವಾದ ವಾಕ್ಯಗಳಿಂದಲೇ ನಿರ್ಣಯಿಸಲ್ಪಡುವವು.

ಗ್ರಂಥವಿಪ್ಲವಕ್ಕೆ ಕಾರಣಗಳು

ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥ ೩ ॥

---

೧. ಸರಸಿಜನಯನ ಇತಿ ಪ್ರಸಾದೋನ್ಮುಖ ಇತಿ ಧ್ವನಯತಿ । –(ಜ)

೧. ಮಾನಂ ಸಚ್ಛಾಸ್ತ್ರಂ ತದ್ದದಾತಿ = ಉಪದಿಶತೀತಿ ಮಾನದಃ । – (ಜ)

೧. ಯದ್ವಾ ಪೂರ್ವಾರ್ಧಸ್ಥವಿಶೇಷಣಾನಾಮುತ್ತರಾರ್ಧಸ್ಥವಿಶೇಷಣಾನಿ ಉಪಪಾದಕಾನಿ । ಬಹುಗುಣವದಚಿಂತ್ಯತ್ವಾತ್, ದೋಷರಹಿತಸ್ಯೈವ ಪರದೋಷಹಾರಿತ್ವಾತ್ ಶುಭದೃಷ್ಟಿವತಃ ವಂದ್ಯತ್ವಾತ್, ಜ್ಞಾನದಸ್ಯೈವ ಗುರುತ್ವಾತ್ ಲಕ್ಷ್ಮೀಪತೇರಭೀಷ್ಟದತ್ವಾತ್ । –(ಜ)

೨. ಪರಃ = ಉತ್ತಮಃ; ತತ್ರ ಹೇತುಃ = ದಿವ್ಯಃ ಇತಿ = ದೇವ(ದ್ಯು)ಪದವಾಚ್ಯಶ್ರೀನಾರಾಯಣಸಂಬಂಧೀ । –(ವಾ)

೨. ಪರಃ = ಸರ್ವೋತ್ಕರ್ಷಪ್ರತಿಪಾದಕಃ । ದಿವ್ಯಃ, ದೇವಯೋಗ್ಯಃ । –(ಜ)

೨. ಏತೈರೇವ । ಕೈಶ್ಚಿದ್ಭಾರತವಾಕ್ಯೈಃ ತದುಪಯಕ್ತಬ್ರಹ್ಮಾಂಡಮಾರ್ಕಂಡೇಯಾದಿಪ್ರಮಾಣವಚನೈರೇವ । ನ ತು ಸ್ವಕಪೋಲಕಲ್ಪಿತವಚನೈಃ । –(ವಾ)

೨. ಭಾರತವಾಕ್ಯಾನಿ = ತತ್ರ ತತ್ರತ್ಯ ಕಠಿನಭಾರತವಾಕ್ಯಾನಿ । –(ವಾ)

೨. ಅಧ್ಯವಸ್ಯಂತೇ = ನಿರ್ಣೀಯಂತೇ । –(ವಾ, ಜ)

ಅಧ್ಯಾಯ - ೨

(ಭಾರತವಾಕ್ಯೋದ್ಧಾರಃ)

(ಮಹಾಭಾರತದ ಹಿರಿಮೆ, ನಿರ್ಣಯದ ಅಗತ್ಯ, ಕ್ಷತ್ರಿಯಾದಿಗಳಲ್ಲಿ ತಾರತಮ್ಯದ ಕ್ರಮ, ಸ್ತ್ರೀಯರಲ್ಲಿ ತಾರತಮ್ಯ, ಮಹಾಭಾರತದ ಶ್ಲೋಕಗಳ ವಿವರಣೆ)

ಮಂಗಲಾಚರಣೆ

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನಃ ॥ ೧ ॥

ಅ: ಚಿಂತನೆಗೆ ಎಟುಕದವನೂ, ಸಕಲ ದೇವತೆಗಳಿಂದಲೂ ಸರ್ವೋತ್ತಮತ್ವೇನ ವಂದ್ಯನೂ, ಬ್ರಹ್ಮದೇವರು ಮೊದಲಾದ ಉತ್ತಮದೇವತೆಗಳಿಗೆ ಗುರುವೂ, ಸಜ್ಜನರ ಅಭೀಷ್ಟವನ್ನು ಈಡೇರಿಸುವವನೂ, ಗುಣಗಣಗಳ ಸಾಗರನೂ, ಸದಾ ಸಕಲದೋಷ-ದೂರನೂ, ಪುಂಡರೀಕಾಕ್ಷನೂ, ಲಕ್ಷ್ಮೀಪತಿಯೂ, ನಮ್ಮೆಲ್ಲರಿಗೂ ಜ್ಞಾನಪ್ರದನೂ ಆದ ಶ್ರೀಹರಿಯು ಸರ್ವೋತ್ಕೃಷ್ಟನಾಗಿರುವನು.

---

೧. ಜಯೇರ್ಜಯಾಭಿಭವಯೋರಾದ್ಯೇಽರ್ಥೇಽಸಾವಕರ್ಮಕಃ ।
ಉತ್ಕರ್ಷಪ್ರಾಪ್ತಿರಾದ್ಯೋಽರ್ಥೋ ದ್ವಿತೀಯೇಽರ್ಥೇ ಸಕರ್ಮಕಃ । – ಮಾಯಾವಾದಖಂಡನಟೀಕಾ

೧. ಹರಿಃ = ಸಕಲದುರ್ಜನಸಂಹಾರೀ । – (ವಾ)

ಹರಿಃ = ಹರತಿ ಪಾಪಮಿತಿ ಪ್ರತಿಬಂಧಕಪಾಪನಾಶಕಃ । –(ಜ)

೧. ಸ್ವಗತಾನಂತಮಾಹಾತ್ಮ್ಯಸಹಿತತಯಾ ಚಿಂತಯಿತುಮಶಕ್ಯಃ । –(ವಾ)

೧. ಅರಂ ದೋಷಂ ನಯಂತಿ ನಾಶಯಂತೀತಿ ಅರ್ಣಾನಿ ಪುಣ್ಯಜಲಾನಿ । 'ನೀಙ್ ಪ್ರಾಪಣೇ' ಇತಿ ಧಾತೋಃ ಕರ್ತ್ರರ್ಥೇ ಔಣಾದಿಕೇ ಡಪ್ರತ್ಯಯೇ ಕೃತೇ ಸತಿ ನಿಷ್ಪನ್ನಮಿದಂ ಪದಮ್ । ದ್ವೌ ಚಾಪರೌ ವರ್ಣವಿಕಾರನಾಶೌ ಇತಿ ವಚನಾತ್ ನಿರುಕ್ತತ್ವಾತ್ ಪದಾಂತಾಕಾರಲೋಪಃ । ನಿಖಿಲಗುಣಗಣಾ ಏವ ಅರ್ಣಾನಿ ಯಸ್ಯ ಸ ತಥೋಕ್ತಃ ನಿಖಿಲಗುಣಗಣಾರ್ಣವ ಇತ್ಯುಕ್ತಂ ಭವತಿ । ವರ್ಣವಾಚಕಾರ್ಣಪದವತ್ ಜಲವಾಚಕಮಪ್ಯಕಾರಾಂತಮರ್ಣಪದಂ ವಾ । –(ವಾ.)

ಅರ್ಣ ಇತ್ಯುದಕನಾಮ । ತತೋ 'ಮತ್ವರ್ಥೇ ತದ್ಧಿತಾ' ಇತಿ ಡಪ್ರತ್ಯಯ ಇತಿ ಋಗ್ಭಾಷ್ಯಟೀಕೋಕ್ತೇಃ । – (ಜ)

ಎ: ೧) 'ಸಕಲದುರ್ಜನಸಂಹಾರಿ' 'ಪಾಪನಾಶಕ' ಮೊದಲಾದ ಅನೇಕಾರ್ಥಗಳು 'ಹರಿ' ಶಬ್ದಕ್ಕೆ ಉಂಟು.

೨) ಈ ಶ್ಲೋಕವು ಮಹಾಭಾರತದ ಮಂಗಲ ಶ್ಲೋಕವಾದ 'ನಾರಾಯಣಂ ಸುರಗುರುಂ' ಎಂಬುದಕ್ಕೆ ವ್ಯಾಖ್ಯಾನರೂಪವಾಗಿದೆ.

ಅಧ್ಯಾಯದ ವಿಷಯ

ಉಕ್ತಃ ಪೂರ್ವಾಧ್ಯಾಯೇ ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ ।
ಅಥ ಭಾರತವಾಕ್ಯಾನ್ಯೇತೈರೇವಾಧ್ಯವಸ್ಯಂತೇ ॥ ೨ ॥

ಅ: ಹಿಂದಿನ ಅಧ್ಯಾಯದಲ್ಲಿ ಶಾಸ್ತ್ರಗಳ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾದ ದಿವ್ಯ ನಿರ್ಣಯ ಹೇಳಲ್ಪಟ್ಟಿತು; ಈಗ ಮಹಾಭಾರತದ ವಾಕ್ಯಗಳು ಈ ಉತ್ತಮವಾದ ವಾಕ್ಯಗಳಿಂದಲೇ ನಿರ್ಣಯಿಸಲ್ಪಡುವವು.

ಗ್ರಂಥವಿಪ್ಲವಕ್ಕೆ ಕಾರಣಗಳು

ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥ ೩ ॥

---

೧. ಸರಸಿಜನಯನ ಇತಿ ಪ್ರಸಾದೋನ್ಮುಖ ಇತಿ ಧ್ವನಯತಿ । –(ಜ)

೧. ಮಾನಂ ಸಚ್ಛಾಸ್ತ್ರಂ ತದ್ದದಾತಿ = ಉಪದಿಶತೀತಿ ಮಾನದಃ । – (ಜ)

೧. ಯದ್ವಾ ಪೂರ್ವಾರ್ಧಸ್ಥವಿಶೇಷಣಾನಾಮುತ್ತರಾರ್ಧಸ್ಥವಿಶೇಷಣಾನಿ ಉಪಪಾದಕಾನಿ । ಬಹುಗುಣವದಚಿಂತ್ಯತ್ವಾತ್, ದೋಷರಹಿತಸ್ಯೈವ ಪರದೋಷಹಾರಿತ್ವಾತ್ ಶುಭದೃಷ್ಟಿವತಃ ವಂದ್ಯತ್ವಾತ್, ಜ್ಞಾನದಸ್ಯೈವ ಗುರುತ್ವಾತ್ ಲಕ್ಷ್ಮೀಪತೇರಭೀಷ್ಟದತ್ವಾತ್ । –(ಜ)

೨. ಪರಃ = ಉತ್ತಮಃ; ತತ್ರ ಹೇತುಃ = ದಿವ್ಯಃ ಇತಿ = ದೇವ(ದ್ಯು)ಪದವಾಚ್ಯಶ್ರೀನಾರಾಯಣಸಂಬಂಧೀ । –(ವಾ)

೨. ಪರಃ = ಸರ್ವೋತ್ಕರ್ಷಪ್ರತಿಪಾದಕಃ । ದಿವ್ಯಃ, ದೇವಯೋಗ್ಯಃ । –(ಜ)

೨. ಏತೈರೇವ । ಕೈಶ್ಚಿದ್ಭಾರತವಾಕ್ಯೈಃ ತದುಪಯಕ್ತಬ್ರಹ್ಮಾಂಡಮಾರ್ಕಂಡೇಯಾದಿಪ್ರಮಾಣವಚನೈರೇವ । ನ ತು ಸ್ವಕಪೋಲಕಲ್ಪಿತವಚನೈಃ । –(ವಾ)

೨. ಭಾರತವಾಕ್ಯಾನಿ = ತತ್ರ ತತ್ರತ್ಯ ಕಠಿನಭಾರತವಾಕ್ಯಾನಿ । –(ವಾ)

೨. ಅಧ್ಯವಸ್ಯಂತೇ = ನಿರ್ಣೀಯಂತೇ । –(ವಾ, ಜ)

ಅ: ಕೆಲವೆಡೆಗಳಲ್ಲಿ ಶ್ಲೋಕಗಳನ್ನು ಸೇರಿಸುವರು; ಮತ್ತೆ ಕೆಲವೆಡೆ ಅಲ್ಲಿರುವ ತಮ್ಮ ಮತಕ್ಕೆ ಪ್ರತಿಕೂಲವಾದ ಶ್ಲೋಕಗಳನ್ನು ತೆಗೆದುಹಾಕುವರು; ಕೆಲವೆಡೆಗಳಲ್ಲಿ ಶ್ಲೋಕಗಳನ್ನು ಸ್ಥಳಪಲ್ಲಟ ಮಾಡುವರು; ಇದರೊಂದಿಗೆ ಅಜ್ಞಾನ ಅಥವಾ ಭ್ರಾಂತಿಗಳಿಂದಾಗಿ ಸಹ ಕೆಲವೊಮ್ಮೆ ಗ್ರಂಥದ ಸ್ವರೂಪ ಕೆಡುವುದುಂಟು.

ವಿ: ೧) ಕಾಲಕಳೆದಂತೆ ಮೂಲಗ್ರಂಥಗಳು ವಿರೂಪಗೊಳ್ಳುವ ಕಾರಣಗಳನ್ನು ಶ್ರೀಮದಾಚಾರ್ಯರು ಇಲ್ಲಿ ತುಂಬಾ ಪರಿಣಾಮಕಾರಿಯಾಗಿ ನಿರೂಪಿಸಿರುವರು;

೨) ಶೈವಾದಿ ಇತರ ಮತಗಳ ಜನರು ತಮ್ಮ ಮತವನ್ನು ಸಾಧಿಸಲೆಂದು ಮೂಲದಲ್ಲಿ ಇಲ್ಲದ ಶ್ಲೋಕಗಳನ್ನು ತಾವೇ ಬರೆದು ಗ್ರಂಥಗಳಲ್ಲಿ ಸೇರಿಸಿಬಿಡುವರು;

೩) ತಮ್ಮ ಮತಕ್ಕೆ ಪ್ರತಿಕೂಲವಾಗುವಂತಹ ವಿಷ್ಣುಸರ್ವೋತ್ತಮತ್ವ ಜಗತ್ಸತ್ಯತ್ವಾದಿ ಪ್ರಮೇಯಗಳನ್ನು ಪ್ರತಿಪಾದಿಸುವ ಗ್ರಂಥಸ್ಥಶ್ಲೋಕಗಳನ್ನು ತೆಗೆದುಹಾಕುವರು; ಇರುವ ಶ್ಲೋಕ–ಗಳನ್ನು ಸಹ ಅವುಗಳ ನಿಜವಾದ ಅರ್ಥ ತಿಳಿಯಲಾಗದಂತೆ ಸ್ಥಳವ್ಯತ್ಯಾಸ ಪಾಠವ್ಯತ್ಯಾಸಾದಿಗಳ ಮೂಲಕ ಕಲುಷಿತಗೊಳಿಸುವರು.

೪) ವಂಚಕರು ಮಾಡುವ ಇಂತಹ ಅಪಚಾರ ಮಾತ್ರವಲ್ಲದೆ ಸಜ್ಜನರೇ ಮಾಡುವ ಕೆಲವು ಪ್ರಾಮಾದಿಕವಾದ ದೋಷಗಳು ಸಹ ಮೂಲಗ್ರಂಥಗಳನ್ನು ವಿರೂಪಗೊಳಿಸಲು ಕಾರಣವಾಗಿವೆ ಎಂದು ಭಾವ.

ಅನುತ್ಸನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ ।
ಉತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಽಪಿ ನ ವರ್ತತೇ ॥ ೪ ॥

---

೩. ಗ್ರಂಥಾನ್ = ಸ್ವಸ್ವಮತಾನುಕೂಲಸ್ವಕಪೋಲಕಲ್ಪಿತಶ್ಲೋಕಾನ್, ಕ್ವಚಿತ್ ಮೂಲಗ್ರಂಥಸ್ಯ ಭಾಗೇ। –(ವಾ)

೩. ಕ್ವಚಿತ್ = ಸ್ವಪ್ರತಿಕೂಲಶ್ಲೋಕಾನ್, ಅಂತರಿತಾನ್ = ಅಂತರ್ಧಾನಂ ಪ್ರಾಪ್ತಾನ್ ಅಸ್ಮದ್ಗ್ರಂಥೇ ನಾಸ್ತೀತಿ ವಕ್ತುಮುತ್ಪಾಟಯಂತೀತ್ಯರ್ಥಃ –(ವಾ)

೩. ವ್ಯತ್ಯಾಸಂ = ಉಕ್ತಹರಿಮಹಿಮಾಸಂಬದ್ಧಶ್ಲೋಕಂ ಕಥಾವಿಚ್ಛೇದಾಯಾನ್ಯತ್ರ ನಿಕ್ಷಿಪಂತಿ । ಏತತ್ಕಥಾನನು-ಕೂಲಂ ಶ್ಲೋಕಂ ಇಹ ಲಿಖಂತಿ । – (ವಾ)

೩. ಪ್ರಮಾದಾತ್ = ಅನವಧಾನಾತ್ = ಭ್ರಾಂತ್ಯಾ ವಾ । –(ಜ)

೪. ಸರ್ವೇ = ಶತಕೋಟಿವಿಸ್ತರಮೂಲರಾಮಾಯಣಶತಕೋಟಿವಿಸ್ತರಪಂಚರಾತ್ರಷಷ್ಟಿಲಕ್ಷವಿಸ್ತೃತಭಾರತ-ಚತುರ್ಲಕ್ಷವಿಸ್ತೃತಪುರಾಣಾದಿಕಾಃ ಗ್ರಂಥಾಃ ಪ್ರಾಯಶಃ ಪ್ರಾಯೇಣ । ಅಪಪಾಠಾದಿನಾ ಉಚ್ಛಿನ್ನಾಃ । ತನ್ಮಧ್ಯೇ ಕೋಟ್ಯಂಶೋಽಪಿ ನ ವಿದ್ಯತೇ । –(ಜ)

ಅ: ನಾಶವಾಗದೆ ಉಳಿದಿರುವ ಗ್ರಂಥಗಳು ಸಹ ಹೀಗೆ ಅಸ್ತವ್ಯಸ್ತವಾಗಿವೆ; ಗ್ರಂಥಗಳೆಲ್ಲ ನಾಶವಾಗಿರುವುದೇ ಹೆಚ್ಚು; ಕೋಟಿಯ ಒಂದು ಪಾಲಿನಷ್ಟು ಗ್ರಂಥಗಳು ಸಹ ಈಗ ಉಳಿದಿಲ್ಲ.

ವಿ: ೧) ವೇದಗಳು ಅನಂತ; ಪಂಚರಾತ್ರ ಮತ್ತು ಮೂಲರಾಮಾಯಣಗಳು ಒಂದೊಂದೂ ನೂರುಕೋಟಿಶ್ಲೋಕಗಳನ್ನು ಹೊಂದಿರುವ ಬೃಹದ್ಗ್ರಂಥಗಳು; ಆದರೆ ಇಂದು ಅವೆಲ್ಲ ಉಪಲಬ್ಧವೇ ಇಲ್ಲ. ಉಪಲಬ್ಧವಿರುವ ವೇದಭಾಗವಂತೂ ತೀರ ಅಲ್ಪ;

೨) ಇನ್ನು ಮಹಾಭಾರತದ ಶ್ಲೋಕಗಳು ಒಂದು ಲಕ್ಷ; ಪುರಾಣಗಳಲ್ಲಿನ ಒಟ್ಟು ಶ್ಲೋಕಗಳು ನಾಲ್ಕುಲಕ್ಷ. ಹೀಗೆ ಒಟ್ಟು ಗ್ರಂಥಗಳಲ್ಲಿನ ಸಂಖ್ಯೆಗೆ ಈಗ ಉಪಲಬ್ಧವಿರುವ ಗ್ರಂಥಗಳ ಸಂಖ್ಯೆಯನ್ನು ಹೋಲಿಸಿದಾಗ, ಇಂದು ಉಪಲಬ್ಧವಿರುವ ಒಟ್ಟು ಗ್ರಂಥರಾಶಿ ಕೋಟಿಯ ಒಂದು ಭಾಗವೂ ಅಲ್ಲ ಎಂದರ್ಥ.

ನಿರ್ಣಯರಚನೆಗೆ ಕಾರಣ - ರಚನೆಗೆ ಅರ್ಹತೆ

ಗ್ರಂಥೋಽಪ್ಯೇವಂ ವಿಲುಳಿತಃ ಕಿಮ್ವರ್ಥೋ ದೇವದುರ್ಗಮಃ ।
ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ॥ ೫ ॥

ಹರಿಣಾ ನಿರ್ಣಯಾನ್ ವಚ್ಮಿ ವಿಜಾನಂಸ್ತತ್ಪ್ರಸಾದತಃ ।
ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ॥ ೬ ॥

ಅ: ಗ್ರಂಥಗಳೇ ಹೀಗೆ ಉಚ್ಛಿನ್ನವಾಗಿರುವಾಗ ಇನ್ನು ದೇವತೆಗಳಿಗೂ ಸಾಕಲ್ಯೇನ ತಿಳಿಯಲಾಗದ ಅರ್ಥಗಳ ಬಗ್ಗೆ ಹೇಳುವುದೇನು ? ಕಲಿಯುಗದಲ್ಲಿ ಹೀಗೆ ಗ್ರಂಥಗಳು ವ್ಯಾಕುಲಿತವಾದಾಗ ಇವುಗಳ ನಿರ್ಣಯಕ್ಕೆಂದು ಶ್ರೀಹರಿಯಿಂದ ಪ್ರೇರಿತನಾಗಿ ನಾನು ಅವನ ಅನುಗ್ರಹದಿಂದಲೇ ಎಲ್ಲವನ್ನು ಬಲ್ಲವನಾಗಿ ನಿರ್ಣಯಗಳನ್ನು ತಿಳಿಸುವೆನು. ನಾನು ಅವನ ಅನುಗ್ರಹದಿಂದಲೇ ಇತರ ಶಾಸ್ತ್ರಗಳನ್ನೂ ವೇದಗಳನ್ನೂ ಅರಿತವನು.

ವಿ: ಶ್ರೀಮದಾಚಾರ್ಯರು ದ್ವಿತೀಯಬಾರಿ ಉತ್ತರಬದರಿಯನ್ನು ತಲುಪಿ ಅಲ್ಲಿ ಶ್ರೀವೇದವ್ಯಾಸ ಮತ್ತು ಶ್ರೀನಾರಾಯಣರನ್ನು ಸಂದರ್ಶಿಸಿದಾಗ, ಅವರು ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದಂತೆ

---

೪ ಸರ್ವೇ = ಶತಕೋಟಿಸಂಖ್ಯಾಕಾಃ ಮೂಲರಾಮಾಯಣಪಂಚರಾತ್ರಾದ್ಯಾಃ । –(ವಾ)

೪ ಕೋಟ್ಯಂಶಃ = ಕೋಟಿಭ್ಯೋ ಅಂಶಃ ಕೋಟ್ಯಂಶಃ ಶತಸಹಸ್ರಲಕ್ಷ್ಯಾದಿಸಂಖ್ಯಾಕಃ ಇತ್ಯರ್ಥಃ । –(ವಾ)

೬. ಶಾಸ್ತ್ರಾಂತರಾಣಿ = ಪಂಚರಾತ್ರಬ್ರಹ್ಮಸೂತ್ರಾದೀನಿ । – (ವಾ)

ಶಾಸ್ತ್ರಾಂತರಾಣಿ = ಉತ್ಸನ್ನಶಾಸ್ತ್ರಾಣಿ । –(ಜ)

ಮಹಾಭಾರತಕ್ಕೂ ನಿರ್ಣಯ ಬರೆಯಲು ಆದೇಶಿಸಿದ ಏವರ ಸುಮಧ್ವವಿಜಯದಲ್ಲಿದೆ(೧೦/೨೫) ಸ್ವತಃ ಶ್ರೀಮದಾಚಾರ್ಯರು ಮೊದಲ ಅಧ್ಯಾಯದ ಕೊನೆಯಲ್ಲೂ, ಇಲ್ಲೂ ಮತ್ತು ಗ್ರಂಥದ ಕೊನೆಯಲ್ಲೂ ಅದನ್ನು ಈ ತೆರನಾಗಿ ತಿಳಿಸಿರುವರು.

ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥ ೭ ॥

ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।
ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ ೮ ॥

ಅ: ಪ್ರತ್ಯಕ್ಷವಾಗಿಯೂ ಬೇರೆ ಬೇರೆ ದೇಶಗಳಲ್ಲಿರುವ ಅನೇಕತೆರನಾದ ನಿರ್ಣಯ-ಪ್ರತಿಪಾದಕ ಗ್ರಂಥಗಳನ್ನು ಸಹ ಆ ಶ್ರೀಹರಿಯ ಅನುಗ್ರಹದಿಂದಲೇ ತಿಳಿದು ಸಮರ್ಥರೂ, ಷಡ್ಗುಣೈಶ್ವರ್ಯಸಂಪನ್ನನಾದ ಸಾಕ್ಷಾತ್ ನಾರಾಯಣಾವತಾರರೂ ಆದ ಶ್ರೀವೇದವ್ಯಾಸರು ಮಹಾಭಾರತಾದಿ ಗ್ರಂಥಗಳಲ್ಲಿ ಹೇಗೆ ತಿಳಿಸಿಕೊಟ್ಟಿರುವರೋ ಹಾಗೆ ಅವರ ಕರುಣೆಯಿಂದಲೇ ಭಾರತಾರ್ಥಕ್ಕೆ ಅನುಸಾರವಾಗಿ ಸಕಲ ಶಾಸ್ತ್ರಾರ್ಥವನ್ನು ಸಂಕ್ಷೇಪವಾಗಿ ಹೇಳುವೆನು.

ಮಹಾಭಾರತವು ಸಕಲ ಶಾಸ್ತ್ರಗಳ ನಿರ್ಣಯ - ಮಹಾಭಾರತದ ತುಲಾಭಾರ

ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಚಕ್ಷತೇ ।
ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ ॥ ೯ ॥

---

೭. ಕ್ರಿಯಮಾಣೋ ನಿರ್ಣಯಃ ಕಿಮೌತ್ಪೇಕ್ಷಿಕಃ ಉತೌಪದೇಶಿಕ ಇತ್ಯತೋ ದ್ವಿತೀಯಪಕ್ಷಮವಲಂಬತೇ । ಯಥೇತಿ । -(ವಾ)

೭. ತಥಾ ದೇಶೇ ದೇಶೇ ಸ್ಥಿತಾನಾಂ ಜನಾನಾಂ ಪಾಠೇನ । ಚಸ್ತ್ವರ್ಥಃ । -(ಸ.)

೭. ಬುದ್ಧಿಶುದ್ಧಿಕರಗೋನಿಕರಾಢ್ಯಂ ತೀರ್ಥಜಾತಮುಭಯಂ ಚ ಧರಣ್ಯಾಮ್ ।
ಆತ್ಮಮಜ್ಜನತ ಏವ ನಿಕಾಮಂ ಪರ್ಯಶೋಧಯದಮಂದಮನೀಷಃ ॥ - ಸುಮಧ್ವವಿಜಯ (೬/೩೫)

೮. ಇಲ್ಲಿಯ ಮೊದಲ ಮೂರುಶ್ಲೋಕಗಳು ಗೀತಾಭಾಷ್ಯದಲ್ಲೂ ಉದಾಹೃತವಾಗಿವೆ.

೯. ಅಷ್ಟಾದಶಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ।
ವೇದಾಃ ಸಾಂಗಾಸ್ತಥೈಕತ್ರ ಭಾರತಂ ಚೈಕತಃ ಸ್ಥಿತಮ್ ॥ -ಭಾರತ (ಸ್ವರ್ಗಾ. ೫/೪೬)

ದೇವೈರ್ಬ್ರಹ್ಮಾದಿಭಿಃ ಸರ್ವೈಃ ಋಷಿಭಿಶ್ಚ ಸಮನ್ವಿತೈಃ ।
ವ್ಯಾಸಸ್ಯೈವಾಜ್ಞಯಾ ತತ್ರ ತ್ವತ್ಕರಿಚ್ಯತ ಭಾರತಮ್ ॥ ೧೦ ॥

ಅ: ಸರ್ವಶಾಸ್ತ್ರಾರ್ಥಗಳಿಗೂ ಮಹಾಭಾರತವೇ ನಿರ್ಣಾಯಕವೆಂಬುದಾಗಿ ಹೇಳುವರು; 'ಹಿಂದೆ ಮಹಾಭಾರತ ಮತ್ತು ಸಕಲ ವೇದಗಳು ಶ್ರೀವೇದವ್ಯಾಸರ ಆದೇಶದಂತೆಯೇ, ಬ್ರಹ್ಮಾದಿ ದೇವತೆಗಳಿಂದಲೂ, ಸಕಲ ಋಷಿಗಳಿಂದಲೂ, ಒಂದು ತಕ್ಕಡಿಯಲ್ಲಿ ಇರಿಸಿ ತೂಗಲ್ಪಟ್ಟವು; ಆಗ ಮಹಾಭಾರತವು ವೇದಾದಿ ಇತರ ಸಕಲ ಶಾಸ್ತ್ರಗಳನ್ನು ಮೀರಿಸಿತು.

ವಿ: ೧) 'ಭಾರತಂ ಸರ್ವವೇದಾಶ್ಚ' ಎಂಬಲ್ಲಿಂದ ಪ್ರಾರಂಭಿಸಿ, ಋನೇ ಶ್ಲೋಕದವರೆಗಿನ ವಾಕ್ಯಗಳು ಬ್ರಹ್ಮಾಂಡಪುರಾಣದ ವಚನಗಳು.

೨) ಇಲ್ಲಿ ವೇದಾದಿಗಳನ್ನು ಅವುಗಳ ಸಾರವನ್ನು ಪ್ರತಿನಿಧಿರೂಪಮಾಣಿಗಳಲ್ಲಿ ಆವಾಹಿಸಿ ತೂಕಮಾಡಿದರು ಎಂಬ ವಿಶೇಷವಿಚಾರವನ್ನು ಶ್ರೀಟೀಕಾಕೃತ್ಪಾದರು ಗೀತಾಭಾಷ್ಯ ಪ್ರಮೇಯದೀಪಿಕೆಯಲ್ಲಿ ತಿಳಿಸಿರುವರು (**ತುಲಾರೋಪಣಂ ಭಾರವತ್ವಂ ಚ ಪ್ರತಿನಿಧಿದ್ವಾರೇಣ ಉಪಪಾದನೀಯಂ**).

೩) ಮಹಾಭಾರತವು ನಿರ್ಣೇಯಶಾಸ್ತ್ರಗಳಲ್ಲಿ ಶೇಷ್ಠ ; ಬ್ರಹ್ಮಸೂತ್ರಗಳು ನಿರ್ಣಾಯಕ–ಶಾಸ್ತ್ರಗಳಲ್ಲಿ ಶ್ರೇಷ್ಠ ಎಂಬುದಾಗಿ ಶ್ರೀಟೀಕಾಚಾರ್ಯರು ನ್ಯಾಯಸುಧೆಯಲ್ಲಿ ತಿಳಿಸಿರುವರು (ವಿಚಾರ್ಯೇಷು ತದಿತ್ಯವಿರೋಧಃ).

ಮಹಾಭಾರತದ ನಿರ್ವಚನ

ಮಹತ್ತ್ವಾದ್ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥ ೧೧ ॥

---

೧೦. ವಿಷ್ಣುಸರ್ವೋತ್ತಮತ್ವಾದಿಪ್ರತಿಪಾದಕಬ್ರಹ್ಮಾಂಡಪುರಾಣವಾಕ್ಯಂ ಪಠತಿ । –(ಜ)

೧೧. ಮಹತ್ತ್ವಾತ್ = ಪೂಜಾರ್ಥಪ್ರತಿಪಾದಕತ್ವಾತ್ ಮಹತ್, ಭಾರವತ್ತ್ವಾತ್ ಪ್ರತಿನಿಧಿಮಣಿದ್ವಾರಾ ಭಾರವತ್ತ್ವಾತ್ ಭಾರತಮ್ । ತದ್ವತ್ತ್ವಾರ್ಥೇ ತ ಪ್ರತ್ಯಯಃ ಪರ್ವತಶಬ್ದವದುಪಸಂಖ್ಯಾನಮ್। ಯದ್ವಾ ಭಾರೇಣ ತತತ್ವಾತ್ ಭಾರತಂ ತಮಿತ್ಯೇಕದೇಶಗ್ರಹಣಂ 'ಸಮಾನೇ ಲೋಪಃ' ಇತ್ಯೇಕಲೋಪೇನ ವಾ ಭಾರತಮ್ । ಮಹಚ್ಚ ಭಾರತಂ ಚೇತಿ ಮಹಾಭಾರತಮುಚ್ಯತೇ । –(ಜ)

೧೧. ನಿರುಕ್ತಂ ನಿತರಾಮುಕ್ತಂ ವಚನಂ ವ್ಯಾಖ್ಯಾನಮಿತ್ಯರ್ಥಃ । –(ಜ)

೧೧. ಕಥಮನ್ಯಥಾ ಭಾರತನಿರುಕ್ತಿಜ್ಞಾನಮಾತ್ರೇಣ ಸರ್ವಪಾಪಕ್ಷಯಃ । –ಗೀತಾಭಾಷ್ಯ(ಉಪೋದ್ಘಾತ)

ಅ: ಮಹತ್ತರವಾದ್ದರಿಂದಲೂ, ಭಾರಯುಕ್ತವಾದ್ದರಿಂದಲೂ 'ಮಹಾಭಾರತ' ಎಂಬುದಾಗಿ ಮಹಾಭಾರತ ತಿಳಿಸಿದೆ; ಅದರ ನಿರ್ವಚನವನ್ನು ಯಾವನು ತಿಳಿಯುವನೋ ಅವನು ಸರ್ವಪಾಪಗಳಿಂದಲೂ ಬಿಡುಗಡೆ ಹೊಂದುವನು.

ವಿ: ೧) ಮಹಾಭಾರತವೆಂಬ ಹೆಸರಿನ ನಿರುಕ್ತಿಯನ್ನು ತಿಳಿಯುವ ಮಾತ್ರದಿಂದಲೇ ಸರ್ವಪಾಪಗಳೂ ನಾಶವಾಗುವವು ಎಂದ ಮೇಲೆ ಮಹಾಭಾರತವು ಅತಿ ಶ್ರೇಷ್ಠವಾದ ಗ್ರಂಥವೆಂದು ಸಿದ್ಧವಾಗುತ್ತದೆ ಎಂದು ಭಾವ.

೨) ಅದರ 'ಜಯ' ಎಂಬ ಹೆಸರು ಇತರ ಸಕಲಗ್ರಂಥಗಳನ್ನು ಜಯಿಸಿರುವುದಕ್ಕೆ ದ್ಯೋತಕ.

ಮಹಾಭಾರತದಿಂದ ತತ್ತ್ವನಿರ್ಣಯದ ಕ್ರಮ

ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ।
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ।
ಯತಃ ಕೃಷ್ಣವಶೇ ಸರ್ವೇ ಭೀಮಾದ್ಯಾಃ ಸಮ್ಯಗೀರಿತಾಃ ॥ ೧೨ ॥

ಅ: ಭಾರತದಲ್ಲಿ ನಿದರ್ಶನಪೂರ್ವಕವಾಗಿ ಸರ್ವಶಾಸ್ತ್ರಗಳ ನಿರ್ಣಯವುಮಾಡಲ್ಪಟ್ಟಿದೆ; ಅಲ್ಲಿ ಭೀಮಾದಿ ಸರ್ವರೂ ಶ್ರೀಕೃಷ್ಣನ ಅಧೀನರು ಎಂದು ಸ್ಫುಟವಾಗಿ ನಿರೂಪಿತವಾಗಿರುವುದರಿಂದ, ಬ್ರಹ್ಮಾದಿಗಳ ವಿಷ್ಣುವಶತ್ವವು ಅದರಲ್ಲಿ ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ.

ವಿ: ೧) ಈ ಶ್ಲೋಕದಿಂದ ಆರಂಭಿಸಿ ೫೨ ನೇ ಶ್ಲೋಕದವರೆಗಿನ ಶ್ಲೋಕಗಳು ಬ್ರಹ್ಮಾಂಡ–ಪುರಾಣದ ವಚನಗಳು ಎಂದು ಶ್ರೀವಾದಿರಾಜರು ತಿಳಿಸಿರುವರು; ಈ ಮುಂಚಿನ ಮೂರು ಶ್ಲೋಕಗಳನ್ನು ಬ್ರಹ್ಮಾಂಡಪುರಾಣದ ವಚನಗಳೆಂದು ಜನಾರ್ದನಭಟ್ಟರು ತಿಳಿಸಿರುವರು; ಒಟ್ಟಿನಲ್ಲಿ ಶ್ಲೋಕ ೯ರಿಂದ ೫೨ರವರೆಗಿನ ಶ್ಲೋಕಗಳು ಬ್ರಹ್ಮಾಂಡಪುರಾಣಕ್ಕೆ ಸೇರಿದವು ಎಂದು ತಿಳಿಯಬೇಕು.

---

೧೨. तत्र निर्णयः कथं कृत इत्यतः निर्णयप्रकारप्रतिपादकब्रह्माण्डपुराणवाक्यानि पठति । 'निर्णयः सर्वशास्त्राणाम्' इत्यारभ्य अत्रोक्तं सर्वशास्त्रेषु न हि समयुदाहृतं' इत्यंतेन ग्रंथेन । –(वा)

೧೨. कृष्णस्य विष्णुत्वात् भीमस्य ब्रह्मत्वादिति भावः । भीमाद्याः ब्रह्मादय इति सुप्रसिद्धम् । ब्रह्मादीनाम् विष्णुवशत्वाख्यपरमप्रमेयेयं कृष्णेन शासिता भीमादय एव दृष्टांता इति भावः। –(वा)

೨) 'ಭಾರತಂ ಸರ್ವಶಾಸ್ತ್ರೇಷು' ನ ಭಾರತಸಮಂ ಶಾಸ್ತ್ರಂ' ಭಾರತಾನ್ನ ವಿಮುಕ್ತಯೇ, ಇತ್ಯಾದಿ ಇನ್ನೂ ಅನೇಕ ವಾಕ್ಯಗಳನ್ನು ಮಹಾಭಾರತದ ಶ್ರೇಷ್ಠತ್ವದ ಸಮರ್ಥನೆಗಾಗಿ ಶ್ರೀಮದಾಚಾರ್ಯರು ಗೀತಾಭಾಷ್ಯಾದಿ ಗ್ರಂಥಗಳಲ್ಲಿ ಉದಾಹರಿಸಿರುವರು.

೩) ಮಹಾಭಾರತದಲ್ಲಿ ಸಕಲಶಾಸ್ತ್ರಪ್ರಮೇಯಗಳು ದೃಷ್ಟಾಂತಸಮೇತವಾಗಿ ವಿವರಿಸಲ್ಪಟ್ಟಿವೆ ಎಂಬುದು ಇದರ ವಿಶೇಷ.

೪) 'ವಿಷ್ಣುವಶತ್ವಂ' ಎಂಬಲ್ಲಿನ ಮಾತುಗಳಲ್ಲಿ ಇಂತಹ ದೃಷ್ಟಾಂತಗಳ ನಿರೂಪಣೆ ಇದೆ. ಅಲ್ಲದೆ ರಾಜಸೂಯಯಾಗದ ಅಗ್ರಪೂಜೆಯಿಂದ ಶ್ರೀಹರಿಸರ್ವೋತ್ತಮತ್ವ, ಅಪೂರ್ವ ಬಲಾಧಿಕ್ಯದಿಂದಾಗಿ ಶ್ರೀಭೀಮಸೇನನ ಜೀವೋತ್ತಮತ್ವ, ಅಸಾಧಾರಣ ರೂಪದಿಂದಾಗಿ ದ್ರೌಪದಿಯ ಸ್ತ್ರೀಜೀವೋತ್ತಮತ್ವ, ಧರ್ಮರಾಜನ ಸಾಮ್ರಾಜ್ಯಪ್ರಾಪ್ತಿಯಿದಾಗಿ ವಿಷ್ಣುಭಕ್ತರ ಸೌಭಾಗ್ಯ, ಕೌರವರ ವಿನಾಶದಿಂದಾಗಿ ವಿಷ್ಣುದ್ವೇಷಿಗಳ ದೌರ್ಭಾಗ್ಯ ಮೊದಲಾದ ಶಾಸ್ತ್ರತತ್ವಗಳು ನಿರೂಪಿತವಾಗಿರುವುದನ್ನು ತಿಳಿಯಬೇಕು ಎಂದು ಶ್ರೀವಾದಿರಾಜರು ವಿವರಿಸಿರುವರು.

೫) ಎಲ್ಲರೂ ಭೀಮವಶ; ಅಂತಹ ಭೀಮು ಕೃಷ್ಣವಶ; ಭೀಮನು ಭಾವಿಬ್ರಹ್ಮ; ಆದ್ದರಿಂದ ಬ್ರಹ್ಮಾದಿಗಳು ಶ್ರೀಹರಿಯ ವಶರು ಎಂಬುದು ಸಿದ್ಧವಾಗುವುದು ಎಂದರ್ಥ.

ವಿಷ್ಣುವೇ ಸಕಲರಿಗೂ ಜ್ಞಾನಪ್ರದಾತ

ಸರ್ವೇಷಾಂ ಜ್ಞಾನದೋ ವಿಷ್ಣುಃ ಯಶೋದಾತೇತಿ ಚೋದಿತಃ ॥ ೧೩ ॥

ಯಸ್ಮಾತ್ ವ್ಯಾಸಾತ್ಮನಾ ತೇಷಾಂ ಭಾರತೇ ಯಶ ಊಚಿವಾನ್ ।
ಜ್ಞಾನದಶ್ಚ ಶುಕಾದೀನಾಂ ಬ್ರಹ್ಮರುದ್ರಾದಿರೂಪಿಣಾಮ್ ॥ ೧೪ ॥

---

೧೪. 'ಯಶಃ ಊಚಿವಾನ್' ಇತ್ಯುಪಲಕ್ಷಣಮ್ । ಕೃಷ್ಣರೂಪೇಣ ಸಾರಥ್ಯಾದಿಕಂ ಕೃತ್ವಾ ಯಶಃ ಸಾಧಯಾಮಾಸ ಚೇತಿ ಗ್ರಾಹ್ಯಮ್ । ಯಶೋದಾನಾದಪಿ ಗ್ರಂಥರೂಪೇಣ ಯಶಃ ಪ್ರಪಂಚನಸ್ಯಾಚಂದ್ರಾರ್ಕಂ ತದ್ಯಶೋ ವಿಸ್ತೃತಿ-ಹೇತುತ್ವೇನ ಪ್ರಬಲತ್ವಾತ್ ಯಶಃಪ್ರಶಂಸನಮೇವ ಸ್ವಪದೇನೋಕ್ತಮ್ । –(ವಾ)

೧೪. ಶುಕಸ್ಯ ಸ್ವಯಂ ರುದ್ರರೂಪತ್ವಾತ್ ತತ್ರ ವಾಯೋಃ ಸನ್ನಿಧಾನಾತ್ ವೈಶಂಪಾಯನಾಖ್ಯೇ ಶಿಷ್ಯೇ ಬ್ರಹ್ಮಣಃ ಸನ್ನಿಧಾನಾತ್ ಮಧ್ವಾಖ್ಯಭಾವಿಬ್ರಹ್ಮಣಃ ಸ್ವಮುಖೇನೈವ ಸಾಕ್ಷಾತ್ ಜ್ಞಾನದಾನಾಚ್ಚ ಬ್ರಹ್ಮರುದ್ರಾದಿರೂಪಿಣಾಮಿ-ತ್ಯುಕ್ತಮ್ । –(ವಾ)

೧೪. ಯಸ್ಮಾದ್ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರೇಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥ –ಈಶಾವಾಸ್ಯಭಾಷ್ಯ

೧೪. ಗುರುರ್ಗುರೂಣಾಂ ಪ್ರಭವಃ ಶಾಸ್ತ್ರಾಣಾಂ ಬಾದರಾಯಣಃ । –ಅನುವ್ಯಾಖ್ಯಾನ

ಅ: ಸಕಲರಿಗೂ ವಿಷ್ಣುವೇ ಜ್ಞಾನಪ್ರದ, ಯಶಃಪ್ರದ ಎಂಬುದಾಗಿಯೂ ಹೇಳಲ್ಪಟ್ಟಿರುವನು; ಹೇಗೆಂದರೆ ವ್ಯಾಸರೂಪದಿಂದ ಭಾರತದಲ್ಲಿ ಭೀಮಾದಿಗಳ ಹಿರಿಮೆಯನ್ನು ತಿಳಿಸಿ ಯಶಃಪ್ರದರಾಗಿರುವರು; ಮತ್ತು ಬ್ರಹ್ಮರುದ್ರಾದಿಗಳ ಅವತಾರರಾದ ಶುಕಾಚಾರ್ಯರು ಮೊದಲಾದವರಿಗೆ ತತ್ತ್ವೋಪದೇಶವನ್ನು ಮಾಡಿ ಜ್ಞಾನಪ್ರದರಾಗಿರುವರು.

ಏ: ೧) ಶ್ರೀಕೃಷ್ಣನು ಸಾರಥ್ಯಕರಣ, ಗೀತೋಪದೇಶ ಮೊದಲಾದ ಅನೇಕ ಕಾರ್ಯಗಳ ಮೂಲಕ ಪಾಂಡವರು ತನ್ನ ಪರಮಪ್ರಿಯಭಕ್ತರು ಎಂಬ ತತ್ತ್ವವನ್ನು ಸಾರಿ ಅವರಿಗೆ ಕೀರ್ತಿಯಿತ್ತಿರುವನು.

೨) ಅದಕ್ಕಿಂತ ಮಿಗಿಲಾಗಿ ಸ್ವತಃ ವೇದವ್ಯಾಸರೂಪದಿಂದ ಮಹಾಭಾರತವನ್ನು ರಚಿಸಿ ಅವರ ಸತ್ಕೀರ್ತಿಯು ಆಚಂದ್ರಾರ್ಕವಾಗಿ ನೆಲೆಸುವಂತೆ ಮಾಡಿರುವನು. ಅವರೆಲ್ಲ ಭಾವಿಬ್ರಹ್ಮ ಇಂದ್ರ ಮೊದಲಾದ ದೇವತೆಗಳಾದ್ದರಿಂದ ತಾನು ದೇವತೆಗಳಿಗೂ ಯಶಃಪ್ರದನೆಂದು ತಿಳಿಸಿದಂತಾಯಿತು.

೩) ಇನ್ನು ಶುಕಾಚಾರ್ಯರು ರುದ್ರಾವತಾರರು; ವಾಯುದೇವರ ಆವೇಶದಿಂದ ಕೂಡಿದವರು; ವೈಶಂಪಾಯನರೆಂಬ ಶಿಷ್ಯರು ಬ್ರಹ್ಮಾಂಶಯುಕ್ತರು; ಪೈಲ, ಸುಮಂತ ಜೈಮಿನಿಗಳಲ್ಲಿ ಕ್ರಮವಾಗಿ ಶೇಷ, ಗರುಡ ಮತ್ತು ಇಂದ್ರರ ಸನ್ನಿಧಾನವಿದೆ. ಹೀಗೆ ಬ್ರಹ್ಮಾದಿದೇವತೆಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ವ್ಯಾಸಶಿಷ್ಯರಾಗಿ ಜ್ಞಾನ ಪಡೆದಿದ್ದಾರೆ; ಭೀಮಸೇನ ಮೊದಲಾದ ಪಾಂಡವರು ಭಾವಿಬ್ರಹ್ಮ ಮೊದಲಾದ ದೇವಶ್ರೇಷ್ಠರಾಗಿದ್ದು ಅವರೆಲ್ಲ ವ್ಯಾಸಶಿಷ್ಯರಾಗಿದ್ದಾರೆ; ಅಲ್ಲದೆ ಆ ಕಾಲದಲ್ಲಿ ಅವತರಿಸಿದ್ದ ಪ್ರತಿಯೊಬ್ಬ ದೇವತೆಯೂ ವ್ಯಾಸಶಿಷ್ಯನೇ ಆಗಿದ್ದನು.

೪) ಇನ್ನು ಭಾವಿಬ್ರಹ್ಮರಾದ ಪೂರ್ಣಪ್ರಜ್ಞ ಶ್ರೀಮಧ್ವಾಚಾರ್ಯರು ವ್ಯಾಸಶಿಷ್ಯರೆಂಬುದು ಅವರೇ ತಿಳಿಸಿರುವ ವಿಚಾರ. ಆದ್ದರಿಂದ ಶ್ರೀವ್ಯಾಸರು ಬ್ರಹ್ಮಾದಿಗಳಿಗೆ ಜ್ಞಾನಪ್ರದರೂ ಆಗಿರುವರು ಎಂಬುದು ನಿಶ್ಚಿತ.

---

೧೪. ತೇ ಪಂಚಪಾಂಡುತನಯಾ ಮುಮುದುರ್ನಿತಾಂತಂ ಸದ್ಧರ್ಮಚಾರಿಣ ಉರುಕ್ರಮಶಿಕ್ಷಿತಾರ್ಥಾಃ ।
– (೧೫/೬)

೧೪. ಯೇ ಯೇ ಹಿ ದೇವಾಃ ಪೃಥಿವೀಂ ಗತಾಸ್ತೇ ಸರ್ವೇ ಶಿಷ್ಯಾಃ ಸತ್ಯವತೀಸುತಸ್ಯ । – (೧೨/೧೧)

೧೪. ಶೇಷೋಽಥ ಪೈಲಂ ಮುನಿಮಾವಿಶತ್ ತದಾ ವೀಶಃ ಸುಮಂತುಮಪಿ ವಾರುಣಂ ಮುನಿಃ ।
ಬ್ರಹ್ಮಾವಿಶತ್ ತಮುತ ವೈಶಂಪಾಯನಂ ಶಕ್ರಶ್ಚ ಜೈಮಿನಿಮಥಾವಿಶತ್ ಪ್ರಭುಃ ॥ – (೧೦/೨೪)

ಭೀಮನಿಂದ ತಿಳಿಯುವ ತತ್ತ್ವ

ಬ್ರಹ್ಮಾऽಧಿಕಶ್ಚ ದೇವೇಭ್ಯಃ ಶೇಷಾದ್ರುದ್ರಾದಪೀರಿತಃ ।
ಪ್ರಿಯಶ್ಚ ವಿಷ್ಣೋಃ ಸರ್ವೇಭ್ಯ ಇತಿ ಭೀಮನಿದರ್ಶನಾತ್ ॥ ೧೫ ॥

ಅ: ಬ್ರಹ್ಮದೇವರು ಇತರ ಸಕಲದೇವತೆಗಳಿಗಿಂತಲೂ, ಶೇಷನಿಗಿಂತಲೂ, ರುದ್ರನಿಗಿಂತಲೂ ಶ್ರೇಷ್ಠರು; ಮತ್ತು ಇತರ ಎಲ್ಲರಿಗಿಂತಲೂ ಮಹಾವಿಷ್ಣುವಿಗೆ ಅವರೇ ಹೆಚ್ಚುಪ್ರಿಯರು ಎಂಬ ಪ್ರಮೇಯವು ಭೀಮಸೇನನ ನಿದರ್ಶನದಿಂದ ತಿಳಿಸಲ್ಪಟ್ಟಿದೆ.

ವಿ: ೧) ಅಶ್ವತ್ಥಾಮರನ್ನು ಪರಾಭವಗೊಳಿಸಿದ್ದು ಬಲರಾಮನಿಗಾಗದಿದ್ದ ಜರಾಸಂಧ– ವಧೆಯನ್ನು ತಾವು ಅನಾಯಾಸವಾಗಿ ಮಾಡಿದ್ದು ಭೀಮಸೇನನ ಹಿರಿಮೆ.

೨) ಅಶ್ವತ್ಥಾಮರು ರುದ್ರಾವತಾರರು; ಬಲರಾಮ ಶೇಷಾವತಾರ, ಅವರಿಗಿಂತ ಮಿಗಿಲಾದ ಭೀಮಸೇನ ಭಾವಿಬ್ರಹ್ಮ; ಆದ್ದರಿಂದ ಅವರು ಶೇಷರುದ್ರರಿಗಿಂತ ಮಿಗಿಲೆಂಬುದು ಸ್ಪಷ್ಟ;

೩) ಅದರಂತೆ ಅರ್ಜುನನಿಗಾಗದ ಅಸಂಖ್ಯಕಾರ್ಯಗಳನ್ನು ಭೀಮಸೇನ ಮಾಡಿರುವನು; ಅರ್ಜುನನು ದೇವೇಂದ್ರನಾದ ಇಂದ್ರನ ಅವತಾರ; ಆದ್ದರಿಂದ ಇತರ ದೇವತೆಗಳಿಗಿಂತಲೂ ಅವನೇ ಮಿಗಿಲು.

೪) ತಾನು ಮಾಡಬಹುದಾಗಿದ್ದ ಜರಾಸಂಧವಧೆ, ದುರ್ಯೋಧನನ ವಧೆ ಮೊದಲಾದ ಮಹತ್ತರವಾದ ಕಾರ್ಯಗಳನ್ನು ಭೀಮಸೇನನಿಗೆ ಮೀಸಲಿಡುವ ಮೂಲಕ ಶ್ರೀಕೃಷ್ಣನು ಅವನು ತನಗೆ ಪರಮಪ್ರಿಯನೆಂಬುದನ್ನು ಸೂಚಿಸಿರುವನು. ಬ್ರಹ್ಮದೇವರು ಭಗವಂತನಿಗೆ ಅತಿಪ್ರಿಯರು ಎಂಬ ಪ್ರಮೇಯ ಇದರಿಂದ ಸ್ಫುಟವಾಗುತ್ತದೆ.

೫) ಭೀಮರಕ್ಷಿತನಾದ ಅರ್ಜುನನಿಗಾಗಿ ಹಿಂದೆ ಸುಗ್ರೀವನಾಗಿದ್ದ ಕರ್ಣನನ್ನು ಕೊಲ್ಲಿಸಿದ್ದು ಸಹ ಇಂತಹ ಮತ್ತೊಂದು ಪ್ರಸಂಗ.

---

೧೫. ಅಶ್ವತ್ಥಾಮ್ನೋ ಮುಖಭಂಗಾತ್ ಶೇಷರೂಪಬಲರಾಮಾಸಾಧ್ಯಜರಾಸಂಧವಧಾಚ್ಚ ಬ್ರಹ್ಮಣಃ ಭೀಮನಿದರ್ಶನೇನ ಶೇಷರುದ್ರಾಭ್ಯಾಮುತ್ತಮತ್ವಂ ದರ್ಶಿತಮ್ । ಇಂದ್ರರೂಪಾದರ್ಜುನಾದಪಿ ಜ್ಯೈಷ್ಠ್ಯಾತ್ ದೇವೇಭ್ಯ ಉತ್ತಮತ್ವಂ ಚ ದರ್ಶಿತಮ್ । ಸರ್ವೇಭ್ಯೋऽತಿಪ್ರಿಯತ್ವಂ ಭೀಮಾರ್ಥಂ ಪ್ರಾಕೃತ್ರೀಭೂತಸುಗ್ರೀವಾತ್ಮಕ ಕರ್ಣವಧೇನ ಪ್ರಾಕ್ಷಿಹತವಾಲ್ಯಾತ್ಮಕಾರ್ಜುನಪರಿಗ್ರಹೇಣ ಚಾವಗಮ್ಯತೇ। –(ವಾ)

೧೫. ಅತ್ರ 'ಶೇಷಾತ್', 'ರುದ್ರಾತ್' ಇತಿ ಕಥನಂ ಮನುಷ್ಯೇಷು ಗರುಡಾವತಾರಾಭಾವಾತ್ । –(ಜ)

೧೫. 'ಬ್ರಹ್ಮಾऽಧಿಕಶ್ಚ ದೇವೇಭ್ಯಃ' ಇತಿ ಬ್ರಹ್ಮಾ ದೇವೇಭ್ಯೋऽಧಿಕಃ ಕೈಮುತ್ಯೇನ ತದಿತರೇಭ್ಯಶ್ಚೇತಿ ಬ್ರಹ್ಮಣಃ ಸರ್ವಾಧಿಕ್ಯಮುಕ್ತಮ್ । –(ವಾ)

ವಾಯುದೇವರು ಶ್ರೀಹರಿಯ ಪ್ರಧಾನ ಅಂಗ

ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ ।
ಮಾಗಧಾದಿವಧಾದೇವ ದುರ್ಯೋಧನವಧಾದಪಿ ॥ ೧೬ ॥

ಅ: ಜರಾಸಂಧ ಮೊದಲಾದವರ ಸಂಹಾರ ಮತ್ತು ದುರ್ಯೋಧನಸಂಹಾರ ಇವುಗಳಿಂದ ಭೀಮಸೇನನು ವಿಷ್ಣುವಿನ ಭೂಭಾರಹರಣಕಾರ್ಯದಲ್ಲಿ ಪ್ರಧಾನಾಂಗ ಎಂದು ತಿಳಿಯುವುದು.

ವಿ: ಜರಾಸಂಧವಧೆ ಮತ್ತು ದುರ್ಯೋಧನವಧೆ ಇವೆರಡೂ ಮಹಾಭಾರತದ ಅತ್ಯಂತ ಪ್ರಮುಖವಾದ ಎರಡು ಸಂಹಾರಕಾರ್ಯಗಳು. ಬ್ರಹ್ಮ ಮತ್ತು ರುದ್ರರ ವರಗಳಿಂದ ಜರಾಸಂಧ ಅವಧ್ಯನಾಗಿದ್ದರೆ, ಶಿವಪಾರ್ವತಿಯರ ನಿರ್ಮಾಣದ ವಜ್ರಕಾಯದ ಕಾರಣದಿಂದಾಗಿ ದುರ್ಯೋಧನನು ಅವಧ್ಯನಾಗಿದ್ದ; ಅವರಿಬ್ಬರನ್ನೂ ಸಂಹರಿಸಿ ಶ್ರೀಕೃಷ್ಣನನ್ನು ಪೂಜಿಸಿದ್ದು ಶ್ರೀಭೀಮಸೇನನ ಹಿರಿಮೆ. ಆದ್ದರಿಂದ ಭೂಭಾರಹರಣಕಾರ್ಯದಲ್ಲಿ ಅವನೇ ಶ್ರೀಕೃಷ್ಣನ ಪ್ರಧಾನಸೇವಕ ಎಂದು ಭಾವ.

ಕ್ಷತ್ರಿಯರಲ್ಲಿ ಬಲವೇ ನಿರ್ಣಾಯಕ

ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ ।
ಅಂಗಂ ಚೇದ್ವಿಷ್ಣುಕಾರ್ಯೇಷು ತದ್ಭಕ್ತ್ಯೈವ ನ ಚಾನ್ಯಥಾ ॥ ೧೭ ॥

ಅ: ಕ್ಷತ್ರಿಯರಲ್ಲಿ ಯಾವನು ಯಾವನು ಬಲದಲ್ಲಿ ಮಿಗಿಲೋ ಅವನೇ ಉತ್ತಮ; ಆದರೆ ಅಂತಹ ಬಲವು ಭಗವತ್ಕಾರ್ಯಕ್ಕೆ ಅಂಗವಾಗಿರಬೇಕು; ವಿಷ್ಣುಭಕ್ತಿಯಿಂದ ಕೂಡಿರಬೇಕು; ಇಲ್ಲವಾದಲ್ಲಿ ಅದು ಉತ್ತಮತ್ವಕ್ಕೆ ಸಾಧಕವಾಗದು.

ವಿ: ೧) ಕ್ಷತ್ರಿಯರಲ್ಲಿ ಬಲಾಧಿಕನಾದವನು ಯೋಗ್ಯತೆಯಲ್ಲೂ ಉತ್ತಮನಾದವನು ಎಂಬುದು ನಿಯಮ. ಆದರೆ ಅಂತಹ ಬಲವು ಶ್ರೀಹರಿಸೇವೆಗೆ ವಿನಿಯೋಗವಾಗಬೇಕೇ ಹೊರತು ಸ್ವಾರ್ಥಕ್ಕಲ್ಲ; ವಿಷ್ಣುಭಕ್ತಿಯಿಂದ ಕೂಡಿರಬೇಕೇ ಹೊರತು ಸ್ವಪ್ರತಿಷ್ಠೆ ಮೊದಲಾದವುಗಳಿಂದಲ್ಲ.

---

೧೬. ಆದಿಪದೇನ ಕೀಚಕಾದೀನಾಂ ಗ್ರಹಣಮ್ । –(ಜ)

೧೭. ದೇವಾದಿವ್ಯಾವೃತ್ತ್ಯರ್ಥಮಂಗಮಿತಿ । –(ಜ)

೧೭. ದೇವಾನಾಮಮೃತಮಥನೇ ಅಸುರವತ್ ಸ್ವೋದರಪೂರಣಾರ್ಥಮಂಗಂ ಚೇತ್ ನ ಉತ್ತಮಃ। –(ವಾ)

೨) ವೇನ, ದುರ್ಯೋಧನ ಮೊದಲಾದವರಲ್ಲಿ ಬಲವಿದ್ದರೂ ಅವರಿಗೆ ವಿಷ್ಣುದ್ವೇಷವಿತ್ತೇ ಹೊರತು ವಿಷ್ಣುಭಕ್ತಿಯಲ್ಲ; ಅವರು ಮಾಡಿದ್ದು ಲೋಕಾಪಕಾರವನ್ನೇ ಹೊರತು ಲೋಕೋಪಕಾರವನ್ನಲ್ಲ. ಆದ್ದರಿಂದ ಅವರ ಬಲ ಉತ್ತಮತ್ವಕ್ಕೆ ದ್ಯೋತಕವಾಗದೆ ಅಧಮತ್ವಕ್ಕೇ ದ್ಯೋತಕವೆಂದು ತಿಳಿಯಬೇಕು. ಹೊಟ್ಟೆಪಾಡಿಗೆ ಅಮೃತಮಥನಕಾರ್ಯಕ್ಕೆ ಹೊರಟ ಅಸುರರ ಬಲವು ಸಹ ಇಂತಹ ಕೆಟ್ಟಬಲವೇ ಆಗಿದೆ; ಅವರದು ಸಹಜಬಲವಲ್ಲವೆಂಬುದು ಸ್ಪಷ್ಟ.

ನೈಸರ್ಗಿಕ ಬಲವೇ ಪ್ರಧಾನ

ಬಲಂ ನೈಸರ್ಗಿಕಂ ತಚ್ಚೇದ್ವರಾಸ್ತ್ರಾದೇಸ್ತದನ್ಯಥಾ ।
ಅನ್ಯಾವೇಶನಿಮಿತ್ತಂ ಚೇದ್ಬಲಮನ್ಯಾತ್ಮಕಂ ಹಿ ತತ್ ॥ ೧೮ ॥

ಅ: ಅಂತಹ ಬಲವು ಸ್ವಾಭಾವಿಕವಾಗಿದ್ದಲ್ಲಿ ಮಾತ್ರ ಅದು ಉತ್ತಮತ್ವಕ್ಕೆ ಗಮಕ; ವರ, ಅಸ್ತ್ರ ಮೊದಲಾದವುಗಳಿಂದ ಉಂಟಾಗಿದ್ದ ಬಲವಾಗಿದ್ದಲ್ಲಿ ಅದು ಉತ್ತಮತ್ವಕ್ಕೆ ಸಾಧಕವಾಗದೆ ಅಧಮತ್ವಕ್ಕೇ ದ್ಯೋತಕ;; ಇತರರ ಆವೇಶದ ನಿಮಿತ್ತ ಉಂಟಾಗಿದ್ದ ಬಲವಂತು ಆವೇಶಮಾಡಿದವರ ಬಲವೇ ಆಗುವುದು.

ಎ: ಬಲಾಧಿಕ್ಯವು ಉತ್ತಮತ್ವಕ್ಕೆ ದ್ಯೋತಕ ಎಂಬುದು ನಿಜ; ಆದರೆ ಅಂತಹ ಬಲವು ಸಹಜ ಬಲವಾಗಿರಬೇಕೇ ಹೊರತು, ವರಬಲವಾಗಲೀ, ಅಸ್ತ್ರಬಲವಾಗಲೀ ಆಗಿರಕೂಡದು; ಬ್ರಹ್ಮ ರುದ್ರ ಮೊದಲಾದವರ ಬಲದಿಂದಾಗಿ ಬಲಿಷ್ಠರೆನ್ನಿಸಿದ್ದ ಕಂಸ, ಜರಾಸಂಧ, ಕೀಚಕ ಮೊದಲಾದವರು ಅಧಮರೇ ಹೊರತು ಉತ್ತಮರಲ್ಲ; ನರಾವೇಶದಿಂದ ಕೂಡಿದ ಅರ್ಜುನ ಮೊದಲಾದವರ ಸಕಲ ಹಿರಿಮೆಯೂ ಸಹ ಅವರ ಸಹಜಹಿರಿಮೆಯಿಂದಲ್ಲ; ಆದ್ದರಿಂದ ಅವನು ರುದ್ರಾವತಾರರಾದ ಅಶ್ವತ್ಥಾಮರನ್ನು ಯುದ್ಧದಲ್ಲಿ ಗೆದ್ದರೂ, ಅವನು ಅವರಿಗಿಂತ ಉತ್ತಮನಲ್ಲ; ಅವರನೇ ಆಗಿರುವನು.

ಆದ್ದರಿಂದ ಅಸ್ತ್ರಾದಿಬಲಗಳನ್ನು ಹೊಂದದೆ ಸಹಜವಾಗಿಯೇ ಬಲಿಷ್ಠನಾಗಿದ್ದ ಭೀಮಸೇನನೇ ಸರ್ವಜೀವೋತ್ತಮ ಎಂದು ಭಾವ. ಹನುಮಂತ, ಮಧ್ವ ಎಂಬ ಅವರ ಇತರ ಅವತಾರಗಳಲ್ಲೂ ಅವರದು ಇದೇ ರೀತಿಯ ಸಹಜಬಲವೇ ಆಗಿದೆ ಎಂಬುದೂ ಗಮನಾರ್ಹ.

---

೧೮. ವರಾಸ್ತ್ರಾದೇಃ ಶಿವಾದಿದತ್ತವರೇಣ ಶಿವಾದಿದತ್ತಾಸ್ತ್ರೇಣ ಶಿವಾದಿದತ್ತಪಿಶಾಚಾದಿಸಹಾಯೇನ ವಾ ತದ್ಬಲಂ ಚೇತ್ । ಅನ್ಯಥಾ = ಆಧಿಕ್ಯಾದನ್ಯಥಾ ನೀಚತ್ವೇ ಹೇತುರಿತ್ಯರ್ಥಃ । –(ವಾ)

೧೮. ನರಾವೇಶನಿಮಿತ್ತಾರ್ಜುನಬಲವದನ್ಯಾವೇಶನಿಮಿತ್ತಂ ಚೇತ್ । ಆಧಿಕ್ಯೇ ಹೇತುರ್ನ । –(ವಾ)

ದೇವತೆಗಳಲ್ಲೂ ಬಲವೇ ನಿರ್ಣಾಯಕ

ದೇವೇಷು ಬಲಿನಾಮೇವ ಭಕ್ತಿಜ್ಞಾನೇ ನ ಚಾನ್ಯಥಾ ।
ಸ ಏವ ಚ ಪ್ರಿಯೋ ವಿಷ್ಣೋರ್ನಾನ್ಯಥಾ ತು ಕಥಂಚನ ॥ ೧೯ ॥

ಅ: ದೇವತೆಗಳಲ್ಲಿ ಬಲವಿದ್ದವರಿಗೇ ಭಕ್ತಿ ಮತ್ತು ಜ್ಞಾನಗಳು, ಇಲ್ಲವಾದಲ್ಲಿ ಇಲ್ಲ; ಮತ್ತು ಹಾಗೆ ಬಲಶಾಲಿಯಾದವನೇ ಶ್ರೀಹರಿಗೆ ಪ್ರಿಯ; ಇಲ್ಲವಾದಲ್ಲಿ ಅವನಿಗೆ ಪ್ರಿಯನಾಗಲಾರ.

ವಿ: ಪ್ರಥಮಾಧ್ಯಾಯದಲ್ಲಿ ೧೧೭ ಮತ್ತು ೧೧೮ನೇ ಶ್ಲೋಕಗಳಲ್ಲಿ ಹೇಳಿರುವಂತೆ ದೇವತಾತಾರತಮ್ಯಕ್ಕೆ ಜ್ಞಾಪಕವಾದುದು ಭಕ್ತಿಯೇ ಹೊರತು ಇತರ ಗುಣಗಳಲ್ಲ; ಆದರೆ ಅಂತಹ ಭಕ್ತಿಯನ್ನು ಗುರುತಿಸಲು ಮುಖ್ಯಸಾಧನ ಕ್ಷತ್ರಿಯರಲ್ಲಿ ಬಲವೇ ಆಗಿರುವುದರಿಂದ ಬಲಿಷ್ಠನೇ ಭಕ್ತಿಜ್ಞಾನಗಳಿಂದ ಕೂಡಿದವನು ಎಂದು ಹೇಳಲಾಗಿದೆ ಎಂದು ಭಾವ.

ಬಲದ ಹಿರಿಮೆಗೆ ಕಾರಣ

ತಸ್ಮಾದ್ಯೋ ಯೋ ಬಲಜ್ಯೇಷ್ಠಃ ಸ ಗುಣಜ್ಯೇಷ್ಠ ಏವ ಚ ।
ಬಲಂ ಹಿ ಕ್ಷತ್ರಿಯೇ ವ್ಯಕ್ತಂ ಜ್ಞಾಯತೇ ಸ್ಥೂಲದೃಷ್ಟಿಭಿಃ ॥ ೨೦ ॥

ಅ: ಆದ್ದರಿಂದ ಯಾವನು ಬಲದಲ್ಲಿ ಶ್ರೇಷ್ಠನೋ ಅವನು ಗುಣದಲ್ಲಿಯೂ ಶ್ರೇಷ್ಠನೇ ಆಗಿರುವನು; ಸ್ಥೂಲದೃಷ್ಟಿಯವರಿಗೆ ಕ್ಷತ್ರಿಯರಲ್ಲಿ ಸ್ಪಷ್ಟವಾಗಿ ಗೋಚರಿಸುವುದು ಬಲವೇ ಅಲ್ಲವೇ!

ವಿ: ಯೋಗ್ಯಕ್ಷತ್ರಿಯನಾದವನು ಸ್ವಾಭಾವಿಕಬಲದಿಂದ ಶ್ರೇಷ್ಠನೆನ್ನಿಸಿದ್ದಲ್ಲಿ ಅವನು ಗುಣತಃ ಸಹ ಶ್ರೇಷ್ಠನೇ ಎನ್ನಿಸುವನು; ಜ್ಞಾನಾದಿ ಗುಣಗಳು ಮನಸ್ಸಿನ ಒಳಗಿನ ಗುಣಗಳಾದ್ದರಿಂದ ಸಾಮಾನ್ಯರ ಕಣ್ಣಿಗೆ ಗೋಚರಿಸುವುದಿಲ್ಲ; ಆದರೆ ಬಲವು ಸ್ಥೂಲಮತಿಗಳಿಗೂ ಗೋಚರಿಸುವ ವಿಶಿಷ್ಟಗುಣ. ಆದ್ದರಿಂದ ಬಲಾಧಿಕ್ಯವು ಹೀಗೆ ಗುಣಾಧಿಕ್ಯಕ್ಕೆ ಗಮಕ ಎಂದು ಭಾವ.

---

೧೯. ತರ್ಹಿ ಬಲಮೇವ ಕುತೋ ಗೃಹೀತಮಿತಿ ನ ಶಂಕನೀಯಮ್ । ಪರಚಿತ್ತವೃತ್ತಿಜ್ಞಾನಾದೇರನುಮಾಪಕತ್ವೇನ ಬಲಸ್ಯೈವ ಗ್ರಹಣಸಂಭವಾತ್ । ವಕ್ಷ್ಯತಿ ಚೈತಗ್ಗ್ರಂಥಕಾರಃ ಸ್ವಯಮೇವ । ಯತ್ರ ಬಲಾಧಿಕ್ಯಂ ತತ್ರ ಜ್ಞಾನಾದಿ ಗುಣಾಧಿಕ್ಯಮಿತಿ ನಿಯಮಃ ದೇವೇಷ್ವೇವ । ದೇವೇಷ್ವಿತ್ಯುಪಲಕ್ಷಣಮ್ । ಭಾರತೇ ದೇವಾವತಾರಭೂತಭೀಮರೂಪಕ್ಷತ್ರಿಯೇ ಬಲಾಧಿಕ್ಯದರ್ಶನಾತ್ ರಾಮಾಯಣೇ ದೇವಾವತಾರಭೂತಕಪಿರೂಪಹನೂಮತಿ ಚ ಬಲಾಧಿಕ್ಯದರ್ಶನಾತ್ ದೇವಾವತಾರಭೂತಕ್ಷತ್ರಿಯಾದಿಷ್ವೇವ ಚೇತ್ಯಪಿ ಗ್ರಾಹ್ಯಮ್ । –(ವಾ)

೧೯. ಅತ್ರ ಭಕ್ತಿಶಬ್ದೇನ ಸ್ನೇಹಮಾತ್ರಂ ಗ್ರಾಹ್ಯಮ್ । ಅಥವಾ ಜ್ಞಾನಶಬ್ದೇನ ಜಗಜ್ಜ್ಞಾನಂ ಗ್ರಾಹ್ಯಮ್ । –(ವಾ)

೨೦. ಯೋ ಯ ಏವ ಸತ್ಕ್ಷತ್ರಿಯತ್ವೇ ಸತಿ ಸ್ವಾಭಾವಿಕಬಲಜ್ಯೇಷ್ಠಃ ಸ ಗುಣಜ್ಯೇಷ್ಠ ಇತಿ । –(ಜ)

ಜ್ಞಾನಾದಯೋ ಗುಣಾ ಯಸ್ಮಾತ್ ಜ್ಞಾಯಂತೇ ಸೂಕ್ಷ್ಮದೃಷ್ಟಿಭಿಃ ।
ತಸ್ಮಾದ್ಯತ್ರ ಬಲಂ ತತ್ರ ವಿಜ್ಞಾತವ್ಯಾ ಗುಣಾಃ ಪರೇ ॥ ೨೧ ॥

ಅ: ಜ್ಞಾನ ಮೊದಲಾದ ಗುಣಗಳು ಸೂಕ್ಷ್ಮದೃಷ್ಟಿಗಳಿಂದ ಮಾತ್ರವೇ ತಿಳಿಯಲ್ಪಡುವಂತಹವುಗಳಾಗಿವೆ; ಆದ್ದರಿಂದ ಬಲವಿರುವಲ್ಲಿ ಶ್ರೇಷ್ಠವಾದ ಜ್ಞಾನಾದಿಗುಣಗಳು ಸಹ ಇರುವವು ಎಂದು ತಿಳಿಯಬೇಕು.

ಹರಿಪ್ರೀತಿಗೆ ಕಾರಣವಾಗುವ ಬಲವೇ ನಿರ್ಣಾಯಕ

ದೇವೇಷ್ವೇವ ನ ಚಾನ್ಯೇಷು ವಾಸುದೇವಪ್ರತೀಪತಃ ।
ಕ್ಷತ್ರಾದನ್ಯೇಷ್ವಪಿ ಬಲಂ ಪ್ರಮಾಣಂ ಯತ್ರ ಕೇಶವಃ ।
ಪ್ರವೃತ್ತೋ ದುಷ್ಟನಿಧನೇ ಜ್ಞಾನಕಾರ್ಯೇ ತದೈವ ಚ ॥ ೨೨ ॥

ಅ: ಬಲಾಧಿಕ್ಯವಿರುವಲ್ಲಿ ಜ್ಞಾನಾದಿ ಗುಣಾಧಿಕ್ಯವೆಂಬ ನಿಯಮವು ದೇವತೆಗಳಲ್ಲೇ ಹೊರತು ಇತರರಲ್ಲಲ್ಲ; ಅವರು ವಿಷ್ಣುವಿನ ವಿರೋಧಿಗಳಾದ್ದರಿಂದ ಅವರಿಗೆ ಈ ನಿಯಮವು ಅನ್ವಯಿಸುವುದಿಲ್ಲ; ಶ್ರೀಹರಿಯು ದುಷ್ಟಶಿಕ್ಷಣಕಾರ್ಯ ಮತ್ತು ತದುಪಯುಕ್ತ ಜ್ಞಾನಕಾರ್ಯಗಳಿಗೆಂದು ಅವತಾರಮಾಡಿದಾಗ ಕ್ಷತ್ರಿಯರಿಗೆ ಮಾತ್ರವಲ್ಲದೆ ಬ್ರಾಹ್ಮಣಾದಿ ಇತರ ವರ್ಣದವರ ತಾರತಮ್ಯಕ್ಕೂ ಅವರವರ ಬಲವೇ ಆಧಾರವಾಗುತ್ತದೆ.

ವಿ: ಕೇಶವನು ಬಲಕಾರ್ಯ ಮತ್ತು ತದುಪಯುಕ್ತ ಜ್ಞಾನಕಾರ್ಯಗಳಲ್ಲಿ ತೊಡಗಿದಾಗ ಕ್ಷತ್ರಿಯರಲ್ಲಿ ಮಾತ್ರವಲ್ಲದೆ ಅವರೊಂದಿಗೆ ಶ್ರೀಹರಿಸೇವೆಗೆಂದು ಸಂಹಾರಕಾರ್ಯದಲ್ಲಿ ತೊಡಗುವ ಬ್ರಾಹ್ಮಣಾದಿ ಇತರ ವರ್ಣದವರಲ್ಲೂ ಬಲವನ್ನೇ ಅವರಲ್ಲಿನ ತಾರತಮ್ಯಕ್ಕೆ ಆಧಾರವನ್ನಾಗಿ ಸ್ವೀಕರಿಸಬೇಕು. ಆದ್ದರಿಂದ ದ್ರೋಣ ಅಶ್ವತ್ಥಾಮಾದಿಗಳು ಬ್ರಾಹ್ಮಣರಾಗಿ ಅವತರಿಸಿದ ದೇವತೆಗಳಾಗಿದ್ದರೂ, ಅವರು ಯುದ್ಧಕಾರ್ಯದಲ್ಲಿ ತೊಡಗಿದ್ದರಿಂದ ಅವರಲ್ಲೂ ಬಲವನ್ನೇ ಗ್ರಹಿಸಿ ಅದರಿಂದ ಅವರಲ್ಲಿನ ಜ್ಞಾನಾದಿಗುಣಗಳ ತಾರತಮ್ಯವನ್ನು ನಿರ್ಣಯಿಸಬೇಕು ಎಂದು ಭಾವ.

---

೨೨. ಅನ್ಯೇಷು ದಾನವೇಷು ದುರ್ಯೋಧನಜರಾಸಂಧಾದಿಷು । ವಾಸುದೇವಪ್ರತೀಪತಃ ವಾಸುದೇವಪ್ರತೀಪತ್ವಾತ್ । ನ ಉಕ್ತನಿಯಮೋ ನ । ಜ್ಞಾನಕಾರ್ಯೇ ದುಷ್ಟನಿಧನೋಪಯುಕ್ತಾಸ್ತ್ರಶಸ್ತ್ರಾದಿವಿಷಯಕಜ್ಞಾನಕಾರ್ಯೇ; ಕ್ಷತ್ರಾತ್ ದೇವರೂಪಕ್ಷತ್ರಾತ್ ಅನ್ಯೇಷು ದೇವರೂಪದ್ರೋಣಾದಿಬ್ರಾಹ್ಮಣೇಷು । ಬಲಂ ಬಲಾಧಿಕ್ಯಂ ಪ್ರಮಾಣಂ ಜ್ಞಾನಾದಿಗುಣಾಧಿಕ್ಯೇ ಪ್ರಮಾಣಮ್ । –(ವಾ)

ಬ್ರಾಹ್ಮಣರಿಗೆ ಜ್ಞಾನವೇ ಪ್ರಧಾನ

ಅನ್ಯತ್ರ ಬ್ರಾಹ್ಮಣಾನಾಂ ತು ಪ್ರಮಾಣಂ ಜ್ಞಾನಮೇವ ಹಿ ।
ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ವಿಷ್ಣುಕಾರ್ಯತಾ ॥ ೨೩ ॥

ಅ: ಇತರ ಪ್ರಸಂಗಗಳಲ್ಲಿ ಬ್ರಾಹ್ಮಣರ ಹಿರಿಮೆಗೆ ಜ್ಞಾನವೂ, ಕ್ಷತ್ರಿಯರಿಗೆ ಬಲವೂ ಮುಖ್ಯ ಆಧಾರ; ಬ್ರಾಹ್ಮಣಾದಿ ಸಕಲರಿಗೂ ಮೂಲತಃ ಯೋಗ್ಯತಾ ನಿರ್ಣಾಯಕವಾದ ಮುಖ್ಯ-ಆಧಾರವೆಂದರೆ ಭಗವತ್ಕಾರ್ಯಸಾಧನೆಯೇ.

ವಿ: ೧) ಕ್ಷತ್ರಿಯರಲ್ಲಿ ಬಲ ಮತ್ತು ಬ್ರಾಹ್ಮಣರಲ್ಲಿ ಜ್ಞಾನ(ವೈಶ್ಯರಲ್ಲಿ ಧನಧಾನ್ಯಾದಿ ಸಂಪತ್ತು ಮತ್ತು ಶೂದ್ರರಲ್ಲಿ ವಯಸ್ಸು) ಇವು ಅವರವರ ಗುಂಪಿನಲ್ಲಿ ತಾರತಮ್ಯನಿರ್ಣಯಕ್ಕೆ ಮುಖ್ಯ ಆಧಾರ; ಎಂದರೆ ಬಲಾಧಿಕನು ಕ್ಷತ್ರಿಯರಲ್ಲಿ ಉತ್ತಮ, ಜ್ಞಾನಾಧಿಕನು ಬ್ರಾಹ್ಮಣರಲ್ಲಿ ಉತ್ತಮ ಇತ್ಯಾದಿಯಾಗಿ ತಿಳಿಯಬೇಕು ಎಂದರ್ಥ.

೨) ಆದರೆ ಬ್ರಾಹ್ಮಣನು ಬಲಕಾರ್ಯದಲ್ಲಿ ತೊಡಗಿದಾಗ ಅವನಲ್ಲೂ ಆಗ 'ಬಲ'ವನ್ನೇ ಯೋಗ್ಯತಾತಾರತಮ್ಯಕ್ಕೆ ಗಮನಿಸಬೇಕು; ಅದರಂತೆ ಕ್ಷತ್ರಿಯನು ಜ್ಞಾನಕಾರ್ಯದಲ್ಲಿ ತೊಡಗಿದಾಗ ಅವನಲ್ಲಿ ಬಲದ ಬದಲು ಜ್ಞಾನವನ್ನೇ ನಿರ್ಣಾಯಕಗುಣವೆಂದು ಭಾವಿಸಬೇಕು.

೩) ಒಟ್ಟಾಗಿ ಜ್ಞಾನಭಕ್ತ್ಯಾದಿಗಳನ್ನು ಮುಖ್ಯವಾಗಿ ನಿರ್ಣಯಿಸಲು ಅವರು ಎಷ್ಟರ ಮಟ್ಟಿಗೆ ತಮ್ಮ ಸೇವೆ ಸಲ್ಲಿಸಿರುವರು ಎಂಬುದೇ ಮುಖ್ಯವಾದ ಅಂಶ. ಅದನ್ನು ಸಾಮಾನ್ಯರಿಗೆ ತಿಳಿಸಲೆಂದು ಈ ರೀತಿಯಾಗಿ ಬ್ರಾಹ್ಮಣರಲ್ಲಿ ಜ್ಞಾನ, ಕ್ಷತ್ರಿಯರಲ್ಲಿ ಬಲ ಇತ್ಯಾದಿ ವ್ಯವಸ್ಥೆ ಶಾಸ್ತ್ರಗಳಲ್ಲಿ ವಿಹಿತವಾಗಿದೆ ಎಂದು ಭಾವ.

೪) ಶ್ರೀವೇದವ್ಯಾಸರೂಪದಿಂದ ಶ್ರೀಹರಿಯು ಜ್ಞಾನಕಾರ್ಯದಲ್ಲಿ ಪ್ರವೃತ್ತನಾದಾಗ ಅವನ ಸೇವೆಗೆ ಅವತರಿಸಿದ ದೇವತೆಗಳಲ್ಲಿ ತಾರತಮ್ಯವನ್ನು ಅವರು ಮಾಡುವ ಜ್ಞಾನಕಾರ್ಯದಿಂದಲೇ ನಿರ್ಣಯಿಸಬೇಕು.

೫) ಅದರಂತೆ ಶ್ರೀಮಧ್ವಾಚಾರ್ಯರು ಜೀವೋತ್ತಮರು, ಅನಂತರ ಶ್ರೀಪದ್ಮನಾಭ–ತೀರ್ಥಾದಿಗಳು, ಶ್ರೀಜಯತೀರ್ಥರು ಮೊದಲಾದವರು ಹೀಗೆ ತಾರತಮ್ಯಕ್ರಮ ಎಂದು ಭಾವ.

---

೨೩. ಜ್ಞಾನವೃದ್ಧೋ ದ್ವಿಜಾತೀನಾಂ ಕ್ಷತ್ರಿಯಾಣಾಂ ಬಲಾಧಿಕಃ ।
ವೈಶ್ಯಾನಾಂ ಧಾನ್ಯಧನವಾನ್ ಶೂದ್ರಾಣಾಮೇವ ಜನ್ಮತಃ । – ಮಹಾಭಾರತ (೨/೩೮/೧೭)

೨೩. ವಿಷ್ಣೋಃ ಕಾರ್ಯಂ ಯೇಭ್ಯಸ್ತೇ ವಿಷ್ಣುಕಾರ್ಯಾಃ ತೇಷಾಂ ಭಾವಃ ವಿಷ್ಣುಕಾರ್ಯತಾ । -(ವಾ, ಜ)

೨೩. ತಥೈವ ಯದಾ ಜ್ಞಾನಕಾರ್ಯೇ ಪ್ರವೃತ್ತಸ್ತದಾ ಕ್ಷತ್ರಿಯಾದೌ ಜ್ಞಾನಮಪಿ ಪ್ರಮಾಣಂ ಜ್ಞಾಪಕಂ ಭವತಿ । -(ಜ)

ಶ್ರೀಹರಿಯ ಬಲಕಾರ್ಯ ಜ್ಞಾನಕಾರ್ಯದ ರೂಪಗಳು

ಕೃಷ್ಣರಾಮಾದಿರೂಪೇಷು ಬಲಕಾರ್ಯೋ ಜನಾರ್ದನಃ ।
ದತ್ತವ್ಯಾಸಾದಿರೂಪೇಷು ಜ್ಞಾನಕಾರ್ಯಸ್ತಥಾ ಪ್ರಭುಃ ॥ ೨೪ ॥

ಅ: ಪ್ರಭುವಾದ ಶ್ರೀಹರಿಯು ಕೃಷ್ಣ, ರಾಮ ಮೊದಲಾದ ರೂಪಗಳಲ್ಲಿ ಬಲಕಾರ್ಯವನ್ನೂ; ದತ್ತಾತ್ರೇಯ, ವೇದವ್ಯಾಸ ಮೊದಲಾದ ರೂಪಗಳಿಂದ ಜ್ಞಾನ-ಕಾರ್ಯವನ್ನೂ ಮಾಡುವನು.

ವಿ: ೧) ಪರಮಾತ್ಮನ ಸಕಲ ಅವತಾರಗಳೂ ಪರಿಪೂರ್ಣವಾಗಿವೆ; ಅವನು ಯಾವುದೇ ರೂಪದಿಂದ ಯಾವುದೇ ಕಾರ್ಯವನ್ನು ಮಾಡಬಲ್ಲ ಮಹಾಸಮರ್ಥ ಎಂಬುದನ್ನು 'ಪ್ರಭುಃ' ಎಂಬ ಪದದಿಂದ ಸೂಚಿಸಿರುವರು.

೨) ಆದರೂ ಅವನು ತನ್ನದೇ ಸಂಕಲ್ಪದಂತೆ ಕೃಷ್ಣರಾಮಾದಿ ರೂಪಗಳಿಂದ ಬಲಕಾರ್ಯವನ್ನೂ ವ್ಯಾಸದತ್ತಾದಿ ರೂಪಗಳಿಂದ ಜ್ಞಾನಕಾರ್ಯವನ್ನೂ ಮಾಡುವನು ಎಂಬುದು ವಿಶೇಷ.

೩) ಬಲಕಾರ್ಯ ಎಂದರೆ ದೈತ್ಯಹನನ, ಭೂಭಾರಹರಣಾದಿಗಳು; ಜ್ಞಾನಕಾರ್ಯ ಎಂದರೆ ವೇದೋಪದೇಶ, ವೇದವಿಭಾಗ, ಅದಕ್ಕೆ ಉಪಯುಕ್ತವಾದ ಶಾಸ್ತ್ರರಚನೆಗಳು ಇತ್ಯಾದಿ.

---

೨೪. ಬಲಕಾರ್ಯಃ = ಬಲಸ್ಯೈವ ಕಾರ್ಯಂ ದೈತ್ಯಹನನಭೂಭಾರಹರಣಾದಿಸ್ವಾವತಾರಪ್ರಯೋಜನಂ ಯಸ್ಯ ತಥೋಕ್ತಃ । – (ವಾ)

೨೪. ಜ್ಞಾನಕಾರ್ಯಃ = ಜ್ಞಾನಸ್ಯೈವ ಕಾರ್ಯಂ ವೇದೋಪದೇಶವೇದವಿಭಜನತದುಪಯುಕ್ತ ಶಾಸ್ತ್ರಕರಣಾದಿ-ಕಾರ್ಯಂ ಯಸ್ಯ ತಥೋಕ್ತಃ । – (ವಾ)

೨೪. ಉಭಯತ್ರಾಪಿ ಬ್ರಹ್ಮಾದಿಷ್ವಸಂಭಾವಿತಮಹಾಕಾರ್ಯಕರಣೇನ ಭಗವದವತಾರತ್ವಂ ಜ್ಞಾತವ್ಯಮಿತಿ ಭಾವಃ । – (ವಾ)

೨೪. ಇಲ್ಲಿ ಆದಿಶಬ್ದದಿಂದ ಹಯಗ್ರೀವಾದಿರೂಪಗಳನ್ನು ಗ್ರಹಿಸಬೇಕು;

೨೪. ಸರ್ವತ್ರ ಸರ್ವಕೃಚ್ಚಾಪಿ ಹಯಗ್ರೀವಾದಿರೂಪಕಃ ।
ಜ್ಞಾನಾದಿರಕ್ಷಕೋ ವಿಷ್ಣುರ್ಜಾಮದಗ್ನ್ಯಾದಿರೂಪವಾನ್ ॥
ಜ್ಞಾನಾದ್ಯುತ್ಪಾದಕೋ ನಿತ್ಯಂ ಕೃಷ್ಣಾದಿರ್ದೋಷನಾಶಕಃ ॥
ಏಕರೂಪೋऽಪಿ ಭಗವಾನ್ ಬಹುರೂಪ ಇವೇಯತೇ ।
ಅಚಿಂತ್ಯೈಶ್ವರ್ಯರೂಪತ್ವಾತ್ ಪೂರ್ಣಾನಂದೈಕರೂಪಕಃ ॥ ಇತಿ ಬ್ರಹ್ಮತರ್ಕೇ । – ಭಾ. ತಾ. (೧೦/೪/೨೧)

೨೫. ಇದಾನೀಂ ಪೃಥುನಾರದಬಲಭದ್ರಾದೀನಾಮಪಿ ಪುರಾಣೇಷು ಭಗವದವತಾರತ್ವೋಕ್ತಾ ತೇಷಾಮಪಿ ಮತ್ಸ್ಯಕೂರ್ಮಾದಿವತ್ ಸ್ವರೂಪಾವತಾರತ್ವಭ್ರಮಂ ನಿವರ್ತಯಿತುಂ ಅವತಾರದ್ವೈವಿಧ್ಯಮಾಹ । –(ವಾ)

ಶ್ರೀಹರಿಯ ಸಾಕ್ಷಾದವತಾರಗಳು

ಮತ್ಸ್ಯಕೂರ್ಮವರಾಹಾಶ್ಚ ಸಿಂಹವಾಮನಭಾರ್ಗವಾಃ ।
ರಾಘವಃ ಕೃಷ್ಣಬುದ್ಧೌ ಚ ಕೃಷ್ಣದ್ವೈಪಾಯನಸ್ತಥಾ ॥ ೨೫ ॥

ಕಪಿಲೋ ದತ್ತವೃಷಭೌ ಶಿಂಶುಮಾರೋ ರುಚೇಃ ಸುತಃ ।
ನಾರಾಯಣೋ ಹರಿಃ ಕೃಷ್ಣಸ್ತಾಪಸೋ ಮನುರೇವ ಚ ॥ ೨೬ ॥

---

೨೫. ದತ್ತಂ ದುರ್ವಾಸಸಂ ಸೋಮಮಾತ್ಮೇಶಬ್ರಹ್ಮಸಂಭವಾನ್ । –ಭಾಗವತ(೪/೧/೧೫)

೨೫. ಸ್ವಾಯಂಭುವಃ ಸ್ವದೌಹಿತ್ರಂ ವಿಷ್ಣುಂ ಯಜ್ಞಾಭಿಧಂ ಮನುಃ ।
ಈಶಾವಾಸ್ಯಾದಿಭರ್ಮಂತ್ರೈಸ್ತುಷ್ಟಾವಾವಹಿತಾತ್ಮನಾ ॥ – ಈಶಾವಾಸ್ಯಭಾಷ್ಯ(೧/೧)

೨೫. ಮಹಿದಾಸಾಭಿಧೋ ಜಜ್ಞೇ ಇತರಾಯಾಸ್ತಪೋಬಲಾತ್ ।
ಸಾಕ್ಷಾತ್ ಸ ಭಗವಾನ್ ವಿಷ್ಣುಃ ಯಸ್ತಂತ್ರಂ ವೈಷ್ಣವಂ ವ್ಯಧಾತ್ ॥ (ಬ್ರಹ್ಮಾಂಡೇ) –ಸೂ.ಭಾ. (೧/೧/೩೧)

ಅವತಾರಸ್ಪತೀಯೋಽಸ್ಯ ದೇವರ್ಷೇಃ ಪ್ರತಿತೋ ಭುವಿ ।
ಮಹಿದಾಸಸ್ತ್ವೈತರೇಯೋ ಯಸ್ತಂತ್ರಂ ನಾರದೇಽವದತ್ ॥
ಪ್ರಾದುರ್ಬಭೂವ ಭಗವಾಂಸ್ತಪಸೇತರಾಯಾ
ನಾರಾಯಣೋಽಬ್ಜಜಸುತಸ್ಯ ವಿಶಾಲನಾಮ್ನಃ । – ಐತರೇಯಭಾಷ್ಯ(ಪ್ರಥಮಪ್ರಘಟ್ಟಕ)

...ಮಹತ್ಸುರಾಣಾಂ ದಾಸತ್ವತಃ ಸ ಮಹಿದಾಸ ಇತಿ ಪ್ರಸಿದ್ಧಃ ॥ – ಐತರೇಯಭಾಷ್ಯ(ಪ್ರಥಮಪ್ರಘಟ್ಟಕ)

೨೫. ತಸ್ಮಾದ್ವೇದಾಃ ಸಮುತ್ಪನ್ನಾ ವಿದ್ಯಾಖ್ಯಾ ಮೂಲಿಕಾ ಶ್ರುತೀಃ ।
ಸರ್ವೋಪನಿಷದಶ್ಚೈವ ಪಂಚರಾತ್ರಾಖ್ಯಸಂಹಿತಾಃ ।
ಬ್ರಹ್ಮಸೂತ್ರಾಣಿ ವೇದಾನಾಂ ವ್ಯಾಖ್ಯಾಸ್ತಾಂ ಚ ವಿಸ್ತರಃ ।
ಸರ್ವಮೇತಜ್ಜಗಚ್ಚೈವ ನಿಃಸೃತಂ ತುರಗಾನನಾತ್ ॥ – ಬೃಹದ್ಭಾಷ್ಯ(೪/೪)

೨೫. ಏಕರೂಪೋಽಪಿ ಭಗವಾನ್ ಬಹುರೂಪ ಇವೇಯತೇ ।
ಅಚಿಂತ್ಯೈಶ್ಚರ್ಯರೂಪತ್ವಾತ್ ಪೂರ್ಣಾನಂದೈಕರೂಪಕಃ ॥ – ಭಾ.ತಾ.(೧೦/೪/೨೦)

೨೬. 'ಕಪಿಲೋ ವಾಸುದೇವಾಖ್ಯಸ್ತಂತ್ರಂ ಸಾಂಖ್ಯಂ ಜಗಾದ ಹ ।
ಬ್ರಹ್ಮಾದಿಭ್ಯಶ್ಚ ದೇವೇಭ್ಯೋ ಭೃಗ್ವಾದಿಭ್ಯಸ್ತಥೈವ ಚ ।
ತಥೈವಾಸುರಯೇ ಸರ್ವವೇದಾರ್ಥೈರುಪಬೃಂಹಿತಮ್ ॥
ಸರ್ವವೇದವಿರುದ್ಧಂ ಚ ಕಪಿಲೋಽನ್ಯೋ ಜಗಾದ ಹ ।
ಸಾಂಖ್ಯಮಾಸುರಯೇಽನ್ಯಸ್ಮೈ ಕುತರ್ಕಪರಿಬೃಂಹಿತಮ್' ಇತಿ ॥ – ಭಾ.ತಾ. (೧/೩/೧೦)

೨೬. 'ಅಶೇಷಜಗದಾಧಾರಃ ಶಿಂಶುಮಾರೋ ಹರಿಃ ಪರಃ ।
ಸರ್ವೇ ಬ್ರಹ್ಮವಿದೋ ನತ್ವಾ ತಂ ಯಾಂತಿ ಪರಮಂ ಪದಮ್' ಇತಿ ಬ್ರಹ್ಮಾಂಡೇ ॥ - ಭಾ. ತಾ. (೨/೨/೨೮)

ಮಹಿದಾಸಸ್ತಥಾ ಹಂಸಃ ಸ್ತ್ರೀರೂಪೋ ಹಯಶೀರ್ಷವಾನ್ ।
ತಥೈವ ಬಡಬಾವಕ್ತ್ರಃ ಕಲ್ಕೀ ಧನ್ವಂತರಿಃ ಪ್ರಭುಃ ॥ ೨೭ ॥

ಇತ್ಯಾದ್ಯಾಃ ಕೇವಲೋ ವಿಷ್ಣುರ್ನೈಷಾಂ ಭೇದಃ ಕಥಂಚನ ।
ನ ವಿಶೇಷೋ ಗುಣೈಃ ಸರ್ವೈರ್ಬಲಜ್ಞಾನಾದಿಭಿಃ ಕ್ವಚಿತ್ ॥ ೨೮ ॥

ಅ: ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, (ದಾಶರಥಿ) ರಾಮ, ಯಾದವಕೃಷ್ಣ, ಬುದ್ಧ, ವೇದವ್ಯಾಸ(ವಾಸಿಷ್ಠಕೃಷ್ಣ), ಕಪಿಲ, ದತ್ತಾತ್ರೇಯ, ವೃಷಭ, ಶಿಂಶುಮಾರ, ಯಜ್ಞ, ನಾರಾಯಣ, ಹರಿ, ಕೃಷ್ಣ, ತಾಪಸಮನು, ಮಹಿದಾಸ (ಐತರೇಯ),

---

೨೬. 'ಯಜ್ಞನಾಮಾ ತು ದೇವೋಽನ್ಯೋ ವಿಜ್ಞೇಯಃ ಪಾದದೇವತಾ ।
ತದಾವಿಷ್ಟೋ ಹರಿರ್ನಿತ್ಯಂ ತಮಾಹುಃ ಪಾದದೈವತಮ್ ।
ತಸ್ಯೇಂದ್ರಿಯಾಭಿಮಾನಿತ್ವಂ ಕುತಃ ಪೂರ್ಣಾಮಲಾತ್ಮನಃ' ಇತಿ ಚ ॥ - ಭಾ. ತಾ. (೩/೨೭/೬೧)

೨೬. 'ನರೋ ನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವ ಚ ।
ಚತ್ವಾರೋ ಧರ್ಮತನಯಾ ಹರಿರೇವ ತ್ರಯೋ ಮತಃ ।
ಅನಂತೋ ನರನಾಮಾಽತ್ರ ತಸ್ಮಿಂಸ್ತು ನರನಾಮವಾನ್ ।
ವಿಶೇಷೇಣ ಸ್ವಯಂ ವಿಷ್ಣುರ್ನಿವಸತ್ಯಂಬುಜೇಕ್ಷಣಃ ।
ತಸ್ಮಾಚ್ಚತುರ್ಥಾ ಧರ್ಮಸ್ಯ ಜಾತೋ ವಿಷ್ಣುರಿತೀರಿತಃ' ಇತಿ ಪಾದ್ಮೇ ॥ - ಭಾ. ತಾ. (೨/೭/೬)

'ಹರಿಸ್ತಾಪಸನಾಮಾಽಸೌ ಜಾತಸ್ತಪಸಿ ವೈ ಮನುಃ ।
ಗಜೇಂದ್ರಂ ಮೋಚಯಾಮಾಸ ಸಸರ್ಜ ಚ ಜಗದ್ವಿಭುಃ' ಇತಿ ಮಾತ್ಸ್ಯೇ ॥ - ಭಾ. ತಾ. (೨/೭/೧೬)

೨೭. 'ಭೂತಾದಿಭೂತೋಽಂಬುನಿಧಾನಮಧ್ಯೇ ಭೂತ್ವಾ ಹರಿಃ ಸರ್ವಹರೋಽತಿಧಾಮ್ನಾ ।
ಅಗಾಧಮಂಭೋ ವಿದಧಾತಿ ಭಸ್ಮ ಯೋ ವಾಡವಾಗ್ನಿರ್ನ ಹರಿರ್ವಿಚಿಂತ್ಯಃ' ॥ - ಕರ್ಮನಿರ್ಣಯ

೨೮. 'ತಸ್ಯ ಸರ್ವಾವತಾರೇಷು ನ ವಿಶೇಷೋಽಸ್ತಿ ಕಶ್ಚನ ।
ದೇಹದೇಹಿವಿಭೇದಶ್ಚ ನ ಪರೇ ವಿದ್ಯತೇ ಕ್ವಚಿತ್ ।
ಸರ್ವೇಽವತಾರಾ ವ್ಯಾಪ್ತಾಶ್ಚ ಸರ್ವೇ ಸೂಕ್ಷ್ಮಾಶ್ಚ ತತ್ತ್ವತಃ ।
ಐಶ್ವರ್ಯಯೋಗಾದ್ಭಗವಾನ್ ಕ್ರೀಡತ್ಯೇವಂ ಜನಾರ್ದನಃ' ಇತಿ ಮಹಾಸಂಹಿತಾಯಾಮ್ ।
- ಭಾ. ತಾ.(೧/೪/೨೮)

೨೯. 'ಕಪಿಲೋ ವಾಸುದೇವಾಖ್ಯಸ್ತಂತ್ರಂ ಸಾಂಖ್ಯಂ ಜಗಾದ ಹ ।
ಬ್ರಹ್ಮಾದಿಭ್ಯಶ್ಚ ದೇವೇಭ್ಯೋ ಭೃಗ್ವಾದಿಭ್ಯಸ್ತಥೈವ ಚ ।
ತಥೈವಾಸುರಯೇ ಸರ್ವವೇದಾರ್ಥೈರುಪಬೃಂಹಿತಮ್ ॥
ಸರ್ವವೇದವಿರುದ್ಧಂ ಚ ಕಪಿಲೋಽನ್ಯೋ ಜಗಾದ ಹ ।
ಸಾಂಖ್ಯಮಾಸುರಯೇಽನ್ಯಸ್ಮೈ ಕುತರ್ಕಪರಿಬೃಂಹಿತಮ್' ಇತಿ ॥ – ಭಾ.ತಾ.(೧/೩/೧೦)

ಹಂಸ, ನಾರಾಯಣೀ (ಮೋಹಿನೀ), ಹಯಗ್ರೀವ, ಬಡವಾನಲ, ಕಲ್ಕೀ, ಧನ್ವಂತರೀ, ಇವೇ ಮೊದಲಾದವುಗಳು ಸಾಕ್ಷಾತ್ ವಿಷ್ಣುರೂಪಗಳು. ಇವುಗಳಲ್ಲಿ ಯಾವರೀತಿಯಲ್ಲೂ ಭೇದ ಇಲ್ಲವೇ ಇಲ್ಲ; ಬಲ, ಜ್ಞಾನ ಮೊದಲಾದ ಸಕಲ ಗುಣಗಳಲ್ಲೂ ಇವುಗಳಲ್ಲಿ ಯಾವುದೇ ವ್ಯತ್ಯಾಸ ಎಲ್ಲೂ ಇರುವುದಿಲ್ಲ.

ವಿಃ ೧) ಅವತಾರಪ್ರಸಂಗದಿಂದಾಗಿ ಪರಮಾತ್ಮನ ಸಾಕ್ಷಾತ್ ಅವತಾರಗಳು, ಆವೇಶಾವತಾರಗಳು ಮೊದಲಾದವುಗಳನ್ನು ತಿಳಿಸಲು ಹೊರಟು, ಈ ಶ್ಲೋಕಗಳಲ್ಲಿ ಸಾಕ್ಷಾದವತಾರಗಳನ್ನು ತಿಳಿಸಿರುವರು.

೨) ಭಗದವತಾರಗಳು ಯಾವುವು; ಯಾವುವು ಭಗವದವತಾರಗಳಲ್ಲ; ಯಾವುವು ಭಗವಂತನ ಆವೇಶಾವತಾರಗಳು ಮೊದಲಾಗಿ ಸರಿಯಾಗಿ ತಿಳಿದರೇ ಮೋಕ್ಷ ಇಲ್ಲವಾದಲ್ಲಿ ಇಳ್ಳು ಎಂಬುದಾಗಿ ಮೊದಲನೇ ಅಧ್ಯಾಯದಲ್ಲಿ ತಿಳಿಸಿದ್ದರು (ಶ್ಲೋ.೮೨); ಈಗ ಅಂತಹ ಅವತಾರ ಮೊದಲಾದವುಗಳನ್ನು ಇಲ್ಲಿ ತಿಳಿಸುತ್ತಿರುವರು.

೩) ಪೃಥು, ನಾರದ, ಬಲರಾಮ ಮೊದಲಾದ ಇತರರನ್ನು ಸಹ ಭಗವಂತನ ಸಾಕ್ಷಾದವತಾರಗಳೆಂದು ಕೆಲವರು ಹೇಳುವುದು ಸರಿಯಲ್ಲವೆಂಬುದು ಇದರಿಂದ ಸೂಚಿತ.

ವಿಶೇಷ ವಿವರಗಳು

ವಿಃ ೧) ಇವುಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಹತ್ತುರೂಪಗಳು **'ದಶಾವತಾರ'** ವೆಂದು ಪ್ರಸಿದ್ಧವಾದ ರೂಪಗಳು.

೨) **ವೇದವ್ಯಾಸ**ರೂಪವು ಬ್ರಹ್ಮಾದಿಗಳ ಪ್ರಾರ್ಥನೆಯಂತೆ ಪರಾಶರ ಮತ್ತು ಸತ್ಯವತಿಯರ ನಿಮಿತ್ತದಿಂದ ಅವತರಿಸಿ ಅಪೂರ್ವಜ್ಞಾನಕಾರ್ಯ ಮಾಡಿದ ರೂಪ, ಈ ಮಹಾಭಾರತತಾತ್ಪರ್ಯನಿರ್ಣಯದ ಹತ್ತನೇ ಅಧ್ಯಾಯವನ್ನು ಶ್ರೀಮದಾಚಾರ್ಯರು ಈ ಅವತಾರವರ್ಣನೆಗೇ ಮೀಸಲಿಟ್ಟಿರುವರು.

೩) **ಕಪಿಲ**ರೂಪವು ಬ್ರಹ್ಮಪುತ್ರರಾದ ಕರ್ದಮ ಮತ್ತು ಸ್ವಾಯಂಭುವಮನುಪುತ್ರಿಯಾದ ದೇವಹೂತಿಯರ ಪುತ್ರತ್ವೇನ ಅವತರಿಸಿದ ರೂಪ; ತನ್ನ ತಾಯಿಯ ನಿಮಿತ್ತದಿಂದ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದ ಈ ರೂಪವು ಸಾಂಖ್ಯಶಾಸ್ತ್ರಪ್ರವರ್ತಕರೂಪವೆಂದೇ ಪ್ರಸಿದ್ಧವಾಗಿದೆ. ಈ ರೂಪದ ಬಗ್ಗೆ ವಿವರಗಳನ್ನು ಭಾಗವತಪುರಾಣದ ತೃತೀಯಸ್ಕಂಧ ಮತ್ತು ಅದರ ತಾತ್ಪರ್ಯ–

ನಿರ್ಣಯಾದಿಗಳಲ್ಲಿ ಕಾಣಬಹುದು. ಕಪಿಲೋಪದೇಶವು ಭಾಗವತಪುರಾಣದಲ್ಲಿ ೨೪ ರಿಂದ ೩೩ ರವರೆಗಿನ ಒಟ್ಟು ಹತ್ತು ಅಧ್ಯಾಯಗಳಲ್ಲಿ ಸಂಗೃಹೀತವಾಗಿದೆ.

ಅವೈದಿಕವಾದ ಸಾಂಖ್ಯಮತವನ್ನು ಪ್ರಸಾರಮಾಡಿದ ಕಪಿಲ ಎಂಬ ಮತೊಬ್ಬ ಋಷಿಯನ್ನು ಅನೇಕರು 'ವಿಷ್ಣುಕಪಿಲ' ಎಂದು ಭಾವಿಸಿರುವರು, ಅದು ಸರಿಯಲ್ಲ ಎಂಬುದನ್ನು ಶ್ರೀಮದಾಚಾರ್ಯರು ಸ್ಪಷ್ಟವಾಗಿ ನಿರೂಪಿಸಿರುವರು (ಭಾ.ತಾ. ೧/೩/೧೦).

೪) 'ದತ್ತ'ರೂಪವು ಬ್ರಹ್ಮಪುತ್ರ ಅತ್ರಿ ಮತ್ತು ಕರ್ದಮಪುತ್ರಿ ಅನಸೂಯೆಯರ ನಿಮಿತ್ತದಿಂದ ಪ್ರಾದುರ್ಭೂತವಾದ ರೂಪ; ಯೋಗಪ್ರವರ್ತಕವಾದರೂಪ ಎಂಬುದು ಇದರ ಹಿರಿಮೆ; 'ದತ್ತಾತ್ರೇಯ ಯೋಗ' ಎಂಬ ಕೃತಿಯೊಂದನ್ನು ಮಧ್ವಾಚಾರ್ಯರು ತಮ್ಮ ಭಾಗವತತಾತ್ಪರ್ಯಾದಿ ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಪ್ರಸಿದ್ಧಚಕ್ರವರ್ತಿ ಕಾರ್ತವೀರ್ಯಾರ್ಜುನ ಈ ರೂಪದ ಶಿಷ್ಯ ಮತ್ತು ಉಪಾಸಕ. ಅತ್ರಿ–ಅನಸೂಯರಿಗೆ ದತ್ತ, ದೂರ್ವಾಸ ಮತ್ತು ಚಂದ್ರ ಎಂಬ ಮೂವರು ಮಕ್ಕಳು ಅವತರಿಸಿದ್ದನ್ನೂ, ಅವರಲ್ಲಿ 'ದತ್ತ'ನು ಸಾಕ್ಷಾತ್ ವಿಷ್ಣು; ದೂರ್ವಾಸರು ಶಂಕರಾವತಾರ ಮತ್ತು ಚಂದ್ರನು ಬ್ರಹ್ಮಾಂಶಯುಕ್ತ(ಬ್ರಹ್ಮದೇವರಿಗೆ ಅವತಾರವಿಲ್ಲವಾದ್ದರಿಂದ) ಎಂಬುದನ್ನು ಭಾಗವತಪುರಾಣದ ಚತುರ್ಥಸ್ಕಂಧದ ಮೊದಲ ಅಧ್ಯಾಯದಲ್ಲಿ ಕಾಣಬಹುದು. ಆದ್ದರಿಂದ ಅತ್ರಿ ದಂಪತಿಗಳಿಗೆ ಜನಿಸಿದ್ದು ಒಂದೇ ಮಗುವೆಂದೂ, ಅವನು ತ್ರಿಮೂರ್ತಿ–ರೂಪನೆಂದೂ, ಅವನಿಗೆ ಮೂರುತಲೆ, ಆರುಕೈಗಳು ಮತ್ತು ಪಕ್ಕದಲ್ಲಿ ನಾಲ್ಕುನಾಯಿಗಳೆಂದೂ ಕೆಲವರು ಮಾಡುವ ಉಪಾಸನೆ ಭಾಗವತಾದಿ ಶಾಸ್ತ್ರಗಳಿಗೆ ವಿರುದ್ಧವೆಂಬುದನ್ನು ಗಮನಿಸಬೇಕು.

೫) 'ಋಷಭ' ರೂಪವು ಅಗ್ನೀಧ್ರಪುತ್ರನಾದ ನಾಭಿರಾಜ, ಮತ್ತು ಮೇರುಪುತ್ರಿಯಾದ ಮೇರುದೇವಿಯರ ಪುತ್ರತ್ವೇನ ಪ್ರಾದುರ್ಭವಿಸಿದ ರೂಪ. ಇದರ ಬಗ್ಗೆ ವಿವರಗಳು ಭಾಗವತಪುರಾಣದ ಪಂಚಮಸ್ಕಂಧದ ೩ ರಿಂದ ೬ರವರೆಗಿನ ೪ ಅಧ್ಯಾಯಗಳಲ್ಲಿ ಬಂದಿವೆ. ಅಸುರಮೋಹನಕ್ಕಾಗಿ ಅವೈದಿಕವಾದ 'ಆರ್ಹತ'(ಜೈನ)ಮತಕ್ಕೆ ಪ್ರವರ್ತಕವಾದ ರೂಪ–ವೆಂಬುದು ಇದರ ಮತ್ತೊಂದು ವಿಶೇಷ.

೬) ಯಜ್ಞರೂಪವು ಬ್ರಹ್ಮಪುತ್ರ 'ರುಚಿ' ಮತ್ತು ಸ್ವಾಯಂಭುವಮನುಪುತ್ರಿ 'ಆಕೂತಿ'ಯರ ಪುತ್ರತ್ವೇನ ಪ್ರಾದುರ್ಭವಿಸಿದ ರೂಪ; ಸ್ವಾಯಂಭುವಮನುವು 'ಪುತ್ರಿಕಾಪುತ್ರಧರ್ಮ'ದಿಂದ ಆಕೂತಿಯನ್ನು ರುಚಿಗೆ ಧಾರೆ ಎರೆದದ್ದರಿಂದ 'ಯಜ್ಞ'ನು ದೌಹಿತ್ರನಾದರೂ, ಮನುಪುತ್ರನೆಂದೇ ಪ್ರಸಿದ್ಧನಾದ. ಈಶಾವಾಸ್ಯೋಪನಿಷತ್ತಿನ ಪ್ರತಿಪಾದ್ಯರೂಪ; ಅದಕ್ಕೆಂದೇ ಈಶಾವಾಸ್ಯವು 'ಯಾಜ್ಞೀಯೋಪನಿಷತ್ತು' ಎಂದೇ ಪ್ರಸಿದ್ಧವಾಗಿದೆ. ಇದರ ಬಗ್ಗೆ ವಿವರಗಳು ಭಾಗವತಪುರಾಣದ ಚತುರ್ಥಸ್ಕಂಧ ಮತ್ತು ಅಷ್ಟಮಸ್ಕಂಧಗಳ ಮೊದಲ ಅಧ್ಯಾಯಗಳಲ್ಲಿ ಬಂದಿದೆ.

೭) **ನಾರಾಯಣ, ಹರಿ ಮತ್ತು ಕೃಷ್ಣ** ಎಂಬ ಈ ಮೂರು ರೂಪಗಳು ಯಮಧರ್ಮನ ಪುತ್ರತ್ವೇನ ಅವತರಿಸಿದ ಭಗವದ್ರೂಪಗಳು; ವಾಸಿಷ್ಠಕೃಷ್ಣ, ಯಾದವಕೃಷ್ಣ ಮತ್ತು ಧಾರ್ಮಕೃಷ್ಣ ಎಂಬುದಾಗಿ ಕೃಷ್ಣರೂಪಗಳು ಒಟ್ಟು ಮೂರು ಎಂದು ತಿಳಿಯಬೇಕು. ಬದರಿಯಲ್ಲಿ ನೆಲೆಸಿರುವ ರೂಪವು ಇಲ್ಲಿಯ 'ನಾರಾಯಣ'ರೂಪವೇ ಆಗಿದೆ. ಉರ್ವಶಿ ಈ ನಾರಾಯಣನ ಮಗಳು ಎಂಬ ವಿವರ ಭಾಗವತಪುರಾಣದಲ್ಲಿ ಬಂದಿದೆ (ಸ್ಕಂಧ ೧೧, ಅಧ್ಯಾಯ ೪).

೮) **ತಾಪಸಮನುರೂಪವು** ಸ್ವಾಯಂಭುವಮನುಪುತ್ರನಾದ ಪ್ರಿಯವ್ರತರಾಜನಿಗೆ ಪುತ್ರತ್ವೇನ ಪ್ರಾದುರ್ಭವಿಸಿದ ರೂಪ; ತಾಮಸ ಎಂಬುದು ಇದರ ನಾಮಾಂತರ; ಗಜೇಂದ್ರನಿಗೆ ಮೋಕ್ಷವಿತ್ತ ಭಗವದ್ರೂಪವು ಈ ತಾಪಸರೂಪವೇ; ಇದರ ಬಗ್ಗೆ ವಿವರಗಳು ಭಾಗವತಪುರಾಣದ ಪಂಚಮಸ್ಕಂಧ ಮತ್ತು ಅಷ್ಟಮಸ್ಕಂಧಗಳಲ್ಲಿ ಬಂದಿವೆ.

೯) **ಮಹಿದಾಸ** ಬ್ರಹ್ಮಪುತ್ರನಾದ 'ವಿಶಾಲ' ಎಂಬವರಿಂದ ಇತರಾದೇವಿಯಲ್ಲಿ ಪುತ್ರತ್ವೇನ ಪ್ರಾದುರ್ಭವಿಸಿದ ರೂಪವಾದ್ದರಿಂದ 'ಐತರೇಯ' ಎಂದೂ ಲೋಕದಲ್ಲಿ ಪ್ರಸಿದ್ಧವಾದ ರೂಪ; ಬ್ರಹ್ಮರುದ್ರಾದಿದೇವತೆಗಳು ದಾಸರಾಗಿ ಈತನನ್ನು ಸೇವಿಸಿದ್ದರಿಂದ 'ಮಹಿದಾಸ' ಎಂದು ಹೆಸರು. ಋಗ್ವೇದದ ಐತರೇಯೋಪನಿಷತ್ತಿನ ಋಷಿ ಮತ್ತು ದೇವತೆ ಎರಡೂ ಈ ರೂಪವೇ ಆಗಿದೆ.

೧೦) **'ಹಂಸ'ರೂಪವು** ಬ್ರಹ್ಮದೇವರಿಗೆ ವಿಶೇಷಾನುಗ್ರಹ ಮಾಡಲು ಪ್ರಾದುರ್ಭವಿಸಿದ ರೂಪ; ಪರಮಹಂಸರೂಪವಾದ ಇದರಿಂದಾಗಿಯೇ ವೈಷ್ಣವಪೀಠಗಳು ಹಂಸನಾಮಕ ಪರಮಾತ್ಮನಪೀಠಗಳು ಎಂದು ಪ್ರಸಿದ್ಧವಾಗಿವೆ. ಈ ರೂಪದ ಬಗ್ಗೆ ವಿವರಗಳು ಶ್ರೀಮದ್ಭಾಗವತ ಪುರಾಣದ ಏಕಾದಶಸ್ಕಂಧ (೪/೧೭ ಮತ್ತು ೩/೧೮–೪೪)ದಲ್ಲಿ ಬಂದಿವೆ.

೧೧) **ಮೋಹಿನಿಯೇ** ಈ ಸ್ತ್ರೀರೂಪ; 'ನಾರಾಯಣೀ'ರೂಪವೆಂದರೂ ಇದೇ. ಸಮುದ್ರಮಥನದಿಂದ ಉದ್ಭವಿಸಿದ ಅಮೃತವನ್ನು ದೇವತೆಗಳಿಗೆ ಮಾತ್ರ ಉಣಬಡಿಸಿ ಅಸುರರನ್ನು ವಂಚಿಸಿದ ರೂಪ; ಇದರ ದರ್ಶನದಿಂದ ರುದ್ರದೇವರು ಮೋಹಿತರಾದ ವಿವರವೂ ಭಾಗವತ ಅಷ್ಟಮಸ್ಕಂಧದಲ್ಲಿ ಬಂದಿದೆ. (೮.೧೨)

೧೨) **'ಹಯಗ್ರೀವ'ರೂಪವು** ಸೃಷ್ಟಿಯ ಆದಿಯಲ್ಲಿ ಸಕಲವಿದ್ಯೆಗಳನ್ನು ಅಭಿವ್ಯಕ್ತಗೊಳಿಸಿ ಚತುರ್ಮುಖಬ್ರಹ್ಮದೇವರಿಗೆ ಉಪದೇಶಿಸಿದ ರೂಪ; 'ಮೂಲರಾಮಾಯಣ'ವನ್ನು ಉಪದೇಶಿಸಿದ ರೂಪವೆಂಬುದು ಇದರ ಮತ್ತೊಂದು ಹಿರಿಮೆ; ಇದರ ಬಗ್ಗೆ ವಿವರಗಳು ಬೃಹದಾರಣ್ಯಕೋಪನಿಷತ್ತು ಮತ್ತು ಅದರ ಮಧ್ವಭಾಷ್ಯಗಳಲ್ಲಿ ಬಂದಿವೆ.

೧೩) 'ಬಡವಾವಕ್ತ್ರ' ಎಂದರೆ 'ಬಡವಾಗ್ನಿ' ಎಂದರ್ಥ; ವಿಷ್ಣುವು ಈ ರೂಪದಿಂದ ಸಮುದ್ರದೊಳಗೆ ನೆಲೆಸಿರುವನು ಎಂದು ಶಾಸ್ತ್ರಗಳು ಹೇಳಿವೆ.

ಭೂತಾಧಿಭೂತೋಽಂಬುನಿದಾನಮಧ್ಯೇ ಭೂತ್ವಾ ಹರಿಃ ಸರ್ವಹರೋಽತಿಧಾಮ್ನಾ ।
ಅಗಾಧಮಂಭೋ ವಿದಧಾತಿ ಭಸ್ಮ ಯೋ ಸ ಬಾಡವಾಗ್ನಿರ್ಹರಿರ್ವಿಚಿಂತ್ಯಃ ॥

– ಇತಿ ಧ್ಯಾನಚಕ್ರೇ (ಕರ್ಮನಿರ್ಣಯ)

೧೪) ಧನ್ವಂತರಿಯು ಸಮುದ್ರಮಥನಕಾಲದಲ್ಲಿ ಸಮುದ್ರಮಧ್ಯದಿಂದ ಪ್ರಾದುರ್ಭವಿಸಿ ಅಮೃತಕಲಶವನ್ನು ತಂದಿತ್ತ ರೂಪ; ಆಯುರ್ವೇದಪ್ರವರ್ತಕರೂಪ.

೧೫) ಈ ಎಲ್ಲ ರೂಪಗಳೂ ಸಾಕ್ಷಾದ್ರೂಪಗಳು; ಜ್ಞಾನಾನಂದಮಯವಾದ ಅಪ್ರಾಕೃತ ರೂಪಗಳು; ಗರ್ಭವಾಸ, ಉತ್ಪತ್ತಿ ನಾಶ ಮೊದಲಾದ ದೋಷಗಳು ಎಂದೂ ಇವಕ್ಕೆ ಇಲ್ಲ; ಮೂಲರೂಪಕ್ಕೂ ಇದಕ್ಕೂ ಯಾವುದೇ ವಿಧವಾದ ಭೇದವಾಗಲೀ, ವ್ಯತ್ಯಾಸವಾಗಲೀ ಎಂದೂ ಇಲ್ಲ ಎಂದು ಭಾವ.

೧೬) ಇವು ಮಾತ್ರವಲ್ಲದೆ ಮೊದಲ ಅಧ್ಯಾಯದ ೧೦ನೇ ಶ್ಲೋಕದಲ್ಲಿ ತಿಳಿಸಿದ ಕೇಶವಾದಿ ದ್ವಾದಶ(ಚತುರ್ವಿಂಶತಿ), ನಾರಾಯಣಾದಿ ಶತ, ವಿಶ್ವಾದಿ ಸಹಸ್ರ, ಪರಾದಿ ಬಹು ಮತ್ತು ಅಜಿತಾದಿ ಅನಂತ ರೂಪಗಳೂ ಸಹ ಇದೇ ರೀತಿಯಾಗಿ ಮೂಲರೂಪದಿಂದ ಅಭಿನ್ನವಾದ ಸಾಕ್ಷಾದ್ರೂಪಗಳು ಎಂಬುದನ್ನು ಇಲ್ಲಿಯ 'ಇತ್ಯಾದ್ಯಾಃ' ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ಶ್ರೀಹರಿಯ ವಿಶೇಷಾವೇಶದ ರೂಪಗಳು

ಶ್ರೀರ್ಬ್ರಹ್ಮರುದ್ರಶೇಷಾಶ್ಚ ವೀಂದ್ರೇಂದ್ರೌ ಕಾಮ ಏವ ಚ ।
ಕಾಮಪುತ್ರೋಽನಿರುದ್ಧಶ್ಚ ಸೂರ್ಯಶ್ಚಂದ್ರೋ ಬೃಹಸ್ಪತಿಃ ॥ ೨೯ ॥

---

೨೯. ಶ್ರೀಬ್ರಹ್ಮಾದೀನಾಂ ಅವತಾರತ್ವೇನ ಶ್ರವಣಾತ್ ತೇಽಪಿ ಕಿಮರ್ಥಂ ನೋಕ್ತಾ ಇತ್ಯತ ಆಹ ಶ್ರೀತಿ। –(ಜ)

೨೯. ಭಗವದವತಾರಾನಿರುದ್ಧವ್ಯಾವರ್ತನಾಯ ಕಾಮಪುತ್ರ ಇತ್ಯುಕ್ತಮ್ । ಮೂಲರೂಪಿಕಾಮಾದೇವ ಮೂಲ-ರೂಪನಿರುದ್ಧೋಽಪಿ ಜಾತೋಽಸ್ತಿ ಸ ಇತ್ಯರ್ಥಃ। –(ಜ)

ಕೃಷ್ಣಪೌತ್ರಾನಿರುದ್ಧವ್ಯಾವೃತ್ಯರ್ಥಂ ಭಗವದ್ರೂಪವ್ಯಾವೃತ್ಯರ್ಥಂ ಚ ಕಾಮಪುತ್ರ ಇತಿ। – (ಜ)

೨೯. 'ಶಂಖಚಕ್ರಭೃದೀಶೇಶಃ ಶ್ವೇತವರ್ಣೋ ಮಹಾಭುಜಃ।
ಆವಿಷ್ಟಃ ಶ್ವೇತಕೇಶಾತ್ಮಾ ಶೇಷಾಂಶಂ ರೋಹಿಣೀಸುತಮ್' ಇತಿ ಮಹಾವಾರಾಹೇ ॥ -ಭಾ.ತಾ.(೧/೩/೨೩)

೩೦. ಏಷಾಂ ಬ್ರಹ್ಮಾದೀನಾಂ ಭಾರ್ಯಾಶ್ಚ। ಮನವಃ ಸ್ವಾಯಂಭುವಾದಯಃ। –(ವಾ)

ಧರ್ಮ ಏಷಾಂ ತಥಾ ಭಾರ್ಯಾ ದಕ್ಷಾದ್ಯಾ ಮನವಸ್ತಥಾ ।
ಮನುಪುತ್ರಾಶ್ಚ ಋಷಯೋ ನಾರದಃ ಪರ್ವತಸ್ತಥಾ ॥ ೩೦ ॥

ಕಶ್ಯಪಃ ಸನಕಾದ್ಯಾಶ್ಚ ವಹ್ನ್ಯಾದ್ಯಾಶ್ಚೈವ ದೇವತಾಃ ।
ಭರತಃ ಕಾರ್ತವೀರ್ಯಶ್ಚ ವೈನ್ಯಾದ್ಯಾಶ್ಚಕ್ರವರ್ತಿನಃ ॥ ೩೧ ॥

ಗಯಶ್ಚ ಲಕ್ಷ್ಮಣಾದ್ಯಾಶ್ಚ ತ್ರಯೋ ರೋಹಿಣೀನಂದನಃ ।
ಪ್ರದ್ಯುಮ್ನೋ ರೌಗ್ಮಿಣೇಯಶ್ಚ ತತ್ಪುತ್ರಶ್ಚಾನಿರುದ್ಧಕಃ ॥ ೩೨ ॥

ನರಃ ಫಲ್ಗುನ ಇತ್ಯಾದ್ಯಾ ವಿಶೇಷಾವೇಶಿನೋ ಹರೇಃ ।
ವಾಲಿಸಾಂಬಾದಯಶ್ಚೈವ ಕಿಂಚಿದಾವೇಶಿನೋ ಹರೇಃ ॥ ೩೩ ॥

---

೩೧. ವೈನ್ಯಃ ಲಕ್ಷ್ಮಣಾದ್ಯಾ ಇತಿ । ಲಕ್ಷ್ಮಣಭರತಶತ್ರುಘ್ನಾ ಇತಿ ತ್ರಯ ಇತ್ಯರ್ಥಃ । – (ವಾ)

೩೧. 'ಆವಿವೇಶ ಪೃಥುಂ ದೇವಃ ಶಂಖೀ ಚಕ್ರೀ ಚತುರ್ಭುಜಃ' ಇತಿ ಪಾದ್ಮೇ । - ಭಾ. ತಾ.(೧/೩/೧೪)

ಪೃಥುಹೈಹಯಾದಯೋ ಜೀವಾಸ್ತೇಷ್ವಾವಿಷ್ಟೋ ಹರಿಃ ಸ್ವಯಮ್ ।
ವಿಶೇಷಾವೇಶತಸ್ತೇಷು ಸಾಕ್ಷಾದ್ಧರ್ಯಂಶತಾವಚಃ ।
ಕಿಂಸ್ತುಘ್ನವ್ಯಾಸಋಷಭಕಪಿಲಾ ಮತ್ಸ್ಯಪೂರ್ವಕಾಃ ।
ಆಕೂತಿಜ್ಞಿತರೇಯೌ ಚ ಧರ್ಮಜತ್ರಯಮೇವ ಚ ।
ಧನ್ವಂತರಿರ್ಹಯಗ್ರೀವೋ ದತ್ತಾತ್ರೇಯಶ್ಚತಾಪಸಃ ।
ಸ್ವಯಂ ನಾರಾಯಣಸ್ತ್ವೇತೇ ನಾಣುಮಾತ್ರವಿಭೇದಿನಃ ।
ಬಲತಃ ಸ್ವರೂಪತಶ್ಚೈವ ಗುಣೈರಪಿ ಕಥಂಚನ' ಇತಿ ತತ್ತ್ವನಿರ್ಣಯೇ । - ಭಾ. ತಾ. (೪/೧೪/೫೦)

೩೨. ದಕ್ಷಾದ್ಯಾಃ = ಆದ್ಯಶಬ್ದೇನ ಕರ್ದಮಾದಯೋ ಗೃಹ್ಯಂತೇ । ಮನುಪುತ್ರಾಃ = ಪ್ರಿಯವ್ರತಾದ್ಯಾಃ । ಪರ್ವತೋ= ಹಿಮವಾನ್, ಯದ್ವಾ ಪರ್ವತನಾಮಾ ಋಷಿಃ । ಭರತೋ = ದೌಷ್ಮಂತಿಃ । ಗಯೋ ರಾಜಾ ಪ್ರಿಯವ್ರತವಂಶಜಃ । ಅತ್ರ ಆದ್ಯಪದೇನ ಶಶಬಿಂದ್ವಾದಯಃ । –(ವರದರಾಜೀಯ)

೩೨. ಭಗವದವತಾರಪ್ರದ್ಯುಮ್ನವ್ಯಾವೃತ್ಯರ್ಥಂ ರೌಗ್ಮಿಣೇಯ ಇತ್ಯುಕ್ತಮ್ । ಕೃಷ್ಣಕುಮಾರಪ್ರದ್ಯುಮ್ನಪುತ್ರೋಽ-ಷ್ಟೇಕೋಽನಿರುದ್ಧೋಽಸ್ತೀತಿ ಭಾವೇನೋಕ್ತಂ ತತ್ಪುತ್ರ ಇತಿ । ನರಃ ನರಋಷಿಃ ॥ –(ವಾ)

೩೩. ಅತ್ರ ಆದ್ಯಪದೇನ ಉದ್ಧವಾದಯೋ ಗೃಹ್ಯಂತೇ । –(ವ)

ಅತ್ರ ಆದಿಪದೇನ ಕರ್ಣಾದಯೋ ಗೃಹ್ಯಂತೇ । –(ವ)

೩೩. ವಿಶೇಷಾವೇಶಿನಃ । ವಿಶೇಷಾವೇಶಿತ್ವಾತ್ ತಥಾ ವ್ಯವಹಾರಃ । –(ಜ)

೩೩. ಪ್ರಕೃತಿಸ್ತೇನ ಚಾವಿಷ್ಟಾತದ್ವಶಾ । – ಪೈಂಗಿಶ್ರುತಿ (ಬೃಹದ್ಭಾಷ್ಯ)

ಅ: ಮಹಾಲಕ್ಷ್ಮಿ, ಬ್ರಹ್ಮ (ವಾಯು), ಗರುಡಶೇಷರುದ್ರರು, ಇಂದ್ರಕಾಮರು, ಕಾಮ-ಪುತ್ರನಾದ ಅನಿರುದ್ಧ, ಸೂರ್ಯ, ಚಂದ್ರ, ಬೃಹಸ್ಪತಿ, ಯಮ, ಮತ್ತು ಇವರೆಲ್ಲರ ಪತ್ನಿಯರು, ದಕ್ಷ ಮೊದಲಾದವರು, ಸ್ವಾಯಂಭುವ ಮೊದಲಾದ ಮನುಗಳು, ಮನುಪುತ್ರರು, ಋಷಿಗಳು, ನಾರದ, ಪರ್ವತ, ಕಶ್ಯಪ, ಸನಕಾದಿಗಳು ಮತ್ತು ಅಗ್ನಿ ಮೊದಲಾದ ದೇವತೆಗಳು, ಭರತ, ಕಾರ್ತವೀರ್ಯಾರ್ಜುನ, ಪೃಥು ಮೊದಲಾದ ಚಕ್ರವರ್ತಿಗಳು, ಗಯ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಮೂವರು, ಬಲರಾಮ, ರುಗ್ಮಿಣೀಪುತ್ರನಾದ ಪ್ರದ್ಯುಮ್ನ, ಆ ಪ್ರದ್ಯುಮ್ನಪುತ್ರನಾದ ಅನಿರುದ್ಧ, ನರ, ಅರ್ಜುನ ಮೊದಲಾದವರೆಲ್ಲ ಶ್ರೀಹರಿಯ ವಿಶೇಷಾವೇಶವನ್ನು ಹೊಂದಿದವರು, ವಾಲಿ, ಸಾಂಬ ಮೊದಲಾದವರೆಲ್ಲ ಶ್ರೀಹರಿಯ ಸ್ವಲ್ಪಆವೇಶವನ್ನು ಹೊಂದಿದವರು.

ಹನುಮಂತ, ಭೀಮಸೇನರೇ ಶ್ರೀಹರಿಯ ಪ್ರಧಾನ ಕಾರ್ಯಸಾಧಕರು

ತಸ್ಮಾದ್ಬಲಪ್ರವೃತ್ತಸ್ಯ ರಾಮಕೃಷ್ಣಾತ್ಮನೋ ಹರೇಃ ।
ಅಂತರಂಗಂ ಹನೂಮಾಂಶ್ಚ ಭೀಮಸ್ತತ್ಕಾರ್ಯಸಾಧಕೌ ॥ ೩೪ ॥

---

೩೩. ತೇಷ್ವೇವ ಲಕ್ಷ್ಮಣಾದ್ಯೇಷು ತ್ರಿಷ್ವೇವಂ ಚ ಬಲಾದಿಷು ।
ನರಾರ್ಜುನಾದಿಷು ತಥಾ ಪುನರಾವೇಶ ಉಚ್ಯತೇ ॥
ಸ್ವಲ್ಪಸ್ತು ಪುನರಾವೇಶೋ ಧರ್ಮಪುತ್ರಾದಿಷು ಪ್ರಭೋಃ ॥ – (ಗೀತಾತಾತ್ಪರ್ಯ ೨/೩೯)

೩೩. ಮತ್ಸ್ಯಕೂರ್ಮವರಾಹಾಶ್ಚ ನೃಸಿಂಹವಟುಭಾರ್ಗವಾಃ ।
ರಾಘವಃ ಕೃಷ್ಣಬುದ್ಧೌ ಚ ಕಲ್ಕಿವ್ಯಾಸೈತರೇಯಕಾಃ ।
ದತ್ತೋ ಧನ್ವಂತರಿರ್ಯಜ್ಞಃ ಕಪಿಲೋ ಹಂಸತಾಪಸೌ ।
ಶಂಶುಮಾರೋ ಹಯಾಸ್ಯಶ್ಚ ಹರಿಃ ಕೃಷ್ಣಶ್ಚ ಧರ್ಮಜಃ ।
ನಾರಾಯಣಸ್ತಥೇತ್ಯಾದ್ಯಾಃ ಸಾಕ್ಷಾನ್ನಾರಾಯಣಃ ಸ್ವಯಮ್ ।
ಬ್ರಹ್ಮರುದ್ರೌ ಶೇಷವಿಪೌ ಶಕ್ರಾದ್ಯಾ ನಾರದಸ್ತಥಾ ।
ಸನತ್ಕುಮಾರಃ ಕಾಮಭವೋ ಽಷ್ಟನಿರುದ್ಧೋ ವಿನಾಯಕಃ ।
ಸುದರ್ಶನಾದ್ಯಾಯುಧಾನಿ ಪೃಥ್ವಾದ್ಯಾಶ್ಚಕ್ರವರ್ತಿನಃ ।
ಇತ್ಯಾದ್ಯಾ ವಿಷ್ಣುನಾ ऽ ऽವಿಷ್ಟಾ ಭಿನ್ನಾಃ ಸಂಸಾರಿಣೋ ಹರೇಃ ।
ತೇಷ್ವೇವ ಲಕ್ಷ್ಮಣಾದ್ಯೇಷು ತ್ರಿಷ್ವೇವಂ ಚ ಬಲಾದಿಷು ।
ನರಾರ್ಜುನಾದಿಷು ತಥಾ ಪುನರಾವೇಶ ಉಚ್ಯತೇ ।
ಸ್ವಲ್ಪಸ್ತು ಪುನರಾವೇಶೋ ಧರ್ಮಪುತ್ರಾದಿಷು ಪ್ರಭೋಃ ।
ಏತಜ್ಜಾನಾತಿ ಯಸ್ತಸ್ಮಿನ್ ಪ್ರೀತಿರಭ್ಯಧಿಕಾ ಹರೇಃ ।
ಸಂಕರಜ್ಞಾನಿನಸ್ತತ್ರ ಪಾತಸ್ತಮಸಿ ಚ ಧ್ರುವಮ್' ಇತ್ಯಾದಿ ಮಹಾವಾರಾಹೇ ॥ - ಗೀ.ತಾ.(೨/೨೫)

ಬ್ರಹ್ಮ ವಾಯುಗಳು ಸಮರು

ಬ್ರಹ್ಮಾತ್ಮಕೋ ಯತೋ ವಾಯುಃ ಪದಂ ಬ್ರಾಹ್ಮಮಗಾತ್ ಪುರಾ ।
ವಾಯೋರನ್ಯಸ್ಯ ನ ಬ್ರಾಹ್ಮಂ ಪದಂ ತಸ್ಮಾತ್ ಸ ಏವ ಸಃ ॥ ೩೫ ॥

ಅ: ಆದ್ದರಿಂದ ಬಲಕಾರ್ಯಕ್ಕೆಂದು ಪ್ರವೃತ್ತವಾದ ರಾಮ ಕೃಷ್ಣ ಮೊದಲಾದ ರೂಪಗಳ ಶ್ರೀಹರಿಗೆ ಹನುಮಂತ ಮತ್ತು ಭೀಮಸೇನರು ಅಂತರಂಗವಾಗಿದ್ದು, ಆತನ ಕಾರ್ಯವನ್ನು ಸಾಧಿಸುವ ಪ್ರಧಾನಸೇವಕರಾಗಿರುವರು. ಹಿಂದೆ ವಾಯುದೇವರಾಗಿದ್ದವರೇ ಈ ಕಲ್ಪದಲ್ಲಿ ಚತುರ್ಮುಖಬ್ರಹ್ಮನಾಗಿ ಬ್ರಹ್ಮಪದವಿಯನ್ನು ಹೊಂದಿದವರು. ವಾಯುದೇವರನ್ನು ಹೊರತು ಬೇರೆಯವರಿಗೆ ಚತುರ್ಮುಖಬ್ರಹ್ಮಪದವಿಯು ಲಭಿಸುವುದೇ ಇಲ್ಲ. ಆದ್ದರಿಂದ ವಾಯುದೇವರೇ ಬ್ರಹ್ಮದೇವರಾಗಿರುವರು.

ವಿ: ೧) ಹಿಂದಿನಕಲ್ಪದ ವಾಯುದೇವರೇ ಈಗಿನ ಕಲ್ಪದ ಬ್ರಹ್ಮದೇವರಾದ್ದರಿಂದ ವಾಯುದೇವರಿಗೆ ಹೇಳಿದ ಹಿರಿಮೆ ಎಲ್ಲವೂ ಬ್ರಹ್ಮದೇವರಿಗೂ ಅನ್ವಯಿಸುವುದು ಎಂದು ಭಾವ.

೨) ಇದೇ ರೀತಿ ಜ್ಞಾನಕಾರ್ಯಕ್ಕೆಂದು ಪ್ರವೃತ್ತರಾದ ಶ್ರೀಹರಿಯ ವೇದವ್ಯಾಸರೂಪದ ಅಂತರಂಗಸೇವಕರಾದ ಶ್ರೀಮಧ್ವಾಚಾರ್ಯರು ಶ್ರೀವಾಯುದೇವರ ತೃತೀಯಾವತಾರರು ಎಂಬುದನ್ನು ಗಮನಿಸಬೇಕು (೨/೧೨೪).

ರೂಪವೇ ಸ್ತ್ರೀಯರ ಯೋಗ್ಯತೆಗೆ ಆಧಾರ

ಯತ್ರ ರೂಪಂ ತತ್ರ ಗುಣಾಃ ಭಕ್ತ್ಯಾದ್ಯಾಃ ಸ್ತ್ರೀಷು ನಿತ್ಯಶಃ ।
ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋ ಹಿ ತತ್ ॥ ೩೬ ॥

ಅ: 'ರೂಪವಿರುವವರಲ್ಲೇ ಸದಾ ಭಕ್ತ್ಯಾದಿ ಗುಣಗಳು ಇರುವವು'; ಎಂಬುದು ಸ್ತ್ರೀಯರ ವಿಷಯದಲ್ಲಿನ ನಿಯಮ; ಮಂದದೃಷ್ಟಿಯ ಜನಗಳಿಗೆ ಸ್ತ್ರೀಯರಲ್ಲಿ ಸ್ಫುಟವಾಗಿ ಗೋಚರಿಸುವುದು ರೂಪವೇ ಆಗಿರುವುದರಿಂದ ಅವರ ವಿಷಯದಲ್ಲಿ ಈ ನಿಯಮ.

---

೩೪. ಅತ್ರ ಭೀಮಃ ಪ್ರಸ್ತುತಃ ಪ್ರಾಸಂಗಿಕೋ ಹನುಮಾನಿತಿ ಜ್ಞೇಯಮ್ । –(ವಾ)

೩೫. ಸ ಏವ ಸಃ ವಾಯುರೇವ ಬ್ರಹ್ಮಾ । ಅತಃ ವಾಯುರೂಪ ಹನುಮದ್ಭೀಮಯೋರಾಧಿಕ್ಯೇನೋಪಸಂಹಾರೇ ಬ್ರಹ್ಮಣ ಏವಾಸೌ ಉಪಸಂಹಾರ ಇತಿ ನಾಸಂಗತಿರಿತಿ ಭಾವಃ । –(ವಾ)

ರೂಪದ ಪ್ರಾಧಾನ್ಯಕ್ಕೆ ಕಾರಣ

ಪ್ರಾಯೋ ವೇತ್ತುಂ ನ ಶಕ್ಯಂತೇ ಭಕ್ತ್ಯಾದ್ಯಾಃ ಸ್ತ್ರೀಷು ಯತ್ ತತಃ ।
ಯಾಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ ॥ ೩೭ ॥

ಅ: ಸ್ತ್ರೀಯರಲ್ಲಿನ ಭಕ್ತ್ಯಾದಿಗುಣಗಳನ್ನು ಬೇರೆರೀತಿಯಲ್ಲಿ ಪ್ರಯತ್ನಿಸಿದರೂ ಪ್ರಾಯಃ ತಿಳಿಯಲು ಶಕ್ಯವಾಗುವುದಿಲ್ಲವಾದ್ದರಿಂದ ಯಾರಿಗೆ ರೂಪವಿರುವುದೋ ಅವರಿಗೇ ಭಕ್ತ್ಯಾದಿ ಗುಣಗಳು ಇರುವವು ಎಂಬುದು ನಿರ್ಣಯ.

ವಿ: ೧) ಬಲಾದಿಗಳನ್ನು ಕ್ಷತ್ರಿಯಾದಿ ಪುರುಷರಲ್ಲಿ ತಾರತಮ್ಯಜ್ಞಾಪಕವಾದ ಸಾಧನಗಳು ಎಂದು ಈವರೆಗೂ ನಿರೂಪಿಸಿ, ಈಗ ಸ್ತ್ರೀಯರ ತಾರತಮ್ಯಕ್ಕೆ ಜ್ಞಾಪಕವಾದ ಸಾಧನವೆಂದರೆ ರೂಪವೇ ಎಂಬುದನ್ನು ತಿಳಿಸುತ್ತಿರುವರು.

೨) ಭಕ್ತ್ಯಾದಿ ಗುಣಗಳು ಪುರುಷರಲ್ಲಿಯೂ ಸ್ಥೂಲದೃಷ್ಟಿಗೆ ಅಗೋಚರ; ಆದರೆ ಸ್ತ್ರೀಯರಿಗೆ ಸ್ವಾಧ್ಯಾಯ ಪ್ರವಚನಗಳ ಪ್ರಸಕ್ತಿಯೇ ಇಲ್ಲವಾದ್ದರಿಂದ ಅವರಲ್ಲಿನ ಭಕ್ತ್ಯಾದಿ ಗುಣಗಳನ್ನು ತಿಳಿಯುವುದು ಸ್ಥೂಲದೃಷ್ಟಿಗೆ ಅಸಾಧ್ಯ ಎಂಬ ವಿಶೇಷವನ್ನು ಗಮನಿಸಬೇಕು.

೩) ವನಪರ್ವದಲ್ಲಿ ಧರ್ಮರಾಜನಿಗೆ ಧರ್ಮವನ್ನು ಬೋಧಿಸುವ ಪ್ರಸಂಗದಲ್ಲಿ ದ್ರೌಪದೀದೇವಿಯ ಅಗಾಧಜ್ಞಾನವು ಪ್ರಕಟವಾಗಿದೆ; ಅದರಂತೆ ನರಕಾಸುರನೊಂದಿಗೆ ಯುದ್ಧಮಾಡುವ ಪ್ರಸಂಗದಲ್ಲಿ ಸತ್ಯಭಾಮಾದೇವಿಯ ಅಪಾರಬಲವೂ ಪ್ರಕಟವಾಗಿದೆ; ಆದರೆ ಎಲ್ಲ ಸ್ತ್ರೀಯರಲ್ಲೂ ಇಂತಹ ಪ್ರಸಂಗ ಲಭಿಸಲಾರದು ಎಂಬುದನ್ನು 'ಪ್ರಾಯಃ' ಎಂಬ ಅವ್ಯಯದಿಂದ ಸೂಚಿಸಿರುವರು.

ನೈಸರ್ಗಿಕ ರೂಪವೇ ನಿಜವಾದ ರೂಪ

ತಚ್ಚ ನೈಸರ್ಗಿಕಂ ರೂಪಂ ದ್ವಾತ್ರಿಂಶಲ್ಲಕ್ಷಣೈರ್ಯುತಮ್ ।
ನಾಲಕ್ಷಣಂ ವಪುರ್ಮಾತ್ರಂ ಗುಣಹೇತುಃ ಕಥಂಚನ ॥ ೩೮ ॥

---

೩೭. ಪ್ರಾಯೋ ವೇತ್ತುಂ ನ ಶಕ್ಯಂತೇ । ಸ್ವಾಧ್ಯಾಯಪ್ರವಚನಾದೌ ಅಪ್ರವೃತ್ತತ್ವಾದಿತ್ಯರ್ಥಃ । –(ವಾ)

೩೭. ಯತಃ ಸ್ಥೂಲದೃಷ್ಟೀನಾಂ ಇತಿ ಷಷ್ಠೀ ತೃತೀಯಾರ್ಥೇ । – (ಜ)

ದ್ರೌಪದ್ಯಾಃ ಧರ್ಮಕಥನೇನ ಜ್ಞಾನಸ್ಯ, ಸತ್ಯಭಾಮಾಯಾಶ್ಚ ಯುದ್ಧಕರಣೇನ ಬಲಸ್ಯಾಭಿವ್ಯಕ್ತತ್ವಾತ್। ಪ್ರಾಯಃ ಇತ್ಯುಕ್ತಮ್ ॥ –(ಜ)

೩೮. ಅಲಕ್ಷಣಂ ದ್ವಾತ್ರಿಂಶಲ್ಲಕ್ಷಣರಹಿತಂ ವಪುರ್ಮಾತ್ರಂ ಕಥಂಚನ ಕೇನಾಪಿ ಪ್ರಕಾರೇಣ ಗುಣಜ್ಞಾಪನಸ್ಯ ಹೇತುಃ ಕಾರಣಂ ನ ॥ –(ಜ)

ಅ: ಅಂತಹ ರೂಪವು ಸ್ವಾಭಾವಿಕವೂ ಮೂವತ್ತೆರಡು ಸಲ್ಲಕ್ಷಣಗಳಿಂದ ಕೂಡಿದುದೂ ಆಗಿರಬೇಕು; ಅಂತಹ ಲಕ್ಷಣಗಳಿಲ್ಲದ ಬರೀ ಶರೀರವು ಯಾವರೀತಿಯಲ್ಲೂ ಗುಣಗಳನ್ನು ತಿಳಿಸುವ ಸಾಧನವಾಗಲಾರದು.

ಅಸುರಸ್ತ್ರೀಯರ ರೂಪವು ವರಾದಿಗಳ ಫಲ

ಆಸುರೀಣಾಂ ವರಾದೇಸ್ತು ವಪುರ್ಮಾತ್ರಂ ಭವಿಷ್ಯತಿ ।
ನ ಲಕ್ಷಣಾನ್ಯತಸ್ತಾಸಾಂ ನೈವ ಭಕ್ತಿಃ ಕಥಂಚನ ॥ ೩೯ ॥

ಅ: ಅಸುರಸ್ತ್ರೀಯರಿಗೂ ಸಹ ವರ ಮೊದಲಾದವುಗಳಿಂದಾಗಿ ಶರೀರಕ್ಕೆ ಸೌಂದರ್ಯ ಲಭಿಸುವುದುಂಟು; ಆದರೆ ಸಲ್ಲಕ್ಷಣಗಳು ಮಾತ್ರ ಎಂದೂ ಅಯೋಗ್ಯಸ್ತ್ರೀಯರಿಗೆ ಲಭಿಸವು; ಆದ್ದರಿಂದ ಅಂತಹವರಿಗೆ ಭಕ್ತಿಯು ಯಾವ ರೀತಿಯಲ್ಲೂ ಇರುವುದಿಲ್ಲ.

ವಿ: ೧) ಸ್ತ್ರೀಯರಿಗೆ ರೂಪಾಧಿಕ್ಯವು ಗುಣಾಧಿಕ್ಯಜ್ಞಾಪಕವೆಂಬುದು ನಿಜ; ಆದರೆ ಅಂತಹ ರೂಪವು ಸ್ವಾಭಾವಿಕವೂ, ಸಲ್ಲಕ್ಷಣಭರಿತವೂ ಆದ ನಿರ್ಮಲರೂಪವಾಗಿರಬೇಕೇ ಹೊರತು, ವರ ಆವೇಶ ಮೊದಲಾದವುಗಳಿಂದ ಬಂದ ರೂಪವಾಗಿರಕೂಡದು.

೨) ಅಸುರಸ್ತ್ರೀಯರಿಗೆ ಎಂದೂ ಸುರೂಪ ಇರುವುದೇ ಇಲ್ಲ; ಅವರ ದೇಹಕ್ಕೆ ಒಂದು ವಿಧವಾದ ಸೌಂದರ್ಯ ವರ ಮೊದಲಾದವುಗಳಿಂದ ಲಭಿಸಬಹುದಾದರೂ ಸಲ್ಲಕ್ಷಣಗಳು ಮಾತ್ರ ಲಭಿಸುವುದೇ ಇಲ್ಲ; ಆದ್ದರಿಂದ ದುಷ್ಟಸ್ತ್ರೀಯರುಗಳಲ್ಲಿ ಒಂದು ವೇಳೆ ರೂಪವಿದ್ದರೂ, ಅದು ಅವರ ಉತ್ತಮತ್ವಕ್ಕೆ ಸಾಧಕವಾಗದು ಎಂದು ಭಾವ.

೩) ಇಲ್ಲಿ **'ವರಾದೇಃ'** ಎಂಬಲ್ಲಿ ಆದಿ ಶಬ್ದದಿಂದ ಆವೇಶವನ್ನು ಗ್ರಹಿಸಬೇಕು, ದುರ್ಯೋಧನನ ಪತ್ನಿಯು ಅಲಕ್ಷ್ಮೀ ಎಂಬ ಅಸುರಸ್ತ್ರೀಯಾಗಿದ್ದರೂ ಅವಳು ಉಮಾದೇವಿಯ ಆವೇಶದಿಂದಾಗಿ ರೂಪವತಿ ಆಗಿದ್ದಳೆಂದು ಮುಂದೆ (೧೯/೨೦೧) ಶ್ರೀಮದಾಚಾರ್ಯರೇ ಹೇಳುವುದನ್ನು ಗಮನಿಸಬೇಕು.

---

೩೯. ವರಾವೇಶಾದೇಃ ಸಕಾಶಾತ್ ಲಕ್ಷಣಾನಿ ನ ಭವಂತಿ । – (ಜ)

೩೯. ಉದ್ವಾಹ್ಯ ಕಾಶಿತನಯಾಂ ಗಿರಿಜಾಧಿವಿಷ್ಟಾಂ ಸಾಕ್ಷಾನ್ನರೇಷು ಜನಿತಾಂ ಪ್ರಥಮಾಮಲಕ್ಷ್ಮೀಮ್॥
– (೧೯/೨೦೧)

೩೯. ಪೂರ್ವಂ ಕ್ಷೀರಾಬ್ಧಿಜಾತಾ ಕಥಮಪಿ ತಪಸ್ಯೈವಾಪ್ಸರಸ್ತ್ವಂ ಪ್ರಯಾತಾ । – (೪/೨)

೩೯. ಉಮಾವೇಶಾದ್ರೂಪಗುಣೋಪಪನ್ನಾ ಪದ್ಮೇಕ್ಷಣಾ ಚಂಪಕದಾಮಗೌರೀ ॥ – (೨೦/೩೮)

೪) ವರಬಲದಿಂದ ಅಪ್ಸರೆಯೆನ್ನಿಸಿ ರೂಪವತಿಯಾದವರ ಸಾಲಿನಲ್ಲಿ ಈ ಅಲಕ್ಷ್ಮಿಯು ಇರುವಳು ಎಂಬುದನ್ನು ಶ್ರೀಮದಾಚಾರ್ಯರು ಮುಂದೆ ತಿಳಿಸಿರುವರು. (೫/೨)

೫) ದೇವಸ್ತ್ರೀಯಾಗಿದ್ದರೂ ಉಮಾದೇವಿಯ ಆವೇಶಬಲದಿಂದಾಗಿ ತನ್ನ ಯೋಗ್ಯತೆ–ಗಿಂತಲೂ ಹೆಚ್ಚಿನ ಸುರೂಪವನ್ನು ಸುಭದ್ರೆಯು ಪಡೆದಿದ್ದಳು ಎಂಬ ವಿವರವೂ ನಿರ್ಣಯದಲ್ಲಿ ಬಂದಿದೆ.

ರುಗ್ಮಿಣಿಯು ಸ್ತ್ರೀಯರಲ್ಲಿ ಸರ್ವೋತ್ತಮಳು

ತಸ್ಮಾದ್ ರೂಪಗುಣೋದಾರಾ ಜಾನಕೀ ರುಗ್ಮಿಣೀ ತಥಾ ।
ಸತ್ಯಭಾಮೇತ್ಯಾದಿರೂಪಾ ಶ್ರೀಃ ಸರ್ವಪರಮಾ ಮತಾ ॥ ೪೦ ॥

ಅ: ಆದ್ದರಿಂದ ರೂಪಾದಿಗುಣಗಳಿಂದ ಉತ್ಕೃಷ್ಟಳಾದ ಸೀತಾ, ರುಗ್ಮಿಣೀ ಮತ್ತು ಸತ್ಯಭಾಮಾ ಮೊದಲಾದ ರೂಪಗಳನ್ನು ಹೊಂದಿರುವ ಮಹಾಲಕ್ಷ್ಮಿ ಇತರ ಸಕಲ ಸ್ತ್ರೀಯರಿಗಿಂತಲೂ ಅತ್ಯುತ್ತಮರು ಎಂಬುದು ಶಾಸ್ತ್ರಗಳ ಅಭಿಮತ.

ವಿ: ೧) **'ಸತ್ಯಭಾಮೇತ್ಯಾದಿರೂಪಾ'** ಎಂಬಲ್ಲಿನ ಆದಿ ಶಬ್ದದಿಂದ ಶ್ರೀ ಭೂ ದುರ್ಗಾ ಅಂಭೃಣೀ ಮೊದಲಾದ ಅವರ ಇತರ ಸಕಲರೂಪಗಳನ್ನು ಗ್ರಹಿಸಬೇಕು.

೨) ಮಹಾಲಕ್ಷ್ಮಿಯು ಬ್ರಹ್ಮಾದಿ ಇತರ ಸಕಲರಿಗಿಂತಲೂ ಉತ್ತಮರು; ಕೇವಲ ಸ್ತ್ರೀಯರಲ್ಲಂತೂ ಅವರೇ ಸರ್ವೋತ್ತಮರು ಎಂದು ಭಾವ.

ದ್ರೌಪದಿ ಲಕ್ಷ್ಮಿಯ ಅನಂತರದ ಹಿರಿಯಳು

ತತಃ ಪಶ್ಚಾತ್ ದ್ರೌಪದೀ ಚ ಸರ್ವಾಭ್ಯೋ ರೂಪತೋ ವರಾ ।
ಭೂಭಾರಕ್ಷಪಣೇ ಸಾಕ್ಷಾದಂಗಂ ಭೀಮವದೀಶಿತುಃ ॥ ೪೧ ॥

ಅ: ಮಹಾಲಕ್ಷ್ಮಿಯ ಅನಂತರ ದ್ರೌಪದಿಯೇ ಇತರ ಸಕಲಸ್ತ್ರೀಯರಲ್ಲೂ ರೂಪದಲ್ಲಿ ಮಿಗಿಲಾದವರು; ಆದ್ದರಿಂದ ಅವರು ಶ್ರೀಹರಿಯ ಭೂಭಾರಹರಣಕಾರ್ಯದಲ್ಲಿ ಭೀಮಸೇನನಂತೆ ಸಾಕ್ಷಾತ್ ಅಂಗವಾಗಿರುವರು.

---

೪೦. ಸರ್ವಪರಮಾ – ಸರ್ವಾಭ್ಯಃ ಶ್ರೇಷ್ಠೋತ್ತಮಾ ಮತಾ – (ಜ.)

೪೦. ಶ್ರೀರ್ಭೂರ್ದುರ್ಗಾಂಭೃಣೀ ಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ ।
ಸೀತಾ ಜಯಂತೀ ಸತ್ಯಾ ಚ ರುಗ್ಮಿಣೀತ್ಯಾದಿ ಭೇದಿತಾ ॥ – ಪೈಂಗಿಶ್ರುತಿ (ಬೃಹದಾರಣ್ಯಕೋಪನಿಷದ್ಭಾಷ್ಯ)

ದ್ರೌಪದಿಯ ಭಗವತ್ಕಾರ್ಯದ ರೀತಿ

ಹಂತಾ ಚ ವೈರಹೇತುಶ್ಚ ಭೀಮಃ ಪಾಪಜನಸ್ಯ ತು ।
ದ್ರೌಪದೀ ವೈರಹೇತುಃ ಸಾ ತಸ್ಮಾದ್ಭೀಮಾದನಂತರಾ ॥ ೪೨ ॥

ಅ: ಭೀಮಸೇನನು ಪಾಪಜನರಿಗೆ ವೈರಹೇತು ಹಾಗೂ ಸಂಹಾರಕ; ದ್ರೌಪದಿಯು ವೈರಹೇತುಮಾತ್ರ; ಆದ್ದರಿಂದ ಅವರು ಭಗವತ್ಕಾರ್ಯಸಾಧಕರಲ್ಲಿ ಭೀಮಸೇನನ ಅನಂತರದವರು.

ವಿ: ೧) ಭೀಮಸೇನನು ಯೋಗ್ಯರಿಗೆ ಹರಿಭಕ್ತಿಗೆ ಕಾರಣವಾಗಿರುವಂತೆ, ಅಯೋಗ್ಯರಿಗೆ ಹರಿವೈರಕ್ಕೆ ಕಾರಣವಾಗಿರುವನು; ಇಂತಹ ವೈರಭಾವವೇ ದುರ್ಯೋಧನಾದಿಗಳ ವಧ್ಯತ್ವಕ್ಕೆ ಕಾರಣವಾಗುತ್ತದೆ.

೨) ವೈರಹೇತುವಾಗಿರುವುದರೊಂದಿಗೆ ಅವರನ್ನು ಸ್ವತಃ ಸಂಹರಿಸಿ ಶ್ರೀಹರಿಯನ್ನು ಸಂತೋಷಪಡಿಸಿದ್ದು ಭೀಮಸೇನನ ಹಿರಿಮೆ. ಆದರೆ ದ್ರೌಪದಿಯು ದುರ್ಯೋಧನಾದಿ ದುಷ್ಟರನ್ನು ಸಂಹರಿಸಿದವರಲ್ಲವಾದರೂ ಅವರು ವಧ್ಯರಾಗಲು ಭೀಮಸೇನನಂತೆ ಯಥೋಚಿತವಾಗಿ ವೈರಹೇತುವಾಗಿರುವರು ಎಂಬುದು ವಿಶೇಷ.

---

೪೧. ಯಾ ಬಿಭರ್ತಿ ಪರಂ ರೂಪಂ ಯಸ್ಯಾ ನಾಸ್ತ್ಯುಪಮಾ ಭುವಿ ।
ಸರ್ವಯೋಷಿದ್ವರಾ ಕೃಷ್ಣಾನಿನೀಷುಃ ಕ್ಷತ್ರಿಯಾನ್ ಕ್ಷಯಮ್ ॥
ಸುರಕಾರ್ಯಮಿಯಂ ಕಾಲೇ ಕರಿಷ್ಯತಿ ಸುಮಧ್ಯಮಾ ॥ – ಭಾರತ (೧/೧೬೬/೪೭,೪೮)

ಕಾಮ್ಯಂ ಹಿ ರೂಪಂ ಪಾಂಚಾಲ್ಯಾ ವಿಧಾತ್ರಾ ವಿಹಿತಂ ಸ್ವಯಮ್ ।
ಬಭೂವಾಧಿಕಮನ್ಯಾಭ್ಯಃ ಸರ್ವಭೂತಮನೋಹರಮ್ ॥ – ಭಾರತ (ಆದಿ.೧೯೦/೧೪)

೪೨. ಬಾಲ್ಯೇ ಲೀಲಯಾ ಧೃತರಾಷ್ಟ್ರಪುತ್ರಾಣಾಂ ವೃಕ್ಷಾಗ್ರಪಾತನತಾಡನಾದಿನಾ ವೈರಹೇತುರಿತಿ ಭಾವೇನೋಕ್ತಮ್। ವೈರಹೇತುರಿತಿ। –(ವಾ)

೪೨. ದ್ರೌಪದೀ ವೈರಹೇತುರಿತ್ಯತ್ರ ದುರ್ಯೋಧನಾದೀನುಪೇಕ್ಷ್ಯ ಪಾಂಡವಪರಿಗ್ರಹೇಣ ದುರ್ಯೋಧನಾದೀನಾಂ ಪತ್ನೀಭ್ಯೋಽಪಿ ಕೋಟಿಗುಣಾಧಿಕಲಾವಣ್ಯವತ್ತ್ವೇನ ಹಂತವ್ಯದುರ್ಯೋಧನಾದೀನಾಂ ಮನಸಿ ವೈರಹೇತುಃ। ಸಭಾಯಾಂ ಭೀಮಸ್ಯ ಪುರತಃ ತತ್ಕೃತಕೇಶಗ್ರಹಣಾದಿನಾ ಹಂತುರ್ಭೀಮಸ್ಯ ಮನಸಿ ವೈರಹೇತುಶ್ಚೇತ್ಯರ್ಥಃ। ಅತೋ ಭೂಭಾರದುರ್ಯೋಧನಸಂಹಾರೇ ದ್ರೌಪದ್ಯೇವ ಪ್ರಧಾನಾಂಗಂ ಇತಿ ಭಾವಃ। –(ವಾ)

೪೨. ಭೀಮಸ್ಯ ವೈರಹನನಯೋಃ ಕಾರಣತ್ವಾತ್ ಶ್ಲೈಷ್ಯಮ್ । ದ್ರೌಪದ್ಯಾ ತು ವೈರಮಾತ್ರಹೇತುತ್ವಾತ್ ತದಾನಂತರ್ಯಮಿತಿ ಭಾವಃ। –(ಜ)

೩) ಆದ್ದರಿಂದ ಅವರು ಭೀಮಸೇನನಂತೆ ಭಗವತ್ಕಾರ್ಯಸಾಧಕರಾಗಿದ್ದು, ಭೀಮಸೇನನ ಅನಂತರದ ಸ್ಥಾನದಲ್ಲಿದ್ದು ರುದ್ರಾದಿ ಇತರ ಸಕಲರಿಗಿಂತಲೂ ಮಿಗಿಲಾಗಿರುವರು ಎಂದು ಭಾವ.

೪) ಯೋಗ್ಯರಿಗೆ ಭಕ್ತಿಹೇತುವಾಗುವುದು ಹೇಗೋ ಹಾಗೆ ಅಯೋಗ್ಯರಿಗೆ ವೈರಹೇತು-ವಾಗುವುದೂ ಭಗವಂತನ ಸೇವೆ ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

ಬಲರಾಮ, ಅರ್ಜುನಾದಿಗಳು ಅನಂತರದವರು

ಬಲದೇವಸ್ತತಃ ಪಶ್ಚಾತ್ ತತಃ ಪಶ್ಚಾಚ್ಚ ಫಲ್ಗುನಃ ।
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ ತತೋಽಪರೇ ।
ರಾಮವಜ್ಜಾಂಬವತ್ಯಾದ್ಯಾಃ ಷಟ್ ತತೋ ರೇವತೀ ತಥಾ ॥ ೪೩ ॥

ಅ: ದ್ರೌಪದಿಯ ಅನಂತರದ ಭಗವತ್ಕಾರ್ಯಸಾಧಕರು ಬಲರಾಮ; ಅವರ ಅನಂತರ ನರಾವೇಶದ ಕಾರಣದಿಂದಾಗಿ ಅರ್ಜುನ; ಇಲ್ಲವಾದಲ್ಲಿ ಬಲರಾಮನ ಅನಂತರ ಅಶ್ವತ್ಥಾಮರೇ ಹರಿಕಾರ್ಯಸಾಧಕರು; ಜಾಂಬವತೀ ಮೊದಲಾದ ಷಣ್ಮಹಿಷಿಯರು ಬಲರಾಮನಂತೆ ಸಾಧಕರು; ಅನಂತರ ರೇವತಿ.

ವಿ: ೧) ಬಲರಾಮನ ಅನಂತರ ಪ್ರಧಾನ ಹರಿಸೇವೆ ಮಾಡಿದ್ದು ಅರ್ಜುನನೇ ಆದರೂ ಅದಕ್ಕೆ ಕಾರಣ ಅವನ ಸಹಜಯೋಗ್ಯತೆಯಾಗಿರದೆ, ಅವನಲ್ಲಿನ ನರಾವೇಶವೇ ಆಗಿದೆ; ಅದಿಲ್ಲದೆ ಆತನ ಸಾಧನೆ ಅಶ್ವತ್ಥಾಮರ ಅನಂತರದ್ದೇ ಹೊರತು ಹೆಚ್ಚಿನದಲ್ಲ ಎಂದು ಭಾವ. ಇತರರ ಆವೇಶದಿಂದಾಗಿ ಬರುವ ಬಲವು ಆವೇಶ ಮಾಡಿದವರದ್ದೇ ಹೊರತು ಇವರದ್ದಲ್ಲ ಎಂದು ಈಗಾಗಲೇ ತಿಳಿಸಿರುವುದನ್ನು ಗಮನಿಸಬೇಕು (೨/೧೮).

---

೪೩. ಅನ್ಯಾವೇಶನಿಮಿತ್ತಂ ಚೇತ್ ಬಲಮನ್ಯತ್ಕಂ ಹಿ ತತ್ । (೨/೧೮) ಎಂದು ಹಿಂದೆಯೇ ಹೇಳಿರುವರು.

೪೩. ದ್ರೌಣಿಬಲದೇವಯೋಃ ಶೇಷರುದ್ರತ್ವೇನ ಸಾಮ್ಯೇಽಪಿ ಬಲದೇವೇ ಹರೇಃ ಶುಕ್ಲಕೇಶಸನ್ನಿಧಾನಾದಾ-ಧಿಕ್ಯಮ್ । –(ವಾ)

೪೩. ಅಪರೇ ಫಲ್ಗುನಾದ್ಯಾಃ ಹರಿಕಾರ್ಯಾಂಗಮಿತಿ ಯೋಜನಾ । –(ವಾ)

೪೩. ಶೇಷಸ್ಯ ವಾಯೋರನಂತರಂ ಹರಿಕಾರ್ಯಾಂಗತ್ವಮ್ । ತದನಂತರಮಿಂದ್ರಸ್ಯ ತತಃ ಪಶ್ಚಾದನ್ಯೇಷಾಮಿತಿ ಯಚ್ಛಾಸ್ತ್ರರಹಸ್ಯಂ ತದ್ಭಾರತೇ ಬಲರಾಮಾದಿನಿದರ್ಶನೇನ ದರ್ಶಿತಮಿತ್ಯಾಹ । –(ವಾ)

೪೩. 'ನರೇ ವಿಷ್ಣುಃ ಸಮಾವಿಷ್ಟಃ ಸ್ವಯಂ ನಾರಾಯಣೋ ಹರಿಃ ।
ಅರ್ಜುನೇ ಚ ನರಾವೇಶಃ ಕೃಷ್ಣೋ ನಾರಾಯಣಃ ಸ್ವಯಮ್' ಇತಿ ತತ್ತ್ವವಿವೇಕೇ । - ಭಾ.ತಾ.(೪/೧/೫೯)

೨) ಬಲರಾಮ ಶೇಷ; ಅಶ್ವತ್ಥಾಮ ಶಿವ; ಆದ್ದರಿಂದ ಅವರಿಬ್ಬರೂ ಸಮರೇ ಆದರೂ ಬಲರಾಮನಲ್ಲಿ ಶ್ರೀಹರಿಯ ಶುಕ್ಲಕೇಶರೂಪದ ಆವೇಶದಿಂದಾಗಿ ಹೆಚ್ಚು ಸಾಧನೆಯಾಗಿದೆ ಎಂಬುದನ್ನು ತಿಳಿಸಲು ಬಲರಾಮನ ಅನಂತರ ಅಶ್ವತ್ಥಾಮರು ಎಂದು ಹೇಳಿರುವರು.

೩) ಶ್ರೀಹರಿಸರ್ವೋತ್ತಮತ್ವ ಮತ್ತು ವಾಯುಜೀವೋತ್ತಮತ್ವಗಳು ಮಾತ್ರವಲ್ಲದೆ ಇತರ ದೇವತೆಗಳ ತಾರತಮ್ಯವು ಸಹ ಮಹಾಭಾರತದಲ್ಲಿ ಬಲರಾಮಾದಿಗಳ ನಿದರ್ಶನದಿಂದ ಬಂದಿದೆ ಎಂದು ತಿಳಿಸುತ್ತಿರುವರು.

ಹನುಮಂತನ ಅನಂತರ ಲಕ್ಷ್ಮಣಾದಿಗಳು

ಲಕ್ಷ್ಮಣೋ ಹನುಮತ್ಪಶ್ಚಾತ್ ತತೋ ಭರತವಾಲಿನೌ ।
ಶತ್ರುಘ್ನಸ್ತು ತತಃ ಪಶ್ಚಾತ್ ಸುಗ್ರೀವಾದ್ಯಾಸ್ತತೋऽವರಾಃ ॥ ೪೪ ॥

ಅ: ಹನುಮಂತನ ಅನಂತರ ಲಕ್ಷ್ಮಣ; ಲಕ್ಷ್ಮಣನ ಅನಂತರ ಭರತ ಮತ್ತು ವಾಲಿ; ಅವರ ಅನಂತರ ಶತ್ರುಘ್ನ; ಅವನಿಗಿಂತಲೂ ಸುಗ್ರೀವ ಮೊದಲಾದವರು ಕಡಿಮೆಯಾದವರು.

ವಿ: ೧) ಮಹಾಭಾರತ ಕಥೆಯಂತೆ ರಾಮಾಯಣ ಕಥೆಯೂ ದೇವತಾತಾರತಮ್ಯಾದಿಗಳಿಗೆ ನಿದರ್ಶನವಾಗಿದೆ ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಿರುವರು.

೨) ಹನುಮಂತನ ಅನಂತರ ಲಕ್ಷ್ಮಣ ಎಂದು ಹೇಳಿದ್ದರಿಂದ ಹನುಮಂತನೇ ಶ್ರೀರಾಮ–ಸೇವೆಯಲ್ಲಿ ಪ್ರಧಾನಾಂಗ ಎಂಬುದು ಸೂಚಿತವಾಯಿತು. ಹನುಮಂತನ ಪ್ರಧಾನಾಂಗತ್ವವು ಸಂಜೀವನಾನಯನ ಸಮುದ್ರತರಣ ಮೊದಲಾದ ಕಾರ್ಯಗಳಿಂದ ಸುಪ್ರಸಿದ್ಧವಾಗಿದೆ ಎಂದು ತಿಳಿಸಲು ಅದನ್ನು ಪ್ರತ್ಯೇಕವಾಗಿ ಉಲ್ಲೇಖಿಸಿಲ್ಲ.

---

೪೪. ರಾಮಾಯಣಕಥಾತಾತ್ಪರ್ಯಶೋಧನೇऽಪಿ ವಾಯುಶೇಷಾದೀನಾಂ ಅನೇನೈವ ಪ್ರಕಾರೇಣ ಹರಿಸೇವಾಂಗತ್ವೇ ತಾರತಮ್ಯಂ ಹನುಮದಾದಿರೂಪೇಷು ನಿದರ್ಶಿತಮಿತ್ಯಾಹ । –(ವಾ)

೪೪. ಹನುಮತಃ ಪಶ್ಚಾತ್ – ಹನುಮತ್ಪಶ್ಚಾತ್ । ಹನುಮತ್ಪಶ್ಚಾದಿತಿ ವದನ್ ಹನುಮತೋ ಮುಖ್ಯತೋ ಹರಿಕಾರ್ಯಾಂಗತ್ವಮಿತಿ ಸುಪ್ರಸಿದ್ಧಮಿತಿ ಸೂಚನಾಯ ನ ಪೃಥಗುಕ್ತಮ್ । –(.....)

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಮ್ ।
ರಾಮಾಯಣಮಹಾಮಾಲಾರತ್ನಂ ವಂದೇऽನಿಲಾತ್ಮಜಮ್ ।
–ಇತಿ ಕಥಾಸಂಗ್ರಾಹಕಸರ್ಗೇऽಪಿ ವಾಲ್ಮೀಕೇರ್ವಚನಮ್ । –(ವಾ)

೪೪. ವಾಲಿನಃ ಶೀಘ್ರಂ ಮೃತತ್ವೇನ ಹರಿಸೇವಾವಿಚ್ಛೇದಾತ್ ಭರತಸ್ಯ ಸ್ವರ್ಗಾರೋಹಣಪರ್ಯಂತಂ ಅವಿಚ್ಛೇದೇನ ಸೇವಕತ್ವಾದಾದೌ ಗ್ರಹಣಮ್ ॥ –(ವಾ)

೪೪. ಸಮತ್ವಾತ್ ದ್ವಿವಚನನಿರ್ದೇಶಃ ಕೃತಃ । –(ಜ)

೩) ಭರತನು ಕಾಮಾವತಾರ; ವಾಲಿಯು ಇಂದ್ರಾವತಾರ; ಆದ್ದರಿಂದ ಅವರಿಬ್ಬರು ಸಮರು; ಭರತನು ಪ್ರದ್ಯುಮ್ನನೆಂಬ ಭಗವದ್ರೂಪದಿಂದ ಆವಿಷ್ಟನು ಮತ್ತು ಶ್ರೀರಾಮನ ತಮ್ಮನಾಗಿ ಕೊನೆಯವರೆಗೂ ವಿಶೇಷಸೇವೆ ಸಲ್ಲಿಸಿದವನು ಎಂಬುದನ್ನು ಸೂಚಿಸಲು 'ಭರತವಾಲಿನೌ' ಎಂದು ಅವನ ಹೆಸರನ್ನು ಮೊದಲು ಉಲ್ಲೇಖಿಸಿರುವರು. ಭರತನಲ್ಲಿ ಶ್ರೀಹರಿಯ ವಿಶೇಷಾವೇಶ, ವಾಲಿಯಲ್ಲಿ ಕಿಂಚಿದಾವೇಶ ಎಂದು ಈ ಮೊದಲು (೨/೩೩) ಹೇಳಿರುವುದನ್ನು ಗಮನಿಸಬೇಕು. ದ್ವಿವಚನ ಪ್ರಯೋಗದಿಂದ ಅವರು ಸ್ವರೂಪತಃ ಸಮರು ಎಂಬುದೂ ಸೂಚಿತ.

ರಾಮರೂಪ, ಕೃಷ್ಣರೂಪಗಳ ವಿಶೇಷ ಹಿರಿಮೆ

ರಾಮಕಾರ್ಯಂ ತು ಯೈಃ ಸಮ್ಯಕ್ ಸ್ವಯೋಗ್ಯಂ ನ ಕೃತಂ ಪುರಾ ।
ತೈಃ ಪೂರಿತಂ ತತ್ ಕೃಷ್ಣಾಯ ಬೀಭತ್ಸ್ವಾದ್ಯೈಃ ಸಮಂತತಃ ॥ ೪೫ ॥

ಅ: ತಮಗೆ ಯೋಗ್ಯವಾದ ರೀತಿಯಲ್ಲಿ ಶ್ರೀರಾಮಕಾರ್ಯವನ್ನು ಹಿಂದೆ ಮಾಡದ ವಾಲಿ ಮೊದಲಾದವರು ಅದನ್ನು ಶ್ರೀಕೃಷ್ಣನಿಗೆ ವಿಶೇಷವಾಗಿ ಮಾಡಿ ಪೂರೈಸಿದರು.

ವಿ: ೧) ರಾಮಾಯಣಕಾಲದಲ್ಲಿ ಶ್ರೀಹರಿಸೇವೆಗೆಂದು ಅವತರಿಸಿದ ಕೆಲವು ದೇವತೆಗಳು ತಾವು ಸಲ್ಲಿಸಬೇಕಾದ ಸೇವೆಯನ್ನು ಕೆಲವು ಕಾರಣಗಳಿಂದ ಸಲ್ಲಿಸದೇ ಹೋದರು; ಆದರೆ ಅವರು ಅನಂತರ ಮಹಾಭಾರತಕಾಲದಲ್ಲಿನ ತಮ್ಮ ಅವತಾರದಲ್ಲಿ ಶ್ರೀಕೃಷ್ಣನನ್ನು ಯೋಗ್ಯರೀತಿಯಲ್ಲಿ ಸೇವಿಸುವ ಮೂಲಕ ಆ ನ್ಯೂನತೆಯನ್ನು ಸರಿಪಡಿಸಿಕೊಂಡರು ಎಂದರ್ಥ.

೨) ಇಂದ್ರನು ವಾಲಿಯಾಗಿದ್ದಾಗ ಮಾಡದ ವಿಶೇಷಸೇವೆಯನ್ನು ಅರ್ಜುನನಾಗಿದ್ದಾಗ ಶ್ರೀಕೃಷ್ಣನಿಗೆ ಸಲ್ಲಿಸಿದ್ದು ಇಂತಹ ಒಂದು ನಿದರ್ಶನ, ಬೃಹಸ್ಪತ್ಯಾಚಾರ್ಯರು ತಾರನಾಮಕ ಕಪಿಯಾಗಿದ್ದಾಗ ಸಲ್ಲಿಸದ ವಿಶೇಷಸೇವೆಯನ್ನು ದ್ರೋಣ(ಮತ್ತು ಉದ್ಧವ)ರಾಗಿ ಸಲ್ಲಿಸಿದ್ದು ಇಂತಹ ಮತ್ತೊಂದು ನಿದರ್ಶನ.

---

೪೫. ನನು ಅವತಾರೇಷು ಹರೇಃ ದುಷ್ಟವಧಾದಿನಾऽಂಗತ್ವೇ ವಾಲ್ಯಾದೀನಾಂ ರಾಮಾವತಾರೇ ಸೇವಾಕರಣಾತ್ ಅನುತ್ತಮತ್ವಂ ಸುಗ್ರೀವಾದೇಃ ಸೇವಾಧಿಕ್ಯೇನ ಆಧಿಕ್ಯಂ ತಥಾ ಕರ್ಣಾದೀನಾಮಧಮತ್ವಂ ವಿವಿದಾದೀನಾಂ ಉತ್ತಮತ್ವಂ ಸ್ಯಾತ್ । ತಥಾ ಚ ನ ಸ್ವರೂಪನಿರ್ಣಯಃ ಸ್ಯಾದಿತ್ಯತ ಆಹ । ರಾಮಕಾರ್ಯಮಿತಿ । –(ಜ)

೪೫. ಆದ್ಯಪದೇನ ದ್ರೋಣಾದಯೋಃ ಗೃಹ್ಯಂತೇ । ತಾರಾರೂಪೇಣ ವಾಲಿರೂಪೇಣ ಚ ರಾಮಾಯಣೇ ಸ್ವಯೋಗ್ಯಸೇವಾಯಾ ಅಕರಣಾತ್ ಅರ್ಜುನರೂಪೇಣ ದ್ರೋಣರೂಪೇಣ ಚ ಮಹತೀ ಸೇವಾ ಕೃತೇತಿ ಭಾವಃ । –(ವಾ)

೪೫. ಸಮಂತತಃ = ಸರ್ವಾತ್ಮನಾ । –(ಜ)

ಪ್ರಾದುರ್ಭಾವದ್ವಯದಲ್ಲಿ ಸಾಧನನಿರ್ಣಯ

ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ ತತ್ ।
ಕರ್ಣಾದ್ಯೈರಧಿಕಂ ಯೈಸ್ತು ಪ್ರಾದುರ್ಭಾವದ್ವಯೇ ಕೃತಮ್ ॥ ೪೬ ॥

ವಿವಿದಾದ್ಯೈರ್ಹಿ ತೈಃ ಪಶ್ಚಾದ್ವಿಪ್ರತೀಪಂ ಕೃತಂ ಹರೇಃ ।
ಪ್ರಾದುರ್ಭಾವದ್ವಯೇ ಹ್ಯಸ್ಮಿನ್ ಸರ್ವೇಷಾಂ ನಿರ್ಣಯಃ ಕೃತಃ ॥ ೪೭ ॥

ಅ: ರಾಮಾವತಾರಕಾಲದಲ್ಲಿ ತಮ್ಮ ಯೋಗ್ಯತೆಗೆ ಮೀರಿ ಶ್ರೀಹರಿಸೇವೆಯನ್ನು ಮಾಡಿದವರು ಕೃಷ್ಣಾವತಾರದಲ್ಲಿ ಕಡಿಮೆ ಸೇವೆಯನ್ನು ಮಾಡಿದರು; ಕರ್ಣ ವಿವಿದ ಮೊದಲಾದವರು ಎರಡೂ ಪ್ರಾದುರ್ಭಾವಗಳಲ್ಲೂ ತಮ್ಮ ಯೋಗ್ಯತೆಗೆ ಮೀರಿದ ಸೇವೆಯನ್ನೇ ಮಾಡಿದರು; ಆದರೆ ಅವರು ಆ ಹೆಚ್ಚಿನ ಸೇವೆಯನ್ನು ಅದೇ ಪ್ರಾದುರ್ಭಾವಗಳಲ್ಲಿ ಅನಂತರ ಶ್ರೀಹರಿಗೆ ವಿರೋಧ ಮಾಡುವುದರ ಮೂಲಕ ಕಳೆದುಕೊಂಡರು. ಅಂತೂ ಎಲ್ಲರ ಸಾಧನದ ನಿರ್ಣಯ ಈ ಎರಡು ಪ್ರಾದುರ್ಭಾವಗಳಲ್ಲೇ ಆಗಿದೆ.

---

೪೬. ಯೈಃ = ಲಕ್ಷ್ಮಣಾಂಗದಾದಿಭಃ । ಅತ್ರ ಊನಮ್ । ಬಲರಾಮಾದಿರೂಪೇಣ ಅಭಮನ್ಯುರೂಪೇಣ ಚ ಊನಂ ಕೃತಮ್ । ಅಗ್ರಜತ್ವೇನ ಕೃಷ್ಣಪಾದಾಭವಂದನಾದೇರಕರಣಾತ್ ಬಲರಾಮೇಣ ಊನಂ ಕೃತಮ್ । ಶೀಘ್ರಮರಣೇನ ಅಭಮನ್ಯುನಾ ಊನಂ ಕೃತಮ್ । –(ವಾ)

೪೬. ಕರ್ಣಾದ್ಯೈರಿತ್ಯತ್ರ । ಆದ್ಯಪದೇನ ನಕುಲಸಹದೇವಯೋರ್ಗ್ರಹಣಮ್ । ರಾಮಾಯಣೇ ಸುಗ್ರೀವ-ರೂಪೇಣ ಭಾರತೇ ಕರ್ಣೇನ ವಿದ್ಯಾಭ್ಯಾಸದಶಾಯಾಂ ಪರಶುರಾಮಸೇವಾಕರಣೇನ ಭೂಭಾರಹರಣಾಂಗತ್ವಾಚ್ಚ ಉಭಯತ್ರಾಪ್ಯಧಿಕಸೇವಾ ಕೃತಾ । ಅಶ್ವಿಭ್ಯಾಂ ರಾಮಾಯಣೇ ಮೈಂದವಿವಿದರೂಪೇಣ ಭಾರತೇ ನಕುಲಸಹದೇವ-ರೂಪೇಣ ಚಾಧಿಕಾ ಸೇವಾ ಕೃತಾ । –(ವಾ)

೪೭. ವಿವಿದಾದ್ಯೈರಿತ್ಯತ್ರ ಆದ್ಯಪದೇನ ಕರ್ಣಾದಯೋ ಗೃಹ್ಯಂತೇ । ವಿವಿದೇನ ನರಕಾಸುರಸಹಾಯೇ ಸ್ಥಿತ್ವಾ ಸ್ಥೂಲಾಂಜಲಿನಾ ಲವಣಾಂಬು ಕ್ಷಿಪ್ತ್ವಾ ಕೃಷ್ಣಗ್ರಾಮಾಃ ನಾಶಿತಾಃ ಕರ್ಣೇನ ಚ ದುರ್ಯೋಧನಪಕ್ಷಪಾತಾತ್ ಕೃಷ್ಣವಚನೋಲ್ಲಂಘನದ್ರೌಪದ್ಯಧಿಕ್ಷೇಪಪಾಂಡವದ್ವೇಷಾದಿ ದೋಷಾಃ ಕೃತಾಃ । ತೇನೋಭಾಭ್ಯಾಮಧಿಕಸ್ಯ ನಾಶಃ ಕೃತ ಇತಿ ಭಾವಃ । 'ಏಧಮಾನದ್ವಿಟ್' ಇತಿ ಶ್ರುತೇಃ । –(ವಾ)

೪೭. ಭಗವದವತಾರೇಷು ರಾಮಕೃಷ್ಣಾವತಾರಾವೇವ ಭೂಭಾರಹರಣವ್ಯಾಜೇನ ಹರಿಸರ್ವೋತ್ತಮತ್ವ ದೇವತಾ-ತಾರತಮ್ಯಾದಿಸಕಲಶಾಸ್ತ್ರಾರ್ಥನಿರ್ಣಯಾಯ ಪ್ರವೃತ್ತೌ । ತತ್ರಾಪಿ ರಾಮಾವತಾರಾನಂತರಂ ಕೃಷ್ಣಾವತಾರಸ್ಯ ಕೃತತ್ವಾತ್ ವಚೋಽಪಿ ಬಾಹುಲ್ಯೇನಾಯಂ ಸಕಲಶಾಸ್ತ್ರಾರ್ಥನಿರ್ಣಯಾಯ ಪ್ರವೃತ್ತಃ । –(ವಾ)

೪೭. ಅಸ್ಮಿನ್ ರಾಮಕೃಷ್ಣಾಖ್ಯೇ ಸರ್ವೇಷಾಂ ಬ್ರಹ್ಮಾದೀನಾಂ ನಿರ್ಣಯಃ ಉತ್ತಮತ್ವನೀಚತ್ವನಿರ್ಣಯಃ ಕೃತಃ । –(ಜ)

೪೭. ಏಧಮಾನದ್ವಿಡಿತ್ಯೇವ ಹರೇರ್ನಾಮ ಹಿ ವೈದಿಕಮ್ ॥– –(ಅ. ೧. ಶ್ಲೋ. ೧೦೮)

ಎ: ೧) ರಾಮಾವತಾರದಲ್ಲಿ ಕಡಿಮೆ ಸೇವೆ ಮಾಡಿದವರು ಕೃಷ್ಣಾವತಾರದಲ್ಲಿ ಹೆಚ್ಚು ಸೇವೆ ಮಾಡಿ ತಮ್ಮ ಸಾಧನೆಯನ್ನು ಪೂರ್ಣಮಾಡಿಕೊಂಡಂತೆ, ರಾಮಾವತಾರದಲ್ಲಿ ತಮ್ಮ ಯೋಗ್ಯತೆಗೆ ಮೀರಿ ಶ್ರೀಹರಿಯನ್ನು ಸೇವಿಸಿದವರು, ಕೃಷ್ಣಾವತಾರದಲ್ಲಿ ಕಡಿಮೆ ಸೇವೆ ಮಾಡಿ ತಮ್ಮ ಸಾಧನೆಯನ್ನು ಸರಿಪಡಿಸಿಕೊಂಡರು ಎಂದು ಭಾವ.

೨) ಲಕ್ಷ್ಮಣ ಮತ್ತು ಅಂಗದ ವಿಶೇಷವಾಗಿ ಶ್ರೀರಾಮಾವತಾರದಲ್ಲಿ ಸೇವೆ ಸಲ್ಲಿಸಿದ್ದರು. ಆದರೆ ಅಣ್ಣನಾಗಿ ಹುಟ್ಟುವ ಮೂಲಕ ವಿಶೇಷ ಪಾದಾಭಿವಂದನಾದಿ ರೂಪಸೇವೆಯನ್ನು ಬಲರಾಮನು ಕಳೆದುಕೊಂಡರೆ ಚಿಕ್ಕವಯಸ್ಸಿನಲ್ಲೇ ವ್ಯತನಾಗುವ ಮೂಲಕ ಹೆಚ್ಚಿನ ಸೇವೆಯ ಅವಕಾಶವನ್ನು ಅಭಿಮನ್ಯು ಕಳೆದುಕೊಂಡನು.

೩) ಸೂರ್ಯ ಮತ್ತು ಅಶ್ವಿನೀದೇವತೆಗಳು ಎರಡು ಅವತಾರಗಳಲ್ಲೂ ವಿಶೇಷ ಸೇವೆಯನ್ನು ಮಾಡಿದರು; ಸುಗ್ರೀವನಾಗಿ ಶ್ರೀರಾಮಸೇವೆಯನ್ನು, ಕರ್ಣನಾಗಿ ಪರಶುರಾಮ–ಸೇವೆಯನ್ನು, ಮೈಂದ ವಿವಿದರಾಗಿ ಶ್ರೀರಾಮನ ಸೇವೆಯನ್ನು, ಅಶ್ವಿನೀದೇವತೆಗಳು ನಕುಲಸಹದೇವರಾಗಿ ಶ್ರೀಕೃಷ್ಣಸೇವೆಯನ್ನು ಮಾಡಿದರು. ಆದರೆ ಕರ್ಣನು ದುರ್ಯೋಧನನ ಪಕ್ಷವನ್ನು ವಹಿಸಿ ಶ್ರೀಕೃಷ್ಣನ ವಚನವನ್ನು ಉಲ್ಲಂಘಿಸಿಯೂ, ತನ್ನ ಹೆಚ್ಚಿನಪುಣ್ಯವನ್ನು ಕಳೆದುಕೊಂಡನು; ಅದರಂತೆ ಮೈಂದವಿವಿದರು ನರಕಾಸುರ(ಮತ್ತು ಜರಾಸಂಧ)ನ ಪಕ್ಷವನ್ನು ವಹಿಸಿ, ಶ್ರೀಕೃಷ್ಣನ ಗ್ರಾಮಗಳ ಮೇಲೆ ಉಪ್ಪುನೀರನ್ನು ಸುರಿಸುವುದು ಮೊದಲಾದ ವಿರುದ್ಧಕಾರ್ಯಗಳಿಂದ ತಮ್ಮ ಅಧಿಕಪುಣ್ಯವನ್ನು ಕಳೆದುಕೊಂಡರು.

೪) 'ವಿಧಮಾನದ್ವಿಟ್'ಎಂಬ ಶ್ರೀಹರಿಯ ನಾಮ ಇದರಿಂದ ಸಾರ್ಥಕವಾಯಿತು ಎಂದು ಭಾವ.

೫) ಆದರೆ ರಾಮಸೇವೆ ಮತ್ತು ಕೃಷ್ಣಸೇವೆ ಎರಡನ್ನೂ ಪೂರ್ಣಪ್ರಮಾಣದಲ್ಲಿ ಎರಡೂ ಅವತಾರಗಳಲ್ಲಿ ಮಾಡಿದ್ದು, ಒಮ್ಮೆಯೂ ಶ್ರೀಹರಿಗೆ ವಿರೋಧವನ್ನು ಮಾಡದೆ ಶುದ್ಧಭಾಗವತ–ಧರ್ಮರತನಾದದ್ದು, ಹನುಮಂತ ಮತ್ತು ಭೀಮಸೇನರ ವೈಶಿಷ್ಟ್ಯ; ಆದ್ದರಿಂದ ವಾಯುವೇ ಜೀವೋತ್ತಮ ಎಂದು ಸ್ಫುಟಪಡುವುದು ಎಂದೇ ತಿಳಿಯಬೇಕು.

೬) ಅಂತು ಬ್ರಹ್ಮರುದ್ರಾದಿ ಸಕಲ ದೇವತೆಗಳ ತಾರತಮ್ಯನಿರ್ಣಯವು ಈ ಎರಡು ಪ್ರಾದುರ್ಭಾವಗಳಲ್ಲೇ ಆಗಿದೆ ಎಂಬುದು ವಿಶೇಷಾಂಶ.

ಕೃಷ್ಣರೂಪದ ವಿಶೇಷ ಹಿರಿಮೆ – ಮಹಾಭಾರತದ ವಿಶೇಷ ಹಿರಿಮೆ

ನೈತಯೋರಕೃತಂ ಕಿಂಚಿಚ್ಛುಭಂ ವಾ ಯದಿ ವಾऽಶುಭಮ್ ।
ಅನ್ಯತ್ರ ಪೂರ್ಯತೇ ಕ್ವಾಪಿ ತಸ್ಮಾದತ್ರೈವ ನಿರ್ಣಯಃ ॥ ೪೮ ॥

ಪಶ್ಚಾತ್ತನತ್ವಾತ್ ಕೃಷ್ಣಸ್ಯ ವೈಶೇಷ್ಯಾತ್ ತತ್ರ ನಿರ್ಣಯಃ ।
ಪ್ರಾದುರ್ಭಾವಮಿಮಂ ತಸ್ಮಾತ್ ಗೃಹೀತ್ವಾ ಭಾರತಂ ಕೃತಮ್ ॥ ೪೯ ॥

ಅ: ಈ ಎರಡು ಅವತಾರಗಳಲ್ಲಿ ಪೂರ್ಣವಾಗದ ಪುಣ್ಯವಾಗಲೀ ಪಾಪವಾಗಲೀ ಬೇರೆ ಅವತಾರಗಳಲ್ಲಿ ಪೂರ್ಣವಾಗುವುದಿಲ್ಲ; ಆದ್ದರಿಂದ ಇವೆರಡರಲ್ಲೇ ಅವರ ತಾರತಮ್ಯಾದಿ ನಿರ್ಣಯವಾಗುವುದು. ಅದರಲ್ಲೂ ಕೃಷ್ಣಾವತಾರವು ಅನಂತರ ಕಾಲದ್ದಾದ್ದರಿಂದ ಆ ಅವತಾರದಲ್ಲೇ ಇವುಗಳ ನಿರ್ಣಯವು ವಿಶೇಷವಾಗಿ ಆಗಿದೆ. ಆದ್ದರಿಂದ ಈ ಪ್ರಾದುರ್ಭಾವವನ್ನೇ ಮುಖ್ಯವಿಷಯವನ್ನಾಗಿರಿಸಿಕೊಂಡು ಮಹಾಭಾರತವು ರಚಿತವಾಗಿದೆ.

ವಿ: ೧) ದೇವತೆಗಳ ವಿಶೇಷಸಾಧನೆಗೆ ಅವಕಾಶವು ಈ ಎರಡು ಪ್ರಾದುರ್ಭಾವಗಳಲ್ಲಿ ಲಭಿಸಿದೆ; ಅದರಲ್ಲೂ ಕೃಷ್ಣಾವತಾರವು ಅನಂತರ ನಡೆದ ಅವತಾರವಾದ್ದರಿಂದ ಅದು ಅವರ ಸಾಧನೆಗೆ ಕೊನೆಯ ಅವಕಾಶ; ಆದ್ದರಿಂದ ಈ ಎರಡೂ ಅವತಾರಗಳೂ ನಿರ್ಣಾಯಕವಾದರೂ ಕೃಷ್ಣಾವತಾರವು ಇನ್ನೂ ವಿಶೇಷನಿರ್ಣಾಯಕ; ಆದ್ದರಿಂದಲೇ ಮಹಾಭಾರತಕ್ಕೆ ಪ್ರಧಾನವಿಷಯವು ಕೃಷ್ಣಕಥೆಯೇ ಆಗಿದೆ ಎಂದು ಭಾವ. ಇದು ಒಂದರ್ಥದಲ್ಲಿ ಕ್ರಿಕೆಟ್ ಆಟದ ಎರಡನೇ ಇನ್ನಿಂಗ್ಸ್ ಇದ್ದಂತೆ. ಕ್ರಿಕೆಟ್‌ನ ಈ ಪರಿಕಲ್ಪನೆ ಈ ಅವತಾರಗಳ ಹಿನ್ನೆಲೆಯಲ್ಲಿ ರೂಪಿತವಾಗಿರುವಂತೆ ಕಾಣುವುದು ವಿಶೇಷ.

೨) ರಾಮಾಯಣ ಮತ್ತು ಮಹಾಭಾರತಗಳು ಜಗತ್ಪ್ರಸಿದ್ಧ ಇತಿಹಾಸಗಳಾಗಲು ಇದೇ ಮುಖ್ಯ ಕಾರಣ.

ಮಹಾಭಾರತದಲ್ಲಿ ರಾಮಾಯಣ

ಉಕ್ತಾ ರಾಮಕಥಾऽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಯದ್ಭಾರತೇ ನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್ ॥ ೫೦ ॥

ಅತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಮ್ ।
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಮ್ ॥ ೫೧ ॥

---

೪೮. ಅನ್ಯತ್ರ = ಕ್ವಾಪ್ಯವತಾರಾಂತರೇ । -(ವಾ)

೪೯. ಅನ್ಯತ್ರ = ವರಾಹಾದ್ಯವತಾರೇಷು ಕ್ವಾಪಿ ಕುತ್ರಾಪಿ ನ ಪೂರ್ಯತೇ ಪೂರ್ಣಂ ನ ಕ್ರಿಯತೇ -(ಜ)

ಪಶ್ಚಾತ್ತನತ್ವಾತ್ = ಚರಮತ್ವಾತ್ । -(ಜ)

೫೦. ''ಯದಿಹಾಸ್ತಿತದನ್ಯತ್ರ ಯನ್ನೇಹಾಸ್ತಿನ ಕುತ್ರಚಿತ್ ॥'' -(ಭಾರತೇ) - ಗೀತಾಭಾಷ್ಯ

ಅ: ಮಾರ್ಕಂಡೇಯಸಮಾಸ್ಯಾಪ್ರಸಂಗದಲ್ಲಿ ಈ ಮಹಾಭಾರತದಲ್ಲಿ ರಾಮಕಥೆಯೂ ಉಕ್ತವಾಗಿದೆ; ಆದ್ದರಿಂದ ಮಹಾಭಾರತದಲ್ಲಿ ಉಕ್ತವಾಗದ್ದು ಎಲ್ಲೂ ಇಲ್ಲವೇ ಇಲ್ಲ.

ಇಲ್ಲಿ ನಿರೂಪಿತವಾಗಿರುವುದು ಸಹ ಇತರ ಯಾವ ಶಾಸ್ತ್ರಗಳಲ್ಲೂ ಇಷ್ಟು ಸಮಗ್ರ ನಿರೂಪಿತವಾಗಿಲ್ಲ; ಇದೇ ಮೊದಲಾದ ಸಕಲ ವಿಚಾರವು ಬ್ರಹ್ಮಾಂಡಪುರಾಣದಲ್ಲಿ ಸ್ವತಃ ಶ್ರೀಹರಿಯಿಂದಲೇ ಉಕ್ತವಾಗಿದೆ.

ಏ: ೧) ಮಹಾಭಾರತದಲ್ಲಿ ರಾಮಾಯಣದ ಕಥೆಯೂ ಬಂದಿದೆ; ಆದರೆ ರಾಮಾಯಣದಲ್ಲಿ ಮಹಾಭಾರತದ ಕಥೆ ಬಂದಿಲ್ಲ; ಈ ದೃಷ್ಟಿಯಿಂದಲೂ ಮಹಾಭಾರತವೇ ಸಕಲ ಶಾಸ್ತ್ರೋತ್ತಮ ಎಂದು ಭಾವ.

೨) ರಾಮಕಥೆಯು ಮಹಾಭಾರತದ ವನಪರ್ವದ ಮಾರ್ಕಂಡೇಯಸಮಾಸ್ಯಾಪ್ರಸಂಗದಲ್ಲಿ 'ರಾಮೋಪಾಖ್ಯಾನಪರ್ವ'ವೆಂಬ ಉಪಪರ್ವದಲ್ಲಿ ನಿರೂಪಿತವಾಗಿದೆ, ಅದರಲ್ಲಿ ಒಟ್ಟು ೧೯ ಅಧ್ಯಾಯಗಳೂ ಸುಮಾರು ೮೦೦ ಶ್ಲೋಕಗಳೂ ಇವೆ.

೩) **ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।**
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥

– ಎಂಬ ಮಹಾಭಾರತದ ಮಾತನ್ನು ಇಲ್ಲಿ ಗಮನಿಸಬಹುದು.

೪) ಮಹಾಭಾರತದ ಸಭಾಪರ್ವ ಮೊದಲಾದ ಪ್ರಸಂಗಗಳಲ್ಲಿ ಮತ್ಸ್ಯ ಕೂರ್ಮಾದಿ ಇತರ ಭಗವದವತಾರಗಳ ವಿವರವೂ ಬಂದಿದೆ; ರಾಮಾಯಣದ ಕಥೆ ಮಾತ್ರವಲ್ಲದೆ ಮಹಾಭಾರತದಲ್ಲಿ ಸಕಲ ಶಾಸ್ತ್ರವಿಚಾರವೂ ಬಂದಿದೆ ಎಂದು ಭಾವ. ಇದರ ಖಿಲಭಾಗವಾದ ಹರಿವಂಶದಲ್ಲಿ ಸಮಗ್ರ ಕೃಷ್ಣಾವತಾರದ ಕಥೆ, ರಾಜವಂಶಗಳ ವಿವರ, ಪಿತೃಕಲ್ಪ ಮೊದಲಾದವುಗಳು ಬಂದಿವೆ.

೫) ಮಹಾಭಾರತದಂತೆ ಬ್ರಹ್ಮಾಂಡಪುರಾಣವು ಇದೇ ವೇದವ್ಯಾಸರಿಂದ ರಚಿತವಾದ ಕೃತಿ ಎಂಬ ವಿಷಯವೂ ಇದರಿಂದ ತಿಳಿಯುವುದು – **'ಅಷ್ಟಾದಶಪುರಾಣಾನಾಂ ಕರ್ತಾ ಸತ್ಯವತೀಸುತಃ'.**

ಮಾರ್ಕಂಡೇಯ ಪುರಾಣದಲ್ಲಿ ಮಹಾಭಾರತದ ಪ್ರಶಂಸೆ

ಮಾರ್ಕಂಡೇಯೇಽಪಿ ಕಥಿತಂ ಭಾರತಸ್ಯ ಪ್ರಶಂಸನಮ್ ।
ದೇವತಾನಾಂ ಯಥಾ ವ್ಯಾಸೋ ದ್ವಿಪದಾಂ ಬ್ರಾಹ್ಮಣೋ ವರಃ ॥ ೫೨ ॥

ಆಯುಧಾನಾಂ ಯಥಾ ವಜ್ರಮೋಷಧೀನಾಂ ಯಥಾ ಯವಾಃ ।
ತಥೈವ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಮ್ ॥ ೫೩ ॥

ಅ: ಮಾರ್ಕಂಡೇಯಪುರಾಣದಲ್ಲೂ ಮಹಾಭಾರತದ ಪ್ರಶಂಸೆ ಬಂದಿದೆ. ''ದೇವತೆಗಳಲ್ಲಿ ವೇದವ್ಯಾಸರು ಹೇಗೋ ಮನುಷ್ಯರಲ್ಲಿ ಬ್ರಾಹ್ಮಣನು ಹೇಗೋ, ಆಯುಧಗಳಲ್ಲಿ ವಜ್ರಾಯುಧವು ಹೇಗೋ, ಧಾನ್ಯಗಳಲ್ಲಿ ಜವೆಗೋಧಿಯು ಹೇಗೋ ಹಾಗೆಯೇ ಸಕಲಶಾಸ್ತ್ರಗಳಲ್ಲೂ 'ಮಹಾಭಾರತ' ಉತ್ತಮ''.

ಎ: ೧) ಈ ಶ್ಲೋಕಗಳಲ್ಲಿ (ನಿರ್ಣೇಯಶಾಸ್ತ್ರಗಳಲ್ಲಿ)ಮಹಾಭಾರತಕ್ಕೆ ಸರ್ವೋತ್ತಮತ್ವವನ್ನು ಸಾಧಿಸುವುದರೊಂದಿಗೆ ಶ್ರೀವೇದವ್ಯಾಸರ ಸರ್ವೋತ್ತಮತ್ವವೂ ಸಾಧಿತವಾಗಿದೆ.

೨) 'ಆಯುಧಾನಾಮಹಂ ವಜ್ರಮ್' ಎಂಬ ಗೀತಾವಾಕ್ಯವನ್ನು ಮತ್ತು ಅದರ ಭಾಷ್ಯ, ತಾತ್ಪರ್ಯಗಳನ್ನು ಗಮನಿಸಬೇಕು. ಆಯುಧಗಳಲ್ಲಿ ಸುದರ್ಶನಚಕ್ರವೇ ಸರ್ವಶ್ರೇಷ್ಠ; ಅನಂತರ ಸಜಾತೀಯೈಕದೇಶಾಧಿಕ್ಯಪ್ರದ ವಿಭೂತಿರೂಪದಿಂದಾಗಿ ಆಯುಧಗಳಲ್ಲಿ ವಜ್ರಾಯುಧವು ಶ್ರೇಷ್ಠ ಎಂಬುದನ್ನು ಶ್ರೀಮದಾಚಾರ್ಯರು ಅಲ್ಲಿ ತಿಳಿಸಿರುವರು.

---

೫೮. ಮಾರ್ಕಂಡೇಯೇ ಪುರಾಣೇऽಪಿ । –(ಜ)

೫೮. ವರ್ಣಾನಾಂ ಬ್ರಾಹ್ಮಣೋ ಗುರುಃ ಇತಿ ವಚನಾತ್ ಇದಂ ವರ್ಣಸಾಜಾತ್ಯಪಕ್ಷೋ ಮಾನುಷಸಾಜಾತ್ಯಪಕ್ಷೇ ಮನುಷ್ಯಾಣಾಮಿತಿ । –(ಜ.)

೫೮. ಧಾತೂನಾಮನೇಕಾರ್ಥತ್ವಾತ್ ಕಥಿತಮಿತ್ಯಸ್ಯ ಕೃತಮಿತ್ಯರ್ಥ ಇತ್ಯಭ್ಯುಪಗಮಾತ್ ॥ – (ಸ.)

೫೯.. ಸುದರ್ಶನಂ ಚಾಯುಧೇಷು – ಗೀತಾತಾತ್ಪರ್ಯನಿರ್ಣಯ

ವಜ್ರಮುತ್ತಮಂ ಚಕ್ರಂ ವಿನಾ ಉತ್ತಮಂ ಪರಿಕೀರ್ತಿತಮಿತಿ ಶೇಷಃ । ಕಥಿತಮಿತ್ಯಸ್ಯ ಅನುಷಂಗೋ ವಾ । –(ಜ.)

೫೯.. ಮಾರ್ಕಂಡೇಯಪುರಾಣದ ಪ್ರಥಮಾಧ್ಯಾಯದಲ್ಲೇ ಈ ಎರಡು ಶ್ಲೋಕಗಳು ಇವೆ.

೫೯.. ಭಾರತಂ ಬ್ರಾಹ್ಮಣಾದೀನಾಂ ವೇದಾರ್ಥಪರಿವೃತ್ತಯೇ ।
ತ ಏವ ವೇದಾಸ್ವನ್ಯೇಷಾಂ ನರ್ತೇ ತತ್ಕಸ್ಯಚಿತ್ ಸುಖಮ್' ಇತಿ ಸ್ಕಾಂದೇ ॥ – ಭಾ. ತಾ.(೧/೪/೨೪)

'ಯಥಾ ತು ಭಾರತೇ ದೇವೋ ನ ತಥಾऽನ್ಯೇಷು ಕೇಷುಚಿತ್ ।
ಉಚ್ಯತೇ ನ ತಥಾಪೀಶಂ ಜಾನಂತ್ಯಜ್ಞಾ ಜನಾರ್ದನಮ್' ಇತಿ ಸ್ಕಾಂದೇ ॥ – ಭಾ. ತಾ. (೧/೪/೩೦)

ನ ಭಾರತಂ ಸಮಂ ಶಾಸ್ತ್ರಂ ಕುತ ಏವಾನಯೋಃ ಸಮಮ್ ॥ - ಇತಿ ಬ್ರಹ್ಮಾಂಡೇ –(ಗೀ. ತಾ.)

'ಭಾರತಾನ್ನಾಧಿಕಂ ವಿಷ್ಣೋರ್ಮಹಿಮಾವಾಚಕಂ ಕ್ವಚಿತ್ ।
ಭಾರತಾನ್ನ ವಿರಾಗಾಯ ಭಾರತಾನ್ನ ವಿಮುಕ್ತಯೇ' ಇತಿ ಪಾದ್ಮೇ ॥ - ಭಾ. ತಾ. (೩/೫/೧೨)

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ ।
ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ದ್ವಯಮ್ ॥ ಇತಿ ಮಹಾಕೌರ್ಮೇ । - ಗೀತಾಭಾಷ್ಯೇ

ವಾಯುಪ್ರೋಕ್ತಾದಿಗಳಲ್ಲಿ ಮಹಾಭಾರತದ ಪ್ರಶಂಸೆ

ವಾಯುಪ್ರೋಕ್ತೇऽಪಿ ತತ್ ಪ್ರೋಕ್ತಂ ಭಾರತಸ್ಯ ಪ್ರಶಂಸನಮ್ ।
ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ॥ ೫೪ ॥

ಕೋ ಹ್ಯನ್ಯಃ ಪುಂಡರೀಕ್ಷಾನ್ಮಹಾಭಾರತಕೃದ್ಭವೇತ್ ।
ಏವಂ ಹಿ ಸರ್ವಶಾಸ್ತ್ರೇಷು ಪೃಥಕ್ ಪೃಥಗುದೀರಿತಮ್ ॥ ೫೫ ॥

ಉಕ್ತೋऽರ್ಥಃ ಸರ್ವ ಏವಾಯಂ ಮಾಹಾತ್ಮ್ಯಕ್ರಮಪೂರ್ವಕಃ ॥ ೫೬ ॥

---

೫೪. ಸಾಕ್ಷಾನ್ನಾರಾಯಣಕೃತತ್ವಾತ್ ಶ್ರೈಷ್ಠ್ಯಂ ಭಾರತಸ್ಯ । ಭಾರತಕರ್ತೃತ್ವೇನ ವ್ಯಾಸಸ್ಯ ನಾರಾಯಣತ್ವೋಪಪಾದನಾಚ್ಚ। -(ಜ)

೫೪. ಕೃಷ್ಣದ್ವೈಪಾಯನಮಿತಿ ಶ್ಲೋಕಃ ನ ಕೇವಲಂ ವಾಯುಪ್ರೋಕ್ತೇऽಸ್ತಿ। ಕಿಂತು ಭಾರತೇऽಪ್ಯಸ್ತೀತಿ ಜ್ಞೇಯಮ್ । -(ವಾ)

೫೫. ನನು ಲಕ್ಷಸಂಖ್ಯಾಕಶ್ಲೋಕಕರಣಮಾತ್ರೇಣ ಕಥಂ ವ್ಯಾಸಸ್ಯ ಸಾಕ್ಷಾನ್ನಾರಾಯಣತ್ವಸಿದ್ಧಿರಿತಿ ನ ಶಂಕನೀಯಃ । ಕುರುಪಾಂಡವವಂಶೋತ್ಪತ್ತೇಃ ಪೂರ್ವಮೇವ ಉಭಯೋರ್ವಂಶಯೋರುತ್ಪತ್ತಿಪ್ರಕಾರಂ ರಾಜಸೂಯಾಶ್ವಮೇಧಾದಿಯಾಗಮಹಿಮಾನಂ ತದರ್ಥಂ ಕೃತದಿಗ್ವಿಜಯಪ್ರಕಾರಂ ಜತುಗೇಹಾನ್ನಿರ್ಗಮನಪ್ರಕಾರಕೌಶಲಂ ಬಕಹಿಡಿಂಬಯೋರ್ಹನನಂ ದ್ರೌಪದೀವಿವಾಹನಿರ್ವಾಹಶಕ್ತಿಂ ದುರ್ದ್ಯೂತೋದ್ಯೋಗಂ ವನವಾಸಾಜ್ಞಾತವಾಸಗೋಗ್ರಹಣಾದಿಬಹುತರಕಥಾಂ ಅಷ್ಟಾದಶಾಕ್ಷೌಹಿಣೀಸೇನಾಯಾಮನ್ಯೋನ್ಯಂ ಕಥ್ಯಮಾನೋಕ್ತಿಪ್ರಕಾರಂ ಶರಪ್ರತಿಶರಸಂಖ್ಯಾಬಂಧನಾದಿಚಾತುರೀಂ ವ್ಯೂಹಪ್ರತಿವ್ಯೂಹಕರಣಂ ಅಸ್ತ್ರಪ್ರತ್ಯಸ್ತ್ರಪ್ರಯೋಗಪರಿಪಾಟೀಂ ಭೀಮಾರ್ಜುನಭೀಷ್ಮದ್ರೋಣಾದಿಭಿಃ ದಿನೇ ದಿನೇ ಹನ್ಯಮಾನಕರಿತುರಗಾದ್ಯನೇಕಸಂಖ್ಯಾದಿಕಂ ಚ ಕರತಲಮಿಲಿತಾಮಲಕವದ್ ದೃಷ್ಟ್ವಾ ಮಹಾಭಾರತಾಖ್ಯಸ್ವಗ್ರಂಥೇ ಗ್ರಥಯತೋ ವ್ಯಾಸಸ್ಯ ನಿರವಧಿಕಜಗನ್ನಿರ್ಮಾತೃನಾರಾಯಣವತ್ ನಿರವಧಿಕಸಾರ್ವಜ್ಞ್ಯಸಿದ್ಧೇಃ ಸಾಕ್ಷಾತ್ತದವತಾರಸ್ಯಾಪಿ ಪ್ರೇಕ್ಷಾವದ್ಭಿರುತ್ಪ್ರೇಕ್ಷಯಿತುಂ ಶಕ್ಯತ್ವಾತ್। ಕಥಮನ್ಯಥಾ ಮತ್ಸ್ಯಕೂರ್ಮಾದೇಸ್ತದವತಾರತ್ವಸಿದ್ಧಿಃ । ಅತಃ ಸಾಧೂಕ್ತಮ್ । ''ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ ಭವೇತ್'' ಇತಿ। -(ವಾ)

೫೫. 'ವಿರಾಟೋದ್ಯೋಗಸಾರವಾನ್' ಇತ್ಯಾದಿತದ್ವಾಕ್ಯಪರ್ಯಾಲೋಚನಯಾ, ಋಷಿಸಂಪ್ರದಾಯಾತ್, 'ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್' ಇತ್ಯಾದಿ ಪುರಾಣಾಂತರಗತವಾಕ್ಯಾರ್ಥಾನ್ಯಥಾऽನುಪಪತ್ತ್ಯಾ ನಾರದಾಧ್ಯಯನಾದಿಲಿಂಗೈಶ್ಚಾವಸೀಯತೇ । ಕಥಮನ್ಯಥಾ ಭಾರತನಿರುಕ್ತಿಜ್ಞಾನಮಾತ್ರೇಣ ಸರ್ವಪಾಪಕ್ಷಯಃ? ಪ್ರಸಿದ್ಧಶ್ಚಸೋऽರ್ಥಃ । ಕಥಂ ಚಾನ್ಯಸ್ಯ ನ ಕರ್ತುಂ ಶಕ್ಯತೇ ? ಗ್ರಂಥಾಂತರಗತತ್ವಾಚ್ಚ ನಾವಿದ್ಯಮಾನಸ್ತುತಿಃ । ನ ಚ ಕರ್ತುರೇವ । ಇತರತ್ರಾಪಿ ಸಾಮ್ಯಾತ್ । ತತ್ರ ಚ ಸರ್ವಭಾರತಾರ್ಥಸಂಗ್ರಹಾಂ ವಾಸುದೇವಾರ್ಜುನಸಂವಾದರೂಪಾಂ ಭಾರತಪಾರಿಜಾತಮಧುಭೂತಾಂ ಗೀತಮುಪನಿಬಬಂಧ। - ಗೀತಾಭಾಷ್ಯ

೫೬. 'ಉಕ್ತೋऽರ್ಥಃ' ಇತ್ಯಾವರ್ತ್ಯಾನ್ವೇತವ್ಯಮ್ । ಭಾರತೇऽಪಿ ಸರ್ವೋऽಪ್ಯಯಮರ್ಥ ಉಕ್ತಃ ಇತ್ಯನ್ವಯಃ। -(ಜ)

ಆ: ಮಹಾಭಾರತದ ಪ್ರಶಂಸೆಯು ವಾಯುಪ್ರೋಕ್ತದಲ್ಲೂ ಬಂದಿದೆ; ''ಕೃಷ್ಣದ್ವೈಪಾಯನರಾದ ವ್ಯಾಸರನ್ನು ಸರ್ವಸ್ವಾಮಿಯಾದ ನಾರಾಯಣನೆಂಬುದಾಗಿಯೇ ತಿಳಿ; ಪುಂಡರೀಕಾಕ್ಷನಾದ ಶ್ರೀಹರಿಯಲ್ಲದೆ ಬೇರೆ ಯಾರು ತಾನೇ ಮಹಾಭಾರತವನ್ನು ರಚಿಸಲು ಸಮರ್ಥರು?'' ಹೀಗೆ ಸರ್ವಶಾಸ್ತ್ರಗಳಲ್ಲೂ ಮಹಾಭಾರತದ ಹಿರಿಮೆಯು ಪ್ರತ್ಯೇಕಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ವಿಷ್ಣುಮಾಹಾತ್ಮ್ಯ ಮತ್ತು ದೇವತಾತಾರತಮ್ಯ ಮೊದಲಾದ ನಾವು ಹೇಳಿದ ಸಕಲ ವಿಷಯಗಳು ಸಹ ಸರ್ವಶಾಸ್ತ್ರಗಳಲ್ಲೂ ಉಕ್ತವಾಗಿವೆ.

ಎ: ೧) ಪುಂಡರೀಕಾಕ್ಷನಾದ ಶ್ರೀಹರಿಯನ್ನು ಬಿಟ್ಟು, ಬೇರಾರೂ ಮಹಾಭಾರತವನ್ನು ಬರೆಯಲಾರರು ಎಂಬ ಮಾತಿನಲ್ಲಿ ಮಹಾಭಾರತವನ್ನು ಬರೆದ ಶ್ರೀವೇದವ್ಯಾಸರು ಸ್ವತಃ ನಾರಾಯಣಾವತಾರರು ಎಂಬ ಅಂಶದೊಂದಿಗೆ, ಮಹಾಭಾರತವು ಅಂತಹ ನಾರಾಯಣನಿಂದ ಕೃತವಾದ ಅಪೂರ್ವಗ್ರಂಥ ಎಂಬ ಭಾವವೂ ಇದೆ.

೨) ಈ ಶ್ಲೋಕ ಮಹಾಭಾರತದಲ್ಲೂ ಬಂದಿದೆ (ಆದಿಪರ್ವ, ೬/೮ ಶ್ಲೋ, ೨೦).

೩) 'ಲಕ್ಷಶ್ಲೋಕಗಳ ಭಾರತವನ್ನು ಬರೆದ ಮಾತ್ರಕ್ಕೇ ಶ್ರೀವ್ಯಾಸರು ಸಾಕ್ಷಾತ್ ನಾರಾಯಣನೆಂಬುದನ್ನು ಹೇಗೆ ಸಿದ್ಧವಾಗುತ್ತದೆ'? ಎಂದು ಶಂಕಿಸಬೇಕಿಲ್ಲ; ಕುರು–ಪಾಂಡವರ ವಂಶದ ಉತ್ಪತ್ತಿಗೆ ಮುನ್ನವೇ ಆ ಎರಡೂ ವಂಶಗಳ ಉತ್ಪತ್ತಿ ಪ್ರಕಾರವನ್ನೂ, ರಾಜಸೂಯ ಅಶ್ವಮೇಧಾದಿಗಳ ಮಹಿಮೆಯನ್ನೂ, ಅದಕ್ಕೋಸ್ಕರ ಮಾಡಿದ ದಿಗ್ವಿಜಯ ಪ್ರಕಾರವನ್ನೂ, ಅರಗಿನಮನೆಯಿಂದ ಪಾಂಡವರು ಪಾರಾಗುವ ಕೌಶಲವನ್ನೂ, ಬಕ ಮತ್ತು ಹಿಡಿಂಬರ ವಧೆಯನ್ನೂ, ದ್ರೌಪದೀವಿವಾಹವನ್ನು ನಿರ್ವಹಿಸಿದ ಸಾಮರ್ಥ್ಯವನ್ನೂ, ಕಪಟದ್ಯೂತದ ಸಂಚನ್ನೂ, ವನವಾಸ, ಅಜ್ಞಾತವಾಸ, ಗೋಗ್ರಹಣ ಮೊದಲಾದ ಅನೇಕತೆರನಾದ ಕಥೆಯನ್ನೂ, ಹದಿನೆಂಟು ಅಕ್ಷೋಹಿಣೀ ಸೇನೆಯಲ್ಲಿ ಅಲ್ಲಿ ಯೋಧರು ಪರಸ್ಪರ ಆಡಿದ ಯುಕ್ತಿ ಪ್ರತ್ಯುಕ್ತಿಗಳ ರೀತಿಯನ್ನೂ, ವ್ಯೂಹಪ್ರತಿವ್ಯೂಹಗಳ ರಚನೆಯನ್ನೂ, ಅಸ್ತ್ರಪ್ರತ್ಯಸ್ತ್ರಗಳ ಪ್ರಯೋಗಪ್ರಕಾರವನ್ನೂ, ಭೀಮ, ಅರ್ಜುನ, ಭೀಷ್ಮ, ದ್ರೋಣ ಮೊದಲಾದವರಿಂದ ಪ್ರತಿದಿನದಲ್ಲೂ ಕೊಲ್ಲಲ್ಪಡುತ್ತಿದ್ದ ಆನೆ, ಕುದುರೆ ಮೊದಲಾದ ಅನೇಕತೆರನಾದ ಸಂಖ್ಯೆ ಮೊದಲಾದವುಗಳನ್ನೂ ಅಂಗೈಯಲ್ಲಿನ ನೆಲ್ಲಿಕಾಯಂತೆ ಸ್ಫುಟವಾಗಿ ಕಂಡು ಮಹಾಭಾರತವೆಂಬ ತಮ್ಮ ಗ್ರಂಥದಲ್ಲಿ ತಿಳಿಸಿದ ವೇದವ್ಯಾಸರಿಗೆ ಅನೇಕ ಜಗತ್ತನ್ನು ನಿರ್ಮಿಸುವ ನಾರಾಯಣನಂತೆ ಅಶೇಷ ಸರ್ವಜ್ಞತ್ವವು ಸಿದ್ಧಿಸುವುದರಿಂದ ಅವರು ಅವನ ಅವತಾರವೆಂಬುದನ್ನು ವಿವೇಕಿಗಳು ಸುಲಭವಾಗಿ ಗ್ರಹಿಸಲು ಶಕ್ಯವಾಗಿದೆ ಎಂಬ ಅಪೂರ್ವವ್ಯಾಖ್ಯಾನವನ್ನು ಶ್ರೀವಾದಿರಾಜರು ಇದಕ್ಕೆ ಬರೆದಿರುವರು.

೪) ಮಹಾಭಾರತವು ಅದರಲ್ಲಿನ ಘಟನೆಗಳು ನಡೆಯುವ ನೂರಾರು ವರ್ಷಗಳಿಗಿಂತ ಮುಂಚಿತವಾಗಿಯೇ ರಚಿತವಾದ ಅಪೂರ್ವ ಕೃತಿ; ಅದರಲ್ಲಿ ಬರೆದದ್ದಂತೆಯೇ ಅದರ ಪ್ರತಿಯೊಂದು ಘಟನೆಯೂ ನಡೆಯಿತು ಎಂಬುದು ಶ್ರೀವೇದವ್ಯಾಸರ ನಾರಾಯಣತ್ವಕ್ಕೆ ದ್ಯೋತಕ ಎಂದು ಭಾವ.

೫) ಮಹಾಭಾರತವು ಲಕ್ಷಶ್ಲೋಕಗಳ ಗ್ರಂಥಮಾತ್ರವಾಗಿರದೆ, ಅದರಲ್ಲಿನ ಪ್ರತಿಯೊಂದು ಪದಕ್ಕೂ ಅತಿ ಕಡಿಮೆ ಎಂದರೂ ಹತ್ತು ಅರ್ಥಗಳುಂಟು; ಪ್ರತಿಹಂತದಲ್ಲೂ ಆಧ್ಯಾತ್ಮಿಕ ಅರ್ಥ ತುಂಬಿದೆ; ವೇದಾರ್ಥನಿರ್ಣಯಕ್ಕೂ ನೆರವಾಗುವ ಈ ಕೃತಿ ವೇದಾನಧಿಕಾರಿಗಳ ಪಾಲಿಗಂತೂ ವೇದವೇ ಆಗಿದೆ; ವೇದಾಧಿಕಾರಿಗಳಿಗೆ ವೇದಾಧ್ಯಯನಕ್ಕೂ ಇದು ನೀಡುವ ನೆರವು ಅಪಾರ. ಇದರಲ್ಲಿ ಪ್ರಾಸಂಗಿಕವಾಗಿ ಬರುವ ವಿಷಯಗಳಂತೂ ಅಸಂಖ್ಯ.

೬) ಇದು ಧರ್ಮಾದಿ ಸಕಲ ಪುರುಷಾರ್ಥಗಳ ವಿಶ್ವಕೋಶವೆಂಬ ಮಾತೂ ಇದರಲ್ಲಿ ಬಂದಿದೆ; ಸಮಾಧಿ, ದರ್ಶನ ಮತ್ತು ಗುಹ್ಯ ಎಂಬ ಭಾಷಾತ್ರಯಗಳಿಂದಲೂ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಹಸ, ಉಕ್ಷಣ, ಸುಧುರ, ಸಾಧು ಎಂಬ ಸಪ್ತನಿರೂಪಣ ವೈಖರಿಗಳಿಂದಲೂ ಇದು ತುಂಬಿದೆ; ಇಂತಹ ಮಹಾಭಾರತವನ್ನು ರಚಿಸುವುದು ಸ್ವತಃ ಭಗವಂತನಿಗಲ್ಲದೆ ಬೇರಾರಿಗೂ ಸಾಧ್ಯವಿಲ್ಲ ಎಂದು ಭಾವ.

೭) ಮಹಾಭಾರತವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ವ್ಯಾಸರಿಗೆ ಮತ್ತು ಅವರ ಅನುಗ್ರಹದಿಂದ ಬ್ರಹ್ಮದೇವರಿಗೆ ಮಾತ್ರ ಸಾಧ್ಯ ಎಂದು ಮುಂದೆ (ಶ್ಲೋ.೬೦) ಹೇಳುವ ಮಾತನ್ನು ಇಲ್ಲಿಗಮನಿಸಬೇಕು; ಅದರ ಪರಿಜ್ಞಾನವೇ ಅಷ್ಟು ದುಸ್ತರವೆಂದ ಮೇಲೆ ರಚನೆ ಸುತರಾಂ ಇತರರಿಗೆ ಅಸಾಧ್ಯವೆಂಬುದು ಕೈಮುತ್ಯಸಿದ್ಧ.

೮) ಬ್ರಹ್ಮಾಂಡ, ಮಾರ್ಕಂಡೇಯ ಮತ್ತು ವಾಯುಪ್ರೋಕ್ತವೆಂಬ ಮೂರು ಪುರಾಣಗಳಲ್ಲಿ ಮಾತ್ರವೇ ಅಲ್ಲದೆ, ಇತರ ಸಕಲ ಸಚ್ಛಾಸ್ತ್ರಗಳಲ್ಲೂ ಮಹಾಭಾರತದ ಪ್ರಶಂಸೆ ಬಂದಿದೆ ಎಂದು ಭಾವ. ಅಂತಹ ಇನ್ನೂ ಕೆಲವು ಪ್ರಮಾಣವಾಕ್ಯಗಳನ್ನು ಶ್ರೀಮದಾಚಾರ್ಯರು ತಮ್ಮ ಗೀತಾಭಾಷ್ಯ, ಗೀತಾತಾತ್ಪರ್ಯ ಮತ್ತು ಭಾಗವತತಾತ್ಪರ್ಯಾದಿ ಗ್ರಂಥಗಳಲ್ಲಿ ಉಲ್ಲೇಖಿಸಿರುವರು; ಅವುಗಳಲ್ಲಿ ಕೆಲವು ಹೀಗಿವೆ:

ಬ್ರಹ್ಮಾऽಪಿ ತನ್ನ ಜಾನಾತಿ ಈಷತ್ ಸರ್ವೋ೯ऽಪಿ ಜಾನತಿ ।
ಬಹ್ವರ್ಥಂ ಋಷಯಸ್ತತ್ ತು ಭಾರತಂ ಪ್ರವದಂತಿ ಹಿ ॥– ಇತ್ಯುಪನಾರದೀಯೇ ।

–(ಗೀತಾಭಾಷ್ಯ)

ಬ್ರಹ್ಮಾದ್ಯೈಃ ಪ್ರಾರ್ಥಿತೋ ವಿಷ್ಣುರ್ಭಾರತಂ ಸ ಚಕಾರ ಹ ।
ಯಸ್ಮಿನ್ ದಶಾರ್ಥಾಃ ಸರ್ವತ್ರ ನ ಜ್ಞೇಯಾಃ ಸರ್ವಜಂತುಭಿಃ ॥ – ಇತಿ ನಾರದೀಯೇ

–(ಗೀತಾಭಾಷ್ಯ)

ಭಾರತಂ ಚಾಪಿ ಕೃತವಾನ್ ಪಂಚಮಂ ವೇದಮುತ್ತಮಮ್ ।
ದಶಾವರಾರ್ಥಂ ಸರ್ವತ್ರ ಕೇವಲಂ ವಿಷ್ಣುಬೋಧಕಮ್ ॥
ಪರೋಕ್ಷಾರ್ಥಂ ತು ಸರ್ವತ್ರ ವೇದಾದಪ್ಯುತ್ತಮಂ ತು ಯತ್ ॥ – ಇತಿ ಸ್ಕಾಂದೇ
–(ಗೀತಾಭಾಷ್ಯ)

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ ।
ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ದ್ವಯಮ್ ॥
– ಇತಿ ಮಹಾಕೌರ್ಮೇ(ಗೀತಾಭಾಷ್ಯ)

''ಶಾಸ್ತ್ರೇಷು ಭಾರತಂ ಸಾರಂ ತತ್ರ ನಾಮಸಹಸ್ರಕಮ್ ।
ವೈಷ್ಣವಂ ಕೃಷ್ಣಗೀತಾ ಚ ತಜ್ಜ್ಞಾನಾನ್ಮುಚ್ಯತೇಽಂಜಸಾ ॥''
''ನ ಭಾರತಸಮಂ ಶಾಸ್ತ್ರಂ ಕುತ ಏವಾನಯೋಃ ಸಮಮ್ ॥'' – ಬ್ರಹ್ಮಾಂಡಪುರಾಣ

ಸ್ವಯಂ ನಾರಾಯಣೋ ದೇವೈರ್ಬ್ರಹ್ಮರುದ್ರೇಂದ್ರಪೂರ್ವಕೈಃ ।
ಅರ್ಥಿತೋ ವ್ಯಾಸತಾಂ ಪ್ರಾಪ್ಯ ಕೇವಲಂ ತತ್ತ್ವನಿರ್ಣಯಮ್ ।
ಚಕಾರ ಪಂಚಮಂ ವೇದಂ ಮಹಾಭಾರತಸಂಜ್ಞಿತಮ್॥– ಇತಿ ಬ್ರಹ್ಮಾಂಡೇ
– ಗೀತಾತಾತ್ಪರ್ಯನಿರ್ಣಯ

ಯಥಾ ತು ಭಾರತೇ ದೇವೋ ನ ತಥಾಽನ್ಯೇಷು ಕೇಷುಚಿತ್ ।
ಉಚ್ಯತೇ ನ ತಥಾಪೀಶಂ ಜಾನಂತ್ಯಜ್ಞಾ ಜನಾರ್ದನಮ್॥ ಇತಿ ಸ್ಕಾಂದೇ ।
– ಭಾ.ತಾ.(೧/೪/೩೦)

ಭಾರತಾನ್ನಾಧಿಕಂ ವಿಷ್ಣೋರ್ಮಹಿಮಾವಾಚಕಂ ಕ್ವಚಿತ್ ।
ಭಾರತಾನ್ನ ವಿರಾಗಾಯ ಭಾರತಾನ್ನ ವಿಮುಕ್ತಯೇ ॥ ಇತಿಪಾದ್ಮೇ । – ಭಾ.ತಾ. (೩/೫/೧೨)

ಭಾರತಂ ಬ್ರಾಹ್ಮಣಾದೀನಾಂ ವೇದಾರ್ಥಪರಿವಿತ್ತಯೇ।
ತ ಏವ ವೇದಾಸ್ತ್ವನ್ಯೇಷಾಂ ನರ್ತೇ ತತ್ ಕಸ್ಯಚಿತ್ ಸುಖಮ್ ಇತಿ ಸ್ಕಾಂದೇ ।
– ಭಾ.ತಾ. (೧/೪/೨೪)

ಮಹಾಭಾರತದಲ್ಲಿ ಬಂದಿರುವಂತೆ ಶಾಸ್ತ್ರಾರ್ಥನಿರ್ಣಯ

ಭಾರತೇಽಪಿ ಯಥಾ ಪ್ರೋಕ್ತೋ ನಿರ್ಣಯೋಽಯಂ ಕ್ರಮೇಣ ತು ।
ತಥಾ ಪ್ರದರ್ಶಯಿಷ್ಯಾಮಸ್ತದ್ವಾಕ್ಯೈರೇವ ಸರ್ವಶಃ ॥ ೫೭ ॥

ಅ: ನಾವು ಹೇಳಿದ ಈ ಸಕಲ ಶಾಸ್ತ್ರಾರ್ಥನಿರ್ಣಯವು ಕ್ರಮವಾಗಿ ಮಹಾಭಾರತದಲ್ಲೂ ಹೇಗೆ ಪ್ರತಿಪಾದಿತವಾಗಿದೆ ಎಂಬುದನ್ನು ಕೇವಲ ಅದರ ವಾಕ್ಯಗಳಿಂದಲೇ ಎಲ್ಲ ರೀತಿಯಲ್ಲೂ ತೋರಿಸಿಕೊಡುವೆವು.

ವಿ: ಶ್ರೀಮದಾಚಾರ್ಯರು ತಾವು ಬ್ರಹ್ಮಸೂತ್ರಭಾಷ್ಯ ಮತ್ತು ಅನುವ್ಯಾಖ್ಯಾನಗಳ ಆರಂಭದಲ್ಲಿ ಪರವಿದ್ಯಾತ್ವನಿಮಿತ್ತ ಬ್ರಹ್ಮಸೂತ್ರಗಳ ವ್ಯಾಖ್ಯೇಯತ್ವವನ್ನು ಸಮರ್ಥಿಸಿ ಅವುಗಳಿಗೆ ವ್ಯಾಖ್ಯಾನವನ್ನು ಬರೆಯಲು ಪ್ರಾರಂಭಿಸಿದಂತೆ ಇಲ್ಲಿ ಈ ಮಹಾಭಾರತದ ನಿರ್ಣೇಯ-ಶಾಸ್ತ್ರೋತ್ತಮತ್ವವನ್ನು ಸಮರ್ಥಿಸಿ ಇನ್ನು ಮೇಲೆ ಅದರ ವಾಕ್ಯಗಳ ವಿಮರ್ಶೆಯನ್ನು ಮಾಡುವರು.

ಮಹಾಭಾರತದ ಮಂಗಲಾಚರಣಶ್ಲೋಕ

ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ಯೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥ ೫೮ ॥

ಅ: ಸುರರಿಗೆ ಗುರುವೂ, ಜಗತ್ತಿನ ಮುಖ್ಯಸ್ವಾಮಿಯೂ, ಭಕ್ತವತ್ಸಲನೂ ಸಕಲಲೋಕ-ನಮಸ್ಕೃತನೂ, ಪ್ರಾಕೃತಗುಣರಹಿತನೂ, ಉತ್ಪತ್ತಿರಹಿತನೂ, ಸರ್ವತ್ರವ್ಯಾಪ್ತನೂ, ಸಕಲ ಗುಣಪೂರ್ಣನೂ, ಜಗತ್ತಿನ ಸೃಷ್ಟಿಕರ್ತನೂ, ಸರ್ವಸಮರ್ಥನೂ, ಸಂಸಾರಪರಿಹಾರಕನೂ, ಅಮರರಿಂದಲೂ, ಅಸುರರಿಂದಲೂ, ಸಿದ್ಧರಿಂದಲೂ ವಂದ್ಯನೂ ಆದ ನಾರಾಯಣನನ್ನು ವಂದಿಸುವೆನು.

ವಿ: ೧) ಪ್ರಥಮಾಧ್ಯಾಯದಲ್ಲಿ ಸಾಧಿಸಿದ ಹರಿಸರ್ವೋತ್ತಮತ್ವಾದಿ ಸಕಲಶಾಸ್ತ್ರ ಪ್ರಮೇಯಗಳನ್ನು ಮಹಾಭಾರತವಾಕ್ಯಗಳಿಂದಲೂ ಸಮರ್ಥಿಸುವೆವು ಎಂದು ಈ ದ್ವಿತೀಯಾಧ್ಯಾ-ಯವನ್ನು ಪ್ರಾರಂಭಿಸಿದ ಶ್ರೀಮದಾಚಾರ್ಯರು ಈವರೆಗೂ ಮಹಾಭಾರತದ ಪ್ರಾಮಾಣ್ಯ ಮತ್ತು ಹಿರಿಮೆಗಳನ್ನು ಸಮರ್ಥಿಸಿ, ಈಗ ಅದರ ವಾಕ್ಯಗಳನ್ನು ಉದಾಹರಿಸಿ ಸಕಲ ಪ್ರಮೇಯಗಳನ್ನೂ ಸಾಧಿಸುತ್ತಿರುವರು.

---

೫೭. ಉಕ್ತ ಇತಿ ಅರ್ಥಮನುವೃತ್ಯ ಅನ್ವೇತವ್ಯಮ್ । ಯೋಽಯಂ ಮಾಹಾತ್ಮ್ಯಕ್ರಮಪೂರ್ವಕಃ ಮಾಹಾತ್ಮ್ಯಂ ಮಹಿಮಾ, ಕ್ರಮಃ ತಾರತಮ್ಯಕ್ರಮಃ ತೌ ಪೂರ್ವೌ ಯಸ್ಯ ಸಃ ಸರ್ವೋಽರ್ಥಃ ಮಯಾ ಉಕ್ತಃ ಸೋಽಯಂ ನಿರ್ಣಯಃ ಭಾರತೇಽಪಿ ಯಥಾ ಯೇನ ಪ್ರಕಾರೇಣ ಪ್ರೋಕ್ತಃ ತಥಾ ಸರ್ವಶಃ ತಂ ಪ್ರಕಾರಂ ತದ್ವಾಕ್ಯೈಃ ಭಾರತವಾಕ್ಯೈರೇವ ಪ್ರದರ್ಶಯಿಷ್ಯಾಮ ಇತಿ । -(ಜ)

೫೮ ಪುಣೆಯ ಭಂಡಾರ್‌ಕರ್ ಸಂಸ್ಥೆಯ ಪರಿಷ್ಕೃತ ಪ್ರತಿಯಲ್ಲಿ ಈ ಶ್ಲೋಕವೇ ಮಹಾಭಾರತದ ಆದಿಪದ್ಯವಾಗಿ ಮಲಬಾರ್ ಪ್ರತಿಗಳಲ್ಲಿ ಕಾಣಿಸಿಗುತ್ತದೆ ಎಂದು ಉಲ್ಲೇಖಿಸಿರುವುದು ಗಮನಾರ್ಹ.

೨) ಇದು ಮಹಾಭಾರತದ ಮೊದಲ ಶ್ಲೋಕ; ಇಂದಿನ ಮಹಾಭಾರತದ ಅನೇಕ ಪ್ರತಿಗಳಲ್ಲಿ ಈ ಶ್ಲೋಕ ಕಂಡುಬರುವುದಿಲ್ಲ; ಇದಕ್ಕೆ ಇದರ ಬಗ್ಗೆ ದುಷ್ಪರಿಗೆ ಇರುವ ಅಸಹನೆಯೇ ಕಾರಣವೆಂದು ತಿಳಿಸಿ, ಶ್ರೀವಾದಿರಾಜರು 'ಕೇರಳದೇಶದಲ್ಲಿನ ಪ್ರಾಚೀನಪುಸ್ತಕಗಳಲ್ಲಿ ಇಂದೂ ಈ ಪದ್ಯ ಕಾಣಿಸಿಗುತ್ತದೆ' ಎಂದು ಬರೆದಿರುವರು :

'ಕ್ವಚಿದಂತರಿತಾನಪಿ' ಇತಿ ವಚನಾತ್ ಇದಮಾದ್ಯಪದ್ಯಮಸಹಮಾನಾಃ ಕೇಚಿದಾದೌ ನ ಲಿಖಂತಿ । ಕೇರಳದೇಶಸ್ಥಪುರಾತನಪುಸ್ತಕೇಷು ಅದ್ಯಾಪಿ ದೃಶ್ಯತೇ ॥

ಮಂಗಲಾಚರಣ ಶ್ಲೋಕದ ಪೂರ್ವಾರ್ಧದ ಅರ್ಥವಿವರಣೆ

ಜ್ಞಾನಪ್ರದಃ ಸ ಭಗವಾನ್ ಕಮಲಾವಿರಿಂಚಿ
ಶರ್ವಾದಿಪೂರ್ವಜಗತ್ತೋ ನಿಖಿಲಾದ್ವರಿಷ್ಠಃ ।
ಭಕ್ತ್ಯೈವ ತುಷ್ಯತಿ ಹರಿಪ್ರವಣತ್ವಮೇವ
ಸರ್ವಸ್ಯ ಧರ್ಮ ಇತಿ ಪೂರ್ವವಿಭಾಗಸಂಸ್ಥಃ ॥ ೫೯ ॥

ಅ: ಭಗವಂತನಾದ ಆ ನಾರಾಯಣನು ಮಹಾಲಕ್ಷ್ಮಿ, ಬ್ರಹ್ಮದೇವರು, ರುದ್ರದೇವರು ಮೊದಲಾದ ಸಕಲಜಗತ್ತಿಗೂ ಜ್ಞಾನಪ್ರದನು, ಸಕಲರಿಗಿಂತಲೂ ಉತ್ತಮನು, ಭಕ್ತಿಯಿಂದಲೇ ಪ್ರಸನ್ನನಾಗುವವನು, ಹರಿಗೆ ಶರಣಾಗುವುದೇ ಸಕಲರಿಗೂ ಧರ್ಮ ಎಂಬ ಅರ್ಥವು ಇದರ ಪೂರ್ವಾರ್ಧದಲ್ಲಿದೆ.

ವಿ: ೧) 'ನಾರಾಯಣಂ ಸುರಗುರುಂ' ಎಂಬ ಶ್ಲೋಕದಲ್ಲಿ ಹರಿಸರ್ವೋತ್ತಮತ್ವಾದಿ ಪ್ರಮೇಯಗಳು ಅಡಗಿರುವುದನ್ನು ಶ್ರೀಮದಾಚಾರ್ಯರು ಮೂರು ಶ್ಲೋಕಗಳಿಂದ ವ್ಯಾಖ್ಯಾನಿಸಿ ತೋರಿಸುತ್ತ ಅದರ ಪೂರ್ವಾರ್ಧದಲ್ಲಿನ ಪ್ರಮೇಯವಿಶೇಷಗಳನ್ನು ಈ ಶ್ಲೋಕದಲ್ಲಿ ವಿವರಿಸಿರುವರು.

---

೫೯. ಯಸ್ಮಾದ್ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋऽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥ – (ಈಶಾವಾಸ್ಯಭಾಷ್ಯ)
ಜ್ಞಾನಸ್ಫೂರ್ತಿಃ ಜ್ಞಾತವ್ಯಾರ್ಥಪ್ರತಿಭಾವಿಶೇಷಪ್ರಾಪ್ತಿಃ । –ಐತರೇಯಭಾಷ್ಯ

೫೯. ಜಾನಂತ್ಯಾ ಅಪಿ ದೇವ್ಯಾ ಲೋಕಾನುಗ್ರಹಾರ್ಥಂ ವಿಶೇಷಜ್ಞಾನಾರ್ಥಂ ಚ । –(ಜ)

೫೯. ಅತಿಶಯೇನ ವರೋ ಹಿ ವರಿಷ್ಠಃ । –(ವಾ, ಜ)

೫೯. ಯದ್ವಾ ಕಮಲಾವಿರಿಂಚೇತ್ಯಾದಿ ಅತ್ರಾಪಿ ಸಂಬಂಧನೀಯಮ್ । –(ಜ)

ಸರ್ವಂ ವಾಕ್ಯಂ ಸಾವಧಾರಣಂ' ಇತಿ ನ್ಯಾಯಾದಭಕ್ತೇಷು ಅಸುರೇಷು ಪ್ರೀತ್ಯಭಾವಚ್ಚ ನಾರಾಯಣಃ ಭಕ್ತಸ್ಯೈವ ಪ್ರಿಯಃ ಇತಿ ಲಭ್ಯತೇ । ಹೇತುಗರ್ಭವಿಶೇಷಣಬಲಾದ್ ಭಕ್ತ್ಯೈವ ತುಷ್ಯತೀತಿ ಸಿದ್ಧ್ಯತೀತಿ ಭಾವಃ । -(ವಾ)

೨) 'ಸುರಗುರುಂ'ಎಂಬ ಪದದಲ್ಲಿನ 'ಸುರ' ಶಬ್ದಕ್ಕೆ 'ಕಮಲಾವಿರಿಂಚಶರ್ವಾದಿ ಪೂರ್ವಜಗತಃ' ಎಂದೂ, 'ಗುರು' ಎಂಬುದಕ್ಕೆ 'ಜ್ಞಾನಪ್ರದಃ' ಎಂದೂ 'ಜಗದೇಕನಾಥ' ಪದಕ್ಕೆ 'ನಿಖಿಲಾದ್ವರಿಷ್ಠಃ' ಎಂದೂ, 'ಭಕ್ತಪ್ರಿಯಂ' ಎಂಬುದಕ್ಕೆ 'ಭಕ್ತ್ಯೈಕವ ತುಷ್ಯತಿ' ಎಂದೂ 'ಸಕಲ-ಲೋಕ ನಮಸ್ಕೃತಂ' ಪದಕ್ಕೆ 'ಹರಿಪ್ರವಣತ್ವಮೇವ ಸರ್ವಸ್ಯ ಧರ್ಮಃ' ಎಂದೂ ಅರ್ಥ ಎಂದು ಭಾವ; 'ನಾರಾಯಣ' ಶಬ್ದದ ಅರ್ಥವನ್ನು 'ಭಗವಾನ್' ಎಂಬುದಾಗಿ ಸೂಚಿಸಿರುವರು.

---

೫೯. ಧರ್ಮ ಇತಿ ವದತಾ ಯಥಾ ಸಂಧ್ಯಾವಂದನಾಕರಣೇ ಪ್ರತ್ಯವಾಯಃ । ಏವಂ ಹರೇರ್ನಮಸ್ಕಾರಾಕರಣೇऽಪಿ ಪ್ರತ್ಯವಾಯೋऽಸ್ತೀತಿ ಸೂಚಿತಂ ಭವತಿ । ನತಮಿತ್ಯನುಕ್ತ್ವಾ ನಮಸ್ಕೃತಮಿತಿ ವದತಾ ನಮಸಃ ಕರಣೀಯತ್ವಸ್ಯಾಪಿ ಸೂಚಿತತ್ವಾತ್ ನಮಸಃ ಧರ್ಮತ್ವಂ ಲಭ್ಯತೇ । ಶ್ರುತ್ಯಾ ಕರಣೀಯತ್ವೇನ ವಿಹಿತಂ ಕರ್ಮ ಹಿ ಧರ್ಮಃ । ಅತ ಏವ 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಇತಿ ಶ್ರುತಿಃ । ತತ್ರಾಪಿ ಹರೇರ್ನಮನಮೇವ ಮುಖ್ಯೋ ಧರ್ಮ ಇತಿ ಭಾವೇನ ಹರಿಪ್ರವಣತ್ವಮೇವೇತ್ಯುಕ್ತಮ್ । ನಮನಸ್ಯ ಯಾಗಾದಿವದಧಿಕಾರಿವಿಶೇಷಾನುಕ್ತೇಃ ಸ್ತ್ರೀಶೂದ್ರಚಂಡಾಲಾದೀನಾಮಪಿ ಯೋಗ್ಯತ್ವಾತ್ ಸರ್ವಸ್ಯ ಧರ್ಮ ಇತ್ಯುಕ್ತಮ್ । –(ವಾ)

೫೯. ಹರಿಪ್ರವಣತ್ವಂ ನ ಶ್ರವಣಾದಿವತ್ ನಿಯತಾಧಿಕಾರಿಕಮಪಿ ತು ಸ್ತ್ರೀಶೂದ್ರಾದಿಸರ್ವಸಾಧಾರಣಮಿತಿ ಭಾವಃ। –(ಜ)

೬೦. ಅಜ್ಞಾನರಾಗದ್ವೇಷನಿದ್ರಾಲಸ್ಯದುಃಖಬಂಧಾದಿದೋಷಾಣಾಂ ಗುಣತ್ರಯಮೂಲತ್ವಾತ್ ತ್ರೈಗುಣ್ಯವರ್ಜಿತತ್ವೇ ನಿರ್ದೋಷಕತ್ವಮೇವ ಸೇತ್ಸ್ಯತೀತಿ ಭಾವಃ । – (ವಾ)

ತ್ರಿಗುಣಾನಾಮೇವ ದೋಷಕಾರಣತ್ವಾತ್ ಕಾರಣಾಭಾವಾದೇವ ಕ್ರೋಧಾದಿಕಾರ್ಯಾಭಾವೇ ಸಿದ್ಧೇ ವಂದ್ಯತ್ವಂ ಸಿದ್ಧಮಿತಿ ಭಾವಃ । –(ಜ)

೬೦. ಜನನಂ ಪುನಃಪುನರ್ಜನನಂ ಪುನರ್ಭವಾಖ್ಯಃ ಸಂಸಾರ ಇತಿ ಯಾವತ್ । ತದ್ರಹಿತಮಿತಿ ವ್ಯುತ್ಪತ್ತ್ಯಾ ಅಜಪದೇನ ಸ್ಮೃತಿವಿಹೀನತ್ವಮೇವೋಚ್ಯತೇ ಇತಿ ಭಾವಃ । –(ವಾ)

ನ ಜಾಯತೇ ದೇಹೋ ಯಸ್ಯೇತ್ಯಜಃ ತೇನ ದೇಹಸ್ಯಾಪ್ಯಪ್ರಾಕೃತತ್ವಾತ್ 'ನಿತ್ಯಮುಕ್ತಃ 'ಇತ್ಯರ್ಥಃ । – (ಜ)

೬೦. 'ಭೂ ಪ್ರಾಪ್ತೌ' ಇತಿ ಧಾತೋಃ ಪ್ರಾಪ್ತ್ಯರ್ಥಾನಾಂ ಚ ಜ್ಞಾನಾರ್ಥಕತ್ವಾತ್ ಭವನಂ ಜ್ಞಾನಮ್। ಭೂರ್ಭೂಮಿತ್ವಂ ಸರ್ವಾಧಾರತ್ವಮ್ । 'ಭಾ ದೀಪ್ತೌ' ಇತಿ ಧಾತೋಃ ಭವನಂ ದೀಪ್ತಿಃ । ಭವನಂ ಅಭಿಭವನಂ ಶತ್ರೂಣಾಂ ಪರಾಭವಃ । 'ಭೂ ಸತ್ತಾಯಾಮ್' ಇತಿ ಧಾತೋಃ ಭವನಂ ಸರ್ವದಾ ವಿದ್ಯಮಾನತ್ವಮ್ । ಸರ್ವತ್ರ ಭವತೀತಿ ಭವನಂ ವ್ಯಾಪ್ತಿಃ । ಭವನಂ ತಿರೋಭವನಂ ಅದೃಶ್ಯತ್ವಂ ಭವನಂ ಆವಿರ್ಭಾವಃ ಪ್ರಸನ್ನತ್ವಮಿತ್ಯಾದಿವ್ಯುತ್ಪತ್ತ್ಯಾ ಭೂಪದೇನ ಸಂವಿದಾದಿಸದ್ಗುಣಾಃ ಕಥ್ಯಂತೇ। ಏ ಉತ್ಕೃಷ್ಟಾಃ ಸರ್ವೋತ್ತಮಾಃ ಏ ಪೂರ್ಣಾಃ ಸಂವಿದಾದಿಸದ್ಗುಣಾಃ ಯಸ್ಯ ಸ ವಿಭುರಿತಿ ವ್ಯುತ್ಪತ್ತ್ಯಾ ವಿಭುಪದೇನ ಉದಾರಸಂವಿದ್ಗುಣತ್ವಮೇವೋಕ್ತಂ ಭವತಿ । ಸಂವಿದಾದಯೋ ಗುಣಾಃ। ಸಂವಿದ್ಗುಣಾಃ । ಸಂವಿಚ್ಚ ಗುಣಾಶ್ಚೇತಿ ವಾ ವಿಗ್ರಹಃ । – (ವಾ)

ಸಂವಿತ್ ಜ್ಞಾನಂ ಗುಣಾಃ ಆನಂದಾದಯಶ್ಚ ಸಂವಿದಾಖ್ಯಾಃ ಗುಣಾಃ ಸಂವಿದ್ಗುಣಾಃ । ಬಹುವಚನಮ್ ಆದ್ಯರ್ಥೇ ಇತಿ ವಾ । ಉದಾರಾ ಉತ್ಕೃಷ್ಟಾಃ ಪೂರ್ಣಾಃ ಪ್ರತ್ಯೇಕಂ ಪೂರ್ಣಾಃ ಸಂವಿದ್ಗುಣಾಃ ಯಸ್ಯ ಸ ಇತಿ । ಲಕ್ಷ್ಮ್ಯಾಃ ಪೂರ್ಣಗುಣಾಭಾವಾನ್ನ ಸಾಮ್ಯಮ್ । – (ಜ)

೬೦. ಆದೌ ಸ್ವೋದರಾತ್ ಜಗದ್ಯಾಪಯತೀತಿ ವ್ಯುತ್ಪತ್ತ್ಯಾ ಆದ್ಯಃ 'ಪ್ರಥಮಕೃತ್' ಇತ್ಯರ್ಥಃ । – (ವಾ)

೩) 'ಸುರ' ಎಂಬ ಪದಕ್ಕೆ ಮಹಾಲಕ್ಷ್ಮೀ ಎಂಬ ಅರ್ಥವು 'ಸುಷ್ಠು ರಮಯತೀತಿ ವ್ಯುತ್ಪತ್ತೇಃ ದೇವತಾರೂಪತ್ವಾಚ್ಚ' ಎಂಬ ವ್ಯುತ್ಪತ್ತಿಯಿಂದ ಬಂದಿದೆ ಎಂದು ಶ್ರೀವಾದಿರಾಜರು ತೋರಿಸಿರುವರು; ಅಲ್ಲದೆ 'ಏಕನಾಥ' ಎಂಬ ಪದದ ಅರ್ಥವು 'ವರಿಷ್ಠ' ಎಂಬ ಪದದಿಂದಲೂ 'ನಮಸ್ಕೃತಂ' ಎಂಬುದರ ಭಾವವು 'ಸರ್ವಸ್ಯ ಧರ್ಮಃ' ಎಂಬ ಪದದಿಂದಲೂ ಹೇಗೆ ವ್ಯಾಖ್ಯಾತವಾಗಿದೆ ಎಂಬುದನ್ನೂ ಅವರು ತೋರಿಸಿರುವರು.

೪) ಸಂಧ್ಯಾವಂದನೆ ಮಾಡದಿರುವುದು ಹೇಗೆ ದೋಷವೋ ಹಾಗೆಯೇ ಶ್ರೀಹರಿಗೆ ವಂದಿಸದಿರುವುದೂ ಅದಕ್ಕಿಂತ ಮಿಗಿಲಾದ ದೋಷವೆಂದೂ, ಅಂಥ ನಮನವು ಸ್ತ್ರೀಶೂದ್ರಾದಿ ಸಕಲರಿಗೂ ಅವಶ್ಯವಾದ ಕರ್ತವ್ಯವೆಂದೂ 'ಸರ್ವಸ್ಯ ಧರ್ಮಃ' ಎಂಬ ಪದದಲ್ಲಿ ಹೇಗೆ ಸೂಚಿತವಾಗಿದೆ ಎಂಬುದನ್ನು ಶ್ರೀವಾದಿರಾಜರು ಸ್ಪಷ್ಟಪಡಿಸಿರುವರು.

ಮಂಗಲಾಚರಣ ಶ್ಲೋಕದ ಉತ್ತರಾರ್ಧದ ಅರ್ಥವಿವರಣೆ

ನಿರ್ದೋಷಕಃ ಸ್ಮೃತಿವಿಹೀನ ಉದಾರಪೂರ್ಣ-
ಸಂವಿದ್ಗುಣಃ ಪ್ರಥಮಕೃತ್ ಸಕಲಾತ್ಮಶಕ್ತಿಃ ।
ಮೋಕ್ಷೈಕಹೇತುರಸುರೂಪಸುರೈಶ್ಚ ಮುಖ್ಯೈ-
ರ್ವಂದ್ಯಃ ಸ ಏಕ ಇತಿ ಚೋಕ್ತಮಥೋತ್ತರಾರ್ಧೇ ॥ ೬೦ ॥

---

೬೦. ಸಕಲಾ ಸರ್ವಕಾರ್ಯವಿಷಯಾ ಆತ್ಮಸ್ವರೂಪಭೂತಾ ಶಕ್ತಿರ್ಯಸ್ಯೇತಿ । –(ಜ)

೬೦. ಭವಂ ಹಂತೀತಿ ಭವಘ್ನಃ । ಹನನೇ ಕರ್ಮಣಿ ಹಂತೈವ ಮುಖ್ಯಃ । ಅನ್ಯತ್ ಸರ್ವಂ ಸಹಕಾರಿ । ಅತಃ ಮೋಕ್ಷಸ್ಯ ಮುಖ್ಯಹೇತುರಿತಿ ಭವಘ್ನಪದಸ್ಯಾರ್ಥ ಉಕ್ತಃ । –(ವಾ)

೬೦. ಅತ್ರ ಮೋಕ್ಷಪದೇನ ಲಿಂಗಭಂಗಂ ಸ್ವರೂಪಭೂತದುಃಖಾನಂದಾನುಭವಂ ಚಾಹ । ತಸ್ಯ ಮುಖ್ಯ-ಹೇತುರಿತ್ಯರ್ಥಃ । –(ಜ)

೬೦. ★ಅಸೂನ್ ರಮಯಂತಿ ಹರ್ಷಯಂತೀತಿ ಅಸುರಾಃ ತತ್ತ್ವಾಭಿಮಾನಿನಃ । ಅಸೂನ್ ರೂಪಯಂತೀತಿ ಫಲಿತಾರ್ಥಕಥನಮ್ । ಸಿದ್ಧಾಃ ಮುಕ್ತಾಶ್ಚ ತೇ ಅಸುರಾಃ ತತ್ತ್ವಾಭಿಮಾನಿನಶ್ಚ ತೇ ಅಮರಾಶ್ಚ । ಅಮರಾಸುರಸಿದ್ಧಾಃ । ಅಗ್ನ್ಯಾಹಿತಾದಿವತ್ ಉತ್ತರಪದಪೂರ್ವಕಃ ಸಮಾಸಃ । ವಂದ್ಯಃ ಇತ್ಯಸ್ಯ ಅರ್ಥಕಥನಂ ಅಸುರೂಪಸುರೈಶ್ಚ ಮುಖ್ಯೈರ್ವಂದ್ಯಂ ಇತಿ । ಸಕಲಲೋಕನಮಸ್ಕೃತಮಿತ್ಯನೇನ ಸಂಸಾರಿಸರ್ವಲೋಕವಂದ್ಯತ್ವಮುಚ್ಯತೇ । ಅತ್ರ ತು ಸಿದ್ಧಪದಮಹಿಮ್ನಾ ಮುಕ್ತಾಏವೋಚ್ಯಂತೇ ಇತಿ ನ ಪೌನರುಕ್ತ್ಯಮ್ । 'ಅನಾನುಭೂತೀರವಧೂನ್ವಾನಃ' ಇತಿ ಶ್ರುತೇಃ ಅಸುರಾಣಾಂ ಮುಕ್ತಭಾವಾತ್ ಉಕ್ತವ್ಯುತ್ಪತ್ತ್ಯಾ ಅಸುರಾಸ್ತತ್ತ್ವಾಭಿಮಾನಿನೋ ದೇವಾಃ । ತತ್ತ್ವಾಭಿಮಾನಿದೇವೈಃ ಅನ್ನಪಾನಾದಿನಾ ಸೌಖ್ಯದಾನೇ ಅಸೂನಾಂ ಹರ್ಷಃ । ಅನ್ಯಥಾ ದೈಘ್ರ್ಯಮಾಂದ್ಯಖಾಸಾದಿರೂಪೇಣ ತೇಷಾಮಪಿ ಸಮ್ಯಕ್ ಸಂಚಾರೋ ನಾಸ್ತಿ । ಅತಃ ಅಸುರಪದೇನ ತತ್ತ್ವಾಭಿಮಾನಿನೋ ದೇವಾಃ ಸರ್ವೇऽಪ್ಯುಚ್ಯಂತೇ ಇತಿ ಭಾವಃ । –(ವಾ)

ಅ: ಶ್ರೀನಾರಾಯಣನು ನಿರ್ದೋಷನು, ಸಂಸಾರರಹಿತನು, ಉತ್ತಮವೂ, ಪೂರ್ಣವೂ ಆದ ಜ್ಞಾನಾದಿ ಗುಣಗಳನ್ನು ಹೊಂದಿರುವನು, ಜಗತ್ತಿನ ಸೃಷ್ಟಿಕರ್ತನೂ ಸರ್ವಕಾರಣನೂ, ತತ್ವಾಭಿಮಾನಿದೇವತೆಗಳಿಂದಲೂ ಮುಕ್ತರಿಂದಲೂ ವಂದ್ಯನೂ, ಸ್ವಗತಭೇದವಿವರ್ಜಿತನೂ ಆಗಿರುವನು ಎಂಬುದಾಗಿ ಇದರ ಉತ್ತರಾರ್ಧದಲ್ಲಿ ಉಕ್ತವಾಗಿದೆ.

ವಿ: ೧) ಈ ಶ್ಲೋಕದಲ್ಲಿ 'ನಾರಾಯಣಂ ಸುರಗುರುಂ' ಎಂಬ ಶ್ಲೋಕದ ಉತ್ತರಾರ್ಧದಲ್ಲಿ ಬಂದಿರುವ ಪ್ರಮೇಯಗಳನ್ನು ತಿಳಿಸಿರುವರು.

೨) ತ್ರಿಗುಣಗಳೇ ಅಜ್ಞಾನ, ರಾಗ, ದ್ವೇಷ, ನಿದ್ರಾ, ಆಲಸ್ಯ, ದುಃಖ ಬಂಧ ಮೊದಲಾದ ದೋಷಗಳಿಗೆ ಮೂಲವಾದ್ದರಿಂದ 'ನಿರ್ದೋಷಕ' ಎಂಬುದು 'ತ್ರೈಗುಣ್ಯವರ್ಜಿತಂ' ಶಬ್ದಕ್ಕೂ, ಮತ್ತೆ ಮತ್ತೆ ಹುಟ್ಟುವುದೇ ಸಂಸಾರವಾದ್ದರಿಂದ ಅಂತಹ ಸಂಸಾರಮೂಲವಾದ ಹುಟ್ಟನ್ನೇ ಹೊಂದದವನು 'ಸೃತಿವಿಹೀನಃ' ಎಂಬುದು 'ಅಜ' ಶಬ್ದಕ್ಕೂ, ವಿಭು ಪದದಿಂದ ಉತ್ಕೃಷ್ಟವೂ, ಪೂರ್ಣವೂ ಆದ ಜ್ಞಾನ ಮೊದಲಾದ ಗುಣಗಳು ಸೂಚಿತವಾಗಿರುವುದರಿಂದ, 'ಉದಾರ ಸಂವಿದ್ಗುಣಃ' ಎಂಬುದು 'ವಿಭು' ಶಬ್ದಕ್ಕೂ, ಸೃಷ್ಟಿಯ ಆದಿಯಲ್ಲಿ ಪ್ರಥಮಾಧ್ಯಾಯದಲ್ಲಿ ಹೇಳಿದಂತೆ

---

೬೦. ನ ವಿದ್ಮತೇ ಸುಷ್ಠು ರೂಪಂ ವಪುರ್ಯೇಷಾಂ ತೇ ನಿರ್ಋತಿಪ್ರಹ್ಲಾದಾದ್ಯಾಃ । ತಥಾ ಯೇ ಸು ಶೋಭನೇ ರಮಂತಿ ತೇ ಸುರಾಃ ತೈಶ್ಚ ವಂದ್ಯ ಇತ್ಯರ್ಥಃ । ತಥಾ ಚಾಮರಾಃ ಬ್ರಹ್ಮಾದ್ಯಾಶ್ಚಾಸುರಾಃ ಪ್ರಹ್ಲಾದಾದ್ಯಾಶ್ಚ ತೇ ಸಿದ್ಧಾ ಮುಕ್ತಾಶ್ಚ ತೈರ್ವಂದ್ಯ ಇತ್ಯರ್ಥಃ । –(ಜ)

ಯದ್ವಾ ಅಮರಾಃ ಸಾಮಾನ್ಯತೋ ದೇವಾಶ್ಚಾಸುರಾ ಅಸೂನಿ ಇಂದ್ರಿಯಾಣಿ ರಮಯಂತಿ ತೇ ದೇವಾಶ್ಚ ತೇ ಚ ತೇ ಸಿದ್ಧಾ ಮುಕ್ತಾಶ್ಚ ತೈರ್ವಂದ್ಯ ಇತ್ಯರ್ಥಃ । ಅತ ಏವ ಅಸುರೂಪಸುರೈರಿತ್ಯುಕ್ತಂ ಅಸವಃ ರೂಪಂ ಪ್ರತಿಮಾ ಯೇಷಾಂ ತೇ ಅಸುರೂಪಾ ಇತಿ । ಅಥವಾಸವಃ ರೂಪಂ ಯೇಷಾಂ ತೇ ಅಸುರೂಪಾ ಸ್ವರೂಪಭೂತ-ಚಿನ್ಮಾತ್ರೇಂದ್ರಿಯಾ ಇತ್ಯರ್ಥಃ । ಅಸುರೂಪಾಶ್ಚ ತೇ ಸುರಾಶ್ಚ ತೇನಾಮರಾಸುರೇತ್ಯತ್ರ 'ಕಡಾರಾಃ ಕರ್ಮಧಾರಯ' ಇತಿ ಪರನಿಪಾತಃ । ಇದಂ ಚ ಮುಕ್ತಸ್ವರೂಪಕಥನಪರಮ್ । ತೇ ಚ ತೇ ಸಿದ್ಧಾಶ್ಚ ಮುಕ್ತಾಶ್ಚೇತಿ । ಕೇಚಿತ್ತು ಅಸುರೂಪಾಃ ಚಿನ್ಮಾತ್ರೇಂದ್ರಿಯಾ ಸಿದ್ಧಾ ಇತಿ । ಅಸುರೂಪೇತಿ ಸಿದ್ಧ ವಿಶೇಷಣಮ್ । ತೇನಾಮರಾಶ್ಚ ತೇ ಅಸುರಸಿದ್ಧಾಶ್ಚೇತಿ ಸಮಾಸ ಇತ್ಯಾಹುಃ । –(ಜ.)

ಅಸುರಾಃ ಪರಮೇಶ್ವರವತ್ ಸಮೀಚೀನಾನಂದಜ್ಞಾನಾದಿರೂಪಾಃ ಸಿದ್ಧಾಃ ಮುಕ್ತಾಶ್ಚ ತೈರ್ವಂದ್ಯ ಇತ್ಯರ್ಥಃ ಉಕ್ತೋ ಭವತಿ । –(ಸ)

ವಂದ್ಯತ್ವಂ ನಾಮ ಸ್ವನೀಚತ್ವಜ್ಞಾನಪೂರ್ವಂ ವಂದ್ಯಸ್ಯ ಉತ್ತಮತ್ವಜ್ಞಾನಪೂರ್ವಂ ತಸ್ಮಿನ್ ಸ್ನೇಹವಿಶೇಷಃ । ಅಯಮೇವ ಭಕ್ತಿಃ । ಭಕ್ತ್ಯಾ ಚ ಮೋಕ್ಷಃ । –(ಜ)

೬೦. ಪ್ರಥಮೌ = ಸರ್ವಜೀವೋತ್ತಮೌ ಬ್ರಹ್ಮವಾಯೂ ಕರೋತೀತ್ಯರ್ಥಃ ।
ಅನೇನ ಆ ಸಮ್ಯಕ್ ಆದೌ ಸರ್ವಜೀವೋತ್ತಮೌ ಬ್ರಹ್ಮವಾಯೂ ಯಸ್ಮಾತ್ ಭವತಃ ಸ ಆದ್ಯಃ ಇತಿ ವ್ಯುತ್ಪತ್ತಿ-ಮಾಶ್ರಿತ್ಯ.... ॥ –(ಸ)

೬೦. ಜ್ಞಾನಪ್ರಧಾನಾ ದೇವಾಸ್ತು ಅಸುರಾಸ್ತು ರತಾ ಅಸೌ । -(ಗೀ. ಭಾ.)

ತನ್ನ ಉದರದಿಂದ ಜಗತ್ತನ್ನು ಹೊರಹಾಕುವವನಾದ್ದರಿಂದ **'ಪ್ರಥಮಕೃತ್'** ಎಂಬುದು **'ಆದ್ಯ'** ಶಬ್ದಕ್ಕೂ, ಪೂರ್ಣವೂ ಸ್ವರೂಪಭೂತವೂ ಆದ ಶಕ್ತಿಯನ್ನು ಹೊಂದಿರುವವನಾದ್ದರಿಂದ **'ಸಕಲಾತ್ಮಶಕ್ತಿ'** ಎಂಬುದು **'ಈಶಂ'** ಶಬ್ದಕ್ಕೂ, ಮೋಕ್ಷಕ್ಕೆ ಮುಖ್ಯಕಾರಣನಾದ್ದರಿಂದ **'ಮೋಕ್ಷೈಕಹೇತುಃ'** ಎಂಬುದು **'ಭವಘ್ನಂ'** ಶಬ್ದಕ್ಕೂ, ತತ್ವಾಭಿಮಾನಿದೇವತೆಗಳಿಂದಲೂ ಮುಕ್ತರಿಂದಲೂ ವಂದ್ಯನು ಎಂಬ ಕಾರಣದಿಂದ **'ಅಸುರೂಪಸುರೈಶ್ಚ ಮುಕ್ತೈರ್ವಂದ್ಯಃ'** ಎಂಬುದು **'ಅಮರಾಸುರಸಿದ್ಧವಂದ್ಯಂ'** ಶಬ್ದಕ್ಕೂ ವಿವರಣರೂಪವಾಗಿವೆ ಎಂಬುದಾಗಿ ವ್ಯಾಖ್ಯಾನಕಾರರು ಸ್ಪಷ್ಟಪಡಿಸಿರುವರು.

೩) **'ಅಸುರೂಪದೈತ್ಯರು'** ಎಂಬ ಪದಕ್ಕೆ **'ಶೋಭನವಲ್ಲದ ದೈತ್ಯಶರೀರ ಹೊಂದಿದ ನಿರ್ಋತಿ, ಪ್ರಹ್ಲಾದ ಮೊದಲಾದವರು'** ಇವೇ ಮೊದಲಾದ ಅರ್ಥವಿಶೇಷಗಳನ್ನು ಜನಾರ್ದನಭಟ್ಟರು ಬರೆದಿರುವರು.

೪) ಪ್ರಥಮಕೃತ್ – ಎಂದರೆ ಜೀವರಲ್ಲಿ ಪ್ರಥಮರಾದ ಬ್ರಹ್ಮವಾಯುಗಳನ್ನು ಸೃಷ್ಟಿಸುವವನು' ಎಂದರ್ಥ ಎಂದು ಸತ್ಯಾಭಿನವತೀರ್ಥರು ಬರೆದಿರುವರು; ಹಾಗೆ ಬ್ರಹ್ಮವಾಯು–ಗಳನ್ನು ಸೃಷ್ಟಿಸುವ ವಿವರ ಮೂರನೇ ಅಧ್ಯಾಯದಲ್ಲಿ ಬಂದಿದೆ.

ಮಂಗಲಶ್ಲೋಕದ ತಾತ್ಪರ್ಯ

ನಮ್ಯತ್ವಮುಕ್ತಮುಭಯತ್ರ ಯತಸ್ತತೋಽಸ್ಯ
ಮುಕ್ತೈರಮುಕ್ತಕಗಣೈಶ್ಚ ವಿನಮ್ಯತೋಕ್ತಾ।
ಇತ್ಥಂ ಹಿ ಸರ್ವಗುಣಪೂರ್ತಿರಮುಷ್ಯ ವಿಷ್ಣೋಃ
ಪ್ರಸ್ತಾವಿತಾ ಪ್ರಥಮತಃ ಪ್ರತಿಜಾನತೈವ ॥ ೬೧ ॥

ಅ: ಪೂರ್ವಾರ್ಧ ಮತ್ತು ಉತ್ತರಾರ್ಧ ಎರಡರಲ್ಲೂ ಹೀಗೆ ವಂದ್ಯತ್ವವು ಉಕ್ತವಾಗಿರುವುದರಿಂದ ಶ್ರೀಹರಿಗೆ ಮುಕ್ತರಿಂದಲೂ ಮತ್ತು ಅಮುಕ್ತಸಮೂಹದಿಂದಲೂ ಸಹ ವಿಶೇಷವಾದ ನಮ್ಯತ್ವವು ಸೂಚಿತವಾಗಿದೆ. ಹೀಗೆ ಗ್ರಂಥದ ಪ್ರಥಮವಾಕ್ಯದಲ್ಲೇ ಪ್ರತಿಜ್ಞಾಪೂರ್ವಕವಾಗಿ ಈ ವಿಷ್ಣುವಿನ ಸರ್ವಗುಣಪೂರ್ಣತ್ವವು ಪ್ರಸ್ತಾಪಿತವಾಗಿದೆ.

---

೬೧. ನನು ಮಂಗಲಾಚರಣವಾಕ್ಯಂ ನಾರ್ಥನಿಶ್ಚಾಯಕಂ ತಸ್ಯ ಇಷ್ಟದೇವತಾಸ್ತುತ್ಯರ್ಥಸ್ಯ ಪ್ರತಿಪಾದ್ಯಾರ್ಥಾನಿಶ್ಚಾಯಕತ್ವಾತ್ ಇತ್ಯತ ಉಕ್ತಮ್ । ಪ್ರತಿಜಾನತೇತಿ । ಪ್ರತಿಜ್ಞಾಂ ಕುರ್ವತಾ ಭಾರತಸ್ಯ ಶಾಸ್ತ್ರತ್ವಾತ್ ಶಾಸ್ತ್ರಸ್ಯ ಪ್ರತಿಜ್ಞಾತಾರ್ಥಪ್ರತಿಪಾದಕತ್ವಾತ್ ಅನ್ಯಸ್ಯ ಪ್ರತಿಜ್ಞಾವಾಕ್ಯಸ್ಯ ಅಭಾವಾತ್ ಇದಮೇವ ಮಂಗಲಪ್ರತಿಪಾದಕಂ ಪ್ರತಿಜ್ಞಾವಾಕ್ಯಂ ಚ। ತಸ್ಮಾದುಕ್ತಂ ಯುಕ್ತಮಿತ್ಯರ್ಥಃ। –(ಜ)

ವಿ: ೧) ಪೂರ್ವಾರ್ಧದಲ್ಲಿ 'ಸಕಲಲೋಕನಮಸ್ಕೃತಂ' ಎಂಬುದಾಗಿಯೂ ಉತ್ತರಾರ್ಧದಲ್ಲಿ 'ಅಮರಾಸುರಸಿದ್ಧವಂದ್ಯಂ' ಎಂಬುದಾಗಿಯೂ ಶ್ರೀವಿಷ್ಣುವಿಗೆ ಸಕಲಲೋಕ ನಮ್ಯತ್ವವು ಉಕ್ತವಾಗಿದೆ; ಅವನಿಗೆ ಅಮುಕ್ತರಿಂದಲೂ ಮುಕ್ತರಿಂದಲೂ ವಂದ್ಯತ್ವವನ್ನು ಸೂಚಿಸುವುದೇ ಹೀಗೆ ಎರಡು ಸಲ ಹೇಳಿರುವುದರ ತಾತ್ಪರ್ಯ.

೨) ಸಕಲ ಮುಕ್ತಾಮುಕ್ತವಂದ್ಯತ್ವವೆಂಬುದು ಶ್ರೀಹರಿಯ ಸರ್ವಗುಣಪೂರ್ಣತ್ವವನ್ನೇ ಸೂಚಿಸುವುದು ('ಮುಕ್ತಾನಾಂ ಪರಮಾಗತಿಃ') ಎಂದು ಭಾವ.

೩) ಮಹಾಭಾರತವು ಒಂದು ಶಾಸ್ತ್ರ; ಅದರಲ್ಲೂ ನಿರ್ಣೇಯಗಳಲ್ಲಿ ಸರ್ವೋತ್ತಮವಾದ ಶಾಸ್ತ್ರ; ಆದ್ದರಿಂದ ಇದರ ಮೊದಲಶ್ಲೋಕ ಮಂಗಲಾಚರಣಮಾತ್ರವಲ್ಲದೆ ಪ್ರತಿಜ್ಞಾರೂಪವೂ ಆಗಿದೆ; ಪ್ರತಿಜ್ಞಾತ ವಿಷಯವನ್ನೇ ಅನಂತರದ ಮಾತುಗಳಿಂದ ಪ್ರತಿಪಾದಿಸುವುದು ಶಾಸ್ತ್ರಗಳ ರೀತಿಯಾದ್ದರಿಂದ, ಇದರ ಉಳಿದ ಭಾಗದಲ್ಲಿ ಇಲ್ಲಿ ಪ್ರತಿಜ್ಞಾತವಾದ ವಿಷ್ಣುವಿನ ಸಕಲ ಗುಣಪೂರ್ಣತ್ವ (ಮತ್ತು ಅಶೇಷದೋಷದೂರತ್ವ)ವೇ ಪ್ರತಿಪಾದಿತವಾಗಿದೆ ಎಂದು ಭಾವ.

ಮಹಾಭಾರತದ ಕೆಲವು ಶ್ಲೋಕಗಳ ವಿವರಣೆ

ಕೃಷ್ಣೋ ಯಜ್ಞೈರಿಜ್ಯತೇ ಸೋಮಪೂರ್ತೈಃ
ಕೃಷ್ಣೋ ವೀರೈರಿಜ್ಯತೇ ವಿಕ್ರಮದ್ಭಿಃ ।
ಕೃಷ್ಣೋ ವನ್ಯೈರಿಜ್ಯತೇ ಸಮ್ಯಗ್ಜ್ಞಾನೈಃ
ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ ॥ ೬೨ ॥

---

೬೨. ನೋಪಕ್ರಮಮಾತ್ರಸ್ಯ ತಾತ್ಪರ್ಯನಿಶ್ಚಾಯಕತ್ವಂ ಇತ್ಯತಃ ಉಪಸಂಹಾರವಾಕ್ಯೇऽಪಿ ಭಗವತೋ ಗುಣಪೂರ್ತಿರೇವೋಚ್ಯತೇ ಇತ್ಯುಪಕ್ರಮೋಪಸಂಹಾರೈಕ್ಯರೂಪಮಸ್ತೀತ್ಯಭಿಪ್ರಾಯೇಣ ಉಪಸಂಹಾರವಾಕ್ಯಾನಿ ಪಠತಿ। –(ವಾ)

೬೨. ಧರ್ಮ್ಯಾದ್ಧಿ ಯುದ್ಧಾತ್ ಶ್ರೇಯೋऽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ । ಇತಿ ವಚನಾತ್ ಯುದ್ಧಾಖ್ಯ ಸ್ವಧರ್ಮೇಣ ಇಜ್ಯತೇ ಇತ್ಯರ್ಥಃ। – (ವಾ)

೬೨. ವನ್ಯೈಃ ವನಸ್ಥೈಃ ಸನ್ಯಾಸಿಭಿರ್ವಾನಪ್ರಸ್ಥೈಶ್ಚ। –(ವಾ)

೬೨. ವಾನಪ್ರಸ್ಥೈಃ ಯತಿಭಿರ್ವಾ –(ಜ)

೬೨. ಸಂಮ್ಯಶಾನೈಃ ಸಮ್ಯಕ್ ವೇದಾದಿಶಾಸ್ತ್ರವಿಚಾರಂ ಕುರ್ವದ್ಭಿಃ। –(ವಾ)
ಸಮ್ಯಕ್ ವಿಷ್ಣುವಿಚಾರಶೀಲೈಃ। – (ಜ); ಸಮ್ಯಕ್ ವಿಚಾರಣಶೀಲೈಃ। -(ವ)

೬೨. 'ಋಚಾಂ ತ್ವಃ ಪೋಷಮಾಸ್ತೇ' ಇತ್ಯಾದಿ ಶ್ರುತೇಃ ಋಕ್ಪೋಷಣಸಾಮಗಾನಭಾಗವತಾದಿಪೌರುಷೇಯ-ಗ್ರಂಥಾಭ್ಯಸನೇನ ಪೂಜ್ಯತೇ ಇತ್ಯರ್ಥಃ। –(ವಾ)

ಅ: ಶ್ರೀಕೃಷ್ಣನಾದ ನಾರಾಯಣನು ಸೋಮಪಾನದಿಂದ ಪಾವನರಾದವರಿಂದ, ಯಜ್ಞಗಳಿಂದ ಪೂಜಿತ; ವಿಕ್ರಮಶೀಲರಾದ ವೀರರುಗಳಿಂದ ಪೂಜಿತ; ಶಾಸ್ತ್ರವಿಚಾರಶೀಲರಾದ ವಾನಪ್ರಸ್ಥರುಗಳಿಂದ, ಜ್ಞಾನಯಜ್ಞದಿಂದ ಪೂಜಿತ; ಮೋಹರಹಿತರಾದ ಮುಕ್ತರುಗಳಿಂದ ಧ್ಯಾನಾದಿಗಳಿಂದ ಪೂಜಿತ.

ವಿ: ೧) ಆರಂಭದ ಶ್ಲೋಕದಲ್ಲಿ ಉಕ್ತವಾದ ವಿಷ್ಣುವಿನ ಮುಕ್ತಾಮುಕ್ತನವ್ಯತ್ವರೂಪ ಹಿರಿಮೆಯನ್ನೂ ಸರ್ವಗುಣಪೂರ್ಣತ್ವವನ್ನೂ ಮಹಾಭಾರತದ ಉಪಸಂಹಾರ ವಾಕ್ಯದಿಂದಲೂ ಸಮರ್ಥಿಸಿರುವರು.

೨) ಇಲ್ಲಿ ಯಜ್ಞಶೀಲರು ಕ್ಷತ್ರಿಯವೀರರು, ವನಸ್ಥರಾದ ವಾನಪ್ರಸ್ಥಸಂನ್ಯಾಸಿಗಳು ಮತ್ತು ಮುಕ್ತರು ತಮಗೆ ವಿಹಿತವಾದ ರೀತಿಯಂದಲೇ ಭಗವಂತನನ್ನು ಆರಾಧಿಸುತ್ತಿರುವರು ಎಂಬ ಪ್ರಮೇಯ ಉಕ್ತವಾಗಿದೆ.

೩) ಕೊನೆಯ ಪಾದದಲ್ಲಿ ಮುಕ್ತವಂದ್ಯತ್ವ ಮತ್ತು ಮೊದಲ ಮೂರು ಪಾದಗಳಲ್ಲಿ ಅಮುಕ್ತವಂದ್ಯತ್ವ ಇವೆಲ್ಲ ಈ ಶ್ಲೋಕದಲ್ಲಿ ಸ್ಪಷ್ಟವಾಗಿಯೇ ಉಕ್ತವಾಗಿದೆ ಎಂದು ಭಾವ.

೪) ಶ್ರೀಹರಿಯು ಸರ್ವವರ್ಣಾಶ್ರಮೋಪೇತರಾದ ಮುಕ್ತರಿಂದಲೂ ಮತ್ತು ಅಮುಕ್ತ-ರಿಂದಲೂ ಸದಾ ವಂದ್ಯನಾಗಿರುವನು ಆದ್ದರಿಂದ ಅವನೇ ಸರ್ವೋತ್ತಮ ಎಂದು ತಾತ್ಪರ್ಯ.

ಸೃಷ್ಟಿ, ಲಯಗಳ ಅಂತರಾರ್ಥ

ಸೃಷ್ಟ್ವಾ ಬ್ರಹ್ಮಾದಯೋ ದೇವಾ ನಿಹತಾ ಯೇನ ದಾನವಾಃ।
ತಸ್ಮೈ ದೇವಾಧಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥ ೬೩ ॥

ಅ: ಬ್ರಹ್ಮಾದಿ ದೇವತೆಗಳು ಯಾರಿಂದ ಸೃಷ್ಟ(ಮುಕ್ತ)ರಾಗಿರುವರೋ ಮತ್ತು ದಾನವರು ಯಾರಿಂದ ವಿನಾಶ(ತಮಸ್)ವನ್ನು ಹೊಂದಿಸಲ್ಪಡುವರೋ ಅಂತಹ ದೇವತೆಗಳಿಗೆಲ್ಲ ಆದಿದೇವನೂ, ಶಾರ್ಙ್ಗಧಾರಿಯೂ ಆದ ಶ್ರೀಹರಿಯೇ ! ನಿನಗೆ ನಮಸ್ಕಾರವು.

ವಿ: 'ಭವಘ್ನಂ' ಎಂಬಲ್ಲಿ ಸೂಚಿತವಾದ ಮುಕ್ತಿದಾತೃತ್ವ ಮತ್ತು ತವೋದಾತೃತ್ವ ಎಂಬ ಭಗವಂತನ ಗುಣಗಳನ್ನು ಸ್ಪಷ್ಟವಾದ ಮಹಾಭಾರತಶ್ಲೋಕವನ್ನು ಉದಾಹರಿಸಿ ಸಾಧಿಸುತ್ತಿರುವರು.

---

೬೨. ಅನೇನ ಸರ್ವವರ್ಣಾಶ್ರಮೋಪೇತಮುಕ್ತಾಮುಕ್ತಪೂಜ್ಯತ್ವೋಕ್ತ್ಯಾ ಸರ್ವೋತ್ಕೃಷ್ಟತ್ವಮೇವೋಚ್ಯತೇ ॥ –(ವ)

೬೩. ಭವಘ್ನಮಿತ್ಯೇತತ್ ದ್ವಿವಿಧಮೋಕ್ಷದತ್ವೇನ ವ್ಯಾಖ್ಯಾತಂ ತದ್ಭಾರತವಾಕ್ಯೇನ ದೃಢಯತಿ। –(ಜ)

ಮುಕ್ತಿ ನೀಡುವುದೇ ದೇವತೆಗಳ ಸೃಷ್ಟಿ

ಸ್ರಷ್ಟೃತ್ವಂ ದೇವಾನಾಂ ಮುಕ್ತಿಸ್ರಷ್ಟೃತ್ವಮುಚ್ಯತೇ ನಾನ್ಯತ್ ।
ಉತ್ಪತ್ತಿರ್ದೈತ್ಯಾನಾಮಪಿ ಯಸ್ಮಾತ್ ಸಮ್ಮಿತಾ(s)ವಿಶೇಷೋ೭ಯಮ್॥ ೬೪ ॥

ಅ: ಇಲ್ಲಿ ದೇವತೆಗಳನ್ನು ಸೃಷ್ಟಿಮಾಡುವುದು ಎಂದರೆ ಅವರಿಗೆ ಮುಕ್ತಿಯನ್ನು ಕೊಡುವುದು ಎಂದೇ ಹೊರತು ದೇಹವನ್ನು ಕೊಡುವುದು ಎಂಬುದಲ್ಲ; ಏಕೆಂದರೆ 'ಸೃಷ್ಟಿ ಮಾಡುವುದು' ಎಂಬುದು ದೈತ್ಯರಿಗೂ ಸಮಾನವೇ ಆಗಿದೆ; ಆದ್ದರಿಂದ ಈ ವಿಶೇಷಾರ್ಥ ತಿಳಿಯುವುದು.

ಪೂ 'ಸೃಷ್ಟ್ವಾ ಬ್ರಹ್ಮಾದಯೋ ದೇವಾಃ' ಎಂಬ ಶ್ಲೋಕದಲ್ಲಿ ಬ್ರಹ್ಮಾದಿಗಳನ್ನು ಸೃಷ್ಟಿಸುವುದು ಎಂದರೆ ಅವರಿಗೆ ದೇಹವನ್ನು ಕೊಡುವುದು ಎಂಬ ಸಾಮಾನ್ಯ ಅರ್ಥ ವಿವಕ್ಷಿತವಲ್ಲ; ಏಕೆಂದರೆ ಅಂತಹ ಸೃಷ್ಟಿಯು ದೈತ್ಯರಿಗೂ ಉಂಟು. ಆದ್ದರಿಂದ ದೇವತೆಗಳಿಗೆ 'ಸೃಷ್ಟಿ' ಎಂದರೆ ಅವರಿಗೆ ಮುಕ್ತಿ ಕೊಡುವುದು ಎಂದೇ ಅರ್ಥ. ಇಬ್ಬರಿಗೂ ಭಗವಂತನು ದೇಹಕೊಡುವವನೇ ಆದ್ದರಿಂದ ದೇವತೆಗಳಿಗೆ ಮಾತ್ರ ದೇಹಕೊಡುವವನು ಎಂದು ಅರ್ಥಮಾಡಿದಲ್ಲಿ ವಿಶೇಷಾರ್ಥ ಬರುತ್ತಿರಲಿಲ್ಲ ಎಂದು ಭಾವ.

ತಮಃಪ್ರಾಪ್ತಿಯೇ ಅಸುರರಿಗೆ ಲಯ

ಅಥ ಚ ದೈತ್ಯಹತಿಸ್ತಮಸಿ ಸ್ಥಿರಾ ನಿಯತಸಂಸ್ಥಿತಿರೇವ ನ ಚಾನ್ಯಥಾ ।
ತನುವಿಭಾಗಕೃತಿಃ ಸಕಲೇಷ್ವಿಯಂ ನ ಹಿ ವಿಶೇಷಕೃತಾ ಸುರದೈತ್ಯಗಾ॥ ೬೫ ॥

---

೬೪. ಅನೇನ ಯಥಾಸ್ತಿತಾರ್ಥಗ್ರಹಣೇ ಬ್ರಹ್ಮಾದಯೋ ದೇವಾಃ ಸೃಷ್ಟಾ ಇತಿ ವಿಶಿಷ್ಟೋಕ್ತಿರ್ನ ಘಟತೇ ಇತಿ ಬಾಧಕಂ ಸೂಚಿತಮ್ । -(ವ)

೬೪. ಯದ್ವಾ 'ಅವಿಶೇಷೋ೭ಯಂ' ಇತಿ ಪದಚ್ಛೇದಃ । ಯಸ್ಮಾದ್ದೈತ್ಯಾನಾಮಪಿ ಉತ್ಪತ್ತಿಃ ಸಂಮಿತಾ ಸಮಾನಾ ತಸ್ಮಾತ್ ಅತ್ರ ಬ್ರಹ್ಮಾದಯಃ ಸೃಷ್ಟಾ ಇತಿ ವಿಶೇಷೋಕ್ತಿರ್ನ ಸ್ಯಾತ್ ತಸ್ಮಾದ್ಬಲಾದಪೂರ್ವಾರ್ಥೋ೭ಯಂ ಲಭ್ಯತೇ ಇತಿ ।-(ವ)

೬೪. ಯಸ್ಮಾತ್ ಕಾರಣಾತ್ ಉತ್ಪತ್ತಿರ್ದೈತ್ಯಾನಾಮಪಿ ಸಂಮಿತಾ ತಸ್ಮಾತ್ ಅತ್ರ ಮುಕ್ತೇರೇವ ಸೃಷ್ಟೀತ್ಯೇವಂ ವಿಶೇಷೋ ವಿಶೇಷಾರ್ಥೋ೭ಯಂ ಜ್ಞಾಯತೇ ಇತ್ಯರ್ಥಃ । -(ವ)

೬೫. ನಿಯತಸಂಸ್ಥಿತಿಃ ನಿಯಮೇನ ಅವಸ್ಥಾನಮ್ । -(ಜ)
ನಿಯತಾ ಕಲಿಮಾರಭ್ಯ ಯಥಾಯೋಗ್ಯಾ । -(ವ)

೬೫. ತನುವಿಭಾಗಕೃತಿಃ ತನುವಿಭಾಗಕೃತಿರೂಪಹನನಂ ಸಕಲೇಷು ಸಮಾ । .... ತಮಸಿ ಸ್ಥಿರಾ ನಿಯತಸಂಸ್ಥಿತಿರೇವ ತತ್ಕ್ಷಣಕ್ಷಿಪ್ತಶಕ್ಯಾದ್ಯಸ್ತ್ರಾತನಿಪತನೈರುದ್ಗಮನಪ್ರತಿರೋಧೇ ಸತಿ ನಿಯಮಂ ಪ್ರಾಪಿತಾ ಅತ ಏವ ಸ್ಥಿರಾ ಇತ್ಯುಕ್ತಮ್ । -(ವಾ)

ಅ: ಅಹಿತ 'ದೈತ್ಯರನ್ನು ಕೊಲ್ಲುವುದು' ಎಂದರೆ ಅವರನ್ನೆಲ್ಲ ನಿಯಮೇನ ಅಂಧಂತಮಸ್ಸಿನಲ್ಲಿ ಇರಿಸುವುದು ಎಂದು ಅರ್ಥವೇ ಹೊರತು ಬರೀ 'ಕೊಲ್ಲುವುದು' ಎಂದು ಅರ್ಥವಲ್ಲ; ಏಕೆಂದರೆ ದೇಹನಾಶರೂಪವಾದ ಸಂಹಾರವು ಸುರರು, ಅಸುರರು, ಮನುಷ್ಯರು ಮೊದಲಾಗಿ ಸಕಲರಿಗೂ ಅನ್ವಯಿಸುವುದರಿಂದ ದೇವದೈತ್ಯರಲ್ಲಿನ ವಿಶೇಷವನ್ನು ತಿಳಿಸಿದಂತಾಗುವುದಿಲ್ಲ.

ವಿ: **'ನಿಹತಾ ಯೇನ ದಾನವಾಃ'** ಎಂಬ ಶ್ಲೋಕದಲ್ಲಿನ 'ಹನನ'ಕ್ಕೆ 'ಅಂಧಂತಮಸ್ಸನ್ನು ಹೊಂದಿಸುವುದು' ಎಂದು ಅರ್ಥವೇ ಹೊರತು, ಸಾಮಾನ್ಯವಾದ ಹನನ ಎಂದು ಅರ್ಥ ಮಾಡಕೂಡದು. ಏಕೆಂದರೆ ಅಂತಹ ಹನನವು ದೈತ್ಯರಿಗೆ ಮಾತ್ರವಲ್ಲದೆ ದೇವತೆಗಳಿಗೂ (ಮನುಷ್ಯರಿಗೂ) ಯಥಾಯೋಗ್ಯವಾಗಿ ಪ್ರಲಯಾದಿ ಕಾಲದಲ್ಲಿ ಪರಮಾತ್ಮನಿಂದ ಆಗಿಯೇ ಆಗುವುದು. ಆದ್ದರಿಂದ 'ಶ್ರೀಹರಿಯು ದೈತ್ಯರಿಗೆ ತಮಸ್ಸನ್ನು ಕೊಡುವವನು' ಎಂಬ ಅರ್ಥವೇ ಇಲ್ಲಿ ವಿವಕ್ಷಿತ.

ಮಹಾಭಾರತದ ಪ್ರಧಾನ ಸಂದೇಶ

ತಮಿಮಮೇವ ಸುರಾಸುರಸಂಚಯೇ
ಹರಿಕೃತಂ ಪ್ರವಿಶೇಷಮುದೀಕ್ಷಿತುಮ್ ।
ಪ್ರತಿವಿಭಜ್ಯ ಚ ಭೀಮಸುಯೋಧನೌ
ಸ್ವಪರಪಕ್ಷಭಿದಾ ಕಥಿತಾ ಕಥಾ ॥ ೬೬ ॥

ಅ: ದೇವದೈತ್ಯರ ಸಮೂಹದಲ್ಲಿ ವೇದವ್ಯಾಸರೂಪಿಯಾದ ಶ್ರೀಹರಿಯಿಂದ ಕೃತವಾದ ಈ ವಿಶೇಷವನ್ನು ಚೆನ್ನಾಗಿ ತಿಳಿಸಿಕೊಡಲೆಂದೇ ಭೀಮಸೇನ ದುರ್ಯೋಧನರನ್ನು ಎದುರಾಳಿಗಳನ್ನಾಗಿ ಮಾಡಿ ಸ್ವಪಕ್ಷ ಮತ್ತು ಪರಪಕ್ಷ ಎಂಬ ಭೇದದಿಂದ ಮಹಾಭಾರತದ ಕಥೆಯನ್ನು ತಿಳಿಸಿರುವರು.

---

೬೬. ಉದೀಕ್ಷಿತುಂ ಉದೀಕ್ಷಯಿತುಂ ಅಂತರ್ಣೀತೋ ಣಿಚ್ । –(ವ. ವಾ. ಜ.)
ದುರ್ಯೋಧನಸಂಕಟಸ್ಯ ಭೀಮಹರ್ಷಸ್ಯ ಚ ದರ್ಶನೇ ವ್ಯಾಸಸ್ಯಾಪಿರುಚಿರಸ್ತೀತಿ ಸೂಚಯಿತುಂ ಅಣಿಜಂತಪ್ರಯೋಗಃ । –(ವಾ)

೬೬. ಪ್ರತಿ ಪ್ರತಿ ಸ್ಥಿತತಯಾ ವಿಭಜ್ಯ । –(ವಾ)

೬೬. ಸ್ವಪರಪಕ್ಷಯೋರ್ಭಿದಾ । ಜಯಪರಾಜಯಾಖ್ಯಫಲಭೇದೋ ಯಸ್ಯಾಃ ಸಾ । –(ವಾ)

ವಿ: ೧) ಮೋಕ್ಷ ಮತ್ತು ತಮಸ್ಸುಗಳನ್ನು ಕ್ರಮವಾಗಿ ಸುರರು ಮತ್ತು ಅಸುರರಿಗೆ ಶ್ರೀಹರಿಯು ಕೊಡುವನು ಎಂಬ ಈ ಪ್ರಮೇಯವು ಮಹಾಭಾರತದ ಕಥೆಯನ್ನು ಒಟ್ಟಾಗಿ ಪರಿಶೀಲಿಸಿದಾಗಲೂ ಸ್ಫುಟಪಡುವುದು ಎಂಬುದಾಗಿ ಇಲ್ಲಿ ತಿಳಿಸಿರುವರು.

೨) ದೇವಪಕ್ಷದ ಪ್ರತಿನಿಧಿಯಾಗಿ ಜೀವೋತ್ತಮನಾದ ಭೀಮಸೇನನನೂ, ದೈತ್ಯಪಕ್ಷದ ಪ್ರತಿನಿಧಿಯಾಗಿ ಜೀವಾಧಮನಾದ ದುರ್ಯೋಧನನೂ ಮಹಾಭಾರತದ ಕಥೆಯಲ್ಲಿ ನಿರೂಪಿತರಾಗಿರುವರು. ಶ್ರೀಕೃಷ್ಣನಿಂದ ಭೀಮಸೇನನೇತೃತ್ವದ ದೇವಪಕ್ಷಕ್ಕೆ ಲಭಿಸುವ ಜಯವು ಅವರಿಗೆ ಮೋಕ್ಷ ದೊರಕುವುದಕ್ಕೂ ನಿದರ್ಶನ ಎಂದು ಭಾವ. ಅದರಂತೆ ದುರ್ಯೋಧನನ ವಿನಾಶ ಅಸುರರಿಗೆ ತಮಸ್ಸು ದೊರೆಯುವುದಕ್ಕೂ ನಿದರ್ಶನ.

ಮಹಾಭಾರತವು ನಾರಾಯಣ ಕಥೆ

ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ।
ಯಸ್ಯ ಪ್ರಸಾದಾದ್ವಕ್ಷ್ಯಾಮಿ ನಾರಾಯಣಕಥಾಮಿಮಾಮ್ ॥ ೬೭ ॥

ಅ: ಅಪರಿಮಿತತೇಜಸ್ಸನ್ನು ಹೊಂದಿದ ಷಡ್ಗುಣೈಶ್ವರ್ಯಸಂಪನ್ನರಾದ ಶ್ರೀವೇದವ್ಯಾಸರಿಗೆ ನಮಸ್ಕಾರವು; ಅವರ ಅನುಗ್ರಹದಿಂದಲೇ ನಾನು ಈ ನಾರಾಯಣಕಥೆಯನ್ನು ಹೇಳುತ್ತಿರುವೆನು.

ವಿ: ೧) ಈಗ ಮಹಾಭಾರತಪ್ರವಚನಪ್ರಾರಂಭದಲ್ಲಿ (ಅವಾಂತರವಕ್ತೃಗಳಾದ) ವೈಶಂಪಾಯನರಿಂದ ಮಾಡಲ್ಪಟ್ಟ ನಮಸ್ಕಾರ ಮತ್ತು ವಸ್ತು ನಿರ್ದೇಶರೂಪವಾದ ಮಂಗಲಪ್ರತಿಪಾದಕವಾಕ್ಯಗಳನ್ನು ಉಲ್ಲೇಖಿಸುತ್ತಿರುವರು; ಇಲ್ಲಿಂದ 'ಸರ್ವಾರ್ಥಾನ್ ಸಾಧಯಾಮ್ಯಹಮ್' ಎಂಬಲ್ಲಿಯವರೆಗಿನ ಮೂರು ಶ್ಲೋಕಗಳು ವೈಶಾಂಪಾಯನೋಕ್ತಮಂಗಲಶ್ಲೋಕಗಳು.

---

೬೭. ಇದಾನೀಂ ಗ್ರಂಥಾದೌ ಅವಾಂತರವಕ್ತಾ ವೈಶಂಪಾಯನೇನ ಕೃತನಮಸ್ಕಾರವಸ್ತುನಿರ್ದೇಶಾತ್ಮಕ-ಮಂಗಲಪ್ರತಿಪಾದಕವಾಕ್ಯಾನಿ ಪಠತಿ । ನಮೋ ಭಗವತೇ ಇತ್ಯಾರಭ್ಯ ಸರ್ವಾರ್ಥಾನ್ ಸಾಧಯಾಮ್ಯಹಂ ಇತ್ಯಂತೇನ ಗ್ರಂಥೇನ । –(ವಾ)

೬೭. ತಿಳಿಯಹೇಳುವೆ ಕೃಷ್ಣಕಥೆಯನು .... –ಕುಮಾರವ್ಯಾಸ(೧/೧/೧೩)

೬೭. ಅತ್ರ ಭಾರತಮುದ್ದಿಶ್ಯ 'ಇಮಾಂ ನಾರಾಯಣಕಥಾಂ' ಇತಿ ನಾರಾಯಣಕಥಾತ್ವವಿಧಾನಾತ್ ತತ್ಪ್ರತಿ-ಪಾದಕತ್ವಮೇವ ಗಮ್ಯತೇ ಇತಿ ಭಾವಃ । –(ವ)

೬೭. 'ಸುರಗುರುಂ', 'ವಿಭುಂ', 'ಈಶಂ' ಇತ್ಯೇತತ್ ವೈಶಂಪಾಯನಕೃತಾದ್ಯಪದ್ಯೇನ ಉಪಪಾದಯತಿ। ನಮ ಇತಿ । ಭಗವತೇ ಇತಿ ಉತ್ಕೃಷ್ಟಗುಣವತ್ವಂ ಅಮಿತತೇಜಸೇ ಇತಿ ಸಕಲಾತ್ಮಶಕ್ತಿತ್ವಮುಕ್ತಂ ಭವತಿ । ಯಸ್ಯ ಪ್ರಸಾದಾದಿಮಾಂ ನಾರಾಯಣಕಥಾಂ ವಕ್ಷ್ಯಾಮಿತ್ಯನೇನ ಸುರಗುರುಮಿತ್ಯೇತತ್ ಪ್ರತಿಪಾದಿತಂ ಭವತಿ । –(ಜ)

೨) ಇಲ್ಲಿ ಮಹಾಭಾರತವನ್ನು 'ನಾರಾಯಣಕಥಾ' ಎಂದು ಕರೆದಿರುವುದು ಗಮನಾರ್ಹ; ಮಹಾಭಾರತವು ವಿಷ್ಣುಸರ್ವೋತ್ತಮತ್ವಪ್ರತಿಪಾದಕವೆಂಬುದು 'ನಾರಾಯಣಕಥಾ' ಎಂಬ ಪದದಿಂದಲೇ ಸೂಚಿತವಾಗಿದೆ ಎಂದು ಭಾವ.

ಶ್ರೀಹರಿಯು ಮಹಾಭಾರತದಲ್ಲಿ ವರ್ಣಿತನಾಗಿರುವ ಪರಿ

ವಾಸುದೇವಸ್ತು ಭಗವಾನ್ ಕೀರ್ತ್ಯತೇऽತ್ರ ಸನಾತನಃ ।
ಪ್ರತಿಬಿಂಬಮಿವಾದರ್ಶೇ ಯಂ ಪಶ್ಯಂತ್ಯಾತ್ಮನಿ ಸ್ಥಿತಮ್ ॥ ೬೮ ॥

ಅ: ಋಷಿಗಳು ಜೀವನಲ್ಲಿ ಅಂತರ್ಯಾಮಿಯಾಗಿರುವ ಯಾರನ್ನು ಕನ್ನಡಿಯಲ್ಲಿನ ಪ್ರತಿಬಿಂಬದಂತೆ ಕಾಣುವರೋ, ಅಂತಹ ಸನಾತನನೂ, ಭಗವಂತನೂ ಆದ ವಾಸುದೇವನು ಇದರಲ್ಲಿ ಕೀರ್ತಿತನಾಗಿರುವನು.

ಆ: ಭಾರತದ ಈ ಶ್ಲೋಕದಲ್ಲಿ ಸನಾತನನಾದ ಭಗವಂತನು ಕೀರ್ತಿತನಾಗಿರುವನು ಎಂಬುದು ಸ್ಪಷ್ಟವಾಗಿ ಉಕ್ತವಾಗಿರುವುದರಿಂದ ಸಮಸ್ತಭಾರತವೂ ವಿಷ್ಣುಸರ್ವೋತ್ತಮತ್ವಪ್ರತಿಪಾದಕ–ವೆಂಬುದು ಸೂಚಿತ.

ಶ್ರೀಹರಿಸರ್ವೋತ್ತಮತ್ವದ ಪ್ರಯೋಜನ

ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ।
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥ ೬೯ ॥

---

೬೮. ಜೀವೇ ಸ್ಥಿತಸ್ತು ಭಗವಾನ್ ದೃಶ್ಯತೇ ಜ್ಞಾನದೃಷ್ಟಿಭಿಃ ।
ಆದರ್ಶೇ ಮುಖವತ್ ಸಮ್ಯಕ್ ..... ॥ – ಕಾಠಕಭಾಷ್ಯ

೬೮. ಭಾರತ (ಶಾಂತಿ.೩೪೩/೨೯), 'ಋಷಯೋ ಅಂತಃಪ್ರಕಾಶಾಃ' ಇತಿ ಶ್ರುತೇಃ । –(ಜ)

೬೮. ಅತ್ರ ಭಾರತೇ 'ಸನಾತನೋ ಭಗವಾನ್ ವಾಸುದೇವಃ ಕೀರ್ತಿತಃ, ಇತ್ಯುಕ್ತ್ವಾ' ಅಶೇಷಭಾರತಸ್ಯ ಅನಾದಿನಿತ್ಯತ್ವಪರಮೈಶ್ವರ್ಯಾದ್ಯನಂತಮಹಿಮೋಪೇತತ್ವೇನ ಭಗವತ್ಪ್ರತಿಪಾದಕತ್ವಮವಗಮ್ಯತೇ ॥ –(ವ)

೬೮. ಈ ಶ್ಲೋಕ ಇಂದಿನ ಭಾರತಪ್ರತಿಗಳಲ್ಲಿ ಸ್ವಲ್ಪವ್ಯತ್ಯಾಸದೊಂದಿಗೆ ದೊರೆಯುತ್ತದೆ.

೬೯. ಭಾರತ (ಆದಿ. ೧/೨೫೬)

೬೯. ಈ ಮೂರು ಶ್ಲೋಕಗಳಲ್ಲಿ 'ನಮೋ ಭಗವತೇ ತಸ್ಮೈ' ಎಂಬ ಶ್ಲೋಕವು ಎಲ್ಲ ಮುದ್ರಿತ ಭಾರತಪ್ರತಿಗಳಲ್ಲೂ ದೊರೆಯುತ್ತದೆ; ಪಿ.ಪಿ.ಎಸ್. ಶಾಸ್ತ್ರಿಗಳ ಪ್ರಕಾಶನ (ಮದ್ರಾಸ)ದ ಮುದ್ರಿತ ಭಾರತ ಪ್ರತಿಯಲ್ಲಿ ಈ ಮೂರು ಶ್ಲೋಕಗಳೂ ಯಥಾವತ್ತಾಗಿಯೇ ದೊರೆಯುವವು.

ಅ: ನಾರಾಯಣನಿಗೆ ಸಮನಾದ ವಸ್ತುವು ಈಗಿಲ್ಲ; ಹಿಂದೂ ಇರಲಿಲ್ಲ, ಮುಂದೂ ಇರುವುದಿಲ್ಲ; ಎಂಬ ಯಥಾರ್ಥವಾಕ್ಯದಿಂದ ನಾನು ಸಕಲ ಅರ್ಥಗಳನ್ನು ಸಾಧಿಸುವೆನು.

ಎ: ೧) ಇಲ್ಲಿಯ 'ಸರ್ವಾರ್ಥಾನ್' ಎಂಬ ಪದಕ್ಕೆ 'ವಿಷ್ಣುಸರ್ವೋತ್ತಮತ್ವಾದಿ ಪ್ರಮೇಯ–ಗಳನ್ನು' ಎಂದೂ, ಇದಕ್ಕೆ ಅನುಗುಣವಾಗಿಯೇ ಸರ್ವಶಾಸ್ತ್ರಗಳಲ್ಲಿನ ಅರ್ಥಗಳನ್ನು ಎಂದೂ, ಇಂತಹ ಸರ್ವಶಾಸ್ತ್ರಾರ್ಥವಾದ ವಿಷ್ಣುಸರ್ವೋತ್ತಮತ್ವಜ್ಞಾನದಿಂದ ಸಕಲ ಪುರುಷಾರ್ಥಗಳನ್ನೂ ಎಂದೂ ಬಗೆಬಗೆಯಾಗಿ ಅರ್ಥ ಮಾಡಬಹುದು.

೨) ಇದನ್ನು ಶ್ರೀಮದಾಚಾರ್ಯರು ತಮ್ಮ **'ಮಾಯಾವಾದ ಖಂಡನ'** ಗ್ರಂಥದ ಕೊನೆಯಲ್ಲೂ ಶ್ರೀಅಕ್ಷೋಭ್ಯತೀರ್ಥರು ತಮ್ಮ **ವೇದಸಾರದ** ಕೊನೆಯಲ್ಲೂ ಉದಾಹರಿಸಿರುವರು.

ಮಹಾಭಾರತ ನಿರ್ಣಯಕ್ಕೆ ಪ್ರತಿಜ್ಞೆ

ಆದ್ಯಂತಯೋರಿತ್ಯವದತ್ ಸ ಯಸ್ಮಾ–
ದ್ವ್ಯಾಸಾತ್ಮಕೋ ವಿಷ್ಣುರುದಾರಶಕ್ತಿಃ ।
ತಸ್ಮಾತ್ ಸಮಸ್ತಾ ಹರಿಸದ್ಗುಣಾನಾಂ
ನಿರ್ಣೀಯತೇ ಭಾರತಗಾ ಕಥೈಷಾ ॥ ೭೦ ॥

ಅ: ವೇದವ್ಯಾಸರೂಪದಿಂದ ಉದಾರಶಕ್ತಿಯಾದ ವಿಷ್ಣುವು ಆದಿ ಮತ್ತು ಅಂತ್ಯಗಳಲ್ಲಿ ಹೀಗೆ ಹೇಳಿರುವುದರಿಂದ ಈ ಸಮಸ್ತ ಭಾರತದ ಕಥೆಯು ಶ್ರೀಹರಿಯ ಸದ್ಗುಣಗಳ ನಿರ್ಣಯಕ್ಕೆಂದೇ ಪ್ರವೃತ್ತವಾಗಿದೆ ಎಂದಾಗುವುದು.

---

೭೦. ಆದ್ಯಂತಯೋಃ – ಆದ್ಯಂತಯೋಃ ಮಂಗಲಪದ್ಯಾನಾಂ ಆದೌ ಅಂತೇ ಚ ಇತ್ಯರ್ಥಃ । ಇದಂ ಚೋಪ-ಲಕ್ಷಣಮ್ । ಆದೌ ..... 'ನಾಸ್ತಿ ನಾರಾಯಣಸಮಂ' ಇತ್ಯಂತೇ ಪದ್ಯೈಃ ಹರಿಸರ್ವೋತ್ತಮತ್ವಮುಪಕ್ರಮ್ಯ ಮಧ್ಯೇ ಮಧ್ಯೇ ಚ ..... 'ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ।', 'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।', 'ಯಸ್ಮಾತ್ ಕ್ಷರಮತೀತೋSಹಂ ಅಕ್ಷರಾದಪಿ ಚೋತ್ತಮಃ । ಅತೋSಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ।', 'ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ । ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥', 'ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ । ಪೂತಾತ್ಮ ಪರಮಾತ್ಮಾ ಚ ಮುಕ್ತಾನಾಂ ಪರಮಾಗತಿಃ ॥', 'ಏಷಃ ನಿಷ್ಕಂಟಕಃ ಪಂಥಾ ಯತ್ರ ಸಂಪೂಜ್ಯತೇ ಹರಿಃ । ಕುಪಥಂ ತಂ ವಿಜಾನೀಯಾದ್ಗೋವಿಂದರಹಿತಾಗಮಮ್॥', 'ಅನಾಶ್ರಿತ್ಯೋಚ್ಚ್ರಯೋ ನಾಸ್ತಿಮುಖ್ಯಮಾಶ್ರಯಮಾಶ್ರಯೇ ।', 'ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ । ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥' ಇತ್ಯಾದಿನಾ ಹರಿಸರ್ವೋತ್ತಮತ್ವಸ್ಯೈವ ಪ್ರಪಂಚಿತತ್ವಾತ್ । –(ವಾ.)

ಆದ್ಯಂತಯೋಃ – ಆದೌ ಅಂತೇ ಚ । –(ಜ.)

ಆದ್ಯಂತಯೋಃ – ಭಾರತಸ್ಯ ಆದೌ ಅಂತೇ ಚ । –(ವ.)

೭೦. ಕ್ವಚಿತ್ತು 'ನಿರ್ಣೀತಯೇ' ಇತಿ ಪಾಠಃ । ತತ್ರ ನಿರ್ಣಯಾಯ ಭವತೀತಿ ಸುಗಮಃ । –(ಜ.)

ಎ: ಹೀಗೆ ಆದ್ಯಂತಗಳಲ್ಲೂ ಮಧ್ಯದ ಎಲ್ಲ ಭಾಗಗಳಲ್ಲೂ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾದ ಇಂತಹ ನಿರವಕಾಶವಾದ ವಾಕ್ಯಗಳು ತುಂಬಿರುವುದರಿಂದ ಮಹಾಭಾರತವು ಸರ್ವಾತ್ಮನಾ ವಿಷ್ಣುಸರ್ವೋತ್ತಮತ್ವಪ್ರತಿಪಾದಕವಾದ ಗ್ರಂಥ ಎಂಬುದು ನಿಶ್ಚಿತ ಎಂದು ಭಾವ.

ಹರಿವಂಶದ ವಾಕ್ಯಗಳ ಉಲ್ಲೇಖ

ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ॥ ೭೧ ॥

ಅ: ತೋಳುಗಳನ್ನೆತ್ತಿ ಶಪಥಪೂರ್ವಕವಾಗಿ 'ಸತ್ಯ, ಸತ್ಯ, ಸತ್ಯ' ಎಂಬುದಾಗಿ ಮತ್ತೆ ಮತ್ತೆ ನಾನು ಹೇಳುವೆ; ''ವೇದಶಾಸ್ತ್ರಗಳಿಗಿಂತ ಮಿಗಿಲಾದ ಶಾಸ್ತ್ರವಿಲ್ಲ; ಕೇಶವನಿಗಿಂತ ಮಿಗಿಲಾದ ದೇವರಿಲ್ಲ.''

ವಿ: ೧) ಇದು ಹರಿವಂಶದ ಆಶ್ಚರ್ಯಪರ್ವದಲ್ಲಿನ ಮಾತು.

೨) ಪ್ರತಿಪಾದಕಗಳಲ್ಲಿ ವೇದಶಾಸ್ತ್ರ ಶ್ರೇಷ್ಠ; ಪ್ರತಿಪಾದ್ಯಗಳಲ್ಲಿ ವಿಷ್ಣು ಶ್ರೇಷ್ಠ.

''ವಿಜ್ಞೇಯಂ ಪರಮಂ ಬ್ರಹ್ಮ ಜ್ಞಾಪಿಕಾ ಪರಮಾ ಶ್ರುತಿಃ ॥''

೩) ತಮ್ಮ ಮಾತು ಪರಮಸತ್ಯ ಎಂಬುದನ್ನು ಸೂಚಿಸಲು 'ಸತ್ಯ' ಎಂಬುದಾಗಿ ಮೂರುಸಲ ಹೇಳಿರುವರು. ಮತ್ತು ಬಾಹುಗಳನ್ನೆತ್ತಿ ಹೇಳಿರುವರು.

---

೭೧. ಇತ್ಯಂತೇ ಆಶ್ಚರ್ಯಪರ್ವಣಿ ಚ ಸದೃಷ್ಟಾಂತಂ ಶಪಥಪೂರ್ವಕಂ ಉಚ್ಛ್ರಿತಬಾಹುಯುಗಂ ಯಥಾ ಭವತಿ ತಥಾ ಹರಿಸರ್ವೋತ್ತಮಸ್ಯೈವೋಪಪಾದಿತತ್ವಾಚ್ಚ । ಆದಿಮಧ್ಯಾವಸಾನಪದ್ಯಾನುಸಾರೇಣ ಸರ್ವಸ್ಯಾಪಿ ಗ್ರಂಥಸ್ಯ ಯೋಜನೀಯತ್ವಾತ್ । ಪಾದಾಧಿಕಲಕ್ಷಭಾರತವಾಕ್ಯಾನ್ಯಪಿ ಹರೇಃ ಸರ್ವೋತ್ತಮತ್ವ ಏವ ತಾತ್ಪರ್ಯವಂತಿ । ಉಪಕ್ರಮೋಪಸಂಹಾರಾಭ್ಯಾಸಾಪೂರ್ವತಾಫಲಾರ್ಥವಾದೋಪಪತ್ತೀನಾಂ ಮಹಾತಾತ್ಪರ್ಯನಿರ್ಣಾಯಕತ್ವಸ್ಯ ಸಕಲವಿದ್ವಜ್ಜನಸಂಮತತ್ವಾದಿತ್ಯಪಿ ಜ್ಞೇಯಮ್ । –(ವಾ.)

೭೧. ಪ್ರತಿಪಾದಕೇಷು ವೇದಶಾಸ್ತ್ರಾತ್ ಪರಂ ನಾಸ್ತಿ। ಪ್ರತಿಪಾದ್ಯೇಷು ಕೇಶವಾತ್ ಪರಂ ದೈವಂ ಪ್ರತಿಪಾದ್ಯಂ ನಾಸ್ತಿ ॥ –(ಜ)

೭೧. ಶಪಥದಾರ್ಢ್ಯಾರ್ಥಂ ತ್ರಿಃ ಸತ್ಯಮಿತಿ ಭುಜಮುದ್ಧೃತ್ಯ ಚೋಕ್ತಮ್ । –(ಜ)

೭೧. ವೇದಾಃ ಋಗಾದ್ಯಾಃ ಶಾಸ್ತ್ರಂ ಮೀಮಾಂಸಾಶಾಸ್ತ್ರಮ್ । ತತಃ ದ್ವಂದ್ವೈಕವದ್ಭಾವಃ । ವೇದರೂಪಂ ಶಾಸ್ತ್ರಂ ಚ। –(ಜ)

೭೧. ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಃ ಶಂಕರ ಏವ ಚ ।
ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್ ॥ -ಗೀತಾಭಾಷ್ಯೋದ್ಧೃತಪುರಾಣವಚನ

೭೧. ಭಾರತ (ಆದಿ. ೧/೧೮)

೪) 'ವೇದ' ಶಬ್ದಕ್ಕೆ ಋಗಾದಿವೇದಗಳು ಮುಖ್ಯತಃ ಪಂಚಮವೇದ ಭಾರತಗ್ರಾಹ್ಯ (ನಿರ್ಣೇಯ) ಮತ್ತು ಶಾಸ್ತ್ರ ಶಬ್ದಕ್ಕೆ ಬ್ರಹ್ಮಮೀಮಾಂಸಾಶಾಸ್ತ್ರ (ನಿರ್ಣಾಯಕ) ಎಂದು ಅರ್ಥ.

೫) ಬ್ರಹ್ಮರುದ್ರಾದಿಗಳಿಗೆ ಪ್ರವರ್ತಕನಾದ್ದರಿಂದಲೇ ವಿಷ್ಣುವು ಸರ್ವೋತ್ತಮ ಎಂಬುದು 'ಕೇಶವ' ಪದದಿಂದ ಸೂಚಿತವಾಗಿದೆ.

ಮಹಾಭಾರತದಲ್ಲಿ ಹರಿಸರ್ವೋತ್ತಮತ್ವ

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥ ೭೨ ॥

ಅ: ಸರ್ವಶಾಸ್ತ್ರಗಳನ್ನು ಮಥನ ಮಾಡಿ ಮತ್ತೆ ಮತ್ತೆ ವಿಚಾರ ಮಾಡಿದರೆ ಮುಖ್ಯವಾಗಿ ಸುನಿಶ್ಚಿತವಾಗುವ ಅರ್ಥ ಇದೊಂದೇ; ''ನಾರಾಯಣನು ಸದಾ ಧ್ಯಾನಾರ್ಹನಾಗಿರುವನು.''

ವಿ: ೧) ಇದು ಮಹಾಭಾರತದ ಅನುಶಾಸನಪರ್ವದ ವಚನ. – (೧೨೪/೧೨)

ಹರಿಸ್ಮರಣೆ ಮುಖ್ಯವಿಧಿ - ವಿಸ್ಮರಣೆ ಮುಖ್ಯ ನಿಷೇಧ

ಸ್ಮರ್ತವ್ಯಃ ಸತತಂ ವಿಷ್ಣುರ್ವಿಸ್ಮರ್ತವ್ಯೋ ನ ಜಾತುಚಿತ್ ।
ಸರ್ವೇ ವಿಧಿನಿಷೇಧಾಃ ಸ್ಯುರೇತಯೋರೇವ ಕಿಂಕರಾಃ ॥ ೭೩ ॥

---

೭೨. ಸರ್ವಶಾಸ್ತ್ರಾಣೀತ್ಯುಭಯತ್ರ ಸಂಬಧ್ಯತೇ । ಆಲೋಡ್ಯ ಸಾಮಾನ್ಯತೋ ದೃಷ್ಟ್ವಾ ಉಪಕ್ರಮೋಪಸಂಹಾರಾದ್ಯೈರ್ಲಿಂಗೈರ್ವಿಚಾರ್ಯ ಚ । ಯದ್ವಾ, ಆಲೋಡ್ಯ ಮಥಿತ್ವಾ । ತದೇವ ಸ್ಪಷ್ಟಯತಿ । ಪುನಃ ಪುನಃ ಸರ್ವಶಾಸ್ತ್ರಾಣಿ ವಿಚಾರ್ಯೈವ ॥ –(ಜ)

೭೨. 'ಸರ್ವೋತ್ಕೃಷ್ಟತ್ವೇನ' ಇತಿ ಪೂರಣೀಯಮ್ । –(ವ)

೭೨. ಶ್ರೀಮದಾಚಾರ್ಯರು ಈ ಶ್ಲೋಕಗಳನ್ನು ತಮ್ಮ 'ಸದಾಚಾರಸ್ಮೃತಿ' ಮತ್ತು 'ಕೃಷ್ಣಾಮೃತಮಹಾರ್ಣವ' ಗ್ರಂಥಗಳಲ್ಲೂ ಉಲ್ಲೇಖಿಸಿರುವರು.

೭೩. ಸರ್ವೇ ವಿಧಿನಿಷೇಧಾಃ = ಸ್ನಾನಸಂಧ್ಯಾವಂದನಾದಿವಿಧಯಃ । ಪಲಾಂಡುಭಕ್ಷಣಾದಿನಿಷೇಧಾಃ । ಕಿಂಕರಾ ಏವ। ಅಂಗಾನಿ ಏವ । ನ ಸಾಕ್ಷಾದ್ವಿಷ್ಣುಪ್ರೀತಿಜನಕಾನಿ । –(ಜ)

೭೩. ಕಿಂಕರಾಃ = ದಾಸೀಭೂತಾಃ । ಅನಯೋರ್ವಿಧಿನಿಷೇಧಯೋಃ ಸಾಕ್ಷಾನ್ಮೋಕ್ಷಾಂಗತ್ವಾತ್ । ಅನ್ಯೇಷಾಂ ವಿಧೀನಾಂ ಏತದ್ವಿಧಿವಿಹಿತಸ್ಮರಣಯೋಗ್ಯಚಿತ್ತಾಖ್ಯಗೃಹಶೋಧಕತ್ವೇನ ಕಿಂಕರತ್ವಾತ್ ನಿಷೇಧಾನಾಂ ಚ ಏತನ್ನಿಷೇಧಪ್ರತಿಯೋಗಿಭೂತವಿಸ್ಮರಣಸಹಕಾರಿದೋಷನಿವಾರಕತ್ವೇನ ಸಾಕ್ಷಾದ್ರಾಮವಿರೋಧಿರಾವಣಸಹಾಯಭೂತದೈತ್ಯಕಟಕಮುಖಮೋಟಕಕಪಿಕಟಕವತ್ ಪರಂಪರಯಾ । ಏವಮೇತನ್ನಿಷೇಧಕಿಂಕರತ್ವಾದಿತಿ ಭಾವಃ । –(ವಾ)

ಯಸ್ಯ ಸ್ಮರಣಮಪಿ ಪುರುಷಾರ್ಥಜನಕಮ್ । ವಿಸ್ಮರಣಮನರ್ಥಾಪಾದಕಂ ಸ ಉತ್ತಮ ಇತಿ ಕಿಮು ವಕ್ತವ್ಯಮಿತ್ಯರ್ಥಃ । –(ಜ)

ಅ: ವಿಷ್ಣುವನ್ನು ಸರ್ವಕಾಲದಲ್ಲೂ ಸ್ಮರಿಸಲೇಬೇಕು; ಅವನನ್ನೆಂದೂ ಮರೆಯಕೂಡದು; ಬೇರೆಲ್ಲ ವಿಧಿನಿಷೇಧಗಳೂ ಇವಕ್ಕೆ ದಾಸೀಭೂತವಾಗಿವೆ.

ವಿ: ೧) ವಿಷ್ಣುಸ್ಮರಣೆಗಿಂತ ಮುಖ್ಯವಾದ ವಿಧಿ ಇಲ್ಲ ; ವಿಷ್ಣುವಿಸ್ಮರಣೆಗಿಂತ ಮಿಗಿಲಾದ ನಿಷೇಧವಿಲ್ಲ. ಬೇರಾರ ಸ್ಮರಣೆಗೂ ಇಷ್ಟು ಮಹತ್ತ್ವವಿಲ್ಲದ್ದರಿಂದ ವಿಷ್ಣುವೇ ಸರ್ವೋತ್ತಮ ಎಂದೂ, ಇವೇ ಸಾಕ್ಷಾನ್ಮೋಕ್ಷಾಂಗಗಳು ಎಂದೂ ಭಾವ.

೨) ಇತರ ವಿಧಿಗಳು ಎಂದರೆ ಸ್ನಾನಸಂಧ್ಯಾದಿಗಳು ಎಂದೂ, ಇತರ ನಿಷೇಧಗಳು ಎಂದರೆ ಈರುಳ್ಳಿ ತಿನ್ನುವುದು ಮೊದಲಾದವುಗಳು ಎಂದೂ ಅರ್ಥ.

೩) ಇತರ ಸಕಲ ವಿಧಿನಿಷೇಧಗಳನ್ನು ಸರಿಯಾಗಿ ಗಮನಿಸಿದರೂ, ಇದನ್ನು ಮಾತ್ರ ಗಮನಿಸದಿದ್ದಲ್ಲಿ ಅವೆಲ್ಲಾ ವ್ಯರ್ಥವಾಗಿ ದುರಂತವೇ ಸಂಭವಿಸುವುದು ಎಂದೂ ಈ ಎಲ್ಲವುಗಳ ಆಚರಣೆ ಮುಖ್ಯವಾಗಿ ವಿಷ್ಣುಸ್ಮರಣೆಗೆ ಸದಾ ಅವಕಾಶವಾಗಬೇಕು, ವಿಸ್ಮರಣೆ ಎಂದೂ ಒದಗಕೂಡದು ಎಂಬುದಕ್ಕಾಗಿಯೇ ಎಂದೂ ಭಾವ.

೪) ಈ ಶ್ಲೋಕವು ಪದ್ಮಪುರಾಣದ ಉತ್ತರಖಂಡ(ವಾಸುದೇವಸಹಸ್ರನಾಮಸ್ತೋತ್ರ)ದಲ್ಲೂ ದೊರೆಯುತ್ತದೆ (ಅ. ೭೧, ಶ್ಲೋ. ೧೦೮).

ಶ್ರೀಹರಿಯು ಅಗಮ್ಯ ಮಹಿಮ

ಕೋ ಹಿ ತಂ ವೇದಿತುಂ ಶಕ್ತೋ ಯೋ ನ ಸ್ಯಾತ್ ತದ್ವಿಧೋಽಪರಃ ।
ತದ್ವಿಧಶ್ಚಾಪರೋ ನಾಸ್ತಿ ತಸ್ಮಾತ್ ತಂ ವೇದ ಸ ಸ್ವಯಮ್ ॥ ೭೪ ॥

ಅ: ಆ ನಾರಾಯಣನನ್ನು ಅವನಂತೆ ಇರದ ಬೇರೆ ಯಾರು ತಾನೇ ತಿಳಿಯಬಲ್ಲರು? ಅವನಂತಹವರು ಬೇರೆ ಯಾರೂ ಇಲ್ಲವಾದ್ದರಿಂದ ಅವನು ತನ್ನನ್ನು ತಾನು ಮಾತ್ರವೇ ತಿಳಿದಿರುವನು.

---

೭೪. ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ॥ –ಗೀತಾ(೭/೭)

೭೪. ಸ್ವಯಮೇವಾತ್ಮನಾऽऽತ್ಮಾನಂ ವೇತ್ಥ ತ್ವಂ ಪುರುಷೋತ್ತಮ । –ಗೀತಾ(೧೦/೧೫)
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ । –ಗೀತಾ(೪/೫)

೭೪. ಯಃ ತದ್ವಿಧಃ ವಿಷ್ಣುಸದೃಶಃ ನ ಸ್ಯಾನ್ನ ಭವತಿ ಸ ಕಸ್ತಂ ವಿಷ್ಣುಂ ವೇದಿತುಂ ಶಕ್ತೋ ನ ಕೋऽಪೀತ್ಯೇತದ್ಧಿ-ಪ್ರಮಾಣಸಿದ್ಧಮ್ । – (ಸ.)

ಹರಿಯನ್ನು ಹರಿಯೇ ಬಲ್ಲ

ಕೋ ಹಿ ತಂ ವೇದಿತುಂ ಶಕ್ತೋ ನಾರಾಯಣಮನಾಮಯಮ್ ।
ಋತೇ ಸತ್ಯವತೀಸೂನೋಃ ಕೃಷ್ಣಾದ್ವಾ ದೇವಕೀಸುತಾತ್ ॥ ೭೫ ॥

ಅ: ಸತ್ಯವತೀಸುತ(ವಾಸಿಷ್ಠಕೃಷ್ಣ)ವೇದವ್ಯಾಸರು ಮತ್ತು ದೇವಕೀಪುತ್ರ(ಯಾದವ)ಕೃಷ್ಣ ಇವರ ಹೊರತು ಬೇರೆ ಯಾವನು ತಾನೇ ದೋಷದೂರನಾದ ಆ ನಾರಾಯಣನನ್ನು ತಿಳಿಯಲು ಶಕ್ತನಾದಾನು?

ವಿ: ೧) ನಾರಾಯಣನು ತಾನು ಮಾತ್ರವೇ ತನ್ನನ್ನು ಸಾಕಲ್ಯೇನ ತಿಳಿಯಬಲ್ಲ ಎಂಬುದನ್ನು ಈ ಶ್ಲೋಕದಲ್ಲಿ ವಿವರಿಸಿರುವರು; ವೇದವ್ಯಾಸರು ಮತ್ತು ಕೃಷ್ಣ ಇಬ್ಬರೂ ನಾರಾಯಣಾವತಾರರು ಮತ್ತು ಅವರು ಮಾತ್ರ ನಾರಾಯಣನನ್ನು ತಿಳಿಯುವರು; ಎಂಬ ಎರಡು ವಿಚಾರಗಳು ಇದರಿಂದ ಸ್ಫುಟಪಡುವವು.

೨) ಇಲ್ಲಿಯ 'ಕೃಷ್ಣಾತ್' ಎಂಬುದನ್ನು 'ಸತ್ಯವತೀಸೂನೋಃ' ಮತ್ತು 'ದೇವಕೀಸೂನೋಃ' ಎಂಬ ಎರಡು ಪದಗಳ ಜೊತೆಗೂ ಅನ್ವಯ ಮಾಡಿಕೊಳ್ಳಬೇಕು; ಒಬ್ಬರು 'ವಾಸಿಷ್ಠಕೃಷ್ಣ'; ಇನ್ನೊಬ್ಬ 'ಯಾದವಕೃಷ್ಣ'.

೩) ಲಕ್ಷ್ಮೀ ಮೊದಲಾದ ಪ್ರತಿಯೊಬ್ಬರ ಜ್ಞಾನದ ಲಕ್ಷಣವನ್ನು ಹೇಳುವಾಗಲೂ 'ಈಶ್ವರಾದನ್ಯತ್ರ' ಎಂಬುದಾಗಿ ಪ್ರಮಾಣಲಕ್ಷಣಟೀಕಾ ಮತ್ತು ಪ್ರಮಾಣಪದ್ಧತಿಗಳಲ್ಲಿ ಹೇಳಿರುವುದನ್ನು ಇಲ್ಲಿ ಗಮನಿಸಬೇಕು.

೪) ಇದರಂತೆ ಪರಮಾತ್ಮನ ಸಕಲ ಅವತಾರರೂಪಗಳಿಗೂ ಮೂಲರೂಪದ ಜ್ಞಾನ ಪರಿಪೂರ್ಣವಾಗಿರುತ್ತದೆ; ಮೂಲರೂಪಕ್ಕೆ ಅವತಾರರೂಪಗಳ ಜ್ಞಾನ ಮತ್ತು ಅವತಾರ–ರೂಪಗಳಿಗೆ ಪರಸ್ಪರ ಜ್ಞಾನವು ಪೂರ್ಣವಾಗಿರುತ್ತದೆ ಎಂದೂ ತಿಳಿಯಬೇಕು.

ಶ್ರೀಹರಿಯ ಜಗದ್ವ್ಯಾಪಾರದ ಪರಿ

ಅಪ್ರಮೇಯೋऽನಿಯೋಜ್ಯಶ್ಚ ಸ್ವಯಂ ಕಾಮಗಮೋ ವಶೀ ।
ಮೋದತ್ಯೇಷ ಸದಾ ಭೂತೈರ್ಬಾಲಃ ಕ್ರೀಡನಕೈರಿವ ॥ ೭೬ ॥

---

೭೫. ಸತ್ಯವತೀಸೂನೋಃ ಕೃಷ್ಣಾತ್ ದೇವಕೀಸುತಾತ್ ಕೃಷ್ಣಾದ್ವಾ ಋತೇ ಇತಿ ಸಂಬಂಧಃ । –(ಜ)

೭೬. ಸ್ವಯಂ ಕಾಮಗಮಃ ಇತ್ಯಸ್ಯ ಸ್ವಯಮೇವೇಚ್ಛಯಾ ಗಚ್ಛತೀತಿ ಸ್ವಯಂ ಕಾಮಗಮಃ ಸ್ವತಂತ್ರಃ ಇತ್ಯರ್ಥಃ ॥ -(ವಾ.)

೭೬. ಭೂತೈಃ = ನಿಮಿತ್ತೈಃ । ಭೂತಸರ್ಜನವಿನಾಶಾದಿ ಕುರ್ವನ್ ಇತ್ಯರ್ಥಃ । ಕ್ರೀಡನಕೈಃ ಕ್ರೀಡಾಸಾಧನೈಃ । -(ಜ.)

ಅ: ಶ್ರೀಹರಿಯು ಯಾರಿಂದಲೂ ಸಾಕಲ್ಯೇನ ತಿಳಿಯಲಾಗದವನು; ಬೇರೆ ಯಾರಿಂದಲೂ ನಿಯಮಿಸಲ್ಪಡದವನು ; ಸ್ವೇಚ್ಛಾಪ್ರವೃತ್ತಿಯನ್ನು ಹೊಂದಿದ ಸ್ವತಂತ್ರನು, ಸರ್ವವನ್ನೂ ವಶದಲ್ಲಿರಿಸಿಕೊಂಡಿರುವವನು; ಬ್ರಹ್ಮಾದಿ ಚೇತನರೊಂದಿಗೆ ಸೃಷ್ಟ್ಯಾದಿಗಳನ್ನು ಮಾಡುತ್ತ ಬಾಲಕನು ಆಟಿಗೆಗಳೊಂದಿಗೆ ಹೇಗೋ ಹಾಗೆ ಸದಾ ಕ್ರೀಡಿಸುವನು.

ವಿ: ೧) ಯಾವ ವ್ಯಾಪಾರದಿಂದಲೂ ಭಗವಂತನಿಗೆ ಕ್ಲೇಶಾದಿಗಳು ಇಲ್ಲ ಎಂಬುದನ್ನು 'ಬಾಲಃ ಕ್ರೀಡನಕೈರಿವ' ಎಂಬ ದೃಷ್ಟಾಂತದಿಂದ ನಿರೂಪಿಸಿರುವರು.

೨) ಇದು ಸಭಾಪರ್ವದಲ್ಲಿನ ಮಾತು (೩೮/೩೦).

ಶ್ರೀಹರಿಯು ಅಪ್ರಮೇಯ

ನ ಪ್ರಮಾತುಂ ಮಹಾಬಾಹುಃ ಶಕ್ಯೋಽಯಂ ಮಧುಸೂದನಃ ।
ಪರಮಾತ್ ಪರಮೇತಸ್ಮಾತ್ ವಿಶ್ವರೂಪಾನ್ನ ವಿದ್ಯತೇ ॥ ೭೭ ॥

ಅ: ಮಹಾಬಾಹುವಾದ ಈ ಮಧುಸೂದನನು ಎಂದೂ ತಿಳಿವಿಗೆ ಪೂರ್ಣವಾಗಿ ಎಟುಕನು; ಅತ್ಯಂತ ಶ್ರೇಷ್ಠವಾದ ಇವನ ಪರಿಪೂರ್ಣರೂಪಕ್ಕಿಂತ ಮಿಗಿಲಾದ ಮತ್ತೊಂದು ರೂಪವೇ ಇಲ್ಲ.

ವಿ: ಇದು ಒಂದರ್ಥದಲ್ಲಿ ಸಗುಣಬ್ರಹ್ಮನಿಗೆ ಮಿಗಿಲಾದ ನಿರ್ಗುಣ ಬ್ರಹ್ಮನಿರುವನು ಎಂಬ ಅದ್ವೈತಿಗಳ ವಾದದ ಖಂಡನೆಯೂ ಆಗಿದೆ.

ಶ್ರೀಹರಿಯು ವಸುದೇವಾದಿಗಳ ಪುತ್ರನಲ್ಲ

ವಸುದೇವಸುತೋ ನಾಯಂ ನಾಯಂ ಗರ್ಭೇಽವಸತ್ ಪ್ರಭುಃ ।
ನಾಯಂ ದಶರಥಾಜ್ಜಾತೋ ನ ಚಾಪಿ ಜಮದಗ್ನಿತಃ ॥ ೭೮ ॥

---

೭೭. ವಿಶ್ವರೂಪಾತ್ ಪರಿಪೂರ್ಣರೂಪಾತ್ । –(ವ)

೭೮. ಉಭಯತ್ರ ಹೇತುಃ ಪ್ರಭುರಿತಿ । ವಿಶೇಷೋಕ್ತ್ಯಾಽನ್ಯಾವತಾರೇಷು ಜನನಂ ಪ್ರತೀಯತೇ ಇತ್ಯತಃ ಸರ್ವಾವತಾರೇಷ್ವೇವಮೇವೇತ್ಯಾಹ । ನಾಯಂ ದಶರಥಾದಿತಿ । –(ವ)

೭೮. ನಾಯಂ ದಶರಥಾಜ್ಜಾತೋ ನ ಚಾಪಿ ವಸುದೇವತಃ ।
ಕ್ವಾಸ್ಯಾಜ್ಞಾನಂ ಕುತೋ ದುಃಖಂ ಪ್ರಾದುರ್ಭಾವೇಷ್ವಪಿ ಪ್ರಭೋಃ ॥
ಪ್ರಾದುರ್ಭೂತಶ್ಚಿದಾನಂದಶರೀರೋ ರಾಘವಃ ಸ್ವಯಮ್ ।
ಸ್ತಂಭಾದ್ವಾ ನರದೇಹಾದ್ವಾ ನೈವಾಸ್ಯ ಪ್ರಾಕೃತೀ ತನುಃ ॥
ದೈತ್ಯಾನಾಂ ಮೋಹನಾರ್ಥಾಯ ಸೋಽಜ್ಞಾನಾದ್ಯಂ ಪ್ರಕಾಶಯೇತ್ ।
ಪೂರ್ಣಚಿದ್ಘನರೂಪೋಽಪಿ ಸದಾ ಸರ್ವಾವತಾರಗಃ ॥ - ಇತ್ಯಾದಿ ಸ್ಕಾಂದೇ । -ಐತರೇಯೋಪನಿಷದ್ಭಾಷ್ಯ

ಅ: ಸರ್ವಸ್ವಾಮಿಯಾದ ಈ ಶ್ರೀಕೃಷ್ಣನು ವಸುದೇವನ ಮಗನೂ ಅಲ್ಲ; ದೇವಕಿಯ ಗರ್ಭದಲ್ಲಿ ವಾಸಿಸಿದವನೂ ಅಲ್ಲ; ಅದರಂತೆ ರಾಮರೂಪದಲ್ಲಿ ದಶರಥನಿಂದಾಗಲೀ, ಪರಶುರಾಮರೂಪದಲ್ಲಿ ಜಮದಗ್ನಿಯಿಂದಾಗಲೀ ಜನಿಸಿದವನೂ ಅಲ್ಲ.

ವಿ: ೧) ಪರಮಾತ್ಮನಿಗೆ ಜನನಾದಿ ಯಾವ ದೋಷಗಳೂ ಇಲ್ಲವೆಂಬುದಕ್ಕೆ ಇದು ಪ್ರಮಾಣ-ವಾಗಿದೆ.

೨) ಕೃಷ್ಣ ರಾಮರು ವಸುದೇವ, ದಶರಥನ ಮಕ್ಕಳಂತೆ ಕಂಡರೂ ನಿಜವಾಗಿಯೂ ಅವರಿಂದ ಜನಿಸಿದವರಲ್ಲ; ಇದರಂತೆ ಅವನ ಸಕಲ ಅವತಾರಗಳು ಸಹ ಜನ್ಮಾದಿ ಸಕಲ ದೋಷಗಳಿಂದ ರಹಿತವಾಗಿವೆ ಎಂದು ಭಾವ.

ಶ್ರೀಹರಿಗೆ ಜನನ ಮರಣಾದಿದೋಷಗಳಿಲ್ಲ

ಜಾಯತೇ ನೈವ ಕುತ್ರಾಪಿ ಮ್ರಿಯತೇ ಕುತ್ರ ಏವ ತು ।
ನ ವಧ್ಯೋ ಮುಹ್ಯತೇ ನಾಯಂ ಬಧ್ಯತೇ ನೈವ ಕೇನಚಿತ್ ।
ಕುತೋ ದುಃಖಿಂ ಸ್ವತಂತ್ರಸ್ಯ ನಿತ್ಯಾನಂದೈಕರೂಪಿಣಃ ॥ ೭೯ ॥

ಅ: ಇವನು ಎಂದೂ ಎಲ್ಲೂ ಜನಿಸುವವನೇ ಅಲ್ಲ; ಇನ್ನು ಮೃತನಾಗುವನೆಂತು? ಇವನು ಯಾರಿಂದಲೂ ಕೊಲ್ಲಲ್ಪಡುವವನೂ ಅಲ್ಲ; ಮೋಹಗೊಳ್ಳುವವನೂ ಅಲ್ಲ; ಬಂಧಿಸಲ್ಪಡು-ವವನೂ ಅಲ್ಲ; ಸ್ವತಂತ್ರನೂ, ಸದಾ ಆನಂದಮಾತ್ರಸ್ವರೂಪನೂ ಆದ ಇವನಿಗೆ ದುಃಖವೆಲ್ಲಿಯದು !

ವಿ: ೧) ಪರಮಾತ್ಮನಿಗೆ ಜನನ, ಮರಣ, ಹನನ, ಬಂಧನ ಮೊದಲಾದ ಯಾವ ದೋಷಗಳೂ ಎಂದೂ ಇಲ್ಲ, ಎಲ್ಲೂ ಇಲ್ಲ; ಯಾವಕಾರಣಕ್ಕೂ ಇಲ್ಲ ಎಂದು ಭಾವ.

೨) ಶ್ರೀಕೃಷ್ಣನು ದೇವಕಿಯಲ್ಲಿ ಜನಿಸಿದವನಲ್ಲ; ಎಂದೂ ಸಾಯುವವನಲ್ಲ; ಜರಾನಾಮಕ ಬೇಡನ ಬಾಣದಿಂದ ಕೊಲ್ಲಲ್ಪಟ್ಟವನಲ್ಲ; ನರಕಾಸುರನ ಬಾಣಕ್ಕೆ ಮೂರ್ಛೆ ಹೋದವನೂ ಅಲ್ಲ; ಯಶೋದೆಯಿಂದ ಕಟ್ಟಲ್ಪಟ್ಟವನೂ ಅಲ್ಲ ಎಂದು ಭಾವ.

---

೭೯. ನ ಜಾಯತೇ ಮ್ರಿಯತೇ ವಾ ಕದಾಚಿತ್ ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ ॥
-(ಕಠೋಪನಿಷತ್ ಮತ್ತು ಗೀತಾ)

೭೯. ಭಾರತ (ಉದ್ಯೋಗ ೬೮/೧೪)

೩) ಜನನ ಮರಣ ಮೊದಲಾದವುಗಳಲ್ಲಿ ನಾನಾತೆರನಾದ ದುಃಖಗಳಿವೆ; ಅವು ಒದಗುವುದು ಅಸ್ವತಂತ್ರರಿಗೆ ಮಾತ್ರ; ಶ್ರೀಹರಿಯು ಸ್ವತಂತ್ರನಾದ್ದರಿಂದ ಅವನಿಗೆ ಈ ತೆರನಾದ ದುಃಖದ ಪ್ರಾಪ್ತಿ ಸರ್ವಥಾ ಇಲ್ಲ ಎಂದು ಭಾವ; ಸ್ವತಂತ್ರನಾದ ಶ್ರೀಹರಿಯ ಪರಮಾನುಗ್ರಹಕ್ಕೆ ಪಾತ್ರರಾದ ಮಹಾಲಕ್ಷ್ಮಿಯು ಅಸ್ವತಂತ್ರಳಾದರೂ ನಿತ್ಯನಿರ್ದುಃಖಳಾಗಿರುವಾಗ ಸ್ವತಂತ್ರನಾದ ಶ್ರೀಹರಿಗೆ ಇವುಗಳು ಎಂದೂ ಇಲ್ಲ ಎಂಬುದು ಕೈಮುತ್ಯಸಿದ್ಧ ಎಂದೂ ಭಾವ.

ಶ್ರೀಹರಿಯ ಲೋಕವಿಡಂಬನೆಯ ಪರಿ

ಈಶನ್ನಪಿ ಹಿ ದೇವೇಶಃ ಶರ್ವಸ್ಯ ಜಗತೋ ಹರಿಃ ।
ಕರ್ಮಾಣಿ ಕುರುತೇ ನಿತ್ಯಂ ಕೀನಾಶ ಇವ ದುರ್ಬಲಃ ॥ ೮೦ ॥

ಅ: ದೇವೇಶನಾದ ಶ್ರೀಹರಿಯು ಸ್ವತಃ ಸಕಲ ಜಗತ್ತಿಗೂ ಒಡೆಯನಾದರೂ ದುರ್ಬಲನಾದ ಕ್ಷುದ್ರಮನುಷ್ಯನಂತೆ ಸದಾ ಕರ್ಮಗಳನ್ನು ಮಾಡುತ್ತಿರುವನು; ಇದು ನಿಶ್ಚಿತ !

ವಿ: ೧) ಇಲ್ಲಿಯ 'ಹಿ' ಶಬ್ದದಿಂದ ಪರಮಾತ್ಮನಿಗೆ ಕರ್ಮಬಂಧನಾದಿಗಳಿಲ್ಲವೆಂಬ ಈ ವಿಷಯವು ಶ್ರುತ್ಯಾದಿ ಪ್ರಸಿದ್ಧ ಎಂಬುದು ಸೂಚಿತವಾಗಿದೆ.

೨) ಇಲ್ಲಿ **'ಕರ್ಮಾಣಿ'** ಎಂದರೆ ಅರ್ಜುನಸಾರಥ್ಯ – ಬಲಿಯಾಚನ – ನಾರದವಂದನ ಸಂಧ್ಯಾವಂದನ ಮೊದಲಾದವುಗಳು ಎಂದರ್ಥ.

ಶ್ರೀಹರಿಯ ಅಸುರ ಮೋಹನದ ರೀತಿ

ನಾತ್ಮಾನಂ ವೇದ ಮುಗ್ಧೋಽಯಂ ದುಃಖೀ ಸೀತಾಂ ಚ ಮಾರ್ಗತೇ ।
ಬದ್ಧಃ ಶಕ್ರಜಿತೇತ್ಯಾದ್ಯಿಲೀಲೈಷಾಽಸುರಮೋಹಿನೀ ॥ ೮೧ ॥

---

೮೦. ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥(೪/೬) – ಗೀತಾ

೮೦. ಹೀತಿ ಶಬ್ದೇನ 'ನ ಕರ್ಮಣಾ ಬಧ್ಯತೇ ನೋ ಕನೀಯಾನ್' ಇತ್ಯಾದಿ ಶ್ರುತಿಪ್ರಸಿದ್ಧಮೇವ । –(ವ)

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ ॥ –(ಗೀತಾ)

೮೦. ಕರ್ಮಾಣಿ ಅರ್ಜುನದೌತ್ಯ–ಬಲಿಯಾಚನ–ನಾರದವಂದನ–ಸಂಧ್ಯಾವಂದನಾದೀನಿ ಇತ್ಯರ್ಥಃ । –(ವಾ)

೮೦. ಕೀನಾಶಃ ಕರ್ಷಕೋ ಮತಃ । –(ವಾ)

★೮೦. ಮಹಾಭಾರತ–ಉದ್ಯೋಗಪರ್ವ

ಅ: ''ಇವನು ತನ್ನನ್ನೇ ಅರಿಯದವನು, ಮುಗ್ಧ, ದುಃಖಪಡುವವನು, ಸೀತೆಯನ್ನು ಕಾಣದೆ ಹುಡುಕಿ ಹೊರಟವನು, ಇಂದ್ರಜಿತ್‌ನಿಂದ ಬದ್ಧನಾದವನು''; ಇತ್ಯಾದಿ ಕಾರ್ಯಗಳೆಲ್ಲಾ ಅಸುರರನ್ನು ವಂಚಿಸುವ ಇವನ ಲೀಲೆಗಳು.

ವಿ: ರಾಮಾಯಣದಲ್ಲಿ 'ರಾಮನು ನಾರಾಯಣನು' ಎಂಬುದಾಗಿ ಬ್ರಹ್ಮಾದಿಗಳಿಂದ ತಿಳಿಸಲ್ಪಟ್ಟನು ಎಂದೂ, 'ಯುದ್ಧದಲ್ಲಿ ಮೂರ್ಛಿತನಾದನು' ಎಂದೂ, 'ಸೀತಾವಿಯೋಗದಿಂದ ದುಃಖಿತನಾದನು' ಎಂದೂ, 'ಸೀತೆಯನ್ನು ಎಲ್ಲಿರುವಳೆಂದು ತಿಳಿಯದೆ ಹುಡುಕುತ್ತಾ ಹೊರಟನು' ಎಂದೂ, 'ಇಂದ್ರಜಿತ್‌ನಿಂದ ನಾಗಪಾಶದಿಂದ ಬದ್ಧನಾದನು' ಎಂದೂ ವರ್ಣಿತವಾಗಿದೆ; ಇವೆಲ್ಲಾ ದೋಷಗಳಲ್ಲವೇ? ಎಂಬ ಶಂಕೆಯನ್ನು ಈ ಪ್ರಮಾಣದಿಂದ ಪರಿಹರಿಸಿರುವರು; ಶ್ರೀರಾಮನು ಆ ರೀತಿ ವರ್ತಿಸಿದ್ದು ದೋಷಿಯಾಗಿ ಅಲ್ಲ; ಅಸುರಜನರನ್ನು ವಂಚಿಸಲೆಂದು ಮಾತ್ರ ಎಂದರ್ಥ.

ಮುಹ್ಯತೇ ಶಸ್ತ್ರಘಾತೇನ ಭಿನ್ನತ್ವಗ್ರುಧಿರಸ್ರವಃ ।
ಅಜಾನನ್ ಪೃಚ್ಛತಿ ಸ್ಮಾನ್ಯಾನ್ ತನುಂ ತ್ಯಕ್ತ್ವಾ ದಿವಂ ಗತಃ ॥ ೮೨ ॥

ಇತ್ಯಾದ್ಯಸುರಮೋಹಾಯ ದರ್ಶಯಾಮಾಸ ನಾಟ್ಯವತ್ ।
ಅವಿದ್ಯಮಾನಮೇವೇಶಃ ಕುಹಕಂ ತದ್ವಿದುಃ ಸುರಾಃ ॥ ೮೩ ॥

ಅ: ಇವನು 'ಶಸ್ತ್ರಪ್ರಹಾರದಿಂದ ಮೋಹಗೊಳ್ಳುವನು,' 'ಚರ್ಮಸೀಳಿ ರಕ್ತವನ್ನು ಸುರಿಸಿಕೊಂಡವನು; ತಿಳಿಯದೆ ಇತರರನ್ನು ಕೇಳುವನು; 'ದೇಹವನ್ನು ತೊರೆದು ದಿವಂಗತನಾದನು' ಇದೇ ಮೊದಲಾಗಿ ಐಂದ್ರಜಾಲಿಕನಂತೆ ಅಸುರಮೋಹನಕ್ಕೆಂದು ತೋರಿಸಿರುವನು; ವಾಸ್ತವವಾಗಿ ಈ ಯಾವ ದೋಷವೂ ಅವನಲ್ಲಿ ಇಲ್ಲವೇ ಇಲ್ಲ; ಇದೆಲ್ಲಾ ಅವನು ಅಸುರರಿಗೋಸ್ಕರ ಮಾಡಿದ ಕಪಟ ಎಂಬುದನ್ನು ದೇವತೆಗಳು ಬಲ್ಲರು.

ವಿ: ೧) ''ನರಕಾಸುರನ ಶಸ್ತ್ರಕ್ಕೆ ಶ್ರೀಕೃಷ್ಣನು ಮೂರ್ಛಿತನಾದ' ಭೀಷ್ಮರ ಬಾಣಕ್ಕೆ ಅವನ ಹಣೆ ಒಡೆದು ರಕ್ತ ಸುರಿಯಿತು, ಜರಾಸಂಧನಿಂದ ಪಾರಾಗಲು ಅವನು ಸುರಕ್ಷಿತ ಸ್ಥಳ ಯಾವುದೆಂದು ಪರಶುರಾಮರನ್ನು ಕೇಳಿ ತಿಳಿದ; ಶ್ರೀಕೃಷ್ಣನು ತನ್ನ ದೇಹವನ್ನು ತೊರೆದು ಪರಂಧಾಮಕ್ಕೆ ತೆರಳಿದ''

---

೮೩. ನಟನವಾನ್ ನಾಟ್ಯಃ ತದ್ವನ್ನಾಟ್ಯವತ್ । –(ಜ)
ನಾಟ್ಯವತ್ ಐಂದ್ರಜಾಲವತ್ । –(ವ)

೮೩. ಏವಂ ಪ್ರದರ್ಶಿತೇಽಪ್ಯಸುರಾಣಾಮೇವ ಭ್ರಾಂತಿರುತ್ಪನ್ನಾ ನ ದೇವಾನಾಮಿತ್ಯಾಹ । ಕುಹಕಮಿತಿ । –(ವ)

೮೩. ನಟನಂ ತು ಕಥಾಬದ್ಧಂ ನಾಟ್ಯಕಂ ಭಾವದರ್ಶನಮ್ ॥ - ಇತಿ ಗಂಧರ್ವೇ । –ಭಾ.ತಾ.(೭/೮/೫೨)

ಮೊದಲಾದ ಕಥೆಗಳು ಭಾಗವತಾದಿ ಗ್ರಂಥಗಳಲ್ಲಿ ಬಂದಿವೆ. ಶ್ರೀಕೃಷ್ಣನು ಹಾಗೆ ವರ್ತಿಸಿದ್ದು ನಿಜ; ಆದರೆ ವಾಸ್ತವವಾಗಿ ಅವನಿಗೆ ಮೂರ್ಛೆಯಿಲ್ಲ, ಅಜ್ಞಾನವಿಲ್ಲ; ರಕ್ತಸ್ರಾವವಿಲ್ಲ; ದೇಹತ್ಯಾಗವೂ ಇಲ್ಲ; ಅವನು ನಿರ್ದೋಷ, ಅಪ್ರಾಕೃತಶರೀರ, ಸರ್ವಜ್ಞ; ಅವನ ಸಕಲದೇಹಗಳೂ ಜ್ಞಾನಾನಂದಮಯ ಮತ್ತು ನಿತ್ಯ;

೨) ಆದರೂ ಅವನು ಹಾಗೆ ತೋರಿಸಿದ್ದು ಅಸುರರನ್ನು ವಂಚಿಸಲೆಂದು ಮಾತ್ರ; ದೇವತೆಗಳಿಗೆಲ್ಲ ಅದು ವಂಚನೆ ಎಂಬುದು ತಿಳಿಯಿತು; ಅಸುರರಿಗೆ ಮಾತ್ರ ತಿಳಿಯಲೇ ಇಲ್ಲ; ಐಂದ್ರಜಾಲಿಕನು ಕೆಲವೊಂದು ವಸ್ತುಗಳನ್ನು ತೋರಿಸಿದರೂ ಅವು ವಾಸ್ತವವಾಗಿ ಇರುವುದೇ ಇಲ್ಲ; ಅದರಂತೆಯೇ ಶ್ರೀಹರಿಯು ಇಲ್ಲದ ದೋಷಗಳನ್ನು ಇದ್ದಂತೆ ತೋರಿಸಿ ಅಸುರರನ್ನು ವಂಚಿಸಿದ ಎಂದು ಭಾವ.

ಶ್ರೀಹರಿಯ ಸಕಲ ಪ್ರಾದುರ್ಭಾವಗಳು ಅಪ್ರಾಕೃತ

ಪ್ರಾದುರ್ಭಾವಾ ಹರೇಃ ಸರ್ವೇ ನೈವ ಪ್ರಾಕೃತದೇಹಿನಃ ।
ನಿರ್ದೋಷಗುಣಸಂಪೂರ್ಣಾ ದರ್ಶಯಂತ್ಯನ್ಯಥೈವ ತು ॥ ೮೪ ॥

ಅಸುರರಂತೆ ಸಜ್ಜನರಿಗೂ ಮೋಹಕವಿಸುವ ಪರಿ

ದುಷ್ಟಾನಾಂ ಮೋಹನಾರ್ಥಾಯ ಸತಾಮಪಿ ತು ಕುತ್ರಚಿತ್ ।
ಯಥಾಯೋಗ್ಯಫಲಪ್ರಾಪ್ತ್ಯೈ ಲೀಲೈಷಾ ಪರಮಾತ್ಮನಃ ॥ ೮೫ ॥

---

೮೪. ಸ್ತ್ರೀಪುಂಮಲಾಭಯೋಗಾತ್ಮಾ ದೇಹೋ ವಿಷ್ಣೋರ್ನ ಜಾಯತೇ ।
ಕಿಂತು ನಿರ್ದೋಷಚೈತನ್ಯಸುಖಾಂ ನಿತ್ಯಾಂ ಸ್ವಕಂ ತನುಮ್ ॥
ಪ್ರಕಾಶಯತಿ ಸೈವೇಯಂ ಜನಿರ್ವಿಷ್ಣೋರ್ನ ಚಾಪರಾ ।
ತಥಾऽಪ್ಯಸುರಮೋಹಾಯ ಪರೇಷಾಂ ಚ ಕ್ವಚಿತ್ ಕ್ವಚಿತ್ ॥
ದುಃಖಾಜ್ಞಾನಶ್ರಮಾದೀನ್ ದರ್ಶಯೇತ್ ಪೂರ್ಣಸದ್ಗುಣಃ ॥
ಕ್ವ ವ್ರಣಾದಿ ಕ್ವ ಚಾಜ್ಞಾನಂ ಸ್ವತಂತ್ರಾಚಿಂತ್ಯಸದ್ಗುಣೇ ।
ದ್ವೌರ್ಭ್ಯಾಯೈವ ಮೋಕ್ಷಸ್ಯ ದರ್ಶಯೇತ್ ತಾನ್ಯತೋ ಹರಿಃ ॥
ಮಿಥ್ಯಾದರ್ಶನದೋಷೇಣ ತೇನ ಮುಕ್ತಿಂ ನ ಯಾಂತಿ ಚ ।
ತಮೋ ಯಾಂತಿ ಚ ತೇನೈವ ತಸ್ಮಾದ್ದೋಷವಿವರ್ಜಿತಮ್ ॥
ಪ್ರಾದುರ್ಭಾವಗತಂ ಚೈವ ಜಾನೀಯಾದ್ ವಿಷ್ಣುಮಂಜಸಾ ।

—ವಿಷ್ಣುತತ್ತ್ವವಿನಿರ್ಣಯೋದಾಹೃತ ಬ್ರಹ್ಮಾಂಡಪುರಾಣವಚನ

ಇಲ್ಲಿನ 'ಪರೇಷಾಂ' ಎಂಬುದಕ್ಕೆ ಶ್ರೀಜಯತೀರ್ಥರ ಟೀಕೆ ಮತ್ತು ಅದರ ಟಿಪ್ಪಣಿಗಳಲ್ಲಿನ ವಿಶೇಷಾಂಶಗಳಿಂದ ಇಲ್ಲಿಯ 'ಸತಾಮಪಿ ತು ಕುತ್ರಚಿತ್' ಎಂಬ ಮಾತಿನ ಅರ್ಥ ಸ್ಫುಟಪಡುತ್ತದೆ;

ಅ: ಶ್ರೀಹರಿಯ ಸಕಲಪ್ರಾದುರ್ಭಾವಗಳೂ ಅಪ್ರಾಕೃತ; ಅವಕ್ಕೆಂದೂ ಪ್ರಾಕೃತದೇಹವಿಲ್ಲ; ಅಂತೆಯೇ ಅವೆಲ್ಲ ನಿರ್ದೋಷವೂ, ಸಕಲಗುಣಪೂರ್ಣವೂ ಆಗಿವೆ; ದುಷ್ಟರ ವಂಚನೆಗೆಂದು ಮಾತ್ರ ಬೇರೆರೀತಿಯಲ್ಲಿ ತೋರಿಸುವನು. ಅವರಿಗೆ ಉಚಿತವಾದ ಫಲವು ಮಾತ್ರವೇ ದೊರೆಯಬೇಕು ಎಂಬ ಕಾರಣದಿಂದ ಕೆಲವೊಮ್ಮೆ ಯೋಗ್ಯರಿಗೂ ಇಂತಹ ವಂಚನೆಯನ್ನು ಅವನು ಮಾಡುವುದುಂಟು; ಅಂತೂ ಇದೆಲ್ಲ ಆ ಪರಮಾತ್ಮನ ಲೀಲೆ.

ಎ: ೧) ಮೂಲರೂಪದಂತೆ ಶ್ರೀಹರಿಯ ಸಕಲ ಅವತಾರಗಳೂ ಅಪ್ರಾಕೃತ, ನಿರ್ದೋಷ ಮತ್ತು ಗುಣಪೂರ್ಣ ಎಂಬ ಪ್ರಮೇಯವನ್ನು ಈ ಪ್ರಮಾಣದಿಂದ ಸ್ಥಾಪಿಸಿರುವರು.

೨) ಅಸುರರನ್ನು ವಂಚಿಸುವುದೂ ಅವರಿಗೆ ಮುಕ್ತಿ ದೊರೆಯದೇ ತಮಸ್ಸೇ ದೊರೆಯಲಿ ಎಂದು. ಅದರಂತೆ ತಮ್ಮ ಯೋಗ್ಯತೆಗೆ ಮೀರಿದ ಪುಣ್ಯವನ್ನು ಮಾಡಿದ ಸಾಧಕರನ್ನು ಸಹ ಅವರ ಅಂತಹ ಹೆಚ್ಚಿನ ಪುಣ್ಯ ಹ್ರಾಸವಾಗಿ ಯೋಗ್ಯತೆಗೆ ತಕ್ಕಷ್ಟು ಮಾತ್ರವೇ ಪುಣ್ಯ ಅವರಿಗೆ ಉಳಿಯಲಿ ಮುಕ್ತಿಯು ವಿಳಂಬದಿಂದ ಆಗಲಿ ಎಂಬ ಕಾರಣದಿಂದ ಕೆಲವೊಮ್ಮೆ ಭಗವಂತನು ವಂಚಿಸುವನು.

---

೮೪. ಪರೇಷಾಂ ಸಜ್ಜನಾನಾಂ ಚ ಮೋಹಾಯ।
ಅಸುರಾಣಾಂ ಅತ್ಯಂತಂ ತಮಃಪ್ರಾಪ್ತಯೇ ಪರೇಷಾಂ ವಿಲಂಬಾಯ ॥ –(ಟೀಕಾ)

'ಸತಾಮಪಿ ತು ಕುತ್ರಚಿತ್' ಇತಿ ತಾತ್ಪರ್ಯನಿರ್ಣಯಗತಂ ವಾಕ್ಯಂ ಹೃದಿ ನಿಧಾಯ ಪರೇಷಾಮಿತ್ಯಸ್ಯ ಅರ್ಥಮಾಹ। ಸಜ್ಜನಾನಾಮಿತಿ। ಸ್ವರೂಪಯೋಗ್ಯತಾಮತಿಕ್ರಮ್ಯ ಸಾಧನಾನುಷ್ಠಾತಾರಃ ಏಧಮಾನಾಃ ತದ್ವಿಟ್ತ್ವಾತ್ ಭಗವತ ಇತಿ ಭಾವಃ। ತಥಾ ಚ ಶ್ರುತಿಃ। 'ಏಧಮಾನದ್ವಿಳುಭಯಸ್ಯ ರಾಜಾ' ಇತಿ। ಉಕ್ತಂ ಚ ಭಗವತ್ಪಾದೈಃ 'ಏಧಮಾನದ್ವಿಡಿತ್ಯೇವ ವಿಷ್ಣೋರ್ನಾಮ ಹಿ ವೈದಿಕಂ' ಇತಿ।

'ಸ್ವಾಧಿಕಾರಾಧಿಕೋ ಯತ್ನಃ ಕಥಂಚಿನ್ನೋಪಪದ್ಯತೇ।
ಕಥಂಚಿದಧಿಕೇ ಯತ್ನೇ ದೋಷಃ ಕಶ್ಚಿತ್ ಸಮಾಪತೇತ್ ॥' ಇತಿ ಚ. –ಶ್ರೀನಿವಾಸತೀರ್ಥೀಯಟಿಪ್ಪಣ

ಅನೇನ ಅಸುರಾ ಅತ್ಯಂತಂ ಮುಕ್ತಿಂ ನ ಯಾಂತಿ। ಪರೇ ಚ ಅವಿಲಂಬೇನ ಮುಕ್ತಿಂ ನ ಯಾಂತೀತಿ ವಾಕ್ಯಯೋಜನಾ ಉಕ್ತಾ ಭವತಿ। –ಪಾಂಡುರಂಗೀ ಕೇಶವಾಚಾರ್ಯರ ಟಿಪ್ಪಣೀ

೮೫. ದುಷ್ಪಾನಾಂ ಮೋಹನಂ ತಮಃಪ್ರಾಪ್ತ್ಯೈ ಸತಾಂ ಮೋಹನಂ ಕಿಮರ್ಥಮಿತ್ಯತ ಆಹ। ಯಥೇತಿ। ಸ್ವಯೋಗ್ಯತಾಯಾ ಅಧಿಕಕೃತಸುಕೃತಕ್ಷಯೇಣ ಯಥಾಯೋಗ್ಯಫಲಪ್ರಾಪ್ತ್ಯೈ ಏಷಾ ಪರಮಾತ್ಮನಃ ಲೀಲಾ। –(ಜ.)

ಸದ್ಭಿರಪಿ ಸ್ವಯೋಗ್ಯತಾತಿರೇಕೇಣ ಸಾಧನಾತಿಶಯೇऽನುಷ್ಠಿತೇ ಸತಿ ಪ್ರಾದುರ್ಭಾವೇಷು ಅನ್ಯಥಾ ಜ್ಞಾನೇನ ತದ್ವಿನಾಶಾರ್ಥಂ ಸತಾಮಪಿ ಮೋಹನಂ ಕ್ರಿಯತೇ ಇತ್ಯರ್ಥಃ। –(ವ)

೮೫. ನನು ಏತಾದೃಗ್ವಿಚಿತ್ರಕರ್ಮಕರಣೇ ಹರೇಃ ಕಥಂ ನ ಕ್ಲೇಶಃ ಇತ್ಯತ। ಉಕ್ತಮ್। ಲೀಲೇತಿ। ಕೇವಲಮಾನಂದೋದ್ರೇಕೇಣ ಲೀಲೈವೇಯಂ ನ ಕ್ಲೇಶರೂಪಂ ಇತ್ಯರ್ಥಃ। –(ವಾ)

೮೫. ಕುತ್ರಚಿತ್ ಸತಾಮಪಿ ಮೋಹಾರ್ಥಾಯೇತ್ಯಸ್ಯಾನುಕರ್ಷಣಾರ್ಥಂ ಚ ಶಬ್ದಃ। –(ವ)

೮೫. 'ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸಮೇದೋऽಸ್ಥಿಸಂಭವಾ।
ನ ಯೋಗಿತ್ವಾದೀಶ್ವರತ್ವಾತ್ತಸ್ಯರೂಪಾಚ್ಯುತೋ ವಿಭುಃ' ಇತಿ ವಾರಾಹೇ। - ಬೃಹದ್ಭಾಷ್ಯ

ಶ್ರೀಹರಿಸರ್ವೋತ್ತಮತ್ವಾದಿ ಪ್ರಮೇಯಗಳ ಬಗ್ಗೆ ಗೀತಾವಾಕ್ಯಗಳ ಉಲ್ಲೇಖ

ಜ್ಞಾನಂ ತೇऽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋऽನ್ಯಜ್ಜ್ಞಾತವ್ಯಮವಶಿಷ್ಯತೇ ॥ ೮೬ ॥

ಅ: (ಅರ್ಜುನ !) ನಿನಗೆ (ನನ್ನ) ಸಾಮಾನ್ಯಮಾಹಾತ್ಮ್ಯ ಮತ್ತು ವಿಶೇಷಮಾಹಾತ್ಮ್ಯಗಳನ್ನು (ಯಥೋಚಿತ) ಸಮಗ್ರವಾಗಿ ತಿಳಿಸುವೆನು; ಇದನ್ನು ತಿಳಿದ ಮೇಲೆ ತಿಳಿಯಬೇಕಾದ ಮತ್ತೊಂದು ವಿಷಯ ಉಳಿಯದು.

ವಿ: ೧) ಮಹಾಭಾರತದಲ್ಲೂ ಗೀತೆ (ಮತ್ತು ವಿಷ್ಣುಸಹಸ್ರನಾಮ) ತುಂಬಾ ಶ್ರೇಷ್ಠ–ವಾದುದು ಎಂಬ ಕಾರಣದಿಂದ ಅದರಲ್ಲಿಯ ಕೆಲವು ವಚನಗಳನ್ನು ವಿಷ್ಣುಸರ್ವೋತ್ತಮತ್ವಾದಿಗಳ ಸಾಧನೆಗಾಗಿ ಶ್ರೀಮದಾಚಾರ್ಯರು ಉದಾಹರಿಸುತ್ತಿರುವರು. ಇಲ್ಲಿಂದ ೧೧೦ನೇ ಶ್ಲೋಕದವರೆಗಿನ ವಾಕ್ಯಗಳು ಗೀತಾವಚನಗಳು.

೨) ಇಲ್ಲಿ ಜ್ಞಾನ ಮತ್ತು ವಿಜ್ಞಾನ ಶಬ್ದಗಳಿಗೆ 'ಜ್ಞೇಯ' ಮತ್ತು 'ವಿಜ್ಞೇಯ' ಎಂದು ಅರ್ಥ.

೩) ಜ್ಞಾನ, ವಿಜ್ಞಾನ ಶಬ್ದಗಳಿಗೆ ಶ್ರೀಮದಾಚಾರ್ಯರೇ ಬೇರೆಡೆ ಹೇಳಿರುವ ಅರ್ಥಗಳು ಹೀಗಿವೆ.

ವಿಜ್ಞಾನಂ ವಿಶೇಷ ಜ್ಞಾನಮ್ । ಅಪರೋಕ್ಷಜ್ಞಾನಂ ವಾ । ತಚ್ಚೋಕ್ತಂ –
'ಸಾಮಾನ್ಯೈರ್ಯೇ ತ್ವವಿಜ್ಞೇಯಾ ವಿಶೇಷಾ ಮಮ ಗೋಚರಾಃ ।
ದೇವಾದೀನಾಂ ತು ತಜ್ಜ್ಞಾನಂ ವಿಜ್ಞಾನಮಿತಿ ಕೀರ್ತಿತಮ್ ॥'
'ಶ್ರವಣಾನ್ಮನನಾಚ್ಚೈವ ಯಜ್ಜ್ಞಾನಮುಪಜಾಯತೇ ।
ತಜ್ಜ್ಞಾನಂ ದರ್ಶನಂ ವಿಷ್ಣೋರ್ವಿಜ್ಞಾನಂ ಶಂಭುರಬ್ರವೀತ್ ॥'
'ವಿಜ್ಞಾನಂ ಜ್ಞಾನಮಂಗಾದೇರ್ವಿಶಿಷ್ಟಂ ದರ್ಶನಂ ತಥಾ' ಇತ್ಯಾದಿ ॥ – ಗೀ.ಭಾ. (೬/೮)
ವೇದನಂ ಶಾಸ್ತ್ರತೋ ಜ್ಞಾನಂ ವಿಜ್ಞಾನಂ ಬ್ರಹ್ಮದರ್ಶನಮ್ ॥

– ಛಾಂದೋಗ್ಯೋಪನಿಷದ್ಭಾಷ್ಯ (೮/೧೨)

---

೮೬. ಅತ್ರ ಸರ್ವತ್ರ ಏಕಸ್ಮಿನ್ನರ್ಥೇ ಪ್ರಮಾಣಸಂಪ್ಲವಮಂಗೀಕೃತ್ಯ ಭಾರತಸ್ಥಾನಿ ಭಿನ್ನಪ್ರಕರಣೋಕ್ತಾನಿ ಅನೇಕಾನಿ ವಾಕ್ಯಾನಿ ಏಕಸ್ಮಿನ್ನರ್ಥೇ ಉದಾಹೃತಾನೀತಿ ನ ಪೌನರುಕ್ತ್ಯಮಾಶಂಕನೀಯಮ್ । –(ವ)

೮೬. ಇದಾನೀಂ ಭಾರತೇ ಗೀತಾಯಾಃ ವರತ್ವಾತ್ ಗೀತಾಗತಾನಿ ವಾಕ್ಯಾನಿ ಸರ್ವೋತ್ತಮತ್ವಾದಿ ವಿಷಯೇ ಉದಾಹರತಿ । – (ಜ)

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ ।
ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ದ್ವಯಮ್ ॥

೮೬. ಜ್ಞಾನವಿಜ್ಞಾನಶಬ್ದೌ ಕರ್ಮಾರ್ಥಲ್ಯುಡಂತೌ । .... ಸಾಮಾನ್ಯಂ ವಿಶೇಷಮಾಹಾತ್ಮ್ಯಂ ಚ ವಕ್ಷ್ಯಾಮೀತ್ಯರ್ಥಃ। – (ಗೀತಾವಿವೃತಿ)

ಶ್ರೀಹರಿಯ ಜಗಜ್ಜನ್ಮಾದಿ ಕರ್ತೃತ್ವ

ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।
ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ॥ ೮೭ ॥

ಅ: ನಾನು ಸಕಲಜಗತ್ತಿನ ಉತ್ಪತ್ತಿಕಾರಣ ಮತ್ತು ಹಾಗೆಯೇ ವಿನಾಶಕ್ಕೂ ಕಾರಣ; ಅರ್ಜುನ ! ನಾನಲ್ಲದೆ ಬೇರೊಂದು ಪರತರವಸ್ತು ಯಾವುದೂ ಇಲ್ಲ.

ವಿ: ೧) ಶ್ರೀಮದಾಚಾರ್ಯರು ಗೀತಾತಾತ್ಪರ್ಯನಿರ್ಣಯದಲ್ಲಿ ಭೂಮ್ಯಾದಿ ಜಡ ಪದಾರ್ಥಗಳು ಮತ್ತು ಜೀವರು ಅಪರತತ್ತ್ವಗಳು ಮುಕ್ತಜೀವರು ಪರಾಭಾಸರು, ಮಹಾಲಕ್ಷ್ಮಿಯು ಪರತತ್ತ್ವ ಮತ್ತು ಶ್ರೀಹರಿಯು ಪರತರತತ್ತ್ವ ಎಂದು ಮುಂತಾಗಿ ನಿರೂಪಿಸಿರುವರು; ಶ್ರೀಹರಿಯೊಬ್ಬನೇ ಪರತರ; ಅಪರತತ್ತ್ವ ಮತ್ತು ಪರಾಭಾಸತತ್ತ್ವಗಳು ಅನೇಕ ವಿಧ; ಪರತತ್ತ್ವ ಮಹಾಲಕ್ಷ್ಮಿಯು ಒಬ್ಬರೇ; ಆದರೆ ಅವರಿಗಿಂತ ಉತ್ತಮನಾದ ಶ್ರೀಹರಿಯು ಪರತರ; ಮತ್ತೊಂದು ಅಂತಹ ಪರತರ ವಸ್ತು ಇಲ್ಲವೇ ಇಲ್ಲ ಎಂದು ಭಾವ.

---

೮೭. ಅವರಾ ದುಃಖಸಂಬಂಧಾಜ್ಜೀವಾ ಏವ ಪ್ರಕೀರ್ತಿತಾಃ ।
ನಿತ್ಯನಿರ್ದುಃಖರೂಪತ್ವಾತ್ ಪರಾ ಶ್ರೀರೇಕಲೈವ ತು ॥
ದುಃಖಾಸಂಪೀಡಿತತ್ವಾತ್ತು ಮಧ್ಯಮೋ ವಾಯುರುಚ್ಯತೇ ।
ಅನನ್ಯಾಧೀನರೂಪತ್ವಾದಸಮಾಧಿಕಸೌಖ್ಯತಃ ॥
ತತ್ತಂತ್ರತ್ವಾಚ್ಚ ಸರ್ವಸ್ಯ ವಿಷ್ಣುಃ ಪರತರೋ ಮತಃ ।
ಅಭಾವಾದಂತರಾऽನ್ಯಸ್ಯ ತ್ವಿಹೈಕಾರ್ಥೌ ತರಪ್ತಮೌ ॥
ಯಸ್ಯಾಃ ಸಂಬಂಧಯೋಗ್ಯತ್ವಾತ್ ಜೀವಾ ಅಪ್ಯವರಾ ಮತಾಃ ।
ತಸ್ಯಾ ಜಡಾಯಾಃ ಪ್ರಕೃತೇರವರತ್ವೇ ಕ್ವ ಸಂಶಯಃ ॥
ಅಥಾವರತರಾ ಯೇ ತು ವಿಮುಖಾಶ್ಚೇತನಾ ಹರೇಃ ।
ನಿತ್ಯದುಃಖೈಕಯೋಗ್ಯತ್ವಾನ್ನ ಹ್ಯೇತತ್ ಸ್ಯಾದಚೇತನೇ ॥
ಅತಃ ಪರತರಂ ವಿಷ್ಣುಂ ಯೋ ವೇತ್ತಿ ಸ ವಿಮುಚ್ಯತೇ ।
ಮುಕ್ತಸ್ತು ಸ್ಯಾತ್ ಪರಾಭಾಸಃ ಸುನಿತ್ಯಸುಖಭೋಜನಾತ್ ॥
ತತ್ರಾಪಿ ತಾರತಮ್ಯಂ ಸ್ಯಾತ್ ತೇಷು ಬ್ರಹ್ಮಾऽಧಿಕೋ ಮತಃ ।
ವಿಷ್ಣೋರಾಧಿಕ್ಯಸಂವಿತ್ತಿಃ ಸರ್ವಸ್ಮಾಜ್ಜ್ಞಾನಮುಚ್ಯತೇ ॥
ಏವಂ ವಿವಿಚ್ಯ ತಜ್ಜ್ಞಾನಂ ವಿಜ್ಞಾನಮಿತಿ ಕೀರ್ತಿತಮ್ ।
ಏತಚ್ಚತಾರತಮ್ಯೇನ ವರ್ತತೇ ಕೇಶವಾದಿಷು ।
ಮುಖ್ಯವಿಜ್ಞಾನ್ಯತೋ ವಿಷ್ಣುಃ ಕಿಂಚಿದ್ವಿಜ್ಞಾನಿನೋऽಪರೇ ॥ – .ಗೀ.ತಾ(೭/೭)

೮೭. ಅನೇನ ಜಗದುತ್ಪತ್ತ್ಯಾದಿಕಾರಣತ್ವಂ ಸರ್ವೋತ್ಕೃಷ್ಟತ್ವಂ ಚ ಭಗವಾನ್ಮಾಹಾತ್ಮ್ಯಂ ಜ್ಞೇಯಮಿತ್ಯುಕ್ತಂ ಭವತಿ । -(ವ)

೮೭. ಪ್ರತಿಜ್ಞಾತಂ ವಿಜ್ಞಾನಮಾಹ । ....ಇದಂ ಚ ಸರ್ವೋತ್ತಮತ್ವೇ ಪ್ರಮಾಣಂ । -(ಜ)

೮೭. ಯತ್ರೋಭಯೋಃ ಪ್ರಯೋಗೋ ನ ತತ್ರೈಕಾರ್ಥೌ ತರಪ್ತಮೌ ॥ –ಐತರೇಯಭಾಷ್ಯ

೨) 'ಪರತರಃ' ಎಂಬುದಕ್ಕೆ 'ಪರತಮಃ' ಎಂದೂ ಅರ್ಥವಾಗುವುದರಿಂದ ಅದಕ್ಕೆ 'ಸರ್ವೋತ್ತಮ' ಎಂದೂ ಅರ್ಥ.

ಮೂರ್ಖರು ಮೋಹಗೊಳ್ಳುವ ಪರಿ

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ।
ಪರಂಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ ೮೮ ॥

ಅ: ಶಾಶ್ವತವೂ, ಗುಣಪೂರ್ಣವೂ ಆದ ನನ್ನ ಉತ್ತಮಸ್ವರೂಪವನ್ನು ಅರಿಯದ ಅವಿವೇಕಿಗಳು ನನ್ನನ್ನು ಮನುಷ್ಯದೇಹ ತಳೆದವನೆಂದು ತಿಳಿದು, ಅವಮಾನಿಸುವರು.

ವಿ: ೧) ಶ್ರೀಕೃಷ್ಣನದು ಅಪ್ರಾಕೃತವಾದ ಜ್ಞಾನಾನಂದಮಯಶರೀರವೆಂದು ಅರಿಯದ ತಾಮಸಜನರು ಅವನನ್ನು ತಪ್ಪಾಗಿ ತಿಳಿದು ಅವಜ್ಞೆ ಮಾಡುವರು. ಅವನು ಸದಾವಿದ್ಯಮಾನನೂ, ಗುಣಪೂರ್ಣನೂ ಆದ ಪರತತ್ತ್ವ ಎಂಬ ಅರಿವು ಇರುವುದೇ ಇಲ್ಲ ಎಂದು ಭಾವ.

೨) ಭಗವದವತಾರವಾದ ಶ್ರೀಕೃಷ್ಣನು ನಿರ್ದೋಷ ಎಂದು ಹೇಳಿದ್ದರಿಂದ ಅವನ ಇತರ ಸಕಲ ಪ್ರಾದುರ್ಭಾವಗಳೂ ಸಹ ಹೀಗೆಯೇ ನಿರ್ದೋಷವೂ ಗುಣಪೂರ್ಣವೂ ಆಗಿವೆ ಎಂದು ಹೇಳಿದಂತಾಯಿತು.

೩) ''ವಿಷ್ಣುವು ಬ್ರಹ್ಮರುದ್ರರಮಾದಿಗಳಿಗೆ ಸಮ, ಅವರಿಂದ ಅಭಿನ್ನ, ಪ್ರಾದುರ್ಭಾವ-ಗಳಲ್ಲಿ ಅವನಿಗೆ ದೋಷಗಳುಂಟು, ಪೂರ್ಣತ್ವವಿರುವುದಿಲ್ಲ, ಅವನ ಧರ್ಮ, ದೇಹ, ಅವತಾರ ಮೊದಲಾದವುಗಳಿಗೆ ಭೇದವುಂಟು; ಮೊದಲಾಗಿ ತಿಳಿಯುವುದು ಮತ್ತು ಅವನ ಅವತಾರಗಳನ್ನು ತಪ್ಪಾಗಿ ತಿಳಿಯುವುದು ಅವನ ಅವಜ್ಞಾನ ಎನ್ನಿಸುತ್ತವೆ'' ಎಂದು ಶ್ರೀಮದಾಚಾರ್ಯರು ಗೀತಾ-ತಾತ್ಪರ್ಯದಲ್ಲಿ ಭವಿಷ್ಯತ್ಪರ್ವದ ವಚನದಿಂದ ನಿರೂಪಿಸಿರುವರು:

'ಬ್ರಹ್ಮರುದ್ರರಮಾದೀನಾಂ ಸಾಮ್ಯದೃಷ್ಟಿರನನ್ಯತಾ ।
ಪ್ರಾದುರ್ಭಾವಗತಸ್ಯಾಪಿ ದೋಷದೃಷ್ಟಿರಪೂರ್ಣತಾ ।

---

೮೮. ಭೂತಮಹೇಶ್ವರಂ = ಭೂತಂ ಸದಾ ವಿದ್ಯಮಾನಂ ಮಹಾಂತಂ ಈಶ್ವರಂ ಗುಣಪರಿಪೂರ್ಣಂ ಪರಂ= ಉತ್ತಮಂ; ಭಾವಂ = ಯಾಥಾರ್ಥ್ಯಮ್ । – (ಗೀತಾವಿವೃತ್ತಿ)

೮೮. ತನ್ವಾ ವಿಷ್ಣುರನನ್ಯೋಽಪಿ ಸ್ವಾಧೀನತ್ವಾತ್ ತದಾಶ್ರಿತಃ । ಇತಿ -(ಜ)

೮೮. ಅತ್ರ ಭಗವದವತಾರಸ್ಯೈವ ಕೃಷ್ಣಸ್ಯೈತನ್ಮಾಹಾತ್ಮ್ಯಮುಚ್ಯತೇ ಇತ್ಯತಃ ಪ್ರಕೃತಸಂಗತಿಗೀತಾಯಾಂ ಭಗವ-ದವತಾರೇಷು ದೋಷದರ್ಶಿನಾಂ ನಿಂದಾಶ್ರವಣಾಚ್ಚ ಅವತಾರಾಣಾಂ ನಿರ್ದೋಷತ್ವಂ ಜ್ಞಾಯತೇ ಇತ್ಯಾಹ । –(ವ)

ಧರ್ಮದೇಹಾವತಾರಾದೇರ್ಭೇದದೃಷ್ಟಿಶ್ಚ ಸಂಕರಃ ।
ಅವತಾರೇಷ್ವಿತಿ ಜ್ಞೇಯಮವಜ್ಞಾನಂ ಜನಾರ್ದನೇ । – ಗೀ.ತಾ. (೯/೧೧)

ಆಸುರರಿಗೆ ದೊರೆಯುವ ದುಷ್ಫಲ

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥ ೮೯ ॥

ಅ: ಅಯೋಗ್ಯರ ಆಸೆಗಳು ಎಂದೂ ಈಡೇರುವುದಿಲ್ಲ; ಅವರ ಕರ್ಮಗಳೆಲ್ಲ ನಿಷ್ಫಲವೆನ್ನಿಸುತ್ತವೆ; ಅವರ ತತ್ತ್ವಜ್ಞಾನವೂ ವ್ಯರ್ಥವೆನ್ನಿಸುತ್ತದೆ; ಅವರು ತತ್ತ್ವಜ್ಞಾನಕ್ಕೆ ವಿರುದ್ಧವಾದ ಮನಸ್ಸುಳ್ಳವರು; ಅವರು ಬುದ್ಧಿಯನ್ನು ಹಾಳುಮಾಡುವ ರಾಕ್ಷಸೀ ಮತ್ತು ಆಸುರೀ ಸ್ವಭಾವವನ್ನು ಆಶ್ರಯಿಸಿದವರು.

ವಿ: ಶ್ರೀಹರಿಯ ಅವಜ್ಞೆ ಮಾಡುವವರಿಗೆ ಒಮ್ಮೊಮ್ಮೆ ಐಹಿಕಸಂಪತ್ತು ದೊರೆಯ– ಬಹುದಾದರೂ ಪರಲೋಕದ ಸಂಪತ್ತು ಮಾತ್ರ ಲಭಿಸುವುದೇ ಇಲ್ಲ; ಅವರು ಮಾಡುವ ಯಜ್ಞಾದಿ ಕರ್ಮಗಳೆಲ್ಲ ವ್ಯರ್ಥವೆನ್ನಿಸುತ್ತವೆ. ಬ್ರಹ್ಮರುದ್ರಾದಿಗಳ ಬಗ್ಗೆ ಅವರು ಹೊಂದಿದ ಜ್ಞಾನವೂ ಸಹ ತಾರಕವಾಗಲಾರದು; ಮನಸ್ಸು ಯಾವಾಗಲೂ ತತ್ತ್ವಜ್ಞಾನಕ್ಕೆ ವಿರುದ್ಧವಾಗಿಯೇ ಸಾಗುತ್ತಿರುತ್ತದೆ. ಇದಕ್ಕೆಲ್ಲ ಅವರು ಬುದ್ಧಿಭ್ರಂಶಕರವಾದ ತಮೋಯೋಗ್ಯಸ್ವಭಾವದವರಾಗಿರುವುದೇ ಮುಖ್ಯ ಕಾರಣ.

ಮಹಾತ್ಮರ ಚಿಂತನೆಯ ಕ್ರಮ

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥ ೯೦ ॥

---

೮೯. ಜ್ಞಾನಸ್ಯ ಮೋಘತ್ವಂ ನಾಮ ಕೇನಾಪಿ ಬ್ರಹ್ಮರುದ್ರಾದಿಭಕ್ತ್ಯುಪಾಯೇನ ಅನುತ್ಪತ್ತಿರೇವ । – (ಜ)

೮೯. ವಿಚೇತಸಃ = 'ತತ್ತ್ವಜ್ಞಾನವಿರುದ್ಧಚೇತಸಃ' ಇತ್ಯರ್ಥಃ । –(ವಾ)

೮೯. ಪ್ರಕೃತಿಂ = ಸ್ವಭಾವಂ ಇತ್ಯರ್ಥಃ । – (ವಾ)

೮೯. ತಮೋಯೋಗ್ಯಾಃ ಮಾಮವಜಾನಂತೀತಿ ಪೂರ್ವೇಣ ಅನ್ವಯಃ । – (ಗೀತಾವಿವೃತಿ)

೮೯. ಭಗವದ್ದ್ವೇಷಿಭಿರಾಶಾಸಿತಸ್ಯ ಸಂಪದಾದೇಃ ಪ್ರಾಪ್ತಾವಪಿ ಆಮುಷ್ಮಿಕಸ್ಯ ನ ಕಸ್ಯಚಿತ್ ಅಪ್ರಾಪ್ತಿರಿತ್ಯರ್ಥಃ ।
–(ಗೀತಾವಿವೃತಿ)

ಕಿಂ ಬಹುನಾ ಕೋಽಪ್ಯಮುಷ್ಮಿಕಃ ಪುಮರ್ಥೋ ನಾಪ್ಯತೇ ಇತಿ ಜ್ಞೇಯಮ್ । – (ಜ)

೮೯. ಯದ್ಧಾದಿಕರ್ಮಣಃ ಸಾಫಲ್ಯೇಽಪಿ ತೇಷಾಂ ಯಜ್ಞಾದಿಕರ್ಮಾಣಿ ವೃಥೈವ । -(ಜ)

ಅ: ಅರ್ಜುನ ! ದೈವೀ ಸ್ವಭಾವವನ್ನು ಹೊಂದಿದ ಮಹಾತ್ಮರಾದ ಮುಕ್ತಿಯೋಗ್ಯರು ಮಾತ್ರ ನನ್ನನ್ನು ಜೀವಿಗಳಿಗೆ ಕಾರಣನಾದವನೆಂದೂ, ನಾಶರಹಿತನೆಂದೂ ತಿಳಿದು ವಿಷಯಗಳ ಕಡೆ ಮನಸ್ಸನ್ನು ಹಾಕದೆ ಸೇವಿಸುವರು.

ಅರ್ಜುನನ ಮಾಡಿದ ಸ್ತೋತ್ರದಲ್ಲಿ ಶ್ರೀಹರಿಸರ್ವೋತ್ತಮತ್ವ

ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥ ೯೦ ॥

ಅ: (ಶ್ರೀಕೃಷ್ಣ !) ನೀನು ಈ ಚರಾಚರ ಜಗತ್ತಿಗೆ ತಂದೆಯಾಗಿರುವಿ; ಪೂಜ್ಯನಾಗಿರುವಿ; ಹಿತೋಪದೇಶಕನಾದ ಅತ್ಯಂತ ಶ್ರೇಷ್ಠಗುರುವಾಗಿರುವಿ; ಅನುಪಮೈಶ್ವರ್ಯವುಳ್ಳವನೇ! ಮೂರುಲೋಕಗಳಲ್ಲೂ ನಿನಗೆ ಸಮನಾದ ಮತ್ತೊಬ್ಬ ವ್ಯಕ್ತಿ ಇಲ್ಲ; ಇನ್ನು ಉತ್ತಮನು ಎಲ್ಲಿರುವನು !

ವಿ: ಇದು ಶ್ರೀಕೃಷ್ಣನ ವಿಶ್ವರೂಪವನ್ನು ಕಾಣುತ್ತಾ ಅರ್ಜುನನು ಹೇಳುವ ಮಾತು (೧೧/೪೩).

ಜ್ಞಾನದ ಹಿರಿಮೆ

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ ॥ ೯೨ ॥

---

೯೦. ಮಹಾತ್ಮಾನಃ – ಮಹಾಮನಸ್ಕಾಃ । ... ಅನ್ಯವಿಷಯಕಮನೋಹೀನಾಃ । – ಗೀತಾವಿವೃತಿ(೯/೧೩)
ನ ವಿದ್ಯತೇ ಭಗವತೋಽನ್ಯತ್ರ ಸ್ವತಂತ್ರಮಿದಮಿತಿ ಮನೋ ಯೇಷಾಂ ತೇ ಅನನ್ಯ ಮನಸಃ ಇತ್ಯರ್ಥಃ ।
– (ವ)

೯೦. ಅನಿತ್ಯತ್ವಂ ದೇಹಹಾನಿರ್ದುಃಖಪ್ರಾಪ್ತಿರಪೂರ್ಣತಾ ।
ನಾಶಶ್ಚತುರ್ವಿಧಃ ಪ್ರೋಕ್ತಸ್ತದಭಾವೋ ಹರೇಃ ಸದಾ ॥ –(ಗೀತಾಭಾಷ್ಯ)

೯೨. ಕರ್ಮಣಿ ಲ್ಯುಟ್ । ಜ್ಞಾತವ್ಯಾನಾಂ ಮಧ್ಯೇ ಉತ್ತಮಂ ಜ್ಞಾನಂ ಜ್ಞಾತವ್ಯಮ್ । – (ಗೀತಾವಿವೃತಿ)

೯೨. ಮುನಯಃ ಮನನಶೀಲಾಃ । 'ಮನನಾನ್ಮುನಿರುಚ್ಯತೇ' – (ಗೀತಾಭಾಷ್ಯ)

೯೨. ಇತಃ ಸಂಸಾರಾತ್ । ಪರಾಂ ಸಿದ್ಧಿಂ ಮೋಕ್ಷಮ್ । ಗತಾಃ ಪ್ರಾಪ್ತಾಃ । – (ಗೀತಾ)

ಅ: ತಿಳಿಯಬೇಕಾದ ವಸ್ತುಗಳಲ್ಲಿ ತುಂಬಾ ಶ್ರೇಷ್ಠವೂ, ಉತ್ತಮವೂ ಆದ ಮತ್ತೊಂದು ಉತ್ತಮವಸ್ತುವನ್ನು ತಿಳಿಸುವೆ; ಅದನ್ನು ತಿಳಿದು ಮನನಶೀಲರಾದ ಎಲ್ಲರೂ ಈ ಸಂಸಾರದಿಂದ ಮೋಕ್ಷವನ್ನು ಪಡೆದಿರುವರು.

ಮಹಾಲಕ್ಷ್ಮಿ ಜಗತ್ತಿನ ತಾಯಿ

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೯೩ ॥

ಅ: ಅರ್ಜುನ ! ಮಹಾಲಕ್ಷ್ಮಿಯು ನನ್ನ ಪತ್ನಿ ; ಅವಳಲ್ಲಿ ನಾನು ಗರ್ಭವನ್ನು ಇರಿಸುವೆನು; ಅನಂತರ ಸಕಲ ಪ್ರಾಣಿಗಳ ಜನನವು ಆಗುವುದು.

ವಿ: ೧) ಇಲ್ಲಿ 'ಯೋನಿ' ಎಂದರೆ 'ಪತ್ನಿ' ಎಂದೂ, 'ಮಹದ್ಬ್ರಹ್ಮ' ಎಂದರೆ ಮಹಾಲಕ್ಷ್ಮಿ ಎಂದೂ, 'ಭೂತಗಳು' ಎಂದರೆ ಬ್ರಹ್ಮಾದಿ ಚೇತನರು ಎಂದೂ, ಗರ್ಭಾಧಾನ ಎಂದರೆ ಚತುರ್ವಿಂಶತಿತತ್ತ್ವಗಳ ಅಂಶಗಳಿಂದ ಕೂಡಿದ ತನ್ನ ಉದರದಲ್ಲಿನ ಜೀವರನ್ನು ರೇತೋರೂಪೇಣ ಚಿತ್ಪ್ರಕೃತಿಯ ಉದರದಲ್ಲಿ ಇರಿಸುವುದು ಎಂದೂ ಅರ್ಥ.

೨) ಹೀಗೆ ಮಹಾಲಕ್ಷ್ಮಿಯು ಬ್ರಹ್ಮಾದಿ ಜಗತ್ತಿನ 'ಜನನಿ'ಯಾದ್ದರಿಂದ ಅವರು ಅವರೆಲ್ಲರಿಗಿಂತ ಉತ್ತಮರು ಎಂದೂ, ಅವರ ಪತಿಯಾದ ನಾರಾಯಣನು ಸರ್ವೋತ್ತಮ ಎಂದೂ ಭಾವ.

೩) ಇದಕ್ಕೆ ಸಂವಾದಿಯಾಗಿ ಅಂಭೃಣೀಸೂಕ್ತದಲ್ಲಿ ಮಹಾಲಕ್ಷ್ಮಿಯು ನಾರಾಯಣನನ್ನು ತನಗೆ ಕಾರಣನಾದ ಸ್ವಾಮಿ(ಪತಿ) ಎಂದು ಸ್ತುತಿಸಿರುವುದನ್ನು ಗಮನಿಸಬೇಕು:

''ಮಮ ಯೋನಿರಪ್ಸ್ವಂತಃ ಸಮುದ್ರೇ''

೯೩.. ಮಹದ್ಬ್ರಹ್ಮ = ಮಹದ್ಬ್ರಹ್ಮಪದವಾಚ್ಯಾ ಮಹಾಲಕ್ಷ್ಮೀಃ । ಪ್ರಕೃತಿಃ ಪರಮಂ ಬ್ರಹ್ಮ ಇತಿ ವಚನಾತ್ ಇದಮಪಿ ವಿಶೇಷಜ್ಞಾನಮ್ । –(ವಾ)

೯೩.. ಯೋನಿರ್ಭಾರ್ಯಾ ತಥಾ ಸ್ಥಾನಂ ಯೋನಿಃ ಕಾರಣಮೇವ ಚ । -ಇತಿ ಶಬ್ದನಿರ್ಣಯೇ -ಗೀ.ಭಾ.(೧೪/೩)

ಯುಜ್ಯತೇ ಅನಯಾ ಪುಮಾನಿತಿ ಯೋನಿರ್ಭಾರ್ಯಾ, ನ ತು ಕಾರಣಮಿತ್ಯರ್ಥಃ ॥ – (ವಾ)

೯೩.. ಚತುರ್ವಿಂಶತಿತತ್ತ್ವಾಂಶಯುತಾನ್ ಜೀವಾನ್ ಸ್ವೋದರಸ್ಥಾನ್ ರೇತೋರೂಪೇಣ ನಿರ್ಮಾಸ್ಯ ಚಿತ್ಪ್ರಕೃತ್ಯುದರೇ ನಿಕ್ಷಿಪಾಮಿ ಇತ್ಯರ್ಥಃ । –(ಗೀ. ವಿ.)

ಶ್ರೀಹರಿಯ ಕ್ಷರಾಕ್ಷರ ಪುರುಷೋತ್ತಮತ್ವ

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ೯೪ ॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ೯೫ ॥

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ ೯೬ ॥

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥ ೯೭ ॥

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ ೯೮ ॥

---

೯೪. ಇಮೌ ಪ್ರಮಾಣಪ್ರಮಿತೌ ಪುರುಷೌ ಚೇತನೌ ಲೋಕೇ ಈಶಿತವ್ಯವರ್ಗೇ । – (ಗೀ)

೯೫. ಆತ್ಮಾ ಅತ್ರ ಚೇತನಃ । ಕ್ಷರಾಕ್ಷರೌ ಚೇತನಮಾತ್ರಮ್ । ಉತ್ತಮಪುರುಷಸ್ತು ಪರಮಚೇತನಃ ಇತಿ । –(ಗೀ. ವಿ.)

೯೫. 'ಚೇತನಶ್ಚೇತನಾನಾಂ' (ಶ್ವೇತಾಶ್ವತರಶ್ರುತಿ ೬/೧೩), 'ಬ್ರಹ್ಮಾಣಿ ಜೀವಾಃ ಸರ್ವೇಽಪಿ ಇತ್ಯಾದಿ ಶ್ರುತಿಷೂದಾಹೃತಃ ಇತ್ಯರ್ಥಃ । –(ಗೀ. ವಿ.)

೯೬. ಲೋಕೇ ಪೌರುಷೇಯಗ್ರಂಥೇ ವೇದೇ ಅಪೌರುಷೇಯಗ್ರಂಥೇ ಚ । -(ಮಾ. ಖಂ. ಟೀ)

೯೭. ಬುದ್ಧಿಮಾನ್ = ಅಪರೋಕ್ಷಜ್ಞಾನೀ । ಕೃತಕೃತ್ಯಃ ಮುಕ್ತಃ । -(ಮಾ. ಖಂ. ಟೀ)

೯೮. ಶ್ರೀಮದಾಚಾರ್ಯರು ಈ ಶ್ಲೋಕಗಳ ಭಾವವನ್ನು ತಮ್ಮ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳಲ್ಲಿ, ತತ್ತ್ವನಿರ್ಣಯಗ್ರಂಥದ ದ್ವಿತೀಯಪರಿಚ್ಛೇದದಲ್ಲೂ ವಿವರಿಸಿರುವರು.

೯೮. ಬ್ರಹ್ಮಾ ಶಿವಃ ಸುರಾದ್ಯಾಶ್ಚ ಶರೀರಕ್ಷರಣಾತ್ ಕ್ಷರಾಃ ।
ಲಕ್ಷ್ಮೀರಕ್ಷರದೇಹತ್ವಾದಕ್ಷರಾ ತತ್ಪರೋ ಹರಿಃ ॥ (ಪರಮಶ್ರುತಿ) – ವಿಷ್ಣುತತ್ತ್ವವಿನಿರ್ಣಯ(ಪರಿಚ್ಛೇದ - ೨)

೯೮. ಸರ್ವೋ ಹಿ ಗೀತಾಶಾಸ್ತ್ರಾರ್ಥೋಽಸ್ಮಿನ್ನಧ್ಯಾಯೇ ಸಮಾಸೇನೋಕ್ತಃ । ನ ಕೇವಲಂ ಗೀತಾಶಾಸ್ತ್ರಾರ್ಥ ಏವ, ಕಂ ತು ಸರ್ವಶ್ಚವೇದಾರ್ಥಃ ಇಹ ಪರಿಸಮಾಪ್ತಃ ॥ –ಶಾಂಕರಭಾಷ್ಯ

೯೮. ಮಹಾಲಕ್ಷ್ಮಿಯು ಸ್ತ್ರೀಯಾದರೂ ಬ್ರಹ್ಮಾದಿ ಪುರುಷರಿಗಿಂತಲೂ ಮಿಗಿಲಾದ ಶಕ್ತಿಶಾಲಿಯಾದ್ದರಿಂದ 'ಪುರುಷ' ಎಂಬುದಾಗಿ ಕರೆಯಲ್ಪಟ್ಟಿರುವರು.

''ಪುಂಲಿಂಗೇನೋಚ್ಯತೇ ಶ್ರೀಸ್ತು ಪುಂವಚ್ಛಕ್ತಿಮತೀ ಮತಃ ।''

ಅ: ಈ ಈಶಿತವ್ಯವರ್ಗದಲ್ಲಿ ಕ್ಷರ ಮತ್ತು ಅಕ್ಷರ ಎಂಬುದಾಗಿ ಎರಡು ಪುರುಷರಿರುವರು; ಸಕಲಚೇತನರೂ ಕ್ಷರಪುರುಷರು; ಗಗನದಂತೆ ನಿರ್ವಿಕಾರಳಾಗಿರುವ ಮಹಾಲಕ್ಷ್ಮಿಯು ಅಕ್ಷರಪುರುಷಳು; ಈ ಕ್ಷರ ಮತ್ತು ಅಕ್ಷರ ಪುರುಷರಿಗಿಂತ ಭಿನ್ನನೂ, ಉತ್ತಮನೂ ಆದವನೇ 'ಪರಮಾತ್ಮಾ' ಎಂದು ಉದಾಹೃತನಾಗಿರುವನು. ಸಮರ್ಥನಾದ ಅವನು ಮೂರು-ಲೋಕಗಳನ್ನು ಪ್ರವೇಶಿಸಿದವನಾಗಿ ಸ್ವತಃ ಅವ್ಯಯನಾಗಿದ್ದು ಅವುಗಳನ್ನು ಧರಿಸಿರುವನು. ಹೀಗೆ ಕ್ಷರಪುರುಷರಿಗಿಂತ ಅತೀತನೂ, ಅಕ್ಷರ ಪುರುಷನಿಗಿಂತ ಉತ್ತಮನೂ ಆದ್ದರಿಂದಲೇ ನಾನು ಸಕಲ ಪೌರುಷೇಯ ಮತ್ತು ಅಪೌರುಷೇಯ ಗ್ರಂಥಗಳಲ್ಲಿ 'ಪುರುಷೋತ್ತಮ' ಎಂಬುದಾಗಿ ಪ್ರಸಿದ್ಧನಾಗಿರುವೆ. ಯಾವನು ಹೀಗೆ ಮೋಹರಹಿತನಾಗಿ ನನ್ನನ್ನು ಪುರುಷೋತ್ತಮ ಎಂಬುದಾಗಿ ತಿಳಿಯುವನೋ, ಅವನು ಸರ್ವಶಾಸ್ತ್ರಾರ್ಥ ಜ್ಞಾನಿಯೆನ್ನಿಸಿ ಸರ್ವಪ್ರಕಾರ-ದಿಂದಲೂ ನನ್ನನ್ನು ಸೇವಿಸುವನು. ಈ ತುಂಬಾ ರಹಸ್ಯವಾದ ಶಾಸ್ತ್ರವನ್ನು ಎಲೈ ಪಾಪರಹಿತನಾದ ಅರ್ಜುನನೇ! ನಾನು ನಿನಗೆ ತಿಳಿಸಿರುವೆ. ಇದನ್ನು ಅರಿತವನು ಅಪರೋಕ್ಷಜ್ಞಾನಿಯೂ ಮುಕ್ತನೂ ಆಗುವನು.

ವಿ: ೧) ಈ ಐದು ಶ್ಲೋಕಗಳು ಭಗವದ್ಗೀತೆಯ ಹದಿನೈದನೆಯ ಅಧ್ಯಾಯದ ಕೊನೆಯ ಐದು ಶ್ಲೋಕಗಳಾಗಿವೆ. ಇದರಲ್ಲಿ ಸಕಲ ಗೀತಾರ್ಥ ಮಾತ್ರವಲ್ಲದೆ ಸಕಲ ಶಾಸ್ತ್ರಾರ್ಥವೂ ತುಂಬಿದೆ ಎಂದು ಪರಮತದವರೂ ಒಪ್ಪಿರುವರು. ವಿಷ್ಣುಸರ್ವೋತ್ತಮತ್ವಾದಿ ಸಕಲ ಪ್ರಮೇಯಗಳಿಗೂ ಇದು ಪ್ರಮಾಣವಾಗಿದೆ ಎಂದು ಶ್ರೀಮದಾಚಾರ್ಯರು ಉದಾಹರಿಸಿರುವರು. ಶ್ರೀಮದಾಚಾರ್ಯರು ತಮ್ಮ ವಿಷ್ಣುತತ್ತ್ವನಿರ್ಣಯ, ಮಾಯಾವಾದಖಂಡನ, ಸದಾಚಾರಸ್ಮೃತಿ ಮೊದಲಾದ ಇತರ ಅನೇಕ ಗ್ರಂಥಗಳಲ್ಲಿ ಈ ಶ್ಲೋಕಗಳನ್ನು ಉದಾಹರಿಸಿರುವರು.

೨) ಇಲ್ಲಿಯ 'ಕ್ಷರ' ಶಬ್ದಕ್ಕೆ ಭಂಗಹೊಂದುವ (ಲಿಂಗ) ಶರೀರಯುಕ್ತರಾದ ಬ್ರಹ್ಮಾದಿಗಳು ಎಂದೂ, ಅಕ್ಷರ ಶಬ್ದಕ್ಕೆ ನಿತ್ಯಮುಕ್ತಳಾದ ಮಹಾಲಕ್ಷ್ಮೀ ಎಂದೂ, 'ಲೋಕೇ', 'ವೇದೇ' ಎಂಬ ಪದಗಳಿಗೆ ಕ್ರಮವಾಗಿ ಪೌರುಷೇಯ ಮತ್ತು ಅಪೌರುಷೇಯ ಗ್ರಂಥಗಳಲ್ಲಿ ಎಂದೂ, 'ಬುದ್ಧಿವಾನ್' ಮತ್ತು 'ಕೃತಕೃತ್ಯ' ಪದಗಳಿಗೆ ಕ್ರಮವಾಗಿ 'ಅಪರೋಕ್ಷಜ್ಞಾನಿ' ಮತ್ತು 'ಮುಕ್ತ' ಎಂದೂ ಅರ್ಥ.

ದೈವೀಸಂಪತ್ತು, ಆಸುರೀ ಸಂಪತ್ತುಗಳ ವಿವೇಚನೆ

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು ॥ ೬ ॥

ಆ: ಅರ್ಜುನ! ಈ ಜಗತ್ತಿನಲ್ಲಿ ದೈವ ಮತ್ತು ಆಸುರ ಎಂಬುದಾಗಿ ಜೀವಿಗಳ ಸ್ವಭಾವ ಎರಡು ತೆರನಾಗಿದೆ. ದೈವಸ್ವಭಾವವನ್ನು ಈಗಾಗಲೇ ವಿವರವಾಗಿ ತಿಳಿಸಿರುವೆನು. ಆಸುರಸ್ವಭಾವವನ್ನೀಗ ತಿಳಿಸುವೆನು; ಕೇಳು.

ವಿ: ೧) ಇದು ಜೀವರಲ್ಲಿ ದ್ವೈವಿಧ್ಯ(ತ್ರೈವಿಧ್ಯ)ಕ್ಕೆ ಪ್ರಮಾಣವಾಗಿದೆ.

೨) ಹದಿನಾರನೆಯ ಅಧ್ಯಾಯದ ಮೊದಲ ಮೂರುಶ್ಲೋಕಗಳಲ್ಲಿ ದೈವಸ್ವಭಾವದ ನಿರೂಪಣೆ ಬಂದಿದೆ.

೩) ಅದೇ ಅಧ್ಯಾಯದ ೭ನೇ ಶ್ಲೋಕದಿಂದ ೧೮ನೇ ಶ್ಲೋಕದವರೆಗಿನ ಒಟ್ಟು ಹನ್ನೆರಡು ಶ್ಲೋಕಗಳಲ್ಲಿ ಆಸುರ ಸ್ವಭಾವದ ನಿರೂಪಣೆ ಮತ್ತು ಅನಂತರದ ಎರಡು ಶ್ಲೋಕಗಳಲ್ಲಿ ಅವರಿಗೆ ಒದಗುವ ದುರ್ಗತಿಯ ನಿರೂಪಣೆ ಬಂದಿವೆ.

ಅಸುರರ ಉಪಾಸನೆಯ ಪರಿ

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್ ॥ ೧೦೦ ॥

---

೯೯. 'ದ್ವೌ ಭೂತಸರ್ಗೌ = ನಿಸರ್ಗೌ ಸ್ವಭಾವಾವಿತಿ ಯಾವತ್ । – (ವಾ)

ಸರ್ಗೌ = ಸೃಷ್ಟಿಭೂತಸರ್ಗೌ ಪ್ರಾಣಿಸ್ವಭಾವಾವಿತಿ ವಾ । – (ಗೀ. ವಿ)

ಸರ್ಗಾಣಾಂ ಸುಬಹುತ್ವೇऽಪಿ ಶುಭಾಶುಭಫಲಾಧಿಕ್ಯವಿವಕ್ಷಯಾ 'ದ್ವೌ' ಇತ್ಯುಕ್ತಮಿತಿ ಭಾವಃ ।
– (ಶ್ರೀಟೀಕಾಕೃತ್ಪಾದರು)

೯೯. ವಿಸ್ತರಶಃ = ಇತ್ಯನುಷಂಗಃ । – (ಗೀ. ವಿ)

೯೯. ದ್ವೌ ಭೂತಸರ್ಗೌ ಲೋಕೇऽಸ್ಮಿನ್ ದೈವ ಆಸುರ ಏವ ಚ ।
ವಿಷ್ಣುಭಕ್ತಿಪರೋ ದೈವೋ ವಿಪರೀತಸ್ತಥಾऽऽಸುರಃ'॥ - ಅಗ್ನಿಪುರಾಣ (೩೮೩/೧೨)

೧೦೦. ಪ್ರತಿಷ್ಠಾ = ಬಹುಕಾಲಮವಸ್ಥಿತಿಃ ತದ್ರಹಿತಂ 'ಬ್ರಹ್ಮಜ್ಞಾನಬಾಧ್ಯಂ' ಇತ್ಯರ್ಥಃ । -(ವಾ)

೧೦೦. ಅತ್ರ ಸತ್ಯಪ್ರತಿಷ್ಠೇಶ್ವರಶಬ್ದಾ ವಿಷ್ಣುಪರಾಃ । ನಞ್ ಬಹುವ್ರೀಹಿಃ । ಜಗದ್ವಿಶರಣಕರ್ತೃತಯಾ ಸತ್ಯಪದವಾಚ್ಯ-ವಿಷ್ಣುಹೀನಮಾಹುಃ । ಸ್ಥಿತಿಹೇತುತಯಾ ಪ್ರತಿಷ್ಠಾಪದೋಕ್ತವಿಷ್ಣುಹೀನಮಾಹುಃ । ಅನೀಶ್ವರಂ = ಸ್ವಾಮಿಹೀನಮಾಹುಃ । ಜಗತ್ಸಷ್ಟ್ಯಾದಿಕರ್ತಾರಂ ಯೇ ನ ಜಾನಂತಿ ತೇ ಇತಿ ಚಾಹುರಾಸುರಾ ಜನಾ ಇತ್ಯನುಷಂಗಃ । – (ಗೀ. ವಿ)

೧೦೦. ಅಪರಸ್ಪರಸಂಭೂತಂ – ಮೃತ್ಪಿಂಡಾದ್ ಘಟಃ, ತಂತುಭ್ಯಃ ಪಟಃ ಇತ್ಯಾದ್ಯಾಕಾರೇಣ ಪರಸ್ಪರಸಂಭೂತಂ ನ ಭವತಿ । – (ವಾ)

ಅಪರಸ್ಪರಸಂಭೂತಂ = ಇತಿ ತೃತೀಯೋಕ್ತದಿಶಾ ಪರಸ್ಪರಸಂಭೂತಂ ನ ಭವತೀತ್ಯರ್ಥಃ । ಯದ್ವಾ ಜಗದ-ಸತ್ಯಂ ಸತ್ಯಂ ನ ಮಿಥ್ಯೇತ್ಯರ್ಥಃ । ಅತ ಏವ 'ಶುಕ್ತಿರೂಪ್ಯವನ್ನ ಪ್ರತಿತಿಷ್ಠತಿ ಇತ್ಯಪ್ರತಿಷ್ಠಂ ಜ್ಞಾನಬಾಧ್ಯಮ್ । -(ಗೀ. ವಿ)

ಅ: ಜಗತ್ತು ಅಸತ್ಯವಾದುದು, ಅಪ್ರತಿಷ್ಠವಾದುದು, ಈಶ್ವರರಹಿತವಾದುದು, ಪರಸ್ಪರ ಸಂಭೂತವಾದುದೂ ಅಲ್ಲ, ಮತ್ತೆ ಹೇಗೆ ಬಂದದ್ದು? ಕಾಮವನ್ನೇ ಉತ್ಪತ್ತಿಗೆ ಕಾರಣವನ್ನಾಗಿ ಹೊಂದಿರುವುದು.

ವಿ: ೧) 'ಅಸತ್ಯ' ಎಂದರೆ 'ವಿಷ್ಣುರಹಿತವಾದದು', 'ಮಿಥ್ಯೆಯಾದುದು' ಎಂದು, ಅಪ್ರತಿಷ್ಠ ಎಂದರೆ 'ಬಹುಕಾಲ ಇರದೇ ಇರುವಂತಹದು (ಬ್ರಹ್ಮಜ್ಞಾನದಿಂದ ಬಾಧ್ಯವಾದುದು) ಸ್ಥಿತಿಕಾರಕನಾದ ವಿಷ್ಣುವನ್ನು ಹೊಂದದೇ ಇರುವುದು' ಎಂದೂ, 'ಅನೀಶ್ವರಂ' ಎಂದರೆ 'ಸ್ವಾಮಿರಹಿತವಾದುದು' ಎಂದೂ ಅರ್ಥ.

೨) 'ಅಪರಸ್ಪರಸಂಭೂತಂ' ಎಂಬುದಕ್ಕೆ 'ಮಣ್ಣಹೆಂಟೆಯಿಂದ ಗಡಿಗೆ' 'ತಂತುಗಳಿಂದ ವಸ್ತ್ರ' ಮೊದಲಾದ ಕಾರ್ಯಕಾರಣಭಾವದಿಂದ ಹುಟ್ಟಿಬಂದುದಲ್ಲ' ಎಂದೂ, ಅಥವಾ ಮೂರನೆಯ ಅಧ್ಯಾಯದಲ್ಲಿ ಹೇಳಿದಂತೆ 'ಅನ್ನದಿಂದ ಭೂತಗಳು' ಮೊದಲಾದ ಕ್ರಮದಲ್ಲಿ ಹುಟ್ಟಿ ಬಂದುದಲ್ಲ ಎಂದೂ, 'ಕಾಮಹೈತುಕಂ' ಎಂಬುದಕ್ಕೆ 'ಅವಿದ್ಯಾಪರಿಣಾಮ ರೂಪವಾದುದು' ಎಂದೂ ಅರ್ಥ.

೩) ಈ ಶ್ಲೋಕಗಳಲ್ಲಿ ಪ್ರಧಾನವಾಗಿ ಮಾಯಾವಾದದ ನಿರಾಕರಣೆ ಬಂದಿದೆ ಎಂಬುದನ್ನು ಗಮನಿಸಬೇಕು.

೪) ಹೀಗೆ ಜಗನ್ಮಿಥ್ಯಾತ್ವ, ವಿಷ್ಣುಸರ್ವೋತ್ತಮತ್ವ, ಮೊದಲಾದ ತತ್ತ್ವಗಳನ್ನು ಒಪ್ಪದವರೆಲ್ಲ ಅಸುರಸ್ವಭಾವದವರೆಂದು ಭಾವ.

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥ ೧೦೧ ॥

೧೦೦. ತರ್ಹಿ ಕೀದೃಶಂ ಜಗತ್ । ಇತಿ ಪ್ರಶ್ನಸ್ಯ ಅನ್ಯತ್ ಸದಸತೋರನ್ಯತ್ ಸದಸದ್ವಿಲಕ್ಷಣಮಿತ್ಯುತ್ತರಮ್ । –(ವಾ)

೧೦೦. ಕಾಮಹೈತುಕಂ (ಅನೇನ) ಕಾಮಯಂತಿ ದುರ್ವಿಷಯಾನಿತಿ ಕಾಮಃ । ಅಜ್ಞಾನಂ ತದ್ಧೇತುಕಂ ಅಜ್ಞಾನಕಲ್ಪಿತಂ –ಇತ್ಯರ್ಥಃ । –(ವಾ)

ಕಾಮಹೈತುಕಂ = ಕಾಮಹೇತ್ವವಿದ್ಯಾಪರಿಣಾಮರೂಪಮ್ । (ಗೀ. ವಿ)

೧೦೧. ಅಲ್ಪೇಷು ವಿಷಯೇಷು ಬುದ್ಧಿಃ ಯೇಷಾಂ ತೇ । –(ಜ)

೧೦೧. ಉಗ್ರಕರ್ಮಾಣಃ– ಎಂಬುದಕ್ಕೆ ಉಗ್ರಾರ್ಥಂ ಶಿವಪ್ರೀತ್ಯರ್ಥಂ ಕರ್ಮಾಣಿ ಯೇಷಾಂ ತೇ (ರುದ್ರದೇವರನ್ನು ಸರ್ವೋತ್ತಮರೆಂದು ತಿಳಿದು ಅವರ ಪ್ರೀತಿಗಾಗಿ ಕರ್ಮಗಳನ್ನು ಮಾಡುವವರು) ಎಂದೂ ಅರ್ಥಮಾಡಬಹುದು.

೧೦೨. ಆತ್ಮದೇಹೇಷು ದ್ವೇಷೋ ನಾಮ 'ಅಹಂ ಬ್ರಹ್ಮಾಸ್ಮೀ'ತಿ ದುರಾಗ್ರಹಃ । ಪರದೇಹೇಷು ದ್ವೇಷೋ ನಾಮ ತ್ವಂ ಬ್ರಹ್ಮಾಸೀತ್ಯುಪದೇಶಃ । ಇದಂ ಚ ಭಗವದ್ದ್ವೇಷಿಣಾಂ ಮೋಕ್ಷೋ ಭವತೀತಿ ಭ್ರಮನಿವೃತ್ತ್ಯರ್ಥಂ ಸಂಗೃಹೀತಮ್ । –(ವಾ)

ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।
ಆಢ್ಯೋಽಭಿಜನವಾನಸ್ಮಿ ಕೋನ್ಯೋಽಸ್ತಿ ಸದೃಶೋ ಮಯಾ ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥ ೧೦೨ ॥

ಅ: ಈ ದೃಷ್ಟಿಯನ್ನು ಹೊಂದಿ ಅವರು ಜ್ಞಾನಹೀನರೂ, ಅಲ್ಪವಿಷಯಗಳಲ್ಲಿ ಮನಸ್ಸು ಹಾಕುವ ಬುದ್ಧಿಯವರೂ, ಘೋರಕರ್ಮನಿರತರೂ, ಶತ್ರುಗಳೂ ಆಗಿ ಜಗತ್ತಿನ ವಿನಾಶಕ್ಕೋಸ್ಕರ ಕಲಿಯುಗವೇ ಮೊದಲಾದ ಯುಗಗಳಲ್ಲಿ ಹುಟ್ಟುವರು. ನಾನು ಪರಮೇಶ್ವರನು, ಐಹಿಕಾಮುಷ್ಮಿಕ ಭೋಗಸಂಪನ್ನನು, ಕೃತಕೃತ್ಯನು, ಸಮರ್ಥನು, ಸುಖಿಯು, ಆಢ್ಯನು ಕುಲೀನನು ಆಗಿರುವೆನು, ನನ್ನಂತಹವನು ಬೇರೆ ಯಾವನಿರುವನು? ತಮ್ಮ ಹಾಗೂ ಇತರರ ದೇಹಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ನನ್ನನ್ನು ದ್ವೇಷಿಸುತ್ತ ಅಸೂಯೆಪಡುವರು.

ವಿ: ೧) ಅಸುರಜನರ ಸ್ವಭಾವದ ವರ್ಣನೆಯು ಈ ಶ್ಲೋಕಗಳಲ್ಲಿ ಮುಂದುವರೆದಿದೆ.

೨) ಪರಮಾತ್ಮನನ್ನು ದ್ವೇಷಿಸುವುದು ಎಂದರೆ 'ಭಗವಂತನೇ ಸ್ವತಂತ್ರಕರ್ತನಾದರೆ ಈಗ ಸುಮ್ಮನೆ ಕೂಡುವ ನನ್ನಿಂದ ಕಾರ್ಯವನ್ನು ಮಾಡಿಸಲಿ'; ಅಥವಾ ನಾನೀಗ ಮಾಡುತ್ತಿರುವ ಕಾರ್ಯವನ್ನು ನಿಲ್ಲಿಸಲಿ, ನೋಡೋಣ ಎಂದು ಅಪಲಾಪ ಮಾಡುವವರು ಎಂದರ್ಥ.

೩) ಪರಮಾತ್ಮನ ಬಗ್ಗೆ ಅಸೂಯೆಪಡುವುದು ಎಂದರೆ 'ನಿರ್ದೋಷನಾದ ಅವನಲ್ಲಿ ದೋಷಗಳನ್ನು ಆರೋಪಿಸುವುದು, ಗುಣಪೂರ್ಣನಾದ ಅವನಲ್ಲಿ ಗುಣಹೀನತ್ವವನ್ನು ಹೇಳುವುದು' ಎಂದು ಅರ್ಥ.

---

೧೦೨. ಯೇಽತಿಮಾನೇನ ಮನ್ಯಂತೇ ಪರಮೇಶ್ವರೋಽಹಮಿತ್ಯಪಿ ।
ಮಿಥ್ಯಾ ಜಗದಿದಂ ಸರ್ವಂ ಭ್ರಮ ಅನ್ಯನ್ನತಿಷ್ಠತಿ ॥
ಮಿಥ್ಯಾತ್ವಾನ್ನೇಶ್ವರೋಽಪ್ಯಸ್ತಿ ಪರೇಭ್ಯೋ ನ ಚ ಜಾಯತೇ ।
ಸ್ವಸ್ಮಿನ್ನಪಿ ತಥಾ ಹ್ಯಸ್ಮಿನ್ ನಿಯಂತಾನ್ಯ ಇತೀರಿತೇ ॥
ಪ್ರದ್ವಿಷಂತ್ಯಸುರಾಸ್ತೇ ತು ಸರ್ವೇ ಯಾಂತ್ಯಧರಂ ತಮಃ ॥

– ಇತಿ ಬ್ರಹ್ಮವೈವರ್ತವಚನಮಪಿ ಇಮಮೇವಾರ್ಥಂ ಸಂವಾದಯತಿ ಪ್ರಚ್ಛನ್ನಬೌದ್ಧಾನಾಂ ಮಾಯಿನಾಮೇವ ಮತಂ ನಿರಾಕ್ರಿಯತೇ ಇತಿ ನಿಶ್ಚೀಯತೇ ಇತಿ ಭಾವಃ । –(ವ)

೧೦೨. ಆತ್ಮದೇಹೇಷು ಪರದೇಹೇಷು ಚ ನಿಯಾಮಕತಯಾ ಸ್ಥಿತಂ ಮಾಮ್ । ಪ್ರದ್ವಿಷಂತಃ 'ಯದಿ ಈಶ್ವರಃ ಕಾರಯಿತಾ ಅಸ್ತಿ । ತರ್ಹೀದಾನೀಮಕುರ್ವಾಣಂ ಕಾರಯತು, ಕುರ್ವಾಣಂ ವಾ ವಿಘಾತಯತು' ಇತ್ಯೇವಂ ಭಗದಪಲಾಪರೂಪಪ್ರದ್ವೇಷಂ ಕುರ್ವಂತಃ । –(ಗೀ. ವಿ)

೧೦೨. ಅಭ್ಯಸೂಯಕಾಃ ನಿರ್ದೋಷೇ ದೋಷಾನ್ ವದಂತಃ । ಗುಣಪೂರ್ಣೇ ಗುಣಹೀನತಾಂ ವದಂತಃ । -(ಗೀ. ವಿ)

ಹರಿದ್ವೇಷಿಗಳಿಗೆ ದೊರಕುವ ಅಧೋಗತಿ

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ೧೦೩ ॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥ ೧೦೪ ॥

ಅ: ನನ್ನನ್ನು ದ್ವೇಷಿಸುವ ಕ್ರೂರಿಗಳೂ ಅಮಂಗಲರೂ ಆದ ಅಂತಹ ಅಧಮಜನರನ್ನು ನಾನು ಮತ್ತೆ ಮತ್ತೆ ಸಂಸಾರದಲ್ಲಿ ಹಾಕುವೆ; ಆಸುರಯೋನಿಗಳಲ್ಲೇ ಹುಟ್ಟಿಸುವೆ; ತಾಮಸ ಸ್ವಭಾವದ ಆ ಜನರು ಜನ್ಮಜನ್ಮದಲ್ಲೂ ಆಸುರಯೋನಿಯನ್ನೇ ಹೊಂದುವವರಾಗಿ ನನ್ನನ್ನು ಎಂದೂ ಹೊಂದದೆ ಅಧಮಗತಿಯನ್ನು ಹೊಂದುವರು.

ವಿ: ಆಸುರ ಜನರಿಗೆ ಪುನಃ ಪುನಃ ಹುಟ್ಟುವುದು, ನರಕವನ್ನು ಹೊಂದುವುದು, ಮಾತ್ರವಲ್ಲದೆ ಆಸುರಯೋನಿಗಳಲ್ಲೇ ಹುಟ್ಟುವುದು ಮತ್ತು ನಿತ್ಯನರಕವನ್ನೇ ಹೊಂದುವುದು ಎಂಬ ಹೆಚ್ಚಿನ ಅನರ್ಥವನ್ನು ಹೇಳಿರುವರು.

ಸಾತ್ವಿಕಜ್ಞಾನದ ಲಕ್ಷಣ

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ವಿಕಮ್ ॥ ೧೦೫ ॥

---

೧೦೪. 'ಅಜಸ್ರಮಶುಭಾನ್', 'ಆಸುರೀಷ್ವೇವ ಯೋನಿಷು', 'ಮೂಢಾ ಜನ್ಮನಿ ಜನ್ಮನಿ', 'ಮಾಮಪ್ರಾಪ್ಯೈವ ಕೌಂತೇಯ' ಇತಿ ಚತುರ್ಭಿರ್ವಿಶೇಷಣೈಃ ಊರ್ಧ್ವಲೋಕಾಪ್ರಾಪ್ತಿನಿಯಮಸ್ಯ 'ತತೋ ಯಾಂತ್ಯಧಮಾಂ ಗತಿಂ' ಇತಿ ಅಧೋಲೋಕಗಮನಸ್ಯ ನಿರ್ಣೀತತ್ವಾತ್ ॥ – (ವಾ)

೧೦೫. ಅನೇನ ಸರ್ವಜೀವಾನಾಂ ಪರಸ್ಪರಭೇದಃ ಸರ್ವಾಂತರ್ಯಾಮಿಣೋ ನಾರಾಯಣಸ್ಯ ಸ್ವಗತರೂಪೇಷು ಪರಸ್ಪರಂ ನ ಭೇದಃ – ಇತಿ ಚ ಸಿದ್ಧಮ್ । ಅತ ಏವ ಹಿ 'ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಇತಿ ಸೂತ್ರಮ್ । – (ವಾ)

೧೦೫. ವಿಭಕ್ತೇಷು ಪರಸ್ಪರಂ ಭಿನ್ನೇಷು ತಾರತಮ್ಯೋಪೇತೇಷು ಚ ಸರ್ವಭೂತೇಷು ಭವಂತಿ ವಿದ್ಯಂತೇ ಇತಿ ಭೂತಾನಿ । ಜೀವಾಃ ಪ್ರಕೃತ್ಯಾದಿ ಜಡಾನಿ ಚ । ಸರ್ವೇಷು ಜೀವೇಷು ಜಡೇಷು ಚ । ತದಾಧಾರಕತ್ವೇನ ತೇಭ್ಯೋ ಭಿನ್ನತ್ವೇನೇತಿ ಸಪ್ತಮ್ಯಭಿಪ್ರಾಯಃ । ಭಾವಂ ಸದಾ ವಿದ್ಯಮಾನಂ ವಿಷ್ಣುಮ್ । ಏಕಂ ಪ್ರಧಾನಮ್ । ಸರ್ವೋತ್ತಮಮಿತಿ ಯಾವತ್ । ಅವಿಭಕ್ತಂ ಸರ್ವತ್ರ ಸ್ಥಿತಾವಪಿ ಅಧಿಷ್ಠಾನಭೇದನಿಮಿತ್ತ ಭೇದಹೀನಮ್ । 'ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಇತಿ ಸೂತ್ರೋಕ್ತದಿಶಾ ಸರ್ವತ್ರ ನಿರ್ದೋಷಾಶೇಷಸದ್ಗುಣತಯಾ ಐಕ್ಯೇನ ಸ್ಥಿತಮಿತಿ ಯಾವತ್ । ಅವ್ಯಯಂ ಸ್ವತೋ ಅಧಿಷ್ಠಾನವ್ಯಯೇನ ಚ ವ್ಯಯಹೀನಮ್ । – (ಗೀತಾವಿವೃತಿ)

ಅ: ವಿಷ್ಣುವಿನಿಂದಲೂ, ಪರಸ್ಪರವೂ ಭಿನ್ನವೂ ತಾರತಮ್ಯದಿಂದ ಕೂಡಿದವೂ ಆದ ಸಕಲ ಚೇತನಗಳಲ್ಲೂ ಜಡಗಳಲ್ಲೂ ಅವೆಲ್ಲವುಗಳಿಗೆ ಆಧಾರವಾಗಿ ಅವುಗಳಿಂದ ಭಿನ್ನವಾಗಿ ಸದಾ ನೆಲೆಸಿರುವ ಸರ್ವೋತ್ತಮನೂ, ಸ್ವಗತಭೇದವಿವರ್ಜಿತನೂ ಅವ್ಯಯನೂ ಆದ ವಿಷ್ಣುವನ್ನು ತಿಳಿಸಿಕೊಡುವ ಜ್ಞಾನವನ್ನು 'ಸಾತ್ವಿಕ' ವೆಂದು ತಿಳಿ.

ವಿ: ''ಸಕಲ ಜೀವಜಡಗಳೂ ವಿಷ್ಣುವಿನಿಂದಲೂ ಪರಸ್ಪರ ತಮ್ಮಿಂದಲೂ ಭಿನ್ನವಾಗಿವೆ; ವಿಷ್ಣುವು ಅವೆಲ್ಲವುಗಳಲ್ಲೂ ನಿಯಾಮಕನಾಗಿ ನೆಲೆಸಿರುವನು; ಅವನ ಯಾವ ರೂಪ ಗುಣಾದಿ ಅವಯವಾದಿಗಳಲ್ಲೂ ಭೇದವಿಲ್ಲ; ಅವನು ಸರ್ವೋತ್ತಮ ಮತ್ತು ಶಾಶ್ವತ'' ಎಂಬ ಜ್ಞಾನವೇ ಸಾತ್ವಿಕ. ವಿಷ್ಣುಸರ್ವೋತ್ತಮತ್ವ, ಜಗತ್ಸತ್ಯತ್ವ, ಪಂಚಭೇದ ಮತ್ತು ತಾರತಮ್ಯಾದಿಗಳನ್ನು ತಿಳಿಸುವ ಜ್ಞಾನವೇ ಯಥಾರ್ಥಜ್ಞಾನ ಎಂಬುದು ಇಲ್ಲಿ ಸ್ಫುಟವಾಗಿ ನಿರೂಪಿತವಾಗಿದೆ ಎಂದು ಭಾವ.

ಸಕಲ ಶಾಸ್ತ್ರಗಳ ರಹಸ್ಯ

ಸರ್ವಗುಹ್ಯತಮಂ ಭೂಯಃ ಶ್ರುಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥ ೧೦೬ ॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥ ೧೦೭ ॥

ಅ: ಪುನಃ ಸರ್ವಸಾಧನಗಳಲ್ಲೂ ತುಂಬಾ ರಹಸ್ಯವಾದ ನನ್ನ ಶ್ರೇಷ್ಠವಾದ ವಚನವನ್ನು ಕೇಳು;ನೀನು ನನಗೆ ತುಂಬಾ ಪ್ರಿಯ; ಇದು ನಿಶ್ಚಿತ; ಆದ್ದರಿಂದಲೇ ನಿನಗೆ ಹಿತವನ್ನು ಉಪದೇಶಿಸುತ್ತಿರುವೆ.

''ನನ್ನಲ್ಲಿ ಮನಸ್ಸು ಹಾಕು; ನನ್ನ ಭಕ್ತನಾಗು; ನನ್ನನ್ನು ಕುರಿತು ಯಜ್ಞವನ್ನು ಮಾಡು; ನನ್ನನ್ನು ನಮಸ್ಕರಿಸು'' ನನ್ನನ್ನೇ ಹೊಂದುವಿ: ನೀನು ನನಗೆ ಪ್ರಿಯ; ಅದಕ್ಕೆಂದೇ ಈ ಸತ್ಯವಾದ ಮಾತನ್ನು ಪ್ರತಿಜ್ಞೆಮಾಡಿ ಹೇಳುತ್ತಿರುವೆ.

---

೧೦೬. ತತ್ತ್ವಸಾರಮುಪಸಂಹೃತ್ಯ ಸಾಧನಸಾರಕಥನಮುಪಸಂಹರ್ತುಂ ಪ್ರತಿಜಾನೀತೇ ।

೧೦೬. ಚತುರ್ದಶಾದೌ ಸಾಧನಸಾರಸ್ಯೋಕ್ತತ್ವಾತ್ 'ಭೂಯಃ' ಇತ್ಯುಕ್ತಮ್ । – (ಗೀ. ವಿ)

೧೦೭. ಅತ್ರ ಮನ್ಮನಸ್ಕತ್ವಾದಿನಾ ಮತ್ಪ್ರಾಪ್ತಿರೇವ ಭವತೀತ್ಯುಕ್ತ್ಯಾ ವಿಷ್ಣೋಃ ಸರ್ವೋತ್ತಮತ್ವಸರ್ವಪ್ರಾಪ್ಯತ್ವಾದಿ-ಮಾಹಾತ್ಮ್ಯಮೇವ ಉಚ್ಯತೇ ಇತಿ ಪ್ರಕೃತೋಪಯೋಗಃ । – (ವಾ)

೧೦೭. ಅವಶ್ಯಂ ಮತ್ಪ್ರಾಪ್ತಿರ್ಭವತೀತಿ ಪ್ರತಿಜ್ಞಾಂ ಕರೋಮಿ । ನಾತ್ರ ಸಂದೇಹಃ ಕಾರ್ಯ ಇತಿ ಭಾವಃ । –(ಗೀ. ವಿ)

ಪಂಚರಾತ್ರವು ನಾರಾಯಣಕೃತ

ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।
ಸರ್ವೇಷ್ವೇತೇಷು ರಾಜೇಂದ್ರ ಜ್ಞಾನೇಷ್ವೇತದ್ವಿಶಿಷ್ಯತೇ ॥ ೧೦೮ ॥

ಅ: ಸಮಗ್ರ ಪಂಚರಾತ್ರವನ್ನು ಸ್ವತಃ ಶ್ರೀನಾರಾಯಣನೇ ಉಪದೇಶಿಸಿರುವನು; ಸಾಂಖ್ಯ, ಪಾಶುಪತ ಮೊದಲಾದ ಇತರ ಸಕಲಶಾಸ್ತ್ರಗಳಲ್ಲೆಲ್ಲ ಇದೇ ಮಿಗಿಲಾದುದು.

ವಿ: ೧) ಇಲ್ಲಿಂದ ೧೧೩ ನೇ ಶ್ಲೋಕದವರೆಗಿನ ಒಟ್ಟು ಎಂಟು ಶ್ಲೋಕಗಳು. ಮಹಾಭಾರತದ ಶಾಂತಿಪರ್ವದಲ್ಲಿನ 'ಮೋಕ್ಷಧರ್ಮ'ವೆಂಬ ಉಪಪರ್ವದ ಶ್ಲೋಕಗಳು.

೨) ಶ್ರೀಹರಿಯ ಬಗ್ಗೆ ಬ್ರಹ್ಮಾದಿಗಳ ಬಗ್ಗೆ ಅನೇಕ ವಿಚಾರಗಳನ್ನು ಕೇಳಿದ ಜನಮೇಜಯನು ಒಂದು ಹಂತದಲ್ಲಿ ವೈಶಂಪಾಯನರನ್ನು 'ಸಾಂಖ್ಯ', ಯೋಗ, ಪಾಶುಪತ ಮತ್ತು ವೇದಾರಣ್ಯಕ(ಪಂಚರಾತ್ರ)ವೆಂಬ ಶಾಸ್ತ್ರಗಳು ಪರಸ್ಪರ ಅವಿರುದ್ಧವಾದ ಅರ್ಥವನ್ನು ಹೇಳುವವೋ, ಅಥವಾ ವಿರುದ್ಧವಾದ ಅರ್ಥಗಳನ್ನು ಹೇಳುವವೋ, ಎಂಬುದಾಗಿ ಪ್ರಶ್ನಿಸುವನು.

೩) ವೈಶಂಪಾಯನರು ಅದಕ್ಕೆ ಸಾಂಖ್ಯ, ಯೋಗ ಮೊದಲಾದ ಈ ಶಾಸ್ತ್ರಗಳಲ್ಲಿ ಪಂಚರಾತ್ರವು ಮಾತ್ರವೇ ಪೂರ್ಣವಾಗಿ ಪ್ರಮಾಣವಾಗಿರುವ ಶ್ರೇಷ್ಠಶಾಸ್ತ್ರ ಎಂದು ಉತ್ತರಿಸಿ, ಅದನ್ನು ಸಮರ್ಥಿಸುತ್ತ ಅದು ನಾರಾಯಣಕೃತ ಎಂಬ ಅಂಶವನ್ನು ತಿಳಿಸುವರು.

ಪಂಚರಾತ್ರದ ಹಿರಿಮೆ

ಜ್ಞಾನೇಷ್ವೇತೇಷು ರಾಜೇಂದ್ರ ಸಾಂಖ್ಯಪಾಶುಪತಾದಿಷು ।
ಯಥಾಯೋಗಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪರಃ ॥ ೧೦೯ ॥

ಅ: ಎಲೈ ರಾಜಶ್ರೇಷ್ಠನಾದ ಜನಮೇಜಯನೇ! ಸಾಂಖ್ಯ, ಪಾಶುಪತ ಮೊದಲಾದ (ಇತರ) ಶಾಸ್ತ್ರಗಳಲ್ಲಿ (ಪಂಚರಾತ್ರೋಕ್ತವಾದ) ಉಪಾಯಕ್ಕೆ ಅನುಗುಣವಾಗಿ, ಉಪಕ್ರಮ, ಉಪಸಂಹಾರ ಮೊದಲಾದ (ಪಂಚರಾತ್ರೋಕ್ತವಾದ) ನ್ಯಾಯಗಳಿಗೆ ಅನುಗುಣವಾಗಿ ವಿಚಾರಮಾಡಿದಾಗ ಸಿದ್ಧವಾಗುವ ವಿಷ್ಣುಸರ್ವೋತ್ತಮತ್ವ ವಿಷಯದಲ್ಲಿ ಮಾತ್ರ ಅವು ಪ್ರಮಾಣವೆನ್ನಿಸುತ್ತವೆ.

---

೧೦೮. ಏತೇಷು ಜ್ಞಾನೇಷು – ಜ್ಞಾನಸಾಧನತ್ವಾತ್ ಜ್ಞಾನಪದವಾಚ್ಯೇಷು ಸಾಂಖ್ಯಯೋಗ ಪಾಶುಪತ ವೇದಾರಣ್ಯಕಾಖ್ಯಶಾಸ್ತ್ರೇಷು ಏತತ್ ಪಂಚರಾತ್ರಾಖ್ಯಂ ಶಾಸ್ತ್ರಂ ವಿಶಿಷ್ಯತೇ । ವೇದಪಂಚರಾತ್ರಯೋರೇಕವಿಧತ್ವಾತ್ ಗ್ರಂಥತ್ರಯಾದಿದಂ ಶಾಸ್ತ್ರಮುತ್ತಮಮಿತ್ಯರ್ಥಃ । ಅತ ಏವ ವೇದಾರಣ್ಯಕ ಪದೇನ ಪಂಚರಾತ್ರಮಪ್ಯುಪಲಕ್ಷ್ಯತೇ । -(ವಾ)

ವಿಃ ಸಾಂಖ್ಯ, ಪಾಶುಪತ ಮೊದಲಾದ ಇತರ ಶಾಸ್ತ್ರಗಳು ಪಂಚರಾತ್ರದಂತೆ ಸಮಗ್ರವಾಗಿ ಪ್ರಮಾಣವಲ್ಲವಾದರೂ, ವೇದಾದಿಗಳಿಗೆ ಅನುಕೂಲವಾದ ವಿಷ್ಣುಸರ್ವೋತ್ತಮತ್ವಾದಿ ಪ್ರಮೇಯ–ಗಳನ್ನು ತಿಳಿಸಿಕೊಡುವ ಅಂಶಗಳಲ್ಲಿ ಮಾತ್ರ ಅವು ಪ್ರಮಾಣವಾಗಿವೆ ಎಂದು ಭಾವ.

ಪಂಚರಾತ್ರಜ್ಞಾನದ ಮಹಿಮೆ

ಪಂಚರಾತ್ರವಿದೋ ಮುಖ್ಯಾ ಯಥಾಕ್ರಮಪರಾ ನೃಪ ।
ಏಕಾಂತಭಾವೋಪಗತಾ ವಾಸುದೇವಂ ವಿಶಂತಿ ತೇ ॥ ೧೧೦ ॥

ಜನಮೇಜಯಃ –

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಭಿನ್ನಾನಿ ಉತಾಹೋ ನೇತಿ ಬ್ರೂಚ್ಯತಾಮ್ ॥ (೩೪೯/೧)

ವೈಶಂಪಾಯನಃ –

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ ॥ (೩೪೯/೬೪)

ಜ್ಞಾನಾನಿ - ಜ್ಞಾನಸಾಧನತ್ವಾತ್ ಜ್ಞಾನಪದವಾಚ್ಯಾನಿ ಶಾಸ್ತ್ರಾಣಿ । ಭಿನ್ನಾನಿ – ಪರಸ್ಪರವಿರುದ್ಧಾರ್ಥಪ್ರತಿ-ಪಾದಕಾನಿ ಇತ್ಯರ್ಥಃ । ಅನ್ಯಥಾ ಸ್ವರೂಪಭೇದಸ್ಯ ಸ್ವತಃ ಸಿದ್ಧತ್ವೇನ ಪ್ರಶ್ನಾಯೋಗಾತ್ । –(ವಾ)

★೧೦೮ ಅಧ್ಯಾಯ, ೩೪೯ ಶ್ಲೋ. ೬೮.

೧೦೯. ಆದಿಪದೇನ ಯೋಗೋ ಗ್ರಾಹ್ಯಃ । ತದ್ಗುಣಸಂವಿಜ್ಞಾನ ಬಹುವ್ರೀಹಿಣಾ ಬಹುವಚನಮ್ । ಅಕ್ಷಪಾದೋಕ್ತ-ತರ್ಕಪೂರ್ವಮೀಮಾಂಸಾಶಾಕ್ತಸೌರಗಾಣಾಪತ್ಯಾದ್ಯನುವಾದಪೂರ್ವಕಂ ವಾ ಆದಿಪದಮ್ । – (ಜ)

೧೦೯. ಯಥಾಯೋಗಂ – ಪಂಚರಾತ್ರೋಕ್ತೋಪಾಯಮನತಿಕ್ರಮ್ಯ; -(ವಾ)

೧೦೯. ಯಥಾನ್ಯಾಯಂ – ಪಂಚರಾತ್ರೋಕ್ತನ್ಯಾಯಮನತಿಕ್ರಮ್ಯ; -(ವಾ)

ಉಪಕ್ರಮಾದಿನ್ಯಾಯೈರಪಿ । –(ಜ)

೧೦೯. ಕ್ವಚಿತ್ ಕ್ವಚಿತ್ ನಾರಾಯಣಃ ಪರಃ ಇತಿ ಪ್ರತಿಪಾದನೇ 'ನಿಷ್ಕೋತ್ಕರ್ಷೇ ವ್ಯವಸ್ಥಾಯಾಂ' ಇತ್ಯನುಶಾಸನಾತ್ ತಸ್ಮಿನ್ನಂಶೇ ನಿಷ್ಠಾ ಉತ್ಕರ್ಷಃ ಪ್ರಾಮಾಣ್ಯಮಿತಿ ಯಾವತ್ । ಅಸ್ತೀತಿ ಯೋಜನಾ। –(ವಾ)

೧೦೯. ನ್ಯಾಯೈರ್ಯೋಗೇನ ಚ ತೇಷಾಮಪಿ ವಿಷ್ಣುಪರತಾ ಜ್ಞೇಯೇತಿ ಭಾವಃ । ತೇಷು ಶಾಸ್ತ್ರೇಷು 'ಪ್ರಕೃತಿಜ್ಞಾನಾತ್, ಪ್ರಾಣಾಯಾಮಾದಿನಾ ಶ್ವಾಸನಿರೋಧಾತ್, ಪಶುಪತಿಜ್ಞಾನಾದ್ವಾ ಮೋಕ್ಷಃ' ಇತಿ ಪ್ರಾಯಶಃ ಪ್ರತಿಪಾದ್ಯತೇ । ಅನ್ಯಥಾ ಉಕ್ತಜ್ಞಾನಭೇದಾಯೋಗಾತ್ ಪಂಚರಾತ್ರನ್ಯಾಯಮನುಸೃತ್ಯ ಕ್ವಚಿತ್ ಭಾಗೇ ಭಕ್ತ್ಯಾವಾ ಹರಿಭಕ್ತಾನಾಮಪಿ ಸ್ವರ್ಗಗ್ರಂಥೇ ರುಚ್ಯುತ್ಪಾದನಾಯ ವಾ ಭಗವನ್ಮಾಹಾತ್ಮ್ಯಮುಚ್ಯತೇ । ತದಾ ತಸ್ಯಾಂಶಸ್ಯ ಪ್ರಾಮಾಣ್ಯಮಂಗೀಕ್ರಿಯತೇ ಇತಿ ಭಾವಃ। (ವಾ)

೧೦೯. ಅನ್ಯಥಾ ಏತೇಭ್ಯೋ ವಿಶಿಷ್ಯತೇ ಇತ್ಯೇವ ಸ್ಯಾತ್ ನ ತು 'ಏತೇಷು' ಇತಿ ನಿರ್ಧಾರಣೇ ಸಪ್ತಮೀ । ಸಾ ಹಿ 'ಗೋಷು ಕೃಷ್ಣಾ ಸಂಪನ್ನಕ್ಷೀರತಮಾ' ಇತ್ಯಾದೌ ವಿಶೇಷ್ಯಮಾಣಕೃಷ್ಣಾಯಾ ಅಪಿ ಗೋಃ ಗೋತ್ವೇನ ಗೋಷು ಪ್ರವೇಶವತ್ । ಪಂಚರಾತ್ರಸ್ಯಾಪಿ ಮುಖ್ಯತೋ ಲಕ್ಷಣಯಾ ವಾ ಉಕ್ತೇಷು ಪ್ರವೇಶೇ ಸತ್ಯೇವ ಸ್ಯಾದಿತಿ ಜ್ಞೇಯಮ್ । -(ವಾ)

★೧೦೯ ಅ–೩೪೯ ಶ್ಲೋ. ೭೨.

ಅ: ಎಲೈ ರಾಜನೇ! ಪಂಚರಾತ್ರವನ್ನು ಬಲ್ಲವರು ಪ್ರಧಾನರು; ಅವರು ದೇವತಾ-ತಾರತಮ್ಯವನ್ನು ಅರಿತವರೂ, ಅವ್ಯಭಿಚರಿತ ಭಕ್ತಿಯನ್ನು ಹೊಂದಿದವರೂ ಆಗಿ ವಾಸುದೇವನನ್ನು ಪ್ರವೇಶಿಸುವರು.

ವಿ: ೧) ಪಂಚರಾತ್ರವನ್ನು ಬಲ್ಲವರಿಗೆ ದೇವತಾತಾರತಮ್ಯ ಜ್ಞಾನ ಮತ್ತು ಅವ್ಯಭಿಚರಿತವಾದ ಭಗವದ್ಭಕ್ತಿಗಳು ಇರುತ್ತವೆ; ಆದ್ದರಿಂದ ಅವರು ಮುಕ್ತಿಯನ್ನು ಪಡೆಯುವರು; ಅವುಗಳನ್ನು ಹೊಂದಿರದ ಇತರರಿಗೆ ಮುಕ್ತಿ ದೊರೆಯದು; ಹೀಗೆ ಮುಕ್ತಿಗೆ ಕಾರಣವಾಗುವ ಪಂಚರಾತ್ರವೇ ಸಾಂಖ್ಯಾದಿಶಾಸ್ತ್ರಗಳಿಗಿಂತ ಮಿಗಿಲು ಎಂದು ಭಾವ.

೨) ವಾಸುದೇವರೂಪವು ಮುಕ್ತಿಯನ್ನು ನೀಡುವ ಭಗವದ್ರೂಪ ಎಂದು ಮೊದಲ ಅಧ್ಯಾಯದಲ್ಲಿ ಹೇಳಿರುವರು (ಶ್ಲೋ.೫); ಆದ್ದರಿಂದ 'ವಾಸುದೇವಂ ವಿಶಂತಿ' ಎಂಬುದಕ್ಕೆ ಮುಕ್ತರಾಗುವರು ಎಂದು ಅರ್ಥ.

ಮಹಾಭಾರತದಲ್ಲಿ ಜೀವೇಶ್ವರಭೇದ

ಜನಮೇಜಯ ಉವಾಚ :

ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ।
ಕೋ ಹ್ಯತ್ರ ಪುರುಷಶ್ರೇಷ್ಠಸ್ತಂ ಭವಾನ್ ವಕ್ತುಮರ್ಹಸಿ ॥ ೧೧೧ ॥

---

೧೧೦. ಯಥಾಕ್ರಮಪರಾಃ– ದೇವತಾತಾರತಮ್ಯಾಸಕ್ತಾಃ ; –(ಜ)
ದೇವತಾತಾರತಮ್ಯೇ ತಾತ್ಪರ್ಯವಂತಃ। –(ವ)

೧೧೦. ಏಕಾಂತಭಾವೋಪಗತಾಃ – ಏಕಾಂತಭಾವೇನ ಅವ್ಯಭಿಚರಿತಭಕ್ತ್ಯಾ ಉಪಗತಾಃ ಏಕ ಏವ ಅಂತಃ ಸರ್ವೋತ್ತಮಃ ಇತಿ ಭಾವಂ ಭಕ್ತಿಂ ಉಪಗತಾಃ ಪ್ರಾಪ್ತಾಃ । ಏಕಾಂತಃ ಅವ್ಯಭಿಚರಿತಃ ಭಾವೋ ಭಕ್ತಿಃ, ತಂ ಉಪಗತಾ ಇತಿ ವಾ। –(ಜ)

೧೧೦. ಮಾಹಾತ್ಮ್ಯಜ್ಞಾನಪೂರ್ವಕಸುದೃಢಸ್ನೇಹಜನನದ್ವಾರಾ ಮೋಕ್ಷಹೇತುತ್ವಾತ್ ಪಂಚರಾತ್ರಸ್ಯ ವೈಶಿಷ್ಟ್ಯಮಿತಿ ಭಾವಃ। –(ವ)

೧೧೦. ವಾಸುದೇವಂ ವಿಶಂತಿ ಮುಕ್ತಿಂ ಪ್ರಾಪ್ನುವಂತೀತ್ಯರ್ಥಃ। –(ಜ)

★೧೧೦. ಅ–೩೪೯, ಶ್ಲೋ. ೭೨.

೧೧೧. ಭಾರತಸ್ಯ ವಾಕ್ಯಾಂತರಪರ್ಯಾಲೋಚನಯಾऽಪಿ ಅಶೇಷಭಾರತಸ್ಯ ವಿಷ್ಣೋಃ ಸರ್ವೋತ್ತಮತ್ವೇ ತಾತ್ಪರ್ಯಮವಸೀಯತೇ ಇತ್ಯಭಿಪ್ರೇತ್ಯ ವಾಕ್ಯಾಂತರಾಣ್ಯುದಾಹರತಿ। –(ವ)

೧೧೧. ಆತ್ಮಾನಃ ಕಂ ಬಹವಃ ಭಿನ್ನಾಃ ಉತಾಹೋ ಏಕ ಏವ ಆತ್ಮಾ ಇತಿ । ಅತ್ರೈಕಾತ್ಮಮತಂ ಅಪ್ರಾಮಾಣಿಕಂ ಅನುಭವವಿರುದ್ಧಂ ಚೇತಿ ದ್ವಿತೀಯಪಕ್ಷಂ ಸ್ವಯಮೇವ ಪರಿಹೃತ್ಯ ಪ್ರಾಮಾಣಿಕತ್ವಾದಾದ್ಯಮಂಗೀಕೃತ್ಯ ತತ್ರಾಪಿ ಜನಮೇಜಯಃ ಪೃಚ್ಛತಿ ಕೋ ಹೀತಿ। –(ವ)

೧೧೧. ಭಾರತ (ಶಾಂತಿ.೩೫೦/೧-೩)

ಅ: ಬ್ರಹ್ಮನ್! ವೈಶಂಪಾಯನರೇ! ಚೇತನರು ಅನೇಕರೋ? ಅಥವಾ ಒಬ್ಬನೋ? (ಅನೇಕರಾದಲ್ಲಿ) ಅವರಲ್ಲಿ ಪುರುಷಶ್ರೇಷ್ಠನಾರು? ಅವನನ್ನು ತಾವು ನನಗೆ ತಿಳಿಸಿ ಕೊಡಬೇಕು.

ಎ: ೧) ಇದು ವೈಶಂಪಾಯನರನ್ನು ಕುರಿತು ಜನಮೇಜಯನ ಪ್ರಶ್ನೆ.

೨) ಆತ್ಮರು ಭಿನ್ನರೋ ಅಥವಾ ಅಭಿನ್ನರೋ? ಎಂಬುದಾಗಿ ಪ್ರಶ್ನಿಸುವ ಜನಮೇಜಯನು ಆತ್ಮೈಕ್ಯಮತವು ಅಪ್ರಾಮಾಣಿಕವೂ ಅನುಭವವಿರುದ್ಧವೂ ಆಗಿದೆ ಎಂಬ ಕಾರಣದಿಂದ ಅದನ್ನು ಸ್ವತಃ ನಿರಾಕರಿಸುತ್ತ ಆತ್ಮಬಹುತ್ವಪಕ್ಷವೇ ಪ್ರಾಮಾಣಿಕವೆಂಬ ಭಾವದಿಂದ ಅಂತಹ ಬಹುಚೇತನರಲ್ಲಿ ಪರಮಚೇತನನಾರು ಎಂದು ಪ್ರಶ್ನಿಸುತ್ತಿರುವನು'' ಎಂಬ ವಿವರಣೆಯು ವರದರಾಜೀಯ ವ್ಯಾಖ್ಯಾನದಲ್ಲಿದೆ.

ವೈಶಂಪಾಯನ ಉವಾಚ :

ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ।
ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮ್ ॥ ೧೧೨ ॥

ಅ: ಕುರುಕುಲತಿಲಕನಾದ ಜನಮೇಜಯ! ಒಬ್ಬನೇ ಚೇತನ ಎಂಬ ಮತವನ್ನು ಪ್ರಾಜ್ಞರು ಒಪ್ಪುವುದಿಲ್ಲ. ಅನೇಕಪುರುಷರ ಉತ್ಪತ್ತಿಗೆ ಕಾರಣವು ಒಂದೇ ಇರುವಂತೇ ಜಗತ್ತಿಗೆಲ್ಲ ಕಾರಣಪುರುಷನಾಗಿ ಪೂರ್ಣನೂ, ಗುಣಗಳಿಂದ ಅಧಿಕನೂ ಆದ ವಿಷ್ಣುವು ಇರುವನು ಎಂಬುದಾಗಿ ನಾನು ತಿಳಿಸುವೆನು.

---

೧೧೨. ''ವಿಶ್ವಂ ಪೂರ್ಣಮಿಹೋಚ್ಯತೇ''। –ಗೀತಾಭಾಷ್ಯ

★೧೧೨. ಭಾರತ ಅ–೩೫೦, ಶ್ಲೋ. ೨, ೩.

೧೧೨. ಇದನ್ನು ಶ್ರೀಮದಾಚಾರ್ಯರು ತಮ್ಮ ದ್ವಾದಶಸ್ತೋತ್ರದಲ್ಲಿ ಹೀಗೆ ಸಂಗ್ರಹಿಸಿರುವರು: (೩/೭)

ವ್ಯವಹಾರಭಿದಾऽಪಿ ಗುರೋರ್ಜಗತಾಂ ನ ತು ಚಿತ್ತಗತಾ ಸ ಹಿ ಚೋದ್ಯಪರಮ್ ।
ಬಹವಃ ಪುರುಷಾಃ ಪುರುಷಪ್ರವರೋ ಹರಿರಿತ್ಯವದತ್ ಸ್ವಯಮೇವ ಹರಿಃ ॥

೧೧೨. ಅತ್ರ ಪ್ರಶ್ನಪೂರ್ವಕಂ ಪೃಷ್ಟತ್ವಾತ್ ಉಕ್ತಂ ಜಗತ್ಕಾರಣತ್ವಂ ಸರ್ವೋತ್ತಮತ್ವಂ ಯಥಾರ್ಥಮಿತಿ ಭಾವಃ। –(ಜ)

೧೧೨. ಭಾರತ (ಶಾಂತಿ. ೩೫೧/೯, ೨೧)

ಎ: ಆತ್ಮೈಕ್ಯಮತವನ್ನು ಪ್ರಾಜ್ಞಸಂಮತವಲ್ಲವೆಂದು ಸ್ಫುಟವಾಗಿ ತಿಳಿಸುತ್ತ ವೈಶಂಪಾಯನರು ಆತ್ಮಬಹುತ್ವಪಕ್ಷವನ್ನು ತಿಳಿಸಿರುವರು; ಅನೇಕಚೇತನರಲ್ಲೂ ವಿಷ್ಣುವೇ ಸರ್ವೋತ್ತಮ ಎಂದು ತಿಳಿಸಿ ಅದಕ್ಕೆ ಅವನು ಪೂರ್ಣನೂ, ಗುಣಾಧಿಕನೂ ಇತರ ಜಗತ್ತಿಗೆ ಕಾರಣಪುರುಷನೂ ಆಗಿರುವುದೇ ಗಮಕ ಎಂದು ಪ್ರತಿಪಾದಿಸಿರುವರು.

ಬ್ರಹ್ಮನು ಶಿವನಿಗೆ ಹೇಳಿದ ಹರಿಮಹಿಮೆ

ಆಹ ಬ್ರಹ್ಮೈತಮೇವಾರ್ಥಂ ಮಹಾದೇವಾಯ ಪೃಚ್ಛತೇ ।
ತಸ್ಯೈಕಸ್ಯ ಮಮತ್ವಂ ಹಿ ಸ ಚೈಕಃ ಪುರುಷೋ ವಿರಾಟ್ ॥ ೧೧೩ ॥

ಅ: ತನ್ನನ್ನು ಪ್ರಶ್ನಿಸಿದ ರುದ್ರದೇವರಿಗೆ ಬ್ರಹ್ಮದೇವರು ಇದೇ ವಿಷಯವನ್ನೇ ತಿಳಿಸಿದರು. ''ವಶಿತ್ವರೂಪವಾದ ಮಮತ್ವವು ಆ ವಿಷ್ಣು ಒಬ್ಬನಿಗೆ ಮಾತ್ರವೇ ಉಚಿತ; ಅವನು ಸ್ವತಂತ್ರನೂ, ಗುಣಪೂರ್ಣನೂ, ಸರ್ವೋತ್ತಮನೂ ಆಗಿರುವನು.

ಅಹಂ ಬ್ರಹ್ಮಾ ಚಾದ್ಯ ಈಶಃ ಪ್ರಜಾನಾಂ
ತಸ್ಮಾಜ್ಜಾತಸ್ತ್ವಂ ಚ ಮತ್ತಃ ಪ್ರಸೂತಃ ।
ಮತ್ತೋ ಜಗತ್ ಸ್ಥಾವರಂ ಜಂಗಮಂ ಚ
ಸರ್ವೇ ವೇದಾಃ ಸರಹಸ್ಯಾಶ್ಚ ಪುತ್ರ ॥ ೧೧೪ ॥

ಅ: ಪುತ್ರನಾದ ಶಿವ! ಪ್ರಜೆಗಳಿಗೆಲ್ಲ ಮೊದಲನೆಯವನೂ ಒಡೆಯನೂ ಆದ ನಾನೂ ಅವನಿಂದಲೇ ಜನಿಸಿದವನು; ನೀನು ನನ್ನಿಂದ ಜನಿಸಿದವನು; ಜಡಚೇತನರೂಪವಾದ ಈ ಸಕಲ ಜಗತ್ತು ನನ್ನಿಂದಲೇ ಸೃಷ್ಟಿಸಲ್ಪಟ್ಟಿತು; ಉಪನಿಷತ್ಸಮೇತವಾದ ಸಕಲವೇದಗಳು ನನ್ನಿಂದಲೇ ಪ್ರಕಟವಾದವು.

---

೧೧೩. ಬ್ರಹ್ಮರುದ್ರಯೋರಿತಿಹಾಸೇನಾಪಿ ಉತ್ತಮತ್ವಂ ಹರೇಃ ಸಾಧಯತಿ । – (ಜ)

೧೧೩. ಅಹಮೇಕಃ ಸ್ವತಂತ್ರಃ ಇತರತ್ ಸರ್ವಂ ಮಮ ಮದೀಯಮಿತಿ ಮಮತ್ವಂ – (ವ)

೧೧೩. ತಸ್ಯೈಕಸ್ಯ ಮಮತ್ವಂ ಹೀತ್ಯತ್ರ ಸಕಲಂ ಜಗತ್ ಮಮ ವಶೇ ವರ್ತತೇ ಇತ್ಯಾಕಾರೇಣ ಯದ್ವಶಿತ್ವಾ ಪರಪರ್ಯಾಯಂ ಮಮತ್ವಂ ನ ತು ರಾಗಬದ್ಧಪುರುಷಸ್ಯ ಸ್ವಾವಶೇऽಪಿ ದೇಹಗೇಹಾದಾವಿವ ಮಮತ್ವಮ್ । ತಸ್ಯ ಏಕಸ್ಯೈವ ನ ತು ಅನ್ಯಸ್ಯ ತದ್ವಶಿತ್ವರೂಪೈಶ್ವರ್ಯಸ್ಯಾನ್ಯತ್ರಾಭಾವಾದಿತಿ ಭಾವಃ । ವಶೀಕರಣಶಕ್ತಿರ್ಹಿ ವಶಿತ್ವಮ್ ॥ -(ವಾ)

೧೧೩. ವಿಶೇಷೇಣ ರಾಜತೇ ಇತಿ ವಿರಾಟ್ ಸರ್ವೋತ್ತಮಃ ॥ – (ಜ)

೧೧೪. ಸರಹಸ್ಯಾಃ–ಸೋಪನಿಷದಃ । – (ಜ)

೧೧೪. ವೇದಾನಾಂ ಸೃಷ್ಟಿವಾಕ್ಯಾನಿ ಭವೇಯುರ್ಯಕ್ಕಪೇಕ್ಷಯಾ ॥ –ಬ್ರಹ್ಮಾಂಡಪುರಾಣ, (ವಿಷ್ಣುತತ್ತ್ವನಿರ್ಣಯ)

ವಿಃ ೧) ಬ್ರಹ್ಮರುದ್ರಸಂವಾದದಿಂದಲೂ ಶ್ರೀಹರಿಯ ಸರ್ವೋತ್ತಮತ್ವವನ್ನು ಸಮರ್ಥಿಸುತ್ತಿರುವರು. ಈ ಪ್ರಸಂಗವು ಮಹಾಭಾರತದ ಶಾಂತಿಪರ್ವದ ಮೋಕ್ಷಧರ್ಮಪರ್ವದಲ್ಲಿ ಬಂದಿದೆ. ಒಂದರ್ಥದಲ್ಲಿ ಮಹಾಭಾರತದ ಈ ಭಾಗ ತಲವಕಾರೋಪನಿಷತ್ತಿನ ಬ್ರಹ್ಮರುದ್ರಸಂವಾದವನ್ನು ಜ್ಞಾಪಿಸುವಂತಿದೆ :

ವೈಜಯಂತೇ ಸಮಾಸೀನಮೇಕಾಂತೇ ಚತುರಾನನಮ್ ।
ವಿಷ್ಣೋರ್ವಿವಿಧಿಸುಸ್ತತ್ತ್ವಂ ಪರ್ಯಪೃಚ್ಛತ್ ಸದಾಶಿವಃ ॥

೨) ಇಲ್ಲಿ 'ಮಮತ್ವ' ಎಂದರೆ 'ಇದೆಲ್ಲ ನನ್ನದು' ಎಂಬ ವಶಿತ್ವಬುದ್ಧಿ ಎಂದರ್ಥ. ಇಲ್ಲಿಯ ಮಮತ್ವವು ಸ್ವಾಮಿತ್ವದ್ಯೋತಕವಾದ ಗುಣವೇ ಹೊರತು, ರಾಗದ್ವೇಷರಹಿತರಾದ ಮನುಷ್ಯರು ದೇಹಗೇಹಾದಿಗಳಲ್ಲಿ ಹೊಂದಿರುವ ಭ್ರಮರೂಪವಾದ 'ಮಮಕಾರ'ವೆಂಬ ದೋಷವಲ್ಲ.

೩) ಬ್ರಹ್ಮಜನಕನಾದ ವಿಷ್ಣುವು ಸರ್ವೋತ್ತಮ; ರುದ್ರಜನಕರಾದ ಬ್ರಹ್ಮ ಜೀವೋತ್ತಮ ಮತ್ತು ರುದ್ರಾದಿಗಳ ಸ್ಥಾನ ಅನಂತರದ್ದು ಎಂಬ ಪ್ರಮೇಯ ಇಲ್ಲಿ ಉಕ್ತವಾಗಿದೆ.

೪) ಇಲ್ಲಿ ವೇದಗಳು ಅಪೌರುಷೇಯವಾದ್ದರಿಂದ ಅವು ಜನಿಸುವುದು ಎಂದರೆ 'ಉಪದೇಶಿಸಲ್ಪಡುವುದು' ಎಂದೇ ಅರ್ಥ.

ಭೀಮ ಹೇಳಿದ ಶ್ರೀಹರಿಯ ಗುಣಗಳ ಅನಂತ್ಯ

ತಥೈವ ಭೀಮವಚನಂ ಧರ್ಮಜಂ ಪ್ರತ್ಯುದೀರಿತಮ್ ।
ಬ್ರಹ್ಮೇಶಾನಾದಿಭಿಃ ಸರ್ವೈಃ ಸಮೇತೈರ್ಯದ್ಗುಣಾಂಶಕಃ ।
ನಾವಸಾಯಯಿತುಂ ಶಕ್ಯೋ ವ್ಯಾಚಕ್ಷಾಣೈಶ್ಚ ಸರ್ವದಾ ॥ ೧೧೫ ॥

ಅಃ ಧರ್ಮರಾಜನನ್ನು ಕುರಿತು ಭೀಮಸೇನನ ಮಾತು ಸಹ ಹಾಗೆಯೇ ಇದೆ : ''ಬ್ರಹ್ಮದೇವರು, ರುದ್ರದೇವರು ಮೊದಲಾದ ಸಕಲರೂ ಒಟ್ಟುಗೂಡಿ ಎಡೆಬಿಡದೆ ನುಡಿಯುತ್ತಿದ್ದರೂ ಶ್ರೀಹರಿಯ ಒಂದುಗುಣದ ಒಂದು ಅಂಶವನ್ನೂ ಸಹ ಸಾಕಲ್ಯೇನ ಹೇಳಿ ಮುಗಿಸಲು ಅಸಾಧ್ಯ.

ಸ ಏಷ ಭಗವಾನ್ ಕೃಷ್ಣೋ ನೈವ ಕೇವಲಮಾನುಷಃ ।
ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧಸಂಭವಃ ॥ ೧೧೬ ॥

ಅಃ ಆ ಭಗವಂತನೇ ಈ ಶ್ರೀಕೃಷ್ಣ ; ಇವನು ಮನುಷ್ಯಮಾತ್ರನಲ್ಲ; ಬ್ರಹ್ಮದೇವರು ಇವನ ಪ್ರಸಾದದಿಂದ ಜನಿಸಿದವರು, ರುದ್ರದೇವರು ಇವನ ಕ್ರೋಧದಿಂದ ಹುಟ್ಟಿದವರು.''

ವಿ: ೧) ಶ್ರೀಹರಿಯ ಗುಣಗಳು ಅನಂತಾನಂತ; ಮಾತ್ರವಲ್ಲದೆ, ಅವನ ಒಂದೊಂದು ಗುಣವೂ ಪ್ರತ್ಯೇಕವಾಗಿಯೇ ಅನಂತ ಎಂಬ ಇಲ್ಲಿಯ ಭಾವ ಗಮನಾರ್ಹ.

೨) ದ್ವಾದಶಸ್ತೋತ್ರದ

''ನೈವೋದಾಪುರ್ಗುಣಂತೋಽಂತಂ ಯದ್ಗುಣಾನಾಮಜಾದಯಃ ।'' (೧/೧೨)

– ಎಂಬ ಮಾತನ್ನೂ, ಇಲ್ಲಿ ಗಮನಿಸಬಹುದು.

೩) ಈ ಶ್ಲೋಕಗಳೆಲ್ಲ ಮುದ್ರಿತ ಭಾರತಪ್ರತಿಗಳಲ್ಲಿ ಸ್ವಲ್ಪ ವ್ಯತ್ಯಾಸದೊಂದಿಗೆ ದೊರೆಯುತ್ತವೆ.

ಶ್ರೀಕೃಷ್ಣ ಯುಧಿಷ್ಠಿರನಿಗೆ ತಿಳಿಸಿದ ಹರಿಸರ್ವೋತ್ತಮತ್ವ

ವಚನಂ ಚೈವ ಕೃಷ್ಣಸ್ಯ ಜ್ಯೇಷ್ಠಂ ಕುಂತೀಸುತಂ ಪ್ರತಿ ।
ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ ।
ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥ ೧೧೭ ॥

ಯಥಾಽಽಶ್ರಿತಾನಿ ಜ್ಯೋತೀಂಷಿ ಜ್ಯೋತಿಃಶ್ರೇಷ್ಠಂ ದಿವಾಕರಮ್ ।
ಏವಂ ಮುಕ್ತಗಣಾಃ ಸರ್ವೇ ವಾಸುದೇವಮುಪಾಶ್ರಿತಾಃ ॥ ೧೧೮ ॥

ಅ: ಕುಂತಿಯ ಜ್ಯೇಷ್ಠಪುತ್ರನಾದ ಧರ್ಮರಾಜನನ್ನು ಕುರಿತ ಶ್ರೀಕೃಷ್ಣನ ವಚನವೂ ಹಾಗೆಯೇ ಇದೆ :

''ದೇವತೆಗಳು ಸದಾ ಶಿವನನ್ನು ಆಶ್ರಯಿಸಿರುವರು; ಶಿವನು ಸದಾ ಬ್ರಹ್ಮನನ್ನು ಆಶ್ರಯಿಸಿರುವನು; ಬ್ರಹ್ಮನು ಸದಾ ನನ್ನನ್ನು ಆಶ್ರಯಿಸಿರುವನು; ನಾನು ಯಾರನ್ನೂ ಆಶ್ರಯಿಸಿಲ್ಲ''.

''ಜ್ಯೋತಿಸ್ಸುಗಳು ಜ್ಯೋತಿಃಶ್ರೇಷ್ಠನಾದ ದಿವಾಕರನನ್ನು ಆಶ್ರಯಿಸಿರುವಂತೆ, ಸಕಲ ಮುಕ್ತರ ಸಮೂಹಗಳೂ ವಾಸುದೇವನನ್ನು ಅವಲಂಬಿಸಿವೆ''.

ವಿ: ೧) ಇದು ಆಶ್ವಮೇಧಿಕಪರ್ವದಲ್ಲಿನ ವೈಷ್ಣವಧರ್ಮಪರ್ವವೆಂಬ ಉಪಪರ್ವದಲ್ಲಿನ ಮಾತು(ಅ. ೯೨). /ಶ್ಲೋ?

★೧೧೭. ಮಹಾಭಾರತ–ಆಶ್ವಮೇಧಿಕಪರ್ವ (೬/೯೨)

೧೧೮. ನನು ಸಂಸಾರೇ ಭೇದಸದ್ಭಾವೇನ ಬ್ರಹ್ಮಾದ್ಯಾಧಾರತ್ವೇಽಪಿ ಮುಕ್ತೌ ಭೇದಾಭಾವೇ ನ ತದಾಧಾರತ್ವ–ಮಿತ್ಯಾಶಂಕ್ಯ ತತ್ರಾಪಿ ಬ್ರಹ್ಮಾದಿಮುಕ್ತಗಣಾನಾಂ ಭಗವಾನೇವ ಆಧಾರ ಇತಿ ಸದೃಷ್ಟಾಂತಮಾಹ ಯಥೇತಿ। –(ವ)

೨) ಕುಂತಿಯ ಜ್ಯೇಷ್ಠಪುತ್ರ ಕರ್ಣನಾದರೂ ಅವನು ಕಾನೀನ; ವಿವಾಹದ ಅನಂತರ ಜನಿಸಿದ ಪುತ್ರರಲ್ಲಿ ಧರ್ಮರಾಜನೇ ಜ್ಯೇಷ್ಠನು ಎಂಬ ಭಾವದಿಂದ ಧರ್ಮರಾಜನನ್ನು 'ಜ್ಯೇಷ್ಠ' ನೆಂದು ಕರೆದಿರುವರು.

೩) ''ರುದ್ರಂ ಸಮಾಶ್ರಿತಾ ದೇವಾಃ'' ಎಂಬ ಶ್ಲೋಕವನ್ನು ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲೂ ಉದಾಹರಿಸಿರುವರು.

೪) ಇಲ್ಲಿನ ಆಶ್ರಯಆಶ್ರಯಿಭಾವವು ಬಿಂಬಪ್ರತಿಬಿಂಬ ಭಾವವೆಂದು ತಿಳಿಯಬೇಕು. ಮೊದಲ ಅಧ್ಯಾಯದಲ್ಲಿ 'ಆಭಾಸಕೋಽಸ್ಯ ಪವನಃ ಪವನಸ್ಯ ರುದ್ರಃ' ಎಂಬುದಕ್ಕೆ ಈ ವಾಕ್ಯವು ಪೋಷಕವಾಗಿರುವುದರಿಂದ, ಬ್ರಹ್ಮದೇವರು 'ಮಹಾಲಕ್ಷ್ಮಿಯನ್ನು ಆಶ್ರಯಿಸಿರುವರು ಎಂದು ಏತಕ್ಕೆ ಹೇಳಲಿಲ್ಲ ಎಂಬ ಶಂಕೆಗೆ ಅವಕಾಶವಿಲ್ಲ.

೫) ಅಥವಾ 'ಬ್ರಹ್ಮಾ ಮಾಮಾಶ್ರಿತೋ ನಿತ್ಯಂ' ಎಂಬಲ್ಲಿನ; 'ಮಾಂ' ಎಂಬುದಕ್ಕೆ 'ಲಕ್ಷ್ಮೀಂ' ಎಂದು ಅರ್ಥ ಮಾಡಿ, ಅನಂತರ ಲಕ್ಷ್ಮಿಯು ತನ್ನನ್ನು ಆಶ್ರಯಿಸಿರುವಳು, ತಾನು ಮಾತ್ರ ಯಾರನ್ನೂ ಆಶ್ರಯಿಸಿಲ್ಲ' ಎಂದೂ ಅರ್ಥ ಮಾಡಬಹುದು.

೬) ಮುಕ್ತರಿಗೂ ಪರಮಾತ್ಮನೇ ಆಶ್ರಯವೆಂಬ ಮಾತಿನಲ್ಲಿ ಅದ್ವೈತ ಮತ್ತು ವಿಶಿಷ್ಟಾದ್ವೈತಮತಗಳ ನಿರಾಸವೂ ಇದೆ ಎಂಬುದನ್ನು ಗಮನಿಸಬೇಕು.

ಭವಿಷ್ಯತ್ಪರ್ವದಲ್ಲಿ ಬಂದಿರುವ ಭಾರತದ ತಾತ್ಪರ್ಯ

ಭವಿಷ್ಯತ್ಪರ್ವಗಂ ಚಾಪಿ ವಚೋ ವ್ಯಾಸಸ್ಯ ಸಾದರಮ್ ।
ವಾಸುದೇವಸ್ಯ ಮಹಿಮಾ ಭಾರತೇ ನಿರ್ಣಯೋದಿತಃ ॥ ೧೧೯ ॥

ತದರ್ಥಾಸ್ತು ಕಥಾಃ ಸರ್ವಾ ನಾನ್ಯಾರ್ಥಂ ವೈಷ್ಣವಂ ಯಶಃ ।
ತತ್ಪ್ರತೀಪಂ ತು ಯದ್ ದೃಶ್ಯೇನ್ನ ತನ್ಮಮ ಮನೀಷಿತಮ್ ॥ ೧೨೦ ॥

---

೧೧೯. ಭಾರತಸ್ಯ ಸರ್ವನಿರ್ಣಾಯಕತ್ವೇ ಭವಿಷ್ಯತ್ಪರ್ವವಚನಸ್ಯ ಉದಾಹೃತತ್ವೇಽಪಿ ಪುನರಾದರಾರ್ಥಂ ಸ್ವಾನಾಂತರಸ್ಥಂ ವ್ಯಾಸವಾಕ್ಯಮನುವದತಿ – ಭವಿಷ್ಯದಿತಿ ॥ –(ಜ)

೧೨೦. ಸರ್ವಾಃ ಕಥಾಃ – ರಾಜಸೂಯವನವಾಸಯುದ್ಧಾದಿರ್ಣನಾದಿಕಥಾಃ ತದರ್ಥಾಃ ವಾಸುದೇವಮಹಿಮ-ನಿರ್ಣಯಾಯ ಕಥಿತಾಃ । ವಿಷ್ಣೌ ಭಕ್ತಿಭರಿತತ್ವಾತ್ ಪಾಂಡವೈ ರಾಜಸೂಯಯಾಗಃ ಕೃತಃ । ವನವಾಸೇ ಯುದ್ಧೇ ಚ ಸರ್ವೇ ಶತ್ರವಃ ಪರಾಜಿತಾಃ, 'ಧರ್ಮೇಣ ರಾಜ್ಯಂ ಕೃತಂ' ಇತ್ಯಾದಿ ಕಥಾವರ್ಣನೇ ವಿಷ್ಣೋರೇವ ಮಹಿಮಾ ನಿರ್ಣೀತೋ ಭವತೀತಿ ಭಾವಃ । ವೈಷ್ಣವಂ ವಿಷ್ಣುಸಂಬಂಧಿ ಯಶಃ ವಿಷ್ಣುಮಹಿಮೋತ್ಕೀರ್ತನಮಿತಿ ಯಾವತ್, ಅನ್ಯಾರ್ಥಂ ನ ಇತಿ ಯೋಜನಾ । –(ವಾ.)

ಅ: ಭವಿಷ್ಯತ್ಪರ್ವದಲ್ಲಿನ ಸತಾತ್ಪರ್ಯವಾದ ಶ್ರೀವ್ಯಾಸರ ವಚನವೂ ಹಾಗೆಯೇ ಇದೆ: ''ವಾಸುದೇವನ ಮಹಿಮೆಯು ಮಹಾಭಾರತದಲ್ಲಿ ನಿರ್ಣಯಪೂರ್ವಕವಾಗಿ ಹೇಳಲ್ಪಟ್ಟಿದೆ. ಇತರ ಕಥೆಗಳೆಲ್ಲ ಅದಕ್ಕೆಂದೇ ಹೇಳಲ್ಪಟ್ಟಿವೆ; ವಿಷ್ಣುವಿಗೆ ಸಂಬಂಧಿಸಿದ ಹಿರಿಮೆಯು ಮಾತ್ರ ಬೇರೆ ಕಾರಣಕ್ಕೋಸ್ಕರ ಬಂದಿಲ್ಲ; ವಿಷ್ಣುಸರ್ವೋತ್ತಮತ್ವಕ್ಕೆ ವಿರುದ್ಧವಾಗಿ ಯಾವುದೇ ಕಂಡರೂ ಅದು ನನ್ನ ಮತವಲ್ಲ;

ಎ: ೧) ಮಹಾಭಾರತದಲ್ಲಿನ ಪಾಂಡವಾದಿ ಇತರ ಸಕಲ ಕಥೆಗಳ ಮುಖ್ಯತಾತ್ಪರ್ಯ ವಿಷ್ಣುಸರ್ವೋತ್ತಮತ್ವಪ್ರತಿಪಾದನೆಯೇ ಆಗಿದೆ; ವಿಷ್ಣುಸರ್ವೋತ್ತಮತ್ವವು ಮಾತ್ರ ಅದರ ಮಹಾತಾತ್ಪರ್ಯವೇ ಆಗಿದೆ,

೨) ಮಹಾಭಾರತವನ್ನು ಬರೆದ ಶ್ರೀವೇದವ್ಯಾಸರೇ ಅದರ ಮಹಾತಾತ್ಪರ್ಯವನ್ನು ವಿಷ್ಣುಪಾರಮ್ಯ ಎಂಬುದಾಗಿ ತಮ್ಮ ಮತ್ತೊಂದು ಗ್ರಂಥವಾದ ಭವಿಷ್ಯತ್ಪರ್ವದಲ್ಲಿ ಹೇಳಿರುವುದರಿಂದ, ಬೇರೆ ಯಾವ ಅರ್ಥವನ್ನು ಅದಕ್ಕೆ ಮಾಡಿದರೂ ಅದು ಅವರಿಗೆ ಸಮ್ಮತವಾಗುವುದಿಲ್ಲ ಎಂದು ಭಾವ.

ಸಮಾಧಿ ಮೊದಲಾದ ಮೂರು ಭಾಷೆಗಳ ಲಕ್ಷಣ

ಭಾಷಾಸ್ತು ತ್ರಿವಿಧಾಸ್ತತ್ರ ಮಯಾ ವೈ ಸಂಪ್ರದರ್ಶಿತಾಃ।
ಉಕ್ತೋ ಯೋ ಮಹಿಮಾ ವಿಷ್ಣೋಃ ಸ ತೂಕ್ತೋ ಹಿ ಸಮಾಧಿನಾ।
ಶೈವದರ್ಶನಮಾಲಂಬ್ಯ ಕ್ವಚಿಚ್ಛೈವೀ ಕಥೋದಿತಾ ॥ ೧೨೧ ॥

ಸಮಾಧಿಭಾಷಯೋಕ್ತಂ ಯತ್ ತತ್ ಸರ್ವಂ ಗ್ರಾಹ್ಯಮೇವ ಹಿ।
ಅವಿರುದ್ಧಂ ಸಮಾಧೇಸ್ತು ದರ್ಶನೋಕ್ತಂ ಚ ಗೃಹ್ಯತೇ ॥ ೧೨೨ ॥

---

೧೨೦. ತತ್ಪ್ರತೀಪಂ ವಿಷ್ಣುಮಹಿಮಪ್ರತೀಪಂ ಯದ್ವಚನಂ ಕ್ವಚಿತ್ ದೃಶ್ಯೇತ್ ತತ್ ಮಮ ಮನೀಷಿತಂ ನ ಮಯಾ ಮನಃಪೂರ್ವಕಮುಕ್ತಂ ನ। ಕಿಂತು ಪರದರ್ಶನಸ್ಥಾ ಏವಂ ವದಂತೀತಿ ದರ್ಶನಭಾಷಯಾ ಪರಮತಾನುವಾದ ಏವ ಕೃತಃ। ನ ತು ತನ್ಮಮ ಮತಮಿತಿ ವ್ಯಾಸಃ ಸ್ವಾಭಿಸಂಧಿಂ ಸ್ವಯಮೇವೋ- ದ್ಘೋಷಿತವಾನ್ ಇತ್ಯರ್ಥಃ ॥ –(ವಾ)

೧೨೧. ಯಃ ವಿಷ್ಣೋರ್ಮಹಿಮಾ ಉಕ್ತಃ ಸ್ಪಷ್ಟಮುಕ್ತಃ ಸ ತು ಸಮಾಧಿನಾ ಉಕ್ತಃ। ಸಮಾಹಿತಮನಸಾ ಚಿತ್ತೈಕಾಗ್ರ್ಯತಯಾ ಕಥಿತತ್ವಾತ್। ಯಥಾ 'ನಾಸ್ತಿ ನಾರಾಯಣಸಮಂ', 'ರುದ್ರಂ ಸಮಾಶ್ರಿತಾ ದೇವಾಃ', 'ಸತ್ಯಂ ಸತ್ಯಂ ಪುನಃ ಸತ್ಯಂ' ಇತ್ಯಾದಿಕಮ್। –(ವಾ)

೧೨೧. ಅನೇನ ವಿಷ್ಣುಮಹಿಮಾಪ್ರತಿಪಾದಕಭಾಷಾ ಸಮಾಧಿಭಾಷಾ ಇತ್ಯುಕ್ತಂ ಭವತಿ। –(ವ)

ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಮ್ ।
ದರ್ಶನಾಂತರಸಿದ್ಧಂ ಚ ಗುಹ್ಯಭಾಷಾऽನ್ಯಥಾ ಭವೇತ್ ।
ತಸ್ಮಾದ್ವಿಷ್ಣೋರ್ಹಿ ಮಹಿಮಾ ಭಾರತೋಕ್ತೋ ಯಥಾರ್ಥತಃ ॥ ೧೨೩ ॥

೧೨೩.. ಆದ್ಯಂತಯೋರ್ವಿರುದ್ಧಮಿತ್ಯಸ್ಯ ಆದಾವುಕ್ತಕೃಷ್ಣಮಹಿಮಾಖ್ಯಪ್ರಮೇಯಸ್ಯ ಅಂತೇ ವಕ್ಷ್ಯಮಾಣಕೃಷ್ಣೋ-ತ್ಕರ್ಷಾಖ್ಯಪ್ರಮೇಯಸ್ಯ ಚ ವಿರುದ್ಧಂ ದರ್ಶನಾಂತರಸಿದ್ಧಂ ವೈಷ್ಣವದರ್ಶನವಿರುದ್ಧಪಾಶುಪತಾದಿದರ್ಶನಾಂತರಸಿದ್ಧಂ ಯತ್ ಕೃಷ್ಣಸ್ಯ ಶಿವಾರ್ಚಕತ್ವಾದಿಪ್ರಮೇಯಂ ಮಧ್ಯೇ ಕ್ವಚಿದಜ್ಞಾನಮೋಹನಾಯ ಕಥ್ಯತೇ ತದ್ದರ್ಶನಂ ದರ್ಶನಭಾಷ-ಯೋಕ್ತಂ ಇತ್ಯರ್ಥಃ । – (ವಾ)

ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ।
ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಚ ॥ (೨೨/೪೦೫)

ಲೋಕದರ್ಶನಮಾಶ್ರಿತ್ಯ ದೇವಾಶ್ಚಮುನಯಸ್ತಥಾ ।
ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ । (೨೨/೪೦೩)

– ಇತಿ ವಕ್ಷ್ಯಮಾಣತ್ವಾತ್ ಲೋಕದರ್ಶನಭಾಷಾऽಪಿ ಜ್ಞೇಯಾ ।

ಆದ್ಯಂತಯೋರ್ವಿರುದ್ಧಾರ್ಥಪ್ರತಿಪಾದಕಂ ದರ್ಶನಮಿತ್ಯೇಕಲಕ್ಷಣಮ್ । ದ್ವಿತೀಯಲಕ್ಷಣಮಾಹ । ದರ್ಶನೇತಿ। ದರ್ಶನಾಂತರೇಷು ಶೈವಾದಿಶಾಸ್ತ್ರೇಷು ಸಿದ್ಧಂ ಪ್ರತಿಪಾದಿತಂ ಯದ್ದರ್ಶನಂ ತೇನ ದರ್ಶನಾಂತರಸಿದ್ಧಂ ದರ್ಶನಮಿತಿ ॥ – (ಜ)

೧೨೩.. ಅನ್ಯಥಾ ದರ್ಶನಭಾಷಾತೋ ಅನ್ಯಥಾ ಸ್ವಪ್ನಾರ್ಥಕಸಮಾಧಿಭಾಷಾತೋऽನ್ಯಥಾ ಯದ್ಭವೇತ್ ಕ್ವಚಿದುಚ್ಯಮಾನಂ ಭವೇತ್ ।

''ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಪ್ರಮದಾಃ ಕೇಶಶೂಲಿನ್ಯೋ ಭವಿಷ್ಯಂತಿ ಕಲೌ ಯುಗೇ ॥''

– ಇತ್ಯಾದಾವಿವ ಗೂಢಾರ್ಥಕಪದಘಟನಯೋಚ್ಯತೇ ಇತಿ ಯಾವತ್ ಗುಹ್ಯಭಾಷಾ ಇತ್ಯರ್ಥಃ । – (ವಾ)

ಅನ್ಯಥಾ ಪ್ರದರ್ಶ್ಯಮಾನಾದರ್ಥಾತ್ ಅನ್ಯಾರ್ಥಪ್ರತಿಪಾದಕಾ ಗುಹ್ಯಭಾಷಾ । ಅನ್ಯಥಾ ಪ್ರತೀಯ-ಮಾನಾರ್ಥಾತ್ ಅನ್ಯಾರ್ಥಪ್ರತಿಪಾದಕಾ ಭಾಷಾ ಗುಹ್ಯಭಾಷೇತ್ಯರ್ಥಃ, ಸಾ ಯಥಾ ।

ಉಚ್ಚಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕರ್ಪಟಮ್ ।
ಕಾಕವಿಷ್ಠಾಸಮಾಯುಕ್ತಂ ಪಂಚ ಪೂತಾನಿ ಭಾರತ ॥ ಇತಿ ।

ಅತ್ರ ಉಚ್ಛಿಷ್ಟಂ ಪೂತಮಿತ್ಯಾಪಾತತಃ ಪ್ರತೀಯತೇ । ತಚ್ಚ ವಿರುದ್ಧಮ್ । ಅತೋ ವತ್ಸೋಚ್ಛಿಷ್ಟಂ ವತ್ಸಪೀತಂ ಕ್ಷೀರಂ ಪೂತಮಿತಿ ಪ್ರತೀಯಮಾನಾರ್ಥಾದನ್ಯಾರ್ಥಪ್ರತಿಪಾದನಂ ಗುಹ್ಯಭಾಷಯಾ ಕೃತಮ್ । ತಥಾ ಶಿವನಿರ್ಮಾಲ್ಯಸ್ಯ ಅಗ್ರಾಹ್ಯತ್ವಾತ್ ತಚ್ಛಬ್ದೇನ ಗಂಗಾದ್ಯುದಕಮೇವ ಗೃಹ್ಯತೇ । ತಥಾ ವಮನಂ ಮಧ್ಯೇನ ಗೃಹ್ಯತೇ । ತಥಾ ಮೃತಕರ್ಪಟಂ ಕೌಶೇಯಮೇವ ಗೃಹ್ಯತೇ । ತಥಾ ಕಾಕವಿಷ್ಠಾಸಮಾಯುಕ್ತಂ ಅಶ್ವತ್ಥಾದಿಕಮೇವ ಗ್ರಾಹ್ಯಮ್ । ನಾನ್ಯದಿತಿ॥ – (ವ)

ತವ ಸಂಮತಂ ನ ಚೇತ್ ತರ್ಹಿ ಕಥಂ ಕಥಿತಂ ಇತ್ಯತಃ ಭಾಷಾತ್ರಯೇಣ ಭಾರತಕಥನಾನ್ನ ಸೋऽರ್ಥಃ ಇತ್ಯಾಹ । –(ಜ)

ಅ: ಮಹಾಭಾರತದಲ್ಲಿ ನನ್ನಿಂದ ಮೂರುವಿಧವಾದ ಭಾಷೆಗಳು ಪ್ರದರ್ಶಿತವಾಗಿವೆ. ವಿಷ್ಣುವಿನ ಮಹಿಮೆ ಎಂಬುದಾಗಿ ಏನು ಉಕ್ತವಾಗಿದೆಯೋ ಅದೆಲ್ಲ ಸಮಾಧಿಭಾಷೆಯಿಂದ ಉಕ್ತವಾಗಿದೆ; ಕೆಲವೆಡೆ ಶೈವದರ್ಶನವನ್ನು ಅನುವಾದ ಮಾಡುತ್ತ ಶಿವಸರ್ವೋತ್ತಮತ್ವಾದಿಗಳು ಹೇಳಲ್ಪಟ್ಟಿವೆ; ಸಮಾಧಿಭಾಷೆಯಿಂದ ಹೇಳಲ್ಪಟ್ಟಿರುವುದೆಲ್ಲ ಗ್ರಾಹ್ಯವೇ ಆಗಿದೆ; ಸಮಾಧಿಭಾಷೆಗೆ ವಿರುದ್ಧವಲ್ಲದ ದರ್ಶನಭಾಷೋಕ್ತ ವಿಚಾರವೂ ಸಹ ಗ್ರಾಹ್ಯವೇ ಸರಿ. ಆದಿ ಮತ್ತು ಅಂತಗಳಿಗೆ ವಿರುದ್ಧವಾಗಿ ಮಧ್ಯೆ ಬರುವ ವಿಚಾರವನ್ನು 'ದರ್ಶನ'ಭಾಷೆ ಎಂದು ಕರೆಯುವರು; ಅದರಂತೆ ಇತರ ದರ್ಶನಗಳ ಅನುವಾದವನ್ನು ಮಾಡುವ ಭಾಗವೂ ದರ್ಶನಭಾಷೆಯೇ ಆಗಿದೆ. ಹೀಗಿಲ್ಲದ ಮತ್ತೊಂದು ಭಾಷೆ 'ಗುಹ್ಯ'ಭಾಷೆ ಎನ್ನಿಸುವುದು. ಆದ್ದರಿಂದ ವಿಷ್ಣುಮಾಹಾತ್ಮ್ಯವೇ ಮಹಾಭಾರತದ ಪರಮಪ್ರಮೇಯ.

ಎ: ೧) ಸಮಾಧಿ, ದರ್ಶನ ಮತ್ತು ಗುಹ್ಯ ಎಂಬ ತ್ರಿವಿಧ ನಿರೂಪಣಸರಣಿಯನ್ನು ಶ್ರೀವೇದವ್ಯಾಸರು ಭಾರತಾದಿಗಳಲ್ಲಿ ಅಳವಡಿಸಿರುವರು; ಅವುಗಳ ಪರಿಜ್ಞಾನವಿಲ್ಲದೆ ಭಾರತಾದಿಗಳನ್ನು ಅರ್ಥಮಾಡಿಕೊಳ್ಳುವುದು ಅನರ್ಥಕರ.

೨) ಇದರಂತೆ ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ಏಳು ಭೇದಗಳನ್ನೂ ಗೌಡೀ, ವೈದರ್ಭಿ, ಪಾಂಚಾಲಿ ಮೊದಲಾದ ನೂರು ಶೈಲಿಗಳನ್ನೂ ಅವರು ಮಹಾಭಾರತಾದಿಗಳಲ್ಲಿ ಪ್ರಯೋಗಿಸಿರುವರು ಎಂಬುದನ್ನು ಒಂಭತ್ತನೇ ಅಧ್ಯಾಯದ ಕೊನೆಯಲ್ಲಿ ಶ್ರೀಮದಾಚಾರ್ಯರು ತಿಳಿಸಿರುವರು (೯/೧೩೯).

೩) ತತ್ತ್ವವನ್ನು ನೇರವಾಗಿ ತಿಳಿಸಿಕೊಡುವ ಭಾಷೆ 'ಸಮಾಧಿಭಾಷೆ' ಎಂಬುದು ಸಾಮಾನ್ಯವಾದ ಅರ್ಥ; ಆದರೆ ವಿಷ್ಣುಮಾಹಾತ್ಮ್ಯವನ್ನು ತಿಳಿಸಿಕೊಡುವ ಭಾಷೆ ಎಂಬುದು ಇಲ್ಲಿಯ ವಿಶೇಷಾರ್ಥ.

೪) ಇತರ ದರ್ಶನಗಳ ವಿಚಾರವನ್ನು ಮಧ್ಯೆ ಮಧ್ಯೆ ಉಲ್ಲೇಖಿಸುವ ಭಾಷೆ ದರ್ಶನಭಾಷೆ; ಇದು ಸಹ ಲೋಕದರ್ಶನಭಾಷೆ ಮತ್ತು ಪರದರ್ಶನಭಾಷೆ ಎಂಬುದಾಗಿ ಎರಡು ವಿಧ. ಲೋಕದ ಜನರ ದೃಷ್ಟಿಗೆ ಕಂಡಿದ್ದನ್ನು ಹಾಗೆಯೇ ತಿಳಿಸುವುದು 'ಲೋಕದರ್ಶನಭಾಷೆ' ಯಾದರೆ, 'ಪರಮತಗಳ' ವಿಚಾರಗಳನ್ನು ಅನುವಾದ ಮಾಡುವುದು, 'ಪರದರ್ಶನಭಾಷೆ' ಎನ್ನಿಸುತ್ತದೆ.

೫) ಈ ಎರಡಕ್ಕೂ ಭಿನ್ನವಾದ ತೃತೀಯ ಭಾಷೆ 'ಗುಹ್ಯ ಭಾಷೆ'; ಮೇಲ್ನೋಟಕ್ಕೆ ಪೂರ್ಣ ಅಗ್ರಾಹ್ಯವೆಂಬಂತೆ ಕಂಡರೂ ಆಳಕ್ಕೆ ಇಳಿದು ಅವುಗಳ ಭಾವವನ್ನು ಗ್ರಹಿಸಿದಾಗ ಅದರಲ್ಲಿ ಗ್ರಾಹ್ಯಾಂಶ ತುಂಬಿರುವುದು ಗುಹ್ಯಭಾಷೆಯ ರೀತಿ.

೬) ಮಹಾಭಾರತಾದಿ ನಿರ್ಣೇಯಗ್ರಂಥಗಳಲ್ಲಿ ಈ ಭಾಷಾತ್ರಯಗಳ ಬಳಕೆ ವಿಪುಲವಾಗಿ ಕಂಡುಬರುತ್ತದೆ. ವಿಷ್ಣುಸರ್ವೋತ್ತಮತ್ವವನ್ನು ಹೇಳುವ ಸಕಲ ಮಾತುಗಳನ್ನು 'ಸಮಾಧಿಭಾಷೆ' ಎಂದೇ ತಿಳಿಯಬೇಕು. ಅಲ್ಲಲ್ಲಿ ಬರುವ ಶಿವಸರ್ವೋತ್ತಮತ್ವಾದಿ ವಿಚಾರಗಳು ವಾಸ್ತವವಾಗಿ ಶ್ರೀವ್ಯಾಸರ ಸಿದ್ಧಾಂತವಲ್ಲ; ಶೈವರು ಮೊದಲಾದವರು ಹಾಗೆ ಹೇಳುವರು ಎಂದು ತಿಳಿಸುವುದಷ್ಟೇ ಅವುಗಳ ಉದ್ದೇಶ. ಅಂತಹ ವಿವರಗಳನ್ನೆಲ್ಲ 'ದರ್ಶನಭಾಷೆ' ಎಂದು ತಿಳಿಯಬೇಕು. ಕೆಲವು ಮಾತುಗಳು ನಿರ್ಣೀತವಿಚಾರಕ್ಕೆ ವಿರುದ್ಧವಾಗಿದ್ದರೂ, ಅವುಗಳ ಒಳಗಿನ ಅರ್ಥಮಾತ್ರ ಅವಿರುದ್ಧವೇ ಆಗಿರುತ್ತದೆ; ಇಂತಹ ವಾಕ್ಯಗಳಲ್ಲಿ 'ಗುಹ್ಯಭಾಷಾ' ವಚನಗಳೆಂದು ತಿಳಿಯಬೇಕು.

೭) ಶ್ರೀಮದಾಚಾರ್ಯರು ಈ ಮಹಾಭಾರತತಾತ್ಪರ್ಯನಿರ್ಣಯದ ೨೨ನೇ ಅಧ್ಯಾಯ–ದಲ್ಲೂ ಭಾಗವತತಾತ್ಪರ್ಯದಲ್ಲೂ ಭಾಷಾತ್ರಯದ ಬಗ್ಗೆ ಇನ್ನೂ ಅನೇಕ ವಿಚಾರಗಳನ್ನು ತಿಳಿಸಿರುವರು.

೮) ಈ ಹಿನ್ನೆಲೆಯಲ್ಲಿ ನೋಡಿದಾಗ ಭಾರತ ಹಾಗೂ ಪುರಾಣಾದಿಗಳಲ್ಲಿ ಬರುವ ಶಿವಸರ್ವೋತ್ತಮತ್ವಾದಿ ವಿವರಗಳನ್ನು ವಿಷ್ಣುಸರ್ವೋತ್ತಮತ್ವಕ್ಕೆ ವಿರೋಧವಾಗದಂತೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ; ಯಾವುದೇ ಗೊಂದಲಕ್ಕೂ ಅವಕಾಶವಿರುವುದಿಲ್ಲ.

೯) **ಸಮಾಧಿ ಭಾಷೆಗೆ ಉದಾಹರಣೆಗಳು:**

''ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ।
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥''

''ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ ।
ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ।''

''ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ॥'

—ಇವೇ ಮೊದಲಾದ ಈವರೆಗೆ ಉದಾಹೃತವಾಗಿರುವ ವಾಕ್ಯಗಳು.

೧೦) **ದರ್ಶನಭಾಷೆಗೆ ಉದಾಹರಣೆಗಳು :**

ಮಹಾಭಾರತದ ಶತರುದ್ರೀಯ ಮೊದಲಾದ ಭಾಗಗಳು, ಭಾಗವತಾದಿ ಪುರಾಣಗಳಲ್ಲಿ ಬರುವ ಶಿವಾದಿ ಅನ್ಯದೇವತಾಸರ್ವೋತ್ತಮತ್ವವನ್ನು ಹೇಳುವ ಭಾಗಗಳು ದರ್ಶನಭಾಷೆಗೆ ದೃಷ್ಟಾಂತಗಳಾಗಿವೆ.

೧೧) **ಗುಹ್ಯಭಾಷೆಗೆ ಉದಾಹರಣೆ :**

ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಸ್ತ್ರಿಯಶ್ಚ ಕೇಶಶೂಲಿನ್ಯೋ ಭವಿಷ್ಯಂತಿ ಕಲೌಯುಗೇ ॥

ಸಾಮಾನ್ಯವಾಗಿ ಕಲಿಯುಗದಲ್ಲಿ ದೇಶಗಳಲ್ಲಿ ಅನ್ನವನ್ನು ಮಾರಾಟಮಾಡುತ್ತಾರೆ; ಬೀದಿಗಳಲ್ಲಿ ವೇದಗಳ ಮಾರಾಟ ನಡೆಯುತ್ತದೆ; ಸ್ತ್ರೀಯರು ವ್ಯಭಿಚಾರಿಗಳಾಗುತ್ತಾರೆ ಎಂದು ಇದರ ಭಾವ.

ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕರ್ಪಟಮ್ ।
ಕಾಕವಿಷ್ಠಾ ಸಮಾಯುಕ್ತಂ ಪಂಚ ಪೂತಾನಿ ಭಾರತ ॥

– ಎಂಜಲು, ಶಿವನಿರ್ಮಾಲ್ಯ, ವಾಂತಿ, ಶವದ ವಸ್ತ್ರ ಮತ್ತು ಕಾಗೆಯ ಮಲದಿಂದ ಕೂಡಿದ್ದು ಈ ಐದೂ ಪವಿತ್ರ ಎಂದು ಮೇಲಿನ ಅರ್ಥ; ಕರು ಕುಡಿದ ಅನಂತರ ಕರೆದ ಹಾಲು, ಗಂಗಾನದಿ, ಮಧು, ರೇಷ್ಮೆವಸ್ತ್ರ ಮತ್ತು ಅಶ್ವತ್ಥವೃಕ್ಷ ಈ ಐದು ಅವು ಶ್ರೇಷ್ಠ ಎಂದು ಒಳಗಿನ ಅರ್ಥ; ಮೇಲಿನ ಅರ್ಥ ಅಗ್ರಾಹ್ಯ ಒಳಗಿನ ಅರ್ಥ ಗ್ರಾಹ್ಯ ಎಂದು ಭಾವ.

ಭಾಗವತತಾತ್ಪರ್ಯದಲ್ಲಿನ ವಚನಗಳು ಹೀಗಿವೆ:

'ಗುಹ್ಯದರ್ಶನಭಾಷೇ ಚ ಭಾಷಾ ಚೈವ ಸಮಾಧಿಕಾ ।
ತಿಸ್ರಸ್ತು ಮೂಲಭಾಷಾಃ ಸ್ಯುರೇಕೈಕಾ ಚ ತ್ರಿಧಾ ಪುನಃ ।
ಗುಹ್ಯದರ್ಶನಸಂಜ್ಞಾ ಚ ಗುಹ್ಯಗುಹ್ಯಾ ತಥಾऽಪರಾ ।
ಏವಮಾದಿಕ್ರಮೇಣೈವ ತ್ವೇಕಾಶೀತಿವಿಭೇದಿತಾಃ ।
ಭಾಷಾಸತ್ರ ಚ ಗುಹ್ಯಾ ಚ ಪ್ರಸಿದ್ಧಾರ್ಥೇಷ್ವನನ್ವಿತಾ ।
ಗುಹ್ಯಾರ್ಥತತ್ಪರೈವಾಂಧೋ ಮಣಿಮಿತ್ಯಾದಿಕಾ ಚ ಸಾ ।
ದರ್ಶನಾನ್ಯವಲಂಬ್ಯೈವ ಪಶುಪತ್ಯಾದಿನಾಂ ತು ಯಾ ।
ಬಹುಶ್ರುತಿವಿರುದ್ಧಂ ತು ವದೇತ್ ಸಾ ದರ್ಶನಾತ್ಮಿಕಾ ।
ಅಂತೇ ನಿಷೇಧಸಂಯುಕ್ತಾ ಭಸ್ಮಸ್ನಾನಾದಿಕಾ ಚ ಸಾ ।
ಯಥಾ ಪ್ರದೃಶ್ಯಮಾನಾರ್ಥಾ ಸಮಾಧಿಃ ಸಾ ಪ್ರಕೀರ್ತಿತಾ ।
ವಿಷ್ಣುಃ ಪರಮ ಇತ್ಯಾದ್ಯಾ ಸಾ ಚ ವಿದ್ವದ್ಭಿರೀರಿತಾ' – ಇತಿ ಭಾಷಾವಿವೇಕೇ

ಶ್ರೀಮದ್ಭಾಗವತಪುರಾಣವು ಸಮಾಧಿ ಭಾಷೆಯನ್ನೇ ವಿಪುಲವಾಗಿ ಹೊಂದಿರುವ ಪುರಾಣ ಎಂಬ ಮಾತನ್ನೂ ಇಲ್ಲಿ ಗಮನಿಸಬೇಕು.

'ಸಮಾಧಿನಾऽನುಸ್ಮರ ಯದ್ವಿಚೇಷ್ಟಿತಮ್ ।' – ಭಾಗವತ

'ಸಮಾಧಿನಾ ಸಮಾಧಿಭಾಷಯಾ' – ಭಾಗವತತಾತ್ಪರ್ಯ

ವಾಯುದೇವರು ಶ್ರೀಹರಿಯ ಪ್ರಥಮಾಂಗರು - ದ್ವಿತೀಯಾಂಗ ಭಾರತಿ

ತಸ್ಯಾಂಗಂ ಪ್ರಥಮಂ ವಾಯುಃ ಪ್ರಾದುರ್ಭಾವತ್ರಯಾನ್ವಿತಃ ।
ಪ್ರಥಮೋ ಹನೂಮಾನ್ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥ ೧೨೪ ॥

ತ್ರೇತಾದ್ಯೇಷು ಯುಗೇಷ್ವೇಷ ಸಂಭೂತಃ ಕೇಶವಾಜ್ಞಯಾ ।
ಏಕೈಕಶಸ್ತ್ರಿಷು ಪೃಥಗ್ ದ್ವಿತೀಯಾಂಗಂ ಸರಸ್ವತೀ ॥ ೧೨೫ ॥

ಅ: ಆ ಶ್ರೀಹರಿಗೆ ಮೂರು ಅವತಾರಗಳಿಂದ ಕೂಡಿರುವ ಶ್ರೀವಾಯುದೇವರು ಪ್ರಧಾನ ಸೇವಕರು; ಹನುಮಂತ ಎಂಬುದು ಮೊದಲನೆಯದು; ಭೀಮಸೇನ ಎರಡನೆಯದು; ಪೂರ್ಣಪ್ರಜ್ಞ ಮೂರನೆಯದು; ಇವರು ಭಗವತ್ಕಾರ್ಯಸಾಧಕರು, ಶ್ರೀವಾಯುವು ಶ್ರೀಹರಿಯ ಆಜ್ಞೆಯಂತೆ ತ್ರೇತಾದಿ ಮೂರು ಯುಗಗಳಲ್ಲಿ ಪ್ರತಿಯೊಂದರಲ್ಲೂ ಒಂದೊಂದರಂತೆ ಅವತಾರವೆತ್ತಿದರು. ಸರಸ್ವತಿ(ಭಾರತಿ)ಯು ಶ್ರೀಹರಿಯ ಸೇವಕರಲ್ಲಿ ಎರಡನೆಯವರು.

ವಿ: ರುದ್ರಾದಿ ಇತರ ಸಕಲ ದೇವತೆಗಳು ಸಹ ಯಥಾಯೋಗ್ಯವಾಗಿ ಭಗವತ್ಕಾರ್ಯ–ಸಾಧಕರೇ ಆಗಿದ್ದರೂ, ಅವರು ಒಮ್ಮೊಮ್ಮೆ ಭಗವದ್ವಿರೋಧವನ್ನೂ ಮಾಡುವುದುಂಟು. ಆದರೆ ವಾಯುದೇವರು (ಹಾಗೂ ಸಕಲಋಜುಗಳು) ಅನಾದ್ಯನಂತಕಾಲದ ಜೀವನದಲ್ಲಿ ಒಮ್ಮೆಯೂ ಸಹ ಭಗವದ್ವಿರೋಧವನ್ನು ಮಾಡದೆ ಸದಾ ಭಗವತ್ಕಾರ್ಯಸಾಧಕರೇ ಆಗಿರುವರು ಎಂದು ಭಾವ. (ಅಸಾಧಾರಣ್ಯೇನ ವ್ಯಪದೇಶಾ ಭವಂತಿ ಎಂಬ ನ್ಯಾಯದಿಂದ ಈ ಅರ್ಥ ಹೊಂದುತ್ತದೆ).

ಭಾರತಿಯ ಅವತಾರಗಳು

ಶಂರೂಪೇ ತು ರತೇರ್ವಾಯೌ ಶ್ರೀರಿತ್ಯೇವ ಚ ಕೀರ್ತ್ಯತೇ ।
ಸೈವ ಚ ದ್ರೌಪದೀ ನಾಮ ಕಾಲೀ ಚಂದ್ರೇತಿ ಚೋಚ್ಯತೇ ॥ ೧೨೬ ॥

---

೧೨೪. ಭಗವತ್ಕಾರ್ಯಸಾಧಕತ್ವೋಪಯುಕ್ತಜ್ಞಾನಭಕ್ತ್ಯಾದಿವಿಶೇಷಣಸಮುಚ್ಚಯೇ ಚ ಶಬ್ದಃ । – (ಸ)

೧೨೪. ಅಂಗತ್ವಸ್ವರೂಪಕಥನಾರ್ಥಮುಕ್ತಂ ಭಗವತ್ಕಾರ್ಯಸಾಧಕ ಇತಿ ಸರ್ವತ್ರ ಸಂಬಧ್ಯತೇ । ಭಗವತೋ ಬಲಕಾರ್ಯೇ ಚ ಪ್ರವೃತ್ತೇ ಸತಿ ಪ್ರಧಾನತ್ವಾತ್ ಸರ್ವಾಧಿಕಾರ್ಯುತ್ತಮೋ ವಾಯುರೇವೇತ್ಯರ್ಥಃ । –(ವ)

೧೨೪. ಹನೂಮಾನ್ ಭೀಮ ಆನಂದ ಇತ್ಯಾದಿಬಹುರೂಪಿಣಃ । ಪೈಂಗಿಶ್ರುತಿಃ । - ಬೃಹದ್ಭಾಷ್ಯ

ಅ: ಸುಖಸ್ವರೂಪರಾದ ವಾಯುದೇವರಲ್ಲಿ ರಮಣನಿಮಿತ್ತದಿಂದಾಗಿ 'ಶ್ರೀ' ಎಂದೂ ಭಾರತಿಯು ಕೀರ್ತಿತರು; ಅವರೇ ದ್ರೌಪದೀ, ಕಾಳೀ ಮತ್ತು ಚಂದ್ರಾ ಎಂಬುದಾಗಿಯೂ ಕರೆಯಲ್ಪಟ್ಟಿರುವರು.

ಶೇಷಾದಿಗಳು ಶ್ರೀಹರಿಯ ತೃತೀಯಾಂಗರು

ತೃತೀಯಾಂಗಂ ಹರೇಃ ಶೇಷಃ ಪ್ರಾದುರ್ಭಾವಸಮನ್ವಿತಃ ।
ಪ್ರಾದುರ್ಭಾವಾ ನರಶ್ಚೈವ ಲಕ್ಷ್ಮಣೋ ಬಲ ಏವ ಚ ॥ ೧೨೭ ॥

ಅ: ಪ್ರಾದುರ್ಭಾವಗಳೊಂದಿಗೆ ಕೂಡಿದ ಶೇಷನು ಶ್ರೀಹರಿಯ ಸೇವಕರಲ್ಲಿ ತೃತೀಯಾಂಗರು; ನರ, ಲಕ್ಷ್ಮಣ ಮತ್ತು ಬಲರಾಮ – ಇವು ಶೇಷನ ಪ್ರಾದುರ್ಭಾವಗಳು.

ವಿ: ೧) ಇಲ್ಲಿ 'ನರ' ಎಂದರೆ ಧರ್ಮತನಯನಾದ ನಾರಾಯಣನ ಸಹೋದರ.

೨) ಇಲ್ಲಿ 'ಬಲರಾಮ'ನನ್ನು ಶೇಷನಅವತಾರವೆಂದು ಸ್ಪಷ್ಟ ಕರೆದಿರುವುದು ಬಲರಾಮನು ಸಾಕ್ಷಾತ್ ನಾರಾಯಣನ ಅವತಾರ ಎಂಬ ರಾಮಾನುಜಪಂಥದವರ ವಾದವನ್ನು ನಿರಾಕರಿಸುತ್ತದೆ.

ರುದ್ರಾತ್ಮಕತ್ವಾಚ್ಛೇಷಸ್ಯ ಶುಕೋ ದ್ರೌಣಿಶ್ಚ ತತ್ತನೂ ।
ಇಂದ್ರೋ ನರಾಂಶಸಂಪತ್ತ್ಯಾ ಪಾರ್ಥೋಽಪೀಷತ್ ತದಾತ್ಮಕಃ ॥ ೧೨೮ ॥

---

೧೨೬. ಶಿವಕನ್ಯೇಂದ್ರಸೇನಾ ಚ ದ್ರೌಪದೀ ಕಾಶಿಜಾ ತಥಾ ।
ಚಂದ್ರೇತ್ಯಾದಿಸ್ವರೂಪಾಯಾಸ್ತೇಭ್ಯಃ ಶತಗುಣಾವರಾಃ । ಪೈಂಗಿಶ್ರುತಿಃ । - ಬೃಹದ್ಭಾಷ್ಯ

೧೨೬. ಶ್ರೀರೇಷಾ ದ್ರೌಪದೀರೂಪಾ ತದರ್ಥಂ ಮಾನುಷಂ ಗತಾ ।
ಅಯೋನಿಜಾ ಲೋಕಕಾಂತಾ ಪುಣ್ಯಗಂಧಾ ಯುಧಿಷ್ಠಿರ ॥ - ಭಾರತ (೧೮/೪/೧೨)

೧೨೭. ನರೋ ನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವ ಚ ।
ಚತ್ವಾರೋ ಧರ್ಮತನಯಾ ಹರಿರೇವ ತ್ರಯೋ ಮತಃ ॥ – 'ಷಾಡ್ಗುಣ್ಯ'ದ ವಚನ (ಭಾ. ತಾ.)

೧೨೮. ಅರ್ಜುನಃ ಈಷತ್ ತದಾತ್ಮಕಃ ತಸ್ಯ ಶೇಷಸ್ಯ ಆತ್ಮಕಃ ಸ್ವರೂಪಃ, ತೇನ ತೃತೀಯಾಂಗಮಿತಿ ಭಾವಃ । –(ಜ)

೧೨೮. ಕ್ವಚಿದರ್ಜುನಸ್ಯಾಪಿ ತೃತೀಯಾಂಗತ್ವೋಕ್ತಿರಸ್ತಿ , ತಸ್ಯಾಭಿಪ್ರಾಯಮಾಹ । ಇಂದ್ರ ಇತಿ । ಅರ್ಜುನೇ ನರಾಂಶಾಭಿಪ್ರಾಯೇಣ ತೃತೀಯಾಂಗತ್ವೋಕ್ತಿರಿತಿ ಭಾವಃ । –(ವ)

ಇದೇ ಅಧ್ಯಾಯದಲ್ಲಿನ ಈ ಕೆಳಗಿನ ಶ್ಲೋಕವನ್ನು ಗಮನಿಸಬಹುದು (ಶ್ಲೋ. ೪೪) :

ಬಲದೇವಸ್ತತಃ ಪಶ್ಚಾತ್ ತತಃ ಪಶ್ಚಾಚ್ಚ ಫಲ್ಗುನಃ ।
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ ತತೋಽಪರೇ ॥

ಅ: ಶೇಷನು ರುದ್ರರೂಪನೇ ಆಗಿರುವನು; ಶುಕ ಮತ್ತು ಅಶ್ವತ್ಥಾಮರು ಶ್ರೀರುದ್ರದೇವರ ರೂಪಗಳು. ಇಂದ್ರನು ನರಾಂಶದಿಂದ ಕೂಡಿರುವುದರಿಂದ ಇಂದ್ರಾವತಾರನಾದ ಅರ್ಜುನನೂ ಸ್ವಲ್ಪಮಟ್ಟಿಗೆ ಶೇಷಸ್ವರೂಪನೇ ಆಗಿರುವನು.

ವಿ: ೧) ಆದ್ದರಿಂದ ಅವನು ಆ ಮಟ್ಟಿಗೆ ತೃತೀಯಾಂಗನೆಂದು ವ್ಯವಹರಿಸಲ್ಪಡುವವನು ಎಂದು ಭಾವ.

೨) ಈಗಿನ ವಾಯುದೇವರು ಭಾವಿಬ್ರಹ್ಮರಾಗಿರುವರಂತೆ, ರುದ್ರದೇವರು ಭಾವಿಶೇಷ–ರಾಗಿರುವರು; ಬ್ರಹ್ಮವಾಯುಗಳು ಶ್ರೀಹರಿಯ ಪ್ರಥಮಾಂಗರಾಗಿರುವಂತೆ ಶೇಷರುದ್ರರು ತೃತೀಯಾಂಗರಾಗಿರುವರು ಎಂದು ಭಾವ.

೩) ರುದ್ರದೇವರ ಇತರ ಅವತಾರಗಳನ್ನು ಶ್ರೀಮದಾಚಾರ್ಯರು ಬೃಹದ್ಭಾಷ್ಯದಲ್ಲಿ ತಿಳಿಸಿರುವರು.

೪) ಶೇಷರುದ್ರರ ಅವತಾರಗಳ ಸಂಗ್ರಹ ಹೀಗಿದೆ (ಪೈಂಗಿಶ್ರುತಿ – ಬೃಹದ್ಭಾಷ್ಯ) :

ಶೇಷಃ ಸದಾಶಿವಶ್ಚೋರ್ಧ್ವಸ್ತಪೋऽಹಂಕಾರ ಏವ ಚ ।
ನರೋऽಪಟೋ ಲಕ್ಷ್ಮಣಶ್ಚ ರೌಹಿಣೇಯಃ ಶುಕಸ್ತಥಾ ।
ಸದ್ಯೋಜಾತೋ ವಾಮದೇವಶ್ಚಾಘೋರಸ್ತತ್ಪುಮಾನಪಿ ।
ದುರ್ವಾಸಾ ದ್ರೌಣಿರೌರ್ವಶ್ಚ ಜೈಗೀಷವ್ಯಾದಿರೂಪಕಾಃ ।

ಪ್ರದ್ಯುಮ್ನಾದಿಗಳು ಶ್ರೀಹರಿಯ ಸೇವೆಗೆ ಅಂಗ

ಪ್ರದ್ಯುಮ್ನಾದ್ಯಾಸ್ತತೋ ವಿಷ್ಣೋರಂಗಭೂತಾಃ ಕ್ರಮೇಣ ತು ।
ಚರಿತಂ ವೈಷ್ಣವಾನಾಂ ತು ವಿಷ್ಣೂದ್ರೇಕಾಯ ಕಥ್ಯತೇ ।
ತಥಾ ಭಾಗವತೇऽಪ್ಯುಕ್ತಂ ಹನೂಮದ್ವಚನಂ ಪರಮ್ ॥ ೧೨೯ ॥

---

೧೨೮. ಪಾರ್ಥಾದ್ಯಾತ್ಮನಾ ಪ್ರಾದುರ್ಭೂತಾಃ ಇಂದ್ರಾದ್ಯಾಃ ಹರೇಶ್ಚತುರ್ಥಾಂಗತ್ವೇನ ದ್ರಷ್ಟವ್ಯಾ ಇತ್ಯಾಹ । ಪ್ರದ್ಯುಮ್ನಾದ್ಯಾ ಇತಿ । ಅತ್ರ ಪ್ರದ್ಯುಮ್ನಸ್ಯ ಕಾಮಾವತಾರತ್ವಾತ್ ತದ್ಗ್ರಹೇಣೇಂದ್ರೋऽಪಿ ಗೃಹೀತ ಏವೇತಿ ದ್ರಷ್ಟವ್ಯಮ್ । –(ವ)

೧೨೯. ತತಃ ಪಂಚಮತ್ವಾದಿನಾ ಯಥಾಕ್ರಮಮನಿರುದ್ಧಾದ್ಯಾ ದ್ರಷ್ಟವ್ಯಾ ಇತ್ಯಾಹ । -(ವ)

೧೨೯. ವಾಯೋರವತಾರಭೂತಭೀಮೋತ್ಕರ್ಷಪ್ರತಿಪಾದಕಭಾರತವಾಕ್ಯೈರ್ವಾಯೂತ್ಕರ್ಷಂ ಪ್ರತಿಪಾದಯತಿ । –(ಜ.)

ಅ: ಅನಂತರ ಪ್ರದ್ಯುಮ್ನ ಮೊದಲಾದವರು ಕ್ರಮವಾಗಿ ವಿಷ್ಣುವಿನ ಸೇವಕರಾಗಿರುವರು. ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿಸಲೆಂದೇ ವೈಷ್ಣವರ ಮಾಹಾತ್ಮ್ಯವು ಹೇಳಲ್ಪಡುತ್ತದೆ. ಭಾಗವತದಲ್ಲಿ ಉಕ್ತವಾಗಿರುವ ಹನುಮಂತನ ಶ್ರೇಷ್ಠವಾದ ವಚನವೂ ಹೀಗೆಯೇ ಇದೆ.

ವಿ: ೧) ಪ್ರದ್ಯುಮ್ನ, ಇಂದ್ರ ಮೊದಲಾದವರು ಶ್ರೀಹರಿಸೇವೆಯಲ್ಲಿ ನಾಲ್ಕನೆಯ ಅಂಗರು;

೨) ವಿಷ್ಣುವಿನ ಸರ್ವೋತ್ತಮತ್ವವೇ ಸಕಲಶಾಸ್ತ್ರಗಳ ಸಾರವಾಗಿದ್ದಲ್ಲಿ ಇತರ ದೇವತೆಗಳ ಮಾಹಾತ್ಮ್ಯವನ್ನು ಶಾಸ್ತ್ರಗಳು ತಿಳಿಸಲು ಕಾರಣವೇನು ಎಂಬ ಸಮಸ್ಯೆಯನ್ನು ಇದರಲ್ಲಿ ಪರಿಹರಿಸಿರುವರು; ಇತರ ದೇವತೆಗಳ ಮಾಹಾತ್ಮ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಅವರ ಹಿರಿಮೆಯೆಲ್ಲ ವಿಷ್ಣುವಿನ ಅನುಗ್ರಹದಿಂದ ಅವರಿಗೆ ಲಭಿಸಿರುವುದರಿಂದ, ನಿಜಕ್ಕೂ ಸರ್ವೋತ್ತಮನು ವಿಷ್ಣುವೊಬ್ಬನೇ ಎಂಬುದು ಖಚಿತವಾಗುವುದು ಎಂದು ಭಾವ; ಅದರಂತೆ ಅವರ ಚರಿತ್ರೆಯಲ್ಲಿ ಕಂಡುಬರುವ ಯಾವ ದೋಷಗಳೂ ಮಹಾವಿಷ್ಣುವಿನಲ್ಲಿ ಎಂದೂ ಕಂಡು-ಬರುವದಿಲ್ಲವಾದ್ದರಿಂದ ಅವನೇ ದೇವತಾಸಾರ್ವಭೌಮ ಎಂಬುದು ಮನವರಿಕೆಯಾಗುವುದು ಎಂದು ತಿಳಿಯಬೇಕು.

೩) ಇದರಂತೆ ಕಾಮಪುತ್ರನಾದ ಅನಿರುದ್ಧ ಮೊದಲಾದವರು ಐದನೆಯ ಅಂಗವಾದವರು ಮೊದಲಾಗಿ ತಿಳಿಯಬೇಕು ಎಂದೂ ಭಾವ.

೪) ಇದರಂತೆ ಧ್ರುವ, ಪ್ರಹ್ಲಾದ ಮೊದಲಾದ ಸಕಲ ವಿಷ್ಣುಭಕ್ತರ ಕಥೆಯನ್ನು ಕೇಳುವುದು ಮೊದಲಾದವುಗಳ ಮುಖ್ಯ ತಾತ್ಪರ್ಯವೂ ವಿಷ್ಣುವಿನ ಸರ್ವೋತ್ತಮತ್ವವೇ ಆಗಿದೆ; ಭಾಗವತರ ಕಥೆಯು ಹೀಗೆ ಮೂಲತಃ ಭಗವಂತನ ಕಥೆಯೇ ಆಗಿದೆ ಎಂದು ತಿಳಿಯಬೇಕು.

೫) ಹನುಮಂತನ ಮಾತನ್ನು 'ಪರ' ಎಂದು ಕರೆಯುವ ಮೂಲಕ ಅದಕ್ಕಿರುವ ವಿಶೇಷ ಮಹತ್ತ್ವವನ್ನು ಸೂಚಿಸಿರುವರು.

ಭಾಗವತದಲ್ಲಿ ಶ್ರೀಹರಿಯ ಅವತಾರರಹಸ್ಯದ ನಿರೂಪಣೆ

ಮತ್ಸ್ಯಾವತಾರಸ್ತ್ವಿಹ ಮತ್ಸ್ಯಶಿಕ್ಷಣಂ
ರಕ್ಷೋವಧಾಯೈವ ನ ಕೇವಲಂ ವಿಭೋಃ ।
ಕುತೋಽಸ್ಯ ಹಿ ಸ್ಯಾ ರಮತಃ ಸ್ವ ಆತ್ಮನ್
ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥ ೧೩೦ ॥

ಅ: ವಿಭುವಾದ ನಾರಾಯಣನ ಮನುಷ್ಯರೂಪದ ಅವತಾರಗಳು ರಾಕ್ಷಸರ ವಧೆಗೆಂದು ಮಾತ್ರವೇ ಆಗಿರದೆ, ಮನುಷ್ಯಶಿಕ್ಷಣಕ್ಕೆಂದು ಸಹ ಆಗಿವೆ; ತನ್ನ ಸ್ವರೂಪದಲ್ಲೇ ಕ್ರೀಡಿಸುವ ಸರ್ವಸಮರ್ಥನಾದ ಅವನಿಗೆ ಸೀತಾನಿಮಿತ್ತವಾಗಿ ದುಃಖಗಳು ಹೇಗೆ ತಾನೆ ಉಂಟಾದಾವು?

ವಿ: ೧) ಭಾಗವತ ಪಂಚಮಸ್ಕಂಧದ ೧೦ನೇ ಅಧ್ಯಾಯದ ಶ್ಲೋಕ ಇದು.

೨) ತಂದೆ ತಾಯಿಗಳನ್ನು ಗೌರವಿಸಬೇಕು, ಗುರುಹಿರಿಯರನ್ನು ಆದರಿಸಬೇಕು; ವಿಷಯಾಸಕ್ತಿಯು ಹೇಯವಾದ್ದರಿಂದ ಅದರಿಂದ ದೂರವಿರಬೇಕು ಮೊದಲಾದ ಧರ್ಮಗಳನ್ನು ಸ್ವತಃ ದೃಷ್ಟಾಂತದಿಂದ ಜನತೆಗೆ ತಿಳಿಸಿಕೊಡುವುದು ಸಹ ಭಗವಂತನ ಮಾನವಾವತಾರದ ಉದ್ದೇಶ—ವಾಗಿದೆ. ಸದಾ ಸ್ಮರಮಾಣನಾದ ಅವನಿಗೆ ಸೀತಾವಿಯೋಗಾದಿಗಳಿಂದ ದುಃಖ ಹೇಗೆ ತಾನೆ ಒದಗಲು ಸಾಧ್ಯ? ಎಂದು ಭಾವ.

ನ ವೈ ಸ ಆತ್ಮಾऽऽತ್ಮವತಾಮಧೀಶ್ವರೋ
ಭುಂಕ್ತೇ ಹಿ ದುಃಖಂ ಭಗವಾನ್ ವಾಸುದೇವಃ ।
ನ ಸ್ತ್ರೀಕೃತಂ ಕಶ್ಮಲಮಶ್ನುವೀತ
ನ ಲಕ್ಷ್ಮಣಂ ಚಾಪಿ ಜಹಾತಿ ಕರ್ಹಿಚಿತ್ ॥ ೧೩೧ ॥

---

೧೩೦. ವಿಷಯಾಸಕ್ಯಾತದ್ವಿಯೋಗಜನ್ಯಂ ಮಹದ್ದುಃಖಂ ಸ್ಯಾತ್ । ಅತೋ ಭಾರ್ಯಾದಿವಿಷಯೇಷು ಅಸಕ್ತಿರ್ನ ಕರ್ತವ್ಯೇತಿ ಮನುಷ್ಯಾನ್ ಶಿಕ್ಷಯಿತುಂ ಚಾವತಾರಃ ಕೃತ ಇತಿ ಭಾವಃ । ಅತ ಏವ ಸೀತಾವಿಯೋಗಜಸಂತಾಪಾದಿಕಂ ಜಾತಮಿತ್ಯಜ್ಞಾನಾಂ ಪ್ರದರ್ಶಿತಮ್ । ವಸ್ತುತಸ್ತು ತನ್ನಾಸ್ತ್ಯೇವೇತ್ಯಾಹ । —(ವ)

೧೩೦. ಅನ್ಯಥಾ ಮರ್ತ್ಯಶಿಕ್ಷಣಾರ್ಥಂ ಮರ್ತ್ಯಾವತಾರಃ ನ ಕೃತಶ್ಚೇತ್ ಸ್ವೇ ತಂತ್ರೇ ಆತ್ಮನ್ ಆತ್ಮನಿ ರಮತಃ ರಾಮಸ್ಯ ಸೀತಾಕೃತಾನಿ ವ್ಯಸನಾನಿ ಕುತಃ ಸ್ಯುರಿತಿ ಯೋಜನಾ । —(ವಾ)

೧೩೦. ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ (೩/೨೧)

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥ (೩/೨೪)

—ಎಂಬ ಭಗವದ್ಗೀತೆಯ ಮಾತುಗಳನ್ನು ಇಲ್ಲಿ ಗಮನಿಸಬಹುದು.

೧೩೦. ಸೀತಾಕೃತವ್ಯಸನಾಭಾವೇऽಪಿ ರಾಮಚಂದ್ರಃ ಸೀತಾಕೃತಾನಿ ವ್ಯಸನಾನಿ ಪ್ರದರ್ಶಿತವಾನ್ । ತೇನ ಜ್ಞಾಯತೇ ಭಾರ್ಯಾಸಕ್ತ್ಯಾ ಬಹೂನಿ ವ್ಯಸನಾನಿ ಭವಂತಿ । ಅತೋ ಭಾರ್ಯಾಸಕ್ತಿರ್ನ ಕರ್ತವ್ಯೇತಿ ಮರ್ತ್ಯಾನಾಂ ಶಿಕ್ಷಣಂ ಕೃತವಾನಿತಿ । —(ಸ.)

೧೩೦. ಭಾಗವತ. (೫/೧೯/೫)

ಅ: ಮನಸ್ಸನ್ನು ವಶಪಡಿಸಿಕೊಂಡ ಯೋಗೀಶ್ವರರಿಗೆಲ್ಲ ಮಹಾಸ್ವಾಮಿಯೂ ಷಡ್ಗುಣೈ-ಶ್ವರ್ಯ ಪರಿಪೂರ್ಣನೂ ಸಕಲಜಗತ್ತುಗಳಲ್ಲಿ ನೆಲೆಸಿರುವವನೂ, ಕ್ರೀಡಾದಿ ಗುಣವಿಶಿಷ್ಟನೂ ಪರಮಾತ್ಮನೂ ಆದ ಶ್ರೀರಾಮ ದುಃಖವನ್ನು ಸರ್ವಥಾ ಅನುಭವಿಸಲಾರ! ಸ್ತ್ರೀವಿಯೋಗದ ವ್ಯಥೆಯನ್ನು ಹೊಂದಲಾರ; ಯಾವುದೇ ರೀತಿಯಲ್ಲೂ ಲಕ್ಷ್ಮಣನನ್ನು ತೊರೆಯಲಾರನು ಸಹ.

ವಿ: ೧) ಶ್ರೀರಾಮನಿಗೆ ದುಃಖಾದಿದೋಷಾದಿಗಳಿಲ್ಲವೆಂಬುದನ್ನು ಇಲ್ಲಿಯ ವಿಶೇಷಣಗಳು ಸ್ಫುಟಪಡಿಸುವ ರೀತಿಯನ್ನು ಶ್ರೀವಾದಿರಾಜರು ವಿವರಿಸಿರುವರು.

೨) ಲಕ್ಷ್ಮಣನು ದುರ್ವಾಸರನ್ನು ತನ್ನ ಅಪ್ಪಣೆಯನ್ನು ಮೀರಿ ಒಳಕ್ಕೆ ಬಿಟ್ಟ ಎಂಬ ಕಾರಣ–ದಿಂದ ಶ್ರೀರಾಮನು ಅವನನ್ನು ತೊರೆದ ಎಂಬ ರಾಮಾಯಣದ ಪ್ರಸಂಗದ ಅರ್ಥ ಬೇರೆಯೇ ಆಗಿದೆ ಎಂದು ಭಾವ. ವಿವರಗಳು ಒಂಭತ್ತನೆಯ ಅಧ್ಯಾಯ(೯/೫೫–೫೮)ದಲ್ಲಿ ಬಂದಿವೆ.

ಶ್ರೀಹರಿಗೆ ಸೀತಾವಿಯೋಗಾದಿಗಳು ಸರ್ವಥಾ ಇಲ್ಲ

ಯತ್ಪಾದಪಂಕಜಪರಾಗನಿಷೇವಕಾಣಾಂ
ದುಃಖಾನಿ ಸರ್ವಾಣಿ ಲಯಂ ಪ್ರಯಾಂತಿ ।
ಸ ಬ್ರಹ್ಮವಂದ್ಯಚರಣೋ ಜನಮೋಹನಾಯ
ಸ್ತ್ರೀಸಂಗಿನಾಮಿತಿರತಿಂ ಪ್ರಥಯಂಶ್ಚಚಾರ ॥ ೧೩೨ ॥

ಅ: ಶ್ರೀರಾಮನು ಚತುರ್ಮುಖಬ್ರಹ್ಮದೇವರಿಂದ ನಮಸ್ಕರಿಸಲ್ಪಡುವ ಚರಣಗಳುಳ್ಳ-ವನು; ಅವನ ಚರಣಕಮಲಗಳ ರೇಣುಗಳನ್ನು ಭಕ್ತಿಯಿಂದ ಸೇವಿಸುವ ಜನರ

---

೧೩೧. ಆತ್ಮವತಾಂ ವಶೀಕೃತಮನಸಾಂ ಯೋಗೀಶ್ವರಾಣಾಮಧೀಶ್ವರೋ ಭಗವಾನ್ ಷಡ್ಗುಣೈಶ್ವರ್ಯಪರಿಪೂರ್ಣಃ ವಾಸುದೇವಃ ಸಕಲಜಗತ್ಸುವಸನಾತ್ ಕ್ರೀಡಾದಿಗುಣವಿಶಿಷ್ಟತ್ವಾಚ್ಚ ವಾಸುದೇವನಾಮಕಃ ಆತ್ಮಾ ಪರಮಾತ್ಮಾ ಸಃ ರಾಮಃ ದುಃಖಂ ನ ಭುಂಕ್ತೇ ಇತಿ ಯೋಜನಾ । ಆನಂದಪೂರ್ಣಸ್ಯ ಕಥಂ ದುಃಖಂ ಸಕಲಜಗದ್ವ್ಯಾಪಿನಃ ಕಥಂ ವಿಯೋಗಃ ಇತಿ ಸೂಚನಾಯ ವಿಶೇಷಣದ್ವಯಮ್ । ಕೃಷ್ಣಾವತಾರೇ ಬಹುಸಹಸ್ರಸ್ತ್ರೀಭಿಃ ಸಹ ರಮಮಾಣಸ್ಯಾಪಿ ನ ಸ್ತ್ರೀಕೃತಕಶ್ಮಲಮಿತಿ ಸೂಚನಾಯ ವಾಸುದೇವಗ್ರಹಣಮ್ । 'ಹೀ'ತ್ಯನೇನ 'ನಿರನಿಷ್ಟೋ ನಿರವದ್ಯಃ' ಇತಿ ಶ್ರುತಿಪ್ರಸಿದ್ಧಿಂ ಸೂಚಯತಿ ॥

೧೩೧. ಅತ್ರ ದೂರ್ವಾಸಾ ದ್ವಾರಿ ಪ್ರವೇಶಿತಃ ಇತಿ ಕೋಪೇನ ಲಕ್ಷ್ಮಣಃ ಪರಿತ್ಯಕ್ತಃ – ಇತಿ ರಾಮಾಯಣೇ ಕಥಾ ಅಸ್ತಿ। ಸಾ ऽಪಿ ದುಷ್ಟಮೋಹನಾರ್ಥಮೇವ ಪ್ರವೃತ್ತೇತಿ ಭಾವಃ। –(ವ)

೧೩೧. ರಾಮಚಂದ್ರಃ ಸ್ತ್ರೀಕೃತಂ ಸ್ತ್ರೀಕೃತಾಂ ಕಶ್ಮಲಚಿತ್ತಾಂ ಚ ನಾಶ್ನುವೀತ ನ ಪ್ರಾಪ್ನೋತಿ ॥ – (ಸ.)

೧೩೨. ಜನಾನಾಂ ದುರ್ಜನಾನಾಂ ಮೋಹನಾಯೈತ್ಯೇಕಂ ಪ್ರಯೋಜನಮ್ । ಸ್ತ್ರೀಸಂಗಿನಾಂ ಇತಿರತಿಂ ಇತ್ಯುಕ್ತ–ಪ್ರಕಾರೇಣ ದುಃಖಸಾಧನಭೂತಾಂ ರತಿಂ ಲೋಕೇ ಪ್ರಥಯನ್ನಿತಿ ದ್ವಿತೀಯಂ ಪ್ರಯೋಜನಂ ಇತಿ ಭಾವಃ। -(ವ)

ಸಕಲದುಃಖಗಳೂ ನಾಶವನ್ನು ಹೊಂದುವುವು. ಅಂತಹ ಅವನು ಜನಗಳನ್ನು ಮೋಹಪಡಿಸಲೆಂದು, ಸ್ತ್ರೀಸಂಗಿಗಳ ದುಃಖದ ಪರಿಯನ್ನು ತಿಳಿಸಲು ಹಾಗೆ ವರ್ತಿಸಿದ.

ಏಃ ೧) ಅವನ ಚರಣಪದ್ಮರೇಣುಗಳ ಆರಾಧಕರಿಗೇ ದುಃಖವಿಲ್ಲವೆಂದಮೇಲೆ ಅವನಿಗೆ ದುಃಖದ ಪ್ರಸಕ್ತಿ ಎಂದೂ ಇಲ್ಲವೆಂಬುದು ಕೈಮುತ್ಯಸಿದ್ಧವೆಂದು ಭಾವ.

೨) ಇನ್ನು ಅದು ಶ್ರೀರಾಮನಿಗೆ ಬ್ರಹ್ಮ ಬರೆದ ಬರಹ ಎಂದೂ ಹೇಳುವಂತಿಲ್ಲ ಏಕೆಂದರೆ ಅಂತಹ ಬ್ರಹ್ಮದೇವರು ಸದಾ ಇವನ ಚರಣಗಳಿಗೆ ಮಣಿಯುವ ದಾಸರಾಗಿರುವರು.

೩) ಶ್ರೀರಾಮನು ಸಾಕ್ಷಾತ್ ಭಗವಂತನಾದ ಶ್ರೀಹರಿ; ಅವನು ದುಃಖಿಯಂತೆ ಸಂಚರಿಸಿದ್ದು ಎರಡು ಉದ್ದೇಶಗಳಿಂದ; ಅಸುರಜನರು(ಮತ್ತು ಹಿಂದೆ ಹೇಳಿದಂತೆ ಯೋಗ್ಯಜನರು ಸಹ) ಮೋಹಗೊಳ್ಳಲಿ ಎಂಬುದು ಒಂದು; ಸ್ತ್ರೀಯರ ಹಂಬಲದಿಂದ ಬದುಕುವ ಜನಗಳ ಬಾಳು ಎಷ್ಟು ದುಸ್ತರವಾಗುತ್ತದೆ ಎಂದು ತಿಳಿಸಿಕೊಡುವುದು ಮತ್ತೊಂದು.

ಶಿವಾದಿಗಳ ಪೂಜೆ ಅಸುರಮೋಹಕ

ಕ್ವಚಿಚ್ಛಿವಂ ಕ್ವಚಿದೃಷೀನ್ ಕ್ವಚಿದ್ದೇವಾನ್ ಕ್ವಚಿನ್ನರಾನ್ ।
ನಮತ್ಯರ್ಚಯತಿ ಸ್ತೌತಿ ವರಾನರ್ಥಯತೇऽಪಿ ಚ ।
ಲಿಂಗಂ ಪ್ರತಿಷ್ಠಾಪಯತಿ ವೃಣೋತ್ಯಸುರತೋ ವರಾನ್ ॥ ೧೩೩ ॥

ಸರ್ವೇಶ್ವರಃ ಸ್ವತಂತ್ರೋऽಪಿ ಸರ್ವಶಕ್ತಿಶ್ಚ ಸರ್ವದಾ ।
ಸರ್ವಜ್ಞೋऽಪಿ ವಿಮೋಹಾಯ ಜನಾನಾಂ ಪುರುಷೋತ್ತಮಃ ॥ ೧೩೪ ॥

ಆಃ ವಿಷ್ಣುವು ಕೆಲವೊಮ್ಮೆ ಶಿವನನ್ನು, ಕೆಲವೊಮ್ಮೆ ಋಷಿಗಳನ್ನು, ಕೆಲವೊಮ್ಮೆ ದೇವತೆಗಳನ್ನು, ಕೆಲವೊಮ್ಮೆ ಮನುಷ್ಯರನ್ನು ನಮಸ್ಕರಿಸುವನು, ಅರ್ಚಿಸುವನು, ಸ್ತುತಿಸುವನು. ಅವರಿಂದ

---

೧೩೩. ಕ್ವಚಿಚ್ಛಿವಂ ಇತಿ ಭಾರತವಾಕ್ಯಮ್ । –(ಜ)

ಏತದ್ಭಾಗವತೋಕ್ತಸಮಾಖ್ಯಾವಾಕ್ಯೇನಾಪಿ ದೃಢಯತಿ ಕ್ವಚಿಚ್ಛಿವಂ ಇತ್ಯಾದಿನಾ । – (ಜ)

೧೩೪. ಅಸುರತಃ ಅಸುರಾಭ್ಯಾಂ ಮಧುಕೈಟಭಾಭ್ಯಾಂ ಯುದ್ಧೇನ ತುಷ್ಟಾಭ್ಯಾಂ ವರಾನ್ ಯುವಯೋರ್ಜೀತಾ ಹಂತಾ ಭವಾಮಿ ಇತ್ಯಾದಿ ವರಾನ್ ಅವೃಣೋದಿತಿ ಮಾರ್ಕಂಡೇಯಪೌರಾಣಿಕೀ ಕಥಾऽನುಸಂಧೇಯಾ । –(ಜ)

ಮದಾಂಧಾಭ್ಯಾಂ ಮಧುಕೈಟಭಾಭ್ಯಾಂ ವರಂ ವೃಣೀಷ್ವೇತಿ ಪೃಷ್ಟಃ ಕೃಷ್ಣಃ ಯುವಯೋರ್ಹಂತಾऽಹಂ ಸ್ಯಾಮಿತಿ ವರಂ ಜಗ್ರಾಹ ಕಿಲ । ದತ್ತಸ್ಯಾನ್ಯಥಾಭಾವೇ ಸ್ವಮಹಿಮಾ ನ್ಯೂನಃ ಸ್ಯಾದಿತಿ ಭಯಾ ತಾಭ್ಯಾಂ ತಥೈವಾಸ್ತ್ವಿತ್ಯುಕ್ತಕಥಾಸಂಗ್ರಹಾಯ 'ವೃಣೋತ್ಯಸುರತೋ ವರಾನ್' ಇತ್ಯುಕ್ತಮ್ । – (ವಾ)

ವರಗಳನ್ನು ಬೇಡಿಕೊಳ್ಳುವನು ಸಹ. ಶಿವಲಿಂಗವನ್ನು ಪ್ರತಿಷ್ಠೆಮಾಡುವನು, ಅಸುರರಿಂದ ವರಗಳನ್ನು ಕೇಳಿಕೊಳ್ಳುವನು; ಸರ್ವದಾ ಸರ್ವೇಶ್ವರನೂ, ಸ್ವತಂತ್ರನೂ, ಸರ್ವಶಕ್ತನೂ, ಸರ್ವಜ್ಞನೂ ಮತ್ತು ಕ್ಷರಾಕ್ಷರಪುರುಷರಿಗಿಂತ ಮಿಗಿಲಾದ ಪುರುಷೋತ್ತಮನೂ ಆಗಿರುವ ಅವನು ಜನಗಳ ವಿಮೋಹನಕ್ಕೆಂದು ಹಾಗೆ ಮಾಡುವನು.

ಏಃ ೧) ಶಿವಾದಿಗಳನ್ನು ವಿಷ್ಣು ಪೂಜಿಸುವುದು ಅಸುರವೋಹನಕ್ಕಾಗಿ ಎಂಬುದನ್ನು ಮತ್ತೊಂದು ಪ್ರಮಾಣದಿಂದ ನಿರೂಪಿಸುತ್ತಿರುವರು.

೨) ಶಿವಾದಿಗಳನ್ನು ಪೂಜಿಸುವುದು, ಸ್ತುತಿಸುವುದು, ವಂದಿಸುವುದು ಅವರಿಂದ ವರಗಳನ್ನು ಬೇಡುವುದು ಮೊದಲಾದ ಕಾರ್ಯಗಳನ್ನು ವಿಷ್ಣುವು ತನ್ನ ಅವತಾರಗಳಲ್ಲಿ ಮಾಡಿರುವುದು ಅಯೋಗ್ಯಜನರ ಮೋಹನಕ್ಕೆಂದು ಮಾತ್ರವೇ ಹೊರತು, ನಿಜಕ್ಕೂ ಅವರಿಂದ ಪ್ರಯೋಜನ ಪಡೆಯಲಾಗಲೀ, ಅವರು ತನಗಿಂತ ಉತ್ತಮರು ಎಂಬ ಕಾರಣದಿಂದಾಗಲೀ ಅಲ್ಲ ಎಂದು ಭಾವ.

೩) ವಿಷ್ಣುವು ಶಿವಾದಿಗಳನ್ನು ಬೇರೆ ಯಾವ ಕಾರಣಕ್ಕಾಗಿಯೂ ಪೂಜಿಸಬೇಕಿಲ್ಲ ಎಂಬುದನ್ನು **'ಸರ್ವೇಶ್ವರ', 'ಸ್ವತಂತ್ರ', ಸರ್ವಶಕ್ತಿ', 'ಸರ್ವಜ್ಞ', 'ಪುರುಷೋತ್ತಮ'** ಎಂಬ ವಿಶೇಷಣಗಳಿಂದ ತಿಳಿಸಿರುವರು.

---

೧೩೪. ತದುಕ್ತಂ ದೇವೀಮಾಹಾತ್ಮ್ಯೇ ಮಾರ್ಕಂಡೇಯಪುರಾಣೇ ಚ-

ತದಾ ದ್ವಾವಸುರೌ ಘೋರೌ ವಿಖ್ಯಾತೌ ಮಧುಕೈಟಭೌ ।
ವಿಷ್ಣುಕರ್ಣಮಲೋದ್ಭೂತೌ ಹಂತುಂ ಬ್ರಹ್ಮಾಣಮುದ್ಯತೌ ॥

ತಥಾ -

ತಾವತಿಪ್ಪತಿ ಬಲೋನ್ಮತ್ತೌ ಮಾಯಾವಿಮೋಹಿತೌ ।
ಉಕ್ತವಂತೌ ವರೋಽಸ್ಮತ್ತೋ ವ್ರಿಯತಾಮಿತಿ ಕೇಶವಮ್ ॥ (೭೮/೭೩) ಇತಿ ।

ತಥಾ ಭವತಾಮಸ್ಮ ಮೇ ತುಷ್ಟೌಮಮ ವಧ್ಯಾವುಭಾವಪಿ ।
ಕಿಮನ್ಯೇನ ವರೇಣಾತ್ರ ಏತಾವದ್ಧಿ ವೃತಂ ಮಯಾ ॥ (೭೮/೭೪)

ತಥಾ -

ಪ್ರೀತೌ ಸ್ವಸ್ತವ ಯುದ್ಧೇನ ಶ್ಲಾಘ್ಯತ್ವಂ ಮೃತ್ಯುರಾವಯೋಃ ।
ಆವಾಂ ಜಹಿ ನ ಯತ್ರೋರ್ವೀ ಸಲಿಲೇನ ಪರಿಪ್ಲುತಾ ॥ (೭೮/೭೬)–ಇತಿ ।

ಭಾರತೇ ಅರಣ್ಯಪರ್ವಣಿ ಚ–

ಪ್ರತಿಗೃಹ್ಣೇ ವರಂ ವೀರಾವೀಪ್ಸಿತಶ್ಚ ವರೋ ಮಮ ।
ಯುವಾಂ ಚ ವೀರ್ಯಸಂಪನ್ನೌ ನ ವಾಮಸ್ತಿ ಸಮಃ ಪುಮಾನ್ ॥
ವಧ್ಯತ್ವಮುಪಗಚ್ಛೇಥಾಂ ಮಮ ಸತ್ಯಪರಾಕ್ರಮೌ ॥ ಇತಿ (೨೦೩/೨೬)

೪) ಹರಿವಂಶದಲ್ಲಿ ಬರುವ ಶ್ರೀಕೃಷ್ಣಕೃತಕೈಲಾಸಯಾತ್ರಾಪ್ರಸಂಗದಲ್ಲಿನ ಶಿವಪೂಜೆ ನಾರದಾದಿ ಋಷಿಗಳ ಪೂಜೆ(ರಾಮಾಯಣದಲ್ಲಿ ವಿಶ್ವಾಮಿತ್ರಾದಿಗಳ ಪೂಜೆ), ವಸುದೇವ, ದಶರಥಾದಿಗಳಿಗೆ ಮಾಡಿದ ನಮಸ್ಕಾರ, ರಾಮೇಶ್ವರದಲ್ಲಿ ಮಾಡಿರುವ ಲಿಂಗಪ್ರತಿಷ್ಠೆ ಇವೇ ಮೊದಲಾದ ಅಂತಹ ಕಾರ್ಯಗಳೆಲ್ಲ ಅಸುರಮೋಹಕ ಹಾಗೂ ಯಥಾಯೋಗ್ಯವಾಗಿ ಲೋಕಶಿಕ್ಷಕ ಎಂದು ತಿಳಿಯಬೇಕು.

೫) ಮಧುಕೈಟಭರಿಂದ ಶ್ರೀಕೃಷ್ಣನು 'ನಿಮ್ಮಿಬ್ಬರನ್ನು ನಾನು ಕೊಲ್ಲುವಂತಾಗಲಿ' ಎಂದು ವರ ಪಡೆದು, ಅನಂತರ ಅವರನ್ನು ಸಂಹರಿಸಿದನು ಎಂಬ ಕಥೆ ಪುರಾಣಗಳಲ್ಲಿ ಬಂದಿದೆ. ಅದು ಸಹ ಇಬ್ಬರು ಅಸುರರಿಗೂ, ಇತರ ಅಯೋಗ್ಯರಿಗೂ ಮೋಹ ಕವಿಸಲೆಂದೇ ಶ್ರೀಕೃಷ್ಣ ಮಾಡಿದ ನಟನೆ ಎಂದು ತಿಳಿಯಬೇಕು ಎಂಬುದನ್ನು '**वृणोत्यसुरतो वरान्**' ಎಂಬ ಮಾತು ಸೂಚಿಸುತ್ತದೆ.

ಶ್ರೀವಿಷ್ಣುಸರ್ವೋತ್ತಮತ್ವದೇ ಸಕಲ ಶಾಸ್ತ್ರಗಳ ನಿರ್ಣಯ

तस्माद्योऽयं महिमा विष्णोः सर्वशास्त्रोदितः स हि ।
नान्यदित्येष शास्त्राणां निर्णयः समुदाहृतः ॥ ೧೩೫ ॥

ಅ: ಆದ್ದರಿಂದ ವಿಷ್ಣುವಿನ ಮಹಿಮೆಯಷ್ಟೆ ಸಕಲಶಾಸ್ತ್ರಗಳಲ್ಲಿ ಉಕ್ತವಾಗಿದೆ; ಬೇರಾವುದೂ ಅಲ್ಲ; ಇದು ಸಕಲಶಾಸ್ತ್ರಗಳ ನಿರ್ಣಯ ಎಂಬುದಾಗಿ ಪ್ರಾಜ್ಞರಿಂದ ಚೆನ್ನಾಗಿ ಉದಾಹೃತವಾಗಿದೆ.

ವಿ: ೧) ವಿಷ್ಣುವಿನ ಮಹಿಮೆ ಎಂಬುದಾಗಿ ಉಕ್ತವಾಗಿರುವುದೆಲ್ಲ ನಿಜವಾದ ಸಕಲ ಶಾಸ್ತ್ರಾರ್ಥವಾಗಿದೆ; ಹಾಗಲ್ಲದ್ದು ಮಾತ್ರ ಶಾಸ್ತ್ರಾರ್ಥವೇ ಅಲ್ಲ.

೨) ವಿಷ್ಣುವಿನ ಮಹಿಮೆಯೇ ಹೀಗೆ ಸಕಲಶಾಸ್ತ್ರಾರ್ಥವಾಗಿರುವುದರಿಂದ ಅವನಿಗೆ ದೋಷ ಹೇಳುವಂತಹ ವಚನಗಳೆಲ್ಲ ಹಿಂದೆ ಹೇಳಿದಂತೆ ಅಯೋಗ್ಯಜನವಮೋಹನ ಮತ್ತು ಮರ್ತ್ಯಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ಎಂದು ಭಾವ.

ಮಹಾಭಾರತದ ಅರ್ಥತ್ರೈವಿಧ್ಯ

भारतार्थस्त्रिधा प्रोक्तः स्वयं भगवतैव हि ॥ ೧೩೬ ॥

---

೧೩೫. यो विष्णोर्महिमा स एव सर्वशास्त्रोदितः अन्यत् नरविडंबनाय असुरमोहार्थं च कृतम् । यत् स्वमहिमविरोधि कैलासयात्रादिचरित्रं शास्त्रतात्पर्यविषयतया उदितं न । हरिणा कृतत्वात् तदपि शास्त्रे क्वचित् क्वचित् शास्त्रकृतो वर्णयंति । तथाऽप्यसौ विष्णोर्महिमविरोधित्वात् शास्त्रतात्पर्यविषयभूतो न इति भावः। –(वा.)

ಅ: ಮಹಾಭಾರತದ ಅರ್ಥವು ಮೂರುತೆರನಾಗಿದೆ ಎಂದು ಸ್ವತಃ (ಅದನ್ನು ಬರೆದ) ವೇದವ್ಯಾಸರೇ ಹೇಳಿರುವರಲ್ಲವೇ!

ವಿ: ೧) ಮಹಾಭಾರತವು ಹೀಗೆ ವಿಷ್ಣುಪರವೆಂದಾದರೆ ಅದು ಧರ್ಮರಾಜಾದಿ ಪಾಂಡವಾದಿ ಪ್ರತಿಪಾದಕವಾದ ಗ್ರಂಥ ಹೇಗಾದೀತು? ಎಂಬ ಶಂಕೆಯನ್ನು ಈ ಮಾತಿನಿಂದ ಪರಿಹರಿಸ–ತೊಡಗಿರುವರು. ಮಹಾಭಾರತದ ಮಹಾತಾತ್ಪರ್ಯವು ವಿಷ್ಣುಸರ್ವೋತ್ತಮತ್ವವೇ ಆದರೂ ಅದಕ್ಕೆ ಧರ್ಮಾದಿಗಳನ್ನು ಪ್ರತಿಪಾದಿಸುವ ಇತರ ಅರ್ಥಗಳು ಉಂಟು ಎಂದು ಅದನ್ನು ಬರೆದ ಶ್ರೀವೇದವ್ಯಾಸರೇ ತಿಳಿಸಿರುವುದರಿಂದ ಆ ಅರ್ಥಗಳು ಅದಕ್ಕೆ ಅಪ್ರಧಾನವಾಗಿ ಉಂಟು ಎಂದು ಭಾವ.

೨) ಶ್ರೀಮದಾಚಾರ್ಯರು ಮಹಾಭಾರತಕ್ಕೆ ಅತಿಕಡಿಮೆ ಎಂದರೂ ಹತ್ತು ಅರ್ಥ–ಗಳುಂಟು ಎಂದು ಬೇರೆಡೆಗಳಲ್ಲಿ ಹೇಳಿರುವರು. ಆದರೆ ಇಲ್ಲಿ ಅಧಿಕಾರಿಭೇದದಿಂದ ಮೂರು ಅರ್ಥಗಳುಂಟು ಎಂದು ತಿಳಿದರೆ ಬಾಧಕವಿಲ್ಲ ಎಂದು ಜನಾರ್ದನಭಟ್ಟರು ಬರೆದಿರುವರು.

೩) ಮಹಾಭಾರತಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳುಂಟು ಎಂಬ ಮಾತಿಗೆ ಅದರಲ್ಲೇ ಬಂದಿರುವ 'ಮನ್ವಾದಿ' ಎಂಬ ಶ್ಲೋಕವನ್ನು ಆಧಾರವಾಗಿ ಉದಾಹರಿಸುತ್ತಿರುವರು. ಇದರಲ್ಲಿ ಮೂರುತೆರನಾದ ಅರ್ಥಗಳುಂಟು ಎಂದು ಹೇಳಿದ್ದರೂ ಮೂರೇ ಅರ್ಥಗಳುಂಟು ಎಂದೇನೂ ಹೇಳಿಲ್ಲವಾದ್ದರಿಂದ, ಅಲ್ಲಿ ಹೇಳಿದ ಭಾರತದ ದಶಾರ್ಥಗರ್ಭಿತತ್ವಕ್ಕೆ ಯಾವ ವಿರೋಧವೂ ಇಲ್ಲವೆಂದು ತಿಳಿಯಬೇಕು.

---

೧೩೬. ನನು ಭಾರತಂ ವಿಷ್ಣುಪರಂ ಚೇತ್ ತತ್ಕಥಂ ಮನ್ವಾದಿ ಪರತ್ವೇನ ಕಥಮುಚ್ಯತೇ ಇತ್ಯತಃ ತದ್ವಾಕ್ಯಾರ್ಥಂ ವಕ್ತುಂ ಅನುವದತಿ । ಯದ್ವಾ ಭಾರತಂ ವಿಷ್ಣುಪರಂ ಚೇತ್ ಕಥಂ ಧರ್ಮಾದಿಪಾಂಡವಾದಿಪ್ರತಿಪಾದಕಂ ಇತ್ಯತ ಆಹ । ಭಾರತಾರ್ಥ ಇತಿ । –(ಜ)

೧೩೭. ಅಧಿಕಾರಿಭೇದೇನ ತ್ರಿವಿಧಾರ್ಥವತ್ವಮಿತ್ಯರ್ಥಃ । ಭಾರತಂ ನನು ದಶಾರ್ಥಮಿತಿ ಅನ್ಯತ್ರ ದಶಾರ್ಥಸ್ಯ ಕಥನಾತ್ । –(ಜ)

೧೩೮. ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ।
ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್ ॥ (ಸ್ಕಾಂದೇ) –ಋಗ್ಭಾಷ್ಯ
ಬ್ರಹ್ಮಾದ್ಯೈಃ ಪ್ರಾರ್ಥಿತೋ ವಿಷ್ಣುರ್ಭಾರತಂ ಸಂಚಕಾರ ಹ ।
ಯದ್ರಿಅನ್ ದಶಾರ್ಥಾಃ ಸರ್ವತ್ರ ನ ಜ್ಞೇಯಾಃ ಸರ್ವಜಂತುಮಿಃ ॥ - ಇತಿ ನಾರದೀಯೇ । –(ಗೀ. ಭಾ.)
ಭಾರತಂ ಚಾಪಿ ಕೃತವಾನ್ ಪಂಚಮಂ ವೇದಮುತ್ತಮಮ್ ।
ದಶಾವರಾರ್ಥಂ ಸರ್ವತ್ರ ಕೇವಲಂ ವಿಷ್ಣುಬೋಧಕಮ್ ।
ಪರೋಕ್ಷಾರ್ಥಂ ತು ಸರ್ವತ್ರ ವೇದಾದಪ್ಯುತ್ತಮಂ ತು ಯತ್ ॥ -ಇತಿ ಸ್ಕಾಂದೇ –(ಗೀ. ಭಾ.)
ವಿವಿಧಂ ಸಂಹಿತಾಜ್ಞಾನಂ ದೀಪಯಂತಿ ಮನೀಷಿಣಃ ॥ – ಭಾರತ। (ಆದಿ. ೧/೫೩)
'ದಶಾರ್ಥಂ ಭಾರತಂ ನನು' – ಸುಮಧ್ವವಿಜಯ(೬/೪)

೧೩೯. ತದಿದಂ ಭಾರತಾಖ್ಯಾನಂ ಬಹ್ವರ್ಥಂ ಶ್ರುತಿವಿಸ್ತರಮ್ । - ಇತಿ ಮಾರ್ಕಂಡೇಯ (೧/೧೨)

ಮನ್ವಾದಿ ಅರ್ಥತ್ರಯ

(1) (2)
ಮನ್ವಾದಿ ಕೇಚಿದ್ಬ್ರುವತೇ ಹ್ಯಾಸ್ತೀಕಾದಿ ತಥಾऽಪರೇ ।
(3)
ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ॥ ೧೩೭ ॥

ಅ: ಕೆಲವರು ಮಹಾಭಾರತವನ್ನು 'ಮನ್ವಾದಿ' ಅರ್ಥ ಉಳ್ಳದ್ದೆಂದೂ, ಮತ್ತೆ ಕೆಲವರು 'ಆಸ್ತೀಕಾದಿ' ಅರ್ಥ ಉಳ್ಳದ್ದೆಂದೂ, ಇನ್ನು ಕೆಲವರು 'ಉಪರಿಚರಾದಿ' ಅರ್ಥ ಉಳ್ಳದ್ದೆಂದೂ ಹೇಳುವರು.

ವಿ: ೧) ಮಹಾಭಾರತದ ಅರ್ಥವೈವಿಧ್ಯವನ್ನು ತಿಳಿಸುವ ಈ ಶ್ಲೋಕವನ್ನು ಕೆಲವರು ಮಹಾಭಾರತವು ಭಿನ್ನ ಭಿನ್ನ ಕಾಲದಲ್ಲಿ ಭಿನ್ನ ಭಿನ್ನ ಗಾತ್ರವನ್ನು ಪಡೆಯಿತೆಂದೂ ಅಂತಹ ಅದರ

---

೧೩೭. ''ಮನ್ವಾದಿ ಕೇಚಿತ್ ಬ್ರುವತೇ'' ಇತಿ ಶ್ಲೋಕಸ್ಯ ಆಪಾತತಃ ಪ್ರತೀಯಮಾನಾ ಮನವಃ, ಆಸ್ತೀಕಾಖ್ಯೋ ಋಷಿಃ, ಉಪರಿಚರಾಖ್ಯೋ ಮುಶ್ಚ ನಾರ್ಥಃ । ಮನೂನಾಂ ಪ್ರಸಂಗಸ್ಯೈವ ಭಾರತೇ । ಅಭಾವಾತ್ । ಆಸ್ತೀಕೋಪರಿಚರವಸ್ವೋಶ್ಚ ಸರ್ಪಯಾಗವಿಘ್ನಕರಣಾಯ ಸತ್ಯವತ್ಯುತ್ಪತ್ತಯೇ ಚ ಆದಿಪರ್ವಣ್ಯಾದಿಭಾಗೇ ಏಕೈಕಾಧ್ಯಾಯಮಾತ್ರೇಣ ಪ್ರಸಂಜನೇऽಪಿ ಆದಿಪರ್ವಣ್ಯಂತೇ ಪ್ರಸಂಜನಾಭಾವೇನ ಸಕಲಭಾರತಪ್ರತಿಪಾದ್ಯತ್ವಸ್ಯ ಸುತರಾಮಯೋಗಾತ್। – (ವಾ)

೧೩೭. ಮನ್ವಾದಿ ಭಾರತಮಿತ್ಯತ್ರ ಮನವೋ ಮಂತ್ರಾಃ ಸಹಸ್ರನಾಮಾದ್ಯಾ ಯೇ ವಿಷ್ಣುಮಂತ್ರಾಃ ಅಸ್ತಶಸ್ತ್ರಾದೀನಾಂ ಚ ಗಾಯತ್ರ್ಯಾದಯೋ ಯೇ ಮಂತ್ರಾಸ್ತೇಷಾಮಭಿಮಾನೀ ಭೀಮೋ ಮನುರಿತ್ಯುಚ್ಯತೇ । ತದಾದಿ ತನ್ಮಹಿಮಪ್ರತಿಪಾದನಮೇವಾದಿರ್ಯಸ್ಯ ತನ್ಮನ್ವಾದಿ । ಅಸಾಧಾರಣ್ಯೇನ ಭೀಮಮಹಿಮಪ್ರತಿಪಾದಕಮೇವ ಭಾರತಮಿತಿ ಕೇಚಿದ್ವಿಪ್ರಾ ಅಧೀಯಿರೇ । ಆಸ್ತೀಕಾದಿ ಅಸ್ತಿ ಪರದೇವತೇತಿ ಯೇ ವಿದುಸ್ತೇ ಆಸ್ತಿಕಾಃ ಪಂಚಪಾಂಡವದ್ರೌಪದ್ಯಾದ್ಯಾಸ್ತೇಷಾಂ ಸರ್ವೇಷಾಂ ಮಹಿಮಪ್ರತಿಪಾದಕಮಿತಿ ಕೇಚಿದ್ವಿಪ್ರಾ ಅಧೀಯಿರೇ । ತಥಾ ಉಪರಿಚರಾದಿ ಏತೇಷಾಂ ಸರ್ವೇಷಾಮುಪರಿ, ಏತದುತ್ತಮತಯೇತ್ಯರ್ಥಃ । ಚರತೀತಿ ಸರ್ವಾಂತರ್ಯಾಮೀ ನಾರಾಯಣಃ । ತದಾದಿ ತನ್ಮಹಿಮಪ್ರತಿಪಾದಕಮೇವೇತಿ ಕೇಚಿದ್ವಿಪ್ರಾ ಅಧೀಯಿರೇ । ದ್ರೌಪದ್ಯಾ ಅರ್ಜುನಾದೀನಾಂ ಚ ಚರಿತ್ರಸ್ಯ ತತ್ರ ತತ್ರ ಕಥ್ಯಮಾನತ್ವಾತ್ ತೇ ಸರ್ವೇ ಭಾರತಪ್ರತಿಪಾದ್ಯಾ ಇತಿ ಯಥಾ ಶ್ರುತಾರ್ಥವೇದಿನೋ ವದಂತಿ । ತೇಷ್ವಪಿ ಪ್ರಾಣರೂಪೇಣ ಭೀಮಸ್ಯೈವ ಪ್ರವಿಷ್ಟತ್ವಾದ್ಭೀಮಸ್ಯೈವ ಚರಿತ್ರಪ್ರತಿಪಾದಕಂ ಭಾರತಮಿತಿ ರಹಸ್ಯವಿದ ಋಷ್ಯಾದಯೋ ವದಂತಿ । ಭೀಮಸ್ಯ ತೇಷಾಂ ಚಾಂತರ್ಯಾಮೀ ಹರಿರೇವೇತಿ ಸಕಲಭಾರತಂ ಹರಿಚರಿತ್ರಪ್ರತಿಪಾದಕಮಿತ್ಯೇಕಾಂತಿನೋ ಬ್ರಹ್ಮಾದ್ಯಾ ವದಂತಿ । ಭೀಮಸ್ಯ ತೇಷಾಂ ಚಾಂತರ್ಯಾಮೀ ಹರಿರೇವೇತಿ ಸಕಲಭಾರತಂ ಹರಿಚರಿತ್ರಪ್ರತಿಪಾದಕಮಿತ್ಯೇಕಾಂತಿನೋ ಬ್ರಹ್ಮಾದ್ಯಾ ವದಂತಿ । ಅತಃ ಪಕ್ಷತ್ರಯಮಪ್ಯುಚಿತಮೇವೇತಿ ಭಾವಃ ॥ ವಿವಿಧಂ ಸಂಹಿತಾಜ್ಞಾನಮಿತ್ಯತ್ರ ವಿವಿಧಂ, ಉಕ್ತವಿಧಯಾ ತ್ರಿವಿಧಂ, ದರ್ಶನಭಾಷಾದಿನಾ ಬಹುವಿಧಂ ಚ । ಸಂಹಿತಾಜ್ಞಾನಂ ಭಾರತಸಂಹಿತಾಜ್ಞಾನಮ್ ॥ – ಮಹಾಭಾರತಲಕ್ಷಾಲಂಕಾರ

ಪ್ರವಕ್ಷ್ಯಾಮೋ ಮತಂ ಕೃತ್ಸ್ನಂ ವ್ಯಾಸಸ್ಯಾದ್ಭುತಕರ್ಮಣಃ ।
ಯೇನ ಭಾರತಮುದ್ದಿಶ್ಯ ಧರ್ಮಾದ್ಯಾಃ ಪ್ರಕಟೀಕೃತಾಃ ॥ – ಮಾರ್ಕಂಡೇಯಪುರಾಣ(೪/೪೨)

೧೩೭. ಭಾರತ (ಆದಿ. ೧/೫೨)

ಪ್ರಧಾನ ಅವತರಣಿಕೆಗಳು 'ಜಯ', 'ಭಾರತ' ಮತ್ತು 'ಮಹಾಭಾರತ' ಎಂಬುದಾಗಿ ಮೂರು ಎಂದೂ, ಅವುಗಳ ಆರಂಭವನ್ನು ಈ ಶ್ಲೋಕ ಸೂಚಿಸುತ್ತದೆ ಎಂದೂ ಅರ್ಥಮಾಡಿಕೊಂಡಿರುವರು. 'ಮನ್ವಾದಿ' ಎಂದರೆ 'ನಾರಾಯಣಂ ನಮಸ್ಕೃತ್ಯ' ಎಂಬ ಶ್ಲೋಕವನ್ನು ಆದಿಯಾಗಿ ಉಳ್ಳ ಅವತರಣಿಕೆ 'ಆಸ್ತೀಕಾದಿ' ಎಂದರೆ ಆಸ್ತಿಕನ ಕಥೆಯನ್ನು ಆದಿಯಾಗಿ ಉಳ್ಳ ಅವತರಣಿಕೆ, 'ಉಪರಿಚರಾದಿ' ಎಂದರೆ 'ಉಪರಿಚರವಸು'ವಿನ ಪ್ರಸಂಗವನ್ನು ಆದಿಯಾಗಿ ಉಳ್ಳ ಅವತರಣಿಕೆ ಎಂದೂ ಅವರ ತಿಳುವಳಿಕೆ. ಮೊದಲ ಹಂತದ ಭಾರತ 'ಜಯ'ದಲ್ಲಿ ೮೮೦೦ ಶ್ಲೋಕ, ಎರಡನೆಯ ಹಂತದ ಪರಿಷ್ಕರಣ 'ಭಾರತ'ದಲ್ಲಿ ಅದರ ಶ್ಲೋಕ ವ್ಯಾಪ್ತಿ ೨೪೦೦೦ ಕ್ಕೆ ಹೆಚ್ಚಿತೆಂದೂ ಮೂರನೆಯ ಹಾಗೂ ಇಂದಿನ ಹಂತದ ಅವತರಣಿಕೆ ಮಹಾಭಾರತ ಲಕ್ಷಶ್ಲೋಕಗಳನ್ನೂ ಮೀರಿದೆ ಎಂದೂ ಅವರ ವಾದ. ಇಂತಹ ಬೃಹದ್ಗ್ರಂಥ ಎಂದೂ ಒಂದೇ ಕಾಲಕ್ಕೆ ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಟ್ಟಿರು–ವುದು ಅಸಾಧ್ಯ ಎಂಬುದು ಅವರು ಅದಕ್ಕೆ ಕೊಡುವ ಕಾರಣ. ಅದರಲ್ಲಿ ಬರುವ ಉಪಾಖ್ಯಾನಗಳೆಲ್ಲ ಕೊನೆಯ ಹಂತದ ಸೇರ್ಪಡೆ ಎಂಬುದು ಅವರ ವಿಚಾರ.

೨) ವಾಸ್ತವವಾಗಿ ಈ ಶ್ಲೋಕ ಮಹಾಭಾರತದ ವಿಭಿನ್ನ ಆರಂಭಗಳನ್ನು ತಿಳಿಸುವ ಶ್ಲೋಕ ಎಂಬ ಅವರ ವಿಚಾರವೇ ಅರ್ಥಹೀನವಾದುದು. ಮಹಾಭಾರತಕ್ಕಿರುವ ಅರ್ಥವೈವಿಧ್ಯವನ್ನು ತಿಳಿಸುವುದು ಈ ಶ್ಲೋಕದ ಮುಖ್ಯ ವಿಷಯ. ಮಹಾಭಾರತದಲ್ಲಿ ಇಂದು ಉಪಲಬ್ಧವಿರುವಂತೆಯೇ, ಈ ಶ್ಲೋಕದ ಅನಂತರ 'ವಿವಿಧಂ ಸಂಹಿತಾ ಜ್ಞಾನಂ ದೀಪಯಂತಿ ಮನೀಷಿಣಃ' ಎಂಬ ವಾಕ್ಯವಿದ್ದು ಅದು 'ಹೀಗೆ ಅನೇಕ ಪ್ರಾಜ್ಞರು ಇದನ್ನು ಹೀಗೆ ವಿವಿಧ ರೀತಿಯ ಅರ್ಥ ಉಳ್ಳದ್ದನ್ನಾಗಿ ತಿಳಿಯುವರು' ಎಂದೇ ಸ್ಪಷ್ಟವಾಗಿ ಹೇಳುತ್ತದೆ.

೩) ಆಧುನಿಕರ ಇತರ ವಿಚಾರಗಳೆಲ್ಲ ಸಂಪೂರ್ಣವಾಗಿ ಅಸಂಗತವೂ ಅಪ್ರಾಮಾಣಿಕವೂ ಆಗಿದೆ. 'ಮಹಾಭಾರತವು ಮೂರು ಹಂತದಲ್ಲಿ ಬೆಳೆಯಿತು', ಅದಕ್ಕೆ 'ಜಯ, ಭಾರತ ಮತ್ತು ಮಹಾಭಾರತ' ಎಂದು ಕ್ರಮವಾಗಿ ಹೆಸರುಗಳಿದ್ದವು ಎಂಬುದಾಗಿ ಭಾರತದಲ್ಲಾಗಲೀ ಇತರ ಪ್ರಾಚೀನಗ್ರಂಥಗಳಲ್ಲಾಗಲೀ ಎಲ್ಲೂ ಪುರಾವೆಯಿಲ್ಲ. 'ಜಯ, ಭಾರತ ಮತ್ತು ಮಹಾಭಾರತ' ಎಂಬ ಹೆಸರುಗಳು ಒಂದೇ ಗ್ರಂಥಕ್ಕೆ ಒಂದೇ ಕಾಲದಲ್ಲಿ ಈಗಲೂ ಇರುವ ಹೆಸರುಗಳೇ ಆಗಿವೆ.

೪) ಒಬ್ಬನು ಇಂತಹ ಬೃಹದ್ಗ್ರಂಥ ಬರೆಯಲಾರ ಎಂಬ ಅವರ ವಾದವೂ ಅಷ್ಟೇ ಅರ್ಥಹೀನ. ಮನುಷ್ಯರ ಬಗ್ಗೆ ಇಂತಹ ಕಲ್ಪನೆ ನಿಜ; ಮನುಷ್ಯರು ಅನೇಕರಲ್ಲ ಎಲ್ಲರು ಸೇರಿಯೂ ಈ ಕೃತಿಯನ್ನು ಸಮಗ್ರ ಬರೆಯುವುದಿರಲಿ, ಅರಿಯಲೂ ಶಕ್ಯವಿಲ್ಲ. ಇದನ್ನು ಬರೆದ 'ವೇದವ್ಯಾಸರು' ಸಾಕ್ಷಾತ್ ಭಗವಂತ ಎಂಬುದೇ ಅಂತರಂಗ ಬಹಿರಂಗ ಪ್ರಮಾಣಗಳ ನಿರ್ಣಯ.

೫) ಇನ್ನು ಇಲ್ಲಿಯ 'ಮನು', 'ಆಸ್ತೀಕ' ಮತ್ತು 'ಉಪರಿಚರ' ಪದಗಳು ಮನು ಆಸ್ತೀಕ ಮತ್ತು ಉಪರಿಚರ ವಸ್ತುಗಳನ್ನು ಸೂಚಿಸುತ್ತ ಅವರನ್ನೇ ಪ್ರತಿಪಾದಿಸುತ್ತವೆ ಎಂದು ತಿಳಿಯುವುದು ಸಹ ಎಂದೂ ಸರಿಯಾಗದು ಎಂಬುದನ್ನು ಶ್ರೀವಾದಿರಾಜರು ವಿವರವಾಗಿ ತಿಳಿಸಿರುವರು.

೬) ಇನ್ನು ಶ್ರೀಮದಾಚಾರ್ಯರು ತಮ್ಮ ಇತರ ಗ್ರಂಥಗಳಲ್ಲಿ ಉದಾಹರಿಸಿರುವ ಇತರ ಪ್ರಮಾಣವಚನಗಳಿಂದಲೂ ಮಹಾಭಾರತದ ಬಹ್ವರ್ಥಗರ್ಭಿತತ್ವವು ಸಿದ್ಧವಾಗುವುದರಿಂದ ಇದು ಮೂಲತಃ ಮಹಾಭಾರತದ ಒಟ್ಟು ಮುಖ್ಯಾರ್ಥಗಳಿಗೆ ಸಂಬಂಧಿಸಿದ ಶ್ಲೋಕವಾಗಿದೆ ಎಂಬುದು ದೃಢಪಡುತ್ತದೆ.

೭) ಶ್ರೀಮದಾಚಾರ್ಯರು ಇಲ್ಲಿ ಈ ಶ್ಲೋಕದಲ್ಲಿನ ಮನ್ವಾದ್ಯರ್ಥಗಳ ಬಗ್ಗೆ ವಿವರಗಳನ್ನು ಶ್ರೀವೇದವ್ಯಾಸದೇವರ ವಾಕ್ಯಗಳಿಂದಲೇ ಸ್ಪುಟವಾಗಿ ತಿಳಿಸುತ್ತಿರುವರು.

ಮಹಾಭಾರತದ ಆಸ್ತೀಕಾರ್ಥದ ವಿವರಣೆ

ಸಕೃಷ್ಣಾನ್ ಪಾಂಡವಾನ್ ಗೃಹ್ಯ ಯೋಽಯಮರ್ಥಃ ಪ್ರವರ್ತತೇ ।
ಪ್ರಾತಿಲೋಮ್ಯಾದಿವೈಚಿತ್ರ್ಯಾತ್ ತಮಾಸ್ತೀಕಂ ಪ್ರಚಕ್ಷತೇ ॥ ೧೩೮ ॥

ಅ: ಪ್ರಾತಿಲೋಮ್ಯ ಮೊದಲಾದ ನಿರೂಪಣವೈಚಿತ್ರ್ಯದ ಹಿನ್ನೆಲೆಯಲ್ಲಿ ಶ್ರೀಕೃಷ್ಣ ದ್ರೌಪದೀಸಮೇತರಾದ ಪಾಂಡವರನ್ನು ವಿಷಯವನ್ನಾಗಿ ಪರಿಗ್ರಹಿಸಿ ವ್ಯಕ್ತವಾಗುವ ಅರ್ಥವನ್ನು 'ಆಸ್ತೀಕಾದಿ' ಅರ್ಥ ಎಂದು ಕರೆಯುವರು.

ವಿ: ೧) ಮನ್ವಾದಿ, ಆಸ್ತೀಕಾದಿ ಮತ್ತು ಉಪಚರಾದಿ ಎಂಬ ಮೂರು ಅರ್ಥಗಳಲ್ಲಿ ಮೇಲಿನ ಮುಖ್ಯಾರ್ಥವೆಂಬ ಕಾರಣದಿಂದಾಗಿಯೂ, ಉಳಿದೆರಡು ಅರ್ಥಗಳು ಇದನ್ನೇ ಅವಲಂಬಿಸಿವೆ ಎಂಬ ಕಾರಣದಿಂದಾಗಿಯೂ ಮೊದಲಿಗೆ 'ಆಸ್ತೀಕಾದಿ' ಅರ್ಥವನ್ನು ವಿವರಿಸುತ್ತಿರುವರು.

---

೧೩೮. 'ಕೇ ತ್ರಯೋ ಅರ್ಥಾಃ' ಇತ್ಯತಃ ಅನಂತರಮುದ್ದಿಷ್ಟಸ್ಯಾಪಿ ಆಸ್ತೀಕಾದ್ಯರ್ಥಸ್ಯ ಶಬ್ದಶಕ್ತ್ಯಾ ಪ್ರಥಮಪ್ರತೀತೇಃ ಇತರಯೋರರ್ಥಯೋಸ್ತದಧೀನಪ್ರತೀತತ್ವೇನ ಪ್ರಾಧಾನ್ಯಾತ್ ಪ್ರಥಮತಃ ತಮಾಹ । ಸಕೃಷ್ಣಾನ್ನಿತಿ । –(ವ)

೧೩೮. ವ್ಯತ್ಯಾಸಃ ಪ್ರಾತಿಲೋಮ್ಯಂ ಚ ಗೋಮೂತ್ರೀ ಪ್ರಘಸಸ್ತಥಾ ।
ಉಕ್ಷಣಃ ಸುಧುರಃ ಸಾಧುಃ ಸಪ್ತಭೇದಾಃ ಪ್ರಕೀರ್ತಿತಾಃ ॥ –(೯/೧೩೯)

೧೩೮. ಉಪರಿ ವಕ್ತವ್ಯಸ್ಯ ಪ್ರಮೇಯಸ್ಯ ಪ್ರಸಂಗಾತ್ ಪ್ರಾಕ್ ಕಥನಮ್ । ಕ್ವಚಿದಾದೌ ವಕ್ತವ್ಯಸ್ಯಾಪಿ ಪ್ರಮೇಯಸ್ಯ ವಕ್ಷ್ಯಮಾಣಪ್ರಮೇಯಸಂಗತತ್ವಾತ್ ಪಶ್ಚಾತ್ ಕಥನಂ ಪ್ರಾತಿಲೋಮ್ಯಮ್ । ಕ್ವಚಿದರ್ಜುನಾದಿಕೃತಸ್ಯಾಪಿ ಚರಿತ್ರಸ್ಯ ಪ್ರಾಧಾನ್ಯಾತ್ ಭೀಮಾದಿಕೃತತ್ವವರ್ಣನಂ ವ್ಯತ್ಯಾಸಃ ।ಇದಮಾದಿಪದೇನ ಸಂಗೃಹ್ಯತೇ । ಏತದಾದಿವೈಚಿತ್ರ್ಯಾತ್ । -(ವಾ)

೧೩೮. ಪಶ್ಚಾತ್ ಕಥನೀಯಸ್ಯ ಪೂರ್ವಂ ಕಥನಂ ಪ್ರಾತಿಲೋಮ್ಯಮ್ । ಭೀಮೇನ ಹತಾ ಇತಿ ವಕ್ತವ್ಯೇ ಅರ್ಜುನೇನ ಹತಾ ಇತಿ ಪುರುಷವ್ಯತ್ಯಾಸಃ ॥ -ಇತ್ಯಾದಿ ವಿಚಿತ್ರಪ್ರಕಾರೇಣ । –(ಜ)

೨) ಶ್ರೀಕೃಷ್ಣರಕ್ಷಿತರಾದ ಪಾಂಡವರನ್ನೇ ಮುಖ್ಯವಿಷಯವನ್ನಾಗಿ ಪರಿಗ್ರಹಿಸಿ ಜನಗಳು ಭಾವಿಸಿರುವಂತೆ ಕುರು–ಪಾಂಡವರ ಕಥೆಯನ್ನಾಗಿ ಹೇಳುವುದು ಮಹಾಭಾರತದ ಅರ್ಥ–ಗಳಲ್ಲೊಂದು; ಇದಕ್ಕೆ ಆಸ್ತೀಕಾದಿ ಅರ್ಥ ಎಂದು ಹೆಸರು.

೩) **'ಪ್ರಾತಿಲೋಮ್ಯಾದಿ'** ಎಂಬಲ್ಲಿನ ಆದಿ ಶಬ್ದದಿಂದ ವ್ಯತ್ಯಾಸ, ಗೋಮೂತ್ರೀ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ಇತರ ಆರು ವೈಚಿತ್ರ್ಯಗಳನ್ನು ಗ್ರಹಿಸಬೇಕು. ಅವುಗಳ ಉಲ್ಲೇಖವನ್ನು ಶ್ರೀಮದಾಚಾರ್ಯರೇ ಒಂಭತ್ತನೆಯ ಅಧ್ಯಾಯದ ಕೊನೆಯಲ್ಲಿ ಮಾಡಿ, **'ವ್ಯತ್ಯಾಸ'** ಎಂಬ ವೈಚಿತ್ರ್ಯವನ್ನು ಅವರೇ ಸೋದಾಹರಣವಾಗಿ ವಿವರಿಸಿರುವರು. (ವಿವರಗಳನ್ನು ಆ ಭಾಗದಲ್ಲೇ ಕೊಡಲಾಗಿದೆ.).

೪) ಪ್ರಾತಿಲೋಮ್ಯ ಎಂದರೆ ಅನಂತರ ಹೇಳಬೇಕಾದ ಪ್ರಮೇಯವನ್ನು ಮೊದಲಿಗೂ ಮೊದಲು ಹೇಳಬೇಕಾದ ಪ್ರಮೇಯವನ್ನು ಅನಂತರವೂ ಹೇಳುವುದು ಎಂದರ್ಥ.

೫) ಆಸ್ತಿಕರು ಎಂದರೆ 'ಪರದೇವತೆಯುಂಟು, ಪರಲೋಕವಿರುವುದು' ಎಂದು ಸದಾ ಬಲ್ಲ ಪಾಂಡವರು ಮತ್ತು ದ್ರೌಪದೀ ಎಂದರ್ಥ. ಅವರು ಮನು, ಮುನಿ ಮೊದಲಾದ ಇತರ ಸಕಲ ಆಸ್ತಿಕರಿಗಿಂತಲೂ ಮಿಗಿಲಾದ ಆಸ್ತಿಕರು ಎಂದು ತಿಳಿಸಲು **'ಆಸ್ತೀಕರು'** ಎಂಬುದಾಗಿ ದೀರ್ಘವನ್ನು ಪ್ರಯೋಗಿಸಿರುವರು. ಪಾಂಡವರ ಉತ್ಪತ್ತಿ ಅವರಿಂದ ಮಾಡಲ್ಪಟ್ಟ ಯುದ್ಧ ಮೊದಲಾದವುಗಳನ್ನು ವರ್ಣಿಸುವ ಅರ್ಥಕ್ಕೆ **'ಆಸ್ತೀಕಾದಿ'** ಎಂದು ಅರ್ಥ. ಭಗವದ್ಭಕ್ತಶಿರೋಮಣಿಗಳಾದ ಪಾಂಡವರ ಕಥೆಯನ್ನು ಹೀಗೆ ಮುಖ್ಯವಾಗಿ ಹೇಳುವ ಅರ್ಥಕ್ಕೆ 'ಆಸ್ತೀಕಾದಿ' ಅರ್ಥ ಎಂದು ಹೆಸರು ಎಂದು ಭಾವ.

---

೧೩೮. ಕೃಷ್ಣೇನ ಸಹ ವರ್ತಮಾನಾನ್ ಪಾಂಡವಾನ್ । ಕೃಷ್ಣಯಾ ದ್ರೌಪದ್ಯಾ ಸಹಿತಾನ್ ಪಾಂಡವಾನ್ । – (ವಾ)

ಗೃಹ್ಯ ಅನನ್ಯೋಪಾಧಿಕತಯಾ ಪರಿಗೃಹ್ಯ ಇತ್ಯರ್ಥಃ । – (ವಾ)

ಆಸ್ತಿಕಾಃ – 'ಅಸ್ತಿ ಪರದೇವತಾ, ಅಸ್ತಿ ಪರಲೋಕಃ' ಇತಿ ಸದಾ ಜಾನಂತಃ ಪಾಂಡವಾಃ ದ್ರೌಪದೀ ಚ ಆಸ್ತಿಕಾ ಇತ್ಯುಚ್ಯಂತೇ। ಆಸ್ತಿಕಾ ಏವ ಆಸ್ತೀಕಾಃ ಆಸ್ತಿಕೇಭ್ಯೋ ಮನುಮುನ್ಯಾದಿಭ್ಯೋ ಅಪಿ ಅತಿಶಯೇನ ಆಸ್ತೀಕಾಃ ಇತಿ ಸೂಚನಾಯ ದೀರ್ಘಃ । ಧರ್ಮಾದಿಕಮನಂತರ್ಭಾವ್ಯ ಕೇವಲಂ ಆಸ್ತೀಕಾನ್ ಪಾಂಡವಾನೇವ ಪುರಸ್ಕೃತ್ಯ ತದುತ್ಪತ್ತಿತಚ್ಚರಿತ್ರತತ್ಕೃತಂ ಚ ಯತ್ರ ಬಹುಶೋ ವರ್ಣ್ಯತೇ ತದಾಸ್ತೀಕಾದಿ । ಉಕ್ತವಿಧಯಾ ಆಸ್ತೀಕಾಃ ದ್ರೌಪದೀಸಹಿತಾಃ ಪಂಚಪಾಂಡವಾಃ ಆದಯಃ ಪ್ರತಿಪಾದ್ಯಾಃ ಯಸ್ಯ ತದಾಸ್ತೀಕಾದಿ । ಧರ್ಮಾದಿಕಮನಂತರ್ಭಾವ್ಯ ಪರಮಾಸ್ತಿಕಶಿರೋಮಣಿತ್ವಾತ್ ಪುಣ್ಯಶ್ಲೋಕಾಃ ಪಾಂಡವಾ ಏವ ಬಹುಶೋ ವರ್ಣನೀಯಾ ಇತಿ ಗ್ರಂಥಕರ್ತುರ್ಗ್ರಂಥಸ್ಯ ಚ ಯತ್ರಾಭಿಸಂಧಿಃ ತತ್ಸರ್ವಪ್ರಕರಣಮಾಸ್ತೀಕಾದೀತ್ಯುಚ್ಯತೇ ಇತಿ ಭಾವಃ । – (ವಾ)

೧೩೯. 'ಬಹುಮಾನವಿರೋಧೇ ತು ವ್ಯತ್ಯಾಸಃ ಶಬ್ದತೋಽರ್ಥತಃ ।
ಕಾರ್ಯೋಽನಿರುಕ್ತದೇವಾನಾಂ ಗುಣಸಿದ್ಧ್ಯೈ ನ ಚಾನ್ಯಥಾ ।
ವಿಷ್ಣುರ್ಬ್ರಹ್ಮ ತಥಾ ವಾಯುರನಿರುಕ್ತಾಃ ಪ್ರಕೀರ್ತಿತಾಃ ।
ತತ್ತತ್ಕಶ್ಚೇತರಗುಣಾ ವ್ಯತ್ಯಸ್ಯಾಸ್ತೇಷ್ವಸಂಶಯಃ' ಇತಿ ಬ್ರಹ್ಮತರ್ಕೇ ॥ - ಭಾ. ತಾ. (೧೦/೧೭/೨೩)

ಮನ್ವಾದ್ಯರ್ಥದ ವಿವರಣೆ.

ಧರ್ಮೋ ಭಕ್ತ್ಯಾದಿದಶಕಃ ಶ್ರುತಾದಿಃ ಶೀಲವೈನಯೌ ।
ಸಬ್ರಹ್ಮಕಾಸ್ತು ತೇ ಯತ್ರ ಮನ್ವಾದಿಂ ತಂ ವಿದುರ್ಬುಧಾಃ ॥ ೧೩೯ ॥

ಅ: ವೇದಾಭಿಮಾನಿಯಾದ ದ್ರೌಪದಿಯೊಂದಿಗೆ ಸಮೇತರಾದ ಧರ್ಮಾಭಿಮಾನಿಯಾದ ಯುಧಿಷ್ಠಿರ, ಭಕ್ತಿಜ್ಞಾನಾದಿ ಹತ್ತುಗುಣಗಳಿಗೆ ಅಭಿಮಾನಿಯಾದ ಭೀಮಸೇನ, ಶ್ರವಣ ಮನನ ಮತ್ತು ನಿಧಿಧ್ಯಾಸನಗಳಿಗೆ ಅಭಿಮಾನಿಯಾದ ಅರ್ಜುನ ಮತ್ತು ಶೀಲವಿನಯಗಳಿಗೆ ಅಭಿಮಾನಿಗಳಾದ ನಕುಲಸಹದೇವರು - ಹೀಗೆ ಯುಧಿಷ್ಠಿರಾದಿಗಳ ಚರಿತ್ರೆಯ ಮೂಲಕ ಅವರು ಅಭಿಮಾನಿಗಳಾಗಿರುವ ಧರ್ಮ ಭಕ್ತಿ ಮೊದಲಾದ ಗುಣಗಳ ಮಾಹಾತ್ಮ್ಯವನ್ನು ಪ್ರತಿಪಾದಿಸುವ ಅರ್ಥವನ್ನು 'ಮನ್ವಾದಿ ಅರ್ಥ' ಎಂಬುದಾಗಿ ಜ್ಞಾನಿಗಳು ತಿಳಿಯುವರು.

ವಿ: ೧) ಈ ಶ್ಲೋಕದಲ್ಲಿ 'ಮನ್ವಾದಿ' ಅರ್ಥವನ್ನು ವಿವರಿಸಿರುವರು. ಯುಧಿಷ್ಠಿರನು ಧರ್ಮಕ್ಕೆ ಅಭಿಮಾನಿ, ಭೀಮಸೇನನು ಭಕ್ತಿಜ್ಞಾನ ಮೊದಲಾದ ಹತ್ತುಗುಣಗಳಿಗೆ ಅಭಿಮಾನಿ, ಅರ್ಜುನನು ಶ್ರವಣ ಮನನ ಮತ್ತು ನಿಧಿಧ್ಯಾಸನಗಳೆಂಬ ಮೂರುಗುಣಗಳಿಗೆ ಅಭಿಮಾನಿ, ನಕುಲನು ಶೀಲಕ್ಕೆ ಅಭಿಮಾನಿ, ಸಹದೇವನು ವಿನಯಕ್ಕೆ ಅಭಿಮಾನಿ ಮತ್ತು ದ್ರೌಪದಿ ವೇದಾಭಿಮಾನಿನಿ ಹೀಗೆ ದ್ರೌಪದಿ ಮತ್ತು ಭೀಮಾದಿ ಪಾಂಡವರು ಹದಿನೇಳು ಗುಣಗಳಿಗೆ ಅಭಿಮಾನಿ ದೇವತೆ–ಗಳಾಗಿರುವರು; ಅವರ ಹಿರಿಮೆಯ ವರ್ಣನೆ ಎಂದರೆ ಅವರಿಂದ ಅಭಿಮನ್ಯವಾದ ಗುಣಗಳ

---

೧೩೯. ಧರ್ಮಾಭಿಮಾನೀ ಯುಧಿಷ್ಠಿರಃ । ಭಕ್ತ್ಯಾದಿದಶಕಃ ಇತ್ಯನೇನ ಭಕ್ತಿಜ್ಞಾನವೈರಾಗ್ಯಾದಿ ಶೋಭನಗುಣಾನಾಮಭಿಮಾನೀ ಪರಮಭಕ್ತಾಗ್ರೇಸರೋ ಭೀಮಃ ಕಥ್ಯತೇ । ಶ್ರುತಾದಿಃ ಶ್ರೀಕೃಷ್ಣಮುಖಾದೇವ ಸಕಲಶಾಸ್ತ್ರಾರ್ಥ-ನಿರ್ಣಯರೂಪಗೀತಾಶ್ರವಣಾತ್ ಮನನಾಚ್ಚ ಶ್ರುತಾಭಿಮಾನೀ ಅರ್ಜುನಃ । ಶೀಲವೈನಯೌ ಶೀಲವಿನಯಾಭಿಮಾನಿನೌ ನಕುಲಸಹದೇವೌ । ಸಬ್ರಹ್ಮಕಾಃ ವೇದಾಭಿಮಾನಿದ್ರೌಪದೀಸಹಿತಾ ಇತ್ಯರ್ಥಃ । – (ವಾ)

೧೩೯. ಏವಂ ಅಧ್ಯಾತ್ಮಪ್ರತೀಯಮಾನೋ ಯೋಽರ್ಥಃ ತಂ ಮನ್ವಾದಿಸಂಜ್ಞಂ ಬುಧಾ ಜ್ಞಾನಿನೋ ವಿದುರಿತ್ಯರ್ಥಃ। –(ವಾ)

'ಮೀಯತೇ ಪ್ರಮೀಯತೇ ಏಭಿಃ ಪರಮಾತ್ಮಾ ಇತಿ ಮನವೋ ಧರ್ಮಃ, ಭಕ್ತ್ಯಾದಿ ದಶಕಂ, ಶ್ರುತಾದಿಃ ಶೀಲವೈನಯೌ ವೇದಾಶ್ಚೇತಿ ಮನುಪದವಾಚ್ಯಂ ಪಂಚಕಂ ಯತ್ರ ಯತ್ರ ಪ್ರಸ್ತೂಯತೇ ತಸ್ಮಿನ್ ತಸ್ಮಿನ್ ಅಂಶೇ ಧರ್ಮಾಭಿಮಾನಿತ್ವಾತ್ ಮನುಪದವಾಚ್ಯೋ ಧರ್ಮರಾಜಃ । ಭಕ್ತ್ಯಾದಿದಶಗುಣಾಭಿಮಾನಿತ್ವಾತ್ ಮನುಪದವಾಚ್ಯೋ ಶ್ರೀಭೀಮಸೇನಃ । ಶ್ರುತಾಭಿಮಾನಿತ್ವಾತ್ ಮನುಪದವಾಚ್ಯೋ ಅರ್ಜುನಃ । ಶೀಲವಿನಯಾಭಿಮಾನಿತ್ವಾತ್ ಮನುಪದವಾಚ್ಯೌ ನಕುಲಸಹದೇವೌ । ವೇದಾಭಿಮಾನಿತ್ವಾತ್ ಮನುಪದವಾಚ್ಯಾ ದ್ರೌಪದೀ ಚೇತಿ ಪಂಚ । ಆದಯಃ – ತೇನ ತೇನ ಅಂಶೇನ ಆದೀಯಮಾನತ್ವಾದಾದಯಃ ಪ್ರತಿಪಾದ್ಯಾಃ ಯಸ್ಯ ತನ್ಮನ್ವಾದಿ । ಅನಯಾ ವ್ಯುತ್ಪತ್ತ್ಯಾ ಭಾರತಂ ಮನ್ವಾದಿ ಕೇಚಿದ್ ಬ್ರುವತೇ । ಅಭಿಮನ್ಯಮಾನಕಥನವ್ಯಾಜೇನ ತಥಭಿಮಾನಿನಾಂ ಪಂಚಪಾಂಡವಾನಾಂ ದ್ರೌಪದ್ಯಾಶ್ಚ ಸ್ತುತ್ಯರ್ಥಂ ಭಾರತಂ ಪ್ರವೃತ್ತಮಿತಿ ವದಂತೀತಿ ಭಾವಃ । – (ವಾ)

ಹಿರಿಮೆಯ ವರ್ಣನೆಯೇ ಆಗಿ ಮಹಾಭಾರತವೆಲ್ಲ ಆಧ್ಯಾತ್ಮಿಕವಾಗಿಬಿಡುತ್ತದೆ. ಹೀಗೆ ಆಯಾ ವ್ಯಕ್ತಿಗಳ ಮಹಿಮೆಯು ಆಯಾ ಗುಣದ ಮಹಿಮೆ ಎಂಬುದಾಗಿ ತಿಳಿಸುವ ಈ ತೆರನಾದ ಅರ್ಥಕ್ಕೆ 'ಮನ್ವಾದಿ' ಅರ್ಥ ಎಂದು ಹೆಸರು. ಈ ಮನ್ವಾದಿ ಅರ್ಥಗಳನ್ನು ಮುಂದೆ ದ್ರೌಪದೀ ಸ್ವಯಂವರ ಮೊದಲಾದ ಅನೇಕ ಪ್ರಸಂಗಗಳಲ್ಲಿ ವಿವರಿಸಲಾಗಿದೆ.

೨) ಇಲ್ಲಿ ಧರ್ಮವೆಂದರೆ 'ನಿವೃತ್ತಧರ್ಮ' ಎಂದೂ, ಭಕ್ಯಾದಿ ಹತ್ತು ಎಂದರೆ ಭಕ್ತಿ ಜ್ಞಾನ, ವೈರಾಗ್ಯ, ಪ್ರಜ್ಞಾ, ಮೇಧಾ, ಧೃತಿ, ಸ್ಮಿತಿ, ಯೋಗ, ಪ್ರಾಣ ಮತ್ತು ಬಲ ಎಂಬುದಾಗಿ ಹತ್ತು ಗುಣಗಳು ಎಂದೂ, ಶ್ರುತಾದಿ ಎಂಬಲ್ಲಿ ಶ್ರುತ ಎಂದರೆ ಶ್ರವಣ ಮತ್ತು ಆದಿ ಶಬ್ದದಿಂದ ಮನನ ಮತ್ತು ಧ್ಯಾನ ಎಂದೂ ಅರ್ಥ; ಸಬ್ರಹ್ಮಕಾನ್ ಎಂಬಲ್ಲಿ 'ಬ್ರಹ್ಮ' ಶಬ್ದದಿಂದ ವೇದಾಭಿಮಾನಿನಿಯಾದ ದ್ರೌಪದಿಯನ್ನೂ, ಭಗವಂತನಾದ ಶ್ರೀಕೃಷ್ಣನನ್ನೂ ಗ್ರಹಿಸಬೇಕು.

೩) ಮಹಾಭಾರತದಲ್ಲಿನ ಒಟ್ಟು ಪರ್ವಗಳ ಸಂಖ್ಯೆ ೧೮, ಅದರಲ್ಲಿನ ಭಗವದ್ಗೀತೆಯಲ್ಲಿನ ಒಟ್ಟು ಅಧ್ಯಾಯಗಳ ಸಂಖ್ಯೆ ೧೮, ಮಹಾಭಾರತದ ಯುದ್ಧ ನಡೆದದ್ದು ೧೮ ದಿನಗಳು, ಕುರು–ಪಾಂಡವರ ಒಟ್ಟು ಸೇನೆ ೧೮ ಅಕ್ಷೋಹಿಣೀ, ಮಹಾಪುರಾಣಗಳ ಸಂಖ್ಯೆ ೧೮, ಉಪಪುರಾಣಗಳ ಸಂಖ್ಯೆ ೧೮, ಪ್ರಧಾನಸ್ಮೃತಿಗಳ ಸಂಖ್ಯೆ ೧೮, ಶ್ರೀಕೃಷ್ಣನಿಂದ ಜರಾಸಂಧ ಪರಾಭವಗೊಂಡಿದ್ದು ೧೮ ಸಲ, ಭಾಗವತಪುರಾಣದಲ್ಲಿನ ಒಟ್ಟು ಗ್ರಂಥಗಳ ಸಂಖ್ಯೆ ೧೮ ಸಾವಿರ, ಪಾಂಡವರು ಧೃತರಾಷ್ಟ್ರ ನಿರ್ಯಾಣದವರೆಗೆ ರಾಜ್ಯ ಪಾಲಿಸಿದ್ದು ೧೮ ವರ್ಷಗಳು, ಅನಂತರದ ರಾಜ್ಯಪಾಲನೆ ಪುನಃ ೧೮ ವರ್ಷ. ಇದೇ ಮೊದಲಾಗಿ '೧೮' ಎಂಬುದು ಮಹಾಭಾರತ ಹಾಗೂ ಇತರ ಧಾರ್ಮಿಕ ಸಾಹಿತ್ಯದಲ್ಲಿ ತುಂಬಾ ಪ್ರಾಶಸ್ತ್ಯ ಪಡೆದ ಸಂಖ್ಯೆಯಾಗಿದೆ. ಮಹಾಭಾರತದ ಮತ್ತೊಂದು ಹೆಸರಾದ 'ಜಯ' ಎಂಬುದನ್ನು ಸಂಖ್ಯಾರೂಪದಲ್ಲಿ ಬರೆದಾಗ '೧೮' ಎಂದಾಗುತ್ತದೆ. 'ಮನ್ವಾದಿ' ಅರ್ಥವನ್ನು ತಿಳಿದಾಗ ಈ ಹದಿನೆಂಟರ ರಹಸ್ಯ ಬಿಚ್ಚಿಕೊಳ್ಳುತ್ತದೆ.

೪) ಧರ್ಮಾದಿ ಹದಿನೆಂಟು ಸಾಧನಗಳಿಂದ ೧೮ನೆಯವನಾದ ಪರಬ್ರಹ್ಮ ಶ್ರೀಕೃಷ್ಣನ ಪರಮಾನುಗ್ರಹವು ಲಭಿಸಿ ಸಕಲರೂ ಬಯಸುವ ಮೋಕ್ಷ ಲಭಿಸುತ್ತದೆ ಎಂಬ ಸೂಚನೆ ಇದರಲ್ಲಿದೆ. ಹೀಗೆ 'ಮನ್ವಾದಿ' ಅರ್ಥದ ವಿವರಣೆಯೊಂದಿಗೆ ಇದರ ರಹಸ್ಯವನ್ನು ಬಿಡಿಸುವ ಹಾದಿ ತೋರಿಸಿದ ಹಿರಿಮೆ ಶ್ರೀಮಧ್ವಾಚಾರ್ಯರದೇ ಆಗಿದೆ ಎಂಬುದು ಗಮನಾರ್ಹ.

೫) 'ಮನುಗಳು' ಎಂದರೆ ಪರಮಾತ್ಮನ್ನು ತಿಳಿಸಿಕೊಡುವ ಧರ್ಮಾದಿಗಳು; ದ್ರೌಪದೀ ಮತ್ತು ಧರ್ಮರಾಜಾದಿ ಪಾಂಡವರು ಅಂತಹ ಮನುಪದವಾಚ್ಯರು; ಇವರು ಪ್ರತಿಪಾದ್ಯರಾಗಿರುವ ಅರ್ಥವೇ 'ಮನ್ವಾದಿ ಅರ್ಥ' ಎಂಬುದಾಗಿ ಶ್ರೀವಾದಿರಾಜರು ಮನ್ವಾದಿ ಪದವನ್ನು ವಿವರಿಸಿರುವರು.

ಔಪರಿಚರಾರ್ಥದ ವಿವರಣೆ

ನಾರಾಯಣಸ್ಯ ನಾಮಾನಿ ಸರ್ವಾಣಿ ವಚನಾನಿ ತು ।
ತತ್ತಾಮರ್ಥ್ಯಭಿಧಾಯೀನಿ ತಮೌಪರಿಚರಂ ವಿದುಃ ॥ ೧೪೦ ॥

ಅ: ಸಕಲ ಭಾರತವಚನಗಳೂ ಶ್ರೀನಾರಾಯಣನ ನಾಮಗಳೇ ಆಗಿದ್ದು, ಅವನ ಮಾಹಾತ್ಮ್ಯವನ್ನು ಪ್ರತಿಪಾದಿಸುವುವು ಎಂದು ನಿರೂಪಿಸುವ ಅರ್ಥವನ್ನು ಜ್ಞಾನಿಗಳು 'ಔಪರಿಚರಾದಿ' ಅರ್ಥ ಎಂದು ತಿಳಿಯುವರು.

ಎ: ೧) ಇದರಲ್ಲಿ '**ಔಪರಿಚರಾದ್ಯರ್ಥ**' ಎಂಬುದನ್ನು ವಿವರಿಸಿರುವರು.

---

೧೪೦. ವೇದಾಕ್ಷರಾಣಿ ಯಾವಂತಿ ಪಠಿತಾನಿ ದ್ವಿಜಾತಿಭಿಃ ।
ತಾವಂತಿ ಹರಿನಾಮಾನಿ ಕೀರ್ತಿತಾನಿ ನ ಸಂಶಯಃ ॥ –ಸ್ಮೃತಿ

೧೪೦. ಈ ಮೂರು ಅರ್ಥಗಳೂ ಮಹಾಭಾರತಕ್ಕೆ ಹೇಗೆ ಸಂಗತವಾಗಿವೆ ಎಂಬುದನ್ನು ಶ್ರೀವಾದಿರಾಜರು ಒಟ್ಟಾಗಿ ಹೀಗೆ ಕ್ರೋಢೀಕರಿಸಿ ಬರೆದಿರುವರು.

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥

– ಇತಿ ಭಾರತೇ ಏವ ಉಕ್ತತ್ವಾತ್ ಉಪರಿ ಸರ್ವೇಷಾಮುಪರಿ ಚರತೀತಿ ಉಪರಿಚರಃ ಸರ್ವೋತ್ತಮೋ ನಾರಾಯಣಃ ತಸ್ಯೈವ ಸ್ವರವರ್ಣ(ಪದ)ವಾಕ್ಯಾತ್ಮಕಸಕಲಭಾರತಗ್ರಂಥೇನ ಪರಮಮುಖ್ಯಾವೃತ್ತ್ಯಾ ಪ್ರತಿಪಾದನಮುಚಿತಮ್ ।

''ಚರಿತಂ ವೈಷ್ಣವಾನಾಂ ತು ವಿಷ್ಣೂದ್ರೇಕಾಯ ಕಥ್ಯತೇ'' ಇತಿ ವಚನಾತ್ ವೈಷ್ಣವಾಗ್ರೇಸರಾಣಾಂ ಪಾಂಡವಾನಾಂ ದ್ರೌಪದ್ಯಾಶ್ಚ ಕಥಾऽಪಿ ತದನಂತರಂ ಕಥನಾರ್ಹಾ । ಉಚ್ಯತೇ । ತೇಷಾಮೇವ ಉತ್ಪತ್ತ್ಯಾದಿಕಮಪಿ ಸರ್ವತ್ರ ಭಾರತೇ 'ವಿವಿದಿಷಂತಿ ಯಜ್ಞೇನ ದಾನೇನ ತಪಸಾऽನಾಶಕೇನ' ಇತಿ ಶ್ರುತೇಃ । 'ಭಕ್ತಿರೇವೈನಂ ನಯತಿ', 'ಭಕ್ತ್ಯಾ ತ್ವನನ್ಯಯಾ ಶಕ್ಯಃ', 'ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ', 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್', 'ವೇದಾ ಹ್ಯೇವೈನಂ ವೇದಯಂತಿ' ಇತ್ಯಾದಿ ವಚನೇಭ್ಯಃ ಧರ್ಮಾಚರಣಸ್ಯ ಭಕ್ತಿವೈರಾಗ್ಯಾದಿಗುಣಾನಾಂ ಶ್ರವಣಾದೀನಾಂ ಗುರೂಪಸತ್ತ್ಯಾದಿವಿನಯಾನಾಂ ವೇದಸ್ಯ ತೇಷಾಮೇವ ವೈಷ್ಣವಾನಾಂ ತಸ್ಯೈವ ವಿಷ್ಣೋಃ ಸಾಕ್ಷಾತ್ಕಾರಪ್ರಸಾದಾವಂಗತ್ವಾತ್ । ತದ್ವಂದನಮಪಿ ತೇಷಾಮೇವೋಪಕಾರಾಯ ಕರ್ತುಮುಚಿತಮ್ ।

ಏವಂ ಚ ಮುಖ್ಯತೋ ಹರೇಃ ತದನಂತರಂ ಪಾಂಡವಾನಾಂ ತಥಾ ಧರ್ಮಸ್ಯ ಭಕ್ತ್ಯಾದಿಗುಣಾನಾಂ ಚ ಉತ್ಕೀರ್ತನಮೇವ ನ್ಯಾಯಪ್ರಾಪ್ತಮ್ । ಕ್ರಿಯತೇ ಚ ಸಭಾಪರ್ವಾಶ್ವಮೇಧಿಕಪರ್ವಾದಿಷು ರಾಜಸೂಯಾಶ್ವಮೇಧಿಕ- ಪರ್ವಾದಿಷು ರಾಜಸೂಯಾಶ್ವಮೇಧಾದಿಧರ್ಮಾಣಾಂ ಪ್ರಸಂಗಃ ಪ್ರಶಂಸಾ । ತತ್ರಾಪಿ ಹರೇರಗ್ರಪೂಜಯಾ ಕೃಷ್ಣೇ ನಿರುಪರಿಚರಿತಾ ಭಕ್ತಿಶ್ಚ ಶ್ರೂಯತೇ । ಕ್ವಚಿತ್ ಕ್ವಚಿತ್ ಶ್ರವಣಮನನಾದೀನಾಂ ಕರ್ತವ್ಯತಾ ಚೋಚ್ಯತೇ । ಸಮೃದ್ಧರಾಜ್ಯಪರಿತ್ಯಾಗೇನ ವೈರಾಗ್ಯಂ ಸತ್ಯಪರಿಪಾಲನಂ ಮಾರ್ಕಂಡೇಯಾದಿಋಷಿಭ್ಯಃ ಭಗವತ್ಕಥಾಯಾಃ ಸದ್ಧರ್ಮಾಣಾಂ ಚ ಶ್ರವಣಮನನಾದಿಕಮಪಿ ಅರಣ್ಯಕಪರ್ವಾದೌ ಶ್ರೂಯತೇ । ಜ್ಯೇಷ್ಠಾನುವೃತ್ತ್ಯಾ ವಿನಯಾದಿಕ- ಮಪಿ ತತ್ರ ತತ್ರೋಚ್ಯತೇ । –(ವಾ)

೨) ಮಹಾಭಾರತದ ಸ್ವರ ಪದ ವಾಕ್ಯರೂಪವಾದ ಸಕಲ ವಚನಗಳೂ ನಾರಾಯಣನ ನಾಮಗಳೇ ಆಗಿದ್ದು ಪ್ರತಿಯೊಂದರಿಂದಲೂ ಅವನ ಸರ್ವೋತ್ತಮತ್ವಾದಿ ಹಿರಿಮೆಯು ಪ್ರತಿಪಾದಿತವಾಗಿವೆ ಎಂದು ತಿಳಿಸುವ ಅರ್ಥಕ್ಕೆ 'ಔಪರಿಚರಾದ್ಯರ್ಥ' ಎಂದು ಭಾವ. ಈ ಅರ್ಥದಂತೆ ಸಮಗ್ರ ಮಹಾಭಾರತಗ್ರಂಥ 'ನಾರಾಯಣನ ನಾಮಾವಳಿ' ಎಂದರ್ಥ.

೩) ಸರ್ವದೇವತೆಗಳಿಗಿಂತಲೂ ಮಿಗಿಲಾದ್ದವನಾದ್ದರಿಂದ ನಾರಾಯಣನಿಗೆ 'ಉಪರಿಚರ' ಎಂದು ಹೆಸರು; ಅಂತಹ ನಾರಾಯಣನನ್ನೇ ಪರಮಮುಖ್ಯವೃತ್ತಿಯಿಂದ ಮಹಾಭಾರತವು ಪ್ರತಿಪಾದಿಸುತ್ತದೆ.

೪) ಸಕಲವೇದವಚನಗಳೂ ಸಹ ಹೀಗೆಯೇ ನಾರಾಯಣನ ನಾಮಾವಳಿಗಳಾಗಿವೆ ಎಂಬ ಪುರಾಣವಚನವನ್ನು ಇಲ್ಲಿ ಸ್ಮರಿಸಬಹುದು; ಅದರಂತೆ ಇತರ ಸಕಲ ವಾಙ್ಮಯವೂ ಪರಮ ಮುಖ್ಯವೃತ್ತಿಯಿಂದ ನಾರಾಯಣನ ನಾಮಾವಳಿಯೇ ಆಗಿದೆ ಎಂದೂ ತಿಳಿಯಬೇಕು.

'ಸರ್ವೈಶ್ಚ ವೈದಿಕಪದೈರಪಿ ಲೋಕಶಬ್ದೈ–
ರ್ಮೇಘಾಗ್ನಿವಾರಿಧಿತಲಾದಿರವೈಶ್ಚ ಸರ್ವೈಃ ।
ಏಕೋಽಭಿಧೇಯಃ ಪರಿಪೂರ್ಣಗುಣಃ ಪ್ರಿಯೋಽಲಂ
ನಾರಾಯಣೋ ಮಮ ಸದೈವ ಸುತುಷ್ಟಿಮೇತು ॥' – ಐತರೇಯಭಾಷ್ಯ

ಭೀಮ ಹತ್ತು ಗುಣಗಳ ಸಂಕೇತ

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ।
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ॥ ೧೪೧ ॥

---

೧೪೧. ಮಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥ –(೧/೯೮)

೧೪೧. ಇಂದ್ರಿಯಾರ್ಥೇಷು ವೈರಾಗ್ಯಂ– ರಾಗಾಭಾವಃ । – (ಗೀ. ವಿ)

೧೪೧. ಪ್ರಜ್ಞಾ– ಶೀಘ್ರಗ್ರಹಣಸಾಮರ್ಥ್ಯಮ್ । – (ಜ)

೧೪೧. ಮೇಧಾ– ಶ್ರುತಸ್ಯ ಧಾರಣಮ್ ।– (ವಾ) ಶ್ರುತಧಾರಣಮ್ ।– (ಜ)

೧೪೧. ಧೃತಿಃ– ಅನಾತಂಕಃ । – (ಗೀ. ವಿ)

೧೪೧. ಸ್ಥೈರ್ಯಂ– ಭಯಾದಿನಾ ಸ್ವಧರ್ಮಾದಚಲನಮ್ । –(ಗೀ. ವಿ)

೧೪೧. ಮನ್ವಾದ್ಯರ್ಥಸ್ಯ ತು ಸರ್ವಾಧಿಕಾರಿದುರ್ಬೋಧತ್ವೇನ ತಮೇವ ಲೇಶತಃ ಸ್ಪಷ್ಟಯಿತುಮಾಹ । –(ವಾ)

೧೪೧. ನ ತಸ್ಯ ತತ್ತ್ವಗ್ರಹಣಾಯ ಸಾಕ್ಷಾದ್ವರೀಯಸೀರಪಿ ವಾಚಃ ಸಮಾಸನ್ ।
ಸ್ವಪ್ನೇ ನಿರುಕ್ತ್ಯಾಗೃಹಮೇಧಿಸೌಖ್ಯಂ ನ ಯಸ್ಯ ಹೇಯಾನುಮಿತಂ ಸ್ವಯಂ ಸ್ಯಾತ್ ॥ -ಭಾಗವತ (೫/೧೧/೩)

ಆ: ಭಕ್ತಿ, ವೈರಾಗ್ಯ ಸಹಿತವಾದ ಜ್ಞಾನ, ಪ್ರಜ್ಞೆ, ಮೇಧಾ, ಧೃತಿ, ಸ್ಮಿತಿ, ಯೋಗ, ಪ್ರಾಣ ಮತ್ತು ಬಲ ಈ ಹತ್ತೂ ವೃಕೋದರ ಎನ್ನಿಸುವನು.

ವಿ: ೧) ಆಸ್ತೀಕಾದಿ ಅರ್ಥದಂತೆ ಮನ್ವಾದಿ ಅರ್ಥ ಸುಲಭಗ್ರಾಹ್ಯವಲ್ಲವೆಂಬ ಕಾರಣದಿಂದ ಅದನ್ನು ಇಲ್ಲಿ ವಿವರಿಸುತ್ತಿರುವರು.

೨) 'ಭಕ್ತ್ಯಾದಿದಶಕಃ' ಎಂಬ ಮನ್ವಾದಿ ಅರ್ಥದಲ್ಲಿನ ಪದವನ್ನು ಈ ಶ್ಲೋಕದಿಂದ ವಿವರಿಸಿರುವರು.

೩) ವೈರಾಗ್ಯಸಹಿತವಾದಾಗ ಮಾತ್ರವೇ ಜ್ಞಾನವು ಸಾರ್ಥಕ ಎಂಬುದನ್ನು ತಿಳಿಸಲು 'ಸವೈರಾಗ್ಯಂ ಜ್ಞಾನಂ' ಎಂಬುದಾಗಿ ತಿಳಿಸಿರುವರು, ಜ್ಞಾನವಿಲ್ಲದ ಬರೀ ವೈರಾಗ್ಯವು ಸಹ ಉತ್ತಮ ಗುಣವಾಗಲಾರದು ಎಂಬ ಸೂಚನೆಯೂ ಇದರಲ್ಲಿದೆ.

---

೧೪೧. ಅತ್ರಾಯಮಾಶಯಃ । ಯಸ್ಮಿನ್ ಪ್ರಕರಣೇ ವೃಕೋದರಃ ಉಚ್ಯತೇ । ತತ್ರ ಭಕ್ತ್ಯಾದಿಕಂ ಪ್ರತಿಪಾದಿತಮಿತಿ ಜ್ಞಾತವ್ಯಮ್ । ವಾಯೋರ್ಭಕ್ತ್ಯಾದಿನಿಯಾಮಕತ್ವೇನ ತದಾತ್ಮಕತ್ವಾತ್ ವೃಕೋದರಸ್ಯ ಚ ವಾಯುರೂಪತ್ವಾತ್ । -(ವ)

ಏವಂ ಯದಾ ಯುಧಿಷ್ಠಿರಾರ್ಜುನಾದಿಪ್ರಸಂಗ ಉಚ್ಯತೇ ತದಾ ಧರ್ಮಶ್ರವಣಮನನಾದಿಕಮುಕ್ತಮಿತಿ ಜ್ಞಾತವ್ಯಮ್ । ಯಮಾದೀನಾಂ ಧರ್ಮಾದಿನಿಯಾಮಕತ್ವಾತ್ ಯುಧಿಷ್ಠಿರಾದೀನಾಂ ಚ ತದವತಾರತ್ವಾತ್ । -(ವ)

೧೪೧. ಜ್ಞಾನೇ ವಿರಾಗೇ ಹರಿಭಕ್ತಿಭಾವೇ ಧೃತಿಸ್ಥಿತಿಪ್ರಾಣಬಲೇಷು ಯೋಗೇ ।
ಬುದ್ಧೌ ಚ ನಾನ್ಯೋ ಹನುಮತ್ಸಮಾನಃ ಪುಮಾನ್ ಕದಾಚಿತ್ ಕ್ವ ಚ ಕಶ್ಚನೈವ ॥
– ಈ ಶ್ಲೋಕವನ್ನು ಶ್ರೀಮದಾಚಾರ್ಯರೇ ಮುಂದೆ ಉಲ್ಲೇಖಿಸಿರುವರು.

೧೪೧. ಶ್ರೀಮದಾಚಾರ್ಯರಿಗೆ 'ದಶಪ್ರಮತಿ' (ಪೂರ್ಣಪ್ರಜ್ಞ) ಎಂದು ಹೆಸರೇ ಇದೆ. 'ದಶ'ವೆಂಬ ಶಬ್ದವು 'ಪೂರ್ಣ'ತ್ವವಾಚಕವಾದ್ದರಿಂದ ಶ್ರೀವಾಯುದೇವರ ದಶಗುಣಾತ್ಮಕತ್ವವು ಅವರಿಗೆ ಯಥೋಚಿತವಾದ ಪೂರ್ಣ-ಗುಣತ್ವ (ಪೂರ್ಣಪ್ರಜ್ಞತ್ವ, ಪೂರ್ಣಬಲತ್ವ, ಪೂರ್ಣಭಕ್ತತ್ವ) ಮೊದಲಾಗಿ ಸರ್ವಗುಣಪೂರ್ಣತ್ವವನ್ನು ಸೂಚಿಸುತ್ತದೆ ಎಂದೂ ತಿಳಿಯಬೇಕು.

'ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ ।'

'ಯೇ ಯೇ ಗುಣಾ ನಾಮ ಜಗತ್ಯಸಿದ್ಧಾ ಯಂ ತೇಷು ತೇಷು ಸ್ಮ ನಿದರ್ಶಯಂತಿ ।
ಸಾಕ್ಷಾನ್ಮಹಾಭಾಗವತಪ್ರಬರ್ಹಂ ಶ್ರೀಮಂತಮೇನಂ ಹನುಮಂತಮಾಹುಃ ॥' – ಸುಮಧ್ವವಿಜಯ(೧/೧೦)

೧೪೧. ಪ್ರಾಣಃ ಸೂತ್ರಂ ಮಹಾನ್ ಬ್ರಹ್ಮಾ ಚಿತ್ತಂ ವಾಯುರ್ಬಲಂ ಧೃತಿಃ ।
ಸ್ಥಿತಿರ್ಯೋಗಶ್ಚ ವೈರಾಗ್ಯಂ ಜ್ಞಾನಂ ಪ್ರಜ್ಞಾ ಸ್ಮೃತಿಃ ಸುಖಮ್ ।
ಮೇಧಾ ಮುಕ್ತಿರ್ವಿಷ್ಣುಭಕ್ತಿರಾದಿಗೋಪೋ ಮಹಾಪ್ರಭುಃ ।
ಋಜುಃ ಸಮಾನಃ ವಿಜ್ಞಾತಾ ಮಹಾಧ್ಯಾತಾ ಮಹಾಗುರುಃ ।
ಹನೂಮಾನ್ ಭೀಮ ಆನಂದ ಇತ್ಯಾದಿಬಹುರೂಪಿಣಃ । ಪೈಂಗಿಶ್ರುತಿಃ । – ಬೃಹದ್ಭಾಷ್ಯ

೪) ಭೀಮನ ಮಹಿಮೆಯನ್ನು ಉಲ್ಲೇಖಿಸುವ ಪ್ರತಿಪ್ರಸಂಗದಲ್ಲೂ ಈ ಹತ್ತುಗುಣಗಳ ಮಹತ್ತ್ವವು ಪ್ರತಿಪಾದಿತವಾಗಿದೆ ಎಂದು ತಿಳಿಯಬೇಕು ಎಂದು ಭಾವ. ಇದರಂತೆ ಧರ್ಮರಾಜ, ಅರ್ಜುನ, ನಕುಲ ಮತ್ತು ಸಹದೇವರ ಮಹತ್ತ್ವದ ನಿರೂಪಣೆಯಲ್ಲೂ ಕ್ರಮವಾಗಿ ಧರ್ಮ, ಶ್ರವಣ, ಮನನ ಮತ್ತು ಧ್ಯಾನ, ಶೀಲ ಮತ್ತು ವಿನಯಗಳೆಂಬ ಗುಣಗಳ ಹಿರಿಮೆ ನಿರೂಪಿತವಾಗಿದೆ ಎಂಬುದಾಗಿ ಸಹ ತಿಳಿಯಬೇಕು.

೫) ಭೀಮಸೇನನು ಈ ಹತ್ತುಗುಣಗಳ ಸಂಕೇತವಾಗಿರುವಂತೆ, ಇವರ ಪೂರ್ವಾವತಾರ–ರಾದ ಹನುಮಂತ ಮತ್ತು ಉತ್ತರಾವತಾರರಾದ ಶ್ರೀಮದಾಚಾರ್ಯರೂ ಸಹ ಈ ಹತ್ತೂ ಗುಣಗಳ ಸಂಕೇತವಾಗಿರುವರು ಎಂದೂ ತಿಳಿಯಬೇಕು.

ದ್ರೌಪದಿ ಸರ್ವವಿದ್ಯೆಯ ಸಂಕೇತ

ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ।
ಸರ್ವವಿದ್ಯಾ ದ್ರೌಪದೀ ತು ಯಸ್ಮಾತ್ ಸೈವ ಸರಸ್ವತೀ ॥ ೧೪೨ ॥

ಅ: ವಾಯುದೇವರು ಈ ಹತ್ತುಗುಣಗಳ ಸ್ವರೂಪ; ಆದ್ದರಿಂದ ವಾಯುಸ್ವರೂಪನಾದ ಭೀಮನು ಸಹ ಈ ಗುಣಗಳ ಸ್ವರೂಪನಾಗಿರುವನು. ಅದರಂತೆ ಭಾರತಿ(ಭಾವಿಸರಸ್ವತಿ)ಯೇ ದ್ರೌಪದಿಯಾಗಿರುವುದರಿಂದ ಆ ದ್ರೌಪದಿಯು ಸಕಲವಿದ್ಯೆಗಳ ಅಭಿಮಾನಿ ದೇವತೆ-ಯಾಗಿರುವಳು.

ವಿ: ೧) ವಾಯ್ವವತಾರನಾದ ಭೀಮಸೇನ ಭಕ್ಷ್ಯಾದಿ ದಶಗುಣಗಳ ಸ್ವರೂಪ; ಅದರಂತೆ ಭಾರತೀಸ್ವರೂಪಳಾದ ದ್ರೌಪದಿಯು ಸರ್ವವಿದ್ಯಾಭಿಮಾನಿನಿ; ಹಾಗೆಯೇ ಧರ್ಮಸ್ವರೂಪನಾದ ಯುಧಿಷ್ಠಿರನು ಧರ್ಮಾಭಿಮಾನಿ, ಶ್ರವಣಾದಿ ಸ್ವರೂಪನಾದ ಅರ್ಜುನನು ಶ್ರವಣಾದಿಗಳಿಗೆ ಅಭಿಮಾನಿ, ಶೀಲವಿನಯಸ್ವರೂಪರಾದ ನಕುಲಸಹದೇವರು ಶೀಲವಿನಯಗಳಿಗೆ ಅಭಿಮಾನಿಗಳು ಎಂಬುದಾಗಿ ತಿಳಿಯಬೇಕು.

೨) ದ್ರೌಪದೀಮಾಹಾತ್ಮ್ಯದ ಪ್ರಸಂಗಗಳಲ್ಲೆಲ್ಲ ಅವರಿಂದ ಅಭಿಮನ್ಯಮಾನವಾದ ಸರ್ವವಿದ್ಯೆಗಳ ಹಿರಿಮೆ ಪ್ರತಿಪಾದಿತವೆಂದು ತಿಳಿಯಬೇಕು.

---

೧೪೨. ಶ್ರುತಾದಿಗುಣಪ್ರಾಚುರ್ಯಾಲ್ಲೋಕೇ ತಚ್ಚಬ್ದವಾಚ್ಯಃ ಶ್ರುತಾದ್ಯಭಿಮಾನೀ ಅರ್ಜುನಃ ನಕುಲಸಹದೇವೌ ಶೀಲವಿನಯಾಭಿಮಾನಿನೌ ಇತಿ ..... –(ಜ)

೧೪೨. ಯದಾ ತು ದ್ರೌಪದೀಪ್ರಸಂಗಃ ತದಾ ಸರ್ವವಿದ್ಯಾ ಪ್ರತಿಪಾದಿತಾ ಇತಿ ಜ್ಞಾತವ್ಯಮ್ । ಸರಸ್ವತ್ಯಾಃ ಸರ್ವವಿದ್ಯಾನಿಯಾಮಕತ್ವೇನ ತದಾತ್ಮಕತ್ವಾತ್ ವೃಕೋದರಸ್ಯ ಚ ವಾಯುರೂಪತ್ವಾತ್ ॥ -(ವ)

ದುರ್ಯೋಧನ ಅಜ್ಞಾನಾದಿಗಳ ಸ್ವರೂಪ - ದುಃಶಾಸನ ಮಿಥ್ಯಾಜ್ಞಾನದ ಸಂಕೇತ

ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ।
ವಿಪರೀತಂ ತು ಯಜ್ಜ್ಞಾನಂ ದುಶ್ಶಾಸನ ಇತೀರಿತಃ ॥ ೧೪೩ ॥

ಶಕುನಿ ನಾಸ್ತಿಕ್ಯದ ಸಂಕೇತ - ಕೌರವರು ದೋಷಗಳ ಸಂಕೇತ
ಅಶ್ವತ್ಥಾಮ ಅಹಂಕಾರದ ಸಂಕೇತ

ನಾಸ್ತಿಕ್ಯಂ ಶಕುನಿರ್ನಾಮ ಸರ್ವದೋಷಾತ್ಮಕಾಃ ಪರೇ ।
ಧಾರ್ತರಾಷ್ಟ್ರಾಸ್ತ್ವಹಂಕಾರೋ ದ್ರೌಣೇ ರುದ್ರಾತ್ಮಕೋ ಯತಃ॥ ೧೪೪ ॥

ದ್ರೋಣಾದಿಗಳು ಇಂದ್ರಿಯಗಳು - ಕುರುಪಾಂಡವ ಸೈನಿಕರು ಪಾಪಪುಣ್ಯಗಳು
ವಿಷ್ಣು ಸರ್ವನಿಯೋಜಕ

ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇ ತು ಸೈನಿಕಾಃ ।
ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ ॥ ೧೪೫ ॥

---

೧೪೩. ಅಜ್ಞಾನಾದಿಸ್ವರೂಪಃ–ಅಜ್ಞಾನಭ್ರಮಪ್ರಮಾದಾದ್ಯಭಿಮಾನೀ ದೇಹೇ ವಿದ್ಯಮಾನೋ ಯಃ ಕಲಿಃ ಸಃ ದುರ್ಯೋಧನಃ ಸ್ಮೃತಃ ಇತ್ಯರ್ಥಃ। –(ವಾ)

೧೪೩. ದೇಹೇ ವಿಪರೀತಂ ಯಜ್ಜ್ಞಾನಂ ತನ್ಮಾತ್ರಾಭಿಮಾನೀ ದೈತ್ಯೋ ಯಃ ಸಃ ದುಃಶಾಸನ ಇತ್ಯರ್ಥಃ। (-ವಾ)

೧೪೪. ಪುರುಷಸ್ಯ ದೇಹೇ ಯನ್ನಾಸ್ತಿಕ್ಯಂ ಸಜ್ಜೀವೇ ಚೇತ್ ದುಃಖಾದ್ಯನುಭವಸಂಕಟಾತ್, ದುರ್ಜನೇ ಚೇತ್ ಸ್ವಭಾವತ ಏವ ತಿಷ್ಠತಿ। ತದಭಿಮಾನೀ ಯೋ ದೈತ್ಯಃ ಸ ಶಕುನಿಃ। – (ವಾ)

೧೪೪. ಪುರುಷಸ್ಯ ದೇಹೇ ಕಾಮಕ್ರೋಧಮತ್ಸರಾದಯೋ ಯೇ ದೋಷಾಃ ಸಂತಿ ತೇಷಾಂ ಸರ್ವ-ದೋಷಾಣಾಮಾತ್ಮಕಾಃ ನಿಯಾಮಕಾಃ ಯೇ ದೈತ್ಯಾಃ ತೇ ಅಪರೇ ಧಾರ್ತರಾಷ್ಟ್ರಾಃ ದುರ್ಯೋಧನದುಃಶಾಸನ-ವ್ಯತಿರಿಕ್ತದೃತರಾಷ್ಟ್ರಪುತ್ರಾ ಇತ್ಯರ್ಥಃ। – (ವಾ)

೧೪೪. ಪುರುಷಸ್ಯ ದೇಹೇ ಯೋಽಯಮಹಂಕಾರಃ ಸಃ ದ್ರೌಣಿಃ । ಯತೋ ರುದ್ರಾತ್ಮಕಃ ಅಹಂಕಾರಾಭಿಮಾನಿ ರುದ್ರಾತ್ಮಕ ಇತ್ಯರ್ಥಃ। – (ವಾ)

೧೪೫. ದೇಹೇ ಯಾನೀಂದ್ರಿಯಾಣಿ ತೇ ದ್ರೋಣಾದ್ಯಾಃ – ದ್ರೋಣಕರ್ಣಭೀಷ್ಮಾದ್ಯಾಃ ದ್ರೋಣಸ್ಯ ಶ್ರೋತ್ರಾಭಿಮಾನಿಬೃಹಸ್ಪತಿರೂಪತ್ವಾತ್, ಭೀಷ್ಮಸ್ಯ ವಾಗಭಿಮಾನ್ಯಗ್ನಿರೂಪತ್ವಾತ್, ಅಭಿಮನ್ಯೋರ್ಮನೋಽಭಿಮಾನಿ ಚಂದ್ರರೂಪತ್ವಾತ್, ನಕುಲಸಹದೇವಯೋಃ ಪ್ರಾಣಾಭಿಮಾನಿದಸ್ರರೂಪತ್ವಾತ್, ಅರ್ಜುನಸ್ಯ ಮನೋಽಭಿ-ಮಾನೀಂದ್ರರೂಪತ್ವಾದಿತ್ಯಾದ್ಯೂಹ್ಯಮ್ ॥ – (ವಾ)

೧೪೫. ಸೈನಿಕಾಃ – ದುರ್ಯೋಧನಪಕ್ಷಪಾತಿನಃ । ಪಾಪಾನಿ – ಪರಹಿಂಸಾಪರದ್ರವ್ಯಾಪಹರಣಪರನಿಂದಾಪರ-ನಾರೀಗಮನಾದಿರೂಪಾಣಿ। ಕಾಮಕ್ರೋಧಾದೀನಾಂ ಔತ್ಪತ್ತಿಕತಯಾ ಪ್ರಬಲದೋಷತ್ವಾತ್ ಧಾರ್ತರಾಷ್ಟ್ರೋಪಮಾ। ಉಕ್ತಪಾಪಾನಾಂ ತು ಕಾದಾಚಿತ್ಕತ್ವಾತ್ ಸೇನೋಪಮಾ। – (ವಾ)

೧೪೫. ಪುಣ್ಯಾನಿ – ಪುಣ್ಯಾಭಿಮಾನಿದೇವಾಃ ಇತ್ಯರ್ಥಃ। – (ವಾ)

ಅ: ಅಜ್ಞಾನ ಮೊದಲಾದವುಗಳಿಗೆ ಅಭಿಮಾನಿದೈತ್ಯನಾದ ಕಲಿಯೇ ದುರ್ಯೋಧನ; ವಿಪರೀತ(ಮಿಥ್ಯಾ)ಜ್ಞಾನವು ದುಃಶಾಸನ ಎಂದು ಹೇಳಲ್ಪಟ್ಟಿದೆ. ಶಕುನಿಯು ನಾಸ್ತಿಕ್ಯಸ್ವರೂಪ, ಇತರ ಕೌರವರು ಇತರ ಸಕಲದೋಷಗಳ ಸ್ವರೂಪರು, ಅಶ್ವತ್ಥಾಮರು ರುದ್ರಾವತಾರ-ರಾದ್ದರಿಂದ ಅವರು ಅಹಂಕಾರಸ್ವರೂಪರು, ದ್ರೋಣಾ(ಕರ್ಣ, ಭೀಷ್ಮ, ಅಭಿಮನ್ಯು, ನಕುಲಸಹದೇವರು ಮತ್ತು ಅರ್ಜುನ)ದಿಗಳು ಇಂದ್ರಿಯಸ್ವರೂಪರು; ಕೌರವರ ಪಕ್ಷದ ಸೈನಿಕರೆಲ್ಲ ಪಾಪಗಳ ಸಂಕೇತ; ಪಾಂಡವಸೈನಿಕರು ಪುಣ್ಯಗಳ ಸಂಕೇತ; ಇವರಿಗೆಲ್ಲ (ಶ್ರೀಕೃಷ್ಣರೂಪದ) ಭಗವಂತನೇ ನಿಯೋಜಕ.

ವಿ: ೧) ಪಂಚಪಾಂಡವರು ಮತ್ತು ದ್ರೌಪದೀ ಇವರು ಧರ್ಮಾದಿ ಸ್ವರೂಪರು ಎಂಬುದನ್ನು ತಿಳಿಸಿ, ಈಗ ದುರ್ಯೋಧನಾದಿಗಳು ಅಜ್ಞಾನಾದಿ ಸ್ವರೂಪರು ಎಂಬುದನ್ನು ತಿಳಿಸುತ್ತಿರುವರು.

೨) ಪಾಂಡವರ ಪ್ರಸಂಗ ಬಂದಾಗ ಧರ್ಮಾದಿಗಳ ಪರವಾಗಿ ಅವುಗಳನ್ನು ಅರ್ಥವಾಡಿಕೊಳ್ಳುವಂತೆ, ದುರ್ಯೋಧನ, ದುಃಶಾಸನ, ಶಕುನಿ, ಅಶ್ವತ್ಥಾಮ, ದ್ರೋಣ

---

೧೪೫. ತೇಷಾಂ ವಾಯ್ವಾದೀನಾಂ ದ್ರೌಪದ್ಯಾದೀನಾಂ ಚ ದೇಹಾಂತರ್ವಿದ್ಯಮಾನಾನಾಂ ಬಹಿರ್ವಿದ್ಯ-ಮಾನಾನಾಂ ಸರ್ವೇಷಾಂ ನಿಯಾಮಕೋ ನಾರಾಯಣಃ ಸಾಕ್ಷಾತ್ ಕೃಷ್ಣ ಇತ್ಯರ್ಥಃ। –(ವಾ)

ಯದಾ ದುರ್ಯೋಧನಪ್ರಸಂಗಃ ತದಾ ದ್ವೇಷ ಅಜ್ಞಾನಾವೈರಾಗ್ಯಾದಿದಶಕಮುಕ್ತಮಿತಿ ಜ್ಞಾತವ್ಯಮ್ । ಕಲೇರಜ್ಞಾನಾದಿರೂಪತ್ವಾತ್ ದುರ್ಯೋಧನಸ್ಯ ಕಲಿರೂಪತ್ವಾತ್ । ಯತ್ರ ದುಃಶಾಸನಪ್ರಸಂಗಃ ತತ್ರ ವಿಪರೀತಜ್ಞಾನಮುಚ್ಯತೇ ಇತಿ ಜ್ಞಾತವ್ಯಮ್ । ದುಃಶಾಸನಸ್ಯ ವಿಪರೀತಜ್ಞಾನಾತ್ಮಕತ್ವಾತ್ । ಯತ್ರ ತು ಶಕುನೇಃ ಪ್ರಸಂಗಃ ತದಾ ನಾಸ್ತಿಕ್ಯಮುಕ್ತಮಿತಿ ಜ್ಞಾತವ್ಯಮ್ । ತಸ್ಯ ತದಾತ್ಮಕತ್ವಾತ್ । ಯದಾ ತು ಪರೇಷಾಂ ಧಾರ್ತರಾಷ್ಟ್ರಾಣಾಂ ವಿಕರ್ಣಾದೀನಾಂ ಪ್ರಸಂಗಃ ತದಾ ಸರ್ವದೋಷಾಃ ಉಚ್ಯಂತೇ ಇತಿ ಜ್ಞಾತವ್ಯಮ್ । ತೇಷಾಂ ಸರ್ವದೋಷಾತ್ಮಕತ್ವಾತ್ । ಯದಾ ತು ದ್ರೌಣಿರುಚ್ಯತೇ ತದಾ ಽಹಂಕಾರಮುಕ್ತಮಿತಿ ಜ್ಞಾತವ್ಯಮ್ । ರುದ್ರಸ್ಯಾಹಂಕಾರಾತ್ಮಕತ್ವಾತ್, ದ್ರೌಣೇಶ್ಚ ತದವತಾರತ್ವಾತ್ । ಯದಾ ದ್ರೋಣಾದೀನಾಂ ಕಥಾ ತದಾ ಽಧ್ಯಾತ್ಮಮಿಂದ್ರಿಯಾಣ್ಯುಕ್ತಾನೀತಿ ಜ್ಞಾತವ್ಯಮ್ । ಬೃಹಸ್ಪತ್ಯಾದೀನಾಂ ಇಂದ್ರಿಯಾತ್ಮಕತ್ವಾತ್ । ದ್ರೋಣಾದೀನಾಂ ತದವತಾರತ್ವಾತ್ । ಯದಾ ತು ಉಕ್ತೇಭ್ಯೋ ದುರ್ಯೋಧನಾದಿಭ್ಯೋ ಽನ್ಯೇ ಸೈನಿಕಾಃ ಸೇನಾಸಂಬಂಧಿನೋ ಅಭಿಧೀಯಂತೇ ತದಾ ಪಾಪಾನ್ಯುಕ್ತಾನೀತಿ ಜ್ಞಾತವ್ಯಮ್ । ತೇಷಾಂ ತದಾತ್ಮಕತ್ವಾತ್ । ಯದಾ ತು ಪಾಂಡವೇಯಾಃ ಪಾಂಡವಸಂಬಂಧಿನೋ ರಾಜಾನಃ ಉಚ್ಯಂತೇ ತದಾ ಪುಣ್ಯಾನ್ಯುಕ್ತಾನೀತಿ ಜ್ಞಾತವ್ಯಮ್ । ತೇಷಾಂ ತದಭಿಮಾನಿತ್ವಾತ್ । ಯದಾ ತು ತೇಷಾಂ ಪಾಂಡವಾದೀನಾಂ ನಿಯಂತಾ ಕೃಷ್ಣ ಉಚ್ಯತೇ । ತದಾ ಬ್ರಹ್ಮಾದಿನಿಯಾಮಕೋ ವಿಷ್ಣುರುಕ್ತ ಇತಿ ಜ್ಞಾತವ್ಯಂ ಕೃಷ್ಣಸ್ಯ ತದಾತ್ಮಕತ್ವಾದಿತಿ ॥ –(ವ)

೧೪೫. ತಥಾ ಚ ಪರಮಾತ್ಮನಾ ಸ್ವೇನೈವ ಸ್ವಜನಾಪವರ್ಗಾಯ ಸೃಷ್ಟೇ ಽಪಿ ಉತ್ತಮಜೀವದೇಹೇ ಅಪರೋಕ್ಷ-ಜ್ಞಾನದಶಾಯಾಂ ತತ್ಕೃತದುಷ್ಕರ್ಮಸಂಗ್ರಹಾಯ ತತ್ಕೃತಾಧಿಕಪುಣ್ಯಸಂಗ್ರಹಾಯ ಚ ಸದಸತಾಮಪಿ ಸಂಗ್ರಹವತ್ ವ್ಯಾಸೋ ಽಪಿ ಸ್ವಕೃತಗ್ರಂಥೇ ಪರೇಷಾಂ ಪರಿಭವವರ್ಣನಾಯ ಸ್ವಭಕ್ತಾನಾಂ ಸಕಲಕಾರ್ಯೇಷು ದಿಗ್ವಿಜಯ-ವರ್ಣನಾಯ ಚ ಸದಸತಾಂ ಸರ್ವೇಷಾಂ ಸಂಗ್ರಹಂ ಕೃತವಾನ್ ಇತಿ ಭಾವಃ। –(ವಾ)

ಭೀಷ್ಮಾದಿಗಳು, ಕೌರವಸೈನ್ಯದ ರಾಜಾದಿಗಳು ಮತ್ತು ಪಾಂಡವಸೈನ್ಯದ ರಾಜಾದಿಗಳ ಪ್ರಸಂಗಗಳು ಬಂದಾಗಲೆಲ್ಲ ಕ್ರಮವಾಗಿ ಅಜ್ಞಾನಾದಿಗಳು, ಮಿಥ್ಯಾಜ್ಞಾನ, ನಾಸ್ತಿಕ್ಯ, ಅಹಂಕಾರ, ಇಂದ್ರಿಯಗಳು, ಪಾಪಗಳು ಮತ್ತು ಪುಣ್ಯಗಳನ್ನು ಅರ್ಥಮಾಡಿಕೊಳ್ಳಬೇಕು ಎಂದು ಭಾವ.

೩) ಇಲ್ಲಿ ಕಲಿಯು ಅಜ್ಞಾನಾದಿ ಸ್ವರೂಪನು ಎಂಬುದಕ್ಕೆ ದ್ವೇಷ, ಅಜ್ಞಾನ, ಅವೈರಾಗ್ಯ ಮೊದಲಾದ ಹತ್ತುಗುಣಸ್ವರೂಪನು ಎಂದು ಅರ್ಥಮಾಡಿಕೊಳ್ಳಬಹುದು ಎಂದು ವರದರಾಜೀಯ ವ್ಯಾಖ್ಯಾನದಲ್ಲಿದೆ.

೪) ಉತ್ತಮಜೀವರ ಶರೀರದಲ್ಲಿ ಸಚ್ಛಕ್ತಿ ಮತ್ತು ಅಸಚ್ಛಕ್ತಿಗಳು ಹೇಗೆ ಮನೆ ಮಾಡಿಕೊಂಡಿರುವವು ಎಂಬುದನ್ನು ಕುರು–ಪಾಂಡವರ ಸಂಕೇತದಿಂದ ಶ್ರೀವೇದವ್ಯಾಸರು ನಿರೂಪಿಸಿದ ಆಧ್ಯಾತ್ಮಿಕಾರ್ಥವನ್ನು ಶ್ರೀಮದಾಚಾರ್ಯರು ಈ ಶ್ಲೋಕಗಳಲ್ಲಿ ವಿವರಿಸಿರುವರು ಎಂಬುದಾಗಿ ಶ್ರೀವಾದಿರಾಜಸ್ವಾಮಿಗಳು ವಿವರವಾಗಿ ತಿಳಿಸಿರುವರು.

೫) ''ಸಾಧನಶರೀರದಲ್ಲಿನ ಧರ್ಮಾದಿ ಹದಿನೇಳು ಗುಣಗಳ ಸಂಕೇತ ಪಂಚಪಾಂಡವರು ಮತ್ತು ದ್ರೌಪದಿ; ದ್ರೌಪದಿಯು ಮುಖದಲ್ಲಿರುವ ವಾಣಿಯ ಸಂಕೇತವೂ ಆಗಿರುವರು. ಅಜ್ಞಾನ, ಭ್ರಮ, ಪ್ರಮಾದಿಗಳಿಗೆ ಸಂಕೇತ ದುರ್ಯೋಧನನಾದರೆ, ದುಃಶಾಸನನು ಮಿಥ್ಯಾಜ್ಞಾನದ ಸಂಕೇತ; ಶಕುನಿಯು ನಾಸ್ತಿಕ್ಯಕ್ಕೂ ಇತರ ಕೌರವರು ಇತರ ದೋಷಗಳಿಗೂ ಸಂಕೇತ; ಅಶ್ವತ್ಥಾಮರು ಅಹಂಕಾರಕ್ಕೂ, ದ್ರೋಣಾದಿಗಳು ಇಂದ್ರಿಯಗಳಿಗೂ ಪ್ರತೀಕ; ಹಾಗೆಯೇ ಕೌರವಸೈನಿಕರು ಪಾಪಪ್ರತೀಕವಾದರೆ ಪಾಂಡವಸೈನಿಕರು ಪುಣ್ಯಪ್ರತೀಕರು; ಒಳಗೂ ಹೊರಗೂ ಇವರಿಗೆಲ್ಲ ನಿಯಾಮಕನಾದ ಶ್ರೀಕೃಷ್ಣನಂತೂ ಸ್ವತಃ ನಾರಾಯಣನೇ ಆಗಿರುವನು.'' ಎಂಬುದು ಇದರಲ್ಲಿನ ಅಧ್ಯಾತ್ಮದ ಸಂಗ್ರಹ.

೬) ವಿಕರ್ಣಾದಿಗಳು ಕಾಮಕ್ರೋಧಾದಿ ಸಹಜವಾದ ಪ್ರಬಲಪಾಪಗಳಿಗೂ ಕೌರವಸೈನಿಕರು ಪರಹಿಂಸೆ, ಪರದ್ರವ್ಯಾಪಹರಣ, ಪರನಿಂದೆ, ಪರನಾರೀಗಮನ ಮೊದಲಾದ ಕಾದಾಚಿತ್ಕ ಪಾಪಗಳಿಗೂ ನಿಯಾಮಕರು ಎಂದು ತಿಳಿಯಬೇಕು. ಆದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲ.

೭) ಇದರಂತೆ ಕಾಲನೇಮಿಯ ಅವತಾರನಾದ ಕಂಸನು ಕಾಮಾಭಿಮಾನೀ ದೈತ್ಯ, ವಿಪ್ರಚಿತ್ತಿಯ ಅವತಾರನಾದ ಜರಾಸಂಧನು ಮಿಥ್ಯಾಜ್ಞಾನಕ್ಕೆ ಅಭಿಮಾನಿಯಾದ ದೈತ್ಯ, ಶ್ರೀಕೃಷ್ಣಭೀಮರಿಂದ ಹತರಾದ ಇಬ್ಬರು ಬಕಾಸುರರು ಮಿಥ್ಯಾಚಾರ ಮತ್ತು ಶೋಷಣೆಗೆ ಸಂಕೇತ, ಧೃತರಾಷ್ಟ್ರನು ಧರ್ಮಾಧರ್ಮಗಳನ್ನು ಕಾಣದ ಅಜ್ಞಾನಿಯಾದ ಜೀವ, ಗಾಂಧಾರಿಯು ಅಂತಹ ಜೀವನ ಅವಿವೇಕದ ಬುದ್ಧಿ, ಧೃಷ್ಟದ್ಯುಮ್ನನು ಅಗ್ನಿ ಹೀಗೆ ಅಧ್ಯಾತ್ಮಾರ್ಥವನ್ನು ತಿಳಿಯಬೇಕು.

೮) ಒಟ್ಟಾಗಿ ಕುರುಪಾಂಡವರ ಸಂಘರ್ಷವು ಧರ್ಮಾಧರ್ಮಗಳ, ತತ್ತ್ವಜ್ಞಾನ ಮಿಥ್ಯಾಜ್ಞಾನಗಳ, ಪಾಪಪುಣ್ಯಗಳ ಸಂಘರ್ಷಕ್ಕೆ ಪ್ರತೀಕವಾಗಿ ಮಹಾಭಾರತವು ಅದ್ಭುತವಾದ ಆಧ್ಯಾತ್ಮಿಕಕೃತಿ ಎನ್ನಿಸುತ್ತದೆ. ಭೀಮನಿಂದ ಸಮಸ್ತಕೌರವರ ಹನನ ಎಂಬುದು ಭಕ್ಯಾದಿ ಸದ್ಗುಣಗಳಿಂದ ಅಜ್ಞಾನಾದಿ ಸಕಲದೋಷಗಳ ವಿನಾಶ ಎಂಬ ತತ್ತ್ವವನ್ನೂ, ಶ್ರೀಕೃಷ್ಣನ ಸ್ವಾಮಿತ್ವ, ವಿಷ್ಣುಸರ್ವೋತ್ತಮತ್ವವನ್ನೂ ತಿಳಿಸಿಕೊಡುತ್ತವೆ.

ಮಹಾಭಾರತದ ಅಧ್ಯಾತ್ಮಾರ್ಥ

ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥ ೧೪೬ ॥

ಅ: ಹೀಗೆ ಸಕಲ ಭಾರತವು ಅಧ್ಯಾತ್ಮಾರ್ಥಪ್ರತಿಪಾದಕವಾಗಿದೆ. ಆದ್ದರಿಂದಲೇ ಸಕಲ ಮನುಷ್ಯರು ಮೊದಲಾದವರಿಂದಲೂ ದೇವತೆಗಳು ಮೊದಲಾದ ಸಕಲರಿಂದಲೂ ಮಹಾಭಾರತವು ಸಾಕಲ್ಯೇನ ತಿಳಿಯಲು ಅಶಕ್ಯವಾದುದು.

ವಿ: ಸಕಲ ಭಾರತವೂ ಹೀಗೆ ಅಧ್ಯಾತ್ಮಾರ್ಥಗರ್ಭಿತ; ಆದ್ದರಿಂದಲೇ ಅದು ಸಕಲ ಸುರರಿಂದಲೂ ಸಾಕಲ್ಯೇನ ಅಜ್ಞೇಯ. ಇಂತಹ ಅರ್ಥಬಾಹುಲ್ಯ ಬೇರಾವ ಗ್ರಂಥಕ್ಕೂ ಇಲ್ಲವೆಂಬುದು ಸಹ ಇದರ ಸರ್ವೋತ್ತಮತ್ವಕ್ಕೆ ದ್ಯೋತಕ.

''ದಶಾವರಾರ್ಥಾ ಸರ್ವತ್ರ ನ ಜ್ಞೇಯಾಃ ಸರ್ವಜಂತುಭಿಃ''

–ಗೀತಾಭಾಷ್ಯೋದಾಹೃತ ಸ್ಕಂದಪುರಾಣವಚನ

ಅಷ್ಟೌ ಶ್ಲೋಕಸಹಸ್ರಾಣಿ ಅಷ್ಟೌ ಶ್ಲೋಕಶತಾನಿ ।
ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ ವೇತ್ತಿ ವಾ ನ ವಾ ॥ (೧/೮೧)

– ಎಂಬ ಮಹಾಭಾರತದ ಮಾತೂ ಇದಕ್ಕೆ ಪೋಷಕವಾಗಿದೆ.

---

೧೪೬. ಅಧ್ಯಾತ್ಮನಿಷ್ಠಂ – ಆತ್ಮಾನಂ ದೇಹಮಧಿಕೃತ್ಯ ವರ್ತಮಾನಂ ದೇಹಾದ್ಯಂತರ್ಯಾಮಿಪ್ರತಿಪಾದಕಂ ಸರ್ವ-ಭಾರತಮುಚ್ಯತೇ ಹಿ ಯತಃ । – (ಜ)

೧೪೬. ಅತಃ ಸರ್ವೈಃ– ಮನುಷ್ಯಾದಿಭಿಃ, ಸುರೈಃ– ದೇವೈರಪಿ । – (ಜ)

೧೪೬. ಮುನಿರ್ವಿವಕ್ಷುರ್ಭಗವದ್ಗುಣಾನಾಂ ಸಖಾऽಪಿ ತೇ ಭಾರತಮಾಹ ಕೃಷ್ಣಃ ।
ಯಸ್ಮಿನ್ ನೃಣಾಂ ಗ್ರಾಮ್ಯಸುಖಾನುವಾದೈರ್ಮತಿರ್ಗೃಹೀತಾ ನ ಹರೇಃ ಕಥಾಯಾಮ್ ॥ -ಭಾಗವತ (೩/೫/೧೨)

೧೪೭. ಅತ್ರ ಬ್ರಹ್ಮಶಬ್ದೇನ ಬೃಹಸ್ಪತಿರುಕ್ತಃ ಇತಿ ಪ್ರಮೇಯದೀಪಿಕಾಯಾಮ್ । ಅತೋ ನ ವಿರೋಧಃ ॥

ಮಹಾಭಾರತದ ಅರ್ಥ ದುರ್ಗಮ

ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ।
ತಥಾಽಪಿ ವಿಷ್ಣುಪರತಾ ಭಾರತೇ ಸಾರಸಂಗ್ರಹಃ ॥ ೧೪೭ ॥

ಅ: ಭಾರತವನ್ನು ಸ್ವತಃ ಶ್ರೀವೇದವ್ಯಾಸರು ಮತ್ತು ಅವರ ಅನುಗ್ರಹದಿಂದ ಬ್ರಹ್ಮದೇವರು ತಿಳಿದಿರುವರು. ಹೀಗೆ ದುರ್ವಿಜ್ಞೇಯವಾಗಿದ್ದರೂ, ಆ ಭಾರತದಲ್ಲಿ ವಿಷ್ಣುಸರ್ವೋತ್ತಮತ್ವವೇ ಸಕಲವಿಷಯಗಳ ಒಟ್ಟುಸಾರಸಂಗ್ರಹವಾಗಿದೆ.

ವಿ: ೧) ''ವಾಯುರ್ಹಿ ಬ್ರಹ್ಮತಾಮೇತಿ ತಸ್ಮಾತ್ ಬ್ರಹ್ಮೈವ ಸ ಸ್ಮೃತಃ ।'' – ಎಂದು ಮುಂದೆ ಹೇಳಿರುವುದರಿಂದ ಇಲ್ಲಿಯ ಬ್ರಹ್ಮಶಬ್ದಕ್ಕೆ 'ವಾಯು' ಎಂದೂ ಅರ್ಥ. ಎಲ್ಲಾ ಪುರುಷ ಋಜುಗಳೂ ಸಮಾನರಾದ್ದರಿಂದ ಅವರೆಲ್ಲರೂ ಇಲ್ಲಿಯ ಬ್ರಹ್ಮಪದದಿಂದ ಉಪಲಕ್ಷಿತರು; ಅದರಂತೆ ಸರಸ್ವತೀ ಭಾರತಿಯರು ಮಹಾಭಾರತವನ್ನು ಶ್ರೀಹರಿವಾಯುಗಳ ಅನುಗ್ರಹದಿಂದ ಪೂರ್ಣವಾಗಿ ತಿಳಿಯುವರು ಎಂದು ತಿಳಿಯಬೇಕು. ಇತರರಿಗೆ ಸಾಕಲ್ಯೇನ ಅರ್ಥವಾಗದಿದ್ದರೂ, ಅವರವರ ಯೋಗ್ಯತೆಗೆ ತಕ್ಕಷ್ಟು ಅರ್ಥವಾಗುತ್ತದೆ ಎಂದು ಭಾವ.

೨) ಬ್ರಹ್ಮಾಽಪಿ ತನ್ನ ಜಾನಾತಿ ಈಷತ್ಸರ್ವೋಽಪಿ ಜಾನತಿ ।

– ಎಂಬ ಗೀತಾಭಾಷ್ಯೋದ್ಧೃತ ಉಪನಾರದೀಯಪುರಾಣದ ವಚನದಲ್ಲಿ ಬ್ರಹ್ಮನೂ ಭಾರತವನ್ನು ತಿಳಿಯಲಾರ ಎಂದು ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಆದರೆ ಅಲ್ಲಿಯ 'ಬ್ರಹ್ಮ' ಶಬ್ದಕ್ಕೆ 'ಬೃಹಸ್ಪತಿ' ಎಂದು ಅರ್ಥಮಾಡಿಕೊಳ್ಳಬೇಕು ಎಂದು ಶ್ರೀಟೀಕಾಚಾರ್ಯರು ಬರೆದು ವಿರೋಧವನ್ನು ಪರಿಹರಿಸಿರುವರು; ಎಂದರೆ ಬೃಹಸ್ಪತ್ಯಾಚಾರ್ಯರಿಗೂ ಭಾರತವು ಪೂರ್ಣವಾಗಿ ತಿಳಿಯಲಾರದು ಎಂದು ಅರ್ಥ; ಆದ್ದರಿಂದ ಯಾವ ವಿರೋಧವೂ ಇಲ್ಲ.

೩) ಮಹಾಭಾರತದಲ್ಲಿ ರಾಮಾಯಣಕಥೆಯೂ ಬರುತ್ತದೆ; ಆದ್ದರಿಂದ ಮಹಾಭಾರತ–ದಂತೆ ಅದೂ ಸಹ ಅಧ್ಯಾತ್ಮಾರ್ಥಗರ್ಭಿತ ಎಂದು ತಿಳಿಯಬೇಕು.

ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ ।
ವಾಯ್ವಾದೀನಾಂ ಕ್ರಮಶ್ಚೈವ ತದ್ವಾಕ್ಯೈರೇವ ಚಿಂತ್ಯತೇ ॥ ೧೪೮ ॥

---

೧೪೮. ಭಾರತಸ್ಯ ದುರ್ವಿಜ್ಞೇಯತ್ವೇಽಪಿ ವಿಷ್ಣೋರೇವ ತಾತ್ಪರ್ಯಮಸ್ತೀತಿ ಸಾಮಾನ್ಯತೋ ಭಾರತವಾಕ್ಯೈ-ಸ್ತತ್ಸಮಾಖ್ಯಾವಾಕ್ಯೈಶ್ಚ ಉಪಸಂಹರತಿ । ಇತ್ಯಾದೀತಿ । ನನು ತತ್ರ ಪ್ರತಿಜ್ಞಾವಾಕ್ಯೇ 'ಮಾಹಾತ್ಮ್ಯಕ್ರಮಪೂರ್ವಕಃ' ಇತಿ ಬ್ರಹ್ಮಾದಿದೇವತಾತಾರತಮ್ಯನಿರ್ಣಯಸ್ಯಾಪಿ ಪ್ರತಿಜ್ಞಾತತ್ವಾತ್ ಕಿಮರ್ಥಂ ಭಾರತವಾಕ್ಯೋದಾಹರಣೇನ ತತ್ಸಮಾಖ್ಯಾವಾಕ್ಯೋದಾಹರಣೇನ ಚ ನ ಕೃತಃ ಇತ್ಯತಃ 'ಪಕ್ವಂ ಭಕ್ಷಯ' ಇತಿ ನ್ಯಾಯಮನುಸೃತ್ಯಾಹ । ವಾಯ್ವಾದೀನಾಮಿತಿ ॥ –(ವ)

ಅ: ಇವೇ ಮೊದಲಾದ ವೇದವ್ಯಾಸವಾಕ್ಯಗಳಿಂದ ವಿಷ್ಣುಸರ್ವೋತ್ತಮತ್ವವು ವಿದಿತ–ವಾಗುತ್ತದೆ. ಇನ್ನು ವಾಯುದೇವರು ಮೊದಲಾದವರ ತಾರತಮ್ಯಕ್ರಮವನ್ನು ಸಹ ಅವರ ಮಾತುಗಳಿಂದಲೇ ಸಮರ್ಥಿಸಿ ತೋರಿಸುವೆವು.

ವಿ: ವಿಷ್ಣುಸರ್ವೋತ್ತಮತ್ವದಂತೆ, ವಾಯುಜೀವೋತ್ತಮತ್ವಾದಿಸಕಲಪ್ರಮೇಯಗಳೂ ಮಹಾ–ಭಾರತದಲ್ಲಿ ನಿರೂಪಿತವಾಗಿದೆ ಎಂಬುದನ್ನು ಇನ್ನು ಮುಂದೆ ನಿರೂಪಿಸುತ್ತಿರುವರು.

ಮಹಾಭಾರತದಲ್ಲಿ ವಾಯುಜೀವೋತ್ತಮತ್ವ

ವಾಯುರ್ಹಿ ಬ್ರಹ್ಮತಾಮೇತಿ ತಸ್ಮಾದ್ ಬ್ರಹ್ಮೈವ ಸ ಸ್ಮೃತಃ ।
ನ ಬ್ರಹ್ಮಸದೃಶಃ ಕಶ್ಚಿಚ್ಛಿವಾದಿಷು ಕಥಂಚನ ॥ ೧೪೯ ॥

ಅ: ವಾಯುದೇವರು ಬ್ರಹ್ಮಪದವಿಯನ್ನು ಹೊದುವರಲ್ಲವೆ! ಆದ್ದರಿಂದ ಅವರು ಬ್ರಹ್ಮ ಎಂಬುದಾಗಿ ಸ್ಮೃತಿಗಳಲ್ಲಿ ಕರೆಯಲ್ಪಟ್ಟಿರುವರು. ಈ ಬ್ರಹ್ಮದೇವರಿಗೆ ಸದೃಶರಾದವರು ಶಿವಾದಿಗಳಲ್ಲಿ ಯಾರೂ ಸರ್ವಥಾ ಇಲ್ಲ.

ವಿ: ೧) 'ಬ್ರಹ್ಮಾದೀನಾಂ ಕ್ರಮಃ' ಎನ್ನದೆ **'ವಾಯ್ವಾದೀನಾಂ ಕ್ರಮಃ'** ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದರು; ಅದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವರು. ವಾಯುದೇವರೇ ಬ್ರಹ್ಮಪದವಿ–ಯನ್ನೂ ಹೊಂದುವವರಾದ್ದರಿಂದ ಅವರನ್ನೂ ಬ್ರಹ್ಮ ಎಂಬುದಾಗಿಯೇ ವ್ಯವಹರಿಸಲಾಗುತ್ತದೆ ಎಂದು ಭಾವ.

೨) ತಾರತಮ್ಯವನ್ನು ಹೇಳುವ ಸಕಲಪ್ರಮೇಯಗಳಲ್ಲೂ ಹೀಗೆ ಬ್ರಹ್ಮಶಬ್ದದಿಂದ ವಾಯುದೇವರನ್ನೂ, ವಾಯುಶಬ್ದದಿಂದ ಬ್ರಹ್ಮದೇವರನ್ನೂ ಸಹ ಗ್ರಹಿಸಬೇಕು ಎಂದು ಭಾವ.

೩) ಇದರಂತೆ ಶೇಷ, ಶಿವ ಮೊದಲಾದ ಇತರ ದೇವತೆಗಳ ಬಗ್ಗೆ ಉಲ್ಲೇಖ ಬಂದಾಗಲೂ ಸಹ ಅವರ ಪೂರ್ವರೂಪ, ಉತ್ತರರೂಪಗಳನ್ನೂ, ಅದರಂತೆ (ಇಂದ್ರಕಾಮರು, ಗರುಡ ಶೇಷ ರುದ್ರರು) ಸಮರಾದ ಇತರ ದೇವತೆಗಳನ್ನು ಸಹ ಯಥಾಯೋಗ್ಯವಾಗಿ ಗ್ರಹಿಸಬೇಕು.

---

೧೪೯. ಕ್ರಮಃ – ತಾರತಮ್ಯಕ್ರಮಃ। – (ಜ)

೧೪೯. ನನು 'ಬ್ರಹ್ಮಾದೀನಾಂ ಕ್ರಮಃ' ಇತಿ ವಕ್ತವ್ಯೇ 'ವಾಯ್ವಾದೀನಾಂ ಕ್ರಮಃ' ಇತಿ ಕಿಮರ್ಥಮುಕ್ತಂ ಇತ್ಯತ ಆಹ। ವಾಯುರ್ಹೀತಿ। – (ವ)

೧೪೯. ಸರ್ವತ್ರ ತಾರತಮ್ಯಪ್ರಕರಣೇ ವಾಯುಪದೇನ ಬ್ರಹ್ಮಣೋಽಪಿ ಗ್ರಹಣಮ್। ಬ್ರಹ್ಮಪದೇನ ವಾಯೋರಪಿ ಗ್ರಹಣಮ್। – (ವ)

೧೪೯. ಏವಂ ರುದ್ರಾದಿಷ್ವಪಿ ಇತಿ ಸೂಚಯತಿ। – (ವ)

ಹನುಮಂತನ ಜೀವೋತ್ತಮತ್ವ

ಜ್ಞಾನೇ ವಿರಾಗೇ ಹರಿಭಕ್ತಿಭಾವೇ
ಧೃತಿಸ್ಥಿತಿಪ್ರಾಣಬಲೇಷು ಯೋಗೇ ।
ಬುದ್ಧೌ ಚ ನಾನ್ಯೋ ಹನುಮತ್ಸಮಾನಃ
ಪುಮಾನ್ ಕದಾಚಿತ್ ಕ್ವ ಚ ಕಶ್ಚನೈವ ॥ ೧೫೦ ॥

ಅ: ತತ್ತ್ವಜ್ಞಾನ, ವಿಷಯವಿರಕ್ತಿ, ಶ್ರೀಹರಿಯಲ್ಲಿ ಭಕ್ತಿಭಾವ, ಧೃತಿ, ಸ್ಥಿತಿ, ಪ್ರಾಣ, ಬಲ, ಯೋಗ ಮತ್ತು ಬುದ್ಧಿ ಈ ವಿಷಯಗಳಲ್ಲಿ ಹನುಮಂತನಿಗೆ ಸಮನಾದ ಮತ್ತೊಬ್ಬ ಪುರುಷನು ಯಾವನೂ ಇಲ್ಲ, ಎಂದೂ ಇಲ್ಲ, ಎಲ್ಲಿಯೂ ಇಲ್ಲ.

---

೧೫೦. ವಾಯುಃ ಪ್ರಾಣಃ ಸುಖಂ ವಾಯುರ್ವಾಯುಃ ಸರ್ವಮಿದಂ ಜಗತ್ ।
ವಾಯುನಾ ಸಂಪರಿತ್ಯಕ್ತಂ ನ ಸುಖಂ ವಿದಂತೇ ಜಗತ್ ॥ – ವಾಲ್ಮೀಕಿರಾಮಾಯಣ

೧೫೦. ಪ್ರತಿಜ್ಞಾತಮರ್ಥಂ ಸಾಧಯಿತುಂ ಭಾರತವಾಕ್ಯಂ ಪಠತಿ । – (ವ)

೧೫೦. ವಿಷಯಸಪ್ತಮೀಯಮ್ । – (ಜ)

೧೫೦. ಅನ್ಯಃ – ವಾಯೋರವತಾರಾದನ್ಯಃ ರುದ್ರಾದಿಃ ಕಶ್ಚನ ಪುಮಾನ್ ಕದಾಚಿತ್ ಕಸ್ಮಿಂಶ್ಚಿತ್ ಕಾಲೇ ಕ್ವಚ ಕುತ್ರಾಪಿ ದೇಶೇ । – (ಜ)

೧೫೦. ಕಶ್ಚನ – ರುದ್ರಾದಿಷು । – (ಜ)

೧೫೦. ಹರಿಭಕ್ತಿ ಭಾವೇ – ಇತ್ಯಸ್ಯ ಹರಿಭಕ್ತಿವಿಷಯೇ ಆನಂದಾದಿಧರ್ಮವಿಷಯೇ ಇತ್ಯರ್ಥಃ । ಏತೇನ ಹರಿಭಕ್ತ್ಯಾ ಇತ್ಯನೇನೈವ ಪೂರ್ಣತ್ವಾತ್ 'ಭಾವ' ಇತ್ಯೇತತ್ ವ್ಯರ್ಥಮಿತಿ ದೂಷಣಂ ಪರಾಸ್ತಂ ಅನುಕ್ತಾನಂದಾದಿಸರ್ವಧರ್ಮ-ಗ್ರಹಣಾರ್ಥಂ ಭಾವೇ ಇತ್ಯುಕ್ತಮಿತ್ಯಂಗೀಕಾರಾತ್ । –(ಸ)

★೧೫೦. ಈ ಶ್ಲೋಕವು ನನ್ನ ಹಸ್ತಪ್ರತಿಸಂಗ್ರಹ(ಶ್ರೀಜಯತೀರ್ಥ ಸಂಸ್ಕೃತಹಸ್ತಲಿಖಿತ ಗ್ರಂಥಾಲಯ)ದಲ್ಲಿನ ಗರುಡಪುರಾಣದ ಲಿಖಿತಪ್ರತಿಯಲ್ಲೂ ಕಾಣಸಿಗುತ್ತದೆ.

೧೫೦. ಹರಿಭಕ್ತಿಭಾವ ಇತ್ಯಸ್ಯ ಹರಿಭಕ್ತಿವಿಶೇಷೇ ಆನಂದಾದಿಧರ್ಮವಿಷಯ ಇತ್ಯರ್ಥಃ ।
ಅನುಕ್ತಾನಾಂದಾದಿಸರ್ವಧರ್ಮಗ್ರಹಣಾರ್ಥಂ ಭಾವ ಇತ್ಯುಕ್ತಮಿತ್ಯಂಗೀಕಾರಾತ್ । – (ಸ.)

೧೫೦. ಹನುಶಬ್ದೋ ಜ್ಞಾನವಾಚೀ ಹನುಮಾನ್ ಮತಿಶಬ್ದಿತಃ ॥ ಇತಿ ಭಾವವೃತ್ತೇ । –(ಭಾಂ.)

ಪ್ರಾಣಾದಭೂದ್ಯಸ್ಯ ಚರಾಚರಾಣಾಂ ಪ್ರಾಣಃ ಸಹೋ ಬಲಮೋಜಶ್ಚ ವಾಯುಃ ॥ ಇತಿ ಭಾ. ೮/೫/೩)

ತಪಸ್ವಿತಾಯಾಂ ಸುವಿರಕ್ತತಾಯಾಂ ವಿಪಶ್ಚಿದಾಂ ಸಂಸದಿ ಪೂಜ್ಯತಾಯಾಮ್ ।
ಕೃಪಾಲುತಾಯಾಂ ಹರಿಭಕ್ತತಾಯಾಂ ವಿಪದ್ರಿಪೋರ್ಮಧ್ವಮನೇಃ ಸಮಃ ಕಃ ॥ - ಸ. ಭಾ. ವಿ. ೨/೨೭

ಇವು ನಾರಾಯಣಪಂಡಿತಾಚಾರ್ಯರ ಸುಮಧ್ವವಿಜಯಭಾವಪ್ರಕಾಶಿಕೆಯಲ್ಲಿ ಉದಾಹೃತವೂ ಆಗಿವೆ.

ಎ: ೧) ವಾಯುದೇವರ ಜೀವೋತ್ತಮತ್ವವಿಚಾರದಲ್ಲಿ ಮಹಾಭಾರತದ ವಾಕ್ಯವನ್ನು ಉದಾಹರಿಸಿರುವರು ಎಂದು ವರದರಾಜೀಯದಲ್ಲಿದೆ.

೨) ಪ್ರಾಣದೇವರೇ ಸಾಧಕೋತ್ತಮರು ಎಂದು ಭಾವ. 'ಇಯದಾಮನನಾತ್' ಎಂಬ ಬ್ರಹ್ಮ ಸೂತ್ರಕ್ಕೆ ಇದು ವಿವರಣರೂಪವಾಗಿದೆ.

೩) ವಾಲ್ಮೀಕಿರಾಮಾಯಣದಲ್ಲಿನ ಶ್ಲೋಕಗಳನ್ನು ಇದಕ್ಕೆ ಸಮಾಖ್ಯೆಯಾಗಿ ಗಮನಿಸ–ಬಹುದು (ಉತ್ತರಕಾಂಡ – ಅ.೩೬ ಶ್ಲೋ ೪೧–೪೩):

ಪರಾಕ್ರಮೋತ್ಸಾಹಮತಿಪ್ರತಾಪೈಃ ಸೌಂದರ್ಯಮಾಧುರ್ಯದಯಾನಯೈಶ್ಚ ।
ಗಾಂಭೀರ್ಯಚಾತುರ್ಯಸುವೀರ್ಯಧೈರ್ಯೈರ್ಹನೂಮತಃ ಕೋ ಹ್ಯಧಿಕಸ್ತ್ರಿಲೋಕೇ ॥
ಪ್ರವೀವಿವಕ್ಷೋರಿವ ಸಾಗರಸ್ಯ ಲೋಕಾನ್ ದಿಧಕ್ಷೋರಿವ ಪಾವಕಸ್ಯ ।
ಲೋಕಕ್ಷಯೇಷ್ವೇವ ಯಥಾಽಂತಕಸ್ಯ ಹನೂಮತಃ ಸ್ಥಾಸ್ಯತಿ ಕಃ ಪುರಸ್ತಾತ್ ॥
ಸಸೂತ್ರವ್ಯತ್ಯರ್ಥಪದಂ ಮಹಾರ್ಥಂ ಸಸಂಗ್ರಹಂ ಸಾಧ್ಯತಿ ವೈ ಕಪೀಂದ್ರಃ ।
ನ ಹ್ಯಸ್ಯ ಕಶ್ಚಿತ್ ಸದೃಶೋಽಸ್ತಿ ಶಾಸ್ತ್ರೇ ವೈಶಾರದೇ ಛಂದಗತೌ ತಥೈವ ॥

ಬಳಿತ್ಥಾಸೂಕ್ತದಲ್ಲಿ ವಾಯುಮಹಿಮೆ

ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ
ದೇವಸ್ಯ ಭರ್ಗಃ ಸಹಸೋ ಯತೋಽಜನಿ ।
ಯದೀಮುಪ ಹ್ವರತೇ ಸಾಧತೇ ಮತಿ-
ರ್ಋತಸ್ಯ ಧೇನಾ ಅನಯಂತ ಸಸ್ರುತಃ ॥ ೧೫೧ ॥

ಅ: ಯತಃ – ಯಾವ ನಾರಾಯಣನಿಂದ ಅವನ ಆಜ್ಞೆಯಂತೆ ಅವನ ಪ್ರೀತಿಗೋಸ್ಕರ; (ಅ)ಜನಿ – ಜನಿಸಿತೋ; ಅಂತಹ; ಸಹಸಃ – ಬಲರೂಪರಾದ; ದೇವಸ್ಯ – ಕ್ರೀಡಾದಿ ಗುಣಯುಕ್ತರಾದ ವಾಯುದೇವರ ಮೂಲರೂಪವು; ಬಟ್ – ಬಲಾತ್ಮಕವೂ; ದರ್ಶತಂ – ಜ್ಞಾನಪೂರ್ಣವೂ ಆಗಿದ್ದು; ಭರ್ಗಃ – (ಅದು) ಶ್ವಾಸರೂಪದಿಂದ ಜಗತ್ತನ್ನು ಧರಿಸಿದ ಅದು; ಇತ್ಥಾ – (ಇತ್ಥಂ ಏವ) – ಮೂಲರೂಪದಲ್ಲಿ ಹೇಗೋ ಹಾಗೆಯೇ ; ಬಲಾದಿಗಳಿಂದ ಕೂಡಿದುದಾಗಿ; ವಪುಷೇ – ಅವತಾರಕ್ಕಾಗಿ; ಅಧಾಯಿ – ಪ್ರೇರಿತವಾಯಿತು; ಯತ್ – ಅವರ ಪ್ರಥಮಾವತಾರವು; ಮತಿಃ– ಮತಿ (ಹನೂಮಾನ್) ಎಂದು ಕರೆಯಲ್ಪಟ್ಟಿದೆ; ಅದು ಋತಸ್ಯ – ಜ್ಞಾನಾತ್ಮಕನಾದ ಶ್ರೀರಾಮನ; ಉಪ – ಸಮೀಪದಲ್ಲಿ ; ಹ್ವರತೇ– ಕ್ರೀಡಿಸುತ್ತಿರುವುದು(ಮತ್ತು ಭಕ್ತಿಭಾವದಿಂದ ಬಾಗಿ ನಿಂತಿರುವುದು); ಈಂ– ಹೀಗೆಯೇ; ಸಾಧತೇ – (ರಾಮನ

ಕಾರ್ಯಗಳನ್ನು) ಸಾಧಿಸುವುದು; ಸಸ್ರುತಃ – ಶ್ರೀರಾಮವಿಷಯಕವಾದ ಅಮೃತವನ್ನು ಸುರಿಸುವ; ಧೇನಾಃ – ಮಾತುಗಳನ್ನು; ಅನಯಂತ – ಶಿಷ್ಯರಿಗೆ ತಲುಪಿಸಿತು. (ಅಥವಾ ಸಸ್ರುತಃ – ಶ್ರೀರಾಮನ ಅಮೃತದಂತಹ ಧೇನಾಃ – ಮಾತುಗಳನ್ನು ; ಅನಯಂತ – ಸೀತಾಕೃತಿಯಲ್ಲಿನ ಮಹಾಲಕ್ಷ್ಮಿಗೆ ತಲುಪಿಸಿತು.)

ಬಳಿತ್ಥಾಸೂಕ್ತದಲ್ಲಿ ಅವತಾರತ್ರಯ

ಪೃಕ್ಷೋ ವಪುಃ ಪಿತುಮಾನ್ನಿತ್ಯ ಆಶಯೇ
ದ್ವಿತೀಯಮಾ ಸಪ್ತಶಿವಾಸು ಮಾತೃಷು ।
ತೃತೀಯಮಸ್ಯ ವೃಷಭಸ್ಯ ದೋಹಸೇ
ದಶಪ್ರಮತಿಂ ಜನಯಂತ ಯೋಷಣಃ ॥ ೧೫೨ ॥

ಅ: ದ್ವಿತೀಯಂ – (ಶ್ರೀವಾಯುವಿನ ಎರಡನೆಯ (ಭೀಮಸೇನ) ಅವತಾರವು) ಪೃಕ್ಷಃ – (ಪೃತ್ – ಕ್ಷಃ) ಕೌರವಸೇನೆಗೆ ಕ್ಷಯಮಾಡಿದುದು, ಪಿತುಮಾನ್ – ಬಹ್ವನ್ನವನ್ನು ಭೋಜನ ಮಾಡುವಂತಹುದು, ನಿತ್ಯಃ – ಸ್ವಚ್ಛಂದಮೃತ್ಯುವಾಗಿ ನಿತ್ಯವಾದುದು; (ಆಗಿ)ಮಾತೃಷು – ಮಾತೃಶಬ್ದವಾಚ್ಯವಾದ, ಸಪ್ತಶಿವಾಸು – ಮಂಗಲಕರವಾದ ಋಗ್ವೇದ, ಯಜುರ್ವೇದ ಸಾಮವೇದ, ಅಥರ್ವಣವೇದ, ಮಹಾಭಾರತ(ಇತಿಹಾಸ), ಪುರಾಣ ಮತ್ತು ಪಂಚರಾತ್ರಗಳೆಂಬ ಸಪ್ತಸದಾಗಮಗಳಲ್ಲಿ ಆ – ಚೆನ್ನಾಗಿ, ಶಯೇ – ವಿಹರಿಸಿತು; ಅಸ್ಯ ವೃಷಭಸ್ಯ – ದೇವಶ್ರೇಷ್ಠನಾದ ಈ ವಾಯುವಿನ; ತೃತೀಯಂ–ಮೂರನೆಯ ರೂಪವಾದ; ದಶಪ್ರಮತಿಂ – ಪೂರ್ಣಪ್ರಜ್ಞರನ್ನು; ದೋಹಸೇ – ತತ್ತ್ವಜ್ಞಾನವನ್ನು ಕರೆಯಲೆಂದು; ಯೋಷಣಃ – ವೇದಾ(ವಿದ್ಯಾ)ಭಿಮಾನಿನಿಯಾದ ಶ್ರೀ, ಭೂ ಮತ್ತು ದುರ್ಗಾ ಎಂಬ ದೇವಿಯರು; ಅಜನಯಂತ –(ಮಧ್ವಗೇಹರೆಂಬವರ ಪತ್ನಿಯಲ್ಲಿ ಸನ್ನಿಹಿತರಾಗಿದ್ದು) ಹುಟ್ಟಿಸಿದರು.

ಬಳಿತ್ಥಾಸೂಕ್ತದಲ್ಲಿ ಮಧ್ವಾವತಾರದ ಕಾರ್ಯ

ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸಃ
ಈಶಾನಾಸಃ ಶವಸಾಽಕ್ರಂತ ಸೂರಯಃ ।
ಯದೀಮನು ಪ್ರದಿವೋ ಮಧ್ವ ಆಧವೇ
ಗುಹಾಸಂತಂ ಮಾತರಿಶ್ವಾ ಮಥಾಯತಿ ॥ ೧೫೩ ॥

ಅ: ಬುಧ್ನಾತ್ – ಜ್ಞಾನರೂಪವಾದ; ವರ್ಪಸಃ – ಸಜ್ಜನರನ್ನು ಪಾಲಿಸುವಂತಹ, ಮಹಿಷಸ್ಯ – ದೇವಶ್ರೇಷ್ಠರಾದ ಶ್ರೀವಾಯುದೇವರ; ಯತ್ – ಆ ಮೂರನೆಯ ರೂಪದಿಂದ; ಈಂ – ಈ ತೆರನಾಗಿ ಜ್ಞಾನವು ಪೂರ್ಣ ಮಾಡಲ್ಪಡಲು, ಈಶಾನಾಸಃ – ರುದ್ರಾದಿ ದೇವತೆಗಳು; ಶವಸಾ – ಸುಖದಿಂದ; ಸೂರಯಃ – ಜ್ಞಾನಿಗಳಾಗಿ; ಕ್ರಂತ – ಆಗಿಸಲ್ಪಟ್ಟರು; ಮಧ್ವಃ – ಮಧ್ವನಾಮಕರಾದ; ಮಾತರಿಶ್ವಾ – ಶ್ರೀವಾಯುದೇವರು; ಪ್ರದಿವಃ – ಹಿರಿದಾದ ಬುದ್ಧಿಪ್ರಕಾಶದಿಂದ ಕೂಡಿದ ಹಿಂದೆ ಹೇಳಿದ ರುದ್ರಾದಿದೇವತೆಗಳನ್ನು; ಅನು – ಪುರಸ್ಕರಿಸಿ, ಗುಹಾ(ಗುಹಾಯಾಂ) – ಹೃದಯಗುಹೆಯಲ್ಲಿ; ಸಂತಂ – ನೆಲೆಸಿರುವ (ಪರಮಾತ್ಮನನ್ನು)ಆಧವೇ – ಈವನೇ ಸರ್ವಸ್ವಾಮಿ ಎಂಬ ವಿಷಯದಲ್ಲಿ; ಮಥಾಯತಿ – ವೇದಶಾಸ್ತ್ರಗಳನ್ನು ಚೆನ್ನಾಗಿ ಮಥನಮಾಡುವರು.

ಮಧ್ವರೂಪದಿಂದ ಮಾಡಿದ ಪರಮತಖಂಡನೆ

ಪ್ರ ಯತ್ಪಿತುಃ ಪರಮಾನ್ನೀಯತೇ ಪ-
ರ್ಯಾ ಪೃಕ್ಷುಧೋ ವೀರುಧೋ ದಂಸು ರೋಹತಿ ।
ಉಭಾ ಯದಸ್ಯ ಜನುಷಂ ಯದಿನ್ವತ
ಆದಿದ್ಯವಿಷ್ಠೋ ಅಭವದ್ ಘೃಣಾ ಶುಚಿಃ ॥ ೧೫೪ ॥

ಅ: ಯತ್ – ಯಾವ ಕಾರಣದಿಂದಾಗಿ; ಪರಮಾತ್ ಪಿತುಃ – ಸರ್ವೋತ್ತಮನೂ ತನ್ನ ತಂದೆಯೂ ಆದ ನಾರಾಯಣನಿಂದ; ಆ – ಚೆನ್ನಾಗಿ; ಪರಿತಃ – ಸರ್ವರೀತಿಯಿಂದಲೂ; ಪ್ರನೀಯತೇ – ಪ್ರೇರಿಸಲ್ಪಡುವರೋ; ಆಕಾರಣಕ್ಕಾಗಿ; ಪೃಕ್ಷುಧಃ – ಪ್ರಶ್ನೆಗಳೆಂಬ; ವೀರುಧಃ – ಲತೆಗಳನ್ನು; ದಂಸು – ದಂತಗಳಲ್ಲಿ; ರೋಹತಿ – ಇರಿಸಿಕೊಂಡು ನಾಶಪಡಿಸುವರು; ಯತ್ – ಯಾವಕಾರಣದಿಂದ; ಉಭಾ –ಲಕ್ಷ್ಮೀನಾರಾಯಣರಿಬ್ಬರೂ; ಅಸ್ಯ – ಈ ಮಧ್ವಾಚಾರ್ಯರ; ಜನುಷಂ – ಜನ್ಮವನ್ನು; ಇನ್ವತಃ –(ಜ್ಞಾನಕಾರ್ಯಕ್ಕೆಂದು) ಉಂಟುಮಾಡುವರೋ; ಆತ್ – ಆಕಾರಣದಿಂದಾಗಿ; ಯವಿಷ್ಠಃ – ಅವರಿಬ್ಬರಿಗಿಂತ ಕಿರಿಯರಾದ ಅವರು; ಇತ್ – ಈ ತೆರನಾಗಿ; ಘೃಣಾ – ಕರುಣಾಳುಗಳಾಗಿ; ಶುಚಿಃ –ಬ್ರಹ್ಮಹತ್ಯಾದಿ ನಿಮಿತ್ತವಾದ ಜನಾಪವಾದದಿಂದಲೂ ಸಹ ದೂರವಾಗಿರುವ ನಿಮಿತ್ತವಾಗಿಯೂ, ಗರ್ಭವಾಸಾದಿದೋಷಗಳಿಂದ ರಹಿತರಾದ ಕಾರಣ-ದಿಂದಾಗಿಯೂ 'ಶುಚಿ' ಎನ್ನಿಸಿದವರು.

ಮಧ್ವರಿಗೆ ಗರ್ಭವಾಸಾದಿ ದುಃಖಗಳಿಲ್ಲ - ಅವರ ಪೂರ್ಣಪ್ರಜ್ಞತ್ವ

ಆದಿನ್ಮಾತೃರಾವಿಶದ್ಯಾಸ್ವಾಶುಚಿ-
ರಹಿಂಸ್ಯಮಾನ ಉರ್ವಿಯಾ ವಿವಾವೃಧೇ ।
ಅನು ಯತ್ಪೂರ್ವಾ ಅರುಹತ್ ಸನಾಜುವೋ
ನಿನವ್ಯಸೀಷ್ವವರಾಸು ಧಾವತೇ ॥ ೧೫೫ ॥

ಅ: (ಶ್ರೀವಾಯುದೇವರು) ಆತ್ – ಅಕಾರ ಶಬ್ದವಾಚ್ಯನಾದ ವಿಷ್ಣುವಿನ ಆಜ್ಞೆಯಿಂದ; ಇತ್ – ಈ ತೆರನಾಗಿ ಮೂರು ಅವತಾರಗಳಲ್ಲಿ; ಮಾತೃಃ – ಅಂಜನಾ, ಕುಂತೀ ಮತ್ತು ಮಧ್ವಗೇಹಪತ್ನಿಯರೆಂಬ ತಾಯಿಯರಲ್ಲಿ; ಆ –ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳನ್ನು ಮರ್ಯಾದೆ ಮಾಡಿಕೊಂಡು; ಆವಿಶತ್– ಪ್ರವೇಶಿಸಿದರು; ಯಾಸು – ಆ ತಾಯಿಯರಲ್ಲಿ; ಉರ್ವ್ಯಾ – ಉರುತರವಾದ ತಮ್ಮ ಸ್ವಸಾಮರ್ಥ್ಯದಿಂದ; ಆ – ಎಲ್ಲ ರೀತಿಯಲ್ಲೂ; ಶುಚಿಃ – ದುಷ್ಕರ್ಮ ಮೊದಲಾದವುಗಳಿಂದ ಅಸ್ಪೃಷ್ಟರಾಗಿ; (ಅತ ಏವ – ಆ ಕಾರಣದಿಂದಲೇ); ಅಹಿಂಸ್ಯಮಾನಃ(ಸನ್) – ದುಷ್ಕರ್ಮದಿಂದಾಗಲೀ, ಉದರದಲ್ಲಿನ ಜಂತುಗಳಿಂದಾಗಲೀ ಹಿಂಸಿಸಲ್ಪಡದವರಾಗಿ; ವವೃಧೇ – (ಪ್ರಸವಪರ್ಯಂತ) ಬೆಳೆದರು; ಸನಾಜುವಃ – ಸನಾತನನಾದ ಪರಮಾತ್ಮನನ್ನು ಪ್ರತಿಪಾದಿಸುವ ಕಾರಣದಿಂದಾಗಿ; 'ಸನಾಜುವಾ' ಎನ್ನಿಸಿದ; ಪೂರ್ವಾಃ – ಸಪ್ತವಿದ್ಯೆಗಳಲ್ಲಿ ಮುಂಚಿನವುಗಳಾದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದಗಳೆಂಬ ನಿತ್ಯಶಾಸ್ತ್ರಗಳನ್ನು; ಯತ್ – ಅವು ನಿತ್ಯವೆಂಬ ಕಾರಣದಿಂದಾಗಿ; ಅನು – ಅವುಗಳ ಅರ್ಥವನ್ನು ತಿಳಿಸಿಕೊಡುವ ಶಿಕ್ಷಾ, ಕಲ್ಪ, ವ್ಯಾಕರಣ ಮೊದಲಾದವುಗಳಿಗೆ ಅನುಗುಣವಾಗಿ; ಅರುಹತ್ – ಏರಿದರು; ವೃಕ್ಷವನ್ನೇರುವಂತೆ ಮೆಲ್ಲಮೆಲ್ಲನೆ ವಿಚಾರ ಮಾಡಿದರು; ನಿ – ನಿತರಾಂ – ಬಹಳವಾಗಿ; ನವ್ಯಸೀಷು –ನವೀನವೂ ಪೌರುಷೇಯತ್ವ ನಿಮಿತ್ತದಿಂದ ಅವರವೂ ಎನ್ನಿಸಿದ ಪಂಚರಾತ್ರ, ಭಾರತ, ಮೂಲರಾಮಾಯಣಗಳೆಂಬ ಶಾಸ್ತ್ರಗಳಲ್ಲಿ ಆ ತೆರನಾದ ಕಾಠಿನ್ಯವಿಲ್ಲದಿರುವುದರಿಂದ; ಧಾವತೇ – ಶೀಘ್ರಶೀಘ್ರವಾಗಿ ವ್ಯಾಖ್ಯಾನ ಮಾಡುವರು.

ವಾಯುಜೀವೋತ್ತಮತ್ವ

ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ॥ ೧೫೬ ॥

ಅ: ಅಶ್ವಮೇಧವು ಯಜ್ಞಗಳಲ್ಲಿ ಶ್ರೇಷ್ಠ; ಸೂರ್ಯನು ಜ್ಯೋತಿಸ್ಸುಗಳಲ್ಲಿ ಶ್ರೇಷ್ಠ; ಬ್ರಾಹ್ಮಣನು ಮನುಷ್ಯರಲ್ಲಿ ಶ್ರೇಷ್ಠ; ವಾಯುದೇವರೇ ದೇವತೆಗಳಲ್ಲಿ ಶ್ರೇಷ್ಠರು.

ವಿ: ೧) ಹನುಮದಾದಿ ರೂಪರಾದ ಶ್ರೀವಾಯುದೇವರ ಜೀವೋತ್ತಮತ್ವವನ್ನು ಶ್ರುತಿಯಿಂದ ಸಾಧಿಸಿ, ಈಗ ಭಾರತವಾಕ್ಯಗಳಿಂದಲೂ ಸಾಧಿಸುತ್ತಿರುವರು.

೨) ಇದು ಪಾಂಡುರಾಜನು ದ್ವಿತೀಯಪುತ್ರನಿಗಾಗಿ ಶ್ರೀವಾಯುದೇವರನ್ನು ಆಹ್ವಾನಿಸು ಎಂದು ಕುಂತಿಗೆ ಆದೇಶವೀಯುತ್ತ ನುಡಿದ ಮಾತು. ಭಾರತದ ಅನೇಕ ಮುದ್ರಿತಪ್ರತಿಗಳಲ್ಲಿ ಈ ಶ್ಲೋಕ ಇಂದೂ ದೊರೆಯುವುದು.

೩) ಶ್ರೀಮದಾಚಾರ್ಯರು ಸ್ವತಃ ಈ ಶ್ಲೋಕವನ್ನು ಮುಂದೆ ಈ ತೆರನಾಗಿ ವಿವರಿಸಿರುವರು (೧೨/೫೧)

ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯದೃಶ್ಯೇಷು ತೇಜಸ್ವ್ಯಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ ದೇವೇಷು ವಾಯುಃ ಪುರುಷೋತ್ತಮಾದೃತೇ॥

ವಾಯುದೇವರು ರುದ್ರಾದಿಗಳಿಗೂ ಬಲ

ಬಲಮಿಂದ್ರಸ್ಯ ಗಿರಿಶೋ ಗಿರಿಶಸ್ಯ ಬಲಂ ಮರುತ್ ।
ಬಲಂ ತಸ್ಯ ಹರಿಃ ಸಾಕ್ಷಾನ್ನ ಹರೇರ್ಬಲಮನ್ಯತಃ ॥ ೧೫೭ ॥

ಅ: ಇಂದ್ರನಿಗೆ ಶಿವನು ಬಲ; ಶಿವನಿಗೆ ವಾಯುವು ಬಲ; ಅವರಿಗೆ ಸಾಕ್ಷಾತ್ ಶ್ರೀಹರಿಯೇ ಬಲ; ಶ್ರೀಹರಿಯ ಬಲ ಇತರರಿಂದ ಬಂದುದಲ್ಲ.

ವಿ: ೧) ಇದೂ ಸಹ ವಾಯುಜೀವೋತ್ತಮತ್ವವನ್ನು ಸಮರ್ಥಿಸುವ ಭಾರತವಾಕ್ಯ; ಮತ್ತು ಹಿಂದೆ ಹೇಳಿದ ಪ್ರಸಂಗದಲ್ಲೇ ಪಾಂಡುರಾಜನು ಕುಂತಿಗೆ ಹೇಳುವ ಮಾತು.

---

೧೫೭. ವಿಷ್ಣೋಃ ಸರ್ವೋತ್ತಮತ್ವೇ ವಾಯೋಸ್ತದಿತರದೇವೋತ್ತಮತ್ವೇ ದೇವತಾತಾರತಮ್ಯೇ ಚ ಭಾರತಾದೌ ಸ್ಥಿತಪ್ರಮಾಣವಾಕ್ಯಾನಿ ಪಠತಿ। –(ವಾ)

ಏವಂ ಹನುಮದಾದಿರೂಪಸ್ಯ ವಾಯೋಃ ಸರ್ವಾಧಿಕಾರ್ಯುತ್ತಮತ್ವಂ ವೇದೇನ ಪ್ರಸಾಧ್ಯ ಪ್ರಮಾಣಾಂತರೇಣಾಪಿ ಸಾಧಯತಿ। –(ವ)

ವಾಯೋರುತ್ತಮತ್ವೇ ಭಾರತವಾಕ್ಯಂ ಪಠತಿ। –(ಜ)

೧೫೭. ತುಶಬ್ದೋ ಏವಾರ್ಥಃ। –(ಜ)

೧೫೭. ಭಾರತ. (ಆದಿ.೧೨೨/೧೧)

೨) ಇಂದ್ರದೇವರಿಗೆ ರುದ್ರದೇವರೊಂದಿಗೆ ವಾಯು ಮತ್ತು ಶ್ರೀಹರಿಯು, ರುದ್ರದೇವರಿಗೆ ಶ್ರೀವಾಯುದೇವರೊಂದಿಗೆ ಶ್ರೀಹರಿಯೂ ಬಲಪ್ರದರಾಗಿರುವರು; ಆದ್ದರಿಂದ ಇಲ್ಲಿ 'ಬಲಮಿಂದ್ರಸ್ಯ ಗಿರಿಶಃ' 'ಗಿರಿಶಸ್ಯ ಬಲಂ ಮರುತ್' ಎಂಬುದಕ್ಕೆ 'ಸಾಕ್ಷಾತ್' ಎಂದು ಸೇರಿಸಿಕೊಳ್ಳಬೇಕು.

೩) ಇಂದ್ರದೇವರಿಗೆ ರುದ್ರದೇವರು ಬಲಪ್ರದರು ಎಂಬುದಕ್ಕೆ ಇಂದ್ರಾವತಾರನಾದ ಅರ್ಜುನನಿಗೆ ಶ್ರೀರುದ್ರದೇವರು ಪಾಶುಪತಾಸ್ತ್ರವನ್ನಿತ್ತ ಕಿರಾತಾರ್ಜುನೀಯಪ್ರಸಂಗ ಮತ್ತು ಜಯದ್ರಥವಧೆಯ ಹಿಂದಿನ ರಾತ್ರಿ ಶ್ರೀಕೃಷ್ಣನು ಅರ್ಜುನನನ್ನು ರುದ್ರದೇವರ ಬಳಿಗೆ ಕರೆದೊಯ್ದು ಮತ್ತೊಮ್ಮೆ ಪಾಶುಪತಾಸ್ತ್ರವನ್ನು ಉಪದೇಶ ಮಾಡಿಸಿದ ಪ್ರಸಂಗಗಳು ನಿದರ್ಶನ.

೪) ಅದರಂತೆ ರುದ್ರದೇವರಿಗೆ ಶ್ರೀವಾಯುದೇವರು ಬಲಪ್ರದರು ಎಂಬುದಕ್ಕೆ ಅಶ್ವತ್ಥಾಮರು ಭೀಮಸೇನನಿಂದ ಪರಾಜಿತರಾದ ಅನೇಕ ಪ್ರಸಂಗಗಳು, ರಾಜಸೂಯಯಾಗದ ದಿಗ್ವಿಜಯಕಾಲದಲ್ಲಿ ಶಿವಾದಿದೇವತೆಗಳು ಪರಾಜಿತರಾದ ಪ್ರಸಂಗಗಳು ನಿದರ್ಶನ. ಭೀಮಸ್ವರೂಪವಾದ ನಾರಾಯಣಾಸ್ತ್ರ ಮತ್ತು ಬ್ರಹ್ಮಶಿರೋಸ್ತ್ರಗಳ ಬಲದಿಂದ ಅಶ್ವತ್ಥಾಮರು ಹೋರಾಡಿದ ಪ್ರಸಂಗಗಳು ನಿದರ್ಶನ.

೫) ಶ್ರೀವಾಯುದೇವರಿಗೆ ಶ್ರೀಹರಿಯೇ ಸಾಕ್ಷಾದ್ಬಲ ಎಂಬುದು ಭೀಮಸೇನ ಶ್ರೀಕೃಷ್ಣರಕ್ಷಿತ ಎಂಬ ಇಡೀ ಮಹಾಭಾರತದ ಪ್ರತಿಪಾದನೆಯಿಂದ ಸ್ಪುಟಪಡುತ್ತದೆ.

೬) 'ನ ಕೇವಲಂ ಮೇ ಭವತಶ್ಚ ರಾಜನ್
ಸ ವೈ ಬಲಂ ಬಲಿನಾಂ ಚಾಪರೇಷಾಂ' – (೭/೮,೯)

– ಎಂಬ ಭಾಗವತದ ಮಾತೂ ಒಟ್ಟಾಗಿ ಇದಕ್ಕೆ ಸಂವಾದಿಯಾಗಿದೆ.

ವಾಯುದೇವರ ಹಿರಿಮೆ

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ವಾಯುರ್ದೇವದೇವೋ ವಿಶಿಷ್ಟಃ ॥ ೧೫೮ ॥

---

೧೫೮. 'ವಾಯುರ್ಭೀಮೋ' ಇತ್ಯಸ್ಮಿನ್ ವಾಕ್ಯೇ ಯಸ್ಮಾದಿತ್ಯುಪಸ್ಕರ್ತವ್ಯಮ್। –(ವ.)

೧೫೮. ಪ್ರಾಣಾನಾಂ – ಇಂದ್ರಿಯಾಣಾಂ ಸತ್ತ್ವೇ ಕಾರಣಭೂತಃ। ಯದ್ವಾ, ಪ್ರಾಣಿನಾಂ ಜೀವಾನಾಂ ಪ್ರಾಣಭೂತಃ ಜೀವನಕಾರಣಭೂತಃ। –(ಜ.)

ಅ: ವಾಯುದೇವರು ಅಸುರರಿಗೆ ಭಯಂಕರರೂ, ಅವರಿಗೆ ಭಯವನ್ನುಂಟು ಮಾಡುವ ಧ್ವನಿಯನ್ನು ಹೊಂದಿದವರೂ, ಮಹತ್ತರವಾದ ತೇಜಸ್ಸಿನಿಂದ ಕೂಡಿದವರೂ, ಸಕಲ ಜೀವರಿಗೂ ಚೇಷ್ಟಾದಿಪ್ರದರೂ ಆಗಿರುವರು; ಇಂತಹ ವಾಯುದೇವರು ತೊರೆದಾಗಲೇ ಪ್ರಾಣಿಗಳಿಗೆ ದೇಹಪಾತ(ಮರಣ)ವು ಸಂಭವಿಸುವುದು; ಆದ್ದರಿಂದ ರುದ್ರಾದಿ ಇತರ ಸಕಲ ದೇವತೆಗಳಿಗೂ ಶ್ರೀವಾಯುದೇವರು ದೇವತೆಗಳಾಗಿರುವರು; ಸರ್ವೋತ್ಕೃಷ್ಟರಾಗಿರುವರು.

---

೧೫೮. ತಥಾ ದೇಹಿನಾಂ ಪ್ರಾಣಿನಾಂ ದೇಹಪಾತೇ ಕಾರ್ಯೇ ಅನಸ್ಯ ವಾಯೋರವೃತ್ತಿಃ ಕಾರಣಮಿತ್ಯರ್ಥಃ। ಮುಖ್ಯಪ್ರಾಣೇನ ದೇಹೇ ಪರಿತ್ಯಕ್ತೇ ತತ್ಪಾತೋ ಭವತಿ ... ಇತಿ ಭಾವಃ। –(ವ.)

ಅಥವಾ ದೇಹಿನಾಂ ಮುಮುಕ್ಷೂಣಾಂ ದೇಹಪಾತೇ ಚರಮದೇಹಪಾತೇ ಅನಾವೃತ್ತಿರ್ಯತ್ಕೃ-ಸಾದಾದ್ಭವತೀತ್ಯರ್ಥಃ। -(ವ)

೧೫೮. ಅನಾವೃತ್ತಿರ್ನ ವಿದ್ಯತೇ ಅ–ಸಮಂತಾತ್ ವೃತ್ತಿರ್ವರ್ತನಂ ಯಸ್ಯೇತಿ । ಅನತೀತ್ಯನೋ ಜೀವಃ ತಸ್ಯ–ಅಸಮಂತಾತ್ ವೃತ್ತಿರವಸ್ಥಾನಂ ಯಸ್ಮಿನ್ನಿತಿ ವಾ ।

ದೇಹಾದ್ದೇಹಾಂತರಗತೌ ಪ್ರವಿಶೇತ್ ಪ್ರಾಣಮೇವ ತು ।
ಜೀವಃ ಪ್ರಾಣಃ ಪರಾತ್ಮಾನಮೇವಂ ಸುಪ್ತಾವಪಿ ಸ್ಫುಟಮ್ ॥ –ಇತಿ ಹರಿವಂಶವಚನಾತ್ (ಜ.)

ಅನೇ ಚೇಷ್ಟಕೇ ಹರೌ ಅವೃತ್ತಿರ್ಯಸ್ಯೇತಿ ವಾ । ಅಥವಾ ದೇಹಿನಾಂ ಚರಮದೇಹಪಾತೇ ನ ವಿದ್ಯತೇ ಅವೃತ್ತಿರ್ದೇಹಾಂತರಸ್ಯ ಯಸ್ಮಾತ್ ಸಃ । ಯದ್ವಾ, ಮೃತೌ ಅನಸ್ಯ ಪ್ರಾಣಸ್ಯಾವೃತ್ತಿಃ ಕಾರಣಂ ಯಸ್ಮಾತ್, 'ಕಸ್ಮಿನ್ನ್ವಹಮುತ್ಕ್ರಾಂತೋ ಭವಿಷ್ಯಾಮಿ । ಕಸ್ಮಿನ್ವಹಂ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮಿ' ಇತಿ ಶ್ರುತೇಃ । ಮೃತಜೀವಾನುಗಮನೇ ವಿಶೇಷಃ ಐತರೇಯಭಾಷ್ಯೇ । ಭಾರತೇ–

ಮ್ರಿಯಮಾಣಮಿಮಂ ಜೀವಂ ವಾಸುದೇವಾದಿದೇವತಾಃ ।
ತ್ಯಕ್ತ್ವಾ ಭಾಗೇನ ಗಚ್ಛಂತಿ ಭಾಗತೋಽನುವ್ರಜಂತಿ ತಮ್ ।
ಗತೈರ್ಭಾಗೈರಪಿ ಪುನಃ ವಿಶೇಯುರ್ಭೋಗಸಿದ್ಧಯೇ ।
ಭೋಗ್ಯಲೋಕಮನುಪ್ರಾಪ್ತಂ ತಸ್ಮಾತ್ ಸ್ವಪ್ನವದಂತರಾ ॥– ಇತಿ ।

ತಸ್ಮಾತ್ ದೇವದೇವಃ ತತ್ತ್ವದೇವಾನಾಂ ದೇವಃ ಅಧಿಪತಿಃ । ಅತ ಏವ ವಿಶಿಷ್ಟಃ ಶ್ರೇಷ್ಠಃ । –(ಜ.)

೧೫೮. ದೇಹಿನಾಂ ದೇಹಪಾತೇ ಇತ್ಯತ್ರ ದೇಹಿನಾಂ ದೇಹಪಾತೇ ಸತಿ ಅನ್ಯಸ್ಯ ವಾಯೋರವೃತ್ತಿಃ ದೇಹೇ ಆವರ್ತನಂ ತಾವದ್ ದೃಶ್ಯತೇ । ಏವಂ ಚ ದೇಹೇ ಪ್ರಾಣಾಭಾವೇ ಸತಿ ದೇಹಸ್ಯ ಪತಿತತ್ವೇನ ಜೀವನಾಭಾವಸ್ಯಾವ್ಯಭಿಕತ್ವಾತ್ ಪ್ರಾಣಾಭಾವೇ ಜೀವನಾಭಾವ ಇತಿ ವ್ಯತಿರೇಕಃ ಸಿದ್ಧಃ । ಇದಂ ಚೋಪಲಕ್ಷಣಮ್ । ಇತರಚಕ್ಷುರಾದ್ಯಭಿಮಾನಿ-ದೇವಾನಾಂ ದೇಹೇ ಆವರ್ತಮಾನತ್ವಸ್ಯ ಅಂಧಬಧಿರಮೂಕತಾದಶಾಯಾಂ ದರ್ಶನೇಽಪಿ ಪ್ರಾಣಸ್ಯ ದೇಹ ಏವ ವೃತ್ತ್ಯಾ ಅಂಧೀಭೂಯ ಬಧಿರೀಭೂಯ ಮೂಕೀಭೂಯ ವಾ ಜೀವನಸ್ಯೈವ ದರ್ಶನೇನ ಇತರ ದೇವತಾಭಾವೇ ಜೀವನಾಭಾವ ಇತಿ ವ್ಯತಿರೇಕಸ್ಯ ಭಗ್ನತ್ವಾತ್ ನ ತೇಷಾಂ ವ್ಯತಿರೇಕಸಿದ್ಧಿಃ । ದೇಹೇ ಏವ ಪ್ರಾಣೇ ಸತಿ ಚೇತರಜೀವಾನಾಮಭಾವದಶಾಯಾಮಪಿ ಅಂಧೀಭೂಯ ಮೂಕೀಭೂಯ ವಾ ಜೀವನಸ್ಯೈವ ದರ್ಶನೇನ ಪ್ರಾಣೇ ಸತಿ ಜೀವನಮಿತಿ ಪ್ರಾಣಸ್ಯ ಅನ್ವಯೋಽಪಿ ಸಿದ್ಧಃ । ಅತ ಏವ ಇತರ ದೇವಾನಾಮಭಾವೇಽಪಿ ಪ್ರಾಣೇ ಸತಿ ಅಂಧೀಭೂಯ ಬಧಿರೀಭೂಯ ಮೂಕೀಭೂಯ ವಾ ಜೀವನಸ್ಯೈವ ದರ್ಶನೇನ ಇತರ ದೇವೇಷು ಸತ್ಸ್ವೇವ ಜೀವನಮಿತ್ಯನ್ವಯೋಽಪಿ ನ ಸಿದ್ಧಃ।

ಎ: ೧) ಶ್ರೀವಾಯುದೇವರ ಹಿರಿಮೆಯನ್ನು ಅನೇಕಪರಿಯಲ್ಲಿ ಸಾರುವ ಈ ಶ್ಲೋಕವೂ ಸಹ ಮಹಾಭಾರತದ್ದೇ ಆಗಿದೆ (ಶಾಂತಿಪರ್ವ, ೨೫೦/೩೯).

೨) ಇತರ ಯಾವ ತತ್ತ್ವಾಭಿಮಾನಿದೇವತೆಗಳು ತೊರೆದಾಗಲೂ ಮರಣವು ಸಂಭವಿಸುವುದಿಲ್ಲ; ಶ್ರೀವಾಯುದೇವರು ತೊರೆದಾಗ ಮಾತ್ರವೇ ಮರಣವು ಒದಗುವುದು ಎಂಬ ಅಂಶ ಶ್ರೀವಾಯುಜೀವೋತ್ತಮತ್ವಕ್ಕೆ ಅತಿಶ್ರೇಷ್ಠವಾದ ಕಾರಣ ಎಂಬುದು ಇಲ್ಲಿಯ ಸಾರ; ಇದರ ಸ್ವಾರಸ್ಯವನ್ನು ಶ್ರೀವಾದಿರಾಜಸ್ವಾಮಿಗಳು ಅನೇಕ ತೆರನಾಗಿ ವಿವರಿಸಿರುವರು.

೩) ಪ್ರಾಣಿಗಳಿಗೆ ಮರಣ ಸಂಭವಿಸಿದಾಗ ಇತರ ದೇವತೆಗಳು ಒಂದುರೂಪದಿಂದ ಆಯಾ ಜೀವರನ್ನು ಹಿಂಬಾಲಿಸಿ ತೆರಳುವರು; ಮತ್ತೊಂದು ರೂಪದಿಂದ ತಮ್ಮ ತಮ್ಮ ಮೂಲ–ರೂಪಗಳನ್ನು ಸೇರುವರು; ಆದರೆ ಶ್ರೀವಾಯುದೇವರು ತಮ್ಮ ಮೂಲರೂಪಕ್ಕೆ ತೆರಳದೆ ಮುಂಚಿನಂತೆಯೇ ಜೀವನನ್ನೂ ಪರಮಾತ್ಮನನ್ನೂ, ಧರಿಸಿ ಹಿಂದಿನ ದೇಹದಿಂದ ಮತ್ತೊಂದು ದೇಹಕ್ಕೆ ತೆರಳುವರು; ಆದ್ದರಿಂದಲೇ ಅವರು ದೇವದೇವರೂ, ವಿಶಿಷ್ಟರೂ ಆಗಿರುವರು ಎಂದೂ ಶ್ರೀವಾದಿರಾಜರು ಇದನ್ನು ವಿವರಿಸಿರುವರು.

ಯದ್ವಾ 'ವಾಕ್ ಪ್ರಾವಿಶದಶಯದೇವ, ಚಕ್ಷುಃ ಪ್ರಾವಿಶದಶಯದೇವ ಶ್ರೋತ್ರಂ ಪ್ರಾವಿಶದಶಯದೇವ ಮನಃ ಪ್ರಾವಿಶದಶಯದೇವ' ಇತಿ ಶ್ರುತೇಃ ಪ್ರಾಣಾಭಾವದಶಾಯಾಂ ವಾಗಾದಿದೇವಾನಾಂ ಪ್ರವೇಶೇऽಪಿ ಜೀವನಾದರ್ಶನೇನ ಇತರಜೀವೇಷು ಸತ್ಸು ಜೀವನಮಿತ್ಯನ್ವಯೋऽಪಿ ತೇಷಾಂ ಭಗ್ನಃ । ತಥಾ ಚ ಯಸ್ಮಾತ್ ಪ್ರಾಣ ಏವೋಕ್ತವಿಧಯಾ ಜೀವನಾನ್ವಯವ್ಯತಿರೇಕಾನುವಿಧಾಯಿತ್ವೇನ ಸಕಲಜೀವನಹೇತುಃ ನೇತರಃ । ತಸ್ಮಾತ್ ದೇವದೇವಃ ದೇವೇಷ್ವಪ್ಯಘಟಿತಮಾಹಾತ್ಮ್ಯವತ್ತ್ವಾತ್ ದೇವಾನಾಮಪಿ ದೇವಃ । ಭೀಮಃ ಭಯಂಕರಃ । ಭೀಮನಾದಃ ಯಮಭಟಾನಾಮಪಿ ಭಯಂಕರಪ್ರಾಣಘೋಷಾಖ್ಯನಾದವಾನ್ । ಮಹೌಜಾಃ । ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ಶ್ವಾಸಾಭಿಮಾನೀ ವಾಯುರ್ವಿಶಿಷ್ಟಃ ದೇವಾದಿಸಕಲಜೀವೇಭ್ಯೋऽಪಿ ಉತ್ತಮ ಇತಿ ಶ್ಲೋಕಾರ್ಥಃ ।

ತದುಕ್ತಮೈತರೇಯೋಪನಿಷದಿ । ಪ್ರಾಣ ಉದಕ್ರಾಮತ್ ತತ್ಪ್ರಾಣ ಉತ್ಕ್ರಾಂತೇऽಪದ್ಯತ ತದಶೀರ್ಯ-ತಾಶಾರೀತೀ ತಚ್ಛರೀರಮಭವತ್ । 'ಪ್ರಾಣಃ ಪ್ರಾವಿಶತ್ ತತ್ಪ್ರಾಣೇ ಪ್ರಸನ್ನಃ ಉದತಿಷ್ಠತ್' ತಂ ದೇವಾ ಅಬ್ರುವನ್ । 'ತ್ವಮುಕ್ಥಮಸಿ ತ್ವಮಿದಂ ಸರ್ವಮಸಿ ತವ ವಯಂ ಸ್ಮಃ ತ್ವಮಸ್ಮಾಕಮಸಿ' ಇತಿ । ತಚ್ಛರೀರಂ ಆ ಶಾರಿ ಆ ಅಶೀರ್ಯತ, ಅಶೀರ್ಣಮಭವತ್ । ಇತಿ ಈಂ ಹೇತೋಃ ತಚ್ಛರೀರಮಭವದಿತ್ಯರ್ಥಃ । ತ್ವಮುಕ್ಥಂ ಉತ್ತಮಮ್ । ದೈವತಮಸಿ ಇತಿ ಶ್ರುತೇರರ್ಥೋ ಜ್ಞೇಯಃ । ಶ್ರುತೇರಪೇಕ್ಷಿತಾಂಶ ಏವ ಉದ್ಧೃತಃ । ಸಮಗ್ರಶ್ರುತಿರುಪನಿಷದ್ಯೇವ ದ್ರಷ್ಟವ್ಯಾ।

ಯದ್ವಾ ಯಸ್ಮಾತ್ ದೇಹಿನಾಂ ದೇಹಪಾತೇ ಸತಿ ಅನಾವೃತ್ತಿಃ ಸ್ವಮೂಲರೂಪಂ ಪ್ರತಿ ಏಕಾನಾಪ್ಯಂಶೇನಾ-ವೃತ್ತಿರಹಿತೋ ಮುಖ್ಯಪ್ರಾಣಃ ಅನ್ಯೇ ದೇವಾ ದೇಹಿನಾಂ ಮೃತೌ ಭಾಗತಸ್ತಮನುವ್ರಜಂತಿ । ಭಾಗತಃ ಸ್ವಮೂಲರೂಪಂ ಪ್ರತಿಗಚ್ಛಂತಿ । ಮುಖ್ಯಪ್ರಾಣಸ್ತ್ವೇಕೇನಾಪ್ಯಂಶೇನ ಸ್ವಮೂಲರೂಪಂ ಪ್ರತ್ಯಗತ್ವಾ ಯಥಾಪೂರ್ವಂ ಸ್ಥಿತಃ ತಥೈವಂ ಜೀವಂ ಪರಮಾತ್ಮಾನಂ ಚೋಧ್ವಾ ಪೂರ್ವದೇಹಾತ್ ದೇಹಾಂತರಂ ಗಚ್ಛತಿ । ತಸ್ಮಾದಪಿ ದೇವದೇವೋ ವಿಶಿಷ್ಟಃ ಇತಿ ಯೋಜನಾ ॥ -(ವಾ)

೧೫೮. ಪ್ರಾಣಿನಾಂ ಪ್ರಾಣಶ್ಚೇಷ್ಟಾಭೂತಂ ಭೂತಿಃ ಸತ್ತೇತ್ಯೇತೇ ದೇಯತ್ವೇನಾಸ್ಯಾಸ್ತ ಇತ್ಯರ್ಥಃ । – (ಸ.)

೧೫೮. ಭಾರತ. (ವನ. ೧೫೪/೧೯)

ಭೀಮಸೇನ ಸಮೋ ನಾಸ್ತಿ

ತತ್ತ್ವಜ್ಞಾನೇ ವಿಷ್ಣುಭಕ್ತೌ ಸ್ಥೈರ್ಯೇ ಧೈರ್ಯೇ ಪರಾಕ್ರಮೇ ।
ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ॥ ೧೫೯ ॥

ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।
ಪಾಂಡಿತ್ಯೇ ಚ ಪಟುತ್ವೇ ಚ ಶೂರತ್ವೇಽಪಿ ಬಲೇಽಪಿ ಚ ॥ ೧೬೦ ॥

ಅ: ತತ್ತ್ವಜ್ಞಾನ, ವಿಷ್ಣುಭಕ್ತಿ, ಸ್ಥಿರತೆ, ಧೈರ್ಯ, ಪರಾಕ್ರಮ, ವೇಗ, ಲಾಘವ, ವ್ಯರ್ಥ ಮಾತುಗಳನ್ನು ಆಡದಿರುವುದು, ಪಾಂಡಿತ್ಯ, ಪಟುತ್ವ, ಶೂರತ್ವ, ಮತ್ತು ಬಲ – ಇವುಗಳ ವಿಷಯದಲ್ಲಿ ಕುರುಪಾಂಡವ ಸೇನೆಗಳೆರಡರಲ್ಲೂ ಭೀಮಸೇನನಿಗೆ ಸಮನಾದವನು ಇಲ್ಲವೇ ಇಲ್ಲ.

ವಿ: ೧) ವಾಯುದೇವರ ಅವತಾರರಾದ ಭೀಮಸೇನನ ಹಿರಿಮೆಯನ್ನು ಸಾರುವ ಭಾರತ–ವಾಕ್ಯದಿಂದ ವಾಯುದೇವರ ಜೀವೋತ್ತಮತ್ವವನ್ನು ಸಾಧಿಸಿರುವರು.

೨) ಕುರು – ಪಾಂಡವ ಸೇನೆಗಳು ಸುರಾಸುರವರ್ಗದ ಸಂಕೇತವಾಗಿದ್ದು, ಅವುಗಳಲ್ಲಿ ರುದ್ರಾದಿ ಪ್ರಧಾನದೇವತೆಗಳು ಮತ್ತು ಕಲ್ಯಾದಿ ದೈತ್ಯರುಗಳ ಅವತಾರವಾದ ಜನರೇ

---

೧೫೯. ತಥಾ ಅನ್ಯತ್ರ ಸ್ಥಲಾಂತರೇಣಾಪಿ ಭಾರತೇ ಭೀಮಾತ್ಮಕಸ್ಯ ವಾಯೋಃ ಸರ್ವಾಧಿಕಾರ್ಯುತ್ತಮತ್ವಮುಕ್ತಮಸ್ತೀತಿ ಯದ್ವಾಕ್ಯಂ ತದ್ವಾಕ್ಯಮುದಾಹರತಿ – 'ತತ್ತ್ವಜ್ಞಾನೇ' ಇತ್ಯಾದಿನಾ ॥ – (ವ್ಯಾ.)

೧೫೯. ವಾಯೋರವತಾರಭೂತಭೀಮೋತ್ಕರ್ಷಪ್ರತಿಪಾದಕಭಾರತವಾಕ್ಯೈರ್ವಾಯೂತ್ಕರ್ಷಂ ಪ್ರತಿಪಾದಯತಿ । -(ಜ)

ತಥಾ ಅನ್ಯತ್ರ ಸ್ಥಲಾಂತರೇಣಾಪಿ ಭಾರತೇ ಭೀಮಾತ್ಮಕಸ್ಯ ವಾಯೋಃ ಸರ್ವಾಧಿಕಾರ್ಯುತ್ತಮತ್ವಮುಕ್ತಮಸ್ತೀತಿ ಯದ್ವಾಕ್ಯಂ ತದ್ವಾಕ್ಯಮುದಾಹರತಿ । ತತ್ತ್ವಜ್ಞಾನೇ ಇತ್ಯಾದಿನಾ ।

೧೫೯. ವಿಷಯಸಪ್ತಮೀ ।

೧೫೯. ಧೈರ್ಯೇ – ಮನೋಽಚಾಂಚಲ್ಯೇ । ಸ್ಥೈರ್ಯೇ–ದೇಹಸ್ಯ ಅಚಾಂಚಲ್ಯೇ । –(ಜ)

೧೫೯. 'ಪ್ರಲಾಪೋಽನರ್ಥಕಂ ವಚಃ' ಇತ್ಯಭಿಧಾನಾತ್ 'ಪ್ರಲಾಪಸ್ಯ ವ್ಯರ್ಥವಚನಸ್ಯ' ಇತ್ಯರ್ಥಃ । –(ವಾ)

ಪ್ರಲಾಪಸ್ಯ – ದುಃಖಸ್ಯ; ಪಟುತ್ವೇ – ಸರ್ವಲೋಕೋತ್ತಮತ್ವೇ । – (ವ)

೧೬೦. ಉಭಯೋಃ ಕುರುಪಾಂಡವಯೋಃ । – (ಜ)

೧೬೦. ಭೀಮಸೇನಸಮೋ ನಾಸ್ತೀತ್ಯುಕ್ತ್ವಾ ಅಶ್ವತ್ಥಾಮಾದ್ಯುತ್ತಮತ್ವಮೇವ ಲಭ್ಯತೇ ಇತಿ ಭಾವಃ । –(ಜ)

೧೬೦. ಬಲೇಽಪಿ ಚೇತಿ ಚಶಬ್ದೋಽವಧಾರಣಾರ್ಥಃ । ತಸ್ಯ ಭೀಮಸೇನಸಮೋ ನ ಚ ನೈವಾಸ್ತೀತಿ ಸಂಬಂಧಃ ।
ಏತೇನ ಬಲೇಽಪಿ ಚೇತಿ ಚಶಬ್ದೋ ವ್ಯರ್ಥ ಇತಿ ದೂಷಣಂ ಪರಾಸ್ತಮ್ ॥ – (ಸ.)

೧೬೦. ನ ಕೇವಲಂ ಮೇ ಭವತಶ್ಚ ರಾಜನ್ ಸ ವೈ ಬಲಂ ಬಲಿನಾಂ ಚಾಪರೇಷಾಮ್ ॥ – ಭಾ. ೭/೮/೯.

ತುಂಬಿರುವರು. ಅವರಲ್ಲಿ ಭೀಮಸೇನನಿಗೆ ಸಮನಾದವನು ಇಲ್ಲವೆಂಬುದು ಭೀಮನ ಜೀವೋತ್ತಮತ್ವಕ್ಕೆ ಸಾಧಕ ಎಂದು ಭಾವ.

ಯುಧಿಷ್ಠಿರ ಸಾರಿದ ಭೀಮನ ಹಿರಿಮೆ

ತಥಾ ಯುಧಿಷ್ಠಿರೇಣಾಪಿ ಭೀಮಂ ಪ್ರತಿ ಸಮೀರಿತಮ್ ।
ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚೈವ ಯಶೋ ಧ್ರುವಮ್ ।
ತ್ವಯ್ಯಾತತಮಿದಂ ಸರ್ವಂ ಸರ್ವಲೋಕಸ್ಯ ಭಾರತ ॥ ೧೬೧ ॥

ಅ: ಯುಧಿಷ್ಠಿರನಿಂದ ಭೀಮನನ್ನು ಕುರಿತು ಹೇಳಲ್ಪಟ್ಟ ಮಾತೂ ಹಾಗೆಯೇ ಉಂಟು; ''ಎಲೈ ಭಾರತ! ಸಕಲ ಲೋಕಗಳ ಧರ್ಮ, ಅರ್ಥ, ಕಾಮ, ಮೋಕ್ಷ, ಯಶಸ್ಸು ಮೊದಲಾದ ಈ ಸಕಲವೂ ನಿಶ್ಚಯವಾಗಿ ನಿನಗೆ ಅಧೀನವಾಗಿವೆ''.

ವಿ: 'ಯಾವುದೇ ಲೋಕದ ಯಾವುದೇ ಒಳಿತಿಗೂ ಶ್ರೀಭೀಮಸೇನನ ಅನುಗ್ರಹ ಬೇಕು' ಎಂದು ಭಾವ. ಧರ್ಮಾದಿ ಸಕಲಶ್ರೇಯಸ್ಸು ಹೀಗೆ ಭೀಮಸೇನನ ಆಧೀನ್ಯಕ್ಕೆ ಒಳಪಟ್ಟಿರುವುದರಿಂದ ಆತನು ಸಕಲಜೀವೋತ್ತಮನು ಎಂದು ಭಾವ.

ದುರ್ಯೋಧನ ತಿಳಿಸಿದ ಭೀಮನ ಮಹಿಮೆ

ವಿರಾಟಪರ್ವಗಂ ಚಾಪಿ ವಚೋ ದುರ್ಯೋಧನಸ್ಯ ಹಿ ॥ ೧೬೨ ॥

ವೀರಾಣಾಂ ಶಾಸ್ತ್ರವಿದುಷಾಂ ಕೃತೀನಾಂ ತತ್ತ್ವನಿರ್ಣಯೇ ।
ಸತ್ತ್ವೇ ಬಾಹುಬಲೇ ಧೈರ್ಯೇ ಪ್ರಾಣೇ ಶಾರೀರಸಂಭವೇ ॥ ೧೬೩ ॥

---

೧೬೧. ಸರ್ವಲೋಕಸ್ಯ ಯದಿದಂ ಸರ್ವಂ ಧರ್ಮಾಧಿಕಂ ತ್ವಯ್ಯಾಯತ್ತಂ ತ್ವದಧೀನಂ ಇತ್ಯರ್ಥಃ ।– (ವ)

ಇದಂ ಸರ್ವಂ ತ್ವಯಿ ಆತತಂ ವ್ಯಾಪ್ತಂ ತ್ವದಧೀನಮಿತ್ಯರ್ಥಃ । ''ತ್ವಯ್ಯಾಯತ್ತ'ಮಿತಿ ಕ್ವಚಿತ್ । ಆಯತ್ತಂ ಸ್ವಾಧೀನಂ ಕೃತಮ್ ॥ –(ಜ)

೧೬೩. ವೀರಾಣಾಂ ಶಾಸ್ತ್ರವಿದುಷಾಮಿತ್ಯತ್ರ ವೀರಾಣಾಂ ಯಚ್ಛಾಸ್ತ್ರಂ ಶಸ್ತ್ರಂ ಶಾಸ್ತ್ರಂ ತದ್ವಿದುಷಾಂ ಮಧ್ಯೇ । ಶಾಸ್ತ್ರವಿದುಷಾಂ ವೇದಪಂಚರಾತ್ರಾದಿಶಾಸ್ತ್ರವಿದುಷಾಮಿತಿ ವಾ । – (ವಾ)

ವೀರಾಣಾಂ ಶೂರಾಣಾಂ ಶಾಸ್ತ್ರವಿದುಷಾಂ ತತ್ತ್ವವಿದುಷಾಂ ತತ್ತ್ವಶಾಸ್ತ್ರವಿದುಷಾಂ ಕೃತೀನಾಂ ಕುಶಲಾನಾಂ ಪ್ರಾಣಿನಾಂ ಮಧ್ಯೇ । ಸತ್ತ್ವೇ ಜ್ಞಾನಬಲಯೋಃ ಪ್ರಾಣೇ ಪ್ರಕೃಷ್ಟಚೇಷ್ಟಾಯಾಂ ಸಾಂಪ್ರತಂ ಇದಾನೀಂ ಚತ್ವಾರಃ ಶ್ರೇಷ್ಠಾಃ ಬಾಹುಬಲೇ ಪ್ರಾಣೇ ಇತ್ಯನೇನ ಬಲಪೌರುಷಾ ಇತಿ। ಪುನರ್ಬಲಪೌರುಷಯೋಃ ಕಥನಂ ಕೀಚಕಸ್ಯ ತತ್ತ್ವಜ್ಞಾನನಿರ್ಣಯೋರಭಾವಾತ್ ॥ – (ಜ)

ಸಾಂಪ್ರತಂ ಮಾನುಷೇ ಲೋಕೇ ಸದೈತ್ಯನರರಾಕ್ಷಸೇ ।
ಚತ್ವಾರಃ ಪ್ರಾಣಿನಾಂ ಶ್ರೇಷ್ಠಾಃ ಸಂಪೂರ್ಣಬಲಪೌರುಷಾಃ ॥ ೧೬೪ ॥

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ।
ಅನ್ಯೋನ್ಯಾನಂತರಬಲಾಃ ಕ್ರಮಾದೇವ ಪ್ರಕೀರ್ತಿತಾಃ ॥ ೧೬೫ ॥

ಅ: ವಿರಾಟಪರ್ವದಲ್ಲಿನ ದುರ್ಯೋಧನನ ಮಾತೂ ಸಹ ಹೀಗೆಯೇ ಇದೆ; ಶ(ಶಾ)ಸ್ತ್ರವನ್ನು ಬಲ್ಲವರು, ತತ್ತ್ವನಿರ್ಣಯದಲ್ಲಿ ಕುಶಲರೂ ಆದವರ ವಿಷಯದಲ್ಲಿ ಇಂದಿನ ದೈತ್ಯ, ನರ, ರಾಕ್ಷಸ ಸಮೇತವಾದ ಮಾನುಷಪ್ರಪಂಚದಲ್ಲಿ, ಸತ್ತ್ವ, ಬಾಹುಬಲ, ಧೈರ್ಯ, ಪ್ರಾಣಶಕ್ತಿ, ಶರೀರಕ್ಕೆ ಸಂಬಂಧಿಸಿದ ಉದ್ಗಮನ, ಉತ್ಪತನಾದಿ ಕಾರ್ಯಗಳು ಮೊದಲಾದವುಗಳಲ್ಲಿ ಸಂಪೂರ್ಣವಾದ ಬಲ ಮತ್ತು ಪೌರುಷಗಳನ್ನು ಹೊಂದಿರುವ ಪ್ರಾಣಿಗಳಲ್ಲಿ ಶ್ರೇಷ್ಠರಾದವರು ನಾಲ್ವರು; 'ಭೀಮಸೇನ, ಬಲರಾಮ, ಮದ್ರರಾಜನಾದ ಶಲ್ಯ ಮತ್ತು ನಾಲ್ಕನೆಯವನಾದ ಕೀಚಕನು' ಇವರಿಗೆ ಐದನೆಯವನನ್ನು ನಾವು ಕೇಳಿಯೇ ಇಲ್ಲ; ಇವರಲ್ಲೂ ಅನಂತರದವರು ಮೊದಲನೆಯವರಿಗಿಂತ ಕ್ರಮವಾಗಿ ಕಡಿಮೆ ಬಲಶಾಲಿಗಳು; ಎಂಬುದಾಗಿ ಹೇಳಲ್ಪಟ್ಟಿರುವವರು.

---

೧೬೩. ಕೀಚಕಸ್ಯ ಶಾಸ್ತ್ರೇऽನಧಿಕಾರೇऽಪಿ ಭೀಮಾದಿತ್ರಯಾಣಾಂ ಶಾಸ್ತ್ರೇ ಅಧಿಕಾರಸದ್ಭಾವಾತ್ । ಅತ ಏವ 'ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್' ಇತಿ ತ್ರೀನ್ ಸಹೋಕ್ತ್ವಾ 'ಚತುರ್ಥಃ ಕೀಚಕಃ' ಇತಿ ಕೀಚಕಸ್ಯ ಪೃಥಗುಕ್ತಃ। -(ವಾ)

೧೬೪. ಕೃತೀನಾಂ ಕರ್ತವ್ಯಕರ್ಮಾಣಾಂ ತತ್ತ್ವನಿರ್ಣಯೇ । ಅತ ಏವ ಲಾಕ್ಷಾಗೃಹಾನ್ನಿರ್ಗಮನನಿರ್ಣಯಂ ಭೀಮ ಏವ ಕೃತವಾನ್ ನಾನ್ಯಃ। -(ವಾ)

೧೬೪. 'ಅನ ಚೇಷ್ಟಾಯಾಂ'ಮಿತಿ ಧಾತೋಃ ಪ್ರಾಣೇ ಪ್ರಕೃಷ್ಟಚೇಷ್ಟಯಾಂ. ಶಾರೀರಸಂಭವೇ ಶರೀರ- ಸಂಬಂಧಿ ಶಾರೀರಂ ಉದ್ಗಮನೋತ್ಪತನಾದಿಕಂ ತಸ್ಯ ಸಂಭವೇ ಸಂಭಾವನಾಯಾಮ್। -(ವಾ)

೧೬೪. ಬಲಜ್ಞಾನಸಮಾಹಾರಃ ಸತ್ವಮಿತ್ಯಭಿಧೀಯತೇ ॥ ಇತಿ ಮಾತ್ಸ್ಯೇ ॥ -ಭಾ. ತಾ. (೧/೩/೩)

ಮಹಾಗುಣಾಭಿಪೂರ್ಣತ್ವಂ ಸತ್ವಮಿತ್ಯುಚ್ಯತೇ ಬುಧೈಃ ॥ - ಇತಿ ವಾಮನೇ -ಭಾ. ತಾ. (೩/೨೫/೧೦)

೧೬೪. ಭಾರತ (ವಿರಾಟಪರ್ವ, ಅ. ೨೯)

೧೬೫. ನನು ಯುಧಿಷ್ಠಿರಾದಿವಚನಂ ಸ್ನೇಹೇನೋಕ್ತಮಿತಿ ಕಥಂ ತೇನೋಕ್ತೇನ ಅರ್ಥನಿಶ್ಚಯಃ ಇತ್ಯತೋ ಮುಖ್ಯದ್ವೇಷಿಣಾ ದುರ್ಯೋಧನೇನಾಪಿ ಭೀಮಸ್ಯ ಸ್ವರೂಪಸ್ಥಿತಿರುಕ್ತಾ ಅಸ್ತೀತಿ ಭಾವೇನ ವಿರಾಟಪರ್ವಸ್ಥಂ ದುರ್ಯೋಧನವಚನಮುದಾಹರ್ತುಮಾಹ – ವಿರಾಟೇತಿ। -(ವ.)

ವಿ: ೧) ಇದು ಕೀಚಕ ಮತ್ತು ಉಪಕೀಚಕರ ಸಾವಿನ ಬಗ್ಗೆ ತನ್ನ ಚಾರರ ಮೂಲಕ ಅರಿತ ದುರ್ಯೋಧನನ ಬಾಯಿಂದ ಹೊರಟ ಮಾತು.

೨) ಜಗತ್ತು ಕಂಡ ಬಲಶಾಲಿಗಳು ಭೀಮ, ಬಲರಾಮ, ಶಲ್ಯ ಮತ್ತು ಕೀಚಕ ಎಂಬುದಾಗಿ ನಾಲ್ವರು; ಈಗ ಹತನಾಗಿರುವುದು ಕೀಚಕ; ಎಂದಮೇಲೆ ಅವನನ್ನು ಕೊಂದವರು ಮೇಲಿನ ಮೂವರಲ್ಲಿ ಒಬ್ಬರಾಗಿರಬೇಕು; ಅದು ಸ್ತ್ರೀನಿಮಿತ್ತವಾದ ವಧೆ ಎಂದಮೇಲೆ ಆ ಸ್ತ್ರೀಯು 'ದ್ರೌಪದಿ'ಯೇ ಆಗಿರಬೇಕು; ಎಂದ ಮೇಲೆ ಹಾಗೆ ಕೊಂದವನು ಭೀಮಸೇನನೇ ಆಗಿರಬೇಕು ಎಂದು ಅವನ ಊಹೆ; ಅದು ಬರೀ ವಧೆ ಆಗಿರದೆ ಶಸ್ತ್ರಗಳಿಂದಾಗಿರದ ವಧೆ; ಮತ್ತು ಕೀಚಕನು ಸತ್ತಿರುವುದು ದೇಹವೆಲ್ಲ ಪುಡಿಯಾಗಿ; ಈ ಎರಡು ಅಂಶಗಳು ಸಹ ಕೀಚಕನನ್ನು ಕೊಂದವನು ಭೀಮಸೇನನೇ ಎಂಬುದನ್ನು ಖಚಿತಪಡಿಸುತ್ತವೆ ಎಂದು ಅವನ ಭಾವ.

೩) ಈ ಮಾತುಗಳೆಲ್ಲ ಮುದ್ರಿತ ಭಾರತಪ್ರತಿಗಳಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳೊಂದಿಗೆ ದೊರೆಯುತ್ತವೆ.

೪) 'ಭೀಮಶ್ಚ ಬಲಭದ್ರಶ್ಚ' ಎಂಬ ಇಲ್ಲಿಯ ಪಾಠದ ಬದಲಾಗಿ 'ಬಲಭದ್ರಶ್ಚ ಭೀಮಶ್ಚ' ಎಂಬ ಅಪಪಾಠ ಕೆಲವು ಪ್ರತಿಗಳಲ್ಲಿ ಉಂಟು. ಆದರೆ ಹೆಚ್ಚಿನ ಪ್ರತಿಗಳಲ್ಲಿ 'ಭೀಮಶ್ಚ ಬಲಭದ್ರಶ್ಚ' ಎಂಬ ಶುದ್ಧ ಪಾಠವೇ ಇದೆ. (ಪ/ಅ/ಶ್ಲೋ)

೫) ಭೀಮಸೇನನು ಒಂದಲ್ಲ ಒಂದು ಪ್ರಸಂಗದಲ್ಲಿ ಬಲರಾಮ ಮತ್ತು ಶಲ್ಯ ಇಬ್ಬರನ್ನೂ ಪರಾಭವಗೊಳಿಸಿರುವನು. ಆದರೆ ಬಲರಾಮ, ಶಲ್ಯರು ಒಮ್ಮೆಯೂ ಭೀಮನನ್ನು ಪರಾಭವ-ಗೊಳಿಸಿಲ್ಲ; ಆದ್ದರಿಂದ ಭೀಮನ ಸ್ಥಾನ ಅತ್ಯುತ್ತಮವಾದ್ದರಿಂದ **'ಭೀಮಶ್ಚ ಬಲಭದ್ರಶ್ಚ'** ಎಂಬ ಪಾಠವೇ ಸಯುಕ್ತಿಕವಾದುದು ಎಂಬುದನ್ನು ಸಹ ಗಮನಿಸಬೇಕು.

ಶ್ರೀಕೃಷ್ಣ ಮಾಡಿದ ಭೀಮಪ್ರಶಂಸೆ

ವಚನಂ ವಾಸುದೇವಸ್ಯ ತಥೋದ್ಯೋಗಗತಂ ಪರಮ್ ।
ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥ ೧೬೬ ॥

---

೧೬೬. ಕಲ್ಯಾಣಂ – ಭಕ್ತಿವಿರಕ್ತ್ಯಾದಿಶೋಭನಗುಣಮ್ । –(ವಾ)
ಕಲ್ಯಾಣಂ – ಜ್ಞಾನಭಕ್ತಿಬಲಾದಿಕಮ್ । –(ಜ)
ಕಲ್ಯಾಣಂ – ಮಹಿಮಾತಿಶಯಮ್ । –(ವ)

೧೬೬. ಭಾರತ (ಉದ್ಯೋಗ. ೭೭/೩,೪,೧೮)

ಯಾದೃಶೇ ಚ ಕುಲೇ ಜಾತಃ ಸರ್ವರಾಜಾಭಿಪೂಜಿತೇ ।
ಯಾದೃಶಾನಿ ಚ ಕರ್ಮಾಣಿ ಭೀಮ ತ್ವಮಸಿ ತಾದೃಶಃ ॥ ೧೬೭ ॥

ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।
ಧೂರರ್ಜುನೇನ ವೋಢವ್ಯಾ ವೋಢವ್ಯಾ ಇತರೇ ಜನಾಃ ॥ ೧೬೮ ॥

ಅ: ಉದ್ಯೋಗಪರ್ವದಲ್ಲಿನ ಶ್ರೀಕೃಷ್ಣನ ಉತ್ತಮವಾದ ವಚನವೂ ಹೀಗೆಯೇ ಇದೆ; ''ಭೀಮಸೇನ! ನೀನು ನಿನ್ನಲ್ಲಿ ಜ್ಞಾನಭಕ್ತ್ಯಾದಿ ಉತ್ತಮಗುಣಗಳನ್ನು ತಿಳಿದಿರುವೆಯೋ ಅದು ಅದರ ಸಾವಿರಪಟ್ಟು ಹೆಚ್ಚಾಗಿಯೇ ನಿನ್ನಲ್ಲಿ ಇವೆ ಎಂದು ಬಲ್ಲೆನು; ಸಕಲ ರಾಜರಿಂದ ಪೂಜಿತವಾದ ಯಾವ ವಂಶದಲ್ಲಿ ನೀನು ಜನಿಸಿರುವೆಯೋ ಮತ್ತು ಆ ವಂಶದಲ್ಲಿ ಜನಿಸಿದವರಿಗೆ ಯಾವ ಕರ್ಮಗಳು ಯೋಗ್ಯವೋ ನೀನು ಅಂತಹ ಕಾರ್ಯಗಳನ್ನು ಮಾಡುವವನಾಗಿರುವಿ. ಭೀಮಸೇನ ಈ ಯುದ್ಧದಲ್ಲಿ ಭಾರವೆಲ್ಲ ನಿನ್ನ ಮೇಲಿದೆ; ಇದರ ನೊಗವನ್ನು ಹೊರಬೇಕಾದವನು ಅರ್ಜುನನಾದರೆ, ಇತರ ಜನರೆಲ್ಲ ಹೊರಲ್ಪಡುವವರಾಗಿರುವವರು''.

ವಿ: ೧) ಇದು ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಪಾಂಡವರ ರಾಯಭಾರಿಯಾಗಿ ತೆರಳುವಾಗ ಪ್ರಾಸಂಗಿಕವಾಗಿ ಭೀಮಸೇನನನ್ನು ಪ್ರಶಂಸಿಸುವ ಮಾತು; ''ತನ್ನ ಸಾಮರ್ಥ್ಯವನ್ನು ತಾನೇ ಹೇಳಿಕೊಳ್ಳುವುದು ತರವಲ್ಲ; ಆದರೆ ಪ್ರಸಂಗ ಬಂದಿರುವುದರಿಂದ ಹೇಳುತ್ತಿದ್ದೇನೆ, ನಾನು ಬೇಕಾದರೆ ಮೂರುಲೋಕಗಳನ್ನು ಬಾಹುಗಳಿಂದ ನಿಗ್ರಹಿಸಬಲ್ಲೆ; ಬ್ರಹ್ಮಾಂಡವನ್ನೇ ಭೇದಿಸಬಲ್ಲೆ; ನನ್ನ ತೋಳುಗಳ ಮಧ್ಯೆ ಸಿಕ್ಕಿದರೆ ಇಂದ್ರಾದಿ ದೇವತೆಗಳು ಸಹ ತಪ್ಪಿಸಿಕೊಳ್ಳಲಾರರು'' ಮೊದಲಾಗಿ ಭೀಮಸೇನ ತಿಳಿಸಿದಾಗ ಶ್ರೀಕೃಷ್ಣ ಅದನ್ನು ಒಪ್ಪುತ್ತ ಮುಂದಿನ ಮೂರು ಅಧ್ಯಾಯ ಪೂರ್ತಿ ಭೀಮಸೇನನನ್ನು ಪ್ರಶಂಸಿಸುತ್ತಾನೆ. ಅದರಲ್ಲಿನ ಶ್ಲೋಕಗಳನ್ನು ಶ್ರೀಮದಾಚಾರ್ಯರು ಇಲ್ಲಿ ಉದಾಹರಿಸಿರುವರು.

---

೧೬೬. ಏತದರ್ಥಮಪಿ ಸೂಕ್ಷ್ಮಮಪಿ ತ್ವಂ ಶಕ್ತ ಏವ ನ ಯದಾತ್ಥ ಸಮಸ್ತಮ್ ।
ತೇನ ಲೇಶತ ಇತೀಹ ಪದಂ ಸ್ಯಾದಿತ್ಯಗದ್ಯತ ಜಗಜ್ಜನಕೇನ ॥ - ಸುಮಧ್ವವಿಜಯ (೬/೪೦)

೧೬೭. ತತ್ಕುಲಜಾತಾನಾಂ ಯಾದೃಶಾನಿ ಕರ್ಮಾಣಿ ಯೋಗ್ಯಾನಿ ತ್ವಂ ತಾದೃಶಃ ತಾದೃಶಕರ್ಮವಾಂಶ್ಚಾಸೀತಿ ಯೋಜನಾ । -(ವಾ)

೧೬೭. ತಾದೃಶಃ – ಸರ್ವೋತ್ಕೃಷ್ಟಃ ಅಸಿ ।

೧೬೮. ಅನೇನ ಅಧಿಕಸ್ತ್ವಮ್ । ತ್ವದಂಗಭೂತೋ ಅರ್ಜುನಃ ಯಥಾ ಯುಗಂಧರವಾಹಕೋ ಅಶ್ವಃ ತಥಾ ಇತ್ಯುಕ್ತಂ ಭವತಿ । -(ಜ)

೨) ಈಗ ನೀನು ನಿನ್ನ ಬಗ್ಗೆ ಹೇಳಿಕೊಂಡ ಹಿರಿಮೆ ನಿಜವಾದ ನಿನ್ನ ಹಿರಿಮೆಗಿಂತ ತುಂಬಾ ಕಡಿಮೆ; ನಿಜಕ್ಕೂ ಇದಕ್ಕಿಂತ ಸಾವಿರಪಟ್ಟು ಹೆಚ್ಚಿನ ಹಿರಿಮೆ ನಿನ್ನಲ್ಲಿದೆ ಎಂದು ಬಲ್ಲೆ; ನಿನ್ನದು ವಂಶಕ್ಕೆ ತಕ್ಕ ವ್ಯಕ್ತಿತ್ವ; ನಿನ್ನ ಕಾರ್ಯಗಳೂ ಹಾಗೆಯೇ; ಈ ಯುದ್ಧದ ಭಾರ ನಿನ್ನ ಮೇಲಿದೆ, ಅರ್ಜುನ ಇದನ್ನು ಎಳೆಯುವ ಅಶ್ವದಂತೆ; ಇತರರು ರಕ್ಷಣೀಯರು ಮಾತ್ರ ಎಂದು ಭಾವ.

೩) ಇಡೀ ಮಹಾಭಾರತದಲ್ಲಿ ಶ್ರೀಕೃಷ್ಣನು ಈ ತೆರನಾಗಿ ಅರ್ಜುನಾದಿ ಬೇರೆ ಯಾರನ್ನೂ ಪ್ರಶಂಶಿಸಿಲ್ಲ ಎಂಬುದು ಗಮನಾರ್ಹ.

೪) ಭಾರವನ್ನೆಲ್ಲ ಹೊರುವವನು ಭೀಮ, ಆದ್ದರಿಂದಲೇ ನಿಜವಾದ ಅರ್ಥದಲ್ಲಿ 'ಭರತ', 'ಭಾರತ' ಶಬ್ದವಾಚ್ಯನು ಭೀಮನೇ ಎಂದು ಭಾವ; ಆದ್ದರಿಂದ ಮಹಾಭಾರತ ಮೂಲತಃ ಸರ್ವೋತ್ತಮನ ಕಥೆಯಾಗಿರುವಂತೆ, ಅನಂತರ ಜೀವೋತ್ತಮನಾದ 'ಭೀಮಸೇನನ ಮಾಹಾತ್ಮ್ಯದ ವರ್ಣನೆಯಾಗಿದೆ ಎಂದು ತಿಳಿಯಬೇಕು.

೫) ಸುಮಧ್ವವಿಜಯದಲ್ಲಿ ಗೀತಾಭಾಷ್ಯದಲ್ಲಿನ 'ಶಕ್ತಿತಃ' ಪದದ ಸ್ಥಳದಲ್ಲಿ 'ಲೇಶತಃ' ಎಂಬುದಾಗಿ ಬದಲಾವಣೆ ಮಾಡಲು ಸೂಚಿಸಿದ ವಾಸಿಷ್ಠಕೃಷ್ಣ ಶ್ರೀವೇದವ್ಯಾಸರ ಮಾತೂ ಇದೇ ಅರ್ಥವನ್ನು ಸೂಚಿಸುತ್ತದೆ ಎಂಬುದನ್ನು ಗಮನಿಸಬೇಕು (ಸುಮಧ್ವವಿಜಯ ೬/೪೦).

೬) ಶ್ರೀಭೀಮಸೇನನು ಅರಗಿನಮನೆಯಿಂದ ತೆರಳುವ ಪ್ರಸಂಗದಲ್ಲಿ ಅರ್ಜುನ ಧರ್ಮ– ರಾಜಾದಿಗಳನ್ನೇ ತನ್ನ ಮೇಲೆ ಹೊತ್ತುನಡೆದ ವಿವರವನ್ನು ಇಲ್ಲಿ ಸ್ಮರಿಸಬಹುದು (೧೯/೪೩).

ದ್ರೌಪದಿಯ ಮಹಾಮಹಿಮೆ

ಉಕ್ತಂ ಪುರಾಣೇ ಬ್ರಹ್ಮಾಂಡೇ ಬ್ರಹ್ಮಣಾ ನಾರದಾಯ ಚ ॥ ೧೬೯ ॥

ಯಸ್ಯಾಃ ಪ್ರಸಾದಾತ್ ಪರಮಂ ವಿದಂತಿ
ಶೇಷಃ ಸುಪರ್ಣೋ ಗಿರಿಶಃ ಸುರೇಂದ್ರಃ ।
ಮಾತಾ ಚ ಯೇಷಾಂ ಪ್ರಥಮೈವ ಭಾರತೀ
ಸಾ ದ್ರೌಪದೀ ನಾಮ ಬಭೂವ ಭೂಮೌ ॥ ೧೭೦ ॥

---

೧೬೯. ದ್ರೌಪದ್ಯಾ ಭಾರತೀತ್ವೇ ಶೇಷಾದ್ಯುತ್ತಮತ್ವೇ ಚ ಪ್ರಮಾಣಮಾಹ । ಉಕ್ತಮಿತಿ । – (ಜ)

೧೭೦. ಯೇಷಾಂ ಶೇಷಾದೀನಾಂ ಪ್ರಥಮಾ ಮಾತಾ ಏವ ಏನತಾದಿಷು ಪಶ್ಚಾಜ್ಜನನಂ ಇತಿ ಜ್ಞೇಯಮ್। – (ಜ)

ಯಾ ಮಾರುತಾದ್ಗರ್ಭಮಧತ್ತ ಪೂರ್ವಂ
ಶೇಷಂ ಸುಪರ್ಣಂ ಗಿರಿಶಂ ಸುರೇಂದ್ರಮ್ ।
ಚತುರ್ಮುಖಾಭಾಂಶ್ಚತುರಃ ಕುಮಾರಾನ್
ಸಾ ದ್ರೌಪದೀ ನಾಮ ಬಭೂವ ಭೂಮೌ ॥ ೧೭೧ ॥

ಅ: ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮದೇವರಿಂದ ನಾರದರಿಗೆ ಹೇಳಲ್ಪಟ್ಟಿದೆ: ''ಯಾರ ಒಲುಮೆಯಿಂದ ಶೇಷ, ಗರುಡ, ರುದ್ರ ಮತ್ತು ಇಂದ್ರರು ಪರಮಾತ್ಮನನ್ನು ಅರಿಯುವರೋ ಮತ್ತು ಯಾರು ಇವರಿಗೆಲ್ಲ ಮೊದಲ ತಾಯಿಯಾಗಿರುವರೋ ಅಂತಹ ಭಾರತಿಯೇ ದ್ರೌಪದಿ ಎಂಬುದಾಗಿ ಭೂಮಿಯಲ್ಲಿ ಪ್ರಸಿದ್ಧರಾದರು.

''ಯಾರು ಮೊದಲು ವಾಯುವಿನಿಂದ ಗರ್ಭವನ್ನು ಧರಿಸಿ ಶೇಷ, ಗರುಡ, ರುದ್ರ ಮತ್ತು ಇಂದ್ರ ಎಂಬ ಚತುರ್ಮುಖನಂತಹ ನಾಲ್ವರು ಪುತ್ರರನ್ನು ಪಡೆದರೋ, ಅಂತಹ ಭಾರತಿಯೇ ದ್ರೌಪದಿ ಎಂಬುದಾಗಿ ಭೂಮಿಯಲ್ಲಿ ಪ್ರಸಿದ್ಧರಾದರು.''

ವಿ: ೧) ಶೇಷಾದಿ ನಾಲ್ವರು ಭಾರತೀಪುತ್ರರು ಮಾತ್ರವಲ್ಲದೆ ಅವರಿಂದ ಬ್ರಹ್ಮಜ್ಞಾನವನ್ನು ಪಡೆಯುವ ಮೂಲಕ ಅವರ ಶಿಷ್ಯರೂ ಆಗಿರುವರು ಎಂದು ಭಾವ.

೨) ಗರುಡಾದಿಗಳು ಅನಂತರ ವಿನುತಾದಿಗಳ ಪುತ್ರರಾಗಿ ಜನಿಸಿದರು; ಆದರೆ ಅವರ ಮೊದಲ ಜನ್ಮ ಪ್ರಕಟವಾದದ್ದು ಭಾರತಿಯಿಂದ ಎಂಬುದನ್ನು 'ಪ್ರಥಮಾ ಮಾತಾ' ಎಂಬ ಪದದಿಂದ ತಿಳಿಸಿರುವರು.

೩) ಇಲ್ಲಿಯ ಚತುರ್ಮುಖ ಶಬ್ದಕ್ಕೆ ವಿಸಂಜ್ಞೆಯಿಂದ 'ವಾಯು' ಎಂದು ಅರ್ಥ. ಶೇಷಾದಿಗಳು ಶ್ರೀವಾಯುದೇವರ ಸಾಕ್ಷಾತ್ ಪ್ರತಿಬಿಂಬರು; ಇಂದ್ರದೇವರು ಮೂವರಿಗೆ ಪ್ರತಿಬಿಂಬ; ಈ ಅರ್ಥದಲ್ಲಿ ಇಲ್ಲಿಯ 'ಚತುರ್ಮುಖಾಭಾನ್' ಎಂಬ ಪದವು ಸಾರ್ಥಕವಾಗಿದೆ.

೪) ವಾಯು – ಭಾರತಿಯರಿಂದ ಇವರೆಲ್ಲ ಜನಿಸಿದ ವಿವರವನ್ನು ಮೂರನೆಯ ಅಧ್ಯಾಯದಲ್ಲಿ ತಿಳಿಸಿರುವರು (೩/೧೨. ೧೩).

---

೧೭೦. ಮುಖ್ಯತಃ ಸರ್ವವಿದ್ಯಾಸು ಅಪರಾಜಿತೋ ಭೀಮಃ ಭೀಮಸ್ಯಾನಂತರಂ ಬಲರಾಮಃ ಬಲರಾಮಾಸ್ಯಾನಂತರಂ ಫಲ್ಗುನ ಇತಿ ಕೃಷ್ಣೇನ ಭೀಮೇನ ರೌಹಿಣೇಯೇನ ಚ ಜ್ಞಾತತ್ವಾದಪರಾಜಿತಾನಾಂ ಮಧ್ಯೇ ಭೀಮ ಆದ್ಯಃ ಬಲರಾಮೋ ದ್ವಿತೀಯಃ ಅರ್ಜುನಸ್ತೃತೀಯಃ ಪ್ರದ್ಯುಮ್ನಶ್ಚತುರ್ಥ ಇತಿ । – (ಸ.)

೧೭೧. ಚತುರ್ಮುಖಾಭಾನ್ ವಿಸಂಜ್ಞಯಾ ವಾಯುಶ್ಚತುರ್ಮುಖಃ ತಸ್ಯ ಪುತ್ರತ್ವೇ ಆಭಾನ್ ಯೋಗ್ಯಾನ್ । – (ಜ)
ಚತುರ್ಮುಖಸದೃಶಾನ್ । – (ವ)

೫) ದ್ರೌಪದಿಯು ಭಾರತಿಯ ಅವತಾರ ಮತ್ತು ಅವರು ಶೇಷಾದಿಗಳಿಗಿಂತ ಮಿಗಿಲು ಎಂಬ ವಿಚಾರಗಳು ಈ ವಾಕ್ಯಗಳಿಂದ ಸ್ಫುಟಪಡುತ್ತವೆ.

ಭೀಮನ ಅನಂತರ ಬಲರಾಮ

ಯಸ್ಯಾಧಿಕೋ ಬಲೇ ನಾಸ್ತಿ ಭೀಮಸೇನಮೃತೇ ಕ್ವಚಿತ್ ।
ನ ವಿಜ್ಞಾನೇ ನ ಚ ಜ್ಞಾನೇ ಏಷ ರಾಮಃ ಸ ಲಾಂಗಲೀ ॥ ೧೭೨ ॥

ಯಸ್ಯ ನ ಪ್ರತಿಯೋದ್ಧಾಽಸ್ತಿ ಭೀಮಮೇಕಮೃತೇ ಕ್ವಚಿತ್ ।
ಅನ್ವಿಷ್ಯಾಪಿ ತ್ರಿಲೋಕೇಷು ಸ ಏಷ ಮುಸಲಾಯುಧಃ ॥ ೧೭೩ ॥

ಅ: ಭೀಮನೊಬ್ಬನನ್ನು ಬಿಟ್ಟು ಬಲದಲ್ಲಾಗಲೀ, ಜ್ಞಾನದಲ್ಲಾಗಲೀ, ವಿಜ್ಞಾನದಲ್ಲಾಗಲೀ, ಯಾರಿಗಿಂತ ಮಿಗಿಲಾದ ಮತ್ತೊಬ್ಬನು ಎಲ್ಲೂ ಇಲ್ಲವೋ ಅಂತಹ ನೇಗಿಲಪಾಣಿ ಬಲರಾಮ ಇವನು.

ಮೂರುಲೋಕಗಳಲ್ಲಿ ಎಷ್ಟೇ ಹುಡುಕಿದರೂ ಭೀಮನೊಬ್ಬನ ಹೊರತು ಯಾವನಿಗೆ ಮತ್ತೊಬ್ಬ ಪ್ರತಿವೀರನೇ ಇಲ್ಲವೋ ಅಂತಹ ಮುಸಲಾಯುಧನಾದ ಬಲರಾಮನು ಇವನು.

ವಿ: ೧) ಭೀಮಸೇನನ ಅನಂತರದ ಸ್ಥಾನ ಬಲರಾಮನದು; ಅವನಿಗೆ ಇಂದ್ರಾದಿ ಯಾರೂ ಸಮರಲ್ಲ ಎಂದು ಭಾವ.

೨) ಭೀಮಸೇನನು ವಾಯುದೇವರ ಅವತಾರ; ಬಲರಾಮನು ಶೇಷಾವತಾರ; ಆದ್ದರಿಂದ ವಾಯುದೇವರ ಅನಂತರದ ಸ್ಥಾನ ಶೇಷದೇವರದು; ಇಂದ್ರಾದಿಗಳಿಗಿಂತ ಅವರು ಮಿಗಿಲು ಎಂದು ಭಾವ.

೩) ಇಲ್ಲಿ ಶೇಷ ಶಬ್ದದಿಂದ ಅವರಿಗೆ ಸಮರಾದ ರುದ್ರ ಮತ್ತು ಗರುಡರನ್ನು ಸಹ ತೆಗೆದುಕೊಳ್ಳಬೇಕು.

೪) **'ಲಾಂಗಲೀ', 'ಮುಸಲಾಯುಧಃ'** ಎಂಬ ಪದಗಳಿಂದ ಬಲರಾಮದೇವರ ಮುಖ್ಯ ಆಯುಧಗಳು ನೇಗಿಲು ಮತ್ತು ಒನಕೆ ಎಂಬುದು ತಿಳಿಯುತ್ತದೆ.

---

೧೭೨. ಶೇಷಸ್ಯ ಇಂದ್ರಾಧಿಕ್ಯೇ ಭಾರತಮುದಾಹರತಿ ।

೧೭೩.. ಅನ್ವಿಷ್ಯಾಪಿ ಅನ್ವೇಷಣೇ ಕೃತೇ ಅಪಿ ಅನಿಷ್ಪನ್ನಸ್ಥಸ್ಯ ಯಸ್ಯೇತಿ ವಾ । –(ಜ)

೧೭೩.. ಅಜೇಯೋ ಹ್ಯರ್ಜುನಃ ಸಂಖ್ಯೇ ಪೃಷ್ಠಗೋಪೇ ವೃಕೋದರೇ । - ಭಾರತ (೧/೨೦೦/೧೩)

೫) ಇವೆರಡು ಭಾರತವಾಕ್ಯಗಳು ಹಾಗೂ 'ಭೀಮಶ್ಚ ಬಲಭದ್ರಶ್ಚ,' ಎಂಬ ಈ ಮೊದಲು ಉದಾಹೃತಶ್ಲೋಕವು ಸಹ ಭೀಮಸೇನನ ಅನಂತರದ ಸ್ಥಾನ ಬಲರಾಮನದು ಎಂಬುದಕ್ಕೆ ಸಾಧಕ.

ಭೀಮ ಬಲರಾಮರ ಅನಂತರ ಅರ್ಜುನ

ತಥಾ ಯುಧಿಷ್ಠಿರೇಣೈವ ಭೀಮಾಯ ಸಮುದೀರಿತಮ್ ।
ಅನುಜ್ಞಾತೋ ರೌಹಿಣೇಯಾತ್ ತ್ವಯಾ ಚೈವಾಪರಾಜಿತಃ ।
ಸರ್ವವಿದ್ಯಾಸು ಬೀಭತ್ಸುಃ ಕೃಷ್ಣೇನ ಚ ಮಹಾತ್ಮನಾ ॥ ೧೭೪ ॥

ಅನ್ವೇಷ ರೌಹಿಣೇಯಂ ಚ ತ್ವಾಂ ಚ ಭೀಮಾಪರಾಜಿತಮ್ ।
ವೀರ್ಯೇ ಶೌರ್ಯೇ ಬಲೇ ನಾನ್ಯಸ್ತೃತೀಯಃ ಫಲ್ಗುನಾದೃತೇ ॥ ೧೭೫ ॥

ಅ: ಹಾಗೆಯೇ ಧರ್ಮರಾಜನಿಂದ ಭೀಮನಿಗೆ ಹೇಳಲ್ಪಟ್ಟ ಮಾತು ಹೀಗಿದೆ: 'ಭೀಮಸೇನ! ಅರ್ಜುನನು ಬಲರಾಮನಿಂದಲೂ, ನಿನ್ನಿಂದಲೂ ಮಹಾತ್ಮನಾದ ಶ್ರೀಕೃಷ್ಣನಿಂದಲೂ ಸಕಲವಿದ್ಯೆಗಳಲ್ಲಿ ಅನುಜ್ಞಾತನಾಗಿರುವುದರಿಂದ ಅಪರಾಜಿತನಾಗಿರುವನು;' 'ಭೀಮ! ಬಲರಾಮ, ಮತ್ತು ನಿನ್ನ ಅನಂತರ ಅಪರಾಜಿತನೆಂದರೆ ಈ ಅರ್ಜುನನು; ವೀರತನ, ಶೂರತನ ಮತ್ತು ಬಲ ಇವುಗಳಲ್ಲಿ ಅರ್ಜುನನನ್ನು ಬಿಟ್ಟು ಮೂರನೆಯನವನಾದ ಮತ್ತೊಬ್ಬನು ಇಲ್ಲವೇ ಇಲ್ಲ.'

ವಿ: ೧) ''ಬಲರಾಮನ ಅನಂತರದ ಸ್ಥಾನ ಅರ್ಜುನನದು; ಅನಿರುದ್ಧಾದಿಗಳಿಗಿಂತ ಅವನೇ ಶ್ರೇಷ್ಠನು'' ಎಂಬುದನ್ನು ತಿಳಿಸುವ ಭಾರತವಾಕ್ಯಗಳನ್ನು ಉಲ್ಲೇಖಿಸಿರುವರು.

೨) ಶ್ರೀಕೃಷ್ಣ ಭೀಮ ಮತ್ತು ಬಲರಾಮರ ಅನುಗ್ರಹದಿಂದ ಅರ್ಜುನನು ಅಪರಾಜಿತನಾಗಿರುವನು; ಭೀಮ ಮತ್ತು ಬಲರಾಮರ ಅನಂತರ ಮಹಾಭಾರತಕಾಲದ ಮಹಾವೀರನೆಂದರೆ ಅರ್ಜುನನೇ ಸರಿ; ಅವನಿಗೆ ಸಮನಾದ ಅಂತಹ ವೀರ ಮತ್ತೊಬ್ಬನಿಲ್ಲ ಎಂದು ಭಾವ.

---

೧೭೪. ಅನಿರುದ್ಧಾದಿಭ್ಯಃ ಅರ್ಜುನಸ್ಯ ಶ್ರೈಷ್ಠ್ಯೇ ಭಾರತವಾಕ್ಯಮುದಾಹರತಿ । –(ಜ)

ಯಸ್ಮಾತ್ ಕಾರಣಾತ್ ಬೀಭತ್ಸುಃ ರೌಹಿಣೇಯಾತ್ ತ್ವಯಾ ಚ ಮಹಾತ್ಮನಾ ಕೃಷ್ಣೇನ ಚ ಸರ್ವವಿದ್ಯಾಸು ಅನುಜ್ಞಾತಃ ಅನುಜ್ಞಾಂ ಪ್ರಾಪ್ತವಾನ್ । ತಸ್ಮಾದಪರಾಜಿತಃ ಇತಿ ಯೋಜನಾ । ಅನೇನ ಕೃಷ್ಣಾತ್ ವಾಯೋರ್ಬಲರಾಮಾಚ್ಚ ಅನಂತರಮರ್ಜುನ ಇತ್ಯುಕ್ತಂ ಭವತಿ । 'ವ್ಯತ್ಯಯೋ ಬಹುಲಮ್' ಇತಿ ವಚನಾತ್ ತ್ವಮನು ತ್ವತ್ತೋऽನು ಅನಂತರಂ ರೌಹಿಣೇಯಮನು ರೌಹಿಣೇಯಾದನು ಅನಂತರಂ ಇತ್ಯರ್ಥಃ । –(ವಾ)

೧೭೪. ಸಂಕರ್ಷಣಂ ಮಹಾವೀರ್ಯಂ ತ್ವಾಂ ಚ ಭೀಮಾಪರಾಜಿತಮ್ ।
ಅನುಯಾತಃ ಸ್ವವೀರ್ಯೇಣ ವಾಸುದೇವಂ ಚ ಶತ್ರುಹಾ ॥ –ಇತಿ ವನಪರ್ವ

೩) ಇದರಿಂದ ಇಂದ್ರಾದಿ ದೇವತೆಗಳು ಅವರಿಗಿಂತ ಕಡಿಮೆ, ಇತರ ಸಕಲ ದೇವತೆಗಳಿಗಿಂತಲೂ ಉತ್ತಮರು ಎಂದು ಸಿದ್ಧವಾಗುತ್ತದೆ.

ತಥೈವ ದ್ರೌಪದೀವಾಕ್ಯಂ ವಾಸುದೇವಂ ಪ್ರತೀರಿತಮ್ ।
ಅಧಿಜ್ಯಮಪಿ ಯತ್ಕರ್ತುಂ ಶಕ್ಯತೇ ನೈವ ಗಾಂಡಿವಮ್ ।
ಅನ್ಯತ್ರ ಭೀಮಪಾರ್ಥಾಭ್ಯಾಂ ಭವತಶ್ಚ ಜನಾರ್ದನ ॥ ೧೭೬ ॥

ಅ: ವಾಸುದೇವನನ್ನು ಕುರಿತ ದ್ರೌಪದೀವಾಕ್ಯವೂ ಹೀಗೆಯೇ ಇದೆ: ''ಶ್ರೀಕೃಷ್ಣ! ನಿನ್ನನ್ನು ಮತ್ತೆ ಭೀಮಾರ್ಜುನರನ್ನು ಬಿಟ್ಟು ಬೇರಾರಿಗೂ ಗಾಂಡೀವಧನುಸ್ಸಿನ ಹಗ್ಗವನ್ನು ಕಟ್ಟಲು ಸಹ ಸಾಧ್ಯವಿಲ್ಲ!

ವಿ: ೧) ಇದು ವನವಾಸದಲ್ಲಿದ್ದ ತಮ್ಮನ್ನು ಸಾಂತ್ವನಪಡಿಸಲು ಬಂದ ಶ್ರೀಕೃಷ್ಣನನ್ನು ಕುರಿತು ದ್ರೌಪದಿಯು ನುಡಿದ ಮಾತು; ಮಹಾಭಾರತದ ಎಲ್ಲಾ ಮುದ್ರಿತಪ್ರತಿಗಳಲ್ಲೂ ಸಣ್ಣ ಪುಟ್ಟ ವ್ಯತ್ಯಾಸಗಳೊಂದಿಗೆ ಈ ಶ್ಲೋಕ ಉಪಲಬ್ಧವಿದೆ.

೨) ಭೀಮನು ಅರ್ಜುನನಿಗಿಂತ ಶ್ರೇಷ್ಠನಾದ ಧನುರ್ಧರ ಎಂಬುದಕ್ಕೂ ಈ ವಾಕ್ಯ ಪ್ರಮಾಣವಾಗಿದೆ.

ಅರ್ಜುನನ ಹಿರಿಮೆಯ ರಹಸ್ಯ

ತಥೈವಾನ್ಯತ್ರ ವಚನಂ ಕೃಷ್ಣದ್ವೈಪಾಯನೇರಿತಮ್ ।
ದ್ವಾವೇವ ಪುರುಷೌ ಲೋಕೇ ವಾಸುದೇವಾದನಂತರೌ ।
ಭೀಮಸ್ತು ಪ್ರಥಮಸ್ತತ್ರ ದ್ವಿತೀಯೋ ದ್ರೌಣಿರೇವ ಚ ॥ ೧೭೭ ॥

ಅಕ್ಷಯಾವಿಷುಧೀ ದಿವ್ಯೌ ಧ್ವಜೋ ವಾನರಲಕ್ಷಣಃ ।
ಗಾಂಡೀವಂ ಧನುಷಾಂ ಶ್ರೇಷ್ಠಂ ತೇನ ದ್ರೌಣೇರ್ವರೋಽರ್ಜುನಃ ॥ ೧೭೮ ॥

---

೧೭೬. ಜ್ಯಾಮಧಿವರ್ತಮಾನಂ ಅಧಿಜ್ಯಂ ಜ್ಯಾಸಹಿತಮಿತ್ಯರ್ಥಃ । – (ಜ)

೧೭೬. ಅನ್ಯತ್ರ – ಅನ್ಯೈಃ । – (ವ)

೧೭೬. ಭಾರತ (ವನ. ೧೨/೭೭)

ಅ: ಬೇರೆಡೆ ಶ್ರೀವೇದವ್ಯಾಸರು ಹೇಳುವ ವಚನವೂ ಹೀಗೆಯೇ ಇದೆ; ''ಶ್ರೀಕೃಷ್ಣನ ಅನಂತರ ಉತ್ತಮರಾದ ಪುರುಷರು ಎಂಬುದಾಗಿ ಹೇಳಲ್ಪಟ್ಟಿರುವ ಪುರುಷರು ಇಬ್ಬರು ಮಾತ್ರ; ಭೀಮಸೇನ ಅವರಲ್ಲಿ ಪ್ರಥಮ; ಅಶ್ವತ್ಥಾಮ ಎರಡನೆಯವರು; ದಿವ್ಯವಾದ ಎರಡು ಅಕ್ಷಯಬತ್ತಳಿಕೆಗಳು, ಹನುಮಂತನ ಚಿಹ್ನೆಯಿಂದ ಕೂಡಿದ ಧ್ವಜ, ಧನಸ್ಸುಗಳಲ್ಲಿ ತುಂಬಾ ಶ್ರೇಷ್ಠವಾದ ಗಾಂಡೀವ; ಇವುಗಳಿಂದಾಗಿ ಅರ್ಜುನನು ಅಶ್ವತ್ಥಾಮರನ್ನು ಮೀರಿಸಿರುವನು.''

ವಿ: ೧) ಶೇಷಾವತಾರನಾದ ಬಲರಾಮನಂತೆ ರುದ್ರಾವತಾರರಾದ ಅಶ್ವತ್ಥಾಮರದು ಸಹ ಭೀಮಸೇನನ ಅನಂತರದ ಸ್ಥಾನವೇ ಆಗಿದೆ; ಶೇಷರುದ್ರರಿಬ್ಬರೂ ಸಮರಾಗಿರುವುದೇ ಇದಕ್ಕೆ ಕಾರಣ.

೨) ಕೆಲವೊಮ್ಮೆ ಯುದ್ಧದಲ್ಲಿ ಅರ್ಜುನನು ಅಶ್ವತ್ಥಾಮರಿಗಿಂತ ಮಿಗಿಲು ಎಂಬಂತೆ ಕಂಡಿರುವುದು ನಿಜ. ಅದಕ್ಕೆ ಅರ್ಜುನನಲ್ಲಿದ್ದ ಅಕ್ಷಯಬತ್ತಳಿಕೆಗಳು; ಹನುಮದ್ಧ್ವಜ ಮತ್ತು

---

೧೭೭. ದ್ರೌಣೇಸ್ತೃತೀಯಸ್ಯ ಸತ್ವಾತ್ ಕಥಂ 'ನಾನ್ಯಸ್ತೃತೀಯಃ' ಇತ್ಯುಕ್ತಮಿತ್ಯತೋ ದ್ರೌಣಿರ್ದ್ವಿತೀಯ ಏವ ನ ತೃತೀಯಃ ಇತ್ಯತ್ರ ಭಾರತಗತಂ ವ್ಯಾಸವಾಕ್ಯಮುದಾಹರತಿ – ತಥೇತಿ। –(ಜ)

ಪೂರ್ವಂ ಭೀಮಾದನಂತರಂ ಶೇಷರೂಪರಾಮ ಇತ್ಯುಕ್ತಮ್। ಅಧುನಾ ರುದ್ರರೂಪೀ ದ್ರೌಣಿಸ್ತಥೇತ್ಯಾಹ। ದ್ವಾವೇವ ಇತಿ। -(ವಾ)

ನನು ಬಲಭದ್ರಾನಂತರತ್ವೇನ ಅಶ್ವತ್ಥಾಮ್ನೋ ವಕ್ತವ್ಯತ್ವೇ ಅರ್ಜುನಸ್ಯ ತೃತೀಯತ್ವೇನ ಕಥಮುಕ್ತಿರಿತ್ಯತೋ ಬಲಭದ್ರನಿರೂಪಣೇ ಅಶ್ವತ್ಥಾಮಾऽಪಿ ವ್ಯಾಖ್ಯಾತ ಇತ್ಯಭಿಪ್ರಾಯೇಣ ಸಿಂಹಾವಲೋಕನನ್ಯಾಯೇನ ತತ್ಪ್ರಮಾಣಂ ದರ್ಶಯಿತುಮಾಹ। 'ತಥೈವೇತಿ'। –(ವ)

೧೭೭. ಲಕ್ಷ್ಮೀವ್ಯಾವೃತ್ಯರ್ಥಂ ಪುರುಷೌ ಇತ್ಯುಕ್ತಮ್। ತತ್ರಾಪಿ ಸಾಮ್ಯಂ ನ ಮಂತವ್ಯಂ ಇತ್ಯಾಹ ಭೀಮಸ್ತ್ವಿತಿ। –(ವ.)

೧೭೮. ನನು ಕ್ವಚಿದ್ಯುದ್ಧೇ ದ್ರೌಣೇರಪ್ಯಧಿಕಂ ಸಾಮರ್ಥ್ಯಂ ಅರ್ಜುನಸ್ಯ ಶ್ರೂಯತೇ ತದ್ಘಟನಾಯಾಹ। ಅಕ್ಷಯಾವಿತಿ। ಅನ್ಯೋಪಾಧಿಕಮೇವಾರ್ಜುನಸ್ಯ ಆಧಿಕ್ಯಂ ನ ತು ಸ್ವರೂಪತಃ ಇತಿ ಭಾವಃ। –(ವಾ)

೧೭೮. ಇಷುಧೀಶಬ್ದಸ್ಯ ಪುಲ್ಲಿಂಗತ್ವಮಾಶ್ರಿತ್ಯ ಅಕ್ಷಯಾವಿಷುಧೀ ಇತ್ಯುಕ್ತಮ್। ಸ್ತ್ರೀಲಿಂಗತ್ವಂ ಚಾಶ್ರಿತ್ಯ ದಿವ್ಯೇ ಇತಿ। ತಯೋರಕ್ಷಯತ್ವಂ ನಾಮ ಅಕ್ಷಯಬಾಣಪೂರ್ಣತ್ವಂ ಇತಿ ದ್ರಷ್ಟವ್ಯಮ್। –(ವ.)

೧೭೮. 'ಇಷುಧಿಶಬ್ದಃ ಉಭಯಲಿಂಗಃ' ಇತಿ ಜ್ಞಾಪನಾರ್ಥಂ ತಾದೃಶಂ ವಿಶೇಷಣದ್ವಯಮುಕ್ತಮ್। ಇಷುಧಿ-ರ್ದ್ವಯೋರಿತ್ಯಮರಃ। ಔಪಾಧಿಕಂ ಶ್ರೈಷ್ಠ್ಯಮರ್ಜುನಸ್ಯ ನ ಸ್ವಾಭಾವಿಕಮಿತ್ಯರ್ಥಃ। –(ಜ)

೧೭೮. ಅಕ್ಷಯಾವಿಷುಧೀ ಇತ್ಯತ್ರ ಅಕ್ಷಯಬಾಣಾವಿಷುಧೀ ಇತ್ಯರ್ಥಃ। –(ಸ.)

೧೭೮. ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾತ್ ಹನೂಮತಃ।
ಗಾಂಡೀವತ್ವಾತ್ ಕಾರ್ಮುಕಸ್ಯ ಚೇಷುಧ್ಯೋರಕ್ಷಯತ್ವತಃ॥
ಅವಧ್ಯತ್ವಾತ್ ತಥಾऽಶ್ವಾನಾಮಭೇದ್ಯತ್ವಾದ್ರಥಸ್ಯ ಚ।
ಅತೋ ಯೋದ್ಧುಂ ಸಮರ್ಥೋऽಪಿ ನಾದ್ಯ ಯಾಮಿ ಧನಂಜಯಮ್॥ (೨೭/೬೨,೬೩)

ಗಾಂಡೀವಧನುಸ್ಸುಗಳೇ ಕಾರಣ ಎಂದರೆ ಅಶ್ವತ್ಥಾಮರ ಹಿರಿಮೆ ಸಹಜವಾದುದು; ಅರ್ಜುನನ ಹಿರಿಮೆ ಔಪಾಧಿಕವಾದುದು ಎಂದು ಭಾವ.

ಅಧ್ಯಾಯದ ಉಪಸಂಹಾರ

ಇತ್ಯಾದ್ಯನಂತವಾಕ್ಯಾನಿ ಸಂತ್ಯೇವಾರ್ಥೇ ವಿವಕ್ಷಿತೇ ।
ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ ॥ ೧೭೯ ॥

ತಸ್ಮಾದುಕ್ತಕ್ರಮೇಣೈವ ಪುರುಷೋತ್ತಮತಾ ಹರೇಃ ।
ಅನೌಪಚಾರಿಕೀ ಸಿದ್ಧಾ ಬ್ರಹ್ಮತಾ ಚ ವಿನಿರ್ಣಯಾತ್ ॥ ೧೮೦ ॥

ಅ: ವಿವಕ್ಷಿತವಾದ ವಿಷ್ಣುಸರ್ವೋತ್ತಮತ್ವಾದಿ ಪ್ರಮೇಯಗಳ ವಿಷಯದಲ್ಲಿ ಇವೇ ಮೊದಲಾದ ಅನಂತ ವಾಕ್ಯಗಳು ಇವೆ; ದಿಙ್ಮಾತ್ರ ಪ್ರದರ್ಶನಕ್ಕೋಸ್ಕರ ಇಲ್ಲಿ ಕೆಲವು ವಾಕ್ಯಗಳು ಮಾತ್ರ ಹೀಗೆ ಉದಾಹರಿಸಲ್ಪಟ್ಟಿವೆ; ಆದ್ದರಿಂದ ಈವರೆಗೆ ನಿರೂಪಿತವಾದ ಕ್ರಮದಲ್ಲಿ ಶ್ರೀಹರಿಯ ಸ್ವಾಭಾವಿಕವಾದ ಪುರುಷೋತ್ತಮತ್ವವೂ, ಅದರಂತೆಯೇ ಅವನ ಪರಬ್ರಹ್ಮತ್ವವೂ ಸಹ ಉಚಿತವಾಗಿ ಸಿದ್ಧವಾಗುತ್ತವೆ.

ವಿ: ಶ್ರೀಮದಾಚಾರ್ಯರು ಪ್ರಥಮಾಧ್ಯಾಯದಲ್ಲಿ

ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ ರಾಮಾಯಣೈಃ ಸಹಿತಭಾರತಪಂಚರಾತ್ರೈಃ।
ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥

– ಎಂದು ಹೇಳಿರುವುದನ್ನು ಗಮನಿಸಬೇಕು.

---

೧೭೯. ಅನಂತತ್ವಾದುಪರಮ್ಯತೇ ಇತಿ ಭಾವಃ। –(ಜ)
ವಾಕ್ಯಾನಾಂ ಅನಂತತ್ವೇನ ಸಾಕಲ್ಯೇನ ಉದಾಹರ್ತುಂ ಅಶಕ್ಯತ್ವಾತ್ ಉಪರಮ್ಯತೇ ಇತಿ ಭಾವಃ। –(ವ)
೧೭೯. ದಿಕ್ ಏವ ದಿಙ್ಮಾತ್ರಂ ತಸ್ಯ ಪ್ರತಿಪತ್ತಯೇ ಜ್ಞಾನಾಯ ಮಾರ್ಗಪ್ರದರ್ಶನಾರ್ಥಮ್। –(ಜ)
೧೭೯. ಅನಂತೇಷು ವಾಕ್ಯೇಷು ಕಾನಿಚಿದೇವ ವಾಕ್ಯಾನಿ ಮಾರ್ಗಮಾತ್ರಪ್ರದರ್ಶನಾರ್ಥಂ ಉದಾಹೃತ್ಯ ದರ್ಶಿತಾನಿ ಇತ್ಯರ್ಥಃ। –(ವ)
೧೮೦. ಬ್ರಹ್ಮತಾ – ಪರಬ್ರಹ್ಮತಾ। – (ವಾ.)
ಬ್ರಹ್ಮತಾ – ಗುಣಪೂರ್ಣತಾ। –(ಜ.)
ಬ್ರಹ್ಮತಾ – ಪೂರ್ಣತಾ। –(ವ.)
೧೮೦. ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥
– ಮೊದಲಾದ ಮಾತುಗಳನ್ನು ಸಹ ಇಲ್ಲಿ ಗಮನಿಸಬೇಕು.

ಪೂರ್ಣಪ್ರಜ್ಞಕೃತೇಯಂ ಸಂಕ್ಷೇಪಾದುದ್ಧೃತಿಃ ಸುವಾಕ್ಯಾನಾಮ್ ।
ಶ್ರೀಮದ್ಭಾರತಗಾನಾಂ ವಿಷ್ಣೋಃ ಪೂರ್ಣತ್ವನಿರ್ಣಯಾಯೈವ ॥ ೧೮೧ ॥

ಅ: ವಿಷ್ಣುವಿನ ಪೂರ್ಣತ್ವವನ್ನು ನಿರ್ಣಯಿಸಿ ತಿಳಿಸಲೆಂದೇ ಶ್ರೀಮದ್ಭಾರತದಲ್ಲಿನ ಉತ್ತಮ ವಾಕ್ಯಗಳ ಈ ಸಂಕ್ಷೇಪವಾದ ಉದಾಹರಣೆಯು ಪೂರ್ಣಪ್ರಜ್ಞರಿಂದ ಮಾಡಲ್ಪಟ್ಟಿತು.

ಸ ಪ್ರೀಯತಾಂ ಪರತಮಃ ಪರಮಾದನಂತಃ
ಸಂತಾರಕಃ ಸತತಸಂಸೃತಿದುಸ್ತರಾರ್ಣಾತ್ ।
ಯತ್ಪಾದಪದ್ಮಮಕರಂದಜುಷೋ ಹಿ ಪಾರ್ಥಾಃ
ಸ್ವಾರಾಜ್ಯಮಾಪುರುಭಯತ್ರ ಸದಾ ವಿನೋದಾತ್ ॥ ೧೮೨ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಭಾರತವಾಕ್ಯೋದ್ಧಾರೋ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಅ: ಶ್ರೀಹರಿಯು ಉತ್ತಮರೆಂದು ಪ್ರಸಿದ್ಧರಾದ ಬ್ರಹ್ಮಾದಿಗಳಿಗಿಂತಲೂ ಅತ್ಯಂತ ಉತ್ತಮ; ದೇಶತಃ ಕಾಲತಃ ಮತ್ತು ಗುಣತಃ ಅನಂತ; ಅನಾದಿಯಾದ ಸಂಸಾರವೆಂಬ ದುಸ್ತರವಾದ ಸಾಗರದಿಂದ ತನ್ನ ಭಕ್ತರನ್ನು ಪಾರುಮಾಡುವವನು; ಸದಾ ಅವನ ಪಾದಕಮಲದ ಮಧುವನ್ನು ಸೇವಿಸುವವರಾಗಿಯೇ ಕುಂತೀಪುತ್ರರು ಇಹ ಮತ್ತು ಪರ ಎರಡರಲ್ಲೂ ಉತ್ತಮವಾದ ಸಾಮ್ರಾಜ್ಯವನ್ನು ಲೀಲೆಯಿಂದ ಪಡೆದುಕೊಂಡರು; ಅಂತಹ ಶ್ರೀಹರಿಯು ಪ್ರಸನ್ನನಾಗಲಿ.

---

೧೮೧. ಅತ್ರ ಅನ್ಯೇಷಾಮಪಿ ಸುವಾಕ್ಯಾನಾಂ ಉದಾಹರಣೇಽಪಿ ಪ್ರಾಧಾನ್ಯಾಪೇಕ್ಷಯಾ ಶ್ರೀಮದ್ಭಾರತಗಾನಾಮಿತ್ಯುಕ್ತಮ್ । ಅತ ಉಪಕ್ರಮೇಽಪ್ಯುಕ್ತಂ ಭಾರತಾರ್ಥಾನುಸಾರತಃ ಇತ್ಯಾದಿ । –(ವ)

೧೮೨. ಅಧ್ಯಾಯದ್ವಿತಯೇನ ಹರೇಃ ಸರ್ವೋತ್ತಮತ್ವೇ ತದಿತರದೇವತಾತಾರತಮ್ಯೇ ಚ ಬಹೂನಿ ಶ್ರುತೀತಿಹಾಸಪಂಚರಾತ್ರಪುರಾಣವಾಕ್ಯಾನಿ ಉದ್ಧೃತ್ಯ ಸ್ವಕೃತಸಕಲಶಾಸ್ತ್ರತಾತ್ಪರ್ಯನಿರ್ಣಯಾಖ್ಯೇ ಹರಿಸೇವಾಯಾಃ ಋಜುಕುಲೋತ್ಪನ್ನತಯಾ ನಿರುಪಾಧಿಕಭಕ್ತಸ್ಯ ಮಮ ವಿಷ್ಣುಪ್ರಸಾದ ಏವ ಫಲಂ ನಾನ್ಯದಪೇಕ್ಷಿತಮಿತಿಭಾವೇನ ಆಹ । ಸ ಪ್ರೀಯತಾಮಿತಿ । –(ವಾ)

೧೮೨. ಯಂ ನತ್ವಾ ನಿರ್ಣಯಃ ಕೃತಃ ತಸ್ಯೈವ ಪ್ರೀತಿಮಾಶಾಸ್ತೇ । –(ಜ)

೧೮೨. ಅತ ಏವ ಪರಮಾದುತ್ತಮತ್ವೇನ ಪ್ರಸಿದ್ಧಬ್ರಹ್ಮಾದಿಜಗತೋಽಪಿ ಅತಿಶಯೇನ ಪರಃ ಪರತಮಃ ರಾಜಭಟಾದ್ರಾಜ್ಞ ಇವ ನ ಕಿಂಚಿದಾಧಿಕ್ಯೇನ ಪರತ್ವಂ ಕಿಂತು ಪರಮತ್ವಮಪಿ ನಿರವಧಿಕಮಿತಿಭಾವೇನ ಪರತಮ ಇತ್ಯುಕ್ತಮ್ । –(ವಾ)

ಜಲವಾಚ್ಯರ್ಣಶಬ್ದಾತ್ ಮತ್ವರ್ಥೇ ಡ ಪ್ರತ್ಯಯೇ ಕೃತೇ ಅರ್ಣಃ ಸಮುದ್ರ ಇತಿ ಸಿದ್ಧ್ಯತಿ । – (ಜ)

ಎ: ೧) ಮೊದಲ ಎರಡು ಅಧ್ಯಾಯಗಳಲ್ಲಿ ಶ್ರೀಹರಿಯ ಸರ್ವೋತ್ತಮತ್ವ ಮತ್ತು ಇತರ ದೇವತೆಗಳ ತಾರತಮ್ಯ ಮೊದಲಾದ ಸಕಲಶಾಸ್ತ್ರಗಳ ಮುಖ್ಯಪ್ರಮೇಯಗಳನ್ನು ಶ್ರುತಿ, ಇತಿಹಾಸ, ಪುರಾಣಾದಿ ಪ್ರಮಾಣವಚನಗಳ ಉದಾಹರಣೆಯ ಮೂಲಕ ನಿರ್ಣಯಿಸಿ, ತಾವು ಮಾಡಿದ ಆ ಶ್ರೀಹರಿಸೇವೆಗೆ ಪರದೇವತೆಯಾದ ಅವನ ಪ್ರಸಾದದ ಹೊರತು ಬೇರಾವುದೂ ಋಜುಕುಲೋತ್ಪನ್ನರಾದ ತಮಗೆ ಅಪೇಕ್ಷಿತವಲ್ಲ ಎಂದು ಇದರಲ್ಲಿ ತಿಳಿಸಿರುವರು.

೨) ರಾಜರು ರಾಜಭಟರಿಗಿಂತ ಉತ್ತಮರಾಗಿದ್ದರೂ, ಅದು ನಿರವಧಿಕವಾದ ಉತ್ತಮತ್ವವಲ್ಲ; ಶ್ರೀಹರಿಯು ಬ್ರಹ್ಮಾದಿಗಳಿಗಿಂತ ಹೀಗೆ ಸಾಮಾನ್ಯತಃ ಅಧಿಕನಾಗಿರದೆ ನಿರವಧಿಕವಾಗಿ ಅಧಿಕನಾಗಿರುವನು ಎಂಬುದನ್ನು **'ಪರಮಾತ್ ಪರತಮಃ'** ಎಂಬ ಪದದಿಂದ ಸೂಚಿಸಿರುವರು.

೩) ಅವನು ದಾಟಿಸುವ ಸಾಗರ ಸಾಮಾನ್ಯವಾದ ಸಾಗರವಲ್ಲ; ಅದು ದಾಟಲಾಗದಂತಹ ಸಂಸಾರಸಾಗರ; ಅದನ್ನು ದಾಟಿಸುವುದು ಸಹ ಸಂಸಾರದ ಒಂದು ದ್ವೀಪದಿಂದ ಮತ್ತೊಂದು ದ್ವೀಪಕ್ಕೆ ಅಲ್ಲ; ಇಡೀ ಸಂಸಾರಸಾಗರದಿಂದಲೇ; ಆ ಸಂಸಾರವೂ ಸಹ ಪುಣ್ಯಮಾಡಿದಾಗ ಊರ್ಧ್ವಲೋಕಗಮನ, ಮತ್ತು ಪಾಪಮಾಡಿದಾಗ ಅಧೋಲೋಕಗಮನ ಎಂಬುದಾಗಿ ಸುಖದುಃಖಗಳಿಂದ ತುಂಬಿದಂತಹುದು; ಇವೇ ಮೊದಲಾದ ವಿಚಾರಗಳನ್ನು **'ಸತತಸಂಸೃತಿ–ದುಸ್ತರಾರ್ಣಾತ್'** ಎಂಬ ಪದದಿಂದ ಸೂಚಿಸಿರುವರು; ಇಂತಹ ಸಂಸಾರದಿಂದ ಪಾರು ಮಾಡುವ ಶ್ರೀಹರಿಯು ಸರ್ವೋತ್ತಮ ಎಂದು ಭಾವ.

---

೧೮೨. ಸಂತಾರಕ ಇತ್ಯಪಿ ಪರಮತ್ವೇ ನಿಮಿತ್ತಾಂತರಮ್ । ತಾರಕತ್ವಮಪಿ ಸಮುದ್ರಾವಾಂತರದ್ವೀಪಪ್ರಾಪಕನಾವಾಂ ಸಮುದ್ರೋತ್ತಾರಕತ್ವವನ್ನ ಕಿಂತು ಸಮ್ಯಗಿತಿ ಭಾವೇನೋಕ್ತಂ ಸಂತಾರಕ ಇತಿ । ಸುತರಿತ್ವೇ ತತ್ತಾರಕತ್ವಮಪಿ ನ ಮಹಾಮಹಿಮಾ ಇತ್ಯತಃ ದುಸ್ತರೇತ್ಯುಕ್ತಮ್ । ತತ್ರಾಪಿ ಕಿಂ ಕಾರಣಮಿತ್ಯತಃ ಸತತೇತ್ಯುಕ್ತಮ್ । ಸತತಾ – ಅನಾದಿಭೂತಾ ಸಂಸೃತಿಃ ಏಕಸ್ಯ ಮುಕ್ತಾವಪಿ ಪುನರನ್ಯಸ್ಯ ಸಂಸಾರಸದ್ಭಾವಾತ್ ಸತತಾ ಸಾರ್ವಕಾಲಿಕೀ ವಾ ಸುತರಿತ್ವೇ ಅನಾದಿಕಾಲ- ಮಾರಭ್ಯ ಸಂಸಾರೇ ಮಗ್ನಾಃ ಸ್ವಯಮೇವ ಕುತೋ ನಾವತರನ್ ಇತಿ ಭಾವಃ । ನನು ಕಿಮರ್ಥಂ ಸಂಸಾರಾದುತ್ತರಣಮಿತ್ಯತ ಉಕ್ತಂ ಸಂಸೃತೀತಿ । 'ಸೃಗತೌ' ಇತಿ ಧಾತೋಃ ಸಮ್ಯಕ್ ಸದಾ ಸೃತಿಃ ಊರ್ಧ್ವಾಧೋಲೋಕೇಷು ಸರಣಂ ಗಮನಂ ಯಸ್ಯಾಂ ಸಾ ತಥೋಕ್ತಾ ಸಂಸೃತಿಃ । ಊರ್ಧ್ವಲೋಕಗಮನೇ ಸುಖಂ ಪುನರಧೋ ಲೋಕಗಮನೇ ದುಃಖಮಿತಿ ಸುಖದುಃಖಭರಿತತ್ವಾತ್ ಹೇಯಃ ಸಂಸಾರ ಇತಿ ಭಾವಃ । – (ವಾ.)

೧೮೨. 'ಯತ್ಪಾದಪದ್ಮಮಕರಂದಜುಷೋ ಹಿ' ಇತಿ ಹೇತುಗರ್ಭವಿಶೇಷಣಮ್। ಹರಿಪಾದಸೇವಯೈವಾಪುಃ ನ ತು ಸ್ವಶಕ್ತ್ಯೈವ ಇತಿ ಭಾವಃ। ಅಸ್ಯೈವಾರ್ಥಸ್ಯ ಸ್ಫೋರಣಾಯ ಪಾರ್ಥಾ ಇತ್ಯುಕ್ತಮ್ । – (ವಾ.)

ಪೃಥಾಯಾಃ ಪುತ್ರಾ ಹಿ ಪಾರ್ಥಾಃ । ತಥಾ ಚ ಕೃಷ್ಣಸ್ಯ ಪಿತೃಷ್ವಸಾ ಅರಣ್ಯ ಏವ ಸ್ವಭರ್ತುರ್ಮರಣಾತ್ ಅನಾಥಾ ಚ । ತತ್ಪುತ್ರಾಣಾಂ ಚ ರಾಜ್ಯಂ ನ ಸ್ವಶಕ್ತ್ಯಾ ಕಿಂತು ಸ್ವಮಾತುಲಪುತ್ರಕೃಷ್ಣ ಶಕ್ತ್ಯೈವೇತಿ ಅಥಂ ನ ಬುದ್ಧಿಮತೋ ಮತಮ್ । ಸರ್ವೇಽಪಿ ಸಾಕಾರತಯಾ ಸಗುಣತಯಾ ಸ್ವಸಯೋಗ್ಯತಯಾ ಇತಿ ಸೂಚನಾಯ ವಿಶೇಷಣತ್ರಯಮ್ । – (ವಾ)

೪) ಮಕ್ಕಳಿನ್ನೂ ಚಿಕ್ಕವರಿರುವಾಗಲೇ ಅರಣ್ಯದಲ್ಲಿ ಗಂಡನಾದ ಪಾಂಡುರಾಜನನ್ನು ಕಳೆದುಕೊಂಡವಳು ಕುಂತೀ. ಅಂತಹವಳ ಮಕ್ಕಳಾದ ಪಾಂಡವರಿಗೆ ಕೌರವರಂತಹ ಪ್ರಬಲಶತ್ರುಗಳ ವಿರೋಧವಿದ್ದರೂ, ರಾಜ್ಯದೊರೆತದ್ದು ಅವರ ತಾಯಿಯ ಅಥವಾ ಅವರ ಸ್ವಂತ ಹಿರಿಮೆಯಿಂದಲ್ಲ; ಶ್ರೀಕೃಷ್ಣನ ಅನುಗ್ರಹದಿಂದಲೇ ಎಂಬುದನ್ನು **'ಯತ್ಪಾದಪದ್ಮ-ಮಕರಂದಜುಷೋ ಹಿ ಪಾರ್ಥಾ ಸ್ವಾರಾಜ್ಯಮಾಪುಃ'** ಎಂಬುದಾಗಿ ತಿಳಿಸಿರುವರು.

೫) ಪಾಂಡವರು ಭೂಮಿ ಮತ್ತು ಸ್ವರ್ಗಗಳಲ್ಲಿನ ಕಲ್ಯಾದಿ ಶತ್ರುಗಳನ್ನು ಜಯಿಸಿ ಚಕ್ರವರ್ತಿಗಳಾಗಿ ಪಡೆದದ್ದು ಐಹಿಕ ಸ್ವಾರಾಜ್ಯ; ಬ್ರಹ್ಮ ಇಂದ್ರ ಮೊದಲಾಗಿ ತಮ್ಮ ತಮ್ಮ ಸ್ವರೂಪೋಚಿತವಾದ ಮುಕ್ತಿಯನ್ನು ಪಡೆದದ್ದು ಆಮುಷ್ಮಿಕ ಸಾಮ್ರಾಜ್ಯ; ಹೀಗೆ ಅವರಿಗೆ ದೊರೆತ ಸಾಮ್ರಾಜ್ಯ ಎರಡುವಿಧ ಎಂಬುದನ್ನು **'ಉಭಯತ್ರ'** ಎಂಬ ಪದದಿಂದ ತಿಳಿಸಿರುವರು; ಭಗವದ್ಭಕ್ತರಿಗೆ ಹೀಗೆ ಇಹಪರಗಳೆರಡರಲ್ಲೂ ಹಿರಿಮೆ ಲಭಿಸುವುದು ಎಂಬ ಸೂಚನೆಯೂ ಇಲ್ಲಿದೆ.

೬) ಈ ಎರಡುವಿಧ ಸ್ವಾರಾಜ್ಯವೂ ಅವರಿಗೆ ಶ್ರೀಕೃಷ್ಣಕೃಪೆಯಿಂದ ಅನಾಯಾಸವಾಗಿ ಲಭಿಸಿತು ಎಂಬುದನ್ನು **'ವಿನೋದಾತ್'** ಎಂಬ ಪದದಿಂದ ತಿಳಿಸಿರುವರು.

---

೧೮೨. ಸ್ವಯಮೇವ ರಾಜತೇ ಇತಿ ಸ್ವರಾಟ್ ಸ್ವರಾಜೋ ಭಾವಃ ಸ್ವಾರಾಜ್ಯಮ್ । ಭೂಮೌ ಸ್ವರ್ಗೇ ಚ ಶತ್ರುಭೂತಾನ್ ಕಲ್ಯಾದೀನ್ ನಿಹತ್ಯ ಸ್ವಯಮೇವ ರಾಜಾನೋऽಭವನ್ನಿತಿ ಯತ್ತದಿದಂ ಐಹಿಕಂ ಸಾಮ್ರಾಜ್ಯಮ್ । ಪರತ್ರ ಮುಕ್ತಾವಪಿ ಬ್ರಹ್ಮೇಂದ್ರಾದಿರೂಪತ್ವಾತ್ ಸ್ವಯಮೇವ ರಾಜಾನೋऽಭವನ್ನಿತಿ ಆಮುಷ್ಮಿಕಂ ಸಾಮ್ರಾಜ್ಯಮಿತಿ ಉಭಯತ್ರ ಸ್ವಾರಾಜ್ಯಮ್ । ಅತ ಏವ ಸದೇತ್ಯುಕ್ತಮ್ । –(ವಾ)

ಸ್ವರ್ಗರಾಜ್ಯತುಲ್ಯತ್ವಾದಿಹ ಸ್ವಾರಾಜ್ಯಮ್ । ಮುಕ್ತೌತು ಸ್ವರೂಪಾನಂದಾವಿರ್ಭಾವಾತ್ ಸ್ವಾರಾಜ್ಯಮ್ । -(ಜ)

೧೮೩. ಶ್ರೀಕೃಷ್ಣಕೃಪಯಾ ಉಭಯಮಪಿ ಲೀಲಯೈವ ಪ್ರಾಪ್ತಮಿತಿ ಸೂಚನಾಯ ವಿನೋದಾದಿತ್ಯುಕ್ತಮ್ । –(ವಾ)

೧೮೪. ವನವಾಸಾದಿದುಃಖಸ್ಯ ಅನುಭೂತತ್ವಾತ್ ಕಥಮಿಹ ಸ್ವಾರಾಜ್ಯಮಿತ್ಯುಕ್ತಮಿತ್ಯತ ಆಹ । ಸದೇತಿ । ಸದಾ ಸರ್ವದಾ ವಿನೋದಾತ್ । ತೇನ ವನವಾಸಾದಿಕಂ ತೀರ್ಥಾಟನದೈತ್ಯಹನನಾದಿನಾ ಸುಖಕರಮೇವೇತಿ ಭಾವಃ । –(ಜ)

೧೮೫. ವೇದಶಾಸ್ತ್ರವಿನೋದೇನ ಪ್ರೀಣಯನ್ ಪುರುಷೋತ್ತಮಮ್ ॥ –ಸದಾಚಾರಸ್ಮೃತಿ

೧೮೬. ದುಸ್ತರಾರ್ಣಃ ಮಹಾಪ್ರಯತ್ನಮಂತರೇಣ ತರ್ತುಂ ಅಯೋಗ್ಯಾರ್ಣವಃ । –(ವ)

೧೮೭. ಮತ್ಕರ್ಥೇ ತದ್ಧಿತೋऽರ್ಥೇ ಮತೋऽರ್ಣಸಂಶಬ್ದಸ್ಯ ಉದಕವಾಚಿತ್ವೇऽಪಿ ತತ್ಸಂಬಂಧಲಾಭಾತ್ ಸಮುದ್ರೇ ಲಭ್ಯತೇ । ಅನೇನೈವಾಭಿಪ್ರಾಯೇಣಾರಂಭೇऽಪಿ ನಿಖಿಲಗುಣಾರ್ಣ ಇತ್ಯುಕ್ತಮಿತಿ ದ್ರಷ್ಟವ್ಯಮ್ ।

೧೮೮. ವಾಸುದೇವನ ಗುಣಸಮುದ್ರದೊಳೀಸಬಲ್ಲವ ಭವಸಮುದ್ರಾ-
ಯಾಸವಿಲ್ಲದೆ ಶೀಘ್ರದಲಿ ದಾಟುವನು ಜಗದೊಳಗೆ ॥ –ಹರಿಕಥಾಮೃತಸಾರ (೧೩/೫)

೧೮೯. ಪ್ರಥಮಾಧ್ಯಾಯಾರ್ಥೇ ಭಾರತವಾಕ್ಯೋದ್ಧಾರರೂಪತ್ವಾತ್ ದ್ವಿತೀಯಸ್ಯೋಭಯೋರೇಕತ್ವಾದುಭ-
ಯಾಂತೇ ಮಂಗಲಮಾಚರತಿ– 'ಸ ಪ್ರೀಯತಾಮ್' ಇತಿ ॥ –(ಶ್ರೀ.)

೭) ಪಾಂಡವರು ವನವಾಸಾದಿ ದುಃಖವನ್ನು ಸಹ ಅನುಭವಿಸಿರುವರು ಎಂದು ಶಂಕಿಸಬೇಕಿಲ್ಲ; ಅವರ ವನವಾಸವು ಸಹ ತೀರ್ಥಯಾತ್ರೆ, ದೈತ್ಯವಧೆ ಮೊದಲಾದವುಗಳಿಂದಾಗಿ ಅವರಿಗೆ ಹರ್ಷದಾಯಕವೇ ಆಗಿದ್ದಿತು; ಇದನ್ನು ಸಹ **'ವಿನೋದಾತ್'** ಎಂಬ ಪದದಿಂದ ಸೂಚಿಸಿರುವರು.

೮) ವೇದಶಾಸ್ತ್ರವಿನೋದವೇ ನಿಜವಾದವಿನೋದ ಎಂದು ಶ್ರೀಮದಾಚಾರ್ಯರು **'ಸದಾಚಾರಸ್ಮೃತಿ'**ಯಲ್ಲಿ ತಿಳಿಸಿರುವುದು ಸಹ ಇಲ್ಲಿ ಗಮನಾರ್ಹ.

೯) **'ನಿಖಿಲಗುಣಾರ್ಣಃ'** ಎಂಬುದಾಗಿ ಈ ಅಧ್ಯಾಯದ ಆರಂಭದಲ್ಲಿ ಭಗವಂತನನ್ನು ಸ್ತುತಿಸಿ ಅವನು 'ಸಕಲಸಂಸೃತಿದುಸ್ತರಾರ್ಣಾತ್' ಸಂತಾರಕನಾಗಿರುವನು ಎಂಬುದಾಗಿ ಉಪಸಂಹರಿಸಿರುವರು. ಭಗವಂತನ ಗುಣಸಮುದ್ರದಲ್ಲಿ ವಿಹರಿಸಬಲ್ಲವನಿಗೆ ಸಂಸಾರಸಮುದ್ರವನ್ನು ದಾಟುವುದು ಅಸಾಧ್ಯವಾದ ಕಾರ್ಯವಲ್ಲ ಎಂಬ ಧ್ವನಿಯೂ ಇಲ್ಲಿದೆ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಸರ್ವಶಾಸ್ತ್ರಾರ್ಥನಿರ್ಣಯ'ವೆಂಬ ಎರಡನೆಯ ಅಧ್ಯಾಯ ಮುಗಿಯಿತು ॥ ೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೩

(ಸರ್ಗಾನುಸರ್ಗಪ್ರಲಯಪ್ರಾದುರ್ಭಾವನಿರ್ಣಯಃ)

(ಮುಂದುವರೆದ ಜಗತ್ಸೃಷ್ಟಿ, ಬ್ರಹ್ಮ ವಾಯು ಮೊದಲಾದವರ ಉತ್ಪತ್ತಿ, ಬ್ರಹ್ಮಾಂಡಸೃಷ್ಟಿ, ಶ್ರೀಹರಿಯ ಮತ್ಸ್ಯಾದಿ ಅವತಾರಗಳು, ಶ್ರೀರಾಮಾವತಾರ)

ಶ್ರೀವ್ಯಾಸಸ್ತುತಿ

ಜಯತ್ಯಜೋऽಖಿಂಡಗುಣೋರುಮಂಡಲಃ
ಸದೋದಿತೋ ಜ್ಞಾನಮರೀಚಿಮಾಲೀ ।
ಸ್ವಭಕ್ತಹಾರ್ದೋಽಚ್ಚತಮೋನಿಹಂತಾ
ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥ ೧ ॥

ಅ: ಅಖಿಂಡ ಸಾರ್ವಜ್ಞ ಮೊದಲಾದ ಗುಣಗಳನ್ನೇ ದೇಹವನ್ನಾಗಿ ಹೊಂದಿರುವ, ಸದಾ ಉದಿತನಾಗಿರುವ, ಜ್ಞಾನವೆಂಬ ಕಿರಣಗಳ ಮಾಲೆಯುಳ್ಳ, ತನ್ನ ಭಕ್ತರ ಹೃದಯದಲ್ಲಿನ ಅಜ್ಞಾನವೆಂಬ ಕತ್ತಲೆಯನ್ನು ಸಂಪೂರ್ಣ ನಾಶಪಡಿಸುವ, ಸ್ವಯಂ ಪ್ರಕಾಶನಾದ ವೇದವ್ಯಾಸ-ರೂಪದ ಸೂರ್ಯನು ಸರ್ವೋತ್ಕೃಷ್ಟನಾಗಿರುವನು.

ವಿ: ೧) ಸರ್ವಶಾಸ್ತ್ರಾರ್ಥನಿರ್ಣಯವನ್ನು ಪ್ರಥಮಾಧ್ಯಾಯದಲ್ಲೂ, ಭಾರತಾರ್ಥನಿರ್ಣಯ-ವನ್ನು ದ್ವಿತೀಯಾಧ್ಯಾಯದಲ್ಲೂ ಮಾಡಿದ ಶ್ರೀಮದಾಚಾರ್ಯರು ಶ್ರೀವ್ಯಾಸ, ಶ್ರೀರಾಮ ಮತ್ತು ಶ್ರೀಕೃಷ್ಣರೂಪೀ ಶ್ರೀಹರಿಯ ವಿಶೇಷಮಹಿಮೆಯನ್ನು ಮುಂದಿನ ಅಧ್ಯಾಯಗಳಲ್ಲಿ ನಿರೂಪಿಸಲು ಉದ್ಯುಕ್ತರಾಗಿ ಆ ಮೂರೂ ರೂಪಗಳನ್ನೂ ಮೊದಲ ಮೂರು ಶ್ಲೋಕಗಳಲ್ಲಿ ಕ್ರಮವಾಗಿ ವಂದಿಸುತ್ತಿರುವರು. (ಜ)

---

೧. ಏವಂ ಸರ್ವಶಾಸ್ತ್ರನಿರ್ಣಯಂ ತದರ್ಥಭಾರತನಿರ್ಣಯಂ ಅಧ್ಯಾಯಾಭ್ಯಾಂ ವಿಧಾಯ ಉತ್ತರೈ-ರಧ್ಯಾಯೈಃ ಕಥಾವ್ಯತ್ಯಾಸಾದಿಪರಿಹಾರಾಯ ಹರಿಕಥಾಂ ವಕ್ತುಂ ತತ್ರ ವಿಶೇಷೇಣ ವ್ಯಾಸರಾಮಕೃಷ್ಣಕಥಾಃ ಕ್ರಮೇಣ ವಿಸ್ತರೇಣ ವದನ್ ತಾನ್ ನಮತಿ। –(ಜ)

೧. ಅಧುನಾ ತೃತೀಯಾಧ್ಯಾಯೇನ ಪ್ರಾಗುಕ್ತಭಗವತ್ಕೃತಸೃಷ್ಟಿವಿಶೇಷಂ ಭಗವದವತಾರಾದಿಕಥಾಂ ಚ ವಿಸ್ತರೇಣ ಯಥಾವನ್ನಿರ್ಣೀಷುಃ ಭಗವಾನಾನಂದತೀರ್ಥಮುನಿಃ ಪರಮಮಂಗಲರೂಪತಾಂ ಸ್ವಗ್ರಂಥಸ್ಯ ನಿದರ್ಶಯನ್ ಸ್ವಗುರೋರ್ವ್ಯಾಸಸ್ಯ ಸ್ವೇಷ್ಟದೇವಸ್ಯ ರಾಮಸ್ಯ ಕೃಷ್ಣಸ್ಯ ಚ ಸ್ತುತಿರೂಪಮಂಗಲತ್ರಯಂ ಕರೋತಿ। –(ವಾ)

೨) ತಾವು ಪ್ರಥಮಾಧ್ಯಾಯದಲ್ಲಿ ವರ್ಣಿಸಲು ಉಪಕ್ರಮಿಸಿದ ಸೃಷ್ಟಿಕ್ರಮವನ್ನು ಈ ತೃತೀಯಾಧ್ಯಾಯದಿಂದ ಮುಂದುವರೆಸುತ್ತ ಶ್ರೀಮದಾಚಾರ್ಯರು ಪ್ರಾರಂಭದಲ್ಲಿ ತಮ್ಮ ಗುರು–ರೂಪವಾದ ಶ್ರೀವ್ಯಾಸರೂಪವನ್ನೂ ಇಷ್ಟದೈವವಾದ ಶ್ರೀರಾಮ ಮತ್ತು ಶ್ರೀಕೃಷ್ಣ ರೂಪಗಳನ್ನೂ ಸ್ತುತಿಸುತ್ತ ತಮ್ಮ ಗ್ರಂಥವು ಪರಮಮಂಗಲರೂಪವಾದುದು ಎಂದು ಸೂಚಿಸುತ್ತಿರುವರು. (ವಾ)

೩) ಆತ್ಮಭಾಸ್ಕರಃ – ತನ್ನ ಜ್ಞಾನವನ್ನು ಸುಜೀವಿಗಳಲ್ಲಿ ಸ್ಥಿರಗೊಳಿಸುವವನು; ಅನ್ಯಪ್ರೇರಣೆಯಿಲ್ಲದೆ ಸ್ವತಃ ಪ್ರಕಾಶನೀಡುವವನು; ಎಂದು ಅರ್ಥ. ಲೌಕಿಕವಾದ ಘಟಪಟಾದಿ ವಸ್ತುಗಳನ್ನು ಪ್ರಕಾಶಗೊಳಿಸುವ ಲೌಕಿಕಸೂರ್ಯನಿಗಿಂತ ಶ್ರೀವ್ಯಾಸಸೂರ್ಯನು ತುಂಬಾ ವಿಲಕ್ಷಣನೂ, ವಿಶಿಷ್ಟನೂ ಆಗಿರುವನು ಎಂದು ಭಾವ.

೪) ಅಖಂಡಗುಣೋರುಮಂಡಲಃ – ಪ್ರಸಿದ್ಧಸೂರ್ಯನು ಪರಿಮಿತತೇಜೋಗುಣನೂ, ಪ್ರಾಕೃತನೂ, ಅಲ್ಪಮಂಡಲನೂ ಆಗಿರುವನು; ಆದರೆ ಶ್ರೀವ್ಯಾಸಸೂರ್ಯನು ಅಪ್ರಾಕೃತವೂ, ಪರಿಪೂರ್ಣವೂ, ನಿತ್ಯವೂ, ಅನಂತವೂ ಆದ ಗುಣಮಯವೂ, ವ್ಯಾಪ್ತವೂ ಆದ ವಿದೇಹ–ವುಳ್ಳವನು. ಆದ್ದರಿಂದ ಅವರಿಬ್ಬರಲ್ಲಿನ ಅಂತರವು ಮೇರುಸರ್ಷಪಗಳಂತೆ ಅಪಾರ ಎಂದು ಭಾವ. ಇದು ಒಂದು ರೀತಿಯಲ್ಲಿ ಜೀವೇಶ್ವರವೈಲಕ್ಷಣ್ಯವನ್ನೂ ಧ್ವನಿಸುವುದು.

---

೧. ಆತ್ಮನಾ ಸ್ವೇನೈವ ಅನ್ಯಪ್ರೇರಣಾಂ ವಿನಾ ಭಾಸಂ ಕರೋತೀತಿ,ಆತ್ಮನಃ ಪರಮಾತ್ಮನಃ ಇತಿ ವಾ ಆತ್ಮಭಾಸ್ಕರಃ। -(ಜ)

೧. ಅಯಂ ಪ್ರಸಿದ್ಧಭಾಸ್ಕರಃ ಪರಾಧೀನಪ್ರಕಾಶಃ । ವ್ಯಾಸಸ್ತು ಸ್ವತಂತ್ರಪ್ರಕಾಶ ಇತಿ ಪ್ರಸಿದ್ಧಾದ್ವೈಲಕ್ಷಣ್ಯಂ ಜ್ಞಾತವ್ಯಮ್ । –(ಜ)

೧. ಅನೇನ ಲೌಕಿಕಘಟಪಟಾದಿಪ್ರಕಾಶಕಭಾಸ್ಕರಾತ್ ವ್ಯಾಸಭಾಸ್ಕರಸ್ಯ ಅತ್ಯಂತಂ ಅತಿಶಯಿತಮಹಿಮೋಕ್ತ್ಯಾ ಅಸದೃಶಭಾಸ್ಕರತ್ವಮುಕ್ತಂ ಭವತಿ। –(ಜ)

೧. ಪ್ರಸಿದ್ಧಸ್ಯ ಖಂಡತೇಜೋಗುಣಾಲ್ಪಮಂಡಲತ್ವಾತ್ ವೈಲಕ್ಷಣಮ್। (ಜ)

೧. ಲೌಕಿಕಸೂರ್ಯಸ್ತು ಪ್ರಾಕೃತಪರಿಮಿತತೇಜೋಮಂಡಲಃ । ಅಯಂ ತ್ವಪ್ರಾಕೃತಪರಿಪೂರ್ಣನಿತ್ಯಾನಂತ-ಗುಣಮಯಜಗದ್ವ್ಯಾಪ್ತಮಂಡಲಃ। ಏವಂ ಚ ವ್ಯಾಸಾಖ್ಯಸೂರ್ಯಸ್ಯ ಲೌಕಿಕಸೂರ್ಯಸ್ಯ ಚ ಮೇರುಸರ್ಷಪಯೋರಿವಾತ್ಯಂತವೈಲಕ್ಷಣ್ಯಮುಕ್ತಂ ಭವತಿ । –(ವಾ)

೧. ಸದೋದಿತಃ = ಸದಾ ಅನಂತಕಾಲೇಷು ಉದಯವಾನ್ । ಲೌಕಿಕಸೂರ್ಯಸ್ತು ಅಹ್ನಿ ಉದಿತಃ ರಾತ್ರ್ಯಾವ-ಸ್ತಮಿತಃ । ಇತೋऽಪಿ ವ್ಯಾಸಭಾಸ್ಕರಸ್ಯ ನಿರುಪಮತ್ವಂ ಜ್ಞೇಯಮ್ । –(ವಾ)

೧. ಅಜಃ = ಜನನರಹಿತಃ, ಅಕಾರವಾಚ್ಯಾತ್ ಸ್ವಮೂಲರೂಪನಾರಾಯಣಾದೇವ ಜಃ ಪ್ರಾದುರ್ಭೂತಃ । ಜನೀ ಪ್ರಾದುರ್ಭಾವೇ ಇತಿ ಧಾತುಃ । ಇದಂ ಚ ಜನನಾಭಾವಸ್ಯೈವ ಸೂಚಕಮ್ । -(ವಾ)

೧. ಸೂರ್ಯಸ್ತು ಕಶ್ಯಪಾದೇರ್ಜಾಯತೇ । – (ಜ)

೧. ಲೌಕಿಕಸೂರ್ಯಸ್ತು ಪ್ರಾಕೃತಕಿರಣಮಾಲೀತಿ ವಿವೇಕಃ । ಸ್ವಯಮಪಿ ಗುಣಮಯಮರೀಚಯೋऽಪಿ ಜ್ಞಾನಪದೋಪಲಕ್ಷಿತಾನಂತಗುಣಾತ್ಮಿಕಾ ಇತಿ ಭಾವಃ । – (ವಾ)

ಜ್ಞಾನಮೇವ ಮರೀಚಯಸ್ತೈಃ ಮಾಲತೇ ಶೋಭತೇ ಇತಿ ತೇಷಾಂ ಮಾಲಾ ವಿದ್ಯತೇ ಇತಿ ವಾ । (ಜ)

೫) **ಸದೋದಿತಃ** – ಲೌಕಿಕಸೂರ್ಯನು ಹಗಲಿನಲ್ಲಿ ಮಾತ್ರ ಕಾಣಿಸಿಕೊಳ್ಳುವನು; ಆದರೆ ವ್ಯಾಸಸೂರ್ಯನು ಸದಾ ಉದಿತನು; ಈ ಸೂರ್ಯನಿಗೆ ಗ್ರಹಣಾದಿಗಳ ಅಪಾಯವುಂಟು; ಆದರೆ ವ್ಯಾಸಸೂರ್ಯರಿಗೆ ಅಂತಹ ಯಾವ ದೋಷವೂ ಇರುವುದಿಲ್ಲ.

೬) **ಅಜಃ** – ಲೌಕಿಕಸೂರ್ಯನಿಗೆ ಕಶ್ಯಪರಿಂದ ಜನ್ಮ ಉಂಟು; ಆದರೆ ವ್ಯಾಸಸೂರ್ಯನಿಗೆ ಜನನವೇ ಇಲ್ಲ; ಪ್ರಾದುರ್ಭಾವವೂ ಸಹ ತನ್ನ ಮೂಲರೂಪವಾದ ನಾರಾಯಣರೂಪದಿಂದಲೇ ಹೊರತು ಇತರರಿಂದಲ್ಲ; ಪರಾಶರ ಸತ್ಯವತಿಯರು ನಿಮಿತ್ತಮಾತ್ರ ಎಂದು ಭಾವ.

೭) **ಜ್ಞಾನಮರೀಚಿಮಾಲೀ** – ಲೌಕಿಕಸೂರ್ಯನು ಪ್ರಾಕೃತಕಿರಣಮಾಲಿ; ಆದರೆ ವ್ಯಾಸಸೂರ್ಯನು ಗುಣಮಯವೂ, ಅಪ್ರಾಕೃತವೂ ಆದ ಜ್ಞಾನಾದಿ ಗುಣಗಳನ್ನೇ ಕಿರಣಗಳನ್ನಾಗಿ ಹೊಂದಿರುವವನು.

೮) **ಸ್ವಭಕ್ತಹಾರ್ದೋಚ್ಚತಮೋನಿಹಂತಾ** – ಪ್ರಸಿದ್ಧಸೂರ್ಯನು ಭಕ್ತ ಮತ್ತು ಅಭಕ್ತರ ಕತ್ತಲೆಯನ್ನು ಕಳೆಯುವನು; ಅಲ್ಲದೆ ಅವನು ಕಳೆಯುವುದು ಹೊರಗಿನ ಕತ್ತಲೆಯನ್ನೇ ಹೊರತು ಒಳಗಿನ ಕತ್ತಲೆಯನ್ನಲ್ಲ; ಗಹ್ವರಾದಿಗಳಲ್ಲಿನ ಕತ್ತಲೆಯನ್ನು ಸಹ ಅವನು ಕಳೆಯುವುದಿಲ್ಲ; ಆದರೆ

---

೧ ತಮಃ = ಅನಾದಿಕಾಲೀನಬಂಧಕಾಜ್ಞಾನಾಖ್ಯಂ ತಮಃ । ತಸ್ಯ ನಿಹಂತಾ । ಅತ ಏವೋಚ್ಚಂ ತಸ್ಯ ನಿತರಾಂ ಹಂತಾ । ಲೌಕಿಕಸೂರ್ಯಸ್ತು ಭಕ್ತಾನಾಮಭಕ್ತಾನಾಂ ಚ ತಮೋಹಂತಾ । ತತ್ರಾಪಿ ಬಾಹ್ಯತಮಸಃ ಏವ ನತು ಸರ್ವತಮಸಃ । ತತ್ರಾಪಿ ಗಿರಿಗುಹಾದೇಹಗೇಹಾದ್ಯಂತರ್ವರ್ತಿತಮಸಃ ಅವಶೇಷಿತತ್ವಾತ್ ನ ನಿತರಾಂ ಹಂತಾ ।

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥ ಇತಿ ವಚನಾತ್ । – (ಗೀತಾ ೧೫/೧೨)

ಭಗವತ್ತೇಜನೋಪಬೃಂಹಿತತ್ವಾದೇವ ತಮೋ ಹಂತಿ ನ ಸ್ವಸ್ವಭಾವೇನ । ವ್ಯಾಸಸ್ತು ಹನನಶೀಲಃ ಸ್ವಸ್ವಭಾವೇನ ಹಂತಿ ತಮಃ ನ ತ್ವನ್ಯೋಪಾಧಿನಾ । ತಸ್ಮಾದ್ ವ್ಯಾಸಸ್ಯ ಲೌಕಿಕಸೂರ್ಯಸ್ಯ ಚ ಮಹದಂತರಮಿತಿ ಭಾವಃ । –(ವಾ)

ಶಾಸ್ತ್ರಕರ್ತೃತ್ವಪ್ರತಿಪಾದ್ಯತ್ವರೂಪೋಪಾಧಿದ್ವಯಸಮಾವೇಶಾತ್ ಪೂರ್ವಂ ವ್ಯಾಸಸ್ತವನಂ ವಿಸ್ತರೇಣ ಪ್ರತಿಪಾದ್ಯತ್ವರೂಪಕೋಪಾಧಿಮತ್ವಾದ್ರಾಮಕೃಷ್ಣಯೋಃ ಪಶ್ಚಾತ್। ತತ್ರಾಪಿ ಪಶ್ಚಾತ್ತನತ್ವಾತ್ ಕೃಷ್ಣಸ್ಯ ಪಶ್ಚಾತ್ ಸ್ತವನಂ ಕೃತಮಿತಿ ಜ್ಞೇಯಮ್ । –(ಜ.)

೧. ರಾಮಾತ್ ಪೂರ್ವಮಪ್ಯಸ್ತಿ ವ್ಯಾಸಾವತಾರಃ । –ಭಾಗವತತಾತ್ಪರ್ಯ

೧. ಅಜ್ಞಾನನಾಶನಾಯ ಜ್ಞಾನೋಪದೇಶಾರ್ಥಾವತಾರತ್ವಾತ್ ಸೂರ್ಯದೃಷ್ಟಾಂತೇನ ವ್ಯಾಸಸ್ತವನಂ ಕೃತಮಿತಿ ಭಾವಃ । –(ಜ.)

೧. ಜಯತಿ = ಉತ್ಕೃಷ್ಟೋ ವರ್ತತೇ । ಲೌಕಿಕಭಾಸ್ಕರಂ ಚ ಅಭಿಭವತೀತ್ಯರ್ಥದ್ವಯಂ ಸೂಚಿತಂ ಭವತಿ । -(ವಾ)

೧. ಸರ್ವದಾ ಜಯತೋ ವಿಷ್ಣೋರ್ಜಯಸ್ಯ ಪ್ರಕಾಶನಮ್ ।
ಶ್ರವಣಂ ದೃಷ್ಟಿರಿತ್ಯಾದಿ ಪ್ರಾರ್ಥ್ಯಂ ತಜ್ಜಾಪನಂ ಸ್ಮೃತಮ್ ॥

ಶೃಣೋತಿ ಪಶ್ಯತಿ ಹ್ಯೇಷ ಜಯತೀತ್ಯಾದಿಕಂ ಸ್ವತಃ ।
ಜಯ ಪಶ್ಯ ಶೃಣುಷ್ವೇತಿ ತತ್ತಜ್ಜ್ಞಾಪನಮೇವ ತು ॥ -ಇತಿ ವಿಮಲಸಂಹಿತಾಯಾಮ್ – ಭಾ. ತಾ. ೧೦/೯೪/೧೫

ವ್ಯಾಸಸೂರ್ಯರು ಹಾಗಲ್ಲ; ಅವನು ತನ್ನಭಕ್ತರ ಹೃದಯದಲ್ಲಿನ ಅನಾದಿಕಾಲದಿಂದ ಬಂಧಕವಾಗಿರುವ ಅಜ್ಞಾನವೆಂಬ ಕತ್ತಲೆಯನ್ನೆಲ್ಲ ಸಂಪೂರ್ಣವಾಗಿ ತೊಡೆದುಹಾಕುವನು. ಅಲ್ಲದೆ ಈ ಸೂರ್ಯನ ತಮೋನಾಶಕತ್ವವು ಸ್ವತಂತ್ರವಾಗಿರದೆ ಅಂತರ್ಯಾಮಿಯಾದ ಭಗವಂತನ ಮಹಿಮೆಯಿಂದ ಬಂದುದಾಗಿದೆ; ಆದರೆ ವ್ಯಾಸಸೂರ್ಯರ ತಮೋನಾಶಕತ್ವವು ಅವರಿಗೆ ಸ್ವಾಭಾವಿಕವಾದುದೇ ಹೊರತು ಔಪಾಧಿಕವಾದುದಲ್ಲ.

೯) ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತಗಳ ನಿರ್ಣಯ ಬಂದಿದೆ; ರಾಮಾಯಣಪ್ರತಿಪಾದ್ಯ ಶ್ರೀರಾಮರೂಪ; ಮಹಾಭಾರತಪ್ರತಿಪಾದ್ಯ ಶ್ರೀಕೃಷ್ಣರೂಪ; ಇವೆರಡೂ ರೂಪಗಳ ಕಥೆಯೂ ಮಹಾಭಾರತದಲ್ಲಿ ಬಂದಿದ್ದು, ಅದನ್ನು ಬರೆದದ್ದು ಶ್ರೀವ್ಯಾಸರೂಪ; ಶ್ರೀವ್ಯಾಸರೂಪವು ಶಾಸ್ತ್ರಕರ್ತೃರೂಪವಾದ್ದರಿಂದ ಅದನ್ನು ಮೊದಲು ವಂದಿಸಿ, ಶಾಸ್ತ್ರಪ್ರತಿಪಾದ್ಯವಾದ ಶ್ರೀರಾಮ ಮತ್ತು ಶ್ರೀಕೃಷ್ಣರೂಪಗಳನ್ನು ಅನಂತರ ವಂದಿಸಿರುವರು. ಶ್ರೀಕೃಷ್ಣರೂಪವು ಶ್ರೀರಾಮರೂಪಕ್ಕಿಂತ ಅನಂತರದ್ದು ಎಂಬ ಕಾರಣದಿಂದ ಅದನ್ನು ಕೊನೆಯಲ್ಲಿ ವಂದಿಸಿರುವರು.

೧೦) ಶ್ರೀವ್ಯಾಸರೂಪವು ಶ್ರೀರಾಮರೂಪಕ್ಕಿಂತ ಮುಂಚೆಯೂ ಅನೇಕ ಬಾರಿ ಆಗಿತ್ತು ಎಂಬುದನ್ನು ಸಹ ಅದಕ್ಕೆ ಮೊದಲು ವಂದಿಸುವ ಮೂಲಕ ಶ್ರೀಮದಾಚಾರ್ಯರು ಸೂಚಿಸಿರುವರು (೧೦/೨).

೧೧) ಶ್ರೀವ್ಯಾಸರೂಪವು ಅಜ್ಞಾನನಾಶಕ್ಕೆಂದು ಜ್ಞಾನೋಪದೇಶಕ್ಕಾಗಿ ಪ್ರವೃತ್ತವಾದ ರೂಪ ಎಂಬ ಕಾರಣದಿಂದ ಸೂರ್ಯದೃಷ್ಟಾಂತದೊಂದಿಗೆ ಅದನ್ನು ವರ್ಣಿಸಿರುವರು. ಪ್ರಸಿದ್ಧ ಸೂರ್ಯನೊಂದಿಗೆ ಇರುವ ವೈಲಕ್ಷಣ್ಯ ಮತ್ತು ವೈಶಿಷ್ಟ್ಯಗಳನ್ನು ಪ್ರತಿಯೊಂದು ವಿಶೇಷಣದಲ್ಲಿಯೂ ತೋರಿಸಿರುವರು.

೧೧) ಜಯತಿ – ಎಂಬುದಕ್ಕೆ ಸರ್ವೋತ್ಕೃಷ್ಟ ಎಂಬ ಅರ್ಥದಂತೆ ಲೌಕಿಕ ಸೂರ್ಯನನ್ನು ಮೀರಿಸಿದವನು ಎಂಬ ಅರ್ಥವೂ ವಿವಕ್ಷಿತ; ಇದರಂತೆ ಮುಂದಿನ ಶ್ಲೋಕಗಳಿಗೂ ಈ ತೆರನಾದ ಅರ್ಥವನ್ನು ತಿಳಿಯಬೇಕು.

ಶ್ರೀರಾಮಸ್ತುತಿ

ಜಯತ್ಯಜೋಽಕ್ಷೀಣಸುಖಾತ್ಮಬಿಂಬಃ
ಸ್ವಸ್ಪೃಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ
ರಾಮಾವತಾರೋ ಹರಿರೀಶಚಂದ್ರಮಾಃ ॥ ೨ ॥

ಅ: ಜನನರಹಿತನೂ, ಕ್ಷಯರಹಿತವಾದ ಸುಖಾತ್ಮಕದೇಹವನ್ನು ಹೊಂದಿದವನೂ, ಸ್ವರೂಪ ಭೂತವಾದ ಐಶ್ವರ್ಯವೆಂಬ ಕಾಂತಿಯಿಂದ ವ್ಯಾಪ್ತನೂ, ಸದಾ ಉದಿತನೂ, ತನ್ನ ಭಕ್ತರ ಅನಿಷ್ಟಗಳನ್ನು ತೊಡೆಯುವವನೂ, ಈಶ್ವರಚಂದ್ರನೂ, ಆಗಿರುವ ರಾಮಾವತಾರಿಯಾದ ಶ್ರೀಹರಿಯು ಉತ್ಕೃಷ್ಟನಾಗಿರುವನು.

ವಿ: ೧) ಲೌಕಿಕಚಂದ್ರನು ಅನೀಶಚಂದ್ರ; ಅವನು ಅತ್ರಿಅನಸೂಯೆಯರ ಪುತ್ರನಾಗಿ ಹುಟ್ಟಿರುವನು; ಪ್ರತಿಪಕ್ಷದಲ್ಲೂ ಕ್ಷಯಿಸುವಂತಹ ಪ್ರಾಕೃತವೂ ಪರಿಮಿತವೂ ಆದ ಮಂಡಲವನ್ನು ಹೊಂದಿರುವನು; ಸ್ವಯಂ ಪ್ರಕಾಶನಾಗಿರದೆ ತನ್ನ ಮೇಲೆ ಬೀಳುವ ಸೂರ್ಯನ ಕಿರಣಗಳನ್ನು ಪ್ರತಿಫಲಿಸಿ ಹೊಳೆಯುವನು; ರಾತ್ರಿಯಲ್ಲಿ ಮಾತ್ರ ಹೊಳೆಯುವವನು; ಭಕ್ತರ ಮಾತ್ರವಲ್ಲದೆ ಅಭಕ್ತರ ಸಂತಾಪವನ್ನೂ ಪರಿಹರಿಸುವನು.

೨) ಆದರೆ ಶ್ರೀರಾಮಚಂದ್ರನು ಹಾಗಲ್ಲ; ಅವನು ಈಶಚಂದ್ರನು; ಜನನರಹಿತನು; ಸದಾ ಉದಿತನು; ಕ್ಷಯರಹಿತವಾದ ಸುಖಾತ್ಮಕದೇಹವುಳ್ಳವನು; ತನ್ನ ಸಹಜವಾದ ಐಶ್ವರ್ಯಕಾಂತಿಯಿಂದ ವ್ಯಾಪ್ತನಾಗಿರುವ ಸ್ವತಂತ್ರನು; ತನ್ನ ಭಕ್ತರ ಸಕಲಪಾಪಗಳನ್ನು

---

೨. ಅಯಂ ತು ಸರ್ವಜಗತಾಂ ಈಶಚಂದ್ರಮಾಃ ಲೌಕಿಕಚಂದ್ರಸ್ತು ಅನೀಶ ಇತಿ ವೈಲಕ್ಷಣ್ಯಮ್ । –(ವಾ)

ಅಕ್ಷೀಣಂ ಸುಖಾತ್ಮಕಂ ವ್ಯಾಪ್ತತ್ವಾದಾತ್ಮಪದವಾಚ್ಯಂ ಬಿಂಬಂ ಸ್ವರೂಪಂ ಯಸ್ಯ ಸ ತಥೋಕ್ತಃ । ಲೌಕಿಕ-ಚಂದ್ರಮಾಸ್ತು ಪ್ರತಿಪಕ್ಷಂ ಕ್ಷೀಯಮಾಣಪ್ರಾಕೃತಪರಿಚ್ಛಿನ್ನಮಂಡಲಃ । –(ವಾ)

ಐಶ್ವರ್ಯಂ ಸಂಪತ್ ಕಾಂತಿಶ್ಚ ಐಶ್ವರ್ಯಕಾಂತೀ ಸ್ವಸ್ವರೂಪಭೂತೇ ಐಶ್ವರ್ಯಕಾಂತೀ ತಾಭ್ಯಾಂ ಪ್ರಕರ್ಷೇಣ ತತಃ । ಯದ್ವಾ ಅಪ್ರಾಕೃತತ್ವಾತ್ ಸು ಶೋಭನೈಶ್ವರ್ಯಕಾಂತೀ ತಾಭ್ಯಾಂ ಪ್ರತತಃ । ಲೌಕಿಕ-ಚಂದ್ರಮಾಸ್ತು ಪ್ರಾಕೃತೈಶ್ವರ್ಯೇಣ ಪ್ರಾಕೃತಕಾಂತ್ಯಾ ಚಾಲ್ಪತತಃ । –(ವಾ.)

ಲೌಕಿಕಚಂದ್ರಸ್ತು ನಿಶ್ಯೇವ ಉದಿತಃ । ನ ತು ಸರ್ವದೋದಿತಃ । –(ವಾ)

ಸ್ವಭಕ್ತಾನಾಂ ಸಮ್ಯಕ್ ತಾಪಂ ತಾಪತ್ರಯಾಖ್ಯಂ ದುಃಖಂ ದುರಿಷ್ಟಂ ಇಷ್ಟಂ ನ ಭವತೀತಿ ದುರಿಷ್ಟಂ ಸಂಸಾರಂ ಶತ್ರೂಂಶ್ಚ ಸ್ವಭಕ್ತಾನಾಮೇವ ಸಮ್ಯಗ್ ಹಂತಿ । ಪುನರ್ಯಥಾ ಸ್ಪರ್ಶೋ ನ ಭವತಿ ತಥಾ ಹಂತೀತಿ ಯಾವತ್ । –(ವಾ)

ಸಂತಾಪಾನ್ ದುರಿಷ್ಟಂ ಸಂಸಾರಂ ಚೇತಿ ವಾ ॥ –(ಜ)

ಲೌಕಿಕಚಂದ್ರಸ್ತು ಭಕ್ತಾನಾಂ ಅಭಕ್ತಾನಾಂ ಚ ತಾಪಾದಿಕಂ ನಾಶಯತಿ । ತತ್ರಾಪಿ ನ ಸಮ್ಯಕ್ ನಾಶಕತ್ವಂ ತಸ್ಮಾದ್ರಾಮಚಂದ್ರಸ್ಯ ಲೌಕಿಕಚಂದ್ರಸ್ಯ ಮಹದಂತರಂ ಜ್ಞೇಯಮ್ । –(ವಾ)

೨. ರಾಮಾವತಾರಃ ಈಶಚಂದ್ರಮಾಃ ಹರಿರ್ಜಯತಿ । ಉತ್ಕೃಷ್ಟೋ ವರ್ತತೇ । ಪ್ರಸಿದ್ಧಚಂದ್ರಂ ಜಯತಿ ಚ । (ವಾ)

೨. ಲೋಕದುಃಖಶಾಂತ್ಯರ್ಥಮವತೀರ್ಣತ್ವಾಚ್ಚ ದೃಷ್ಟಾಂತೇನ ಸ್ತವನಮ್ ॥ –(ವಾ)

೨. ನಾನಾತ್ವಾತ್ ಸ್ವಕ್ರಿಯಾನೀಶಾಃ ಪ್ರೋಚುಃ ಪ್ರಾಂಜಲಯೋ ವಿಭುಮ್ ॥ - ಭಾಗವತ. ೩/೫/೩೭

ಪೂರ್ಣವಾಗಿ ಪರಿಹರಿಸುವವನು; ಆದ್ದರಿಂದ ಅವನು ಲೌಕಿಕಚಂದ್ರನಿಗಿಂತ ಮಿಗಿಲಾಗಿರುವನು ಮತ್ತು ಒಟ್ಟಾಗಿ ಸರ್ವೋತ್ಕೃಷ್ಟನಾಗಿರುವನು ಎಂದು ಭಾವ.

೩) ಲೋಕದುಃಖವನ್ನು ಪರಿಹರಿಸಲೆಂದು ಅವತರಿಸಿದ ರೂಪವೆಂಬ ವಿಶೇಷವನ್ನು ತೋರಿಸಲಿಕ್ಕೋಸ್ಕರ ಶ್ರೀರಾಮನನ್ನು ಚಂದ್ರನೆಂದು ವರ್ಣಿಸಿರುವರು.

೪) 'ಶ್ರೀರಾಮಚಂದ್ರ' ಎಂಬುದಾಗಿ ಶ್ರೀರಾಮನ ರೂಪವನ್ನು ವ್ಯವಹರಿಸುವುದುಂಟು; ಅದರ ಹಿನ್ನೆಲೆಯನ್ನು ಇಷ್ಟು ಅಪೂರ್ವವಾಗಿ ವರ್ಣಿಸಿರುವ ಹಿರಿಮೆ ಮಾತ್ರ ಶ್ರೀಮದಾಚಾರ್ಯರದೇ ಆಗಿದೆ. ಇಲ್ಲಿರುವ ಪ್ರತಿಯೊಂದು ವಿಶೇಷಣವೂ ಶ್ರೀರಾಮ ಮತ್ತು ಚಂದ್ರರಲ್ಲಿನ ವೈಶಿಷ್ಟ್ಯ ಹಾಗೂ ವೈಲಕ್ಷಣ್ಯಗಳನ್ನು ಸ್ಪಷ್ಟಪಡಿಸುತ್ತದೆ ಇಲ್ಲಿ ಶ್ರೀರಾಮ ಮತ್ತು ಚಂದ್ರರ ಮಧ್ಯೆ ಸಾದೃಶ್ಯಕ್ಕಿಂತ ಹೆಚ್ಚಾಗಿ ವೈಲಕ್ಷಣ್ಯವೇ ಇದೆ ಎಂದು ತಾತ್ಪರ್ಯ.

ಶ್ರೀಕೃಷ್ಣಸ್ತುತಿ

ಜಯತ್ಯಸಂಖ್ಯೋರುಬಲಾಂಬುಪೂರೋ
ಗುಣೋಚ್ಚರತ್ನಾಕರ ಆತ್ಮವೈಭವಃ ।
ಸದಾ ಸದಾತ್ಮಜ್ಞನದೀಭಿರಾಪ್ಯಃ
ಕೃಷ್ಣಾವತಾರೋ ಹರಿರೇಕಸಾಗರಃ ॥ ೩ ॥

ಅ: ಎಣೆಯಿರದ ಪೂರ್ಣಬಲಗಳೆಂಬ ಜಲಗಳಿಂದ ತುಂಬಿರುವ, ಗುಣಗಳೆಂಬ ಉಚ್ಚರತ್ನಗಳಿಗೆ ನೆಲೆಯಾಗಿರುವ, ಸ್ವರೂಪಭೂತವಾದ ಐಶ್ವರ್ಯದಿಂದ ಕೂಡಿರುವ,

---

೩. ಏಕಸಾಗರಃ– ಮುಖ್ಯಸಾಗರಃ, ಏಕಪ್ರಕಾರಶ್ಚಸಾಗರಶ್ಚ। –(ವಾ)

೩. ಲೌಕಿಕಸಾಗರಸ್ತು ಸೂರ್ಯಚಂದ್ರಮಸೋರಪ್ಯವರಃ । ಕೃಷ್ಣಾಖ್ಯಸಾಗರಸ್ತು ಸರ್ವಕಾಲೇಷು ಏಕಪ್ರಕಾರಃ । ಅನ್ಯಸ್ತು ದೇಶಮರ್ಯಾದಯಾ ಲವಣಾದಿರೂಪೇಣ ಸಪ್ತಪ್ರಕಾರಃ । ಕಾಲಮರ್ಯಾದಯಾ ಚ 'ಸಮುದ್ರಂ ಪರ್ವಣಿ ಸೃಶೇತ್' ಇತಿ ವಚನಾತ್ ಪರ್ವಣ್ಯೇವ ಸ್ಪೃಶ್ಯಃ। ಅನ್ಯದಾ ತು ಅಸ್ಪೃಶ್ಯಃ । ಭಗವಾಂಸ್ತು ವೃದ್ಧಿಹ್ರಾಸಶೂನ್ಯಃ । ಲೌಕಿಕಸಾಗರಸ್ತು ದಿನೇ ದಿನೇ ಚಂದ್ರೋದಯೇ ವರ್ಧತೇ । ಪುನಃ ಹ್ರಸತೇ ಚಂದ್ರಾಸ್ತಸಮಯೇ । ಪುನಃ ಪುನಃ ವರ್ಧತೇ ಹ್ರಸತೇ ಚ । ಅತೋऽನಯೋರ್ಮಹದಂತರಮಿತಿ ಭಾವಃ । -(ವಾ)

೩. ರಾಮಾವತಾರೇ ರಾವಣವಧಾಯ ಬಲಂ ಪ್ರಕಾಶಿತಮ್ । ನ ತು ಬಹುಧಾ । ಕೃಷ್ಣಾವತಾರೇ ತು ಶಿಶುದಶಾಮಾರಭ್ಯ ಪೂತನಾಕೇಶ್ಯಂತಂ ಬಹುತರದೈತ್ಯವಧಾಯ ಗೋವರ್ಧನಗಿರ್ಯುದ್ಧರಣಾಯ ಪುನರ್ಮಲ್ಲಕಂಸಾದೀನಾಂ ವಧಾಯ ತದನಂತರ ಅಷ್ಟಾದಶವಾರಂ ಜರಾಸಂಧಾನೀತಚತುರ್ದಶೋತ್ತರಚತುಃಶತಾಕ್ಷೋಹಿಣೀಸೇನಾವಧಾಯ ನರಕಾಸುರವಧಾಯ ಚ ಕೃಷ್ಣಾವತಾರೇ ಬಹುಧಾ ಬಲಸ್ಯೈವ ಪ್ರದರ್ಶಿತತ್ವಾತ್ । ಜ್ಞಾನಾಧಿಕಂ ವಿಹಾಯ ಕೃಷ್ಣಾಖ್ಯಸಮುದ್ರಸ್ಯ ಬಲಮೇವಾಂಬುತಯಾ ವರ್ಣಿತಮ್। ಲೌಕಿಕಸಮುದ್ರಸ್ತು ಅಲ್ಪಸಂಖ್ಯಾಕಾಪೂರ್ಣಾಂಬುಪೂರವಾನ್ ಇತಿ ಭಾವಃ । –(ವಾ)

ಸರ್ವೋತ್ತಮನೆಂಬುದಾಗಿ ಸದಾ ಹರಿಯನ್ನು ಅರಿತಂತಹ ಜ್ಞಾನಿಗಳೆಂಬ ನದಿಗಳಿಂದ ಹೊಂದಲ್ಪಡುವ ಮುಖ್ಯಸಾಗರನಾದ ಕೃಷ್ಣಾವತಾರದ ಶ್ರೀಹರಿಯು ಸರ್ವೋತ್ಕೃಷ್ಟನಾಗಿರುವನು.

ವಿ: ೧) ಶ್ರೀಕೃಷ್ಣನನ್ನು ಸಾಗರ ದೃಷ್ಟಾಂತದೊಂದಿಗೆ ಈ ಶ್ಲೋಕದಲ್ಲಿ ಸ್ತುತಿಸಿರುವರು.

೨) ಲೋಕದ ಸಾಗರವು ಸೂರ್ಯಚಂದ್ರರಿಗಿಂತಲೂ ಕಡಿಮೆಯಾದುದು; ಅದು ಲವಣಸಾಗರ ಮೊದಲಾಗಿ ಏಳು ತೆರನಾಗಿದೆ; ಪರ್ವಕಾಲದ ಹೊರತು ಇತರ ಸಮಯಗಳಲ್ಲಿ ಅಸ್ಪೃಶ್ಯವೂ ಆಗಿದೆ; ಚಂದ್ರೋದಯಕಾಲದಲ್ಲಿ ವೃದ್ಧಿ ಹೊಂದುತ್ತದೆ; ಇತರ ಸಮಯದಲ್ಲಿ ಕುಗ್ಗುತ್ತದೆ; ಅದರಲ್ಲಿನ ನೀರು ಅಪಾರವಾದರೂ ಅನಂತವಲ್ಲ; ಅದರ ವೈಭವ ಸ್ವತಂತ್ರವಾದುದೂ ಅಲ್ಲ; ಬೇಸಿಗೆ ಕಾಲದಲ್ಲಿ ನದಿಗಳು ಕ್ಷಯಿಸುವುದರಿಂದ ಕೆಲವೊಮ್ಮೆ ಒಣಗಿಯೂ ಹೋಗುವುದ–ರಿಂದ ನದಿಗಳಿಂದ ಸರ್ವಕಾಲದಲ್ಲೂ ಹೊಂದಲ್ಪಡುವುದೂ ಅಲ್ಲ.

ಆದರೆ ಶ್ರೀಕೃಷ್ಣರೂಪದ ಹರಿಯು ಎಣೆಯಿರದ ಸರ್ವೋತ್ತಮಸಾಗರ; ಅವನು ಸದಾ ಏಕಪ್ರಕಾರನು; ಸರ್ವದಾ ಸ್ಪೃಶ್ಯನು; ಸದಾ ಗುಣಗಳೆಂಬ ಉನ್ನತರತ್ನಗಳಿಗೆ ನೆಲೆ; ತನ್ನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸುವ ಜ್ಞಾನಿಗಳಿಂದ ಸದಾ ಹೊಂದಲ್ಪಡುವವನು; ಹೀಗಿರುವ ಅವನು ಸಮುದ್ರಕ್ಕಿಂತ ಮಿಗಿಲು; ಸರ್ವೋತ್ಕೃಷ್ಟನು ಎಂದು ಭಾವ.

೩) ಬಲಕಾರ್ಯ ಮೊದಲಾದ ಅನೇಕ ಮಾಹಾತ್ಮ್ಯವನ್ನೂ ಜ್ಞಾನಪ್ರದಾನರೂಪ ವಿಚಿತ್ರಕಾರ್ಯವನ್ನೂ ಪ್ರದರ್ಶಿಸಲೆಂದು ಅವತರಿಸಿದ ರೂಪವಾದ್ದರಿಂದ ಶ್ರೀಕೃಷ್ಣರೂಪವನ್ನು ಸಮುದ್ರವೆಂಬುದಾಗಿ ಸ್ತುತಿಸಿರುವರು.

---

೩. ಆತ್ಮನೈವ ಸ್ವಮಹಿಮ್ನೈವ ವೈಭವಂ ಯಸ್ಯ ಸ ಆತ್ಮವೈಭವಃ । ಅನ್ಯಸ್ತು ಪಶ್ಚಿಮಾದಿದಿಕ್ಪಾಲಕತ್ವೇನ ಹರಿಣಾ ದತ್ತವೈಭವಃ। –(ವಾ)

ದ್ವಾರವತ್ಯಾಂ ಸಮುದ್ರಾಂತಃ ರತ್ನಮಯಮಂಡಪಕರಣೇನ ಕ್ಷೀರಾಂಬುಧೌ ದಿವ್ಯರತ್ನಮಯಮಂಡಪಸ್ಥಿತ-ಹರಿಣಾ ದತ್ತವೈಭವಃ। –(ವಾ)

೩. ಉಚ್ಚರತ್ನಾನೀತಿ ವದತಾ ಗುಣಾನಾಮಪ್ಯುಚ್ಚತ್ವಂ ಸೂಚಿತಮ್ । –(ವಾ)

೩. ಸಚ್ಚಬ್ದ ಉತ್ತಮಂ ಬ್ರೂಯಾದಿತಿ ವಚನಾತ್ ಸನ್ ಸರ್ವೋತ್ತಮಃ ಆತ್ಮಾ ಹರಿಃ ತಂ ಜಾನಂತೀತಿ ಸದಾತ್ಮಜ್ಞಾಃ ನ ತು ಮಾಯಾವಾದಿವತ್ ನೀಚಜೀವೈಕ್ಯೇನ ಆತ್ಮಜ್ಞಾಃ । ತ ಏವ ನದ್ಯಃ ತಾಭಿಃ ಸದಾ ಆಪ್ಯಃ । ಕೃಷ್ಣಸ್ತು ಜ್ಞಾನಿನದೀಭಿ-ರಾಪ್ಯಃ ಸಮುದ್ರಸ್ತು ಜಡಜಲರೂಪನದೀಭಿರಾಪ್ಯಃ। –(ವಾ)

೩. ಈದೃಶನದೀಭಿಃ ಸದಾ ಸರ್ವದಾ ಆಪ್ಯಃ ಸಮುದ್ರಸ್ತು ವರ್ಷಾಕಾಲೇ ಏವಾಪ್ಯಃ । ಉಷ್ಣಕಾಲೇ ಕ್ವಚಿತ್ ಕ್ವಚಿತ್ ಪ್ರವಾಹಭಂಗೇ ಸತಿ ನಾಪ್ಯಃ ॥ –(ವಾ)

೩. ಬಲಕಾರ್ಯಾದ್ಯನೇಕಚರಿತ್ರಪ್ರದರ್ಶನಜ್ಞಾನಪ್ರದಾನರೂಪವಿಚಿತ್ರಾರ್ಥತಯಾ ऽಪ್ಯವತೀರ್ಣತ್ವಾತ್ ಸಮುದ್ರದೃಷ್ಟಾಂತೇನ ಸ್ತವನಮ್ । –(ಜ)

ನಾರಾಯಣಂ ನಮಸ್ಕೃತ್ಯ ಶ್ಲೋಕ ಹಾಗೂ ಅದರ ಅರ್ಥವಿವರಣೆ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇ ॥ ೪ ॥

ಅ: ನಾರಾಯಣ, ನರ(ಶೇಷ) ನರೋತ್ತಮ(ವಾಯು), ದೇವೀ (ಮಹಾಲಕ್ಷ್ಮಿ) ಸರಸ್ವತೀ ಮತ್ತು ವೇದವ್ಯಾಸರನ್ನು, ನಮಸ್ಕರಿಸಿ 'ಜಯ'(ಮಹಾಭಾರತ)ವನ್ನು ಹೇಳುತ್ತಿರುವೆನು.

ವಿ: ೧) ಹೀಗೆ ಮೂರು ಶ್ಲೋಕಗಳಲ್ಲಿ ಮಂಗಳಾಚರಣ ಮಾಡಿ, ಶ್ರೀಮದಾಚಾರ್ಯರು ಮಹಾಭಾರತಪ್ರವರ್ತಕರಿಂದ ಮಾಡಲ್ಪಟ್ಟ ಮಂಗಲಶ್ಲೋಕವನ್ನು ಉದಾಹರಿಸುತ್ತಿರುವರು. ಗ್ರಂಥಪ್ರವರ್ತಕರಿಂದ ವಂದಿತರಾದ ದೇವತೆಗಳು ಈ ಗ್ರಂಥದಿಂದ ಪ್ರತಿಪಾದಿತರೂ ಆಗಿರುವರು; ಇವರನ್ನು ಗ್ರಂಥವನ್ನು ಅಧ್ಯಯನಮಾಡುವವರೂ ಸಹ ಅವಶ್ಯ ವಂದಿಸಬೇಕು ಎಂಬುದನ್ನು ಸಹ ಈ ಮೂಲಕ ಶ್ರೀಮದಾಚಾರ್ಯರು ಸೂಚಿಸಿರುವರು.

೨) ಮಹಾಭಾರತಪ್ರವರ್ತಕರು, 'ವೈಶಂಪಾಯನರು' (೧೦/೭೭, ೭೮) ಎಂದು ಮುಂದೆ ಶ್ರೀಮದಾಚಾರ್ಯರೇ ತಿಳಿಸಿರುವುದರಿಂದ ಇದು ಅವರು ಮಾಡಿದ ಮಂಗಲಾಚರಣೆ ಎಂದು ತಿಳಿಯಬೇಕು.

ಜಯ ಎಂದರೆ ಭಾರತ, ನರೋತ್ತಮ ಎಂದರೆ ವಾಯು

ಜಯೋ ನಾಮೇತಿಹಾಸೋಽಯಂ ಕೃಷ್ಣದ್ವೈಪಾಯನೇರಿತಃ ।
ವಾಯುರ್ನರೋತ್ತಮೋ ನಾಮ ದೇವೀತಿ ಶ್ರೀರುದೀರಿತಾ ॥ ೫ ॥

೪. ಏವಂ ಮಂಗಲಂ ವಿಧಾಯ ಏತದಧ್ಯೇತೃಭಿಃ ಏತೇ ವಂದ್ಯಾಃ ಏತತ್ಪ್ರವರ್ತಕೈರ್ನತತ್ವಾತ್ ಏತತ್ಪ್ರತಿಪಾದ್ಯತ್ವಾ-ಚ್ಚೇತಿ ವಕ್ತುಮೇತತ್ಪ್ರವರ್ತಕಕೃತಮಂಗಲಾಚರಣಪದ್ಯಮೇವ ಪಠತಿ। –(ಜ)

೪. ಭಾರತಸ್ಯಾಪಿ ವೈಶಂಪಾಯನಮಾದಿಶತ್ । –(೧೦/೭೭)

ಇದಾನೀಂ ವೈಶಂಪಾಯನಾನುಷ್ಠಿತಮಂಗಲಾಚರಣಗ್ರಂಥಾತ್ಕ ಭಾರತಾದ್ಯಶ್ಲೋಕೋದಾಹರಣಮ್ । –(ವ)

೫. ನರಪದಸ್ಯ ಕೇವಲ ಮನುಷ್ಯಪರತಾಂ ನರೋತ್ತಮಪದಸ್ಯ ರಾಜಾದ್ಯರ್ಥತಾಂ 'ಸರಸ್ವತೀಂ ದೇವೀ'ಮಿತಿ ಸಾಮಾನಾಧಿಕರಣಪ್ರತೀತಿಂ ಪೃಥಗುಕ್ತ್ಯಾ ವ್ಯಾಸನಾರಾಯಣಯೋರ್ಭೇದಪ್ರತೀತಿಂ ಪೌನರುಕ್ತ್ಯಶಂಕಾಂ ವಾ ಜಯಶಬ್ದಸ್ಯ ಸ್ವಶತ್ರುಜಯಾದ್ಯರ್ಥತಾಂ ಚ ನಿವಾರಯಿತುಮೇತೇಷಾಂ ಚ ನಮ್ಯತ್ವೇ ಕಾರಣಂ ಚ ವಕ್ತುಂ ವ್ಯಾಖ್ಯಾತಿ । –(ವಾ)

೫. ತುಲಾಯಾಮಾರೋಪಣೇಽಪಿ ಸ್ವೇತರಗ್ರಂಥಾನ್ ಜಯತೀತಿ ಹೇತೋರಯಮಿತಿ ಹಾಸಃ ಜಯೋ ನಾಮೇತಿ ಭಾವಃ । –(ವಾ)

ನಾರಾಯಣ ವ್ಯಾಸರು ವಾಚ್ಯ ವಕ್ಪಗಳು

ನಾರಾಯಣೋ ವ್ಯಾಸ ಇತಿ ವಾಚ್ಯವಕ್ಪಸ್ವರೂಪಕಃ ।
ಏಕಃ ಸ ಭಗವಾನುಕ್ತಃ ಸಾಧಕೇಶೋ ನರೋತ್ತಮಃ ॥ ೬ ॥

ನರ ಉಪಸಾಧಕ, ದೇವಿ ಮಹಾಲಕ್ಷ್ಮಿ

ಉಪಸಾಧಕೋ ನರಶ್ಚೋಕ್ತೋ ದೇವೀ ಭಾಗ್ಯಾತ್ಮಿಕಾ ನೃಣಾಮ್ ।
ಸರಸ್ವತೀ ವಾಕ್ಯರೂಪಾ ತಸ್ಮಾನ್ನಮ್ಯಾ ಹಿ ತೇಽಖಿಲಾಃ ।
ಕೃಷ್ಣೌ ಸತ್ಯಾ ಭೀಮಪಾರ್ಥೌ ಕೃಷ್ಣೇತ್ಯುಕ್ತಾ ಹಿ ಭಾರತೇ ॥ ೭ ॥

ಅ: 'ಜಯ' ಎಂಬುದು ಕೃಷ್ಣದ್ವೈಪಾಯನ(ವ್ಯಾಸ)ರಿಂದ ಪ್ರಣೀತವಾದ ಈ ಮಹಾಭಾರತ ಇತಿಹಾಸ; ನರೋತ್ತಮ 'ವಾಯು'; 'ದೇವೀ' ಎಂಬುದಾಗಿ ಉಕ್ತರಾಗಿರುವವರು 'ಮಹಾಲಕ್ಷ್ಮಿ', ನಾರಾಯಣ ಗ್ರಂಥಪ್ರತಿಪಾದ್ಯ; ವೇದವ್ಯಾಸರು ಗ್ರಂಥ ರಚಿಸಿದವರು; ಇವರೀರ್ವರೂ ಸಾಕ್ಷಾತ್ ಭಗವಂತನೇ ಆಗಿರುವರು, ನರೋತ್ತಮರಾದ ವಾಯುದೇವರು

---

೫. ಭಾರವತ್ವೇನ ಜಿತತ್ವಾತ್ ಜಯತೀತಿ ಜಯಃ । –(ಜ)

೫. ಶೇಷಸ್ಯ ನರತ್ವೇನ ತದುತ್ತಮತಾ ವಾಯೋರೇವ ಸಂಭವತೀತಿ ಭಾವೇನ ವಾಯುರ್ನರೋತ್ತಮ ಇತ್ಯುಕ್ತಮ್। ಶೇಷಾದುತ್ತಮಸ್ಯ ವಾಯೋರ್ನರೋತ್ತಮತ್ವಕಥನಾನ್ನರಃ ಶೇಷ ಇತ್ಯಪಿ ವ್ಯಾಖ್ಯಾತಪ್ರಾಯಮ್ । –(ವಾ)

೫. ಭೀಮಸೇನಸ್ಯ ನರೋತ್ತಮತ್ವಂ ನೈಕವಾರಮುಕ್ತಂ ಭಾರತೇ । -

ರಾಕ್ಷಸಾನಾಂ ಚ ಮುಖ್ಯಸ್ಯ ನರಾಣಾಮುತ್ತಮಸ್ಯ ಚ ॥ (ವನ. ೧೧/೧೦)

ಕೀಚಕಾನಾಂ ಚ ಮುಖ್ಯಸ್ಯ ನರಾಣಾಮುತ್ತಮಸ್ಯ ಚ ॥ (ವಿರಾಟ. ೨೨/೫೪)

೬. ಸಾಧಕೇಷು ವ್ಯಾಸಮುಖಾತ್ ಶ್ರುತ್ವಾ ಯೇ ಭಾರತಾರ್ಥಸಾಧಕಾಃ ಶುಕಾದಯಸ್ತೇಷಾಮೀಶ ಇತ್ಯರ್ಥಃ । ಭಾರತಾರ್ಥವೇತೃಷು ಉತ್ತಮತ್ವಾತ್ ತತ್ಕರುಣಾಭಾವೇ ಅನ್ಯಸ್ಯಾರ್ಥಬೋಧೋ ನ ಸ್ಯಾದಿತಿ ತನ್ನಮನಮಿತಿ ಭಾವಃ । –(ವಾ)

ಅಭೀಷ್ಟಕಾರ್ಯಸಾಧಕಾನಾಂ ಈಶಃ – ಸ್ವಾಮೀ । –(ವ)

೭. ಕ್ರೀಡಾದಿಗುಣವಿಶಿಷ್ಟತ್ವಾತ್ ನಾರಾಯಣ ಏವ ದೇವಃ । ಅನ್ಯೇ ತು ದೇವತ್ವಜಾತ್ಯಾ ದೇವಾಃ । ಏವಂ ಚ ಯೋಗರೂಢಿಸದ್ಭಾವಾತ್ ನಾರಾಯಣ ಏವ ಮುಖ್ಯೋ ದೇವಃ ತಸ್ಯೇಯಮಿತಿ ವ್ಯುತ್ಪತ್ತ್ಯಾ ಲಕ್ಷ್ಮೀರೇವ ದೇವೀ ಇತಿ ಭಾವಃ । –(ವಾ)

೭. ಸತ್ಯಾ – ಸತ್ಯಭಾಮಾ । ಇದಂ ಚೋಪಲಕ್ಷಣಮ್ । ರುಗ್ಮಿಣ್ಯಪಿ ಗ್ರಾಹ್ಯಾ। ವನವಾಸೇ ಪಾಂಡವದುಃಖಶಮನಾಯ ಸತ್ಯಭಾಮಾಯಾ ಆನೀತತ್ವಾತ್ ತಸ್ಯಾ ಏವ ಗ್ರಹಣಮ್ । –(ವಾ)

'ಸಾಧಕೇಶರು'; ನರನು ಉಪಸಾಧಕನಾದ 'ಶೇಷ'; ಮಹಾಲಕ್ಷ್ಮಿಯು ಭಾಗ್ಯಪ್ರದರು; ಸರಸ್ವತಿಯು ವಾಕ್ಯಕ್ಕೆ ಅಭಿಮಾನಿನಿ; ಆದ್ದರಿಂದಲೇ ಇವರೆಲ್ಲರೂ ಗ್ರಂಥಾರಂಭದಲ್ಲಿ ವಂದ್ಯರಾಗಿರುವರು; ವಾಸಿಷ್ಠಕೃಷ್ಣ, ಯಾದವಕೃಷ್ಣ, ಸತ್ಯಭಾಮಾ, ಭೀಮಸೇನ, ಅರ್ಜುನ ಮತ್ತು ದ್ರೌಪದೀ ಎಂಬುದಾಗಿ ಇವರೆಲ್ಲ ಮಹಾಭಾರತದಲ್ಲಿ ಪ್ರತಿಪಾದಿತರಾಗಿರುವರು.

ವಿ: ೧) ಕೆಲವರು 'ನಾರಾಯಣಂ ನಮಸ್ಕೃತ್ಯ' ಎಂಬ ಶ್ಲೋಕದಲ್ಲಿನ 'ನರ' ಶಬ್ದಕ್ಕೆ 'ಮನುಷ್ಯ' ಎಂದೂ, 'ನರೋತ್ತಮ' ಎಂದರೆ ರಾಜಾದಿಗಳು ಎಂದೂ, 'ದೇವೀಂ ಸರಸ್ವತೀಂ' ಎಂಬುದನ್ನು 'ಸರಸ್ವತೀದೇವೀ' ಎಂದೂ, ತಪ್ಪಾಗಿ ಅರ್ಥಮಾಡಿರುವರು; ಅದರಂತೆ ನಾರಾಯಣ ಮತ್ತು ವ್ಯಾಸರು ಪ್ರತ್ಯೇಕವಾಗಿ ಉಕ್ತವಾಗಿರುವುದರಿಂದ ಅವರಿಬ್ಬರಲ್ಲಿ ಭೇದ ಅಥವಾ ಪುನರುಕ್ತಿಯ ಶಂಕೆಗೂ ಅವಕಾಶವಿದೆ; ಕೆಲವರು ನರೋತ್ತಮಂ ನಾರಾಯಣಂ ಎಂದೂ ಮತ್ತೆ ಕೆಲವರು ನರೋತ್ತಮ ನರಂ ಎಂದೂ ಸಹ ತಪ್ಪಾಗಿ ಅನ್ವಯ ಮಾಡಿರುವುದುಂಟು; ಆದ್ದರಿಂದ ಶ್ರೀಮದಾಚಾರ್ಯರು ಈ ಶ್ಲೋಕಕ್ಕೆ ಇಲ್ಲಿ ಹೀಗೆ ಸರಿಯಾದ ಅರ್ಥವನ್ನು ತಿಳಿಸಿರುವರು.

೨) 'ನರ' ಎಂದರೆ 'ಶೇಷ' ಎಂಬುದು ಪ್ರಸಿದ್ಧವಾದ ಅರ್ಥವೇ ಆಗಿದೆ; ಆತನಿಗಿಂತ ಉತ್ತಮನಾದ 'ನರೋತ್ತಮ' ಎಂದರೆ 'ವಾಯು' ಎಂದೇ ಅರ್ಥ. 'ನರಂ' ಆದ ಅನಂತರ 'ನರೋತ್ತಮ' ಎಂದು ಹೇಳಿರುವುದರಿಂದ, ಈ ನರೋತ್ತಮನು ಹಿಂದೆ ಉಕ್ತವಾದ 'ನರ'ನಿಗಿಂತ ಉತ್ತಮ ಎಂದೇ ಅರ್ಥ. ಮಹಾಭಾರತದಲ್ಲಿ ಅನೇಕ ಕಡೆಗಳಲ್ಲಿ ಭೀಮಸೇನನನ್ನು 'ನರೋತ್ತಮ' ಎಂದೇ ವ್ಯವಹರಿಸಿರುವುದನ್ನು ಗಮನಿಸಬೇಕು. ನರ ಎಂದರೆ 'ಜೀವ' ಎಂದೂ ಅರ್ಥ– ವಿರುವುದರಿಂದ 'ನರೋತ್ತಮ' ಎಂದರೆ 'ಜೀವೋತ್ತಮ' ಎಂದೂ ಅರ್ಥ.

''ರಾಕ್ಷಸಾನಾಂ ಚ ಮುಖ್ಯಸ್ಯ ನರಾಣಾಮುತ್ತಮಸ್ಯ ಚ'' – ಭಾರತ (ವನ. ೧೧/೧೦)

೩) ವೇದವ್ಯಾಸರು ಗ್ರಂಥಕಾರರು ಮಾತ್ರವಲ್ಲದೆ ಮಹಾಭಾರತದ ಉದ್ದಕ್ಕೂ ಕಾಣಿಸಿಕೊಳ್ಳುವ ಪ್ರಮುಖಪಾತ್ರರೂ ಆಗಿರುವರು.

---

೭. ಪಾರ್ಥ ಇತ್ಯುಪಲಕ್ಷಣಮ್ । ಪಾರ್ಥಾವಿಷ್ಟತ್ವೇನ ಪಾರ್ಥಸಂಬಂಧಿತ್ವಾತ್ ನರಃ ನರಾಪರಾವತಾರೋ ಬಲಶ್ಚ ಗೃಹ್ಯತೇ। –(ವಾ)

೭. ನರಃ – ಪಾರ್ಥಃ । ತದಾವೇಶತ್ವಾತ್ । –(ವಾ)

೭. ಭಾಗ್ಯಾತ್ಮಿಕೇತ್ಯನೇನ ವಕ್ಷಶ್ರೋತ್ರಾದೀನಾಮನ್ನಪಾನಾದ್ಯಭಾವೇ ವಚನಸ್ಯೈವಾಸಂಭವಾತ್ ಶ್ರವಣೋಚಿತ-ಭಾಗ್ಯಲಾಭಾಯ ದೇವ್ಯಾ ನಮನಮಿತಿ ಭಾವಃ। –(ವಾ)

೭. ಸರಸ್ವತೀ ವಾಕ್ಯರೂಪಾ – ಭಾರತವಾಕ್ಯಾಭಿಮಾನಿನೀ । ಕೋಶಸ್ಥಧನಲಾಭಾಯ ಕೋಶಪಾಲಾನುಸರಣ-ವತ್ ಸಾऽಪಿ ವಂದ್ಯೇತಿ ಭಾವಃ। –(ವಾ)

೭. ವಾಕ್ಯರೂಪಾ – ಪ್ರತಿಪಾದಕವಿದ್ಯಾಭಿಮಾನಿನೀ। – (ಜ)

೪) 'ಸತ್ಯಾ' ಶಬ್ದದಿಂದ ಮಹಾಲಕ್ಷ್ಮಿಯ ಮತ್ತೊಂದು ರೂಪವಾದ 'ರುಕ್ಮಿಣಿ'ಯು ಉಪಲಕ್ಷಿತ; ವನವಾಸಕಾಲದಲ್ಲಿ ಪಾಂಡವರ ಕುಶಲಪ್ರಶ್ನೆಗೆಂದು ಶ್ರೀಕೃಷ್ಣನ ಜೊತೆಗೆ ತೆರಳಿದ್ದವರು 'ಸತ್ಯಭಾಮ' ಎಂಬ ಕಾರಣದಿಂದ ಆ ರೂಪವನ್ನೇ ಉಲ್ಲೇಖಿಸಿರುವರು; ದ್ರೌಪದೀ ಸತ್ಯಭಾಮಾ ಸಂವಾದಪರ್ವ ಎಂಬ ಉಪಪರ್ವವೊಂದು ವನಪರ್ವದಲ್ಲಿದೆ ಎಂಬುದೂ ಗಮನಾರ್ಹ.

೫) 'ನರ' ಶಬ್ದದಿಂದ 'ನರಾವಿಷ್ಟ'ನಾದ ಅರ್ಜುನನೂ ಗ್ರಾಹ್ಯ; ಅದರಂತೆ ನರನ ಮತ್ತೊಂದು ಅವತಾರವಾದ 'ಬಲರಾಮ'ನೂ ಗ್ರಾಹ್ಯ.

೬) ವಕ್ತೃ ಮತ್ತು ಶ್ರೋತೃಗಳು ನಿಶ್ಚಿಂತೆಯಿಂದ ಗ್ರಂಥಾಧ್ಯಯನಾದಿಗಳನ್ನು ಮಾಡಲು ಅವಶ್ಯವಾದ ಅನ್ನಪಾನಾದಿಭಾಗ್ಯವನ್ನು ಕರುಣಿಸುವವರು 'ಮಹಾಲಕ್ಷ್ಮಿ'; ಗ್ರಂಥಾನುಸಂಧಾನಕ್ಕೆ ಅವಶ್ಯವಾದ ಅನುಗ್ರಹ ಮಾಡುವವರು ವಾಗಭಿಮಾನಿನಿ 'ಸರಸ್ವತೀ' ಆದ್ದರಿಂದ ಅವರಿಗೂ ಸಹ ವಿಶೇಷ ನಮಸ್ಕಾರವು ವಿಹಿತ.

೭) ಭಾರತಾರ್ಥವನ್ನು ಬಲ್ಲವರಲ್ಲೂ ಮುಖ್ಯರು ವಾಯ್ವವತಾರಿಯಾದ ಭೀಮಸೇನ. ಅವರ ಅನುಗ್ರಹವಾಗದಿದ್ದಲ್ಲಿ ಭಾರತಾರ್ಥವೆಂದಿಗೂ ತಿಳಿಯಲಾರದು. ಸಾಕ್ಷಾತ್ ವಾಯುದೇವರ ಮುಖದಿಂದ ಶ್ರವಣ ಮಾಡಲಾಗದ ಅಧಿಕಾರಿಗಳಿಗೆ ಉಪಸಾಧಕನಾಗಿ ನೆರವಾಗುವವನು 'ನರ'; ಆದ್ದರಿಂದ ಅವರಿಬ್ಬರಿಗೂ ನಮಸ್ಕಾರ ಕರ್ತವ್ಯ; 'ಮಹಾಭಾರತತಾತ್ಪರ್ಯನಿರ್ಣಯ' ವೆಂಬ ಅಪೂರ್ವಗ್ರಂಥವನ್ನು ರಚಿಸಿರುವುದು ಅವರು 'ಸಾಧಕೇಶರು' ಎಂಬುದಕ್ಕೆ ದ್ಯೋತಕ. 'ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ' ಎಂಬ ಅರ್ಥದಲ್ಲೂ ಅವರು ಸಾಧಕೇಶರಾಗಿರುವರು.

೮) ಇನ್ನು 'ನಾರಾಯಣ'ನಂತೂ ಗ್ರಂಥದ ಮಹಾತಾತ್ಪರ್ಯ; ಅವನ ಸರ್ವೋತ್ತಮತ್ವದ ಸ್ಥಾಪನೆಗೆಂದೇ ಮಹಾಭಾರತ ಹೊರಟಿದೆ; ಅವನೇ ಮೋಕ್ಷದಾಯಕ; ಇಂತಹ ಸರ್ವೋತ್ಕೃಷ್ಟ ಗ್ರಂಥವನ್ನು ಶ್ರೀವ್ಯಾಸರೂಪದಿಂದ ರಚಿಸಿದವನೂ ಅವನೇ, ಆದ್ದರಿಂದ ಆ ಎರಡೂ ರೂಪಗಳೂ ವಂದ್ಯವೇ ಆಗಿವೆ.

೯) ಮಹಾಭಾರತದಲ್ಲಿ ಇವರೆಲ್ಲ ಪ್ರತಿಪಾದಿತರಾಗಿರುವ ಬಗೆಯನ್ನೂ ಅವರೆಲ್ಲ ಹೇಗೆ ವಂದ್ಯರಾಗಿರುವರು ಎಂಬ ಪರಿಯನ್ನೂ ಶ್ರೀವಾದಿರಾಜಸ್ವಾಮಿಗಳು ತುಂಬಾ ಸುಂದರವಾಗಿ ಹೀಗೆ ನಿರೂಪಿಸಿರುವರು;

> ವ್ಯಾಸಾವತಾರಸಮಯೇ ವ್ಯಾಸಕಥಾ ಸವಿಸ್ತರಂ ಕಥಿತಾ । ಅರ್ಜುನಸಾರಥ್ಯಾದಿಕರಣೇನ ಗೀತಾವಕ್ತೃತ್ವೇನ ಚ ಬಹುಶೋ ವಿಶ್ವರೂಪಪ್ರದರ್ಶನಾದಿನಾ ಕೃಷ್ಣಕಥಾ ಸವಿಸ್ತರಂ ಭಾರತೇ ಕಥಿತಾ। ರುಗ್ಮಿಣೀಸತ್ಯಭಾಮಯೋರಪಿ ರಾಜಸೂಯಾಶ್ವಮೇಧಾದೌ ಕಥಾ ನಿರೂಪಿತಾ। ದಂಭೋದ್ಭವಗರ್ವಶಮನಾಯ ನರಮುನೇರಪಿ ಕಥಾ ಕಥಿತಾ । ಬಲರಾಮ ಕಥಾऽಪಿ ತೀರ್ಥಯಾತ್ರಾದೌ ಗದಾಯುದ್ಧಾದೌ ಚ ಸ್ಪಷ್ಟಂ ನಿರೂಪಿತಾ। ಭೀಮಪಾರ್ಥದ್ರೌಪದೀನಾಂ ತು ಕಥಾ, ಕಥನಾಯ ಸಮಸ್ತಭಾರತಂ ಪ್ರವೃತ್ತಮ್ ।

ಏವಂ ಚ ಕೃಷ್ಣಾಖ್ಯಾವತಾರರೂಪೇಣೋಕ್ತವಿಧಯಾ ಮೂಲರೂಪೇಣ ಚ ಪ್ರತಿಪಾದ್ಯಮಾನತ್ವಾತ್ ನಾರಾಯಣಸ್ಯ ನಮನಮ್। ವ್ಯಾಸಸ್ಯ ತೂಕ್ತವಿಧಯಾ ಸ್ವಸ್ಯೈವ ಪ್ರತಿಪಾದ್ಯಮಾನತ್ವಾತ್ ಪ್ರಾಗುಕ್ತರೀತ್ಯಾ ವಕ್ತೃತ್ವಾಚ್ಚ ನಮನಮ್। ದೇವ್ಯಾಶ್ಚ ಸತ್ಯಾದಿರೂಪೇಣ ಪ್ರತಿಪಾದ್ಯಮಾನತ್ವಾತ್ ಪ್ರಾಗುಕ್ತರೀತ್ಯಾ ಭಾಗ್ಯದಾತೃತ್ವಾಚ್ಚ ನಮನಮ್। ವಾಯೋಶ್ಚ ಭೀಮರೂಪೇಣ ಸರ್ವತ್ರ ಪ್ರತಿಪಾದ್ಯಮಾನತ್ವಾತ್ ಮೂಲರೂಪೇಣ ವ್ಯಾಸಮುಖತ ಏವ ಸಕಲಭಾರತಾರ್ಥಸಂಗ್ರಾಹಕತಯಾ ಸಾಧಕಾಗ್ರೇಸರತ್ವಾಚ್ಚ ನಮನಮ್। ಸರಸ್ವತ್ಯಾಸ್ತು ದ್ರೌಪದೀರೂಪೇಣ ಭಾರತೇ ಪ್ರತಿಪಾದ್ಯಮಾನತ್ವಾತ್ ಸಕಲಭಾರತವಾಕ್ಯಾಭಿಮಾನಿತ್ವಾಚ್ಚ ನಮನಮ್। ಶೇಷಸ್ಯ ತು ಸಾಕ್ಷಾನ್ನರಾವತಾರೇಣ ಅರ್ಜುನಾವಿಷ್ಪಪ್ರಬಲತಮಸ್ವಾಂಶರೂಪೇಣ ಚ ಪ್ರತಿಪಾದ್ಯಮಾನತ್ವಾತ್ ಮೂಲರೂಪೇಣ ಭಾರತಾರ್ಥಾನಾಮು-ಪಸಾಧಕತ್ವಾಚ್ಚ ನಮನಮಿತಿ ಸಮುದಿತಗ್ರಂಥಸ್ಯಾಭಿಸಂಧಿರಿತಿ ಜ್ಞೇಯಮ್ ॥ –(ವಾ)

ವಿಷಯೋಪಕ್ರಮ

ಸರ್ವಸ್ಯ ನಿರ್ಣಯಸುವಾಕ್ಯಸಮುದ್ಧೃತೀ ತು
ಸ್ವಾಧ್ಯಾಯಯೋರ್ಹರಿಪದಸ್ಮರಣೇನ ಕೃತ್ವಾ।
ಆನಂದತೀರ್ಥವರನಾಮವತೀ ತೃತೀಯಾ
ಭೌಮೀ ತನುರ್ಮರುತ ಆಹ ಕಥಾಃ ಪರಸ್ಯ ॥ ೮ ॥

ಅ: ಸರ್ವಶಾಸ್ತ್ರಾರ್ಥನಿರ್ಣಯ ಮತ್ತು ಸುವಾಕ್ಯದ ಉದ್ಧಾರಗಳನ್ನು ಶೋಭನವಾದ ಮೊದಲ ಎರಡು ಅಧ್ಯಾಯಗಳಲ್ಲಿ ಶ್ರೀಹರಿಪದಸ್ಮರಣ ಪೂರ್ವಕವಾಗಿ ಮಾಡಿ 'ಆನಂದತೀರ್ಥ' ಎಂಬ ಶ್ರೇಷ್ಠನಾಮವನ್ನು ಹೊಂದಿದ ಭೂಮಿಯಲ್ಲಿ ಅವತರಿಸಿದ ವಾಯುದೇವರ ತೃತೀಯರೂಪವಾದ ಮಧ್ವಾಚಾರ್ಯರು ಪರಮಾತ್ಮನ ಕಥೆಗಳನ್ನು ತಿಳಿಸುತ್ತಿರುವರು.

ವಿ: ೧) ಪ್ರಥಮಾಧ್ಯಾಯಕ್ಕೆ **'ಸರ್ವಶಾಸ್ತ್ರಾರ್ಥನಿರ್ಣಯ'** ಮತ್ತು ದ್ವಿತೀಯಾಧ್ಯಾಯಕ್ಕೆ **'ಸುವಾಕ್ಯೋದ್ಧಾರ'** ಎಂಬ ಹೆಸರುಗಳು ಇದರಿಂದ ಸೂಚಿತವಾಗಿವೆ. ಅವೆರಡಕ್ಕೂ ಪ್ರತ್ಯೇಕ ಮಂಗಲಶ್ಲೋಕಗಳಿರುವುದು **'ಹರಿಪದಸ್ಮರಣೇನ ಕೃತ್ವಾ'** ಎಂಬುದರಿಂದ ಸೂಚಿತ.

೨) ''ಸರ್ವಶಾಸ್ತ್ರಾರ್ಥನಿರ್ಣಯವು ಎರಡನೆಯ ಅಧ್ಯಾಯದಲ್ಲೂ ಬಂದಿದೆ; ಮೊದಲನೆಯ ಅಧ್ಯಾಯದಲ್ಲೂ ಸುವಾಕ್ಯಗಳ ಉದಾಹರಣೆಯಿದೆ; ಆದ್ದರಿಂದ ಆ ಎರಡೂ ಅಧ್ಯಾಯಗಳಲ್ಲಿ ಈ ಎರಡು ವಿಷಯಗಳೂ ಉಕ್ತವಾಗಿವೆ'' ಎಂಬ ಅರ್ಥವಿಶೇಷವನ್ನು ಜನಾರ್ದನಭಟ್ಟರು ಬರೆದಿರುವರು.

---

೮. ಭೌಮೀ – ಭೂಮೌ ವಿದ್ಯಮಾನೇತಿ ಕ್ವಚಿತ್।
'ಭೌಮೀ ಭೂಮಿಸಂಬಂಧಿನೀ–ಭೂಮೌ ಅವತೀರ್ಣಾ ಇತಿ ಯಾವತ್। –(ವಾ)
ಭೈಮೀ ಇತಿ ಪಾಠೇ ಭೀಮಾದನಂತರೀ ತನುರಿತ್ಯರ್ಥಃ। –(ವ)

ಭೈಮೀ – ಭೀಮಾವತಾರಭೂತಾ । 'ಜನ್ಮಾಸ ಭೀಮಸ್ಯ ಯದುಕ್ತಮತ್ರ।' ತಥಾ 'ವಿಪ್ರತನುಃ ಸ ಭೀಮೋ ದೈತ್ಯೈರ್ನಿಗೂಢಂ ಹರಿತತ್ತ್ವಮಾಹ' ಇತಿ ಅತ್ರೈವ ಕಥನಾತ್। ಯತ್ತು 'ತೃತೀಯಮಸ್ಯೇತಿ' ಅತ್ರಾಪಿ 'ಮರುತಃ ತೃತೀಯಾ ತನು'ರಿತಿ ತದವತಾರತ್ವೇನ ಗಣನಂ ತತ್। ಯಥಾ ಮಹಾಭಿಷಗಾಖ್ಯಸ್ಯ ಶಂತನುತ್ವೇಽಪಿ 'ಮಹಾಭಿಷಕ್ ಶಂತನುಶ್ಚೇತಿ' ಅವತಾರಾವತಾರತ್ವೇಽಪಿ ತಾರಾ ಚಿತ್ರಾಂಗದಾ ಇತ್ಯಾದಿವದ್ಯುಜ್ಯತೇ। ಅತ ಏವ ಭಗವತ್ಪಾದೈರಂಶ-ದ್ವಯಮೇವೋಕ್ತಂ। 'ವಾಯುತ್ವಮಾಪ್ತಃ ಸ ಹನೂಮದಂಶಃ ಬ್ರಾಹ್ಮಂ ಪದಂ ಪ್ರಾಪ್ಯ ವೃಕೋದರಶ್ಚ।'

ಮುಂದುವರಿದ ಜಗತ್ಸೃಷ್ಟಿ - ಬ್ರಹ್ಮೋತ್ಪತ್ತಿ

ವ್ಯೂಢಶ್ಚತುರ್ಧಾ ಭಗವಾನ್ ಸ ಏಕೋ
ಮಾಯಾಂ ಶ್ರಿಯಂ ಸೃಷ್ಟಿವಿಧಿತ್ಸಯಾಽಽದರ ।
ರೂಪೇಣ ಪೂರ್ವೇಣ ಸ ವಾಸುದೇವ-
ನಾಮ್ನಾ ವಿರಿಂಚಂ ಸುಷುವೇ ಚ ಸಾತತಃ ॥ ೯ ॥

ಅ: ನಾಲ್ಕುರೂಪಗಳನ್ನು ಧರಿಸಿದ ಅವತಾರಾದಿ ಭೇದರಹಿತನಾದ ಭಗವಂತನಾದ ಆ ನಾರಾಯಣನು ಸೃಷ್ಟಿಮಾಡುವ ಇಚ್ಛೆಯಿಂದ ವಾಸುದೇವ ಎಂಬ ಪ್ರಥಮರೂಪದಿಂದ

---

೯. ವ್ಯೂಢಃ–ವ್ಯೂಹಂ ಪ್ರಾಪ್ತಃ । –(ವಾ)

ಅವತೀರ್ಣ ಇತಿ ಯಾವತ್ । –(ಜ)

೯. ಯಃ ಶೇತೇ ಪ್ರಲಯೇ ವಿಷ್ಣುಃ ಶೂನ್ಯನಾಮಾ ಮಹಾಕೃತಿಃ ।
ಸ ತು ನಾರಾಯಣೋ ನಾಮ ನರಾಣಾಮಯನತ್ವತಃ ।
ರೂಪಂ ದ್ವಿತೀಯಂ ಭವತಿ ದೀಪಾದ್ದೀಪಾಂತರಂ ಯಥಾ ।
ಸಿಸೃಕ್ಷೋಸ್ತಸ್ಯ ಪುರುಷ ಇತ್ಯಾಹುಸ್ತದ್ವಿದೋ ಜನಾಃ ।
ಸ ರಮಾಯಾ ದ್ವಿತೀಯೇ ತು ರೂಪೇ ಪ್ರಕೃತಿಸಂಜ್ಞಕೇ ।
ವೀರ್ಯಮಾಧತ್ತ ಪುರುಷೋ ಮಹಾಂಸ್ತಸ್ಮಾದಜಾಯತ ।
ಯೋಽಸೌ ಹಿರಣ್ಯಗರ್ಭಾಖ್ಯಃ ಪುರುಷಃ ಸೋಽಪಿ ಭಣ್ಯತೇ ।
ಶ್ರದ್ಧೇತ್ಯುಕ್ತಾ ತು ತತ್ಪತ್ನೀ ಸಾಽಪಿ ಪ್ರಕೃತಿರುಚ್ಯತೇ ।
ಪ್ರಲಯೇ ತ್ವಶರೀರೌ ತೌ ವಿಭಾಗೇನ ವ್ಯವಸ್ಥಿತೌ ।
ಶರೀರಂ ಪ್ರಾಪ್ಯ ಪುರುಷಾತ್ ಸಂಯೋಗಂ ತೌ ಪ್ರಚಕ್ರತುಃ ।
ತತಃ ಪುನರ್ಮಹತತ್ತ್ವಂ ಪ್ರಜಾತಂ ಜಗದಂಕುರಮ್ ।
ಸ್ವಸ್ಮೈವ ಪುತ್ರತಾಂ ಯಾತಮಹಂಕಾರಸ್ತತೋಽಜನಿ' ಇತಿ ವ್ಯೋಮಸಂಹಿತಾಯಾಮ್ ।
– ಭಾ.ತಾ. (೨/೬/೪೧)

೯. 'ಸೃಷ್ಟಿಸ್ಥಿತ್ಯಪ್ಯಯಾಭಾಸಾ ಯದ್ಭಲಾದ್ಯತ್ರ ಚ ಸ್ಥಿತಾಃ ।
ತದ್ಬ್ರಹ್ಮ ಜಗದಾಧಾರಂ ವಾಸುದೇವೇತಿ ತದ್ವಿದುಃ' ಇತಿ ಭಾಗವತತಂತ್ರೇ ॥ – ಭಾ.ತಾ. (೨/೧೦/೭)

ಮಾಯಾ ಎಂಬ ಶ್ರೀರೂಪವನ್ನು ಸೃಷ್ಟಿಸುವ ಬಯಕೆಯಿಂದ ಸಂಪರ್ಕಿಸಿದನು; ಬಳಿಕ ಆ ಮಾಯಾದೇವಿಯು 'ವಿರಿಂಚ'ನನ್ನು ಹೆತ್ತಳು.

ವಿ: ಮೊದಲನೆಯ ಅಧ್ಯಾಯದಲ್ಲಿ ಶ್ಲೋ.೧೦ ರವರೆಗೆ ನಿರೂಪಿಸಿದ್ದ ಸೃಷ್ಟಿಕ್ರಮವನ್ನು ಇಲ್ಲಿಂದ ಮುಂದುವರೆಸುತ್ತಿರುವರು.

ಸಂಕರ್ಷಣಜಯಾಪುತ್ರನಾಗಿ ವಾಯು

ಸಂಕರ್ಷಣಾಚ್ಚಾಪಿ ಜಯಾತನೂಜೋ
ಬಭೂವ ಸಾಕ್ಷಾದ್ಬಲಸಂವಿದಾತ್ಮಾ।
ವಾಯುರ್ಯ ಏವಾಥ ವಿರಿಂಚನಾಮಾ
ಭವಿಷ್ಯ ಆದ್ಯೋ ನ ಪರಸ್ತತೋ ಹಿ ॥ ೧೦ ॥

ಅ: ಸಂಕರ್ಷಣರೂಪದ ಶ್ರೀಹರಿಯಿಂದ ಜಯಾನಾಮಕ ಶ್ರೀಮಹಾಲಕ್ಷ್ಮಿಯ ಪುತ್ರನಾಗಿ ಸಾಕ್ಷಾತ್ ಬಲಜ್ಞಾನಸ್ವರೂಪನಾದ ವಾಯು ಜನಿಸಿದ; ಆ ವಾಯುವೇ ಮುಂದಿನ ಕಲ್ಪದಲ್ಲಿ ಮೊದಲು ಸೃಷ್ಟನಾಗುವ 'ವಿರಿಂಚ'ನಾಗುವನು; ಆದ್ದರಿಂದ ಅವನಿಗಿಂತ ಉತ್ತಮನು ಬೇರೆ ಯಾರೂ ಇಲ್ಲ.

ವಿ: ೧) ಸಂಕರ್ಷಣ ಮತ್ತು ಜಯಾ ರೂಪದ ಲಕ್ಷ್ಮೀನಾರಾಯಣರಿಂದ ಜನಿಸಿದ ವಾಯುದೇವರು ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವವರು; ಅವರು ಬಲಜ್ಞಾನಸ್ವರೂಪರು ಆದ್ದರಿಂದಲೇ ಅವರು ಸರ್ವಜೀವರಲ್ಲೂ ಉತ್ತಮರು, ಎಂದು ಭಾವ.

೨) 'ಬಲಸಂವಿದಾತ್ಮಾ' ಎಂಬ ವಿಶೇಷಣವು 'ವಾಯು' ಶಬ್ದದ ಅರ್ಥವಿವರಣ–ರೂಪವಾಗಿದ್ದು ಅದು ಅವರು 'ಬಳಿತ್ಥಾಸೂಕ್ತ'ಪ್ರತಿಪಾದ್ಯರು ಎಂಬುದನ್ನೂ ಸೂಚಿಸುವುದು.

---

೧೦. ಸಾಕ್ಷಾನ್ಮುಖ್ಯತಯಾ ಬಲಸಂವಿದಾತ್ಮಾ ಬಲಸಂವಿದೋರಾತ್ಮಾ ಅಭಿಮಾನಿನೀ ತದಾತ್ಮಕಶ್ಚ।

೧೦. ವಾಯೂನಾಂ ಬಹುತ್ವಾದತ್ರ ಕೋ ವಾಯುರ್ವಿವಕ್ಷಿತ ಇತ್ಯತ ಉಕ್ತಮ್ । ಯ ಏವೇತಿ । ಅಥ ಕಲ್ಪಾಂತರೇ ಯ ಏವ ವಾಯುರಾದ್ಯೋ ಭವಿಷ್ಯಃ ಭಾವಿವಿರಿಂಚನಾಮಾ ಸ ಏವ ವಾಯುಃ ತತಃ ಪರೋ ನಹಿ । –(ವಾ)

೧೦. 'ವಾಯುರೇವ ಯತೋ ಬ್ರಹ್ಮಪದಂ ನಿಯಮತೋ ವ್ರಜೇತ್ ।
ಸಹೈವ ಜನನೇऽಪ್ಯಸ್ಮಾತ್ಪೂರ್ವಂ ವಾಯೋರ್ಜನಿಂ ವದೇತ್ ।
ಕ್ವಚಿತ್ ತು ಬ್ರಹ್ಮಣಃ ಪೂರ್ವಂ ಪ್ರಾಧಾನ್ಯಾತ್ತತ್ಪದಸ್ಯ ಚ' ಇತಿ ಬ್ರಹ್ಮತರ್ಕೇ ।
- ಬ್ರಹ್ಮಸೂತ್ರಭಾಷ್ಯ (೩/೪ /೩೮)

ಪ್ರದ್ಯುಮ್ನ ಕೃತಿಯರಿಂದ ಸರಸ್ವತಿ ಭಾರತಿಯರ ಸೃಷ್ಟಿ

ಸೂತ್ರಂ ಸ ವಾಯುಃ ಪುರುಷೋ ವಿರಿಂಚಃ
ಪ್ರದ್ಯುಮ್ನತಶ್ಚಾಥ ಕೃತೌ ಸ್ತ್ರಿಯೌ ದ್ವೇ ।
ಪ್ರಜಜ್ಞತುರ್ಯಮಳೇ ತತ್ರ ಪೂರ್ವಾ
ಪ್ರಧಾನಸಂಜ್ಞಾ ಪ್ರಕೃತಿರ್ಜನಿತ್ರೀ ॥ ೧೧ ॥

ಅ: ಆ ವಾಯುವೇ 'ಸೂತ್ರ'; ವಿರಿಂಚನೇ 'ಪುರುಷ'; ಅನಂತರ 'ಕೃತಿ' ಎಂಬ ಮಹಾಲಕ್ಷ್ಮಿಯಲ್ಲಿ ಪ್ರದ್ಯುಮ್ನರೂಪದ ಶ್ರೀಹರಿಯಿಂದ ಇಬ್ಬರು ಅವಳಿಸ್ತ್ರೀಯರು ಜನಿಸಿದರು. ಅವರಿಬ್ಬರಲ್ಲಿ ಮೊದಲನೆಯವಳು 'ಪ್ರಧಾನ' ಎಂಬ ಹೆಸರಿನವಳು; ಶಿವಾದಿಗಳಿಗೆ ಜನನಿಯಾದ 'ಪ್ರಕೃತಿ'ಯು.

---

೧೧. ಗ್ರಂಥಾಂತರೇ 'ವಾಸುದೇವಾತ್ ಪುರುಷೋ ಜಾತಃ ಸಂಕರ್ಷಣಾತ್ ಸೂತ್ರನಾಮಾ ಪುತ್ರೋಽಭೂದಿತ್ಯಸ್ತಿ। ತದ್ವಿರೋಧಪರಿಹಾರಾಯಾಹ - ಸೂತ್ರಮಿತಿ । ಗ್ರಂಥಾಂತರೇ ಯತ್ಸೂತ್ರಮಿತ್ಯುಕ್ತಂ ಸ ವಾಯುರೇವ । ಯಃ ಪುರುಷ ಇತ್ಯುಕ್ತಃ ಸ ವಿರಿಂಚ ಏವ । –(ವಾ)

೧೧. ಕೃತೌ – ಕೃತಿನಾಮಕದೇವ್ಯಾಮ್ । –(ವಾ)

೧೧. 'ಸರ್ವಜೀವಾಭಿಮಾನೀ ತು ಪರಃ ಪುರುಷ ಉಚ್ಯತೇ' ಇತಿ ವಚನಾತ್ –(ವ)

೧೧. ಅವ್ಯಕ್ತನಾಮ್ನೀ ತು ಬ್ರಹ್ಮಾಣೀ ಸಂಪ್ರಕೀರ್ತಿತಾ । –ತಂತ್ರಸಾರ

೧೧. ಗಾಯತ್ರೀ ಚೈವ ಸಾವಿತ್ರೀ ತಥೈವ ಚ ಸರಸ್ವತೀ ।
ಏವಂ ತ್ರಿರೂಪಾ ಪ್ರಕೃತಿಬ್ರಹ್ಮಪತ್ನೀ ಪ್ರಕೀರ್ತಿತಾ ॥
ಮಹತ್ತತ್ತ್ವಾತ್ಮಕೋ ಬ್ರಹ್ಮಾ ತಜ್ಜತ್ವಾತ್ ತತ್ರ ಲೀಯತೇ ।
ಗುಣಾಧಿಕಃ ಪತಿರಪಿ ತಸ್ಯಾಃ ಸತ್ತ್ವಾದಿಭೇದತಃ ॥
ತ್ರಿವಿಧಾ ಮೂಲರೂಪಾಯಾಂ ಪ್ರಕೃತ್ಯಾಂ ಸಾ ಪ್ರಲೀಯತೇ ॥
ಪ್ರಕೃತಿರ್ಮೂಲರೂಪಾ ಸಾ ಬ್ರಹ್ಮಪತ್ನೀ ಜಗನ್ಮಯಾ ।
ಪುರುಷಾಭಿಧೇ ವಿರಿಂಚೇ ತು ಸ ಸ್ವಸ್ಮಿನ್ ಕಾಲಸಂತೇ ।
ಕಾಲಾಭಿಧೋ ವಿರಿಂಚಸ್ತು ಮಹಾಲಕ್ಷ್ಮ್ಯಾಂ ವಿಲೀಯತೇ ॥
ಜೀವಮಾಯೇತಿ ಯಾಮಾಹುಃ ಸಾ ಚ ಸತ್ತ್ವಾದಿಭೇದತಃ ।
ತ್ರಿವಿಧೈಕತ್ವಮಾಪಾದ್ಯ ವಿಷ್ಣ್ವಾವೇವ ವಿಲೀಯತೇ ॥
ಹರೇರತ್ಯಂತಸಾಮೀಪ್ಯಂ ಲಯೋ ಲಕ್ಷ್ಮ್ಯಾಃ ಪ್ರಕೀರ್ತಿತಃ ।
ಪುರುಷೇಣಾಪಿ ಸಾಮೀಪ್ಯಂ ಪ್ರಕೃತೇರ್ಲಯ ಉಚ್ಯತೇ ॥
ಬ್ರಹ್ಮಾ ಪ್ರಕೃತಿಶ್ಚೈವ ಮುಕ್ತಿಗೌ ವಿಲಯೇ ಯತಃ ।
ಅತಸ್ತೌ ಭಿನ್ನದೇಹೌ ತು ಜ್ಞಾನಮಾತ್ರೌ ಸಮೀಪಗೌ ॥ –ಭಾ. ತಾ. ೧೧/೨೪/೨೯

ಎಃ ಗ್ರಂಥಾಂತರಗಳಲ್ಲಿ 'ವಾಸುದೇವಾತ್ ಪುರುಷೋ ಜಾತಃ' (ವಾಸುದೇವನಿಂದ 'ಪುರುಷ'ನು ಜನಿಸಿದನು) 'ಸಂಕರ್ಷಣಾತ್ ಸೂತ್ರನಾಮಾ ಪುತ್ರೋ ಅಭೂದಿತ್ಯಪಿ (ಸಂಕರ್ಷಣನಿಂದ ಸೂತ್ರನೆಂಬ ಪುತ್ರನು ಜನಿಸಿದನು) ಎಂದು ಉಕ್ತವಾಗಿದೆ. ಬ್ರಹ್ಮದೇವರೇ 'ಪುರುಷ' ಎಂದೂ, ವಾಯುದೇವರೇ ಸೂತ್ರ ಎಂದೂ ತಿಳಿಸುವ ಮೂಲಕ ಶ್ರೀಮದಾಚಾರ್ಯರು ಆ ವಾಕ್ಯಗಳ ಅಭಿಪ್ರಾಯವನ್ನು ಸ್ಪಷ್ಟಪಡಿಸಿ ವಿರೋಧವನ್ನು ಪರಿಹರಿಸಿರುವರು.

ಬ್ರಹ್ಮ ವಾಯುಗಳಿಂದ ಶೇಷ ಗರುಡರ ಸೃಷ್ಟಿ

ಶ್ರದ್ಧಾ ದ್ವಿತೀಯಾऽಥ ತಯೋಶ್ಚ ಯೋಗೋ
ಬಭೂವ ಪುಂಸೈವ ಚ ಸೂತ್ರನಾಮ್ನಾ ।
ಹರೇರ್ನಿಯೋಗಾದಥ ಸಂಪ್ರಸೂತೌ
ಶ್ಲೇಷಃ ಸುಪರ್ಣಶ್ಚ ತಯೋಃ ಸಹೈವ ॥ ೧೨ ॥

೧೧. 'ಸ್ಮೃತಂ ಜಗದಿದಂ ಯಸ್ಮಿನ್ ಸೂತ್ರಂ ವಾಯುರಸೌ ಸ್ಮೃತಃ । – ಬೃಹದಾರಣ್ಯಕೋಪನಿಷದ್ಭಾಷ್ಯ
ಸರ್ವಜ್ಞಾನಾತ್ ತಥಾऽऽಯುಷ್ಟ್ವಾತ್ ಸೂತ್ರಾತ್ಮಾ ವಾಯುರುಚ್ಯತೇ ।
ಶ್ರದ್ಧಾನಾಮೈವ ತತ್ತ್ವೇ ಸರ್ವಸ್ಮಾಂತರ್ನಿರೀಕ್ಷಣಮ್ । – ಬೃಹದಾರಣ್ಯಕೋಪನಿಷದ್ಭಾಷ್ಯ

೧೧. ಜ್ಞಾನಾಭಿಮಾನೀ ಪುರುಷಃ ಸ ಬ್ರಹ್ಮಾ ಸಮುದಾಹೃತಃ ।
ಅರ್ಥಾಭಿಮಾನೀ ಪ್ರಕೃತಿರ್ಗಾಯತ್ರೀ ಸಾ ಪ್ರಕೀರ್ತಿತಾ ।
ತಯೋರ್ನಿಯಾಮಕೋ ವಿಷ್ಣುಃ ಶ್ರೀಶ್ಚಾನುಗ್ರಾಹಿಕಾ ಸ್ಮೃತಾ ।
ವಾಯುಸ್ತು ಬ್ರಹ್ಮಣಃ ಪುತ್ರಃ ಪ್ರಕೃತೌ ಸಮಜಾಯತ ।
ತ್ರಿಗುಣಾತ್ಮಾ ಸಮುದ್ದಿಷ್ಟಃ ಪ್ರಾಯಃ ಸತ್ವಾತ್ಮಕಸ್ತಥಾ ।
ಗಾಯತ್ರೀ ಚೈವ ಸಾವಿತ್ರೀ ತಥೈವ ಚ ಸರಸ್ವತೀ ।
ಏವಂ ತ್ರಿರೂಪಾ ಪ್ರಕೃತಿರೇಕಾ ಸತ್ವಾದಿಭೇದತಃ ।
ತಾಸು ವೀರ್ಯಂ ಸಮುತ್ಸೃಷ್ಟಂ ಬ್ರಹ್ಮಣೈಕತ್ವಮಾಗತಮ್ ।
ಸ ಸೂತ್ರಾತ್ಮಾ ಸಮುದ್ದಿಷ್ಟೋ ವಾಯುರ್ಲೋಕಪ್ರಣಾಯಕಃ ।
ತಸ್ಯಾಪಿ ಸೂತ್ರಂ ಭಗವಾನ್ ಧಾರಣಾದ್ವಿಷ್ಣುರವ್ಯಯಃ ।
ಸೂತ್ರಪುತ್ರಸ್ತ್ವಹಂಕಾರಃ ಸ ರುದ್ರಃ ಸಮುದಾಹೃತಃ ।
ಸೂತ್ರಾತ್ಮನಾ ಮಹಾಂಶ್ಚಾಪಿ ಸಹಜಾತಶ್ಚತುರ್ಮುಖಃ ।
ತಸ್ಯಾಪಿ ಪುತ್ರೋऽಹಂಕಾರಃ ಸ ಚಾನಂತ ಉದಾಹೃತಃ ।
ಅನಂತಾದಪಿ ರುದ್ರೋऽಭೂದ್ಬ್ರಹ್ಮಣಶ್ಚೇತಿ ಸ ತ್ರಿಧಾ ।
ವೈಕಾರಿಕೋ ಬ್ರಹ್ಮಜಸ್ತು ತೈಜಸೋ ವಾಯುಜಃ ಸ್ಮೃತಃ ।
ತಾಮಸೋऽನಂತಜಶ್ಚೈವ ಸ ಏಕೋ ಗುಣಭೇದತಃ' ಇತಿ ಪ್ರಾಥಮ್ಯೇ ॥ – ಭಾ.ತಾ.(೧೧/೨೪/೪)

ಶೇಷಸ್ತಯೋರೇವ ಹಿ ಜೀವನಾಮಾ
ಕಾಲಾತ್ಮಕಃ ಸೋಽಥ ಸುಪರ್ಣ ಆಸೀತ್
ತೌ ವಾಹನಂ ಶಯನಂ ಚೈವ ವಿಷ್ಣೋಃ
ಕಾಲಾ ಜಯಾದ್ಯಾಶ್ಚ ತತಃ ಪ್ರಸೂತಾಃ ॥ ೧೩ ॥

ಅ: 'ಶ್ರದ್ಧಾ' ಎಂಬವಳು ಎರಡನೆಯವಳು; ಅವರಿಬ್ಬರಿಗೂ (ಕ್ರಮವಾಗಿ) ಪುರುಷ(ಬ್ರಹ್ಮ) ಮತ್ತು ಸೂತ್ರ(ವಾಯು)ರೊಂದಿಗೆ ಜೊತೆಯಾಯಿತು. ಅವರಿಬ್ಬರಿಂದ ಶ್ರೀಹರಿಯ ಆದೇಶದಂತೆ ಶೇಷ ಮತ್ತು ಸುಪರ್ಣ(ಗರುಡ)ರು ಜನಿಸಿದರು. ಶೇಷನಿಗೆ 'ಜೀವ' ಎಂದೂ ಹೆಸರು; ಗರುಡನು ಕಾಲನಿಯಾಮಕನಾದನು. ಅವರಿಬ್ಬರೂ ಕ್ರಮವಾಗಿ ವಿಷ್ಣುವಿಗೆ ವಾಹನ ಮತ್ತು ಶಯನರಾದರು; ಅವರಿಬ್ಬರಿಂದ ಕಾಲನಾಮಕರಾದ ವಿಷ್ಣುಪಾರ್ಷದರು ಮತ್ತು ಜಯವಿಜಯಾದಿ ವಿಷ್ಣುಪಾರ್ಷದರು ಜನಿಸಿದರು.

ವಿ: ೧) ಪ್ರದ್ಯುಮ್ನನಿಂದ ಕೃತಿಯಲ್ಲಿ ಪ್ರಧಾನನಾಮಕರಾದ ಸರಸ್ವತಿ ಮತ್ತು ಶ್ರದ್ಧಾನಾಮಕರಾದ ಭಾರತೀ ಅವಳಿಯಾಗಿ ಜನಿಸಿದರು; ಇವರಿಬ್ಬರೂ ಕ್ರಮವಾಗಿ ಬ್ರಹ್ಮ–ವಾಯುಗಳೊಂದಿಗೆ ಜೊತೆಯಾಗಿ ಶೇಷ ಮತ್ತು ಸುಪರ್ಣರನ್ನು ಏಕಕಾಲದಲ್ಲಿ ಪಡೆದರು. (ಶೇಷನು ಸರಸ್ವತೀಪುತ್ರ, ಮತ್ತು ಗರುಡನು ಭಾರತೀಪುತ್ರ); ಶೇಷನು ಜೀವಾಭಿಮಾನಿ ಎನ್ನಿಸಿ ವಿಷ್ಣುವಿಗೆ ಶಯನನಾದನು. ಗರುಡನು ಕಾಲಾಭಿಮಾನಿ ಎನ್ನಿಸಿ ವಾಹನನಾದನು. ಅನಂತರ ಗರುಡನಿಂದ ಕಾಲನಾಮಕರಾದ ಹರಿಪಾರ್ಷದರೂ, ಶೇಷನಿಂದ ಜಯವಿಜಯಾದಿ ಹರಿ–ಪಾರ್ಷದರೂ ಜನಿಸಿದರು.

---

೧೧. ಜ್ಞಾನಾಭಿಮಾನೀ ಪುರುಷಃ ಸ ಬ್ರಹ್ಮಾ ಸಮುದಾಹೃತಃ।
ಅರ್ಥಾಭಿಮಾನೀ ಪ್ರಕೃತಿರ್ಗಾಯತ್ರೀ ಸಾ ಪ್ರಕೀರ್ತಿತಾ ॥
ತಯೋರ್ನಿಯಾಮಕೋ ವಿಷ್ಣುಃ ಶ್ರೀಶ್ಚಾನುಗ್ರಾಹಿಕಾ ಸ್ಮೃತಾ।

೧೧. ಇದಮಪಿ ಗ್ರಂಥಾಂತರವಿರೋಧಪರಿಹಾರಾರ್ಥಮ್। –(ವಾ)

೧೨. 'ಹರಿಶ್ಚ ಪ್ರಕೃತಿಶ್ಚೈವ ಬ್ರಹ್ಮವಾಯೂ ತಥೈವ ಚ।
ಸುಪರ್ಣಶೇಷರುದ್ರಾಶ್ಚಶಕ್ರಃ ಸೂರ್ಯಯಮಾವಪಿ।
ಅಗ್ನಿರ್ಯಮಾನುಜಶ್ಚೈವ ಕಾಲಶಬ್ದೇರಿತಾಃ ಕ್ರಮಾತ್।
ಪೂರ್ವೋಕ್ತಾಸ್ತ್ವಪರೋಕ್ತಾನಾಂ ಪ್ರಭವಃ ಸರ್ವಶೋ ಮತಾಃ' ಇತ್ಯುದ್ದಾಮಸಂಹಿತಾಯಾಮ್ ॥
– ಭಾ.ತಾ.(೨/೨/೧೮)

೧೩. 'ಗರುಡಾತ್ ಕಾಲಾಃ ಶೇಷಾತ್ ಜಯಾದ್ಯಾಃ' ಎಂದು ಜನಾರ್ದನಭಟ್ಟರು ಬರೆದಿರುವರು.

೨) ಗ್ರಂಥಾಂತರದಲ್ಲಿ 'ಪ್ರಧಾನ' ಮತ್ತು ಪುರುಷರ ಪುತ್ರರಾಗಿ 'ಜೀವ'ನೂ, ಶ್ರದ್ಧಾಸೂತ್ರರ ಪುತ್ರನಾಗಿ 'ಕಾಲ'ನೂ ಅವತರಿಸಿದರು ಎಂದು ಉಕ್ತವಾಗಿದ್ದು ಅದರ ಅಭಿಪ್ರಾಯವನ್ನು ಶ್ರೀಮದಾಚಾರ್ಯರು 'ಜೀವ' ಎಂದರೆ ಜೀವಾಭಿಮಾನಿಯಾದ ಶೇಷ, ಕಾಲ ಎಂದರೆ ಕಾಲಾಭಿಮಾನಿಯಾದ 'ಗರುಡ' ಎಂಬುದಾಗಿ ವಿವರಿಸಿ ವಿರೋಧವನ್ನು ಪರಿಹರಿಸಿರುವರು.

ವಿಷ್ವಕ್ಸೇನನ ಉತ್ಪತ್ತಿ

ಕಾಲಾ ಜಯಾದ್ಯಾ ಅಪಿ ವಿಷ್ಣುಪಾರ್ಷದಾ
ಯಸ್ಮಾದಂಡಾತ್ ಪರತಃ ಸಂಪ್ರಸೂತಾಃ ।
ನೀಚಾಃ ಸುರೇಭ್ಯಸ್ತತ ಏವ ತೇಽಖಿಲಾಃ
ವಿಷ್ವಕ್ಸೇನೋ ವಾಯುಜಃ ಪೇನ ತುಲ್ಯಃ ॥ ೧೪ ॥

ಅ: ಕಾಲಾಭಿಮಾನಿಗಳಾದ 'ಕಾಲ' ನಾಮಕರು ಮತ್ತು ಜಯ ಮೊದಲಾದವರು ವಿಷ್ಣು-ಪಾರ್ಷದರೇ ಆಗಿರುವರು; ಅವರೆಲ್ಲ ಬ್ರಹ್ಮಾಂಡಸೃಷ್ಟಿಗಿಂತ ಪೂರ್ವದಲ್ಲಿ ಅದರ ಹೊರಗೆ ಸೃಷ್ಟರಾದವರು; ಆದ್ದರಿಂದ ಅನಂತರ ಹುಟ್ಟಿದ ದೇವತೆಗಳಿಗಿಂತಲೂ ಅವರೆಲ್ಲ ಕಡಿಮೆಯಾದವರೇ ಸರಿ; ಈ ವಿಷ್ಣುಪಾರ್ಷದರಲ್ಲಿ ವಿಷ್ವಕ್ಸೇನನು ಮಾತ್ರ ವಾಯು-ಪುತ್ರನಾಗಿದ್ದು, ಅವನು ಗಣೇಶನಿಗೆ ಸಮಾನ.

ವಿ: ೧) ಹಿಂದಿನ ಶ್ಲೋಕದಲ್ಲಿ ಪ್ರಸ್ತುತರಾದ ಕಾಲ ಮತ್ತು ಜಯಾದಿಗಳು ಯಾರು? ಎಂಬ ಶಂಕೆಯನ್ನು 'ವಿಷ್ಣುಪಾರ್ಷದ'ರು ಎಂದು ಹೇಳುವ ಮೂಲಕ ಇಲ್ಲಿ ಪರಿಹರಿಸಿರುವರು.

೨) ಮೊದಲು ಹುಟ್ಟಿದವರು ಅನಂತರ ಹುಟ್ಟಿದವರಿಗಿಂತ ಉತ್ತಮರು ಎಂಬ ನಿಯಮ ದೇವತೆಗಳಲ್ಲಿದೆ; ಎಂದ ಮೇಲೆ ಶಿವ ಮತ್ತು ಇಂದ್ರಾದಿಗಳಿಗಿಂತಲೂ ಮುಂಚೆ ಹುಟ್ಟಿದ ಜಯವಿಜಯಾದಿಗಳು ಅವರಿಗಿಂತಲೂ ಉತ್ತಮರೋ ಎಂಬ ಶಂಕೆಯನ್ನು ಇಲ್ಲಿ ಪರಿಹರಿ–

---

೧೪. ಅಂಡಾಂತರ್ಯಾ ಸೃಷ್ಟಿಃ ಸೈವ ತಾರತಮ್ಯೋಪಯೋಗಿನೀ । ನ ಬಾಹ್ಯಸೃಷ್ಟಿಃ । ತತಃ ಬ್ರಹ್ಮಾಂಡಾದ್ಬಹಿಃ ಸೃಷ್ಟತ್ವಾತ್ ಪೂರ್ವೋತ್ಪನ್ನತ್ವೇಽಪಿ ಸುರೇಭ್ಯೋ ನೀಚಾ ಇತ್ಯರ್ಥಃ । –(ವಾ)

೧೪. ಬ್ರಹ್ಮಾಂಡಾದ್ಬಹಿಃ ತತ್ಸೃಷ್ಟಿಃ ಅಂಡಾಂತಃ ಪಾದ್ಮಸೃಷ್ಟಿಶ್ಚೇತಿ ದ್ವೇ ತಾರತಮ್ಯಜ್ಞಾಪಿಕೇ। ಪ್ರಥಮಾಧ್ಯಾಯೇ ಅನಿರುದ್ಧಾದುಕ್ತಾಂ ಸೂಕ್ಷ್ಮಸೃಷ್ಟಿಂ ವಿಹಾಯ ಅನ್ಯಾ ಸೂಕ್ಷ್ಮಸೃಷ್ಟ್ಯನ್ಯಾಶ್ಚ ಸ್ಥೂಲಸೃಷ್ಟಯಃ ನ ತಾರತಮ್ಯಜ್ಞಾಪಿಕಾಃ । ಅತ ಏವ ಪ್ರಥಮಾಧ್ಯಾಯೇ 'ಕ್ರಮಶಃ' ಇತ್ಯುಕ್ತಮ್ । ಏತೇಷಾಂ ಚ ಸೂಕ್ಷ್ಮಸೃಷ್ಟೌ ಜಾತತ್ವಾನ್ನ ಶ್ರೈಷ್ಠ್ಯಮಿತಿ ಭಾವಃ । -(ಜ)

೧೪. ತತ್ರ ಅಪವಾದಮಾಹ । ವಿಷ್ವಕ್ಸೇನ ಇತಿ । ಪೇನ– ಆಕಾಶಾಭಿಮಾನಿನಾ ವಿನಾಯಕೇನ ।

ತತ್ರ ಅಪವಾದಮಾಹ । ವಿಷ್ವಕ್ಸೇನ ಇತಿ । ತೇಷಾಂ ಮಧ್ಯಸ್ಥಃ ವಿಷ್ವಕ್ಸೇನಃ ವಾಯುಜಃ ಶೇಷಗರುಡಯೋರ್ನ । ಸ್ವರೂಪತಾರತಮ್ಯಮಾಹ । ಪೇನೇತಿ । ಪೇನ ಗಣೇಶೇನ ತುಲ್ಯಃ ಸಮಾನಃ । –(ಜ)

ಸಿರುವರು. ಮೇಲೆ ಹೇಳಿದ ನಿಯಮವು ಅನ್ವಯಿಸುವುದು ಬ್ರಹ್ಮಾಂಡದೊಳಗಿನ ಸೃಷ್ಟಿಗೆ ಮಾತ್ರ; ಇದು ಬ್ರಹ್ಮಾಂಡದ ಹೊರಗಿನ ಸೃಷ್ಟಿಯಾದ್ದರಿಂದ ಇದು ತಾರತಮ್ಯಕ್ಕೆ ಜ್ಞಾಪಕವಾದುದಲ್ಲ. ಆದ್ದರಿಂದ ಅನಂತರ ಹುಟ್ಟಿದ ಶಿವ, ಇಂದ್ರಾದಿಗಳೇ ಈ ವಿಷ್ಣುಪಾರ್ಷದರಿಗಿಂತ ಮಿಗಿಲು ಎಂಬ ತಾರತಮ್ಯಕ್ಕೆ ವಿರೋಧವಿಲ್ಲ ಎಂದು ಭಾವ.

೩) ಬ್ರಹ್ಮಾಂಡದ ಒಳಗಿನ ಪಾದ್ಮಸೃಷ್ಟಿಯಂತೆ, ಬ್ರಹ್ಮಾಂಡದ ಹೊರಗಿನ ತತ್ತ್ವಸೃಷ್ಟಿಯು ಸಹ ತಾರತಮ್ಯದ್ಯೋತಕ ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಯಬೇಕು.

೪) 'ವಿಷ್ಣುಪಾರ್ಷದರೆಲ್ಲ ಹೀಗೆ ಶೇಷಗರುಡರ ಪುತ್ರರಾದರು; ವಿಷ್ವಕ್ಸೇನ ಎಂಬ ವಿಷ್ಣುಪಾರ್ಷದನು ಮಾತ್ರ ವಾಯುಪುತ್ರ, ತಾರತಮ್ಯದಲ್ಲಿ ಅವನು ಭೂತಾಕಾಶಕ್ಕೆ ಅಭಿಮಾನಿಯಾದ ಗಣೇಶನಿಗೆ ಸಮ ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಸಿರುವರು.

೫) ಇಲ್ಲಿ ಶ್ರೀವಾದಿರಾಜಸ್ವಾಮಿಗಳು ಒಂದು ವಿಶೇಷಾರ್ಥವನ್ನು ಬರೆದಿರುವರು:

'ಯದ್ವಾ ಅಂಡಾತ್ ಅಂಡಸೃಷ್ಟೇಃ ಪರತಃ ಪಶ್ಚಾತ್ ಪ್ರಯೋಜನಾಯ ಅಂಡಾಂತರ್ವರ್ತಿ ವೈಕುಂಠಾದಿಲೋಕದ್ವಾರಪಾಲನಾದಿಪ್ರಯೋಜನಾಯ ಪ್ರಸೂತಾ ಸೃಷ್ಟಾಃ। ನ ತು ಬ್ರಹ್ಮರುದ್ರಾದಿ ತತ್ತ್ವಾಭಿಮಾನಿ-ದೇವತಾವದಂಡಸೃಷ್ಟ್ಯುಪಯೋಗಿತಯೈವ ಸೃಷ್ಟಾಃ। ತಸ್ಮಾತ್ ಕಾರಣಾತ್ ಸುರೇಭ್ಯೋ ತತ್ತ್ವಾಭಿಮಾನಿದೇವೇಭ್ಯೋ ನೀಚಾಃ। ಸ್ವಸೇವಾಯೈ ಪ್ರಾಕ್ ಗೃಹೀತದಾಸಜನೇಭ್ಯೋಽಪ್ಯಾಧಿಪತ್ಯಾಯ ಪಶ್ಚಾದ್ಗೃಹೀತಾಧಿಕಾರಿಪುರುಷಾಣಾ-ಮೇವ ಶ್ರೈಷ್ಠ್ಯದರ್ಶನಾತ್। ತತ್ತ್ವಾಭಿಮಾನಿ ಬ್ರಹ್ಮಾದಿ ದೇವೇಷು ಅಂಡಸೃಷ್ಟೇಃ ಪೂರ್ವಮಪಿ ಕ್ರಮಿಕ-ತತ್ತ್ವಪರಿಪಾಲನಾ ಯಃ ಪೂರ್ವಪೂರ್ವಂ ಸೃಷ್ಟಃ ಸ ಸ ಪ್ರಧಾನಃ। ಯಃ ಪಶ್ಚಾತ್ ಸೃಷ್ಟಃ ಸಃ ನೀಚ ಇತಿ ಸೃಷ್ಟಿಕ್ರಮಸ್ಯ ನ ಕಾಽಪ್ಯನುಪಪತ್ತಿರಿತಿ ಭಾವಃ।

ಅನಿರುದ್ಧನಿಂದ ತತ್ತ್ವಸೃಷ್ಟಿ

ವ್ಯೂಹಾತ್ ತೃತೀಯಾತ್ ಪುನರೇವ ವಿಷ್ಣೋ-
ರ್ದೇವಾಂಶ್ಚತುರ್ವರ್ಣಗತಾನ್ ಸಮಸ್ತಾನ್ ।
ಸಂಗೃಹ್ಯ ಬೀಜಾತ್ಮತಯಾಽನಿರುದ್ಧೋ
ನ್ಯಧತ್ತ ಶಾಂತ್ಯಾಂ ತ್ರಿಗುಣಾತ್ಮಿಕಾಯಾಮ್ ॥ ೧೫ ॥

ಅ: ಅನಿರುದ್ಧನು ವಿಷ್ಣುವಿನ ತೃತೀಯರೂಪವಾದ ಪ್ರದ್ಯುಮ್ನನಿಂದ ಚತು-ರ್ವರ್ಣೋಪೇತರಾದ ಸಮಸ್ತದೇವತೆಗಳನ್ನು ಬೀಜ(ರೇತೋ)ರೂಪದಿಂದ ಪುನಃ ಸಂಗ್ರಹಿಸಿ ತ್ರಿಗುಣಗಳಿಗೆ ಅಭಿಮಾನಿಯಾದ ಶಾಂತಿದೇವಿಯಲ್ಲಿ ಇರಿಸಿದ.

---

೧೫. ಅನಿರುದ್ಧಾತ್ ಸ್ಥೂಲಸೃಷ್ಟಿಮಾಹ। —(ಜ)

ವಿ: ೧) ಅನಿರುದ್ಧನಿಂದ ನಡೆದ ಸ್ಥೂಲಸೃಷ್ಟಿಯನ್ನು ನಿರೂಪಿಸತೊಡಗಿರುವರು.

೨) ಒಮ್ಮೆ ಅನಿರುದ್ಧನಲ್ಲಿ ಒಪ್ಪಿಸಿದ್ದ ತನ್ನ ಉದರದಲ್ಲಿನ ಜೀವರನ್ನು ಪ್ರದ್ಯುಮ್ನ ಅವರೆಲ್ಲ ಅನಿರುದ್ಧನಿಂದ ಸೂಕ್ಷ್ಮತರದೇಹವನ್ನು ಪಡೆದುಕೊಂಡ ಮೇಲೆ ಪುನಃ ತನ್ನ ವಶಕ್ಕೆ ತೆಗೆದುಕೊಂಡಿದ್ದನು; ಅದನ್ನೀಗ ಅನಿರುದ್ಧರೂಪದ ಶ್ರೀಹರಿಯು ಪ್ರದ್ಯುಮ್ನರೂಪದಿಂದ ಮತ್ತೆ ತನ್ನವಶಕ್ಕೆ ತೆಗೆದುಕೊಳ್ಳುತ್ತಿರುವನು ಎಂಬುದನ್ನು ಶ್ರೀಮದಾಚಾರ್ಯರು 'ಪುನಃ ಸಂಗೃಹ್ಯ' ಎಂಬುದಾಗಿ ಸೂಚಿಸಿರುವರು.

೩) 'ತ್ರಿಗುಣಾತ್ಮಿಕಾ' ಎಂದು ಶಾಂತಿದೇವಿಯನ್ನು ಉಲ್ಲೇಖಿಸಿದ್ದರಿಂದ, ಅವರಿಗೂ 'ರೂಪತ್ರಯ'ವಿದೆ ಎಂಬುದು ಸೂಚಿತ. –(ವಾ)

ಮಹತ್ತತ್ತ್ವ, ಅಹಂಕಾರ ತತ್ತ್ವ, ಬುದ್ಧಿತತ್ತ್ವದ ಸೃಷ್ಟಿ

ತತೋ ಮಹತ್ತತ್ತ್ವತನುರ್ವಿರಿಂಚಃ
ಸ್ಥೂಲಾತ್ಮನೈವಾಜನಿ ವಾಕ್ ಚ ದೇವೀ ।
ತಸ್ಯಾಮಹಂಕಾರತನುಂ ಸ ರುದ್ರಂ
ಸಸರ್ಜ ಬುದ್ಧಿಂ ಚ ತದರ್ಧದೇಹಾಮ್ ॥ ೧೬ ॥

---

೧೫. ಚತುರ್ವರ್ಣಗತಾನ್ । ಬ್ರಾಹ್ಮಣಕ್ಷತ್ರಿಯಾದೀನ್ ಚತುರ್ವರ್ಣಗತಾನ್ । ದೇವೇಷ್ವಪಿ ಬ್ರಾಹ್ಮಣ-ಕ್ಷತ್ರಿಯಾದಿವರ್ಣಭೇದೋಽಸ್ತಿ। ಅತ ಏವ ಸೂರ್ಯಾತ್ ಕ್ಷತ್ರಿಯವಂಶೋತ್ಪತ್ತಿಃ । ವಿರಿಂಚಾಚ್ಚ ಭೃಗ್ವಾದಿಬ್ರಾಹ್ಮಣ-ವಂಶೋತ್ಪತ್ತಿಃ ಇತಿ ಭಾವಃ । –(ವಾ)

೧೫. ನನು 'ಪ್ರದ್ಯುಮ್ನಸಂಜ್ಞಕ ಇಮಾಂಶ್ಚರಮಾತ್ಮನೇऽದಾತ್' ಇತಿ ಪ್ರದ್ಯುಮ್ನಃ ಸ್ವೋದರಸ್ಥಜೀವಾನ್ ಅನಿರುದ್ಧೋದರೇ ಪ್ರಾವೇಶಯದಿತಿ ಪ್ರಾಗೇವೋಕ್ತಮ್ । ಇದಾನೀಂ ವಿಷ್ಣೋಸ್ತೃತೀಯಾತ್ ವ್ಯೂಹಾತ್ ಪ್ರದ್ಯುಮ್ನಾತ್ ಸಂಗೃಹ್ಯೇತಿ ಕಥಮುಚ್ಯತೇ ಇತಿ ಚೇತ್। ಸತ್ಯಮ್ । ಪ್ರಾಗೇಕವಾರಂ ಅನಿರುದ್ಧಕರೇ ದತ್ವಾ ಸೂಕ್ಷ್ಮತರ-ದೇಹಸಹಿತಾನ್ ಕಾರಯಿತ್ವಾ ಪುನಶ್ಚ ತಾನ್ ಸರ್ವಾನ್ ಪ್ರದ್ಯುಮ್ನ ಏವ ಸ್ವೋದರೇ ಪ್ರಾವೇಶಯದಿತಿ ಕಥಾ ಪುನಃ ಸಂಗೃಹ್ಯೇತಿ ವದತಾ ಹ್ಯಾಚಾರ್ಯೇಣ ಸೂಚಿತಾ । ಅತೋ ನ ವಿರೋಧಃ ಇತಿ ಪರಿಹಾರಸಂಭವಾತ್ । –(ವಾ)

೧೫. ಬೀಜಾತ್ಮತಯಾ = ರೇತೋರೂಪೇಣ । ಅತ ಏವ ಪ್ರಾಗನಿರುದ್ಧಃ ಉದರೇ ದೇಹಸಹಿತಾನಿತ್ಯುಕ್ತಮ್ । –(ವಾ)

೧೫. ತ್ರಿಗುಣಾತ್ಮಿಕಾಯಾಂ = ಸತ್ವರಜಸ್ತಮೋಭಿಮಾನಿನ್ಯಾಮ್ । ಅನೇನ ಶಾಂತಿದೇವ್ಯಾ ಅಪಿ ರೂಪತ್ರಯಮಸ್ತೀತಿ ಸೂಚಿತಮ್ ॥ –(ವಾ)

೧೬. ತತಃ ಶಾಂತಿದೇವ್ಯಾ ಇತ್ಯರ್ಥಃ । – (ವಾ)
ತತಃ ಶಾಂತೇಃ ವಾಗ್ದೇವೀ ಸರಸ್ವತೀ ಚಾಜನಿ । – (ಜ)

೧೬. ತಸ್ಯಾಂ ವಾಗ್ದೇವ್ಯಾಮ್ । ಸಃ ಬ್ರಹ್ಮಾ । ಬುದ್ಧಿಂ ಉಮಾಮ್ । –(ಜ)

ಅ: ಅನಂತರ ಆ ಶಾಂತಿದೇವಿಯಿಂದ ಮಹತ್ತತ್ತ್ವಕ್ಕೆ ಅಭಿಮಾನಿಯಾದ ವಿರಿಂಚ ಮತ್ತು ವಾಗಭಿಮಾನಿನಿಯಾದ ಸರಸ್ವತಿ ಸ್ಥೂಲರೂಪದಿಂದ ಜನಿಸಿದರು; ವಿರಿಂಚನು ಆ ವಾಗ್ದೇವಿಯಲ್ಲಿ ಅಹಂಕಾರತತ್ತ್ವಕ್ಕೆ ಅಭಿಮಾನಿಯಾದ ಶಿವನನ್ನು ಮತ್ತು ಶಿವನ ಅರ್ಧಶರೀರಳಾದ ಬುದ್ಧ್ಯಭಿಮಾನಿನಿಯಾದ ಉಮಾದೇವಿಯನ್ನೂ ಸೃಷ್ಟಿಸಿದ.

ಮನಸ್ಸು ಮೊದಲಾದವುಗಳ ಸೃಷ್ಟಿ

ಬುದ್ಧ್ಯಾಮುಮಾಯಾಂ ಸ ಶಿವಸ್ತ್ರಿರೂಪೋ
ಮನಶ್ಚ ವೈಕಾರಿಕದೇವಸಂಘಾನ್ ।
ದಶೇಂದ್ರಿಯಾಣ್ಯೇವ ಚ ತೈಜಸಾನಿ
ಕ್ರಮೇಣ ಖಾದೀನ್ ವಿಷಯೈಶ್ಚ ಸಾರ್ಧಮ್ ॥ ೧೭ ॥

ಅ: ಮೂರು ರೂಪದ ಆ ಶಿವ ಬುದ್ಧ್ಯಭಿಮಾನಿನಿಯಾದ ಆ ಉಮಾದೇವಿಯಲ್ಲಿ ಮನಸ್ಸನ್ನೂ ಮತ್ತು ಇತರ ಹತ್ತು ಇಂದ್ರಿಯಾಭಿಮಾನಿದೇವತೆಗಳಾದ ವೈಕಾರಿಕದೇವತೆಗಳ

---

೧೬. ಮಹದ್ರೂಪಾದಿನಾ ಬ್ರಹ್ಮಾ ದೇವಾಶ್ಚೈವ ಪ್ರಜಜ್ಞಿರೇ ।
ಅಂಡೇ ತೇಷಾಮಭಿವ್ಯಕ್ತಿರ್ಜನಿರಿತ್ಯಭಿಧೀಯತೇ ॥ –ಭಾ. ತಾ. ೧೦/೪/೧೬

೧೬. ತತೋ ರೂಪಂ ಮಹಾನ್ ನಾಮ ಬ್ರಹ್ಮಣೋ೨ಹಂಕೃತಿಃ ಶಿವಃ ।
ಬ್ರಹ್ಮಣೋ ಬುದ್ಧಿನಾಮ್ನೋಮಾ ತತ ಇಂದ್ರೋ ಮನೋ೨ಭಧಃ ॥
ಸ್ಕಂದಶ್ಚ ತತ ಏವಾನ್ಯೇ ಸರ್ವೇ ದೇವಾಃ ಪ್ರಜಜ್ಞಿರೇ ॥
ತತ್ರ ಪೂರ್ವತನಃ ಶ್ರೇಯಾನ್ ಗುಣೈಃ ಸರ್ವೈಃ ಸಮಸ್ತಶಃ ॥ – ಅನುವ್ಯಾಖ್ಯಾನ (೨/೩/೫೧)

೧೬. 'ಅಂತಃಸ್ಥಿತಹರೇಃ ಕಾಮಾದಂಡೇ ಬ್ರಹ್ಮಾ ತತೋ೨ಜನಿ ।
ತತ್ರ ದೇವಾಶ್ಚ ಸಂಜಾತಾಃ ಪುನಸ್ತತ್ತ್ವಾತ್ಮಕಾಃ ಪ್ರಭೋಃ' ಇತಿ ಚ ॥ - ಭಾ. ತಾ. (೨/೧೦/೧೩)

'ಬ್ರಹ್ಮಣಸ್ತಪತಃ ಪೂರ್ವಂ ವಿಷ್ಣುರ್ಜಾತ ಉರುಕ್ರಮಃ ।
ಸರ್ವಲೋಕಹಿತಾರ್ಥಾಯ ಯೇನ ರೂಪಂ ಪ್ರಕಾಶಿತಮ್ ।
ಯಶ್ಚಪಾತಿ ಸದಾ ಲೋಕಾನಜತೋ ಜಯತಾಂ ವರಃ ।
ತಸ್ಮಾದ್ರುದ್ರಃ ಸಮುತ್ಪನ್ನಃ ಸರ್ವಸಂಹಾರಕೃದ್ವಿಭುಃ ।
ಏತೇ ತ್ರಿಪುರುಷಾಃ ಪ್ರೋಕ್ತಾಃ ಸೃಷ್ಟಿಸ್ಥಿತ್ಯಂತಕಾರಿಣಃ ।
ನಿಮಿತ್ತಮಾತ್ರಂ ತೌ ದೇವೌ ವಿಷ್ಣುಃ ಸರ್ವಸ್ಯ ಕಾರಣಮ್' ಇತಿ ಸ್ಕಾಂದೇ ॥ - ಭಾ.ತಾ. (೨/೭/೫)

೧೭. ವೈಕಾರಿಕದೇವಾಃ = ಮನಆದ್ಯೇಕಾದಶೇಂದ್ರಿಯಾಭಿಮಾನಿದೇವಾಃ । – (ವಾ)

೧೭. ಜಡಾದ್ವೈಕಾರಿಕಾಹಂಕಾರಾತ್ ದೇವಸೃಷ್ಟಿರ್ನಾಮ ದೇವದೇಹಸೃಷ್ಟಿರೇವೇತಿ ಭಾವಃ । – (ವಾ)

೧೭. 'ಸಹೈವ ಸೃಷ್ಟಿರ್ನ' ಇತಿ ಸೂಚನಾಯ ಕ್ರಮೇಣೇತ್ಯುಕ್ತಮ್ । ಶಬ್ದಾತ್ ಸ್ಪರ್ಶಃ ಸ್ಪರ್ಶಾದ್ರೂಪಂ,

ಸಮೂಹವನ್ನೂ ವೈಕಾರಿಕಾಹಂಕಾರದಿಂದ ಸೃಷ್ಟಿಸಿದ; ತೈಜಸಾಹಂಕಾರದಿಂದ ಹತ್ತು ಇಂದ್ರಿಯಗಳನ್ನೂ ಮತ್ತು ತಾಮಸಾಹಂಕಾರದಿಂದ ಆಕಾಶಾದಿ ಪಂಚಭೂತಗಳನ್ನೂ ಅವುಗಳೊಂದಿಗೆ ಅವುಗಳ ವಿಷಯಗಳಾದ ಶಬ್ದಾದಿಗಳನ್ನೂ ಸೃಷ್ಟಿಸಿದನು.

ವಿ: ೧) ರುದ್ರದೇವರ ಮೂರುರೂಪಗಳ ಬಗ್ಗೆ ವಿವರಗಳು ಹೀಗಿವೆ:

ಜ್ಞಾನಾಭಿಮಾನೀ ಪುರುಷಃ ಸ ಬ್ರಹ್ಮಾ ಸಮುದಾಹೃತಃ।
ಅರ್ಥಾಭಿಮಾನೀ ಪ್ರಕೃತೀರ್ಗಾಯತ್ರೀ ಸಾ ಪ್ರಕೀರ್ತಿತಾ ॥
ತಯೋರ್ನಿಯಾಮಕೋ ವಿಷ್ಣುಃ ಶ್ರೀಶ್ಚಾನುಗ್ರಾಹಿಕಾ ಸ್ಮೃತಾ।
ವಾಯುಸ್ತು ಬ್ರಹ್ಮಣಃ ಪುತ್ರಃ ಪ್ರಕೃತೌ ಸಮಜಾಯತ ॥
ತ್ರಿಗುಣಾತ್ಮಾ ಸಮುದ್ದಿಷ್ಟಃ ಪ್ರಾಯಃ ಸತ್ತ್ವತ್ಮಕಸ್ತಥಾ।
ಗಾಯತ್ರೀ ಚೈವ ಸಾವಿತ್ರೀ ತಥೈವ ಚ ಸರಸ್ವತೀ ॥
ಏವಂ ತ್ರಿರೂಪಾ ಪ್ರಕೃತಿರೇಕಾ ಸತ್ವಾದಿಭೇದತಃ।
ತಾಸು ವೀರ್ಯಂ ಸಮುತ್ಸೃಷ್ಟಂ ಬ್ರಹ್ಮಣೈಕತ್ವಮಾಗತಮ್ ॥
ಸ ಸೂತ್ರಾತ್ಮಾ ಸಮುದಿಷ್ಟೋ ವಾಯುರ್ಲೋಕಪ್ರಣಾಯಕಃ।

---

೧೭. ರೂಪಾತ್ ರಸಃ, ರಸಾತ್ ಗಂಧಃ, ಇತಿ ಭೂತಸೂಕ್ಷ್ಮರೂಪಪಂಚತನ್ಮಾತ್ರಾಃ ಪ್ರಾಕ್ ಸೃಷ್ಟ್ವಾ ಪುನಃ 'ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪ ಅದ್ಭ್ಯಃ ಪೃಥಿವೀ' ಇತಿ ಪಂಚಮಹಾಭೂತಾನಿ ಸಸರ್ಜೇತಿ ಭಾವಃ। 'ಮಾತ್ರಾಭೂತಾನಿ ಪಂಚ ಚ' ಇತಿ ತತ್ತ್ವಸಂಖ್ಯಾನೇ ಆಚಾರ್ಯೈರೇವೋಕ್ತತ್ವಾತ್ ಮಾತ್ರಾಸೃಷ್ಟಿಃ ಪೂರ್ವಮಿತಿ ಜ್ಞೇಯಮ್। –(ವಾ)

೧೭. ತ್ರಿರೂಪಃ = ವೈಕಾರಿಕ ತೈಜಸ ತಾಮಸಾಖ್ಯ ತ್ರಿವಿಧಾಹಂಕಾರಪ್ರೇರಣಾಯ ವಕ್ಷ್ಯಮಾಣ ರೂಪದ್ವಯೇನ ಸಹ ತ್ರಿರೂಪಃ। –(ವಾ)

೧೭. ತದುಕ್ತಂ ತೃತೀಯೇ –

ತಾಮಸಾಚ್ಚ ವಿಕುರ್ವಾಣಾದ್ ಭಗವದ್ವೀರ್ಯಚೋದಿತಾನ್।
ಶಬ್ದಮಾತ್ರಮಭೂತ್ ತಸ್ಮಾನ್ನಭಃ ಶ್ರೋತ್ರಂ ತು ಶಬ್ದಗಮ್ ॥ ಇತಿ, ತಥಾ

ನಭಸಃ ಶಬ್ದತನ್ಮಾತ್ರಾತ್ ಕಾಲಗತ್ಯಾ ವಿಕುರ್ವತಃ।
ಸ್ಪರ್ಶೋಽಭವತ್ ತತೋ ವಾಯುಸ್ತ್ವಕ್ ಚ ಸ್ಪರ್ಶಸ್ಯ ಸಂಗ್ರಹಃ ॥, ತಥಾ,
ವಾಯೋಶ್ಚ ಸ್ಪರ್ಶತನ್ಮಾತ್ರಾದ್ರೂಪಂ ದೇವೇರಿತಾದಭೂತ್ ॥ ಇತ್ಯಾದಿ

೧೭. ವಿಕಾರಾಜ್ಜಾತತ್ವಾತ್ ವೈಕಾರಿಕ ಇತ್ಯುಚ್ಯತೇ ಅಹಂಕಾರಸ್ತ್ರಿವಿಧೋಽಪಿ।
ವೈಕಾರಿಕೋ ಮಹಾಂಶ್ಚೈವ ತಥಾಽಹಂಕಾರ ಏವ ಚ।
ತಥೈವ ಸಾತ್ವಿಕಶ್ಚೇಶೋ ವೈಕಾರಿಕಾ ಇತಿ ತ್ರಿಧಾ ॥ –ಭಾ. ತಾ. ೨/೩/೫೧

ವಿಶಿಷ್ಟಕಾರ್ಯಶಕ್ತಿತ್ವಾತ್ ದೇವಾ ವೈಕಾರಿಕಾಃ ಸ್ಮೃತಾಃ।
ಅತಿಜಾಡ್ಯಲ್ಯಮಾನತ್ವಾತ್ತೈಜಸಾನೀಂದ್ರಿಯಾಣ್ಯಪಿ।
ತಾಮಸಾನಿ ತು ಭೂತಾನಿ ಯತಸ್ತಾವನ್ನ ತೂಭಯಮ್ ॥ ಇತಿ ಪಾದ್ಮೇ। –ಭಾ.ತಾ.(೨/೫/೨೪)

ತಸ್ಯಾಪಿ ಸೂತ್ರಂ ಭಗವಾನ್ ಧಾರಣಾದ್ವಿಷ್ಣುರವ್ಯಯಃ ॥
ಸೂತ್ರಪುತ್ರಸ್ತ್ವಹಂಕಾರಃ ಸ ರುದ್ರಃ ಸಮುದಾಹೃತಃ ।
ಸೂತ್ರಾತ್ಮನಾ ಮಹಾಂಶ್ಚಾಪಿ ಸಹಜಾತಶ್ಚತುರ್ಮಖಃ ॥
ತಸ್ಯಾಪಿ ಪುತ್ರೋಽಹಂಕಾರಃ ಸ ಚಾನಂತ ಉದಾಹೃತಃ ।
ಅನಂತಾದಪಿ ರುದ್ರೋಽಭೂತ್ ಬ್ರಹ್ಮಣಶ್ಚೇತಿ ಸ ತ್ರಿಧಾ ॥
ವೈಕಾರಿಕೋ ಬ್ರಹ್ಮಜಸ್ತುತೈಜಸೋ ವಾಯುಜಃ ಸ್ಮೃತಃ ।
ತಾಮಸೋಽನಂತಜಶ್ಚೈವ ಸ ಏಕೋ ಗುಣಭೇದತಃ ॥ – ಇತಿ ಪ್ರಾಥಮ್ಯೇ – ಭಾ. ತಾ.

೨) ವೈಕಾರಿಕ, ತೈಜಸ ಮತ್ತು ತಾಮಸ ಎಂಬ ಮೂರುರೂಪಗಳು ಶಿವನಿಗೆ ಉಂಟು; ವೈಕಾರಿಕ ಬ್ರಹ್ಮಪುತ್ರ; ತೈಜಸ ವಾಯುಪುತ್ರ ಮತ್ತು ತಾಮಸ ಅನಂತಪುತ್ರ.

೩) ವೈಕಾರಿಕ ದೇವತೆಗಳು – ಎಂದರೆ ಮನಸ್ಸು ಮೊದಲಾದ ಇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳು. ಇಲ್ಲಿ ದೇವಸೃಷ್ಟಿ ಎಂದರೆ ದೇವತಾದೇಹಗಳ ಸೃಷ್ಟಿ ಎಂದೇ ಅರ್ಥ.

೪) ಈ ಸೃಷ್ಟಿಯು ಏಕಕಾಲಕ್ಕೆ ನಡೆಯದೆ ಕ್ರಮವಾಗಿ ನಡೆಯಿತು ಎಂಬುದನ್ನು 'ಕ್ರಮೇಣ' ಎಂಬುದಾಗಿ ತಿಳಿಸಿರುವರು.

೫) ಶಬ್ದದಿಂದ ಸ್ಪರ್ಶ, ಸ್ಪರ್ಶದಿಂದ ರೂಪ, ರೂಪದಿಂದ ರಸ, ರಸದಿಂದ ಗಂಧ ಎಂಬ ಪಂಚಭೂತಗಳ ಸೂಕ್ಷ್ಮರೂಪಗಳಾದ ಪಂಚತನ್ಮಾತ್ರಾಗಳನ್ನು ಮೊದಲು ಸೃಷ್ಟಿಸಿದ; ಅನಂತರ 'ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ, ಅದ್ಭ್ಯಃ ಪೃಥಿವೀ' ಎಂಬ ಕ್ರಮದಲ್ಲಿ ಸೃಷ್ಟಿ ಮಾಡಿದ ಎಂದು ಭಾವ. 'ಮಾತ್ರಾಭೂತಾನಿ ಪಂಚ ಚ' ಎಂಬುದಾಗಿ ತತ್ತ್ವಸಂಖ್ಯಾನದಲ್ಲಿ ಶ್ರೀಮದಾಚಾರ್ಯರಿಂದಲೇ ಉಕ್ತವಾಗಿರುವುದರಿಂದ ಮಾತ್ರಾಸೃಷ್ಟಿಯ ಅನಂತರವೇ ಪಂಚಭೂತಗಳ ಸೃಷ್ಟಿ ಎಂದು ತಿಳಿಯಬೇಕು.

ಬ್ರಹ್ಮದೇವರಿಂದ ಸಕಲ ದೇವತೆಗಳ ಸೃಷ್ಟಿ

ಪುಂಸಃ ಪ್ರಕೃತ್ಯಾಂ ಚ ಪುನರ್ವಿರಿಂಚಾ-
ಚ್ಛಿವೋಽಥ ತಸ್ಮಾದಖಿಲಾಃ ಸುರೇಶಾಃ ।
ಜಾತಾಃ ಸಶಕ್ತ್ಯಾಃ ಪುನರೇವ ಸೂತ್ರಾತ್
ಶ್ರದ್ಧಾ ಸುತಾನಾಪ ಸುರಪ್ರವೀರಾನ್ ।
ಶೇಷಂ ಶಿವಂ ಚೇಂದ್ರಮಥೇಂದ್ರತಶ್ಚ
ಸರ್ವೇ ಸುರಾ ಯಜ್ಞಗಣಾಶ್ಚ ಜಾತಾಃ ॥ ೧೮ ॥

ಅ: 'ಪುರುಷ'ರೂಪದ ವಿರಿಂಚನಿಂದ 'ಪ್ರಕೃತಿ'ರೂಪ (ಅವ್ಯಕ್ತತತ್ತ್ವದ ಅವಾಂತರಾಭಿಮಾನಿನಿಯಾದ) ಸರಸ್ವತಿಯಲ್ಲಿ ಶಿವನು ಜನಿಸಿದ; ಆ ಶಿವನಿಂದ ಇಂದ್ರಸಮೇತರಾದ ಸಮಸ್ತ ದೇವತೆಗಳೂ ಜನಿಸಿದರು; ಅನಂತರ 'ಶ್ರದ್ಧಾ'ನಾಮಕ ಭಾರತಿಯು 'ಸೂತ್ರ'ನಾಮಕ ವಾಯುವಿನಿಂದ ಸುರಪ್ರವೀರರಾದ ಶೇಷ, ಶಿವ ಮತ್ತು ಇಂದ್ರ ಎಂಬ ಪುತ್ರರನ್ನು ಪಡೆದಳು; ಅನಂತರ ಇಂದ್ರನಿಂದ ಸಕಲ ದೇವತೆಗಳೂ, ಯಜ್ಞಾಭಿಮಾನಿದೇವತೆಗಳ ಸಮುದಾಯವೂ ಜನಿಸಿದವು.

ವಿ: ೧) ಪುರುಷ(ವಿರಿಂಚ) ಮತ್ತು ಪ್ರಕೃತಿ(ಸರಸ್ವತಿ) ಸೂತ್ರ(ವಾಯು) ಮತ್ತು ಶ್ರದ್ಧಾ (ಭಾರತೀ) ಇವರಿಂದ ನಡೆದ ಸೃಷ್ಟಿಯ ವಿವರಗಳನ್ನು ಇಲ್ಲಿ ಕೊಟ್ಟಿರುವರು; ಶಿವಾದಿ ದೇವತೆಗಳು ಈ ಇಬ್ಬರಿಗೂ ಪುತ್ರರಾಗಿ ಜನಿಸಿದ್ದು ಇಲ್ಲಿ ಪ್ರಧಾನವಾದ ಅಂಶ.

೨) ಇಲ್ಲಿ 'ಯಜ್ಞಗಣ'ಗಳು ಎಂದರೆ ಅಶ್ವಮೇಧ ಜ್ಯೋತಿಷ್ಟೋಮ ಮೊದಲಾದ ಯಜ್ಞಗಳ ಅಭಿಮಾನಿದೇವತೆಗಳು ಎಂದು ಅರ್ಥ.

೩) ಶ್ರೀವಾದಿರಾಜಸ್ವಾಮಿಗಳು ಇಲ್ಲಿ ಬರೆದಿರುವ ವಿಶೇಷಾಂಶ ಹೀಗಿದೆ:–

'ಶೇಷಃ ಸುಪರ್ಣಶ್ಚ ತಯೋಃ ಸಹೈವ' ಇತ್ಯತ್ರೋಕ್ತಃ ಶೇಷಃ ತೌ ವಾಹನಂ ಶಯನಂ ಚೈವ ವಿಷ್ಣೋಃ 'ಇತ್ಯುಕ್ತೋ ಶಯನಾರ್ಥಂ ಸೃಷ್ಟಃ। ಶೇಷಂ ಶಿವಂ ಚ' ಇತ್ಯತ್ರೋಕ್ತಶೇಷಸ್ತು ಅಹಂಕಾರಾವಾಂತರಾಭಿಮಾನಿತಯಾ ಸೃಷ್ಟಃ। ಇದಂ ಚೋಪಲಕ್ಷಣಂ। ಅಹಂಕಾರಾಭಿಮಾನಿತಯಾ ಗರುಡಸ್ಯಾಪಿ ಪುನರುತ್ಪತ್ತಿರ್ಗ್ರಾಹ್ಯಾ ಶಿವಸ್ಯ ತು ರೂಪತ್ರಯಂ ತ್ರಿವಿಧಾಹಂಕಾರಾಭಿಮಾನಿತಯಾ ಸೃಷ್ಟಂ। ದೇವಾನಾಂ ದ್ವಿವಾರಂ ಸೃಷ್ಟಿಶ್ಚ ಸ್ವಸ್ವತತ್ತ್ವಾಭಿಮಾನಾರ್ಥಂ ಬ್ರಹ್ಮಾಂಡಾಂತಃ ಪ್ರವೇಷ್ಟುಂ ಚ। ಏವಂ ಶೇಷಶರ್ವಸುಪರ್ಣಾನಾಂ ಚ ಬ್ರಹ್ಮಾಂಡಾಂತಃಪ್ರವೇಶಾಯ ರೂಪಾಂತರಾಣ್ಯೂಹ್ಯಾನಿ। ಕಿಂ ಚ ದೇವಾಃ ಸ್ವಸ್ವಭಾವಲಾಭಾಯ ವೇದಶಾಸ್ತ್ರಾದೌ ಶ್ರದ್ಧಾಲಾಭಾಯ ಚ ತದುಭಯವಂಶೇಽಪಿ ದ್ವಿವಾರಂ ಜಾತಾಃ। ಬ್ರಹ್ಮಾ ತು ಶಾಂತ್ಯಾಖ್ಯಗುಣಲಾಭಾಯ ಶಾಂತೌ ಪುನರ್ಜಾತಃ।

---

೧೮. ಅವ್ಯಕ್ತನಾಮ್ನೀ ತು ಬ್ರಹ್ಮಾಣೀ ಸಂಪ್ರಕೀರ್ತಿತಾ । –(ತಂತ್ರಸಾರ)

೧೮. ಯಜ್ಞಗಣಾಃ = ಅಶ್ವಮೇಧಜ್ಯೋತಿಷ್ಟೋಮಾಗ್ನಿಷ್ಟೋಮಾದಿಯಜ್ಞಾಭಿಮಾನಿದೇವಗಣಾಃ। –(ವಾ)

೧೮. ಸೃಷ್ಟೌ ಲಯೇ ತಾರತಮ್ಯಂ ದೇವಾನಾಂ ಜ್ಞಾಯತೇ ಸ್ಫುಟಮ್ ।
ತಾರತಮ್ಯಪರಿಜ್ಞಾನೇ ಮಹಾತಾತ್ಪರ್ಯಮಿಷ್ಯತೇ ॥
ಅತಸ್ತದ್ಬಹುಶಸೂಕ್ತಮನ್ಯಚ್ಚಿತತ್ಪಕಾಶನಮ್ ॥ ಇತಿ ವಾಮನೇ । –ಭಾ.ತಾ.(೩/೨೧/೧೫)

೧೮. ಯಾ ಮಾರುತಾದ್ಗರ್ಭಮಧತ್ತಪೂರ್ವಂ ಶೇಷಂ ಸುಪರ್ಣಂ ಗಿರಿಶಂ ಸುರೇಂದ್ರಮ್ ।
ಚತುಮುಖಾಭಾಂಶ್ಚತುರಃ ಕುಮಾರಾನ್ ಸಾ ದ್ರೌಪದೀ ನಾಮ ಬಭೂವ ಭೂಮೌ ॥

ಯಸ್ಯಾಃ ಪ್ರಸಾದಾತ್ ಪರಮಂ ವಿದಂತಿ ಶೇಷಃ ಸುಪರ್ಣೋ ಗಿರಿಶಃ ಸುರೇಂದ್ರಃ ।
ಮಾತಾ ಚ ಯೈಷಾಂ ಪ್ರಥಮೈವ ಭಾರತೀ ಸಾ ದ್ರೌಪದೀ ನಾಮ ಬಭೂವ ಭೂಮೌ ॥
–(೨/೧೭೧, ೧೬೯)

ವಾಯೋಸ್ತು ಜಯಾತನೂಜತ್ವೇನೈವ ಸಕಲಕಾರ್ಯೇಷು ಜಯಸಿದ್ಧೇರ್ನ ಪುನರ್ಜನ್ಮೋಕ್ತಂ। ವಸ್ತುತಸ್ತು ಮಹತ್ತತ್ತ್ವಾಭಿಮಾನಿತಯಾ ಶಾಂತ್ಯಾಮಪಿ ಪುನರ್ಜನ್ಮಾಸ್ತೀತಿ ಜ್ಞೇಯಂ। ಅತೋ ಭಗವದ್ರೂಪೇಚ್ಛಃ ಪುನರ್ಪುನರ್ಜನ್ಮ ಪಿತೃತೋ ಮಾತೃತಶ್ಚ ಶುಭಗುಣಲಬ್ಧಾ ದೇವಾಃ ಪ್ರಾರ್ಥಯಂತೇ। ಅತೋ ನ ಕಶ್ಚಿತ್ ಕ್ಷುದ್ರೋಪದ್ರವ ಇತಿ ಜ್ಞೇಯಮ್ । – (ವಾ).

ವಾಸುದೇವನಿಂದ ಮಾಯೆಯಲ್ಲಿ ವಿಷ್ಣುವಿನ ಬ್ರಹ್ಮ ವಿಷ್ಣು ಶಿವ ರೂಪಗಳ ಪ್ರಾದುರ್ಭಾವ

ಪುನಶ್ಚ ಮಾಯಾ ತ್ರಿವಿಧಾ ಬಭೂವ
ಸತ್ತ್ವಾದಿರೂಪೈರಥ ವಾಸುದೇವಾತ್ ।
ಸತ್ತ್ವಾತ್ಮಿಕಾಯಾಂ ಸ ಬಭೂವ ತಸ್ಮಾತ್
ಸ ವಿಷ್ಣುನಾಮೈವ ನಿರಂತರೋಽಪಿ ।
ರಜಸ್ತನೌ ಚೈವ ವಿರಿಂಚ ಆಸೀತ್
ತಮಸ್ತನೌ ಶರ್ವ ಇತಿ ತ್ರಯೋಽಸ್ಮಾತ್ ॥ ೧೯ ॥

ಅ: ಪುನಃ 'ಮಾಯಾ' ರೂಪದ ಮಹಾಲಕ್ಷ್ಮಿಯು ಸತ್ತ್ವಾದಿಗುಣಗಳಿಗೆ ನಿಯಾಮಕವಾದ ಶ್ರೀ, ಭೂ, ದುರ್ಗಾ ಎಂಬ ಮೂರುರೂಪಗಳನ್ನು ತಾಳಿದಳು; ವಾಸುದೇವ ರೂಪದಿಂದ ಶ್ರೀಹರಿಯು ಸತ್ತ್ವಗುಣಾಭಿಮಾನಿನಿಯಾದ 'ಶ್ರೀ'ರೂಪದಲ್ಲಿ 'ವಿಷ್ಣು'ನಾಮಕನಾಗಿ ಅವತರಿಸಿದ; ಅದರಂತೆ ರಜೋಗುಣಾಭಿಮಾನಿಯಾದ 'ಭೂ'ದೇವಿಯಲ್ಲಿ 'ವಿರಿಂಚ'ನಾದ; ಮತ್ತು ತಮೋಭಿಮಾನಿನಿಯಾದ 'ದುರ್ಗಾ'ದೇವಿಯಲ್ಲಿ 'ಶರ್ವ' (ಶಿವ)ನಾಗಿ ಅವತರಿಸಿದ; ಹೀಗೆ ಅವನಿಂದ ಅವತರಿಸಿದ ಅವನ ಈ ರೂಪಗಳು ಅವನಿಂದ ಅಭಿನ್ನವಾದವುಗಳು.

ವಿ: ೧) ವಾಸುದೇವರೂಪದಿಂದ ತ್ರಿರೂಪದ 'ಮಾಯಾ'ದೇವಿಯಲ್ಲಿ ವಿಷ್ಣು ಬ್ರಹ್ಮ ಮತ್ತು ಶಿವ ಎಂಬ ರೂಪತ್ರಯದಿಂದ ಸ್ವತಃ ವಿಷ್ಣುವೇ ಅವತರಿಸಿದನು.

---

೧೯. ಇತಿ ತ್ರಯೋ ಭಗವದವತಾರಾಃ ಪೃಥಕ್ ಸ್ಥಿತ್ವಾ ಪಾಲನಾರ್ಥಂ 'ಸೃಜಾಮಿ ತ್ವನ್ನಿಯುಕ್ತೋಽಹಂ' ಇತಿ ವಚನಾತ್ ಶರ್ವೇ ಸ್ಥಿತ್ವಾ ಸಂಹಾರಾರ್ಥಂ ಚಾಸ್ಮಾದ್ವಾಸುದೇವಾದೇವ ಬಭೂವ । ಅತ ಏವ 'ಬ್ರಹ್ಮಣಿ ಬ್ರಹ್ಮ-ರೂಪೋಽಸೌ ಶಿವರೂಪೀ ಶಿವೇ ಸ್ಥಿತಃ' ಇತಿ ವದಂತಿ । – (ವಾ)

೧೯. ವಿಷ್ಣೋರೇವ ತ್ರಿಸಂಜ್ಞಾಃ । - ವಾಮನೇ ಚ । -

ಬ್ರಹ್ಮವಿಷ್ಣ್ವೀಶರೂಪಾಣಿ ತ್ರೀಣಿ ವಿಷ್ಣೋರ್ಮಹಾತ್ಮನಃ ।
ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ ಸ್ಥಿತಃ ।
ಪೃಥಗೇವ ಸ್ಥಿತೋ ದೇವೋ ವಿಷ್ಣುರೂಪೀ ಜನಾರ್ದನಃ ॥ – ಭಾ.ತಾ. (೧/೨/೨೪

೧೯. ಬ್ರಹ್ಮಸ್ಥೋ ಬ್ರಹ್ಮನಾಮಾಽಸೌ ರುದ್ರಸ್ಥೋ ರುದ್ರನಾಮಕಃ ।
ತಯೋರಪಿ ನಿಯಂತೈಕಃ ಸ್ವಯಮೇವ ಜನಾರ್ದನ' ಇತಿ ಸ್ಕಾಂದೇ ॥ - ಭಾ. ತಾ. (೧೦/೫೩/೩೫)

೨) ಇಲ್ಲಿ ವಿಷ್ಣುರೂಪ ಸಾಕ್ಷಾತ್ ವಿಷ್ಣುರೂಪ; ವಿರಿಂಚರೂಪ ಅನಂತರ ಬ್ರಹ್ಮದೇವರಲ್ಲಿದ್ದು ಸೃಷ್ಟ್ಯಾದಿಗಳನ್ನು ಮಾಡುವ ಅಂತರ್ಯಾಮಿ ರೂಪ; ಶಿವರೂಪ ಶಿವನಲ್ಲಿದ್ದು ಲಯಾದಿಗಳನ್ನು ಮಾಡುವ ಅಂತರ್ಯಾಮಿರೂಪ ಅಂತೂ ಈ ಮೂರೂ ಸಾಕ್ಷಾತ್ ವಿಷ್ಣುರೂಪಗಳೇ ಆಗಿವೆ.

೩) ಪುರಾಣಗಳಲ್ಲಿ ಅಲ್ಲಲ್ಲಿ ಬರುವ ತ್ರಿಮೂರ್ತ್ಯೈಕ್ಯ ಈ ಮೂರೂ ರೂಪಗಳ ಐಕ್ಯವನ್ನು ಕುರಿತಾದದು. ಇದನ್ನು ತಿಳಿಯದ ಜನ ಬ್ರಹ್ಮ ಶಿವರನ್ನು ಮಹಾವಿಷ್ಣುವಿನಿಂದ ಅಭಿನ್ನರು ಎಂದು ಭಾವಿಸಿ ಅನರ್ಥಕ್ಕೆ ಗುರಿಯಾಗುವರು.

ಬ್ರಹ್ಮಾಂಡಸೃಷ್ಟಿಗಾಗಿ ದೇವತೆಗಳ ಪ್ರಾರ್ಥನೆ

ಏತೇ ಹಿ ದೇವಾಃ ಪುನರಂಡಸೃಷ್ಟ್ಯಾ-
ವಶಕ್ನುವಂತೋ ಹರಿಮೇತ್ಯ ತುಷ್ಟುವುಃ ।
ತ್ವನ್ನೋ ಜಗಚ್ಚಿತ್ರವಿಚಿತ್ರಸರ್ಗ-
ನಿಸ್ಸೀಮಶಕ್ತಿಃ ಕುರು ಸನ್ನಿಕೇತಮ್ ॥ ೨೦ ॥

ಅ: ಈ ತತ್ತ್ವಾಭಿಮಾನಿದೇವತೆಗಳಾದರೋ ಬ್ರಹ್ಮಾಂಡಸೃಷ್ಟಿಯಲ್ಲಿ ಅಸಮರ್ಥರಾದವರಾಗಿ ಶ್ರೀಹರಿಯ ಬಳಿಗೆ ಹೋಗಿ ಸ್ತುತಿಸಿದರು; ''ಜಗತ್ತನ್ನು ಚಿತ್ರವಿಚಿತ್ರವಾಗಿ ಸೃಷ್ಟಿಸುವಲ್ಲಿ ಎಣೆಯಿರದ ಸಾಮರ್ಥ್ಯವನ್ನು ಹೊಂದಿರುವ ನೀನು ನಮಗೆ ಸಮೀಚೀನವಾದ ನೆಲೆಯನ್ನು ನೀಡು''.

ವಿ: ಹೀಗೆ ಸೃಷ್ಟರಾದ ತತ್ತ್ವಾಭಿಮಾನಿದೇವತೆಗಳು ಈ ಹಂತದಲ್ಲೂ ಸಹ ಅಂಡವನ್ನು ನಿರ್ಮಿಸಲು ಅಸಮರ್ಥರಾಗಿ ಶ್ರೀಹರಿಯನ್ನು ಬೇಡಿಕೊಂಡರು ಎಂಬ ಈ ಮಾತಿನಲ್ಲಿ ಅವರೆಲ್ಲರ ಅಸ್ವಾತಂತ್ರ್ಯವೂ, ಅವರು ಶ್ರೀಹರಿಯನ್ನೇ ಪ್ರಾರ್ಥಿಸಿದರು ಎಂಬಲ್ಲಿ ಶ್ರೀಹರಿಯ ಸರ್ವ ಸ್ವಾತಂತ್ರ್ಯವೂ ನಿರೂಪಿತವಾಗಿದೆ.

---

೨೦. ದೇವಾಃ = ತತ್ತ್ವಾಭಿಮಾನಿನೋ ದೇವಾಃ । –(ಜ)

೨೦. ಸನ್ನಿಕೇತಂ = ಸಮೀಚೀನಂ ಮಂದಿರಮ್ । –(ವಾ)

ಸನ್ನಿಕೇತಂ = ಸಮೀಚೀನಂ ಗೃಹಮ್ । –(ಜ)

೨೦. 'ಅಚೇತನಾದ್ಯತಸ್ತ್ವಂಡಾದ್ಬ್ರಹ್ಮಾ ಸಮಜನಿ ಸ್ಫುಟಮ್ ।
ಅತೋ ಬ್ರಹ್ಮಾಂಡಮಿತ್ಯಾಹುರ್ವಿರಾಡ್ಬ್ರಹ್ಮಪ್ರಕಾಶನಾತ್' ಇತಿ ಚ ॥ - ಭಾ. ತಾ. (೩/೨೭/೫೪)

ಬ್ರಹ್ಮಾಂಡ ಸೃಷ್ಟಿ

ಇತಿ ಸ್ತುತಸ್ತೈಃ ಪುರುಷೋತ್ತಮೋಽಸೌ
ಸ ವಿಷ್ಣುನಾಮಾ ಶ್ರಿಯಮಾಪ ಸೃಷ್ಟಯೇ ।
ಸುಷಾವ ಸೈವಾಂಡಮಧೋಕ್ಷಜಸ್ಯ
ಶುಷ್ಮಂ ಹಿರಣ್ಮಾತ್ಮಕಮಂಬುಮಧ್ಯೇ ॥ ೨೧ ॥

ಅ: ಆ ತತ್ತ್ವಾಭಿಮಾನಿದೇವತೆಗಳಿಂದ ಈ ತೆರನಾಗಿ ಸ್ತುತಿಸಲ್ಪಟ್ಟ ಆ ವಿಷ್ಣುನಾಮಕ ಪುರುಷೋತ್ತಮನು (ಅಂಡ)ಸೃಷ್ಟಿಗೆಂದು ಮಹಾಲಕ್ಷ್ಮಿಯನ್ನು ಹೊಂದಿದ; ಆ ಶ್ರೀದೇವಿಯು ಅಧೋಕ್ಷಜನಾದ ಆ ಶ್ರೀಹರಿಯ ಹಿರಣ್ಮಾತ್ಮಕವಾದ ವೀರ್ಯವನ್ನು ಜಲದ ಮಧ್ಯೆ ಪ್ರಸವಿಸಿದಳು.

ವಿ: ಇದೇ ಬ್ರಹ್ಮಾಂಡಸೃಷ್ಟಿ.

ನಾಭಿಕಮಲದಿಂದ ಬ್ರಹ್ಮದೇವರ ಉತ್ಪತ್ತಿ

ತಸ್ಮಿನ್ ಪ್ರವಿಷ್ಟಾ ಹರಿಣೈವ ಸಾರ್ಧಂ
ಸರ್ವೇ ಸುರಾಸ್ತಸ್ಯ ಬಭೂವ ನಾಭೇಃ ।
ಲೋಕಾತ್ಮಕಂ ಪದ್ಮಮಮುಷ್ಯ ಮಧ್ಯೇ
ಪುನರ್ವಿರಿಂಚೋಽಜನಿ ಸದ್ಗುಣಾತ್ಮಾ ॥ ೨೨ ॥

---

೨೧. ಶುಷ್ಮಂ = ವೀರ್ಯಂ –(ವಾ,ಜ)

೨೨. ಲೋಕಾತ್ಮಕಂ = ಲೋಕಾಧಾರಮ್ । –(ಜ)

೨೨. ಸಪತ್ನೈಃ ಸಹಿತಾನಿ ಸಪ್ತಭುವನಾನಿ ಚತುರ್ದಶಭುವನಾನಿ । –(ಜ)

೨೨. ಅಜಸ್ಯ ನಾಭಾವಿತಿ ಯಸ್ಯ ನಾಭೇರಭೂಚ್ಛ್ರುತೇಃ ಪುಷ್ಕರಂ ಲೋಕಸಾರಮ್ ।
ತಸ್ಮೈ ನಮೋ ವ್ಯಸ್ತಸಮಸ್ತವಿಶ್ವವಿಭೂತಯೇ ವಿಷ್ಣವೇ ಲೋಕಕರ್ತ್ರೇ ॥ ಇತಿ ಸ್ಕಾಂದೇ ।
–ಬ್ರಹ್ಮಸೂತ್ರಭಾಷ್ಯ (೧/೧/೧)

೨೨. 'ಪದ್ಮೋ ಬ್ರಹ್ಮಾ ಸಮುದ್ದಿಷ್ಟಃ ಪದ್ಮಾ ಶ್ರೀರಪಿ ಚೋಚ್ಯತೇ' ಇತಿ ಬ್ರಾಹ್ಮೇ । –ಭಾ. ತಾ. (೩/೧/೨೬)

'ಪದ್ಮಸಂಸ್ಥಾದ್ಧರೇಸ್ತತ್ರ ಬ್ರಹ್ಮಾಽಜನಿ ಚತುರ್ಮುಖಃ' ಇತಿ ಚ । –ಭಾ. ತಾ. (೩/೯/೧೫)

ಅ: ಆ ಬ್ರಹ್ಮಾಂಡದೊಳಗೆ ಶ್ರೀಹರಿಯೊಂದಿಗೆ ಸಮಸ್ತ ಸುರರೂ ಪ್ರವೇಶಿಸಿದರು. ಆ ಶ್ರೀಹರಿಯ ನಾಭಿಯಿಂದ ಲೋಕಾಧಾರವಾದ ಪದ್ಮ ಹುಟ್ಟಿತು; ಅದರ ಮಧ್ಯದಲ್ಲಿ ಸದ್ಗುಣಸ್ವರೂಪನಾದ ಚತುರ್ಮುಖಬ್ರಹ್ಮ ಪುನಃ ಜನಿಸಿದ.

ವಾಯುಜೀವೋತ್ತಮತ್ವದ ನಿರೂಪಣೆ

ತಸ್ಮಾತ್ ಪುನಃ ಸರ್ವಸುರಾಃ ಪ್ರಸೂತಾ-
ಸ್ತೇ ಜಾನಮಾನಾ ಅಪಿ ನಿರ್ಣಯಾಯ ।
ನಿಃಸೃತ್ಯ ಕಾಯಾದುತ ಪದ್ಮಯೋನೇಃ
ಸಂಪ್ರಾವಿಶನ್ ಕ್ರಮಶೋ ಮಾರುತಾಂತಾಃ ॥ ೨೩ ॥

೨೩.. ವಾಯೋಃ ಶ್ರೈಷ್ಠ್ಯಂ ಜಾಯಮಾನಾ ಅಪಿ । –(ಜ)

೨೩.. ನಿರ್ಣಯಾಯ = ಲೋಕಸ್ಯ ನಿರ್ಣಯಾಯ । –(ವಾ,ಜ)

ಮುಖ್ಯಪ್ರಾಣಸ್ಯ ಸರ್ವದೇವೋತ್ತಮತ್ವನಿರ್ಣಯಾಯ । –(ವ)

೨೩.. ಪದ್ಮಯೋನೇಃ = ಪದ್ಮಾದುತ್ಪನ್ನಸ್ಯ ಕಾಯಾತ್ ಕ್ರಮಶಃ ವಾಗಾದಿಕ್ರಮೇಣ ನಿಃಸೃತ್ಯ । –(ಜ)

ಕಾಯಾತ್ ಬ್ರಹ್ಮಣಃ ಶರೀರಾತ್ । –(ವಾ)

೨೩.. ಶರೀರಾದುದ್ಗಮನಮಪಿ ವಾಯೋಃ ಸರ್ವೇಭ್ಯೋ ಅಂತೇ । ಪ್ರವೇಶೋಽಪಿ ಸರ್ವೇಭ್ಯೋ ಅಂತೇ ಇತಿ ಸೂಚನಾಯ ಮಾರುತಾಂತಾ ಇತ್ಯುಕ್ತಮ್ । – (ವಾ)

೨೩.. 'ಅಹಂ ಶ್ರೇಯೋವಿವಾದಂ ತು ಯೇನ ಕೃತ್ವಾಽಖಿಲಾಃ ಸುರಾಃ ।
ಅಸಮರ್ಥಾಃ ಸ್ವರಕ್ಷಾಯಾಂ ಸ ವಾಯುಃ ಸುರನಾಯಕಃ ।
ವಿವದಂತೋಽಖಿಲಾ ದೇವಾ ಯಯುರ್ನಾರಾಯಣಂ ಪ್ರಭುಮ್ ।
ಅಹಂ ಶ್ರೇಯಾನಹಂ ಶ್ರೇಯಾನಿತಿ ವಾಯುಪುರಃಸರಾಃ ।
ಉಕ್ತಂ ಭಗವತಾ ತೇನ ಯೇನ ತ್ಯಕ್ತೇಽಖಿಲಾ ಅಪಿ ।
ಸ್ಥಾತುಂ ನ ಶಕ್ತಾಃ ಸ ಶ್ರೇಯಾನಿತ್ಯುಕ್ತಾಃ ಪುನರಾಗತಾಃ ।
ಉತ್ಕ್ರಾಂತಾಶ್ಚ ಪುನಃ ಸರ್ವೇ ತದ್ವಿಜ್ಞಪ್ತ್ಯೈ ಪೃಥಕ್ಪೃಥಕ್ ।
ಸುಪರ್ಣಶೇಷರುದ್ರೇಂದ್ರಸೂರ್ಯಾದಿಷು ಪೃಥಕ್ಪೃಥಕ್ ।
ಉತ್ಕ್ರಾಂತೇಷು ಬ್ರಹ್ಮದೇಹಾಚ್ಛರೀರಂ ನ ಪಪಾತ ಹ ।
ಋತ ಉತ್ಕ್ರಾಂತಮೇಕಂ ತು ತದನ್ಯೇ ನಿವಸಂತಿ ಚ ।
ಪ್ರಾಣ ಉಚ್ಚಿಕ್ರಮಿಷತಿ ಸ್ಥಾತುಂ ನಾಶಕ್ನುವನ್ ಪರೇ ।
ಪ್ರಾಣಂ ವಿನಾ ನ ಚ ಬ್ರಹ್ಮಾತಂ ವಿನಾ ಪ್ರಾಣ ಏವ ಚ ।
ಅನ್ಯೋನ್ಯಾಪಾಶ್ರಯಾಚ್ಚಕ್ರೌ ಸ್ಥಾತುಮನ್ಯೇ ಕುತಸ್ತತಃ ।
ತಸ್ಮಾತ್ ಪ್ರಾಣೋ ವರೋ ದೇವೇಷ್ವಿತಿ ಸರ್ವೇಽಪಿ ಮೇನಿರೇ' ಇತಿ ಪವಮಾನೇ । – ಬೃಹದ್ಭಾಷ್ಯ

ಅ: ಆ ಬ್ರಹ್ಮದೇವರಿಂದ ಸಕಲದೇವತೆಗಳೂ ಮತ್ತೊಮ್ಮೆ ಹುಟ್ಟಿಬಂದರು; ವಾಯು-ದೇವರವರೆಗಿನ ಅವರೆಲ್ಲ (ವಾಯುಜೀವೋತ್ತಮತ್ವವನ್ನು) ಬಲ್ಲವರಾದರೂ, (ಲೋಕಕ್ಕೆ) ನಿರ್ಣಯವಾಗಲೆಂದು ಪದ್ಮದಿಂದ ಉತ್ಪನ್ನವಾದ ಬ್ರಹ್ಮದೇವರ ಶರೀರದಿಂದ ಕ್ರಮವಾಗಿ ಹೊರಕ್ಕೆ ಬಂದರು ; ಮತ್ತು ಅದರೊಳಕ್ಕೆ ಕ್ರಮವಾಗಿ ಪುನಃ ಪ್ರವೇಶಿಸಿದರು.

ವಿ: ೧) ಬ್ರಹ್ಮನಿಂದ ಸೃಷ್ಟರಾದ ಆ ದೇವತೆಗಳಿಗೆಲ್ಲ ತಿಳಿದಿತ್ತು; ವಾಯುವೇ ಜೀವೋತ್ತಮ-ರೆಂದು; ಆದರೂ ಸಕಲಜಗತ್ತಿಗೂ ಆ ವಿಷಯ ನಿರ್ಣಯವಾಗಲೆಂದು ಬ್ರಹ್ಮನ ಶರೀರದಿಂದ ಹೊರಬರುವ ಮತ್ತು ಒಳಕ್ಕೆ ಪ್ರವೇಶಿಸುವ ಕಾರ್ಯವನ್ನು ಮಾಡಿದರು.

೨) ಯಾರು ಶರೀರವನ್ನು ತೊರೆದಾಗ ಶರೀರವು ಮೃತವಾಗುವುದೋ ಮತ್ತು ಯಾರು ಪ್ರವೇಶಿಸಿದಾಗ ಅದು ಪುನಃ ಜೀವಿತವಾಗುವುದೋ ಅವರೇ ಜೀವೋತ್ತಮರು ಎಂಬುದು ಆ ಪರೀಕ್ಷೆಯ ಗುರಿಯಾಗಿತ್ತು; ಹಾಗೆ ನಿರ್ಗಮಿಸುವಾಗಲೂ, ಪುನಃ ಪ್ರವೇಶಿಸುವಾಗಲೂ ವಾಯುದೇವರೇ ಕೊನೆಯವರಾಗಿದ್ದರು.

ಪಪಾತ ವಾಯೋರ್ಗಮನಾಚ್ಛರೀರಂ
ತಸ್ಯೈವ ಚಾವೇಶತ ಉತ್ಥಿತಂ ಪುನಃ ।
ತಸ್ಮಾತ್ ಸ ಏಕೋ ವಿಬುಧಪ್ರಧಾನ
ಇತ್ಯಾಶ್ರಿತಾ ದೇವಗಣಾಸ್ತಮೇವ ।
ಹರೇರ್ವಿರಿಂಚಸ್ಯ ಚ ಮಧ್ಯಸಂಸ್ಥಿತೇ-
ಸ್ತದನ್ಯದೇವಾಧಿಪತಿಃ ಸ ಮಾರುತಃ ॥ ೨೪ ॥

ಅ: ವಾಯುದೇವರು ನಿರ್ಗಮಿಸುತ್ತಿದ್ದಂತೆಯೇ ಆ ಶರೀರವು ಬಿದ್ದಿತು; ಅದರಂತೆ ಅವರು ಪ್ರವೇಶಿಸುತ್ತಿದ್ದಂತೆಯೇ ಪುನಃ ಎದ್ದಿತು; ಆದ್ದರಿಂದ ಆ ವಾಯುದೇವರೊಬ್ಬರೇ ಸಕಲ

---

೨೪. 'ಉದಾಸೀನತಯಾ ತಾವಾಸ್ತಾಂ ಕೇಶವಶ್ಚಾಬ್ಜಸಂಭವಃ ।
ತೇಷಾಂ ಬಲಪರೀಕ್ಷಾರ್ಥಂ ವಾಯ್ವಾದೀನಾಂ ಸಮಸ್ತಶಃ ॥ —ಐತರೇಯಭಾಷ್ಯ

೨೪. ಉದಾಸೀನವದಾಸ್ತಾಂ ತೌ ಕೇಶವಶ್ಚಾಬ್ಜಸಂಭವಃ । —ಛಾಂದೋಗ್ಯಭಾಷ್ಯ

೨೪. ಕರಣಾಭಿಮಾನಿ ಸುರರು ದೇಹವನು ಬಿಡಲು
ಕುರುಡ ಕಿವುಡ ಮೂಕನೆಂದೆನಿಸುವ ।
ಪರಮ ಮುಖ್ಯಪ್ರಾಣ ತೊಲಗಲಾ ದೇಹವನು
ಅರಿತು ಪೆಣನೆಂದು ಪೇಳ್ವರು ಬುಧಜನ ॥ —ಶ್ರೀಪಾದರಾಜರ ಮಧ್ವನಾಮ

ದೇವತೆಗಳಲ್ಲೂ ಶ್ರೇಷ್ಠರು; ಇದರಿಂದಾಗಿ ದೇವತೆಗಳ ಗುಂಪುಗಳೆಲ್ಲ ಅವರನ್ನೇ ಆಶ್ರಯಿಸಿವೆ; ಶ್ರೀಹರಿ ಮತ್ತು ಬ್ರಹ್ಮದೇವರು (ವಾಯುಜೀವೋತ್ತಮತ್ವವು ಜಗತ್ತಿಗೆ ತಿಳಿಯಲೆಂಬ ಕಾರಣದಿಂದ) ಉದಾಸೀನರಾಗಿದ್ದರು; ಆದ್ದರಿಂದ ಅವರಿಬ್ಬರ ಹೊರತು ಇತರ ಸಕಲ ದೇವತೆಗಳಿಗೂ ಶ್ರೀವಾಯುದೇವರೇ ಅಧಿಪತಿಗಳು.

ಏಃ ೧) ಇತರ ಎಲ್ಲ ದೇವತೆಗಳು ನಿರ್ಗಮಿಸಿದರೂ ಆ ಶರೀರವು ಮೃತವಾಗಲಿಲ್ಲ; ಆದರೆ ವಾಯುದೇವರು ನಿರ್ಗಮಿಸುತ್ತಲೇ ಮೃತವಾಯಿತು; ಅದರಂತೆ ಅದರೊಳಗೆ ಇತರ ಸಕಲ ದೇವತೆಗಳು ಪ್ರವೇಶಿಸಿದರೂ ಅದು ಬದುಕಲಿಲ್ಲ; ವಾಯುದೇವರು ಪ್ರವೇಶಿಸುತ್ತಲೇ ಮತ್ತೆ ಬದುಕಿತು; ಹೀಗೆ ದೇಹದ ಅಳಿವು ಮತ್ತು ಉಳಿವು ಎರಡಕ್ಕೂ ಅವರೇ ಕಾರಣರು; ಆದ್ದರಿಂದ ಅವರೇ ಜೀವೋತ್ತಮರು ಎಂಬುದು ಜಗತ್ತಿಗೆ ತಿಳಿಯಿತು.

೨) ಶ್ರೀಹರಿಯು ಸರ್ವೋತ್ತಮ; ಅವನು ಆ ದೇಹದಲ್ಲಿದ್ದನು. ಶ್ರೀಬ್ರಹ್ಮದೇವರು ಹಿಂದಿನ ಕಲ್ಪದಲ್ಲಿ ವಾಯುದೇವರೇ ಆಗಿದ್ದವರು; ಅವರಿಬ್ಬರೂ ವಾಯುಜೀವೋತ್ತಮತ್ವವು ಜಗತ್ತಿಗೆ ತಿಳಿಯಲಿ ಎಂಬ ಕಾರಣದಿಂದ ಈ ಪರೀಕ್ಷೆಯಲ್ಲಿ ಭಾಗವಹಿಸದೆ ಉದಾಸೀನರಾಗಿದ್ದರು; ಆದ್ದರಿಂದ ಅವರಿಬ್ಬರ ಅನಂತರದ ಹಿರಿಮೆ ವಾಯುದೇವರದು ಎಂದು ಭಾವ. ಶ್ರೀಹರಿಯು ಸರ್ವೋತ್ತಮ; ಬ್ರಹ್ಮದೇವರು ವಾಯುದೇವರಿಗೆ ಸಮರು ಎಂಬುದನ್ನು ತಿಳಿಯಬೇಕು.

---

೨೪. 'ಅಂಶೇನ ಸುಪ್ತೋ ಬ್ರಹ್ಮಾऽಪಿ ಅಂಶೇನ ನಿರಗಾತ್ ತಥಾ।
ಸ್ವದೇಹಾದ್ವಾಯುಸಹಿತೋ ವಿಷ್ಣುನಾ ಚ ಜಗತ್ಪ್ರಭುಃ।
ತಮುತ್ಥಾಪಯಿತುಂ ದೇವಾಸ್ತಾನ್ ಋತೇ ತ್ರೀನ್‌ಮಹಾಬಲಾನ್।
ನಾಶಕ್ನುವುಸ್ತ್ವೇಕಸಂಸ್ಥಸ್ತತಸ್ತೇ ತ್ವವಿಶಂಸ್ತಯಃ।
ಉದತಿಷ್ಠದ್ಬ್ರಹ್ಮದೇಹಸ್ತದಾ ತೇಷಾಂ ಪ್ರಭಾವತಃ।
ವಿಶೇಷೇಣ ಹರೇರೇವ ಪ್ರಭಾವೇನ ಶ್ರಿಯಃಪತೇಃ।
ಚಿತ್ತಾಭಿಮಾನೀ ಬ್ರಹ್ಮೈವ ಕ್ಷೇತ್ರಜ್ಞಸ್ತದ್ಗತೋ ಹರಿಃ।
ಪ್ರಾಣೋ ವಾಯುರಿತಿ ಪ್ರೋಕ್ತಸ್ತಯೋರೀಶೋ ಹರಿಃ ಸ್ವಯಮ್' ಇತಿ ಚ ॥ – ಭಾ.ತಾ.(೩/೨೭/೭೩)

೨೫. ತತಃ = ಪರೀಕ್ಷಾನಂತರಮ್। –(ಜ)

೨೫. ಆಶು = ಅಪ್ರಯತ್ನೇನ। ಆಶು ಇತ್ಯನೇನ ವಿಚಿತ್ರಲೋಕನಿರ್ಮಾಣೇ ಬ್ರಹ್ಮಣೋऽನಾಯಾಸಂ ಸೂಚಯತಿ। –(ವ)

೨೫. ಅಬ್ಜಾತ್ ಚತುರ್ದಶದಲಾತ್ಕಾತ್। –(ವ)

೨೫. ವೈಕಾರಿಕಾಃ = ವೈಕಾರಿಕಾಹಂಕಾರಾದುತ್ಪನ್ನಾ ಇಂದ್ರಿಯಾಭಿಮಾನಿನಃ ದೇವಾಃ। ಆದ್ಯಶಬ್ದೇನ ತೈಜಸಾಃ ಪ್ರಾಣಾದ್ಯಾಸ್ತಾಮಸಾಃ ಗಣೇಶಾದ್ಯಾಃ। –(ಜ)

೩) ಶ್ರೀವಾಯುಜೀವೋತ್ತಮತ್ವವನ್ನು ಸ್ಪಟವಾಗಿ ಸಾರುವ ಈ ಪ್ರಸಂಗವು ಐತರೇಯ, ಷಟ್ಪಶ್ನ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳಲ್ಲಿಯೂ, ಭಾಗವತಾದಿ ಪುರಾಣಗಳಲ್ಲಿಯೂ ನಿರೂಪಿತವಾಗಿದೆ.

ಬ್ರಹ್ಮದೇವರಿಂದ ಲೋಕಸೃಷ್ಟಿ ಹಾಗೂ ಶಿವಾದಿ ದೇವತಾಸೃಷ್ಟಿ

ತತೋ ಽ ವಿರಿಂಚೋ ಭುವನಾನಿ ಸಪ್ತ
ಸಸಪ್ತಕಾನ್ಯಾಶು ಚಕಾರ ಸೋ ಽ ಬ್ಜಾತ್ ।
ತಸ್ಮಾಚ್ಚ ದೇವಾ ಋಷಯಃ ಪುನಶ್ಚ
ವೈಕಾರಿಕಾದ್ಯಾಃ ಸಶಿವಾ ಬಭೂವುಃ ॥ ೨೫ ॥

ಅ: ಅನಂತರ ಬ್ರಹ್ಮದೇವರು ಹದಿನಾಲ್ಕು ಲೋಕಗಳನ್ನು ಅನಾಯಾಸವಾಗಿ ಸೃಷ್ಟಿಸಿದರು; ಮತ್ತು ಆ ಬ್ರಹ್ಮನಿಂದ ಶಿವನೂ, ವೈಕಾರಿಕರೇ ಮೊದಲಾದ ದೇವತೆಗಳು ಮತ್ತು ಋಷಿಗಳು ಶಿವನ ಸಮೇತವಾಗಿ ಹುಟ್ಟಿದರು.

ವಿ: ೧) ಬ್ರಹ್ಮದೇವರು ಚತುರ್ದಶದಲಾತ್ಮಕವಾದ ಆ ಪದ್ಮದಿಂದ ಮಾಡಿದ ಸೃಷ್ಟಿಯನ್ನು ಇಲ್ಲಿ ವಿವರಿಸುತ್ತಿರುವರು.

೨) ವೈಕಾರಿಕರು ಎಂದರೆ ವೈಕಾರಿಕ ಅಹಂಕಾರದಿಂದ ಉತ್ಪನ್ನರಾದ ಇಂದ್ರಿಯಾಭಿಮಾನಿ ದೇವತೆಗಳು; 'ಆದ್ಯ' ಶಬ್ದದಿಂದ ತೈಜಸಾಹಂಕಾರದಿಂದ ಉತ್ಪನ್ನರಾದ ಪ್ರಾಣಾದಿಗಳನ್ನೂ ತಾಮಸಾಹಂಕಾರದಿಂದ ಉತ್ಪನ್ನರಾದ ಗಣೇಶಾದಿಗಳನ್ನು ಗ್ರಹಿಸಬೇಕು.

---

೨೫. ಇದಕ್ಕಿಂತ ಮುಂಚಿತವಾಗಿಯೂ ಲೋಕಸೃಷ್ಟಿನಡೆದಿದೆ ಎಂಬುದಾಗಿ ಐತರೇಯಭಾಷ್ಯದಲ್ಲಿ ಉಕ್ತವಾಗಿದೆ;

ಭೂತೇಭ್ಯೋ ಽನಂತರಂ ತ್ವಂಡಂ ಸೃಷ್ಟ್ವಾ ವಿಷ್ಣುಃ ಪುರಾ ಪ್ರಭುಃ ।
ಲೋಕಭೇದಾಂಶ್ಚಕ್ರೇ ಽತ್ರ ಪಶ್ಚಾತ್ ಬ್ರಹ್ಮಾ ವಿಶೇಷತಃ ॥
ಸಮ್ಯಕ್ ಚಕಾರ ಲೋಕಾಂಸ್ತಾನ್ ಲೋಕಕರ್ತಾ ತತಃ ಸ ಚ ॥ – (ಬ್ರಹ್ಮವೈವರ್ತ)

ಸ ಐಚ್ಛತ್ ಭಗವಾನ್ ವಿಷ್ಣುಸ್ರಷ್ಟುಂ ಲೋಕಾಭಿಮಾನಿನಃ ।
ಲೋಕಾಭಿಧಾನವದ್ದೇವಾನ್ ಜಡಲೋಕಾಂಶ್ಚ ಶಾಶ್ವತಃ ॥
ಸ ಲೋಕೇಭ್ಯಃ ಪೂರ್ವತನಾನ್ ನಮಾಖ್ಯಾನ್ ಮಹದಾದಿಕಾನ್ ।
ಬ್ರಹ್ಮಶರ್ವಾದಿಕಾನ್ ಸೃಷ್ಟ್ವಾ ಜಡೈಃ ಸಹ ಜನಾರ್ದನಃ ॥
ದಿವಮಾಕಾಶಮೂರ್ತಿಂ ಚ ಸಸೃಜೇ ಽಥ ದ್ವಿಸಪ್ತಕಾನ್ ।
ಇತಿ ಸೃಷ್ಟ್ವಾ ಸ ಲೋಕಾಂಸ್ತು ಪುನಸ್ತಾನೇವ ಲೋಕಪಾನ್ ॥
ಅಂಡಾಂತಃ ಪ್ರಸ್ರಷ್ಟುಮೈಚ್ಛತ್ ತೇಷಾಂ ಪೂಜ್ಯತ್ವಸಿದ್ಧಯೇ ॥ (ಐತರೇಯಶಾಖಾ) – (ಜ)

ಅಗ್ರೇ ಶಿವೋಽಹಂಭವ ಏವ ಬುದ್ಧೇ-
ರುಮಾಮನೋಜೌ ಸಹಶಕ್ರಕಾಮೌ ।
ಗುರುರ್ಮನುರ್ದಕ್ಷ ಉತಾನಿರುದ್ಧಃ
ಸಹೈವ ಶಚ್ಯಾ ಮನಸಃ ಪ್ರಸೂತಾಃ ॥ ೨೬ ॥

ಚಕ್ಷುಃಶ್ರುತಿಭ್ಯಾಂ ಸ್ಪರ್ಶಾತ್ ಸಹೈವ
ರವಿಃ ಶಶೀ ಧರ್ಮ ಇಮೇ ಪ್ರಸೂತಾಃ ।
ಜಿಹ್ವಾಭವೋ ವಾರಿಪತಿರ್ನಸೋಶ್ಚ
ನಾಸತ್ಯದಸ್ರೌ ಕ್ರಮಶಃ ಪ್ರಸೂತಾಃ ॥ ೨೭ ॥

ಅ: ಮೊದಲಿಗೆ 'ಅಹಂಕಾರ'ದಿಂದ ಹುಟ್ಟಿದವನು ಶಿವ; ಅನಂತರ 'ಬುದ್ಧಿ' ಯಿಂದ 'ಉಮಾ'ದೇವಿ, ಬಳಿಕ ಜೊತೆಯಾಗಿ ಇಂದ್ರಕಾಮರು ಜನಿಸಿದರು; ಅನಂತರ ಬೃಹಸ್ಪತಿ,

---

೨೬. ಶಿವಪದೇನ ಶಿವಾತ್ಮಕಃ ಶಿವಸಮಸ್ತಾರ್ಕ್ಯಶ್ಚ ಗೃಹ್ಯತೇ । –(ವಾ)

೨೬. ಅಹಂಭವಃ = 'ಅಹಮಸ್ಮಿ ಪ್ರಥಮಜಾ ಋತಸ್ಯ' ಇತಿ ಯದಾ ಬ್ರಹ್ಮಾ ದಾಸೋಽಹಮಿತಿ ಅಹಂಮತಿಮಕರೋತ್ ತದಾ ತದೀಯಾಹಂಮತೇರ್ಭವತೀತಿ ಅಹಂಭವಃ । ಅಗ್ರೇ ಶಿವ ಏವ ಅಹಂಭವಃ ಇತಿ ಸಂಬಂಧಃ । –(ವಾ)

ಅಂತಃಕರಣಂ ಅಹಂಕಾರಬುದ್ಧಿಮನಶ್ಚೇತನಾ ಚಿತ್ತಮಿತ್ಯನೇಕಭೇದಭಿನ್ನಮ್ । ತತ್ರಾಗ್ರೇ ಆದೌ ಅಹಂಕಾರಾ- ದ್ಭವತೀತಿ ಅಹಂಭವಃ– ಶಿವಃ । ರುದ್ರೋಽಹಂಕಾರಾಜ್ಜಾತಾ ಇತ್ಯರ್ಥಃ । –(ಜ)

೨೬. 'ಮನೋಜೌ ಸಹಶಕ್ರಕಾಮೌ' ಇತ್ಯತ್ರ ಅಗ್ರಪದಮಾವರ್ತನೀಯಮ್ । ಮನೋಜನ್ಯ ಗುರ್ವಾದಿಭ್ಯೋ ಅಗ್ರೇ । ಅಗ್ರೇ ಗುರ್ವಾದಿಭ್ಯಃ ಆದೌ ಶಕ್ರಕಾಮೌ ಸಹ ಯಮಳೌ ಮನೋಜೌ ।

೨೬. ಗುರ್ವಾದಯಃ ಪಂಚ ಸಹೈವ ಏಕದೈವ ಪ್ರಸೂತಾಃ । –(ಜ)

೨೬. 'ಅಹಮಃ ಶೇಷವೀಂದ್ರೌ ಚ ರುದ್ರೇಂದ್ರೌ ಕಾಮತಶ್ತ್ರಯಃ ।
ಮನಸಸ್ತತ್ವನಿರುದ್ಧಶ್ಚ ಚಂದ್ರಶ್ಚಾನ್ಯೇ ಯಥೋದಿತಮ್ ।
ಏವಂ ಕ್ರಮೋ ವ್ಯತ್ಯಯಸ್ತು ಸೂಕ್ಷ್ಮಸ್ಥೂಲವಿಭೇದತಃ ।
ಸೃಷ್ಟೌ ಗುಣೇ ಚ ಜ್ಞಾನಾದೌ ಮುಕ್ತಿಸ್ಥೇ ವಾಪ್ಯಯಂ ಕ್ರಮಃ ।
ನಿಯಮೇನಾನ್ಯಥೋಕ್ತಿಸ್ತು ಮೋಹಾಯಾಸುರಜನ್ಮನಾಮ್' ಇತಿ ವಾರಾಹೇ ॥ –ಭಾ.ತಾ.(೩/೨೧/೧೩)

'ದೇಹಮಾನೀ ವೈಶ್ರವಣೋ ಮರುತಃ ಪ್ರಾಣಮಾನಿನಃ ।
ಇಂದ್ರಾದ್ಯಾ ಇಂದ್ರಿಯಾತ್ಮಾನೋ ರುದ್ರೋಽಂತಃಕರಣಾತ್ಮಕಃ ।
ನೈತೇ ವಿಂದಂತಿ ಸ್ವಾತ್ಮಾನಂ ಪರಂ ವಾಽಪಿ ವಿಮೋಹಿತಾಃ ।
ಜೀವಾಭಿಮಾನೀ ಬ್ರಹ್ಮಾತು ಸರ್ವಂ ವೇದ ಪ್ರಜಾಪತಿಃ ।
ಸೋಽಪಿ ವೇದ ಹರಿಂ ನೈವ ಸಮ್ಯಕ್ ಸೈವ ಹಿ ಸರ್ವವಿತ್' ಇತಿ ಚ ॥ –ಭಾ.ತಾ.(೬/೪/೨೫)

(ಸ್ವಾಯಂಭುವ)ಮನು, ದಕ್ಷ(ಪ್ರಜಾಪತಿ), ಹಾಗೆಯೇ ಅನಿರುದ್ಧ ಇವರೆಲ್ಲ ಶಚೀದೇವಿ-ಯೊಂದಿಗೆ ಸಹಿತವಾಗಿ ಮನಸ್ಸಿನಿಂದ ಏಕಕಾಲದಲ್ಲಿ ಜನಿಸಿದರು. ಕಣ್ಣು ಹಾಗೂ ಕಿವಿಗಳಿಂದಲೂ ಮತ್ತು ಹಾಗೆಯೇ ಚರ್ಮದಿಂದಲೂ ಸೂರ್ಯ ಚಂದ್ರ ಮತ್ತು ಯಮ ಇವರು ಜನಿಸಿದರು; ನಾಲಿಗೆಯಿಂದ ಜನಿಸಿದವನು ವರುಣ; ಮೂಗಿನ ಹೊರಳೆಗಳಿಂದ ನಾಸತ್ಯ ಮತ್ತು ದಸ್ರರು (ಅಶ್ವಿನೀದೇವತೆಗಳು) ಕ್ರಮವಾಗಿ ಹುಟ್ಟಿದರು.

ತತಃ ಸನಾದ್ಯಾಶ್ಚ ಮರೀಚಿಮುಖ್ಯಾಃ
ದೇವಾಶ್ಚ ಸರ್ವೇ ಕ್ರಮಶಃ ಪ್ರಸೂತಾಃ ।
ತತೋಽಸುರಾದ್ಯಾಃ ಋಷಯೋ ಮನುಷ್ಯಾ
ಜಗದ್ವಿಚಿತ್ರಂ ಚ ವಿರಿಂಚತೋಽಭೂತ್ ॥ ೨೮ ॥

ಅ: ಅನಂತರ ಸನಕಾದಿ ಮೂವರೂ ಮರೀಚಿ ಮೊದಲಾದ ದೇವತೆಗಳು, ಇತರ ಪ್ರಾಣಿಗಳು ಕ್ರಮವಾಗಿ ಜನಿಸಿದರು; ಅನಂತರ ಅಸುರ ರಾಕ್ಷಸಾದಿಗಳು, ಋಷಿಗಳು ಮನುಷ್ಯರು ಜನಿಸಿದರು; ಗೋ, ಗಜ. ಅಶ್ವ, ಸರ್ಪ ಮೊದಲಾಗಿ ಅನೇಕತೆರನಾದ ಭೇದಗಳಿಂದ ಕೂಡಿದ ಜಗತ್ತು ಸಹ ಆ ಬ್ರಹ್ಮದೇವರಿಂದ ಜನಿಸಿತು.

---

೨೭. ನಾಸತ್ಯದಸ್ರೌ = ಏಕೋ ನಾಸತ್ಯಃ ಅಪರೋ ದಸ್ರಃ । ನನು ಚೈತಯೋರ್ನಾಮಭೇದಃ ಕ್ವಚಿದ್ಧಿ - ಇತಿ ತಯೋರ್ವಿಶೇಷನಾಮಾಪಿ ಅವಿಶೇಷಿತಮಿತಿ ಚ ಕಥಂ ವಕ್ಷ್ಯತೀತಿ ಚೇತ್ ಸಮಾಹಿತಮಿದಂ ಜಯತೀರ್ಥಾರ್ಯೈಃ - 'ಅಶ್ವಿನೋರೇಕಃ ನಾಸತ್ಯಃ । ಸಾಹಚರ್ಯಾದುಭಾವಪಿ ನಾಸತ್ಯೌ ಇತ್ಯುಚ್ಯತೇ ಅತ ಏವ ಅನ್ಯತ್ರ ನಾಸತ್ಯದಸ್ರೌ ಇತಿ ಆಚಾರ್ಯಾಃ' ಇತಿ । ತೇನ ನಾಮಭೇದೇऽಪಿ ಸಾಹಚರ್ಯಾಲ್ಲಕ್ಷಣಯೋಭಯೋರ್ವಾಚಕತ್ವಾತ್ ಶಬ್ದಭೇದೋ ನ ಚೇತಿ। ತಯೋರ್ವಿಶೇಷನಾಮಾಪಿ ವಿಶೇಷತಯಾ ವಾಚಕಮಪಿ ನಾಮಾವಿಶೇಷಿತಂ ಸಾಹಚರ್ಯಾದುಭಯೋರ್ವಾಚಕಮಿತ್ಯುಕ್ತಂ ಭವತಿ। –(ಜ)

೨೮. ಸನಾದ್ಯಾಃ = ಸನಕಾದ್ಯಾಃ ತ್ರಯಃ । –(ಜ)

೨೮. ಮರೀಚಾದ್ಯಾಃ = ವಸುಪುತ್ರಾಃ ಸೂರ್ಯರಶ್ಮಿಸಂಸ್ಥಾಃ । –(ಜ)

೨೮. ಸರ್ವೇ ಅನ್ಯೇ ಪ್ರಾಣಿನಃ । –(ಜ)

೨೮. ಮರೀಚ್ಯಾದ್ಯಾ ಉಕ್ತಾಃ ಛಾಂದೋಗ್ಯಭಾಷ್ಯೇ ।
'ತತ್ಪುತ್ರಾಸ್ತು ಮರೀಚ್ಯಾದ್ಯಾಃ ಸೂರ್ಯರಶ್ಮಿಷು ಸಂಸ್ಥಿತಾಃ' । ಇತಿ –(ಜ)

ಪೂರ್ವಃ = ಆದಿಸೃಷ್ಟೌ -(ವ.); ಪಾದ್ಮಸೃಷ್ಟೌ –(ಜ.)

೨೮. ಶೇಷಾಹಿವೈರಿಶಿವಶಕ್ರಮನುಪ್ರಧಾನಚಿತ್ರೋರುಕರ್ಮರಚನಂ ಯದಪಾಂಗಲೇಶಮ್ ।
ಆಶ್ರಿತ್ಯ ವಿಶ್ವಮಖಿಲಂ ವಿದಧಾತಿ ಧಾತಾ ಶ್ರೀರ್ಯತ್ಕಟಾಕ್ಷಬಲವತ್ಕಜಿತಂ ನಮಾಮಿ ॥ – ದ್ವಾದಶಸ್ತೋತ್ರ

ದೇವತಾತಾರತಮ್ಯದ ಜ್ಞಾಪಕವಾದ ಸೃಷ್ಟಿ

ಉಕ್ತಕ್ರಮಾತ್ ಪೂರ್ವಭವಶ್ಚ ಯೋ ಯಃ
ಶ್ರೇಷ್ಠಃ ಸ ಸ ಹ್ಯಾಸುರಕಾನೃತೇ ಚ ।
ಪೂರ್ವಸ್ತು ಪಶ್ಚಾತ್ ಪುನರೇವ ಜಾತೋ
ನಾಶ್ರೇಷ್ಠತಾಮೇತಿ ಕಥಂಚಿದಸ್ಯ ॥ ೨೯ ॥

ಗುಣಗಳ ಅಭಿಭವಕ್ಕೆ ಕಾರಣಗಳು

ಗುಣಾಸ್ತು ಕಾಲಾತ್ ಪಿತೃಮಾತೃದೋಷಾತ್
ಸ್ವಕರ್ಮತೋ ವಾऽಭಿಭವಂ ಪ್ರಯಾಂತಿ ।
ಲಯೋ ಭವೇದ್ ವ್ಯುತ್ಕ್ರಮತೋ ಹಿ ತೇಷಾಂ
ತತೋ ಹರಿಃ ಪ್ರಲಯೇ ಶ್ರೇಸಹಾಯಃ ॥ ೩೦ ॥

---

೨೯. ನನು ಹಿರಣ್ಯಕಮಧುಕೈಟಭಾದೀನಾಂ ಅಸುರಾಣಾಂ ಪೂರ್ವಮುತ್ಪನ್ನತ್ವ ಶ್ರವಣಾತ್ ತತ್ರ ಶ್ರೇಷ್ಠತ್ವಂ ನಾಸ್ತಿ। ಅಥ ಚ ಪೂರ್ವಮುತ್ಪನ್ನತ್ವಂ ವಿದ್ಯತೇ ಇತಿ ಹೇತೋರ್ವ್ಯಭಿಚಾರಃ ಅನ್ಯಥಾ ತೇಷಾಮಪಿ ದೇವಭ್ಯಾದ್ಯುತ್ತಮತ್ವಂ ಪ್ರಾಪ್ತಮಿತ್ಯತೋ ವ್ಯಾಪ್ತೇರಪವಾದಮಾಹ– ಅಸುರಕಾನ್ ಋತೇ ಇತಿ। –(ವ)

೨೯. ಅತ್ರೋಕ್ತಃ ಪೂರ್ವಃ ಪುನಃ ಕಸ್ಮಾನ್ನಿಮಿತ್ತಾತ್ ಪುನರ್ಜನ್ಮನಿ ಜಾತೋऽಪಿ ಅಶ್ರೇಷ್ಠತಾಂ ನೈತಿ । ಯಥಾ ಧರ್ಮಾವರಜೋ ಭೀಮಃ ದ್ರೋಣಾತ್ಮಜೋ ಅಶ್ವತ್ಥಾಮಾ । ಅವಿವಕ್ಷಿತತಾರತಮ್ಯೇ ಸೃಷ್ಟ್ಯಂತರೇ ಪಶ್ಚಾಜ್ಜಾತೋ ವಾ ಇತ್ಯರ್ಥಃ। –(ಜ)

೨೯. ಪೂರ್ವಸೃಷ್ಟ್ಯೌ ಪೂರ್ವಜಾ ಯೇ ತೇऽಧಿಕಾಃ ಸರ್ವತೋ ಗುಣೈಃ ।
ಅನಾದ್ಯನಂತಕಾಲೇಷು ಮುಕ್ತಾವಪಿ ಯಥಾಕ್ರಮಮ್ ॥ – ಭಾ. ತಾ.

ವಿಪರ್ಯಯೇಣ ತು ಕ್ರಮೋऽತ ಉಪಪದ್ಯತೇ ಚ – ಬ್ರಹ್ಮಸೂತ್ರ (೨/೩/೧೪)

ಅನುರೂಪಃ ಕ್ರಮಃ ಸೃಷ್ಟೌ ಪ್ರತಿರೂಪೋ ಲಯೇ ಕ್ರಮಃ ।
ಇತಿ ಕ್ರಮೇಣ ಭಗವಾನ್ ಸೃಷ್ಟಿಸಂಹಾರಕೃದ್ಧರಿಃ । ಇತಿ ಪಾದ್ಮೇ

ವಾಮನೇ ಚ -

ಪೂರ್ವೇ ಪೂರ್ವೇ ಯತೋ ವಿಷ್ಣೋಃ ಸನ್ನಿಧಾನಂ ಕ್ರಮಾಧಿಕಮ್ ।
ಸಾಮರ್ಥ್ಯಾಧಿಕ್ಯಮೇತೇಷಾಂ ಪಶ್ಚಾದೇವ ಲಯಸ್ತಥಾ ॥
ವ್ಯಾಪ್ತಿಶ್ಚಾಭ್ಯಧಿಕಾ ತೇಷಾಮತ ಏವ ನ ಸಂಶಯಃ । - ಬ್ರಹ್ಮಸೂತ್ರಭಾಷ್ಯ (೨/೩/೧೪)

ಆದಿಸೃಷ್ಟೌ ಪೂರ್ವಜಾ ಯೇ ತೇऽಧಿಕಾಃ ಸರ್ವತೋ ಗುಣೈಃ ।
ಅನಾದ್ಯನಂತಕಾಲೇಷು ಮುಕ್ತಾವಪಿ ಯಥಾಕ್ರಮಮ್ ॥ – ಭಾ.ತಾ.(೧೧/೧೪/೪)

ಅ: ಹೀಗೆ ಹೇಳಿದ ಕ್ರಮದಲ್ಲಿ ಅಸುರರನ್ನು ಹೊರತುಪಡಿಸಿ ಮೊದಲು ಜನಿಸಿದವನು ಯಾವನೋ ಅವನು ಅನಂತರ ಜನಿಸಿದವನಿಗಿಂತ ಉತ್ತಮ. ಮೊದಲು ಹುಟ್ಟಿದವನು ಅನಂತರದ ಸೃಷ್ಟಿಯಲ್ಲಿ ಅನಂತರದವನಾಗಿ ಹುಟ್ಟಿದರೂ, ಯಾವಪ್ರಕಾರದಲ್ಲೂ ಮೊದಲು ಹುಟ್ಟಿದ ಅಧಮವ್ಯಕ್ತಿಗಿಂತ ಕಡಿಮೆ ಎನ್ನಿಸಲಾರನು.

ಗುಣಗಳು ಕಾಲದಿಂದಾಗಲೀ, ತಂದೆತಾಯಿಗಳ ದೋಷದಿಂದಾಗಲೀ, ತಮ್ಮ ಪ್ರಾರಬ್ಧಕರ್ಮದ ಬಲದಿಂದಾಗಲೀ, ಕುಗ್ಗಿ ಹೋಗುವುದುಂಟು. ಹೀಗೆ ಜನಿಸಿದವರಿಗೆಲ್ಲ ವ್ಯುತ್ಕ್ರಮದಿಂದ ಲಯ ಉಂಟಾಗುವುದು; ಪ್ರಲಯಕಾಲದಲ್ಲಿ ಶ್ರೀಹರಿಯು ಲಕ್ಷ್ಮೀಸಮೇತನಾಗಿ ಇರುವನು.

ವಿ: ೧) ಪಾದ್ಮಸೃಷ್ಟಿಯಲ್ಲಿ ಮೊದಲು ಹುಟ್ಟಿದ ದೇವತೆ ಅನಂತರ ಹುಟ್ಟಿದ ದೇವತೆಗಿಂತ ಸ್ವರೂಪತಃ ಉತ್ತಮ; ಈ ನಿಯಮ ಅಸುರರಿಗೆ ಅನ್ವಯಿಸುವುದಿಲ್ಲ; ಎಂದರೆ ಯಾವಾಗ ಹುಟ್ಟಿದರೂ ಅಸುರರು ಸುರರಿಗಿಂತ ನೀಚರು ಎಂದು ಅರ್ಥ.

೨) ಪಾದ್ಮಸೃಷ್ಟಿಯಲ್ಲಿ ಹುಟ್ಟಿದ ದೇವತೆಗಳು ಅನಂತರ ಮತ್ತೊಮ್ಮೆ ಅನ್ಯತ್ರ ಜನಿಸಿದಾಗ ಈ ನಿಯಮ ಅನ್ವಯಿಸುವುದಿಲ್ಲ; ಅಲ್ಲಿ ಮೊದಲು ಹುಟ್ಟಿದರೂ ಅನಂತರ ಹುಟ್ಟಿದರೂ ಅವರ ತಾರತಮ್ಯವನ್ನು ಪಾದ್ಮಸೃಷ್ಟಿಯ ಉತ್ಪತ್ತಿ ಕ್ರಮದಂತೆ ಎಂದು ತಿಳಿಯಬೇಕು. ಧರ್ಮರಾಜನಿಗಿಂತ ಅನಂತರ ಹುಟ್ಟಿದ ಭೀಮ ಸ್ವರೂಪತಃ ಅವನಿಗಿಂತ ಉತ್ತಮ; ದ್ರೋಣಪುತ್ರತ್ವೇನ ಅವತರಿಸಿದರೂ ಅಶ್ವತ್ಥಾಮ ಅವರಿಗಿಂತ ಉತ್ತಮ ಹೇಗೋ ಹಾಗೆ ಎಂದು ಭಾವ.

---

೩೦. ಗುಣಾಃ - ಜ್ಞಾನಾನಂದಾದಯಃ । ಕಾಲಾತ್ ದ್ವಾಪರಕಲಿಯುಗಾದಿಕಾಲಬಲಾತ್ । ಪಿತೃಮಾತೃದೋಷಾತ್ ಮನುಷ್ಯಾನ್ನಪರಿಣತರೇತಯೋನಿಸಂಬಂಧದೋಷಾತ್ ಸ್ವಕರ್ಮತೋ ವಾ ಸ್ವಾರ್ಜಿತಪ್ರಾರಬ್ಧಕರ್ಮಸಂಬಂಧಾದ್ವಾ ಅಭಭವಂ ಅನಭಿವ್ಯಕ್ತಿಮ್ । ಪ್ರಯಾಂತಿ ಗಚ್ಛಂತಿ ಇತ್ಯರ್ಥಃ ।

ಪುನಃ ತದ್ದೋಷವಿಯೋಗೇ ತೇ ಗುಣಾಃ ಪ್ರಾದುರ್ಭವಂತೀತ್ಯರ್ಥಃ । -(ವ)

೩೦. ಉಪಲಕ್ಷಣಯಾ ಪುತ್ರ, ಸೋದರ ಮೊದಲಾದವುಗಳನ್ನೂ ಗ್ರಹಿಸಬಹುದು.

೩೦. ಅಂಧಃ ಆಸೀತ್ ಸ ತು ಮಾತೃದೋಷತಃ । -(ಮ. ಭಾ. ತಾ. ನಿ. ೧೧/೧೩೨)

೩೦. ಬಲೀ ಚ ಪಾರ್ಥಪ್ರಥಮೋದ್ಭವತ್ವಾತ್ । -(ಮ. ಭಾ. ತಾ. ನಿ. ೨೫/೧೫೭)

೩೦. ಕಾಲಾಭಧೋ ವಿರಿಂಚಸ್ತು ಮಹಾಲಭ್ಯಾಂ ವಿಲೀಯತೇ ।
ಜೀವಮಾಯೇತಿ ಯಾಮಾಹುಃ ಸಾ ಚ ಸತ್ವಾದಿಭೇದತಃ ।
ತ್ರಿವಿಧೈಕತ್ವಮಾಪಾದ್ಯ ವಿಷ್ಣಾವೇವ ವಿಲೀಯತೇ ॥ - ಭಾ. ತಾ. (೧೧/೨೪/೨೯)

೩) ಅನಂತರದ ಸೃಷ್ಟಿಯಲ್ಲಿ ಕಾಲಬಲ, ತಂದೆತಾಯಿಗಳ ದೋಷ ಅಥವಾ ಅವರವರ ಪ್ರಾರಬ್ಧಕರ್ಮ ಇವುಗಳಿಂದಾಗಿ ಸ್ವಾಭಾವಿಕವಾದ ಜ್ಞಾನಾನಂದಾದಿ ಗುಣಗಳು ಪ್ರಕಟಗೊಳ್ಳದೆ ಹೋಗುವ ಸಂಭವ ಉಂಟು. ಆದರೂ ಅದು ಔಪಾಧಿಕವಾದ್ದರಿಂದ ಅವರ ಸಹಜತಾರತಮ್ಯಕ್ಕೆ ಜ್ಞಾಪಕ–ವಾಗುವುದಿಲ್ಲ ಎಂದು ತಿಳಿಯಬೇಕು. ಧೃತರಾಷ್ಟ್ರನು ತನ್ನ ತಾಯಿ ಅಂಬಿಕೆಯು ಶ್ರೀವೇದವ್ಯಾಸರನ್ನು ಕಂಡು ಕಣ್ಣುಮುಚ್ಚಿದ ಕಾರಣದಿಂದ ಕುರುಡನಾದದ್ದು, ಪಾಂಡು ಶ್ವೇತವರ್ಣದವನಾದದ್ದು, ಇರಾವಂತನು ಅರ್ಜುನನ ಮೊದಲಮಗ ಎಂಬ ಕಾರಣದಿಂದ ವಿಶೇಷಬಲಶಾಲಿ(೨೦/೧೫೭) ಎನಿಸಿದ್ದು ಮೊದಲಾದವುಗಳು ಇದಕ್ಕೆ ನಿದರ್ಶನ.

೪) 'ಅಭಿಭವ'ದಂತೆ ಇವೇ ಕಾರಣದಿಂದ '**ವಿಭವ**'ವಾಗುವ ಸಂಭವವೂ ಉಂಟು.

೫) ಪಾದ್ಮಸೃಷ್ಟಿಯಲ್ಲಿ ಅನಂತರ ಹುಟ್ಟಿದವರು ಮೊದಲು ಲಯಹೊಂದುವರು; ಮೊದಲು ಹುಟ್ಟಿದವರು ಅನಂತರ ಲಯಹೊಂದುವರು ಎಂಬುದೇ '**ವ್ಯುತ್ಕ್ರಮತಃ**' ಲಯ ಎಂಬುದಕ್ಕೆ ಅರ್ಥ.

೬) ಹಿರಣ್ಯಾಕ್ಷ ಮಧುಕೈಟಭರು ಸೃಷ್ಟಿಯ ಆದಿಯಲ್ಲೇ ದೇವಶ್ಯಾದಿಗಳಿಗಿಂತ ಮುಂಚಿತವಾಗಿಯೇ ಹುಟ್ಟಿದವರಾದರೂ ಅವರು ಅಸುರರಾದ್ದರಿಂದ ಅವರು ಅನಂತರ ಹುಟ್ಟಿದ ದೇವತೆಗಳಿಗಿಂತ ಉತ್ತಮರಾಗಿರದೆ ಅಧಮರೇ ಆಗಿರುವರು ಎಂಬುದನ್ನು '**ಅಸುರಕಾನ್ ಋತೇ ಚ**' ಎಂಬ ಪದದಿಂದ ಸೂಚಿಸಿರುವರು.

೭) ಪ್ರಲಯಕಾಲದಲ್ಲಿಯೂ ಲಯರಹಿತರಾದ ಶ್ರೀಲಕ್ಷ್ಮೀನಾರಾಯಣರು ಇತರ ಸಕಲರಿಗಿಂತಲೂ ಉತ್ತಮರು; ಅವರಿಬ್ಬರಲ್ಲೂ ಸ್ವತಂತ್ರನಾದ ನಾರಾಯಣನು ಸರ್ವೋತ್ತಮನು ಎಂದು ಭಾವ.

ಪ್ರಳಯ ಕಾಲದಲ್ಲಿ ಶ್ರೀಹರಿಯ ಇರುವಿಕೆಯ ರೀತಿ

ಶೇತೇ ನಿಜಾನಂದಮಮಂದಸಾಂದ್ರ-
ಸಂದೋಹಮೇಕೋऽನುಭವನ್ನನಂತಃ ।
ಅನಂತಶೀರ್ಷಾಸ್ಯಕರೋರುಪಾದಃ
ಸೋऽನಂತಮೂರ್ತಿಃ ಸ್ವಗುಣಾನನಂತಾನ್ ।
ಅನಂತಶಕ್ತಿಃ ಪರಿಪೂರ್ಣಭೋಗೋ
ಭುಂಜನ್ನಜಸ್ರಂ ನಿಜರೂಪ ಆಸ್ತೇ ॥ ೩೧ ॥

ಅ: ಶ್ರೀಹರಿಯು ಪ್ರಲಯಕಾಲದಲ್ಲಿ ಶ್ರೀಸಮೇತನಾಗಿ ಪೂರ್ಣವೂ ನಿಬಿಡವೂ ಸಮಸ್ತವೂ ಆದ ಸ್ವರೂಪಭೂತವಾದ ಆನಂದವನ್ನು ಅನುಭವಿಸುತ್ತ ಒಬ್ಬನೇ ಮಲಗಿರುವನು;

ಅನಂತ ಶಿರಸ್ಸು, ಮುಖ, ಕೈಗಳು, ತೊಡೆಗಳು, ಪಾದಗಳು – ಇವುಗಳನ್ನು ಉಳ್ಳವನೂ, ಅನಂತರೂಪನೂ, ಅನಂತಶಕ್ತಿಯೂ, ಪರಿಪೂರ್ಣಭೋಗನೂ ಆದ ಆ ಶ್ರೀಹರಿಯು ತನ್ನ ಸುಖಜ್ಞಾನ ಮೊದಲಾದ ಅನಂತಗುಣಗಳನ್ನು ನಿರಂತರ ಅನುಭವಿಸುತ್ತ ಮೂಲರೂಪದಿಂದಿರುವನು.

ವಿ: ೧) ಶ್ರೀಹರಿಗೆ ನಿದ್ರೆ ಎಂದರೆ ಕಣ್ಣು ಮುಚ್ಚಿಕೊಳ್ಳುವುದು ಮಾತ್ರ ಎಂದು ಅರ್ಥ; ಮಹಾಲಕ್ಷ್ಮಿಗೂ ಸಹ ನಿದ್ರೆ ಎಂದರೆ ಶ್ರೀಹರಿಗೆ ವಿಶೇಷವಾಗಿ ಅತ್ಯಂತ ಸಮೀಪದಲ್ಲಿರುವುದು, ಅತೀವ ಭಗವದ್ರತಿ, ಅನ್ಯತ್ರ ಆಸ್ಥೆಯಿಲ್ಲದಿರುವುದು ಎಂದು ಅರ್ಥ; ಇವರಿಬ್ಬರಿಗೂ ಬೇರೆ ಅರ್ಥದಲ್ಲಿ 'ನಿದ್ರೆ' ಎಂದೂ ಇರುವುದಿಲ್ಲ.

೨) ಇಲ್ಲಿ ಅನಂತ ಎಂದರೆ ದೇಶತಃ ಕಾಲತಃ ಮತ್ತು ಗುಣತಃ ಕೊನೆ ಇಲ್ಲದಿರುವಿಕೆ ಎಂದು ಅರ್ಥ.

೩) ಅವನ ಆನಂದಾನುಭವವು ಸರ್ವದಾ ವಿಕಪ್ರಕಾರವಾದುದು ಎಂಬುದನ್ನು **'ಅಜಸ್ರಂ'** ಎಂಬ ಪದದಿಂದ ತಿಳಿಸಿರುವರು.

ಶ್ರೀಹರಿಯಿಂದ ಜಗತ್ಸೃಷ್ಟಿಯ ಪುನರಾವೃತ್ತಿ - ಜೀವಾದಿಗಳ ನಿತ್ಯತ್ವ

ಏವಂ ಪುನಃ ಸೃಜತೇ ಸರ್ವಮೇತ-
ದನಾದ್ಯನಂತೋ ಹಿ ಜಗತ್ಪ್ರವಾಹಃ ।
ನಿತ್ಯಾ ಹಿ ಜೀವಾ ಪ್ರಕೃತಿಶ್ಚ ನಿತ್ಯಾ
ಕಾಲಶ್ಚ ನಿತ್ಯಃ ಕಿಮು ದೇವದೇವಃ ॥ ೩೨ ॥

---

೩೧. ಸುಪ್ತಿಸ್ತು ಪ್ರಕೃತೇಃ ಪ್ರೋಕ್ತಾ ಅತೀವ ಭಗವದ್ರತಿಃ ।
ಅನಾಸ್ಥಾನ್ಯತ್ರ ಚ ಪ್ರೋಕ್ತಾ ವಿಷ್ಣೋಶ್ಚಕ್ಷುರ್ನಿಮೀಲನಮ್ ॥ – (ವ್ಯೋಮಸಂಹಿತಾ)
ಹರೇರತ್ಯಂತಸಾಮಿಪ್ಯಂ ಲಯೋ ಲಕ್ಷ್ಮ್ಯಾಃ ಪ್ರಕೀರ್ತಿತಃ । ಇತಿ ವಚನಾತ್ ಶ್ರೀಸಹಾಯ ಇತ್ಯುಕ್ತಮ್ । -(ವ)

೩೧. ಅನಂತಃ ಕಾಲತೋ ದೇಶತೋ ಗುಣತಶ್ಚ ಪರಿಚ್ಛೇದಶೂನ್ಯಃ । –(ವ)

೩೧. ಪ್ರತ್ಯೇಕಶೋ ಗುಣಾನಾಂ ತು ನಿಃಸೀಮತ್ವಮುದೀರ್ಯತೇ ।
ತದಾನಂತ್ಯಂ ಹಿ ಗುಣತಸ್ತೇ ಚಾನಂತಾ ಹಿ ಸಂಖ್ಯಯಾ ॥ – ಭಾ.ತಾ.(೬/೪/೪೮)

೩೧. ನಿಜರೂಪಃ = ಮೂಲರೂಪಃ । –(ವ)

ಅ: ಶ್ರೀಹರಿಯು ಹೀಗೆಯೇ ಪುನಃ ಈ ಸಮಸ್ತವನ್ನು ಸೃಷ್ಟಿಸುವನು; ಹೀಗೆ ಈ ಜಗತ್ಪ್ರವಾಹವು ಅನಾದಿ ಮತ್ತು ಅನಂತವಾಗಿದೆ; ಜೀವರೆಲ್ಲರೂ ನಿತ್ಯರು; ಪ್ರಕೃತಿಯೂ ನಿತ್ಯ; ಕಾಲವೂ ನಿತ್ಯ; ಇನ್ನು ದೇವದೇವನಾದ ಶ್ರೀಹರಿಯು ನಿತ್ಯ ಎಂದು ಹೇಳಬೇಕೆ?

ವಿ: ಭಗವಂತನಿಂದ ನಿಯಮ್ಯರಾದ ಜೀವ, ಪ್ರಕೃತಿ, ಕಾಲಾದಿಗಳೇ ಅನಾದಿನಿತ್ಯವಾಗಿರುವಾಗ ಸರ್ವನಿಯಾಮಕನಾದ ಅವನ ಅನಾದಿನಿತ್ಯತ್ವವು ಕೈಮುತ್ಯಸಿದ್ಧವಾದುದು ಎಂದು ಭಾವ.

ಜಗತ್ಪ್ರವಾಹದ ರೀತಿ

ಯಥಾ ಸಮುದ್ರಾತ್ ಸರಿತಃ ಪ್ರಜಾತಾಃ
ಪುನಸ್ತಮೇವ ಪ್ರವಿಶಂತಿ ಶಶ್ವತ್ ।
ಏವಂ ಹರೇರ್ನಿತ್ಯಜಗತ್ಪ್ರವಾಹ-
ಸ್ತಮೇವ ಚಾಸೌ ಪ್ರವಿಶತ್ಯಜಸ್ರಮ್ ॥ ೩೩ ॥

---

೩೨. 'ಧಾತಾ ಯಥಾಪೂರ್ವಮಕಲ್ಪಯತ್' - ಋಗ್ವೇದ(೧೦/೧೯೦/೩)

೩೨. ನ ತಾವತ್ ಸೃಜ್ಯಾನಾಂ ಜೀವಾನಾಂ ಪರಿಸಮಾಪ್ತಿಃ । ತೇಷಾಂ ನಿತ್ಯತ್ವಾತ್ ಅನಂತತ್ವಾಚ್ಚ । ನಾಪ್ಯುಪಾದಾನಾಭಾವಾದ್ದೇಹವಿಶಿಷ್ಟತ್ವೇನ ತದುತ್ಪತ್ತ್ಯನುಪಪತ್ತಿಃ । ಪ್ರಕೃತೇರಪಿ ನಿತ್ಯತ್ವಾತ್ । ನಾಪಿ ಸೃಷ್ಟಿಕಾಲರೂಪನಿಮಿತ್ತಕಾರಣಾಭಾವಾತ್ । ಕಾಲಸ್ಯಾಪಿ ನಿತ್ಯತ್ವಾತ್ ॥ -(ವ)

೩೩. ನನು ಏವಂ ಜೀವಾನಾಂ ನಿತ್ಯತ್ವೇ ತೇಷಾಂ ಪ್ರಲಯೋ ನಾಮ ಕಃ। ಇತ್ಯಪೇಕ್ಷಾಯಾಂ ಸದೃಷ್ಟಾಂತಂ ಸೃಷ್ಟಿಪ್ರಲಯೌ ಉಪಪಾದಯತಿ ॥ -(ವ)

೩೪. ಜಿಜ್ಞಾಸೋತ್ತಜ್ಞಾನಜಾತ್ ತತ್ಪ್ರಸಾದಾದೇವಮುಚ್ಯತೇ । -ಅನುವ್ಯಾಖ್ಯಾನ (೧/೧/೧೨)

೩೪. ಅತ್ರ 'ವಿದುಃ' ಇತ್ಯನೇನ ವೈರಾಗ್ಯಭಕ್ತಿಶ್ರವಣಮನನನಿದಿಧ್ಯಾಸನಜನ್ಯಂ ಅಪರೋಕ್ಷಜ್ಞಾನಂ ಭಗವತ್ಪ್ರಸಾದಜನಕಂ ವಿವಕ್ಷಿತಂ ಇತಿ ಸೂಚಯಿತುಂ ತಸ್ಯ ಪ್ರಸಾದಾದಿತ್ಯುಕ್ತಮ್ । -(ವ)

೩೪. ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥ -(ಗೀತಾ)
ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ । -(ಗೀತಾ)
ತತ್ಪ್ರಸಾದಾತ್ ಪರಾಂ ಶಾಂತಿಮಚಿರೇಣಾಧಿಗಚ್ಛತಿ । -(ಗೀತಾ)

೩೪. ಆದೌ ದೇವಾನ್ ಪ್ರಾಪ್ಯ ಅಂತೇ ತಮಾಪ್ನೋತಿ ಇತ್ಯೇತತ್ ಜ್ಞಾಪಯತಿ । ಸುರೇಶಂ ಇತಿ ।

೩೪. ಪಾರಬ್ಧಕರ್ಮಣೋಽನ್ಯಸ್ಯ ಜ್ಞಾನಾದೇವ ಪರಿಕ್ಷಯಃ ।
ಅನಿಷ್ಪನ್ನೋಭಯಸ್ಯಾಪಿ ಸರ್ವಸ್ಯಾನ್ಯಸ್ಯ ಭೋಗತಃ ॥ - ಅಣುಭಾಷ್ಯ

ಅ: ಸಾಗರದಿಂದ ಜನ್ಮತಳೆಯುವ ನದಿಗಳು ಸದಾ ಮತ್ತೆ ಅದನ್ನೇ ಹೇಗೆ ಸೇರಿಕೊಳ್ಳುವವೋ, ಹಾಗೆಯೇ ಶ್ರೀಹರಿಯಿಂದ ಸೃಷ್ಟಿಸಲ್ಪಡುವ ಈ ನಿತ್ಯವಾದ ಜಗತ್ಪ್ರವಾಹವು ನಿರಂತರ ಅವನನ್ನೇ ಸೇರುವುದು.

ಶ್ರೀಹರಿಯ ಸೃಷ್ಟಿಕರ್ತೃತ್ವಾದಿಗಳ ಪರಿಜ್ಞಾನದ ಫಲ

ಏವಂ ವಿದುರ್ಯೇ ಪರಮಾಮನಂತಾ-
ಮಜಸ್ರಶಕ್ತಿಂ ಪುರುಷೋತ್ತಮಸ್ಯ ।
ತಸ್ಯ ಪ್ರಸಾದಾದಥ ದಗ್ಧದೋಷಾ-
ಸ್ತಮಾಪ್ನುವಂತ್ಯಾಶು ಪರಂ ಸುರೇಶಮ್ ॥ ೩೪ ॥

ಅ: ಈ ತೆರನಾದ ಪುರುಷೋತ್ತಮನಾದ ಶ್ರೀಹರಿಯ ಉತ್ಕೃಷ್ಟವೂ, ಅನಂತವೂ, ನಿರಂತರವೂ ಆದ ಸಾಮರ್ಥ್ಯವನ್ನು ಯಾರು ತಿಳಿಯುವರೋ ಅವನ ಅನುಗ್ರಹದಿಂದ ಅವರ ಸಕಲ ದೋಷಗಳೂ ಭಸ್ಮವಾಗುವವು; ಅಲ್ಲದೆ ಅವರು ಸುರರಿಗೆಲ್ಲ ಸ್ವಾಮಿಯೂ, ಗುಣಪೂರ್ಣನೂ ಆದ ಅವನನ್ನು ಬೇಗನೇ ತಲುಪುವರು.

ವಿ: ೧) ಈ ತೆರನಾದ ಬ್ರಹ್ಮಜ್ಞಾನಕ್ಕೆ ಹರಿಪ್ರಸಾದದ್ವಾರಾ ಮೋಕ್ಷವೇ ಫಲ ಎಂದು ಭಾವ.

೨) ವೈರಾಗ್ಯ, ಭಕ್ತಿ ಶ್ರವಣ, ಮನನ, ನಿದಿಧ್ಯಾಸನಗಳಿಂದ ಹುಟ್ಟುವ ಅಪರೋಕ್ಷ–ಜ್ಞಾನವೇ ಭಗವತ್ಪ್ರಸಾದಕ್ಕೆ ಸಾಧನ ಎಂಬುದನ್ನು ಇಲ್ಲಿನ 'ವಿದುಃ' ಮತ್ತು 'ಏವಂ' ಎಂಬ ಪದಗಳಿಂದ ಸೂಚಿಸಿರುವರು.

ದೇವಾನಿಮಾನ್ ಮುಕ್ತಸಮಸ್ತದೋಷಾನ್
ಸ್ವಸನ್ನಿಧಾನೇ ವಿನಿವೇಶ್ಯ ದೇವಃ ।
ಪುನಸ್ತದನ್ಯಾನಧಿಕಾರಯೋಗ್ಯಾನ್
ತತ್ತದ್ಗುಣಾನೇವ ಪದೇ ನಿಯುಂಕ್ತೇ ॥ ೩೫ ॥

---

೩೫. ದೇವಾನ್ = ದೇವಾದೀನ್ ಮನುಷ್ಯೋತ್ತಮಪರ್ಯಂತಾನ್ ಸಜ್ಜೀವಾನ್ । ಸ್ವಸನ್ನಿಧಾನೇ ಯಥಾಯೋಗ್ಯಂ ಶ್ವೇತದ್ವೀಪಾದೌ । .... 'ಏಮುಕ್ತಸಮಸ್ತದೋಷಾನ್' ಇತಿ ಹೇತುಗರ್ಭವಿಶೇಷಣಮ್ । ತೇಷಾಂ ಪುನಃ ಸಂಸಾರ-ಪ್ರಾಪಕಕರ್ಮಾದ್ಯಭಾವಾತ್ ತದನ್ಯಾನೇವ ನಿಯುಂಕ್ತೇ ಇತಿ ಭಾವಃ -(ಜ)

೩೫. ಅಧಿಕಾರಯೋಗ್ಯಾನ್ವಾಯುರುದ್ರಾದೀನ್ ಏವ । ಪದೇ ಬ್ರಹ್ಮಶೇಷಾದಿಪದೇ । ಧಾತಾ ಯಥಾ-ಪೂರ್ವಮಕಲ್ಪಯತ್ । -(ಶ್ರುತಿಃ)

ಅ: ಶ್ರೀಹರಿಯು ಸಮಸ್ತದೋಷಗಳಿಂದ ಬಿಡುಗಡೆ ಹೊಂದಿದ ಈ ದೇವತೆಗಳನ್ನು ತನ್ನ ಸನ್ನಿಧಾನದಲ್ಲಿ ಇರಿಸಿಕೊಂಡು ಆಯಾಪದವಿಗೆ ಯೋಗ್ಯರಾದ ಆಯಾಗುಂಪಿನ ಅಂತಹ ದೇವತೆಗಳನ್ನೇ ಆಯಾಪದವಿಯಲ್ಲಿ ಪುನಃ ನಿಯೋಜಿಸುವನು.

ವಿ: ಇಲ್ಲಿ 'ದೇವತೆಗಳನ್ನು' ಎಂದರೆ ಮನುಷ್ಯೋತ್ತಮಪರ್ಯಂತ ಸಕಲ ಸಜ್ಜೀವರನ್ನು ಎಂದು ಅರ್ಥ; ಅದರಂತೆ ತನ್ನ 'ಸನ್ನಿಧಾನ'ದಲ್ಲಿ ಎಂದರೆ 'ಶ್ವೇತದ್ವೀಪಾದಿ ಸ್ಥಾನಗಳಲ್ಲಿ' ಎಂದೂ ಅರ್ಥ. ದೇವತೆಗಳನ್ನು ಎಂಬುದಕ್ಕೆ 'ವಾಯುರುದ್ರಾದಿಗಳನ್ನು' ಎಂದೂ 'ತತ್ತತ್ಪದೇ' ಎಂಬುದಕ್ಕೆ ಬ್ರಹ್ಮಶೇಷಾದಿ ಪದಗಳಲ್ಲಿ ಎಂದೂ ಅರ್ಥ.

ಕಶ್ಯಪರಿಂದ ಪುನಃ ದೇವತೆಗಳ ಅವತಾರ

ಪುನಶ್ಚ ಮಾರೀಚತ ಏವ ದೇವಾ
ಜಾತಾ ಅದಿತ್ಯಾಮಸುರಾಶ್ಚ ದಿತ್ಯಾಮ್ ।
ಗಾವೋ ಮೃಗಾಃ ಪಕ್ಷ್ಯುರಗಾದಿಸತ್ತ್ವ
ದಾಕ್ಷಾಯಣೀಷ್ವೇವ ಸಮಸ್ತಶೋಽಪಿ ॥ ೩೬ ॥

ಅ: ಕಶ್ಯಪರಿಂದ ಅದಿತಿಯಲ್ಲಿ ದೇವತೆಗಳೂ ದಿತಿಯಲ್ಲಿ ಅಸುರರೂ ಪುನಃ ಜನಿಸಿದರು; ಗೋವುಗಳು, ಮೃಗಗಳು, ಪಕ್ಷಿಗಳು, ಸರ್ಪ ಮೊದಲಾದ ಸಕಲ ಪ್ರಾಣಿಗಳು ಸಹ ದಕ್ಷಪುತ್ರಿಯರಲ್ಲಿ ಜನಿಸಿದವು.

ವಿ: ೧) ಹಿಂದೆ ಹೇಳಿದ ಸೃಷ್ಟಿ 'ಸರ್ಗ'; ಈಗ ಹೇಳುತ್ತಿರುವುದು 'ಅನುಸರ್ಗ' ಎಂದು ತಿಳಿಯಬೇಕು.

೨) ಮಾರೀಚ ಎಂದರೆ ಮರೀಚಿಪುತ್ರರಾದ ಕಶ್ಯಪ ಎಂದರ್ಥ.

೩) ದಕ್ಷಪುತ್ರಿಯರಾದ ದಿತಿ, ಅದಿತಿ, ಸುರಭಿ, ವಿನುತಾ ಮೊದಲಾದವರೆಲ್ಲ ಕಶ್ಯಪ–ಪತ್ನಿಯರೂ ಆಗಿರುವರು.

---

೩೬. ಮರೀಚಿಪುತ್ರೋ ಮಾರೀಚಃ ಕಶ್ಯಪಃ। ಪಶ್ಚಾದುತ್ಪನ್ನದೇವಾನಾಂ ಪಿತೃತಯಾ ಪೂರ್ವೋತ್ಪನ್ನ-ಕಶ್ಯಪಾನ್ನೈಚ್ಯಾಭಾವಾದಿತಿ ಭಾವಃ। –(ವಾ)

೩೭. ಪೂರ್ವೋಕ್ತಾ ಸೃಷ್ಟಿಃ ಸರ್ಗಃ। ಅಯಮನುಸರ್ಗ ಇತಿ ಜ್ಞೇಯಮ್। –(ವಾ)

೩೭. ತತಃ = ಸರ್ವಸೃಷ್ಟ್ಯನಂತರಮ್। –(ವ)

ಅಲಯಃ = ಲಯರಹಿತಃ। ವಾರಾಮುಪರಿ = ಘನೋದಕವಾರಾಮುಪರಿ। –(ವಾ)

ಶ್ರೀಹರಿಯ ವರಾಹಾವತಾರ

ತತಃ ಸ ಮಗ್ನಾಮಲಯೋ ಲಯೋದಧೌ
ಮಹೀಂ ವಿಲೋಕ್ಯಾಶು ಹರಿರ್ವರಾಹಃ ।
ಭೂತ್ವಾ ವಿರಿಂಚಾರ್ಥಮಿಮಾಂ ಸಶೈಲಾ-
ಮುದ್ಧೃತ್ಯ ವಾರಾಮುಪರಿ ನ್ಯಧಾತ್ ಸ್ಥಿರಮ್ ॥ ೩೭ ॥

ಅ: ಅನಂತರ ಲಯರಹಿತನಾದ ಆ ಶ್ರೀಹರಿಯು ಪ್ರಲಯಸಾಗರದಲ್ಲಿ ಈ ಭೂಮಿಯು ಮುಳುಗಿದ್ದುದನ್ನು ನೋಡಿ (ತ್ವರೆಯಿಂದ ವರಾಹನಾಗಿ ಅವತರಿಸಿ ಚತುರ್ಮುಖ ಬ್ರಹ್ಮದೇವರಿಗೋಸ್ಕರ) ಪರ್ವತಸಮೇತವಾದ ಇದನ್ನು ಮೇಲೆತ್ತಿ ಜಲದ ಮೇಲೆ ಸ್ಥಿರವಾಗಿರಿಸಿದನು.

ವಿ: ೧) ತಮ್ಮಿಂದ ಸೃಷ್ಟಿಸಲ್ಪಡುವ ಪ್ರಜೆಗಳ ನೆಲೆಗೋಸ್ಕರ ಸ್ವಾಯಂಭುವಮನುವಿನಿಂದ ಪ್ರಾರ್ಥಿತರಾದ ಚತುರ್ಮುಖಬ್ರಹ್ಮದೇವರ ನಾಸಾಪುಟದಿಂದ ಶ್ರೀವರಾಹರೂಪದಿಂದ ಶ್ರೀಹರಿಯು ಪ್ರಾದುರ್ಭವಿಸಿದ ವಿವರ ಭಾಗವತಪುರಾಣದಲ್ಲಿ ಬಂದಿದೆ (ತೃತೀಯಸ್ಕಂಧ ಅ.೧೩). ಇದು ಶ್ವೇತವರಾಹರೂಪ ಎಂಬುದು ವಿಶೇಷ.

೨) ಹೀಗೆ ಭೂಮಿಯನ್ನು ಮೇಲೆತ್ತುವಾಗ (ಆದಿ)ಹಿರಣ್ಯಾಕ್ಷನೆಂಬ ದೈತ್ಯನು ಅಡ್ಡಿ ಮಾಡಲು ವರಾಹ ಅವನನ್ನು ತನ್ನ ಕೋರೆಯಿಂದ ಸಂಹರಿಸಿದ.

೩) ದಶಾವತಾರಗಳಲ್ಲಿ ಮತ್ಸ್ಯರೂಪವನ್ನು ಮೊದಲು ಹೇಳುವುದುಂಟು. ಆದರೆ ಮೊದಲು ಪ್ರಕಟವಾದದ್ದು ಇಲ್ಲಿ ಹೇಳಿರುವಂತೆ ವರಾಹರೂಪವೇ ಆಗಿದೆ. ಮತ್ಸ್ಯಾವತಾರ ನಡೆದದ್ದು ಆರು ಮತ್ತು ಏಳನೆಯ ಮನ್ವಂತರದ ಪ್ರಲಯಕಾಲದಲ್ಲಿ; ದಶಾವತಾರದಲ್ಲಿ ಬರುವ

---

೩೭. ವರಾಹಃ = ಆದಿವರಾಹೋ ಹರಿಃ । –(ವಾ)

ಇದಾನೀಮಪಿ ಹಿರಣ್ಯಾಕ್ಷೋ ಹತಃ ಇತಿ ಜ್ಞೇಯಮ್ । ಇದಂ ಪ್ರಥಮಂ ಪ್ರಯೋಜನಮ್ । –(ಜ)

೩೭. ಅತ್ರ ವಿರಿಂಚಾರ್ಥಮಿತ್ಯನೇನ ಸ್ವಾಯಂಭುವಮನುನಾ ಪ್ರಾರ್ಥಿತಸ್ಯ ಚತುರ್ಮುಖಸ್ಯ ಧ್ಯಾಯಮಾನಸ್ಯ ನಾಸಾಪುಟಾತ್ ವರಾಹತೋಕೋ ನಿರಗಾದಿತಿ ಭಾಗವತಕಥಾಂ ಸೂಚಯತಿ । –(ವ)

೩೭. ದಶಾವತಾರೇಭ್ಯೋಽಪಿ ಪೂರ್ವಂ ಸೃಷ್ಟವಿರಿಂಚಸ್ಯ ಉಪಕಾರಾಯ ಶ್ವೇತವರಾಹತಯಾ ಅವತೀರ್ಣೋ ಹರಿರಿತ್ಯರ್ಥಃ । ಮತ್ಸ್ಯಾವತಾರಸ್ತು ಷಷ್ಠಸಪ್ತಮಮನ್ವೋರಂತರೇ ಪ್ರಲಯೋದಕೇ ನಾನಾವಿಧೌಷಧವನಸ್ಪತೀನಾಂ ಬೀಜಸಂಗ್ರಹಾಯ ಅಭಿನವನೌರೂಪಧಾರಾಂ ಶೇಷಾಖ್ಯಿಧಾಮ್ನಾ ಸ್ವಶೃಂಗಾಗ್ರೇ ನಿಬಧ್ನ ಚರತಿ । ಅತೋಽಸೌ ಅವತಾರಃ ಆದಿವರಾಹಾತ್ ಪಶ್ಚಾತ್ತನ ಏವ । ಅತೋ ನ ಕ್ರಮಭಂಗಃ ಶಂಕನೀಯಃ । -(ವಾ)

೩೭. ಭಾಗವತೇಽಪಿ ವರಾಹಾವತಾರ ಏವ ಆದೌ ನಿರೂಪಿತಃ (೨/೭/೧)

ವರಾಹರೂಪ 'ನೀಲವರಾಹ'; ಆದ್ದರಿಂದ ಶ್ರೀಮದಾಚಾರ್ಯರು 'ವರಾಹ'ರೂಪವನ್ನೇ ಮೊದಲಿಗೆ ವರ್ಣಿಸಿರುವರು; ತಂತ್ರಸಾರದಲ್ಲೂ ಮೊದಲು 'ವರಾಹ'ಮಂತ್ರವನ್ನೇ ಉಲ್ಲೇಖಿಸಿರುವುದು ವಿಶೇಷ.

೪) ಶ್ರೀವಾದಿರಾಜ ಸ್ವಾಮಿಗಳು ಲಯೋದಧೌ – ಎಂಬುದಕ್ಕೆ ಬರೆದಿರುವ ವಿಶೇಷ ವಿವರಣೆ ಈ ತೆರನಾಗಿದೆ.

ಲಯೋದಧೌ – ಲಂಯೋಜನಘನೀಭೂತಭೂಮೇರಧಸ್ತಾತ್ ಉತ್ತರಮಾರಭ್ಯ ದಕ್ಷಿಣಖರ್ಪರಪರ್ಯಂತಂ ಪೂರ್ವಖರ್ಪರಮಾರಭ್ಯ ಪಶ್ಚಿಮಖರ್ಪರಪರ್ಯಂತಂ ಕೋಟೀನಾಂ ಪಂಚಾಶತಾ ವಿಸ್ತೀರ್ಣೇ ಲಕ್ಷೋನಪಂಚವಿಂಶತ್ಯೋಟಿಭರಧಃಖರ್ಪರಪರ್ಯತಂ ಖಾತವತಿ ಘನೋದಕಾಖ್ಯಮಹಾಸಮುದ್ರೇ ಮಗ್ನಾಂ ಭಾರೇಣ ಸ್ವಯಮೇವ ಮಗ್ನಾಂ ಪರಿತಃ ಸ್ಥಿತಾಂಧತಮಸೋ ವಿಗಲಿತಾಂ ವಿಷ್ವಕ್ ಕಿಂಚಿದಧಿಕಸಪ್ತಕೋಟಿವಿಸ್ತಾರಾಂ ಮಹೀಮಿತ್ಯರ್ಥಃ। ಏವಮಲ್ಪಪರಿಮಾಣವತ್ಯಾ ಮಹ್ಯಾಃ ಮಹಾಪರಿಮಾಣೇ ಘನೋದಕೇ ಮಜ್ಜನಂ ಕಿಮಪೂರ್ವಂ ಇತಿ ಭಾವಃ। –(ವಾ)

ದಂಷ್ಟ್ರಾಗ್ರೇಣೋದ್ಧರತ್ ಪೃಥ್ವೀಂ ಸಪರ್ವತವನಾರ್ಣವಾಮ್ ॥ ವರಾಹಪುರಾಣ–(ಜ)

ಸೂಕರರೂಪಕ ದಾನವಶತ್ರೋ ಭೂಮಿವಿಧಾರಕ ಯಜ್ಞವರಾಂಗ ॥ – ದ್ವಾದಶಸ್ತೋತ್ರ

ಸಗಿರಿವರಧರಾತಲವಹ ಸುಸೂಕರ ಭವ ಮಮ ಶರಣಮ್ ॥ – ದ್ವಾದಶಸ್ತೋತ್ರ

ಹಿರಣ್ಯಕಶಿಪು ಹಿರಣ್ಯಾಕ್ಷರು

ಅಥಾಬ್ಜನಾಭಪ್ರತಿಹಾರಪಾಲೌ
ಶಾಪಾತ್ ತ್ರಿಶೋ ಭೂಮಿತಲೇऽಭಜಾತೌ ।
ದಿತ್ಯಾಂ ಹಿರಣ್ಯಾವಥ ರಾಕ್ಷಸೌ ಚ
ಪೈತೃಷ್ವಸೇಯೌ ಚ ಹರೇಃ ಪರಸ್ತಾತ್ ॥ ೩೮ ॥

---

೩೮. ಇದಾನೀಂ ವರಾಹಾವತಾರಪ್ರಸಂಗಾತ್ ಕ್ರಮಮುಲ್ಲಂಘ್ಯ ದಶಾವತಾರೇಷು ತೃತೀಯಾವತಾರಭೂತ ನೀಲವರಾಹಸ್ಯಾಪಿ ಕಥಾಂ ಪ್ರಸ್ತಾವಯತಿ। ಅಥೇತಿ। –(ವಾ)

೩೮. ಪ್ರತಿಹಾರಪಾಲೌ - ಗಚ್ಛತಃ ಆಗಚ್ಛತಶ್ಚ ಪ್ರತಿ - ಅಂತರಾ ಆಹರತಿ ಹರತಿ ಚೇತಿ ಪ್ರತಿಹಾರೋ ದ್ವಾರಂ, ತಸ್ಯ ಪಾಲೌ। – (ವಾ)

೩೮. 'ಅಂತರ್ಹಿರಣ್ಯಕಾದೀನಾಂ ಭಕ್ತಿರಸ್ಯೈವ ಕೇಶವೇ।
ಅಸುರಾವೇಶತಸ್ತ್ವನ್ಯಾನ್ ಹರಿಸ್ತೋತ್ಯನ್ ದ್ವಿಷಂತಿ ಚ' ಇತಿ ಪಾದ್ಮೇ ॥ - ಭಾ. ತಾ. (೭/೨/೨೬)

ವರಾಹನಿಂದ ಹಿರಣ್ಯಾಕ್ಷನ ವಧೆ

ತತೋ ಹಿರಣ್ಯಾಕ್ಷ ಉದಾರವಿಕ್ರಮೋ
ದಿತೇಃ ಸುತೋ ಯೋಽವರಜಃ ಸುರಾರ್ದನೇ ।
ಧಾತ್ರಾಽರ್ಥಿತೇನೈವ ವರಾಹರೂಪಿಣಾ
ಧರೋದ್ಧೃತೌ ಪೂರ್ವಹತೋಽಬ್ಜಜೋದ್ಭವಃ ॥ ೩೯ ॥

ಅ: ಅನಂತರ ಶ್ರೀಹರಿಯ ದ್ವಾರಪಾಲಕರಾದ ಜಯವಿಜಯರು ಶಾಪದಿಂದ ಮೂರುಬಾರಿ ಭೂಮಿಯ ಮೇಲೆ ಜನಿಸಿದರು; ದಿತಿಯಲ್ಲಿ ಹಿರಣ್ಯಕಶಿಪು-ಹಿರಣ್ಯಾಕ್ಷರೆಂದೂ; ರಾಕ್ಷಸರಾಗಿ ರಾವಣ-ಕುಂಭಕರ್ಣರೆಂದೂ; ಮುಂದೆ ಶ್ರೀಕೃಷ್ಣನ ಸೋದರತ್ತೆಯರ ಮಕ್ಕಳಾಗಿ (ಶಿಶುಪಾಲ-ದಂತವಕ್ರರೆಂದು) ಅವತರಿಸಿದರು.

ದಿತಿಪುತ್ರರಲ್ಲಿ ಕಿರಿಯವನಾದ ಉತ್ಕೃಷ್ಟಪರಾಕ್ರಮಿ ಹಿರಣ್ಯಾಕ್ಷ ದೇವತೆಗಳಿಗೋಸ್ಕರ ಬ್ರಹ್ಮದೇವರಿಂದ ಪ್ರಾರ್ಥಿತನಾಗಿ ವರಾಹರೂಪದಿಂದ ಸಂಹರಿಸಲ್ಪಟ್ಟನು; (ಭೂಮಿಯನ್ನು ವರಾಹರೂಪದಿಂದ ಮೇಲೆತ್ತುವ ಪ್ರಸಂಗದಲ್ಲಿ) ಈ ಮೊದಲು ಹತನಾದ ಹಿರಣ್ಯಾಕ್ಷನು ಬ್ರಹ್ಮನಿಂದ ಜನಿಸಿದ್ದವನು.

ವಿ: ೧) ಮತ್ತೊಮ್ಮೆ ನಡೆದ ವರಾಹಾವತಾರದ ವರ್ಣನೆ ಇಲ್ಲಿದೆ; ಇದು ದಶಾವತಾರಗಳಲ್ಲಿ ಬರುವ ನೀಲವರಾಹರೂಪ.

೨) ಜಯವಿಜಯರು ಸನಕಾದಿಗಳ ಶಾಪದಿಂದ ಹಿರಣ್ಯಕಶಿಪುಹಿರಣ್ಯಾಕ್ಷ (ದಿತಿಪುತ್ರರು), ರಾವಣಕುಂಭಕರ್ಣ(ರಾಕ್ಷಸರು) ಮತ್ತು ಶಿಶುಪಾಲದಂತವಕ್ರ(ಶ್ರೀಕೃಷ್ಣನ ಸೋದರತ್ತೆಯರ, ಎಂದರೆ ವಸುದೇವನ ಸೋದರಿಯರ ಪುತ್ರರು) ಎಂಬುದಾಗಿ ಮೂರುಬಾರಿ ಭೂಮಿಯಲ್ಲಿ ಜನಿಸಿದರು. ಈ ಮೂರುಜನ್ಮಗಳಲ್ಲೂ ಅವರಿಗೆ ಅಸುರಾವೇಶವಿದ್ದಿತು.

---

೩೯. ಉಭಾವಪಿ ಹಿರಣ್ಯಾಕ್ಷನಾಮಾನೌ । ಹಂತಾರೌ ಚ ವರಾಹನಾಮಾನೌ ಅತ ಏವ ಸಂಕಲಯ್ಯ ಕಥನಮಿತಿ ಭಾವಃ । – (ವಾ)

೩೯. ದಂಷ್ಟ್ರಾಗ್ರೇಣೋದ್ಧರತ್ ಪೃಥ್ವೀಂ ಸಪರ್ವತವನಾರ್ಣವಾಮ್ । - ಇತಿ ವಾರಾಹೇ – (ಜ.)
ಸಗಿರಿಧರಧರಾತಲವಹಸುಸೂಕರ ಭವ ಮಮ ಶರಣಮ್ ॥ -ದ್ವಾದಶಸ್ತೋತ್ರ

೩೯. ಬ್ರಹ್ಮಜಸ್ತು ಹಿರಣ್ಯಾಕ್ಷಃ ಪ್ರಥಮಂ ದಂಷ್ಟ್ರಯಾ ಹತಃ ।
ಸ ಏವ ಪಾರ್ಷದಾವಿಷ್ಟೋ ದ್ವಿತೀಯಃ ಕರ್ಣತಾಡನಾತ್ ॥
ಪೂರ್ವಂ ಲಯೋದಧೌ ಮಗ್ನಾಂ ದ್ವಿತೀಯೇ ತೇನ ಮಜ್ಜತಾಮ್ ।
ಭುವಮುದ್ಧರತೈವಾಸೌ ಹರಿಣಾ ಕ್ರೋಡಮೂರ್ತಿನಾ ॥ ಇತಿ ಬ್ರಹ್ಮಾಂಡೇ । – ಭಾ.ತಾ(೩/೧೪/೩೩)

೩) ಮೊದಲು ಹತನಾದ ಬ್ರಹ್ಮಪುತ್ರನಾದ ಹಿರಣ್ಯಾಕ್ಷನೇ ಈ ದಿತಿಪುತ್ರನಾಗಿ ಮತ್ತೊಮ್ಮೆ ಹುಟ್ಟಿದನು; ಈಗ ಅವನಲ್ಲಿ ವಿಜಯನ ಆವೇಶವಿದ್ದಿತು; ಹಿಂದಿನ ಜನ್ಮದಲ್ಲಿ ಕೇವಲ ಅಸುರನಾಗಿದ್ದನು. ಆಗ ಅವನು ಹತನಾದದ್ದು ತಾನಾಗಿಯೇ ಪ್ರಲಯೋದಕದಲ್ಲಿ ಮುಳುಗಿದ್ದ ಭೂಮಿಯನ್ನು ವರಾಹರೂಪದ ಶ್ರೀಹರಿಯು ಮೇಲೆತ್ತುವಾಗ ಅಡ್ಡಿಪಡಿಸಿದಾಗ; ಇವನು ಹತನಾದದ್ದು ಇವನಾಗಿಯೇ ಮುಳುಗಿಸಿದ್ದ ಭೂಮಿಯನ್ನು ವರಾಹರೂಪದ ಶ್ರೀಹರಿಯು ಮೇಲೆತ್ತುವಾಗ ಅಡ್ಡಿಪಡಿಸಿದ್ದರಿಂದ; ಅವನು ಹತನಾದದ್ದು ವರಾಹನ ಕೋರೆದಾಡೆಯ ಪೆಟ್ಟಿನಿಂದ; ಇವನು ಹತನಾದದ್ದು ಇವನನ್ನು ಕರ್ಣಮೂಲದಲ್ಲಿ ವರಾಹನು ಬರಿಗೈಯಿಂದ ಅಪ್ಪಳಿಸಿದಾಗ; ಈ ವಿವರಗಳನ್ನೆಲ್ಲ ಶ್ರೀಮದಾಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ ನೀಡಿರುವರು.

೪) ಆದಿವರಾಹರೂಪದಿಂದ ಆದಿಹಿರಣ್ಯಾಕ್ಷನ ಸಂಹಾರ; ಈ ನೀಲವರಾಹರೂಪದಿಂದ ದೈತ್ಯಹಿರಣ್ಯಾಕ್ಷನಸಂಹಾರ; ಆದಿವರಾಹರೂಪ ದಶಾವತಾರಗಳಿಗಿಂತಲೂ ಮುಂಚೆಯೇ ನಡೆದ ಅವತಾರ; ಈ ವರಾಹಾವತಾರ ದಶಾವತಾರಗಳಲ್ಲಿ ಮೂರನೆಯದಾದ ಅವತಾರ; ಎರಡು ರೂಪಗಳಿಂದಲೂ ಹತನಾದವನು ಹಿರಣ್ಯಾಕ್ಷನೇ ಎಂಬುದು ವಿಶೇಷ. ವರಾಹರೂಪದ ಪ್ರಸಕ್ತಿ ಬಂದದ್ದರಿಂದ ಮುಂದೆ ಹೇಳಬೇಕಾದ ಈ ರೂಪವನ್ನು ಇಲ್ಲಿಯೇ ವರ್ಣಿಸಿರುವರು ಎಂದು ತಿಳಿಯಬೇಕು.

ಮತ್ಸ್ಯರೂಪದಿಂದ ಹಯಗ್ರೀವಾಸುರನ ವಧೆ

ಅಥೋ ವಿಧಾತುರ್ಮುಖತೋ ವಿನಿಃಸೃತಾನ್
ವೇದಾನ್ ಹಯಾಸ್ಯೋ ಜಗೃಹೇಽಸುರೇಂದ್ರಃ ।
ನಿಹತ್ಯ ತಂ ಮತ್ಸ್ಯವಪುರ್ಜಗೋಪ
ಮನುಂ ಮುನೀಂಶ್ಚಾಂಶ್ಚ ದದೌ ವಿಧಾತುಃ ॥ ೪೦ ॥

---

೪೦. ವೇದಾನ್ । ದೇಹಧಾರಿಣೋ ವೇದಾನ್ । –(ಜ)

೪೦. ಮನುಂ = ವೈವಸ್ವತಮನುಮ್ । ಮುನೀನ್ ಸಪ್ತರ್ಷೀನ್ । –(ವ)

೪೧. ಮನ್ವಂತರಪ್ರಲಯೇ = ಚಾಕ್ಷುಷಮನ್ವಂತರಪ್ರಲಯೇ । –(ವ)

೪೧. ಅತ್ರಾಪಿ ವೇದದಾನಂ ವಿದ್ಯಾದಾನಂ ಇತಿ ಪ್ರಯೋಜನದ್ವಯಂ ಜ್ಞೇಯಮ್ । –(ಜ)

೪೧. ಮತ್ಸ್ಯರೂಪೀ ಮಹಾಂಭೋಧೌ ವಿಹರಂಸ್ತತ್ತ್ವಮಬ್ರವೀತ್ ।
ಪುರಾಣಸಂಹಿತಾಂ ದಿವ್ಯಾಂ ಸಾಂಗಯೋಗಕ್ರಿಯಾವತೀಮ್ ॥
ಸತ್ಯವ್ರತಸ್ಯ ರಾಜರ್ಷೇರಾತ್ಮಗುಹ್ಯಮಶೇಷತಃ । – ಭಾ. (೮/೨೪/೫೪,೫೫)

ಮತ್ಸ್ಯಾವತಾರ

ಮನ್ವಂತರಪ್ರಲಯೇ ಮತ್ಸ್ಯರೂಪೋ
ವಿದ್ಯಾಮದಾನ್ಮನವೇ ದೇವದೇವಃ ।
ವೈವಸ್ವತಾಯೋತ್ತಮಸಂವಿದಾತ್ಮಾ
ವಿಷ್ಣೋಃ ಸ್ವರೂಪಪ್ರತಿಪತ್ತಿರೂಪಾಮ್ ॥ ೪೧ ॥

ಅ: ಅನಂತರ ಬ್ರಹ್ಮದೇವರ ಮುಖದಿಂದ ಹೊರಹೊಮ್ಮಿದ ವೇದಗಳನ್ನು ಹಯಗ್ರೀವನೆಂಬ ಮಹಾ ಅಸುರ ಅಪಹರಿಸಿದ; ಮತ್ಸ್ಯರೂಪಿಯಾದ ಶ್ರೀಹರಿಯು ಅವನನ್ನು ಸಂಹರಿಸಿ ವೈವಸ್ವತಮನುವನ್ನು ಮತ್ತು ಋಷಿಗಳನ್ನು ಮನ್ವಂತರಪ್ರಲಯಕಾಲದಲ್ಲಿ ಸಂರಕ್ಷಿಸಿದ; ಮತ್ತು ಅಪಹರಿಸಲ್ಪಟ್ಟಿದ್ದ ವೇದಗಳನ್ನು ಮರಳಿ ಬ್ರಹ್ಮ ದೇವರಿಗಿತ್ತ.

ಮನ್ವಂತರಪ್ರಲಯಕಾಲದಲ್ಲಿ ಸರ್ವೋತ್ಕೃಷ್ಟಜ್ಞಾನಮಯನಾದ ಆ ದೇವದೇವನಾದ ಶ್ರೀಹರಿ ಆ ಮತ್ಸ್ಯರೂಪದಿಂದ ವೈವಸ್ವತಮನುವಿಗೆ ವಿಷ್ಣುವಿನ ಸ್ವರೂಪವನ್ನು ತಿಳಿಸುವ ವಿದ್ಯೆಯನ್ನು ಉಪದೇಶಿಸಿದನು. ಹೀಗೆ ಮತ್ಸ್ಯರೂಪಕ್ಕೆ ವೇದದಾನ ಮತ್ತು ವಿದ್ಯಾದಾನವೆಂಬ ಎರಡು ಪ್ರಯೋಜನಗಳು ಎಂದು ಭಾವ.

ವಿ: ೧) ಈ ಮತ್ಸ್ಯಾವತಾರದ ಕಥೆ ಶ್ರೀಮದ್ಭಾಗವತಪುರಾಣದ ಅಷ್ಟಮಸ್ಕಂಧದ ಕೊನೆಯ ಅಧ್ಯಾಯದಲ್ಲಿ ವಿಶೇಷವಾಗಿ ಬಂದಿದೆ;

ಕಾಲೇನಾಗತನಿದ್ರಸ್ಯ ಧಾತುಃ ಶಿಶಯಿಷೋರ್ಬಲೀ ।
ಮುಖತೋ ನಿಃಸೃತಾನ್ ವೇದಾನ್ ಹಯಗ್ರೀವೋऽಂತಿಕೇऽಹರತ್ ।
ಜ್ಞಾತ್ವಾ ತದ್ದಾನವೇಂದ್ರಸ್ಯ ಹಯಗ್ರೀವಸ್ಯ ಚೇಪ್ಸಿತಮ್ ।
ದಧಾರ ಶಫರೀರೂಪಂ ಭಗವಾನ್ ಹರಿರೀಶ್ವರಃ ॥ – (೮/೨೪/೮-೯)

ಅತೀತಪ್ರಲಯಾಪಾಯೇ ಉತ್ಥಿತಾಯ ಸ ವೇಧಸೇ ।
ಹತ್ವಾऽಸುರಂ ಹಯಗ್ರೀವಂ ವೇದಾನ್ ಪ್ರತ್ಯಾಹರದ್ ಹರಿಃ ॥ – (೮/೨೪/೫೭)

೨) ಇಲ್ಲಿ ವೇದಗಳನ್ನು ಕದಿಯುವುದು ಎಂದರೆ ವೇದಾಭಿಮಾನಿ ದೇವತೆಗಳನ್ನು ಅಪಹರಿಸುವುದು, ಇಂದಿನ ಉಗ್ರಗಾಮಿಗಳು ಸರ್ಕಾರಿಅಧಿಕಾರಿಗಳನ್ನು ಅಪಹರಿಸುವಂತೆ ಎಂದು ತಿಳಿಯಬೇಕು; ಉತ್ತಮ ವಿದ್ವಾಂಸರ ಪ್ರವಚನಾದಿಗಳನ್ನು ಅವರ ಗಮನಕ್ಕೆ ಬರದಂತೆ ರೆಕಾರ್ಡ್ ಮಾಡಿಕೊಂಡು ಆ ವಿಚಾರಗಳನ್ನೆಲ್ಲ ತಮ್ಮ ಸ್ವಂತದ್ದೆಂದು ಹೇಳಿಕೊಳ್ಳುವ ಕೆಲವರ ಪ್ರವೃತ್ತಿಯೂ ಈ ತೆರನಾದ ಚೌರ್ಯವೇ ಆಗಿದೆ. ವಿಜ್ಞಾನಿಗಳು ಸಂಶೋಧನೆ ಮಾಡಿದ ಶಸ್ತ್ರಾರ್ಥವಿಷಯಕ ಸೂತ್ರ (ಊಟ್ಪಞ್ಛಬ)ಗಳನ್ನು ಪರದೇಶದವರು ಕದಿಯುವುದನ್ನು ಸಹ ಇಲ್ಲಿ ಉಲ್ಲೇಖಿಬಹುದು.

೩) ವೈವಸ್ವತನ ಪೂರ್ವನಾಮ ಸತ್ಯವ್ರತ; ಮತ್ಸ್ಯರೂಪವನ್ನು ಸಾಕ್ಷಾತ್ಕರಿಸಿಕೊಂಡ ಅವನು ಮನ್ವಂತರಪ್ರಲಯದಲ್ಲಿ ಯಾವ ಅಪಾಯವೂ ಇಲ್ಲದಂತೆ ಸಪ್ತರ್ಷಿಗಳೊಂದಿಗೆ ಮತ್ಸ್ಯರೂಪದ ಶ್ರೀಹರಿಯಿಂದ ರಕ್ಷಿತನಾದ; ಆ ಕಾಲಕ್ಕೆ ಶ್ರೀಹರಿಯು ಅವನಿಗೆ ಉಪದೇಶಿಸಿದ ವಿದ್ಯೆ ಮತ್ಸ್ಯಪುರಾಣವೆಂದು ಪ್ರಸಿದ್ಧವಾಯಿತು; ಸತ್ಯವ್ರತನು ಮುಂದಿನ ಮನ್ವಂತರದಲ್ಲಿ 'ವಿವಸ್ವಾನ್' ನಾಮಕ ಸೂರ್ಯನಿಗೆ ಪುತ್ರನಾಗಿ ಜನಿಸಿ 'ಶ್ರಾದ್ಧದೇವ'ನೆಂದು 'ವೈವಸ್ವತ'ನೆಂದು ಪ್ರಸಿದ್ಧನಾದ; ಸೂರ್ಯವಂಶದ ಮೊದಲ ದೊರೆ ಎನ್ನಿಸಿ ಮಾನ್ಯನಾದ.

ನರಸಿಂಹಾವತಾರಕ್ಕಾಗಿ ಸುರರ ಪ್ರಾರ್ಥನೆ

ಅಥೋ ದಿತೇರ್ದೈತ್ಯಸುತೇನ ಶಶ್ವತ್
ಪ್ರಪೀಡಿತಾ ಬ್ರಹ್ಮವರಾತ್ ಸುರೇಶಾಃ ।
ಹರಿಂ ವಿರಿಂಚೇನ ಸಹೋಪಜಗ್ಮು-
ರ್ದೌರಾತ್ಮ್ಯಮಸ್ಯಾಪಿ ಶಶಂಸುರಸ್ಯ ॥ ೪೨ ॥

ಅಭಿಷ್ಟುತಸ್ತೈರ್ಹರಿರುಗ್ರವೀರ್ಯೋ
ನೃಸಿಂಹರೂಪೇಣ ಸ ಆವಿರಾಸೀತ್ ।
ಹತ್ವಾ ಹಿರಣ್ಯಂ ಚ ಸುತಾಯ ತಸ್ಯ
ದತ್ವಾಽಭಯಂ ದೇವಗಣಾನತೋಷಯತ್ ॥ ೪೩ ॥

---

೪೨. ಮತ್ಸ್ಯಾವತಾರಾದನಂತರಂ ದೇವೈರಮೃತಮಥನೇ ಕ್ರಿಯಮಾಣೇ ಸ ಏವ ಕೂರ್ಮಃ ಮಂದರಮುದ್ಧಾರ। 'ಅನಂತೋಽಥೋ ಮಂದರಸ್ತು ಯದಾ ವೈವಸ್ವತಾಂತರೇ । ಅಮೃತಾರ್ಥಂ ಸುಪರ್ಣೋಽಥೋ ರೈವತಸ್ಯಾಂತರೇ ಮನೋಃ ॥ ಇತಿ ವಚನಾತ್ ಕೂರ್ಮಾವತಾರಃ ರೈವತಮನ್ವಂತರೇऽಪ್ಯಸ್ತಿ। ವೈವಸ್ವತಮನ್ವಂತರೇ ನೃಸಿಂಹಾವತಾರಾದನಂತರಮಪ್ಯಸ್ತಿ। ಅತಸ್ತಯೋಃ ಕಥಾಂ ಸಂಕಲಯ್ಯ ಕಥಯಿಷ್ಯನ್ ನೃಸಿಂಹಾವತಾರಕಥಾಂ ಕಥಯತಿ। ಅಥೋ ಇತಿ ॥ –(ವಾ)

೪೨. ಅಪಿ ಇತ್ಯನೇನ ನ ಕೇವಲಂ ಶಶಂಸುಃ ಕಿಂತು ಸ್ತುತಿಮಪಿ ಚಕ್ರುರಿತ್ಯಭಿಪ್ರೈತಿ । ಹರಿಮುಪಜಗ್ಮುಃ । ದೌರಾತ್ಮ್ಯಮಪಿ ಶಶಂಸುರಿತಿ ಅಪಿಪದಸಂಬಂಧಃ । ಯದ್ವಾ ಯಥಾऽನುಜಸ್ಯ ಹಿರಣ್ಯಾಕ್ಷಸ್ಯ ದೌರಾತ್ಮ್ಯಂ ಶಶಂಸುಃ । ಏವಮಸ್ಯಾಪೀತಿ ಅಪಿಪದಸಂಬಂಧಃ । –(ವಾ)

೪೩. ಸ್ಮರಣಾತ್ತು ನೃಸಿಂಹಸ್ಯ ಶಕ್ರೋ ಮುಕ್ತೋ ಬೃಹದ್ವಧಾತ್ ।
ಹಿರಣ್ಯಕಹೃತಾಶ್ಚಾಪಿ ತಥೈವಾಪ್ಸರಸಾಂ ಗಣಾಃ ॥ ಇತಿ ಪ್ರಭಂಜನೇ । –ಭಾ.ತಾ.(೧೧/೪/೧೯)

೪೩. ಪ್ರತಿಮನ್ವಂತರಂ ಪ್ರಾಯಃ ಪ್ರಹ್ಲಾದಾದ್ಯಾ ಬಭೂವಿರೇ । –ಭಾ. ತಾ. (೪/೧೮/೧೬)

ಅ: ಅನಂತರ ದಿತಿಯ ಹಿರಿಯಮಗನಾದ ಹಿರಣ್ಯಕಶಿಪುವಿನಿಂದ ಅವನಿಗಿದ್ದ ಬ್ರಹ್ಮವರದ ಕಾರಣದಿಂದಾಗಿ ಬಹಳವಾಗಿ ಪೀಡಿತರಾದ ದೇವಶ್ರೇಷ್ಠರೆಲ್ಲ ಬ್ರಹ್ಮದೇವರೊಂದಿಗೆ ಶ್ರೀಹರಿಯ ಬಳಿಗೆ ತೆರಳಿದರು. ಮತ್ತು ಹಿರಣ್ಯಕಶಿಪುವಿನ ದೌರ್ಜನ್ಯವನ್ನು ಅರಿಕೆ ಮಾಡಿಕೊಂಡರು ಸಹ.

ಅವರಿಂದ ಬಹುತೆರನಾಗಿ ಪ್ರಾರ್ಥಿತನಾದ ಉಗ್ರವೀರ್ಯನಾದ ಶ್ರೀಹರಿಯು ನರಹರಿರೂಪದಿಂದ ಪ್ರಾದುರ್ಭೂತನಾದ; ಹಿರಣ್ಯಕಶಿಪುವನ್ನು ಸಂಹರಿಸಿ ಅವನ ಪುತ್ರ ಪ್ರಹ್ಲಾದನಿಗೆ ಅಭಯವನ್ನಿತ್ತು ದೇವತೆಗಳ ಸಮುದಾಯವನ್ನು ಸಂತೋಷಪಡಿಸಿದ.

ವಿ: ೧) ಈ ಶ್ಲೋಕಗಳಿಂದ ಶ್ರೀಮದಾಚಾರ್ಯರು ಶ್ರೀನರಸಿಂಹಾವತಾರದ ಹಿನ್ನೆಲೆ ಮತ್ತು ಪ್ರಯೋಜನಗಳನ್ನು ವರ್ಣಿಸಿರುವರು.

೨) ಮತ್ಸ್ಯಾವತಾರದ ಅನಂತರದ ಪ್ರಾದುರ್ಭಾವ 'ಕೂರ್ಮರೂಪ'; ಆದರೆ ಆ ಕೂರ್ಮರೂಪವು ರೈವತಮನ್ವಂತರದಲ್ಲೊಮ್ಮೆ ಮತ್ತು ವೈವಸ್ವತಮನ್ವಂತರದಲ್ಲೊಮ್ಮೆ ಹೀಗೆ ಎರಡು ಬಾರಿ ನಡೆದಿದೆ; ಅವೆರಡನ್ನು ಒಟ್ಟಾಗಿ ಅನಂತರ (೩/೪೪) ವರ್ಣಿಸಲೆಂದು ಪ್ರಕೃತ ನರಸಿಂಹಾವತಾರವನ್ನೇ ಮೊದಲಿಗೆ ವರ್ಣಿಸಿರುವರು. ಆದ್ದರಿಂದ ಇಲ್ಲಿ ಕ್ರಮಭಂಗವನ್ನು ಶಂಕಿಸಕೂಡದು.

ಸಮುದ್ರಮಥನಕಾಲದಲ್ಲಿ ಮಂದರ ಧರಿಸಿದ ಕೂರ್ಮ

ಸುರಾಸುರಾಣಾಮುದಧಿಂ ವಿಮಥ್ನತಾಂ
ದಧಾರ ಪೃಷ್ಠೇನ ಗಿರಿಂ ಸ ಮಂದರಮ್ ।
ವರಪ್ರದಾನಾದಪರೈರಧಾರ್ಯಂ
ಹರಸ್ಯ ಕೂರ್ಮೋ ಬೃಹದಂಡವೋಢಾ ॥ ೪೪ ॥

---

೪೪. ಕನಕರೂಪಮಪಿ ತ್ವಾಂ ಆಶಯಾ ಕೋಽಪಿ ನೋದ್ಧರತ್ವಿತಿ ವರಪ್ರದಾನಾತ್ । ಅತ ಏವ ಅಧ್ವನ್ಯಪಿ ಸರ್ವಾನಪಿ ಸುರಾಸುರಾನ್ ಚೂರ್ಣಯಾಮಾಸ । –(ವಾ)

೪೪. ಬೃಹದಂಡವೋಢಾ–ಬ್ರಹ್ಮಾಂಡಧಾರಕಃ । ಮಂದರೋದ್ಧರಣೇ ಕೈಮುತ್ಯಸೂಚನಾಯೇದಂ ವಿಶೇಷಣಮ್। –(ವಾ)

ಬೃಹತೋಽತಿಸ್ಥೂಲಸ್ಯ ಅಂಡಸ್ಯವೋಢಾ । ಪಂಚಾಶತ್‌ಕೋಟಿಯೋಜನವಿಸ್ತೀರ್ಣಸ್ಯ ಮಂದರಾದ್ಯನೇಕಮಹಾಗಿರಿಯುಕ್ತಸ್ಯ ಬ್ರಹ್ಮಾಂಡಸ್ಯ ಧಾರಣೇ ಸಮರ್ಥಸ್ಯ ತದೇಕದೇಶಮಂದರಗಿರಿಧಾರಣಂ ಕಿಮಾಶ್ಚರ್ಯಮಿತಿ ಭಾವಃ । –(ವ)

೪೪. ಬಿಭರ್ತ್ಯಂಡಂ ಹರಿಃ ಕೂರ್ಮಃ ..... ಇತ್ಯಾದಿ ವೈಭವೇ । –ಬೃಹದ್ಭಾಷ್ಯ

ಅ: ದೇವತೆಗಳು ಮತ್ತು ಅಸುರರು ಸಾಗರವನ್ನು ಮಥಿಸುವಾಗ ಮಂದರಪರ್ವತವನ್ನು ಶ್ರೀಹರಿಯು ಬ್ರಹ್ಮಾಂಡವನ್ನು ಧರಿಸಿದ ಕೂರ್ಮರೂಪದಿಂದ ತನ್ನ ಬೆನ್ನಮೇಲೆ ಧರಿಸಿದ; ಆ ಪರ್ವತವು ಹರನ ವರದಿಂದಾಗಿ ಬೇರಾರಿಂದಲೂ ಧರಿಸಲು ಅಶಕ್ಯವಾಗಿತ್ತು.

ವಿ: ೧) ಕೂರ್ಮರೂಪದ ಹಿನ್ನೆಲೆ ಮತ್ತು ಪ್ರಯೋಜನಗಳನ್ನು ಈ ಶ್ಲೋಕದಲ್ಲಿ ಸಂಕ್ಷಿಪ್ತವಾಗಿ ನೀಡಿರುವರು. ಇದರ ಬಗ್ಗೆ ಇನ್ನೂ ಕೆಲವು ವಿವರಗಳನ್ನು ಸಮುದ್ರಮಥನದ ಪೂರ್ವಾಪರಗಳನ್ನು ಹತ್ತನೆಯ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವರು(೧೦/೧೧).

೨) ಮಂದರವು ಚಿನ್ನದಪರ್ವದ; ಚಿನ್ನದ ಮೇಲಿನ ಆಶೆಯಿಂದಾಗಿ ಅದನ್ನು ಇತರರು ಎತ್ತಿ ಒಯ್ಯದಿರಲೆಂದು ರುದ್ರದೇವರು ಅದಕ್ಕೆ ಅಧಾರ್ಯತ್ವವರವನ್ನು ನೀಡಿದ್ದರು; ಮಂದರವು ಸಪ್ತಕುಲಪರ್ವತಗಳಲ್ಲಿ ಒಂದು; ಜೊತೆಗೆ ರುದ್ರದೇವರ ವರ; ಹಾಗಿದ್ದೂ ಅದನ್ನು ಲೀಲೆಯಿಂದ ಬೆನ್ನಲ್ಲಿ ಹೊತ್ತ ಶ್ರೀಹರಿಯು ಸರ್ವೋತ್ತಮ ಎಂದು ಭಾವ.

೩) ತನ್ನ ಮೇಲೆ ಸದಾ ಬ್ರಹ್ಮಾಂಡವನ್ನೇ ಹೊತ್ತಿರುವ ಕೂರ್ಮನಿಗೆ ಆ ಬ್ರಹ್ಮಾಂಡದ ಒಂದು ಭಾಗವಾದ ಮಂದರಪರ್ವತವನ್ನು ಕೆಲಕಾಲ ಧರಿಸಿರುವುದು ಯಾವ ಮಹಾಕಾರ್ಯ? ಎಂಬುದು ಕ್ಕೆಮುತ್ಯ ಸಿದ್ಧ.

ವಾಮನಾವತಾರ

ವರಾದಜೇಯತ್ವಮವಾಪ ದೈತ್ಯರಾಟ್
ಚತುರ್ಮುಖಸ್ಯೈವ ಬಲಿರ್ಯದಾ ತದಾ ।
ಅಜಾಯತೇಂದ್ರಾವರಜೋಽದಿತೇಃ ಸುತೋ
ಮಹಾನಜೋಽಪ್ಯಬ್ಜಭವಾದಿಸಂಸ್ತುತಃ ॥ ೪೫ ॥

ಸ ವಾಮನಾತ್ಮಾಽಸುರಭೂಭೃತೋಽಧ್ವರಂ
ಜಗಾಮ ಗಾಂ ಸನ್ನಮಯನ್ ಪದೇ ಪದೇ ।
ಜಹಾರ ಚಾಸ್ಮಾಚ್ಚಲತಸ್ತ್ರಿವಿಷ್ಟಪಂ
ತ್ರಿಭಿಃ ಕ್ರಮೈಸ್ತಚ್ಚ ದದೌ ನಿಜಾಗ್ರಜೇ ॥ ೪೬ ॥

---

೪೫. ಅಬ್ಜಭವಾದಿಸಂಸ್ತುತಃ ಸನ್ ಅಜೋಽಪಿ - ಜನನರಹಿತೋಽಪಿ ಅದಿತೇರಜಾಯತ ಪ್ರಾದುರ್ಭೂತಃ । ಅಥ ಮಹಾನಪಿ - ಸರ್ವಶ್ರೇಷ್ಠೋಽಪಿ ಇಂದ್ರಾವರಜಃ -ಇಂದ್ರಸ್ಯಾವರಜೋ ಅನುಜೋ ಅಜಾಯತ ಇತ್ಯರ್ಥಃ । –(ವ)

೪೬. ಗಾಂ– ಭೂಮಿಂ ಸನ್ನಮಯನ್ ಪದೇ ಪದೇ ಯ ಏವಾಣುಃ ಸ ಏವ ಮಹಾನಿತಿ ಸೂಚಯತಿ । –(ವಾ)

ಬಲಿಯನ್ನು ಯಾಚಿಸಲು ಕಾರಣ

ಪಿತಾಮಹೇನಾಸ್ಯ ಪುರಾಽಭಿಯಾಚತೋ
ಬಲೇಃ ಕೃತೇ ಕೇಶವ ಆಹ ಯದ್ಭವಃ ।
ನಾಯಾಚ್ಞಯಾಽಹಂ ಪ್ರತಿಹನ್ಮಿ ತಂ ಬಲಿಂ
ಶುಭಾನನೇತ್ಯೇವ ತತೋಽಭ್ಯಯಾಚತ ॥ ೪೭ ॥

ಅ: ದೈತ್ಯರ ಅರಸನಾದ ಬಲಿ ಚತುರ್ಮುಖಬ್ರಹ್ಮದೇವರ ವರದಿಂದಾಗಿ ಅಜೇಯತ್ವವನ್ನು ಪಡೆದುಕೊಂಡಾಗ ಬ್ರಹ್ಮಾದಿಸಂಸ್ತುತನಾದ ಶ್ರೀಹರಿಯು ಹುಟ್ಟಿಲ್ಲದವನಾದರೂ ಅದಿತಿಗೆ ಮಗನಾದ; ಸರ್ವಶ್ರೇಷ್ಠನಾದರೂ ಇಂದ್ರನಿಗೆ ತಮ್ಮನೆನ್ನಿಸಿದ.

ವಾಮನರೂಪನಾದ ಅವನು ಅಸುರರಾಜನಾದ ಬಲಿಯ ಯಜ್ಞಕ್ಕೆ ಹೆಜ್ಜೆಹೆಜ್ಜೆಗೂ ಭೂಮಿಯನ್ನು ಬಾಗಿಸುತ್ತಲೇ ತೆರಳಿದ; ಅವನಿಂದ ಛಲದಿಂದ ತನ್ನ ಮೂರು ಹೆಜ್ಜೆಗಳಿಂದ ಸ್ವರ್ಗವನ್ನು ಕಿತ್ತುಕೊಂಡ; ಮತ್ತು ಅದನ್ನು ತನ್ನ ಅಣ್ಣನಾದ ಇಂದ್ರನಿಗೆ ನೀಡಿದ.

ಅವನ ತಾತ ಪ್ರಹ್ಲಾದ ಹಿಂದೆ ಬಲಿಗೋಸ್ಕರ ಬೇಡಿಕೊಂಡಾಗ ಕೇಶವನು ವಚನ ನೀಡಿದ್ದ; 'ಬೇಡದೆ ಆ ಬಲಿಯನ್ನು ನಾನು ಬಗ್ಗು ಬಡಿಯೆನು' ಎಂದು; ಅದಕ್ಕೆಂದೇ ಅವನನ್ನು ಅವನು ಹಾಗೆ ಯಾಚಿಸಿದ್ದು.

ವಿ: ೧) ವಾಮನಾವತಾರದ ಸಮಗ್ರಚಿತ್ರವನ್ನು ಶ್ರೀಮದಾಚಾರ್ಯರು ಈ ಮೂರು ಶ್ಲೋಕಗಳಲ್ಲಿ ನೀಡಿರುವರು.

೨) ಇತರ ದೈತ್ಯರಂತೆ ಬಲಿಯನ್ನು ಏಕೆ ಸಂಹರಿಸಲಿಲ್ಲ; ಯಾಚನೆಯಿಂದಲೇ ಅವನನ್ನು ಏಕೆ ನಿಗ್ರಹಿಸಿದ? ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು ಇಲ್ಲಿ ಅಪೂರ್ವವಾದ ಪರಿಹಾರವನ್ನು ನೀಡಿರುವರು; ''ಪ್ರಹ್ಲಾದನು ನೃಸಿಂಹಾವತಾರದ ಕಾಲಕ್ಕೆ ಭಗವಂತನನ್ನು ಪ್ರಾರ್ಥಿಸಿ–

---

೪೬. ಛಲತಃ ಪದತ್ರಯಂ ದೇಹೀತಿ ಸ್ಥೂಲಸೂಕ್ಷ್ಮಪದತ್ರಯಸಾಧಾರಣವಾಕ್ಯಪ್ರಯೋಗೇ ಸತಿ ಸ್ವಾಭಿಪ್ರಾಯಮ-ಜಾನಾನಸ್ಯ ಬಲೇರಣುಪದಾಪೇಕ್ಷಯಾ ದದಾಮೀತಿ ಆಶಾಜನಕಾತ್ ದ್ವ್ಯರ್ಥಕವಾಕ್ಯಾತ್ ಸ್ವಾನಭಿಪ್ರೇತಾರ್ಥ-ಬೋಧನಾತ್ ಛಲಾಖ್ಯನಿಗ್ರಹಸ್ಥಾನೇನ ಬಲಿಂ ಪರಾಭಾವ್ಯೇತಿ ಯಾವತ್ । –(ವಾ)

೪೬. ವಾರಾಹೇ ವಾಮಪಾದಂ ತು ತದನ್ಯೇಷು ತು ದಕ್ಷಿಣಮ್ ।
ಪಾದಂ ಕಲ್ಪೇಷು ಭಗವಾನುಜ್ಜಹಾರ ತ್ರಿವಿಕ್ರಮಃ ॥ - ಭಾ. ತಾ. (೫/೧೭/೧)

೪೬. ಭಾಗವತ (೮/೧೮/೨೦)

೪೭. ನನು ದಿತಿಜತ್ವಾವಿಶೇಷಾತ್ ಹಿರಣ್ಯಾದೀನಿವ ಬಲಿಮಪಿ ಹತ್ವಾ ಕಿಮರ್ಥಂ ತ್ರಿವಿಷ್ಟಪಂ ನ ಜಹಾರ ಇತ್ಯತಃ ತತ್ರ ಕಾರಣಮಾಹ । –(ವ)

ಕೊಂಡಿದ್ದನಂತೆ; 'ನನ್ನ ಮೊಮ್ಮಗ ಬಲಿ ದಾರಿ ತಪ್ಪಬಹುದು; ಆಗ ನೀನು ಅವನನ್ನು ಸಂಹರಿಸದೆ, ಉದ್ಧರಿಸಬೇಕು' ಎಂದು; ಅದಕ್ಕೆ ಭಗವಂತ ವರ ನೀಡಿದ್ದನಂತೆ ''ಆಗಲಿ; ಅವನನ್ನು ಕೊಲ್ಲದೆ, ಬೇಡಿಯೇ ನಿಗ್ರಹಿಸುವೆನು'' ಎಂದು; ಅದಕ್ಕೆಂದೇ ಬೇಡುವ ನಾಟಕ ಎಂದು ಭಾವ.

೩) ಮಗನ ಉದ್ಧಾರಕ್ಕೆ ಪ್ರಾರ್ಥಿಸದ ಪ್ರಹ್ಲಾದ ತನ್ನ ಮೊಮ್ಮಗನ ಉದ್ಧಾರಕ್ಕೆ ಪ್ರಾರ್ಥಿಸಲು ಪ್ರತಿಯೊಬ್ಬನಿಗೂ ಮೊಮ್ಮಗನ ಮೇಲೆ ಮಗನಿಗಿಂತ ಮಿಗಿಲಾದ ಪ್ರೀತಿ ಇರುತ್ತದೆ (೯/೪೭) ಎಂಬುದೂ ಒಂದು ಕಾರಣ ಎಂದೂ ಭಾವಿಸಬಹುದು.

೪) ಬಲಿಯು ಯಜ್ಞಮಾಡಿದ ಸ್ಥಳ ನರ್ಮದಾತೀರದ 'ಭೃಗುಕಚ್ಛ' ಎಂಬುದಾಗಿ ಭಾಗವತಪುರಾಣ ತಿಳಿಸಿದೆ; 'ಭರೂಚ್' ಎಂಬ ಆಧುನಿಕನಗರವೇ ಈ ಭೃಗುಕಚ್ಚ ಎಂದು ಪ್ರಾಜ್ಞರ ಅಭಿಮತ.

ಪರಶುರಾಮಾವತಾರಕ್ಕಾಗಿ ಪ್ರಾರ್ಥನೆ

ಬಭೂವಿರೇ ಚಂದ್ರಲಲಾಮತೋ ವರಾತ್
ಪುರಾ ಹ್ಯಜೇಯಾ ಅಸುರಾ ಧರಾತಲೇ ।
ತೈರರ್ದಿತಾ ವಾಸವನಾಯಕಾಃ ಸುರಾಃ
ಪುರೋ ನಿಧಾಯಾಬ್ಜಜಮಸ್ತುವನ್ ಹರಿಮ್ ॥ ೪೮ ॥

ವಿರಿಂಚಸೃಷ್ಟ್ಯುನ್ನಿತರಾಮವಧ್ಯೌ
ವರಾದ್ವಿಧಾತುರ್ದಿತಿಜೌ ಹಿರಣ್ಯಕೌ ।
ತಥಾ ಹಯಗ್ರೀವ ಉದಾರವಿಕ್ರಮ-
ಸ್ತ್ವಯಾ ಹತಾ ಬ್ರಹ್ಮಪುರಾತನೇನ ॥ ೪೯ ॥

---

೪೯. ಭೂತೇಭ್ಯಸ್ತ್ವದ್ವಿಸೃಷ್ಟೇಭ್ಯೋ ಮೃತ್ಯುರ್ಮಾ ಭೂನ್ಮಮ ಪ್ರಭೋ। – ಭಾಗವತ (೭/೩/೩೫)
ಬ್ರಾಹ್ಮಣೋऽಸ್ಯ ಮುಖಮಾಸೀತ್ ಬಾಹೂ ರಾಜನ್ಯ ಕೃತಃ। – ಪುರುಷಸೂಕ್ತ

೪೯. ಬ್ರಹ್ಮಪುರಾತನೇನ– ಚತುರ್ಮುಖಬ್ರಹ್ಮಣೋऽಪ್ಯಾದಿಕಾಲೀನೇನ। –(ವಾ)
ಚತುರ್ಮುಖಸ್ಯಾಪಿ ಪುರಾತನೇನ ಪೂರ್ವಂ ವಿದ್ಯಯಾऽನಾದಿಪುರುಷೇಣ। –(ವ)
ಬ್ರಹ್ಮಣಃ ಪುರಾತನಃ ಪಿತಾ, ತೇನ। ಬ್ರಹ್ಮಾ ಚಾಸೌ ಪುರಾತನಶ್ಚೇತಿ ವಾ। –(ಜ)

೫೧. ಅನೇನ ಬಹುವಾರಂ ಬಹವೋ ಹತಾ ಇತಿ ಸೂಚಯತಿ। –(ವ)

೫೧. ರಾಮಭೃಗೂದ್ವಹ ಸೂರ್ಜಿತದೀಪ್ತೇ ಕ್ಷತ್ರಕುಲಾಂತಕ ಶಂಭುವರೇಣ್ಯ। –ದ್ವಾದಶಸ್ತೋತ್ರ

ಸ ಚಾಸುರಾನ್ ರುದ್ರವರಾದವಧ್ಯಾ-
ನಿಮಾನ್ ಸಮಸ್ತೈರಪಿ ದೇವದೇವ ।
ನಿಃಸೀಮಶಕ್ತ್ಯೈವ ನಿಹತ್ಯ ಸರ್ವಾನ್
ಹೃದಂಬುಜೇ ನೋ ನಿವಸಾಥ ಶಶ್ವತ್ ॥ ೫೦ ॥

ಪರಶುರಾಮಾವತಾರ

ಇತ್ಯಾದರೋಕ್ತಸ್ತ್ರಿದಶೈರಜೇಯಃ
ಸ ಶಾರ್ಙ್ಗಧನ್ವಾಽಥ ಭೃಗೂದ್ವಹೋಽಭೂತ್ ।
ರಾಮೋ ನಿಹತ್ಯಾಸುರಪೂಗಮುಗ್ರಂ
ಹ್ರದಾನನಾದಿರ್ವಿದಧೇಽಸೃಜೈವ ॥ ೫೧ ॥

ಅ: ಹಿಂದೆ ಚಂದ್ರಭೂಷಣನಾದ ಶಿವನ ವರದಿಂದ ಅಸುರರೆಲ್ಲ ಅಜೇಯರೆನ್ನಿಸಿ ಭೂಮಿಯಮೇಲೆ ಜನಿಸಿದರು; ಅವರಿಂದ ಪೀಡಿತರಾದ ಇಂದ್ರ ಮೊದಲಾದ ದೇವತೆಗಳೆಲ್ಲ ಚತುರ್ಮುಖಬ್ರಹ್ಮನನ್ನು ಮುಂದಿಟ್ಟುಕೊಂಡು ಶ್ರೀಹರಿಯನ್ನು ಸ್ತುತಿಸಿದರು.

ಬ್ರಹ್ಮನ ವರದಿಂದಾಗಿ ಬ್ರಹ್ಮ ಸೃಷ್ಟಿಸಿದವರಿಂದ ಸಂಪೂರ್ಣವಾಗಿ ಅವಧ್ಯರೆನಿಸಿದ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳೆಂಬ ದೈತ್ಯರು ಮತ್ತು ಹಾಗೆಯೇ ಉತ್ಕೃಷ್ಟಪರಾಕ್ರಮಿಯಾದ ಹಯಗ್ರೀವ ಚತುರ್ಮುಖನಿಗಿಂತಲೂ ಪ್ರಾಚೀನನಾದ ನಿನ್ನಿಂದ ಹತರಾದರು.

ಹೇ ದೇವದೇವನೇ! ರುದ್ರವರದಿಂದಾಗಿ ಸಕಲರಿಂದಲೂ ಅವಧ್ಯರಾಗಿರುವ ಈ ಸಕಲರನ್ನು ನಿನ್ನ ಎಣೆಯಿರದ ಸಾಮರ್ಥ್ಯದಿಂದ ನೀನೇ ಸಂಹರಿಸಿ ನಮ್ಮ ಹೃದಯಕಮಲದಲ್ಲಿ ಸದಾ ನೆಲೆಸು''.

ಹೀಗೆ ದೇವತೆಗಳಿಂದ ಆದರದಿಂದ ಪ್ರಾರ್ಥಿತನಾದ ಅಜೇಯನಾದ ಶಾರ್ಙ್ಗಪಾಣಿಯಾದ ಶ್ರೀಹರಿಯು ಭಾರ್ಗವರಾಮನಾಗಿ ಅವತರಿಸಿದ; ಆದಿ ಇರದ ಅವನು ಭಯಂಕರವಾದ ಅಸುರಸಮುದಾಯವನ್ನು ಸಂಹರಿಸಿ ರಕ್ತದಿಂದಲೇ ಕೊಳಗಳನ್ನು ನಿರ್ಮಿಸಿದ.

ವಿ: ೧) ಶ್ರೀಪರಶುರಾಮರೂಪದ ಪ್ರಾದುರ್ಭಾವದ ಹಿನ್ನೆಲೆ ಮತ್ತು ಪ್ರಯೋಜನಗಳನ್ನು ಈ ನಾಲ್ಕುಶ್ಲೋಕಗಳಲ್ಲಿ ನಿರೂಪಿಸಿರುವರು.

೨) ಪೀಡಿಸುತ್ತಿದ್ದವರು ಕ್ಷತ್ರಿಯರೂಪದ ರಾಕ್ಷಸರು; ಅವರು ರುದ್ರದೇವರ ವರದಿಂದ ಅಜೇಯರು; ಶ್ರೀಹರಿಯು ಬ್ರಹ್ಮವರದಿಂದ ಅವಧ್ಯರಾಗಿದ್ದ ಹಿರಣ್ಯಕಶಿಪು ಮೊದಲಾದವರನ್ನು

ಕೊಂದವನು; ಆದ್ದರಿಂದ ಅವನೇ ಈಗ ಇವರನ್ನು ಸಂಹರಿಸಿ ತಮ್ಮನ್ನು ಸಲಹಬೇಕು ಎಂಬುದು ದೇವತಾಪ್ರಾರ್ಥನೆಯ ಸಾರ. ಇದರಲ್ಲಿ ಶಿವನಿಗಿಂತ ಬ್ರಹ್ಮ ಅವರಿಗಿಂತ ವಿಷ್ಣು ಉತ್ತಮರು; ಎಂದರೆ ವಿಷ್ಣುಸರ್ವೋತ್ತಮತ್ವ ಮತ್ತು ವಾಯುಜೀವೋತ್ತಮತ್ವಗಳು ನಿರೂಪಿತವಾಗಿವೆ; ಮುಂದೆ ಬರುವ ಶಾಪ – ವರ – ಸಂಹಾರ ಮೊದಲಾದ ಸಕಲಪ್ರಸಂಗಗಳಲ್ಲೂ ಹೀಗೆಯೇ ಹರಿಸರ್ವೋತ್ತಮತ್ವಾದಿ ಪ್ರಮೇಯಗಳು ಅಡಕವಾಗಿರುವುದನ್ನು ತಪ್ಪದೆ ಗಮನಿಸಬೇಕು.

೩) ದಾರಿತಪ್ಪಿದ ಕ್ಷತ್ರಿಯರನ್ನು, ಬ್ರಾಹ್ಮಣರೂಪದಿಂದ ಸಂಹರಿಸಿದ ಈ ಪ್ರಸಂಗದಲ್ಲಿ ರಾಜರು ದಾರಿತಪ್ಪಿದಾಗ ಬ್ರಾಹ್ಮಣರೇ ಅವರನ್ನೆಲ್ಲ ನಿಗ್ರಹಿಸಬೇಕು ಎಂಬ ಅಂಶವೂ ಸೂಚಿತವಾಗಿದೆ; ಬಾಹುಗಳಿಂದ ಜನಿಸಿದ ಕ್ಷತ್ರಿಯರನ್ನು ಮುಖದಿಂದ ಜನಿಸಿದ ಬ್ರಾಹ್ಮಣರಷ್ಟೇ ನಿಯಂತ್ರಿಸಬೇಕಲ್ಲವೇ !

೪) ದುಷ್ಟಕ್ಷತ್ರಿಯರ ರಕ್ತದಿಂದ ಹಾಗೆ ನಿರ್ಮಿತವಾದ 'ಮಡು'ಗಳಿಗೆ 'ಸ್ಯಮಂತಪಂಚಕ'ವೆಂದು ಹೆಸರು; ಈ ತೆರನಾದ ಮಡುಗಳ ನಿರ್ಮಾಣವು ಹತರಾದ ದುಷ್ಟಕ್ಷತ್ರಿಯರ ಸಂಖ್ಯೆ ಎಷ್ಟು ಅಪಾರ ಎಂಬುದಕ್ಕೂ, ಶ್ರೀಪರಶುರಾಮರೂಪದಿಂದ ಅನೇಕ ಬಾರಿ (೨೧ ಸಲ) ಸಂಚರಿಸಿ ಅವರನ್ನೆಲ್ಲ ಸಂಹರಿಸಿದ ಎಂಬುದಕ್ಕೂ ಸೂಚಕ.

ರಾವಣ ಕುಂಭಕರ್ಣರ ಜನನ - ವರಪ್ರಾಪ್ತಿ

ತತಃ ಪುಲಸ್ತ್ಯಸ್ಯ ಕುಲೇ ಪ್ರಸೂತೌ
ತಾವಾದಿದೈತ್ಯೌ ಜಗದೇಕಶತ್ರೂ ।
ಪರೈರವಧ್ಯೌ ವರತಃ ಪುರಾ ಹರೇಃ
ಸುರೈರಜೇಯೌ ಚ ವರಾದ್ವಿಧಾತುಃ ॥ ೫೨ ॥

ಸರ್ವೈರಜೇಯಃ ಸ ಚ ಕುಂಭಕರ್ಣಃ
ಪುರಾತನೇ ಜನ್ಮನಿ ಧಾತುರೇವ ।
ವರಾನ್ನರಾದೀನ್ ಋತ ಏವ ರಾವಣ-
ಸ್ತದಾತನಾತ್ ತೌ ತ್ರಿದಶಾನಬಾಧತಾಮ್ ॥ ೫೩ ॥

---

೫೨. 'ಮಯೈವ ವಧ್ಯೌ ಭವತಂ ತ್ರಿಜನ್ಮಸು'। ಇತಿ ಹರೇರ್ವರತ ಇತ್ಯರ್ಥಃ। –(ವಾ)

೫೩. ಪುರಾತನೇ ಜನ್ಮನಿ ಹಿರಣ್ಯಾಕ್ಷಜನ್ಮನಿ। –(ಜ.)

ಅ: ಆನಂತರ ಜಗತ್ತಿನ ಮುಖ್ಯಶತ್ರುಗಳಾದ ಆದಿದೈತ್ಯ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳು ಪುಲಸ್ತ್ಯಮುನಿಯ ವಂಶದಲ್ಲಿ ಜನಿಸಿದರು; ಶ್ರೀಹರಿಯು ಹಿಂದೆಯೇ ನೀಡಿದ ವರದಿಂದ ಅವರು ಇತರರಿಗೆ ಅವಧ್ಯರಾಗಿದ್ದರು; ಬ್ರಹ್ಮದೇವರ ವರದಿಂದಾಗಿ ಸುರರಿಂದ ಅಜೇಯರಾಗಿದ್ದರು.

ಹಿಂದಿನ ಜನ್ಮದಲ್ಲಿ ಬ್ರಹ್ಮದೇವರೇ ನೀಡಿದ್ದ ವರದಿಂದಾಗಿ ಕುಂಭಕರ್ಣನು ಸಕಲರಿಂದಲೂ ಅಜೇಯನಾಗಿದ್ದ; ಅದೇಕಾಲದ ವರದಿಂದಾಗಿ ನರ ವಾನರಾದಿಗಳನ್ನು ಹೊರತು ರಾವಣನೂ ಅಜೇಯನಾಗಿದ್ದ; ಅವರಿಬ್ಬರೂ ದೇವತೆಗಳನ್ನು ಪೀಡಿಸತೊಡಗಿದರು.

ವಿ: ೧) ರಾಮಾವತಾರಕ್ಕೆ ಪೀಠಿಕೆಯಾಗಿ ಆ ಕಾಲದಲ್ಲಿ ರಾವಣಕುಂಭಕರ್ಣರಿಂದ ಜಗತ್ತಿಗೆ ಒದಗಿದ್ದ ದುಸ್ಥಿತಿಯನ್ನು ನಿರೂಪಿಸುತ್ತಿರುವರು.

೨) ಕಶ್ಯಪಪುತ್ರರಾಗಿದ್ದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರೇ ಪುಲಸ್ತ್ಯಪುತ್ರರಾದ ವಿಶ್ರವಸ್‌ಮುನಿಗಳ ಪುತ್ರರಾಗಿ ಜನಿಸಿದರು; 'ನಾನೇ ನಿಮ್ಮನ್ನು ಕೊಲ್ಲುವೆ' ಎಂಬುದು ಶ್ರೀಹರಿಯು ಜಯವಿಜಯರಿಗೆ ನೀಡಿದ್ದ ವಚನ; ಜಯವಿಜಯರು ಇವರಿಬ್ಬರಲ್ಲಿ ಆವಿಷ್ಟರಾಗಿದ್ದರಿಂದ ಆ ಮಾತು ಇವರ ಅವಧ್ಯತ್ವಕ್ಕೂ ಕಾರಣವಾಯಿತು; ಬ್ರಹ್ಮದೇವರ ವರದಿಂದಾಗಿ ಇವರಿಗೆ ಮತ್ತೊಂದು ರೀತಿಯಲ್ಲೂ ಅಜೇಯತ್ವ ಸಿದ್ಧಿಸಿದ್ದಿತು.

೩) ರಾವಣನು ಈ ಜನ್ಮದಲ್ಲೂ ಬ್ರಹ್ಮದೇವರನ್ನು ಆರಾಧಿಸಿ ನರವಾನರಾದಿಗಳ ಹೊರತು ಇತರರಿಂದ ಅವಧ್ಯನಾಗುವ ವರ ಪಡೆದಿದ್ದ; ಆದರೆ ಕುಂಭಕರ್ಣನು ಹಾಗಲ್ಲ; ಅವನು ಹಿರಣ್ಯಾಕ್ಷ–ನಾಗಿದ್ದಲೇ ಅಂತಹ ವರವನ್ನು ಪಡೆದಿದ್ದ; ಈ ಜನ್ಮದಲ್ಲಿ ಪಡೆದದ್ದು ಚಿರಕಾಲ ನಿದ್ರಾರೂಪ ವರವನ್ನೇ ಆದರೂ ಆ ಹಿಂದಿನ ಜನ್ಮದ ವರದಿಂದಾಗಿ ಈಗ ಅಜೇಯನಾಗಿದ್ದ ಎಂದು ಭಾವ.

---

೫೩. ಕುಂಭಕರ್ಣೋ ನರವಾನರಾದಿಷು ಉಪೇಕ್ಷಯಾ ನರಾದೀನ್ ಋತೇ ಸರ್ವೈರಜೇಯಃ ಇತಿ ಸ್ವಪೂರ್ವಜನ್ಯೈವ ವಿಧಾತುರ್ವರಾತ್ ನರಾದೀನ್ ಋತೇ ಸರ್ವೈರಜೇಯಃ । ನಿದ್ರಾಲೋಃ ಕುಂಭಕರ್ಣಸ್ಯ ಇದಾನೀಂತನವರಾಭಾವಾದಿತಿ ಭಾವಃ । ರಾವಣಸ್ತು ತದಾತನಾತ್ ರಾವಣಜನ್ಯೈವ ವಿದ್ಯಮಾನಾತ್ ತದ್ವದೇವ ನರವಾನರಾದಿಷೂಪೇಕ್ಷಯಾ ನರಾದೀನೃತೇ ಸರ್ವೈರಜೇಯಃ ಇತಿ ವರಾತ್ ನರಾದೀನ್ ಋತೇ ಏವ ಸರ್ವೈರಜೇಯಃ ಇತ್ಯುಭಯತ್ರ ಆವೃತ್ತ್ಯಾಯೋಜನಾ । –(ವಾ)

ಧಾತುರೇವ ವರಾತ್ । 'ಕುಂಭಕರ್ಣಜನ್ಯೈಜೇಯೋ ಭವ' ಇತಿ ವರಾತ್ । –(ಜ)

೫೫. ಯತ್ತು, 'ನ ದೇವಾನಾಂ ಪ್ರಜಾಪಾನಾಂ ವಿಜೇತಾ ವರತೋ ವಿನಾ ।
ಬಲೇನ ವಿದ್ಯಯಾ ವಾऽಪಿ ನ ಸಮಸ್ತತ್ರಿತೀನ್ ವಿನಾ ।
ವರೋऽಪಿ ತಾದೃಶೋ ಯಾವಚ್ಛರೀರಂ ನಾನ್ಯದೇಹಗಃ ।' ಇತಿ ವಾಕ್ಯಮ್ । ತತ್ ।
ಯಾವಚ್ಛರೀರಂ ಯದ್ದೇಹಮುದ್ದಿಶ್ಯ ದತ್ತಸ್ತದ್ದೇಹಪಾತಪರ್ಯಂತಂ ಇತಿ ವ್ಯಾಖ್ಯೇಯಮ್ ॥ –(ಜ)

೫೫. ವಜ್ರಪತನಾದತಿಕುಂಚಿತಸ್ಯ (೫/೪೨)

೪) ಶ್ರೀಹರಿಯ ವರದಿಂದ ಅವರು ಅವಧ್ಯರಾಗಿದ್ದರು; ಬ್ರಹ್ಮದೇವರ ವರದಿಂದ ಅಜೇಯರಾಗಿದ್ದರು; ಹೀಗೆ ಅವಧ್ಯತ್ವ ಮತ್ತು ಅಜೇಯತ್ವರೂಪ ಎರಡು ವರಗಳ ಬಲದಿಂದಾಗಿ ರಾವಣಕುಂಭಕರ್ಣರ ಪೀಡೆ ದೇವತೆಗಳನ್ನೂ ಪೀಡಿಸುವಷ್ಟು ಭಯಂಕರವಾಗಿದ್ದಿತು ಎಂದು ಭಾವ.

೫) 'ಕಬಂಧ'ನಿಗೆ ಅವಧ್ಯತ್ವರೂಪವರವು ಬ್ರಹ್ಮದೇವರಿಂದ ಲಭಿಸಿದ್ದರೂ ಅವನಿಗೆ ಅಜೇಯತ್ವವರವು ಇರಲಿಲ್ಲ; ಎಂದರೆ ಅವನಿಗೆ ಸಾವು ಇರದಿದ್ದರೂ, ಸೋಲು ಬರಬಹುದಿತ್ತು; ಅವನು ಇಂದ್ರದ ವಜ್ರಾಯುಧದ ಪೆಟ್ಟಿಗೆ ಗಾಸಿಗೊಳ್ಳಬೇಕಾಯಿತು(೫/೪೨). ಆದರೆ ಇವರಿಬ್ಬರಿಗೂ ಅಜೇಯತ್ವವರವೂ ಇದ್ದುದು ವಿಶೇಷವಾಗಿತ್ತು ಎಂಬುದನ್ನು ಗಮನಿಸಬಹುದು.

ರಾಮಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ

ತದಾऽಬ್ಜಜಂ ಶೂಲಿನಮೇವ ಚಾಗ್ರತೋ
ನಿಧಾಯ ದೇವಾಃ ಪುರುಹೂತಪೂರ್ವಕಾಃ ।
ಪಯೋಂಬುಧೌ ಭೋಗಿಪಭೋಗಶಾಯಿನಂ
ಸಮೇತ್ಯ ಯೋಗ್ಯಾಂ ಸ್ತುತಿಮಭ್ಯಯೋಜಯನ್ ॥ ೫೪ ॥

ಅ: ಆಗ ಕಮಲಸಂಭವನಾದ ಬ್ರಹ್ಮನನ್ನೂ, ಶೂಲಪಾಣಿಯಾದ ಶಿವನನ್ನೂ ಮುಂದಿರಿಸಿಕೊಂಡು ಇಂದ್ರ ಮೊದಲಾದ ದೇವತೆಗಳು ಕ್ಷೀರಸಾಗರದಲ್ಲಿ ಸರ್ಪರಾಜನಾದ ಶೇಷನ ಶರೀರದ ಮೇಲೆ ಪವಡಿಸಿದ ಶ್ರೀಹರಿಯ ಬಳಿಗೆ ತೆರಳಿ, ಉಚಿತವಾದ ಸ್ತುತಿಯನ್ನು ಮಾಡಿದರು.

ತ್ವಮೇಕ ಈಶಃ ಪರಮಃ ಸ್ವತಂತ್ರ-
ಸ್ತ್ವಮಾದಿರಂತೋ ಜಗತಾಂ ನಿಯೋಕ್ತಾ ।
ತ್ವದಾಜ್ಞಯೈವಾಖಿಲಮಂಬುಜೋದ್ಭವಾ
ವಿತೇನಿರೇऽಗ್ರ್ಯಾಶ್ಚರಮಾಶ್ಚ ಯೇऽನ್ಯೇ ॥ ೫೫ ॥

---

೫೪. ಪಯೋऽಂಬುಧೌ = ಕ್ಷೀರಸಾಗರೇ ವಿದ್ಯಮಾನೇ ಶ್ವೇತದ್ವೀಪೇ । –(ವ)

೫೪. ಭಗವದ್ಯೋಗ್ಯಾಂ ಪ್ರಸಂಗಾನುಗುಣಂ ವಾ । –(ಜ)

೫೬. ಪರಮಾಣುಕಾಲಮಾರಭ್ಯ ದ್ವ್ಯಣುಕತ್ರಸರೇಣುತ್ರುಟಿವೇಧಲವನಿಮೇಷಕ್ಷಣಕಾಷ್ಠಲಘುಘಟಿಕಾ-ಮೂಹೂರ್ತಪ್ರಹರಯಾಮಾಹೋರಾತ್ರಪಕ್ಷದ್ವಯಮಾಸಋತುಅಯನದ್ವಯೇತ್ಯೇವಂ ರೂಪಃ ಸಂವತ್ಸರೋ ಮನುಷ್ಯಾಣಾಂ ವರ್ಷಮುಚ್ಯತೇ । –(ವ)

ಕಾಲಗಣನೆ - ಬ್ರಹ್ಮದೇವರ ದಿನ

ಮನುಷ್ಯಮಾನಾತ್ ತ್ರಿಶತಂ ಸಷಷ್ಟಿಕಂ
ದಿವೌಕಸಾಮೇಕಮುಶಂತಿ ವತ್ಸರಮ್ ।
ದ್ವಿಷಟ್‌ಸಹಸ್ರೈರಪಿ ತೈಶ್ಚತುರ್ಯುಗಂ
ತ್ರೇತಾದಿಭಿಃ ಪಾದಶ ಏವ ಹೀನೈಃ ॥ ೫೬ ॥

ಸಹಸ್ರವೃತ್ತಂ ತದಹಃ ಸ್ವಯಂಭುವೋ
ನಿಶಾ ಚ ತನ್ಮಾನಮಿತಂ ಶರಚ್ಛತಮ್ ।
ತ್ವದಾಜ್ಞಯಾ ಸ್ವಾನನುಭೂಯ ಭೋಗಾ-
ನುಪೈತಿ ಸೋಽಪಿ ತ್ವರಿತಂ ತ್ವದಂತಿಕಮ್ ॥ ೫೭॥

ಮಧುಕೈಟಭರ ವಧೆ

ತ್ವಯಾ ಪುರಾ ಕರ್ಣಪುಟಾದ್ವಿನಿಃಸೃತೌ
ಮಹಾಸುರೌ ತೌ ಮಧುಕೈಟಭಾಖ್ಯೌ ।
ಪ್ರಭಂಜನಾವೇಶವಶಾತ್ ತ್ವದಾಜ್ಞಯಾ
ಬಲೋದ್ಧತಾವಾಶು ಜಲೇ ವ್ಯವರ್ದ್ಧತಾಮ್ ॥ ೫೮ ॥

---

೫೬. 'ಪಾದಶ ಏವ ಹೀನೈಃ' ತ್ರೇತಾದಿಭಿಃ ಸಹ ದ್ವಿಷಟ್ಸಹಸ್ರೈರ್ದೇವವರ್ಷೈಃ ಚತುರ್ಯುಗಮುಶಂತಿ । ಚತುಃಸಹಸ್ರೀ ಕೃತಯುಗಸ್ಯ । ತತಃ ಏಕಸಹಸ್ರಾಖ್ಯಪಾದನ್ಯೂನತಾಯಾಂ ತ್ರಿಸಹಸ್ರೀ ತ್ರೇತಾಯುಗಸ್ಯ । ಏವಂ ಚ ತ್ರೇತಾ ತ್ರಿಪಾದೀ ಜಾತಾ । ಪೂರ್ವನ್ಯಾಯೇನ ತತೋಽಪ್ಯೇಕಪಾದಸ್ಯೋನತಾಯಾಂ ದ್ವಿಸಹಸ್ರೀ ದ್ವಾಪರೋಽಪಿ ದ್ವಿಪದೋ ಜಾತಃ । ತತಃ ಏಕಪಾದಸ್ಯೋನತಯಾಮೇಕಸಹಸ್ರವರ್ಷಃ ಕಲಿರೇಕಪಾತ್ । ಇತ್ಥಂ ದಶಸಹಸ್ರೀ ಗತಾ ಉರ್ವರಿತದ್ವಿಸಹಸ್ರ್ಯಾಪಿ ಶತಸಂಖ್ಯಯಾ ವಿಭಜನೇ ವಿಂಶತಿಶತಾನಿ ಜಾತಾನಿ । ತೇಷಾಮಪ್ಯಾದಿಪದೋಕ್ತಸಂಧಿಷು ತದ್ವದೇವ ವಿಭಜನೇ ಕಲಿಕೃತಯುಗಸಂಧೌ ಅಷ್ಟಶತಾನಿವರ್ಷಾಣಿ । ಕೃತತ್ರೇತಾಯುಗಸಂಧೌ ಷಟ್‌ಶತಾನಿ । ತ್ರೇತಾದ್ವಾಪರಸಂಧೌ ಚತುಃಶತಾನಿ । ದ್ವಾಪರಕಲ್ಯೋಃ ಸಂಧೌ ದ್ವಿಶತಮ್ । ಏವಂ ತೈರ್ದ್ವಿಷಟ್‌ಸಹಸ್ರೈ-ಶ್ಚತುರ್ಯುಗಮುಶಂತೀತಿ ಭಾವಃ । -(ವಾ)

೫೮ ಸಹಸ್ರವೃತ್ತಂ ಸಹಸ್ರವಾರಂ ಪ್ರವೃತ್ತಂ ತಚ್ಚತುರ್ಯುಗಂ ಸ್ವಯಂಭುವಃ ಅಹರುಶಂತಿ । -(ವಾ)

೫೮. ಪುರಾ = ದೇವಸರ್ಗಾತ್ ಪೂರ್ವಮ್ । -(ಜ)

೫೮. ತಯೋಃ ಪ್ರವೇಶಃ ಕಾರ್ಯಂ ಇತ್ಯಾಜ್ಞಯಾ । -(ಜ)

ತ್ವದಾಜ್ಞಯಾ ಬ್ರಹ್ಮವರಾದವಧ್ಯೌ
ಚಿಕ್ರೀಡಿಷಾಸಂಭವಯಾ ಮುಖೋದ್ಗತಾನ್ ।
ಸ್ವಯಂಭುವೋ ವೇದಗಣಾನಹಾರ್ಷತಾಂ
ತದಾऽಭವಸ್ತ್ವಂ ಹಯಶೀರ್ಷ ಈಶ್ವರಃ ॥ ೫೯ ॥

---

೫೮. ಏತದುಕ್ತಂ ಹಯಶೀರ್ಷಪಂಚರಾತ್ರೇ ಹಯಗ್ರೀವವಚನಮ್ –
ಉಪಾಸಾಂ ಚಕ್ರಿರೇ ಮಹ್ಯಂ ವೇದಾ ದೇಹಭೃತಸ್ತದಾ ।
ವೇದಾಭ್ಯಾಸರತಸ್ತತ್ರ ಘರ್ಮಬಿಂದುರಜಾಯತ ॥
ಸ ಪದ್ಮಪತ್ರಮಾಸಾದ್ಯ ದ್ವಿಧಾ ಭೂತೋ ಯತಸ್ತದಾ ।
ರಜಸ್ತಮೋಮಯೌ ತಸ್ಮಾತ್ ಜಾತೌ ದಿವ್ಯೌ ಬಲೋತ್ಕಟೌ ॥
ಮಧುಕೈಟಭನಾಮಾನೌ ಮಹಾಬಲಪರಾಕ್ರಮೌ ।
ತತಸ್ತೌ ಪಮವೇದಾನ್ ವೈ ಜಹ್ರತುಃ ಪಾಪನಿಶ್ಚಯೌ ॥ ಇತಿ ।

ತಥಾ 'ತತಶ್ಚಾಶ್ವಶಿರಾ ಗತ್ವಾ ವೇದಾನಾದಾಯ ಶಾಶ್ವತಾನ್' ಇತಿ ಮೂಲೇ ಕರ್ಣಪುಟಾದಿತಿ ಮಾರ್ಕಂಡೇಯೇ । ಕರ್ಣಮಲಾದಿತಿ । ಪಂಚರಾತ್ರೇ ಘರ್ಮಬಂದುಭಿರಿತಿ ತ್ರಯಾಣಾಂ ಏಕವಾಕ್ಯತಾಯಾಮ್ ಕರ್ಣಸಂಬಂಧಮಲರೂಪಜಲಬಿಂದೋರ್ಜಾತಾವಿತ್ಯರ್ಥಃ। –(ಜ.)

೫೯. ಅವಧ್ಯತ್ವವರಂ ತ್ವಂ ದೇಹಿತ್ಯೇವಂರೂಪಯಾ ತ್ವದಾಜ್ಞಯಾ ದತ್ತಾತ್ ಬ್ರಹ್ಮವರಾದವಧ್ಯೌ ಜಾತೌ ಇತ್ಯರ್ಥಃ। –(ವಾ)

೫೯. ಕ್ರೀಡಿತುಮಿಚ್ಛಾ ಚಿಕ್ರೀಡಿಷಾ ತತಃ ಸಂಭವೋ ಯಸ್ಯಾಃ ಸಾ ತಯಾ ತ್ವದಾಜ್ಞಯಾ ಇತ್ಯರ್ಥಃ। –(ವಾ)

೬೩. ಗೃಹೇ = ಭಾರ್ಯಾಯಾಮ್ । –(ವಾ)

೬೩. ತದರ್ಥಿತಯಾ ರಾಮಾಖ್ಯಪುತ್ರಾರ್ಥಿತಯಾ ಇಷ್ಟಃ । ಯಾಗೇನ ಪೂಜಿತಃ । –(ವಾ)

ತದರ್ಥಿನಾ ಹರಿಃ ಪುತ್ರೋ ಮೇ ಭೂಯಾತ್ ಇತಿ ಇಚ್ಛತಾ ಇಷ್ಟಃ ಪೂಜಿತಃ । –(ವ)

೬೩. ''ದಶರಥಸ್ತು ಸ್ವಾಯಂಭುವಃ । .....ಅದಿತ್ಯಾಂ ಗರ್ಭಸ್ಯ ಜನ್ಮ ಆಂಕುರಣಂ ಯಸ್ಮಾತ್ತಸ್ಯ ಕಶ್ಯಪಸ್ಯ ದಶಸ್ಕಂದನನಾಮಿನೋ ಗೃಹೇ ಇತ್ಯಷ್ಯನ್ವಯೇನ ಪದ್ಮಪುರಾಣೈಕಕಂಠಸ್ಯ ಅಕುಂಠನಾತ್ । ಏತಚ್ಛ್ಲೋಕವ್ಯಾಕೃತೌ ಕೇಚಿತ್ ದಶರಥಂ ವೈವಸ್ವತಮಾಹುಃ । ತದುಕ್ತಂ ವಾಮನಪುರಾಣೇ...। ಯತ್ತು ಉತ್ತರಖಂಡ–ಪದ್ಮಪುರಾಣವಚನಂ ತದ್ವಸುದೇವಸಾಹಚರ್ಯಾತ್ ಆವೇಶಪರಮಿತ್ಯಪ್ಯಾಹುಃ । ....ವಾಮನಪುರಾಣವಚನಮೇವ ಮಾನಸೇ ನಿಧಾಯ 'ವಿವಸ್ವತಸ್ತಂತುಭವಸ್ಯ' ಇತಿ ಗೋತ್ರಾಪತ್ಯತಯಾ ಆಚಾರ್ಯಾ ವಿವೃತವಂತಃ ಇತಿ ಸಾವಕಾಶಮತಿ ನ ವೈವಸ್ವತಪಕ್ಷಃ ಸಂಮತಃ ಆಚಾರ್ಯಾಣಾಮ್ । –ಶ್ರೀಸತ್ಯಧರ್ಮತೀರ್ಥರು (ಭಾಗವತಟಿಪ್ಪಣಿ ೯/೮೨)

ತದಾಜ್ಞಯೇತ್ಯುಪಲಕ್ಷಣಮೇತತ್। ಇಂದ್ರಸ್ತದಾ .....ರುದ್ರಂ ವಿನಾ ಸರ್ವೇ ದೇವಾ ಮಿಲಿತಾಃ ಪ್ರಸಂಗ ಚಕ್ರುಃ । ತದಾ ವಿಧಿಃ ಸ್ವಸುತಾಂ ಭಾರತೀಮುಪಯೇಮೇ ಇತಿ ಚ । ಪ್ರಾಪ್ತಂ ತದಾ ಕೋ ವಿಧಿಃ ಕಾಮಿನಾಮಿತಿ ಪ್ರಾಹಸದಿಂದ್ರಃ । ಶಚೀ ಸರ್ವೇ ದೇವಾಶ್ಚ । ಬ್ರಹ್ಮಾ ತಚ್ಛ್ರುತ್ವೋವಾಚ । ತದುಕ್ತಂ ವಾಮನಪುರಾಣೇ ಶ್ರೀವಿಷ್ಣುಮಾಹಾತ್ಮ್ಯೇ ತೃತೀಯಾಧ್ಯಾಯೇ –

ಆಹೃತ್ಯ ವೇದಾನಖಿಲಾನ್ ಪ್ರದಾಯ
ಸ್ವಯಂಭುವೇ ತೌ ಚ ಜಘಂಥ ದಸ್ಯೂ ।
ನಿಷ್ಪೀಡ್ಯ ತಾವೂರುತಲೇ ಕರಾಭ್ಯಾಂ
ತನ್ಮೇದಸೈವಾಶು ಚಕರ್ಥ ಮೇದಿನೀಮ್ ॥ ೬೦ ॥

ತಸ್ಮಿನ್ ಕಾಲೇ ಸುರಾಃ ಸರ್ವೇ ದೇವೇಂದ್ರಸದನಂ ಗತಾಃ ।
ಉಪತಸ್ಥುರ್ಮಹಾತ್ಮಾನಂ ವಿನಯಾನತಕಂಧರಾಃ ॥
ಸುಖಗೋಷ್ಠೀಂ ತತಶ್ಚಕ್ರುಃ ಸುಖಾಸೀನಾಃ ಸಭಾಗತಃ ।
ಶ್ರುತಿಸ್ಮೃತಿವಿಚಾರಾಂಶ್ಚ ಚಕ್ರುಃ ಸಪ್ತರ್ಷಯಸ್ತಥಾ ॥
ವಿಚಾರಿತೇಷು ಶಾಸ್ತ್ರೇಷು ಪ್ರಸಂಗೋऽಯಮುಪಾಗತಃ ।
ಉಪಯೇಮೇ ಕಥಂ ಸಾಕ್ಷಾತ್ ತನಯಾಂ ಭಾರತೀಂ ವಿಧಿಃ ॥
ಹಸನ್ನಿಂದ್ರಸ್ತದಾ ಪ್ರಾಹ ಕೋ ವಿಧಿಃ ಕಾಮಿನಾಮಿತಿ ।
ಹಾಹಾ ಹೂಹೂ ಚ ಗಂಧರ್ವೌ ತಚ್ಛ್ರುತ್ವಾ ಜಗ್ಮತುಸ್ತದಾ ॥
ಆಹ ತು ಬ್ರಹ್ಮಣೇ ಸರ್ವಂ ಯದ್ವೃತ್ತಮಿಂದ್ರಸಂಸದಿ ।
ಬ್ರಹ್ಮಾ ತು ಕುಪಿತಃ ಪ್ರಾಹ ತಚ್ಛ್ರುತ್ವಾ ರಕ್ತಲೋಚನಃ ॥
ಮೂಢಾರಮೇನ ಜಾನಂತಿ ಸ್ವಲ್ಪಜ್ಞಾ ಭೂರಿಮಾನಿನಃ ।
ಭಾರ್ಯಾಭಾಗೋ ವಾಮಭಾಗೋ ಭಾರ್ಯಾ ಚಾರ್ಧಶರೀರಿಣೇ ॥
ಜಾತಾಂ ಚ ದಕ್ಷಿಣೇ ಭಾಗೇ ನರ(?) ವಾಗಭಿಮಾನಿನೀ ।
ವಾಣೀಂ ತ್ಯಕ್ತ್ವಾ ಚ ಸಾ ಸಂಧ್ಯಾ ದತ್ತಾದಿಭ್ಯಶ್ಚ ಸಾ ಪುನಃ ॥
ಸಂಧ್ಯಭಾವೇ ದೇಹಿನಾಂ ಚ ಪುನರ್ವಾಮಾರ್ಧಭಾಗತಃ ।
ಜಾತಾ ವಾಣೀ ಚ ಮೇ ಭಾರ್ಯಾ .....ಕಾ ಗತಿರ್ಭವೇತ್ ॥
ಕುರ್ವಂತಿ ಕಪಿಚೇಷ್ಟಾಂ ತೇ ಸದಾ ಸರ್ವೇ ಚ ಮಾಂ ಪ್ರತಿ ।
ಅತಸ್ತೇ ಕಪಯಃ ಸಂತು ಭುವಿ ತೇ ಮಿಶ್ರಯೋನಿಜಾಃ ॥
ಶಶಾಪೈನಂ ವಿಧಿರ್ದೇವಾನ್ ತಚ್ಛ್ರುತ್ವಾ ನಾರದೋ ಮುನಿಃ ।
ಶಾಪಪ್ರಕಾರಂ ದೇವಾನಾಮುಕ್ತ್ವಾ ಕೈಲಾಸಮಭ್ಯಗಾತ್ ॥
ತಚ್ಛ್ರುತ್ವಾ ಭಯಸಂವಿಗ್ನಾಃ ಕಂಜಜಂ ಶರಣಂ ಯಯುಃ ।
ಶಾಪಮೋಕ್ಷಪ್ರಕಾರಂ ಚ ಪ್ರೀತಸ್ತೇಷಾಮುವಾಚ ಹ ॥
ಗಚ್ಛಧ್ವಂ ದೇವತಾಃ ಸರ್ವೇ ಶ್ರೀಮುಷ್ಣಂ ಪಾಪನಾಶನಮ್ ।
ನಿತ್ಯಪುಷ್ಕರಣೇ ತೀರೇ ತಪಃ ಕುರ್ವಂತು ಸಂಯತಾಃ ॥
ತತಃ ಪ್ರಸನ್ನೋ ಭಗವಾನ್ ವರಮೇತತ್ಪ್ರದಾಸ್ಯತಿ ।
ಅಹಂ ದಾಶರಥಿರ್ಭೂತ್ವಾ ಭವದ್ಭಿಃ ಕಪಿರೂಪಿಭಿಃ ॥
ಸೇವಾಂ ಪ್ರಾಪ್ಯ ಪ್ರಯಚ್ಛಾಮಿ ಸ್ವಧಾಮನಿಯಮಾನಿ ಚ ।
ಅವಿಚ್ಛಿನ್ನಂ ಭವಜ್ಜ್ಞಾನಂ ವಾಗ್ವ್ಯಾಪಾರೋ ಭವೇದಿತಿ ॥
ಕೀರ್ತಿರಪ್ಯತುಲಾ ಭೂಯಾ ವಿನ್ಯೇವೇಂದ್ರಂ ಸುಗರ್ವಿತಮ್ ।

ಏವಂ ಸುರಾಣಾಂ ಚ ನಿಸರ್ಗಜಂ ಬಲಂ
ತಥಾಽಸುರಾಣಾಂ ವರದಾನಸಂಭವಮ್ ।
ವಶೇ ತವೈತದ್ದ್ವಯಮಪ್ಯತೋ ವಯಂ
ನಿವೇದಯಾಮಃ ಪಿತುರೇವ ತೇಽಖಿಲಮ್ ॥ ೬೧ ॥

ಇಮೌ ಚ ರಕ್ಷೋಧಿಪತೀ ವರೋದ್ಧತೌ
ಜಹಿ ಸ್ವವೀರ್ಯೇಣ ನೃಷು ಪ್ರಭೂತಃ ।
ಇತೀರಿತೇ ತೈರಖಿಲೈಃ ಸುರೇಶ್ವರೈ-
ರ್ಬಭೂವ ರಾಮೋ ಜಗತೀಪತಿಃ ಪ್ರಭುಃ ॥ ೬೨ ॥

ಅ: ''ನೀನೊಬ್ಬನೇ ಜಗತ್ತಿನ ಸ್ವಾಮಿ; ಸರ್ವೋತ್ತಮ; ಸ್ವತಂತ್ರ; ಎಲ್ಲರಿಗಿಂತ ಮುಂಚೆ ಇರುವವನು; ಜಗತ್ತನ್ನು ಸೃಷ್ಟಿಸುವವನು ನೀನೆ; ಎಲ್ಲವನ್ನು ಸಂಹರಿಸುವವನು ನೀನೇ; ಸರ್ವನಿಯಾಮಕನೂ ನೀನೇ; ನಿನ್ನ ಅನುಜ್ಞೆಯಿಂದಲೇ ಈ ಮುಂಚಿನ ಹಾಗೂ ಅನಂತರದ ಬ್ರಹ್ಮರು ಸಕಲವನ್ನೂ ನಿರ್ಮಿಸಿದರು; ಮತ್ತು ನಿರ್ಮಿಸುವರು.

ಮನುಷ್ಯಮಾನದಿಂದ ಮೂರುನೂರಅರವತ್ತು ವರ್ಷಗಳನ್ನು ದೇವತೆಗಳ ಒಂದುವರ್ಷವೆಂದು ಕರೆಯುವರು; ಅಂತಹ ಹನ್ನೆರಡುಸಾವಿರ ವರ್ಷಗಳಿಗೆ ಒಂದು ಚತುರ್ಯುಗವೆಂದು ಹೆಸರು; ಕ್ರಮವಾಗಿ ಒಂದು ಪಾದ ಕಡಿಮೆ ಎನ್ನಿಸುವ

ಜಹಾಸ ಭಾರ್ಯಾ ಯಸ್ಮಾಚ್ಚ ಸಾ ಸ್ಯಾಚ್ಛಾಲಕಗಾಮಿನೀ ॥
ತಥಾಪಿ ತಪಸಾ ತುಷ್ಟಃ ದದಾಮ್ಯಂತೇ ಚ ದರ್ಶನಮ್ ।
ತಪಂತೀಂ ಚ ಶಚೀಂ ಕುರ್ವೇ ಪಾತಿವ್ರತ್ಯಧುರಂಧರಾಮ್ ॥
ತಾರೇತಿ ಪ್ರಾತರುತ್ಥಾಯ ಸ್ಮರಣೇ ಪಾಪನಾಶಿನೀಮ್ ।
ಶ್ರೀಮುಷ್ಣೇ ತಪಸಾ ತುಷ್ಟೋ ರಾಮರೂಪೇಣ ವೈ ಹರಿಃ ॥
ತಾರಕಬ್ರಹ್ಮರೂಪೋಽಸೌ ಶಾಪಮೋಕ್ಷಂ ಕರಿಷ್ಯತಿ ।
ಸಭಾಯಾಮಗತತ್ವೇನ ವಿನಾ ರುದ್ರಂ ತತೋ ಪರೇ ॥
ಶಾಪಮೋಕ್ಷಾಯ ಶ್ರೀಮುಷ್ಣಂ ಜಗ್ಮುಸ್ತಪ್ತುಂ ದಿವೌಕಸಃ ॥
– ಇತಿ ವಾಮನೇ ಶ್ರೀಮುಷ್ಣಮಾಹಾತ್ಮ್ಯೇ ಚತುರ್ಥಾಧ್ಯಾಯವಚನಾತ್ ।

ಪದ್ಮಪುರಾಣೋತ್ತರಕಾಂಡೇ ರಾಮವೈಭವೇ–
'ನಂದಿಶಾಪಾದ್ಭವಂತೋಽಪಿ ವಾನರತ್ವಮುಪಾಗತಾಃ ।
ಕುರುಧ್ವಂ ಮಮ ಸಾಹಾಯ್ಯಮಿ'ತಿ ನಾರಾಯಣವಚನಾಚ್ಚ ॥ – (ಶ್ರೀ.)

ತ್ರೇತಾದಿಯುಗಗಳಿಂದ ಕೂಡಿದ ಅಂತಹ ಹಗಲು, ರಾತ್ರಿ, ಪಕ್ಷ, ಮಾಸಗಳಿಂದ ಯುಕ್ತವಾದ ಒಂದುನೂರುವರ್ಷ ಬ್ರಹ್ಮದೇವರ ಆಯುಷ್ಯ; ಅಂತಹ ಚತುರ್ಮುಖನೂ ಸಹ ನಿನ್ನ ಆದೇಶದಂತೆ ತನಗೆ ಉಚಿತವಾದ ಭೋಗಗಳನ್ನು ಅನುಭವಿಸಿ ತ್ವರೆಯಿಂದ ನಿನ್ನ ಬಳಿಗೆ ಬರುವನು.

ಹಿಂದೆ ನೀನು ನಿನ್ನ ಕರ್ಣಶಷ್ಕುಲೀ ಪ್ರದೇಶದಿಂದ ಮಧು ಮತ್ತು ಕೈಟಭರು ಎಂಬ ಇಬ್ಬರು ಮಹಾದೈತ್ಯರನ್ನು ಹುಟ್ಟಿಸಿದಿ; ನಿನ್ನ ಆದೇಶದಂತೆ ವಾಯುದೇವರ ಆವೇಶದಿಂದ ಕೂಡಿ, ಅದರ ಬಲದಿಂದ ಉನ್ಮತ್ತರಾದ ಅವರಿಬ್ಬರು (ಪ್ರಲಯ)ಜಲದಲ್ಲಿ ಬೇಗನೇ ಬೆಳೆಯತೊಡಗೊದರು; ಕ್ರೀಡಿಸುವ ಬಯಕೆಯಿಂದ ಹುಟ್ಟಿದ ನಿನ್ನ ಆದೇಶದಂತೆ ಕೊಡಲ್ಪಟ್ಟ ಬ್ರಹ್ಮವರದಿಂದಾಗಿ ಅವಧ್ಯರಾಗಿದ್ದ ಅವರು ಬ್ರಹ್ಮನ ಮುಖದಿಂದ ಹೊರಹೊಮ್ಮಿದ ವೇದಗಳ ಸಮುದಾಯವನ್ನು ಅಪಹರಿಸಿದರು; ಆಗ ಸರ್ವಶಕ್ತನಾದ ನೀನು 'ಹಯಗ್ರೀವ'ನಾದೆ; ಸಕಲವೇದಗಳನ್ನು ಬ್ರಹ್ಮನಿಗೆ ಮರಳಿತಂದಿತ್ತು, ಆ ಇಬ್ಬರು ಕಳ್ಳರನ್ನು ನೀನು ನಿನ್ನ ತೊಡೆಯಮೇಲೆ ಮಲಗಿಸಿಕೊಂಡು ಕೈಗಳಿಂದ ಹೊಸಕಿ ಕೊಂದು ಹಾಕಿದೆ; ಮತ್ತು ಅವರ ಮೇದಸ್ಸಿನಿಂದ ನೀನು ಕ್ರಮವಾಗಿ 'ಮೇದಿನಿ'ಯನ್ನು ನಿರ್ಮಿಸಿದೆ.

ಹೀಗೆ ದೇವತೆಗಳ ಬಲವು ಸಹಜವಾದದು; ಮತ್ತು ಅದರಂತೆ ಅಸುರರ ಬಲವು ವರದಿಂದ ಬಂದಂತಹುದು; ಇಂತಹ ಉಭಯವಿಧ ಬಲವು ಸಹ ನಿನ್ನ ಅಧೀನ; ಆದ್ದರಿಂದ ತಂದೆಯಾದ ನಿನಗೇ ನಾವೀಗ ಎಲ್ಲವನ್ನು ಅರಿಕೆ ಮಾಡಿಕೊಳ್ಳುತ್ತಿರುವೆವು; ವರದಿಂದ ಕೊಬ್ಬಿರುವ ಈ ಇಬ್ಬರು ರಾಕ್ಷಸರನ್ನು ನರರೂಪರಲ್ಲಿ ಅವತರಿಸಿ ನಿನ್ನ ಸಾಮರ್ಥ್ಯದಿಂದ ಸಂಹರಿಸು.'' ಹೀಗೆ ಆ ಸಕಲ ಸುರರಾಜರಿಂದ ಪ್ರಾರ್ಥಿತನಾದ ವಿಶ್ವಸ್ವಾಮಿಯೂ ಸರ್ವಸಮರ್ಥನೂ ಆದ ಶ್ರೀಹರಿ 'ಶ್ರೀರಾಮ'ರೂಪದಿಂದ ಅವತರಿಸಿದ.

ವಿ: ೧) ರಾವಣಕುಂಭಕರ್ಣರ ಹಾವಳಿಯಿಂದ ನೊಂದ ದೇವಶ್ರೇಷ್ಠರು ಮಾಡಿದ ಶ್ರೀಹರಿಯ ಪ್ರಾರ್ಥನೆಯಿದು.

೨) ಅತೀತಾನಾಗತರಾದ ಅನಂತಾನಂತಬ್ರಹ್ಮರು ಈಗಿನ ಬ್ರಹ್ಮನಂತೆ ಸರ್ವಾತ್ಮನಾ ಭಗವಧೀನರು; ಎಂದ ಮೇಲೆ ಆ ಶ್ರೀಹರಿಯೇ ಸರ್ವೋತ್ತಮ ಎಂದು ಭಾವ.

೩) ಮನುಷ್ಯ ಮಾನದ ೩೬೦ ವರ್ಷಗಳು ದೇವತೆಗಳಿಗೆ ಒಂದು ವರ್ಷ; ಅಂತಹ ದೇವಮಾನದ ಹನ್ನೆರಡುಸಾವಿರ ವರ್ಷಗಳಿಗೆ ಒಂದು ಮಹಾಯುಗ (ಒಂದು ಚತುರ್ಯುಗ) ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕುಯುಗಗಳಿಗೆ ಕ್ರಮವಾಗಿ ನಾಲ್ಕು, ಮೂರು, ಎರಡು

ಮತ್ತು ಒಂದು ಸಾವಿರ (ದೇವಮಾನದ) ವರ್ಷಗಳು; ಮತ್ತು ಆ ನಾಲ್ಕುಯುಗಗಳಿಗೆ ಕ್ರಮವಾಗಿ ಎಂಟು, ಆರು, ನಾಲ್ಕು ಮತ್ತು ಎರಡುನೂರು ವರ್ಷಗಳು ಸಂಧಿಕಾಲ (ಒಟ್ಟು ಸಂಧಿಕಾಲ ಎರಡು ಸಾವಿರ ವರ್ಷಗಳು) ಹೀಗೆ ಚತುರ್ಯುಗಗಳಿಗೆ ಒಟ್ಟಾಗಿ ದೇವಮಾನದ ಹನ್ನೆರಡುಸಾವಿರ ವರ್ಷಗಳು (ಮನುಷ್ಯಮಾನದ ೪೩,೨೦,೦೦೦ ವರ್ಷಗಳು) ಎಂದು ಭಾವ. ಅಂತಹ ಸಾವಿರ ಚತುರ್ಯುಗಗಳು ಬ್ರಹ್ಮದೇವರ ಒಂದು ಹಗಲು. ಅಷ್ಟೇ ಕಾಲದ್ದು ರಾತ್ರಿ. ಹೀಗೆ ನೂರುವರ್ಷ.

೪) ಮಧುಕೈಟಭರು ಶ್ರೀಹರಿಯ ಬೆವರಹನಿಯಿಂದ ಹುಟ್ಟಿದರು ಎಂದು ಹಯಶೀರ್ಷ ಪಂಚರಾತ್ರದಲ್ಲಿದೆ; ಕರ್ಣಪುಟದಿಂದ ಜನಿಸಿದರು ಎಂದು ಮಾರ್ಕಂಡೇಯಪುರಾಣದಲ್ಲಿದೆ; ಕರ್ಣಮಲದಿಂದ ಹುಟ್ಟಿದರು ಎಂದು ಪಂಚರಾತ್ರದಲ್ಲಿದೆ; ಶ್ರೀಹರಿಯ ಕರ್ಣಪುಟದ ಬಳಿಯ (ಮಾಯಾನಿರ್ಮಿತ) ಮಲರೂಪ ಬೆವರುಹನಿಯಿಂದ ಜನಿಸಿದರು ಎಂದು ಅರ್ಥಮಾಡಿಕೊಂಡರೆ ಯಾವ ವಿರೋಧವೂ ಬರುವುದಿಲ್ಲ ಎಂದು ಜನಾರ್ದನೀಯದಲ್ಲಿದೆ

೫) ಮಧುಕೈಟಭರಲ್ಲಿ ಶ್ರೀವಾಯುದೇವರ ಆವೇಶಕ್ಕೂ, ಮತ್ತು ಅವರಿಬ್ಬರಿಗೆ ಬ್ರಹ್ಮದೇವರು ವರನೀಡುವುದಕ್ಕೂ ಸಹ ಶ್ರೀಹರಿಯ ಆದೇಶವೇ ಕಾರಣ ಎಂಬುದನ್ನು **'ತ್ವದಾಜ್ಞಯಾ'** ಎಂಬ ಪದದಿಂದ ಸ್ಪಷ್ಟಪಡಿಸಿರುವರು.

೬) ಭೂಮಿಯು ಹೀಗೆ ಅಸುರರ ಮೇದಸ್ಸಿನಿಂದ ನಿರ್ಮಿತವಾಗಿರುವುದರಿಂದ ಅಪವಿತ್ರ; ಆದ್ದರಿಂದ ಅದರ ಪಾವಿತ್ರ್ಯಕ್ಕಾಗಿ ಗೋಮಯಲೇಪನ ಅವಶ್ಯಕ ಎಂಬ ವಿಶೇಷಾಂಶ ನಾರದೀಯ ಪುರಾಣದಲ್ಲಿ ಬಂದಿದೆ.

ಶ್ರೀರಾಮಾವತಾರ

ಸ ಕಶ್ಯಪಸ್ಯಾದಿತಿಗರ್ಭಜನ್ಮನೋ
ವಿವಸ್ವತಸ್ತಂತುಭವಸ್ಯ ಭೂಭೃತಃ ।
ಗೃಹೇ ದಶಸ್ಯಂದನನಾಮಿನೋಽಭೂತ್
ಕೌಸಲ್ಯಕಾನಾಮ್ನಿ ತದರ್ಥಿತೇಷ್ಟಃ ॥ ೬೩ ॥

ಅ: ಕಶ್ಯಪನಿಂದ ಅದಿತಿಯಲ್ಲಿ ಜನಿಸಿದ ಸೂರ್ಯವಂಶದಲ್ಲಿ ಹುಟ್ಟಿದ 'ದಶರಥ' ಎಂಬ ರಾಜನ ಕೌಸಲ್ಯಾ ಎಂಬ ಪತ್ನಿಯಲ್ಲಿ ಅದಕ್ಕೆಂದೇ ಯಜ್ಞದಿಂದ ಆರಾಧಿತನಾಗಿ ಶ್ರೀರಾಮ ಅವತರಿಸಿದ.

ವಿ: ೧) ಕಶ್ಯಪರಿಂದ ಅದಿತಿಯಲ್ಲಿ ಜನಿಸಿದವನು ಸೂರ್ಯ; ದಶರಥ ಆ ಸೂರ್ಯ–ವಂಶದಲ್ಲಿ ಬಂದ ಒಬ್ಬ ರಾಜ; ಕೌಸಲ್ಯೆ ಅವನ ಒಬ್ಬ ಪತ್ನಿ; ಅವಳಲ್ಲಿ ಅದಕ್ಕೆಂದೇ ಯಜ್ಞದಿಂದ ಆರಾಧಿತನಾಗಿ ಶ್ರೀರಾಮ ಅವತರಿಸಿದ.

೨) ದಶರಥನು ಸ್ವಾಯಂಭುವಮನುವಿನ ಅವತಾರ ಎಂಬುದಾಗಿ ಪದ್ಮಪುರಾಣದಲ್ಲಿದೆ ಎಂದು ಶ್ರೀನಾರಾಯಣಪಂಡಿತಾಚಾರ್ಯರು ತಮ್ಮ 'ಅಂಶಾತಾರ ಕೃತಿಯಲ್ಲಿ ಬರೆದಿರುವರು.

''ರಾಜಾ ದಶರಥಃ ಪೂರ್ವಂ ಮನುಃ ಸ್ವಾಯಂಭುವಃ ಸ್ಮೃತಃ ।
ಉಕ್ತಂ ಪದ್ಮಪುರಾಣೇ ತು ಅವತಾರಪ್ರಸಂಗತಃ'' ॥ – (ಶ್ಲೋ. ೩೬)

''ತಸ್ಯಾಭೂತ್ ಪ್ರಥಮಂ ಜನ್ಮ ಮನೋಃ ಸ್ವಾಯಂಭುವಸ್ಯ ಚ ।
ರಘೂಣಾಮನ್ವಯೇ ಪೂರ್ವಂ ರಾಜಾ ದಶರಥೋ ಹ್ಯಭೂತ್ ॥
ದ್ವಿತೀಯೇ ವಸುದೇವೋಽಭೂತ್ ವೃಷ್ಣೀನಾಮನ್ವಯೇ ಪುನಃ ॥''
– (ಪದ್ಮಪುರಾಣ ಉತ್ತರ ಖಂಡ)

ಆದರೆ ವಾಮನಪುರಾಣದಲ್ಲಿ ದಶರಥನು ವೈವಸ್ವತಮನುವಿನ ಅವತಾರ ಎಂದು ಉಕ್ತವಾಗಿದೆ:

ಭವಿಷ್ಯದಂತರೇ ಭೂತ್ವಾ ಮನುರ್ವೈವಸ್ವತೋ ಭವಾನ್ ।
ತವ ವಂಶೇ ಭವಾನ್ಕಂಗ ರಾಮೋ ದಾಶರಥಿಃ ಸ್ವಯಮ್ ॥
ಪುನರ್ದಶರಥೋ ಭೂತ್ವಾ ತ್ವಮೇವಾಸಿ ಪಿತಾ ಮಮ ।
ಮದ್ದತ್ತಪಿಂಡದಾನೇನ ಮುಕ್ತಿಸ್ತೇ ಭವಿತಾ ಧ್ರುವಮ್ ॥ –(ವಾಮನಪುರಾಣ)

---

೬೩. ರಾಜಾ ದಶರಥಃ ಪೂರ್ವಂ ಮನುಃ ಸ್ವಾಯಂಭು ಸ್ಮೃತಃ ।
ಉಕ್ತಂ ಪದ್ಮಪುರಾಣೇ ತು ಅವತಾರಪ್ರಸಂಗತಃ ॥ – ಅಂಶಾವತಾರ

ತಸ್ಯಾಸೀತ್ಪ್ರಥಮಂ ಜನ್ಮ ಮನೋಃ ಸ್ವಾಯಂಭುವಸ್ಯ ಚ ।
ರಘೂಣಾಮನ್ವಯೇ ಪೂರ್ವಂ ರಾಜಾ ದಶರಥೋ ಹ್ಯಭೂತ್ ॥
ದ್ವಿತೀಯೇ ವಸುದೇವೋಽಭೂತ್ ವೃಷ್ಣೀನಾಮನ್ವಯೇ ಪುನಃ ॥ – ಇತಿ ಪದ್ಮಪುರಾಣ ಉತ್ತರಖಂಡ

ಭವಿಷ್ಯದಂತರೇ ಭೂತ್ವಾ ಮನುರ್ವೈವಸ್ವತೋ ಭವಾನ್ ।
ತವ ವಂಶೇ ಭವಾನ್ಕಂಗ ರಾಮೋ ದಾಶರಥಿಃ ಸ್ವಯಮ್ ॥
ಪುನರ್ದಶರಥೋ ಭೂತ್ವಾ ತ್ವಮೇವಾಸಿ ಪಿತಾ ಮಮ ।
ಮದ್ದತ್ತಪಿಂಡದಾನೇನ ಮುಕ್ತಿಸ್ತೇ ಭವಿತಾ ಧ್ರುವಮ್ ॥ - ವಾಮನ

ಯದುತ್ತರಕಾಂಡೇ ಪದ್ಮಪುರಾಣವಚನಂ ತದ್ವಸುದೇವಸಹಚರ್ಯಾದಾವೇಶಪರಮಿತ್ಯಾಹುಃ । – (ಜ.)

೬೩. ಧೃತಾಮೇವ ಬಿಭರ್ತೀಶೋ ಹ್ಯವತಾರತನುಂ ಸದಾ ।
ಬಿಭರ್ತೀತ್ಯುಚ್ಯತೇಽಥಾಪಿ ಮೋಹಾಯ ವ್ಯಕ್ತಪೇಕ್ಷಯಾ । ತತ್ವನಿರ್ಣಯೇ । – ಭಾ.ತಾ.(೧೦/೩೮/೧೭)

ದಶರಥನು ವೈವಸ್ವತಮನುವಿನ ಅವತಾರ; ಅವನಲ್ಲಿ ಸ್ವಾಯಂಭುವಮನುವಿನ ಆವೇಶ ಎಂಬುದಾಗಿ ಬರೆದು, ಜನಾರ್ದನಭಟ್ಟರು ಈ ವಾಕ್ಯಗಳ ಸಮನ್ವಯ ಮಾಡಿರುವರು.

'ಯದುತ್ತರಕಾಂಡೇ ಪದ್ಮಪುರಾಣವಚನಮ್ ।
ತದ್ವಸುದೇವಸಾಹಚರ್ಯಾದಾವೇಶಪರಮಿತ್ಯಾಹುಃ ॥' – (ಜ.)

ನರ ವಾನರರಾಗಿ ದೇವತೆಗಳ ಅವತಾರ

ತದಾಜ್ಞಯಾ ದೇವಗಣಾ ಬಭೂವಿರೇ
ಪುರೈವ ಪಶ್ಚಾದಪಿ ತಸ್ಯ ಭೂಮ್ನಃ ।
ನಿಷೇವಣಾಯೋರುಗುಣಸ್ಯ ವಾನರೇ-
ಷ್ವಥೋ ನರೇಷ್ವೇವ ಚ ಪಶ್ಚಿಮೋದ್ಭವಾಃ ॥ ೬೪ ॥

ಅ: ಆ ಪೂರ್ಣನೂ, ಮಹಾಗುಣನೂ ಆದ ಶ್ರೀಹರಿಯ ವಿಶೇಷಸೇವೆಗೆಂದು ಅವನ ಆದೇಶದಂತೆ ದೇವಗಣಗಳು ಸಹ ಅವತರಿಸಿದವು; ವಾನರರಲ್ಲಿ ಅವನಿಗಿಂತ ಮುಂಚೆಯೂ ಅವನ ಅನಂತರವೂ ಅವತರಿಸಿದರೆ ನರರಲ್ಲಿ ಮಾತ್ರ ಅವನ ಅನಂತರವೇ ಅವತರಿಸಿದರು.

ವಿ: ೧) ಶ್ರೀರಾಮರೂಪದ ಶ್ರೀಹರಿಯಸೇವೆಗೆಂದು ದೇವತೆಗಳು ಸಹ ನರರಲ್ಲಿ ಮತ್ತು ವಾನರರಲ್ಲಿ ಅವತರಿಸಿದರು; ವಾನರರಲ್ಲಿ ಹೆಚ್ಚುಜನ ಅವತರಿಸಿದ್ದು ಶ್ರೀರಾಮಾವತಾರಕ್ಕಿಂತ ಮುಂಚಿತವಾಗಿ; ಆದರೆ ಅವನ ಅನಂತರವೂ ಕೆಲವರು ಹುಟ್ಟಿದರು; ಮನುಷ್ಯರಲ್ಲಿ ಮಾತ್ರ ಅವನ ಅನಂತರವೇ ಹೆಚ್ಚು ಜನ ಅವತರಿಸಿದರು.

೨) ಮೈಂದ, ವಿವಿದ, ವಾಲಿ, ಸುಗ್ರೀವ ಮತ್ತು ಹನುಮಂತ ಮೊದಲಾದವರು ಶ್ರೀರಾಮನಿಗಿಂತ ಮುಂಚೆ ಅವತರಿಸಿದರೆ, ಅಂಗದ ಮೊದಲಾದವರು ಅನಂತರ ಅವತರಿಸಿದರು; ಲಕ್ಷ್ಮಣಾದಿಗಳು ಮಾತ್ರ ಶ್ರೀರಾಮನ ಅನಂತರವೇ ಅವತರಿಸಿದರು ಎಂದು ತಿಳಿಯಬೇಕು.

---

೬೪. 'ನ ದೇವಾನಾಂ ನ ದೇವೀನಾಂ ಸಾಮಸ್ತ್ಯೇನ ಜನಿರ್ಭುವಿ ।
ಅಂಶಾಂಶೇನೈವ ಜಾಯಂತೇ ಸರ್ವೇ ತ್ವಾಜಾನಜಾದಯಃ' ॥ – ಭಾ.ತಾ.(೧/೧೨/೧೫)

೬೪. ಪುರೈವ ಇತ್ಯತ್ರ ಪುರೈವ ವಾನರೇಷು ಬಭೂವಿರೇ । ತಸ್ಯೈವ ಬಾಹುಲ್ಯಸೂಚನಾಯ ಏವಶಬ್ದಃ । ಮೈಂದವಿವಿದಜಾಂಬವದಾದೀನಾಂ ವಾಲಿಸುಗ್ರೀವಹನುಮದಾದೀನಾಂ ಪ್ರಧಾನಾನಾಂ ಪ್ರಥಮಮೇವೋತ್ಪನ್ನತ್ವಾತ್ । ದ್ವೀಪೇ ದ್ವೀಪೇ ಕೇಚನ ಅಂಗದಾದ್ಯಾಃ ಭೂಮ್ನಃ ಪಶ್ಚಾದಪಿ ಅವತಾರಾತ್ ಪಶ್ಚಾದಪಿ ವಾನರೇಷು ಬಭೂವಿರೇ ।–(ವಾ.)

ನರೇಷು ಜಾತಾ ಲಕ್ಷ್ಮಣಾದ್ಯಾಃ ಪಶ್ಚಿಮೋದ್ಭವಾಃ । ಪಶ್ಚಾದುತ್ಪನ್ನಾ ಏವ । ಅಸುರಜಾತೌ ವಿಭೀಷಣ-ವ್ಯಾವರ್ತನಾಯ ನರೇಷ್ವಿತ್ಯುಕ್ತಮ್ । – (ವಾ.)

೩) ಕರಡಿ ಮೊದಲಾದ ಇತರ ಅನೇಕಯೋನಿಗಳಲ್ಲೂ ಅವತರಿಸಿದರು ಎಂಬುದಾಗಿ ವಾಲ್ಮೀಕಿರಾಮಾಯಣ ಮತ್ತು ಸಂಗ್ರಹರಾಮಾಯಣಗಳಲ್ಲಿ ಉಕ್ತವಾಗಿದೆ.

೪) ಜಾಂಬವಂತನು ಮೊದಲೇ ಅವತರಿಸಿದವನಾದರೂ ಅವನು ಹುಟ್ಟಿದ್ದು ಕಪಿಯಾಗಿ ಅಲ್ಲ, ಕರಡಿಯಾಗಿ; ವಿಭೀಷಣನು ಹುಟ್ಟಿದ್ದು ಸಹ ಮುಂಚಿತವಾಗಿಯೇ ಆದರೂ ಅವನು ಹುಟ್ಟಿದ್ದು ರಾಕ್ಷಸಕುಲದಲ್ಲಿ.

ಹನುಮಂತನಾಗಿ ವಾಯು- ವಾಲಿಯಾಗಿ ಇಂದ್ರ

ಸ ದೇವತಾನಾಂ ಪ್ರಥಮೋ ಗುಣಾಧಿಕೋ
ಬಭೂವ ನಾಮ್ನಾ ಹನುಮಾನ್ ಪ್ರಭಂಜನಃ ।
ಸ್ವಸಂಭವಃ ಕೇಸರಿಣೋ ಗೃಹೇ ಪ್ರಭು-
ರ್ಬಭೂವ ವಾಲೀ ಸ್ವತ ಏವ ವಾಸವಃ ॥ ೬೫ ॥

ಅ: ದೇವತೆಗಳಲ್ಲಿ ಮೊದಲಿಗನೂ, ಗುಣದಲ್ಲಿ ಇತರರಿಗಿಂತ ಮಿಗಿಲಾದವನೂ ಪ್ರಭುವೂ ಆದ ವಾಯುವು ಕೇಸರಿನಾಮಕ ಕಪಿಯ ಪತ್ನಿಯಲ್ಲಿ ತನ್ನಿಂದಲೇ 'ಹನುಮಂತ' ಎಂಬ ಹೆಸರಿನಿಂದ ಅವತರಿಸಿದ; ಇಂದ್ರನು ತನ್ನಿಂದಲೇ 'ವಾಲಿ' ಯಾಗಿ ಜನಿಸಿದ.

ವಿ: ೧) ವಾನರರಲ್ಲಿ ಅವತರಿಸಿದ ಪ್ರಧಾನದೇವತೆಗಳ ವಿವರಗಳನ್ನು ಇಲ್ಲಿಂದ ಕೆಲವು ಶ್ಲೋಕಗಳಲ್ಲಿ ನೀಡಿರುವರು.

೨) ಕೇಸರಿಯು ಒಬ್ಬ ಮರುದ್ದೇವತೆಯ ಅವತಾರ; ಅಂಜನೆಯು ಪುಂಜಕಸ್ಥಲೀ ಎಂಬ ಅಪ್ಸರೆಯ ಅವತಾರ.

---

೬೫. ವಾಲಿಸುಗ್ರೀವಯೋರ್ಮಾತಾ ಅಪ್ರಸಿದ್ಧತ್ವಾನ್ನೋಕ್ತಾ। -(ವಾ)

೬೫. ಕಪಿಯೋನೇರ್ಹೀನಯೋನಿತ್ವೇನ ಪಾಪಫಲತ್ವಶಂಕಾಪರಿಹಾರಾಯಾಹ ಸ್ವಸಂಭವ ಇತಿ । ಸ್ವಸ್ಮಾದೇವ ಸ್ವೇಚ್ಛಯಾ ಇತಿ ಯಾವತ್ । ಸಂಭವಃ ಉತ್ಪತ್ತಿರ್ಯಸ್ಯ ಸ ತಥೋಕ್ತಃ । ಸ್ವತ ಏವ ಸ್ವೇಚ್ಛಯೈವ ಸ್ವತಂತ್ರ-ಹರ್ಯಾ ೃಪಿ ಜ್ಞಾತವ್ಯಮ್ ।
-(ವಾ.)

೬೫. ವಾನರಃ ಕೇಸರೀ ನಾಮಾ ಧ್ರುವೋ ನಾಮ ಮರುತ್ಸುತಃ । (೧೭)
ಅಂಜನಾ ಹನುಮನ್ಮಾತಾ ಹ್ಯಪ್ಸರಾ ಪುಂಜಕಸ್ಥಲೀ ॥ (೮)
-ನಾರಾಯಣಪಂಡಿತಾಚಾರ್ಯಕೃತ 'ಅಂಶಾವತಾರ'

ಕೇಸರಿಣಃ– ಮರುತ್ಪವರಾವತಾರಭೂತಕಪೇಃ । -(ಜ)

೬೫. ವಾಲಿಸಾಂಬಾದಯಶ್ಚೈವ ಕಿಂಚಿದಾವೇಶಿನೋ ಹರೇಃ। -(ಮ. ಭಾ. ತಾ. ನಿ. ೨/೩೪)

೩) ಭರದ್ವಾಜಾದಿಮುನಿಗಳ ತಪಸ್ಸಿಗೆ ಅಡ್ಡಿ ಉಂಟುಮಾಡುತ್ತಿದ್ದ ರಾಕ್ಷಸನೊಬ್ಬನನ್ನು ಕೇಸರಿಯು ಸಂಹರಿಸಿದ್ದನಂತೆ; ಅದರಿಂದ ಪ್ರಸನ್ನರಾದ ಅವರ ವರದಿಂದ ಕೇಸರಿಯು 'ಹನುಮಂತ'ನ ತಂದೆ ಎನ್ನಿಸಿಕೊಳ್ಳುವ ಭಾಗ್ಯಶಾಲಿಯಾದನು ಎಂಬ ವಿವರ ಸುಮಧ್ವ-ವಿಜಯಭಾವಪ್ರಕಾಶಿಕೆಯಲ್ಲಿದೆ :

ತೀರ್ಥವಿಘ್ನಕರಂ ದುಷ್ಟಗಜಂ ಹತ್ವಾ ಪ್ರತೋಷಿತಾಃ ।
ಭರದ್ವಾಜಾದಯೋ ಧನ್ಯಂ ಪುತ್ರಂ ಕೇಸರಿಣೋ ದದುಃ ॥ – (೧/೯)

---

೬೫. ಸ್ವಸಂಭವ ಇತಿ ॥ ಬ್ರಹ್ಮಾಂಡಪುರಾಣೇ ಭೃಗುನಾರದಸಂವಾದೇ ತೀರ್ಥಕಾಂಡೇ ವೇಂಕಟಗಿರಿಮಾಹಾತ್ಮ್ಯೇ ಪಂಚಮಾಧ್ಯಾಯೇ –

ವಾಯುವೀರ್ಯಂ ತತಃ ಶಂಭುರಥ ಪತ್ರಪುಟಾಂತರೇ ।
ಆದೃತ್ಯ ಸ ದದೌ ತಸ್ಯಾಃ ಅಂಜನಾಯಾಃ ಕರಾಂತರೇ ॥
ಮನ್ವಾನಾ ಭಕ್ಷ್ಯಮಿತ್ಯೇತತ್ ತದ್ಭಕ್ಷಿತವತೀತ್ಯಹೋ ॥

ಇತಿ ವಚನಾತ್ ಸ್ವಸಂಭವತ್ವಾನುಪಪತ್ತಿರಿತಿ ಚೇನ್ನ । ವಾಮನಪಂಚದಶಾಧ್ಯಾಯೇ ಉಕ್ತಮಾಹಾತ್ಮ್ಯೇ –

ತದೈವಾಸುರಪತ್ನೀನಾಂ ..... ಪಾತನಾತ್ ।
ರುದ್ರಂ ತ್ವಾಂ ಮುನಯಃ ಪ್ರಾಹುಃ ರುಧಿರಾಶ್ರುವಿಮೋಚನಮ್ ॥
ತವ ಸೂನುಂ ಹನೂಮಂತಂ ರುದ್ರವೀರ್ಯಂ ವಿದುರ್ಬುಧಾಃ ।
ರುದ್ರಾವತಾರ ಇತಿ ಚ ತ್ವಂ ಹನೂಮಾಂಶ್ಚ ತತೋ ಭವ ॥
ರುದ್ರಾವತಾರಂ ಕೇಚಿತ್ ತು ರುದ್ರವೀರ್ಯಂ ತು ಕೇಚನ ।
ಅಜ್ಞಾಯೈವ ವದಂತಿ ತ್ವಾಂ ಜ್ಞಾನಿನಃ ಪವನಾತ್ಮಜಮ್ ॥

ಇತಿ ವಾಯುಂ ಪ್ರತಿ ಶ್ರೀವರಾಹವಚನಾತ್ ಬ್ರಹ್ಮಾಂಡವಚನಂ ಮೋಹನಾರ್ಥಂ ಪ್ರವೃತ್ತಮ್ ।

ವಾಮನೇ ಶ್ರೀಮುಷ್ಣಮಾಹಾತ್ಮ್ಯೇ ಪಂಚಮೇऽಧ್ಯಾಯೇ –

ಶೃಣು ವಾಯೋ ಮಹಾಸತ್ತ್ವ ಹನೂಮಾನ್ ತ್ವಂ ಕಪಿರ್ಭವ ।
ಕಪೀನಾಂ ರಾಜಕೋ ಭೂಯಾಃ ಕಪಿಶ್ರೇಷ್ಠೋ ಭವಾಶು ಚ ॥
ಆಕಲ್ಪಜೀವೀ ಭೂತ್ವಾ ತ್ವಂ ಪುನರ್ಬ್ರಹ್ಮತ್ವಮೇಷ್ಯಸಿ । – ಇತ್ಯಾದಿ ವಾರಾಹೇ ।

ಶ್ರೀಮುಷ್ಣ್ಯಮಾಹಾತ್ಮ್ಯೇ ಪ್ರಥಮೇ –

ಅಷ್ಟಾವಿಂಶತಿಸಂಖ್ಯಾನಿ ವಿಮಾನಾನಿ ಮಹೀತಲೇ ।
ಸ್ವಯಂ ವ್ಯಕ್ತವಿಮಾನಾನಿ ವಾಯುನಾ ಪೂಜಿತಾನಿ ಚ ॥
ತೇನ ಪುಣ್ಯಪ್ರಭಾವೇನ ಸ ಭೂತ್ವಾ ಹನುಮಾನ್ ಕಪಿಃ ।
ತತ್ರ ರಾಮಪ್ರಸಾದೇನ ಸಂಪ್ರಾಪ್ತೋ ಬ್ರಹ್ಮಣಃ ಪದಮ್ ॥ ಇತಿ ॥ – (ಶ್ರೀ.)

೬೫. ಸರ್ವವಾನರಮುಖ್ಯೇಷು ಬುದ್ಧಿಮಾನ್ ಬಲವಾನಪಿ ॥ – ವಾ. ರಾ. (೧/೧೭/೧೭)

೬೬. ಪರಮೇಷ್ಠಿನಃ ಬ್ರಹ್ಮಣಃ ತೇಜಸಾ ಆವೇಶೇನ ಯುತಃ । –(ಜ)

೫) ಕಪಿಯೋನಿಯು ಸಾಮಾನ್ಯವಾಗಿ ಹೀನಯೋನಿಯಾದರೂ, ಶ್ರೀವಾಯುದೇವರು ಹನುಮಂತನಾಗಿ ಅವತರಿಸಿದ್ದು ಯಾವುದೇ ಪಾಪಫಲದಿಂದಲ್ಲ; ಶ್ರೀಹರಿಯ ಆದೇಶದಿಂದ ಅವನನ್ನು ವಿಶೇಷವಾಗಿ ಆರಾಧಿಸಬೇಕೆಂಬ ಬಯಕೆಯಿಂದ ಮಾತ್ರ ಎಂಬುದನ್ನು 'ಸ್ವಸಂಭವಃ' ಎಂಬುದಾಗಿ ಸೂಚಿಸಿರುವರು.

೬) ಹನುಮದವತಾರದ ವಿವರಗಳು ವಾಲ್ಮೀಕಿರಾಮಾಯಣದಲ್ಲೂ, ಭವಿಷ್ಯೋತ್ತರ ಪುರಾಣ, ಮಾರ್ಕಂಡೇಯಪುರಾಣ, ಮೊದಲಾದ ಪುರಾಣಗಳಲ್ಲೂ ಶ್ರೀವೆಂಕಟೇಶಮಾಹಾತ್ಮ್ಯ ಪ್ರಸಂಗದಲ್ಲೂ ದೊರೆಯುತ್ತವೆ.

೭) ವಾಲಿಯಲ್ಲಿ ಶ್ರೀಹರಿಯ ಕಿಂಚಿತ್ ಆವೇಶವೂ ಇದ್ದಿತು (೨/೩೩).

ಸುಗ್ರೀವ, ಜಾಂಬವಂತರ ಉತ್ಪತ್ತಿ

ಸುಗ್ರೀವ ಆಸೀತ್ ಪರಮೇಷ್ಠಿತೇಜಸಾ
ಯುತೋ ರವಿಃ ಸ್ವಾತ್ಮತ ಏವ ಜಾಂಬವಾನ್।
ಯ ಏವ ಪೂರ್ವಂ ಪರಮೇಷ್ಠಿವಕ್ಷಸ-
ಸ್ತ್ವಗುದ್ಭವೋ ಧರ್ಮ ಇಹಾಸ್ಯತೋಽಭವತ್ ॥ ೬೬ ॥

ಯ ಏವ ಸೂರ್ಯಾತ್ ಪುನರೇವ ಸಂಜ್ಞಯಾ
ನಾಮ್ನಾ ಯಮೋ ದಕ್ಷಿಣದಿಕ್ಪ ಆಸೀತ್ ।
ಸ ಜಾಂಬವಾನ್ ದೈವತಕಾರ್ಯದರ್ಶಿನಾ
ಪುರೈವ ಸೃಷ್ಟೋ ಮುಖತಃ ಸ್ವಯಂಭುವಾ ॥ ೬೭ ॥

---

೬೬. ಜಾಂಬವಾನಾಸೀತ್ । ಅತ್ರಾಪಿ ಪರಮೇಷ್ಠಿತೇಜಸಾಯುತಃ ಇತ್ಯೇತದನ್ವೇತವ್ಯಮಿತ್ಯಾಹುಃ । ಯಃ ಪೂರ್ವಂ ವಕ್ಷಸಸ್ತ್ವಗುದ್ಭವೋ ಧರ್ಮಃ ಸ ಇಹ ಪರಮೇಷ್ಠಿತೇಜಸಾ ಯುತಃ ಸನ್ ಆಸ್ಯತಃ ಬ್ರಹ್ಮಣೋ ಮುಖಾತ್ ಜಾಂಬವಾನಾಸೀತ್ ಇತಿ ಯೋಜನಾ । –(ವಾ)

೬೬. ಪರಮೇಷ್ಠಿವಕ್ಷಸಃ = ಬ್ರಹ್ಮಣೋ ವಕ್ಷಃಸ್ಥಲಸ್ಥತ್ವಗುದ್ಭವಃ ।
ವಕ್ಷಃಸ್ಥಲಸ್ಥತ್ವಗಿಂದ್ರಿಯಾತ್ ಉದ್ಭವಃ ಉತ್ಪತ್ತಿರ್ಯಸ್ಯ ಸಃ ।

೬೭. ದೈವತಕಾರ್ಯದರ್ಶಿನಾ = ಭವಿಷ್ಯದ್ರಾಮಾವತಾರಕಾರ್ಯಂ ಜಾನತಾ । –(ವ)

೬೬. ಜೃಂಭಭಾಣಸ್ಯ ಮೇ ವಕ್ತ್ರಾತ್ ಜಾಂಬವಾನುದಪದ್ಯತ ।
ಋಕ್ಷೋ ರಕ್ಷೋವಿನಾಶಾರ್ಥಂ ಧರ್ಮೋ ಧರ್ಮಧರಃ ಪುರಾ ॥ –ಸಂಗ್ರಹರಾಮಾಯಣ (೩/೧೪)

ಅ: ಸೂರ್ಯನು ಬ್ರಹ್ಮದೇವರ ಆವೇಶದಿಂದ ಕೂಡಿದವನಾಗಿ 'ಸುಗ್ರೀವ'ನಾಗಿ ತನ್ನಿಂದಲೇ ಅವತರಿಸಿದ. ಅದರಂತೆ 'ಯಮಧರ್ಮ'ನೇ 'ಜಾಂಬವಾನ್' ಎನ್ನಿಸಿದನು; ಯಮನು ಮೊದಲು ಅವತರಿಸಿದ್ದು ಬ್ರಹ್ಮದೇವರ ವಕ್ಷಸ್ಥಲದ ಬಳಿಯ ತ್ವಗಿಂದ್ರಿಯದಿಂದ; ನಂತರ ಜಾಂಬವಂತನಾಗಿ ಅವರ ಮುಖದಿಂದ.

ಆ ಯಮಧರ್ಮನೇ ಸೂರ್ಯನಿಂದ ಸಂಜ್ಞಾದೇವಿಯಲ್ಲಿ 'ಯಮ' ಎಂಬುದಾಗಿ ಅವತರಿಸಿ ದಕ್ಷಿಣದಿಕ್ಪಾಲಕನೆನ್ನಿಸಿದನು; ಆ ಜಾಂಬವಂತನು ದೇವಕಾರ್ಯವನ್ನು ಬಲ್ಲ ಬ್ರಹ್ಮನಿಂದ ಮುಖದಿಂದ ಹಿಂದೆಯೇ ಸೃಷ್ಟಿಸಲ್ಪಟ್ಟಿದ್ದ.

ವಿ: ೧) ಈ ಎರಡು ಶ್ಲೋಕಗಳಲ್ಲಿ ಸುಗ್ರೀವ ಮತ್ತು ಜಾಂಬವಂತರ ಅವತಾರ ಮತ್ತು ಅವರ ಸ್ವರೂಪಗಳ ವಿವರಗಳಿವೆ.

೨) **'ಪರಮೇಷ್ಠಿತೇಜಸಾ ಯುತಃ'** ಎಂಬುದನ್ನು ಶ್ರೀವಾದಿರಾಜರು ಜಾಂಬವಂತನಿಗೂ ಅನ್ವಯಿಸಿ ಅವನಲ್ಲೂ ಬ್ರಹ್ಮದೇವರ ಆವೇಶ ಉಂಟು ಎಂಬ ವ್ಯಾಖ್ಯಾನವೊಂದನ್ನು ಉಲ್ಲೇಖಿಸಿರುವರು.

೩) ಜಾಂಬವಂತನು ಶ್ರೀರಾಮಾವತಾರಕ್ಕಿಂತ ತುಂಬಾ ಮುಂಚಿತವಾಗಿಯೇ ದೇವಕಾರ್ಯವನ್ನು ಬಲ್ಲ ಬ್ರಹ್ಮದೇವರಿಂದ ಸೃಷ್ಟಿಸಲ್ಪಟ್ಟಿದ್ದನು.

ತಾರ ಮೊದಲಾದವರ ಜನನ

ಬ್ರಹ್ಮೋದ್ಭವಃ ಸೋಮ ಉತಾಸ್ಯ ಸೂನೋ-
ರತ್ರೇರಭೂತ್ ಸೋಽಂಗದ ಏವ ಜಾತಃ ।
ಬೃಹಸ್ಪತಿಸ್ತಾರ ಉತೋ ಶಚೀ ಚ
ಶಕ್ರಸ್ಯ ಭಾರ್ಯೈವ ಬಭೂವ ತಾರಾ ॥ ೬೮ ॥

---

೬೮. ಯಮವಚ್ಚಂದ್ರಸ್ಯಾಪಿ ಅಂಗದರೂಪೇಣ ಜನನಂ ತೃತೀಯಂ ಇತ್ಯಾಹಃ । –(ವ)

೬೮. ಸೋಮಸ್ಯಾಪಿ ಬ್ರಹ್ಮಣಃ ಶ್ರೋತ್ರಾದುತ್ಪತ್ತಿಃ ಅತ್ರಿನೇತ್ರಾದಪ್ಯುತ್ಪತ್ತಿರಸ್ತಿ ಇತಿ ಪೌರಾಣಿಕೀಂ ಕಥಾಂ ಸಂಗ್ರಹೀತುಂ ಇತ್ಥಮುದಿತಮಿತಿ ಜ್ಞೇಯಮ್ । –(ವಾ)

೬೮. ಅತ್ರಿನೇತ್ರಸಮುದ್ಭವ । - ಜಯಂತಿನಿರ್ಣಯ

೬೯. ಪುಲೋಮ್ನಃ - ತನ್ನಾಮ್ನಃ ಋಷೇಃ । –(ವ)

ಅ: ಬ್ರಹ್ಮದೇವರಿಂದ ಜನಿಸಿದ್ದ ಚಂದ್ರನೇ, ಅನಂತರ ಬ್ರಹ್ಮಪುತ್ರರಾದ ಅತ್ರಿಮುನಿಯಿಂದ ಮತ್ತೊಮ್ಮೆ ಜನಿಸಿದ್ದ; ಅವನೇ ಅಂಗದನಾಗಿ ಅವತರಿಸಿದ; ಬೃಹಸ್ಪತಿಯು ತಾರನೆಂದು ಅವತರಿಸಿದ; ಮತ್ತು ಇಂದ್ರಪತ್ನಿಯಾದ ಶಚಿಯೇ 'ತಾರೆ'ಯಾದಳು.

ವಿ: ೧) ಅಂಗದ, ತಾರಾ ಮತ್ತು ತಾರೆ ಎಂಬ ಮೂವರ ಅವತಾರ ಮತ್ತು ಅವರ ಸ್ವರೂಪಗಳನ್ನು ಈ ಶ್ಲೋಕದಲ್ಲಿ ತಿಳಿಸಿರುವರು.

೨) ಅಂಗದನು ವಾಲಿಪುತ್ರ, ತಾರೆ ವಾಲಿಪತ್ನಿ, ಮತ್ತು ತಾರ ತಾರೆಯಸೋದರ; ಈ ಮೂವರೂ ಕ್ರಮವಾಗಿ ಚಂದ್ರ, ಶಚೀ ಮತ್ತು ಬೃಹಸ್ಪತಿ ಇವರ ಅವತಾರ ಎ ಂದು ಭಾವ.

೩) ಜಾಂಬವಂತನು ಯಮನ ಮೂರನೆಯ ರೂಪವಾಗಿರುವಂತೆ, ಅಂಗದನು ಚಂದ್ರನ ಮೂರನೆಯ ರೂಪನಾಗಿರುವನು.

೪) ಚಂದ್ರನು ಬ್ರಹ್ಮದೇವರ ಶ್ರೋತ್ರೇಂದ್ರಿಯದಿಂದ ಮೊದಲು ಹುಟ್ಟಿದ; ಅನಂತರ ಅತ್ರಿಮುನಿಯ ನೇತ್ರೋದ್ಭವನಾದ ಎಂದು ಪುರಾಣದ ಕಥೆಯುಂಟು. ಅತ್ರಿಪುತ್ರ ಚಂದ್ರನಲ್ಲಿ ಅವರ ಸನ್ನಿಧಾನವಿರುವುದರಿಂದ, ಅವನ ಅವತಾರವಾದ ಅಂಗದನಲ್ಲೂ ಅವರ ಸನ್ನಿಧಾನವಿದೆ ಎಂಬುದು ಸಹ ಇದರಿಂದ ಸೂಚಿತವಾಗುತ್ತದೆ. ಅಂಗದನು ತುಂಬಾ ಬಲಾಢ್ಯನೆನ್ನಿಸಲು ಇದೂ ಒಂದು ಮುಖ್ಯಕಾರಣ.

ಬೃಹಸ್ಪತಿರ್ಬ್ರಹ್ಮಸುತೋಽಪಿ ಪೂರ್ವಂ
ಸಹೈವ ಶಚ್ಯಾ ಮನಸೋಽಭಜಾತಃ ।
ಬ್ರಹ್ಮೋದ್ಭವಸ್ಯಾಂಗಿರಸಃ ಸುತೋಽಭೂ-
ನ್ಮಾರೀಚಜಸ್ಯೈವ ಶಚೀ ಪುಲೋಮ್ನಃ ॥ ೬೯ ॥

ಸುಷೇಣನಾಗಿ ವರುಣ, ಮೈಂದ ವಿವಿದರಾಗಿ ಅಶ್ವಿನೀ ದೇವತೆಗಳು

ಸ ಏವ ಶಚ್ಯಾ ಸಹ ವಾನರೋಽಭೂತ್
ಸ್ವಸಂಭವೋ ದೇವಗುರುರ್ಬೃಹಸ್ಪತಿಃ ।
ಅಭೂತ್ ಸುಷೇಣೋ ವರುಣೋಽಶ್ವಿನೌ ಚ
ಬಭೂವತುಸ್ತೌ ವಿವಿದಶ್ಚ ಮೈಂದಃ ॥ ೭೦ ॥

ಬ್ರಹ್ಮೋದ್ಭವೌ ತೌ ಪುನರೇವ ಸೂರ್ಯಾ-
ದ್ಬಭೂವತುಸ್ತತ್ರ ಕನೀಯಸಸ್ತು।
ಆವೇಶ ಐಂದ್ರೋ ವರದಾನತೋಽಭೂತ್
ತತೋ ಬಲೀಯಾನ್ ವಿವಿದೋ ಹಿ ಮೈಂದಾತ್ ॥ ೭೧ ॥

ಅ: ಬೃಹಸ್ಪತಿ ಬ್ರಹ್ಮಪುತ್ರ; ಮೊದಲಿಗೆ ಶಚಿಯೊಂದಿಗೆ (ಬ್ರಹ್ಮದೇವರ) ಮನಸ್ಸಿನಿಂದ ಹುಟ್ಟಿಬಂದಿದ್ದ; ಬ್ರಹ್ಮಪುತ್ರರಾದ ಅಂಗೀರಸ್ ಎಂಬ ಮುನಿಯ ಪುತ್ರರಾಗಿ ಅನಂತರ ಹುಟ್ಟಿದ; ಶಚಿಯು ಮರೀಚಿಮುನಿಯ ಪುತ್ರರಾದ ಕಶ್ಯಪರ ಪುತ್ರ 'ಪುಲೋಮ' ಎಂಬವನಿಂದ ಹುಟ್ಟಿದಳು.

ದೇವಗುರುವಾದ ಆ ಬೃಹಸ್ಪತಿಯೇ ಶಚಿಯೊಂದಿಗೆ ವಾನರನಾಗಿ ತನ್ನಿಂದಲೇ ಅವತರಿಸಿದ; ವರುಣ 'ಸುಷೇಣ'ನಾದ; ಮತ್ತು ಅಶ್ವಿನೀದೇವತೆಗಳು ಮೈಂದವಿವಿದರಾಗಿ ಜನಿಸಿದರು.

ಅಶ್ವಿನೀದೇವತೆಗಳು ಮೊದಲು ಬ್ರಹ್ಮದೇವರ ಮೂಗಿನ ಹೊರಳೆಗಳಿಂದ ಜನಿಸಿದ ಪುತ್ರರು; ಅನಂತರ ಸೂರ್ಯಪುತ್ರರಾಗಿ ಜನಿಸಿದರು. ವಿವಿದನಲ್ಲಿ ವರದಿಂದಾಗಿ ಇಂದ್ರದೇವರ ಆವೇಶವಿದ್ದಿತು; ಅದರಿಂದಾಗಿ ಅವನು ಮೈಂದನಿಗಿಂತಲೂ ಬಲಶಾಲಿ ಎನ್ನಿಸಿದನು.

ವಿ: ಹಾಗೆ ಅಶ್ವಿನೀದೇವತೆಗಳು ಸೂರ್ಯಪುತ್ರರಾಗಿ ಅವತರಿಸಿದ್ದು ಹೆಣ್ಣುಕುದುರೆಯ ರೂಪದಲ್ಲಿದ್ದ ಸಂಜ್ಞಾದೇವಿಯಲ್ಲಿ ಎಂಬ ವಿವರ ಹರಿವಂಶದಲ್ಲಿದೆ.

ನೀಲನಾಗಿ ಅಗ್ನಿ - ಭರತನಾಗಿ ಕಾಮ

ನೀಲೋಽಗ್ನಿರಾಸೀತ್ ಕಮಲೋದ್ಭವೋತ್ಥಃ
ಕಾಮಃ ಪುನಃ ಶ್ರೀರಮಣಾದ್ರಮಾಯಾಮ್।
ಪ್ರದ್ಯುಮ್ನನಾಮಾಽಭವದೇವಮೀಶಾತ್
ಸ ಸ್ಕಂದತಾಮಾಪ ಸ ಚಕ್ರತಾಂ ಚ ॥ ೭೨ ॥

---

೭೧. ಸೂರ್ಯಾತ್ ಬಡವಾರೂಪಿಣ್ಯಾಂ ಸೂರ್ಯಪತ್ನ್ಯಾಂ ಬಭೂವತುಃ । ... ಹೀತ್ಯನೇನ ಕೃಷ್ಣಾವತಾರೇ ನರಕಾಸುರಸಹಾಯೇನ ಬಹುಸತ್ತ್ವಕಾರಣಾತ್ ಬಲೀಯಸ್ತ್ವಂ ಪ್ರಸಿದ್ಧಮಿತ್ಯಾಹ। –(ವಾ.)

೭೨. 'ಕಮಲೋದ್ಭವೋತ್ಥಃ' ಇತ್ಯೇತದಾವರ್ತನೀಯಮ್। –(ಜ)

ಅ: ಬ್ರಹ್ಮದೇವರಿಂದ ಜನಿಸಿದ್ದ ಅಗ್ನಿ ನೀಲನಾದನು, ಬ್ರಹ್ಮನಿಂದ ಜನಿಸಿದ್ದ ಕಾಮ, ಶ್ರೀರಮಣನಾದ ಕೃಷ್ಣನಿಂದ ರುಕ್ಮಿಣೀರೂಪದ ರಮಾದೇವಿಯಲ್ಲಿ 'ಪ್ರದ್ಯುಮ್ನ' ಎಂಬುದಾಗಿ ಜನಿಸಿದ; ಇವನೇ ಶಿವನಿಂದ ಜನಿಸಿ 'ಸ್ಕಂದ' (ಷಣ್ಮುಖ) ಎನ್ನಿಸಿದನು; ಮತ್ತು ಸುದರ್ಶನಚಕ್ರಕ್ಕೆ ಅಭಿಮಾನಿದೇವತೆಯೂ ಆದ.

ವಿ: ೧) 'ನೀಲ' ಎಂಬ ಕಪಿ 'ಅಗ್ನಿ'ಯ ಅವತಾರವೆಂದು ತಿಳಿಸಿ, ಅನಂತರ ನರರೂಪದಲ್ಲಿ ಜನಿಸಿದ ಪ್ರಮುಖದೇವತೆಗಳ ವಿವರಗಳನ್ನು ಕೊಡಲು ಉಪಕ್ರಮಿಸಿರುವರು; 'ಭರತ'ನೆನ್ನಿಸಿ ಅವತಾರ ಮಾಡಿದವನು 'ಕಾಮ'(ಮನ್ಮಥ) ಎಂದು ತಿಳಿಸಲು ಅವನ ಬಗ್ಗೆ ಅನೇಕ ವಿವರಗಳನ್ನು ಕೊಟ್ಟಿರುವರು.

೨) ಇದರಂತೆ ವಿಶ್ವಕರ್ಮನು ನಳನಾಗಿಯೂ, ಪ್ರಾಣಾದಿಗಳು ಕ್ರಮವಾಗಿ ಗಜ, ಗವಾಕ್ಷ, ಗವಯ, ವೃಕ್ಷ ಮತ್ತು ಗಂಧಮಾದನ ಎಂಬ ಕಪಿಗಳಾಗಿಯೂ, ವಸುಗಳ ಅಂಶದಿಂದ ಕೂಡಿದ ಪನಸ, ಶತಬಲಿ ಎಂಬ ಮರುತ್ತುಗಳು ಶ್ವೇತ ಮತ್ತು ಸಂಪಾತಿಗಳಾಗಿಯೂ, ಜಯಂತನು ಕುಮುದನಾಗಿಯೂ, ಕುಬೇರ ಕರ್ತನನಾಗಿಯೂ, ನಿರ್ಋತಿಯು ದುರ್ಮುಖನಾಗಿಯೂ ಪರ್ಜನ್ಯನು ಶರಭನಾಗಿಯೂ ಜನಿಸಿದರು, ಇವನ್ನೆಲ್ಲ ಶ್ರೀಮದಾಚಾರ್ಯರೇ ಮುಂದೆ ಅಲ್ಲಲ್ಲಿ ತಿಳಿಸಿರುವರು.

೩) ಕಾಮ ಮೊದಲು ಬ್ರಹ್ಮನಿಂದ ಜನಿಸಿದ; ಅನಂತರ ಶಿವನಿಂದ ಜನಿಸಿ 'ಷಣ್ಮುಖ' ಎನ್ನಿಸಿದ; ಅನಂತರ ಶ್ರೀಕೃಷ್ಣ ರುಗ್ಮಿಣಿಯರ ಮಗ 'ಪ್ರದ್ಯುಮ್ನ'ನಾದ; ಹೀಗೆ ತ್ರಿಮೂರ್ತಿಗಳಿಂದಲೂ ಜನಿಸಿದ ಇವನು ಮಹಾವಿಷ್ಣುವಿನ ಸುದರ್ಶನಚಕ್ರಕ್ಕೆ ಅವಾಂತರ ಅಭಿಮಾನಿಯೂ ಆಗಿರುವನು.

ಶ್ರೀಹರಿಯ ಚಕ್ರ, ಶಂಖಾದಿ ರೂಪದಲ್ಲಿ ಮಹಾಲಕ್ಷ್ಮಿ

ಪೂರ್ವಂ ಹರೇಶ್ಚಕ್ರಮಭೂದ್ದಿ ದುರ್ಗಾ
ತಮಃಸ್ಥಿತಾ ಶ್ರೀರಿತಿ ಯಾಂ ವದಂತಿ ।
ಸತ್ತ್ವಾತ್ಮಿಕಾ ಶಂಖಮಥೋ ರಜಃಸ್ಥಾ
ಭೂರ್ನಾಮಿಕಾ ಪದ್ಮಮಭೂದ್ಧರೇರ್ಹಿ ॥ ೭೩ ॥

---

೭೨. ಚಕ್ರತಾಂ– ಚಕ್ರಾಭಿಮಾನಿತ್ವಂ ಚಕ್ರಶಬ್ದವಾಚ್ಯತ್ವಮ್ । –(ಜ)

'ಕಮಲೋದ್ಭವೋತ್ಪಃ' ಇತಿ ಪದಂ ದೇಹಲೀದೀಪನ್ಯಾಯೇನ ಪೂರ್ವತ್ರ ಉತ್ತರತ್ರ ಚ ಸಂಬಂಧ್ಯತೇ । -(ವಾ)

೭೨. ಏವಂ ವಾನರೇಷು ಜಾತಾನ್ ದೇವಾನುಕ್ತ್ವಾ ಅಧುನಾ ನರೇಷು ಜಾತಾನ್ ವಕ್ತುಂ ತನ್ಮೂಲರೂಪಂ ವಿವೇಚಯನ್ ಪ್ರಸಂಗಾತ್ ಕಥಾಂತರಮಪ್ಯಾಹ । –(ವಾ)

ಗದೆಯಾಗಿ ವಾಯು- ಶಾರ್ಙ್ಗವಾಗಿ ಸರಸ್ವತಿ ಇತ್ಯಾದಿ

ಗದಾ ತು ವಾಯುರ್ಬಲಸಂವಿದಾತ್ಮಾ
ಶಾರ್ಙ್ಗಂ ಚ ವಿದ್ಯೇತಿ ರಮೈವ ಖಡ್ಗಃ ।
ದುರ್ಗಾತ್ಮಿಕಾ ಸೈವ ಚ ಚರ್ಮನಾಮ್ನೀ
ಪಂಚಾತ್ಮಕೋ ಮಾರುತ ಏವ ಬಾಣಾಃ ॥ ೭೪ ॥

ಅ: ತಮೋಭಿಮಾನಿನಿಯಾದ ದುರ್ಗಾದೇವಿಯು ಮುಂಚೆ ಶ್ರೀಹರಿಯ 'ಚಕ್ರ'ವಾಗಿದ್ದಳು; 'ಶ್ರೀ' ಎಂದು ಕರೆಯಲ್ಪಡುವ ಸತ್ವಾಭಿಮಾನಿನಿಯಾದ ರಮಾದೇವಿಯು ಶಂಖವಾಗಿದ್ದರು; ರಜೋಗುಣಕ್ಕೆ ಅಭಿಮಾನಿನಿಯಾದ 'ಭೂ' ದೇವಿಯು ಶ್ರೀಹರಿಯ 'ಪದ್ಮ' ಕ್ಕೆ ಅಭಿಮಾನಿನಿಯಾಗಿದ್ದರು.

---

೭೩. ಚಕ್ರಾಭಿಮಾನಿನೀ ಚಕ್ರನಾಮ್ನೀ ಚ । –(ಜ)

೭೩. ತಮಃಸ್ಥಿತಾ ತಮೋಭಿಮಾನಿನೀ । –(ವಾ, ವ, ಜ)

೭೩. ಸತ್ತ್ವಾತ್ಮಿಕಾ – ಸತ್ತ್ವಾಭಿಮಾನಿನೀ । –(ವ)

೭೩. ಶಂಖಾಭಿಮಾನಿನೀ । –(ವ)

೭೩. ರಜೋಗುಣಪ್ರವರ್ತಕತ್ವೇನ ವಿದ್ಯಮಾನಾ ರಜೋಭಿಮಾನಿನೀ ।

೭೩. ಪದ್ಮಾಭಿಮಾನಿನೀ । –(ವ)

೭೪. ಗದಾಭಿಮಾನಿನೀ । –(ವ)

೭೪. ಬಲಜ್ಞಾನಪ್ರವರ್ತಕಃ ತದಾತ್ಮಕಶ್ಚ । –(ವ)

೭೪. ಶಾರ್ಙ್ಗಾಭಿಮಾನಿನೀ । –(ವ)

೭೪. ವಿದ್ಯಾ । ವಿದ್ಯಾಭಿಮಾನಿನೀ 'ಯಾ ದೇವೀ ಸರ್ವಭೂತೇಷು ವಿದ್ಯಾರೂಪೇಣಸಂಸ್ಥಿತಾ ।' ಇತಿ ವಚನಾತ್ ವಿದ್ಯೇತಿ ಯಾ ರಮಾ । –(ವಾ)

ವಿದ್ಯಾಭಿಮಾನಿನೀತಿ ಪ್ರಸಿದ್ಧಾ ಯಾ ರಮಾ । ಯದ್ವಾ ವಿದ್ಯಾ ಸರಸ್ವತೀ। -ಜ

ವಿದ್ಯೇತಿ ಪ್ರಸಿದ್ಧಾ ಸರಸ್ವತೀ । –(ವ)

೭೪. ರಮೈವ ಮೂಲರೂಪೇಣ ಖಡ್ಗಾಭಿಮಾನಿನೀ । –(ವ)

ಯಾ ವಿದ್ಯೇತಿ ವಿದ್ಯಾಭಿಮಾನಿನೀತಿ ಪ್ರಸಿದ್ಧಾ ಯಾ ರಮಾ ಸೈವ ಖಡ್ಗಃ ಖಡ್ಗಶಬ್ದವಾಚ್ಯಾ ತದಭಿಮಾನಿನೀತಿ ಚ । –(ಜ)

೭೪. ಚರ್ಮಾಖ್ಯಾಯುಧಾಭಿಮಾನಿನೀತ್ಯರ್ಥಃ । –(ವ)

ಬಲ ಜ್ಞಾನಗಳ ಸ್ವರೂಪರಾದ ವಾಯುದೇವರು 'ಗದೆ'ಗೂ ವಿದ್ಯಾಭಿಮಾನಿನಿಯಾದ ಸರಸ್ವತಿಯು ಶಾರ್ಙ್ಗಧನುಸ್ಸಿಗೂ, ಅಭಿಮಾನಿಯಾಗಿದ್ದರು; ರಮಾದೇವಿಯು ಖಡ್ಗಾಭಿಮಾನಿಯಾಗಿದ್ದರು; 'ದುರ್ಗಾ'ರೂಪದ ಆ ರಮಾದೇವಿಯೇ 'ಚರ್ಮ' (ಗುರಾಣಿ)ವಾಗಿದ್ದರು; ಪ್ರಾಣ, ಅಪಾನ, ವ್ಯಾನ, ಉದಾನ, ಮತ್ತು ಸಮಾನ ಎಂಬ ಐದು ರೂಪಗಳ ವಾಯುದೇವರೇ (ಪಂಚ)ಬಾಣಗಳಿಗೆ ಅಭಿಮಾನಿಯಾಗಿದ್ದರು.

ವಿ: ೧) 'ಚಕ್ರಾ'ದಿ ಶ್ರೀಹರಿಯ ಆಯುಧಗಳಿಗೆ ಮುಖ್ಯಅಭಿಮಾನಿದೇವತೆಗಳ ವಿವರಗಳನ್ನು ಈ ಎರಡು ಶ್ಲೋಕಗಳಲ್ಲಿ ಕೊಟ್ಟಿರುವರು.

೨) 'ನೀಲ'ವರ್ಣದ ಚಕ್ರಕ್ಕೆ ನೀಲವರ್ಣದ ತಮಸ್ಸಿಗೆ ಅಭಿಮಾನಿನಿಯಾದ 'ದುರ್ಗಾ'ರೂಪವೂ, ಶುಕ್ಲವರ್ಣದ ಶಂಖಕ್ಕೆ ಶುಕ್ಲವರ್ಣದ ಸತ್ವಗುಣಕ್ಕೆ ಅಭಿಮಾನಿಯಿಂದ 'ಶ್ರೀ'ರೂಪವೂ, ರಕ್ತವರ್ಣದ ಪದ್ಮಕ್ಕೆ ರಕ್ತವರ್ಣದ ರಜೋಗುಣಕ್ಕೆ ಅಭಿಮಾನಿನಿಯಾದ 'ಭೂ'ರೂಪವೂ ಅಭಿಮಾನಿ ಎಂದು ತಿಳಿಯಬೇಕು. (ವಾ.)

೩) ಶ್ರೀಜಯತೀರ್ಥರು 'ಪದ್ಧಮಾಲೆ'ಯಲ್ಲಿ ಇವುಗಳಿಗೆ ವಿವರಣರೂಪವಾಗಿ ಬರೆದಿರುವ ಶ್ಲೋಕಗಳು ಹೀಗಿವೆ:

ದುರ್ಗಾ ಚಕ್ರಾಧಿದೇವೀ ಸ್ಯಾಚ್ಛ್ರೀಶ್ಚ ಶಂಖಾಧಿದೇವತಾ ।
ವಾಯುರ್ಗದಾಧಿದೇವಃ ಸ್ಯಾದ್ ಭೂಮಿಃ ಪದ್ಮಾಭಿಮಾನಿನೀ ॥
ದುರ್ಗೈವ ಖಡ್ಗದೇವೀ ಸ್ಯಾಚ್ಚಾರ್ಙ್ಗಂ ಚೈವ ಸರಸ್ವತೀ ।
ಪಂಚಬಾಣಾಃ ಪಂಚ ಪ್ರಾಣಾಃ.....

೪) ಶಂಖಕ್ಕೆ ವಿದ್ಯಾಭಿಮಾನಿನಿಯಾದ ರಮಾದೇವಿಯು ಅಭಿಮಾನಿ; ಶಾರ್ಙ್ಗಧನುಸ್ಸಿಗೆ ವಿದ್ಯಾಭಿಮಾನಿಯಾದ ಸರಸ್ವತಿಯು ಅಭಿಮಾನಿ; ದುರ್ಗಾರೂಪವೇ ಖಡ್ಗಕ್ಕೂ ಅಭಿಮಾನಿ; ಮೊದಲಾಗಿ ಅರ್ಥಭೇದಗಳು ವ್ಯಾಖ್ಯಾನಗಳಲ್ಲಿ ಉಂಟು; ಅವೆಲ್ಲ ಒಟ್ಟಾಗಿ ಅವಿರುದ್ಧವೆಂಬುದನ್ನೂ ಗಮನಿಸಬೇಕು.

---

೭೪. ಪ್ರಾಣಾಪಾನವ್ಯಾನೋದಾನಸಮಾನಾತ್ಮಕಃ ॥ –(ಜ)

೭೪. ಬಾಣಃ । ಬಾಣಾಭಿಮಾನಿನೀತ್ಯರ್ಥಃ । –(ವ)

೭೪. ಚಕ್ರಸ್ಯ ಲೌಕಿಕಾಯಶ್ಚಕ್ರಸಾದೃಶ್ಯಾಯ ಸೂರ್ಯಬಿಂಬವದಂತರ್ನೀಲತ್ವಾತ್ ನೀಲವರ್ಣತಮೋಭಿಮಾನಿ-ದುರ್ಗಾತ್ಮಕತ್ವಮುಕ್ತಮ್ । ಶಂಖಸ್ಯ ಶುಕ್ಲವರ್ಣತ್ವೇನ ಶುಕ್ಲಸತ್ತ್ವಗುಣಾಭಿಮಾನಿಶ್ರೀರೂಪತ್ವಮುಕ್ತಮ್ । ಪದ್ಮಸ್ಯ ತು ರಕ್ತವರ್ಣತ್ವೇನ ರಕ್ತವರ್ಣರಜೋಽಭಿಮಾನಿಭೂರೂಪತ್ವಮಿತಿ ಜ್ಞೇಯಮ್ । –(ವಾ)

೭೪. ಯಸ್ಯ ಗದಾ ಪವಮಾನಃ – ಯಮಕಭಾರತ (೨)

ಚಕ್ರಾದಿಗಳ ಅವಾಂತರ ದೇವತೆಗಳು

ಏವಂ ಸ್ಥಿತೇಷ್ವೇವ ಪುರಾತನೇಷು
ವರಾದ್ರಥಾಂಗತ್ವಮವಾಪ ಕಾಮಃ ।
ತತ್ಸೂನುತಾಮಾಪ ಚ ಸೋಽನಿರುದ್ಧೋ
ಬ್ರಹ್ಮೋದ್ಭವಃ ಶಂಖತನುಃ ಪುಮಾತ್ಮಾ ॥ ೭೫ ॥

ಭರತ, ಶತ್ರುಘ್ನ, ಲಕ್ಷ್ಮಣರ ಅವತಾರ

ತಾವೇವ ಜಾತೌ ಭರತಶ್ಚ ನಾಮ್ನಾ
ಶತ್ರುಘ್ನ ಇತ್ಯೇವ ಚ ರಾಮತೋಽನು ।
ಪೂರ್ವಂ ಸುಮಿತ್ರಾತನಯಶ್ಚ ಶೇಷಃ
ಸ ಲಕ್ಷ್ಮಣೋ ನಾಮ ರಘೂತ್ತಮಾದನು ॥ ೭೬ ॥

ಅ: ಪ್ರಾಚೀನವಾದ ಚಕ್ರಾದಿಗಳು ಹೀಗಿರುತ್ತಿರಲು, ಕಾಮನು ಶ್ರೀಹರಿಯ ವರದಿಂದ (ಅವಾಂತರ)ಚಕ್ರಾಭಿಮಾನಿತ್ವವನ್ನೂ ಚಕ್ರಶಬ್ದವಾಚ್ಯತ್ವವನ್ನೂ ಪಡೆದುಕೊಂಡ. ಬ್ರಹ್ಮದೇವರಿಂದ ಜನಿಸಿದ ಅನಿರುದ್ಧನು ಈ ಕಾಮನಿಗೆ ಪುತ್ರನಾದ; ಇವನು ಪುರುಷಜೀವಾಭಿಮಾನಿಯೂ ವರದಿಂದ ಶಂಖಕ್ಕೆ ಅವಾಂತರಾಭಿಮಾನಿಯೂ ಆಗಿರುವನು.

---

೭೫. ಹರೇರ್ವರಾತ್ । –(ವ)
ವರಾತ್ ಶಂಖಾಭಿಮಾನೀ ಬಭೂವ ಇತ್ಯರ್ಥಃ । –(ವ)

೭೫. ಪುರುಷಜೀವಾಭಿಮಾನೀ । (ಜ,ವ) ಪುರುಷಾಕಾರರೂಪೀ ।–(ವಾ)

೭೬. ಭರತಶತ್ರುಘ್ನಾಭ್ಯಾಂ ಪೂರ್ವಮ್ । (ಜ) ಭರತಶತ್ರುಘ್ನೋತ್ಪತ್ತೇಃ ಪೂರ್ವಮ್ । (ವ)

೭೬. ಭುಜಗೇಶ್ವರೋಽಪಿ ಭುವನೇಶ್ವರಪ್ರಿಯಃ ಸಮಜನ್ಯಥಾರಿದರಜನ್ಯ ಭುವ್ಯಭೂತ್ ॥
- ಸುಮಧ್ವವಿಜಯ (೮/೨೦)

ಅತ್ರ ಪಾಯಸದಾನಕ್ರಮೇಣ ಲಕ್ಷ್ಮಣಸ್ಯೈವ ಜ್ಯೈಷ್ಠ್ಯಂ ಭರತಾಪೇಕ್ಷಯಾ, ಜನ್ಮಕ್ರಮೇಣ ಭರತಸ್ಯೈವ ಜ್ಯೈಷ್ಠ್ಯಂ ಲಕ್ಷ್ಮಣಾಪೇಕ್ಷಯಾ ಇತಿ ಜ್ಞೇಯಮ್ ॥

೭೬. ಅನೇನ ಅದೌ ರಾಮಃ ತತೋ ಲಕ್ಷ್ಮಣಃ ತತೋ ಭರತಃ, ತತಃ ಶತ್ರುಘ್ನ ಇತ್ಯೇವಮವತಾರಕ್ರಮೋಕ್ತ್ಯಾ ರಾಮಸ್ಯ ಲಕ್ಷ್ಮಣಾದಿ ಸರ್ವಾಪೇಕ್ಷಯಾ ಜ್ಯೇಷ್ಠತ್ವಮುಕ್ತಂ ಭವತಿ । –(ವ)
ಪೂರ್ವಂ ಭರತಶತ್ರುಘ್ನಾಭ್ಯಾಂ ಪೂರ್ವಂ ಸುಮಿತ್ರಾತನಯಃ ಲಕ್ಷ್ಮಣಃ ಬಭೂವ । –(ಜ)

ಈ ಇಬ್ಬರೂ ಭರತ ಮತ್ತು ಶತ್ರುಘ್ನ ಎಂಬುದಾಗಿ ಶ್ರೀರಾಮನ ಅನಂತರ ಜನಿಸಿದರು. ಈ ಮೊದಲೇ ಶೇಷನು ಶ್ರೀರಾಮನ ಅನಂತರ ಸುಮಿತ್ರೆಯ ಮಗನಾಗಿ 'ಲಕ್ಷ್ಮಣ' ನೆಂದು ಜನಿಸಿದ್ದ.

ವಿ: ೧) ಲಕ್ಷ್ಮಣ ಮತ್ತು ಭರತರಲ್ಲಿ ಯಾರು ಜ್ಯೇಷ್ಠರು? ಈ ಪ್ರಶ್ನೆಗೆ ವರದರಾಜೀಯ, ಜನಾರ್ದನಭಟ್ಟೀಯ, ತಾಮ್ರಪರ್ಣೀಯ, ಸತ್ಯಾಭಿನವತೀರ್ಥೀಯ ಮೊದಲಾದ ಅನೇಕ ವ್ಯಾಖ್ಯಾನಗಳಂತೆ 'ಲಕ್ಷ್ಮಣ'ನು ಜ್ಯೇಷ್ಠ; ಶ್ರೀವಾದಿರಾಜಸ್ವಾಮಿಗಳ ವ್ಯಾಖಾನದಲ್ಲಿ ಮಾತ್ರ ಭರತನೇ ಜ್ಯೇಷ್ಠ ಎಂಬ ಭಾವ ಕಾಣುತ್ತದೆ.

೨) ಶ್ರೀವಾದಿರಾಜಸ್ವಾಮಿಗಳ ವ್ಯಾಖ್ಯಾನದ ಆ ಭಾಗ ಪ್ರಕ್ಷಿಪ್ತವಿರಬೇಕು ಎಂದು ಕೆಲವರು ವಾದಿಸುತ್ತಾರೆ. ವಾಲ್ಮೀಕಿರಾಮಾಯಣ, ಸಂಗ್ರಹರಾಮಾಯಣ ಮತ್ತು ಸುಮಧ್ವವಿಜಯ– ಗಳಲ್ಲೂ ಲಕ್ಷ್ಮಣನೇ ಜ್ಯೇಷ್ಠ ಎಂಬ ಭಾವ ಗೋಚರವಾಗುತ್ತದೆ. ಆದರೆ ಕೆಲವು ಪುರಾಣಗಳಲ್ಲಿ ಭರತನೇ ಜ್ಯೇಷ್ಠ ಎಂಬುದಾಗಿಯೂ ಉಲ್ಲೇಖ ಉಂಟು.

---

೭೬. ತತೋ ಲಕ್ಷ್ಮಣಮಾಸಾದ್ಯ ವೈದೇಹೀಂ ಚ ಪರಂತಪ।
ಅಭ್ಯವಂದತ ಸುಪ್ರೀತೋ ಭರತೋ ನಾಮ ಚಾಬ್ರವೀತ್ ॥ –ವಾ. ರಾ. (೬/೧೨೭/೪೧)
ಸೀತಾಯಾ ಲಕ್ಷ್ಮಣಸ್ಯಾಪಿ ವವಂದೇ ಚರಣಾವಸೌ। –ವಾ. ರಾ. (೬/೧೨೭/೪೮)

೭೭. ಶತ್ರುಘ್ನಃ ಪ್ರಾಂಜಲಿಃ ಪ್ರೋಚೇ ಪ್ರಸೀದ ಪುರುಷೋತ್ತಮ।
ಆರ್ಯೋ ಮೇ ಮಧ್ಯಮೇ ಧನ್ಯಸ್ತ್ವಚ್ಛುಶ್ರೂಷಾಂ ವನೇऽಕರೋತ್ ॥
ಭರತಸ್ಯ ಮಮಾರ್ಯೇಣ ಹ್ಯಧಿಜೀವತಿ ಕಿಂಕರೇ।
ಚತುರ್ದಶ ಸಮಾಸ್ತಪಂ ತ್ವತ್ಪೀತ್ಯೈ ಭೂಮಿಶಾಯಿನಾ॥
ಬ್ರಹ್ಮಘ್ನಂ ಲವಣಂ ಹತ್ವಾ ತ್ವತ್ಪಸಾದೇನ ಕೇವಲಮ್। -ಸಂಗ್ರಹರಾಮಾಯಣ

೭೮. ಭುಜಗೇಶ್ವರೋऽಪಿ ಭುವನೇಶ್ವರಪ್ರಿಯಃ ಸಮಜನ್ಯಥಾರಿಧರಜನ್ಯಭುವ್ಯಭೂತ್ ॥
-ಸುಮಧ್ವವಿಜಯ (೮/೨೦)

ಭಾಸನ ಪ್ರತಿಮಾನಾಟಕದಲ್ಲೂ ಲಕ್ಷ್ಮಣಜ್ಯೈಷ್ಠ್ಯವೇ ಉಕ್ತವಾಗಿದೆ.

೭೯. ಕೌಸಲ್ಯಾಯೈ ನರಪತಿಃ ಪಾಯಸಾರ್ಧಂ ದದೌ ತದಾ।
ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ।
ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್।
ಪ್ರದದೌ ಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್।
ಅನುಚಿಂತ್ಯ ಸುಮಿತ್ರಾಯೈ ಪುನರೇವ ಮಹೀಪತಿಃ। –ವಾ. ರಾ. (೧೧೬/೨೭)

೮೦. ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ।
ಸಾರ್ಪೇ ಜಾತೌ ಚ ಸೌಮಿತ್ರೀ ಕುಲೀರೇऽಭ್ಯುದಿತೇ ರವೌ। –ವಾ. ರಾ. (೧೧೮/೧೫)

(ಇದೇ ರೀತಿಯ ಮಾತುಗಳು ಸಂಗ್ರಹರಾಮಾಯಣದಲ್ಲೂ ಉಂಟು.)

೩) ಮೂಲಗ್ರಂಥ ಹಾಗೂ ವ್ಯಾಖ್ಯಾನಗಳಲ್ಲಿನ ಈ ವಿರೋಧವನ್ನು ಈ ತೆರನಾಗಿ ಪರಿಹರಿಸಬಹುದು; ವಾಲ್ಮೀಕಿರಾಮಾಯಣ ಮತ್ತು ಸಂಗ್ರಹರಾಮಾಯಣಗಳಲ್ಲಿ ಸ್ಫುಟವಾಗಿ ನಿರೂಪಿತವಾಗಿರುವಂತೆ, ದಶರಥನು ಕೌಸಲ್ಯೆಗೆ ಪಾಯಸದ ಅರ್ಧಭಾಗವನ್ನು ನೀಡಿದ ಮೇಲೆ ಸುಮಿತ್ರೆಗೆ ಅದರ ಅರ್ಧದ ಅರ್ಧಭಾಗವನ್ನೀಯುವನು. ಉಳಿದ ಭಾಗವನ್ನು ಪುನಃ ಎರಡು ಭಾಗ ಮಾಡಿ ಅದರಲ್ಲಿ ಒಂದು ಪಾಲನ್ನು ಕೈಕೇಯಿಗೆ ನೀಡಿ, ಉಳಿದಿದ್ದನ್ನು ಪುನಃ ಸುಮಿತ್ರೆಗೆ ನೀಡುವನು. ಎಂದರೆ ಸುಮಿತ್ರೆಗೆ ಕೌಸಲ್ಯೆ ಅನಂತರ ಒಮ್ಮೆ ಮತ್ತು ಕೊನೆಯಲ್ಲಿ ಮತ್ತೊಮ್ಮೆ ಹೀಗೆ ಎರಡು ಬಾರಿ ಪಾಯಸದ ಭಾಗ ದೊರೆಯುವುದು; ಮೊದಲು ದೊರೆತ ಭಾಗದಿಂದ ಲಕ್ಷ್ಮಣನೂ, ಕೊನೆಯಲ್ಲಿ ದೊರೆತ ಭಾಗದಿಂದ ಶತ್ರುಘ್ನನು ಜನಿಸುವರು.

೪) ಈ ತೆರನಾದ ಪಾಯಸದಾನದ ಕ್ರಮದಂತೆ ಲಕ್ಷಣನೇ ಭರತನಿಗಿಂತ ಜ್ಯೇಷ್ಠನಾಗುವನು.

೫) ಇನ್ನುಮೇಲೆ ಹೇಳಿದ ಪ್ರಮಾಣದಲ್ಲಿ ಕಾಣುವಂತೆ ಭರತ ಜನಿಸಿದ್ದು ಪುಷ್ಯನಕ್ಷತ್ರದಲ್ಲಿ ; ಲಕ್ಷ್ಮಣ ಜನಿಸಿದ್ದು ಆಶ್ಲೇಷನಕ್ಷತ್ರದಲ್ಲಿ; ಅಂದರೆ ಮೊದಲು ಜನಿಸಿದ್ದು ಭರತ; ಅನಂತರ ಲಕ್ಷ್ಮಣ; ಈ ಕ್ರಮದಲ್ಲಿ ಭರತನೇ ಲಕ್ಷ್ಮಣನಿಗಿಂತ ಜ್ಯೇಷ್ಠನಾಗುವನು.

೬) ಲಕ್ಷ್ಮಣಜ್ಯೈಷ್ಠ್ಯವನ್ನು ಹೇಳುವ ಉಕ್ತಿಗಳಿಗೆ ಪಾಯಸದಾನದ ಕ್ರಮವೂ, ಭರತಜ್ಯೈಷ್ಠ್ಯ ಹೇಳುವ ಉಕ್ತಿಗಳಿಗೆ ಜನನಕ್ರಮವೂ ವಿವಕ್ಷಿತ ಎಂದು ಭಾವಿಸಿದರೆ ವಿರೋಧಕ್ಕೆ ಯಾವ ಅವಕಾಶವೂ ಇರುವುದಿಲ್ಲ.

---

೭೬. ರಾಮತಃ ಅನು ಕೈಕೇಯ್ಯಾಂ ಭರತೋ ಜಾತಃ ಶತ್ರುಘ್ನೋ ಲಕ್ಷ್ಮಣಶ್ಚ ಸುಮಿತ್ರಾಯಾಂ ರಘೂತ್ತಮಾದನಂತರಂ ಜಾತೌ । ....ಭರತಃ ಸಾಕ್ಷಾದನುಜಃ ಇಮೌ ತು ಪರಂಪರಯಾ ರಾಮಾನುಜೌ ಇತಿ ಭಾವಃ । ಕಥಮನ್ಯಥಾ ರಾಮಸ್ಯ ವನವಾಸೇ ಭರತಸ್ಯೈವ ರಾಜ್ಯಂ ಭವಿಷ್ಯತೀತ್ಯಾಶಾ ಕೈಕೇಯ್ಯಾಃ । ಅತ ಏವೋಕ್ತಂ ಮಹಾನಾಟಕೇ 'ಚತುರ್ಣಾಂ ತ್ವಮವರಜತಯಾ ಯಸ್ಯ ಜಾತಃ' ಇತಿ । –(ವಾ)

೭೭. ಶೇಷಃ ಶೇಷಾವತಾರಃ ಸುಮಿತ್ರಾತನಯಃ ಸಃ ರಾಮಭಕ್ತತ್ವೇನ ಪ್ರಸಿದ್ಧಃ ಲಕ್ಷ್ಮಣೋ ರಘೂತ್ತಮಾದನು ರಘೂತ್ತಮಾದನಂತರಂ ಭರತಶತ್ರುಘ್ನಾಭ್ಯಾಂ ಪೂರ್ವಂ ಚ ಪೂರ್ವಮೇವ ಜಾತ ಇತ್ಯೇತತ್ ನಾಮ ಪ್ರಸಿದ್ಧಮಿತಿ । ಅನೇನ ರಾಮಾದನಂತರಂ ಲಕ್ಷ್ಮಣಃ ಲಕ್ಷ್ಮಣಾದನಂತರಂ ಭರತಃ ಭರತಾದನಂತರಂ ಶತ್ರುಘ್ನೋ ಜಾತ ಇತ್ಯುಕ್ತಂ ಭವತಿ ॥ –(ಸ.)

೭೮. ನರಲಕ್ಷ್ಮಣೌ ಬಲಶ್ಚೈವ ಶೇಷಸ್ಯಾಂಶಾಃ ಪ್ರಕೀರ್ತಿತಾಃ ।
ತಥಾ ಭರತಶತ್ರುಘ್ನೌ ಚಕ್ರಶಂಖಾವುದಾಹೃತೌ ॥ ಸ್ಕಾಂದೇ । –ಭಾ.ತಾ.(೪/೧೫/೩)

ದಶರಥನ ನಾಲ್ವರು ಪುತ್ರರು

ಕೌಸಲ್ಯಕಾಪುತ್ರ ಉರುಕ್ರಮೋಽಸಾ-
ವೇಕಸ್ತಥೈಕೋ ಭರತಸ್ಯ ಮಾತುಃ ।
ಉಭೌ ಸುಮಿತ್ರಾತನಯೌ ನೃಪಸ್ಯ
ಚತ್ವಾರ ಏತೇ ಹ್ಯಮರೋತ್ತಮಾಃ ಸುತಾಃ ॥ ೭೭ ॥

ವಾಸುದೇವಾದಿ ನಾಲ್ಕು ರೂಪಗಳು ದಶರಥನ ಪುತ್ರರಾಗಿ

ಸಂಕರ್ಷಣಾದ್ಯೈಸ್ತ್ರಿಭಿರೇವ ರೂಪೈ-
ರಾವಿಷ್ಟ ಆಸೀತ್ ತ್ರಿಷು ತೇಷು ವಿಷ್ಣುಃ ।
ಇಂದ್ರೋಽಂಗದೇ ಚೈವ ತತೋಽಂಗದೋ ಹಿ
ಬಲೀ ನಿತಾಂತಂ ಸ ಬಭೂವ ಶಶ್ವತ್ ॥ ೭೮ ॥

ಅ: ಉರುಕ್ರಮನಾದ ಶ್ರೀಹರಿಯೇ ಆದ ರಾಮ ಒಬ್ಬನೇ ಕೌಸಲ್ಯೆಯ ಮಗ; ಅದರಂತೆ ಭರತನ ತಾಯಿಯಾದ ಕೈಕೇಯಿಗೆ ಅವನೊಬ್ಬನೇ ಮಗ; ಉಳಿದಿಬ್ಬರು ಸುಮಿತ್ರೆಯ ಪುತ್ರರು; ಹೀಗೆ ದೇವೋತ್ತಮರಾದ ನಾಲ್ವರು ದಶರಥರಾಜನ ಪುತ್ರರು.

ಶ್ರೀರಾಮನು ವಾಸುದೇವ; ಲಕ್ಷ್ಮಣಾದಿ ಇತರ ಮೂವರಲ್ಲಿ ಶ್ರೀಹರಿಯು ಸಂಕರ್ಷಣ ಮೊದಲಾದ ತನ್ನ ಮೂರು ರೂಪಗಳಿಂದ ಆವೇಶ ಮಾಡಿದ; ಹೀಗೆಯೇ ಇಂದ್ರನು ಅಂಗದನಲ್ಲಿ ಆವಿಷ್ಟನಾದ; ಆದ್ದರಿಂದಲೇ ಆ ಅಂಗದನು ತುಂಬಾ ಬಲಶಾಲಿಯಾದ.

---

೭೮. ದುಷ್ಟಾನಾಂ ನಿಗ್ರಹಾರ್ಥಾಯ ಚತುರ್ಮೂರ್ತಿರ್ಜನಾರ್ದನಃ ।
ಜಾತೋ ರಘುಕುಲೇ ರಾಜನ್ ಪುತ್ರೋ ದಶರಥಸ್ಯ ತು ।
ಅಂಶೇನ ವಾಸುದೇವಸ್ಯ ಜಾತೋ ರಾಮೋ ಮಹಾಯಶಾಃ ।
ಸಂಕರ್ಷಣಸ್ಯ ಚಾಂಶೇನ ಲಕ್ಷ್ಮಣಃ ಪರವೀರಹಾ ।
ಪ್ರದ್ಯುಮ್ನಸ್ಯ ತಥಾಂಽಶೇನ ಭರತೋ ಧರ್ಮವತ್ಸಲಃ ॥
ಅನಿರುದ್ಧಸ್ಯ ಚಾಂಶೇನ ಶತ್ರಘ್ನಸ್ತು ಮಹಾಬಲಃ ॥ – (ವಿಷ್ಣುಧರ್ಮೋತ್ತರಪುರಾಣ)

ತೇಷು ಲಕ್ಷ್ಮಣಭರತಶತ್ರುಘ್ನೇಷು ಆವೇಶಮಾದಾಯ ತದುಕ್ತಿರ್ಘಟತೇ ಇತಿ ಭಾವಃ । –(ಜ)

೭೮. ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ।
ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ ॥
ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾಽಜನಯತ್ ಸುತೌ ।
ಸರ್ವಾಸ್ತ್ರಕುಶಲೌ ವೀರೌ ವಿಷ್ಣೋರರ್ಧಸಮನ್ವಿತೌ ॥ – ವಾಲ್ಮೀಕಿರಾಮಾಯಣ (೧/೧೮/೧೩)

ವಿಃ ೧) ಕೆಲವು ಪುರಾಣಗಳಲ್ಲಿ ಶ್ರೀಹರಿಯ ವಾಸುದೇವಾದಿ ನಾಲ್ಕುರೂಪಗಳಲ್ಲಿ ವಾಸು-ದೇವನು ರಾಮ; ಸಂಕರ್ಷಣನು ಲಕ್ಷ್ಮಣ; ಪ್ರದ್ಯುಮ್ನನು ಭರತ ಮತ್ತು ಅನಿರುದ್ಧನು ಶತ್ರುಘ್ನ ಎಂಬುದಾಗಿ ಉಕ್ತವಾಗಿದೆ. ವಾಲ್ಮೀಕಿರಾಮಾಯಣದಲ್ಲಿ ಅಂತಹ ಉಲ್ಲೇಖನೆ ಇದೆ. 'ಸಂಕರ್ಷಣಾದ್ಯೈಃ' ಎಂಬ ಶ್ಲೋಕದಲ್ಲಿ ಶ್ರೀಮದಾಚಾರ್ಯರು ಅದರ ತಾತ್ಪರ್ಯವನ್ನು ವಿವರಿಸಿರುವರು;

೨) ವಾಸುದೇವನೇ ಸಾಕ್ಷಾತ್ ರಾಮ; ಆದರೆ ಲಕ್ಷ್ಮಣಾದಿ ಮೂವರಲ್ಲಿ ಕ್ರಮವಾಗಿ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಆಯಾ ಮೂಲರೂಪದ ದೇವತೆಗಳಲ್ಲಿ ಶ್ರೀಹರಿಯ ಸಂಕರ್ಷಣಾದಿರೂಪಗಳ ಆವೇಶಮಾತ್ರ ಉಂಟು; ಅವರು ಸಾಕ್ಷಾತ್ ಅವತಾರವಲ್ಲ ಎಂದು ಭಾವ.

೩) ಅಂಗದನು ಚಂದ್ರ, ಜಾಂಬವಂತನು ಯಮಧರ್ಮ; ತಾರತಮ್ಯದಲ್ಲಿ ಅವರಿಬ್ಬರೂ ಸಮರು; ಆದರೆ ಅಂಗದನಲ್ಲಿ ಇಂದ್ರದೇವರ ಆವೇಶದಿಂದಾಗಿ ಜಾಂಬವಂತನಿಗಿಂತ ಬಲಶಾಲಿ-ಯಾಗಿದ್ದ ಎಂದು ಭಾವ; ಜಾಂಬವಂತನು ೯೦ ಯೋಜನ ಹಾರುವುದಾಗಿ ಹೇಳಿದರೆ, ಅಂಗದನು ನೂರು ಯೋಜನವನ್ನು ಹಾರಿಬಿಡುವೆ ಎಂದು ಸಮುದ್ರತರಣ ಪ್ರಸಂಗದಲ್ಲಿ ಹೇಳಲು ಸಹ ಈ ಆವೇಶವೇ ಕಾರಣ ಎಂದೂ ಭಾವ (೬/೫೫).

ಕಾರ್ತವೀರ್ಯಾರ್ಜುನಾದಿಗಳಲ್ಲಿ ಶ್ರೀಹರಿಯ ವಿಶೇಷ ಸನ್ನಿಧಾನ

ಯೇಽನ್ಯೇ ಚ ಭೂಪಾಃ ಕೃತವೀರ್ಯಜಾದ್ಯಾ
ಬಲಾಧಿಕಾಃ ಸಂತಿ ಸಹಸ್ರಶೋಽಪಿ ।
ಸರ್ವೇ ಹರೇಃ ಸನ್ನಿಧಿಭಾವಯುಕ್ತಾ
ಧರ್ಮಪ್ರಧಾನಾಶ್ಚ ಗುಣಪ್ರಧಾನಾಃ ॥ ೭೯ ॥

---

೭೯. ಸ್ವಾಯಂಭುವೋ ಮನುಶ್ಚೈವ ಪೃಥುಶ್ಚೈವಾರ್ಜುನಾವಪಿ ।
ಬ್ರಹ್ಮಶೇಷವಿಪಾ ರುದ್ರ ಇಂದ್ರ ಋಷ್ಯಾದಯಸ್ತಥಾ ॥
ವಿಷ್ಣ್ವಾವೇಶಯುತಾಃ ಸರ್ವೇ ನ ತು ವಿಷ್ಣುಸ್ವರೂಪಕಾಃ ॥ ಇತಿ ತತ್ತ್ವನಿರ್ಣಯೇ –ಭಾ. ತಾ.(೩/೨೨/೫೧)

೭೯. ಹರೇಃ ಸನ್ನಿಧಿನಾ ಭಾವಯುಕ್ತಾಃ ಭಕ್ತಿಯುಕ್ತಾಃ । ಸನ್ನಿಧಿಜ್ಞಾಪನಾಯ ಹರೇರ್ಭಕ್ತಿರೇವ ಮುಖ್ಯಂ ಲಿಂಗಮಿತಿ ಸೂಚನಾಯ ಭಕ್ತೇಃ ಸನ್ನಿಧಿನಾ ಸಹೋಕ್ತಿಃ । –(ವಾ)

ಸನ್ನಿಧಿಭಾವಃ ಸಾನ್ನಿಧ್ಯಂ ತೇನ ಯುಕ್ತಾಃ ಇತಿ ಹೇತುಗರ್ಭವಿಶೇಷಣಮ್ । –(ವ)

ಸನ್ನಿಧಿಭಾವಃ – ಸನ್ನಿಧಾನಂ ತೇನ ಯುಕ್ತಾಃ । –(ಜ)

೭೯. ಹರಿಸನ್ನಿಧಿಭಕ್ತಿಭ್ಯಾಂ ಯುಕ್ತಾ ಇತ್ಯರ್ಥಃ । – (ಸ.)

ಅ: ಕಾರ್ತವೀರ್ಯಾರ್ಜುನನೇ ಮೊದಲಾದ ಯಾವ ಇತರ ಸಾವಿರಾರು ರಾಜರು ಹೆಚ್ಚು ಬಲಶಾಲಿಗಳು, ಧರ್ಮಪ್ರಧಾನರು, ಗುಣಪ್ರಧಾನರು ಎಂಬುದಾಗಿ ಇರುವರೋ, ಅವರೆಲ್ಲರೂ ಶ್ರೀಹರಿಯ ಸಾನ್ನಿಧ್ಯದಿಂದ ಯುಕ್ತರಾದವರು.

ವಿ: ಬಲ, ಧರ್ಮ, ಗುಣ ಇವೇ ಮೊದಲಾದವುಗಳಲ್ಲಿ ಯಾರಲ್ಲೇ ವಿಶೇಷಹಿರಿಮೆ ಕಂಡು ಬಂದಾಗಲೂ, ಅದಕ್ಕೆಲ್ಲ ಅವರಲ್ಲಿನ ಶ್ರೀಹರಿಯ ವಿಶೇಷಸನ್ನಿಧಾನವೇ ಮುಖ್ಯಕಾರಣ ಎಂದು ತಿಳಿಯಬೇಕು; ಶ್ರೀಹರಿಯೊಂದಿಗೆ ಅವರಿಗೆ ಅಭೇದವನ್ನಾಗಲೀ, ಸಾಮ್ಯವನ್ನಾಗಲೀ ಸರ್ವಥಾ ತಿಳಿಯಕೊಡದು ಎಂದು ಭಾವ.

ಭರತಃ ಕಾರ್ತವೀರ್ಯಶ್ಚ ವೈನ್ಯಾದ್ಯಾಶ್ಚಕ್ರವರ್ತಿನಃ ।
ಗಯಶ್ಚ ಲಕ್ಷ್ಮಣಾದ್ಯಶ್ಚ ತ್ರಯೋ ರೋಹಿಣಿನಂದನಃ ।
ಪ್ರದ್ಯುಮ್ನ ರೌಕ್ಮಿಣೇಯಶ್ಚ ತತ್ಪುತ್ರಶ್ಚಾನಿರುದ್ಧಕಃ ।
ನರಃ ಫಲ್ಗುನ ಇತ್ಯಾದ್ಯಾ ವಿಶೇಷಾವೇಶಿನೋ ಹರೇಃ ।

– ಎಂದು ಎರಡನೇ ಅಧ್ಯಾಯದಲ್ಲಿ ಹೇಳಿರುವುದರಿಂದ ಇಲ್ಲಿಯ 'ಆದಿ' ಶಬ್ದದಿಂದ ಭರತ, ಪೃಥು ಮೊದಲಾದವರನ್ನು ಗ್ರಹಿಸಬೇಕು.

ಸೀತೆಯಾಗಿ ಮಹಾಲಕ್ಷ್ಮಿಯ ಪ್ರಾದುರ್ಭಾವ

ಸ್ವಯಂ ರಮಾ ಸೀರತ ಏವ ಜಾತಾ
ಸೀತೇತಿ ರಾಮಾರ್ಥಮನೂಪಮಾ ಯಾ ।
ವಿದೇಹರಾಜಸ್ಯ ಹಿ ಯಜ್ಞಭೂಮೌ
ಸುತೇತಿ ತಸ್ಯೈವ ತತಸ್ತು ಸಾऽಭೂತ್ ॥ ೮೦ ॥

---

೭೯. ಕಾರ್ತವೀರ್ಯಃ ಪೃಥುಶ್ಚೈವ ದೌಷ್ಮಂತಿರ್ಭರತಸ್ತಥಾ ।
ಶಶಬಿಂದುಶ್ಚ ಮಾಂಧಾತಾ ಕಕುತ್ಸ್ಥಾದ್ಯಾಸ್ತಥಾऽಪರೇ ।
ಸರ್ವೇ ತೇ ವಿಷ್ಣುನಾऽऽವಿಷ್ಟಾವಿಷ್ಣೋರ್ಭಿನ್ನಾಃ ಸದೈವ ತು । – ಬೃಹದಾರಣ್ಯಕೋಪನಿಷದ್ಭಾಷ್ಯ

೮೦. ಸ್ವಯಂ ಸ್ವತಂತ್ರೇಣ ಪರಮಾತ್ಮನಾ ಸ್ವಯಂ ಸ್ವಯಮೇವ ಸದಾ ರಮತೇ ಇತಿ ಸ್ವಯಂ ರಮಾ ಏತಾದೃಶೀ ಶ್ರೀಃ । ಅತ ಏವಾವಿನಾಭೂತತ್ವಾದೇವ ರಾಮಾರ್ಥಂ ಸೀತೇತಿ ಜಾತಾ । –(ವಾ)

೮೦. ಸೀರತೋ ಲಾಂಗಲಾಜ್ಜಾತಾ ಅತೋ ನಾಮ್ನಾ ಸೀತಾ ಜಾತಾ ಇತ್ಯರ್ಥಃ । –(ವ)

೮೦. ಅನೂಪಮಾ ಉತ್ಕರ್ಷೇಣ ಉಪಮಾ ಊಪಮಾ, ನ ವಿದ್ಯತೇ ಊಪಮಾ ಯಸ್ಯಾಃ ಸಾ ಅನೂಪಮಾ । ಸ್ತ್ರೀತ್ವಾದಿನಾ ಕಿಂಚಿತ್ ಸಾಮ್ಯಸದ್ಭಾವೇऽಪಿ ಸೌಂದರ್ಯಾದಿದಿವ್ಯಗುಣೋತ್ಕರ್ಷಸ್ಯ ನ ಕ್ವಾಪ್ಯುಮಾ ಇತಿ ಭಾವಃ। – ವಾ

ಅ: ಅನಂತರ ಅನುಪಮಳಾದ ಸಾಕ್ಷಾತ್ ಮಹಾಲಕ್ಷ್ಮಿಯು ನೇಗಿಲಿನಿಂದ ಶ್ರೀರಾಮಸೇವೆಗೆಂದು ಅವತರಿಸಿದರು; ವಿದೇಹರಾಜನಾದ ಜನಕನ ಯಜ್ಞಭೂಮಿಯಲ್ಲಿ ಜನಿಸಿದ್ದರಿಂದ ಆತನ ಪುತ್ರಿ ಎನ್ನಿಸಿದರು;

ವಿ: ೧) ಜನಕರಾಜನು ಸಂತಾನಕ್ಕೆಂದು ಶಾಸ್ತ್ರೋಕ್ತರೀತಿಯಲ್ಲಿ ಯಜ್ಞವೊಂದನ್ನು ಕೈಗೊಂಡು ಭೂಶೋಧನಕ್ಕೆಂದು ಭೂಮಿಯನ್ನು ನೇಗಿಲಿನಿಂದ ಉಳುತ್ತಿದ್ದಾಗ, ಸೀತಾದೇವಿಯು ಶಿಶುರೂಪದಿಂದ ಕಾಣಿಸಿಕೊಂಡರು. ಎಂದರೆ ರಮಾದೇವಿಯ ಅವತಾರರೂಪಗಳೂ ಸಹ ಮೂಲರೂಪದಂತೆಯೇ ಅಪ್ರಾಕೃತ; ಅವರಿಗೆ ಸ್ತ್ರೀಪುರುಷ ನಿಮಿತ್ತದಿಂದ ಬರುವ ಪ್ರಾಕೃತದೇಹವು ಎಂದೂ ಇಲ್ಲ ಎಂದು ಭಾವ.

೨) ಹೀಗೆ ವಾಸ್ತವವಾಗಿ ಜನಕರಾಜನ ಮಗಳಲ್ಲವಾದರೂ, ಆತನ ಯಜ್ಞಭೂಮಿಯಲ್ಲಿ ದೊರೆತ ಕಾರಣದಿಂದಾಗಿ ಸೀತಾದೇವಿಗೆ 'ಜಾನಕೀ', 'ವೈದೇಹೀ', 'ಮೈಥಿಲೀ' ಎಂದು ಪ್ರಸಿದ್ಧಿ ಬಂದಿದೆ.

೩) ಭಗವಂತನ ಶ್ರೀನರಸಿಂಹರೂಪವು ಸ್ತಂಭದಿಂದ ಪ್ರಾದುರ್ಭವಿಸಿದಂತೆ, ಮಹಾಲಕ್ಷ್ಮಿಯ ಸೀತಾರೂಪ ಭೂಮಿಯಿಂದ ಪ್ರಾದುರ್ಭವಿಸಿದೆ; ಅಸ್ವತಂತ್ರರಾದರೂ ನಿತ್ಯಮುಕ್ತರಾದ ರಮಾದೇವಿಗೆ ಹೀಗೆ ಪ್ರಾಕೃತದೇಹವಿಲ್ಲದಿರುವಾಗ, ಸ್ವತಂತ್ರನೂ ನಿತ್ಯಮುಕ್ತನೂ ಆದ ಪರಮಾತ್ಮನಿಗೆ ಪ್ರಾಕೃತದೇಹವು ಎಂದೂ ಇರುವುದಿಲ್ಲವೆಂಬುದು ಕೈಮುತ್ಯಸಿದ್ಧ.

---

೮೦. ವಿದೇಹರಾಜ್ಯಸ್ಯ ಜನಕಸ್ಯ ಯಜ್ಞಭೂಮೌ ಯಜ್ಞಾರ್ಥಂ ಲಾಂಗಲೇನ ಶೋಧನೇ ಕ್ರಿಯಮಾಣೇ ತತ್ರಾವಿರ್ಭೂತತ್ವಾತ್ ತತ ಏವ ಕಾರಣಾತ್ ತಸ್ಯ ಜನಕಸ್ಯ ಸುತೇತಿ ಸಾ ಸೀತಾ ಪ್ರಸಿದ್ಧಾऽಭೂದಿತ್ಯರ್ಥಃ। –(ವ)

೮೦. ತಸ್ಯ ಲಾಂಗಲಹಸ್ತಸ್ಯ ಕೃಷತಃ ಕ್ಷೇತ್ರಮಂಡಲಮ್ ।
ಅಹಂ ಕಿಲೋತ್ಥಿತಾ ಭಿತ್ವಾ ಜಗತೀಂ ನೃಪತೇಃ ಸುತಾ ॥ –ವಾ. ರಾ. (೨೧/೧೧೮)

೮೧. ನಿರ್ಣಯಾತ್ಮಕಃ ನಿರ್ಣಯಜನಕಃ। –(ಜ)

ಸರ್ಗಾನುಸರ್ಗವರ್ಣನವ್ಯಾಜೇನ ಸಮಸ್ತಾಗಮನಿರ್ಣಯಃ ಕೃತಃ ಇತಿ ಭಾವಃ। –(ವ)

೮೧. ಯತ್ರ ಬ್ರಹ್ಮಾಂತರೋತ್ಪತ್ತಿಃ ಬ್ರಹ್ಮಕಲ್ಪಸ ಈರಿತಃ ॥ –ಭಾ.ತಾ.(೨/೮/೨೮)

೮೧. 'ಮಹದಾದ್ಯಂಡಪರ್ಯಂತಃ ಸರ್ಗೋऽಂಡೇ ಬ್ರಹ್ಮಣಸ್ತ್ರಯಃ।
ಅನುಸರ್ಗ ಇತಿ ಪ್ರೋಕ್ತಃ ಪೌರುಷಶ್ಚೇತಿ ಕಥ್ಯತೇ।
ಪಂಚಭೂತಸಮೂಹೇನ ಜಾತಃ ಪುರುಷ ಉತ್ಯತೇ।
ಬಹುತ್ವಾತ್ತತ್ರ ಭೂತಾನಾಂ ತಾವತ್ವಾತ್ತತ್ತ್ವಮೇಕಜಮ್' ಇತಿ ವ್ಯೋಮಸಂಹಿತಾಯಾಮ್ ॥
–ಭಾ.ತಾ.(೨/೧೦/೩)

೪) ಜನಕರಾಜನ ಯಜ್ಞಭೂಮಿಯಲ್ಲಿ ಪ್ರಾದುರ್ಭವಿಸಿದ್ದರಿಂದ 'ಜಾನಕೀ' ಎನ್ನಿಸಿದಂತೆ, ಭೂಮಿಯಲ್ಲಿ ಪ್ರಾದುರ್ಭವಿಸಿದ್ದರಿಂದ 'ಭೂಮಿಜಾ' ಎಂಬ ಪ್ರಸಿದ್ಧಿ ಅವರಿಗಿದೆ ಎಂದೂ ತಿಳಿಯಬೇಕು.

ಅಧ್ಯಾಯೋಪಸಂಹಾರ

ಇತ್ಯಾದಿಕಲ್ಪೋತ್ಥಿತ ಏಷ ಸರ್ಗೋ
ಮಯಾ ಸಮಸ್ತಾಗಮನಿರ್ಣಯಾತ್ಮಕಃ ।
ಸಹಾನುಸರ್ಗಃ ಕಥಿತೋಽತ್ರ ಪೂರ್ವೋ
ಯೋ ಯೋ ಗುಣೈರ್ನಿತ್ಯಮಸೌ ವರೋ ಹಿ ॥ ೮೧ ॥

ಅಃ ಈ ತೆರನಾಗಿ ಆದಿಕಲ್ಪದಲ್ಲಿ ನಡೆದ ಸೃಷ್ಟಿಯು ಅನುಸರ್ಗದ ಸಮೇತವಾಗಿ ಸಕಲ ಆಗಮಗಳ ನಿರ್ಣಯಪೂರ್ವಕವಾಗಿ ನನ್ನಿಂದ ಹೇಳಲ್ಪಟ್ಟಿತು. ಇಲ್ಲಿ ಯಾರು ಯಾರು ಮೊದಲು ಹುಟ್ಟಿದವರೋ ಅವರೆಲ್ಲ ಗುಣಗಳಲ್ಲಿ ಸದಾ ಉತ್ತಮರಾಗಿರುವರು; ಇದು ನಿಶ್ಚಿತ.

ವಿಃ ಆದಿಕಲ್ಪದಲ್ಲಿ ನಡೆದ ಸೃಷ್ಟಿ ಎಂದರೆ ತತ್ತ್ವಸೃಷ್ಟಿ ; ಇದು ಬ್ರಹ್ಮಾಂಡದ ಹೊರಗೆ ನಡೆದದ್ದು ; ಬ್ರಹ್ಮಾಂಡದೊಳಗೆ ನಡೆದ ಸೃಷ್ಟಿ (ಪಾದ್ಮಸೃಷ್ಟಿ) ಇದಕ್ಕೆ ಅನುಸರ್ಗ ಎಂದು ಹೆಸರು. ಈ ಎರಡೂ ಸೃಷ್ಟಿಗಳಲ್ಲೂ ಮೊದಲು ಹುಟ್ಟಿದವರು ಅನಂತರ ಹುಟ್ಟಿದವರಿಗಿಂತ ಸಕಲ–ಗುಣಗಳಲ್ಲೂ ಉತ್ತಮರಾದವರು ಎಂದು ಭಾವ.

'ಉಕ್ತಕ್ರಮಾತ್ ಪೂರ್ವಭವಸ್ತು ಯೋ ಯಃ
ಶ್ರೇಷ್ಠ ಸ ಸ ಹ್ಯಾಸುರಕಾನ್ ಋತೇ ಚ' –(ಶ್ಲೋ. ೩೧)

– ಇತ್ಯಾದಿಯಾಗಿ ಈ ಮೊದಲೇ ಹೇಳಿರುವುದನ್ನೂ ಅದರಲ್ಲಿಯ ವಿಶೇಷಾಂಶಗಳನ್ನೂ ಇಲ್ಲಿ ಗಮನಿಸಬೇಕು.

---

೮೨. ಪಾಶ್ಚಾತ್ಯಕಲ್ಪೇಷು ಪಾದ್ಮಕಲ್ಪಾತ್ ಪಶ್ಚಿಮಕಲ್ಪಾ ಅಪಿ ಪಾಶ್ಚಾತ್ಯಕಲ್ಪಾ ಇತ್ಯುಚ್ಯಂತೇ । 'ಪಶ್ಚಾತ್ ಪುರಸ್ತಾದುಭಯಂ ನೋ ಅಸ್ತು' ಇತಿ ಶ್ರುತೇಃ । ಪಾದ್ಮಕಲ್ಪಾತ್ ಪೃಷ್ಠತಃ ಪುರತಶ್ಚ ವಿದ್ಯಮಾನಾಃ ಕಲ್ಪಾಃ ಪಾಶ್ಚಾತ್ಯಕಲ್ಪಾ ಇತ್ಯುಚ್ಯಂತೇ। –(ವಾ)

೮೨. ವಿಶೇಷವಾಕ್ಯೈಃ ವಿಶೇಷಪ್ರಮಾಣೈಃ । ಏತತ್ – ಪ್ರಮೇಯಂ ತಾರತಮ್ಯಾದಿ । –(ಜ)

ಸರ್ಗಭೇದದ ಬಗ್ಗೆ ನಿರ್ಣಯ

ಪಾಶ್ಚಾತ್ಯಕಲ್ಪೇಷ್ವಪಿ ಸರ್ಗಭೇದಾಃ
ಶ್ರುತೌ ಪುರಾಣೇಷ್ವಪಿ ಚಾನ್ಯಥೋಕ್ತಾಃ ।
ನೋತ್ಕರ್ಷಹೇತುಃ ಪ್ರಥಮತ್ವಮೇಷು
ವಿಶೇಷವಾಕ್ಯೈರವಗಮ್ಯತೇ ತತ್ ॥ ೮೨ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಸರ್ಗಾನುಸರ್ಗಪ್ರಲಯಪ್ರಾದುರ್ಭಾವನಿರ್ಣಯೋನಾಮ ತೃತೀಯೋऽಧ್ಯಾಯಃ ॥

ಅ: ಅನಂತರದ ಕಲ್ಪಗಳಲ್ಲಿ ಸೃಷ್ಟಿಪ್ರಭೇದಗಳು ಶ್ರುತಿಯಲ್ಲೂ, ಪುರಾಣಗಳಲ್ಲೂ ಹಿಂದಿನ ಎರಡು ಕಲ್ಪಗಳಲ್ಲಿ ಹೇಳಿದ್ದಕ್ಕಿಂತ ಭಿನ್ನವಾದ ರೀತಿಯಲ್ಲಿ ಹೇಳಲ್ಪಟ್ಟಿದೆ; ಆ ಸರ್ಗಗಳಲ್ಲಿ ಮೊದಲು ಹುಟ್ಟುವುದು ಎಂಬುದು ಉತ್ಕರ್ಷಕ್ಕೆ ಗಮಕವಲ್ಲ. ಈ ಪ್ರಮೇಯವನ್ನು ವಿಶೇಷ (ಪ್ರಮಾಣ) ವಾಕ್ಯಗಳಿಂದ ತಿಳಿದುಕೊಳ್ಳಬೇಕು.

ವಿ: ೧) ಆದಿ(ತತ್ತ್ವ)ಸೃಷ್ಟಿ ಮತ್ತು ಪಾದ್ಮಸೃಷ್ಟಿಗಳನ್ನು ಹೊರತುಪಡಿಸಿ ಅವಕ್ಕಿಂತ ಮುಂಚಿನ ಮತ್ತು ಅನಂತರದ ವಾರಾಹಾದಿ ಅವಾಂತರಕಲ್ಪಗಳಲ್ಲಿನ ಸೃಷ್ಟಿಯು ತಾರತಮ್ಯ ಕ್ರಮದಲ್ಲಿ ನಡೆಯದೆ ವ್ಯತ್ಯಸ್ತವಾದ ಕ್ರಮದಲ್ಲಿ ನಡೆದಿದೆ. ಅಲ್ಲಿನ ಜನ್ಮ ಕ್ರಮವು ತಾರತಮ್ಯ ಜ್ಞಾಪಕ–ವಾದುದಲ್ಲ; ಇವು ಮಾತ್ರವೇ ತಾರತಮ್ಯಜ್ಞಾಪಕ ಎಂದು ಭಾವ.

೨) ಸನಕಾದಿಗಳು ರುದ್ರದೇವರಿಗಿಂತ ಕಡಿಮೆಯಾದವರಾದರೂ ಅವರು ಮೊದಲು ಹುಟ್ಟಿ ಅನಂತರ ರುದ್ರದೇವರು ಅವತರಿಸಿದಂತೆ ವರ್ಣಿತವಾಗಿರುವ ಭಾಗವತತೃತೀಯಸ್ಕಂಧದ ಸೃಷ್ಟಿಯನ್ನು ಇಲ್ಲಿ ನಿದರ್ಶನವನ್ನಾಗಿ ಗಮನಿಸಬೇಕು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ
'ಸರ್ಗಾನುಸರ್ಗಪ್ರಲಯಪ್ರಾದುರ್ಭಾವನಿರ್ಣಯ'ವೆಂಬ
ಮೂರನೆಯ ಅಧ್ಯಾಯ ಮುಗಿಯಿತು ॥ ೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೪

(ಶ್ರೀರಾಮಚರಿತೇ ಅಯೋಧ್ಯಾಪ್ರವೇಶಃ)

(ತಾಟಕಾವಧೆ, ಸುಬಾಹುವಧೆ, ಮಾರೀಚನಿಗ್ರಹ, ಅಹಲ್ಯೋದ್ಧಾರ, ಶಿವಧನುರ್ಭಂಗ, ಸೀತಾಕಲ್ಯಾಣ, ರಾಮಪರಶುರಾಮರ ಸಮಾಗಮ)

ಶ್ರೀರಾಮ ಬೆಳೆದದ್ದು ಲೋಕದೃಷ್ಟಿಯಿಂದ

ಅಥಾಭ್ಯವರ್ಧಂಶ್ಚತುರಾಃ ಕುಮಾರಾ
ನೃಪಸ್ಯ ಗೇಹೇ ಪುರುಷೋತ್ತಮಾದ್ಯಾಃ ।
ನಿತ್ಯಪ್ರವೃದ್ಧಸ್ಯ ಚ ತಸ್ಯ ವೃದ್ಧಿ-
ರಪೇಕ್ಷ್ಯ ಲೋಕಸ್ಯ ಹಿ ಮಂದದೃಷ್ಟಿಮ್ ॥ ೧ ॥

ಅ: ಅವತಾರ ಮಾಡಿದ ಅನಂತರ ಪುರುಷೋತ್ತಮನಾದ ರಾಮನೇ ಮೊದಲಾದ ದಶರಥರಾಜನ ಚತುರರಾದ ಕುಮಾರರು ಅವನ ಮನೆಯಲ್ಲಿ ಚೆನ್ನಾಗಿ ಬೆಳೆಯತೊಡಗಿದರು. ನಿತ್ಯದಲ್ಲೂ ದೇಶತಃ ಕಾಲತಃ ಮತ್ತು ಗುಣತಃ ಪರಿಪೂರ್ಣನಾದ ಶ್ರೀರಾಮನಿಗೆ ಬೆಳವಣಿಗೆ ಎಂಬುದು ಜನರ ಮಂದದೃಷ್ಟಿಯ ವಿವಕ್ಷೆಯಿಂದ ಮಾತ್ರ.

---

೧. ಚಾತುರ್ಯಾದಿಗುಣಾನಾಮಪಿ ದಿನೇ ದಿನೇ ಅಭಿವೃದ್ಧಿರಿತಿ ಸೂಚನಾಯ 'ಚತುರಾ' ಇತಿ ವಿಶೇಷಣಮ್ । –(ವಾ.)

ಚಾತುರ್ಯಾದಿವಿಶಿಷ್ಟಾಃ । –(ವ.)

೧. ಅಭಿನವಶಿಶೂನಾಂ ತದೈವ ಬಹಿರ್ಗಮನಾಭಾವಾತ್ ಗೇಹೇ ಇತ್ಯುಕ್ತಂ । –(ವಾ.)

೧. ರಾಮಸ್ಯ ತು ಪ್ರಾದುರ್ಭಾವಮಾತ್ರಂ ನ ಲಕ್ಷ್ಮಣಾದಿವತ್ ಸಾಕ್ಷಾತ್ ಕುಮಾರತ್ವಮಿತಿ ಸೂಚನಾಯ ಪುರುಷೋತ್ತಮಪದಮ್ । –(ವಾ.)

ಅತ ಏವ ಪುರುಷೋತ್ತಮಃ ಅದ್ಯ ಪೂರ್ವಮೇವ ವಿದ್ಯಮಾನೋ ಯೇಷಾಂ ತೇ ಪುರುಷೋತ್ತಮಾದ್ಯಾ ಇತಿ ಸಮಾಸಃ । –(ವಾ.)

೧. ನಿತ್ಯಪ್ರವೃದ್ಧಸ್ಯಾಪೀತ್ಯರ್ಥಃ । ದಿನೇ ದಿನೇ ಅಭಿವೃದ್ಧಿರ್ಗಹಿತಾ ಇತಿ ಸೂಚತಂ ತತ್ಫಲಂ । 'ಅಪಿಃ ಪದಾರ್ಥಸಂಭಾವನಾನ್ವವಸರ್ಗ ಗರ್ಹಾಸಮುಚ್ಚಯೇಷು' ಇತ್ಯನುಶಾಸನಾತ್। –(ವಾ.)

ನಿತ್ಯ ಪ್ರವೃದ್ಧಸ್ಯ ನಿತ್ಯಂ ಪ್ರವೃದ್ಧಸ್ಯ ದೇಶತಃ ಕಾಲತೋ ಗುಣತಃ ಪರಿಪೂರ್ಣಸ್ಯ । (ವ.)

೧. ಲಕ್ಷ್ಮಣಾದೀನಾಂ ಪ್ರಾಕೃತದೇಹವತ್ತ್ವೇನ ವೃದ್ಧಿಃ ಸಂಭವತೀತಿ ಸೂಚನಾಯ 'ತಸ್ಯ' ಇತ್ಯೇಕವಚನಂ । –(ವಾ.)

ಏಃ ೧) ಎರಡನೆಯ ಅಧ್ಯಾಯದ ಶ್ಲೋಕದಲ್ಲಿ **'ಭೈಮೀ ತನುರ್ಮಾರುತ ಆಹ ಕಥಾಃ ಪರಸ್ಯ'** ಎಂಬುದಾಗಿ ಭಗವದವತಾರದ ಕಥೆಯನ್ನು ನಿರೂಪಿಸುವುದಾಗಿ ತಿಳಿಸಿದ ಶ್ರೀಮದಾಚಾರ್ಯರು ಮೂರನೆಯ ಅಧ್ಯಾಯದಲ್ಲಿ ಶ್ರೀಹರಿಯ ಶ್ರೀರಾಮಾವತಾರಪರ್ಯಂತ ಚರಿತ್ರೆಯನ್ನು ನಿರೂಪಿಸಿ, ಈ ಅಧ್ಯಾಯದಿಂದ ಅದನ್ನು ಮುಂದುವರೆಸುತ್ತಿರುವರು; ಈ ಶ್ರೀರಾಮಕಥಾನಿರೂಪಣೆಯು ೯ನೇ ಅಧ್ಯಾಯ ಪರಿಸಮಾಪ್ತಿಯವರೆಗೂ ಮುಂದುವರೆಯುವುದು. ಆದ್ದರಿಂದ ಮೂರನೇ ಅಧ್ಯಾಯದ ೫ನೇ ಶ್ಲೋಕದಿಂದ ಪ್ರಾರಂಭಿಸಿ ೯ನೇ ಅಧ್ಯಾಯದ ಪರಿಸಮಾಪ್ತಿಯವರೆಗಿನ ಗ್ರಂಥಭಾಗವನ್ನು **'ರಾಮಾಯಣತಾತ್ಪರ್ಯನಿರ್ಣಯ'** ಎಂದು ವ್ಯವಹರಿಸಬಹುದು.

೨) ಶ್ರೀರಾಮ ಸಾಕ್ಷಾತ್ ನಾರಾಯಣ; ಅವನಿಗೆ ಎಂದೂ ಪ್ರಾಕೃತದೇಹದ ಪ್ರಸಕ್ತಿಯೇ ಇಲ್ಲ; ಅವನು ದೇಶ, ಕಾಲ ಮತ್ತು ಗುಣ ಈ ಮೂರರಿಂದಲೂ ಪರಿಪೂರ್ಣನು; ಆದ್ದರಿಂದ ಅವನು ಮಗುವಿನಂತೆ ಕಂಡದ್ದು, ಕ್ರಮವಾಗಿ ಬೆಳೆದದ್ದು ಎಲ್ಲ ಅವನ ವ್ಯಾಪ್ತಮೂರ್ತಿಯನ್ನು ಕಾಣಲಾಗದ ಜನರ ಮಂದದೃಷ್ಟಿಗೆ ಕಾಣಿಸಿದ್ದು ಮಾತ್ರ; ವಾಸ್ತವವಾಗಿ ಅಲ್ಲ. ಸೂರ್ಯನು ಸದಾ ಇದ್ದರೂ ಅವನು ಉದಿಸಿದ, ಅವನೀಗ ಬಾಲಸೂರ್ಯ, ಹೊಂಬಣ್ಣದವನು, ಅನಂತರ ತರುಣಸೂರ್ಯ

---

೧. ಮಂದದೃಷ್ಟೀ। ವ್ಯಾಪ್ತಮೂರ್ತಿದರ್ಶನರಹಿತದೃಷ್ಟೀಂ ಅಪೇಕ್ಷ್ಯ ವೃದ್ಧಿರುಚ್ಯತೇ ಹೀತಿ ಯೋಗ್ಯಪದಾಧ್ಯಾಹಾರೇಣ ಯೋಜನಾ । ಸರ್ವದಾ ವಿದ್ಯಮಾನಾಮಪಿ ವೃದ್ಧಿಮಾಚ್ಛಾದ್ಯ ದಿನೇ ದಿನೇ ಈಷದೀಷತ್ ಪ್ರದರ್ಶಯತೀತಿ ಭಾವಃ। –(ವಾ.)

೧. ಅತ ಏವ ಕ್ರಮಿಕವೃದ್ಧಿದರ್ಶನಾಖ್ಯಫಲಸ್ಯ ಪರಗಾಮಿತ್ವಾದಭ್ಯವರ್ಧನ್ತಿತಿ ಪರಸ್ಮೈಪದ ಪ್ರಯೋಗಃ। –(ವಾ.)

ಅತ್ರ 'ಅಭ್ಯವರ್ಧಂತ' ಇತಿ ಆತ್ಮನೇಪದೇ ವಕ್ತವ್ಯೇ ಯತ್ ಪರಸ್ಮೈಪದಂ ಪ್ರಯುಕ್ತಂ । ತೇನ ವ್ಯತ್ಯಯೇನ ಪ್ರಕೃತ್ಯರ್ಥವ್ಯತ್ಯಯೋಽಸ್ತೀತಿ ಸೂಚಿತಮ್ । –(ವ.)

೧. 'ನ ಕರ್ಮಣಾ ವರ್ಧತೇ ನೋ ಕನೀಯಾನ್' ಇತ್ಯಾದಿ ಶ್ರುತಿ ಪ್ರಸಿದ್ಧಿಸೂಚನಾಯ ಹಿ ಶಬ್ದಃ। –(ವಾ.)

ಅಭ್ಯವರ್ಧನ್ – ಅಭ್ಯವರ್ಧಂತ । ವೃಧು ವೃದ್ಧೌ ಇತ್ಯಸ್ಯ ಚ ಕ್ಷಿಪ್ ಧಾತೋಃ ಡಿತ್ಕರಣಾದನುದಾತ್ತಪ್ರಯುಕ್ತಾತ್ಮನೇಪದಸ್ಯಾನಿತ್ಯತ್ವಾತ್ 'ಸ್ಥಾನಯನ್ನಿರ್ಮೋಕ ಸಂಧಿ' ಇತಿ ಪ್ರಯೋಗಾಚ್ಚ ಉಭಯಪದತ್ವೇಽಪಿ ಯೋ ಯೋ ಯತ್ರ ಪರಸ್ಮೈಪದಪ್ರಯೋಗಃ ಸ ನ ರಾಮಗಾಮಿಫಲಂ ಕಿಂತ್ವನ್ಯಗಾಮೀತಿ ಸೂಚಯತಿ। –(ಜ.)

೧. ಆಕಾಶವೃದ್ಧಿವದ್ವೃದ್ಧಿರ್ವಿಷ್ಣೋಃ ಸ್ಯಾನ್ನೈವ ಚಾನ್ಯಥಾ।
ನ ವರ್ಧತೇ ನೋ ಕನೀಯಾನಿತಿ ಹ್ಯೇತಂ ಶ್ರುತಿರ್ಜಗೌ ॥
ಮಹಾತಾತ್ಪರ್ಯರೋಧಾಚ್ಚ ಶ್ರುತ್ಯರ್ಥೋ ನಾಪರೋ ಭವೇತ್ ॥ –ಋಗ್ಭಾಷ್ಯ(೧/೫/೧೮೯, ೧೯೦)

ನಿತ್ಯವೃದ್ಧತ್ವತೋ ವಿಷ್ಣೋರ್ವರ್ಧನಂ ತು ಪ್ರಕಾಶನಮ್ । –ಋಗ್ಭಾಷ್ಯ(೧/೧೦/೫)

ವೃದ್ಧಸೂರ್ಯ ಇತ್ಯಾದಿಯಾಗಿ ಜನರು ಪ್ರತಿನಿತ್ಯ ವ್ಯವಹರಿಸುವರು; ಆದರೆ ಸೂರ್ಯನು ನಾವು ತಿಳಿದಂತೆ ಹುಟ್ಟುವುದೂ ಇಲ್ಲ; ಪ್ರತಿನಿತ್ಯ ಬಾಲ್ಯಾದಿ ಅವಸ್ಥೆಗಳನ್ನು ಹೊಂದುವುದೂ ಇಲ್ಲ; ಇದರಂತೆ ಜನನ, ವೃದ್ಧಿ ಮೊದಲಾದವುಗಳನ್ನು ಹೊಂದದ ಭಗವಂತನ ಅವತಾರಗಳೂ ಸಹ ಸದಾ ಪೂರ್ಣ ಎಂದು ತಿಳಿಯಬೇಕು.

೩) ಲಕ್ಷ್ಮಣ, ಭರತ, ಶತ್ರುಘ್ನರು, ಕ್ರಮವಾಗಿ ಶೇಷ, ಪ್ರದ್ಯುಮ್ನ ಮತ್ತು ಅನಿರುದ್ಧರ ಅವತಾರವಾದರೂ ಅವರಿಗೆ ಪ್ರಾಕೃತದೇಹಸಂಬಂಧ ಉಂಟು. ಆದ್ದರಿಂದ ಅವರು ಮಾತ್ರ ನಿಜಕ್ಕೂ ಬೆಳೆದರು ಎಂದೇ ತಿಳಿಯಬೇಕು.

೪) ಈ ಎಲ್ಲ ಅರ್ಥವನ್ನು ಸಹ ಶ್ರೀಮದಾಚಾರ್ಯರು **'ಅಭ್ಯವರ್ಧನ್'** ಎಂಬ ಪರಸ್ಮೈಪದಪ್ರಯೋಗದಿಂದ ಸೂಚಿಸಿರುವರು.

೫) ಶ್ರೀಹರಿಗೆ ಯಾವ ರೀತಿಯಲ್ಲೂ ವೃದ್ಧಿ ಮೊದಲಾದವುಗಳ ಪ್ರಸಕ್ತಿಯೇ ಎಂದೂ ಇಲ್ಲ ಎಂಬುದು 'ನ ಕರ್ಮಣಾ ವರ್ಧತೇ ನೋ ಕನೀಯಾನ್' ಇತ್ಯಾದಿ ಶ್ರುತಿಸಿದ್ಧ ಎಂಬುದನ್ನು **'ಹಿ'** ಶಬ್ದದಿಂದ ಸೂಚಿಸಿರುವರು.

ರಾಮನ ಮುಖದರ್ಶನದಿಂದ ಮೋಕ್ಷಾನಂದ

ನಿರೀಕ್ಷ್ಯ ನಿತ್ಯಂ ಚತುರಃ ಕುಮಾರಾನ್
ಪಿತಾ ಮುದಂ ಸಂತತಮಾಪ ಚೋಚ್ಚಮ್ ।
ವಿಶೇಷತೋ ರಾಮಮುಖೇಂದುಬಿಂಬ-
ಮವೇಕ್ಷ್ಯ ರಾಜಾ ಕೃತಕೃತ್ಯ ಆಸೀತ್ ॥ ೨ ॥

ಅ: ತಂದೆಯಾದ ದಶರಥರಾಜ ಪ್ರತಿನಿತ್ಯವೂ ತನ್ನ ನಾಲ್ವರು ಪುತ್ರರನ್ನು ನೋಡುತ್ತ ಉತ್ಕೃಷ್ಟವಾದ ಆನಂದವನ್ನು ಹೊಂದಿದ; ಶ್ರೀರಾಮಮುಖವೆಂಬ ಚಂದ್ರಮಂಡಲವನ್ನು ವಿಶೇಷವಾಗಿ ದಿಟ್ಟಿಸುತ್ತ ಆ ರಾಜ ಕೃತಕೃತ್ಯನಾದ.

---

೨. ಸಂತತಂ – ಅವಿಚ್ಛಿನ್ನಮಿತ್ಯರ್ಥಃ। –(ಜ.)

೨. ತದಭಿವೃದ್ಧೇಃ ಪಿತೃಸಂತೋಷಸ್ಯ ಚ ಸಮುಚ್ಚಯಾರ್ಥಃ 'ಚ' ಶಬ್ದಃ । ಜಗನ್ಮೋಹನಪುತ್ರದರ್ಶನೇ ಸತಿ ಸಂತೋಷಸ್ಯ ಸಂಭಾವನಾರ್ಥೋ ವಾ। –(ವಾ.)

೨. ಉಚ್ಚಂ ಯಥಾ ಭವತಿ ತಥಾ । ಉಚ್ಚಮಿತಿ ಕ್ರಿಯಾವಿಶೇಷಣಂ । –(ವಾ.)

ಏಃ ೧) ತನ್ನ ಮಕ್ಕಳ ಮುಖಾವಲೋಕನದಿಂದ ದಶರಥನಿಗಾದ ಆನಂದವನ್ನು ವರ್ಣಿಸುತ್ತಾ ಅದರಲ್ಲೂ ಶ್ರೀರಾಮನಮುಖವನ್ನು ಕಂಡಾಗಲಂತೂ ಅವನಿಗೆ ಮುಕ್ತನಾದಷ್ಟು ಹರ್ಷವಾಗುತ್ತಿತ್ತು ಎಂದು ತಿಳಿಸಿರುವರು.

೨) ಭಗವದಪರೋಕ್ಷದಿಂದ ಆಗುವ ಆನಂದ ಎಣೆಯಿಲ್ಲದ್ದು; ಅದರಿಂದಲೇ ಸಕಲ ಪುರುಷಾರ್ಥಪ್ರಾಪ್ತಿ ಎಂದು ಶಾಸ್ತ್ರಗಳು ಘೋಷಿಸಿವೆ; ಸ್ವತಃ ಭಗವಂತನೇ ಆದ ಶ್ರೀರಾಮನನ್ನು ಕಂಡಾಗ ಅಂತಹ ಆನಂದ ದಶರಥನಿಗೆ ಉಂಟಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಎಂದು ಭಾವ.

ಪುರಜನರಿಗೂ ಪರಮಾನಂದ

ತನ್ಮಾತರಃ ಪೌರಜನಾ ಅಮಾತ್ಯಾ
ಅಂತಃಪುರಾ ವೈಷಯಿಕಾಶ್ಚ ಸರ್ವೇ ।
ಅವೇಕ್ಷಮಾಣಾಃ ಪರಮಂ ಪುಮಾಂಸಂ
ಸ್ವಾನಂದತೃಪ್ತಾ ಇವ ಸಂಬಭೂವುಃ ॥ ೩ ॥

---

೨. ಅತಿಮನೋಹರರಾಮಶ್ರೀಮುಖೇಂದುದರ್ಶನೇನೈವ ಪರಮಾನಂದೋ ಜಾಯತೇ ಇತಿ ಭಾವೇನ ರಾಮಮುಖೇಂದುಬಿಂಬಮಿತ್ಯುಕ್ತಂ । ರಮಯತೀತಿ ವ್ಯುತ್ಪತ್ತ್ಯೇಃ ಸರ್ವಾಂಗೈರಪಿ ಹರ್ಷದಾಯಕೋ ರಾಮಃ । ತತ್ರಾಪಿ ಮುಖಸ್ಯ ಮಂದಸ್ಮಿತೇನ ಕೃಪಾಕಟಾಕ್ಷೇಣ ಚ ಅತ್ಯಂತಂ ಜನರಂಜಕತ್ವಸೂಚನಾಯ ಮುಖಗ್ರಹಣಂ । ತಸ್ಯೈವ ಇಂದುಬಿಂಬತ್ವನಿರೂಪಣಂ ಚ । – (ವಾ.)

೨. ಕೃತಾನಿ ಕೃತ್ಯಾನಿ ಕರ್ತುಂ ಯೋಗ್ಯಾನಿ ಪುಣ್ಯಾನಿ ಯಸ್ಯ ಸಃ ಕೃತಕೃತ್ಯಃ । –(ವಾ.)
ಕೃತಂ ಕೃತ್ಯಂ ಭಗವತ್ಪೀತಿಕೃದ್ಧರ್ಮೋ ಯೇನ ಸಃ । ತಥಾ ॥ – (ಜ.)
ಕೃತಕೃತ್ಯೋ – ಮುಕ್ತ ಇವ ಆಸೀದಿತ್ಯರ್ಥಃ । –(ವ.)

೨. ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

೨. ಸ್ಮರೇತ ಯಾಮಿನೀನಾಥಸಹಸ್ರಾಮಿತಕಾಂತಿಮತ್ ।
ಭವತಾಪಾಪನೋದೀಡ್ಯಂ ಶ್ರೀಪತೇರ್ಮುಖಪಂಕಜಮ್। – ದ್ವಾದಶಸ್ತೋತ್ರ

೨. ಸ ಚತುರ್ಭಿರ್ಮಹಾಭಾಗೈಃ ಪುತ್ರೈರ್ದಶರಥಃ ಪ್ರಿಯೈಃ ।
ಬಭೂವ ಪರಮಪ್ರೀತೋ ದೇವೈರಿವ ಪಿತಾಮಹಃ ॥ – (೧/೧೮/೩೨)

ತೇಷಾಂ ಕೇತುರಿವ ಜ್ಯೇಷ್ಠೋ ರಾಮೋ ರತಿಕರಃ ಪಿತುಃ ।
ಬಭೂವ ಭೂಯೋ ಭೂತಾನಾಂ ಸ್ವಯಂಭೂರಿವ ಸಂಮತಃ ॥ – (೧/೧೮/೨೪)

೩. ಅಂತಃಪುರಾಃ – ರಾಜಗೃಹಾಂತರೇವ ಪೂರ್ಯಂತೇ ಇತಿ ಪುರಾಣಿ ಸ್ವಸ್ಥಾನಾನಿ ಯಾಸಾಂ ತಾಃ ಅಂತಃಪುರಾದಾಸ್ಯ ಇತ್ಯರ್ಥಃ । – (ವಾ.)

ಅ: ಆ ಶ್ರೀರಾಮನ ತಾಯಂದಿರು, ಪುರಜನರು, ಮಂತ್ರಿಗಳು, ಅಂತಃಪುರಸ್ತ್ರೀಯರು ಮತ್ತು ಆ ರಾಷ್ಟ್ರದ ನಿವಾಸಿಗಳು ಮೊದಲಾಗಿ ಎಲ್ಲರೂ ಸ್ವರೂಪಾನಂದದಿಂದ ತೃಪ್ತರಾದಂತಾದರು.

ವಿಶ್ವಾಮಿತ್ರರ ಆಗಮನ

ತತಃ ಸುವಂಶೇ ಶಶಿನಃ ಪ್ರಸೂತೋ
ಗಾಧೀತಿ ಶಕ್ರಸ್ತನುಜೋಽಸ್ಯ ಚಾಸೀತ್ ।
ವರೇಣ ವಿಪ್ರತ್ವಮವಾಪ ಯೋಽಸೌ
ವಿಶ್ವಸ್ಯ ಮಿತ್ರಂ ಸ ಇಹಾಜಗಾಮ ॥ ೪ ॥

೩. ವಿಷಯೋ ರಾಷ್ಟ್ರಂ ತತ್ರತ್ಯಾ ಜನಾ ವೈಷಯಿಕಾಃ । –(ವಾ.)

೩. ಪ್ರತ್ಯೇಕಂ ಪುತ್ರವತ್ಯೋರಪಿ ಸುಮಿತ್ರಾಕೈಕೇಯ್ಯೋಃ ಲಾವಣ್ಯಾದಿಶುಭಗುಣೈಃ ಸರ್ವೋತ್ತಮ ಪರಮಪುರುಷ ರಾಮಸರ್ವಾಂಗದರ್ಶನಾದೇವ ಅತಿಶಯಿತಾನಂದೋ ಜಾಯತೇ ಇತಿ ಸೂಚನಾಯ ಪರಮಂ ಪುಮಾಂಸಮಿತ್ಯುಕ್ತಮಿತಿ ಭಾವಃ । –(ವಾ.)

೪. ತತಃ ಕುಮಾರಾಣಾಂ ಬಾಲ್ಯಾವಸ್ಥಾನಂತರಂ । ಇಹ ಅಯೋಧ್ಯಾಯಾಂ ಆಜಗಾಮೇತಿ ಯೋಜನಾ।–(ವಾ.)

೪. ಗಾಧೀ ಪುರಂದರಃ ಪ್ರೋಕ್ತಃ – ನಾರಾಯಣಪಂಡಿತಾಚಾರ್ಯರ 'ಅಂಶಾವತಾರ' (ಶ್ಲೋ. ೨೩)

೪. ಭವಿಷ್ಯತೋಽಪಿ ಕಾರ್ಯಸ್ಯ ನಿಶ್ಚಿತತ್ವಾದತೀತತ್ವೇನೋಕ್ತಿಃ । –(ವಾ.)

೪. ವಿಶ್ವಸ್ಯ ಮಿತ್ರಂ – ವಿಶ್ವಾಮಿತ್ರಃ । ಅಮಿತ್ರ ಇತಿ ಭ್ರಮನಿವಾರಣಾಯ ವಿಭಜ್ಯ ಕಥನಂ । ....ಅಸಮಸ್ತಪದೇ ಮಿತ್ರಪದಸ್ಯ ನಿತ್ಯಸಪುಂಸಕತ್ವಾತ್ ಸ ಇತ್ಯನೇನ ಸಂಬಂಧಃ । ಸಮಸ್ತಪದೇ ತು ವಿಶ್ವಸ್ಯ ಆ ಸಮಂತಾತ್ ಮಿತ್ರಂ ಯೋ ಮುನಿಃ ಸ ವಿಶ್ವಾಮಿತ್ರ ಇತಿ ವಿಗ್ರಹಃ । –(ವಾ.)

೪. .....ವರಂ ರಾಜನ್ ಸ್ಯಾಮಹಂ ಬ್ರಾಹ್ಮಣಸ್ತ್ವಿತಿ ।
ತಥೇತಿ ಚಾಬ್ರವೀದ್ಬ್ರಹ್ಮಾ ಸರ್ವಲೋಕಪಿತಾಮಹಃ ॥ –ಮಹಾಭಾರತ(ಗದಾಪರ್ವ)

೪. ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ ॥ – ವಾ.ರಾ. (೧/೨೦/೨)

೪. ದುರ್ಜನದೈತ್ಯಹನನೇನ ವಿಶ್ವೋಪಕಾರಾರ್ಥಂ ಚಾಗತ ಇತಿ ಸೂಚನಾಯ ವಿಶ್ವಸ್ಯ ಮಿತ್ರಮಿತಿ ಅಸಮಸ್ತ ಪದೋಕ್ತಿಃ । ಸಮಸ್ತಪದೇ ಹಿ ಕಾತ್ಸ್ನ್ರ್ಯಾರ್ಥಕಾಶಬ್ದಬಲಾತ್ ಸರ್ವೇಷಾಂ ಮಿತ್ರಮಿತಿ ಲಭ್ಯತೇ । ತಚ್ಚ ಮಖವಿಘ್ನಕಾರಿಸುಬಾಹುದೈತ್ಯವಧಾಯ ರಾಮಂ ನಿನೀಷೋರ್ಮುನೇರ್ನಾಭಿಮತಂ । ಅಸಮಸ್ತಪದೇ ತು ತದಭಾವಾತ್ ವಿಶ್ವೈಕದೇಶಸ್ಯ ಸದ್ವರ್ಗಸ್ಯೈವ ಮಿತ್ರಭೂತ ಇತಿ ಭಾವಃ । –(ವಾ.)

೪. **ತಸ್ಯೇದಂ ವಿಶ್ವಂ ಮಿತ್ರಮಾಸೀದ್ಯದಿದಂ ಕಿಂಚ ತದ್ಧದಸ್ಯೇದಂ ವಿಶ್ವಂ ಮಿತ್ರಮಾಸೀದ್ಯದಿದಂ ಕಿಂಚ ತಸ್ಮಾದ್ವಿಶ್ವಾಮಿತ್ರಸ್ತಸ್ಮಾದ್ವಿಶ್ವಾಮಿತ್ರ ಇತ್ಯಾಚಕ್ಷತೇ** –ಐತರೇಯೋಪನಿಷತ್ (೨/೨/೧)

ಅ: ಚಂದ್ರನ ಶೋಭನವಾದ ವಂಶದಲ್ಲಿ ಇಂದ್ರನು 'ಗಾಧಿ' ಎಂದು ಜನಿಸಿದ್ದ. ಅವನಿಗೆ ವಿಶ್ವಾಮಿತ್ರ ಎಂಬ ಮಗನಿದ್ದ. ಅವನು ವರದಿಂದ ಬ್ರಾಹ್ಮಣ್ಯವನ್ನು ಪಡೆದುಕೊಂಡ ವಿಶ್ವಹಿತೈಷಿ; ಅವನು ಅಯೋಧ್ಯೆಗೆ ಆಗಮಿಸಿದ.

ವಿ: ೧) ಭರತಖಂಡವನ್ನು ಬಹುದೀರ್ಘಕಾಲದವರೆಗೆ ಧರ್ಮದಿಂದ ಪಾಲಿಸಿದ ಎರಡು ವಂಶಗಳೆಂದರೆ ಸೂರ್ಯವಂಶ ಮತ್ತು ಚಂದ್ರವಂಶ; ಸೂರ್ಯವಂಶದಲ್ಲಿ ಶ್ರೀರಾಮಾವತಾರವಾಯಿತು; ಅತ್ತ ಚಂದ್ರವಂಶದಲ್ಲಿ ಜನಿಸಿದ್ದ ಇಂದ್ರ(ಗಾಧಿ)ನಿಗೆ ಮಗನಾಗಿ ಜನಿಸಿದವನು 'ವಿಶ್ವಾಮಿತ್ರ'; ಕ್ಷತ್ರಿಯನಾಗಿ ಹುಟ್ಟಿದರೂ, (ಬ್ರಹ್ಮದೇವರಿತ್ತ) ವರಬಲದಿಂದಾಗಿ ಬ್ರಾಹ್ಮಣ್ಯವನ್ನು ಸಂಪಾದಿಸಿದ್ದು ಅವನ ಹಿರಿಮೆ. ಆ ವಿಶ್ವಾಮಿತ್ರಮುನಿಯು ಅಯೋಧ್ಯೆಗೆ ಈ ವೇಳೆಗೆ ಆಗಮಿಸಿದ. ಆಗ ಶ್ರೀರಾಮನಿಗೆ ಸುಮಾರು ಹದಿನಾರರ ಪ್ರಾಯ ಎಂದು ರಾಮಾಯಣದಲ್ಲಿದೆ.

೨) ಹರಿಶ್ಚಂದ್ರನನ್ನು ಕಾಡಿದ ಪ್ರಸಂಗ ಮೊದಲಾದವುಗಳನ್ನು ಸರಿಯಾಗಿ ತಿಳಿಯದ ಜನ 'ವಿಶ್ವಾಮಿತ್ರ'ಮುನಿಯನ್ನು ಜನ 'ವಿಶ್ವದ ಶತ್ರು' ಎಂದೇ ಭ್ರಮಿಸಿರುವುದುಂಟು. ಅವರು ನಿಜಕ್ಕೂ ವಿಶ್ವದ ಮಿತ್ರರೇ ಹೊರತು, ಶತ್ರುಗಳಲ್ಲ ಎಂಬುದನ್ನು ಶ್ರೀಮದಾಚಾರ್ಯರು ಅವರ ನಾಮನಿರ್ವಚನದಿಂದ ತಿಳಿಸಿಕೊಟ್ಟಿರುವರು.

೩) 'ವಿಶ್ವಾಮಿತ್ರ' ಪದವನ್ನು 'ವಿಶ್ವಸ್ಯ ಅಮಿತ್ರಂ' ಎಂದು ಬಿಡಿಸದೆ 'ವಿಶ್ವಸ್ಯ ಆ ಮಿತ್ರಂ' ಎಂದು ಬಿಡಿಸಬೇಕು ಎಂದು ಭಾವ.

೪) ಅವರು ವಿಶ್ವಕ್ಕೆ ಮಿತ್ರರಾದರೂ, ಮಾರೀಚ ಸುಬಾಹುಗಳಂತಹ ದುಷ್ಟರ ಪಾಲಿಗೆ ಮಾತ್ರ ಮಿತ್ರರಾಗದೆ ಅವರ ವಿನಾಶವನ್ನು ಬಯಸುತ್ತಿದ್ದ ಶತ್ರುಗಳೇ ಆಗಿದ್ದರು ಎಂಬುದನ್ನು ಸಹ 'ವಿಶ್ವಸ್ಯ ಮಿತ್ರಂ' ಎಂಬ ವಿಗ್ರಹದ ಮೂಲಕ ಸೂಚಿಸಿರುವರು. ಅವರು ಬಂದಿದ್ದು ಸಹ ದುಷ್ಟದೈತ್ಯರ ಸಂಹಾರದ ಮೂಲಕ ವಿಶ್ವಹಿತವನ್ನು ಬಯಸಿಯೇ.

೫) ವರದಿಂದ ಬ್ರಾಹ್ಮಣ್ಯ ಪಡೆದ ಅವರು ಈಗ ಶ್ರೀರಾಮನು ಪರಬ್ರಹ್ಮನೆಂಬುದನ್ನು ತಿಳಿದು ಅವನಿಂದ ಲೋಕಕಲ್ಯಾಣ ಮಾಡಿಸಲು ಬಂದರು; ಹಠದಿಂದ ತಪಸ್ಸು ಮಾಡಿ ಬ್ರಾಹ್ಮಣ್ಯವನ್ನೇ ಪಡೆದ ಅವರು, ಈಗ ಪರಬ್ರಹ್ಮನಾದ ಶ್ರೀರಾಮನನ್ನು ಸಹ ತಮ್ಮೊಂದಿಗೆ ತಪ್ಪದೆ ಕರೆದೊಯ್ಯುವ ಭಗವದ್ಭಕ್ತರು ಎಂಬ ಸೂಚನೆಯನ್ನು ಸಹ ಶ್ರೀಮದಾಚಾರ್ಯರು ಅವರ ಪೂರ್ವಕಥೆಯ ಸೂಚನೆಯಿಂದ ಮಾಡಿರುವರು ಎಂದು ತಿಳಿಯಬಹುದು.

ವಿಶ್ವಾಮಿತ್ರರೊಡನೆ ರಾಮಲಕ್ಷ್ಮಣರು

ತೇನಾರ್ಥಿತೋ ಯಜ್ಞರಿರಕ್ಷಯೈವ
ಕೃಚ್ಛ್ರೇಣ ಪಿತ್ರಾऽಸ್ಯ ಭಯಾದ್ವಿಸೃಷ್ಟಃ ।
ಜಗಾಮ ರಾಮಃ ಸಹ ಲಕ್ಷ್ಮಣೇನ
ಸಿದ್ಧಾಶ್ರಮಂ ಸಿದ್ಧಜನಾಭಿವಂದ್ಯಃ ॥ ೫ ॥

ಅ: ಆ ವಿಶ್ವಾಮಿತ್ರಮುನಿಯಿಂದ ತಮ್ಮ ಯಜ್ಞಸಂರಕ್ಷಣೆಗೆಂದು ಪ್ರಾರ್ಥಿತನಾದ ಸಿದ್ಧಜನರಿಂದ ಪೂಜಿತನಾದ ಶ್ರೀರಾಮ, ಅವನ ತಂದೆಯಾದ ದಶರಥನಿಂದ ಭಯದಿಂದ ಬಹುಕಷ್ಟದಿಂದ ಕಳುಹಿಸಲ್ಪಟ್ಟವನಾಗಿ ಲಕ್ಷ್ಮಣನೊಂದಿಗೆ ಕೂಡಿಕೊಂಡು ಸಿದ್ಧಾಶ್ರಮಕ್ಕೆ ತೆರಳಿದ.

ವಿ: ೧) ವಿಶ್ವಾಮಿತ್ರಮುನಿಗಳು ಲೋಕರಕ್ಷಣೆಗಾಗಿ ಕೈಗೊಂಡ ಯಜ್ಞವೊಂದಕ್ಕೆ ಲೋಕ–ಕಂಟಕರಾದ ಮಾರೀಚಸುಬಾಹುಗಳ ನೇತೃತ್ವದ ದೈತ್ಯರ ಗುಂಪಿನಿಂದ ಪ್ರಬಲವಾದ ಅಡ್ಡಿ ಒದಗಿತ್ತು; ಮಾರೀಚನಿಗೆ ಬ್ರಹ್ಮದೇವರಿಂದ ಅವಧ್ಯತ್ವ ವರವಿತ್ತು; ಸುಬಾಹು ಮತ್ತು ಇತರರಿಗೆ ರುದ್ರದೇವರಿಂದ ಅವಧ್ಯತ್ವವರವಿತ್ತು. ಅಂತಹವರ ವಿನಾಶಕ್ಕೆ ಸ್ವತಂತ್ರನಾದ ಶ್ರೀರಾಮನೇ ಸಮರ್ಥನೆಂದು ತಿಳಿದು, ಅವನನ್ನು ಕರೆತರಲೆಂದು ವಿಶ್ವಾಮಿತ್ರರು ಅಯೋಧ್ಯೆಗೆ ಬಂದರು ಎಂದು ಭಾವ.

೨) ವಿಶ್ವಾಮಿತ್ರರೊಂದಿಗೆ ಶ್ರೀರಾಮನನ್ನು ಕಳುಹಿಸಿಕೊಡಲು ದಶರಥನಿಗೆ ಸ್ವಲ್ಪವೂ ಮನಸ್ಸಿರಲಿಲ್ಲ; ಶ್ರೀರಾಮನನ್ನು ಬಿಟ್ಟಿರಲು ಸಾಧ್ಯವಿರದಿದ್ದುದೇ ಅದಕ್ಕೆ ಕಾರಣ; ಆದರೆ ಹಾಗೆ

---

೫. 'ರಕ್ಷಿತುಂ ಇಚ್ಛಾ ರಿರಕ್ಷಿಷಾ' ಎಂದಾಗಬೇಕಿತ್ತು ; ಇಲ್ಲಿನ 'ರಿರಕ್ಷಾ' ಎಂಬುದು ಛಾಂದಸರೂಪ. 'ಏಷ ಸಾಕ್ಷಾದ್ಧರೇರಂಶೋ ಜಾತೋ ಲೋಕರಿರಕ್ಷಯಾ ।' ಎಂಬಂತೆ ಎಂದು ತಿಳಿಯಬೇಕು. – ಭಾಗವತ (೪/೧೪/೫೨)

೫. ಶಾಪಭಯಾತ್ । – (ವಾ.)

ಅಪ್ರೇಷಣೇ ಶಾಪಪ್ರದಾನಭಯಾತ್। –(ವ.)

ಭಯಾತ್ – ಕ್ಷೋಭಭಯಾತ್ । –(ಜ.)

೫. ಸಿದ್ಧಜನಾಭಿವಂದ್ಯಃ' ಇತ್ಯನೇನ ತೇಷಾಂ ಪುಣ್ಯದಾನಾಯೈವ ಗತೋ ನ ತು ಸ್ವಯಂ ಪುಣ್ಯಸಂಪಾದನಾಯೇತಿ ಸೂಚಿತಮ್ । – (ವಾ.)

ಸಿದ್ಧಾಶ್ರಮಂ ಪ್ರತಿ ಗಮನಸ್ಯ ನ ಕೇವಲಂ ಯಜ್ಞಸಂರಕ್ಷಣಮೇವ ಪ್ರಯೋಜನಂ । ಅಪಿ ತು ಪ್ರಯೋಜನಾಂತರಮಪ್ಯಸ್ತೀತ್ಯಾಹ । ಸಿದ್ಧಜನೇತಿ । ತದಾಶ್ರಮಸ್ಥಿತಯೋಗಸಿದ್ಧಮುನಿಕೃತವಂದನಾದಿಪೂಜಾಂ ಗೃಹೀತುಂ ಜಗಾಮೇತಿ ಭಾವಃ । –(ವ.)

ಕಳುಹಿಸದಿದ್ದಲ್ಲಿ ವಿಶ್ವಾಮಿತ್ರರು ಶಾಪವಿತ್ತಾರು ಎಂಬ ಭಯದಿಂದಾಗಿ ಕಳುಹಿಸಿಕೊಟ್ಟ ಎಂದು ಭಾವ.

೩) ಶ್ರೀರಾಮನು ಸಿದ್ಧಾಶ್ರಮಕ್ಕೆ ತೆರಳಿದ್ದು ತಾನು ಪುಣ್ಯ ಸಂಪಾದಿಸಲೆಂದಲ್ಲ; ಅಲ್ಲಿನ ಯೋಗಸಿದ್ಧಮುನಿಗಳಿಗೆ ಅವರ ಯಜ್ಞವನ್ನು ಪೂರೈಸಲು ಅವಕಾಶ ಕಲ್ಪಿಸಿಕೊಟ್ಟು ಅವರನ್ನು ತನ್ನ ದರ್ಶನಾದಿಗಳಿಂದ ಅನುಗ್ರಹಿಸಲೆಂದು ಮಾತ್ರ; ಶ್ರೀರಾಮನಿಗೆ ಸುಬಾಹು ಮೊದಲಾದವರ ನಿಗ್ರಹದಂತೆ ಯೋಗ್ಯಜನರಿಗೆ ಅನುಗ್ರಹಿಸುವುದೂ ಮುಖ್ಯ ಉದ್ದೇಶವಾಗಿತ್ತು ಎಂಬ ಭಾವ 'ಸಿದ್ಧಜನಾಭಿವಂದ್ಯಃ' ಎಂಬ ಪದದಿಂದ ಸೂಚಿತವಾಗಿದೆ.

ಅಸ್ತ್ರಪಡೆದು ಅನುಗ್ರಹಿಸಿದ ಶ್ರೀರಾಮ

ಅನುಗ್ರಹಾರ್ಥಂ ಸ ಋಷೇರವಾಪ
ಸಲಕ್ಷ್ಮಣೋಽಸ್ತ್ರಂ ಮುನಿತೋ ಹಿ ಕೇವಲಮ್ ।
ವವಂದಿರೇ ಬ್ರಹ್ಮಮುಖಾಃ ಸುರೇಶಾ-
ಸ್ತಮಸ್ತ್ರರೂಪಾಃ ಪ್ರಕಟಾಃ ಸಮೇತ್ಯ ॥ ೬ ॥

ಅ: ಕೇವಲ ಆ ವಿಶ್ವಾಮಿತ್ರಮುನಿಯನ್ನು ಅನುಗ್ರಹಿಸಲೆಂದೇ ಶ್ರೀರಾಮ ಲಕ್ಷ್ಮಣ-ಸಮೇತನಾಗಿ ಆ ಮುನಿಯಿಂದ ಅಸ್ತ್ರಗಳನ್ನು ಸ್ವೀಕರಿಸಿದ. ಅಸ್ತ್ರಾಭಿಮಾನಿಗಳಾದ ಬ್ರಹ್ಮನೇ ಮೊದಲಾದ ಸುರಾಧೀಶರು ಪ್ರತ್ಯಕ್ಷರಾಗಿ ಬಂದು ಶ್ರೀರಾಮನಿಗೆ ವಂದಿಸಿದರು.

---

೬. ಅಸ್ತ್ರಾಣಿ ರೂಪಯಂತಿ ಪ್ರಾಪಯಂತೀತಿ ಅಸ್ತ್ರರೂಪಾಃ । ಅಸ್ತ್ರಂ ರೂಪಂ ಪ್ರತಿಮಾ ಯೇಷಾಮಿತಿ ವಾ। –(ವಾ.)

೬. ಅಸ್ತ್ರಮಿತಿ ಜಾತಾವೇಕವಚನಮ್ । –(ಜ.)

೬. ಪ್ರಕಟಾಃ– ಪ್ರತ್ಯಕ್ಷಾಃ ಸಂತಃ । –(ವ.)

ಪ್ರಕಟಾಃ– ಪ್ರತ್ಯಕ್ಷೀಭೂತಾಃ । –(ಜ.)

೬. ಋಷೇಃ ಕೇವಲಮನುಗ್ರಹಾರ್ಥಂ ಸ್ವಗುಣಪ್ರತಿಪಾದಕಾಸ್ತ್ರಮಹಾಮಂತ್ರಾಣಾಂ 'ಅನಂತಂ ವಿಷ್ಣುಸನ್ನಿಧೌ' ಇತಿ ವಚನಾತ್ ಸ್ವಕರ್ಣಸಮೀಪೇ ಜಪೇನ ಜನಿತಾನುಗ್ರಹಾರ್ಥಂ । ಅನ್ಯಥಾ ನೀಚೇನ ಉಚ್ಚಾಯ ಮಂತ್ರದಾನೇ ಸತಿ ನಿಗ್ರಹ ಏವ ಸ್ಯಾತ್ ನಾನುಗ್ರಹ ಇತಿ ಭಾವಃ । ಕೇವಲಪದೇನ ಸ್ವಾರ್ಥತಾಂ ವ್ಯವಚ್ಛಿನತ್ತಿ । ಹಿ ಶಬ್ದೇನ ಸರ್ವಜ್ಞತ್ವಯುಕ್ತೇಃ ಪ್ರಸಿದ್ಧಮಾಹ। ಮಹತಾऽಪಿ ಶಿಷ್ಯೇಣ ಗುರುಮುಖಾನ್ಮಂತ್ರಾಃ ಶ್ರೋತವ್ಯಾ ಇತಿ ಸದ್ಧರ್ಮ-ಶಿಕ್ಷಣರೂಪೇಣ ಲೋಕಾನುಗ್ರಹಾರ್ಥಂ ವಾ । ಸ್ವಾಪೇಕ್ಷಿತಾಸುರನಮೋಹನಸಾಚಿವ್ಯಕರಣಾತ್ ಜನಿತಾನುಗ್ರಹಾರ್ಥಂ ವಾ । ಕಸ್ತೂರಿಸಂಬಂಧೇನ ಸನ್ಮಂತ್ರಾಣಾಂ ಸಾಮರ್ಥ್ಯವಿಶೇಷದಾನಾಖ್ಯಾನುಗ್ರಹಾರ್ಥಂ ವಾ । –(ವಾ.)

ವಿ: ೧) ಶ್ರೀರಾಮನು ಮಾರ್ಗಮಧ್ಯದಲ್ಲಿ ತಾಟಕಾವನದಲ್ಲಿ ವಿಶ್ವಾಮಿತ್ರಮುನಿಗಳು ಉಪದೇಶಿಸಿದ ಅನೇಕತೆರನಾದ ಅಸ್ತ್ರಗಳನ್ನು ಲಕ್ಷ್ಮಣಸಮೇತನಾಗಿ ಸ್ವೀಕರಿಸಿದನು ಎಂಬ ಕಥೆ ರಾಮಾಯಣದಲ್ಲಿ ಬಂದಿದೆ. ಹೀಗೆ ವಿಶ್ವಾಮಿತ್ರರಿಂದ ಅಸ್ತ್ರಗಳನ್ನು ಸ್ವೀಕರಿಸಿದ ಶ್ರೀರಾಮನು ಹೇಗೆ ಭಗವಂತನಾದಾನು? ಎಂಬ ಶಂಕೆಯನ್ನು ಶ್ರೀಮದಾಚಾರ್ಯರು ಈ ಶ್ಲೋಕದಲ್ಲಿ ಪರಿಹರಿಸಿರುವರು.

೨) ವಿಶ್ವಾಮಿತ್ರರು ಅಸ್ತ್ರ ಮತ್ತು ವಿದ್ಯೆಗಳನ್ನು ಹೇಳಿದ್ದು ನಿಜ; ಶ್ರೀರಾಮನು ಅದನ್ನು ಕೇಳಿದ್ದೂ ನಿಜ; ಆದರೆ ವಿಶ್ವಾಮಿತ್ರರು ಅವನ್ನು ಹೇಳಿದ್ದು ಉಪದೇಶವಾಗಿಯೂ ಅಲ್ಲ; ಶ್ರೀರಾಮನು ಸ್ವೀಕರಿಸಿದ್ದು ಅನುಗ್ರಹವಾಗಿಯೂ ಅಲ್ಲ ; ಶ್ರೀರಾಮನ ಬಳಿ ಒಪ್ಪಿಸುವುದರಿಂದ ತಮಗೆ ಸುಕೃತ ಲಭಿಸಲಿ, ತಮ್ಮ ಮಂತ್ರಗಳು ವೀರ್ಯವತ್ತರವಾಗಲಿ ಎಂಬ ಉದ್ದೇಶ ವಿಶ್ವಾಮಿತ್ರರದಾಗಿತ್ತು; ಅವರ ಆ ಪೂಜೆಯನ್ನು ಸ್ವೀಕರಿಸಿ ಅನುಗ್ರಹಿಸುವುದು ಶ್ರೀರಾಮನ ಉದ್ದೇಶವಾಗಿತ್ತು; ಅದರೊಂದಿಗೆ ಶಿಷ್ಯನು ಎಷ್ಟೇ ದೊಡ್ಡವನಾಗಿದ್ದರೂ ಗುರುಗಳ ಮುಖದಿಂದಲೇ ಮಂತ್ರೋಪದೇಶ ಪಡೆಯಬೇಕು ಎಂಬ ಧರ್ಮಸೂಕ್ಷ್ಮವನ್ನು ತೋರಿಸಿ ಲೋಕವನ್ನು ಅನುಗ್ರಹಿಸುವುದೂ ಶ್ರೀರಾಮನಿಗೆ ಬೇಕಿತ್ತು, ಇದು ಆ ಪ್ರಸಂಗದ ಮರ್ಮ ಎಂಬುದನ್ನೂ ಶ್ರೀಮದಾಚಾರ್ಯರು ಇಲ್ಲಿ ತಿಳಿಸಿಕೊಟ್ಟಿರುವರು.

೩) ವಿಶ್ವಾಮಿತ್ರರು ಅಸ್ತ್ರಗಳನ್ನು ಉಪದೇಶಿಸುತ್ತಿದ್ದಂತೆ ಆಯಾ ಅಸ್ತ್ರಗಳ ಅಭಿಮಾನಿದೇವತೆಗಳು ಸ್ವತಃ ಪ್ರತ್ಯಕ್ಷರಾಗಿ ನಿಂತು ಶ್ರೀರಾಮನಿಗೆ ಕೈ ಜೋಡಿಸಿ 'ಏನಪ್ಪಣೆ'? ಎಂದು ವಿಜ್ಞಾಪಿಸಿಕೊಂಡರು ಎಂಬ ಮಾತು ರಾಮಾಯಣದಲ್ಲೇ ಬಂದಿದೆ; ಶ್ರೀರಾಮನಿಗೆ ಅಸ್ತ್ರಗಳ ಅಪೇಕ್ಷೆ ಇರಲಿಲ್ಲ; ಅವನು ಸ್ವತಃ ಪರಿಪೂರ್ಣ, ಸ್ವತಂತ್ರ; ಇತರರೆಲ್ಲರೂ ಅಸ್ವತಂತ್ರರು ಎನ್ನಲು ಇದು ಆಗಲೇ ಕಂಡ ನಿದರ್ಶನ. ಇದನ್ನು ತಿಳಿದವರು ವಿಶ್ವಾಮಿತ್ರರಿಂದ ಶ್ರೀರಾಮ ತನ್ನ ಉಪಯೋಗಕ್ಕೆಂದೇ ಅಸ್ತ್ರಗಳನ್ನು ಸ್ವೀಕರಿಸಿದ ಎಂದು ಎಂತು ಭ್ರಮಿಸಿಯಾರು? ಎಂಬ ಸೂಚನೆಯೂ ಇಲ್ಲಿದೆ.

ಊಚುಶ್ಚ ಮುದಿತಾಃ ಸರ್ವೇ ರಾಮಂ ಪ್ರಾಂಜಲಯಸ್ತಥಾ ।
ಇಮೇ ಸ್ಮ ಪರಮೋದಾರ ಕಿಂಕರಾಸ್ತವ ರಾಘವ ॥ –ವಾ.ರಾ.(೧/೨೭/೨೪)

೪) ಈ ಮುಂಚೆ ಸರಯೂತೀರದಲ್ಲಿ ಶ್ರೀರಾಮನಿಗೆ ವಿಶ್ವಾಮಿತ್ರರು ಬಲಾ ಮತ್ತು ಅತಿಬಲಾ ಎಂಬ ಎರಡು ವಿದ್ಯೆಗಳನ್ನು ಉಪದೇಶಿಸಿದ್ದರು ಎಂಬ ಮಾತೂ ರಾಮಾಯಣದಲ್ಲಿದೆ; ಇಲ್ಲಿ ಹೇಳಿದ ನಿರ್ಣಯವೇ ಆ ಪ್ರಸಂಗಕ್ಕೂ ಅನ್ವಯಿಸಿ, ಅದು ಸಹ ವಿಶ್ವಾಮಿತ್ರಋಷಿಗಳನ್ನು ಅನುಗ್ರಹಿಸಲು, ಲೋಕಶಿಕ್ಷಣ ಮಾಡಲು ನಡೆದ ಪ್ರಸಂಗ ಎಂದು ತಿಳಿದುಕೊಳ್ಳಬೇಕು.

೫) ವಿಶ್ವಾಮಿತ್ರರು ಉಪದೇಶಿಸಿದ ಅಸ್ತ್ರ ಮತ್ತು ವಿದ್ಯೆಗಳ ಬಲದಿಂದಲೇ ಶ್ರೀರಾಮನು ಜಯಶೀಲನಾದನೆಂದು ಭ್ರಮಿಸಬೇಕಿಲ್ಲ; ಹಾಗಿದ್ದಲ್ಲಿ ಅವನ್ನೆಲ್ಲ ಬಲ್ಲ ಅವರೇ ಮಾರೀಚ

ಸುಬಾಹುಗಳನ್ನು ನಿಗ್ರಹಿಸಬಹುದಿತ್ತು; ಶ್ರೀರಾಮನನ್ನು ಕರೆತರುವ ಅಗತ್ಯವೇ ಇರುತ್ತಿರಲಿಲ್ಲ; ಅಲ್ಲವೇ?

೬) ಅಸುರವೋಹನರೂಪವಾದ ಮತ್ತೊಂದು ಪ್ರಯೋಜನವೂ ಇಂತಹ ವ್ಯಾಪಾರಕ್ಕೆ ಉಂಟು.

೭) ಸಿದ್ಧಾಶ್ರಮವೆಂದರೆ 'ವಾಮನಾಶ್ರಮ' ಎಂದು ಸಂಗ್ರಹರಾಮಾಯಣದಲ್ಲಿದೆ.

ತಾಟಕಾಸಂಹಾರ - ಸುಬಾಹುವಧೆ

ಅಥೋ ಜಘಾನಾಶು ಶರೇಣ ತಾಟಕಾಂ
ವರಾದ್ವಿಧಾತುಸ್ತದನನ್ಯವಧ್ಯಾಮ್ ।
ರರಕ್ಷ ಯಜ್ಞಂ ಚ ಮುನೇರ್ನಿಹತ್ಯ
ಸುಬಾಹುಮೀಶಾನಗಿರಾ ವಿಮೃತ್ಯುಮ್ ॥ ೭ ॥

ಅ: ಅನಂತರ ಶ್ರೀರಾಮ ಬ್ರಹ್ಮದೇವರ ವರದಿಂದಾಗಿ ತನ್ನ ಹೊರತು ಇತರ ಎಲ್ಲರಿಂದ ಅವಧ್ಯಳಾಗಿದ್ದ ತಾಟಕೆಯನ್ನು ಬಾಣದಿಂದ ಕೂಡಲೆ ಸಂಹರಿಸಿದ. ರುದ್ರದೇವರ ವರದಿಂದ ಸಾವಿಲ್ಲದವನಾಗಿದ್ದ ಸುಬಾಹುವನ್ನು ಸಂಹರಿಸಿ ಆ ವಿಶ್ವಾಮಿತ್ರಮುನಿಯ ಯಜ್ಞವನ್ನು ಪಾಲಿಸಿದ.

ವಿ: ೧) ತಾಟಕಾವಧೆಯು ಮಾರ್ಗಮಧ್ಯದಲ್ಲಿ ನಡೆದ ಒಂದು ಅಪೂರ್ವಕಾರ್ಯ; ಮಾರೀಚನ ತಾಯಿಯಾಗಿದ್ದ ತಾಟಕೆ ಸುಕೇತು ಎಂಬ ಯಕ್ಷನ ಮಗಳು; ಸುಂದ ಎಂಬ ರಾಕ್ಷಸನ ಪತ್ನಿ; ಅವಳ ಪತಿ ಸುಂದನು ಅಗಸ್ತ್ಯರನ್ನು ಕೆಣಕಿ ಅವರಿಂದ ಹತನಾಗಲು, ಅದರಿಂದ ಕೆರಳಿದ

---

೭. ಬ್ರಹ್ಮವರಸ್ಯ ಅನ್ಯೈರನುಲ್ಲಂಘ್ಯತಯಾ ತಸ್ಮಾದ್ರಾಮಾದನ್ಯೈರ್ವಧ್ಯಾ ನ ಭವತೀತಿ ತದನನ್ಯವಧ್ಯಾ ತಾಮ್ । – (ವಾ.)

೭. ಕಾಮಂ ಬಹುಗುಣಾಃ ಸರ್ವೇ ತ್ವಯ್ಯೇತೇ ನಾತ್ರ ಸಂಶಯಃ ।
ತಪಸಾ ಸಂಭೃತೇ ಚೈತೇ ಬಹುರೂಪೇ ಭವಿಷ್ಯತಃ ॥ – ವಾ.ರಾ. (೨೨/೨೯)

೭. ತಾಂ ಹತಾಂ ಭೀಮಸಂಕಾಶಾಂ ದೃಷ್ಟ್ವಾ ಸುರಪತಿಸ್ತಥಾ ।
ಸಾಧು ಸಾಧ್ವಿತಿ ಕಾಕುತ್ಸ್ಥಂ ಸುರಾಶ್ಚಸಮಪೂಜಯನ್ ॥ – ವಾ.ರಾ.(೧/೨೬/೨೬)

೭. ಅಧರ್ಮ್ಯಾಂ ಜಹಿ ಕಾಕುತ್ಸ್ಥ ಧರ್ಮೋ ಹ್ಯಸ್ಯಾ ನ ವಿದ್ಯತೇ ॥ – ವಾ.ರಾ.(೧/೨೫/೧೮)
ಶರೇಣೋರಸಿ ವಿವ್ಯಾಧ ಸಾ ಪಪಾತ ಮಮಾರ ಚ ॥ – ವಾ.ರಾ.(೧/೨೬/೨೪)

ಅವಳು ಪುತ್ರನಾದ ಮಾರೀಚನ ಸಮೇತ ಅವರನ್ನೇ ತಿನ್ನಲು ಹೋದಳು. ಅವರು ತಾಯಿ ಮಗ ಇಬ್ಬರನ್ನೂ ರಾಕ್ಷಸರಾಗುವಂತೆ ಶಪಿಸಿದರು. ಅನಂತರ ಬ್ರಹ್ಮದೇವರ ವರ ಪಡೆದ ಅವರಿಬ್ಬರೂ ವಿಶೇಷವಾಗಿ ಲೋಕಕಂಟಕರಾಗಿದ್ದರು. ಶ್ರೀರಾಮನು ಅವಳನ್ನು ಕೊಲ್ಲುತ್ತ ತಾನು ಬ್ರಹ್ಮದೇವರಿಗಿಂತ ಮಿಗಿಲಾದವನು, ಸರ್ವೋತ್ತಮ ಎಂದು ಸೂಚಿಸಿದ. ತಾಟಕೆಯ ವಧೆಯಿಂದ ಹರ್ಷಿತರಾದ ಬ್ರಹ್ಮಾದಿದೇವತೆಗಳು ಶ್ರೀರಾಮನನ್ನು ಪುಷ್ಪವೃಷ್ಟಿಯಿಂದ ಅಭಿವಂದಿಸಿದ ವಿವರ ವಾಲ್ಮೀಕಿರಾಮಾಯಣದಲ್ಲಿ ಬಂದಿದೆ.

೨) ತಾಟಕೆಯು ಸ್ತ್ರೀಯಾಗಿದ್ದರೂ ಲೋಕನಾಶಕಳಾದ ರಾಕ್ಷಸಿಯಾದ್ದರಿಂದಲೇ ಅವಳ ಸಂಹಾರ ಅಧರ್ಮವಾಗಲಿಲ್ಲ; ಇಲ್ಲಿ ಹೀಗೆ ಶ್ರೀರಾಮನಿಂದ ಸತ್ತ ಅವಳು ಮುಂದೆ ಪೂತನಿಯಾಗಿ ಜನಿಸಿ ಅಲ್ಲೂ ಶ್ರೀರಾಮನೇ ಆದ ಶ್ರೀಕೃಷ್ಣನಿಂದ ಹತಳಾಗುವಳು(೧೨/೪೪–೪೯).

೩) ಬ್ರಹ್ಮವರದ ತಾಟಕಿ ಮತ್ತು ರುದ್ರವರದ ಸುಬಾಹು ಇಬ್ಬರನ್ನೂ ಸಂಹರಿಸಿದ ಶ್ರೀರಾಮನು ಬ್ರಹ್ಮರುದ್ರರಿಗಿಂತ ಮಿಗಿಲಾದ ಸರ್ವೋತ್ತಮ ಎಂದು ಭಾವ.

೪) ತಾಟಕಾಸಂಹಾರ ನಡೆದದ್ದು ಸರಯೂತೀರದ ಕಾಡಿನಲ್ಲಿ; ಸುಬಾಹುವಧೆಯಾದದ್ದು ಸಿದ್ಧಾಶ್ರಮದ ಬಳಿಯ ವಿಶ್ವಾಮಿತ್ರಮುನಿಯ ಯಜ್ಞಶಾಲೆಯಲ್ಲಿ.

ಸಮುದ್ರದಲ್ಲಿ ಬಿದ್ದ ಮಾರೀಚ

ಶರೇಣ ಮಾರೀಚಮಥಾರ್ಣವೇऽಕ್ಷಿಪ-
ದ್ವಚೋ ವಿರಿಂಚಸ್ಯ ತು ಮಾನಯಾನಃ ।
ಅವಧ್ಯತಾ ತೇನ ಹಿ ತಸ್ಯ ದತ್ತಾ
ಜಘಾನ ಚಾನ್ಯಾನ್ ರಜನೀಚರಾನಥ ॥ ೮ ॥

---

೮. ವಾಯವ್ಯಾಸ್ತ್ರಮಂತ್ರಿತಶರೇಣ । -(ವಾ.)

ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹತಃ ।
ಸಂಪೂರ್ಣಯೋಜನಶತಂ ಪ್ರಾಪ್ತಃ ಸಾಗರಸಂಪ್ಲವೇ ॥ –ವಾ.ರಾ. (೧/೩೦/೧೭)

ಮನುಃ – ವಾಯುಃ । 'ತೇ ವಾಯವೇ ಮನವೇऽಬಾಧಿತಾಯ' ಇತಿ ಶ್ರುತೇಃ । ಪಂಚಾತ್ಮಕೋ ಮಾರುತ ಏವ ಬಾಣಃ । –ಪ್ರಮಾಣಸಂಗ್ರಹ

'ಮಾನವಂ ಪರಮೋದಾರಮಸ್ತ್ರಮ್' –ವಾ.ರಾ. (೧/೩೦/೧೭)

೮. ತು – ಸೀತಾವಂಚನಾದಿಭವಿಷ್ಯತ್ಕಾರ್ಯವಿಶೇಷಾತ್ ವಿರಿಂಚಸ್ಯ ವಚೋ ಮಾನಯಾನಃ ಸನ್। ನ ತು ಸರ್ವಥಾ ಅವಧ್ಯತ್ವಾತ್ । ತಥಾ ಸತಿ ಉತ್ತರತ್ರಾಪಿ ಹನನಾಸಂಭವಾತ್ ಇತಿ ಭಾವಃ । –(ವಾ.)

ಅ: ಶ್ರೀರಾಮ ಬ್ರಹ್ಮದೇವರ ವರವನ್ನು ಮನ್ನಿಸಲೆಂದು ಮಾರೀಚನನ್ನು ಬಾಣದಿಂದ ಸಮುದ್ರದಲ್ಲಿ ಬೀಳಿಸಿದ. ಅವನಿಗೆ ಬ್ರಹ್ಮದೇವರಿಂದ ಅವಧ್ಯತ್ವ ಕೊಡಲ್ಪಟ್ಟಿದ್ದಿತು. ಬಳಿಕ ಇತರ ರಾಕ್ಷಸರನ್ನು ಸಂಹರಿಸಿದ.

ವಿ: ೧) ಮಾರೀಚ ಮತ್ತು ಸುಬಾಹುಗಳ ನೇತೃತ್ವದಲ್ಲಿ ಯಜ್ಞನಾಶಕ್ಕೆಂದು ಧಾವಿಸಿದ ಅಸಂಖ್ಯರಾಕ್ಷಸರನ್ನು ಶ್ರೀರಾಮನು ಸಂಹರಿಸಿದ. ಸುಬಾಹುವನ್ನೂ ಸಂಹರಿಸಿದ. ಆದರೆ ಅವನೊಂದಿಗೇ ಇದ್ದ ಮಾರೀಚನನ್ನು ಮಾತ್ರ ಆಗ ಕೊಲ್ಲದೆ ವಾಯವ್ಯಾಸ್ತ್ರದಿಂದ ಸಮುದ್ರದಲ್ಲಿ ಬೀಳಿಸಿದ. ಅಲ್ಲಿಂದ ಈಜಿ ಸಾಗಿದ ಮಾರೀಚ ಆಗ ಸಾಯದೆ ಉಳಿದುಕೊಂಡ.

೨) ಮಾರೀಚನಿಗೆ ಬ್ರಹ್ಮವರ, ಸುಬಾಹುವಿಗೆ ರುದ್ರವರ; ಬ್ರಹ್ಮದೇವರು ರುದ್ರದೇವರಿಗಿಂತ ಉತ್ತಮರಾದವರು, ಜೀವೋತ್ತಮರು ಎಂಬುದನ್ನು ತೋರಿಸಲೆಂದು ಶ್ರೀರಾಮನು ಮಾರೀಚನನ್ನು ಆಗ ಸಂಹರಿಸಲಿಲ್ಲ; ರುದ್ರವರವಿದ್ದ ಸುಬಾಹುವನ್ನು ಮಾತ್ರ ಸಂಹರಿಸಿದ. ಇಬ್ಬರನ್ನು ಅಂದೇ ಸಂಹರಿಸಿದ್ದಲ್ಲಿ ಸಾಮಾನ್ಯರು ಬ್ರಹ್ಮರುದ್ರರಲ್ಲಿ ಸಾಮ್ಯಶಂಕಿಸುವ ಅಪಾಯವಿತ್ತು ಎಂದು ಭಾವ.

೩) ಮಾರೀಚನನ್ನು ಆಗಲೇ ಕೊಲ್ಲದಿರಲು ಅವನು ಮಾಯಾಜಿಂಕೆಯಾಗಿ ರಾವಣನಿಗೆ ಸೀತಾ(ಕೃತಿ)ಹರಣದಲ್ಲಿ ಭಾಗಿಯಾಗಿ ಇನ್ನೂ ಹೆಚ್ಚು ಪಾಪವೆಸಗಬೇಕಿತ್ತು ಎಂಬ ಮತ್ತೊಂದು ಕಾರಣವೂ ಇದ್ದಿತು. ಇದರಿಂದ ಶ್ರೀರಾಮದೇವರು ಸರ್ವಜ್ಞರು ಮತ್ತು ನಿಜವಾಗಿಯೂ ಸೀತಾವಿಯೋಗವಿಲ್ಲದವರು ಎಂಬ ವಿಚಾರವೂ ಸ್ಫುಟವಾಗುವುದು.

೪) ಶ್ರೀರಾಮನು ತನ್ನನ್ನು ಉದ್ದೇಶಪೂರ್ವಕ ಸಾಯಿಸದೆ ಬಿಟ್ಟ ಎಂಬ ಅಂಶವನ್ನು ಮಾರೀಚನೂ ನೀಡಿದ ವಿವರ ವಾಲ್ಮೀಕಿರಾಮಾಯಣದಲ್ಲಿದೆ :

'ನೇಚ್ಛತಾ ತಾತ ಮಾಂ ಹಂತುಂ ತದಾ ವೀರೇಣ ರಕ್ಷಿತಃ । –ವಾ.ರಾ.(೩/೩೮/೨೦)

ಸೀತಾ ಸ್ವಯಂವರಕ್ಕೆಂದು ವಿದೇಹದತ್ತ

ತದಾ ವಿದೇಹೇನ ಸುತಾಸ್ವಯಂವರೋ
ವಿಘೋಷಿತೋ ದಿಕ್ಷು ವಿದಿಕ್ಷು ಸರ್ವಶಃ ।
ನಿಧಾರ್ಯ ತದ್ಗಾಧಿಸುತಾನುಯಾಯೀ
ಯಯೌ ವಿದೇಹಾನನುಜಾನುಯಾತಃ ॥ ೯ ॥

ಅ: ಆ ವೇಳೆಗೆ ವಿದೇಹರಾಜನಾದ ಜನಕನಿಂದ ತನ್ನ ಮಗಳಾದ ಜಾನಕಿಯ ಸ್ವಯಂವರವು ದಿಕ್ಕು ವಿದಿಕ್ಕುಗಳಲ್ಲೆಲ್ಲ ವಿಶೇಷವಾಗಿ ಘೋಷಿಸಲ್ಪಟ್ಟಿತ್ತು. ಅದನ್ನು ಕೇಳಿ ಶ್ರೀರಾಮ ಗಾಧಿರಾಜನ ಪುತ್ರರಾದ ವಿಶ್ವಾಮಿತ್ರರನ್ನು ಹಿಂಬಾಲಿಸಿ ತಮ್ಮನಾದ ಲಕ್ಷ್ಮಣನೊಂದಿಗೆ ಕೂಡಿಕೊಂಡು ವಿದೇಹಕ್ಕೆ ತೆರಳಿದ.

ವಿ: 'ಗಾಧಿಸುತಾನುಯಾಯೀ'(ವಿಶ್ವಮಿತ್ರರನ್ನು ಅನುಸರಿಸಿ ನಡೆದ) ಎಂಬ ಮಾತಿನಲ್ಲಿ 'ಭಕುತಜನ ಮುಂದೆ ನೀನವರ ಹಿಂದೆ' (ಶ್ರೀವಿಜಯದಾಸರು) ಎಂಬ ತತ್ತ್ವವನ್ನು ಗಮನಿಸಬಹುದು.

ಅಹಲ್ಯೋದ್ಧಾರ

ಅಥೋ ಅಹಲ್ಯಾಂ ಪತಿನಾऽಭಿಶಪ್ತಾಂ
ಪ್ರಧರ್ಷಣಾದೀಂದ್ರಕೃತಾಚ್ಛಿಲೀಕೃತಾಮ್ ।
ಸ್ವದರ್ಶನಾನ್ಮಾನುಷತಾಮುಪೇತಾಂ
ಸುಯೋಜಯಾಮಾಸ ಸ ಗೌತಮೇನ ॥ ೧೦ ॥

ಅ: ಅಹಲ್ಯೆಯು ಇಂದ್ರದೇವರು ಮಾಡಿದ ಬಲಾತ್ಕಾರರಮಣದ ಕಾರಣದಿಂದಾಗಿ ತನ್ನ ಪತಿಯಾದ ಗೌತಮಮುನಿಯಿಂದ ಶಪಿಸಲ್ಪಟ್ಟು ಶಿಲೆಯಂತಾಗಿದ್ದಳು. ಶ್ರೀರಾಮನ

---

೯. ವರಸ್ಯ ಪ್ರತಾಪಾತಿಶಯಂ ದೃಷ್ಟ್ವಾ ಸ್ವಯಮೇವ ಕನ್ಯಾ ಯತ್ರ ವರಯತಿ । ಸಃ ಸ್ವಯಂವರಃ । –(ವಾ.)

೯. ದೂತೈರಿತಿ ಶೇಷಃ। ಭೇರೀತಾಡನೇನ ವಾ ಸ್ವನಗರೇ ಭೇರೀತಾಡನೇ ಕೃತೇ ಸತಿ ತತ್ರತ್ಯಾಃ ಅನ್ಯದೇಶಭೂಪಾನಾಂ ಗೂಢಪುರುಷಾಃ ಸ್ವಸ್ವಭೂಪೇಭ್ಯೋ ವಾರ್ತಾಂ ಪ್ರೇಷಯಂತೀತಿ ಭಾವಃ । –(ಜ.)

೧೦. 'ಛಂದೋವಚ್ಚಾಸ್ತ್ರಾಣಿ ಭವಂತಿ' ಇತಿ ವಚನಾತ್ ಸ್ವಗ್ರಂಥಸ್ಯ ಛಂದಃಸಮಾನತ್ವದ್ಯೋತನಾಯ 'ಪತಿನಾ' ಇತ್ಯುಕ್ತಂ । ಸ್ವಸ್ಯಾಃ ಪತಿನೇತಿ ಯೋಗ್ಯಪದಾಧ್ಯಾಹಾರೇಣ ಯೋಜನಾ । ಅನ್ಯಥಾ ಪತಿಶಬ್ದಸ್ಯ ಸಾಕಾಂಕ್ಷತ್ವಪರಿಹಾರಾತ್ ಏವಂ ಚ 'ಷಷ್ಠೀಯುಕ್ತಃ ಛಂದಸಿ ವಾ' ಇತಿ ಸೂತ್ರಾತ್ ಪತಿನೇತಿ ಸಾಧುಃ । –(ವಾ.)

೧೦. 'ಪತಿನಾ' ಇತ್ಯತ್ರ ಪತಿಶಬ್ದಸ್ಯ ಸಂಬಂಧಿಶಬ್ದತ್ವಾತ್ ತೇನ ಸಂನಿಧಾಪಿತೇನ ಅಹಲ್ಯಾಮಿತ್ಯನೇನ ಯೋಜನಾಯಾಂ ಪತಿಶಬ್ದಸ್ಯ ಷಷ್ಠೀಯುಕ್ತತ್ವಾತ್ ಷಷ್ಠೀಯುಕ್ತಃ ಛಂದಸಿ ಚೇತಿ । ನಾಪಿ ಸಂಜ್ಞಾಛಂದಸಸ್ತ್ಯೇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ ಇತಿ ವೇದತ್ವೇನ ಪರಿಗೃಹೀತ – ಇತಿಹಾಸಪುರಾಣಾದ್ಯಶೇಷಸದಾಗಮಾರ್ಥನಿರ್ಣಾಯಕತ್ವೇನ ಛಂದಸ್ತುಲ್ಯತ್ವಾತ್ 'ಛಂದಾತ್ ಪುರಾಣಾನಿ' ಇತ್ಯಾದೇಶಾಚ್ಚ ಅವಗಂತವ್ಯಂ । ಏವಮುತ್ತರತ್ರಾಪಿ ವೈದಿಕಪ್ರಯೋಗೇ ಗತಿಃ । –(ವ.)

೧೦. ಜನಾರ್ದನಭಟ್ಟರು ಇಲ್ಲಿ ಇನ್ನೂ ಕೆಲವು ವಿಶೇಷಾಂಶಗಳನ್ನು ಬರೆದಿರುವರು.

ದರ್ಶನದಿಂದ ಅವಳು ಪುನಃ ಮನುಷ್ಯಳಾದಳು; ಅಂತಹ ಅಹಲ್ಯೆಯನ್ನು ರಾಮ ಗೌತಮರೊಂದಿಗೆ ಚೆನ್ನಾಗಿ ಜೊತೆಗೂಡಿಸಿದ.

ಏಃ ೧) ಮಿಥಿಲಾನಗರವನ್ನು ತಲುಪುವ ಮುನ್ನದ ಗೌತಮತಪೋವನದಲ್ಲಿ ನಡೆದ ಅಹಲ್ಯೋದ್ಧಾರಪ್ರಸಂಗವನ್ನು ಶ್ರೀಮದಾಚಾರ್ಯರು ಈ ಎರಡುಶ್ಲೋಕಗಳಲ್ಲಿ ನಿರ್ಣಯಿಸಿರುವರು.

೨) ಅಹಲ್ಯೆ ಗೌತಮರ ಪತ್ನಿ; ಬ್ರಹ್ಮಪುತ್ರಿ; ಗೌತಮರೊಮ್ಮೆ ಅಧಿಕಪುಣ್ಯವೆಸಗಿದ್ದಾಗ ಅವರ ಅಂತಹ ಪುಣ್ಯವನ್ನು ನಾಶಪಡಿಸುವ ದೇವಕಾರ್ಯದ ಸಲುವಾಗಿ ಇಂದ್ರ ಗೌತಮರ ವೇಷದಿಂದ ಅಹಲ್ಯೆಯಲ್ಲಿ ರಮಿಸಿದ. ಇದರಿಂದ ಗೌತಮರು ಕೋಪಗೊಳ್ಳಬೇಕು; ಅದರಿಂದ ಅವರು ಅವರಿಬ್ಬರನ್ನೂ ಶಪಿಸಬೇಕು; ಅದರಿಂದ ಅವರ ಅಧಿಕಪುಣ್ಯ ನಾಶವಾಗಿ ಅವರಿಗೆ ಕಲ್ಯಾಣವಾಗಬೇಕು ಎಂಬುದು ಅವರ ಆಶಯವಾಗಿತ್ತು. ಅವರ ನಿರೀಕ್ಷೆಯಂತೆ ಎಲ್ಲವೂ ನಡೆದು ಗೌತಮರು ಇಂದ್ರ ಮತ್ತು ಅಹಲ್ಯೆಯನ್ನು ಶಪಿಸಿದರು.

---

೧೦. ಕುರ್ವತಾ ತಪಸೋ ವಿಘ್ನಂ ಗೌತಮಸ್ಯ ಮಹಾತ್ಮನಃ।
ಕ್ರೋಧಮುತ್ಪಾದ್ಯ ಹಿ ಮಯಾ ಸುರಕಾರ್ಯಮಿದಂ ಕೃತಂ। –ವಾ.ರಾ.(೧/೪೯/೨)

ಅತಿರಿಕ್ತಂ ತಪೋ ಹರ್ತುಂ ಗೌತಮಸ್ಯಾಶ್ರಮೇ ರಹಃ।
ಸುರಕಾರ್ಯಂ ಸುರಪತಿಃ ಕುರ್ವನ್ ಭಾರ್ಯಾಂ ಸಮಸ್ಪೃಶತ್ ॥ –ಸಂ.ರಾ.(೧/೬/೧೮)

೧೦. ''ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ।
ಅದೃಶ್ಯಾ ಸರ್ವಭೂತಾನಾಂ ಆಶ್ರಮೇಽಸ್ಮಿನ್ ವಸಿಷ್ಯಸಿ ॥'' –ವಾ.ರಾ. (೧/೪೮/೩೧)

೧೦. ಹರೇಃ ಕೃಪಾಪಾತ್ರತ್ವೇನ ಮುನೇಃ ಸ್ನೇಹಾತಿಶಯೋಽಭೂದಿತಿ ಸೂಚಯಿತುಂ 'ಸುಯೋಜಯಾಮಾಸ' ಇತ್ಯುಕ್ತಂ। ಸಪ್ರೀತಿಕಯೋಗಂ ಕೃತವಾನಿತ್ಯರ್ಥಃ। –(ವಾ.)

೧೦. ಪ್ರಧರ್ಷಣಾತ್ ಬಲಾತ್ಕಾರೇಣ ರಮಣಾತ್। ಅನೇನ ಅಹಲ್ಯಾಯಾ ನಾಪರಾಧೋಽಸ್ತೀತಿ ಸೂಚಿತಂ। ಅತ ಏವ ಸ್ವಕೃಪಾವಲೋಕನಾತ್ 'ಮಾನುಷತಾಮುಪೇತಾಮ್' ಇತ್ಯುಕ್ತಂ। –(ವಾ.)

೧೦. ಶಿಲೀಕೃತಾಮಿತ್ಯಸ್ಯ ಶಿಲಾವತ್ ಕೃತಾಮಿತ್ಯರ್ಥಃ। ನ ತು ಶಿಲಾತ್ವಂ ಪ್ರಾಪ್ತಾಮಿತಿ। 'ಜಡೀಕೃತಸ್ತೇನ ಸ ರಾವಣೋಽಪಿ' ಇತ್ಯತ್ರ (೮/೮೧) ಜಡವತ್ಕೃತ ಇತ್ಯುಕ್ತತ್ವಾತ್। ಮಾನುಷತಾಮವಾಪ ಇತ್ಯತ್ರಾಪಿ ಪ್ರಾಪ್ತಮಿತಿ ನಾರ್ಥಃ। ಕಿಂತು 'ಮನು ಅವಬೋಧನ' ಇತಿ ಧಾತೋಃ ಸಂಜ್ಞಾ ಚ ತ್ವಂ ಪ್ರಾಪ್ತಾಮಿತ್ಯರ್ಥಃ। ಏವಂ ಸತಿ ಋಷಿತ್ವಜಾತಿವಿಶಿಷ್ಟೇನ ಗೌತಮೇನಾಹಲ್ಯಾಯಾಃ ಸಂಯೋಜನಂ ಸಂಭವತಿ। ತಸ್ಯಾಃ ಮಾನುಷತ್ವಕಥನೇ ಗೌತಮೇನ ಸಂಯೋಜನಾಸಂಭವಾತ್। ತಸ್ಯಾಃ ಮಾನುಷದೇಹಪ್ರಾಪ್ತೌ ಕಾರಣಾನುಕ್ತೇಶ್ಚ। ಇತಿ ಜಾತಿಕೃತೋ ಭೇದಃ ಇತಿ 'ದೇವಋಷಿಪಿತೃಪನರಾ ಇತಿ ಮುಕ್ತಾಸ್ತು ಪಂಚಧಾ' ಇತ್ಯಾದೇಃ। –(ರಾ.)

೩) ಅವಳು ಶಿಲೆಯಂತೆ ನಿಶ್ಚಲಳಾಗಬೇಕು; ಇತರ ಯಾರಕಣ್ಣಿಗೂ ಗೋಚರಿಸಬಾರದು; ಶ್ರೀರಾಮನ ದರ್ಶನದವರೆಗೂ ಅವಳು ಅಂತೆಯೇ ಇರಬೇಕು ಇದು ಅವರು ಅಹಲ್ಯೆಗಿತ್ತ ಶಾಪ; ಇಂತಹ ಸ್ಥಿತಿಯಲ್ಲಿದ್ದ ಅಹಲ್ಯೆಯನ್ನು ಶ್ರೀರಾಮದೇವರು ನೋಡುತ್ತಲೇ ಅವಳ ಶಾಪ ಪರಿಹಾರವಾಗಿ ಅವಳು ಪುನಃ ಮನುಷ್ಯರೂಪದಿಂದ ಸಕಲರಿಗೂ ಗೋಚರಿಸಿದಳು. ಹೀಗೆ ಶುದ್ಧಳಾದ ಅವಳನ್ನು ಗೌತಮರೊಂದಿಗೆ ಮತ್ತೆಂದೂ ವಿಯೋಗಬಾರದಂತೆ ಶ್ರೀರಾಮ ಒಂದುಗೂಡಿಸಿದ. ಇದು ಈ ಪ್ರಸಂಗದ ಸಂಗ್ರಹ.

೪) ಅಹಲ್ಯೆಯು ಈ ಪ್ರಸಂಗದಲ್ಲಿ ನಿರಪರಾಧಿ; ಅವಳು ಒಳಗಾಗಿದ್ದು ಬಲಾತ್ಕಾರಕ್ಕೆ ಎಂಬುದೇ ಅದಕ್ಕೆ ಕಾರಣ; ಇಂದ್ರನೂ ನಿರಪರಾಧಿಯೇ; ಏಕೆಂದರೆ ಅವನು ಹಾಗೆ ಮಾಡಿದ್ದು ಕಾಮದಿಂದಲ್ಲ, ದೇವಕಾರ್ಯಕ್ಕೆಂದು ಮಾತ್ರ; ಗೌತಮರು ಜಿತೇಂದ್ರಿಯರು; ಅವರಿಗಿದ್ದ ಅಧಿಕ ಪುಣ್ಯವನ್ನು ಕಳೆಯಲು ಅವರ ಪತ್ನೀಗಮನದ ಹೊರತು ಬೇರೆ ಮಾರ್ಗವಿರಲಿಲ್ಲ; ತನ್ನ ಪತ್ನಿಯನ್ನು ಕೆಣಕಿದಾಗ ಬರುವ ಕ್ರೋಧದ ಹೊರತು ಉಳಿದೆಲ್ಲವನ್ನೂ ಅವರು ಗೆದ್ದಿದ್ದರು.

೫) ಅಹಲ್ಯೆಯೂ ಅಂತಹವಳೇ; ನಿಜರೂಪದಿಂದ ಬಂದರೆ ಇಂದ್ರನನ್ನು ಅವಳು ಬಯಸುವವಳಲ್ಲ; ಅದಕ್ಕೆಂದೇ ಇಂದ್ರ ಗೌತಮರ ವೇಷದಲ್ಲೇ ಬರಬೇಕಾಯಿತು. ಗೌತಮರು ಇದನ್ನೆಲ್ಲಾ ತಿಳಿದು ತನಗೆ ಶಾಪ ಕೊಡಲೆಂದೇ ಇಂದ್ರ ಅವರ ಕಣ್ಣಿಗೆ ಬಿದ್ದ. ಹೀಗೆ ಅವರಿಬ್ಬರೂ ನಿರಪರಾಧಿಗಳಾಗಿದ್ದರಿಂದಲೇ ಅವರನ್ನು ಶಪಿಸಿದ ಗೌತಮರ ತಪಸ್ಸು ಹ್ರಾಸವಾಯಿತು. ನಿರಪರಾಧಿಗಳನ್ನು ಶಪಿಸಿದ್ದೇ ಅವರ ಅಪರಾಧ.

೬) ಅಹಲ್ಯಾಗಮನದಿಂದ ಇಂದ್ರನಿಗೆ ಆಧ್ಯಾತ್ಮಿಕವಾಗಿ ಯಾವ ದೋಷವೂ ಬರಲಿಲ್ಲ ಎಂಬುದೇ ಶಾಸ್ತ್ರಗಳ ನಿರ್ಣಯ. ಗೌತಮರ ಕಲ್ಯಾಣಕ್ಕೆ ಕಾರಣವಾದ್ದರಿಂದ ಅವರಿಗೆ ಪುಣ್ಯವೇ ಬಂದು ಅವರ ಅಹಲ್ಯಾಜಾರತ್ವ ಅವರಿಗೆ ಗುಣವೇ ಆಯಿತು ಎಂದು ಶ್ರುತಿಗಳಲ್ಲಿ ಉಕ್ತವಾಗಿದೆ :

ಅಹಲ್ಯಾಜಾರತ್ವಾದ್ಯಪಿ ದೋಷಕೃತೋऽಪಿ ತೇ ನ ಬಹುತರೋ ಲೇಪ ಅಸೀದಿತಿ ಉತ್ಕರ್ಷಮೇವ ವಕ್ತಿ । ಬಹುನರಕಫಲೋ ಹ್ಯಸೌ । 'ತಸ್ಯ ಲೋಮ ಚ ನ ಕ್ಷೀಯತ' ಇತಿ ಶ್ರುತ್ಯಂತರಾಚ್ಚ । – ಗೀತಾಭಾಷ್ಯ (೨/೨೪)

---

೧೦. ಅಜ್ಞಾನಾದ್ಧರ್ಷಿತಾ ವಿಪ್ರ ತ್ವದ್ರೂಪೇಣ ದಿವೌಕಸಾ ।
ನ ಕಾಮಕಾರಾತ್ ವಿಪ್ರರ್ಷೇ ಪ್ರಸಾದಂ ಕರ್ತುಮರ್ಹಸಿ ॥ – ವಾ.ರಾ.(೭/೩೦/೪೨)

'ತ್ವಾಂ ಜಾನಾಮಿ ಮನಃ ಶುದ್ಧಾಮ್' – ಬ್ರಹ್ಮವೈವರ್ತಪುರಾಣ (ಅ. ೬)

ನ ಬುಬೋಧ ತ್ವಹಲ್ಯಾ ತಂ ಜಾರಂ ಮೇನೇ ತು ಗೌತಮಮ್ ॥ – ಬ್ರಹ್ಮಪುರಾಣ (ಅ. ೮೭)

ಅಹಲ್ಯಾಧರ್ಷಣೇನ ತಸ್ಯೇಂದ್ರಸ್ಯ ಲೋಮಾಪಿ ನ ಕ್ಷೀಯತ ಇತ್ಯರ್ಥಃ । – ಗೀತಾಭಾಷ್ಯಪ್ರಮೇಯದೀಪಿಕಾ

ಬಲಂ ಸ್ವಭಕ್ತೇರಧಿಕಂ ಪ್ರಕಾಶಯ-
ನ್ನನುಗ್ರಹಂ ಚ ತ್ರಿದಶೇಷ್ವತುಲ್ಯಮ್ ।
ಅನನ್ಯಭಕ್ತಾಂ ಚ ಸುರೇಶಕಾಂಕ್ಷಯಾ
ವಿಧಾಯ ನಾರೀಂ ಪ್ರಯಯೌ ತಯಾಽರ್ಚಿತಃ ॥ ೧೧ ॥

ಅ: ಶ್ರೀರಾಮ ತನ್ನ ಭಕ್ತಿಯ ಮಹಿಮೆಯನ್ನು ಮತ್ತು ದೇವತೆಗಳಲ್ಲಿರುವ ಅನುಪಮವಾದ ಅನುಗ್ರಹವನ್ನೂ ಅತಿಶಯವಾಗಿ ಪ್ರಕಟಿಸಲೆಂದು ಅನನ್ಯಭಕ್ತಳಾದ ಅಹಲ್ಯೆಯನ್ನು ಸುರರಾಜನಾದ ಇಂದ್ರನ ಅಪೇಕ್ಷೆಯಂತೆ ಹೆಣ್ಣನ್ನಾಗಿ ಮಾಡಿದ. ಅವಳಿಂದ ಪೂಜಿತನಾಗಿ ತೆರಳಿದ.

ವಿ: ೧) ಅಹಲ್ಯೋದ್ಧಾರದ ಮರ್ಮವನ್ನು ಈ ಶ್ಲೋಕದಲ್ಲಿ ತಿಳಿಸಿರುವರು.

೨) ಇಂದ್ರ ಮತ್ತು ಅಹಲ್ಯೆ ಇಬ್ಬರೂ ಹರಿಭಕ್ತರು; ಅಹಲ್ಯೆ ಶಾಪಕ್ಕೆ ಗುರಿಯಾಗಿದ್ದಳು; ಇಂದ್ರ ಒಂದು ರೀತಿಯಲ್ಲಿ ಅದಕ್ಕೆ ಕಾರಣನಾಗಿದ್ದ. ತನ್ನಿಂದಾಗಿ ಅಹಲ್ಯೆಗೆ ಒದಗಿದ ಶಾಪ

---

೧೧. ಸಾ ಹಿ ಗೌತಮವಾಕ್ಯೇನ ದುರ್ನಿರೀಕ್ಷ್ಯಾ ಬಭೂವ ಹ ।
ತ್ರಯಾಣಾಮಪಿ ಲೋಕಾನಾಂ ಯಾವದ್ರಾಮಸ್ಯ ದರ್ಶನಂ ॥ –(ವಾ. ರಾ. ೧/೪೯/೧೬)

ಪಾತಿವ್ರತ್ಯಪರೀಕ್ಷಯಾಖ್ಯಿಲಲನಾದೋಷಾಂಕುರುಚ್ಛೇದನಂ । –ತೀರ್ಥಪ್ರಬಂಧ(೪/೨೮)

ಈಷದಹಲ್ಯಾಭಕ್ತಿರಪಿ ನಾರೀಕರಣೇ ಹೇತುರಿತಿ ಸೂಚನಾಯ 'ಅನನ್ಯಭಕ್ತಾಂ ಚ' ಇತ್ಯುಕ್ತಮ್ । –(ವಾ.)

ಶಿಲೀಭೂತಾಯಾ ನಾರೀತ್ವವಿಧಾನೇ ಹೇತುದ್ವಯಂ । 'ಅನನ್ಯಭಕ್ತಾಂ' ಸುರೇಶಕಾಂಕ್ಷಯಾ ಚ ಇತಿ। ಅಹಲ್ಯಾಯಾ ಅನನ್ಯಭಕ್ತತ್ವಾದಿತ್ಯರ್ಥಃ । ತಥಾ ಏತಸ್ಯಾಃ ಶಿಲೀಭಾವಾಪಗಮೇನ ಅಹಲ್ಯಾತ್ವಪ್ರಾಪಣಸ್ಯ ಸುರೇಶಕಾಂಕ್ಷಾವಿಷಯತ್ವಾದಿತ್ಯರ್ಥಃ ।

ಪ್ರಬಲಯಾ ಸ್ವಭಕ್ತ್ಯಾ ಪ್ರಾಮಾದಿಕೋಽಪರಾಧೋಽಪಗಚ್ಛತೀತಿ ದರ್ಶಯನ್ನಿತ್ಯರ್ಥಃ –(ವ.)

ಭಕ್ತಃ ಪುಂಸಾಂ ಪ್ರಮಾದೇನ ಕೃತಮಪರಾಧಂ ವಿನಾಶಯತೀತಿ ಪ್ರಕಾಶಯನ್ । –(ಜ.)

ಸುರೇಶಾಪರಾಧಮಗಣಯ್ಯ ಏತದಾಕಾಂಕ್ಷಿತಕಾರ್ಯಕರಣೇನ ತತ್ರ ಮಮ ಅಸಾಧಾರಣೋಽನುಗ್ರಹೋಽಸ್ತೀತಿ ಭಾವಃ । –(ವ.)

ಮತ್ಸಂಬಂಧಾಚ್ಛಿಲೀಭೂತಾಯಾ ಮಾನುಷತ್ವಂ ಸ್ಯಾದಿತಿ ಸುರೇಶೇಚ್ಛಾಹೇತುನಾ ಚ । ದೇವಾನಾಂ ಮನೋಽಭೀಷ್ಟಕರ್ತೃತ್ವಾತ್ ದೇವೇಷ್ವತುಲ್ಯಾನುಗ್ರಹಃ ಪ್ರಕಾಶಿತಃ । –(ಜ.)

ಬಲಮಿತಿ । 'ರಾಮಃ' ಇತಿ ಅಧ್ಯಾಹಾರಃ । ಸ ಇತ್ಯನುವರ್ತತೇ ವಾ । –(ಜ.)

ನಾರೀಂ ವಿಧಾಯ – ಅಹಲ್ಯಾಮಿತಿ ಶೇಷಃ । –(ಜ.)

೧೧. ಸುರೇಶಪಾಪಾಯಶಃಪರಿಹಾರಕಾಂಕ್ಷಯಾ ಇತ್ಯರ್ಥಃ । ಮಧ್ಯಮಪದಲೋಪೀ ಸಮಾಸಃ । –(ವಾ)

ಪರಿಹಾರವಾಗಿ ಅವಳು ಮುಂಚಿನಂತಾಗಬೇಕು ಎಂಬ ಅಪೇಕ್ಷೆ ಅವನಿಗಿತ್ತು; ಅಹಲ್ಯೆಯ ಉದ್ಧಾರಕ್ಕೆ ಹೀಗೆ ಮೂಲತಃ ಅವಳಿಗಿದ್ದ ಹರಿಭಕ್ತಿ ಮತ್ತು ಇಂದ್ರನ ಪ್ರಾರ್ಥನೆ ಎರಡೂ ಕಾರಣವಾಗಿದ್ದವು. ಎಂದರೆ ಹರಿಭಕ್ತಿಯು ಎಂತಹ ದುರಿತವನ್ನೂ ತರಿಯಬಲ್ಲ ಅಪೂರ್ವಸಾಧನ ಎಂಬ ತತ್ತ್ವ ಇದರಿಂದ ಪ್ರಕಾಶಿತವಾಯಿತು ಎಂದು ಭಾವ.

೩) ಇಂದ್ರನ ಅಪೇಕ್ಷೆಯನ್ನು ಶ್ರೀರಾಮನು ಪೂರೈಸಲು ಅವನು ಸುರೇಶ ಎಂಬುದೂ ಕಾರಣವಾಗಿತ್ತು; ದೇವತೆಗಳು ಋಷ್ಯಾದಿಗಳಿಗಿಂತ ಉತ್ತಮರಾದ್ದರಿಂದ ಅವರು ಇವರಿಗಿಂತ ಮಿಗಿಲಾದ ಹರಿಭಕ್ತರಾಗಿರುವರು ; ಆದ್ದರಿಂದಲೇ ಅವರಲ್ಲಿ ಅವನು ಎಣೆಯಿರದ ಅನುಗ್ರಹವನ್ನು ತೋರುವನು; ಈ ತತ್ತ್ವವೂ ಸಹ ಇದರಿಂದ ಸೂಚಿತ.

೪) ಇಂದ್ರದೇವರು ಅಪರೋಕ್ಷಜ್ಞಾನಿಗಳು; ಅಹಲ್ಯೆಯು ಅವರಿಗಿಂತ ಉಚ್ಚಳಾದ ಸ್ತ್ರೀಯೂ ಅಲ್ಲ; ಎಂದರೆ ಅವರಿಗೆ ಅಹಲ್ಯಾಗಮನನಿಮಿತ್ತದ ಪಾಪದ ಪ್ರಸಕ್ತಿ ಸರ್ವಥಾ ಇಲ್ಲ; ಆದರೂ ಅಹಲ್ಯೆಯು ವೈಷ್ಣವಳಾದ್ದರಿಂದ ಅವಳಿಗೊದಗಿದ ಶಾಪಕ್ಕೆ ಒಂದು ರೀತಿಯಲ್ಲಿ ಕಾರಣನಾದ ನಿಮಿತ್ತದಿಂದಾಗಿ 'ತದ್ಭಕ್ತದ್ವೇಷ ಏವ ಚ' ಎಂಬ ಪ್ರಮಾಣಕ್ಕೆ ಅನುಸಾರವಾಗಿ ಒಂದು ರೀತಿಯಾದ ವೈಷ್ಣವದ್ರೋಹರೂಪದ ದೋಷ ಅವರಿಗೆ ಒದಗಬಹುದಿತ್ತು; ಅಂಬರೀಷನು ತಮಗಿಂತ ಉತ್ತಮನಲ್ಲವಾದರೂ ನಿರಪರಾಧಿಯಾಗಿದ್ದ ಅವನನ್ನು ಶಿಕ್ಷಿಸಹೊರಟ ಪ್ರಸಂಗದಲ್ಲಿ ದುರ್ವಾಸರಿಗೆ ಹಾಗಾದದ್ದು ಕಂಡಿದೆ. ತಮಗೂ ಹಾಗಾಗದಿರಲಿ ಎಂಬ ಇಂದ್ರದೇವರ ಅಪೇಕ್ಷೆಯನ್ನು ಅಹಲ್ಯೋದ್ಧಾರದ ಮೂಲಕ ಶ್ರೀರಾಮ ಪೂರೈಸಿ ಪಾಪ ಮತ್ತು ಅಪಕೀರ್ತಿಗಳು ಇಂದ್ರನಿಗೆ ಬರದಂತೆ ಅವರನ್ನು ಪಾಲಿಸಿದ ಎಂಬ ವಿಶೇಷಾರ್ಥವನ್ನು ಶ್ರೀವಾದಿರಾಜಸ್ವಾಮಿಗಳು ಬರೆದಿರುವರು.

---

೧೧. ಯದ್ಯಪಿ ಇಂದ್ರಸ್ಯ ಅಪರೋಕ್ಷಜ್ಞಾನಿತ್ವೇನ 'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್' ಇತಿ ಸೂತ್ರಾತ್ ಅಹಲ್ಯಾಗಮನೇಽಪಿ ನ ದೋಷಲೇಪಃ । ಅಹಲ್ಯಾಯಾಃ ಸ್ವೋಚ್ಚದಾರತ್ವಾಭಾವಾತ್ ಪಾಪಲೇಪೇ ವಿಶೇಷಕಾರಣಂ ಚ ನಾಸ್ತಿ । ನಾಪಿ ಶಿಲಾವಧೂಕರಣಮಾತ್ರೇಣ ಪ್ರಾಗಿಂದ್ರಕೃತಾಹಲ್ಯಾಗಮನದೋಷಪರಿಹಾರಃ । ನ ಹಿ ನಾರ್ಯಾ ಪ್ರಾಯಶ್ಚಿತ್ತೇ ಗೃಹೀತೇ ಜಾರಸ್ಯಾಪೀಹ ದೋಷಪರಿಹಾರೋ ದೃಷ್ಟಃ।

ತಥಾಪಿ ನಿರ್ನಿಮಿತ್ತಂ ವೈಷ್ಣವಶಿಲೀಕರಣಮೂಲತ್ವೇನ ಪ್ರಾಪ್ತವೈಷ್ಣವದೋಷಾಖ್ಯಪಾಪಸ್ಯ 'ತದ್ಭಕ್ತದ್ವೇಷ ಏವ ಚ' ಇತಿ ವಚನಾತ್ ಹರಿದ್ವೇಷ ಏವ ಪರ್ಯವಸಾನಾತ್ ಜ್ಞಾನಿನ್ಯಪಿ ಸುರೇಶೇ ತಲ್ಲೇಪಃ ಸ್ಯಾದೇವ । ಯಥಾ ಮಹತೋ ದುರ್ವಾಸಸಃ ಸ್ವಾವರನಿರಪರಾಧ್ಯಂಬರೀಷದ್ರೋಹಜಪಾಪಲೇಪಃ । ಸ್ವನಿಮಿತ್ತಶಿಲೀಭಾವಮೋಚನಾ-ಸಾಮರ್ಥ್ಯೇನ ಅಪಯಶಶ್ಚ ಸುರೇಶಸ್ಯಾಭೂತ್ । ತದುಭಯಮಾರ್ಜನಾಯ ನಾರೀಕರಣಮಿತಿ ಭಾವೇನೋಕ್ತಮ್ = ಸುರೇಶಕಾಂಕ್ಷಯಾ ಇತಿ । ....ಅತ ಏವ ಇಂದ್ರಕೃತಾತ್ ಪ್ರಧರ್ಷಣಾಚ್ಛಿಲೀಕೃತಾಮಿತಿ ಪ್ರಾಗುಕ್ತಮಾಚಾರ್ಯೈಃ ।

– (ವಾ.)

ರಾಮ ದರ್ಶನದಿಂದ ವಿದೇಹದ ಜನರಿಗೆ ಆದ ಆನಂದ

ಶ್ಯಾಮಾವದಾತೇ ಜಗದೇಕಸಾರೇ
ಸ್ವನಂತಚಂದ್ರಾಧಿಕಕಾಂತಿಕಾಂತೇ ।
ಸಹಾನುಜೇ ಕಾರ್ಮುಕಬಾಣಪಾಣೌ
ಪುರೀಂ ಪ್ರವಿಷ್ಟೇ ತುತುಷುರ್ವಿದೇಹಜಾಃ ॥ ೧೨ ॥

ಅ: ಶ್ರೀರಾಮ ಶ್ಯಾಮಲವರ್ಣದಿಂದ ಹೊಳೆಯುತ್ತ ಇಂದ್ರನೀಲಮಣಿಯಂತೆ ಕಂಗೊಳಿಸುತ್ತಿದ್ದ; ಜಗತ್ತಿನಲ್ಲಿ ನಿಜವಾದ ಅರ್ಥದಲ್ಲಿ ತುಂಬಾ ಶ್ರೇಷ್ಠನು; ಕಲಂಕರಹಿತರಾದ ಅನಂತಚಂದ್ರರಿಗೂ ಮಿಗಿಲಾದ ಕಾಂತಿಯಿಂದ ಮನೋಹರನಾಗಿದ್ದ; ಕೈಯಲ್ಲಿ ಬಿಲ್ಲುಬಾಣ-ಗಳನ್ನು ಹಿಡಿದಿದ್ದ; ಅವನು ತಮ್ಮನೊಂದಿಗೆ(ವಿದೇಹ) ಪಟ್ಟಣವನ್ನು ಪ್ರವೇಶಿಸುತ್ತಲೇ ಆ ಪಟ್ಟಣದ ಜನರೆಲ್ಲ ಬಹಳವಾಗಿ ಆನಂದಿಸಿದರು.

ವಿ: ೧) ತ್ರಿಲೋಕಸುಂದರಿಯಾದ ಸೀತಾದೇವಿಗೆ ಶ್ರೀರಾಮ ಅದೆಷ್ಟು ಅನುರೂಪನಾದ ಪತಿ ಎಂಬುದನ್ನು ಸೀತಾಕಲ್ಯಾಣದ ಉಪೋದ್ಘಾತರೂಪವಾಗಿ ಇಲ್ಲಿ ವರ್ಣಿಸುತ್ತಿರುವರು.

---

೧೨. ಶ್ಯಾಮಶ್ಚಾಸೌ ಅವದಾತಶ್ಚೇತಿ ಸಮಾಸಃ । ಶ್ಯಾಮತ್ವೇऽಪಿ ಸೂರ್ಯಮಂಡಲವತ್ ಇಂದ್ರನೀಲವಚ್ಚ ಶುಕ್ಲಭಾಸ್ಕರತೇಜೋವಿಶೇಷಯುಕ್ತತ್ವಾತ್ ಅವದಾತಶ್ಚೇತ್ಯರ್ಥಃ । 'ಅವದಾತಃ ಸಿತೋ ಗೌರಃ' ಇತ್ಯನುಶಾಸನಮ್ । ನ ತು ಕೇಶವತ್ 'ಕೇವಲ ಶ್ಯಾಮಃ' ಇತಿ ಭಾವಃ । –(ವಾ.)

ಶ್ಯಾಮೇಷ್ವವದಾತಃ ಶುದ್ಧಇಂದ್ರನೀಲಮಣಿಸದ್ವರ್ಣ ಇತ್ಯರ್ಥಃ । 'ದಶದೋಷವಿನಿರ್ಮುಕ್ತಃ ಶ್ಯಾಮ ಇಂದ್ರಮಣಿಃ ಸ್ಮೃತಃ' ಇತ್ಯಭಿಧಾನಾತ್। –(ಜ.)

ಶ್ಯಾಮವರ್ಣೇನ ರೋಚಮಾನೇ। –(ವ.)

೧೨. 'ರಸಃ ಸಾರೋ ವರಶ್ಚ' ಇತ್ಯಭಿಧಾನಮ್ । –(ವಾ.)

೧೨. ಸ್ಮರೇತ ಯಾಮಿನೀನಾಥಸಹಸ್ರಾಮಿತಕಾಂತಿಮತ್ । – ದ್ವಾದಶಸ್ತೋತ್ರ(೧/೮)

೧೨. ಕಾರ್ಮುಕಬಾಣೌ ಪಾಣ್ಯೋರ್ಯಸ್ಯೇತಿ ವ್ಯಧಿಕರಣಬಹುವ್ರೀಹಿಃ । –(ಜ.)

೧೨. ಏತಾದೃಶಕಾಂತಿವಿಶೇಷದರ್ಶನಯೋಗ್ಯತಾ ಲಕ್ಷ್ಮ್ಯಾ ಏವ ನಾನ್ಯಸ್ಯೇತಿ ಭಾವೇನೋಕ್ತಮ್ । ವಿದೇಹಜಾ ತುತುಷುರಿತಿ । ನ ತು ದದೃಶುರಿತ್ಯರ್ಥಃ । -(ವಾ.)

೧೨. ಪಶ್ಯಂತಿ ಚೇದಪಿ ಏಕೈಕಾವಯವಮೇವ ಪಶ್ಯಂತಿ ನ ತು ಸಾಮಸ್ತ್ಯೇನೇತಿ ಭಾವೇನಾಹ । –(ವಾ.)

೧೨. ಪ್ರಜಾಸ್ವವರಭಕ್ತ್ಯೇನ ಸೌಂದರ್ಯಮಾತ್ರದರ್ಶನಲೋಭಾತ್ । ಮುಖಾರವಿಂದಮೇವ ದದೃಶುಃ । ಶುಕಾದ್ಯಾಸ್ತು ಪರಮಭಾಗವತತ್ವೇನ ಸತತಂ ಹರಿಪೂಜಾರತತ್ವಾತ್ ಪಾದಮೇವ ಬಹುಶಃ ಪಶ್ಯಂತೀತಿ ವಿವೇಕಃ । – (ವಾ.)

೨) ಶ್ರೀರಾಮನು ಕೇಶದಂತೆ ಕೇವಲ ಶ್ಯಾಮಲವರ್ಣದವನಲ್ಲ; ಸೂರ್ಯಮಂಡಲದಂತೆ ಇಂದ್ರನೀಲಮಣಿಯಂತೆ ಹೊಳೆಹೊಳೆಯುವ ಕಾಂತಿಯಿಂದ ಕೂಡಿದ ವಿಲಕ್ಷಣಸ್ವರೂಪನು ಎಂಬುದನ್ನು '**ಶ್ಯಾಮಾವದಾತೇ**' ಎಂಬ ಪದದಿಂದ ಸೂಚಿಸಿರುವರು.

೩) ಶ್ರೀರಾಮನ ಅಸದೃಶವಾದ ಕಾಂತಿವಿಶೇಷವನ್ನು ಕಾಣುವ ಸಾಮರ್ಥ್ಯವಿಶೇಷ ಮಹಾಲಕ್ಷ್ಮಿಯ ಹೊರತು ಬೇರಾರಿಗೂ ಇಲ್ಲ ಎಂದು ಸೂಚಿಸಲು '**ದದೃಶುಃ**' (ನೋಡಿದರು) ಎನ್ನದೆ, '**ತುತುಷುಃ**'(ಸಂತೋಷಿಸಿದರು) ಎಂದಿರುವರು.

ಪಪುರ್ನಿತಾಂತಂ ಸರಸಾಕ್ಷಿಭೃಂಗೈ-
ರ್ವರಾನನಾಬ್ಜಂ ಪುರುಷೋತ್ತಮಸ್ಯ ।
ವಿದೇಹನಾರೀನರವರ್ಯಸಂಘಾ
ಯಥಾ ಮಹಾಪೌರುಷಿಕಾಸ್ತದಂಘ್ರಿಮ್ ॥ ೧೩ ॥

ಅ: ವಿದೇಹಪಟ್ಟಣದ ಶ್ರೇಷ್ಠ ಸ್ತ್ರೀಪುರುಷರ ಗುಂಪುಗಳು ಪುರುಷೋತ್ತಮನಾದ ಶ್ರೀರಾಮನ ಮುಖಕಮಲವನ್ನು ತಮ್ಮ ಸ್ನೇಹಪೂರಿತ ಕಣ್ಣುಗಳೆಂಬ ದುಂಬಿಗಳಿಂದ ಬಹಳವಾಗಿ ಈಂಟಿದರು – ಮಹಾಪುರುಷರಾದ ಹರಿಭಕ್ತರು ಅವನ ಚರಣಗಳನ್ನು ಹೇಗೋ ಹಾಗೆ .

ವಿ: ೧) ಶ್ರೀರಾಮನ ಮುಖವೇ ಕಮಲ; ಪುರಜನರ ಸ್ನೇಹ ತುಂಬಿದ ಶ್ರೀರಾಮನ ಕಣ್ಣುಗಳೇ ದುಂಬಿಗಳು; ದುಂಬಿಗಳು ಕಮಲಮಧುವನ್ನು ಹೀರುವಂತೆ ಜನರೆಲ್ಲ ಮುಖವನ್ನು ಮತ್ತೆ ಮತ್ತೆ ದಿಟ್ಟಿಸುತ್ತಿದ್ದರು; ಶುಕನಾರದಾದಿ ಭಗವದ್ಭಕ್ತರು ಅವನ ಚರಣವನ್ನು ಕಾಣುವಂತೆ ಎಂದು ಭಾವ. ಇಲ್ಲಿಯ 'ರೂಪಕಾಲಂಕಾರದ' ಸೊಗಸು ಅನ್ಯಾದೃಶವಾದುದು.

---

೧೩. ಬಾಹ್ಯಾರ್ಥಲಂಬನೋ ಯಸ್ತು ವಿಕಾರೋ ಮಾನಸೋ ಭವೇತ್ । –(ವಾ.)
'ಸ ಭಾವಃ ಕಥ್ಯತೇ ಸದ್ಭಿಃ ತಸ್ಯೋತ್ಕರ್ಷೋ ರಸಃ ಸ್ಮೃತಃ' ಇತ್ಯಭಿಧಾನಾತ್ । –(ಜ.)
೧೩. ಸರಸಾಕ್ಷಿಭೃಂಗೈರ್ವರಾನನಾಬ್ಜಪಾನಂ ನಾಮ ಸಾನಂದಂ ಸಸ್ನೇಹಂ ಪೌನಃಪುನ್ಯೇನ ನಿರೀಕ್ಷಣಂ । –(ವಾ.)
೧೩. ಮಹಾಪುರುಷೋ ನಾರಾಯಣಃ ತತ್ಸಂಬಂಧಿನೋ ಮಹಾಪೌರುಷಿಕಾಃ ಶುಕನಾರದಾದ್ಯಾಃ । –(ವಾ.)
ಪುರುಷಸ್ಯ ಇಮೇ ಪೌರುಷಿಕಾಃ । ಮಹಾಂತಶ್ಚ ತೇ ಪೌರುಷಿಕಾಶ್ಚೇತಿ ವಿಗ್ರಹಃ । ಹರಿಭಕ್ತಾಃ । –(ಜ.)
ಮಹಾಪುರುಷಸ್ಯ ಭಕ್ತಾಃ । –(ವೇ.)
ಮನುಷ್ಯೋತ್ತಮಾ ಇತ್ಯರ್ಥಃ । –(ಜ.)

೨) ಭಗವಂತನನ್ನು ಕಾಣುವವರೆಲ್ಲ ಅವನನ್ನು ಸಮಗ್ರವಾಗಿ ಕಾಣಲಾರರು; ಅವನ ಒಂದು ಅವಯವವನ್ನು ಮಾತ್ರ ಯಥಾಯೋಗ್ಯವಾಗಿ ಕಾಣಬಲ್ಲರು ಎಂಬುದನ್ನೂ, ಶುಕ–ನಾರದಾದಿ ಮಹನೀಯರೆಲ್ಲ ಪರಮಭಾಗವತರಾದ್ದರಿಂದ ಸತತ ಹರಿಪೂಜಾರತರಾಗಿದ್ದು ಅವನ ಚರಣವನ್ನು ಬಹುತೆರನಾಗಿ ಕಾಣುವರು ಎಂಬುದನ್ನೂ ಇಲ್ಲಿ ಸೂಚಿಸಿರುವರು.

ಶ್ರೀರಾಮ ಲಕ್ಷ್ಮಣ ವಿಶ್ವಾಮಿತ್ರರನ್ನು ಸ್ವಾಗತಿಸಿದ ಜನಕರಾಜ

ತದಾ ವಿದೇಹಃ ಪ್ರತಿಲಭ್ಯ ರಾಮಂ
ಸಹಸ್ರನೇತ್ರಾವರಜಂ ಗವಿಷ್ಮಮ್ ।
ಸಮರ್ಚಯಾಮಾಸ ಸಹಾನುಜಂ ತ–
ಮೃಷಿಂ ಚ ಸಾಕ್ಷಾಜ್ಜ್ವಲನಪ್ರಕಾಶಮ್ ॥ ೧೪ ॥

ಅ: ಆಗ ಜನಕರಾಜನು ಭುವಿಗಿಳಿದ ಸಹಸ್ರಾಕ್ಷ ಇಂದ್ರನ ಅನುಜನಾದ ಶ್ರೀರಾಮನನ್ನು ಅವನ ಅನುಜನೊಂದಿಗೆ ಭಕ್ತಿಶ್ರದ್ಧೆಗಳಿಂದ ಪೂಜಿಸಿದ. ಅಗ್ನಿಯಂತೆ ಹೊಳೆಯುತ್ತಿದ್ದ ಆ ವಿಶ್ವಾಮಿತ್ರಮುನಿಯನ್ನೂ ಸ್ವಾಗತಿಸಿದ.

ವಿ: ೧) ಶ್ರೀರಾಮನು ಲಕ್ಷ್ಮಣ ಮತ್ತು ವಿಶ್ವಾಮಿತ್ರರೊಂದಿಗೆ ವಿದೇಹಪಟ್ಟಣವನ್ನು ಪ್ರವೇಶಿಸುತ್ತಲೇ ಜನಕರಾಜನು ಅವರನ್ನು ತಾರತಮ್ಯೋಚಿತರೀತಿಯಲ್ಲಿ ಸ್ವಾಗತಿಸಿದನು ಎಂದು ಭಾವ; ಅವರ ತಾರತಮ್ಯವು ಅವರ ತೇಜೋವಿಶೇಷದಿಂದ ಸಹಜವಾಗಿಯೇ ತಿಳಿದುಬರುತ್ತಿತ್ತು ಎಂಬ ಧ್ವನಿಯೂ ಇಲ್ಲಿದೆ.

೨) ಶ್ರೀರಾಮನು ಸಾಕ್ಷಾತ್ ವಿಷ್ಣು ಎಂಬುದನ್ನು, ಅವನನ್ನು ಜನಕರಾಜನು ಇಂದ್ರನು ಉಪೇಂದ್ರನನ್ನು ಗೌರವಿಸುವಂತೆ; ಭಾವಿ ಇಂದ್ರನಾದ ಬಲಿಯು ವಾಮನನನ್ನು ಆದರಿಸಿದಂತೆ ಆದರಿಸಿದನು ಎಂಬ ಉಪಮೆಯೂ ಇದರಲ್ಲಿ ಸೂಚಿತವಾಗಿದೆ.

೩) 'ರಾಮಂ' 'ಸಹಾನುಜಂ' 'ಋಷಿಂ' ಎಂಬ ಕ್ರಮವೂ ತಾರತಮ್ಯಸೂಚಕ.

---

೧೪. ಯಥಾ ಅಗ್ರಜೋऽಪೀಂದ್ರೋ ಗುಣಾಧಿಕತ್ವಾತ್ ವಾಮನಂ ಪೂಜಯತಿ ತಥಾ ವೃದ್ಧೋऽಪಿ ಜನಕೋ ಬಾಲಂ ರಾಮಂ ಪೂಜಯಾಮಾಸೇತಿ ಧ್ವನಿಸೂಚನಾಯ ಸಹಸ್ರನೇತ್ರಾವರಜಃ ಇತಿ ವಿಶೇಷಣಮ್। –(ವಾ.)

೧೪. ಪುತ್ರಾರ್ಥಂ ಪಯೋವ್ರತಾದಿನಾ ತೋಷಿತೋ ವಾಮನಃ ಸ್ವಯಂ ರಾಮೋऽಭೂದಿತಿ ಭಾವಃ । ಬಲಿಃ ಸಹಸ್ರನೇತ್ರಾವರಜಮ್ ...। ಅತ್ರೋಪಮಾ ಲುಕ್ । –(ಜ.)

೧೪. ಸಮ್ಯಕ್ ಭಕ್ತಿಶ್ರದ್ಧಾಪೂರ್ವಕಮರ್ಚಯಾಮಾಸ। –(ವಾ.)

ರಾಮನೇ ಅಳಿಯ

ಮೇನೇ ಚ ಜಾಮಾತರಮಾತ್ಮಕನ್ಯಾ-
ಗುಣೋಚಿತಂ ರೂಪನವಾವತಾರಮ್ ।
ಉವಾಚ ಚಾಸ್ಮಾ ಋಷಿರುಗ್ರತೇಜಾಃ
ಕುರುಷ್ವ ಜಾಮಾತಾರಮೇನಮಾಶ್ವಿತಿ ॥ ೧೫ ॥

ಅ: ಜನಕರಾಜ ಶ್ರೀರಾಮನನ್ನು ತನ್ನ ಮಗಳ ಗುಣಗಳಿಗೆ ಅನುರೂಪನಾದ ತನ್ನ ಅಳಿಯ ಎಂಬುದಾಗಿ ತೀರ್ಮಾನಿಸಿದ. ಉಗ್ರತೇಜಸ್ಸಿನ ಆ ಋಷಿಯೂ ಸಹ 'ಇವನನ್ನು ಬೇಗನೆ ನಿನ್ನ ಅಳಿಯನನ್ನಾಗಿ ಮಾಡಿಕೋ' ಎಂದು ಹೇಳಿದ.

ವಿ: ೧) ಜನಕರಾಜ ಶ್ರೀರಾಮನನ್ನು ಕಾಣುತ್ತಲೇ ಅವನನ್ನು ತನ್ನ ಅಳಿಯನನ್ನಾಗಿ ನಿಶ್ಚಯಿಸಿಬಿಟ್ಟ ಎಂಬಲ್ಲಿ ಅವನ ಬಹುದಿನದ ಸಮಸ್ಯೆಗೆ ಅತ್ಯಂತ ಸೂಕ್ತವಾದ ಪರಿಹಾರ ದೊರೆತ ನೆಮ್ಮದಿ ಧ್ವನಿತವಾಗಿದೆ.

೨) ಜನಕರಾಜನ ನಿಶ್ಚಯ, ವಿಶ್ವಾಮಿತ್ರರ ನುಡಿ ಎರಡೂ ಒಂದೇ ಆಗಿದ್ದವು ಎಂಬಲ್ಲಿ ಅವರಿಬ್ಬರ ಮತ್ಕ್ಯೈಕ್ಯವು ಸೂಚಿತವಾಗಿದೆ.

ಶಿವ ಧನುಸ್ಸಿನ ಇತಿಹಾಸ

ಸ ಆಹ ಚೈನಂ ಪರಮಂ ವಚಸ್ತೇ
ಕರೋಮಿ ನಾತ್ರಾಸ್ತಿ ವಿಚಾರಣಾ ಮೇ ।
ಶೃಣುಷ್ವ ಮೇಽಥಾಪಿ ಯಥಾ ಪ್ರತಿಜ್ಞಾ
ಸುತಾಪ್ರದಾನಾಯ ಕೃತಾ ಪುರಸ್ತಾತ್ ॥ ೧೬ ॥

---

೧೫. ರೂಪೇಣ ನವಾವತಾರಂ.... – ಅಸದೃಶರೂಪಮಿತಿ ಯಾವತ್ । –(ಜ.)

ರೂಪೇಣ ನವಾವತಾರಮಪೂರ್ವಾವತಾರಮ್ । –(ವ.)

೧೫. ರೂಪನವಾವತಾರಮಿತ್ಯಸ್ಯ ರೂಪೇಣ ನವಪುರುಷ ಇತಿ ದೃಶ್ಯಮಾನಮಿತ್ಯರ್ಥಃ । –(ಸ.)

೧೬. ಮೇ ಸುತಾಪ್ರದಾನಾಯ ಇತಿ ಸಂಬಂಧಃ । –(ವಾ.)

ಅ: ಜನಕರಾಜ ವಿಶ್ವಾಮಿತ್ರಮುನಿಯನ್ನು ಕುರಿತು ಹೀಗೆಂದ: ''ನಿಮ್ಮ ಮಾತು ಉತ್ತಮವಾದದು; ಅದನ್ನು ನಾನು ನಡೆಸುವೆ; ಈ ಬಗ್ಗೆ ಶಂಕೆ ಬೇಡ. ಆದರೂ ನನ್ನ ಮಗಳನ್ನು ಧಾರೆಯೆರೆಯಲು ನಾನು ಈ ಮೊದಲೇ ಮಾಡಿರುವ ಶಪಥ ಹೀಗಿದೆ; ಅದನ್ನು ಆಲಿಸಿರಿ''.

ಜನಕರಾಜನಿಗೆ ಶಿವಧನುಃ ಪ್ರಾಪ್ತಿ

ತಪೋ ಮಯಾ ಚೀರ್ಣಮುಮಾಪತೇಃ ಪುರಾ
ವರಾಯುಧಾವಾಪ್ತಿಧೃತೇನ ಚೇತಸಾ ।
ಸ ಮೇ ದದೌ ದಿವ್ಯಮಿದಂ ಧನುಸ್ತದಾ
ಕಥಂಚನಾಚಾಲ್ಯಮೃತೇ ಪಿನಾಕಿನಮ್ ॥ ೧೭ ॥

ಅ: ''ಹಿಂದೆ ನಾನು ಶ್ರೇಷ್ಠವಾದ ಆಯುಧವೊಂದನ್ನು ಪಡೆಯಬೇಕೆಂಬ ಮನಸ್ಸಿನಿಂದ ಶಿವನನ್ನು ಕುರಿತು ತಪಸ್ಸನ್ನು ಆಚರಿಸಿದ್ದೆ; ಆಗ ಶಿವನು ಈ ದಿವ್ಯಧನುಸ್ಸನ್ನು ನನಗೆ ನೀಡಿದ. ಇದು ಆ ಶಿವನ ಹೊರತು ಇತರರಿಂದ ಯಾವ ರೀತಿಯಲ್ಲೂ ಅಲುಗಿಸಲೂ ಅಶಕ್ಯವಾದುದು''.

ಶಿವಧನುಸ್ಸಿನ ಹಿರಿಮೆ

ನ ದೇವದೈತ್ಯೋರಗದೇವಗಾಯಕಾ
ಅಲಂ ಧನುಶ್ಚಾಲಯಿತುಂ ಸವಾಸವಾಃ ।
ಕುತೋ ನರಾಸ್ತದ್ವರತೋ ಹಿ ಕಿಂಕರಾಃ
ಸಹಾನಸೈವಾತ್ರ ಕೃಷಂತಿ ಕೃಚ್ಛ್ರತಃ ॥ ೧೮ ॥

---

೧೭. ಇದಂ ಧನುರ್ವರಂ ಬ್ರಹ್ಮನ್ ಜನಕೈರಭಿಪೂಜಿತಮ್ ।
ನೈತತ್ ಸುರಗಣಾಃ ಸರ್ವೇ ಸಾಸುರಾ ನ ಚ ರಾಕ್ಷಸಾಃ ।
ಗಂಧರ್ವಯಕ್ಷಪ್ರವರಾಃ ಸಕಿನ್ನರಮಹೋರಗಾಃ ।
ಕ್ವ ಗತಿರ್ಮಾನುಷಾಣಾಂ ಚ ಧನುಷೋಽಸ್ಯ ಪ್ರಪೂರಣೇ ॥
ಆರೋಪಣೇ ಸಮಾಯೋಗೇ ವೇಪನೇ ತೋಲನೇ ತಥಾ ॥ –ವಾ.ರಾ. (೧/೬೭/೮-೧೦)

೧೮. ದೇವಗಾಯಕಾಃ– ಗಂಧರ್ವಾಃ । –(ವಾ.)

೧೮. ತದ್ವರತಃ ಕಿಂಕರಾಃ ಅನಸಾ ಸಹೈವ ಕೃಷಂತು ಅನಶ್ಚ ಧನುರ್ಭಾರೇಣ ನ ಶೀರ್ಣಂ ಭವತು ಇತಿ ತಸ್ಯ ಶಿವಸ್ಯ ವರತಃ । ಅನೇನ ತ್ವಯಾ ಕಥಮಾನೀತಾ ಇತಿ ಶಂಕಾ ಪರಿಹೃತಾ । ವರಸ್ಯ ಅಸಾಧ್ಯಂ ಕಿಮಪಿ ನಾಸ್ತೀತಿ ಪ್ರಸಿದ್ಧಿಂ 'ಹಿ' ಶಬ್ದೇನ ಆಹ । –(ವಾ.)

ಅ: ''ಇಂದ್ರಸಮೇತರಾದ ದೇವತೆಗಳು, ದೈತ್ಯರು, ಸರ್ಪಗಳು, ಗಂಧರ್ವರು ಈ ಧನುಸ್ಸನ್ನು ಅಲುಗಿಸಲೂ ಸಮರ್ಥರಲ್ಲ; ಇನ್ನು ನರರ ಪಾಡೇನು! ಶಿವನ ವರದಿಂದಾಗಿ ನನ್ನ ಕಿಂಕರರೆಲ್ಲ ಒಟ್ಟಾಗಿ ಗಾಡಿಯ ಸಮೇತ ಇದನ್ನು ಬಹುಶ್ರಮದಿಂದ ಎಳೆಯುತ್ತಿರುವರು''.

ವಿ: ೧) ಇಂದ್ರಾದಿದೇವತೆಗಳಿಗೂ ಆ ಶಿವಧನುಸ್ಸನ್ನು ಅಲುಗಿಸುವ ಸಾಮರ್ಥ್ಯ ಇಲ್ಲ; ಜನಕರಾಜನ ಸಾವಿರಾರು ಕಿಂಕರರು ಗಾಡಿಯಲ್ಲಿದ್ದ ಅದನ್ನು ಎಳೆದು ತರುವುದು ಮಾತ್ರ ಸಾಧ್ಯವಾಗಲಿ ಎಂಬ ಶಿವನ ವರದಿಂದಾಗಿ ಎಳೆದು ತರುವ ಕಾರ್ಯವನ್ನು ಮಾತ್ರ ಅವರು ಶ್ರಮದಿಂದ ಮಾಡುತ್ತಿದ್ದರು ಎಂದು ಭಾವ.

ಶಿವ ಧನುಸ್ಸು ಕಟ್ಟಿದವರಿಗೆ ಸೀತೆ

ಅಧಾರ್ಯಮೇತದ್ಧನುರಾಪ್ಯ ಶಂಕರಾ-
ದಹಂ ನೃಣಾಂ ವೀರ್ಯಪರೀಕ್ಷಣೇ ಧೃತಃ ।
ಸುತಾರ್ಥಮೇತಾಂ ಚಕರ ಪ್ರತಿಜ್ಞಾಂ
ದದಾಮಿ ಕನ್ಯಾಂ ಯ ಇದಂ ಹಿ ಪೂರಯೇತ್ ॥ ೧೯ ॥

ಅ: ''ಇತರರಿಗೆ ನೀಗದ ಈ ಧನುಸ್ಸನ್ನು ಶಿವನಿಂದ ಪಡೆದು ನಾನು ಜನರ ಪರಾಕ್ರಮವನ್ನು ಪರೀಕ್ಷಿಸಲು ತೊಡಗಿದೆ; ನನ್ನ ಮಗಳಿಗಾಗಿ ಈ ಪ್ರತಿಜ್ಞೆ ಮಾಡಿದೆ; ''ಇದನ್ನು ಯಾವನು ಹೆದೆಯೇರಿಸುವನೋ ಅವನಿಗೇ ಕನ್ಯೆಯನ್ನು ಧಾರೆ ಎರೆಯುವೆ''.

ವಿ: ''ಮಗಳನ್ನು ಧಾರೆಯೆರೆಯಲು ನಾನೊಂದು ಪ್ರತಿಜ್ಞೆ ಮಾಡಿರುವೆ; ಅದನ್ನು ಕೇಳಿ'' ಎಂದು ಪ್ರಾರಂಭಿಸಿದ್ದ ಜನಕರಾಜನು ಈ ಶ್ಲೋಕದಲ್ಲಿ ಆ ಪ್ರತಿಜ್ಞೆ ಏನು ಎಂಬುದನ್ನು ತಿಳಿಸಿರುವನು.

---

೧೯. ನೃಣಾಂ ವೀರ್ಯಪರೀಕ್ಷಣೇ ಧೃತಃ । ನ ತು ರಾಮಸ್ಯ ವೀರ್ಯಪರೀಕ್ಷಣೇ । 'ಧೃ' ಧಾರಣೇ ಇತಿ ಧಾತೋರವಧಾರಣವಾನಹಮಿತಿ ಸಂಬಂಧಃ । ಆಪ್ತ ಇತಿವತ್ ಕರ್ತರಿ ಕ್ತಪ್ರತ್ಯಯಃ । -(ವಾ.)

೧೯. 'ಧೃಞ ಅವಸ್ಥಾನೇ' ಇತಿ ಧಾತುಃ । ನ ತು ದೇವೇನ ಸ್ಥಾಪಿತ ಇತ್ಯರ್ಥಃ । ಲ್ಯುಪ್ ಪ್ರತ್ಯಯಾನುಪಪತ್ತೇಃ । – (ಜ.)

೧೯. ಚಕರೇತಿ ಲಿಟ್ಯುತ್ತಮಪುರುಷೈಕವಚನಮ್ । ಣಲುತ್ತಮೋ ವಾ ಇತಿ ಣತ್ವಾ ಭಾವಪಕ್ಷೇ ವೃದ್ಧ್ಯಭಾವಃ । – (ವ. ಮತ್ತು ಜ.)

೧೯. ಹಿಶಬ್ದೇನ ಸ್ವಕೃತಪ್ರತಿಜ್ಞಾಯಾಃ ಅಘೋಷಣಮುಖೇನ ಪ್ರಸಿದ್ಧಿಂ ಸೂಚಯತಿ । –(ವಾ.)

ಶಿವ ಧನುಸ್ಸನ್ನು ಎತ್ತಲಾಗದ ದೈತ್ಯದಾನವಾದಿಗಳು

ಇತೀರಿತಾಂ ಮೇ ಗಿರಮಭ್ಯವೇತ್ಯ
ದಿತೇಃ ಸುತಾ ದಾನವಯಕ್ಷರಾಕ್ಷಸಾಃ ।
ಸಮೇತ್ಯ ಭೂಪಾಶ್ಚ ಸಮೀಪಮಾಶು
ಪ್ರಗೃಹ್ಯ ತಚ್ಚಾಲಯಿತುಂ ನ ಶೇಕುಃ ॥ ೨೦ ॥

ಅ: ''ಈ ನನ್ನ ಮಾತನ್ನು ಕೇಳಿ ತಿಳಿದು, ದೈತ್ಯರು, ದಾನವರು, ಯಕ್ಷರು, ರಾಕ್ಷಸರು ಮತ್ತು ರಾಜರು ತ್ವರೆಯಿಂದ ಇದರ ಬಳಿಗೆ ಬಂದರು; ಆದರೆ ಇದನ್ನು ಹಿಡಿದು ಅಲುಗಿಸಲೂ ಸಹ ಅವರು ಶಕ್ತರಾಗಲಿಲ್ಲ''.

ವಿ: ಇದನ್ನು ಅಲುಗಿಸಲೂ ಶಕ್ತರಾಗಲಿಲ್ಲ ಎಂದ ಮೇಲೆ ಅದನ್ನು ಹೆದೆಯೇರಿಸುವ ಪ್ರಶ್ನೆಯೇ ಉದ್ಭವಿಸದು ಎಂದು ಭಾವ.

ರಾವಣಾದಿಗಳ ಪರಾಭವ

ಸಂಸ್ವಿನ್ನಗಾತ್ರಾಃ ಪರಿವೃತ್ತನೇತ್ರಾ
ದಶಾನನಾದ್ಯಾಃ ಪತಿತಾ ವಿಮೂರ್ಛಿತಾಃ ।
ತಥಾऽಪಿ ಮಾಂ ಧರ್ಷಯಿತುಂ ನ ಶೇಕುಃ
ಸುತಾಕೃತೇ ತೇ ವಚನಾತ್ ಸ್ವಯಂಭುವಃ ॥ ೨೧ ॥

ಅ: ''ದಶಮುಖನಾದ ರಾವಣನೇ ಮೊದಲಾದವರು ಶರೀರ ಬೆವೆತವರಾದರು; ಕಣ್ಣು ತಿರುಗಿದವರಾದರು; ಮತ್ತು ಕೆಳಕ್ಕೆ ಬಿದ್ದು ಗಾಢಮೂರ್ಛೆಗೂ ಒಳಗಾದರು; ಆದರೂ ಬ್ರಹ್ಮದೇವರು ಮಾತಿನಿಂದಾಗಿ ಅವರಾರೂ ನನ್ನನ್ನು ನಿಗ್ರಹಿಸಲು ಸಮರ್ಥರಾಗಲಿಲ್ಲ''.

ವಿ: ೧) ಧನುಸ್ಸನ್ನು ಎತ್ತ ಬಂದ ರಾವಣಾದಿಗಳ ಶೋಚನೀಯ ಸ್ಥಿತಿ ಮತ್ತು ಬ್ರಹ್ಮವರಾದಿಗಳಿಂದ ಕೂಡಿದ್ದ ಅವರು ಜನಕರಾಜನನ್ನು ಏಕೆ ನಿಗ್ರಹಿಸಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಎರಡೂ ಈ ಶ್ಲೋಕದಲ್ಲಿ ನಿರೂಪಿತವಾಗಿವೆ.

---

೨೦. ಅಭಿತಃ ಆವೇತ್ಯ – ಆಘೋಷಣಾಜ್ಜ್ಞಾತ್ವಾ ಇತ್ಯರ್ಥಃ । –(ವಾ.)

೨೦. ಕುತಃ ಪುನಃ ಪೂರಯಿತುಮಿತ್ಯರ್ಥಃ । –(ವ.)

೨೧. ವರರೂಪಾತ್ - ವಚನಾತ್ । –(ವ);
ವಚನಾತ್ - ವರರೂಪವಾಕ್ಯಾತ್ । –(ಜ.)

೨) 'ರಾವಣ' ಎಂದು ಹೇಳದೆ 'ದಶಾನನ' ಎಂದು ಹೇಳಿದ್ದರಿಂದ ಅವನ ಇಪ್ಪತ್ತು ಕಣ್ಣುಗಳೂ ತಿರುಗಿದವು ಎಂಬ ವಿಶೇಷಾರ್ಥವೂ ಸೂಚಿತ.

ಜನಕರಾಜನಿಗೆ ಬ್ರಹ್ಮನ ವಿಶೇಷವರ

ಪುರಾ ಹಿ ಮೇ೭ದಾತ್ ಪ್ರಭುರಬ್ಜೋ ವರಂ
ಪ್ರಸಾದಿತೋ ಮೇ ತಪಸಾ ಕಥಂಚನ ।
ಬಲಾನ್ನ ತೇ ಕಶ್ಚಿದುಪೈತಿ ಕನ್ಯಕಾಂ
ತದಿಚ್ಛುಭಿಸ್ತೇ ನ ಚ ಧರ್ಷಣೇತಿ ॥ ೨೨ ॥

ಅ: ''ನನ್ನ ತಪಸ್ಸಿನಿಂದ ಪ್ರಸನ್ನನಾದ ಪ್ರಭುವಾದ ಬ್ರಹ್ಮ ನನಗೆ ಹಿಂದೆಯೇ ವರವನ್ನು ನೀಡಿದ್ದ; ''ನಿನ್ನ ಮಗಳನ್ನು ಯಾವನೂ ಯಾವ ರೀತಿಯಲ್ಲೂ ಬಲಾತ್ಕಾರದಿಂದ ಪಡೆಯಲಾರ; ಮತ್ತು ಅವಳನ್ನು ಬಯಸುವ ಯಾವನಿಂದಲೂ ನಿನಗೆ ಘರ್ಷಣೆ ಒದಗದು''.

ವಿ: ಹಿಂದಿನ ಶ್ಲೋಕದಲ್ಲಿ ಸೂಚಿಸಿದ್ದ ಬ್ರಹ್ಮದೇವರ ವರದ ಸ್ವರೂಪವನ್ನು ಇಲ್ಲಿ ವಿವರಿಸಿ–ರುವರು. ಇಂತಹ ವರದ ಬಲದಿಂದಾಗಿ ಜನಕರಾಜನಿಗೆ ಎಂದೂ ರಾವಣಾದಿಗಳಿಂದ ಸೀತಾನಿಮಿತ್ತವಾಗಿ ತೊಂದರೆಯಾಗಿರಲಿಲ್ಲ ಎಂದು ಭಾವ.

ತತಸ್ತು ತೇ ನಷ್ಟಮದಾ ಇತೋ ಗತಾಃ
ಸಮಸ್ತಶೋ ಹ್ಯಸ್ತ ಏವ ಪಾರ್ಥಿವಾಃ ।
ತತೋ ಮಮಾಯಂ ಪರಿಪೂರ್ಯ ಮಾನಸಂ
ವೃಣೋತು ಕನ್ಯಾಮಯಮೇವ ಮೇ೭ರ್ಥಿತಃ ॥ ೨೩ ॥

---

೨೨. ಬಲಾತ್ ಕನ್ಯಾಹರಣೇ೭ಪಿ ಕಾರ್ಯಹಾನಿಃ ಪಿತುರ್ನಿಬಂಧಕರಣೇ೭ಪಿ ಪಿತೃಸ್ನೇಹಾತ್ ಕನ್ಯಾ ಸ್ವಯಮೇವ ಗಮಾನಯನೇ ವತ್ಸ ಇವ ಗಮಿಷ್ಯತೀತಿ ಉಭಯಥಾ೭ಪಿ ಕಾರ್ಯಹಾನಿಃ ಅತೋ ವರದ್ವಯಮಪಿ ಅವಶ್ಯಕಂ ಇತಿ ಭಾವೇನಾಹ– ಬಲಾದಿತಿ । –(ವಾ.)

೨೩. ಮಾನಸಂ– ಮನಃಸಂಬಂಧಿಪ್ರಯೋಜನಂ । –(ವಾ.)

ಮಾನಸಂ– ಸಂಕಲ್ಪಂ । –(ವ.)

೨೩. 'ದದಾಮಿ ಕನ್ಯಾಂ ಯ ಇದಂ ಹಿ ಪೂರಯೇತ್' ಇತಿ ಮನೋ೭ಭೀಷ್ಟಮ್ । –(ಜ.)

ಅ: ''ಅದರಿಂದಾಗಿ ಆ ರಾಜರೆಲ್ಲರೂ ಸೊಕ್ಕಡಗಿದವರಾಗಿ ನಿನ್ನೆಯಷ್ಟೇ ಇಲ್ಲಿಂದ ತೆರಳಿರುವರು; ಆದ್ದರಿಂದ ನನ್ನ ಈ ಮನೋಭಿಲಾಷೆಯನ್ನು ಪೂರೈಸಿ ಈ ರಾಮ ಕನ್ಯೆಯನ್ನು ವರಿಸಲಿ. ಇದೇ ನನ್ನ ಕೋರಿಕೆ''.

ವಿ: ಜನಕರಾಜನ ಮಾತಿನಲ್ಲಿ ಶ್ರೀರಾಮನೇ ತನ್ನ ಅಳಿಯ ಎಂಬ ನಿಶ್ಚಯದೊಂದಿಗೆ ಅವನು ಖಂಡಿತವಾಗಿಯೂ ಆ ಶಿವಧನುಸ್ಸನ್ನು ಹೆದೆಯೇರಿಸಬಲ್ಲ ಸಮರ್ಥ ಎಂಬ ವಿಶ್ವಾಸವೂ ತುಂಬಿದೆ. ಆದ್ದರಿಂದಲೇ ಆತನಿಗೆ ಸೀತಾಸ್ವಯಂವರಕಾರ್ಯ ವರುಣ ಮಾಡಿದ ಲಕ್ಷ್ಮೀಸ್ವಯಂವರ ಹೇಗೋ, ಹಾಗೆ ಭೂಷಣವಾಯಿತು ಎಂಬುದಾಗಿ ಮುಂದೆ ತಿಳಿಸಿರುವರು (೧೭/೬೦, ೬೧).

ಶಿವಧನುಸ್ಸು ಕಟ್ಟಿದ ಶ್ರೀರಾಮ

ತಥೇತಿ ಚೋಕ್ತೋ ಮುನಿನಾ ಸ ಕಿಂಕರೈ-
ರನಂತಭೋಗೋಪಮಮಾಶ್ವಧಾನಯತ್ ।
ಸಮೀಕ್ಷ್ಯ ತದ್ಭಾಮಕರೇಣ ರಾಘವಃ
ಸಲೀಲಮುದ್ಧೃತ್ಯ ಹಸನ್ನಪೂರಯತ್ ॥ ೨೪ ॥

ಅ: ''ಹಾಗೆಯೇ ಆಗಲಿ'' ಎಂಬುದಾಗಿ ವಿಶ್ವಾಮಿತ್ರಮುನಿ ನುಡಿಯಲು, ಜನಕರಾಜನು ಶೇಷದೇವರ ಶರೀರದಂತಿದ್ದ ಆ ಧನುಸ್ಸನ್ನು ತನ್ನ ಕಿಂಕರರ ಮೂಲಕ ಅಲ್ಲಿಗೆ ಕೂಡಲೆ ತರಿಸಿದ. ಶ್ರೀರಾಮನು ಅದನ್ನು ನೋಡಿ ತನ್ನ ಎಡಗೈಯಿಂದ ಲೀಲಾಜಾಲವಾಗಿ ಮೇಲೆತ್ತಿ ನಸುನಗುತ್ತಲೇ ಹೆದೆಯೇರಿಸಿದ.

ವಿ: ೧) ಇತರರಿಗೆ ಅಪಾರಪ್ರಯತ್ನದಿಂದ ಅಲುಗಿಸಲೂ ಆಗದ ಆ ಶಿವಧನುಸ್ಸನ್ನು ಸಹ ನಸುನಗುತ್ತಲೇ ಹೆದೆ ಏರಿಸಿದ ಶ್ರೀರಾಮನ ಸಾಮರ್ಥ್ಯ ಅದೆಷ್ಟು ಅಪಾರ ಎಂಬುದನ್ನು ಗಮನಿಸಬೇಕು.

೨) ಶಿವಾವತಾರನಾದ ಅಶ್ವತ್ಥಾಮನಿಗೆ ಶ್ರೀಕೃಷ್ಣನ ಚಕ್ರವನ್ನು ಅಲುಗಿಸಲೂ ಆಗಲಿಲ್ಲ ಎಂಬ ವಿವರ ಮುಂದೆ ಬಂದಿದೆ (೨೮/೧೫೭).

---

೨೩. ಅಪಾಂ ಪತಿಶ್ಚಮೈಥಿಲಃ ಸ್ವಯಂವರಂ ಕೃತಾವಪಿ ।
ಹರಿಂ ವಿನಿಶ್ಚಯಾದಿಯಂ ವ್ರಜೇದಿತಿ ಸ್ಮ ಚಕ್ರತುಃ ॥
ಸ್ವಯಂವರಃ ಕ್ಷಿತೇರ್ಭುಜಾಂ ಸ್ವಧರ್ಮ ಇತ್ಯತೋ ದ್ವಯೋಃ ।
ನ ದೋಷ ಆಸ ಭೀಷ್ಮಕೋ ನ ಕೇಶವಾರ್ಥಮೈಚ್ಛತ । – (೧೭/೬೦, ೬೧)

ಶಿವಧನುರ್ಭಂಗ

ವಿಕೃಷ್ಯಮಾಣಂ ತದನಂತರಾಧಸಾ
ಪರೇಣ ನಿಃಸೀಮಬಲೇನ ಲೀಲಯಾ ।
ಅಭಜ್ಯತಾಸಹ್ಯಮಮುಷ್ಯ ತದ್ಬಲಂ
ಪ್ರಸೋಢುಮೀಶಂ ಕುತ ಏವ ತದ್ಭವೇತ್ ॥ ೨೫ ॥

ಅ: ಸಂಕಲ್ಪಮಾತ್ರದಿಂದ ಅನಂತಕಾರ್ಯಗಳನ್ನು ಸಾಧಿಸುವ, ಎಣೆಯಿರದ ಬಲಶಾಲಿಯಾದ ಸರ್ವೋತ್ತಮನಾದ ಆ ಶ್ರೀರಾಮ ಅನಾಯಾಸವಾಗಿ ಎಳೆಯುತ್ತಲೆ ಆ ಧನುಸ್ಸು ಮುರಿಯಿತು; ಯಾರಿಂದಲೂ ಸಹಿಸಲಾಗದ ಅವನ ಬಲವನ್ನು ಸಹಿಸಿಕೊಳ್ಳಲು ಅದು ಎಂತು ಸಮರ್ಥವಾದೀತು?

ಧನುರ್ಭಂಗದ ಲೀಲೆ

ಸ ಮಧ್ಯತಸ್ತತ್ತ್ರಿಭಜ್ಯ ಲೀಲಯಾ
ಯಥೇಕ್ಷುದಂಡಂ ಶತಮನ್ಯುಕುಂಜರಃ ।
ವಿಲೋಕಯನ್ ವಕ್ತ್ರಮೃಷೇರವಸ್ಥಿತಃ
ಸಲಕ್ಷ್ಮಣಃ ಪೂರ್ಣತನುರ್ಯಥಾ ಶಶೀ ॥ ೨೬ ॥

ಅ: ಇಂದ್ರನ ಆನೆಯಾದ ಐರಾವತವು ಕಬ್ಬಿನಕೋಲನ್ನು ಹೇಗೋ ಹಾಗೆ ಶ್ರೀರಾಮ ಆ ಶಿವಧನುಸ್ಸನ್ನು ಮಧ್ಯಕ್ಕೆ ಸರಿಯಾಗಿ ಮುರಿದುಹಾಕಿ, ಲಕ್ಷ್ಮಣನೊಂದಿಗೆ ವಿಶ್ವಾಮಿತ್ರಮುನಿಯ ಮುಖವನ್ನು ನೋಡುತ್ತಾ ನಿಂತ; ಪೂರ್ಣಬಿಂಬನಾದ ಚಂದ್ರನು ಹೇಗೋ, ಹಾಗೆ.

ವಿ: ಇಲ್ಲಿ ಶ್ರೀರಾಮನನ್ನು ಪೂರ್ಣಚಂದ್ರನಿಗೆ ಹೋಲಿಸುವ ಮೂಲಕ 'ರಾಮಚಂದ್ರ' ಎಂಬ ಪದದ ಸ್ವಾರಸ್ಯವನ್ನು ಸೂಚಿಸಿರುವರು.

---

೨೫. 'ರಾಧ ಸಾಧ ಸಂಸಿದ್ಧೌ' ಇತಿ ವಚನಾತ್ ಅನಂತರಾಧಸಾ ಸಂಕಲ್ಪಮಾತ್ರೇಣ ಅನಂತಕಾರ್ಯಸಿದ್ಧಿಮತಾ ॥ –(ವಾ.)

ಅನಂತರಾಧಸಾ - ಅಪರಿಮಿತಾಭೀಷ್ಟಸಿದ್ಧಿಮತಾ । –(ವ.)

ಅನಂತರಾಧಸಾ - ಅನಂತಾಭೀಷ್ಟಸಿದ್ಧಿಮತಾ । –(ಜ.)

೨೬. 'ಕ್ರತೌ ಕ್ರೋಧೇ ತಥಾ ದೈತ್ಯೇ ಮನ್ಯುಶಬ್ದಃ ಪ್ರವಕ್ಷ್ಯತೇ' ಇತ್ಯನೇಕಾರ್ಥಧ್ವನಿಪದಮಂಜರ್ಯಾಮ್'।–(ಜ.)

ಶ್ರೀರಾಮನನ್ನು ಕಂಡ ಸೀತೆ

ತಮಬ್ಜನೇತ್ರಂ ಪೃಥುತುಂಗವಕ್ಷಸಂ
ಶ್ಯಾಮಾವದಾತಂ ಚಲಕುಂಡಲೋಜ್ಜ್ವಲಮ್ ।
ಶಶಕ್ಷತೋತ್ಥೋಪಮಚಂದನೋಕ್ಷಿತಂ
ದದರ್ಶ ವಿದ್ಯುದ್ವಸನಂ ನೃಪಾತ್ಮಜಾ ॥ ೨೭ ॥

ಅ: ಕಮಲದಂತಹ ಕಣ್ಣುಗಳು, ವಿಶಾಲವೂ ಉನ್ನತವೂ ಆದ ವಕ್ಷಃಸ್ಥಲ, ಇಂದ್ರನೀಲ-ಮಣಿಯಂತಹ ಮೈಕಾಂತಿ, ಅಲುಗಾಡುವ ಕುಂಡಲಗಳ ಶೋಭೆ, ಮೊಲದ ಗಾಯದಿಂದ ಸುರಿಯುವ ರಕ್ತವನ್ನು ಹೋಲುವ ಶ್ರೀಗಂಧದ ಲೇಪನ, ಮಿಂಚಿನಂತೆ ಹೊಳೆಯುವ ವಸ್ತ್ರ ಇವುಗಳಿಂದ ಕೂಡಿದ್ದ ಆ ಶ್ರೀರಾಮನನ್ನು ರಾಜಕುಮಾರಿಯಾದ ಸೀತೆ ಕಂಡಳು.

ವಿ: ೧) ಶ್ರೀರಾಮನು ಸದಾಕಾಲವೂ ಹಾಗೆ ಇರುವ ಪೂರ್ಣಪುರುಷ; ಆದರೆ ಅವನನ್ನು ಹಾಗೆ ಇತರ ಎಲ್ಲರಿಗಿಂತ ಮಿಗಿಲಾಗಿ ಕಾಣುವ ಸಾಮರ್ಥ್ಯ ಮಹಾಲಕ್ಷ್ಮಿಯಾದ ಸೀತಾದೇವಿಗೆ ಮಾತ್ರ ಉಂಟು ಎಂಬ ಧ್ವನಿ ಇಲ್ಲಿದೆ.

೨) ಶ್ರೀರಾಮನನ್ನು ಸದಾ ಕಾಣುವ ಸೀತೆ ಇಲ್ಲಿ ಕಂಡದ್ದು ವಿಶೇಷರೀತಿಯಲ್ಲಿ.

---

೨೭. ಶಶಕ್ಷತೋತ್ಥೋಪಮಚಂದನೋಕ್ಷಿತಂ – ಶಶಕ್ಷತಾದುತ್ಥಂ ಯದ್ರಕ್ತಂ ಸೈವೋಪಮಾ ಯಸ್ಯ ಚಂದನಸ್ಯ ತೇನೋಕ್ಷಿತಮಲಂಕೃತಮಿತ್ಯರ್ಥಃ । 'ಘನಶ್ಯಾಮಃ' ಇತಿವತ್ ಕುಂಕುಮ ಗೋರೋಚನಾದಿ ರಕ್ತದ್ರವ್ಯಸಂಬಂಧಾತ್ ಅತಿರಕ್ತಚಂದನಸ್ಯ ವರ್ಣವಿಶೇಷಂ ದೃಷ್ಟಾಂತಮುಖೇನ ಸ್ಪಷ್ಟಯಿತುಮೇವ ಶಶಕ್ಷತೋತ್ಥೋಪಮೇತ್ಯುಕ್ತಂ । ತಸ್ಯಾಪ್ಯತಿರಕ್ತತ್ವಾತ್ ನ ತು ಗಂಧಾದಿನಾऽಪಿ ಸಾಮ್ಯೇನ । ದೃಷ್ಟಾಂತೇ ಸರ್ವಸಾಮ್ಯಸ್ಯ ಅನಪೇಕ್ಷಿತತ್ವಾತ್ । ಅತೋ ನ ಜುಗುಪ್ಸಾರಸಪ್ರವೇಶಃ । ದಾರ್ಷ್ಟಾಂತಿಕೀಭೂತೇ ಸಭಾಸುರಭೀಕರಣಶೀಲೇ ಸಕಲಜನಮನೋರಂಜನೇ ಭಗವಚ್ಚರ್ಚಿತಚಂದನೇ ಅದ್ಭುತರಸಸ್ಯೈವ ಆವಿರ್ಭಾವೇನ ಜುಗುಪ್ಸಿತರಸವಾರ್ತಾಯಾ ಏವ ದೂರಾಪಾಸ್ತತ್ವಾತ್ । ಅನ್ಯಥಾ ಘನಶ್ಯಾಮ ಇತ್ಯುಕ್ತೇऽಪಿ ಜಾಡ್ಯಾದಿಪ್ರವೇಶೇನ ಜುಗುಪ್ಸಾ ಸ್ಯಾತ್ । ಅತ ಏವ ಆಲಂಕಾರಿಕಾಃ 'ಗಂಧವದ್ರುಧಿರಚಂದನೋಕ್ಷಿತಾ' ಇತಿ ರುಧಿರಸ್ಯೈವ ಚಂದನತ್ವಂ ವರ್ಣಯತ್ ಕಾಲಿದಾಸವಾಕ್ಯಮೇವ ಜುಗುಪ್ಸಾರಸಸ್ಯೋದಾಹರಣಂ ಉದಾಹರಂತಿ। ಮೃಗಯಾಪ್ರಿಯಸ್ಯ ಕ್ಷತ್ರಿಯಸ್ಯ ಶಶಮೃಗಾದಿಕ್ಷತಜಮಪಿ ನ ಜುಗುಪ್ಸಿತಮ್ । ವಿದಾರಣನೃಸಿಂಹಸ್ಯಾಂತ್ರಮಾಲಾವತ್ ಭೂಷಣಮೇವ । ಅತಃ ಶಶಕ್ಷತದೃಷ್ಟಾಂತಕಥನೇऽಪಿ ನಾತ್ರ ದೋಷಃ ಶಂಕನೀಯಃ । ನ ಹಿ ವ್ರತಸ್ಥಸ್ಯ ಜುಗುಪ್ಸಿತಾ ನಾರೀ ಗೃಹಸ್ಥಸ್ಯಾಪಿ ಜುಗುಪ್ಸಿತಾ । ಅತೋ ನ ಕಶ್ಚಿತ್ ಕ್ಷುದ್ರೋಪದ್ರವಃ । ಅನೇನ ನಖಾದಿಶಿಖಾಂತಸಕಲಾವಯವಮನೋಹರಂ ವಸನಚಂದನಕುಂಡಲೋಪಲಕ್ಷಿತ-ಕಟಕಮಕುಟಹಾರನೂಪುರಾದಿಸರ್ವಾಭರಣಾಖ್ಯೋದ್ದೀಪನವಿಭಾವೈಶ್ಚ ಭೂಷಿತಂ ರಾಮಂ ನೃಪಾತ್ಮಜಾ ದದರ್ಶೇತಿ ಸೀತಾಯಾಃ ಸಾಮಸ್ತ್ಯೇನ ದರ್ಶನಶಕ್ತಿಃ ಚಕ್ಷುಃಪ್ರೀತ್ಯಾಖ್ಯಾ ಪ್ರಾಥಮಿಕಶೃಂಗಾರಾವಸ್ಥಾ ಚ ಏಕೇನೈವ ಶ್ಲೋಕೇನ ವರ್ಣಿತಾ ವೇದಿತವ್ಯಾ । –(ವಾ.)

೩) ಇಲ್ಲಿ 'ಶಶಕ್ಷತೋತ್ಥೋಪಮಚಂದನೋಕ್ಷಿತಂ' ಪದವು 'ಅದ್ಭುತರಸ'ದ ಅಭಿವ್ಯಕ್ತಿಯೇ ಹೊರತು 'ಜುಗುಪ್ಸಾರಸ'ಕ್ಕಲ್ಲ. 'ಘನಶ್ಯಾಮ' ಎಂಬಲ್ಲಿ ಹೇಗೋ ಹಾಗೆ ಎಂಬುದಾಗಿ ಶ್ರೀವಾದಿರಾಜಸ್ವಾಮಿಗಳು ಮನೋಹರವಾಗಿ ವಿವರಿಸಿರುವರು.

ಸೀತೆಯಿಂದ ರಾಮನಿಗೆ ಮಾಲಾರ್ಪಣೆ

ಅಥೋ ಕರಾಭ್ಯಾಂ ಪ್ರತಿಗೃಹ್ಯ ಮಾಲಾ-
ಮಮ್ಲಾನಪದ್ಮಾಂ ಜಲಜಾಯತಾಕ್ಷೀ ।
ಉಪೇತ್ಯ ಮಂದಂ ಲಲಿತೈಃ ಪದೈಸ್ತಾಂ
ತದಂಸ ಆಸಜ್ಯ ಚ ಪಾರ್ಶ್ವತೋಽಭವತ್ ॥ ೨೮ ॥

ಅ: ಅರಳಿದ ತಾವರೆಯಂತೆ ವಿಶಾಲವಾದ ಕಣ್ಣುಗಳ ಆ ಸೀತಾದೇವಿಯು ಅರಳಿದ ಕಮಲಗಳಿಂದ ಕೂಡಿದ ಮಾಲೆಯನ್ನು ಎರಡೂ ಕೈಗಳಿಂದ ಹಿಡಿದುಕೊಂಡು ಮನೋಹರವಾದ ಹೆಜ್ಜೆಗಳಿಂದ ಮೆಲ್ಲನೆ ಶ್ರೀರಾಮನ ಬಳಿಸಾರಿ, ಅದನ್ನು ಅವನ ಹೆಗಲಿಗೆ ತೊಡಿಸಿ ಅವನ ಪಕ್ಕದಲ್ಲಿ ನಿಂತಳು.

ವಿ: ಸೀತೆ ಹಾಗೆ ನಿಂತದ್ದು ಶ್ರೀರಾಮನ ಎಡಪಕ್ಕದಲ್ಲಿ.

ಸೀತಾರಾಮರ ದರ್ಶನದಿಂದ ಜಗತ್ತಿಗಾದ ಆನಂದ

ತತಃ ಪ್ರಮೋದೋ ನಿತರಾಂ ಜನಾನಾಂ
ವಿದೇಹಪುರ್ಯಾಮಭವತ್ ಸಮಂತಾತ್ ।
ರಾಮಂ ಸಮಾಲೋಕ್ಯ ನರೇಂದ್ರಪುತ್ರ್ಯಾ
ಸಮೇತಮಾನಂದನಿಧಿಂ ಪರೇಶಮ್ ॥ ೨೯ ॥

ಅ: ಅನಂತರ ರಾಜಪುತ್ರಿಯಾದ ಸೀತೆಯೊಂದಿಗೆ ಸಮೇತನಾದ ಸರ್ವೋತ್ತಮನೂ, ಬ್ರಹ್ಮಾದಿಗಳಿಗೆ ಪ್ರಭುವೂ, ಆನಂದಸ್ವರೂಪನೂ ಆದ ಶ್ರೀರಾಮನನ್ನು ಕಂಡು ಆ ವಿದೇಹ-ಪಟ್ಟಣದಲ್ಲಿ ಸಕಲರಿಗೂ ಸರ್ವವಿಧದ ಪ್ರಮೋದವು ಬಹಳವಾಗಿ ಉಂಟಾಯಿತು.

---

೨೮. ಅಥುನಾ ಮಾಲಾಸಮರ್ಪಣವ್ಯಾಜೇನ ಶೃಂಗಾರರಸಸ್ಯ ದ್ವಿತೀಯಾಲಂಬನಭೂತಾಂ ದೇವೀಂ ಚ ವರ್ಣಯತಿ । ಅಥೋ ಕರಾಭ್ಯಾಮಿತಿ । ಪಾರ್ಶ್ವತಃ ವಾಮಪಾರ್ಶ್ವೇ ಅಭವಚ್ಚೇತಿ ಚ ಶಬ್ದಸಂಬಂಧಃ । –(ವಾ.)

ವಿ: ಶ್ರೀರಾಮಸೀತೆಯರು ಸಾಕ್ಷಾತ್ ಲಕ್ಷ್ಮೀನಾರಾಯಣರು; ಅವರ ದರ್ಶನ ಮೋಕ್ಷಸಾಧನ; ಮೋಕ್ಷ ಆನಂದದ ನೆಲೆ; ಆದ್ದರಿಂದ ಅವರನ್ನು ಕಂಡ ವಿದೇಹಪುರವಾಸಿಗಳಿಗೆ ಎಣೆಯಿರದ ಆನಂದ ಉಂಟಾಯಿತು ಎಂದು ಭಾವ.

ದಶರಥನಿಗೆ ಆಹ್ವಾನ

ಲಕ್ಷ್ಮ್ಯಾ ಸಮೇತೇ ಪ್ರಕಟಂ ರಮೇಶೇ
ಸಂಪ್ರೇಷಯಾಮಾಸ ತದಾऽऽಶು ಪಿತ್ರೇ ।
ವಿದೇಹರಾಜೋ ದಶದಿಗ್ರಥಾಯ
ಸ ತನ್ನಿಶಮ್ಯಾಶು ತುತೋಷ ಭೂಮಿಪಃ ॥ ೩೦ ॥

ಅ: ರಮೇಶನಾದ ಶ್ರೀಹರಿ ಹೀಗೆ ಸರ್ವಲೋಕಗಳಿಗೂ ಕಾಣುವಂತೆ ಮಹಾಲಕ್ಷ್ಮಿಯಾದ ಸೀತೆಯೊಂದಿಗೆ ಒಡಗೂಡಿದ. ವಿದೇಹರಾಜನಾದ ಜನಕ ಈ ವಿಷಯವನ್ನು ರಾಮನ ತಂದೆಯಾದ ದಶರಥನ ಬಳಿಗೆ ಕೂಡಲೆ ದೂತರನ್ನು ಕಳುಹಿಸಿಕೊಟ್ಟ. ದಶರಥರಾಜನು ಅದನ್ನು ಕೇಳುತ್ತಲೇ ಬಹಳವಾಗಿ ಆನಂದಿಸಿದ.

ವಿ: ೧) ಲಕ್ಷ್ಮೀನಾರಾಯಣರು ಸದಾ ಅವಿಯೋಗಿಗಳು; ಶಾಸ್ತ್ರಬಲ್ಲ ಜನಕ್ಕೆಲ್ಲ ಇದು ಸುವಿದಿತ; ರಾಮಸೀತೆಯರು ಹೀಗೆ ಒಟ್ಟಾದದ್ದು ಸಾಮಾನ್ಯರಿಗೂ ತಿಳಿಯುವಂತಹ ಸ್ಪಷ್ಟವಿಚಾರ–ವಾಯಿತು; ಎಂದರೆ ಅವರೀರ್ವರೂ ಸದಾ ಜೊತೆಯಾಗಿಯೇ ಇರುವವರಾದರೂ, ಈಗ

---

೩೦. ಸರ್ವಲೋಕಾನಾಂ ಪ್ರಕಟಂ। –(ವಾ.)
ಮನುಷ್ಯಪ್ರತ್ಯಕ್ಷಂ ಯಥಾ ಸ್ಯಾತ್ ತಥಾ। –(ಜ.)
ಅಜ್ಞದೃಷ್ಟ್ಯಾ ಪ್ರತ್ಯಕ್ಷಂ ಯಥಾ ಭವತಿ ತಥಾ। –(ವ.)

೩೦. ಲಕ್ಷ್ಮೀರಮೇಶಯೋಃ ಸಮಾಗಮಸ್ಯ ಸದಾತನತ್ವಾತ್ ಕಥಮಿದಾನೀಮೇವ ಸಮಾಗಮ ಇತ್ಯತ ಉಕ್ತಂ ಪ್ರಕಟಮಿತಿ। –(ವಾ.)

೩೦ ತದಾಹ್ವಾನಾರ್ಥಂ ಕಿಂಕರಾನ್ ಇತಿ ಶೇಷಃ। –(ವ)

೩೦. ಆಶು– ಅತಿಪ್ರಿಯಕಾರ್ಯತ್ವಾತ್ ನಿಶಮನಸಮಯೇ ಏವ ಭೂಮಿಪಸ್ತುತೋಷ ಇತಿ ಯೋಜನಾ।–(ವಾ.)

೩೦. 'ಶ್ರುತ್ವಾ ದೂತಮುಖಾತ್ ಸರ್ವಂ ವಿದಿತ್ವಾ ಚ ಸ ಪಾರ್ಥಿವಃ' ಇತಿ ನಾರಸಿಂಹೇ। –(ಜ.)

೩೦. ದಶರಥ ಇತ್ಯತ್ರ ದಶ ರಥಾಃ ಅಸ್ಯೇತಿ ಭ್ರಮನಿವಾರಣಾಯ ದಶದಿಕ್ಷು ರಥೋ ಯಸ್ಯೇತ್ಯಾಹ – ದಶೇತಿ। ಆಶು ತ್ರಿರಾತ್ರೇಣ। 'ಪ್ರಾಪ್ತದೂತಾಸ್ತ್ರಿರಾತ್ರೇಣ ರಾಘವೇಂದ್ರನಿವೇಶನಮ್' ಇತಿ ಸಂಗ್ರಹೇ। –(ಶ್ರೀ.)

ಸಾಮಾನ್ಯರ ದೃಷ್ಟಿಯಲ್ಲೂ ಜೊತೆಯಾಗಿರುವವರಾಗಿ ಕಾಣಿಸಿಕೊಂಡರು; ಸೀತಾಕಲ್ಯಾಣವೆಂದರೆ ಇದೇ ಅರ್ಥ; ಹಿಂದೆ ಪರಸ್ಪರ ದೂರವಿದ್ದ ಶ್ರೀರಾಮಸೀತೆಯರು ಈಗ ಒಂದಾದರು ಎಂದು ತಪ್ಪಾಗಿ ತಿಳಿಯಬಾರದು ಎಂದು ಭಾವ. ಹಾಗೆ ತಪ್ಪು ತಿಳಿದಲ್ಲಿ ಸುರಾಣಕರಿಗೆ (೯/೨೭–೩೩) ಆದಂತಹ ದುರ್ಗತಿಯೇ ಆಗುವುದು ಎಂಬ ಪ್ರಮೇಯವಿಶೇಷವನ್ನು ಗಮನಿಸಬೇಕು.

೨) ವಿಶ್ವಾಮಿತ್ರಮುನಿಯು ಶ್ರೀರಾಮನನ್ನು ಕರೆದೊಯ್ಯಲು ಬಂದಾಗ ದಶರಥರಾಜನು ರಾಮನಿಗೆ ವಿವಾಹ ಮಾಡುವ ಯೋಚನೆಯಲ್ಲಿದ್ದ; ಈಗ ಅವನಿಗೆ ವಿವಾಹವೇ ನಿಶ್ಚಿತ–ವಾಗಿರುವುದನ್ನು ಕೇಳಿ ಅವನಿಗೆ ಸಹಜವಾಗಿಯೇ ಆನಂದ ಉಕ್ಕಿ ಹರಿಯಿತು ಎಂಬ ಸೂಚನೆಯೂ ಇಲ್ಲಿದೆ.

ಮಿಥಿಲೆಗೆ ಆಗಮಿಸಿದ ದಶರಥ

ಅಥಾತ್ಮಜಾಭ್ಯಾಂ ಸಹಿತಃ ಸಭಾರ್ಯೋ
ಯಯೌ ಗಜಸ್ಯಂದನಪತ್ತಿಯುಕ್ತಯಾ ।
ಸ್ವಸೇನಯಾಽಗ್ರೇ ಪ್ರಣಿಧಾಯ ಧಾತೃಜಂ
ವಸಿಷ್ಠಮಾಶ್ವೇವ ಸ ಯತ್ರ ಮೈಥಿಲಃ ॥ ೩೧ ॥

ಅ: ಅನಂತರ ತನ್ನ ಉಳಿದ ಇಬ್ಬರು ಪುತ್ರರೊಂದಿಗೆ ಕೂಡಿಕೊಂಡು, ಸಪತ್ನೀಕನಾಗಿ, ಆನೆ, ರಥ, ಪದಾತಿಗಳಿಂದ ಕೂಡಿದ ಸೇನೆಯೊಂದಿಗೆ ದಶರಥರಾಜ ಬ್ರಹ್ಮಪುತ್ರರಾದ ವಸಿಷ್ಠರನ್ನು ಮುಂದಿಟ್ಟುಕೊಂಡು ತ್ವರೆಯಿಂದ ಜನಕರಾಜನೆಡೆಗೆ ಧಾವಿಸಿದ.

ಎ: 'ಅಗ್ರೇ ಪ್ರಣಿಧಾಯ' ಎಂಬ ಮಾತು ವಸಿಷ್ಠರು ಅವನ ಪುರೋಹಿತರು ಎಂಬುದನ್ನು ಅಪೂರ್ವರೀತಿಯಲ್ಲಿ ತಿಳಿಸುವ ಪದ. ಇಬ್ಬರು ಪುತ್ರರು ಎಂದರೆ ಭರತಶತ್ರುಘ್ನರು ಎಂದರ್ಥ.

ಸೀತಾರಾಮರ ಕಲ್ಯಾಣ

ಸ ಮೈಥಿಲೇನಾತಿತರಾಂ ಸಮರ್ಚಿತೋ
ವಿವಾಹಯಾಮಾಸ ಸುತಂ ಮುದಂಭರಃ ।
ಪುರೋಹಿತೋ ಗಾಧಿಸುತಾನುಮೋದಿತೋ
ಜುಹಾವ ವಹ್ನಿಂ ವಿಧಿನಾ ವಸಿಷ್ಠಃ ॥ ೩೨ ॥

ಅ: ಮಿಥಿಲೆಯ ಒಡೆಯನಾದ ಜನಕನಿಂದ ಬಹಳವಾಗಿ ಪೂಜಿತನಾದ ದಶರಥರಾಜ ಆನಂದಭರಿತನಾಗಿ ಶ್ರೀರಾಮನ ವಿವಾಹ ಮಾಡಿದ. ಅವನ ಪುರೋಹಿತರಾದ ವಸಿಷ್ಠರು ಗಾಧಿರಾಜನ ಮಗನಾದ ವಿಶ್ವಾಮಿತ್ರರಿಂದ ಅನುಮೋದಿತರಾಗಿ ವಿಧ್ಯುಕ್ತವಾಗಿ ಹೋಮ ಮಾಡಿದರು.

ವಿ: ಇಲ್ಲಿ ನಡೆದ ಹೋಮವೆಂದರೆ 'ಲಾಜಾದಿಹೋಮ' ಎಂದರ್ಥ.

ವಿವಾಹ ನೋಡಿ ನಲಿದ ದೇವವೃಂದ

ತದಾ ವಿಮಾನಾವಲಿಭಿರ್ನಭಸ್ತಲಂ
ದಿದೃಕ್ಷತಾಂ ಸಂಕುಲಮಾಸ ನಾಕಿನಾಮ್ ।
ಸುರಾನಕಾ ದುಂದುಭಯೋ ವಿನೇದಿರೇ
ಜಗುಶ್ಚ ಗಂಧರ್ವವರಾಃ ಸಹಸ್ರಶಃ ॥ ೩೩ ॥

ಅ: ಆಗ ಆ ಉತ್ಸವವನ್ನು ನೋಡಲೆಂದು ಧಾವಿಸಿಬಂದ ದೇವತೆಗಳ ವಿಮಾನಗಳ ಸಾಲುಗಳಿಂದ ಗಗನಪ್ರದೇಶವೆಲ್ಲ ತುಂಬಿಹೋಯಿತು; ದೇವದುಂದುಭಿಗಳು, ಭೇರಿಗಳು ಮೊಳಗಿದವು; ಗಂಧರ್ವಶ್ರೇಷ್ಠರು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಹಾಡಿದರು.

ವಿ: ೧) ಇದರ ಪೂರ್ವಾರ್ಧ ಸಪ್ತಮಸ್ಕಂಧಭಾಗವತದ ಶ್ಲೋಕ(ಭಾಗವತ ೭/೮/೩೬); ನರಸಿಂಹರೂಪಿಯಾದ ಶ್ರೀಹರಿಯು ಹಿರಣ್ಯಕಶಿಪುವನ್ನು ಸಂಹರಿಸುವುದನ್ನು ಕಾಣಲು ಧಾವಿಸಿದ ದೇವಸಮೂಹದ ಸಂಭ್ರಮದ ವರ್ಣನೆ ಅಲ್ಲಿದೆ.

೨) ಭಾಗವತದಲ್ಲಿನ ಇದರ ಉತ್ತರಾರ್ಧ ಹೀಗಿದೆ :

ಸುರಾನಕಾ ದುಂದುಭಯೋಽತ್ರ ಜಘ್ನಿರೇ।
ಗಂಧರ್ವಮುಖ್ಯಾ ನನೃತುರ್ಜಗುಃ ಸ್ತ್ರಿಯಃ ॥ – ಭಾಗವತ (೭/೮/೩೬)

---

೩೨. ವಿಧಿನಾ - ವಿವಾಹಹೋಮವಿಧಿನಾ। – (ಜ.)

ಜುಹಾವ - ಲಾಜಾದಿಹೋಮಂ ಕಾರಯಾಮಾಸ । ಅಥವಾ ವಹ್ನಿಶಬ್ದೇನ ದೇವತಾ ವಿವಕ್ಷ್ಯತೇ । ವಹ್ನಿಂ ಅಗ್ನ್ಯಾಖ್ಯಂ ದೇವಂ ಜುಹಾವ ಪ್ರೀಣಯಾಮಾಸ ಇತ್ಯರ್ಥಃ। – (ಜ.)

೩೩. ಪುಷ್ಪವೃಷ್ಟಿರ್ಮಹತ್ಯಾಸೀತ್ ಅಂತರಿಕ್ಷಾತ್ ಸುಭಾಸ್ವರಾ।
ದಿವ್ಯದುಂದುಭಿನಿರ್ಘೋಷೈರ್ಗೀತವಾದಿತ್ರನಿಸ್ವನೈಃ।
ನನೃತುಶ್ಚಾಪ್ಸರಃಸಂಘಾ ಗಂಧರ್ವಾಶ್ಚ ಜಗುಃ ಕಲಮ್ ।
ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ ॥ – ವಾ.ರಾ.(೧/೭೩/೩೫)

೩) ಭಗವಂತನ ಸಕಲಕ್ರಿಯೆಗಳೂ ಅವನಿಂದ ಸವಿಶೇಷಾಭಿನ್ನವಾಗಿದ್ದು, ಸಕಲಸುರ–ಪೂಜಿತವೆಂಬುದನ್ನು ಸೂಚಿಸಲೋ ಎಂಬಂತೆ ಶ್ರೀಮದಾಚಾರ್ಯರು ಅದನ್ನು ಈ ಪ್ರಸಂಗದಲ್ಲಿ ಹೀಗೆ ಸಂಗ್ರಹಿಸಿರುವರು ಎಂದು ತಿಳಿಯಬಹುದು.

ಸ್ವಯಂವರಕ್ಕೆ ಬಾರದೆ ಕಲ್ಯಾಣಕ್ಕೆ ಬಂದ ದೇವತೆಗಳು

ವಿಜಾನಮಾನಾ ಜಗತಾಂ ಹಿ ಮಾತರಂ
ಪುರಾऽರ್ಥಿತುಂ ನಾಯಯುರತ್ರ ದೇವತಾಃ ।
ತದಾ ತು ರಾಮಂ ರಮಯಾ ಯುತಂ ಪ್ರಭುಂ
ದಿದೃಕ್ಷವಶ್ಚಕ್ರುರಲಂ ನಭಸ್ಥಲಮ್ ॥ ೩೪ ॥

ಅ: ಸೀತೆಯನ್ನು ಜಗತ್ತಿನ ತಾಯಿಯಾದ ಮಹಾಲಕ್ಷ್ಮಿಯೆಂಬುದಾಗಿ ಚೆನ್ನಾಗಿ ತಿಳಿದಿದ್ದ ದೇವತೆಗಳು ಈ ಮೊದಲು ಅವಳನ್ನು ಬಯಸಿ ಸ್ವಯಂವರಕ್ಕೆ ಬಂದಿರಲಿಲ್ಲ; ಆ ವಿವಾಹಸಮಯದಲ್ಲಾದರೋ, ರಮೆಯೊಂದಿಗೆ ಕೂಡಿದ ಸ್ವಾಮಿಯಾದ ಶ್ರೀರಾಮನನ್ನು ಕಾಣುವ ಬಯಕೆಯಿಂದ ಗಗನಪ್ರಾಂತವನ್ನು ಅಲಂಕರಿಸಿದರು.

ಲಕ್ಷ್ಮೀಕಲ್ಯಾಣದಂತಿದ್ದ ಸೀತಾಕಲ್ಯಾಣ

ಯಥಾ ಪುರಾ ಸಾಗರಜಾಸ್ವಯಂಬರೇ
ಸುಮಾನಸಾನಾಮಭವತ್ ಸಮಾಗಮಃ ।
ತಥಾ ಹ್ಯಭೂತ್ ಸರ್ವದಿವೌಕಸಾಂ ತದಾ
ತಥಾ ಮುನೀನಾಂ ಸಹಭೂಭೃತಾಂ ಭುವಿ ॥ ೩೫ ॥

---

೩೪. ತಥಾ – ವಿವಾಹಸಮಯೇ ; ತು – ವಿಶೇಷೇಣ ಸರ್ವೇಷಾಂ ದೃಷ್ಟಿಗೋಚರತಯಾ ರಮಯಾಯುತಂ ಪ್ರಭುಂ ರಾಮಂ ದಿದೃಕ್ಷವ ಇತಿ ಪದಸಂಬಂಧಃ । ತು ಶಬ್ದಾಭಾವೇ ರಮಯಾ ಯುತತ್ವಸ್ಯ ಸದಾತನತ್ವಾತ್ 'ತದಾ' ಇತ್ಯನುಪಪನ್ನಂ ಸ್ಯಾತ್ । – (ವಾ.)

೩೪. ಅಲಂ ಪೂರ್ಣಂ ಚಕ್ರುಃ । ಅಲಂಚಕ್ರುಃ ಅಲಂಕೃತಂ ಚಕ್ರುರಿತಿ ವಾ । – (ಜ.)

೩೫. ಯಥೇತಿ ಪ್ರಾಚೀನಲಕ್ಷ್ಮೀಸ್ವಯಂವರಂ ದೃಷ್ಟಾಂತೀಕುರ್ವನ್ ತತ್ರಾಪಿ ಸ್ವಯಂವರದರ್ಶನಾರ್ಥಮೇವ ಉಭಯತಃ ಪಂಕ್ತೀಕೃತ್ಯ ಸ್ಥಿತಾಃ ನ ತು ಲಕ್ಷ್ಮ್ಯಪೇಕ್ಷಯಾ ಇತಿ ಸೂಚಯತಿ । 'ಹಿತ್ವೇತರಾನ್ ಪ್ರಾರ್ಥಯತಃ' ಇತ್ಯಸ್ಮಾಪಿ ಸ್ವಹೃದಿ ಕೃಪಾಕಟಾಕ್ಷಂ ಪ್ರಾರ್ಥಯತಃ ಇತ್ಯೇವಾರ್ಥಂ ಪ್ರಾಂಚಃ ಸಂಚೋದಯಂತಿ । ವ್ಯಾಸೋऽಪಿ ಆಪಾತತಃ ಪ್ರಾರ್ಥನಂ ಪರಮೋಹಾಯೈವೇತಿ ಸೂಚಯಿತುಂ 'ಪ್ರಾರ್ಥಯತಃ' ಇತಿ ಪರಸ್ಮೈಪದಾರ್ಥಕಶತ್ರಂತಪದಂ ಪ್ರಯುಕ್ತವಾನ್ । – (ವಾ.)

ಅ: ಹಿಂದೆ ಲಕ್ಷ್ಮೀಸ್ವಯಂವರದ ಸಮಯದಲ್ಲಿ ಹೇಗೆ ಸಕಲದೇವತೆಗಳ ಸಮಾಗಮವು ಆಗಿದ್ದಿತೋ, ಹಾಗೆಯೇ ಭೂಲೋಕದಲ್ಲಿ ಆಗ ಸಕಲದೇವತೆಗಳ, ಮುನಿಗಳ ಮತ್ತು ರಾಜರ ಸಮಾಗಮ ಉಂಟಾಯಿತು.

ವಿ: ೧) ಲಕ್ಷ್ಮೀಸ್ವಯಂವರದ ದೃಷ್ಟಾಂತವನ್ನು ಕೊಡುವ ಮೂಲಕ, ಶ್ರೀಮದಾಚಾರ್ಯರು ಆ ಸಮಯದಲ್ಲೂ ದೇವತೆಗಳು ಬಯಸಿದ್ದು ಮಹಾಲಕ್ಷ್ಮಿಯ ಕೃಪಾಕಟಾಕ್ಷವನ್ನೇ ಹೊರತು ಆಕೆಯನ್ನಲ್ಲ ಎಂಬ ವಿಚಾರವನ್ನು ಸ್ಪಷ್ಟಪಡಿಸಿರುವರು.

೨) ಲಕ್ಷ್ಮಣಾದಿರೂಪದಿಂದ ಅವತರಿಸಿದ ದೇವತೆಗಳ, ಮುನಿಗಳ ಮತ್ತು ರಾಜರ ಸಮಾಗಮವು ನಡೆಯಿತು ಎಂಬ ಮತ್ತೊಂದು ವಿಶೇಷವೂ ಇಲ್ಲಿದೆ.

ಪ್ರಗೃಹ್ಯ ಪಾಣಿಂ ಚ ನೃಪಾತ್ಮಜಾಯಾ
ರರಾಜ ರಾಜೀವಸಮಾನನೇತ್ರಃ ।
ಯಥಾ ಪುರಾ ಸಾಗರಜಾಸಮೇತಃ
ಸುರಾಸುರಾಣಾಮಮೃತಾಬ್ಧಿಮಂಥನೇ ॥ ೩೬ ॥

ಅ: ಹಿಂದೆ ಸುರಾಸುರರು ಅಮೃತಕ್ಕೋಸ್ಕರ ಸಮುದ್ರಮಥನವನ್ನು ಮಾಡಿದಾಗ ಸಾಗರದಿಂದುದಿಸಿದ ಮಹಾಲಕ್ಷ್ಮಿಯೊಂದಿಗೆ ಕೂಡಿ ಹೇಗೋ ಹಾಗೆ, ರಾಜಪುತ್ರಿಯಾದ ಸೀತೆಯ ಕೈಹಿಡಿದು ತಾವರೆಯಂತಹ ಕಣ್ಣುಳ್ಳ ಶ್ರೀರಾಮನು ಕಂಗೊಳಿಸಿದ.

ಜನಕರಾಜನಿಂದ ಶ್ರೀರಾಮನಿಗೆ ಸಮ್ಮಾನ

ಸ್ವಲಂಕೃತಾಸ್ತತ್ರ ವಿಚೇರುರಂಗನಾ
ವಿದೇಹರಾಜಸ್ಯ ಹಿ ಯಾಶ್ಚ ಯೋಷಿತಃ ।
ಮುದಾ ಸಮೇತಂ ರಮಯಾ ರಮಾಪತಿಂ
ವಿಲೋಕ್ಯ ರಾಮಾಯ ದದೌ ಧನಂ ನೃಪಃ ॥ ೩೭ ॥

---

೩೫. ಯೋಗರೂಢಸುಮನಃಶಬ್ದಸ್ಯ ಯೋಗಂ ಪ್ರದರ್ಶಯಿತುಂ ಸುಮಾನಸಾನಾಮಿತ್ಯುಕ್ತಮ್ । –(ವಾ.)

೩೫. ಯದ್ವಾ ಸರ್ವದಿವೌಕಸಾಂ ಲಕ್ಷ್ಮಣಾದಿರೂಪೈರವತೀರ್ಣಾನಾಂ ದೇವಾನಾಮ್ । –(ಜ.)

೩೬. 'ಪಾಣಿಗ್ರಹೋ ವಿವಾಹಃ ಸ್ಯಾತ್' ಇತಿ ಹಲಾಯುಧಃ । –(ಜ.)

೩೬. ಅಮೃತಾರ್ಥಂ ಅಮೃತಮಂಥನೇ ಕ್ಷೀರಾಬ್ಧಿಮಥನೇ ವಾ । –(ವ.)

ಅ: ವಿದೇಹರಾಜನಾದ ಜನಕನ ಪತ್ನಿಯರು ಮತ್ತು ಇತರ ನಾರಿಯರು ಬಹುವಾಗಿ ಸಿಂಗರಿಸಿಕೊಂಡು ಅಲ್ಲಿ ಸಂಚರಿಸಿದರು; ರಮೆಯೊಂದಿಗೆ ಸಮೇತನಾದ ಶ್ರೀರಮಾಪತಿಯಾದ ಶ್ರೀರಾಮನನ್ನು ಕಂಡು ಜನಕರಾಜನು ಆನಂದದಿಂದ ಧನವನ್ನು ಸಮರ್ಪಿಸಿದ.

ಲಕ್ಷ್ಮಣಾದಿಗಳ ವಿವಾಹ

ಪ್ರಿಯಾಣಿ ವಸ್ತ್ರಾಣಿ ರಥಾನ್ ಸಕುಂಜರಾನ್
ಪರಾರ್ಘ್ಯರತ್ನಾನ್ಯಖಿಲಸ್ಯ ಚೇಶಿತುಃ ।
ದದೌ ಚ ಕನ್ಯಾತ್ರಯಮುತ್ತಮಂ ಮುದಾ
ತದಾ ಸ ರಾಮಾವರಜೇಭ್ಯ ಏವ ॥ ೩೮ ॥

ಅ: ಪ್ರಿಯವಾದ ವಸ್ತ್ರಗಳನ್ನೂ ಆನೆಗಳೊಂದಿಗೆ ರಥಗಳನ್ನೂ, ಇಂದ್ರನೀಲಮಾಣಿಕ್ಯ ಮೊದಲಾದ ಉತ್ತಮರತ್ನಗಳನ್ನೂ ಆಗ ಜನಕರಾಜ ಶ್ರೀರಾಮನಿಗೆ ನೀಡಿದ ಮತ್ತು ರಾಮನ ತಮ್ಮಂದಿರಿಗೆ ಮೂವರು ಕನ್ಯೆಯರನ್ನು ಧಾರೆಯೆರೆದ.

ವಿ: ೧) ಶ್ರೀರಾಮನಿಗೆ ಸೀತೆಯನ್ನು ಧಾರೆಯೆರದಂತೆ, ತನ್ನ ಮತ್ತೊಬ್ಬ ಪುತ್ರಿ ಊರ್ಮಿಳೆ–ಯನ್ನೂ, ತನ್ನ ತಮ್ಮನಾದ ಕುಶಧ್ವಜನ ಪುತ್ರಿಯರಾದ ಮಾಂಡವೀ ಮತ್ತು ಶ್ರುತಕೀರ್ತಿಯರನ್ನು ಜನಕರಾಜನು ಕ್ರಮವಾಗಿ ಲಕ್ಷ್ಮಣ, ಭರತ ಮತ್ತು ಶತ್ರುಘ್ನರಿಗೆ ಧಾರೆ ಎರೆದ.

೨) ಶ್ರೀರಾಮನು ಸರ್ವಸ್ವಾಮಿ; ಅವನಿಗೆ ಜನಕರಾಜನು ನೀಡಿದ್ದು ಅವನ ವಸ್ತುಗಳನ್ನೇ ಹೊರತು ತನ್ನ ವಸ್ತುಗಳನ್ನಲ್ಲ ಎಂಬ ಭಾವ 'ಅಖಿಲಸ್ಯ ಚೇಶಿತುಃ' ಎಂಬಲ್ಲಿ ಸೂಚಿತವಾಗಿದೆ; ಇದರಂತೆ ಜಗತ್ತಿನಲ್ಲಿ ಯಾರೇ ಏನೇ ಕೊಟ್ಟರೂ ಅದೆಲ್ಲ ಮೂಲತಃ ಭಗವಂತನದೇ ಆಗಿದೆ ಎಂಬ ತತ್ತ್ವವೂ ಇಲ್ಲಿ ನಿರೂಪಿತ – **'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ'.**

ಅಯೋಧ್ಯೆಯತ್ತ ಸಕುಟುಂಬನಾಗಿ ದಶರಥ

ಮಹೋತ್ಸವಂ ತಂ ತ್ವನುಭೂಯ ದೇವತಾ
ನರಾಶ್ಚ ಸರ್ವೇ ಪ್ರಯಯುರ್ಯಥಾಽಗತಮ್ ।
ಪಿತಾ ಚ ರಾಮಸ್ಯ ಸುತೈಃ ಸಮನ್ವಿತೋ
ಯಯಾವಯೋಧ್ಯಾಂ ಸ್ವಪುರೀಂ ಮುದಾ ತತಃ ॥ ೩೯ ॥

---

೩೮. ಉತ್ತಮಾನಿ ರತ್ನಾನಿ ಇಂದ್ರನೀಲಮಾಣಿಕ್ಯಾದೀನಿ । –(ವ.)

ಅ: ಅನಂತರ ಸುರರು ಮತ್ತು ನರರು ಮೊದಲಾಗಿ ಎಲ್ಲರೂ ಆ ಮಹೋತ್ಸವವನ್ನು ಸವಿದು, ಹೇಗೆ ಸಂಭ್ರಮದಿಂದ ಬಂದಿದ್ದರೋ ಹಾಗೆ ಸಂತೃಪ್ತರಾಗಿ ತೆರಳಿದರು; ಶ್ರೀರಾಮನ ತಂದೆಯಾದ ದಶರಥ ತನ್ನ ಪುತ್ರರೊಂದಿಗೆ ಕೂಡಿಕೊಂಡು ತನ್ನ ಪಟ್ಟಣವಾದ ಅಯೋಧ್ಯೆಗೆ ಆನಂದದಿಂದ ತೆರಳಿದ.

ಪರಶುರಾಮರ ಆಗಮನ

ತದಂತರೇ ಸೋಽಥ ದದರ್ಶ ಭಾರ್ಗವಂ
ಸಹಸ್ರಲಕ್ಷಾಮಿತಭಾನುದೀಧಿತಿಮ್ ।
ವಿಭಾಸಮಾನಂ ನಿಜರಶ್ಮಿಮಂಡಲೇ
ಧನುರ್ಧರಂ ದೀಪ್ತಪರಶ್ವಧಾಯುಧಮ್ ॥ ೪೦ ॥

ಅ: ಮಾರ್ಗಮಧ್ಯದಲ್ಲಿ ದಶರಥ ಭೃಗುಕುಲದಲ್ಲಿ ಅವತರಿಸಿದ್ದ ಪರಶುರಾಮನನ್ನು ಕಂಡ; ಆ ಪರಶುರಾಮನು ಸಾವಿರ, ಲಕ್ಷ, ಮತ್ತು ಅಮಿತವಾದ ಸೂರ್ಯರ ಕಾಂತಿಯಿಂದ ಶೋಭಿಸುತ್ತಿದ್ದ; ತನ್ನ ಸಹಜವಾದ ಕಿರಣಗಳ ಸಮೂಹದಲ್ಲಿ ಕಂಗೊಳಿಸುತ್ತಿದ್ದ; ಶಾರ್ಙ್ಗವೆಂಬ ಧನುಸ್ಸನ್ನು ಕೈಯಲ್ಲಿ ಹಿಡಿದಿದ್ದ; ಹೊಳೆಯುವ ಕೊಡಲಿಯನ್ನು ಆಯುಧವನ್ನಾಗಿ ಹೊಂದಿದ್ದ.

ವಿ: ೧) ಪರಶುರಾಮ ಸಾಕ್ಷಾತ್ ನಾರಾಯಣ; ಅವನ ಕಾಂತಿ ಅನಂತಸೂರ್ಯರಿಗೂ ಮಿಗಿಲಾದದ್ದು. ಆದರೆ ಅವನ ಅಂತಹ ಕಾಂತಿಯನ್ನು ಕಾಣುವ ಯೋಗ್ಯತೆ ಎಲ್ಲರಿಗೂ ಒಂದೇ ತೆರನಾಗಿಲ್ಲ. ಸಾಮಾನ್ಯರಿಗೆ ಸಾವಿರಸೂರ್ಯರ ಕಾಂತಿಯವನಾಗಿ, ಮಧ್ಯಮರಿಗೆ ಲಕ್ಷಸೂರ್ಯ–ಕಾಂತಿಯವನಾಗಿ ಉತ್ತಮರಿಗೆ ಅನಂತಸೂರ್ಯಕಾಂತಿಯವನಾಗಿ ಕ್ರಮವಾಗಿ ಏಕಕಾಲಕ್ಕೆ ಗೋಚರಿಸಿದ ಎಂಬುದನ್ನು **'ಸಹಸ್ರಲಕ್ಷಾಮಿತಭಾನುದೀಧಿತಿಂ'** ಎಂಬ ಪದದಿಂದ ತಿಳಿಸಿರುವರು.

೨) ಶ್ರೀವೇದವ್ಯಾಸರನ್ನೂ ಹೀಗೆಯೇ ವರ್ಣಿಸಿರುವುದನ್ನು ಗಮನಿಸಬೇಕು (೧೦/೫೧–೫೫).

---

೩೯. ವಾಲ್ಮೀಕಿರಾಮಾಯಣ ಬಾಲಕಾಂಡ ಸರ್ಗ ೭೩, ಶ್ಲೋ. ೨೯–೩೦

೩೯. ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । – ಈಶಾವಾಸ್ಯೋಪನಿಷತ್

೩೯. ಅಖಿಲಸ್ಯ ಚೇಶಿತುರಿತಿ ವದತಾ ತದೀಯಮೇವ ತಸ್ಯ ದತ್ತಮಿತಿ ಸೂಚಿತಂ । – (ವಾ.)

೩೯. ಯಥಾ ಸಂತೋಷೇಣ ಆಗತಂ ತಥಾ ಪ್ರಯಯುಃ । – (ಜ.)

೪೦. ಸಹಸ್ರಲಕ್ಷಾಮಿತೇತಿ ನೀಚಮಧ್ಯೋತ್ತಮಾಧಿಕಾರಿಯೋಗ್ಯತಾಮಪೇಕ್ಷ್ಯೋಕ್ತಂ ಜ್ಞಾತವ್ಯಮ್ ॥ – (ಜ.)

ರಾಮನಿಗೆ ಪರಶುರಾಮ ನೀಡಿದ ಆಹ್ವಾನ - ದಶರಥನ ಭಯ

ಅಜಾನತಾಂ ರಾಘವಮಾದಿಪೂರುಷಂ
ಸಮಾಗತಂ ಜ್ಞಾಪಯಿತುಂ ನಿದರ್ಶನೈಃ ।
ಸಮಾಹ್ವಯಂತಂ ರಘುಪಂ ಸ್ಪರ್ಧೇವ
ನೃಪೋ ಯಯಾಚೇ ಪ್ರಣಿಪತ್ಯ ಭೀತಃ ॥ ೪೧ ॥

ನ ಮೇ ಸುತಂ ಹಂತುಮಿಹಾರ್ಹಸಿ ಪ್ರಭೋ
ವಯೋಗತಸ್ಯೇತ್ಯುದಿತಃ ಸ ಭಾರ್ಗವಃ ।
ಸುತತ್ರಯಂ ತೇ ಪ್ರದದಾಮಿ ರಾಘವಂ
ರಣೇ ಸ್ಥಿತಂ ದ್ರಷ್ಟುಮಿಹಾಗತೋಽಸ್ಮ್ಯಹಮ್ ॥ ೪೨ ॥

ಅ: ಶ್ರೀರಾಮನು 'ಆದಿಪುರುಷನಾದ ಶ್ರೀಹರಿ' ಎಂಬುದನ್ನು ತಿಳಿಯದ ಜನಕ್ಕೆ ದೃಷ್ಟಾಂತಗಳಿಂದ ತಿಳಿಸಿಕೊಡಲೆಂದೇ ಪರಶುರಾಮ ಹಾಗೆ ಬಂದದ್ದು; ಸ್ಪರ್ಧೆಯಿಂದಲೋ ಎಂಬಂತೆ ಅವನು ಶ್ರೀರಾಮನನ್ನು ಯುದ್ಧಕ್ಕೆ ಆಹ್ವಾನಿಸಿದ. ದಶರಥನು ಸಾಷ್ಟಾಂಗ ವಂದಿಸಿ ಭಯದಿಂದ ಬೇಡಿಕೊಂಡ.

''ಸರ್ವಸಮರ್ಥನಾದ ಪರಶುರಾಮ! ನಾನು ಇಳಿವಯಸ್ಸಿನವ; ನನ್ನ ಮಗ ಇನ್ನೂ ಚಿಕ್ಕವನು; ಇವನನ್ನು ನೀನು ಕೊಲ್ಲಕೂಡದು'' ಅದಕ್ಕೆ ಪರಶುರಾಮ ಉತ್ತರಿಸಿದ; ಮೂವರು ಪುತ್ರರನ್ನು ನಿನಗಾಗಿ ನೀಡುವೆ. ಶ್ರೀರಾಮನನ್ನು ಮಾತ್ರ ಯುದ್ಧದಲ್ಲಿ ಎದುರಿಸಲೆಂದೇ ನಾನೀಗ ಇಲ್ಲಿಗೆ ಬಂದಿರುವೆ.''

ವಿ: ೧) ಶ್ರೀರಾಮಪರಶುರಾಮರ ಸಮಾಗಮ ರಾಮಾಯಣದ ಒಂದು ರಸಘಟ್ಟವಾಗಿರುವಂತೆ, ತುಂಬಾ ಗಹನವಾದ ಘಟ್ಟವೂ ಆಗಿದೆ. ಮೇಲ್ನೋಟಕ್ಕೆ ಪರಶುರಾಮ–ಪರಾಭವದಂತೆ ಕಾಣುವ ಈ ಘಟ್ಟ ವಾಸ್ತವಿಕವಾಗಿ ಶ್ರೀರಾಮಪರಶುರಾಮರ ಅಭೇದವನ್ನೂ,

---

೪೨. 'ವಯೋಗತಸ್ಯ' ಇತ್ಯುಕ್ತ್ಯಾ ಸ್ವಸ್ಯಾಶಕ್ತತ್ವಂ ಸೂಚಿತಮ್ । ಸುತಮಿತ್ಯನೇನ ರಾಮಸ್ಯ ಬಾಲತ್ವಂ ಸೂಚಿತಮ್ । ಪ್ರಭೋ ಇತ್ಯುಕ್ತ್ಯಾ ಪರಶುರಾಮಸ್ಯ ವೀರತ್ವಂ ಸೂಚಿತಮ್। ವೀರಸ್ಯಾಶಕ್ತಸ್ಯ ಬಾಲಸ್ಯ ವಧೋ ನ ಯೋಗ್ಯ ಇತಿ ಭಾವಃ। –(ಜ.)

೪೨. ಹೇ ಸುತ! ತೇ ತ್ರಯಂ ಜ್ಞಾನಂ ಭಕ್ತಿಂ ವೈರಾಗ್ಯಂ ಚ ಇತಿ ತ್ರಯಂ ಪ್ರದದಾಮಿ ಇತಿ ಭಗವತೋ ಗೂಢಾಭಿಸಂಧಿಃ। –(ಭಾರತ ಶ್ರೀನಿವಾಸಾಚಾರ್ಯರು)

ಶ್ರೀಹರಿಯ ಸರ್ವೋತ್ತಮತ್ವವನ್ನೂ ಸಾರುವ ಅಪೂರ್ವಘಟ್ಟ, ಅದನ್ನು ಶ್ರೀಮದಾಚಾರ್ಯರು ಈ ಅಧ್ಯಾಯದ ೪೦ ರಿಂದ ೬೨ನೆಯ ಶ್ಲೋಕದವರೆಗಿನ ಗ್ರಂಥಭಾಗದಿಂದ ನಿರ್ಣಯಿಸಿ ಹೇಳುತ್ತಿರುವರು.

೨) 'ಸುತತ್ರಯಂ ತೇ ಪ್ರದದಾಮಿ' ಎಂಬುದಕ್ಕೆ 'ನಿನಗೆ ಮೂರು ಮಕ್ಕಳನ್ನು ಮಾತ್ರ ಉಳಿಸುವೆನು' ಎಂದು ಅಪಾತತಃ ಅರ್ಥ; ಆದರೆ 'ನಿಜವಾಗಿಯೂ ಮನುಷ್ಯನ ಉದ್ಧಾರಕ್ಕೆ ಕಾರಣವಾಗುವ ಜ್ಞಾನ, ಭಕ್ತಿಮತ್ತು ವೈರಾಗ್ಯ ಎಂಬ ಮೂರನ್ನು ನೀಡಿ,'ಹೇ ಸುತ ದಶರಥ! ನಿನ್ನನ್ನು ಉದ್ಧರಿಸುವೆ' ಎಂಬುದು ಅಂತರಾರ್ಥ; ಮುಂದೆ ನಡೆದದ್ದೂ ಹಾಗೆಯೇ.

ಪರಶುರಾಮನ ಆಂತರ್ಯ

ಸ ಇತ್ಥಮುಕ್ತ್ವಾ ನೃಪತಿಂ ರಘೂತ್ತಮಂ
ಭೃಗೂತ್ತಮಃ ಪ್ರಾಹ ನಿಜಾಂ ತನುಂ ಹರಿಃ ।
ಅಭೇದಮಜ್ಞೇಷ್ವಪಿ ದರ್ಶಯನ್ ಪರಂ
ಪುರಾತನೋಽಹಂ ಹರಿರೇಷ ಇತ್ಯಪಿ ॥ ೪೩ ॥

ಅ: 'ತಮ್ಮಿಬ್ಬರಲ್ಲಿ ಆತ್ಯಂತಿಕವಾದ ಅಭೇದವೇ ಉಂಟು. ನಾನು ಪುರಾತನನಾದ ಶ್ರೀಹರಿ; ಇವನೂ ಹಾಗೆಯೇ' ಎಂಬುದನ್ನು ಅಜ್ಞರಿಗೂ ತಿಳಿಸಿಕೊಡಲೆಂದು ದಶರಥನಿಗೆ ಹೀಗೆ ಹೇಳಿದ ಭೃಗೂತ್ತಮನಾದ ಶ್ರೀಪರಶುರಾಮ, ತನ್ನದೇ ಮತ್ತೊಂದು ರೂಪವಾದ ರಘೂತ್ತಮನಾದ ಶ್ರೀರಾಮನಿಗೆ ಇಂತೆಂದ :

ವಿ: ೧) ಮೇಲ್ನೋಟಕ್ಕೆ ಪರಶುರಾಮನು ಶ್ರೀರಾಮನನ್ನು ತನ್ನೊಂದಿಗೆ ಯುದ್ಧಕ್ಕೆ ಆಹ್ವಾನಿಸುವಂತೆ ಕಂಡರೂ, ಅದರ ನಿಜವಾದ ಉದ್ದೇಶ ಅವನಂತೆ ತಾನೂ ನಾರಾಯಣ; ತಮ್ಮಿಬ್ಬರಲ್ಲಿ ಎಷ್ಟೂ ಭೇದವಿಲ್ಲ ಎಂದು ತಿಳಿಸುವುದೇ ಆಗಿತ್ತು ಎಂದು ಭಾವ.

೨) ಅರ್ಜುನನು ಇಂದ್ರಾವತಾರ; ಬಲರಾಮ ಶೇಷಾವತಾರ ಹೀಗೆ ದೇವತೆಗಳು ಅವತರಿಸಿದರೂ ಅವರ ಮೂಲರೂಪದ ಬಲಾದಿಗಳು ಅವತಾರರೂಪಗಳಲ್ಲಿ ಪೂರ್ಣವಾಗಿ

೪೩.. ಪರಂ – ಇಂದ್ರಾರ್ಜುನವದ್ವಿಶೇಷರಹಿತಮಭೇದಂ ಸ್ವಸ್ಯ ರಾಮಸ್ಯಾವತಾರೇಣಾಭೇದಂ ದರ್ಶಯನ್ । –(ಜ.)

೪೩.. ಅಹಮಪಿ ಪುರಾತನೋ ಹರಿಃ, ಏಷೋಽಪಿ ಪುರಾತನೋ ಹರಿಃ ಇತ್ಯಪಿ ದರ್ಶಯಿತುಂ ಇತಿ ಸಂಬಂಧಃ । –(ವಾ.)

ಇರುವುದಿಲ್ಲ; ಮಹಾವಿಷ್ಣುವಿನ(ಮಹಾಲಕ್ಷ್ಮಿಯ ಮತ್ತು ವಾಯುದೇವರ)ಅವತಾರಗಳು ಮಾತ್ರ ಹಾಗಲ್ಲ ಎಂಬ ವಿಶೇಷವಿಚಾರವನ್ನು 'ಪರಂ' ಎಂಬ ಪದದಿಂದ ಸೂಚಿಸಿರುವರು.

ಶಾರ್ಙ್ಗ ಪಿನಾಕಗಳ ಕಥೆ

ಶೃಣುಷ್ವ ರಾಮ ತ್ವಮಿಹೋದಿತಂ ಮಯಾ
ಧನುರ್ದ್ವಯಂ ಪೂರ್ವಮಭೂನ್ಮಹಾದ್ಭುತಮ್ ।
ಉಮಾಪತಿಸ್ತ್ವೇಕಮಧಾರಯತ್ ತತೋ
ರಮಾಪತಿಶ್ಚಾಪರಮುತ್ತಮೋತ್ತಮಮ್ ॥ ೪೪ ॥

ಅ: ರಾಮ ! ನಾನು ಹೇಳುವುದನ್ನು ಕೇಳು; ಹಿಂದೆ ತುಂಬಾ ಅದ್ಭುತವಾದ ಎರಡು ಧನುಸ್ಸುಗಳು ನಿರ್ಮಿತವಾದವು; ಅವುಗಳಲ್ಲಿ ಒಂದನ್ನು ಉಮಾಪತಿಯಾದ ಶಿವನೂ ಅದಕ್ಕಿಂತ ತುಂಬಾ ಮಿಗಿಲಾಗಿದ್ದ ಮತ್ತೊಂದನ್ನು ರಮಾಪತಿಯಾದ ಹರಿಯೂ ತೆಗೆದುಕೊಂಡರು.

ವಿ: ೧) ಶಾರ್ಙ್ಗ ಮತ್ತು ಪಿನಾಕ ಎಂಬವೇ ಆ ಎರಡು ಧನುಸ್ಸುಗಳು; ಅವು ಕ್ರಮವಾಗಿ ಹರಿ ಮತ್ತು ಹರ ಇವರ ಧನುಸ್ಸುಗಳು; ಅವುಗಳಲ್ಲಿ ಪಿನಾಕಕ್ಕಿಂತ ಶಾರ್ಙ್ಗವು ಎಣೆಯಿಲ್ಲದಷ್ಟು ಮಿಗಿಲಾದುದು.

೨) ಇಲ್ಲಿ ಶ್ರೀರಾಮನನ್ನು ನಿಮಿತ್ತಮಾಡಿಕೊಂಡು ದಶರಥ ಮೊದಲಾದ ಸಕಲರಿಗೂ ಆ ವಿಷಯ ತಿಳಿಸಿದ ಎಂದರ್ಥ.

ಹರಿಹರರ ಸಮರ

ತದಾ ತು ಲೋಕಸ್ಯ ನಿದರ್ಶನಾರ್ಥಿಭಿಃ
ಸಮರ್ಥಿತೌ ತೌ ಹರಿಶಂಕರೌ ಸುರೈಃ ।
ರಣೇ ಸ್ಥಿತೌ ವಾಂ ಪ್ರಸಮೀಕ್ಷಿತುಂ ವಯಂ
ಸಮರ್ಥಯಾಮೋಽತ್ರ ನಿದರ್ಶನಾರ್ಥಿನಃ ॥ ೪೫ ॥

---

೪೪. ವಾ. ರಾ.(೧/೭೫/೧೪-೨೦)

೪೫. ನಿದರ್ಶನಂ – ನಿರ್ಣಯಃ ಹರಿಃ ಸರ್ವೋತ್ತಮ ಇತ್ಯೇವಂ ರೂಪಃ । –(ವ.)
ನಿದರ್ಶನಂ – ಪರತತ್ತ್ವಜ್ಞಾನಂ । –(ಜ.)

೪೫. ಸಮರ್ಥಯಾಮಃ – ಪ್ರಾರ್ಥಯಾಮಹೇ ॥ 'ಪ್ರಾರ್ಥಯಂತಿ ಶಯನೋತ್ಥಿತಂ ಪ್ರಿಯಾಃ' ಇತ್ಯಾದಿ ಕೃದಂತಾತ್ ತತ್ಕರೋತೀತಿ ಣಿಚಿ ನೇಯಃ ಇತಿ ವೃತ್ತಿಕೃತ್ । –(ಜ.)

ಅ: ಆಗ ಜನರಿಗೆ ತತ್ತ್ವನಿರ್ಣಯವನ್ನು ಉಂಟುಮಾಡಲೆಂದು ದೇವತೆಗಳು ಆ ರಮೇಶ ಉಮೇಶರನ್ನು ಪ್ರಾರ್ಥಿಸಿಕೊಂಡರು; ನಾವು ತತ್ತ್ವನಿರ್ಣಯವನ್ನು ಬಯಸಿದವರಾಗಿ ನೀವಿಬ್ಬರೂ ಯುದ್ಧಮಾಡುವುದನ್ನು ಕಾಣಲೆಂದು ಪ್ರಾರ್ಥಿಸಿಕೊಳ್ಳುತ್ತಿರುವೆವು.

ವಿ: ಶ್ರೀಹರಿಯೇ ಸರ್ವೋತ್ತಮನೆಂಬ ನಿರ್ಣಯವು ದೇವತೆಗಳಿಗೆ ಇದ್ದರೂ ಅಂತಹ ಜ್ಞಾನವು ಲೋಕದ ಯೋಗ್ಯಜನರಿಗೆಲ್ಲ ಆಗಲಿ ಎಂಬ ಭಾವನೆಯಿಂದ ದೇವತೆಗಳು ಹಾಗೆ ಪ್ರಾರ್ಥಿಸಿದರು ಎಂದು ಭಾವ.

ಸ್ಥಾಣುವಾದ ಹರ

ತತೋ ಹಿ ಯುದ್ಧಾಯ ರಮೇಶಶಂಕರೌ
ವ್ಯವಸ್ಥಿತೌ ತೌ ಧನುಷೀ ಪ್ರಗೃಹ್ಯ ।
ಯತೋಽಂತರಸ್ಯೈಷ ನಿಯಾಮಕೋ ಹರಿ-
ಸ್ತತೋ ಹರೋಽಗ್ರೇಽಸ್ಯ ಶಿಲೋಪಮೋಭೂತ್ ॥ ೪೬ ॥

ಅ: ಅನಂತರ ಯುದ್ಧಕ್ಕೆಂದು ಹರಿ ಮತ್ತು ಹರ ಇಬ್ಬರೂ ಆ ಧನುಸ್ಸುಗಳನ್ನು ಹಿಡಿದುಕೊಂಡು ಸನ್ನದ್ಧರಾದರು; ಶ್ರೀಹರಿಯು ಹರನ ಹೃದಯಕಮಲದಲ್ಲಿ ನೆಲೆಸಿ ಅವನಿಗೂ ಪ್ರೇರಕನಾಗಿರುವುದರಿಂದ ಅವನ ಮುಂದೆ ಹರನು ಶಿಲೆಯಂತಾದನು.

ವಿ: ೧) ಹರನು ಯುದ್ಧ ಮಾಡಲಾಗದೆ ಶಿಲೆಯಂತೆ ನಿಂತುಬಿಟ್ಟ. ಶ್ರೀಹರಿಯು ಅವನೊಳಗೆ ಅಂತರ್ನಿಯಾಮಕನಾಗಿ ನೆಲೆಸಿರುವುದೇ ಇದಕ್ಕೆ ಕಾರಣ ಎಂದು ಭಾವ.

೨) ಮುಂದೆ ಬಾಣಾಸುರನ ಪ್ರಸಂಗದಲ್ಲೂ ಹರಿಯ ಮುಂದೆ ಹರ ಹೀಗೆಯೇ ಸ್ತಂಭಿತನಾದ ವಿವರ ಬಂದಿದೆ (೨೨/೨೫೪).

ಹರಿಯೇ ಪರ ಎಂದ ದೇವವೃಂದ

ಶಶಾಕ ನೈವಾಥ ಯದಾಽಭಿವೀಕ್ಷಿತುಂ
ಪ್ರಸ್ಪಂದಿತುಂ ವಾ ಕುತ ಏವ ಯೋದ್ಧುಮ್ ।
ಶಿವಸ್ತದಾ ದೇವಗಣಾಃ ಸಮಸ್ತಾಃ
ಶಶಂಸುರುಚ್ಚೈರ್ಜಗತೋ ಹರೇರ್ಬಲಮ್ ॥ ೪೭ ॥

---

೪೬. ವ್ಯಾಪಾರಾಭಾವಾತ್ ಜಡವದಭೂದಿತ್ಯರ್ಥಃ। –(ಜ.)

ಆಂತರ್ನಿಯಾಮಕಸ್ಯ ಹರೇಃ ಪ್ರತಿದ್ವಂದ್ವಿತ್ವೇನ ಬಹಿಃಸ್ಥಿತತ್ವಾನಿಯಮನೋದಾಸೀನತ್ವೇನ ಚೇಷ್ಟಕಾ-ಭಾವಾತ್ ಸ್ವತಃ ಚೇಷ್ಟಾವಿರಹಾಚ್ಚೇತಿ ಭಾವಃ। –(ವ.)

ಅ: ಶಿವನು ಆಗ ಕಣ್ತೆರೆದು ನೋಡಲಾಗಲೀ, ಚಲಿಸಲಾಗಲೀ ಶಕ್ತನಾಗಲೇ ಇಲ್ಲ; ಇನ್ನು ಯುದ್ಧಮಾಡಲು ಎಂತು ಶಕ್ತನಾದಾನು? ಆಗ ಸಮಸ್ತದೇವಗಣಗಳೂ ಶ್ರೀಹರಿಯ ಅಪಾರಸಾಮರ್ಥ್ಯವನ್ನು ಲೋಕಕ್ಕೆ ಬಹಳವಾಗಿ ವರ್ಣಿಸಿದರು.

ವಿ: ೧) ಇದನ್ನು ಆಗ ನೋಡಿದ ಜನಗಳಿಗೆ ಮಾತ್ರವಲ್ಲದೆ, ಈ ಕಥೆಯನ್ನು ಶ್ರವಣ ಮಾಡಿದ ಸಕಲಯೋಗ್ಯರಿಗೂ ಶ್ರೀಹರಿಯ ಸರ್ವೋತ್ತಮತ್ವವು ನಿರ್ಣಯವಾಗುವುದರಿಂದ ದೇವತೆಗಳು ಇದನ್ನು ಸಕಲ ಜಗತ್ತಿಗೂ ತಿಳಿಸಿದಂತೆಯೇ ಸರಿ.

೨) ಹೀಗೆ ಯೋಗ್ಯರಿಗೆ ಜ್ಞಾನ ಮತ್ತು ಅಯೋಗ್ಯರಿಗೆ ಮಿಥ್ಯಾಜ್ಞಾನಾದಿಗಳನ್ನು ಉಂಟು ಮಾಡುವ ಕಾರ್ಯವನ್ನು ಶ್ರೀಹರಿಯು ದೇವತೆಗಳಿಗೆ ವಹಿಸಿರುವನು.ಅದಕ್ಕೆಂದೇ ಅವರು ಹೀಗೆ ಮಾಡಿದರು ಎಂದು ತಿಳಿಯಬೇಕು (೩೨/೧೩೮).

ಯದೀರಣೇನೈವ ವಿನೈಷ ಶಂಕರಃ
ಶಶಾಕ ನ ಪ್ರಶ್ವಸಿತುಂ ಚ ಕೇವಲಮ್ ।
ಕಿಮತ್ರ ವಕ್ತವ್ಯಮತೋ ಹರೇರ್ಬಲಂ
ಹರಾತ್ ಪರಂ ಸರ್ವತ ಏವ ಚೇತಿ ॥ ೪೮ ॥

ಅ: ಶಂಕರ ಶ್ರೀಹರಿಯ ಪ್ರೇರಣೆ ಇಲ್ಲವಾದಾಗ ಕೇವಲ ಉಸಿರಾಡಲು ಸಹ ಶಕ್ತನಾಗಲಿಲ್ಲ; ಎಂದಮೇಲೆ ಶ್ರೀಹರಿಯ ಬಲವು ಹರನಿಗಿಂತ ಮಿಗಿಲು, ಸಕಲರಿಗಿಂತ ಅಪಾರ ಎಂದು ಪ್ರತ್ಯೇಕವಾಗಿ ಹೇಳಬೇಕೇ?

ವಿ: ೧) ಈ ಪ್ರಸಂಗದಲ್ಲಿನ ವಾಲ್ಮೀಕಿರಾಮಾಯಣದ ಮಾತುಗಳು ಈ ತೆರನಾಗಿವೆ :

---

೪೭. ಸ್ವೇಷಾಂ ಪೂರ್ವಮೇವ ನಿರ್ಣಯತ್ವಾತ್ ಜಗತಃ ಶಶಂಸುರಿತ್ಯುಕ್ತಂ । ಏತತ್ಕಥಾಶ್ರವಣೇ ಸತಿ ಯೋಗ್ಯಸರ್ವಜಗತೋಽಪಿ ಸಂಶಯಪರಿಹಾರಾತ್ ಶಶಂಸುರಿವ ಉಚ್ಚೈಃ – ಉಚ್ಚಮ್ ॥ ಪ್ರತ್ಯಕ್ಷೇಣೈವ ಹರಿಬಲೋಚ್ಚತಾಯಾಃ ಪ್ರದರ್ಶಿತತ್ವಾತ್ ಅರ್ಥದ್ವಯಸೂಚನಾಯ ಉಚ್ಚೈರಿತ್ಯವ್ಯಯಪದಪ್ರಯೋಗಃ । –(ವಾ.)

೪೭. ಆಭ್ಯಾಂ ಜ್ಞಾನಕರ್ಮೇಂದ್ರಿಯವ್ಯಾಪಾರಃ ಉಪಲಕ್ಷ್ಯತೇ । –(ಜ.)

೪೭. ನ ಕುತೋಽಪೀತಿ ಯದಾ ನಿರ್ಣಯೋ ಜಾತಸ್ತದಾ .... –(ಸ.)

೪೮. ಸರ್ವತಶ್ಚ– ರಮಾಬ್ರಹ್ಮಾದೀನಾಂ ಬಲಾದಪಿ । –(ಜ.)

೪೮. **ಹುಂಕಾರೇಣ ಮಹಾದೇವಃ ಸ್ತಂಭಿತೋಽಥ ತ್ರಿಲೋಚನಃ ।** –ವಾ.ರಾ. (೧/೭೫/೧೭)

ಬ್ರುವತ್ಯೇವಂ ದಶರಥೇ ಜಾಮದಗ್ನ್ಯಃ ಪ್ರತಾಪವಾನ್ ।
ಅನಾದೃತ್ಯೈವ ತದ್ವಾಕ್ಯಂ ರಾಮಮೇವಾಭ್ಯಭಾಷತ ॥

ಇಮೇ ದ್ವೇ ಧನುಷೀ ಶ್ರೇಷ್ಠೇ ದಿವ್ಯೇ ಲೋಕಾಭಿಶ್ರುತೇ ।
ದೃಢೇ ಬಲವತೀ ಮುಖ್ಯೇ ಸುಕೃತೇ ವಿಶ್ವಕರ್ಮಣಾ ॥

ಅತಿಸೃಷ್ಟಂ ಸುರೈರೇಕಂ ತ್ರ್ಯಂಬಕಾಯ ಯುಯುತ್ಸವೇ ।
ತ್ರಿಪುರಘ್ನಂ ವರಶ್ರೇಷ್ಠ ಭಗ್ನಂ ಕಾಕುತ್ಸ್ಥ ಯತ್ ತ್ವಯಾ ॥

ತದಿದಂ ವೈಷ್ಣವಂ ರಾಮ ಧನುಃ ಪರಮಭಾಸ್ವರಮ್।
ಸಮಾನಸಾರಂ ಕಾಕುತ್ಸ್ಥ ರೌದ್ರೇಣ ಧನುಷಾ ತ್ವಿದಮ್ ॥

ತದಾ ತು ದೇವತಾಃ ಸರ್ವಾಃ ಪೃಚ್ಛಂತಿ ಸ್ಮ ಪಿತಾಮಹಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಬಲಾಬಲನಿರೀಕ್ಷಯಾ॥

ಅಭಿಪ್ರಾಯಂ ತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥

ವಿಜಯೇ ಚ ಮಹದ್ಯುದ್ಧಮಭವದ್ರೋಮಹರ್ಷಣಮ್ ।
ಶಿತಿಕಂಠಸ್ಯ ವಿಷ್ಣೋಶ್ಚ ಪರಸ್ಪರಜಿಗೀಷಿಣೋಃ ॥

ತದಾ ತು ಜೃಂಭಿತಂ ಶೈವಂ ಧನುರ್ಭೀಮಪರಾಕ್ರಮಮ್ ।
ಹುಂಕಾರೇಣ ಮಹಾದೇವಃ ಸ್ತಂಭಿತೋಽಥ ತ್ರಿಲೋಚನಃ ॥

ದೇವೈಸ್ತದಾ ಸದಾಗಮ್ಯ ಸರ್ಷಿಸಂಘೈಃ ಸಚಾರಣೈಃ ।
ಯಾಚಿತೌ ಪ್ರಶಮಂ ತತ್ರ ಜಗೃತುಸ್ತೌ ಸುರೋತ್ತಮೌ ॥

ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಃ ಸರ್ಷಿಗಣಾಸ್ತದಾ ॥ – ವಾ.ರಾ. (೧/೭೫/೧೦-೧೯)

ಕೈಲಾಸಕ್ಕೆ ತೆರಳಿದ ಹರ

ತತಃ ಪ್ರಣಮ್ಯಾಶು ಜನಾರ್ದನಂ ಹರಃ
ಪ್ರಸನ್ನದೃಷ್ಟ್ಯಾ ಹರಿಣಾಽಭಿವೀಕ್ಷಿತಃ ।
ಜಗಾಮ ಕೈಲಾಸಮಮುಷ್ಯ ತದ್ಧನು-
ಸ್ತ್ವಯಾ ಪ್ರಭಗ್ನಂ ಕಿಲ ಲೋಕಸನ್ನಿಧೌ ॥ ೪೯ ॥

---

೪೯. ಭಗ್ನಮಿತಿ ಮಯಾ ಶ್ರುತಮ್ ॥ –(ವ.)
ಪ್ರಭಗ್ನಮಿತಿ ಶ್ರೂಯತೇ ॥ – (ಜ.)

ಅ: ಬಳಿಕ ಹರನು ಕೂಡಲೆ ಹರಿಯನ್ನು ವಂದಿಸಿದ. ಹರಿ ಅವನನ್ನು ಪ್ರಸನ್ನದೃಷ್ಟಿಯಿಂದ ನೋಡಿ ಅನುಗ್ರಹಿಸಿದ. ಹರನು ಅಲ್ಲಿಂದ ಕೈಲಾಸಕ್ಕೆ ತೆರಳಿದ; ನೀನು ಜನರಿದಿರು ಮುರಿದುಹಾಕಿದ್ದು ಆ ಶಿವಧನುಸ್ಸನ್ನೇ.

ಪಿನಾಕಕ್ಕಿಂತ ಕೋಟಿಪಟ್ಟು ಮಿಗಿಲಾದ ಶಾರ್ಙ್ಗ

ಧನುರ್ಯದನ್ಯದ್ಧರಿಹಸ್ತಯೋಗ್ಯಂ
ತತ್ಕಾರ್ಮುಕಾತ್ ಕೋಟಿಗುಣಂ ಪುನಶ್ಚ।
ವರಂ ಹಿ ಹಸ್ತೇ ತದಿದಂ ಗೃಹೀತಂ
ಮಯಾ ಗೃಹಾಣೈತದತೋ ಹಿ ವೈಷ್ಣವಮ್ ॥ ೫೦ ॥

ಅ: ಹರಿಯ ಹಸ್ತಕ್ಕೆ ಯೋಗ್ಯವಾದ ಆ ಮತ್ತೊಂದು ಧನುಸ್ಸು(ಶಾರ್ಙ್ಗ) ಆ ಶಿವಧನುಸ್ಸಿಗಿಂತ ಕೋಟಿಪಟ್ಟಿಗಿಂತ ಮಿಗಿಲು; ಆ ವೈಷ್ಣವಧನುಸ್ಸನ್ನೇ ನಾನೀಗ ಕೈಯಲ್ಲಿ ಹಿಡಿದಿರುವೆ; ಆದ್ದರಿಂದ ಅದನ್ನೀಗ ನೀನು ಸ್ವೀಕರಿಸು.

ವಿ: ೧) 'ಆ ಎರಡು ಧನುಸ್ಸುಗಳಲ್ಲಿ ಶಿವಧನುಸ್ಸನ್ನು ಮುರಿದು ಹಾಕಿದ ನೀನು ಇದನ್ನು ಕೈಯಲ್ಲಿ ತೆಗೆದುಕೋ; ನಿನ್ನ ಪರೀಕ್ಷೆಯಾಗಲಿ' ಎಂದು ಭಾವ.

೨) ಇಲ್ಲಿ 'ಕೋಟಿಗುಣ' ಎಂದರೆ ಅನಂತಗುಣ ಎಂದರ್ಥ.

ಶಾರ್ಙ್ಗವನ್ನು ಪೂರೈಸಿದಲ್ಲಿ ರಾಮ ಶ್ರೀಹರಿಯೇ ಸರಿ

ಯದೀದಮಾಗೃಹ್ಯ ವಿಕರ್ಷಸಿ ತ್ವಂ
ತದಾ ಹರಿರ್ನಾತ್ರ ವಿಚಾರ್ಯಮಸ್ತಿ।
ಇತಿ ಬ್ರುವಾಣಃ ಪ್ರದದೌ ಧನುರ್ವರಂ
ಪ್ರದರ್ಶಯನ್ ವಿಷ್ಣುಬಲಂ ಹರಾದ್ವರಮ್ ॥ ೫೧ ॥

---

೫೦. ಆದ್ಯೋ ಹಿಶಬ್ದಃ ಅಧಿಕಗುಣಸ್ಯ ವರತ್ವೇ ಪ್ರಸಿದ್ಧಿಮಾಹ। ದ್ವಿತೀಯಸ್ತು ಗ್ರಹಣೇ ಪ್ರತ್ಯಕ್ಷಪ್ರಸಿದ್ಧಿಮಾಹ। ಅಥವಾ ಹಿ ಯಸ್ಮಾತ್ ಕೋಟಿಗುಣಂ ತಸ್ಮಾದ್ವರಂ ಹೀತಿ ಸಂಬಂಧಃ। ಏತತ್ತ್ವಮಪಿ ಗೃಹಾಣೇತಿ ಯೋಜನಾ।
– (ವಾ.)

೫೦. ಸರ್ವದಾ ಹರಿಹಸ್ತಯೋಗ್ಯಮಿತಿ ವಕ್ತುಂ ಪುನಶ್ಚೇತ್ಯನೇನ ಪುನರಿತ್ಯಸ್ಯಾವೃತ್ತ್ಯಾ ಪುನಃ ಪುನರಪೀತ್ಯರ್ಥಃ। ಸರ್ವದೇತಿ ತಾತ್ಪರ್ಯಾರ್ಥಶ್ಚೋಚ್ಯತ ಇತಿ ಸ್ವೀಕರಣಾತ್ ॥
– (ಸ.)

ಅ: ''ನೀನು ಇದನ್ನು ತೆಗೆದುಕೊಂಡು ಹೆದೆಯೇರಿಸಿದೆಯಾದಲ್ಲಿ, ನೀನು ಸಾಕ್ಷಾತ್ ಶ್ರೀಹರಿಯೇ; ಈ ಬಗ್ಗೆ ಸಂಶಯವೇ ಇರದು'' ಹೀಗೆ ನುಡಿಯುತ್ತ ಪರಶುರಾಮ ಶ್ರೇಷ್ಠವಾದ ಆ ಶಾರ್ಙ್ಗಧನುಸ್ಸನ್ನು ಶ್ರೀಹರಿಯ ಬಲವು ಹರನ ಬಲಕ್ಕಿಂತ ಮಿಗಿಲಾದುದೆಂದು ತಿಳಿಸಿಕೊಡಲೆಂದು ರಾಮನ ಕೈಗೆ ನೀಡಿದ.

ವಿ: ಇದನ್ನು ಹೆದೆಯೇರಿಸುವುದಿರಲಿ ಕೈಗೆತ್ತಿಕೊಳ್ಳುವುದೂ ಸಹ ಹರನಿಗಿಂತ ಮಿಗಿಲಾದವರಿಗೆ ಅಸಾಧ್ಯ ಎಂಬುದನ್ನು 'ಆಗೃಹ್ಯ' ಎಂಬ ಪದದಿಂದ ಸೂಚಿಸಿರುವರು.

ಶಾರ್ಙ್ಗ ಪೂರೈಸಿದ ರಾಮ

ಪ್ರಗೃಹ್ಯ ತಚ್ಚಾಪವರಂ ಸ ರಾಘವ-
ಶ್ಚಕಾರ ಸಜ್ಯಂ ನಿಮಿಷೇಣ ಲೀಲಯಾ ।
ಚಕರ್ಷ ಸಂಧಾಯ ಶರಂ ಚ ಪಶ್ಯತಃ
ಸಮಸ್ತಲೋಕಸ್ಯ ಚ ಸಂಶಯಂ ನುದನ್ ॥ ೫೨ ॥

ಅ: ಶ್ರೀರಾಮ ಆ ಸರ್ವಶ್ರೇಷ್ಠವಾದ ಧನುಸ್ಸನ್ನು ತೆಗೆದುಕೊಂಡು ಎವೆಯಿಕ್ಕುವಷ್ಟರಲ್ಲಿ ಅನಾಯಾಸದಿಂದ ಹೆದೆಯೇರಿಸಿದ; ಕಾಣುವ ಸಕಲಜನರಿಗೂ ಸಂಶಯವನ್ನು ಪರಿಹರಿಸಲೆಂದು ಅದರಲ್ಲಿ ಬಾಣವನ್ನು ಹೂಡಿ ಎಳೆದ.

ವಿ: ಪರಶುರಾಮನಿತ್ತ ಶಾರ್ಙ್ಗಧನುಸ್ಸನ್ನು ಹೆದೆಯೇರಿಸಿ ಬಾಣಹೂಡಿದ ಶ್ರೀರಾಮನ ಕಾರ್ಯವು ಆತ ಸಾಕ್ಷಾತ್ ವಿಷ್ಣು ಎಂಬ ವಿಚಾರವನ್ನು ಯಾವ ಸಂದೇಹಕ್ಕೂ ಎಡೆಯಿರದಂತೆ ನಿಶ್ಚಯಿಸುವಷ್ಟು ಪ್ರಧಾನವಾದ ಕಾರ್ಯ ಎಂದು ಭಾವ. ಇದರಂತೆ ಈಗಾಗಲೇ ಆ ಶಾರ್ಙ್ಗಧನುಸ್ಸನ್ನು ಹಾಗೆ ಉಪಯೋಗಿಸಿರುವ ಪರಶುರಾಮನು ಸಹ ಸಾಕ್ಷಾತ್ ಶ್ರೀಹರಿ ಎಂಬುದನ್ನು ಸಹ ಇದು ಸ್ಫುಟಪಡಿಸುವುದು.

ಶ್ರೀಹರಿಯ ಬಲ ಅನಂತ

ಪ್ರದರ್ಶಿತೇ ವಿಷ್ಣುಬಲೇ ಸಮಸ್ತಶೋ
ಹರಾಚ್ಚ ನಿಃಸಂಖ್ಯಿತಯಾ ಮಹಾಧಿಕೇ ।
ಜಗಾದ ಮೇಘೌಘಗಭೀರಯಾ ಗಿರಾ
ಸ ರಾಘವಂ ಭಾರ್ಗವ ಆದಿಪೂರುಷಃ ॥ ೫೩ ॥

---

೫೨. ಸಂಧಾಯ ಚಾಪೇ ಇತಿ ಶೇಷಃ । –(ಜ.)

ಅ: ಈ ತೆರನಾಗಿ ಶ್ರೀರಾಮನಿಂದ ವಿಷ್ಣುವಿನ ಬಲವು ರಮಾಬ್ರಹ್ಮಾದಿ ಸಕಲರಿಗಿಂತಲೂ ಹಾಗೂ ಶಿವನಿಗಿಂತಲೂ ಎಣಿಕೆಯಿರದಷ್ಟು ಅಧಿಕ ಎಂಬುದಾಗಿ ಪ್ರಕಾಶಿತವಾಯಿತು; ಆಗ ಆದಿಪುರುಷನಾದ ನಾರಾಯಣನೇ ಆದ ಶ್ರೀಪರಶುರಾಮ ಶ್ರೀರಾಮನನ್ನು ಕುರಿತು ಮೇಘಗಂಭೀರವಾದ ಮಾತಿನಿಂದ ಹೇಳಿದ.

ಪರಶುರಾಮ ಹೇಳಿದ ಅತುಲನ ಕಥೆ

ಅಲಂ ಬಲಂ ತೇ ಜಗತೋಽಖಿಲಾದ್ವರಂ
ಪರೋಽಸಿ ನಾರಾಯಣ ಏವ ನಾನ್ಯಥಾ ।
ವಿಸರ್ಜಯಸ್ವೇಹ ಶರಂ ತಪೋಮಯೇ
ಮಹಾಸುರೇ ಲೋಕಮಯೇ ವರಾದ್ವಿಭೋಃ ॥ ೫೪ ॥

ಅ: ನಿನ್ನ ಬಲವು ಸಕಲ ಜಗತ್ತಿಗಿಂತಲೂ ಮಿಗಿಲಾದುದು; ಪರಿಪೂರ್ಣವಾದುದು; ನೀನು ಸರ್ವೋತ್ತಮನಾದ ನಾರಾಯಣನೇ ಆಗಿರುವಿ; ಖಂಡಿತವಾಗಿಯೂ ಬೇರೆಯವನಲ್ಲ; ಬ್ರಹ್ಮದೇವರ ವರದಿಂದಾಗಿ ತಪೋಮಯನಾಗಿ ಲೋಕಗಳಲ್ಲೆಲ್ಲ ವ್ಯಾಪಿಸಿರುವ ಮಹಾರಾಕ್ಷಸನ ಮೇಲೆ ಆ ಬಾಣವನ್ನು ಪ್ರಯೋಗಿಸು.

ವಿ: ೧) 'ಅತುಲ' ಎಂಬುದು ಆ ಅಸುರನ ಹೆಸರು. ಅವನ ವರಾದಿಗಳ ಬಗ್ಗೆ ವಿವರಗಳನ್ನು ಮುಂದಿನ ಶ್ಲೋಕಗಳಲ್ಲಿ ನೀಡಿರುವರು.

೨) ಅವನ ಹೆಸರು ಅತುಲ; ನಿಜವಾದ ಅರ್ಥದಲ್ಲಿ 'ಅತುಲ'ನಾದ ಮಹಾವಿಷ್ಣುವೇ ಶ್ರೀರಾಮ – 'ಅತುಲಃ ಶರಭೋ ಭೀಮಃ' (ವಿಷ್ಣುಸಹಸ್ರನಾಮ).

---

೫೪. ಅಲಂ – ಪರಿಪೂರ್ಣಮ್ । – (ವ.)

೫೪. ಅನ್ಯಥಾ – ಜೀವಸಂಘೋ ನ ಭವಸಿ । – (ಜ.)

೫೪. ಅಕ್ಷಯಂ ಮಧುಹಂತಾರಂ ಜಾನಾಮಿ ತ್ವಾಂ ಸುರೇಶ್ವರಮ್ ।
ಧನುಷೋಽಸ್ಯ ಪರಾಮರ್ಶಾತ್ ಸ್ವಸ್ತಿ ತೇಽಸ್ತು ಪರಂತಪ ॥ – ವಾ.ರಾ. (೧/೧೬/೧೭)

೫೪. ಲೋಕಾಸ್ತ್ವಪ್ರತಿಮಾ ರಾಮ ನಿರ್ಜಿತಾಸ್ತಪಸಾ ಮಯಾ ।
ಜಹಿ ತಾನ್ ಶರಮುಖ್ಯೇನ ಮಾ ಭೂತ್ ಕಾಲಸ್ಯ ಪರ್ಯಯಃ ॥
– ಎಂಬ ವಾಲ್ಮೀಕಿರಾಮಾಯಣದ ಮಾತಿನ(ಬಾಲಕಾಂಡ ಸ. ೭೬, ಶ್ಲೋ. ೧೬) ಭಾವ ಇದರಿಂದ ಸ್ಫುಟವಾಗುವುದು.

ಅತುಲನಿಗಿದ್ದ ಬ್ರಹ್ಮನ ವರ

ಪುರಾऽತುಲೋ ನಾಮ ಮಹಾಸುರೋऽಭವ-
ದ್ವರಾತ್ ಸ ತು ಬ್ರಹ್ಮಣ ಆಪ ಲೋಕತಾಮ್ ।
ಪುನಶ್ಚ ತಂ ಪ್ರಾಹ ಜಗದ್ಗುರುರ್ಯದಾ
ಹರಿರ್ಜಿತಃ ಸ್ಯಾದ್ಧಿ ತದೈವ ವಧ್ಯಸೇ ॥ ೫೫ ॥

ಅ: ಹಿಂದೆ ಅತುಲ ಎಂಬ ಮಹಾದೈತ್ಯನಿದ್ದ. ಅವನು ಬ್ರಹ್ಮನ ವರದಿಂದಾಗಿ ಲೋಕ-ಮಯತ್ವವನ್ನು ಸಂಪಾದಿಸಿಕೊಂಡ. ವರವಿತ್ತಮೇಲೆ ಜಗದ್ಗುರುವಾದ ಬ್ರಹ್ಮದೇವರು ಅವನಿಗೆ ಹೇಳಿದ್ದರು; ''ಹರಿಯು ಎಂದು ಸೋಲುವನೋ ಅಂದೇ ನೀನು ಸಾಯುವಿ''.

ಅತುಲನ ಸಂಹಾರಕ್ಕೆಂದು ಪರಶುರಾಮ ಮಾಡಿದ ನಾಟಕ

ಅತೋ ವಧಾರ್ಥಂ ಜಗದಂತಕಸ್ಯ
ಸರ್ವಾಜಿತೋऽಹಂ ಜಿತವದ್ವ್ಯವಸ್ಥಿತಃ ।
ಇತೀರಿತೇ ಲೋಕಮಯೇ ಸ ರಾಘವೋ
ಮುಮೋಚ ಬಾಣಂ ಜಗದಂತಕೇऽಸುರೇ ॥ ೫೬ ॥

ಅ: 'ಲೋಕನಾಶಕನಾದ ಆ ದೈತ್ಯನ ವಿನಾಶಕ್ಕೆಂದೇ ಯಾರಿಗೂ ಸೋಲದ ನಾನು ಸೋತಂತೆ ವರ್ತಿಸಿದೆ'. ಪರಶುರಾಮರು ಇಂತು ನುಡಿಯಲು ಶ್ರೀರಾಮನು ಜಗನ್ನಾಶಕನಾದ ಲೋಕವ್ಯಾಪ್ತನಾದ ಆ ಅಸುರನ ಮೇಲೆ ಆ ಬಾಣವನ್ನು ಬಿಟ್ಟ.

ಅತುಲನಿಗಿದ್ದ ಶಿವನ ವರ - ಬೂದಿಯಾದ ಅತುಲ

ಪುರಾ ವರೋऽನೇನ ಶಿವೋऽಪಲಂಭಿತೋ
ಮುಮುಕ್ಷಯಾ ವಿಷ್ಣುತನುಪ್ರವೇಶನಮ್ ।
ಸ ತೇನ ರಾಮೋದರಗೋ ಬಹಿರ್ಗತ-
ಸ್ತದಾಜ್ಞಯೈವಾಶು ಬಭೂವ ಭಸ್ಮಸಾತ್ ॥ ೫೭ ॥

---

೫೫. 'ಅರ್ಶವಾನರ್ಶ' ಇತಿವತ್ ಲೋಕವಾನ್ ಲೋಕಃ ತಸ್ಯ ಭಾವಃ – ಲೋಕತಾ । ತಾಂ ಲೋಕಮಯತ್ವಮಿತಿ ಯಾವತ್ । ಆಪ ಹಿ ಲೋಕಪ್ರಸಿದ್ಧ್ಯಾ ಯದಾ ಹರಿರ್ಜಿತಃ ಸ್ಯಾದಿತಿ ಸಂಬಂಧಃ ॥ ವಸ್ತುಗತ್ಯಾ 'ಹರೇರ್ನ ಕ್ವಾಪಿ ಪರಾಜಯಃ' ಇತಿ ಬ್ರಹ್ಮಣೋ ಹೃದಯಮ್ । – (ವಾ.)

ಅ: ಹಿಂದೆ ಆ ಅಸುರ ಮೋಕ್ಷಪಡೆಯಬೇಕೆಂಬ ಬಯಕೆಯಿಂದ 'ತಾನು ವಿಷ್ಣುವಿನ ಶರೀರವನ್ನು ಪ್ರವೇಶಿಸಬೇಕು' ಎಂಬ ವರವನ್ನು ಶಿವನಿಂದ ಪಡೆದುಕೊಂಡಿದ್ದ. ಅದರಿಂದಾಗಿ ಪರಶುರಾಮನ ನಾಭಿಪ್ರದೇಶದಲ್ಲಿ ನೆಲೆಸಿದ್ದ ಅವನು ಆಗ ಅವರ ಅಪ್ಪಣೆಯಂತೆ ತ್ವರೆಯಿಂದ ಹೊರಕ್ಕೆ ಬಂದ; ಮತ್ತು ಹಾಗೆ ಹೊರಬರುತ್ತಲೇ ಸುಟ್ಟು ಬೂದಿಯಾದ.

ವಿ: ೧) ಹರಿದ್ವೇಷಿಯಾಗಿದ್ದ ಅವನು ಹಾಗೆ ಪರಶುರಾಮರ ಉದರದಲ್ಲಿ ನೆಲೆಸಲು ಅವನಿಗೆ ಶಿವನು ಕೊಟ್ಟ ವರ ಕಾರಣವಾಗಿತ್ತು. ಆ ಬಾಣಪ್ರಯೋಗದ ಸಮಯದಲ್ಲಿ ಉಗ್ರವಾದ ಬಾಣ ನನ್ನ ಉದರದತ್ತ ಬರುತ್ತಿದೆ; ನೀನು ಹೊರಕ್ಕೆ ತೆರಳು ಎಂದು ಆ ಪರಶುರಾಮನಿಂದ ಆಜ್ಞಪ್ತನಾಗಿ ಹೊರಬಂದ ಮತ್ತು ಆ ಬಾಣದ ಪೆಟ್ಟಿಗೆ ಸುಟ್ಟು ಬೂದಿಯಾದ :

ತಸ್ಯ ನಾಭಿಪ್ರದೇಶೇ ತು ತಪಃ ಕೃತ್ವಾ ಸುದಾರುಣಮ್ ।
ತಿಷ್ಠತ್ಯೇವ ಸದಾ ದೈತ್ಯಸ್ತಂ ಜ್ಞಾತ್ವಾ ರಾಘವೋ ಬಲೀ ।
ತಂ ತು ಭಸ್ಮೀಚಕಾರಾಥ ..... ॥ ಇತಿ ಪಾದ್ಮೇ ॥ – (ಜ.)

೨) ಶ್ರೀರಾಮ ಹೀಗೆ ಅವನನ್ನು ಹೊರ ಹೊರಡಿಸಿ, ಕೊಲ್ಲಿಸುವ ಮೂಲಕ 'ಪರಶು–ರಾಮನ ಉದರದಲ್ಲಿದ್ದರೆ ಮೋಕ್ಷ' ಎಂಬ ಶಿವನ ವರವನ್ನೂ ರಕ್ಷಿಸಿದ ಎಂದು ಭಾವ.

ಇತೀವ ರಾಮಾಯ ಸ ರಾಘವಃ ಶರಂ
ವಿಕರ್ಷಮಾಣೋ ವಿನಿಹತ್ಯ ಚಾಸುರಮ್ ।
ತಪಸ್ತದೀಯಂ ಪ್ರವದನ್ ಮುಮೋದ
ತದೀಯಮೇವ ಹ್ಯಭವತ್ ಸಮಸ್ತಮ್ ॥ ೫೮ ॥

ಅ: ಶ್ರೀರಾಮ ಪರಶುರಾಮನ ಮೇಲೋ ಎಂಬಂತೆ ಆ ಬಾಣವನ್ನು ಪ್ರಯೋಗಿಸಿ ಆ ಅಸುರನನ್ನು ಸಂಹರಿಸಿದ; ಅವರ ತಪಸ್ಸು ತನ್ನಿಂದ ನಾಶವಾಯಿತು ಎಂದು ನುಡಿದು ಹರ್ಷಿಸಿದನು; ಲೋಕದಲ್ಲಿನ ಎಲ್ಲವೂ ಅವನದೇ ಅಲ್ಲವೇ!

---

೫೭. ಮುಮುಕ್ಷಯಾ ವಿಷ್ಣುತನುಪ್ರವೇಶನಾಖ್ಯವರಾತ್ ರಾಮೋದರ ಏವ ನಾಶೇ ಮೋಕ್ಷೋऽಪಿ ಸ್ಯಾದಿತಿ ಮತ್ವಾ ಉಪಾಯಾದ್ಬಹಿರ್ನಿಷ್ಕಾಸಿತ ಇತಿ ಭಾವಃ । – (ವಾ.)

ವಿಷ್ಣುತನುಪ್ರವೇಶನಂ ಮೇ ಸ್ಯಾದಿತಿ ಶೇಷಃ । – (ಜ.)

೫೮. ಉಗ್ರಃ ಶರಃ ಮದುದರಂ ಪ್ರತ್ಯಾಯಾತಿ ತ್ವಂ ಬಹಿರ್ಗಚ್ಛೇತಿ ಪರಶುರಾಮಾಜ್ಞಯಾ । – (ವಾ.)

ವಿಃ ೧) ಶ್ರೀರಾಮನು ವಾಸ್ತವವಾಗಿ ನಾಶಮಾಡಿದ್ದು 'ಅತುಲ'ನೆಂಬ ರಾಕ್ಷಸನನ್ನೇ ಹೊರತು; ಪರಶುರಾಮನ ತಪಸ್ಸನ್ನಲ್ಲ; ಆದರೆ ಗ್ರಂಥಾಂತರದಲ್ಲಿ ಅವನು ಪರಶುರಾಮನ ತಪಸ್ಸನ್ನು ನಾಶಮಾಡಿದ ಎಂಬ ಮಾತು ಉಂಟು. ಶ್ರೀಮದಾಚಾರ್ಯರು ಆ ಮಾತಿನ ಮರ್ಮವನ್ನು ಇಲ್ಲಿ ತಿಳಿಸಿರುವರು.

ಚೇತನಾಚೇತನಾತ್ಮಕವಾದ ಸಮಸ್ತವಿಶ್ವವೂ ಭಗವದಧೀನ; ಅವನ ಅಧೀನವಲ್ಲದ್ದು ಯಾವುದಿದೆ? ಪರಶುರಾಮನು ಆ ಭಗವಂತನೇ; ಅತುಲ ಮತ್ತು ಅವನ ತಪಸ್ಸು ಸಹ ಪರಶುರಾಮನ ಅಧೀನ; ಆದ್ದರಿಂದ ಆ ಅಸುರನ ತಪಸ್ಸು ನಾಶವಾಯಿತು ಎಂದು ಮಾರ್ಮಿಕವಾಗಿ ಶ್ರೀರಾಮ ತಿಳಿಸಿದ ಎಂದು ಭಾವ.

೨) ಪರಶುರಾಮದೇವರ ಉದರದಲ್ಲಿದ್ದ ರಾಕ್ಷಸನು ಆಗ ಸಾಯುತ್ತಿದ್ದಂತೆ, ಸಮಸ್ತ ಲೋಕಗಳಲ್ಲಿ ವ್ಯಾಪಿಸಿದ್ದ ಅವನ ಅಂಶಗಳು ಹೇಗೆ ನಾಶವಾದವು? ಎಂದರೆ, ಉತ್ತರ ಹೀಗಿದೆ: ಆ ಅಸುರನ ಲೋಕವ್ಯಾಪ್ತಿಗೆ ಮೂಲವಾದದ್ದು ಅವನು ಮಾಡಿದ ತಪಸ್ಸು; ಅವನ ತಪಸ್ಸು ಅವನೊಂದಿಗೆ ನಾಶವಾಗುತ್ತಿದ್ದಂತೆ ವ್ಯಾಪಿಸಿದ್ದ ಅವನ ಆ ತಪೋಮೂಲವಾದ ಅಂಶಗಳೂ

---

೫೮. ಗ್ರಂಥಾಂತರೇ ರಾಘವೇಣ ತ್ವದೀಯಂ ತಪಃ ಸರ್ವಂ ದಗ್ಧಮಿತಿ ಪರಶುರಾಮಸ್ಯ ಪರಿಹಾಸಃ ಕೃತಃ ಇತಿ ಕಥಾ ಅಸ್ತಿ। ತಸ್ಯಾ ಭಾವಮಾಹ। ತಪ ಇತಿ। –(ವಾ.)

೫೮. ಅಸುರದಾಹಾತ್ ತದೀಯತಪಸೋ ದಾಹೇ ಸತಿ ತದೀಯಂ ತಸ್ಯ ಪರಶುರಾಮಸ್ಯ ವಿದ್ಯಮಾನಂ ತಪೋ ದಗ್ಧಮಿತಿ ಪ್ರವದನ್ ಪ್ರಕರ್ಷೇಣ ವದನ್ ಮುಹುರ್ಮುಹುರ್ವದನ್ನಿತ್ಯರ್ಥಃ ಮುಮೋದ। –(ವಾ.)

೫೮. ಅಸುರೇಣ ಕೃತಂ ತಪಃ ಕಥಂ ಪರಶುರಾಮತಪಃ ಸ್ಯಾದಿತ್ಯತ ಉಕ್ತಂ । ತದೀಯಮೇವೇತಿ । ಚೇತನಾಚೇತನಾತ್ಮಕಂ ಸಮಸ್ತಜಗತ್ ಪರಶುರಾಮಾಧೀನತ್ವಾತ್ ತದೀಯಮೇವಾಭವದ್ಧೀತಿ। –(ವಾ.)

೫೮. ಹಿಶಬ್ದೇನ 'ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ' ಇತ್ಯಾದಿಪ್ರಮಾಣಪ್ರಸಿದ್ಧಿಂ ಸೂಚಯತಿ। ಅತೋ ಜಗದಂತಃಪಾತಿ ತಪಸೋSಪಿ ತದೀಯತ್ವಮಿತಿ ಭಾವಃ। –(ವಾ.)

೫೮. ನನು ರಾಮೋದರಸ್ಯ ರಕ್ಷಸೋ ವಿನಾಶೇ ಸಮಸ್ತಲೋಕಾಂತಃಪ್ರವಿಷ್ಟತದಂಶಾನಾಂ ಕಥಂ ನಾಶ ಇತಿ ಚೇತ್, ಇತ್ಥಮ್ । ಲೋಕವ್ಯಾಪ್ತೇರ್ಮೂಲೀಭೂತತಪೋನಾಶಾದಂಶಿನೋ ನಾಶಾತ್ ಶರಪ್ರಯೋಗಸಮಯೇ ರಾಮ-ಜಪಮಂತ್ರಸಾಮರ್ಥ್ಯಾಚ್ಚೇತಿ ಬ್ರೂಮಃ। ಅತ ಏವ ತಪೋ ದಗ್ಧಮಿತಿ ಪ್ರವದನ್ ಮುಮೋದ ಇತ್ಯುಕ್ತಂ। –(ವಾ.)

೫೮. ತಪೋಮಯೋ ಅಸುರೋ ಮಯಾ ನಾಶಿತಃ ಇತಿ ವಕ್ತವ್ಯೇ ತಪೋ ನಾಶಿತಮಿತ್ಯುಕ್ತಂ ಇತಿ ಭಾವಃ। –(ವ.)

ಅತುಲಾಖ್ಯಾಸುರಸ್ಯ ತಪಃಪ್ರಧಾನತ್ವಾತ್ ತಪೋಮಯ ಇತಿ ನಾಮ। ಲೋಕವ್ಯಾಪ್ತತ್ವಾತ್ ಲೋಕಮಯ ಇತಿ ನಾಮ। ಅಸುರಮೋಹನಾರ್ಥಂ ತದೀಯಂ ಭಾರ್ಗವಸಂಬಂಧಿ। ತಪಸ್ತ್ವದೀಯಮಿತಿ ಕ್ವಚಿತ್ ಪಾಠಃ। –(ಜ.)

೫೮. ಜಗತಿ ಸ್ಥಿತಃ ತಪೋ ಅಸುರಃ ತದೀಯ ಏವೇತ್ಯರ್ಥಃ। –(ಜ.)

ನಾಶವಾದವು ಎಂದು ತಿಳಿಯಬೇಕು. ಇದಕ್ಕೆಲ್ಲ ಶ್ರೀರಾಮನ ಶರಪ್ರಯೋಗ ಮತ್ತು ಅವನ ಅಪಾರಕೌಶಲವೇ ಮೂಲಕಾರಣ.

೩) ತಪಸ್ಸು ಎಂಬುದಕ್ಕೆ ತಪೋಮಯನಾದ ಅಸುರ ಎಂಬ ಅರ್ಥವನ್ನೂ ಮಾಡಿ ವಿಶೇಷಾರ್ಥಗಳನ್ನು ಕೆಲವು ವ್ಯಾಖ್ಯಾನಕಾರರು ಬರೆದಿರುವರು.

ರಾಮ ಪರಶುರಾಮ ಇಬ್ಬರೂ ಶ್ರೀಹರಿಯೇ

ನಿರಂತರಾನಂದವಿಬೋಧಸಾರಃ
ಸ ಜಾನಮಾನೋಽಖಿಲಮಾದಿಪೂರುಷಃ ।
ವದನ್ ಶ್ರುಣೋತೀವ ವಿನೋದತೋ ಹರಿಃ
ಸ ಏಕ ಏವ ದ್ವಿತನುರ್ಮುಮೋದ ॥ ೫೯ ॥

ಅ: ಶ್ರೀಹರಿಯು ತನ್ನಿಂದ ಬೇರೆಯಲ್ಲದ ಆನಂದ ಜ್ಞಾನಗಳಿಂದಾಗಿ ಸರ್ವಶ್ರೇಷ್ಠನಾದವನು. ಆದ್ದರಿಂದಲೇ ಅವನು ಸರ್ವೋತ್ತಮನು; ಅವನು ಸಕಲರಿಗೂ ಆದಿಯಾದ ಪರಮಪುರುಷ; ಎಲ್ಲವನ್ನೂ ಸದಾ ಬಲ್ಲವ. ಆದರೂ ಲೀಲೆಯಿಂದ ಒಂದು ರೂಪದಿಂದ ನುಡಿದಂತೆ ಮಾಡಿ ಮತ್ತೊಂದು ರೂಪದಿಂದ ಕೇಳುವಂತೆ ಮಾಡಿ ಮೂಲತಃ ಒಬ್ಬನೇ ಆಗಿ ಆನಂದಿಸಿದ.

ವಿ: ೧) ಪರಶುರಾಮರೂಪದಿಂದ ಮಾತಾಡುತ್ತಾ ರಾಮರೂಪದಿಂದ ಕೇಳುವನು; ರಾಮರೂಪದಿಂದ ಮಾತಾಡುತ್ತಾ ಪರಶುರಾಮರೂಪದಿಂದ ಕೇಳುವನು; ಮೂಲತಃ ರಾಮ ಪರಶುರಾಮರಿಬ್ಬರೂ ಸಾಕ್ಷಾತ್ ನಾರಾಯಣನ ರೂಪಗಳು; ಪರಸ್ಪರ ಸ್ವಲ್ಪವೂ ಭೇದ–ಎಲ್ಲದವರು; ಮೂಲರೂಪದಷ್ಟೇ ಪರಿಪೂರ್ಣರು; ಆದರೂ ಅವರು ಹಾಗೆ ಮಾಡಿದ್ದು ಲೀಲೆಯಿಂದಲೇ ಹೊರತು; ಅಜ್ಞಾನಾದಿ ಇತರ ಯಾವ ಕಾರಣದಿಂದಲೂ ಅಲ್ಲ ಎಂದು ಭಾವ.

---

೫೯. ಸರ್ವಾವತಾರಾಭಿನ್ನೋಽಪಿ ಸರ್ವಶಕ್ತಿರಪಿ ಸ್ವಯಮ್ ।
ಪೂಜ್ಯಪೂಜಕನೀಚೋಚ್ಚಂ ಮೋಹನಾಯ ದುರಾತ್ಮನಾಮ್ ॥
ಅಖಂಡೈಕರಸೋ ವಿಷ್ಣುರ್ದರ್ಶಯೇತ್ ತತ್ರ ತತ್ರ ಹಿ ॥ – ಭಾ.ತಾ.(೧೦/೫೨/೨೧)

೫೯. ನಿರ್ಭೇದಾನಂದಜ್ಞಾನಘನಃ । – (ವ.)

೫೯. ನಿರಂತರಾಭ್ಯಾಂ ಭೇದರಹಿತಾಭ್ಯಾಂ ಸ್ವರೂಪಭೂತಾಭ್ಯಾಮಿತಿ ಯಾವತ್ । ಆನಂದವಿಬೋಧಾಭ್ಯಾಂ ಸುಖಚಿದ್ಭ್ಯಾಂ ಸಾರಃ ಶ್ರೇಷ್ಠಃ । – (ಜ.)

೨) ಶ್ರೀಮದ್ಭಾಗವತ ಮತ್ತು ಹರಿವಂಶಗಳಲ್ಲಿ ಬರುವ ಪರಶುರಾಮ ಮತ್ತು ಶ್ರೀಕೃಷ್ಣರೂಪಗಳ ಸಮಾಗಮಪ್ರಸಂಗದಲ್ಲೂ ಇದೇ ತೆರನಾದ ನಿರ್ಣಯವನ್ನು ತಿಳಿಯಬೇಕು.

ಸ ಚೇಷ್ಟಿತಂ ಚೈವ ನಿಜಾಶ್ರಯಸ್ಯ
ಜನಸ್ಯ ಸತ್ತತ್ತ್ವವಿಬೋಧಕಾರಣಮ್ ।
ವಿಮೋಹಕಂ ಚಾನ್ಯತಮಸ್ಯ ಕುರ್ವನ್
ಚಿಕ್ರೀಡ ಏಕೋಽಪಿ ನರಾಂತರೇ ಯಥಾ ॥ ೬೦ ॥

ಅ: ಅವನ ವರ್ತನೆಯು ತನ್ನನ್ನು ಆಶ್ರಯಿಸಿದ ಭಕ್ತಜನರಿಗೆ ಸಮೀಚೀನತತ್ತ್ವಜ್ಞಾನಕ್ಕೆ ಕಾರಣವಾದರೆ, ಹಾಗಲ್ಲದ ಅಯೋಗ್ಯಜನರಿಗೆ ಮಿಥ್ಯಾಜ್ಞಾನಕ್ಕೆ ಕಾರಣ; ಹಾಗೆ ಮಾಡಲೆಂದೇ ಅವನು ಮೂಲತಃ ಒಬ್ಬನೇ ಆದರೂ ಬೇರೊಬ್ಬ ಮನುಷ್ಯನಲ್ಲಿ ಹೇಗೋ ಹಾಗೆ ವರ್ತಿಸುತ್ತಾ ವಿಹರಿಸಿದ.

ವಿ: ೧) ಒಬ್ಬನೇ ದೇವತೆ ಅನೇಕರೂಪಗಳಿಂದ ಅವತರಿಸಿದಾಗ, ಆ ರೂಪಗಳು ಪರಸ್ಪರ ಭೇಟಿಯಾದಾಗಲೂ ಅವು ಒಂದೇ ಎಂಬ ರಹಸ್ಯವನ್ನು ಬಿಟ್ಟುಕೊಡದೆ, ಬೇರೆ ಬೇರೆ ಎಂಬಂತೆಯೇ ವ್ಯವಹರಿಸಬೇಕು ಎಂಬ ಧರ್ಮಸೂಕ್ಷ್ಮವನ್ನು ಶ್ರೀಹರಿಯು ತನ್ನ ಈ ವರ್ತನೆಯಿಂದ ಭಕ್ತಜನಕ್ಕೆ ತೋರಿಸಿ ತತ್ತ್ವಜ್ಞಾನ ನೀಡಿದ. ಅಯೋಗ್ಯಜನರಿಗೆ ತಾವಿಬ್ಬರೂ ಭಿನ್ನರು, ತಾರತಮ್ಯೋಪೇತರು ಎಂಬ ಭ್ರಮೆಯನ್ನು ಹುಟ್ಟಿಸಿ ವಿನಾಶವನ್ನುಂಟುಮಾಡಿದ ಎಂದು ಭಾವ.

೨) ವಾಸಿಷ್ಠಕೃಷ್ಣ – ಯಾದವಕೃಷ್ಣ, ಯಾದವಕೃಷ್ಣ ಮತ್ತು ಪರಶುರಾಮ, ಯಜ್ಞ – ಋಷಭ, ಶ್ರೀನಿವಾಸ – ಭೂವರಾಹ ಇತ್ಯಾದಿ ರೂಪಗಳಲ್ಲೂ ಪರಮಾತ್ಮನು ಹೀಗೆಯೇ ವರ್ತಿಸಿರುವನು. ಇದರಂತೆ ಶ್ರೀಮಹಾಲಕ್ಷ್ಮಿಯು ತಮ್ಮ ರುಕ್ಮಿಣೀ ಸತ್ಯಭಾಮಾ ರೂಪಗಳಲ್ಲಿ ವರ್ತಿಸಿರುವರು; ವಾಯುದೇವರು ಹನುಮಂತ ಮತ್ತು ಭೀಮರೂಪಗಳ ಸಮಾಗಮಕಾಲದಲ್ಲಿ ವರ್ತಿಸಿರುವರು ಎಂದು ತಿಳಿಯಬೇಕು (೨೨/೨೮೨–೨೮೮).

---

೬೦. ಅಹಮಪಿ ಹರಿಃ ರಾಮೋಽಪಿ ಹರಿಃ ಇತಿ ಸತ್ತತ್ತ್ವವಿಬೋಧಕಾರಣಂ। – (ವಾ.)

೬೦. ಏಕೋ ಜಿತಃ ಏಕಃ ಪರಾಜಿತಃ ಇತಿ ವಿಮೋಹಕಮ್ । – (ವಾ.)

೬೦. ಅನ್ಯತಮಸ್ಯ ಅಯೋಗ್ಯಜನಸ್ಯ। – (ವಾ.)

ಅತಿಶಯೇನ ಅನ್ಯಃ – ಅನ್ಯತಮಃ । ಅನ್ಯೋ ಮನುಷ್ಯಾಧಮಃ – ಜಾತಾವೇಕವಚನಂ ಅನ್ಯತಮಃ – ಅತಿಶಯೇನ ಅಭಕ್ತ ಇತ್ಯರ್ಥಃ। ಅಸುರಸಂಘ ಇತಿ ಯಾವತ್ । – (ಜ.)

ರಾಮನಲ್ಲಿ ಐಕ್ಯನಾದ ಪರಶುರಾಮ

ತತಃ ಸ ಕಾರುಣ್ಯನಿಧಿರ್ನಿಜೇ ಜನೇ
ನಿತಾಂತಮೈಕ್ಯಂ ಸ್ವಗತಂ ಪ್ರಕಾಶಯನ್ ।
ದ್ವಿಧೇವ ಭೂತ್ವಾ ಭೃಗುವರ್ಯ ಆತ್ಮನಾ
ರಘೂತ್ತಮೇನೈಕ್ಯಮಗಾತ್ ಸಮಕ್ಷಮ್ ॥ ೬೧ ॥

ಅ: ಅನಂತರ ತನ್ನ ಭಕ್ತಜನರಲ್ಲಿ ಕರುಣಾಸಮುದ್ರನಾದ ಪರಶುರಾಮ ತನ್ನ ಅತ್ಯಂತಾಭೇದವನ್ನು ತೋರಿಸಲೆಂದು ಮೊದಲಿಗೆ ಭಿನ್ನನೋ ಎಂಬಂತೆ ಇದ್ದು ಅನಂತರ ತನ್ನ ರೂಪವೇ ಆದ ಶ್ರೀರಾಮರೂಪದೊಂದಿಗೆ ಪ್ರತ್ಯಕ್ಷವಾಗಿಯೂ ಐಕ್ಯವನ್ನು ಹೊಂದಿದ.

ವಿ: ೧) ತಮ್ಮಿಬ್ಬರಲ್ಲಿರುವ ಸ್ವಗತಭೇದವಿವರ್ಜಿತತತ್ತ್ವವನ್ನು ರೂಪರೂಪಗಳಲ್ಲಿನ ಐಕ್ಯ-ವನ್ನೂ ಹೀಗೆ ಸಾಕ್ಷಾತ್ತಾಗಿ ತೋರಿಸಿದ ಶ್ರೀಹರಿಯು ಅದೆಷ್ಟು ಭಕ್ತವತ್ಸಲ! ಎಂದು ಭಾವ.

೨) ತತಃ ಪರಶುರಾಮಸ್ಯ ದೇಹಾನ್ನಿರ್ಗತ್ಯ ವೈಷ್ಣವಮ್ ।
ಪಶ್ಯತಾಂ ಸರ್ವದೇವಾನಾಂ ತೇಜೋ ರಾಮಮುಪಾಗಮತ್॥ –ನರಸಿಂಹಪುರಾಣ

ಮತ್ತೆ ಹೊರನಡೆದ ಪರಶುರಾಮ

ಸಮೇತ್ಯ ಚೈಕ್ಯಂ ಜಗತೋಽಭಿಪಶ್ಯತಃ
ಪ್ರಣುದ್ಯ ಶಂಕಾಮಖಿಲಾಂ ಜನಸ್ಯ ।
ಪ್ರದಾಯ ರಾಮಾಯ ಧನುರ್ವರಂ ತದಾ
ಜಗಾಮ ರಾಮಾನುಮತೋ ರಮಾಪತಿಃ ॥ ೬೨ ॥

ಅ: ಜಗತ್ತು ನೋಡುತ್ತಿದ್ದಂತೆಯೇ ಅತ್ಯಂತ ಐಕ್ಯವನ್ನು ಹೊಂದಿ ರಮಾಪತಿಯಾದ ಪರಶುರಾಮನು ತನ್ನ ಭಕ್ತರ ಸಕಲ ಸಂಶಯವನ್ನು ಪರಿಹರಿಸಿದ; ಶ್ರೇಷ್ಠವಾದ ಆ ಶಾರ್ಙ್ಗ-ಧನುಸ್ಸನ್ನು ಶ್ರೀರಾಮನಿಗೆ ನೀಡಿದ ಮತ್ತು ಶ್ರೀರಾಮನ ಅನುಮತಿಯನ್ನು ಪಡೆದು ತೆರಳಿದ.

---

೬೧. ಇಂದ್ರಾರ್ಜುನವದ್ವಿಶೇಷರಹಿತಂ .... । ಆದೌ ಇತಿ ಶೇಷಃ । –(ಜ.)

೬೨. ಅಖಿಲಾಂ ಶಣಕಾಂ–ಸ್ವರೂಪಭೇದವಿಷಯಾಮ್ । –(ವ.)
ಪ್ರಾದುರ್ಭಾವಾದಿಭೇದಶಂಕಾಂ ... । –(ಜ.)

೬೨. ರಾಮಂ ದಾಶರಥಿಂ ರಾಮೋ ಜಾಮದಗ್ನ್ಯಃ ಪ್ರಪೂಜಿತಃ ।
ತತಃ ಪ್ರದಕ್ಷಿಣೀಕೃತ್ಯ ಜಗಾಮಾತ್ಮಗತಿಂ ಪ್ರಭುಃ ॥ –ವಾ.ರಾ. (೧/೭೬/೨೪)

ವಿ: ೧) ರಾಮರೂಪದಲ್ಲಿ ಪ್ರವೇಶಿಸಿ ಕ್ಷಣಕಾಲ ಅಲ್ಲಿಯೇ ಇದ್ದು ತಮ್ಮಿಬ್ಬರಲ್ಲೂ ಭೇದ ಯಾವ ತೆರನಾಗಿಯೂ ಇಲ್ಲ ಎಂಬುದನ್ನು ಜಗತ್ತಿಗೆ ಸಾರಿ ಪರಶುರಾಮ ಪುನಃ ಹೊರಕ್ಕೆ ಬಂದು ಆ ಧನುಸ್ಸನ್ನು ರಾಮನಿಗೇ ನೀಡಿ ಅಲ್ಲಿಂದ ತೆರಳಿದ ಎಂದು ಭಾವ.

೨) ಶ್ರೀರಾಮಪರಶುರಾಮರ ಸಮಾಗಮದ ಈ ಅಪೂರ್ವಹಿನ್ನೆಲೆ ತಿಳಿಯದೆ ಪರಶುರಾಮನು ಸೋತ ಎಂದು ಭ್ರಮಿಸಿದ ಅತುಲನು ಸತ್ತು ತಮಸ್ಸಿಗೆ ತೆರಳಿದನು. ಈ ಭಾಗವನ್ನು ಪರಶುರಾಮಗರ್ವಭಂಗ ಪ್ರಸಂಗವೆಂದು ತಪ್ಪಾಗಿ ತಿಳಿಯುವ ಜನರು ಸಹ ಹೀಗೆಯೇ ಅನರ್ಥಕ್ಕೆ ಗುರಿಯಾಗುವರು ಎಂಬ ಪ್ರಮೇಯವೂ ಇದರಿಂದ ಸೂಚಿತ ಎಂದು ತಿಳಿಯಬೇಕು.

ಅಯೋಧ್ಯೆಯಲ್ಲಿ ಸೀತಾರಾಮರು

ತತೋ ನೃಪೋಽತ್ಯರ್ಥಮುದಾಽಭಿಪೂರಿತಃ
ಸುತೈಃ ಸಮಸ್ತೈಃ ಸ್ವಪುರೀಮವಾಪ ಹ ।
ರೇಮೇಽಥ ರಾಮೋಽಪಿ ರಮಾಸ್ವರೂಪಯಾ
ತಯೈವ ರಾಜಾತ್ಮಜಯಾ ಹಿ ಸೀತಯಾ ॥ ೬೩ ॥

ಅ: ಅನಂತರ ದಶರಥರಾಜ ಬಹಳವಾದ ಸಂತೋಷದಿಂದ ಕೂಡಿದವನಾಗಿ ತನ್ನ ಸಕಲ ಪುತ್ರರಿಂದೊಡಗೂಡಿ ತನ್ನ ಪಟ್ಟಣವನ್ನು ಸೇರಿದ. ಅನಂತರ ರಾಮನು ಸಹ ರಾಜಪುತ್ರಿಯಾಗಿ ಅವತರಿಸಿದ ರಮಾಸ್ವರೂಪಳಾದ ಸೀತೆಯೊಂದಿಗೆ ರಮಿಸಿದ.

ಯಥಾ ಪುರಾ ಶ್ರೀರಮಣಃ ಶ್ರಿಯಾ ತಯಾ
ರತೋ ನಿತಾಂತಂ ಹಿ ಪಯೋಧಿಮಧ್ಯೇ ।
ತಥಾ ತ್ವಯೋಧ್ಯಾಪುರಗೋ ರಘೂತ್ತಮೋಽ-
ಪ್ಯುವಾಸ ಕಾಲಂ ಸುಚಿರಂ ರತಸ್ತಯಾ ॥ ೬೪ ॥

ಅ: ಶ್ರೀರಾಮನು ಶ್ರೀರಮಣನಾದ ತಾನು ಸ್ವತಃ ಮಹಾಲಕ್ಷ್ಮಿಯಾದ ಆ ಸೀತೆಯೊಂದಿಗೆ ಕ್ಷೀರಸಾಗರಮಧ್ಯದಲ್ಲಿ ಹೇಗೆ ಅತ್ಯಂತವಾಗಿ ಕ್ರೀಡಿಸಿದನೋ ಹಾಗೆ ಅಯೋಧ್ಯಾಪುರದಲ್ಲಿ ನೆಲೆಸಿ ಆ ಸೀತೆಯೊಂದಿಗೆ ವಿಹರಿಸುತ್ತ ಬಹುಕಾಲ ವಾಸಿಸಿದ.

ವಿ: ೧) ಹಾಗೆ ಅಯೋಧ್ಯೆಯಲ್ಲಿ ನೆಲೆಸಿದ್ದು 'ಹನ್ನೆರಡು ವರ್ಷಕಾಲ' ಎಂದು ರಾಮಾಯಣದಲ್ಲಿದೆ.

---

೬೩. ಅಪಿಶಬ್ದೇನ ನೃಪೋಽಪಿ ರೇಮೇ ಇತ್ಯರ್ಥಃ। –(ಜ.)

೬೩. 'ತಯೈವ' ಇತ್ಯನೇನ ರಾಮಸ್ಯ ಭಾರ್ಯಾಂತರಂ ನಿವಾರಯತಿ। –(ವ.)

೨) ವಾಲ್ಮೀಕಿರಾಮಾಯಣದ ಶ್ಲೋಕವೂ ಇದೇ ಭಾವವನ್ನು ವಿವರಿಸುವುದು (೧/೭೭/೩೦);

ತಯಾ ಸ ರಾಜರ್ಷಿಸುತೋಽಭಿರಾಮಯಾ ಸಮೇಯಿವಾನುತ್ತಮರಾಜಕನ್ಯಯಾ ।
ಅತೀವ ರಾಮಃ ಶುಶುಭೇಽತಿಕಾಮಯಾ ವಿಭುಃ ಶ್ರಿಯಾ ವಿಷ್ಣುರಿವಾಮರೇಶ್ವರಃ ॥

ರಾಮನ ಕಾರ್ಯಗಳು ಇತರರಿಗೆ ಅಸಾಧ್ಯ

ಇಮಾನಿ ಕರ್ಮಾಣಿ ರಘೂತ್ತಮಸ್ಯ
ಹರೇರ್ವಿಚಿತ್ರಾಣ್ಯಪಿ ನಾದ್ಭುತಾನಿ ।
ದುರಂತಶಕ್ತೇರಥ ಚಾಸ್ಯ ವೈಭವಂ
ಸ್ವಕೀಯಕರ್ತವ್ಯತಯಾಽನುವರ್ಣ್ಯತೇ ॥ ೬೫ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಬಾಲಕಾಂಡಕಥಾನಿರೂಪಣಂ ನಾಮ ಚತುರ್ಥೋಽಧ್ಯಾಯಃ ॥ ೪ ॥

ಅ: ರಘೂತ್ತಮನಾದ ಶ್ರೀರಾಮನ ಈ ಕಾರ್ಯಗಳು ವಿಚಿತ್ರವಾದರೂ, ಎಣೆಯಿರದ ಸಾಮರ್ಥ್ಯದ ಅವನಿಗೆ ಏನೂ ಅದ್ಭುತವಲ್ಲ. ಅವನ ಅಂತಹ ವೈಭವವನ್ನು ನಾವು ನಮ್ಮ ಕರ್ತವ್ಯವೆಂಬ ಕಾರಣದಿಂದ ವರ್ಣಿಸುತ್ತಿರುವೆವು.

ವಿ: ಶ್ರೀಬ್ರಹ್ಮಾದಿಗಳ ದೃಷ್ಟಿಯಿಂದ ವಿಚಾರಮಾಡಿದರೆ ಶ್ರೀರಾಮನ ಪ್ರತಿಯೊಂದು ಕಾರ್ಯವೂ ಅತ್ಯದ್ಭುತ; ಆದರೆ ಅನಂತಮಾಹಾತ್ಮ್ಯವನ್ನು ಉಳ್ಳ ಅವನಿಗೆ ಇದು ಯಾವ ವಿಚಿತ್ರವೂ ಅಲ್ಲ; ಅಂತಹ ಶ್ರೀಹರಿಯ ಮಾಹಾತ್ಮ್ಯವನ್ನು ವರ್ಣಿಸುವುದು ಪ್ರತಿಯೊಬ್ಬ ಯೋಗ್ಯಚೇತನನ ಮುಖ್ಯಕರ್ತವ್ಯ ಎಂಬ ಕಾರಣದಿಂದ ಮಾತ್ರ ಇಷ್ಟೆಲ್ಲ ವರ್ಣಿಸಲಾಗುತ್ತಿದೆ ಎಂದು ಭಾವ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಬಾಲಕಾಂಡಕಥಾನಿರೂಪಣ'ವೆಂಬ ನಾಲ್ಕನೆಯ ಅಧ್ಯಾಯ ಮುಗಿಯಿತು ॥ ೪ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೬೫. ಲೋಕಸ್ಯ ವಿಚಿತ್ರಾಣ್ಯಪಿ ಹರೇರದ್ಭುತಾನಿ ನೇತಿ ಸಂಬಂಧಃ । –(ವಾ.)
ಅನ್ಯೇಷಾಂ ವಿಚಿತ್ರಾಣಿ ಆಶ್ಚರ್ಯಾಣ್ಯಪಿ ಹರೇರ್ನಾದ್ಭುತಾನಿ । –(ವ.)
ಬ್ರಹ್ಮಾದೀನಾಮಾಶ್ಚರ್ಯಕರಾಣ್ಯಪಿ । –(ಜ.)
೬೫. ದುರಂತಶಕ್ತೇರಿತಿ ಹೇತುಗರ್ಭವಿಶೇಷಣಂ । ಅಪರಿಮಿತಶಕ್ತಿತ್ವಾದಿತ್ಯರ್ಥಃ । –(ಜ.)

ಅಧ್ಯಾಯ - ೫

(ಶ್ರೀರಾಮಚರಿತೇ ಹನೂಮದ್ದರ್ಶನಮ್)

(ವನಗಮನ, ಭರತನ ರಾಮಭಕ್ತಿ, ವಾಯಸಪ್ರಸಂಗ, ಶರಭಂಗನಿಗೆ ಸದ್ಗತಿ, ವಿರಾಧವಧೆ, ಮಾರೀಚವಧೆ, ಸೀತಾಕೃತಿ, ಕಬಂಧ ಶಬರಿಯರ ಉದ್ಧಾರ)

ಶ್ರೀರಾಮನ ಪಟ್ಟಾಭಿಷೇಕದ ಸಿದ್ಧತೆ - ಮಂಥರೆಯಿಂದ ವಿಘ್ನ

ಇತ್ಥಂ ವಿಶ್ವೇಶ್ವರೇಽಸ್ಮಿನ್ನಖಿಲಜಗದವಸ್ಥಾಪ್ಯ ಸೀತಾಸಹಾಯೇ
ಭೂಮಿಷ್ಠೇ ಸರ್ವಲೋಕಾಸ್ತುತುಷುರನುದಿನಂ ವೃದ್ಧಭಕ್ತ್ಯಾ ನಿತಾಂತಮ್ ।
ರಾಜಾ ರಾಜ್ಯಾಭಿಷೇಕೇ ಪ್ರಕೃತಿಜನವಚೋ ಮಾನಯನ್ನಾತ್ಮನೋಽರ್ಥ್ಯಂ
ದಧ್ಯೌ ತನ್ಮಂಥರಾಯಾಃ ಶ್ರುತಿಪಥಮಗಮದ್ಭೂಮಿಗಾಯಾ ಅಲಕ್ಷ್ಮ್ಯಾಃ ॥ ೧ ॥

ಅ: ಈ ತೆರನಾಗಿ ಕಾರ್ಯಗಳಿಂದ ಜಗದೊಡೆಯನಾದ ಶ್ರೀರಾಮನು ಸಕಲ ಜಗತ್ತನ್ನು ನೆಲೆಗೊಳಿಸಿ ಸೀತಾಸಮೇತನಾಗಿ ಭೂಮಿಯಲ್ಲಿ ನೆಲೆಸಿದ; ಅದರಿಂದಾಗಿ ಸಕಲ ಜನರೂ ಪ್ರತಿದಿನವೂ ಹೆಚ್ಚುತ್ತಾ ಪಕ್ವಗೊಳ್ಳುತ್ತಿದ್ದ ಭಕ್ತಿಯಿಂದ ಬಹಳವಾಗಿ ಸಂತೋಷಪಡುತ್ತಿದ್ದರು; ಆ ವೇಳೆಗೆ ದಶರಥರಾಜ ಮಂತ್ರಿಜನರ ಮಾತನ್ನು ಮನ್ನಿಸಿ, ತನಗೆ ಇಷ್ಟವಾಗಿದ್ದ ಶ್ರೀರಾಮನ ರಾಜ್ಯಾಭಿಷೇಕಕ್ಕೆ ತೊಡಗಿದ; ಅದು ಮಂಥರೆಯ ಕಿವಿಗೆ ಬಿದ್ದಿತು; ಅವಳಾದರೋ ಭೂಮಿಗಿಳಿದು ಬಂದಿದ್ದ ಅಲಕ್ಷ್ಮಿ.

ವಿ: ೧) ನಾಲ್ಕನೆಯ ಅಧ್ಯಾಯದಲ್ಲಿ ರಾಮಾಯಣದ ಬಾಲಕಾಂಡಕಥೆಯನ್ನು ನಿರ್ಣಯಿಸಿ ಹೇಳಿದ ಶ್ರೀಮದಾಚಾರ್ಯರು ಈ ಐದನೆಯ ಅಧ್ಯಾಯದಲ್ಲಿ ಮೊದಲ ೧೬ ಶ್ಲೋಕಗಳಲ್ಲಿ ಅಯೋಧ್ಯಾಕಾಂಡ ಮತ್ತು ಅನಂತರದ ಶ್ಲೋಕಗಳಲ್ಲಿ ಕಿಷ್ಕಿಂಧಾಕಾಂಡಗಳ ನಿರ್ಣಯವನ್ನು ಮಾಡುತ್ತಿರುವರು.

---

೧. ಇತ್ಥಂ – ರಘುಕುಲೇ ಉತ್ಪದ್ಯ ತಾಟಕಾಂ ನಿಹತ್ಯ ವಿಶ್ವಾಮಿತ್ರಯಜ್ಞಕಂಟಕಂ ಪರಿಹೃತ್ಯ ಅಹಲ್ಯಾಯಾ ಶಾಪಂ ವಿಮೋಚ್ಯ, ಶೈವಂ ಧನುರ್ವಿಭಜ್ಯ, ಸೀತಾಯಾಃ ಪಾಣಿಂ ಪರಿಗೃಹ್ಯ, ಲೋಕಮಯಾಖ್ಯಂ ರಾಕ್ಷಸಂ ಭಸ್ಮೀಕೃತ್ಯ, ನೈಜಂ ವೈಷ್ಣವಂ ಧನುಂ ರಾಮಾದವಾಪ್ಯ ಅಯೋಧ್ಯಾಯಾಂ ದ್ರಷ್ಟೃ- ಸಕಲಜನಮನೋರಂಜಕತಯಾ ನಿವಸತಿ ಸತಿ ಇತ್ಯರ್ಥಃ। –(ವಾ)

೧. ಅಸ್ಮಿನ್ ರಾಮಾಖ್ಯೇ ವಿಶ್ವೇಶ್ವರೇ ಅನುದಿನಂ ಪ್ರತಿದಿನಂ ವೃದ್ಧಭಕ್ತ್ಯಾನಿಮಿತ್ತೇನ ನಿಖಿಲಜಗದವಸ್ಥಾಪ್ಯ ಸಮರ್ಪಯಿತ್ವಾ 'ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್ ।' ಇತಿ ಸ್ಮರಣಾತ್ ಸಮರ್ಪ್ಯ। ತುತುಷುರಿತಿ ಯೋಜನಾ। –(ಜ)

'ಅಲಕ್ಷ್ಮ್ಯಾಃ ದಾರಿದ್ರ್ಯಾಭಿಮಾನಿತ್ವಾತ್ತನ್ನಾಮಿಕಾಯಾಃ ಲಕ್ಷ್ಮೀವಿರೋಧಿನ್ಯಾಃ ಜ್ಯೇಷ್ಠಾನಾಮ್ನ್ಯಾಃ ಕಲಿಪತ್ನ್ಯಾಃ'। –(ವಾ)

೨) ವಿಶ್ವೇಶ್ವರನಾದ ಶ್ರೀರಾಮನಲ್ಲಿ ಪ್ರತಿದಿನ ಹೆಚ್ಚುತ್ತಿದ್ದ ಪಕ್ವಭಕ್ತಿಯಿಂದ ಸಕಲಜನರೂ ಪತ್ನಿಪುತ್ರಾದಿ ಸಕಲಜಗತ್ತನ್ನೂ ಸಮರ್ಪಿಸಿ ಆನಂದಿಸಿದರು ಎಂಬ ವಿಶೇಷಾರ್ಥವನ್ನು ಜನಾರ್ದನ–ಭಟ್ಟರು ಬರೆದಿರುವರು.

೩) ಅಲಕ್ಷ್ಮಿಯು ಜೀವಾಧಮನಾದ ಕಲಿಯ ಪತ್ನಿ; 'ಜೇಷ್ಠಾ' ಎಂದು ಇವಳಿಗೆ ಹೆಸರು; ಇವಳು ದಾರಿದ್ರ್ಯಕ್ಕೆ ಅಭಿಮಾನಿನಿ. ಅಧಮಸ್ತ್ರೀಯರಲ್ಲಿ ಇವಳದೇ ಅಗ್ರಸ್ಥಾನ.

೪) ಕಲಿಯಾದ ದುರ್ಯೋಧನನ ಕುತಂತ್ರದಿಂದ ಜೀವೋತ್ತಮನಾದ ಭೀಮು ಮೊದಲಾದ ಪಾಂಡವರ ವನವಾಸ. ಕಲಿಪತ್ನಿಯಾದ ಅಲಕ್ಷ್ಮಿ ಮಂಥರೆಯಿಂದ ಸರ್ವೋತ್ತಮನಾದ ಶ್ರೀರಾಮು ಮೊದಲಾದವರ ವನವಾಸ; ಎಂದರೆ ಕಲಿಯಿಂದ ಮಹಾಭಾರತ ಮತ್ತು ಅವನ ಪತ್ನಿಯಿಂದ ರಾಮಾಯಣದಲ್ಲಿನ ವನವಾಸಪ್ರಸಂಗಗಳು ನಡೆದವು ಎಂಬ ವಿಶೇಷಾಂಶವನ್ನು ಇಲ್ಲಿ ಗಮನಿಸಬಹುದು.

ಮಂಥರೆಯ ಪೂರ್ವೇತಿಹಾಸ

ಪೂರ್ವಂ ಕ್ಷೀರಾಬ್ಧಿಜಾತಾ ಕಥಮಪಿ ತಪಸೈವಾಪ್ಸರಸ್ತ್ವಂ ಪ್ರಯಾತಾ
ತಾಂ ನೇತುಂ ತತ್ತಮೋಽಂಧಂ ಕಮಲಜನಿರುವಾಚಾಶು ರಾಮಾಭಿಷೇಕಮ್ ।
ಭೂತ್ವಾ ದಾಸೀ ವಿಲುಂಪ ಸ್ವಗತಿಮಪಿ ತತಃ ಕರ್ಮಣಾ ಪ್ರಾಪ್ಸ್ಯಸೇ ತ್ವಂ
ಸೇತ್ಯುಕ್ತಾ ಮಂಥರಾऽऽಸೀತ್ ತದನು ಕೃತವತ್ಯೇವ ಚೈತತ್ ಕುಕರ್ಮ ॥ ೨ ॥

ಅ: ಆ ಅಲಕ್ಷ್ಮಿಯು ಮೊದಲಿಗೆ ಕ್ಷೀರಸಾಗರದಿಂದ ಹುಟ್ಟಿದವಳು; ಅನಂತರ ಮಹಾ ಪ್ರಯತ್ನದಿಂದ ಬಹುಶ್ರಮದಿಂದ 'ಅಪ್ಸರಃ ಸ್ತ್ರೀ'ತ್ತ್ವವನ್ನು ಹೊಂದಿದಳು; ಆದ್ದರಿಂದ ಅವಳನ್ನು ತ್ವರೆಯಿಂದ ಅಂಧಂತಮಸ್ಸಿಗೆ ಕಳಿಸಲೆಂದು ಬ್ರಹ್ಮದೇವರು ಅವಳಿಗೆ ಹೇಳಿದರು. ''ನೀನು ದಾಸಿಯಾಗಿ ಭೂಮಿಯಲ್ಲಿ ಜನಿಸಿ ರಾಮನ ಅಭೀಷೇಕ ಕಾರ್ಯಕ್ಕೆ ವಿಘ್ನವೆಸಗು; ಆ ಕಾರ್ಯದಿಂದ ನೀನು ಸ್ವಗತಿಯನ್ನು ಪಡೆಯುವಿ;'' ಹೀಗೆ ಹೇಳಲ್ಪಟ್ಟ ಅವಳು ಮಂಥರೆಯಾಗಿ ಹುಟ್ಟಿದಳು; ಮತ್ತು ಅಂಥಹ ನೀಚಕಾರ್ಯವನ್ನು ಮಾಡಿಯೂಬಿಟ್ಟಳು.

---

೨. ಕ್ಷೀರಾಬ್ಧಿಮಥನಕಾಲೇ ಕ್ಷೀರಾಬ್ಧಿಜಾತಾ । –(ವಾ)

೨. ಕಥಮಪಿ ಕೇನಾಪಿ ಪ್ರಯಾಸೇನ ತಪಸೈವ ನ ತು ಸ್ವರೂಪಯೋಗ್ಯತಯಾ ಅಪ್ಸರಸ್ತ್ವೇಂ ಪ್ರಯಾತಾऽಭೂತ್ । –(ವಾ)

೨. ಯಸ್ಮಾದೇವಂ ಸ್ವರೂಪೇಣ ತತ್ ತಸ್ಮಾತ್ ಕಾರಣಾತ್ ತಾಮಲಕ್ಷ್ಮೀಂ ಅಂಧಂತಮೋ ನೇತುಂ ಬ್ರಹ್ಮೋವಾಚ ಶಾಪಂ ದತ್ತವಾನ್ । –(ವಾ)

ಏಃ ೧) ಮಂಥರೆಯ ಬಗ್ಗೆ ವಾಲ್ಮೀಕಿರಾಮಾಯಣದಲ್ಲಿ 'ಜ್ಞಾತಿದಾಸೀ ಯತೋಜಾತಾ' (ಜ್ಞಾತಿದಾಸಿ ಹಾಗೂ ಎಲ್ಲೋ ಹುಟ್ಟಿದ್ದವಳು) ಎಂದು ಮಾತ್ರ ಉಲ್ಲೇಖವಿದೆ; ಅವಳನ್ನು ಯೋಗ್ಯಳೆಂದು ವರ್ಣಿಸುವ ಭ್ರಾಂತಜನರ ಗುಂಪೂ ಉಂಟು; ಶ್ರೀಮದಾಚಾರ್ಯರು ಅವಳ ಸಮಗ್ರಪರಿಚಯವನ್ನು ಈ ಶ್ಲೋಕದಲ್ಲಿ ಮಾಡಿಕೊಟ್ಟಿರುವರು.

೨) ಅವಳು ಸ್ವರೂಪತಃ ಅತ್ಯಂತ ಅಯೋಗ್ಯಳೆಂಬ ಕಾರಣಕ್ಕಾಗಿ ಬ್ರಹ್ಮದೇವರು ಅವಳಿಗೆ ವರರೂಪವನ್ನಾಗಿ ಶಾಪವನ್ನೇ ಇತ್ತರು; ದುಷ್ಟಳಾದ ಅವಳಿಗೆ ಅಪಾರ್ಥವಾಗಲಿ ಎಂದೇ ತಮಸ್ಸನ್ನು ಹೊಂದುವಿ ಎನ್ನುವ ಬದಲು 'ಸ್ವಗತಿಯನ್ನು ಹೊಂದುವಿ' ಎಂದು ಹೇಳಿದರು. ರಾಮಾಭಿಷೇಕದಂಥ ಪರಮಪವಿತ್ರವಾದ ಕಾರ್ಯವನ್ನು ತನ್ನ ಸ್ವಾರ್ಥಕ್ಕಾಗಿ ನಿಲ್ಲಿಸುವ ಪ್ರಯತ್ನ ಮಾಡಿದ ಅವಳು ಪರಮಪಾಪಿ ಎಂಬುದು ಸ್ವತಃ ಸಿದ್ಧ ಎಂದೂ ಭಾವ.

೩) ಮಂಥರೆಯು ಈ ಮೊದಲು 'ದುಂದುಭಿ' ಎಂಬ ಅಪ್ಸರೆಯಾಗಿದ್ದ ವಿವರ ಮಹಾ–ಭಾರತದಲ್ಲಿ ಬಂದಿದೆ. ಅದು ಮಂಥರೆಯ ಪೂರ್ವಜನ್ಮಕ್ಕೆ ಸಂಬಂಧಿಸಿದ ಉಲ್ಲೇಖ. ಸ್ವರೂಪತಃ ಅವಳು 'ಅಲಕ್ಷ್ಮೀ' ಎಂಬುದಕ್ಕೆ ವಿರುದ್ಧವಲ್ಲ ಎಂದು ತಿಳಿಯಬೇಕು.

ಪಿತಾಮಹವಚಃ ಶ್ರುತ್ವಾ ಗಂಧರ್ವೀ ದುಂದುಭೀ ತತಃ ।
ಮಂಥರಾ ಮಾನುಷೇ ಲೋಕೇ ಕುಬ್ಜಾ ಸಮಭವತ್ ತದಾ ॥ -(ವನ. ೨೭೬/೧೦)

೪) ಈ ಶ್ಲೋಕದ ಕೊನೆಯ ಪಾದದಲ್ಲಿ ಒಂದು ಅಕ್ಷರ ಕಡಿಮೆ ಉಂಟು; ಅದು ಮಂಥರೆಯ ಕಾರ್ಯವು ಅವಳ ಪುಣ್ಯಲೋಪಕ್ಕೆ ಸೂಚಕ; ಮತ್ತು ಶ್ರೀರಾಮನು ಹದಿನಾಲ್ಕು ವರ್ಷಗಳ ಅನಂತರ ರಾಜನಾಗಿಯೇ ಆಗುವುದರಿಂದ ಅವಳ ಪ್ರಯತ್ನ ವ್ಯರ್ಥವಾಯಿತು ಎಂಬುದಕ್ಕೂ ಸೂಚಕ; ಮತ್ತು ಶ್ರೀಮದಾಚಾರ್ಯರ ಗ್ರಂಥ ವೇದತುಲ್ಯವಾದ ಅನುಪಮಕೃತಿ ಎಂಬುದಕ್ಕೂ ಸೂಚಕ ಎಂಬ ವಿಶೇಷಾರ್ಥ ವಾದಿರಾಜೀಯದಲ್ಲಿದೆ.

---

೨. ಸ್ವಗತಿಂ – ಸ್ವಸ್ಯಾಃ ಯೋಗ್ಯಾಂ ಗತಿಮ್ ಅಂಧಂತಮ ಇತ್ಯರ್ಥಃ ।
ಅಪವರ್ಗಮಿತ್ಯಸ್ಯಾ ಭ್ರಮಮುತ್ಪಾದಯಿತುಂ ಸ್ವಗತಿಮಿತ್ಯೇವೋಕ್ತಮ್ ।

ಸ್ವಗತಿಂ – ಸ್ವಯೋಗ್ಯಾಂ ಗತಿಮ್ ।–(ವ); ಸ್ವರೂಪಯೋಗ್ಯಾಂ ಗತಿಮ್ ।–(ಜ)
ಮುಕ್ತಿರ್ಹಿತ್ವಾನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ । – (ಭಾಗವತ)

೨. ತದನುಕೃತವತ್ಯೇವ ಇತ್ಯತ್ರ ಮಂಥರಾಯಾಃ ಕುಕರ್ಮಕೃತಿಃ ಸ್ವಪುಣ್ಯಲೋಪಾಯೇತಿ ಸೂಚನಾಯ ಏಕಸ್ಯ ವರ್ಣಸ್ಯ ಲೋಪಃ ಕೃತ । 'ನ ವಾ ಏಕೇನಾಕ್ಷರೇಣ ಛಂದಾಂಸಿ ವಿಯಂತಿ' ಇತಿ ವಚನಾತ್ ಸ್ವಕೃತಗ್ರಂಥಸ್ಯ ಛಂದಃಸಮಾನತ್ವದ್ಯೋತನಾರ್ಥಂ ವಾ । ಯದ್ವಾ ಚತುರ್ದಶ ವರ್ಷಾನಂತರಂ ರಾಮಸ್ಯ ಪುನರಪಿ ರಾಜ್ಯಪ್ರಾಪ್ತೇಃ ತತ್ಕೃತಕುಕರ್ಮಣೋ ನ್ಯೂನತ್ವಸೂಚನಾರ್ಥಮ್ । ಅನ್ಯಥಾ ತದನು ಚ ಕೃತವತ್ಯೇವೇತಿ ವಕ್ತುಂ ಶಕ್ಯಮಪಿ 'ಚ' ವರ್ಣಂ ಕುತೋ ನಾವದದಿತಿ ದ್ರಷ್ಟವ್ಯಮ್ । –(ವಾ)

೫) ಅಲಕ್ಷ್ಮಿಯು ಕ್ಷೀರಸಾಗರದಲ್ಲಿ ಹುಟ್ಟಿದರೂ ಅವಳ ಮನಸ್ಸು ಮಾತ್ರ ಹಾಲಾಹಲ ವಿಷದ ಆಗರವಾಗಿತ್ತು ಎಂಬ ಸೂಚನೆಯೂ ಇಲ್ಲಿದೆ.

ದೇವಕಾರ್ಯಕ್ಕೆಂದು ಸೀತಾಲಕ್ಷ್ಮಣರೊಂದಿಗೆ ಶ್ರೀರಾಮನ ವನಗಮನ

ತದ್ವಾಕ್ಯಾತ್ ಕೈಕಯೀ ಸಾ ಪತಿಗವರಬಲಾದಾಜಹಾರೈವ ರಾಜ್ಯಂ
ರಾಮಸ್ತದ್ಗೌರವೇಣ ತ್ರಿದಶಮುನಿಕೃತೇಽರಣ್ಯಮೇವಾವಿವೇಶ।
ಸೀತಾಯುಕ್ತೋಽನುಜೇನ ಪ್ರತಿದಿನಸುವಿವೃದ್ಧೋರುಭಕ್ತ್ಯಾ ಸಮೇತಃ
ಸಂಸ್ಥಾಪ್ಯಾಶೇಷಜಂತೂನ್ ಸ್ವವಿರಹಜಶುಚಾ ತ್ಯಕ್ತಸರ್ವೇಷಣಾರ್ಥಾನ್ ॥ ೩ ॥

ಅ: ಆ ಮಂಥರೆಯ ವಾಕ್ಯದಿಂದ ಪ್ರೇರಿತಳಾದ ಕೈಕೇಯಿಯು ಪತಿಯಾದ ದಶರಥನು ತನಗೆ ಕೊಡುವೆನೆಂದಿದ್ದ ಎರಡು ವರಗಳ ಬಲದಿಂದ ರಾಜ್ಯವನ್ನು ಕಿತ್ತುಕೊಂಡಳು; ಶ್ರೀರಾಮನು ತಂದೆತಾಯಿಯರ ಮೇಲಿನ ಗೌರವದಿಂದ ಸೀತಾಸಮೇತನಾಗಿ ಅರಣ್ಯವನ್ನು ಪ್ರವೇಶಿಸಿದ; ಅವನಲ್ಲಿ ಪ್ರತಿದಿನವೂ ಹೆಚ್ಚುತ್ತಲಿದ್ದ ಶ್ರೇಷ್ಠವಾದ ಭಕ್ತಿಯಿಂದ ಕೂಡಿದ್ದ ಲಕ್ಷ್ಮಣನೂ ಅವನನ್ನು ಹಿಂಬಾಲಿಸಿದ; ಹಾಗೆ ತೆರಳುವ ಮುನ್ನ ತನ್ನ ಅಗಲುವಿಕೆಯ ನೋವಿನಿಂದಾಗಿ ಸಕಲ ವಿಧದ ಆಸೆಗಳನ್ನು ತೊರೆದ ಸಕಲಪ್ರಾಣಿಗಳನ್ನು ರಾಮನು ತನ್ನ ಹಿಂದೆ

---

೩. ಸ್ಮರ ರಾಜನ್ ಪುರಾವೃತ್ತಂ ತಸ್ಮಿನ್ ದೈವಾಸುರೇ ರಣೇ।
ತತ್ರ ಚಾಚ್ಯಾವಯಚ್ಛತ್ರುಸ್ತವ ಜೀವಿತಮಂತರಾ।
ತತ್ರ ಚಾಪಿ ಮಯಾ ದೇವ ಯತ್ ತ್ವಂ ಸಮಭಿರಕ್ಷಿತಃ।
ಜಾಗ್ರತ್ಯಾ ಯತಮಾನಾಯಾಸ್ತತೋ ಮೇ ಪ್ರಾದದಾ ವರೌ ॥ ವಾ. ರಾ. (೨/೧೧/೧೯–೨೦)

ಪುರಾ ಸುರಾಸುರರಣೇ ತ್ವಾಂ ನಿಶಾಸು ಶರಕ್ಷತಮ್।
ಅರಕ್ಷಂ ನನು ರಕ್ಷೋಘ್ನೋ ವಿದ್ಯಯಾ ವಿಪ್ರದತ್ತಯಾ।
ತದಾ ಪ್ರೀತ್ಯಾ ಪ್ರದತ್ತೌ ಮೇ ವರೌ ನರವರ ತ್ವಯಾ।
ಯಾಚೇ ತೌ ಯಾಚನೀಯಂ ತ್ವಾಂ ದೀನಾऽಹಂ ತವ ವಲ್ಲಭಾ ॥ –ಸಂ. ರಾ. (೨/೩/೩೪–೩೫)

೩. ಅನೇನೈವೋದ್ಯಮೇನಾದ್ಯ ಭರತೋऽತ್ರಾಭಿಷಿಚ್ಯತಾಮ್।
ಚತುರ್ದಶಸಮಾ ರಾಮೋ ಪ್ರಾಪ್ನುತಾಂ ಚ ವನಂ ಪ್ರತಿ ॥ –ಸಂ. ರಾ. (೧೧/೩/೪೦೦)

೩ ತಥಾऽಪಿ ಸಾ ಯದಾವೇಶಾಚ್ಚಕಾರ ತ್ವಯ್ಯಶೋಭನಮ್।
ನಿಕೃತಿರ್ನಾಮ ಸಾ ಕ್ಷಿಪ್ತಾ ಮಯಾ ತಮಸಿ ಶಾಶ್ವತೇ। –ಮ. ಭಾ. ತಾ. ನಿ. (೯/೯೫)

ರಾಮಸ್ತಯೋಃ ಪಿತ್ರೋರ್ಗೌರವೇಣ ನಿಮಿತ್ತೇನ। ಇದಂ ನಿಮಿತ್ತಮಾತ್ರಮರಣ್ಯಪ್ರವೇಶನೇ ಮುಖ್ಯ-ಪ್ರಯೋಜನಮನ್ಯದೇವೇತ್ಯಾಹ ।

ಬರದಂತೆ ತಡೆದ; ಶ್ರೀರಾಮನು ನಿಜಕ್ಕೂ ಕಾಡಿಗೆ ತೆರಳಿದ್ದು ದೇವತೆಗಳು ಮತ್ತು ಮುನಿಗಳು ಬಯಸಿದ್ದ ರಾವಣವಧಾದಿ ಕಾರ್ಯಗಳನ್ನು ಮಾಡಿ ಅವರನ್ನು ಅನುಗ್ರಹಿಸಲೆಂದೇ ಆಗಿತ್ತು.

ವಿ: ೧) ಕೈಕೇಯಿಯು ಮಂಥರೆಯಿಂದ ಪ್ರೇರಿತಳಾಗಿ ರಾಮಾಭಿಷೇಕವನ್ನು ನಿಲ್ಲಿಸುವ ಕಾರ್ಯಕ್ಕೆ ಉದ್ಯುಕ್ತಳಾದಳು; ದಶರಥನು ಹಿಂದೊಮ್ಮೆ ಅವನು ಯುದ್ಧದಲ್ಲಿ ಅಸುರರ ವಶವಾಗಲಿದ್ದಾಗ ಕೈಕೇಯಿಯು ಅವನ ರಥವನ್ನು ದೂರಕ್ಕೆ ಓಡಿಸಿ ಅವನನ್ನು ರಕ್ಷಿಸಿದ್ದಳು; ಎಚ್ಚರ ಬಂದ ಮೇಲೆ ರಾಕ್ಷಸರನ್ನೆಲ್ಲ ಸದೆಬಡೆದು ವಿಜಯ ಸಾಧಿಸಿದ ದಶರಥನು ಕೈಕೇಯಿಯ ಸಾಹಸಕ್ಕೆ ಮೆಚ್ಚಿ ಎರಡು ವರಗಳನ್ನು ಕೊಡಲು ಮುಂದಾಗಿದ್ದ; ತನಗೆ ಬೇಕಾದಾಗ ಕೇಳುವುದಾಗಿ ಕೈಕೇಯಿಯು ಅವುಗಳನ್ನು ಅವನಲ್ಲಿಯೇ ಬಿಟ್ಟಿದ್ದಳು; ಆ ಎರಡು ವರಗಳು ಇಂದು ಅವಳ ಕಾರ್ಯ ಸಾಧನೆಗೆ ಮಂಥರೆಯ ಸಂಚಿನಂತೆ ನೆರವಾದವು ಎಂದು ಭಾವ.

೨) ಕೈಕೇಯಿಯು ಹಾಗೆ ಮಾಡಲು ಅವಳಿಗೆ ಮಂಥರೆಯ ಪ್ರಚೋದನೆಯೊಂದಿಗೆ ಅವಳಲ್ಲಿದ್ದ ನಿಕೃತಿ ಎಂಬ ರಾಕ್ಷಸಿಯ ಆವೇಶವೂ ಕಾರಣವಾಗಿತ್ತು ಎಂಬ ವಿಚಾರವನ್ನು ಶ್ರೀಮದಾಚಾರ್ಯರು ಒಂಭತ್ತನೆಯ ಅಧ್ಯಾಯದಲ್ಲಿ ತಿಳಿಸಿರುವರು;

೩) ರಾಮನಿಗೆ ದಂಡಕಾರಣ್ಯಾದಿ ಪ್ರಾಂತಗಳಲ್ಲಿ ಹದಿನಾಲ್ಕುವರ್ಷಗಳ ಕಾಲ ವನವಾಸ ಮತ್ತು ರಾಮಾಭಿಷೇಕಕ್ಕೆ ಸಿದ್ಧಪಡಿಸಿದ ಸಂಭಾರಗಳೊಂದಿಗೆ ಭರತನಿಗೆ ಪಟ್ಟಾಭಿಷೇಕ. ಇವು ಕೈಕೇಯಿ ಕೇಳಿದ ಎರಡು ವರಗಳು.

೪) **'ಪ್ರತಿದಿನಸುವಿವೃದ್ಧೋರುಭಕ್ತ್ಯಾ'** ಎಂಬುದು **'ಯುಕ್ತೇನ ಅನುಜೇನ'** ಎಂದು ಅನ್ವಯ ಮಾಡಿಕೊಂಡರೆ ಲಕ್ಷ್ಮಣನಿಗೆ ಅನ್ವಯವಾಗುತ್ತದೆ; ಇದನ್ನು **'ಪ್ರತಿದಿನಸುವಿವೃದ್ಧೋರುಭಕ್ತ್ಯಾ ಸಮೇತತ್ಯಕ್ತಸರ್ವೇಷಣಾರ್ಥಾನ್ ಅಶೇಷಜಂತೂನ್'** ಎಂಬುದಾಗಿಯೂ ಅನ್ವಯ ಮಾಡಿಕೊಳ್ಳಬಹುದು.

---

೩. ಪ್ರತಿದಿನಸುವಿವೃದ್ಧೋರುಭಕ್ತ್ಯಾ ಯುಕ್ತೇನ ಅನುಜೇನ ಇತಿ ಯೋಗ್ಯಪದಾಧ್ಯಾಹಾರಃ । ಶ್ವೇತದ್ವೀಪೇ ಸ್ವದೃಷ್ಟಿಗೋಚರಭಗವನ್ಮೂರ್ತೇಃ ಶಯನೀಯತಯಾ ಸದಾಸೇವಾಯಾಂ ಸುವಿವೃದ್ಧೋರುಭಕ್ತ್ಯಾ ಕಾರಣೇನ ಅನುಸ್ವಾನುಕೂಲತಯಾ ಸ್ವಾನಂತರಂ ಚ ಜೇನ ಜಾತೇನ ಲಕ್ಷ್ಮಣೇನೇತಿ ವಾ । ಪ್ರತಿದಿನಸುವಿವೃದ್ಧೋರುಭಕ್ತ್ಯಾ ತ್ಯಕ್ತಸರ್ವೇಷಣಾರ್ಥಾನಿತಿ ವಾ ಸಂಬಂಧಃ। —ಮಾ

೩. ಶಕ್ತೋऽಪಿ ರಾಘವಸ್ತಸ್ಮಿನ್ ರಾಜ್ಯಂ ಸಂತ್ಯಜ್ಯ ಧರ್ಮತಃ।
ದಶಗ್ರೀವವಧಾರ್ಥಾಯ ಪಿತುರ್ವಚನಹೇತುನಾ ॥ - ಪದ್ಮಪುರಾಣ (ಉತ್ತರಖಂಡ ೨೪೨/೧೩೪)

೩. 'ನ ಗುರುರ್ನ ಚ ಧರ್ಮೋऽಸ್ತಿ ರಾಮದೇವಸ್ಯ ಕುತ್ರಚಿತ್।
ತಥಾಪಿ ಧರ್ಮರಕ್ಷಾರ್ಥಂ ಗುರುಭಕ್ತಿಮದರ್ಶಯತ್' ಇತಿ ವಾರಾಹೇ ॥ - ಭಾ. ತಾ.(೪/೨೨/೬೪, ೬೫)

ಗುಹ ಭರದ್ವಾಜರ ಶ್ರೀರಾಮಭಕ್ತಿ

ವೃಕ್ಷಾನ್ ಪಕ್ಷೀಭಕೀಟಾನ್ ಪಿತರಮಥ ಸಖೀನ್ ಮಾತೃಪೂರ್ವಾನ್ ವಿಸೃಜ್ಯ
ಪ್ರೋತ್ಥಾಂ ಗಂಗಾಂ ಸ್ವಪಾದಾದ್ಧರ ಇವ ಚ ಗುಹೇನಾರ್ಚಿತಃ ಸೋಽಥ ತೀರ್ತ್ವಾ ।
ದೇವಾರ್ಚ್ಯಸ್ಯಾಪಿ ಪುತ್ರಾದೃಷಿಗಣಸಹಿತಾತ್ ಪ್ರಾಪ್ಯ ಪೂಜಾಂ ಪ್ರಯಾತಃ
ಶೈಲೇಶಂ ಚಿತ್ರಕೂಟಂ ಕತಿಪಯದಿವಸಾನ್ಯತ್ರ ಮೋದನ್ನುವಾಸ ॥ ೪ ॥

ಅ: ವೃಕ್ಷಗಳನ್ನು, ಪಕ್ಷಿ, ಆನೆ, ಕೀಟಗಳನ್ನು, ತಂದೆಯನ್ನು, ಮಿತ್ರರನ್ನು, ತಾಯಿ ಮೊದಲಾದವರನ್ನು ತೊರೆದು ವನಕ್ಕೆ ಹೊರಟ ಶ್ರೀರಾಮ ಷಣ್ಮುಖನಿಂದ ಶಿವನು ಹೇಗೋ ಹಾಗೆ ಗುಹನಿಂದ ಪೂಜಿತನಾದನು; ಅನಂತರ ತನ್ನ ಪಾದದಿಂದ ಜನಿಸಿದ ಗಂಗೆಯನ್ನು ದಾಟಿದ; ಋಷಿಗಳಿಂದ ಕೂಡಿದ ಸುರಗುರುವಾದ ಬೃಹಸ್ಪತ್ಯಾಚಾರ್ಯರ ಪುತ್ರರಾದ ಭರದ್ವಾಜರ ಪೂಜೆಯನ್ನು ಸ್ವೀಕರಿಸಿದ. ಅಲ್ಲಿಂದ ಚಿತ್ರಕೂಟವೆಂಬ ಶ್ರೇಷ್ಠಪರ್ವತಕ್ಕೆ ತೆರಳಿ ಅಲ್ಲಿ ಕೆಲವು ದಿನಗಳನ್ನು ಆನಂದದಿಂದ ಕಳೆದ.

---

೪. ವಿಸೃಜ್ಯೇತಿ ವದತಾ ಹ್ಯನುಗಮನಸಮರ್ಥೇಷು ಅನುಯಾಯಿವೃಕ್ಷಾದಿಷು ಪ್ರಾಕ್ ಸಂಸ್ಥಾಪನೇನ ದಾಕ್ಷಿಣ್ಯಾತಿಶಯಃ ಸೂಚಿತಃ । –(ವಾ)

ವೃಕ್ಷಜೀವಾಃ ಮನಸಾ ಗತಾಃ ಇತ್ಯರ್ಥಃ । –(ಜ)

ಇಭ ಶಬ್ದಃ ಪಶುಸಾಮಾನ್ಯವಾಚೀ । (ಭಾರತ ಶ್ರೀನಿವಾಸಾಚಾರ್ಯ ವ್ಯಾ.)

೪. ಗುಹೇನ ಷಣ್ಮುಖೇನ ಹರ ಇವ ಗುಹೇನ ಗುಹನಾಮಕೇನ ನಾವಿಕೇನಾಪಿ ಅರ್ಚಿತ ಇತ್ಯಾವೃತ್ತ್ಯಾ ಯೋಜನಾ । ಉತ್ತರಾಯ ಕರಂ ಗೃಹೀತುರರ್ಚನಮದೃಷ್ಟಚರಮಿತಿಸೂಚನಾಯ ಚ ಶಬ್ದಃ । (ವಾ)

ಜನಾನ್ ನಿವೃತ್ಯ ರಾಮೋಽಸೌ ಜಗಾಮ ಚ ಗುಹಾಶ್ರಮಮ್ ।
ಗುಹಶ್ಚ ರಾಮಭಕ್ತೋಽಸೌ ಸ್ವಭಾವಾದೇವ ವೈಷ್ಣವಃ
ಕೃತಾಂಜಲಿಪುಟೋ ಭೂತ್ವಾ ಕಿಂಕರ್ತವ್ಯಮಿತಿ ಸ್ಥಿತಃ ।
ಗುಹೋಪನೀತನಾವಂ ತು ತಾಂ ಗಂಗಾಂ ಸಮಪದ್ಯತ ।
ಉತ್ತೀರ್ಯ ಗತವಾನ್ ರಾಮೋ ಭಾರದ್ವಾಜಾಶ್ರಮಂ ಪ್ರತಿ ॥ –ಇತಿ ನರಸಿಂಹಪುರಾಣ ।(ಜ)

೪. ತೀರ್ತ್ವಾ ಗಂಗಾಮಿತ್ಯತ್ರ ಅಪಿಪದಸಂಬಂಧಃ । ನಿಷಾದಾಧಿಪತಿನಾ ಗುಹೇನ ಪೂಜಾಂ ಗೃಹೀತ್ವಾ ಗಂಗಾಂ ತತಾರೇತಿ ಭಾವಃ । –(ವಾ)

೪. ಗಂಗಾಯಮುನಸಂಗಮೇ ಇತಿ ಶೇಷಃ । –(ವಾ)

೪. ಪ್ರಯಾಗಾನ್ನೈಋತ್ಯದಿಶಿ ವಿದ್ಯಮಾನಮ್ । –(ಜ)

ಏಃ ೧) ಅಯೋಧ್ಯೆಯಿಂದ ಚಿತ್ರಕೂಟದವರೆಗಿನ ಶ್ರೀರಾಮನ ವನಗಮನದ ವಿವರಗಳನ್ನು ಈ ಶ್ಲೋಕದಲ್ಲಿ ಸಂಗ್ರಹಿಸಿ ಕೊಟ್ಟಿರುವರು.

೨) ಗಂಗಾತೀರದಲ್ಲಿದ್ದ ನಿಷಾದರಾಜ ಗುಹನು ಶ್ರೀರಾಮನ ಪರಮಭಕ್ತನಾಗಿದ್ದ ಪರಮವೈಷ್ಣವ. ಅವನಿಂದ ಪೂಜಿತನಾದ ಶ್ರೀರಾಮನು ಅಲ್ಲಿ ಒಂದು ರಾತ್ರಿಯನ್ನು ಕಳೆದು ಮಾರನೆಯ ದಿನ ಗಂಗಾನದಿಯನ್ನು ದಾಟಿ ಪ್ರಯಾಣವನ್ನು ಮುಂದುವರೆಸಿ ಪ್ರಯಾಗಕ್ಷೇತ್ರದ ಬಳಿಯ ಭರದ್ವಾಜಮುನಿಯ ಆಶ್ರಮವನ್ನು ತಲುಪಿದ. ಅಲ್ಲಿದ್ದ ಭರದ್ವಾಜಾದಿಸಕಲರಿಂದಲೂ ಪೂಜಿತನಾಗಿ ಯಮುನೆಯನ್ನು ದಾಟಿ ಅದರ ನೈಋತ್ಯದಲ್ಲಿನ ಚಿತ್ರಕೂಟಪರ್ವತವನ್ನು ತಲುಪಿ ಅಲ್ಲಿ ಕೆಲವುದಿನಗಳ ಕಾಲ ವಾಸಿಸಿದನು ಎಂದು ಭಾವ.

ದಶರಥನ ನಿರ್ಯಾಣ - ಭರತಾಗಮನ

ಏತಸ್ಮಿನ್ನೇವ ಕಾಲೇ ದಶರಥನೃಪತಿಃ ಸ್ವರ್ಗತೋಽಭೂದ್ವಿಯೋಗಾ-
ದ್ರಾಮಸ್ಯೈವಾಥ ಪುತ್ರೌ ವಿಧಿಸುತಸಹಿತೈರ್ಮಂತ್ರಿಭಿಃ ಕೇಕಯೇಭ್ಯಃ ।
ಆನೀತೌ ತಸ್ಯ ಕೃತ್ವಾ ಶ್ರುತಿಗಣವಿಹಿತಪ್ರೇತಕಾರ್ಯಾಣಿ ಸದ್ಯಃ
ಶೋಚಂತೌ ರಾಮಮಾರ್ಗಂ ಪುರಜನಸಹಿತೌ ಜಗ್ಮತುರ್ಮಾತೃಭಿಶ್ಚ ॥ ೫ ॥

ಅ: ಆ ಸಮಯದಲ್ಲೇ ದಶರಥರಾಜ ಶ್ರೀರಾಮನ ವಿಯೋಗದಿಂದಾಗಿಯೇ ಸ್ವರ್ಗಸ್ಥನಾದ. ಅವನ ಇತರ ಇಬ್ಬರು ಪುತ್ರರಾದ ಭರತ ಮತ್ತು ಶತ್ರುಘ್ನರು ಬ್ರಹ್ಮಪುತ್ರರಾದ ವಸಿಷ್ಠರಿಂದ ಕೂಡಿದ ಮಂತ್ರಿಗಳಿಂದ ಕೇಕಯದೇಶದಿಂದ ಕರೆಸಲ್ಪಟ್ಟರು. ಅವರು ಬಂದ ಕೂಡಲೆ ಶ್ರುತಿಗಣಗಳಿಂದ ವಿಹಿತವಾದ ಪ್ರೇತಕಾರ್ಯಗಳನ್ನು ಮಾಡಿದರು; ಶೋಕಿಸುತ್ತ ಊರಿನ ಜನಗಳೊಂದಿಗೂ, ತಾಯಂದಿರೊಂದಿಗೂ ಸಮೇತರಾಗಿ ಶ್ರೀರಾಮ ನಡೆದ ಹಾದಿಯಲ್ಲೇ ತೆರಳಿದರು.

---

೫. ವಿಪ್ರಶಾಪಾದ್ದಶರಥಸ್ಯ ಪುತ್ರಾಣಾಂ ವಿಯೋಗಕಾಲೇ ಮೃತಿರಭೂದಿತಿ ಭಾವಃ । –(ಜ)

೫. ಕೈಕೇಯೀಂ ಪ್ರತಿ ಕೋಪಾತ್ ಸಹಾಗಚ್ಛೇತ್ಯನುಕ್ತ್ವೈವ ಭರತಸ್ಯಾಗಮನಂ ಸೂಚಯಿತುಂ ಮಾತೃಭಿಶ್ಚೇತ್ಯೇವೋಕ್ತಂ ನ ತು ಸಹಿತಾವಿತಿ ತೃತೀಯಾಬಲಾತ್ ಸಹಪದಾಧ್ಯಾಹಾರೇಣ ಯೋಜನಾ । –(ವಾ)

೫. ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ । – ಗೀತಾ

೫. ಜೀವತೋ ವಾಕ್ಯಕರಣಾತ್ ಪ್ರತ್ಯಬ್ದಂ ಭೂರಿಭೋಜನಾತ್ ।
ಗಯಾಯಾಂ ಪಿಂಡದಾನಾಚ್ಚ ತ್ರಿಭಿಃ ಪುತ್ರಸ್ಯ ಪುತ್ರತಾ ॥

೫. ರಾಮವಿಯೋಗಾತ್ ಷಷ್ಠ ಏವ ದಿವಸೇ ಸ್ವರ್ಗತಃ । – (ಶ್ರೀ.)

ವಿ: ೧) ದಶರಥರಾಜ ಶ್ರೀರಾಮನ ವಿಯೋಗದಿಂದ ಬಹಳವಾಗಿ ಶೋಕಿಸುತ್ತಲೇ ಅವರು ವನವಾಸಕ್ಕೆ ತೆರಳಿದ ಆರನೆಯ ದಿನ ಸ್ವರ್ಗಸ್ಥನಾದನು. ತತ್ಕ್ಷಣವೇ ಕುಲಗುರುಗಳಾದ ವಸಿಷ್ಠರು ಮತ್ತು ಮಂತ್ರಿಗಳು ಸಮಾಲೋಚನೆ ನಡೆಸಿ ಕೇಕಯದೇಶದಲ್ಲಿದ್ದ ಭರತಶತ್ರುಘ್ನರನ್ನು ಕರೆಸಿದರು; ವಿಷಯ ತಿಳಿದ ಭರತಶತ್ರುಘ್ನರು ಬಹಳವಾಗಿ ಶೋಕಿಸಿದರು; ತಂದೆಯ ಅಂತ್ಯಸಂಸ್ಕಾರಗಳನ್ನು ಪೂರೈಸಿದರು; ಭರತನು ತಾನು ಪಟ್ಟಾಭಿಷಿಕ್ತನಾಗಲು ಸಮ್ಮತಿಸದೆ ಶ್ರೀರಾಮನನ್ನೇ ಮರಳಿ ಕರೆತಂದು ರಾಜ್ಯವನ್ನು ಒಪ್ಪಿಸುವುದಾಗಿ ತೀರ್ಮಾನಿಸಿ ಜಟಾಚೀರಧರನಾಗಿ ಕಾಡಿಗೆ ತೆರಳಿದ. ಅವನನ್ನು ಹಿಂಬಾಲಿಸಿ ಅಯೋಧ್ಯಾನಿವಾಸಿಗಳೆಲ್ಲ ತೆರಳಿದರು; ಕೌಸಲ್ಯಾ ಮೊದಲಾದ ಮೂವರು ತಾಯಂದಿರೂ ತೆರಳಿದರು; ಇಷ್ಟು ವಿಚಾರಗಳನ್ನು ಶ್ರೀಮದಾಚಾರ್ಯರು ಈ ಶ್ಲೋಕದಲ್ಲಿ ಸಂಗ್ರಹಿಸಿರುವರು.

೨) ದಶರಥರಾಜನಿಗೆ ದುರ್ಗತಿಯಾಗಲಿಲ್ಲ ; ಅವನು ಸ್ವರ್ಗಲೋಕವನ್ನು ಸೇರಿದನು; ಎಂಬುದನ್ನು **'ಸ್ವರ್ಗತೋಽಭೂತ್'** ಎಂಬುದಾಗಿ ತಿಳಿಸಿರುವರು.

೩) ಪಿತೃಕಾರ್ಯಗಳಾದ ಶ್ರಾದ್ಧ ಪಕ್ಷ, ತರ್ಪಣಾದಿಗಳು ವೇದವಿಹಿತವಾದ ಕರ್ತವ್ಯ ಕರ್ಮಗಳು; ಶ್ರೇಯಸ್ಸನ್ನು ಬಯಸುವವರು ಅವುಗಳನ್ನು ಎಂದೂ ತ್ಯಜಿಸಕೂಡದು; ಕೃಷ್ಣಾರ್ಪಣ ಬುದ್ಧಿಯಿಂದ ನಡೆಸಲೇಬೇಕು ಎಂಬುದನ್ನು **'ಶ್ರುತಿಶತವಿಹಿತಪ್ರೇತಕಾರ್ಯಣಿ'** ಎಂಬ ಪದದಿಂದ ತಿಳಿಸಿರುವರು.

ಶ್ರೀರಾಮನ ಬಳಿ ಭರತ

ಧಿಕ್ಕುರ್ವಂತೌ ನಿತಾಂತಂ ಸಕಲದುರಿತಗಾಂ ಮಂಥರಾಂ ಕೈಕಯೀಂ ಚ
ಪ್ರಾಪ್ತೌ ರಾಮಸ್ಯ ಪಾದೌ ಮುನಿಗಣಸಹಿತೌ ತತ್ರ ಚೋವಾಚ ನತ್ವಾ।
ರಾಮಂ ರಾಜೀವನೇತ್ರಂ ಭರತ ಇಹ ಪುನಃ ಪ್ರೀತಯೇಽಸ್ಮಾಕಮೀಶ
ಪ್ರಾಪ್ಯಾಶು ಸ್ವಾಮಯೋಧ್ಯಾಮವರಜಸಹಿತಃ ಪಾಲಯೇಮಾಂ ಧರಿತ್ರೀಮ್॥ ೬ ॥

---

೬. ವಿಷ್ಣುವೈಷ್ಣವದ್ವೇಷಾದಿಸರ್ವಪಾಪಾಶ್ರಯಾಂ ಮಂಥರಾಂ .....ಸಕಲದುರಿತಾನಿ ಯಸ್ಯಾಂ ಸಾ ತಥಾ ತಸ್ಯಾಃ ಸರ್ವದೋಷರೂಪಾಯಾಂ ನಿಕೃತ್ಯಾಖ್ಯಾಯಾಃ ಅಸುರ್ಯಾಃ ಗಾಂ ಆಶ್ರಯಾಂ ಅಸುರ್ಯಾ ಆವಿಷ್ಟಾಮಿತಿ ಭಾವಃ। -(ಜ)

೬. ರಾಮಸ್ಯ ಪಾದೌ ಪ್ರಾಪ್ತೌ ಇತಿ ಏಕೋಽನ್ವಯಃ । ತತ್ರ ತೇಷಾಂ ಮಧ್ಯೇ ಭರತ ಉವಾಚ ಇತ್ಯ-ಪರೋಽನ್ವಯಃ। -(ವಾ)

೬. ರಾಜೀವನೇತ್ರಮಿತ್ಯನೇನ ಅರಣ್ಯವಾಸಶೋಕರಾಹಿತ್ಯಂ ಸೂಚಯತಿ। -(ಜ)

ಅ: ಸಕಲಪಾಪಗಳಿಗೂ ನೆಲೆಯಾದ ಮಂಥರೆಯನ್ನೂ, ಕೈಕೇಯಿಯನ್ನೂ ಬಹಳವಾಗಿ ತೆಗಳುತ್ತ ಮುನಿಗಳ ಸಮೂಹದೊಂದಿಗೆ ಕೂಡಿ ಭರತಶತ್ರುಘ್ನರು ಶ್ರೀರಾಮನ ಪಾದಗಳ ಬಳಿಗೆ ತಲುಪಿದರು. ಅಲ್ಲಿ ಪುಂಡರೀಕಾಕ್ಷನಾದ ಶ್ರೀರಾಮನನ್ನು ಕುರಿತು ಭರತ ನಮಸ್ಕರಿಸಿ ಪ್ರಾರ್ಥಿಸಿದ; ''ಪ್ರಭು ! ನಮ್ಮೆಲ್ಲರ ಸಂತೋಷಕ್ಕೆಂದು ನೀನು ನಿನ್ನದೇ ಆದ ಅಯೋಧ್ಯೆಗೆ ಬೇಗನೇ ಆಗಮಿಸು; ಮತ್ತು ತಮ್ಮಂದಿರ ಸಮೇತನಾಗಿ ಈ ಭೂಮಿಯನ್ನು ಪಾಲಿಸು''.

ವಿ: ೧) ಶ್ರೀರಾಮನ ವನಗಮನಕ್ಕೆ ಮುಖ್ಯಕಾರಣಳಾದ ಪರಮದ್ವೇಷಿಯಾದ ಮಂಥರೆ–ಯನ್ನು ಮತ್ತು ಅವಳ ಮಾತನ್ನು ಕೇಳಿ ಅದರಂತೆ ರಾಮನ ವನಗಮನಕ್ಕೆ ಕಾರಣವಾದ 'ನಿಕೃತಿ' ಎಂಬ ರಾಕ್ಷಸಿಯ ಆವೇಶದಿಂದ ಕೂಡಿದ ಕೈಕೇಯಿಯನ್ನು ಧಿಕ್ಕರಿಸಿದ ಭರತನಿಗೆ ಶ್ರೀರಾಮನ ದರ್ಶನಭಾಗ್ಯ ಲಭಿಸಿತು; ಎಂದರೆ ಹರಿದ್ವೇಷಿಗಳನ್ನು ಅವರ ಅನುಬಂಧಿಗಳನ್ನು ಪ್ರತಿಭಟಿಸುವುದು (ಎಂದರೆ ದುರ್ಮತಖಂಡನೆ ಮಾಡುವುದು) ಶ್ರೀಹರಿದರ್ಶನಕ್ಕೆ ಅರ್ಹತೆ ತಂದುಕೊಡುವ ಪುಣ್ಯಕಾರ್ಯ ಎಂದು ಭಾವ. ಅವರಿಗೆ ಸಕಲ ವೈಷ್ಣವಜನರ ಸಹಕಾರವೂ ಇದ್ದೇ ಇರುತ್ತದೆ ಎಂಬ ತತ್ತ್ವವು ಭರತನ ಹಿಂದೆ ಸಕಲಜನರೂ ಹಿಂಬಾಲಿಸಿ ನಡೆದ ಪ್ರಸಂಗದಿಂದ ಸೂಚಿತ.

೨) ಸ್ವತಂತ್ರನಾದ ರಾಮನಿಗೆ ವನವಾಸವು ಎಷ್ಟೂ ದುಃಖಕರವಾಗಲಿಲ್ಲ ಎಂಬುದನ್ನೂ **'ರಾಜೀವನೇತ್ರಂ'** ಎಂಬ ಪದದಿಂದ ಸೂಚಿಸಿರುವರು.

ಶ್ರೀರಾಮನ ವಚನ - ಭರತನ ಪ್ರತಿಜ್ಞೆಗಳು

ಇತ್ಯುಕ್ತಃ ಕರ್ತುಮೀಶಃ ಸಕಲಸುರಗಣಾಪ್ಯಾಯನಂ ರಾಮದೇವಃ
ಸತ್ಯಾಂ ಕರ್ತುಂ ಚ ವಾಣೀಮವದದತಿತರಾಂ ನೇತಿ ಸದ್ಭಕ್ತಿನಮ್ರಮ್ ।
ಭೂಯೋ ಭೂಯೋಽರ್ಥಯಂತಂ ದ್ವಿಗುಣಿತಶರದಾಂ ಸಪ್ತಕೇ ತ್ವಭ್ಯತೀತೇ
ಕರ್ತೈತತ್ ತೇ ವಚೋಽಹಂ ಸುದೃಢಮೃತಮಿದಂ ಮೇ ವಚೋ ನಾತ್ರ ಶಂಕಾ ॥ ೭ ॥

---

೭. ವಾಣೀಂ ದೇವಾನ್ ಪ್ರತಿ ರಾಕ್ಷಸಾನ್ ಹನ್ಮೀತಿ ಸ್ವವಾಚಂ ಸತ್ಯಾಂ ಕರ್ತುಮ್ । ಯದ್ವಾ ಈಶೋ ರಾಮ-ದೇವಃ ಸಕಲಸುರಗಣಾಪ್ಯಾಯನಂ ಕರ್ತುಂ ವಾಣೀಂ ವನವಾಸಂ ಕರಿಷ್ಯಾಮೀತಿ ಸ್ವಪ್ರತಿಜ್ಞಾರೂಪಮ್ । –(ಜ)

೭. ಸಪ್ತಕೇ ತ್ವಭ್ಯತೀತೇ ಇತ್ಯತ್ರ ತುಶಬ್ದೇನ ಪ್ರತ್ಯಾಗಮನಸಮಯೇ ದ್ವಿಗುಣಿತಶರತ್ಸಪ್ತಕಾದಪಿ ದಿನ-ವಿಶೇಷೋಽಪ್ಯಪೇಕ್ಷಿತಃ ಇತಿ ಸೂಚಯತಿ । ಅನ್ಯಥಾ ಸುದೃಢಮೃತಮಿದಮಿತಿ ವಕ್ಷ್ಯಮಾಣಸತ್ಯತ್ವಾನುಪಪತ್ತಿಃ ಸ್ಯಾತ್ । ಈಷದನೃತಪ್ರವೇಶೇಽಪಿ ಋತತ್ವಾಯೋಗಾದಿತಿ ರಘುಪತೇರ್ಭಾವಃ । –(ವಾ.)

೭. ಕರ್ತೇತಿ ಸುಬಂತಂ ಪದಂ ನ ತು ಲುಟ್ । ತಥಾತ್ವೇಽಹಂ ಪದಾಯೋಗಾತ್ । ಕರ್ತಾಸ್ಮೀತ್ಯುತ್ತಮಪದ-ಪ್ರಯೋಗೇ ಸತಿ ತದ್ಯೋಗಃ ಸ್ಯಾತ್ ನಾಪರಥಾ ಅತ ಅಸ್ತಿಭವತ್ಯೋಃ ಸರ್ವತ್ರಾನ್ವಯಾದಸ್ಮೀತಿ ಯೋಗ್ಯಪದಾ-ಧ್ಯಾಹಾರೇಣ ಯೋಜನಾ ।

ಅ: ಭರತನಿಂದ ಹೀಗೆ ಪ್ರಾರ್ಥಿಸಲ್ಪಟ್ಟ ಈಶನಾದ ಶ್ರೀರಾಮದೇವ ಸಕಲದೇವತಾ ಸಮೂಹಕ್ಕೆ ಆನಂದವನ್ನುಂಟುಮಾಡಲೆಂದು ಮತ್ತು ತಾನು ನೀಡಿದ ಮಾತನ್ನು ಸಂಪೂರ್ಣವಾಗಿ ಸತ್ಯಮಾಡಲೆಂದು ವಿಶೇಷವಾದ ಭಕ್ತಿಯಿಂದ ಬಾಗಿದ ಭರತನನ್ನು ಕುರಿತು 'ಆಗದು' ಎಂದು ನುಡಿದ; ಮತ್ತೆಮತ್ತೆ ಪ್ರಾರ್ಥಿಸತೊಡಗಿದ ಭರತನಿಗೆ ಹದಿನಾಲ್ಕುವರ್ಷಗಳು ಕಳೆಯುತ್ತಲೇ ನಾನು ನಿನ್ನ ಈ ಮಾತನ್ನು ನಡೆಸುವೆ; ಇದು ಅತ್ಯಂತ ಸತ್ಯವಾದುದು; ಈ ಬಗ್ಗೆ ಸಂಶಯಬೇಡ ಎಂದೂ ಹೇಳಿದ.

ಎ: ಶ್ರೀರಾಮನು ವನವಾಸಕ್ಕೆ ತೆರಳಿದ್ದು 'ತ್ರಿದಶಮುನಿಕೃತೇ' ಎಂದು ಹಿಂದೆ ಹೇಳಿದ್ದು ಎಷ್ಟು ಸೂಕ್ತವೆಂಬುದು ಇದರಿಂದ ದೃಢಪಡುವುದು.

ಪಾದುಕಾಪಟ್ಟಾಭಿಷೇಕ

ಶ್ರುತ್ವೈತದ್ರಾಮವಾಕ್ಯಂ ಹುತಭುಜಿ ಪತನೇ ಸ ಪ್ರತಿಜ್ಞಾಂ ಚ ಕೃತ್ವಾ
ರಾಮೋಕ್ತಸ್ಯಾನ್ಯಥಾತ್ವೇ ನ ತು ಪುರಮಭಿವೇಕ್ಷ್ಯೇಽಹಮಿತ್ಯೇವ ತಾವತ್ ।
ಕೃತ್ವಾಽನ್ಯಾಂ ಸಪ್ರತಿಜ್ಞಾಮವಸದಥ ಬಹಿರ್ಗ್ರಾಮಕೇ ನಂದಿನಾಮ್ನಿ
ಶ್ರೀಶಸ್ಯೈವಾಸ್ಯ ಕೃತ್ವಾ ಶಿರಸಿ ಪರಮಕಂ ಪೌರಟಂ ಪಾದಪೀಠಮ್ ॥ ೮ ॥

---

೭. ಚತುರ್ದಶವರ್ಷಾನಂತರಂ ಅಂತರಾಯಶತಕೈರ್ವಾ ತನ್ಮಧ್ಯೇ ಶತಾವರಣಾದಿನಾ ವಾ ಮದೀಯವಚನ-ಸತ್ಯತಾಯಾಃ ನೈವಾಪೋಹಃ ಸತ್ಯಸಂಕಲ್ಪತ್ವಾದಿತಿ ಭಾವೇನ ಸುದೃಢಮಿತ್ಯುಕ್ತಮ್। –(ವಾ)

೭. ರಾಮೋ ದ್ವಿರ್ನಾಭಿಭಾಷತೇ। –ವಾ. ರಾ. (೨/೧೮/೩೦)

೮. ಸ ಭರತಃ ರಾಮೋಕ್ತಸ್ಯ ಅನ್ಯಥಾತ್ವೇ ಹುತಭುಜಿ ಪತನೇ ಪ್ರತಿಜ್ಞಾಂ ಕೃತ್ವಾ ತಾವತ್ ರಾಮಗಮನ-ಪರ್ಯಂತಮ್ । ಸಪ್ರತಿಜ್ಞಾಂ ಅಧಃಶಯನಬ್ರಹ್ಮಚರ್ಯಸಕೃದ್ಭೋಜನಜಟಾವಲ್ಕಲಧಾರಣಾದಿಪ್ರತಿಜ್ಞಾಭಿಃ ಸಹಿತಾಮ್ । ಅಹಂ ತು ಅನಂತಕಾರ್ಯವಿಶೇಷೇಽಪಿ ಪುರಂ ನೈವಾಭಿವೇಕ್ಷ್ಯೇ ಇತ್ಯನ್ಯಾಂ ಚ ಪ್ರತಿಜ್ಞಾಂ ಕೃತ್ವಾ ಇತಿ ಪ್ರಾಚೀನಪ್ರತಿಜ್ಞಾಪದಸ್ಯ ಆವೃತ್ಯಾಯೋಜನಾ । ಅವಾಂತರಪ್ರತಿಜ್ಞಾನಾಂ ಬಹುತ್ವಾದಲ್ಪವಿಷಯತ್ವಾಚ್ಚ ಪ್ರತಿಜ್ಞಾ-ದ್ವಯವತ್ ವಿವಿಚ್ಯ ವಿಶೇಷಾನುಕ್ತ್ಯಾ ಸಾಮಾನ್ಯತ ಏವ ಕಥನಮ್ । ಅತೋ ಬಹ್ವರ್ಥಸಂಗ್ರಾಹಕತ್ವಾತ್ ತ್ರಿವಿಕ್ರಮಪಾದೋಪಮಾವೇತೌ ಪಾದೌ ಇತಿ ಮಹತ್ಕೌಶಲಂ ಗ್ರಂಥಕಾರಸ್ಯ। –(ವಾ)

೮. ಅನ್ಯಾಂ ಪ್ರತಿಜ್ಞಾಂ ಸಪ್ರತಿಜ್ಞಾಂ ಅಧಃಶಯನಬ್ರಹ್ಮಚರ್ಯಾದಿ ಪ್ರತಿಜ್ಞಾಂತರಸಹಿತಾಮ್। –(ಜ)

೮. ಸ ಕುರ್ವನ್ ಭ್ರಾತುರಾದೇಶಂ ನಂದಿಗ್ರಾಮೇ ಸ್ಥಿತೋ ವಶೀ।
ತಪಸ್ವೀ ನಿಯತಾಹಾರಃ ಶಾಕಮೂಲಫಲಾಶನಃ ॥ –(ನರಸಿಂಹಪುರಾಣ)

೮. ತಪಶ್ಚರಣಯುಕ್ತೇನ ತಸ್ಮಿನ್ ತಸ್ಥೌ ನೃಪೋತ್ತಮಃ। ಇತಿ (ಪಾದ್ಮ)ವಚನಾತ್ ಪ್ರತಿಜ್ಞಾನಂತರಂ ಜ್ಞಾಯತೇ ॥ –(ಜ)

ಅ: ಶ್ರೀರಾಮನ ಈ ಮಾತನ್ನು ಕೇಳಿ ಆ ಭರತನು ಶ್ರೀರಾಮನು ತನ್ನ ಮಾತಿನಂತೆ ಬಾರದೆ ಹೋದಲ್ಲಿ ಅಗ್ನಿಯಲ್ಲಿ ಧುಮುಕುವುದಾಗಿ ಪ್ರತಿಜ್ಞೆ ಮಾಡಿದ; ಮತ್ತು ಶ್ರೀರಾಮನು ಮರಳಿ ಬರುವವರೆಗೂ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಲಾರೆ ಎಂಬ ಮತ್ತೊಂದು ಪ್ರತಿಜ್ಞೆಯನ್ನು ಮಾಡಿದ; ಶ್ರೀರಮಣನಾದ ರಾಮನ ಚಿನ್ನದ ಪಾದುಕೆಗಳನ್ನು ತಲೆಯ ಮೇಲಿರಿಸಿಕೊಂಡು ಹಿಂದಿರುಗಿ ಅಯೋಧ್ಯೆಯ ಹೊರಗೆ ಇದ್ದ 'ನಂದಿ' ಎಂಬ ಗ್ರಾಮದಲ್ಲಿ ವಾಸಿಸತೊಡಗಿದ.

ವಿ: ೧) ಭರತನು ಹದಿನಾಲ್ಕುವರ್ಷಗಳು ಕಳೆದ ಮೇಲೂ ಶ್ರೀರಾಮನು ಬಾರದೆ ಹೋದಲ್ಲಿ ಅಗ್ನಿಯಲ್ಲಿ ಪ್ರವೇಶಿಸುವುದಾಗಿ ಒಂದು ಪ್ರತಿಜ್ಞೆ ಮತ್ತು ಅಲ್ಲಿಯವರೆಗೂ ಅಯೋಧ್ಯೆಯನ್ನು ಪ್ರವೇಶಿಸದೆ ಊರಾಚೆಯೇ ಉಳಿಯುವ ಇನ್ನೊಂದು ಪ್ರತಿಜ್ಞೆ, ಹೀಗೆ ಎರಡು ಮಹಾ ಪ್ರತಿಜ್ಞೆಗಳನ್ನು ಮಾಡಿದ; ಅಲ್ಲಿಯೇ ಶ್ರೀರಾಮನು ಬರುವವರೆಗೂ ಭೂಶಯನ, ಬ್ರಹ್ಮಚರ್ಯೆ, ಒಂದೇ ಭೋಜನ, ಜಟಾವಲ್ಕಲಧಾರಣ ಮೊದಲಾದ ಇನ್ನೂ ಅನೇಕ ಪ್ರತಿಜ್ಞೆಗಳನ್ನು ಸಹ ಮಾಡಿದ. ಭರತನ ಅಪಾರ ರಾಮಭಕ್ತಿಗೆ ಇವೆಲ್ಲ ದ್ಯೋತಕ; ಇಂತಹ ಕಠಿಣವ್ರತಗಳನ್ನು ಕೈಗೊಳ್ಳದ ಯಾರಿಗೂ ಭಗವಂತನು ಒಲಿಯಲಾರ ಎಂಬ ತತ್ತ್ವವೂ ಇಲ್ಲಿ ಸೂಚಿತ.

---

೮. ನಗರಂ ನ ಪ್ರವೇಕ್ಷ್ಯಾಮಿ ಯಾವದಾಗಮನಂ ತವ।
ಪ್ರವೇಕ್ಷ್ಯಾಮ್ಯಗ್ನಿಮಪ್ರೇಕ್ಷ್ಯ ವತ್ಸರೇ ತ್ವಾಂ ಚತುರ್ದಶೇ ॥
ಇತಿ ಪ್ರತಿಶ್ರವೌ ಕೃತ್ವಾ.....॥ –ಸಂಗ್ರಹರಾಮಾಯಣ(೨/೧೨/೧೦೪)

ನ ಜಘಾಸ ನ ಸುಷ್ವಾಪ ನ ಜಹಾಸ ಸ ಧೀರಧೀಃ।
ಸಮಯಾರ್ಥೀ ಸ್ಮರನ್ ಜ್ಯೇಷ್ಠಂ ರಾಮಂ ರಾಮಾನುಜೋ ಯಥಾ ॥ –ಸುಮಧ್ವವಿಜಯ(೧೫/೯೪)

೮. ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ। – ಗೀತಾ

೮. ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್।
ತಥಾಪಿ ಮತ್ಕೃತಾ ಪೂಜಾ ತತ್ಪ್ರಸಾದೇನ ನಾನ್ಯಥಾ ॥
ತದ್ಭಕ್ತಿಸ್ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ।
ಕರ್ಮನ್ಯಾಸೋ ಹರಾವೇವಂ ವಿಷ್ಣೋಸ್ತುಷ್ಟಿಕರಃ ಸದಾ ॥
– ಎಂಬ ಗೀತಾತಾತ್ಪರ್ಯೋದಾಹೃತಬ್ರಹ್ಮತರ್ಕವಚನಕ್ಕೆ ಅನುಸಾರಿಯಾಗಿ ಭರತನ ಆಳ್ವಿಕೆ ಇದ್ದಿತು ಎಂದು ತಿಳಿಯಬೇಕು.

೮. ಕಪ್ರತ್ಯಯಃ ಅಲ್ಪಾರ್ಥ ಇತಿ ಸ್ವೀಕರಣಾತ್। ಏತೇನೈವ ಬಹಿರಿತ್ಯೇತದ್ವ್ಯರ್ಥಮಿತಿ ದೂಷಣಂ ನಿರಸ್ತಮ್। ನಂದಿನಾಮಕಗ್ರಾಮೇಽಪ್ಯಂತಃಪ್ರದೇಶೇ ವಾಸೋ ನ ಕೃತಃ। ಕಿಂತು ಬಹಿಃಪ್ರದೇಶ ಇತಿ ವಕ್ತುಂ ಬಹಿರಿತ್ಯುಕ್ತಮಿತಿ ಸ್ವೀಕರಣಾತ್। ಏತೇನೈವ ಪರಮಕಮಿತ್ಯತ್ರ ಕಪ್ರತ್ಯಯೋ ವ್ಯರ್ಥ ಇತಿ ದೂಷಣಂ ನಿರಸ್ತಮ್। ನಾಯಂ ಕಪ್ರತ್ಯಯಃ ಕಿಂತು ಸುಖಿವಾಚೀ ಕಶಬ್ದ ಇತ್ಯಭ್ಯುಪಗಮಾತ್ ॥ –(ಸ.)

೮. ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥ -ವಾ. ರಾ.೨/೧೧೨/೨೧

೮. ಸ್ವರ್ಣಂ ಲೋಹಮಣಿಶ್ಚೈವ ಪುರಟಂ ಚಾಭಿಧೀಯತೇ। -ಛಾಂದೋಗ್ಯಭಾಷ್ಯ (೬/೧)

೨) ಭರತನು ರಾಜಪದವಿಯನ್ನು ತಿರಸ್ಕರಿಸುವುದು ಅಹಂಕಾರತ್ಯಾಗಕ್ಕೂ ಅಯೋಧ್ಯೆ-ಯಿಂದ ಆಚೆ ಉಳಿಯುವುದು ಮಮಕಾರತ್ಯಾಗಕ್ಕೂ ಸೂಚಕ; ಪುರದಿಂದ ಹೊರಗೆ ಉಳಿಯುವುದು ನವದ್ವಾರಪುರವಾದ ದೇಹದ ಮೇಲಿನ ಅಭಿಮಾನವನ್ನು ತೊರೆಯುವುದಕ್ಕೂ, ನಂದಿಗ್ರಾಮದಲ್ಲಿ ನೆಲೆಸುವುದು ನಂದಿತೀರ್ಥರಾದ ಶ್ರೀಮದಾಚಾರ್ಯರ ಶಾಸ್ತ್ರಗ್ರಾಮದಲ್ಲಿ ನಿರತನಾಗುವುದಕ್ಕೂ ಸಂಕೇತ. ಚತುರ್ದಶವರ್ಷಗಳ ನಿರೀಕ್ಷಣೆ ಚತುರ್ದಶವಿದ್ಯಾಸ್ಥಾನಗಳ ಅಧ್ಯಯನಕ್ಕೂ ಗಮಕ ಮೊದಲಾಗಿ ಅನೇಕ ಆಧ್ಯಾತ್ಮಿಕ ಅರ್ಥಗಳನ್ನು ಇಲ್ಲಿ ಕಾಣಬಹುದು.

ಜಯಂತ ವಾಯಸದ ಕಥೆ

ಸಮಸ್ತಪೌರಾನುಗತೇऽನುಜೇ ಗತೇ
ಸ ಚಿತ್ರಕೂಟೇ ಭಗವಾನುವಾಸ ಹ ।
ಅಥಾಜಗಾಮೇಂದ್ರಸುತೋऽಪಿ ವಾಯಸೋ
ಮಹಾಸುರೇಣಾತ್ಮಗತೇನ ಚೋದಿತಃ ॥ ೯ ॥

ಅ: ಸಕಲ ಅಯೋಧ್ಯಾಪುರನಿವಾಸಿಗಳೊಂದಿಗೆ ತಮ್ಮನಾದ ಭರತನು ಅಲ್ಲಿಂದ ತೆರಳಲು, ಭಗವಂತನಾದ ಶ್ರೀರಾಮ ಆ ಚಿತ್ರಕೂಟದಲ್ಲೇ ವಾಸಿಸತೊಡಗಿದ. ಅನಂತರ ಇಂದ್ರಸುತ-ನಾದ ಜಯಂತನು ಕಾಗೆಯ ರೂಪದಲ್ಲಿ ಅಲ್ಲಿಗೆ ಆಗಮಿಸಿದ; ಅವನು ಹಾಗೆ ಮಾಡಲು ಅವನೊಳಗಿದ್ದ ದೊಡ್ಡ ಅಸುರನೊಬ್ಬನ ಪ್ರಚೋದನೆ ಕಾರಣವಾಗಿತ್ತು.

ವಿ: ೧) ಇಂದ್ರಪುತ್ರನಾದವನು ಕಾಗೆಯರೂಪದಲ್ಲಿ ಬಂದದ್ದು ಎಷ್ಟು ಗರ್ಹಿತವಾದದು ಎಂಬುದನ್ನು 'ಅಪಿ' ಎಂಬ ಪದದಿಂದ ಸೂಚಿಸಿರುವರು.

೨) ಪಕ್ಷಿಗಳಲ್ಲಿ ಕಾಗೆಯು ಬಹುಕಾಲ ಬದುಕುವುದು ಮತ್ತು ಬಹಳವಾಗಿ ಬಲಿ ಅನ್ನವನ್ನು ಪಡೆಯುವುದು; ಎಂಬ ಕಾರಣದಿಂದ ಜಯಂತ ಅಸುರಾವೇಶದಿಂದ ಕಾಗೆಯ ಜನ್ಮವನ್ನು ಬಯಸಿದ್ದನು ಎಂಬ ಕಥೆ ಪುರಾಣಗಳಲ್ಲಿ ಉಕ್ತವಾಗಿದೆ.

---

೯. ಇಂದ್ರಸುತಸ್ಯ ವಾಯಸತ್ವಂ ಗರ್ಹಿತಮಿತಿ ಸೂಚನಾಯ ಅಪಿಪದಮ್ । –ವಾ

೯. ಪಕ್ಷಿಷು ಚಿರಜೀವಿತ್ವಾದ್ಬಹುತರಬಲ್ಯನ್ನಲಾಭಾಚ್ಚ ಜಯಂತೇನ ವಾಯಸಜನ್ಮ ಪ್ರಾರ್ಥಿತಮಿತಿ ಪೌರಾಣಿಕೀ ಕಥಾ ॥ –(ವಾ)

೯. ಶೈಲಸ್ಯ ಚಿತ್ರಕೂಟಸ್ಯ ಪಾದೇ ಪೂರ್ವೋತ್ತರೇ ಪುರಾ । –ವಾ. ರಾ. ೫/೩೮/೧೨

ಸ ಪಿತ್ರಾ ಚ ಪರಿತ್ಯಕ್ತಃ ಸುರೈಃ ಸರ್ವೈರ್ಮಹರ್ಷಿಭಿಃ । –ವಾ. ರಾ. ೫/೩೮/೩೪

೯. ಯಜ್ಞೋ ನಾಮೇಂದ್ರಪುತ್ರೋ ಯೋ ಜಯಂತ ಇತಿ ಚೋಚ್ಯತೇ । - ಇತಿ ಬೃಹದ್ಭಾಷ್ಯಮ್

೩) ಈ ಜಯಂತವಾಯಸದ ಕಥೆ ವಾಲ್ಮೀಕಿರಾಮಾಯಣದಲ್ಲಿ ಸುಂದರಕಾಂಡದಲ್ಲಿ ಬರುವುದು; ಆದರೆ ಅದು ನಡೆದದ್ದು ಚಿತ್ರಕೂಟದಲ್ಲಿದ್ದಾಗ ಎಂಬ ಮಾತೂ ಅಲ್ಲಿಯೇ ಬಂದಿದೆ. ಶ್ರೀಮದಾಚಾರ್ಯರು ಅದನ್ನು ಅದು ನಡೆದಕಾಲದಲ್ಲೇ ಒಟ್ಟು ಎಂಟು ಶ್ಲೋಕಗಳಲ್ಲಿ(೯ – ೧೬) ನಿರ್ಣಯಸಮೇತವಾಗಿ ನಿರೂಪಿಸಿರುವರು.

ಸ ಚಾಸುರಾವೇಶವಶಾದ್ರಮಾಸ್ತನೇ
ಯದಾ ವ್ಯಧಾತ್ ತುಂಡಮಥಾಭಿವೀಕ್ಷಿತಃ ।
ಜನಾರ್ದನೇನಾಶು ತೃಣೇ ಪ್ರಯೋಜಿತೇ
ಚಚಾರ ತೇನ ಜ್ವಲತಾऽನುಯಾತಃ ॥ ೧೦ ॥

ಅ: ಆ ಜಯಂತನು ಅಸುರಾವೇಶದ ಪ್ರಭಾವದಿಂದಾಗಿ ಮಹಾಲಕ್ಷ್ಮಿಯಾದ ಸೀತೆಯ ಸ್ತನದಲ್ಲಿ ಕೊಕ್ಕನ್ನು ಹಾಕುತ್ತಲೇ ಜನಾರ್ದನನಾದ ಶ್ರೀರಾಮ ಅವನನ್ನು ನೋಡಿದ; ಕೂಡಲೆ ಒಂದು ಹುಲ್ಲುಕಡ್ಡಿಯನ್ನು ಅವನ ಮೇಲೆ ಪ್ರಯೋಗಿಸಿದ, ಪ್ರಜ್ವಲಿಸುತ್ತಾ ಅದು ಹಿಂಬಾಲಿಸಲು ಜಯಂತ ಓಡತೊಡಗಿದ.

ವಿ: ಕಾಮ ಮತ್ತು ಹಿಂಸೆ ಎರಡು ಅಸುರರ ಲಕ್ಷಣ; ಜಯಂತನು ದೇವತೆಯಾದ್ದರಿಂದ ಅಂತಹ ದುರ್ಗುಣ ಅವನಲ್ಲಿ ಸ್ವಾಭಾವಿಕವಾಗಿ ಎಂದೂ ಇರಲು ಸಾಧ್ಯವಿಲ್ಲ; ಇಲ್ಲಿ ಆತನು ಹಾಗೆ ಮಾಡಲು ಅವನೊಳಗಿದ್ದ 'ಕುರಂಗ' ಎಂಬ ದೈತ್ಯನ ಆವೇಶವೇ ಕಾರಣ ಎಂದು ಭಾವ.

ಸ್ವಯಂಭುಶರ್ವೇಂದ್ರಮುಖಾನ್ ಸುರೇಶ್ವರಾನ್
ಜಿಜೀವಿಷುಸ್ತಾನ್ ಶರಣಂ ಗತೋऽಪಿ ।
ಬಹಿಷ್ಕೃತಸ್ತೈರ್ಹರಿಭಕ್ತಿಭಾವತೋ
ಹ್ಯಲಂಘ್ಯಶಕ್ತ್ಯಾ ಪರಮಸ್ಯ ಚಾಕ್ಷಮೈಃ ॥ ೧೧ ॥

ಅ: ಆವನು ಬ್ರಹ್ಮ, ರುದ್ರ, ಇಂದ್ರ ಮೊದಲಾದ ಶ್ರೇಷ್ಠದೇವತೆಗಳನ್ನು(ಪ್ರಾಣದ ಮೇಲಿನ ಆಸೆಯಿಂದಾಗಿ) ಶರಣುಹೊಕ್ಕ; ಆದರೆ ಅವರೆಲ್ಲ ಶ್ರೀಹರಿಯ ಪರಮಭಕ್ತರು ಮತ್ತು ಸರ್ವೋತ್ತಮನಾದ ಅವನ ಅಲಂಘ್ಯಸಾಮರ್ಥ್ಯದ ಮುಂದೆ ಏನೂ ಮಾಡಲಾಗದವರು. ಆದ್ದರಿಂದ ಅವರೆಲ್ಲ ಅವನನ್ನು ಬಹಿಷ್ಕರಿಸಿದರು.

---

೧೦. ಲೋಕಾಂತರೇಷ್ವಪೀತಿ ಶೇಷಃ । –(ಜ)

ಅ: ಜಯಂತನು ಶ್ರೀರಾಮನು ಪ್ರಯೋಗಿಸಿದ ಹುಲ್ಲುಕಡ್ಡಿಯು ಪ್ರಜ್ವಲಿಸುತ್ತ ಅಟ್ಟಿಸಿಕೊಂಡು ಬರಲು, ಅದರಿಂದ ತನ್ನ ಪ್ರಾಣ ಉಳಿಸಿಕೊಳ್ಳಲೆಂದು ಓಡತೊಡಗಿದನು; ಎಲ್ಲೂ ಅದರಿಂದ ಅವನಿಗೆ ಬಿಡುಗಡೆ ದೊರೆಯದಾಯಿತು. ಕೊನೆಗೆ ಅವನು ಬ್ರಹ್ಮ, ಶಿವ, ಮತ್ತು ಇಂದ್ರ ಮೊದಲಾದ ದೇವತೆಗಳ ಮೊರೆಹೊಕ್ಕನು. ಆದರೆ ಅವರು ಸಹ ಅದರಿಂದ ರಕ್ಷಿಸಲು ತಮ್ಮಿಂದಾಗದು ಎಂದು ಅವನನ್ನು ದೂರಮಾಡಿದರು. ಅವರು ಹಾಗೆ ಮಾಡಲು ಅಶಕ್ತಿಯೊಂದಿಗೆ ಶ್ರೀರಾಮನು ಸರ್ವೋತ್ತಮನು ಎಂಬ ಕಾರಣದಿಂದ ಅವನಲ್ಲಿದ್ದ ಅಪಾರಭಕ್ತಿಯೂ ಕಾರಣವಾಗಿತ್ತು; ಎಂದರೆ ಅಶಕ್ತಿ ಮತ್ತು ಭಕ್ತಿಗಳೇ ಅವರು ಹಾಗೆ ರಕ್ಷಿಸದಿರಲು ಕಾರಣ ಎಂದು ಭಾವ.

ಕುರಂಗನ ವಧೆ

ಪುನಃ ಪ್ರಯಾತಃ ಶರಣಂ ರಘೂತ್ತಮಂ
ವಿಸರ್ಜಿತಸ್ತೇನ ನಿಹತ್ಯ ಚಾಸುರಮ್ ।
ತದಕ್ಷಿಗಂ ಸಾಕ್ಷಿಕಮಪ್ಯವಧ್ಯಂ
ಪ್ರಸಾದತಶ್ಚಂದ್ರವಿಭೂಷಣಸ್ಯ ॥ ೧೨ ॥

ಅ: ಅವನು ಕೊನೆಗೆ ಪುನಃ ರಾಮನನ್ನೇ ಶರಣು ಹೊಕ್ಕ; ಆಗ ಶ್ರೀರಾಮನು ಅವನ ಕಣ್ಣಿನಲ್ಲಿದ್ದ ಅಸುರನನ್ನು ಅವನ ಕಣ್ಣಿನ ಸಮೇತವಾಗಿ ಸಂಹರಿಸಿ ಬೀಳ್ಕೊಟ್ಟ; ಆ ಅಸುರ ಚಂದ್ರವಿಭೂಷಣನಾದ ಶಿವನಿಂದ ಅವಧ್ಯತ್ವವರವನ್ನು ಪಡೆದಿದ್ದ.

---

೧೨. ವಕ್ಷ್ಯಮಾಣನ್ಯಾಯೇನ ಬಲಾರ್ಥಿತಯಾ ಅಸುರಸ್ಯ ಸ್ವಚಕ್ಷುಷ್ಯವಕಾಶದಾನದೋಷೇಣ ಚೈಕಚಕ್ಷುಷಂ ಕೃತ್ವಾ ಅನ್ಯಾವೇಶಬಲೇನೈವರಮಾಸ್ತನೇತುಂಡದಾತುರ್ಜಯಂತಸ್ಯರಮಾಯಾಂ ರಾಗಾಭಾವೇನ ಪ್ರಬಲಾಪರಾಧಾಭಾವಾ-ಜ್ಜಯಂತಶ್ಚ ಜೀವನ್ನೇವ ವಿಸರ್ಜಿತ ಇತಿ ಭಾವಃ । –(ವಾ)

೧೨. ಕಾಕಾನಾಂ ನೇತ್ರಗೋಳಕದ್ವಯಗತಚಕ್ಷುರಿಂದ್ರಿಯಾಂಶದ್ವಯಸಹಿತಾ ಯಾವತ್ ತಾವತ್ತದಿಂದ್ರಿಯ-ಗತಸ್ಯ ವಧೋ ಮಾ ಽಸ್ತ್ವಿತಿ ಶಿವಸ್ಯ ವರಪ್ರಸಾದತಃ.....। –(ವಾ)

ರಾಮಸ್ಯ ತೃಣೇನೇತಿ ವದತಾ ರಾಮಾಭಿಮಂತ್ರಿತಮಂತ್ರಬಲೇನ ಏಕಮೇವ ತೃಣಮನಂತೀಭೂಯ ವರ್ತಮಾನಸಕಲಕಾಕಾಕ್ಷಿಭಿಃ ಸಹ ತತ್ರ ತತ್ರ ಗತದೈತ್ಯಾಂಶಾನ್ ಸರ್ವಾನಪಿ ಭಸ್ಮೀಚಕಾರೇತಿ ಸೂಚಿತಮ್ । ಭವಿಷ್ಯತಾಂ ತು ಕಾಕಾನಾಂ ರಾಮಸಂಕಲ್ಪ ಬಲಾಜ್ಜನ್ಮಾರಭ್ಯೈವ ಏಕನೇತ್ರತ್ವಮಿತಿ ವಿವೇಕಃ । ಅತ ಏವಾತ್ರ ವಾಯಸಾಭಿಕ್ಷಿಭಿಃ ಸಹ ಭಸ್ಮಸಾದ್ಭಭೂವ ಇತ್ಯುಕ್ತಮ್ । ಉಪರಿ ತು 'ಭವಿಷ್ಯತಶ್ಚೈಕದೃಶಶ್ಚಕಾರ' ಇತಿ ವದಿಷ್ಯತಿ । ಏಕದೃಕ್ತ್ವೇನೈವ ಭವಿಷ್ಯತ್ಕಾಕಸೃಷ್ಟಿಃ । ನ ತು ತೇಷಾಮಪಿ ಭಸ್ಮೀಕರಣಮಿತಿ ಭಾವಃ । – (ವಾ)

೧೨. 'ಯಾವದ್ವಾಯಸಾ ದ್ವಿನೇತ್ರಾಸ್ತಿಷ್ಠಂತಿ ತಾವತ್ ತದಕ್ಷಿಗಸ್ಯ ತವ ಮರಣಂ ಮಾಸ್ತು' ಇತಿ ಶಿವೇನ ದತ್ತವರಸ್ಯ ಏಕಾಕ್ಷಿನಾಶೇ ऽಪಿ ವೈಯರ್ಥ್ಯಸದ್ಭಾವಾತ್ ಕಾಕೇಷು ಕೃಪಾಲುನಾ ರಾಮೇಣ ಏಕಸ್ಯೈವಾಕ್ಷ್ಣೋ ವಿನಿಪಾತನಂ ಕೃತಮ್। –(ವಾ)

ವಿ: ೧) ಅಂಬರೀಷಪ್ರಸಂಗದಲ್ಲೂ ವಿಷ್ಣುಚಕ್ರಕ್ಕೆ ಬ್ರಹ್ಮಾದಿಗಳು ತಲೆಬಾಗಿದ, ಭಾಗವತೋಕ್ತ-ಪ್ರಸಂಗವನ್ನು ಇಲ್ಲಿ ಸ್ಮರಿಸಬಹುದು (ಸ್ಕಂದ ೯/ಅಧ್ಯಾಯ ೬).

೨) ಜಯಂತವಾಯಸದ ಕಣ್ಣಿನಲ್ಲಿ ಕುರಂಗ ಎಂಬ ಅಸುರ ಸೇರಿಕೊಂಡಿದ್ದ. 'ಕಾಗೆಗಳ ಕಣ್ಣಿನಲ್ಲಿ ವಾಸಿಸುವ ಮತ್ತು ಕಾಗೆಗಳಿಗೆ ಎರಡು ಕಣ್ಣುಗಳು ಇರುವವರೆಗೂ ಸಾವಿಲ್ಲದಿರುವಂತಹ ವಿಚಿತ್ರವಾದ ವರವನ್ನು ಅವನು ಶಿವನಿಂದ ಪಡೆದುಕೊಂಡಿದ್ದ'. ಅಂತಹ ವರದಿಂದ ಕೂಡಿದ್ದ ಅವನನ್ನು ಸಂಹರಿಸಿದ ಶ್ರೀರಾಮ ಸರ್ವೋತ್ತಮ ಎಂಬುದು ಈ ಪ್ರಕರಣದ ಒಟ್ಟು ಸಾರ.

೩) ಜಯಂತನು ಸ್ವಭಾವತಃ ದೇವತೆ; ಅವನಿಗೆ ಸೀತಾದೇವಿಯ ಬಗ್ಗೆ ಕೆಟ್ಟ ಭಾವ ಇರಲೇ ಇಲ್ಲ; ಆದ್ದರಿಂದ ಅವನನ್ನು ಶ್ರೀರಾಮ ಸಂಹರಿಸಲಿಲ್ಲ; ಆದರೆ ಕುರಂಗನಂತಹ ದೈತ್ಯನಿಗೆ ಕಣ್ಣಿನಲ್ಲಿ ವಾಸಿಸುವ ಅವಕಾಶ ಕೊಟ್ಟ ಅಪರಾಧ ಅವನದಾಗಿತ್ತು ಅದಕ್ಕೆಂದು ಶ್ರೀರಾಮನು ಅವನ ಒಂದು ಕಣ್ಣನ್ನು ತೆಗೆದು ಶಿಕ್ಷಿಸಿದನು ಎಂದು ತಿಳಿಯಬೇಕು.

ಕಾಕಾಸುರನ ಹಿನ್ನೆಲೆ

ಸ ವಾಯಸಾನಾಮಸುರೋಽಖಿಲಾನಾಂ
ವರಾದುಮೇಶಸ್ಯ ಬಭೂವ ಚಾಕ್ಷಿಗಃ ।
ನಿಪಾತಿತೋಽಸೌ ಸಹ ವಾಯಸಾಕ್ಷಿಭಿ-
ಸ್ತೃಣೇನ ರಾಮಸ್ಯ ಬಭೂವ ಭಸ್ಮಸಾತ್ ॥ ೧೩ ॥

ಅ: ಆ ಅಸುರ ಶಿವನ ವರದಿಂದಾಗಿ ಎಲ್ಲಾ ಕಾಗೆಗಳ ಕಣ್ಣಿನಲ್ಲಿ ನೆಲೆಸಿದ್ದ; ಅಂತಹ ಅವನು ಶ್ರೀರಾಮ ಬಿಟ್ಟ ಹುಲ್ಲುಕಡ್ಡಿಯಿಂದ ಎಲ್ಲ ಕಾಗೆಗಳ ಕಣ್ಣುಗಳ ಸಮೇತವಾಗಿಯೇ ಬೂದಿಯಾದ.

ವಿ: ಶ್ರೀರಾಮನು ಪ್ರಯೋಗಿಸಿದ ಒಂದೇ ಹುಲ್ಲುಕಡ್ಡಿಯು ಆ ಕಾಲದಲ್ಲಿದ್ದ ಎಲ್ಲಾ ವಾಯಸಗಳ ಒಂದೊಂದು ಕಣ್ಣನ್ನೂ ಸುಟ್ಟು ಹಾಕಿತು. ಮುಂದೆ ಹುಟ್ಟುವ ಕಾಗೆಗಳು ಸಹ ಶ್ರೀರಾಮನ ಸಂಕಲ್ಪಬಲದಿಂದಾಗಿ ಹುಟ್ಟುವಾಗಲೇ ಏಕನೇತ್ರಗಳಾಗಿ ಹುಟ್ಟಿದವು ಎಂಬುದಾಗಿ ತಿಳಿಯಬೇಕು.

---

೧೩. ತತಸ್ತ್ಯಾಕ್ಷಿಕಾಕಸ್ಯ ಹಿನಸ್ತಿಸ್ಮ ಸ ದಕ್ಷಿಣಾಮ್ । -ವಾ. ರಾ. ೫/೩೮/೩೬

೧೩. ದಕ್ಷಿಣಾಕ್ಷಿಭಿರಿತ್ಯರ್ಥಃ । ತತಸ್ತ್ಯಾಕ್ಷಿ ಕಾಕಸ್ಯ ಹಿನಸ್ತಿಸ್ಮ ಸ ದಕ್ಷಿಣಾಮ್ । - ವಾ. ರಾ. ೫/೩೮/೩೬

ದದುರ್ಹಿ ತಸ್ಮೈ ವಿವರಂ ಬಲಾರ್ಥಿನೋ
ಯದ್ವಾಯುಸಾಸ್ತೇನ ತದಕ್ಷಿಪಾತನಮ್ ।
ಕೃತಂ ರಮೇಶೇನ ತದೇಕನೇತ್ರಾ
ಬಭೂವುರನ್ಯೇಽಪಿ ತು ವಾಯಸಾಃ ಸದಾ ॥ ೧೪ ॥

ಅ: ಕಾಗೆಗಳು ತಮ್ಮಲ್ಲಿ ಆ ದೈತ್ಯನು ನೆಲೆಸುವುದರಿಂದ ತಮ್ಮ ಬಲ ಹೆಚ್ಚುವುದು ಎಂಬ ಕಾರಣದಿಂದ ಅವನಿಗೆ ತಮ್ಮ ಕಣ್ಣುಗಳಲ್ಲಿ ನೆಲೆಸುವ ಅವಕಾಶವನ್ನು ಕೊಟ್ಟಿದ್ದವು. ಆದ್ದರಿಂದ ರಮಾವಲ್ಲಭನಾದ ಶ್ರೀರಾಮ ಅವುಗಳ ಕಣ್ಣನ್ನು ನಾಶ ಮಾಡಿದ; ಅನಂತರದ ಎಲ್ಲ ಕಾಗೆಗಳೂ ಸಹ ಇದೇ ಕಾರಣದಿಂದಾಗಿ ಎಲ್ಲ ಕಾಲದಲ್ಲಿಯೂ ಒಕ್ಕಣ್ಣಿನವೇ ಆದವು.

ವಿ: ೧) 'ಕಾಗೆಗಳಿಗೆ ಎರಡು ಕಣ್ಣುಗಳು ಇರುವವರೆಗೂ ಆ ಕುರಂಗನಿಗೆ ಮರಣವಿಲ್ಲದಿರಲಿ' ಎಂದು ಶಿವನ ವರವಿದ್ದಿತು; ಆದ್ದರಿಂದಲೇ ಶ್ರೀರಾಮನು ಎಲ್ಲ ಕಾಗೆಗಳ ಒಂದೊಂದು ಕಣ್ಣನ್ನೂ ನಾಶಮಾಡಿದ. ಶ್ರೀರಾಮನು ಬೇಕಿದ್ದರೆ ಕಾಗೆಗಳ ಎರಡೂ ಕಣ್ಣುಗಳನ್ನೂ ಕಳೆಯಬಹುದಿತ್ತು ಆದರೆ ಶಿವನ ವರವು ಆ ಅಸುರನಿಗೆ ಫಲಿಸದಿರಲು ಒಂದು ಕಣ್ಣನ್ನು ನಾಶಮಾಡಿದರೂ ಸಾಕು ಎಂಬ ಕೃಪೆಯಿಂದ ಅವುಗಳ ಒಂದೊಂದು ಕಣ್ಣನ್ನು ಮಾತ್ರವೇ ಕಳೆದ.

೨) ಪ್ರಬಲನಾದ ಅಸುರನಿಗೆ ಆಸರೆ ಇತ್ತರೆ ತಮಗೂ ಸಹ ಬಲ ಹೆಚ್ಚುತ್ತದೆ ಎಂಬ ದುರಾಸೆಯಿಂದ ಕಾಗೆಗಳೆಲ್ಲ ಹಾಗೆ ಅವನಿಗೆ ಮನಃಪೂರ್ವಕವಾಗಿಯೇ ಅವಕಾಶ ಮಾಡಿ ಕೊಟ್ಟಿದ್ದವು. ಆದ್ದರಿಂದ ಅಂತಹ ದುರಾಸೆಗಾಗಿ ಅವುಗಳಿಗೂ ಶಿಕ್ಷೆಯಾಗಬೇಕಿತ್ತು. ಕಳ್ಳನಿಗೆ ಆಸರೆ ನೀಡುವವನೂ ಅವನಿಗೆ ನೆರವಾಗುವ ಮೂಲಕ ಒಂದು ರೀತಿಯಲ್ಲಿ ಕಳ್ಳನೇ ಆಗುವನಲ್ಲವೇ? ಅದಕ್ಕೆಂದೇ ಶ್ರೀರಾಮ ಏಕನೇತ್ರರನ್ನಾಗಿ ಮಾಡಿ ಅವುಗಳನ್ನೆಲ್ಲ ಶಿಕ್ಷಿಸಿದ ಎಂದು ಭಾವ.

೩) ಶ್ರೀರಾಮನು ಕಾಗೆಗಳ ಒಂದು ಕಣ್ಣಿನ ಗೋಳಕವನ್ನೇ ನಾಶಮಾಡಿದನೆಂದಲ್ಲ. ಅವುಗಳಿಗೆ ಎರಡು ಕಣ್ಣುಗಳಿದ್ದರೂ ಅವುಗಳಿಗೆ ಒಂದು ಸಲಕ್ಕೆ ಕಾಣುವುದು ಒಂದು ಕಣ್ಣು

---

೧೪. ಶಿವಪ್ರಸಾದಾದೇವ ಸಕಲಕಾಕಾಕ್ಷಿಷು ಪ್ರವೇಶಂ ಕುರ್ವತೇ ತಸ್ಮೈ ಬಲಾರ್ಥಿನಃ ಪ್ರಬಲೇ ಅಸುರೇ ಅಸ್ಮಚ್ಚಕ್ಷುಷಿ ಪ್ರವಿಶ್ಯ ತಿಷ್ಠತಿ ಸತಿ ಅಸ್ಮಾಕಮಪಿ ಬಲಂ ಭವತೀತಿ ಬಲಾರ್ಥಿನೋ ವಿವರಂ ದದುಃ ಮನಃಪೂರ್ವಕಂ ವಿವರಂ ದದುಃ । ಅತಸ್ತೇಷಾಮಪಿ ಕ್ಷುದ್ರದೋಷೋಽಸ್ತಿ । ತಸ್ಮಾತ್ ಕಾಕಾನಾಂ ಚಕ್ಷುರ್ಮಾತ್ರನಾಶೋ ನ ಸರ್ವಥಾ ನಾಶ ಇತಿ ಭಾವಃ । –(ವಾ)

೧೪. ಗೋಲಕದ್ವಯೇಽಪಿ ಏಕಮೇವೇಂದ್ರಿಯಂ ದ್ವಿಪತಿವತ್ ಕಾರ್ಯಾನುಸಾರೇಣ ರಾಮಕೃಪಯಾ ಇತಸ್ತತ-ಶ್ಚರತೀತಿ ಏಕನೇತ್ರತ್ವಂ ನತ್ವೇಕಸ್ಯ ಗೋಳಕಸ್ಯಾಪಿ ನಾಶಃ । ಗೋಳಕಾಂತಸ್ಯಕಾಸ್ತ್ರ ಪ್ರವೇಶೇ ಸತಿ ತಸ್ಯ ಗೋಳಕಸ್ಯ ಅನಾಶೋಽಪಿ (ಭವತು) ಉಭಯತೋಽಪಿ ಪಶ್ಯಂತ್ವಿತಿ ಕಾಕೇಷು ದಯಯೇತಿ ಜ್ಞಾತವ್ಯಮ್ । –(ವಾ)

೧೪. ಏಕಸ್ಯ ಅಕ್ಷಿಪಾತೇ ಕೃತೇ ಸರ್ವೇಷಾಮೇಕನೇತ್ರತ್ವಮಭೂದಿತಿ ಹರಿಸಾಮರ್ಥ್ಯಸೂಚಕಸ್ತುಶಬ್ದಃ । – (ಜ)

ಮಾತ್ರ; ಆದ್ದರಿಂದ ಕಾಗೆಗಳಿಗೆ ಒಂದು ಕಣ್ಣುಗುಡ್ಡೆಯೇ ಇಲ್ಲ ಎಂದು ತಿಳಿಯಕೂಡದು. ಇಬ್ಬರು ಪತ್ನಿಯರನ್ನು ಹೊಂದಿರುವವನು ಕಾರ್ಯಕ್ಕೆ ತಕ್ಕಂತೆ ಒಬ್ಬೊಬ್ಬಳೊಂದಿಗೆ ವಾಸಿಸುವಂತೆ ಕಾಗೆಗಳಿಗೆ ಎರಡು ಕಣ್ಣುಗಳು ಇದ್ದರೂ ಒಂದು ಸಲಕ್ಕೆ ಕಾಣುವುದು ಒಂದು ಕಣ್ಣು ಮಾತ್ರ ಎಂದು ಭಾವ. ಇದೆಲ್ಲವು ಶ್ರೀರಾಮನ ಅಪಾರ ಸಾಮರ್ಥ್ಯ ಮತ್ತು ಕಾರುಣ್ಯ ಎರಡನ್ನೂ ಸೂಚಿಸುತ್ತದೆ ಎಂಬುದನ್ನು 'ತು' ಎಂಬ ಅವ್ಯಯದಿಂದ ಸೂಚಿಸಿರುವರು.

ಭವಿಷ್ಯತಾಮಪ್ಯಥ ಯಾವದೇವ
ದ್ವಿನೇತ್ರತಾ ಕಾಕಕುಲೋದ್ಭವಾನಾಮ್ ।
ತಾವತ್ ತದಕ್ಷ್ಯಸ್ಯ ಕುರಂಗನಾಮ್ನಃ
ಶಿವೇನ ದತ್ತಂ ದಿತಿಜಸ್ಯ ಚಾಕ್ಷಯಮ್ ॥ ೧೫ ॥

ಅ: ''ಕಾಕಕುಲದಲ್ಲಿ ಹುಟ್ಟುವ ಮುಂದಿನ ಕಾಗೆಗಳಿಗೆ ಎಲ್ಲಿಯವರೆಗೂ ಎರಡು ಕಣ್ಣುಗಳು ಇರುವುವೋ ಅಲ್ಲಿಯವರೆಗೂ ಕಾಗೆಗಳ ಕಣ್ಣಿನಲ್ಲಿರುವ ಅವನಿಗೆ ನಾಶ ಬರದಿರಲಿ'' ಈ ರೀತಿಯಾಗಿ ಶಿವನಿಂದ ಆ ಕುರಂಗ ಎಂಬ ದೈತ್ಯನಿಗೆ ವರವು ಕೊಡಲ್ಪಟ್ಟಿದ್ದಿತು.

ಅತಃ ಪುನರ್ಭಾವಮಮುಷ್ಯ ಹಿನ್ವನ್
ಭವಿಷ್ಯತಶ್ಚೈಕದೃಶಶ್ಚಕಾರ ।
ಸ ವಾಯಸಾನ್ ರಾಘವ ಆದಿಪೂರುಷ-
ಸ್ತತೋ ಯಯೌ ಶಕ್ರಸುತಸ್ತದಾಜ್ಞಯಾ ॥ ೧೬ ॥

ಅ: ಆದ್ದರಿಂದ ಅವನು ಮರಳಿ ಹುಟ್ಟದಂತೆ ಮಾಡಲೆಂದು ಆದಿಪುರುಷನಾದ ಶ್ರೀರಾಮ ಮುಂದೆ ಹುಟ್ಟುವ ಕಾಗೆಗಳನ್ನು ಏಕನೇತ್ರಗಳನ್ನಾಗಿಸಿದ; ಅನಂತರ ಇಂದ್ರಪುತ್ರನಾದ ಜಯಂತ ಶ್ರೀರಾಮನ ಅಪ್ಪಣೆ ಪಡೆದು ತೆರಳಿದ.

ವಿ: ೧) ಮುಂದೆ ಹುಟ್ಟುವ ಸಕಲ ಕಾಗೆಗಳೂ ಏಕನೇತ್ರವಾಗಿಯೇ ಹುಟ್ಟುವುದಾದಲ್ಲಿ ಮುಂದಿನ ಕಲ್ಪದಲ್ಲಿ ನಡೆಯುವ ರಾಮಕಥೆಯಲ್ಲಿ ಕಾಕಾಸುರನ ವಧೆಯ ಪ್ರಸಂಗ ನಡೆಯುವುದಿಲ್ಲವೇ? ಎಂಬ ಪ್ರಶ್ನೆಗೆ ಇಲ್ಲಿ ಅವಕಾಶ ಉಂಟು. ಅದಕ್ಕೆ ಶ್ರೀಮದಾಚಾರ್ಯರು

---

೧೫. ಅಕ್ಷಿಣೀ ಭವಃ ಅಕ್ಷ್ಯಃ ತಸ್ಯ । –(ಜ)

೧೫. ಭವಿಷ್ಯತಾಮಷ್ಯೇಕನೇತ್ರತ್ವಂ- ದ್ರೌಣ್ಯಸ್ತ್ರೇಣ ಭವಿಷ್ಯತ್ಪಾಂಡವಸಂತತೇರಪಿ ನಾಶ ಇವ । - (ವ್ಯಾ)

೧೬. 'ಸ್ವಲೋಕಂ' ಇತಿ ಶೇಷಃ । –(ವ)

'ಕಾಕಕುಲೋದ್ಭವಾನಾಂ' ಎಂಬ ಪದದಿಂದ ಪರಿಹಾರವಿತ್ತಿರುವರು ಎಂಬುದಾಗಿ ಶ್ರೀವಾದಿರಾಜ-ಸ್ವಾಮಿಗಳು ಬರೆದಿರುವರು.

ಇಂದಿನ ಕಾಕಕುಲವು ದೈನಂದಿನ ಕಲ್ಪದ ಕೊನೆಗೆ ಅಳಿಯುತ್ತದೆ. ಅವನೊಂದಿಗೆ ಶಿವನ ವರದ ಅವಧಿಯೂ ಮುಗಿಯುತ್ತದೆ. ಅನಂತರದ ಕಲ್ಪದಲ್ಲಿ ಕಾಗೆಗಳು ಎಂದಿನಂತೆ ಮೊದಲಿಗೆ ಎರಡು ಕಣ್ಣುಗಳನ್ನು ಹೊಂದಿಯೇ ಹುಟ್ಟುತ್ತವೆ. 'ಕುರಂಗ'ನೆಂಬ ಹೆಸರಿನ ಮತ್ತೊಬ್ಬ ದೈತ್ಯನು ಇಂತಹುದೇ ವರವನ್ನು ಮತ್ತೆ ಆಗಿನ ಶಿವನಿಂದ ಪಡೆಯುತ್ತಾನೆ; ಜಯಂತವಾಯಸದ ಪ್ರಸಂಗ ಮತ್ತೆ ಬರುತ್ತದೆ; ಶ್ರೀರಾಮನು ಪುನಃ ಹೀಗೆಯೇ ಕಾಗೆಗಳನ್ನೆಲ್ಲ ಏಕನೇತ್ರಗಳನ್ನಾಗಿ ಮಾಡಿ ಕುರಂಗ ದೈತ್ಯನನ್ನು ಸಂಹರಿಸುತ್ತಾನೆ. ಆದ್ದರಿಂದ ಜಯಂತವಾಯಸದ ಪ್ರಸಂಗ ಮುಂದಿನ ಎಲ್ಲ ಕಲ್ಪಗಳ ರಾಮಾಯಣಗಳಲ್ಲೂ, ಹಿಂದಿನ ಎಲ್ಲ ಕಲ್ಪಗಳ ರಾಮಾಯಣದಲ್ಲಿ ಹೇಗೋ ಹಾಗೆ ಪುನಃ ನಡೆಯುತ್ತೆ, ಚಿರಂಜೀವಿತ್ವ ವರಪಡೆದ ವಿಭೀಷಣನ ಕಥೆ ಹೇಗೋ ಹಾಗೆ.

೨) ಶ್ರೀರಾಮನಿಗೆ ಇಂತಹ ಸಕಲಸಾಮರ್ಥ್ಯವೂ ಉಂಟು ಎಂಬುದನ್ನು 'ಆದಿಪೂರುಷ' ಎಂಬ ವಿಶೇಷಣದಿಂದ ಸೂಚಿಸಿರುವರು.

ದಂಡಕವನದಲ್ಲಿ ಶ್ರೀರಾಮ

ರಾಮೋಽಥ ದಂಡಕವನಂ ಮುನಿವರ್ಯನೀತೋ
ಲೋಕಾನನೇಕಶ ಉದಾರಬಲೈರ್ನಿರಸ್ತಾನ್ ।
ಶ್ರುತ್ವಾ ಖರಪ್ರಭೃತಿಭಿರ್ವರತೋ ಹರಸ್ಯ
ಸರ್ವೈರವಧ್ಯತನುಭಿಃ ಪ್ರಯಯೌ ಸಭಾರ್ಯಃ ॥ ೧೭ ॥

---

೧೬. ತರ್ಹಿ ಕಲ್ಪಾಂತರೇ ಭವಿಷ್ಯತ್ಕಾಕಾನಾಮಪಿ ಏಕನೇತ್ರತ್ವಪ್ರಸಂಗಾದ್ಬ್ರಹ್ಮಣೋ ದಿನಾಂತರೇ ಭಾವಿರಾಮ-ಕಥಾಯಾಂ ಕಾಕಾಸುರವಧಕಥಾಯಾ ಅನುತ್ಥಾನಮೇವ ಸ್ಯಾದಿತ್ಯತ ಉಕ್ತಮ್। 'ಕಾಕಕುಲೋದ್ಭವಾನಾಂ' ಇತಿ । ವರ್ತಮಾನಕಾಕಕುಲೇ ಉದ್ಭವೋ ಯೇಷಾಂ ತೇಷಾಮ್ । ಇದಂ ಚ ಕುಲಂ ದೈನಂದಿನಕಲ್ಪಾವಸಾನೇ ಸರ್ವಂ ನಶ್ಯತಿ। ಅತಸ್ತದುಪಾಧಿಕೋ ವರೋಽಪಿ ನಶ್ಯತಿ । ಕಲ್ಪಾಂತರೇ ತು 'ಯಥಾಪೂರ್ವಮಕಲ್ಪಯತ್' ಇತಿ ಶ್ರುತೇಃ ತದಾನೀಂತನಬ್ರಹ್ಮಣಾ ದ್ವಿನೇತ್ರಾ ಏವ ಕಾಕಾಃ ಸೃಜ್ಯಂತೇ । ಪುನರ್ದೈತ್ಯೇನ ವರೇ ಲಂಭಿತೇ ತದಾನೀಂತನೋಽಪಿ ರಾಮಸ್ತಚ್ಚಕ್ಷುರ್ನಾಶಯತಿ ಅತೋ ದೈನಂದಿನರಾಮಕಥಾಯಾಂ ನ ಕುಚೋದ್ಯಾವಕಾಶಃ ।

ಕಿಂ ಚಾತಿಸಮರ್ಥೇನಾಪಿ ರಾಮೇಣ ಸ್ವಪ್ರಿಯಾಯ ವಿಭೀಷಣಾಯ ''ಯಾವತ್ತಿಷ್ಠತಿ ಮೇದಿನೀ ತಾವಜ್ಜೀವ ವಿಭೀಷಣ' ಇತಿ ದತ್ತೋ ವರೋಽಪಿ ತದಾನೀಂತನಕಲ್ಪಾಂತಪರ್ಯಂತಾಂ ಮೇದಿನೀಮೇವ ಉಪಾಧೀಕುರುತೇ ನ ತು ಕಲ್ಪಾಂತರಾಂ ಮೇದಿನೀಮಪಿ । ತದಾ ಕಾ ಕಥಾ ತುಚ್ಛಕಾಮ್ಯತಪಸೇ ಸ್ವಯಂ ತುಚ್ಛಾಯ ದೈತ್ಯಾಯ ಶಿವೇನ ದತ್ತವರಸ್ಯ ಏತತ್ಕಲ್ಪಪರ್ಯಂತತ್ವಂ ಇತಿ ಗ್ರಂಥಕಾರಸ್ಯ ಅಭಿಸಂಧಿಃ । -(ವಾ)

ಅ: ಅನಂತರ ಶ್ರೀರಾಮನು ಮುನಿವರ್ಯರಿಂದ ದಂಡಕಾರಣ್ಯಕ್ಕೆ ಕರೆದೊಯಲ್ಪಟ್ಟ ರುದ್ರದೇವರ ವರದಿಂದಾಗಿ ಅವಧ್ಯರಾಗಿದ್ದ ಖರ ಮೊದಲಾದ ತುಂಬಾ ಬಲಾಢ್ಯರಾದ ದೈತ್ಯರಿಂದ ಲೋಕಗಳು ಬಹಳವಾಗಿ ಬಾಧಿಸಲ್ಪಡುತ್ತಿರುವ ವಿಷಯವನ್ನು ಕೇಳಿ; ಸಪತ್ನೀಕನಾಗಿ ತೆರಳಿದ.

ವಿ: ಖರದೂಷಣರು ರಾವಣನ ಮಲತಮ್ಮಂದಿರು; ವಿಶ್ರವಸ್‌ಮುನಿಯ ಮಕ್ಕಳು. ಅವರಿಗೂ ಅವರ ಅನುಚರರಿಗೂ ರುದ್ರದೇವರಿಂದ ಅವಧ್ಯತ್ವ ವರವಿದ್ದಿತು. ಅದರಿಂದಾಗಿ ಲೋಕನಾಶವನ್ನು ಅಪಾರವಾಗಿ ಮಾಡುತ್ತಿದ್ದ ಅವರ ಸಂಹಾರಕ್ಕೆಂದು ಶ್ರೀರಾಮ ದಂಡಕಾರಣ್ಯಕ್ಕೆ ತೆರಳಿದ. ಇಂತಹ ಕಾರ್ಯಗಳನ್ನು ಮಾಡಿ ಲೋಕಹಿತ ಮಾಡುವುದೇ ಶ್ರೀರಾಮನ ವನವಾಸದ ಮುಖ್ಯ ಉದ್ದೇಶ–ವಾಗಿತ್ತು ಎಂಬುದು ಇಂತಹ ಸಕಲಪ್ರಸಂಗಗಳಿಂದಲೂ ಸ್ಫುಟಪಡುವುದು ಎಂದು ತಿಳಿಯಬೇಕು.

ಶರಭಂಗನಿಗೆ ಸದ್ಗತಿ

ಆಸೀಚ್ಚ ತತ್ರ ಶರಭಂಗ ಇತಿ ಸ್ಮ ಜೀರ್ಣೋ
ಲೋಕಂ ಹರೇರ್ಜಿಗಮಿಷುರ್ಮುನಿರುಗ್ರತೇಜಾಃ ।
ತೇನಾದರೋಪಹೃತಸಾರ್ಘ್ಯಸಪರ್ಯಯಾ ಸ
ಪ್ರೀತೋ ದದೌ ನಿಜಪದಂ ಪರಮಂ ರಮೇಶಃ ॥ ೧೮ ॥

ಅ: ಆ ದಂಡಕಾರಣ್ಯದಲ್ಲಿ ಶರಭಂಗ ಎಂಬ ಅಪಾರತೇಜಸ್ಸಿನ ವೃದ್ಧಮುನಿ ಇದ್ದ; ಅವನಿಗೆ ಶ್ರೀಹರಿಯ ಲೋಕವನ್ನು ಹೊಂದಬೇಕೆಂಬ ಅಪಾರ ಅಭಿಲಾಷೆ. ಶ್ರೀರಾಮನನ್ನು ಆ ಮುನಿ ಆದರದಿಂದ ಅರ್ಘ್ಯಾದಿಗಳನ್ನಿತ್ತು ಪೂಜಿಸಿದ; ಪ್ರಸನ್ನನಾದ ರಮಾಪತಿ ಶ್ರೀರಾಮ ಅವನಿಗೆ ಪ್ರಸನ್ನನಾಗಿ ತನ್ನ ಲೋಕವನ್ನು ನೀಡಿದ.

ಧರ್ಮೇ ಯತೋಽಸ್ಯ ವನಗಸ್ಯ ನಿತಾಂತಶಕ್ತಿ-
ಹ್ರಾಸೇ ಸ್ವಧರ್ಮಕರಣಸ್ಯ ಹುತಾಶನಾದೌ ।
ದೇಹಾತ್ಯಯಃ ಸತತ ಏವ ತನುಂ ನಿಜಾಗ್ನೌ
ಸಂತ್ಯಜ್ಯ ರಾಮಪುರತಃ ಪ್ರಯಯೌ ರಮೇಶಮ್ ॥ ೧೯ ॥

ಅ: 'ತನ್ನ ವರ್ಣಾಶ್ರಮಗಳಿಗೆ ವಿಹಿತವಾದ ಧರ್ಮಗಳನ್ನು ಆಚರಿಸಲು ಶಕ್ತಿಯು ಸಂಪೂರ್ಣ ಕುಗ್ಗಿದಾಗ, ಅಗ್ನಿಮೊದಲಾದವುಗಳಲ್ಲಿ ದೇಹವನ್ನು ತ್ಯಜಿಸಿಬಿಡಬೇಕು' ಎಂಬುದು

ವಾನಪ್ರಸ್ಥರಿಗೆ ವಿಶೇಷವಾಗಿ ವಿಹಿತವಾಗಿರುವ ಧರ್ಮ. ಆದ್ದರಿಂದಲೇ ಆ ಶರಭಂಗಮುನಿ ಶ್ರೀರಾಮನ ಎದುರು ನಿಜಾಗ್ನಿಯಲ್ಲಿ ಶರೀರವನ್ನು ತೊರೆದು ರಮಾಪತಿಯಾದ ಅವನ ಬಳಿಗೆ ತೆರಳಿದ.

ವಿ: ೧) ಶರಭಂಗ ಮುನಿಯು ಶ್ರೀರಾಮನಿಗೆ ಪೂಜಾದಿಗಳನ್ನು ಸಲ್ಲಿಸಿ ಕೃತಾರ್ಥನಾದ ಮೇಲೆ, ಅವನ ಅಪ್ಪಣೆ ಪಡೆದು ಅವನ ಎದುರೇ ಸಿದ್ಧಪಡಿಸಿಕೊಂಡಿದ್ದ ಅಗ್ನಿಯಲ್ಲಿ ಶರೀರವನ್ನು ತೊರೆದು ಸದ್ಗತಿಗೆ ತೆರಳಿದ ಎಂಬುದಾಗಿ ರಾಮಾಯಣದಲ್ಲಿ ಉಕ್ತವಾಗಿದೆ.

೨) ತಾನಾಗಿಯೇ ದೇಹ ತೊರೆಯುವುದು 'ಆತ್ಮಹತ್ಯೆ' ಎನ್ನಿಸುವ ಮಹಾಪಾತಕವಲ್ಲವೇ? ಅದನ್ನು ಆ ಮುನಿಯು ಮಾಡಿದ್ದೆಂತು? ಅಂತಹವನಿಗೆ ಶ್ರೀರಾಮನು ಅನುಮತಿಯನ್ನಾಗಲಿ, ಸದ್ಗತಿಯನ್ನಾಗಲಿ ಹೇಗೆ ಕೊಟ್ಟನು? ಎಂಬ ಪ್ರಶ್ನೆಗೆ ಇಲ್ಲಿ ಅವಕಾಶವಿದೆ. ಅದನ್ನು ಶ್ರೀಮದಾಚಾರ್ಯರು ಈ ತೆರನಾಗಿ ಪರಿಹರಿಸಿರುವರು:

೩) ಶರೀರವಿರುವುದು ಧರ್ಮಪಾಲನೆಗಾಗಿ; ತುಂಬಾ ಜೀರ್ಣವಾಗುವುದು ಮೊದಲಾದ ಕಾರಣದಿಂದ ವಿಹಿತಧರ್ಮಗಳನ್ನು ಪಾಲಿಸಲು ಸಂಪೂರ್ಣ ಅಸಾಧ್ಯವಾದಾಗ, ಆ ದೇಹದಿಂದ

---

೧೯. ದುಶ್ಚಿಕಿತ್ಸ್ಯೈರ್ಮಹಾರೋಗೈಃ ಪೀಡಿತಸ್ತು ಪುಮಾನಪಿ ।
ಅಸಾಧ್ಯವ್ಯಾಧಿನಾ ಯುಕ್ತಃ ಸ್ವವ್ಯಾಪಾರಾಕ್ಷಮಃ ಪುಮಾನ್ ॥
ಪ್ರವಿಶೇತ್ ಜ್ವಲನಂ ದೀಪ್ತಂ ಕರೋತ್ವನಶನಂ ತಥಾ ।
ಅಗಾಧತೋಯರಾಶಿಂ ಚ ಭೃಗೋಃ ಪತನಮೇವ ವಾ ॥
ಗಚ್ಛೇನ್ಮಹಾಪಥಂ ವಾऽಪಿ ತುಷಾರಗಿರಿಕಂಧರಾತ್ ॥
ಪ್ರಯಾಗವಟಶಾಖಾಗ್ರಾತ್ ದೇಹತ್ಯಾಗಂ ಕರೋತಿ ವಾ ।
ಉತ್ತಮಾನ್ ಪ್ರಾಪ್ನುಯಾಲ್ಲೋಕಾನ್ ನಾತ್ಮಘಾತೀ ಭವೇತ್ ಕ್ವಚಿತ್ ।
ಮಹಾಪಾಪಕ್ಷಯಾತ್ ಸ್ವರ್ಗೇ ದಿವ್ಯಾನ್ ಭೋಗಾನ್ ಸಮಶ್ನುತೇ ॥
ಏಷಾಮಧಿಕಾರೋऽಸ್ತಿ ಸರ್ವೇಷಾಮೇಷು ಸರ್ವದಾ ।
ನರಾಣಾಮಥ ನಾರೀಣಾಂ ಸರ್ವವರ್ಣೇಷು ಸರ್ವದಾ ॥ –(ವರಾಹಪುರಾಣ) (ಜ)

ಆಪದಿ ಸರ್ವವರ್ಣಾಶ್ರಮಿಣಾಂ ದೇಹತ್ಯಾಗೋ ಧರ್ಮಃ ಇತಿ ಪುರಾಣಗತವಾಕ್ಯಾನಿ ಬಹೂನಿ ಸಂತಿ । ತಥಾ ತಸ್ಮಿನ್ನರ್ಥೇ ಯಾಜ್ಞವಲ್ಕ್ಯಾದಿಸ್ಮೃತಿಷು ಪ್ರಮಾಣಾನಿ ಸಂತಿ । –(ಜ)

೧೯. ಸ ಲೋಕಾನಾಹಿತಾಗ್ನೀನಾಮೃಷೀಣಾಂ ಭಾವಿತಾತ್ಮನಾಮ್ ।
ದೇವಾನಾಂ ಚ ವ್ಯತಿಕ್ರಮ್ಯ ಬ್ರಹ್ಮಲೋಕಂ ವ್ಯರೋಹಿತಃ ॥ –(ವಾ. ರಾ. ೩/೫/೪೩)

೧೯. ಯದಾऽಸೌ ನಿಯಮೇऽಕಲ್ಪೋ ಜರಯಾ ಜಾತವೇಪಥುಃ ।
ಆತ್ಮನ್ಯಗ್ನೀಂ ಸಮಾರೋಪ್ಯ ಮಚ್ಚಿತ್ತೋऽಗ್ನೌ ಸಮಾವಿಶೇತ್ ॥ - ಭಾಗವತ (೧೧/೧೮/೧೧)

ಅನುಷ್ಠಾನಾಸಮರ್ಥಸ್ಯ ವಾನಪ್ರಸ್ಥಸ್ಯ ಜೀರ್ಯತಃ ।
ಜಲಾನಶನಭೃಗ್ವಗ್ನಿಮಹಾಪ್ರಸ್ಥಾನಮಿಷ್ಯತೇ ॥ - ವರಾಹಪುರಾಣ (ಜ.)

ಏನೂ ಪ್ರಯೋಜನವಿಲ್ಲ; ಕಣ್ಣು ಹೋದ ಮೇಲೆ ವಾಹನ ಚಾಲನೆ ಸಾಧ್ಯವೇ? ಅಂತಹ ಸಮಯದಲ್ಲಿ ಸುಮ್ಮನೆ ಜೀವಿಸಿರುವುದಕ್ಕಿಂತ ಅಂತಹ ದೇಹವನ್ನು ತೊರೆಯುವುದೇ ಧರ್ಮ; ವಾನಪ್ರಸ್ಥರಿಗಂತೂ ಇದು ವಿಶೇಷಧರ್ಮ ಎಂದು ಶಾಸ್ತ್ರಗಳು ಸಾರಿವೆ. ಶರಭಂಗರ ಸ್ಥಿತಿ ಇಂತಹುದಾಗಿತ್ತು; ಅದಕ್ಕೆಂದೇ ಶ್ರೀರಾಮನು ಅವರಿಗೆ ಸಮ್ಮತಿ ಇತ್ತ ಸದ್ಗತಿಯನ್ನೂ ಕರುಣಿಸಿದ ಎಂದು ಭಾವ. ಏನಾದರೂ ಸರಿ ಬದುಕುವುದೊಂದೇ ಗುರಿ ಎಂಬ ಜನಕ್ಕೆ ಇದೆಲ್ಲ ತಿಳಿಯುವುದಿಲ್ಲ; ಇದರಂತೆ ವಾಸಿಯಾಗದಂತಹ ಮಹಾರೋಗಗಳನ್ನು ಹೊಂದಿದವರು ಹಾಗೂ ಪ್ರಾಯಶ್ಚಿತ್ತವೇ ಇಲ್ಲದಂತಹ ಮಹಾಪಾಪಗಳನ್ನು ಮಾಡಿದವರು ಯಾವ ವರ್ಣದವರೇ ಆಗಲಿ ದೇಹವನ್ನು ತ್ಯಜಿಸುವ ಅವಕಾಶ ಮತ್ತು ಅದರ ವಿಧಿವಿಧಾನಗಳನ್ನು ಶಾಸ್ತ್ರಗಳು ನಿರೂಪಿಸಿವೆ; ಅಂತಹ ದೇಹತ್ಯಾಗ ಎಂದಿಗೂ ಆತ್ಮಹತ್ಯೆ ಎನ್ನಿಸದೆ ಪುಣ್ಯಕರವೇ ಆಗಿ ಸ್ವರ್ಗಾದಿ ಸಾಧನವಾಗುವುದು ಎಂದರ್ಥ.

ವಿರಾಧನ ಉದ್ಧಾರ

ರಾಮೋಽಪಿ ತತ್ರ ದದೃಶೇ ಧನದಸ್ಯ ಶಾಪಾ-
ದ್ಗಂಧರ್ವಮುರ್ವಶಿರತೇರಥ ಯಾತುಧಾನೀಮ್ ।
ಪ್ರಾಪ್ತಂ ದಶಾಂ ಸಪದಿ ತುಂಬುರುನಾಮಧೇಯಂ
ನಾಮ್ನಾ ವಿರಾಧಮಪಿ ಶರ್ವವರಾದವಧ್ಯಮ್ ॥ ೨೦ ॥

ಅ: ಶ್ರೀರಾಮ ಆ ದಂಡಕಾರಣ್ಯದಲ್ಲಿ ವಿರಾಧನೆಂಬ ರಾಕ್ಷಸನನ್ನು ಕಂಡ; ಅವನು ತುಂಬುರು ಎಂಬ ಗಂಧರ್ವ; ಊರ್ವಶೀಸಂಗಮದ ಕಾರಣದಿಂದಾಗಿ ಕುಬೇರನ ಶಾಪ-ದಿಂದಾಗಿ ಕೂಡಲೇ ರಾಕ್ಷಸಯೋನಿಯಲ್ಲಿ ಹುಟ್ಟಿದ್ದ; ಶಿವನ ವರದಿಂದಾಗಿ ಸಾವಿಲ್ಲದವನಾಗಿದ್ದ.

ಎ: ಕುಬೇರ ಊರ್ವಶಿಗೂ ಶಾಪ ನೀಡಿದ; ಅದರಿಂದಾಗಿ ಅವಳು ಪೂತನಿಯಾಗಿ ಜನಿಸಿದ್ದ ತಾಟಕಿಯಲ್ಲಿ ಆವಿಶ್ಶಳಾಗಿ ಕೃಷ್ಣಸ್ಪರ್ಶದಿಂದ ಶಾಪಮುಕ್ತಳಾಗಿ ಸದ್ಗತಿ ಪಡೆದಳು (೧೨/೮೮).

---

೨೦. ಪೂರ್ವಂ ತುಂಬುರುನಾಮಧೇಯಂ, ಇದಾನೀಂ ವಿರಾಧಮಪಿ ವಿರಾಧನಾಮಧೇಯಂ ಚೇತಿ ಯೋಜನಾ। –(ವಾ)

೨೦. ನನ್ವಪ್ಸರಸ್ತ್ರೀಸಂಗಸ್ಯ ಸರ್ವೈಃ ಕ್ರಿಯಮಾಣತ್ವಾತ್ ತುಂಬರುಂ ಧನದಃ ಕಿಮರ್ಥಂ ಶಶಾಪೇತ್ಯತಃ 'ಸ್ವಭೋಗಾಯಾಗಮನಕಾಲೇ ತುಂಬುರುಸ್ತಾಂ ಬಲಾತ್ಕಾರೇಣ ಬುಭುಜೇ । ಅತಸ್ತಾಂ ಶಶಾಪೇತಿ । ಕೇಚಿತ್ ತು ಗಂಧರ್ವಾದೀನಾಂ ಅಪ್ಸರಸಃ ಸಂಗಸ್ಯ ನಿಷಿದ್ಧತ್ವಾತ್ ಧನದಸ್ತಂ ಶಶಾಪೇತಿ । ಅತ ಏವೋರ್ವಶೀಮಪಿ ಶಶಾಪ । 'ಸಾ ತುಂಬುರೋಃ ಸಂಗತ ಆವಿವೇಶ ರಕ್ಷಸ್ತನುಂ ಶಾಪತೋ ವಿತ್ತಪಸ್ಯ' ಇತಿ ವಕ್ಷ್ಯಮಾಣತ್ವಾತ್ । –(ರಾ.)

ಭಂಕ್ತ್ವಾಽಸ್ಯ ಬಾಹುಯುಗಲಂ ಬಿಲಗಂ ಚಕಾರ
ಸಮ್ಮಾನಯನ್ ವಚನಮಂಬುಜಜನ್ಮನೋಽಸೌ ।
ಪ್ರಾದಾಚ್ಚ ತಸ್ಯ ಸುಗತಿಂ ನಿಜಗಾಯಕಸ್ಯ
ಭಕ್ಷಾರ್ಥಮಂಸಕಮಿತೋಽಪಿ ಸಹಾನುಜೇನ ॥ ೨೧ ॥

ಅ: ಶ್ರೀರಾಮನು ಕಮಲೋದ್ಭವರಾದ ಬ್ರಹ್ಮದೇವರ ವರವನ್ನು ಮಾನ ಮಾಡಿ ಆ ವಿರಾಧನ ಎರಡು ತೋಳುಗಳನ್ನು ಕತ್ತರಿಸಿ ಅವನನ್ನು ಬಿಲದಲ್ಲಿ ಹಾಕಿದ; ತಮ್ಮನಾದ ಲಕ್ಷ್ಮಣನ ಸಮೇತ ತನ್ನನ್ನು ತಿನ್ನಲೆಂದು ಭುಜದ ಮೇಲೇರಿಸಿಕೊಂಡಿದ್ದ ತನ್ನನ್ನು ಸ್ತುತಿಸುವ ಗಂಧರ್ವನಾಗಿದ್ದ ಅವನಿಗೆ ಉತ್ತಮಗತಿಯನ್ನೇ ನೀಡಿದ.

ವಿ: ೧) ವಿರಾಧಪ್ರಸಂಗದ ಸಮಸ್ತವಿವರಗಳನ್ನು ಶ್ರೀಮದಾಚಾರ್ಯರು ಈ ಎರಡೇ ಶ್ಲೋಕಗಳಲ್ಲಿ ಅತ್ಯಂತ ಸಮಗ್ರವಾಗಿ ತುಂಬಾ ಪರಿಣಾಮಕಾರಿಯಾಗಿ ನಿರ್ಣಯಸಮೇತ ನಿರೂಪಿಸಿರುವರು.

೨) ದಂಡಕಾರಣ್ಯದಲ್ಲಿ ಶ್ರೀರಾಮನಿಗೆ ಎದುರಾದ ವಿರಾಧ ಮೊದಲು ಸೀತೆಯನ್ನು ಎತ್ತಿಕೊಂಡು ಗಗನಮಾರ್ಗವಾಗಿ ಓಡತೊಡಗಿದ; ಅವನ ಮೇಲೆ ರಾಮಲಕ್ಷ್ಮಣರು ಬಾಣಗಳನ್ನು ಪ್ರಯೋಗಿಸಲು ಅವನು ಕೆಳಕ್ಕಿಳಿದು ಅವರಿಬ್ಬರನ್ನೂ ಹೆಗಲಮೇಲೇರಿಸಿಕೊಂಡು ಓಡತೊಡಗಿದ; ಆಗ ಶ್ರೀರಾಮನು ಅವನ ತೋಳುಗಳನ್ನೇ ಕತ್ತರಿಸಿದ; ಆಗ ಶರಣಾದ ವಿರಾಧನನ್ನು ಬಿಲವೊಂದರಲ್ಲಿ ಹಾಕಿ ಮುಚ್ಚಿದ; ಅವನ ತೋಳುಗಳ ಮಧ್ಯೆ ಸಿಕ್ಕವರು ಅವನ ವಶವಾಗಲಿ ಎಂಬುದಾಗಿ ಬ್ರಹ್ಮದೇವರ ವರವಿದ್ದುದರಿಂದ ಅವನನ್ನು ಕೊಲ್ಲಲಿಲ್ಲ; ಅವನಿಗೆ ಬಾಹುಗಳು ಕತ್ತರಿಸದಿರಲಿ, ಬಿಲದಲ್ಲಿ ಯಾರೂ ಬೀಳಿಸದಿರಲಿ; ಎಂದೇನೂ ಬ್ರಹ್ಮವರವಿರಲಿಲ್ಲ; ಆದ್ದರಿಂದ ಅವನ ತೋಳುಗಳನ್ನು ಕತ್ತರಿಸಿ, ಬಿಲದಲ್ಲಿ ಹಾಕಿದ;

೩) ಅಲ್ಲದೆ ಸ್ವರೂಪತಃ ಯೋಗ್ಯನಾದವನು ಎಂಬುದನ್ನು ಗಮನಿಸಿ ಅವನು ಮಾಡಿದ ಅಪರಾಧವನ್ನು ಮನ್ನಿಸಿ ಸುಗತಿಯನ್ನೇ ನೀಡಿ ಉದ್ಧರಿಸಿದನು; ಇಂತಹ ಶ್ರೀರಾಮ ಅದೆಂತಹ ಭಕ್ತವತ್ಸಲ ಎಂದೂ ಭಾವ. ಬ್ರಹ್ಮದೇವರ ವರವನ್ನು ಮನ್ನಿಸಿದ್ದು ಸಹ ಅವರ ಮೇಲಿನ ತನ್ನ ಅನುಗ್ರಹವನ್ನು ಜಗತ್ತಿಗೆ ಸಾರಲೆಂದೇ ಹೊರತು ಅಸಾಮರ್ಥ್ಯದಿಂದಲ್ಲ ಎಂಬ ತತ್ತ್ವವೂ ಇಲ್ಲಿ ಸೂಚಿತ.

---

೨೧. ಅಂಬುಜಜನ್ಮನೋವಚನಂ ತವ ಬಾಹುಯುಗಲಮಧ್ಯೇ ಯಃ ಪ್ರಾಪ್ನೋತಿ ಸಃ ತ್ವದ್ವಶೋ ಭವತು ಇತಿ ಸಂಮಾನಯನ್ ಸನ್ ಅನುಜೇನ ಸಹ ಸಾಕಂ ಅಂಸಂ ಇತೋಽಪಿ ಬಾಹುಭಂಗಂ ನ ಕರೋತು ಇತಿ ವರಾಭಾವಾದಸ್ಯ ಬಾಹುಯುಗಲಂ ಭಂಕ್ತ್ವಾ ಬಿಲಗಂ ಚಕಾರೇತಿ ಯೋಜನಾ ॥ –(ವಾ)

ಅಗಸ್ತ್ಯರು ನೀಡಿದ ಶಾರ್ಙ್ಗಧನುಸ್ಸಿನ ಸ್ವೀಕಾರ

ಪ್ರೀತಿಂ ವಿಧಿತ್ಸುರಗಮದ್ಭವನಂ ನಿಜಸ್ಯ
ಕುಂಭೋದ್ಭವಸ್ಯ ಪರಮಾದರತೋಽಮುನಾ ಚ ।
ಸಂಪೂಜಿತೋ ಧನುರನೇನ ಗೃಹೀತಮಿಂದ್ರಾ-
ಚ್ಛಾರ್ಙ್ಗಂ ತದಾದಿಪುರುಷೋ ನಿಜಮಾಜಹಾರ ॥ ೨೨ ॥

ಅ: ನಂತರ ತಮ್ಮ ಭಕ್ತರೂ, ಕುಂಭಸಂಭವರೂ ಆದ ಅಗಸ್ತ್ಯರ ಆಶ್ರಮಕ್ಕೆ ಅವರನ್ನು ಅನುಗ್ರಹಿಸಲೆಂದು ಶ್ರೀರಾಮನು ತೆರಳಿದ; ಮತ್ತು ಅವರಿಂದ ಪರಮಭಕ್ತಿಯಿಂದ ಚೆನ್ನಾಗಿ ಪೂಜಿತನಾದ; ಆದಿಪುರುಷನಾದ ಅವನು ಇಂದ್ರನಿಂದ ಕಳಿಸಲ್ಪಟ್ಟಿದ್ದ ತನ್ನದೇ ಆದ ಶಾರ್ಙ್ಗಧನುಸ್ಸನ್ನು ಆ ಅಗಸ್ತ್ಯರಿಂದ ಸ್ವೀಕರಿಸಿದ.

ಆತ್ಮಾರ್ಥಮೇವ ಹಿ ಪುರಾ ಹರಿಣಾ ಪ್ರದತ್ತ-
ಮಿಂದ್ರೇ ತದಿಂದ್ರ ಉತ ರಾಮಕರಾರ್ಥಮೇವ ।
ಪ್ರಾದಾದಗಸ್ತ್ಯಮುನಯೇ ತದವಾಪ್ಯ ರಾಮೋ
ರಕ್ಷನ್ಋಷೀನವಸದೇವ ಸ ದಂಡಕೇಷು ॥ ೨೩ ॥

ಅ: ಆ ಧನುಸ್ಸು ಶ್ರೀಹರಿ ತನ್ನ ಶ್ರೀರಾಮರೂಪಕ್ಕೆ ಅರ್ಪಿತವಾಗಲಿ ಎಂದೇ ಇಂದ್ರನಿಗೆ ನೀಡಿದ್ದ; ಅದನ್ನು ಇಂದ್ರನು ಶ್ರೀರಾಮನ ಕೈಗೆ ತಲುಪಿಸಲೆಂದೇ ಅಗಸ್ತ್ಯಮುನಿಗೆ ನೀಡಿದ್ದ; ಅದನ್ನೀಗ ಶ್ರೀರಾಮನು ಸ್ವೀಕರಿಸಿ ಋಷಿಗಳನ್ನು ರಕ್ಷಿಸುತ್ತ ದಂಡಕಾರಣ್ಯದಲ್ಲಿ ವಾಸಿಸತೊಡಗಿದ.

ವಿ: ೧) ಅಗಸ್ತ್ಯರಿಂದ ಸಮರ್ಪಿತವಾದ ಶಾರ್ಙ್ಗಧನುಸ್ಸನ್ನು ಶ್ರೀರಾಮ ಸ್ವೀಕರಿಸಿದ್ದು ದಂಡಕಾರಣ್ಯದಲ್ಲಿ ನಡೆದ ಅನಂತರದ ಅಪೂರ್ವವಾದ ಕಾರ್ಯ; ಅದರ ಪೂರ್ವಾಪರಗಳನ್ನೆಲ್ಲ ಶ್ರೀಮದಾಚಾರ್ಯರು ಈ ಎರಡು ಶ್ಲೋಕಗಳಲ್ಲಿ ನಿರೂಪಿಸಿರುವರು.

---

೨೨. ಆತ್ಮಾರ್ಥಂ – ಸ್ವಾವತಾರಭೂತರಾಮಾರ್ಥಮ್ । –(ವಾ)

೨೩. ಋಷೀನೇವ ರಕ್ಷನ್ ನ ತು ರಕ್ಷಾಂಸ್ಯಪಿ ರಕ್ಷನ್ನಿತಿ ಭಾವಿಕಥಾಸೂಚನಾಯ 'ಏವ'ಕಾರಃ । –(ವಾ)

೨೩. ಬಹುವಿಸ್ತಾರವತ್ಯೇಕಸ್ಮಿನ್ನಪಿ ದಂಡಕಾರಣ್ಯೇ ಪ್ರದೇಶವಿಶೇಷಾಪೇಕ್ಷಯಾ ಬಹುವಚನಮ್ । -(ವಾ)

೨೩. ತಸ್ಯ ರೂಪೇಷ್ವಭಾವಾತ್ । ಅ. ೧೬. ಶ್ಲೋ. ೮ ನೋಡಿ.

೨) ಇಂದ್ರ ಮತ್ತು ಅಗಸ್ತ್ಯರು ಶ್ರೀಹರಿಯ ಧನುಸ್ಸನ್ನು ಶ್ರೀಹರಿಯೇ ಆದ ಶ್ರೀರಾಮನಿಗೆ ಸಮರ್ಪಿಸಿ ಕೃತಾರ್ಥರಾದರು. ಆ ಧನುಸ್ಸು ಮಾತ್ರವಲ್ಲ ಈ ಜಗತ್ತಿನಲ್ಲಿ ಪ್ರತಿಯೊಂದೂ ಅದೇಕೆ ಇಡೀ ಜಗತ್ತೇ ಭಗವಂತನದು; ಏನೇ ಅವನಿಗರ್ಪಿಸಿದರೂ ಮೂಲತಃ ಅದೆಲ್ಲ ಅವನದೇ; ಆದರೂ ಅವನು ಅವನ್ನೆಲ್ಲ ಸ್ವೀಕರಿಸಿ, ಅನುಗ್ರಹಿಸುವನು. ಹೀಗೆ ಭಕ್ತರ ಸಮರ್ಪಣಭಾವ, ಭಗವಂತನ ಭಕ್ತವಾತ್ಸಲ್ಯಗಳು ಈ ಪ್ರಸಂಗದಲ್ಲಿ ನಿರೂಪಿತವಾಗಿವೆ ಎಂದು ಭಾವ.

೩) ಮುಂದೆ ಹದಿನಾರನೆಯ ಅಧ್ಯಾಯದಲ್ಲಿ ಗರುಡನು ಸಮರ್ಪಿಸುವ ತನ್ನದೇ ಕಿರೀಟವನ್ನು ಶ್ರೀಕೃಷ್ಣನು ಸ್ವೀಕರಿಸಿ ಅನುಗ್ರಹಿಸುವ ಪ್ರಸಂಗವನ್ನು ಸಹ ಇದೇ ತೆರನಾಗಿ ಅರ್ಥ ಮಾಡಿಕೊಳ್ಳಬೇಕು; ಇದು ಪರಮಾತ್ಮನ ರೂಪರೂಪಗಳಲ್ಲಿನ ಅಭೇದಕ್ಕೂ ಸೂಚಕ (೧೬/೯).

೪) ಕುಂಭಸಂಭವ ಎಂಬ ಪದದಲ್ಲಿ ಅಗಸ್ತ್ಯರ ಜನ್ಮವೃತ್ತಾಂತದ ಸೂಚನೆಯೂ ಇದೆ.

ಶೂರ್ಪನಖಿಯ ಹಿನ್ನೆಲೆ

ಕಾಲೇ ತದೈವ ಖರದೂಷಣಯೋರ್ಬಲೇನ
ರಕ್ಷಃಸ್ವಸಾ ಪತಿನಿಮಾರ್ಗಣತತ್ಪರಾऽऽಸೀತ್ ।
ವ್ಯಾಪಾದಿತೇ ನಿಜಪತೌ ಹಿ ದಶಾನನೇನ
ಪ್ರಾಮಾದಿಕೇನ ವಿಧಿನಾऽಭಿಸಸಾರ ರಾಮಮ್ ॥ ೨೪ ॥

ಅ: ಅದೇ ಸಮಯದಲ್ಲಿ ರಾವಣನ ತಂಗಿಯಾದ ಶೂರ್ಪನಖಿ ಶ್ರೀರಾಮನ ಬಳಿಗೆ ಆಗಮಿಸಿದಳು; ಅವಳ ಪತಿ ರಾವಣನಿಂದ ಪ್ರಾಮಾದಿಕವಾದ ರೀತಿಯಲ್ಲಿ ಸಂಹರಿಸಲ್ಪಟ್ಟಿದ್ದ; ಅನಂತರ ಅವಳು ಮತ್ತೊಬ್ಬ ಗಂಡನನ್ನು ಹುಡುಕುವ ಕಾರ್ಯದಲ್ಲಿ ತತ್ಪರಳಾಗಿದ್ದಳು; ಅವಳ ಕಾರ್ಯಕ್ಕೆ ಖರದೂಷಣರೆಂಬ ಇಬ್ಬರು ರಾಕ್ಷಸ ಸಹೋದರರ ಬೆಂಬಲವೂ ಇದ್ದಿತು.

---

೨೪. ಪ್ರಾಮಾದಿಕೇನ ವಿಧಿನಾ ಪರೈರ್ಯುದ್ಧಕರಣಸಮಯೇ ಉಭಯಸೇನಯೋರ್ಮೇಲನೇ ಸತಿ ಅಜ್ಞಾನ-ನಿಮಿತ್ತಶರಪ್ರಯೋಗಾಖ್ಯಕರ್ಮಣಾ। -(ವಾ)

೨೪. ಅನೇನ ರಂಡಾಯಾಃ ಪತಿನಿಮಾರ್ಗಣಂ ಮಹಾನಧರ್ಮಃ । ಅತೋ ರಾಮೇಣ ಸಾ ಶಿಕ್ಷಿತಾ ನ ತು ಸೀತಾವಶತಯಾ ನಾಪಿ ನಿರಪರಾಧಾಯಾಃ ಶಿಕ್ಷೇತಿ ಸೂಚಿತಮ್ । -(ವಾ)

೨೪. ನಾವಗಚ್ಛಾಮಿ ಯುದ್ಧೇಷು ಸ್ವಾನ್ ಪರಾನಪಿ ಶೋಭನೇ ।
ತೇನಾಯಂ ನಿಹತಃ ಸಖ್ಯೇ ಮಯಾ ಭರ್ತಾ ಪ್ರಭುಸ್ತವ ॥ - ವಾ. ರಾ. (೭/೨೪/೩೪)

ವಿ: ೧) ಶೂರ್ಪನಖಿ ರಾವಣನ ಸಹೋದರಿ; ಅವನು ಹತ್ತುಸಾವಿರ ವರ್ಷಗಳ ಕಾಲ ಘೋರ ತಪಶ್ಚರ್ಯೆಯಲ್ಲಿ ಮಗ್ನನಾಗಿದ್ದಾಗ ಅವನಿಗೆ ಸೇವೆ ಸಲ್ಲಿಸಿದ್ದವಳು; ವಿದ್ಯುಜ್ಜಿಹ್ವ ಎಂಬ ರಾಕ್ಷಸ ಅವಳ ಪತಿ; ಒಮ್ಮೆ ರಾಕ್ಷಸರ ಮೇಲೆ ನಡೆದ ರಾತ್ರಿ ಯುದ್ಧದಲ್ಲಿ ಶತ್ರುವೆಂದು ಭ್ರಮಿಸಿ ಅವನನ್ನು ಸ್ವತಃ ರಾವಣನೇ ಕೊಂದು ಹಾಕಿದ್ದ; ಅನಂತರ ದುಃಖಿತಳಾದ ಶೂರ್ಪನಖಿಗೆ 'ನೀನು ಇಷ್ಟಪಟ್ಟವನನ್ನು ಮತ್ತೆ ವಿವಾಹವಾಗು; ಅದಕ್ಕೆ ನನ್ನ ಸಮ್ಮತಿ ಹಾಗೂ ಸಹಕಾರ ಎರಡೂ ಉಂಟು ಎಂದು ಅನುಮತಿ ನೀಡಿದ ಅವಳಿಗೆ ನೆರವಾಗಲು ಖರದೂಷಣರೆಂಬ ತನ್ನ ಮತ್ತಿಬ್ಬರು ತಮ್ಮಂದಿರಿಗೆ ಆದೇಶ ನೀಡಿದ. ಇಷ್ಟೆಲ್ಲ ಹಿನ್ನೆಲೆಯಲ್ಲಿ ಮತ್ತೊಬ್ಬ ಗಂಡನನ್ನು ಹುಡುಕುವ ಕಾರ್ಯದಲ್ಲಿ ನಿರತಳಾಗಿದ್ದ ಶೂರ್ಪನಖಿ ಶ್ರೀರಾಮನನ್ನು ಕಂಡು ಮೋಹಿತಳಾಗಿ ಅವನ ಬಳಿ ಸಾರಿದಳು ಎಂದು ಭಾವ.

೨) ರಾವಣನಿಗೆ ಬ್ರಹ್ಮವರ, ರುದ್ರವರ ಮತ್ತು ಹತ್ತು ಮುಖಗಳು ಎಂದರೆ ಇಪ್ಪತ್ತು ಕಣ್ಣುಗಳು; ಸಾಲದ್ದಕ್ಕೆ ನಿಶಾಚರ; ಶೂರ್ಪನಖಿ ಅವನ ತಂಗಿ; ಅವನ ತಪಸ್ಸಿಗೆ ನೆರವಾಗಿದ್ದವಳು. ಅಂತಹ ರಾವಣ ತನ್ನ ತಂಗಿಯ ಗಂಡನನ್ನೇ ಅದೂ ರಾತ್ರಿ ಯುದ್ಧದಲ್ಲಿ ಗುರುತಿಸದೆ ಕೊಲ್ಲುವಷ್ಟು ಮೂರ್ಖನಾಗಿದ್ದ ಎಂದು 'ದಶಾನನೇನ' ಶಬ್ದದಿಂದ ಸೂಚಿತವಾಗುವ ಧ್ವನಿಯನ್ನು ಗಮನಿಸಬೇಕು. ಎಂದರೆ ಅವನ ಇಪ್ಪತ್ತು ಕಣ್ಣುಗಳಿದ್ದರೂ ತಂಗಿಯ ಗಂಡನನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಬ್ರಹ್ಮರುದ್ರರ ವರದಿಂದ ಅವನಿಗೆ ದೈಹಿಕಬಲ ಬಂದಿದ್ದರೂ, ವಿವೇಕ ಉದಿಸಿರಲಿಲ್ಲ ಎಂದು ಭಾವ. ವಿವೇಕವಿಲ್ಲದ ಬಾಹುಬಲ ಎಷ್ಟು ಅನರ್ಥಕರ; ತತ್ತ್ವಜ್ಞಾನದ ನೆರವಿಲ್ಲದ ವಿಜ್ಞಾನವೂ ಸಹ ಇದರಂತೆ ಜಗತ್ತಿಗೆ ತಾರಕವಾಗದೆ ಮಾರಕವೇ ಸರಿ ಎಂದರ್ಥ.

೩) ಶೂರ್ಪನಖಿಯು ವಿಧವೆ; ವಿಧವೆಗೆ ಪುನರ್ವಿವಾಹ ಅಧರ್ಮ ಎಂಬುದು ಶಾಸ್ತ್ರಗಳ ನಿಲುವು; ಅದರಿಂದಲೇ ಅವಳು ಶ್ರೀರಾಮನಿಂದ ಶಿಕ್ಷಿಸಲ್ಪಟ್ಟಳು; ಖಂಡಿತವಾಗಿಯೂ ಶ್ರೀರಾಮ ಶಿಕ್ಷಿಸಿದ್ದು ನಿರಪರಾಧಿಯನ್ನಲ್ಲ ಎಂದೂ ತಿಳಿಯಬೇಕು.

೪) ಮೊತ್ತ ಮೊದಲ ಬಾರಿಗೆ ವಿಧವಾವಿವಾಹಕ್ಕೆ ಪ್ರೋತ್ಸಾಹವಿತ್ತ ರಾಜ ಎಂಬುದಾಗಿ ರಾವಣನನ್ನು ಗುರುತಿಸಬಹುದು.

ಶ್ರೀರಾಮನ ಬಳಿ ಶೂರ್ಪನಖಿ

ಸಾऽನುಜ್ಞಯೈವ ರಜನೀಚರಭರ್ತುರುಗ್ರಾ
ಭ್ರಾತೃದ್ವಯೇನ ಸಹಿತಾ ವನಮಾವಸಂತೀ ।
ರಾಮಂ ಸಮೇತ್ಯ ಭವ ಮೇ ಪತಿರಿತ್ಯವೋಚತ್
ಭಾನುಂ ಯಥಾ ತಮ ಉಪೇತ್ಯ ಸುಯೋಗಕಾಮಮ್ ॥ ೨೫ ॥

ಅ: ನಿಶಾಚರರ ಅರಸನಾದ ರಾವಣನ ಆದೇಶದಂತೆ ಇಬ್ಬರು ಸಹೋದರರ ಸಮೇತವಾಗಿ ಆ ದಂಡಕಾರಣ್ಯದಲ್ಲಿ ನೆಲೆಸಿದ್ದವಳು ಆ ಶೂರ್ಪನಖಿ; ಅವಳು ಶ್ರೀರಾಮನ ಬಳಿ ಸಾರಿ ನೀನು ನನಗೆ ಪತಿಯಾಗು ಎಂದು ನುಡಿದಳು; ಸೂರ್ಯನ ಜೊತೆ ಬಯಸಿ ಅಂಧಕಾರವು ಅವನ ಬಳಿ ಸಾರಿದಂತೆ.

ವಿ: ೧) ಶ್ರೀರಾಮನನ್ನು ಸಮೀಪಿಸಿ ಶೂರ್ಪನಖಿಯು 'ನೀನು ನನ್ನ ಪತಿಯಾಗು' ಎಂದು ಕೇಳಿದ್ದು ಎಷ್ಟು ಅನನುರೂಪದ ಮಾತು ಎಂಬುದನ್ನು ವಾಲ್ಮೀಕಿಮುನಿಗಳು ಪರಿಪರಿಯಿಂದ ವರ್ಣಿಸಿರುವರು. ಶ್ರೀಮದಾಚಾರ್ಯರು 'ಸೂರ್ಯನ ಜೊತೆ ಬಯಸಿ ಅಂಧಕಾರವು ಅವನ ಬಳಿ ಸಾರಿದಂತೆ' ಎಂಬ ಒಂದೇ ಮಾತಿನಲ್ಲಿ ಆ ಪ್ರಸಂಗದ ಒಟ್ಟು ವೈರೂಪ್ಯವನ್ನು ಬಣ್ಣಿಸಿರುವರು.

೨) ಖರದೂಷಣರಲ್ಲಿ ಖರನು ಶೂರ್ಪನಖಿಯ ಸಾಕ್ಷಾತ್ ಸಹೋದರ; ದೂಷಣನು ಅವಳ ಚಿಕ್ಕಮ್ಮನ ಮಗ.

೩) 'ತಮಸ್' ಪದಕ್ಕೆ 'ರಾಹು' ಎಂಬ ಅರ್ಥವೂ ಕೋಶಗಳಲ್ಲುಂಟು; ಅದರಂತೆ 'ಸರ್ವದಾ ಜೊತೆಯಿರಲು ಬಯಸಿ ರಾಹುವು ಸೂರ್ಯನ ಬಳಿ ಸಾರಿದಂತೆ' ಎಂದೂ ಅರ್ಥ ಮಾಡಿಕೊಳ್ಳಬಹುದು ಎಂಬ ವಿವರಣೆ ಜನಾರ್ದನೀಯದಲ್ಲಿದೆ.

---

೨೫. ಸುಮುಖಂ ದುರ್ಮುಖೀ ರಾಮಂ ವೃತ್ತಮಧ್ಯಂ ಮಹೋದರೀ ।
ವಿಶಾಲಾಕ್ಷಂ ವಿರೂಪಾಕ್ಷೀ ಸುಕೇಶಂ ತಾಮ್ರಮೂರ್ಧಜಾ ॥
ಪ್ರೀತಿರೂಪಂ ವಿರೂಪಾ ಸಾ ಸುಸ್ವರಂ ಭೈರವಸ್ವರಾ ।
ತರುಣಂ ದಾರುಣಾ ವೃದ್ಧಾ ದಕ್ಷಿಣಂ ವಾಮಭಾಷಿಣೀ ॥
ನ್ಯಾಯವೃತ್ತಂ ಸುದುರ್ವೃತ್ತಾ ಪ್ರಿಯಮಪ್ರಿಯದರ್ಶನಾ ॥ (ಅರಣ್ಯ ೧೭/೧೦-೧೨)

೨೫. ಏಕಃ ಸಹೋದರಃ । ದೂಷಣಸ್ತು ಮಾತೃಷ್ವಸುಃ ಪುತ್ರಃ । ತದುಕ್ತಮಾರಣ್ಯಕೇ-
ರಾಕಾಯಾಂ ಮಿಥುನಂ ಜಜ್ಞೇ ಖರಃ ಶೂರ್ಪನಖೀ ತಥಾ ।
ಆರ್ಷೇ ಚ-ತತ್ರ ಮಾತೃಷ್ವಸುಃ ಪುತ್ರೋ ಭ್ರಾತಾ ತವ ಸುಖಪ್ರದಃ ।
ಭವಿಷ್ಯತಿ ಸ ತೇ ಕರ್ತಾ ಯತ್ತ್ವಂ ವಕ್ಷ್ಯಸಿ ತದ್ವದ ॥- ಇತಿ -(ಜ)

೨೫. ಅಚೇತನೇ ಚೇತನವದುಪಚಾರಃ । ಯದ್ವಾ ತಮಃ-ರಾಹುಃ । ಸುಯೋಗಕಾಮಂ ಸರ್ವದಾ ಸಂಬಂಧ-ಕಾಮಃ। ಸೈಂಹಿಕೇಯಸ್ತಮಸ್ತಮಾವಿತಿ ವಿಶ್ವಃ । -(ಜ)

೨೫. ನಷ್ಟಂ ಭವತೀತ್ಯಾದೇಃ ಶೇಷೇಣ ಯಥಾ ತಮಃ ಭಾನುಮುಪೇತ್ಯ ನಷ್ಟಂ ಭವತಿ ತಥಾ ರಾಮಂ ಸಮೇತ್ಯ ನಷ್ಟಾಽಭವದಿತ್ಯರ್ಥಸ್ಯೋಕ್ತತ್ವಾತ್ । ಏತೇನೈವ ರಾಮಪ್ರಾಪ್ತ್ಯನಂತರಮೇವ ನಷ್ಟತ್ವಾಭಾವಾತ್ ರಾಮಂ ಸಮೇತ್ಯ ನಷ್ಟಾಽಭವದಿತಿ ಕಥನಮಯುಕ್ತಮಿತಿ ದೂಷಣಂ ಪರಾಸ್ತಮ್ । ಏಷ್ಯತ್ ತು ನಿಶ್ಚಿತಂ ಯತ್ ತದತೀತತ್ವೇನ ಭಣ್ಯತ ಇತಿ ವಚನಾನುಸಾರಾನ್ನಿಶ್ಚಿತತ್ವಾಭಿಪ್ರಾಯೇಣ ನಷ್ಟಾಽಭವದಿತ್ಯುಕ್ತಮಿತಿ ಸ್ವೀಕರಣಾತ್ । -(ಸ.)

೪) ಜೀವೇಶ್ವರೈಕ್ಯವನ್ನು ಹೇಳುವ ಮಾಯಾವಾದಿಗಳ ಪ್ರಯತ್ನ ರಾವಣನನ್ನು ವಿವಾಹ–ವಾಗಲು ಬಯಸಿದ ಶೂರ್ಪನಖಿಯ ಪ್ರಯತ್ನದಂತೆ ಹಾಸ್ಯಾಸ್ಪದ ಎಂದೂ ತಿಳಿಯಬಹುದು.

ಶೂರ್ಪನಖಿಯ ಕಿವಿ ಮೂಗುಗಳನ್ನು ಕತ್ತರಿಸಿದ್ದು

ತಾಂ ತತ್ರ ಹಾಸ್ಯಕಥಯಾ ಜನಕಾಸುತಾಗ್ರೇ*
ಗಚ್ಛಾನುಜಂ ಮ ಇಹ ಮೇತಿ ವಚಃ ಸ ಉಕ್ತ್ವಾ।
ತೇನೈವ ದುಷ್ಟಚರಿತಾಂ ಹಿ ವಿಕರ್ಣನಾಸಾಂ
ಚಕ್ರೇ ಸಮಸ್ತರಜನೀಚರನಾಶಹೇತೋಃ ॥ ೨೬ ॥

ಅ: ಜನಕರಾಜನಿಗೆ ಯಜ್ಞಭೂಮಿಯಲ್ಲಿ ಜನಿಸಿದ ಪುತ್ರಿಯೆನ್ನಿಸಿದ ಸೀತಾದೇವಿಯ ಎದುರು ಆ ಶೂರ್ಪನಖಿಯನ್ನು ಶ್ರೀರಾಮನು ಹಾಸ್ಯದ ಮಾತುಗಳನ್ನು ಆಡುತ್ತ ನುಡಿದ; 'ನೀನು ನನ್ನ ತಮ್ಮನ ಬಳಿಗೆ ತೆರಳು; ಇಲ್ಲಿ ಬೇಡ'; ಎಂದು ಹೇಳಿ ಅವನಿಂದಲೇ ಕಿವಿ ಮೂಗು ಕತ್ತರಿಸಲ್ಪಟ್ಟವಳನ್ನಾಗಿ ಮಾಡಿಸಿದ ಸಕಲ ನಿಶಾಚರರ ಸಂಹಾರಕ್ಕೆ ಕಾರಣವಾಗಲಿ ಎಂದು.

ವಿ: ೧) ಹಾಗೆ ಬಂದ ಶೂರ್ಪನಖಿಯನ್ನು ಶ್ರೀರಾಮ ವಿನೋದದ ಮಾತುಗಳಿಂದ ಲಕ್ಷ್ಮಣನ ಬಳಿಗೆ ಕಳುಹಿಸಿದ; ಶ್ರೀರಾಮನ ಅಭಿಪ್ರಾಯವನ್ನು ತಿಳಿದ ಲಕ್ಷ್ಮಣನೂ 'ನೀನು ನನ್ನ ಪತ್ನಿಯಾದರೆ ದಾಸನ ಪತ್ನಿಯಾಗುವಿ, ನೀನು ರಾಮನ ಪತ್ನಿಯೇ ಆಗಲು ಪ್ರಯತ್ನಿಸು' ಎಂದು ಪುನಃ ರಾಮನ ಬಳಿಗೇ ಅಟ್ಟಿದ; ಆಗ ಸೀತೆಯನ್ನು ತಿಂದು ಶ್ರೀರಾಮನ ವಿಕಮಾತ್ರ ಪತ್ನಿಯಾಗುವೆನೆಂದು ಅವಳು ನುಗ್ಗಿದಾಗ, ಅಣ್ಣನ ಅಪ್ಪಣೆಯಂತೆ ಲಕ್ಷ್ಮಣನು ಅವಳ ಕಿವಿಮೂಗುಗಳನ್ನು ಕತ್ತರಿಸಿದ; ಎಂಬ ರಾಮಾಯಣಕಥಾವಿವರವು ಇದರಲ್ಲಿ ಸಂಗೃಹೀತವಾಗಿದೆ.

---

೨೬. ಚಕ್ರೇ ಕಾರಯಾಮಾಸ ಇತ್ಯರ್ಥಃ। –(ಜ, ವ)

೨೬. ಜನಕಾಸುತಾಗ್ರೇ – ಜನಕಸ್ಯ ಪತ್ನೀಯೋನೌ ಅಜಾತತ್ವೇನ ಈಷತ್ಸುತತ್ವಾತ್ ಜನಕಾಸುತಾ ಜಾನಕೀ। 'ಅಯೋನಿಜಾ ತು ಯಾ ಕನ್ಯಾ ಅಸುತೇತ್ಯಭಿದೀಯತೇ' ಇತ್ಯಭಿಧಾನಮ್ । ಯಜ್ಞವೇದ್ಯಾಂ ಲಾಂಗಲೇನ ಆಕರ್ಷಣೇ ಸತಿ ಲಾಂಗನಪದ್ಧತೌ ಯಜ್ಞಭೂಮೇರೇವ ಜಾತತ್ವಾತ್ ಅಭಿಮಾನಮಾತ್ರೇಣ ಸುತೇತಿ ಭಾವಃ। –(ವಾ)

ಅಥವಾ ಜನಕಸ್ಯ ಆಸುತಾ ಈಷತ್ಸುತಾ ಜಾನಕೀತಿ ಪ್ರಸಿದ್ಧಿಮಾತ್ರಂಗತಾ । ವಸ್ತುತೋ ಯಜ್ಞಭೂಮೌ ಪ್ರಾದುರ್ಭೂತೇತ್ಯರ್ಥಃ। –(ವ)

* ಅಯೋನಿಜಾ ತು ಯಾ ನಾರೀ ಸಾऽऽಸುತೇತ್ಯಭಿಧೀಯತೇ ॥ (ವೇ., ವ)

೨೬. ಅಪರಾಧಿನಾ ಕರ್ಣನಾಸಾಚ್ಛೇದಾದಿಜುಗುಪ್ಸಿತಕರ್ಮಣಃ ರಾಜಾಧಿರಾಜೇನ ಸ್ವೇನ ಕರ್ತುಮಯೋಗ್ಯತ್ವಾತ್ ಭೃತ್ಯಾಂತರಾಭಾವಾಚ್ಚ ಲಕ್ಷ್ಮಣಮುಖೇನೈವ ಕಾರಿತವಾನಿತಿ ಭಾವೇನೋಕ್ತಮ್ । ತೇನೈವ ವಿಕರ್ಣನಾಸಾಂ ಚಕ್ರೇ । ಇತಿ। –(ವಾ)

೨) ಅಯೋನಿಜೆಯಾದ ಕನ್ಯೆ(ಸ್ತ್ರೀ)ಯನ್ನು 'ಆಸುತಾ' ಎನ್ನುವರು; ಸೀತೆಯು ಜನಕ–ರಾಜನಿಗೆ ಹಾಗೆ ಜನಿಸಿದ ಪುತ್ರಿ; ಎಂಬುದನ್ನು 'ಜನಕಾಸುತಾ' (ಜನಕಸ್ಯ ಆಸುತಾ) ಎಂಬ ಪದದಿಂದ ತಿಳಿಸಿರುವರು.

೩) ಅಪರಾಧಿಗಳನ್ನು ಯಥೋಚಿತವಾಗಿ ಶಿಕ್ಷಿಸುವುದು ರಾಜನ ಕರ್ತವ್ಯ; ಶೂರ್ಪ–ನಖಿಯು ಪುನರ್ವಿವಾಹಕ್ಕೆ ಯತ್ನಿಸಿದ ಅಪರಾಧಿನಿ; ಅಂತಹವರಿಗೆ ಕಿವಿಮೂಗುಗಳನ್ನು ಕತ್ತರಿಸಿ ವಿರೂಪಗೊಳಿಸುವ ಶಿಕ್ಷೆ ಶಾಸ್ತ್ರದಲ್ಲಿ ವಿಹಿತ; ಅದಕ್ಕೆಂದೇ ಶ್ರೀರಾಮ ಶೂರ್ಪನಖಿಯ ಕಿವಿ ಮೂಗುಗಳನ್ನು ಕತ್ತರಿಸಿದ ಎಂದೂ; ಶಿಕ್ಷೆ ವಿಧಿಸುವುದು ಅರಸನ ಕರ್ತವ್ಯ; ಅದನ್ನು ನಡೆಸಬೇಕಾದ ಹೊಣೆ ಭೃತ್ಯರದು; ಲಕ್ಷ್ಮಣನಾದ ರಾಮ ಅವನಿಂದಲೇ ಅವಳ ಕಿವಿ ಮೂಗುಗಳನ್ನು ಕತ್ತರಿಸಿ ಹಾಕಿಸಿದ ಎಂದೂ ತಿಳಿಯಬೇಕು.

೪) ಶೂರ್ಪನಖಿಯನ್ನು ಹಾಗೆ ವಿರೂಪಗೊಳಿಸಿದ್ದು ಖರದೂಷಣ ನೇತೃತ್ವದ ಹದಿನಾಲ್ಕು ಸಾವಿರ ರಾಕ್ಷಸರ ಸಂಹಾರಕ್ಕೂ, ಅನಂತರ ಅವಳ ಮಾತು ಕೇಳಿ ಸೀತಾಪಹರಣಾದಿ ಕಾರ್ಯಕ್ಕೆ ಯತ್ನಿಸಿ ಕೊನೆಗೆ ಸರ್ವನಾಶದತ್ತ ಸಾಗಿದ ರಾವಣನ ಹನನಕ್ಕೂ ಕಾರಣವಾಯಿತು; ಹೀಗೆ ಈ ಶೂರ್ಪನಖಿಪ್ರಸಂಗ ಮುಂದಿನ ಸಕಲ ರಾಕ್ಷಸರ ನಾಶಕ್ಕೆ ಪೀಠಿಕೆಯಾಯಿತು ಎಂಬುದನ್ನು **'ಸಮಸ್ತರಜನೀಚರ ನಾಶಹೇತೋಃ'** ಎಂಬ ಪದದಿಂದ ತಿಳಿಸಿರುವರು.

ಖರ, ತ್ರಿಶಿರರಸ್ಸು, ದೂಷಣಾದಿಗಳ ವಧೆ

ತತ್ಪ್ರೇರಿತಾನ್ ಸಪದಿ ಭೀಮಬಲಾನ್ ಪ್ರಯಾತಾಂ–
ಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ।
ಜಘ್ನೇ ಚತುರ್ದಶಸಹಸ್ರಮವಾರಣೀಯ–
ಕೋದಂಡಪಾಣಿರಖಿಲಸ್ಯ ಸುಖಂ ವಿಧಾತುಮ್ ॥ ೨೭ ॥

---

೨೭. ಜಘ್ನೇ ಚತುರ್ದಶಸಹಸ್ರಮವಾರಣೀಯಕೋದಂಡಪಾಣಿರಟಮಾನ ಉವಾಸ ಕೃಚ್ಛ್ರಮ್ ।
- ಭಾಗವತ(೯/೧೦/೯)

೨೭. ಅರ್ಧಾಧಿಕಮುಹೂರ್ತೇನ ರಾಮೇಣ ನಿಶಿತೈಃ ಶರೈಃ ।
ಚತುರ್ದಶಸಹಸ್ರಾಣಿ ರಕ್ಷಸಾಂ ಕಾಮರೂಪಿಣಾಮ್ ॥
ಖರದೂಷಣಮುಖ್ಯಾನಾಂ ನಿಹತಾನಿ ಮಹಾಮೃಧೇ ॥ – ವಾ. ರಾ. (೩/೩೦/೩೪)

೨೭. ಅತಃ ಸೀತಾದುಃಖಾದಿಕಂ ಸರ್ವಂ ಮೃಷಾಪ್ರದರ್ಶನಮೇವ । - ಕೂರ್ಮಪುರಾಣ । ಗೀ. ಭಾ.(೧೪/೩)

ಸೀತಾಪ್ರತಿಕೃತಿವಿಚಾರಸ್ತು ವರಾಹಪುರಾಣೇ, ಅಗ್ನಿಪುರಾಣೇ, ಬ್ರಹ್ಮವೈವರ್ತೇ, ಬ್ರಹ್ಮಪುರಾಣೇऽಪಿ ದೃಶ್ಯತೇ, ಅದ್ಭುತರಾಮಾಯಣೇ, ರಾಮಚರಿತಮಾನಸೇऽಪಿ ಚ ।

ಅ: ಆ ಶೂರ್ಪನಖಿಯಿಂದ ಪ್ರಚೋದಿತರಾಗಿ ತನ್ನ ಮೇಲೆ ನುಗ್ಗಿ ಬಂದ ಖರ, ತ್ರಿಶಿರಸ್, ದೂಷಣ ಮೊದಲಾದ ಅವಳ ಭಯಂಕರ ಬಲದ ಹದಿನಾಲ್ಕು ಸಾವಿರ ಬಂಧುಗಳನ್ನು ಶ್ರೀರಾಮನು ಆ ಕೂಡಲೇ ಕೊಂದು ಹಾಕಿದ; ಯಾರಿಂದಲೂ ಎದುರಿಸಲಾಗದ ಶಾರ್ಙ್ಗಧನುಸ್ಸನ್ನು ಹಿಡಿದ ಅವನು ಹಾಗೆ ಮಾಡಿದ್ದು ಸಕಲರಿಗೂ ಸುಖನೀಡಲೆಂದೇ ಆಗಿತ್ತು.

ವಿ: ೧) ಹಾಗೆ ಕಿವಿ ಮೂಗು ಕತ್ತರಿಸಲ್ಪಟ್ಟ ಶೂರ್ಪನಖಿ ತನ್ನ ಬಂಧುಗಳಾದ ಖರ, ದೂಷಣಾದಿಗಳ ಬಳಿಗೆ ತೆರಳಿ ಶ್ರೀರಾಮನ ಮೇಲೆ ಕಾದಲು ಕೇಳಿಕೊಂಡಳು; ಹಾಗೆ ನುಗ್ಗಿದ ಅವರ ಸಂಖ್ಯೆ ಹದಿನಾಲ್ಕುಸಾವಿರದಷ್ಟಿತ್ತು; ಅವರ ಬಲ ಭಯಂಕರವಾಗಿತ್ತು; ಅಂತಹ ಬಲದ ಹಮ್ಮು ಅವರು ಹಾಗೆ ನುಗ್ಗಲು ಮತ್ತೊಂದು ಕಾರಣವಾಗಿತ್ತು. ಅವರೆಲ್ಲ ಶ್ರೀರಾಮನ ಬಾಣಗಳಿಂದ ಬಂದಷ್ಟೇ ವೇಗದಿಂದ ಯಮಪುರಿಯನ್ನು ತಲುಪಿದರು ಎಂದು ಭಾವ.

೨) ತಪೋಭೂಮಿಯಾಗಿದ್ದ ದಂಡಕಾರಣ್ಯ ಖರದೂಷಣಾದಿರಾಕ್ಷಸರ ನೆಲೆಯಿಂದಾಗಿ ರುದ್ರಭೂಮಿಯಾಗಿತ್ತು; ಅವರ ಸಂಹಾರದಿಂದ ಅದು ಮತ್ತೆ ತಪೋವನವಾಯಿತು ಎಂದು ಭಾವ.

೩) ಇಂತಹ ಚತುರ್ದಶಸಹಸ್ರರಾಕ್ಷಸರನ್ನು ಸಂಹರಿಸುವುದು ಚತುರ್ದಶ ವರ್ಷಗಳ ವನವಾಸದ ಮುಖ್ಯೋದ್ದೇಶಗಳಲ್ಲಿ ಒಂದಾಗಿತ್ತು.

೪) ಇದು ಈ ಭಾಗವತಶ್ಲೋಕದ ರೂಪಾಂತರವಾಗಿದೆ ಎಂಬುದನ್ನು ಗಮನಿಸಬೇಕು:

ರಕ್ಷಃಸ್ವಸುರ್ವ್ಯಕೃತರೂಪಮಶುದ್ಧಬುದ್ಧೇಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ।
ಜಘ್ನೇ ಚತುರ್ದಶಸಹಸ್ರಮವಾರಣೀಯಕೋದಂಡಪಾಣಿರಟಮಾನ ಉವಾಚ ಕೃಚ್ಛ್ರಮ್ ॥
-ಭಾಗವತ (೯/೧೦/೯)

ಶ್ರೀರಾಮನ ಕಾರ್ಯ ದ್ವಂದ್ವದ್ವಂದ್ವವಾದದ್ದು

ದತ್ತೇಽಭಯೇ ರಘುವರೇಣ ಮಹಾಮುನೀನಾಂ
ದತ್ತೇ ಭಯೇ ಚ ರಜನೀಚರಮಂಡಲಸ್ಯ ।
ರಕ್ಷಃಪತಿಃ ಸ್ವಸೃಮುಖಾದವಿಕಂಪನಾಚ್ಚ
ಶ್ರುತ್ವಾ ಬಲಂ ರಘುಪತೇಃ ಪರಮಾಪ ಚಿಂತಾಮ್ ॥ ೨೮ ॥

ಅ: ರಘುಶ್ರೇಷ್ಠನಾದ ಶ್ರೀರಾಮನಿಂದ ಮಹಾ ಮುನಿಗಳಿಗೆ ಅಭಯ ಲಭಿಸಿತು; ಮತ್ತು ನಿಶಾಚರಸಮುದಾಯಕ್ಕೆಲ್ಲ ಭಯವೂ ಕವಿಯಿತು; ಇಂತಹ ಶ್ರೀರಾಮನ ಅಪಾರ ಬಲವನ್ನು ತನ್ನ

---

೨೮. ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ –ಗೀತಾ (೪/೮)

ತಂಗಿ ಶೂರ್ಪನಖಿಯಿಂದಲೂ, ಅಕಂಪನನಿಂದಲೂ ತಿಳಿದ ರಾಕ್ಷಸರಾಜನಾದ ರಾವಣ ಬಹಳವಾದ ಚಿಂತೆಗೆ ಗುರಿಯಾದ.

ವಿ: ೧) ಖರದೂಷಣರ ಬಳಿ ತೆರಳಿ ಅವರ ಪ್ರಾಣಹರಣಕ್ಕೆ ನಿಮಿತ್ತಳಾದ ಶೂರ್ಪನಖಿ ಅನಂತರ ರಾವಣನ ಬಳಿಗೆ ತೆರಳಿದಳು; ಎಂದರೆ ಅವಳು ಅವನ ಪ್ರಾಣಕ್ಕೂ ಸಂಚಕಾರ ತರುವವಳೇ ಎಂದರ್ಥ.

೨) ಖರದೂಷಣರ ವಧೆಯಿಂದ ಮುನಿಗಳು ನಲಿದಾಡಿದರೆ, ರಾಕ್ಷಸರು ಭಯಭೀತ–ರಾದರು; ಭಗವಂತನ ಪ್ರತಿಯೊಂದು ಕಾರ್ಯದ ಉದ್ದೇಶವೂ ಇದೇ ಆಗಿದೆ; ಸುರರು ನಲಿಯಬೇಕು; ಅಸುರರು ಅಳಿಯಬೇಕು; ತನ್ನ ಒಂದು ಕಾರ್ಯದಿಂದ ಎರಡು ಉದ್ದೇಶಗಳನ್ನು ಏಕಕಾಲಕ್ಕೆ ಸಾಧಿಸುವ ಶ್ರೀಹರಿಯ ಇಂತಹ ಹಿರಿಮೆಯನ್ನೇ ಜ್ಞಾನಿಗಳು; 'ಇಂದಿರೇಶನೆ ನಿನ್ನದೊಂದು ಒಂದು ಕ್ರಿಯೆಯು ದ್ವಂದ್ವ ದ್ವಂದ್ವವಾಯಿತೋ' ಎಂಬುದಾಗಿ ಸ್ತುತಿಸಿರುವರು.

೩) ವಾಲ್ಮೀಕಿರಾಮಾಯಣದಂತೆ ರಾವಣನ ಬಳಿಗೆ ಮೊದಲು ತೆರಳಿ ಖರದೂಷಣರ ವಧೆಯ ವಿಚಾರವನ್ನು ತಲುಪಿಸಿದವನು ಅಕಂಪನ; ಅನಂತರ ಹಾಗೆ ಮಾಡಿದವಳು ಶೂರ್ಪನಖಿ. ಶ್ರೀಮದಾಚಾರ್ಯರು ಶೂರ್ಪನಖಿಯ ಹೆಸರನ್ನು ಮೊದಲು ಹೇಳುವ ಮೂಲಕ ಪಾಪ–ಕಾರ್ಯದಲ್ಲಿ ಅವಳ ಪಾತ್ರವೇ ಹಿರಿದು ಎಂಬುದನ್ನು ಸೂಚಿಸಿರುವರು.

೪) 'ಅಕಂಪನ' ಎಂಬುದು ಅವನ ಹೆಸರು; ಶ್ರೀಮದಾಚಾರ್ಯರು ಎಂಟನೇ ಅಧ್ಯಾಯದಲ್ಲಿ ಹಾಗೆಂದೇ ಕರೆದಿರುವರು – (೮/೨೪); ರಾಮಾಯಣದಲ್ಲಿರುವುದೂ ಹಾಗೆಯೇ.

ಮಾರೀಚನ ಬಳಿಗೆ ರಾವಣ

ಶ್ರುತ್ವಾऽऽಶು ಕಾರ್ಯಮವಮೃಶ್ಯ ಜಗಾಮ ತೀರೇ
ಕ್ಷೇತ್ರಂ ನದೀನದಪತೇಃ ಶ್ರವಣಂ ಧರಿತ್ರ್ಯಾಃ ।
ಮಾರೀಚಮತ್ರ ತಪಸಿ ಪ್ರತಿವರ್ತಮಾನಂ
ಭೀತಂ ಶರಾದ್ರಘುಪತೇರ್ನಿತರಾಂ ದದರ್ಶ ॥ ೨೯ ॥

---

೨೯. ಧರಿತ್ರ್ಯಾಃ – ಗೋರೂಪಧರಿತ್ರ್ಯಾಃ ಶ್ರವಣಂ ಗೋಕರ್ಣಮ್ । ಅತೋ ನ ಭಾಕ್ತೋऽಯಂ ಪ್ರಯೋಗಃ। ವಾರಕನ್ಯಾಪುರಾತ್ ಗೋಕರ್ಣಪರ್ಯಂತಾ ಯಾ ಪರಶುರಾಮಭೂಮಿಃ ಸಾ ಗೋರೂಪೇಣ ತಿಷ್ಠತಿ ತಸ್ಯಾ ಊರ್ಧ್ವಃ ಕೋಟೀಶ್ವರಸನ್ನಿಧಾನಭೂಮೌ ಅತ ಏವ ಬಹುಸಸ್ಯಾದಿ ಸಮೃದ್ಧಿಮತೀ ಸಾ ಭೂಮಿಃ । ಕರ್ಣಸ್ತು ಗೋಕರ್ಣಪೃಥಿವ್ಯಾಮಿತಿ ಭಾರತಕಥಾ । ಅತೋ ಧರಿತ್ರ್ಯಾಃ ಶ್ರವಣಮಿತಿ ಸಾಧೂಕ್ತಮಾಚಾರ್ಯವರ್ಯೇಣ । –(ವ)

೨೯. ಶರೇಣ ಮುಕ್ತೋ ರಾಮಸ್ಯ ಕಥಂಚಿತ್ ಪ್ರಾಪ್ಯ ಜೀವಿತಮ್ ।
ಇಹ ಪ್ರವ್ರಾಜಿತೋ ಯುಕ್ತಸ್ತಾಪಸೋऽಹಂ ಸಮಾಹಿತಃ । –ವಾ. ರಾ. ೩/೩೮/೧೫

ಅ: ರಾವಣ ಕರ್ತವ್ಯದ ಬಗ್ಗೆ ಚಿಂತಿಸಿ ಸಮುದ್ರತೀರದ **'ಗೋಕರ್ಣ'** ಕ್ಷೇತ್ರಕ್ಕೆ ತ್ವರೆಯಿಂದ ಧಾವಿಸಿದ; ಮತ್ತು ಅಲ್ಲಿ ಶ್ರೀರಾಮನ ಬಾಣಕ್ಕೆ ಬಹಳವಾಗಿ ಅಂಜಿ ತಪೋನಿರತನಾಗಿದ್ದ ಮಾರೀಚನನ್ನು ಕಂಡ.

ವಿ: ೧) ಗೋಕರ್ಣವು (ಗೋರೂಪದ ಪರಶುರಾಮ) ಭೂಮಿಗೆ ಕರ್ಣಸ್ಥಾನವೆನಿಸಿದ್ದ ಪುಣ್ಯಕ್ಷೇತ್ರ; ಅದಕ್ಕೇ **'ಗೋಕರ್ಣ'** ಎಂದು ಹೆಸರು ಎಂಬುದನ್ನು **'ಶ್ರವಣಂ ಧರಿತ್ರ್ಯಾಃ'** ಎಂಬ ನಿರ್ವಚನದಿಂದ ಶ್ರೀಮದಾಚಾರ್ಯರು ತೋರಿಸಿರುವರು. ಸಮುದ್ರತೀರದ ಈ ಸುಪ್ರಸಿದ್ಧಕ್ಷೇತ್ರದ ಬಗ್ಗೆ ವಿವರಗಳನ್ನು ಶ್ರೀವಾದಿರಾಜರ ತೀರ್ಥಪ್ರಬಂಧ ಮತ್ತು ಅದರ ವ್ಯಾಖ್ಯಾನಗಳಲ್ಲಿ ಕಾಣಬಹುದು.

೨) ಕುಂಭಕರ್ಣನ ಅಣ್ಣನಾದ ರಾವಣ ಗೋಕರ್ಣಕ್ಕೆ ತೆರಳಿ ಮಾರೀಚನನ್ನೂ ಕಂಡ; ಶಾಸ್ತ್ರ ಶ್ರವಣಮಾಡದ ಜನರು ಎಲ್ಲಿಗೆ ಹೋದರೂ ಅವರಿಗೆ ಸಿಕ್ಕುವುದು ಮಾರೀಚನಂತಹ ನೀಚರು ಮಾತ್ರ ಎಂಬ ತತ್ತ್ವ ಇಲ್ಲಿ ಸೂಚಿತವಾಗಿದೆ.

೩) ಮಾರೀಚನು ಶ್ರೀರಾಮನ ಬಾಣಕ್ಕೆ ಬಹಳವಾಗಿ ಅಂಜಿದ್ದೇ ಅವನು ಹಾಗೆ ತಪೋನಿರತನಾಗಲು ಕಾರಣ ಎಂಬ ಮಾತು ವಾಲ್ಮೀಕಿರಾಮಾಯಣದಲ್ಲಿದೆ. ಅವನು ಹಾಗೆ ಅಂಜಿದ್ದು ವಿಶ್ವಾಮಿತ್ರರ ಯಜ್ಞಪ್ರಸಂಗದಲ್ಲಿ; ಮತ್ತೊಮ್ಮೆ ವನವಾಸದಲ್ಲಿದ್ದ ಶ್ರೀರಾಮನನ್ನೇ ಕೆಣಕಿ; ಈ ಎರಡನ್ನೂ ಶ್ರೀಮದಾಚಾರ್ಯರು **'ಭೀತಂ ಶರಾದ್ರಘುಪತೇರ್ನಿತರಾಂ'** ಎಂಬ ಮಾತಿನಿಂದ ಸೂಚಿಸಿರುವರು.

ರಾವಣನಿಗೆ ಮಾರೀಚನ ಉಪದೇಶ

ತೇನಾರ್ಥಿತಃ ಸಪದಿ ರಾಘವವಂಚನಾರ್ಥಂ
ಮಾರೀಚ ಆಹ ಶರವೇಗಮಮುಷ್ಯ ಜಾನನ್ ।
ಶಕ್ಯೋ ನ ತೇ ರಘುವರೇಣ ಹಿ ವಿಗ್ರಹೋಽತ್ರ
ಜಾನಾಮಿ ಸಂಸ್ಪರ್ಶಮಸ್ಯ ಶರಸ್ಯ ಪೂರ್ವಮ್ ॥ ೩೦ ॥

---

೩೦. ಸಂಸ್ಪರ್ಶಮ್ – ಸಂತಾಪಂ ಸ್ಪರ್ಶ ಉಪತಾಪೇ ಇತಿ ಧಾತೋಃ ॥ –(ವಾ)

೩೦. ಮಾರೀಚಸ್ಯ ಪಲಾಯನಾರ್ಥಮೇವ ಶನ್ಯೈಃ ಶರಂ ಮುಮೋಚ । ಅತಃ ಸಮ್ಯಕ್ ತದಂಗೇ ಶರಸ್ಪರ್ಶೋ ನಾಸ್ತೀತಿ ಸೂಚನಾಯ ಸ್ಪರ್ಶಮಿತಿ ವಿಶೇಷೋಕ್ತಿಃ । ಅತ ಏವ ಬೃಶಮಾಹತಃ ಇತಿ ತಸ್ಯ ಮರಣಕಾಲೇ ವಕ್ಷ್ಯತಿ । ಸೋಽಪಿ 'ಮಾರ್ಜಾರಸ್ಯ ಲೀಲಾ ಮೂಷಿಕಸ್ಯ ಪ್ರಾಣಸಂಕಟಮಿವ 'ಸಮ್ಯಕ್ ಸಂಕಟಮಕರೋದಿತಿ ಸೂಚನಾಯ ಸಮಿತ್ಯುಪಸರ್ಗಶ್ಚ। –(ವಾ)

ಆ: ಶ್ರೀರಾಮನನ್ನು ವಂಚಿಸುವ ಸಲುವಾಗಿ ರಾವಣ ಕೇಳಿಕೊಂಡಾಗ ಶ್ರೀರಾಮನ ಬಾಣದ ಪೆಟ್ಟು ಎಂತಹುದು ಎಂದು ಸ್ವತಃ ಅನುಭವಿಸಿ ತಿಳಿದ ಮಾರೀಚ ನುಡಿದ; ''ಶ್ರೀರಾಮನನ್ನು ಎದುರಿಸುವುದು ಎಂದೂ ನಿನ್ನಿಂದ ಆಗದು; ಅವನ ಬಾಣದ ಪೆಟ್ಟು ಎಂತಹುದು ಎಂಬುದನ್ನು ನಾನು ಈ ಮೊದಲೇ ತಿಳಿದಿರುವೆ''.

ವಿ: ೧) ಶ್ರೀರಾಮನನ್ನು ವಂಚಿಸಿ ಸೀತೆಯನ್ನು ಅಪಹರಿಸಬೇಕು ಎಂಬುದು ರಾವಣನ ಯೋಜನೆ; ಅದಕ್ಕೆ ನೆರವಾಗಿ ಉಪಕರಿಸಬೇಕು ಎಂದು ಅವನು ಮಾರೀಚನಲ್ಲಿ ಮಾಡಿದ ಯಾಚನೆ; ಶ್ರೀರಾಮನೊಂದಿಗೆ ವಿರೋಧ ಬೇಡ; ಅವನು ಎಂತಹ ಅಪ್ರತಿಮ ವೀರ ಎಂಬುದು ತನಗೆ ಗೊತ್ತು ಎಂಬುದು ಮಾರೀಚನು ನೀಡಿದ ಉತ್ತರ.

೨) ಶ್ರೀರಾಮನ ಪೆಟ್ಟು ಸ್ಮರಣೆಗೆ ಬರುತ್ತಲೇ ಮಾರೀಚನ ನಾಲಿಗೆ ಭಯದಿಂದ ಈಗಲೂ ತೊದಲಿತು ಎಂಬುದನ್ನು ಶ್ರೀಮದಾಚಾರ್ಯರು **'ಸಂಸ್ಪರ್ಶ'** ಎಂದು ಬಿಡಿಸಿ ಬರೆಯುವ ಮೂಲಕ ಸೂಚಿಸಿರುವರು. ರಾಮನು ತನಗೆ ಬಾಣ ಹೊಡೆದದ್ದು ಮೆಲ್ಲಗೆ ಮಾತ್ರ ಎಂಬುದನ್ನು ಸೂಚಿಸಲು ಸಹ ಮಾರೀಚನು ಹೀಗೆ ಹೇಳಿರುವನು ಎಂಬ ಅರ್ಥವನ್ನು ಶ್ರೀವಾದಿರಾಜರು ಬರೆದಿರುವರು.

೩) ಶ್ರೀರಾಮನಿರಲಿ, ಅವನ ಬಾಣವಿರಲಿ, ಅವನ ನಾಮವಿರಲಿ; ಅವನ ನಾಮದ ಮೊದಲ ಅಕ್ಷರವಾದ 'ರ' ಕಾರದಿಂದ ಮೊದಲಾಗುವ 'ರತ್ನ' 'ರಥ' ಮೊದಲಾದ ಪದಗಳೂ ತನಗೆ ಭಯ ತರಿಸುತ್ತವೆ ಎಂದು ಮಾರೀಚನು ತಿಳಿಸಿದ ಎಂಬ ಮಾತು ವಾಲ್ಮೀಕಿ–ರಾಮಾಯಣದಲ್ಲಿದೆ.

ಮಾರೀಚನನನ್ನು ಬೆದರಿಸಿದ ರಾವಣ

ಇತ್ಯುಕ್ತವಂತಮಥ ರಾವಣ ಆಹ ಖಡ್ಗಂ
ನಿಷ್ಕೃಷ್ಯ ಹನ್ಮಿ ಯದಿ ಮೇ ನ ಕರೋಷಿ ವಾಕ್ಯಮ್ ।
ತಚ್ಛ್ರುತ್ವಾನ್ ಭಯಯುತೋಽಥ ನಿಸರ್ಗತಶ್ಚ
ಪಾಪೋ ಜಗಾಮ ರಘುವರ್ಯಸಕಾಶಮಾಶು ॥ ೩೧ ॥

---

೩೦. ರಕಾರಾದೀನಿ ನಾಮಾನಿ ರಾಮತ್ರಸ್ತಸ್ಯ ರಾವಣ ।
ರತ್ನಾನಿ ಚ ರಥಾಶ್ಚೈವ ವಿತ್ರಾಸಂ ಜನಯಂತಿ ಮೇ ॥ -ಮಾರೀಚವಚನ ರಾವಣನಿಗೆ।-ವಾ. ರಾ. ೩/೬/೮

೩೧. ಅಥ ಶ್ರವಣಸಮನಂತರಮೇವ ನಿಸರ್ಗತಃ ಪಾಪಶ್ಚ – ನಿಸರ್ಗತಃ ಪಾಪೋಽಸಿ ತಸ್ಯ ನೀಚಪದಾರ್ಥಸ್ಯ ಅಸಂಭಾವಿತಕಾರ್ಯೋದ್ಯೋಗಃ ಸಂಭಾವಿತ ಇತಿ ಸೂಚನಾರ್ಥಸ್ಯ ಪದಾರ್ಥಸಂಭಾವನಾರ್ಥಕಾಪೇರರ್ಥೇ ಚಶಬ್ದಃ। ಪಾಪಶ್ಚ ವಿಷ್ಣುದ್ವೇಷೀ ಚೇತಿ ಸಮುಚ್ಚಯಾರ್ಥೋ ವಾ । ಅತ ಏವಾಶು ಜಗಾಮೇತ್ಯುಕ್ತಮ್ ॥

೩೧. ಭಾಷಾಯಾಂ ಸದವಸಶ್ರುವ (೩/೨/೧೦೮) ಇತಿ ಕ್ವಸುಃ । ಭೂತಸಾಮಾನ್ಯೇ ಲಿಟ್ । –(ಜ)

ಅ: ಹೀಗೆ ನುಡಿದ ಮಾರೀಚನನ್ನು ಕುರಿತು ತನ್ನ ಒರೆಯಿಂದ ಖಡ್ಗವನ್ನು ಸೆಳೆದು ರಾವಣನು ಹೇಳಿದ: ''ನನ್ನ ಮಾತನ್ನು ಪಾಲಿಸದಿದ್ದರೆ ನಿನ್ನನ್ನು ಕೊಂದು ಬಿಡುವೆ''; ಅವನ ಮಾತನ್ನು ಕೇಳಿದ ಮಾರೀಚನು ಭಯಪೀಡಿತನಾದನು; ಸ್ವಾಭಾವಿಕವಾಗಿಯೂ ಪಾಪಿಯೇ ಆಗಿದ್ದ ಅವನು ಶ್ರೀರಾಮನ ಬಳಿಗೆ ವೇಗದಿಂದ ಧಾವಿಸಿದ.

ವಿ: ಮಾರೀಚನು ರಾಮನ ಬಳಿಗೆ ರಕ್ಷಣೆಗೆಂದು ಧಾವಿಸಬಹುದಿತ್ತು; ವಿಭೀಷಣನು ಹಾಗೆ ಮಾಡುವುದು ಮುಂದೆ ಬಂದಿದೆ. ಮಾರೀಚನು ಹಾಗೆ ಮಾಡದಿರಲು ಅವನ ದುಷ್ಟ– ಸ್ವಭಾವವೇ ಮುಖ್ಯಕಾರಣವಾಗಿತ್ತು ಎಂದು ಭಾವ. ಮಾರೀಚನು ಭಯದಿಂದ ಮಾತ್ರ ಹಾಗೆ ಮಾಡಿದ ಎಂದು ತಿಳಿಯದೆ ಅವನು ಸ್ವರೂಪತಃ ದುಷ್ಟನಾದವನು ಎಂದು ತಿಳಿಯಬೇಕು, ಎಂಬ ಅಂಶವನ್ನು ಇಲ್ಲಿ 'ನಿಸರ್ಗತಶ್ಚ ಪಾಪಃ' ಎಂಬ ಮೂಲಕ ಶ್ರೀಮದಾಚಾರ್ಯರು ಸ್ಪಷ್ಟಪಡಿಸಿರುವರು.

ಮಾಯಾಮೃಗವಾಗಿ ಮಾರೀಚ

ಸಂಪ್ರಾಪ್ಯ ಹೈಮಮೃಗತಾಂ ಬಹುರತ್ನಚಿತ್ರಃ
ಸೀತಾಸಮೀಪ ಉರುಧಾ ವಿಚಚಾರ ಶೀಘ್ರಮ್ ।
ನಿರ್ದೋಷನಿತ್ಯವರಸಂವಿದಪಿ ಸ್ಮ ದೇವೀ
ರಕ್ಷೋವಧಾಯ ಜನಮೋಹಕೃತೇ ತಥಾऽऽಹ ॥ ೩೨ ॥

ಅ: ಆ ಮಾರೀಚನು ಚಿನ್ನದ ಜಿಂಕೆಯ ವೇಷವನ್ನು ಧರಿಸಿದ; ಬಹು ತೆರನಾದ ರತ್ನಗಳಂತೆ ನಾನಾ ವರ್ಣಗಳನ್ನು ಹೊಂದಿದ; ಸೀತೆಯ ಸಮೀಪದಲ್ಲಿ ಅನೇಕ ತೆರನಾಗಿ ತ್ವರೆಯಿಂದ ಓಡಾಡಿದ; ಸೀತಾದೇವಿಯು ದೋಷರಹಿತವಾದ ನಿತ್ಯವೂ ಉತ್ತಮವೂ ಆದ ಜ್ಞಾನವನ್ನು

---

೩೨. ಬಹುರತ್ನಚಿತ್ರಃ– ಬಹುರತ್ನವತ್ ಚಿತ್ರಃ ಅನೇಕವರ್ಣಃ। –(ಜ)

೩೨. ಉರುಧಾ– ಬಹುಪ್ರಕಾರೇಣ (ಜ, ವ)

೩೨. ನಿರ್ದೋಷನಿತ್ಯವರಸಂವಿದೋ ದೇವ್ಯಾಃ ಅಜ್ಞವದ್ವಚನಂ ಗರ್ಹಿತಮಿತಿ ಸೂಚನಾಯ ಸಂವಿದಪೀತ್ಯಪಿ ಪದಮ್ । 'ತಥಾ ಆಹ ಸ್ಮ' ಇತಿ ಸ್ಮಪದ ಸಂಬಂಧಃ । ತಥಾ ಆಹ ಯಥಾ ಉತ್ತರಶ್ಲೋಕೇನೋಚ್ಯತೇ ತಥಾ ಆಹೇತ್ಯರ್ಥಃ। 'ಯಾ ಲೀಲಯಾ ಧೃತತನೋರನುರೂಪ- ರೂಪಾ' ಇತಿ ಪ್ರಮಾಣಪ್ರಸಿದ್ಧಸೂಚನಾರ್ಥಂ ಸ್ಮ ಪದಮ್ । 'ಸ್ಮಾತೀತೇ ಚ ಪ್ರಸಿದ್ಧೌ ಚ' ಇತ್ಯನುಶಾಸನಮ್ । –(ವಾ)

೩೨. ಸುರಾಣಕಾದಿದುಷ್ಟಜನಮೋಹನಾರ್ಥೇ। –(ವ)

ಮುಕ್ತಾಪ್ರವಾಲಪ್ಚನ್ನೋ ಹೇಮಬಿಂದುಶತಾಂಚಿತಃ ॥
ಶೃಂಗಾರಿತಶ್ಚತುಃಶೃಂಗ್ಯಾ ರೌಗ್ಮ್ಯ ಮಂದಂ ಚಚಾರ ಸಃ ॥ –ಸಂಗ್ರಹರಾಮಾಯಣ ೩/೪/೪೨

ಹೊಂದಿದ ಸಾಕ್ಷಾತ್ ಮಹಾಲಕ್ಷ್ಮಿ; ಆದರೂ ನುಡಿದರು ಅವರು ಹಾಗೆ ಮಾಡಿದ್ದು ರಾಕ್ಷಸರು ಸಾಯಲಿ ಎಂದು; ಮತ್ತು ದೈತ್ಯಜನರು ಮೋಹಗೊಳ್ಳಲಿ ಎಂದು.

ವಿ: ೧) ಚಿನ್ನದ ಜಿಂಕೆಯ ರೂಪದಲ್ಲಿ ತನ್ನ ಬಳಿ ಸುಳಿದಾಡಿದ ಮಾರೀಚನ ಸ್ವರೂಪವನ್ನು ಸೀತೆ ಬಲ್ಲಳು; ಅವಳು ಸಾಕ್ಷಾತ್ ಮಹಾಲಕ್ಷ್ಮಿ; ಅವರ ಜ್ಞಾನ ನಿರ್ಮಲವಾದುದು ಮತ್ತು ನಿತ್ಯವಾದುದು; ಉತ್ಕೃಷ್ಟವಾದುದು; ಆದರೂ ಅವರು ನಿಜವಾದ ಜಿಂಕೆಯೆಂದು ಭ್ರಮಿಸಿದಂತೆ ಮಾತಾಡಿದರು; ಅದಕ್ಕೆ ಕಾರಣ ತನ್ನ ಆ ಮಾತಿನಿಂದ ದೈತ್ಯನಾಶದ ಕಾರ್ಯ ನಡೆಯಲಿ ಮತ್ತು ತನಗೆ ಅಜ್ಞಾನ ಎಂದು ತಪ್ಪಾಗಿ ತಿಳಿಯುವ ಜನರು ಅನರ್ಥಕ್ಕೆ ಗುರಿಯಾಗಲಿ ಎಂಬುದೇ ಆಗಿತ್ತು ಎಂದು ಭಾವ.

೨) 'ಸೀತೆಯು ಸಾಮಾನ್ಯಸ್ತ್ರೀಯಂತೆ ಮಾರೀಚನನ್ನು ಚಿನ್ನದ ಜಿಂಕೆ ಎಂದು ಭ್ರಮಿಸಿದಳು; ಅದಕ್ಕೆ ಆಸೆಪಟ್ಟು ರಾಮನನ್ನು ಕೇಳಿಕೊಂಡಳು; ಅದರಿಂದ ಅನೇಕತೆರನಾದ ಆಪತ್ತಿಗೆ ಗುರಿ–ಯಾದಳು'; ಇತ್ಯಾದಿಯಾಗಿ ಎಂದೂ ತಿಳಿಯಕೂಡದು ಎಂಬ ತತ್ತ್ವವನ್ನು ಇಲ್ಲಿ ನಿರೂಪಿಸಿರುವರು.

ಸೀತಾರಾಮರ ಲೋಕವಿಡಂಬನೆ

ದೇವೇಮಮಾಶು ಪ್ರತಿಗೃಹ್ಯ ಚ ದೇಹಿ ಮೇ ತ್ವಂ
ಕ್ರೀಡಾಮೃಗಂ ತ್ವಿತಿ ತಯೋದಿತ ಏವ ರಾಮಃ ।
ಅನ್ವಕ್ ಸಸಾರ ಹ ಶರಾಸನಬಾಣಪಾಣಿ-
ರ್ಮಾಯಾಮೃಗಂ ನಿಶಿಚರಂ ನಿಜಘಾನ ಜಾನನ್ ॥ ೩೩ ॥

ಅ: ''ಕ್ರೀಡಾದಿಗುಣವಿಶಿಷ್ಟನಾದ ಶ್ರೀರಾಮನೇ! ಆಟದ ಜಿಂಕೆಯನ್ನು ಬೇಗನೆ ನನಗೆ ಹಿಡಿದು ಕೊಡು'' ಎಂಬುದಾಗಿ ಸೀತೆ ನುಡಿಯುತ್ತಲೇ ಶ್ರೀರಾಮ, ಮಾಯಾಜಿಂಕೆಯ

---

೩೩. ಸ್ತ್ರೀವಶಾದಿದೋಷಂ ಪರಿಹರ್ತುಂ ದೇವೇತಿ ಸಂಬೋಧನಮ್ । –(ಜ)

ಹೇ ದೇವ ! ಕ್ರೀಡಾದಿಗುಣವಿಶಿಷ್ಟ ! ಹೇತುಗರ್ಭಸಂಬೋಧನಮ್ । -(ವ)

೩೩. ಮಾಯಾಮೃಗಂ ಪ್ರೇಕ್ಷ್ಯ ದೇವೀ ಮಾಯಾಮಾನವಧರ್ಮಿಣೇ ।
ಮಾಯಾಮನುಷ್ಯಸ್ಯ ವಿಭೋರ್ಮಾಯಾಸ್ಮಿತಮಭಾಷತ ॥ – ಸಂಗ್ರಹರಾಮಾಯಣ ೩/೪/೪೩

೩೩. ಸರ್ವಗಸ್ಯ ಸರಣಾಯೋಗಾಜ್ಜನಪ್ರಸಿದ್ಧ್ಯಾ ಸರಣಂ ಸೂಚಯಿತುಂ ಸಸಾರ ಹ ಇತ್ಯುಕ್ತಮ್ । -(ವಾ)

೩೩. ತದ್ಧಾವತೋಽನ್ಯಾನತ್ಯೇತಿ ತಿಷ್ಠತ್..... – (ಈಶಾವಾಸ್ಯ)

ರೂಪದಲ್ಲಿರುವವನು ರಾಕ್ಷಸನಾದ ಮಾರೀಚ ಎಂಬುದಾಗಿ ತಿಳಿದೇ ಧನುಸ್ಸು ಮತ್ತು ಬಾಣಗಳನ್ನು ಹಿಡಿದುಕೊಂಡು ಅಟ್ಟಿಸಿಕೊಂಡು ತೆರಳಿದ; ಮತ್ತು ಅವನನ್ನು ಸಂಹರಿಸಿದ.

ವಿ: ೧) ಸೀತೆಯು 'ಅದು ನಿಜವಾದ ಜಿಂಕೆಯಲ್ಲ; ಮಾಯಾವಿಯಾದ ಮಾರೀಚ' ಎಂದು ತಿಳಿದೇ ಅಸುರಮೋಹನಾದಿ ಉದ್ದೇಶದಿಂದ ಹಾಗೆ ಕೇಳಿದಳು ಎಂಬುದನ್ನು ಹಿಂದಿನ ಶ್ಲೋಕದಲ್ಲಿ ಹೇಳಿದ ಶ್ರೀಮದಾಚಾರ್ಯರು, ಸೀತಾಪತಿಯಾದ ಶ್ರೀರಾಮನಿಗೂ ಅಜ್ಞಾನಾದಿ ಪ್ರಸಕ್ತಿ ಇಲ್ಲ ಎಂಬುದಾಗಿ 'ಜಾನನ್' ಎಂಬ ಪದದಿಂದ ಸ್ಪಷ್ಟಪಡಿಸಿರುವರು. ಸೀತೆಯಂತೆ ಶ್ರೀರಾಮನ ಈ ವಿಡಂಬನೆಯೂ ಸಹ ಅಸುರರ ಮೋಹನಾದಿ ಉದ್ದೇಶದಿಂದ ಕೂಡಿದ್ದು ಎಂದು ಭಾವ.

೨) ಶ್ರೀರಾಮನು 'ಸರ್ವಜ್ಞನಾದ ಭಗವಂತ' ಎಂದು ತಿಳಿಸಲೆಂದೇ ಸೀತೆಯು ಅವನನ್ನು 'ದೇವ' ಎಂಬುದಾಗಿ ಸಂಬೋಧಿಸಿರುವರು.

೩) ವಿಶ್ವಾಮಿತ್ರಯಜ್ಞರಕ್ಷಣೆಯ ಪ್ರಸಂಗದಲ್ಲಿ ಕೊಲ್ಲುವ ಉದ್ದೇಶ ಇಲ್ಲದ್ದರಿಂದ ಮೆಲ್ಲಗೆ ಹೊಡೆದಿದ್ದ ಶ್ರೀರಾಮನು ಈಗ ಅವನನ್ನು ಕೊಲ್ಲುವ ಉದ್ದೇಶದಿಂದ ಜೋರಾಗಿ ಹೊಡೆದನು ಎಂಬುದನ್ನು 'ನಿಜಘಾನ' ಎಂಬ ಪದದಿಂದ ಸೂಚಿಸಿರುವರು.

ರಾಮನಿಂದ ಮಾರೀಚನ ವಧೆ

ತೇನಾಹತಃ ಶರವರೇಣ ಭೃಶಂ ಮಮಾರ
ವಿಕ್ರುಶ್ಯ ಲಕ್ಷ್ಮಣಮುರುವ್ಯಥಯಾ ಸ ಪಾಪಃ ।
ಶ್ರುತ್ವೈವ ಲಕ್ಷ್ಮಣಮಚೂಚುದದುಗ್ರವಾಕ್ಯೈಃ
ಸೋಽಪ್ಯಾಪ ರಾಮಪಥಮೇವ ಸಚಾಪಬಾಣಃ ॥ ೩೪ ॥

ಅ: ಉತ್ತಮ ಬಾಣದಿಂದ ಶ್ರೀರಾಮ ಬಲವಾಗಿ ಹೊಡೆದಾಗ ಪಾಪಿಯಾದ ಆ ಮಾರೀಚ ತುಂಬಾ ವೇದನೆಯಿಂದ 'ಹಾ ಲಕ್ಷ್ಮಣ' ಎಂಬುದಾಗಿ ಕೂಗುತ್ತಾ ಸತ್ತ. ಅದನ್ನು ಕೇಳುತ್ತಲೇ ಸೀತೆ

---

೩೪. ವಿಕ್ರುಶ್ಯ 'ಕ್ರುಶ ಆಹ್ವಾನೇ ಚೇತಿ' ಧಾತೋಃ ಆಹೂಯ ಶ್ರುತ್ವೈವ ಲಕ್ಷ್ಮಣೇತ್ಯಾಕ್ರೋಶಂ ಶ್ರುತ್ವೈವೇತಿ ಯೋಗ್ಯಪದಾಧ್ಯಾಹಾರೇಣ ಯೋಜನಾ । –(ವಾ)

ವಿಕ್ರುಶ್ಯ – ಅಹೋ ಲಕ್ಷ್ಮಣ । ಇತ್ಯುಚ್ಚೈರಾಹೂಯ । –(ವ)

೩೪. ಉಗ್ರವಾಕ್ಯೈಃ – ರಾಮಮುಪೇಕ್ಷ್ಯ ಮಾಮಪೇಕ್ಷ್ಯಸೇ ಇತ್ಯಾದಿರೂಪೈಃ । –(ವ)

ಇತ್ಯುಕ್ತಾ ಭಗವತ್ಯುಚೇ ಸೌಹಾರ್ದಂ ನಾಸ್ತಿತೇ ಕಥಮ್ ।
ವಾಂಛಸ್ಯುಪರತೇ ದೇವೇ ತ್ವಂ ಕ್ರೂರ ಶಠ ಮಾಮಿತಿ ॥ –ಸಂಗ್ರಹರಾಮಾಯಣ ೩/೫/೯

ಕ್ರೂರವಾಕ್ಯಗಳಿಂದ (ಲಕ್ಷ್ಮಣನನ್ನು ಶ್ರೀರಾಮನ ರಕ್ಷಣೆಗೆ ತೆರಳಲು) ಪ್ರಚೋದಿಸಿದಳು; ಆಗ ಲಕ್ಷ್ಮಣನೂ ಸಹ ಬಿಲ್ಲು ಬಾಣಗಳೊಂದಿಗೆ ಶ್ರೀರಾಮನು ನಡೆದ ದಾರಿಯಲ್ಲೇ ಧಾವಿಸಿದ.

ವಿ: 'ಶ್ರೀರಾಮನ ಬಾಣಕ್ಕೆ ಮಾರೀಚನು ಸತ್ತನು; ಹಾಗೆ ಸಾಯುವ ಮುನ್ನ 'ಹಾ ಲಕ್ಷ್ಮಣ' ಎಂಬುದಾಗಿ ಶ್ರೀರಾಮನ ಧ್ವನಿಯನ್ನೇ ಅನುಕರಿಸಿ, ಲಕ್ಷ್ಮಣನನ್ನು ಸಹಾಯಕ್ಕೆಂದು ಕೂಗುವಂತೆ ಕೂಗಿದ. ಅದನ್ನು ಕೇಳಿದ ಸೀತೆಯು ಶ್ರೀರಾಮನ ಸಂಕಲ್ಪದಂತೆ ಮುಂದಿನ ಅಸುರಸಂಹಾರಾದಿ ಕಾರ್ಯ ನಡೆಯಬೇಕು, ಅದಕ್ಕಾಗಿ ರಾವಣನು ತನ್ನ ಅಪಹರಣಕ್ಕೆಂದು ಬರಲು ಅನುಕೂಲವಾಗಲಿ ಎಂಬ ಕಾರಣದಿಂದ ಲಕ್ಷ್ಮಣನನ್ನು ಶ್ರೀರಾಮನ ಸಹಾಯಕ್ಕೆಂದು ತೆರಳಲು ಹೇಳಿದಳು; ಲಕ್ಷ್ಮಣನು ರಾಮವಾಕ್ಯದಂತೆ ತೆರಳಲು ಸಿದ್ಧನಾಗದಿರಲು, ಅವನು ಅಲ್ಲಿಂದ ಹೊರಡಲೇಬೇಕು ಎಂಬ ಕಾರಣದಿಂದ ಕಠೋರ ವಾಕ್ಯಗಳನ್ನು ನುಡಿಯಲು ಲಕ್ಷ್ಮಣನು ಹೊರಟ ಎಂಬ ಕಥಾಪ್ರಸಂಗವನ್ನು ಶ್ರೀಮದಾಚಾರ್ಯರು ಇದರಲ್ಲಿ ಸಂಗ್ರಹಿಸಿರುವರು.

ಲಕ್ಷ್ಮೀನಾರಾಯಣರ ವಿನೋದಲೀಲೆ

ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ
ತಾಂ ತಾಂ ಕರೋತ್ಯನು ತಥೈವ ರಮಾऽಪಿ ದೇವೀ ।
ನೈತಾವತಾऽಸ್ಯ ಪರಮಸ್ಯ ತಥಾ ರಮಾಯಾ
ದೋಷೋऽಣುರಪ್ಯನುವಿಚಿಂತ್ಯ ಉರುಪ್ರಭೂ ಯತ್ ॥ ೩೫ ॥

ಅ: ಪರೇಶನಾದ ಶ್ರೀಹರಿಯು ಬಹುಬಗೆಯಾಗಿ ಯಾವ ಯಾವ ಲೀಲೆಯನ್ನು ಮಾಡುವನೋ ಆ ಲೀಲೆಯನ್ನೇ ರಮಾದೇವಿಯೂ ಸಹ ಅನುಕರಣೆ ಮಾಡುವರು. ಅಷ್ಟು ಮಾತ್ರದಿಂದ ಸರ್ವೋತ್ತಮನಾದ ಶ್ರೀಹರಿಗಾಗಲೀ, ಶ್ರೀಮಹಾಲಕ್ಷ್ಮಿಗಾಗಲಿ ಅಣುಮಾತ್ರ ದೋಷವನ್ನೂ ಶಂಕಿಸಕೂಡದು; ಅವರು ಮಹಾಪ್ರಭುಗಳಲ್ಲವೇ!.

---

೩೫. ಪರೇಶಃ – ಸರ್ವೇಶ್ವರ ಏವೇತಿ ಅಪೇರೇವಕಾರಸ್ಯ ಸಂಬಂಧಃ ।
ಸರ್ವೇಶ್ವರ ಏವಾಜ್ಞಾನನುಕರೋತಿ ಚೇನ್ಮಮ ಕಾ ವಾರ್ತಾ ಇತಿ ಸೂಚನಂ ತತ್ಫಲಮ್ ॥ –(ವಾ)

೩೬. ಏವಂ ಚರತೋರ್ದೇವದೇವ್ಯೋಃ ಅಜ್ಞಾನಾದಿದೋಷಶಂಕಾಯಾಂ ಪ್ರಾಪ್ತಾಯಾಂ ತಾಂ ಸರ್ವಪುರಾಣ-ಗ್ರಂಥತಾತ್ಪರ್ಯಪ್ರದರ್ಶನೇನ ಪರಿಹರತಿ ಭಗವಾನಾಚಾರ್ಯಃ । –(ವ)

೩೭. ತರ್ಹ್ಯೇತನ್ನೈಗಾನುಗಮನಾದಿಕಂ ಕಿಮು ಕಿಮರ್ಥಮಿತಿ ಪ್ರಶ್ನಃ । ಉತ್ತರಂ ತು ತಸ್ಮಾದಜ್ಞಾನಾಪದಾದಿ-ದೋಷರಹಿತತ್ವಾತ್ ಏತನ್ನೈಗಾನುಗಮನಾದಿಕಂ ವಿಡಂಬನಮಾತ್ರಂ ನ ತ್ವಜ್ಞಾನಾದಿದೋಷಕೃತಮಿತ್ಯುತ್ತರಾ-ರ್ಧಯೋಜನಾ । ಪೂರ್ವಾರ್ಧಸ್ಯ ತು ಯಥಾಸ್ಥಿತ್ಯೈವ ॥ –(ವಾ)

ಮಹಾಲಕ್ಷ್ಮಿಗೆ ಅಜ್ಞಾನವೇ ?

ಕ್ವಾಜ್ಞಾನಮಾಪದಪಿ ಮಂದಕಟಾಕ್ಷಮಾತ್ರಾತ್
ಸರ್ಗಸ್ಥಿತಿಪ್ರಲಯಸಂಸೃತಿಮೋಕ್ಷಹೇತೋಃ ।
ದೇವ್ಯಾ ಹರೇಃ ಕಿಮು ವಿಡಂಬನಮಾತ್ರಮೇತ-
ದ್ವಿಕ್ರೀಡತೋಃ ಸುರನರಾದಿವದೇವ ತಸ್ಮಾತ್ ॥ ೩೬ ॥

ಅ: ತಮ್ಮ ನಸುಕುಡಿನೋಟಮಾತ್ರದಿಂದ ಜಗತ್ತಿನ ಹುಟ್ಟು, ಉಳಿವು, ಅಳಿವು, ಅಜ್ಞಾನ, ಮೋಕ್ಷಗಳನ್ನು ಮಾಡಬಲ್ಲವಳು ಮಹಾಲಕ್ಷ್ಮಿ; ಅಂತಹವರಿಗೆ ಅಜ್ಞಾನವೆಲ್ಲಿ ? ಆಪತ್ತೆಲ್ಲಿ ? ಶ್ರೀಹರಿಗೆ ಎಂತು ಬಂದಾವು? ಆದ್ದರಿಂದ ಇದಂತು ಸುರರಂತೆ, ನರರಂತೆ ವಿಹರಿಸುವ ಅವರ ವಿಡಂಬನೆ ಮಾತ್ರ.

ವಿ: ೧) ಸರ್ವಜ್ಞಳಾದ ಸೀತೆಯು ಹೀಗೆ ಮಾಡಿದ್ದೇಕೆ? ಎಂದರೆ ಸ್ವಾಮಿಯಾದ ಶ್ರೀರಾಮನು ಹಾಗೆ ಮಾಡಿದ್ದೇ ಅದಕ್ಕೆ ಕಾರಣ ಎಂದು ಉತ್ತರ; ಪತಿಯ ಇಂಗಿತವನ್ನು ಅರಿತು ಪೂರ್ಣವಾಗಿ ಅದರಂತೆ ವರ್ತಿಸುವ ಮಹಾಪತಿವ್ರತೆ ಮಹಾಲಕ್ಷ್ಮಿ ; ಅವರು ಒಮ್ಮೆಯೂ ಧರ್ಮ ತಪ್ಪಿದವರೇ ಅಲ್ಲ; ಹೀಗೆ ನಡೆಯುವುದು ಸರಿಯೇ? ಎಂದು ಪ್ರಶ್ನಿಸಬೇಕಿಲ್ಲ; ಏಕೆಂದರೆ ಯಾವ ದೋಷವನ್ನೂ ಮೆಟ್ಟಿನಿಲ್ಲುವ ಮಹಾಸಾಮರ್ಥ್ಯ ಅವರದು.

೨) 'ಅವರಿಗೆ ಆಗ ಅಜ್ಞಾನವೇ ಇದ್ದಿತು; ಹಾಗೆ ಮಾಡಲೇ ಬೇಕಾದ ಆಪತ್ತೇ ಇದ್ದಿತು' ಎಂದು ತಿಳಿಯಬಹುದಲ್ಲ? ಖಂಡಿತ ತಿಳಿಯಕೂಡದು; ಜಗತ್ತಿನ ಅಳಿವು ಉಳಿವುಗಳನ್ನೆಲ್ಲ ಕುಡಿನೋಟಮಾತ್ರದಿಂದ ನಡೆಸಬಲ್ಲ ಮಹಾಮಹಿಮಳು; ಶ್ರೀರಾಮನಂತೂ ಅವರ ಪತಿ; ಅಂತಹವರಿಗೆ ಅಜ್ಞಾನವೆಲ್ಲಿ? ಆಪತ್ತೆಲ್ಲಿ? ಶ್ರೀರಾಮನಂತೆ ಸೀತೆ ವರ್ತಿಸಲಿ; ಆದರೆ ಶ್ರೀರಾಮ–ನಾದರೂ ಏತಕ್ಕೆ ಹಾಗೆ ವರ್ತಿಸಬೇಕು? ನಿಜ; ಅವತಾರಗಳಲ್ಲಿ ಅದಕ್ಕೆ ತಕ್ಕಂತೆ ವರ್ತಿಸುವುದು ಅವನ ಸಂಕಲ್ಪ; ಅದರಿಂದ ಯೋಗ್ಯರಿಗೆ ತತ್ತ್ವಜ್ಞಾನ ದೊರೆಯಬೇಕು; ಕಲ್ಯಾಣವಾಗಬೇಕು;

---

೩೬. ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ ।
ವಿಷ್ಣೋರ್ದೇಹಾನುರೂಪಾಂ ವೈ ಕರೋತ್ಯೇಷಾऽऽತ್ಮನಸ್ತನುಮ್ ॥ - ವಿಷ್ಣುಪುರಾಣ ।

೩೬. ಅಮುಗ್ಧೈವ ತು ಮುಗ್ಧೇವ ತ್ವದುಃಖಾ ದುಃಖಿತೇವ ಚ ।
ಶ್ರೀರ್ದರ್ಶಯೇದ್ಧರಿಶ್ಚೈವ ನೈವೈತೌ ಮೋಹದುಃಖಿನೌ ॥
ಮಿಥೋऽಪಿ ನಾದೃಗ್ವಚನಂ ಮಾಕಾರಂ ಚೈವ ಲೀಲಯಾ ।
ದರ್ಶಯಂತೌ ನೃಣಾಂ ಮೋಹಂ ಕುರ್ಯಾಸ್ತಾ ಆಸ್ತದರ್ಶನಾತ್ ॥ - ಇತಿ ಕಾಪಿಲೇಯೇ ॥
ಭಾ. ತಾ. (೧೦/೭೫/೫೨)

ಅಯೋಗ್ಯರಿಗೆ ಮಿಥ್ಯಾಜ್ಞಾನ ಬರಬೇಕು; ಅದರಿಂದ ಅವರು ನಾಶವಾಗಬೇಕು, ಎಂಬುದು ಅವರ ಉದ್ದೇಶ; ಅದಕ್ಕೆಂದೇ ಅವರದು ಅಂತಹ ವಿಡಂಬನೆ;

೩) ಹಾಗೆ ಮಾಡದೆಯೂ ಅವರವರ ಗತಿ ನೀಡುವ ಸಾಮರ್ಥ್ಯ ಅವರಿಗುಂಟು; ಕೆಲವೊಮ್ಮೆ ಹಾಗೆ ಮಾಡುವರು ಸಹ; ಕೆಲವೊಮ್ಮೆ ಹೀಗೂ ಮಾಡುವರು; ಹಾಗೇಕೆ ಮಾಡಬಾರದು ಎಂದರೆ, ಹೀಗೂ ಏಕೆ ಮಾಡಬಾರದು ಎಂಬುದೇ ಉತ್ತರ; ಅವನು ಸ್ವತಂತ್ರ; ಆಕೆ ಅವನ ಪತ್ನಿ; ಅವರು ಮಾಡಿದ್ದನ್ನು ತಿಳಿಯಲು ಪ್ರಯತ್ನಿಸುವುದಷ್ಟೆ ನಮ್ಮ ಕರ್ತವ್ಯ; ಹೀಗೆಯೇ ಮಾಡಬೇಕು ಎಂದು ನಿರ್ಬಂಧಿಸುವುದಲ್ಲ.

೪) ಸೀತೆ ಮಹಾಲಕ್ಷ್ಮಿ; ಮಹಾಲಕ್ಷ್ಮಿ ಭಗವಂತನ ಸಾಕ್ಷಾತ್ ಪ್ರತಿಬಿಂಬ; ಬಿಂಬದಂತೆ ವರ್ತಿಸುವುದು ಪ್ರತಿಬಿಂಬದ ಮುಖ್ಯಲಕ್ಷಣ; ಅದಕ್ಕೆಂದೇ ಸೀತೆ ಹಾಗೆ ವರ್ತಿಸಿದರು ಎಂಬ ವಿಶೇಷಾಂಶವನ್ನೂ ಇಲ್ಲಿ ಗಮನಿಸಬೇಕು (**ಆಭಾಸಕಾ ತ್ವಥ ರಮಾ ೧/೧೫**).

೫) ಇಲ್ಲಿಯ 'ಮಂದಕಟಾಕ್ಷಮಾತ್ರಾತ್ । ಸರ್ಗಸ್ಥಿತಿಪ್ರಲಯಸಂಸೃತಿಮೋಕ್ಷಹೇತೋಃ' ಎಂಬುದಕ್ಕೆ ಶ್ರೀಮದಾಚಾರ್ಯರ ದ್ವಾದಶಸ್ತೋತ್ರದ 'ವಿಶ್ವಸ್ಥಿತಿಪ್ರಲಯಸರ್ಗ..... ಶ್ರೇಯಾರ್ಥಕಟಾಕ್ಷಬಲವತ್ಕಜಿತಂ ನಮಾಮಿ' ಎಂಬ 'ಶ್ರೀಸ್ತುತಿ' ವಿವರಣರೂಪವಾಗಿದೆ ಎಂಬುದನ್ನು ಗಮನಿಸಬೇಕು.

೬) ಮಹಾಲಕ್ಷ್ಮಿಯ ಇಂತಹ ಅಪಾರ ಸಾಮರ್ಥ್ಯವನ್ನು **'ಶ್ರೀಸೂಕ್ತ' 'ಅಂಭೃಣೀಸೂಕ್ತ'** ಮೊದಲಾದ ವೇದಭಾಗಗಳಿಂದ ಅರ್ಥ ಮಾಡಿಕೊಳ್ಳಬಹುದು.

ರಾವಣನಿಂದ ಸೀತಾಕೃತಿಯ ಅಪಹರಣ

ದೇವ್ಯಾಃ ಸಮೀಪಮಥ ರಾವಣ ಆಸಸಾದ
ಸಾಽದೃಶ್ಯತಾಮಗಮದಪ್ಯವಿಷಹ್ಯಶಕ್ತಿಃ ।
ಸೃಷ್ಟ್ವಾಽಽತ್ಮನಃ ಪ್ರತಿಕೃತಿಂ ಪ್ರಯಯೌ ಚ ಶೀಘ್ರಂ
ಕೈಲಾಸಮರ್ಚಿತಪದಾ ನ್ಯವಸಚ್ಛಿವಾಭ್ಯಾಮ್ ॥ ೫೭ ॥

---

೫೭. ರಾವಣಹನನೇ ದೇವ್ಯಾ ಏವ ಶಕ್ತಿಃ ಸಂಭಾವಿತೇತಿ ಸೂಚಯಿತುಮವಿಷಹ್ಯಶಕ್ತಿರಪಿ ಇತ್ಯಪಿ ಪದಮ್ । –(ವಾ)

ತದೈವ ರಾವಣಸಂಹರಣೇ ಶಕ್ತ್ಯಾಽಪೀತ್ಯರ್ಥಃ । –(ವ)

ಅದೃಷ್ಟಶಕ್ತಿಃ ಶಕ್ತಾಽಪಿ ವಿಕ್ಷೇಪ್ತುಂ ರಾಕ್ಷಸೇಶ್ವರಮ್ ।
ವಿಶ್ವೇಶ್ವರೀ ತಿರೋಭೂತ್ ಸಾ ಸೃಷ್ಟ್ವಾ ಪ್ರತಿಕೃತಿಂ ನಿಜಾಮ್ ॥ –ಸಂಗ್ರಹರಾಮಾಯಣ ೩/೫/೧೯

ಅ: ಬಳಿಕ ಸೀತಾದೇವಿಯ ಬಳಿಗೆ ರಾವಣ ಆಗಮಿಸಿದ; ಸಹಿಸಲಶಕ್ಯವಾದ ಮಹಾ ಶಕ್ತಿಯಿಂದ ಕೂಡಿದ ಸೀತಾದೇವಿಯು ಆಗ ತನ್ನ ಪ್ರತಿಕೃತಿಯೊಂದನ್ನು ನಿರ್ಮಿಸಿ ಅಲ್ಲಿರಿಸಿ, ತ್ವರೆಯಿಂದ ಕೈಲಾಸಕ್ಕೆ ತೆರಳಿದರು; ಕೈಲಾಸದಲ್ಲಿ ಪಾರ್ವತೀ ಪರಮೇಶ್ವರರಿಂದ ಆರಾಧಿತ-ಚರಣಳಾಗಿ ನೆಲೆಸಿದರು.

ವಿ: ೧) ಅತ್ತ ಲಕ್ಷ್ಮಣ ತೆರಳಿದ; ಇತ್ತ ರಾವಣ ಸೀತಾಪಹರಣಕ್ಕೆಂದು ಧಾವಿಸಿದ; ಈ ಮಧ್ಯಕಾಲದಲ್ಲಿ ಸೀತಾದೇವಿ ಕೈಲಾಸಕ್ಕೆ ತೆರಳಿದ್ದರು; ಹಾಗೆ ತೆರಳುವ ಮುನ್ನ ಅವರು ಅಗ್ನಿಯನ್ನು

---

೩೭. ಅಥಾವಸಥ್ಯೋ ಭಗವಾನ್ ಹವ್ಯವಾಹೋ ಮಹೇಶ್ವರಃ।
ಆವಿರಾಸೀತ್ ಸುದೀಪ್ತಾತ್ಮಾ ತೇಜಸಾ ಚ ದಹನ್ನಿವ ॥
ಸೃಷ್ಟ್ವಾ ಮಾಯಾಮಯೀಂ ಸೀತಾಂ ರಾವಣಸ್ಯ ವಧೇಪ್ಸಯಾ।
ಸೀತಾಂ ರಾಮಾಯ ಧರ್ಮಿಷ್ಠಾಂ ಪಾವಕೋಽಂತರಧೀಯತ ॥
ತಾಂ ದೃಷ್ಟ್ವಾ ತಾದೃಶೀಂ ಸೀತಾಂ ರಾವಣೋ ರಾಕ್ಷಸೇಶ್ವರಃ।
ಸಮಾದಾಯ ಯಯೌ ಲಂಕಾಂ ಸಾಗರೋತ್ತರಸಂಸ್ಥಿತಾಮ್ ॥

–ಕೂರ್ಮಪುರಾಣ ಅ. ೩೪, ಶ್ಲೋ. ೧೮, ೩೬

(ಇವುಗಳನ್ನು ಶ್ರೀಸತ್ಯಧರ್ಮಸ್ವಾಮಿಗಳು ತಮ್ಮ ರಾಮಾಯಣವ್ಯಾಖ್ಯಾನದಲ್ಲೂ, ನಾಗೋಜಿಭಟ್ಟರು 'ತಿಲಕ' ಎಂಬ ತಮ್ಮ ರಾಮಾಯಣವ್ಯಾಖ್ಯಾನದಲ್ಲೂ ಉದಾಹರಿಸಿರುವರು).

ಅಗ್ನಿಹೋತ್ರಗತೋ ವಹ್ನಿಸ್ತಂ ಜ್ಞಾತ್ವಾ ರಾವಣೋದ್ಯಮಮ್।
ಆದಾಯ ಸೀತಾಂ ಪಾತಾಲೇ ಸ್ವಾಹಯಾ ಚ ನಿವೇಶ್ಯ ಚ ॥
ಶಿವಸ್ಥಾನೇ ಽವಸದ್ದೇವೀ ತತ್ರ ಮಾಂ ಧ್ಯಾಯತೀ ಸದಾ ॥ –ವರಾಹಪುರಾಣ

ಇತ್ಯುಕ್ತ್ವಾ ಸ್ವಪ್ರಭಾವೇನ ಪ್ರತಿಬಿಂಬಂ ಮನೋಮಯಮ್।
ಯಥಾರೂಪಂ ಯಥಾವೇಷಂ ಕಲ್ಪಯಿತ್ವಾ ತಿಸುಂದರಮ್ ॥
ವಹ್ನೌ ಆಚ್ಛಾದಯಂತೀ ಸ್ವಮಗ್ನಾವೇವ ಸಮಾಸ್ಥಿತಾ।
ಅಥ ಮಾಯಾಮಯೀ ಸೀತಾ..... (ಅಗ್ನಿಪುರಾಣ ಅ. ೭೬)

–ಇವುಗಳನ್ನು ಉಲ್ಲೇಖಿಸಿ ತಾ। ನಿ। ಪ್ರಮಾಣಸಂಗ್ರಹ(ಅತಿವಿಶದವಾಕ್ಯಾರ್ಥವಿವೃತಿ) ಕಾರರಾದ ಶ್ರೀತಿರುಮಲಾಚಾರ್ಯರು,

ಏತಚ್ಚ ದ್ವಾರಪ್ರದರ್ಶನಪರಂ ಮಹಾಭಾರತತಾತ್ಪರ್ಯನಿರ್ಣಯಾದೌ ಕೈಲಾಸಗಮನೋಕ್ತೇಃ। – ಎಂದು ಬರೆದಿರುವರು.

ವಹ್ನಿರ್ಯೋಗೇನ ಸೀತಾಯಾ ಮಾಯಾಸೀತಾಂ ಚಕಾರ ಹ।
ತತ್ತುಲ್ಯಗುಣರೂಪಾಂ ತಾಂ ದದೌ ರಾಮಾಯ ನಾರದ ॥
ಸೀತಾಂ ಗೃಹೀತ್ವಾ ಸ ಯಯೌ ಗೋಪ್ಯಂ ವಕ್ತುಂ ನಿಷೇಧ್ಯ ಚ।
ಲಕ್ಷ್ಮಣೋ ನೈವ ಬುಬುಧೇ ಗೋಪ್ಯಮನ್ಯಸ್ಯ ಕಾ ಕಥಾ ॥

–ಬ್ರಹ್ಮವೈವರ್ತಪುರಾಣ, ಭಾಗ ೧, ಪ್ರಕೃತಿಖಂಡ ಅ. ೧೪, ಪು.೧೬೨
(ರಾಧಾಕೃಷ್ಣಮೋರ್, ಕಲ್ಕತ್ತ ಇವರಿಂದ ಪ್ರಕಾಶಿತ ಪ್ರತಿ. ೧೯೫೫)

ಕರೆದು ಅವನಿಂದ ತಮ್ಮ ಪ್ರತಿಕೃತಿಯೊಂದನ್ನು ಮಾಡಿಸಿ ಅಲ್ಲಿರಿಸಿದರು. ರಾವಣನು ಆ ಆಕೃತಿಯನ್ನೇ ನಿಜವಾದ ಸೀತೆ ಎಂದು ಭ್ರಮಿಸಿದ; ಅಪಹರಿಸಿದ; ಎಂದರೆ ರಾವಣನಿಗೆ ದೊರಕಿದ್ದು ಮಾಯಾಸೀತೆಯೇ ಹೊರತು ನಿಜವಾದ ಸೀತೆಯಲ್ಲ ಎಂದು ಭಾವ.

ಅಥ ರಾಮೋಽಪಿ ತತ್ಸರ್ವಂ ಜ್ಞಾತ್ವಾ ರಾವಣಚೇಷ್ಟಿತಮ್ ।
ಉವಾಚ ಸೀತಾಮೇಕಾಂತೇ ಶೃಣು ಜಾನಕಿ ಮೇ ವಚಃ ॥
ರಾವಣೋ ಭಿಕ್ಷುರೂಪೇಣ ಆಗಮಿಷ್ಯತಿ ತೇಽಂತಿಕಮ್ ।
ತ್ವಂ ತು ಛಾಯಾಂ ತ್ವದಾಕಾರಾಂ ಸ್ಥಾಪಯಿತ್ವೋಟಜೇ ವಿಶ ॥
ಆಗ್ನೌ ಅದೃಶ್ಯರೂಪೇಣ ವರ್ಷಂ ತಿಷ್ಠಮಮಾಜ್ಞಯಾ ॥
ರಾವಣಸ್ಯ ವಧಾಂತೇ ಮಾಂ ಪೂರ್ವವತ್ ಪ್ರಾಪ್ಸ್ಯಸೇ ಶುಭೇ ।
ಶ್ರುತ್ವಾ ರಾಮೋದಿತಂ ವಾಕ್ಯಂ ಸಾಽಪಿ ತತ್ರ ತಥಾಽಕರೋತ್ ॥
ಮಾಯಾಸೀತಾಂ ಬಹಿಃಸ್ಥಾಪ್ಯ ಸ್ವಯಮಂತರ್ದಧೇಽನಲೇ ।

–ಅದ್ಭುತರಾಮಾಯಣ ಅರಣ್ಯಕಾಂಡ ೭/೧–೪

ತತ ಆರಭ್ಯ ಸಮಯಂ ಆಕಾಂಕ್ಷಂತೀಂ ಸ್ಥಿತಾಂ ಸತೀಮ್ ।
ಸೀತಾಕೃತಿಧರಾಂ ಕೃತ್ವಾ ಮಾಯಯಾ ಮೇಷವಾಹನಃ ॥

–ಭವಿಷ್ಯೋತ್ತರಪುರಾಣ(ವೇಂಕಟೇಶಮಾಹಾತ್ಮ್ಯ) ಅ. ೮, ಶ್ಲೋ. ೫೬.
(ತಿರುಪತಿ, ತಿರುಮಲ ದೇವಸ್ಥಾನದ ಪ್ರಕಾಶನ, ತಿರುಮಲ)

ವಾಲ್ಮೀಕಿರಾಮಾಯಣದಲ್ಲಿನ,

ಪಿಬಾಮಿ ವಾ ವಿಷಂ ತೀಕ್ಷ್ಣಂ ಪ್ರವೇಕ್ಷ್ಯಾಮಿ ಹುತಾಶನಮ್ ।
ನ ತ್ವಹಂ ರಾಘವಾದನ್ಯಂ ಕದಾಽಪಿ ಪುರುಷಂ ಸ್ಪೃಶೇ ॥

ಎಂಬ ಶ್ಲೋಕ(ಅರಣ್ಯಕಾಂಡ ೬, ೪೫ ಶ್ಲೋ. ೩೭)ದಲ್ಲಿನ 'ಪ್ರವೇಕ್ಷ್ಯಾಮಿ ಹುತಾಶನಮ್' ಎಂಬ ಮಾತಿನಲ್ಲಿ ಈ ವಿಚಾರ ಧ್ವನಿತವಾಗಿದೆ ಎಂದು 'ತಿಲಕ' ವ್ಯಾಖ್ಯಾನದಲ್ಲಿದೆ.

೩೭. ಅದೃಶ್ಯತಾಮಿತಿ । 'ತ್ವಂ ತು ಛಾಯಾಂ ತ್ವದಾಕಾರಾಂ ಸ್ಥಾಪಯಿತ್ವೋರ್ಜಿತೇ ವಿಶ' ಇತಿ ವಾಸಿಷ್ಠ-ರಾಮಾಯಣೇ ಸೀತಾಂ ಪ್ರತಿ ರಾಮವಾಕ್ಯಮ್ ।

ತದುಕ್ತಂ ವರಾಹಪುರಾಣೇ ವೇಂಕಟಗಿರಿಮಾಹಾತ್ಮ್ಯೇ ಪಂಚಮೇಽಧ್ಯಾಯೇ–

ಅಗ್ನಿಹೋತ್ರಗತೋ ವಹ್ನಿಸ್ತಂ ಜ್ಞಾತ್ವಾ ರಾವಣಾಧಮಮ್ ।
ಆದಾಯ ಸೀತಾಂ ಪಾತಾಲೇ ಸ್ವಾಹಯಾ ಸನ್ನಿವೇಶ್ಯ ಚ ॥
ತೇನೈವ ರಕ್ಷಸಾ ಸ್ಪೃಷ್ಟಾಂ ಪುರಾ ವೇದವತೀಂ ಶುಭಾಮ್ ।
ಆಗ್ನೌ ವಿಸೃಷ್ಟದೇಹಾಂ ತಾಂ ಶಪ್ತ್ವಾ ತಂ ರಾವಣಃ ಪುನಃ ॥
ಸೀತಾಯಾ ರೂಪಸದೃಶಂ ಕೃತ್ವಾ ಚೈವೋತ್ಸಸರ್ಜ ಚ ।
ಸಾ ರಾವಣಹೃತಾ ಭೂತ್ವಾ ಲಂಕಾಯಾಂ ಚ ನಿವೇಶಿತಾ ॥ ಇತಿ ॥ –(ಶ್ರೀ.)

೩೭. ತುಲಸಿದಾಸರ ಶ್ರೀರಾಮಚರಿತಮಾನಸದಲ್ಲೂ ಇದರಂತೆ ಮಾಯಾಸೀತೆಯ ಅಪಹರಣವೇ ನಿರೂಪಿತ-ವಾಗಿರುವುದು ಗಮನಾರ್ಹ.

೨) ಸೀತೆಯು ಕೈಲಾಸದಲ್ಲಿ ಶಿವಪಾರ್ವತಿಯರಿಂದ ಆರಾಧಿತಳಾಗಿ ನೆಲೆಸಿದ ವಿಚಾರವು, ಅವರು ಅವರಿಗಿಂತ ಉತ್ತಮಳಾದ ಮಹಾಲಕ್ಷ್ಮಿಎಂಬುದಕ್ಕೆ ದ್ಯೋತಕ ಎಂಬುದನ್ನು ಗಮನಿಸಬೇಕು.

೩) ಸೀತಾದೇವಿಗೆ ರಾವಣನನ್ನು ಆಗಲೇ ಸ್ವತಃ ಕೊಲ್ಲುವ ಸಾಮರ್ಥ್ಯವಿದ್ದಿತು ಎಂಬುದನ್ನು '**ಅವಿಷಹ್ಯಶಕ್ತಿಃ**' ಎಂಬ ಪದದಿಂದ ಸೂಚಿಸಿರುವರು.

೪) ರಾವಣನು ಅಪಹರಿಸಿದ್ದು ಮಾಯಾಸೀತೆಯನ್ನೇ ಹೊರತು, ನಿಜವಾದ ಸೀತೆಯನ್ನಲ್ಲ ಎಂಬ ವಿಚಾರ ಕೂರ್ಮ, ವರಾಹ, ಬ್ರಹ್ಮವೈವರ್ತ, ಭವಿಷ್ಯೋತ್ತರ, ಅಗ್ನಿ ಮೊದಲಾದ ಪುರಾಣಗಳಲ್ಲೂ, ಅದ್ಭುತರಾಮಾಯಣ ಮೊದಲಾದ ಇತರ ಕೃತಿಗಳಲ್ಲೂ ಬಂದಿದೆ; ವಾಲ್ಮೀಕಿ–ರಾಮಾಯಣದಲ್ಲೂ ಇದರ ಬಗ್ಗೆ ಸೂಚನೆಯಿದೆ ಎಂಬುದನ್ನು ಶ್ರೀಸತ್ಯಧರ್ಮತೀರ್ಥರು ಮೊದಲಾದವರು ತಮ್ಮ ವಾಲ್ಮೀಕಿರಾಮಾಯಣ ವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಿರುವರು.

೫) ಹಾಗೆ ಕೈಲಾಸಕ್ಕೆ ತೆರಳಿದ ಸೀತೆಯು ಮರಳಿ ಬಂದದ್ದು ರಾವಣವಧೆಯ ಅನಂತರದ ಅಗ್ನಿಪ್ರವೇಶ ಪ್ರಸಂಗದಲ್ಲಿ ಎಂದು ಮುಂದೆ ತಿಳಿಸಿರುವರು. (೮/೧೦೦)

೬) 'ಕೂರ್ಮಪುರಾಣದ'ದ ಉಲ್ಲೇಖದ ಬಗ್ಗೆ ಸ್ವತಃ ಶ್ರೀಮದಾಚಾರ್ಯರೇ ತಮ್ಮ ಗೀತಾಭಾಷ್ಯದಲ್ಲಿ ಗಮನ ಸೆಳೆದಿರುವರು (೧೪/೩) :

ಅತಃ ಸೀತಾದುಃಖಾದಿಕಂ ಸರ್ವಂ ಮೃಷಾಪ್ರದರ್ಶನಮೇವ । ತಥಾ ಚ ಕೂರ್ಮಪುರಾಣೇ ।

೭) ಮಾರೀಚನು ಸೀತೆಯನ್ನು ವಂಚಿಸಲೆಂದು ಬಂದಿದ್ದು 'ಮಾಯಾಮೃಗ'ವಾಗಿ, ರಾವಣನು ಸೀತೆಯನ್ನು ಅಪಹರಿಸಲೆಂದು ಬಂದಿದ್ದು 'ಮಾಯಾಸನ್ಯಾಸಿ'ಯಾಗಿ; ಅಂತಹ ರಾವಣನಿಗೆ ದೊರೆತದ್ದು ಸಹ 'ಮಾಯಾಸೀತೆ'ಯೇ ಹೊರತು ನಿಜವಾದ ಸೀತೆಯಲ್ಲ ಎಂಬುದು ಸಯುಕ್ತಿಕವೂ ಆಗಿದೆ.

೮) ಕಪಟದಿಂದ ಸಂಪತ್ತನ್ನು ಹೊಂದಬಯಸುವವರಿಗೆಲ್ಲ ದೊರೆಯುವುದು ರಾವಣನಿಗೆ ದೊರೆತಂತೆ 'ಕಪಟಸಂಪತ್ತೇ' ಹೊರತು; ನಿಜವಾದ ಸಂಪತ್ತಲ್ಲ ಎಂಬ ತತ್ತ್ವವೂ ಇಲ್ಲಿ ಧ್ವನಿತವಾಗಿದೆ.

೯) ರಾವಣನಿಗೆ ರಾಮ ಬೇಡ; ಸೀತೆ ಬೇಕು; ಎಂದರೆ ದೇವರು ಬೇಡ, ಧನ ಬೇಕು; ಇಂತಹವರಿಗೆಲ್ಲ ದೊರೆಯುವುದು ನಿಜವಾದ ಧನವಲ್ಲ; ಮಾಯಾಸಂಪತ್ತು ಮಾತ್ರ; ಗೀತೆಯಲ್ಲಿ ಭಗವಂತ ಸಾರಿರುವನು; 'ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।'; (೧೨/೫) ಕೇವಲ ಲಕ್ಷ್ಮಿಯಲ್ಲಿ ಆಸಕ್ತರಾಗುವವರಿಗೆ ಕ್ಲೇಶವೇ ಹೆಚ್ಚು; ರಾವಣ ಇದಕ್ಕೆ ಉತ್ತಮ ನಿದರ್ಶನ;

೧೦) ಕಪಟದಿಂದ ಸೀತೆಯನ್ನು ಬಯಸಿ ರಾವಣ ಕಪಟಸನ್ಯಾಸಿಯಾದ; ಧನವನ್ನು ಗಳಿಸ–ಲೆಂದು (ಕಪಟ)ಸನ್ಯಾಸ ಸ್ವೀಕರಿಸುವವರಿಗೆಲ್ಲ ರಾವಣನೇ ಮೂಲಗುರು ಎಂದು ತಿಳಿಯಬಹುದು.

ಸೀತಾಕೃತಿಯಲ್ಲಿ ಇಂದ್ರ - ಜಟಾಯುವಧೆ

ತಸ್ಯಾಸ್ತು ತಾಂ ಪ್ರತಿಕೃತಿಂ ಪ್ರವಿವೇಶ ಶಕ್ರೋ
ದೇವ್ಯಾಶ್ಚ ಸನ್ನಿಧಿಯುತಾಂ ವ್ಯವಹಾರಸಿದ್ಧ್ಯೈ ।
ಆದಾಯ ತಾಮಥ ಯಯೌ ರಜನೀಚರೇಂದ್ರೋ
ಹತ್ವಾ ಜಟಾಯುಷಮುರುಶ್ರಮತೋ ನಿರುದ್ಧಃ ॥ ೩೮ ॥

---

೩೮. ಗತ್ಯಾದಿ ವ್ಯಾಪಾರಸಿದ್ಧ್ಯರ್ಥಮ್ । –(ಜ)

ಅಭಿವಾದನಾದಿವ್ಯವಹಾರಸಿದ್ಧ್ಯರ್ಥಮ್ । ನ ಕೇವಲಮತ್ ರಾವಣಸ್ಯಾತಿದ್ರೋಹಘಟನಾರ್ಥಮ್ -(ವ)

೩೮. ಉರುಶ್ರಮತೋ ಹತ್ವೇತಿ ಪೂರ್ವೇಣಾನ್ವಯಃ । –(ವಾ)

ಉರುಶ್ರಮತಃ ಉರುಶಿಕ್ಷಯಾ ಅತಿಪ್ರಯಾಸೇನ ವಾ ನಿರುದ್ಧೋ ರೋಧಿತಃ ಸನ್ ಜಟಾಯುಷಾ ಇತಿ ಶೇಷಃ । –(ಜ)

ಅಧೃಷ್ಯಶಕ್ತಿಃ ಶಕ್ತಾऽಪಿ ವಿಕ್ಷೇಪ್ತುಂ ರಾಕ್ಷಸೇಶ್ವರಮ್ ।
ವಿಶ್ವೇಶ್ವರೀ ತಿರೋऽಭೂತ್ ಸಾ ಸೃಷ್ಟ್ವಾ ಪ್ರತಿಕೃತಿಂ ನಿಜಾಮ್ ॥
ವಿಜ್ಞಾಯ ರಾಮಸ್ಯ ಮತಂ ಸೀತಾ ಕೈಲಾಸಮಾಯಯೌ ।
ವಂದ್ಯಮಾನಾऽವಸತ್ ತತ್ರ ಶಿವಯಾ ಚ ಶಿವೇನ ಚ ॥
ತಾಂ ಜಾನಕೀಂ ಪ್ರತಿಕೃತಿಂ ಮನ್ವಾನೋ ಜಾನಕೀಂ ಖಲಃ ।
ತೂರ್ಣಂ ಸ್ಕಂದನಮಾರೋಪ್ಯ ಗಗನೇ ಗತವಾನಥ ॥
–ಸಂಗ್ರಹರಾಮಾಯಣ ಅರಣ್ಯಕಾಂಡ ಸರ್ಗ ೫೫ ಶ್ಲೋ. ೧೯, ೨೦, ೨೦, ೨೧

ಸೀತಾಕೃತಿಯಲ್ಲಿ ಇಂದ್ರದೇವರ ಆವೇಶವಿದ್ದ ವಿಚಾರವು ಭವಿಷ್ಯೋತ್ತರಪುರಾಣದಲ್ಲಿ ಉಕ್ತವಾಗಿದೆ:

ಲಂಕಾಂ ಗತ್ವಾऽಶೋಕವನೇ ಶಿಂಶುಪಾವೃಕ್ಷಮೂಲತಃ ।
ಸೀತಾಕೃತಿಂ ತಾಂ ಸಂಸ್ಥಾಪ್ಯ ಜಿಷ್ಣ್ವಾವಿಷ್ಟಾಂ ಸ ರಾಕ್ಷಸಃ ॥
ಕೃತಕೃತ್ಯಂ ತದಾऽತ್ಮಾನಂ ಮೇನೇ ವೈ ಕಾಲಚೋದಿತಃ ॥ (ಅ. ೮ ಶ್ಲೋ. ೬೦)

೩೮. ಜಿಷ್ಣುಃ ಶಕ್ರೇऽರ್ಜುನೇ ವಿಷ್ಣೌ ಜಿತ್ವರೇऽರ್ಕೇ ವಸುಷ್ವಪಿ। –(ಹೇಮಚಂದ್ರ)

ವೇದವತಿಯೇ ರುಗ್ಮಿಣಿ - ಕ್ಷೀರವಾರಿಧಿಕನ್ನಿಕೆ (ಶ್ರೀವಿಜಯದಾಸರು)

೩೮. ಶ್ರೀದೇಹೇ ಶಕ್ರಸ್ಯ ಪ್ರವೇಶಃ ।..... – (ಶ್ರೀ.)

೩೮. ಅತ್ರ ವೇದವತೀ ಲಕ್ಷ್ಮೀರೇವ

ಅ: ಸೀತೆಯ ಆ ಆಕೃತಿಯಲ್ಲಿ ಇಂದ್ರ ಪ್ರವೇಶಿಸಿದ; ವ್ಯವಹಾರ ನಿರ್ವಹಣೆಗಾಗಿ ಅದರಲ್ಲಿ ಸೀತಾದೇವಿಯ ಸನ್ನಿಧಾನವೂ ಇದ್ದಿತು. ರಾಕ್ಷಸರಾಜನಾದ ರಾವಣ ಆ ಸೀತಾಕೃತಿಯನ್ನು ತೆಗೆದುಕೊಂಡು ಹೊರಟ; ಹಾಗೆ ತೆರಳುವಾಗ ಬಹುಶ್ರಮದಿಂದ ತನ್ನನ್ನು ತಡೆದ ಜಟಾಯು ಎಂಬ ಹದ್ದನ್ನು ಕೊಂದ.

ವಿ: ೧) ಸೀತಾಕೃತಿಯಲ್ಲಿ ಚೇತನಯುಕ್ತತ್ವ ವ್ಯವಹಾರ ಸಿದ್ಧಿಗಾಗಿ ಇಂದ್ರನು ಪ್ರವೇಶಿಸಿದ; ಆ ಆಕೃತಿಯಲ್ಲಿ ಹನುಮಂತನಿಗೆ ವಿಶೇಷವಾಗಿ ಅನುಗ್ರಹಿಸುವ ಸಲುವಾಗಿಯೂ, ರಾವಣನಿಗೆ ಹೆಚ್ಚಿನ ಪಾಪವನ್ನು ತಂದು ಕೊಡುವ ಸಲುವಾಗಿಯೂ ಸ್ವತಃ ಸೀತಾದೇವಿಯ ಸನ್ನಿಧಾನವೂ ಇದ್ದಿತು.

೨) 'ಸೀತಾಕೃತಿ'ಯಲ್ಲಿ ಇದ್ದ 'ವೇದವತಿ'ಯು ಸಾಕ್ಷಾತ್ ಸೀತಾದೇವಿಯೇ ಎಂಬ ವಿಶೇಷಾಂಶವನ್ನು ಕರ್ನಾಟಕಶ್ರೀನಿವಾಸಾಚಾರ್ಯರು ತಮ್ಮ ಭಾವಚಂದ್ರಿಕಾವ್ಯಾಖ್ಯಾನದಲ್ಲಿ ತಿಳಿಸಿರುವರು; ಆದ್ದರಿಂದ ಸೀತಾಕೃತಿಯಲ್ಲಿದ್ದದ್ದು 'ವೇದವತೀ' ಎಂಬ ಭವಿಷ್ಯೋತ್ತರಪುರಾಣದ ಮಾತಿಗೆ ಅರ್ಥವೇನು? ಎಂಬ ಪ್ರಶ್ನೆಗೆ ಅವಕಾಶವಿರುವುದಿಲ್ಲ.

೩) ರಾವಣನು ಈ ಮಾಯಾಸೀತಾನಿರ್ಮಾಣಾದಿ ಯಾವ ಪ್ರಮೇಯವನ್ನೂ ಅರಿಯದ ಮಹಾ ಅವಿವೇಕಿ ಎಂಬುದನ್ನು 'ರಜನಿಚರೇಂದ್ರಃ' ಎಂಬ ಪದದಿಂದ ಸೂಚಿಸಿರುವರು.

೪) ಬ್ರಹ್ಮವರವಿದ್ದ ರಾವಣನನ್ನು ತಡೆಯಲು ಜಟಾಯುವಿಗೂ ಶ್ರಮವಾಯಿತು; ರಾಮಭಕ್ತನಾದ ಜಟಾಯುವನ್ನು ಕೊಲ್ಲಲು ರಾವಣನಿಗೂ ಶ್ರಮವಾಯಿತು ಎಂಬುದನ್ನು ದೇಹಲೀದೀಪನ್ಯಾಯದಿಂದ ಇಬ್ಬರಿಗೂ ಅನ್ವಯವಾಗುವಂತಹ 'ಉರುಶ್ರಮತಃ' ಎಂಬ ಪದದಿಂದ ಸೂಚಿಸಿರುವರು.

ಹೀನಾಂ ಲಯೇ ವೀಕ್ಷ್ಯ ಸ ದೇವಮಾಯಾಂ ಕನ್ಯಾಂ ಧರಾಂ ವೇದವತೀಂ ಪ್ರಗೃಹ್ಯ ।
ಶಪಸ್ತಯಾ ತ್ವನ್ಮೃತಯೇ ಪುನಃ ಸ್ಯಾಮಿತ್ಥಂ ಜ್ವಲಂತಂ ಜ್ವಲನಂ ವಿಶಂತ್ಯಾ ॥ - ಸಂಗ್ರಹರಾಮಾಯಣ

ದೇವಮಾಯಾಂ ಲಕ್ಷ್ಮೀಮಿತಿ ತತ್ರೈವ ಟಿಪ್ಪಣೇ ।
ಯಾ ದೇವಮಾಯಾ ಜಲಧೇರಿವ ಶ್ರೀಃ - ಇತಿ ಪ್ರಯೋಗಾಚ್ಚ ।

ಪದ್ಮಪುರಾಣೇ ಲಕ್ಷ್ಮೀನಾಮಾಮೃತೇ ವೇದವತೀ ನಾಮ ಪ್ರಯೋಗಾಚ್ಚ ।
ಸಾ ವೇದವತ್ಯೇವ ಸೀತಾ ಜಾತಾ । - ಇತಿಕರ್ನಾಟಕಶ್ರೀನಿವಾಸಾಚಾರ್ಯಕೃತ
ಮಹಾಭಾರತತಾತ್ಪರ್ಯನಿರ್ಣಯಟಿಪ್ಪಣ್ಯಾಂ ಭಾವಚಂದ್ರಿಕಾಯಾಮ್

೩೮. ಮರಣಹೇತುರ್ಬಭೂವೇತ್ಯರ್ಥಾಂಗೀಕಾರೇ ದೇವ್ಯಾಃ ಸೀತಾಯಾ ಇತ್ಯರ್ಥಃ । -(ಶ್ರೀ.)

ದೇವಕಾರ್ಯಕ್ಕಾಗಿ ರಾವಣನನ್ನು ಉಳಿಸಿದ ಹನುಮಂತ

ಮಾರ್ಗೇ ವ್ರಜಂತಮಭಿಯಾಯ ತತೋ ಹನೂಮಾನ್
ಸಂವಾರಿತೋ ರವಿಸುತೇನ ಚ ಜಾನಮಾನಃ ।
ದೈವಂ ತು ಕಾರ್ಯಮಥ ಕೀರ್ತಿಮಭೀಪ್ಸಮಾನೋ
ರಾಮಸ್ಯ ನೈನಮಹನದ್ವಚನಾದ್ಧರೇಶ್ಚ ॥ ೩೯ ॥

ಅ: ಹಾಗೆ ಸಾಗುತ್ತಿದ್ದ ರಾವಣನನ್ನು ಕಂಡರೂ ಸಹ ಸೂರ್ಯಪುತ್ರನಾದ ಸುಗ್ರೀವನು ತಡೆದದ್ದರಿಂದ ಹನುಮಂತ ಅವನನ್ನು ಸಂಹರಿಸಲಿಲ್ಲ; ಹನುಮಂತನಿಗೆ ದೇವತಾಕಾರ್ಯವು ತಿಳಿದಿತ್ತು. ಕೀರ್ತಿ ಶ್ರೀರಾಮನಿಗೇ ಸಲ್ಲಬೇಕು ಎಂಬ ಅಪೇಕ್ಷೆಯೂ ಇತ್ತು; ಮತ್ತು ಶ್ರೀಹರಿ ಜಯವಿಜಯರಿಗೆ ನೀಡಿದ್ದ ವಚನವೂ ಗೊತ್ತಿತ್ತು.

ವಿ: ೧) ಕಿಷ್ಕಿಂಧೆಯ ಮೇಲೆ ಪುಷ್ಪಕವು ಹಾರುತ್ತಿದ್ದಾಗ ಅಲ್ಲಿದ್ದ ಸುಗ್ರೀವಾದಿಗಳು ರಾವಣನನ್ನು ಕಂಡರು; ತನ್ನ ಆಭರಣಗಳನ್ನು ಸೀರೆಯ ಸೆರಗಿನಲ್ಲಿ ಕಟ್ಟಿ ಸೀತಾಕೃತಿಯು ಎಸೆದದ್ದು ಆಗಲೇ; ಉಳಿದ ಕಪಿಗಳು ರಾವಣನ ಭಯದಿಂದಾಗಿ ಅಡ್ಡಿಮಾಡಲಿಲ್ಲ; ಮಹಾಸಮರ್ಥನಾದ ಹನುಮಂತನು ರಕ್ಷಣೆಗೆ ಧಾವಿಸದಿರಲು ಸುಗ್ರೀವನು ಹಾಗೆ ಕೇಳಿಕೊಂಡಿದ್ದೇ ಕಾರಣವಾಯಿತು ಅದರೊಂದಿಗೆ ಮುಂದಾಗಬೇಕಿದ್ದ ರಾವಣಹನನಾದಿ ದೇವತಾಕಾರ್ಯದ ಪರಿಜ್ಞಾನ, ರಾವಣಸಂಹಾರದ ಕೀರ್ತಿಯು ಸ್ವಾಮಿಯಾದ ಶ್ರೀರಾಮನಿಗೇ ಸಲ್ಲಬೇಕು ಎಂಬ ಸ್ವಾಮಿಭಕ್ತಿ ಮತ್ತು ರಾವಣನು ಜಯಾವಿಷ್ಟನಾದವನು; ಜಯವಿಜಯರಿಗೆ ಮಹಾವಿಷ್ಣುವು ಮೂರು ಜನ್ಮಗಳಲ್ಲೂ ತನ್ನಿಂದಲೇ ಅವರಿಗೆ ಮರಣವೆಂದು ವಚನವಿತ್ತಿದ್ದುದು ಆತನಿಗೆ ತಿಳಿದದ್ದು ಸಹ ಇದಕ್ಕೆ ಮತ್ತೊಂದು ಕಾರಣ; ಹೀಗೆ ಒಟ್ಟು ನಾಲ್ಕು ಕಾರಣಗಳನ್ನಿತ್ತು ಹನುಮದ್ರೂಪದ ತಾವು ಏತಕ್ಕೆ ರಾವಣನನ್ನು ಸಂಹರಿಸಲಿಲ್ಲ ಎಂಬುದನ್ನು ಶ್ರೀಮದಾಚಾರ್ಯರು ಸ್ಪಷ್ಟಪಡಿಸಿರುವರು. ಇಲ್ಲಿ ಕ್ರಮವಾಗಿ ಅನಂತರದ ಕಾರಣ ಪ್ರಬಲ ಎಂಬುದನ್ನು ಗಮನಿಸಬೇಕು.

---

೩೯. ಜಾನಮಾನೋ ದೈವಂ ಕಾರ್ಯಂ ಜಾನಮಾನ ಇತಿ ಸಂಬಂಧಃ। –(ವಾ)

೩೯. ಅಭಿಯಾಯ ಅಭಿಗಮ್ಯ ।.....ಯದ್ವಾ ಅಭೀಯಾಯ ಅಭಿ ಇಯಾಯ ನ ಜಘಾನ ಚ । ಶಂಕಂಧ್ವಾದಿತ್ವಾತ್ ಪರರೂಪಮ್ । –(ಜ)

೩೯. 'ಮಯ್ಯೇವ ವಧ್ಯೌ ಭವತಂ ತ್ರಿಜನ್ಮಸು' ಇತಿ ಜಯವಿಜಯೌ ಪ್ರತಿ ಮಹಾವಿಷ್ಣುವಚನಾತ್ ಇತ್ಯರ್ಥಃ।

೩೯. ನನು ಜಟಾಯುಷೋಽಪ್ಯತಿಸಮರ್ಥೋ ಭಕ್ತಶ್ಚ ಹನೂಮಾನ್ ಕುತೋ ನಾಹನನ್ನಿತ್ಯಪೇಕ್ಷಯಾಂ ಹೇತು-ಚತುಷ್ಟಯಂ ದರ್ಶಯತಿ। –(ಜ)

೩೯. ಅತ್ರ ಪೂರ್ವಪೂರ್ವಹೇತುತಃ ಉತ್ತರೋತ್ತರಹೇತುರ್ಬಲೀಯಾನಿತಿ ದ್ರಷ್ಟವ್ಯಮ್ ॥ –(ಜ)

೨) ರಾವಣಾದಿಗಳ ಪಾಪವು ಇನ್ನೂ ಹೆಚ್ಚಬೇಕು ಎಂಬ ಮತ್ತೊಂದು ಕಾರಣವೂ ಸಹ ಇದ್ದಿತು ಎಂದೂ ತಿಳಿಯಬೇಕು:

'ಪುನಶ್ಚ ಪಾಪವೃದ್ಧಯೇ ತದೈವ ನೋ ಜಘಾನ ತಮ್ ॥ ಮ. ಭಾ. ತಾ. ನಿ. . ೨೧/೩೫೭

೩) ಜಟಾಯುವಿಗೆ ಇದಾವುದರ ಪರಿಜ್ಞಾನವೂ ಇಲ್ಲದ್ದರಿಂದ, ಅವನು ರಾವಣನನ್ನು ತಡೆದ; ಅವನಿಗೆ ಹಾಗೆ ತಡೆಯುವ ಶಕ್ತಿಯಿಲ್ಲದಿದ್ದರೂ; ಹನುಮಂತ ಇದನ್ನೆಲ್ಲಾ ತಿಳಿದಿದ್ದರಿಂದ ಶಕ್ತಿಯಿದ್ದರೂ ತಡೆಯಲಿಲ್ಲ; ಎಂದರೆ ಹನುಮಂತ ಪೂರ್ಣಪ್ರಜ್ಞ; ಜಟಾಯು ಅಲ್ಲ ಎಂದು ಭಾವ. ಜಟಾಯು ತಿಳಿಯದಿದ್ದರೂ ಪ್ರತಿರೋಧವಮಾಡಿ ಪುಣ್ಯ ಕಟ್ಟಿಕೊಂಡ; ಹನುಮಂತನು ಎಲ್ಲ ತಿಳಿದಿದ್ದರಿಂದ ಪ್ರತಿರೋಧ ಮಾಡದೆಯೇ ಇನ್ನೂ ಹೆಚ್ಚು ಪುಣ್ಯ ಕಟ್ಟಿಕೊಂಡ ಎಂಬ ಅಂಶವನ್ನೂ ಗಮನಿಸಬೇಕು.

೪) ದ್ರೌಪದಿಯನ್ನು ದುರ್ಯೋಧನಾದಿಗಳು ಅವಮಾನಿಸುವಾಗ ಅವರನ್ನೆಲ್ಲ ಭೀಮಸೇನ ಆಗಲೇ ಸಂಹರಿಸದಿರಲು ಸಹ ಇದೇ ರೀತಿಯ ಕಾರಣಗಳಿದ್ದವು ಎಂಬುದಾಗಿ ಮುಂದೆ ತಿಳಿಸುವುದನ್ನು ಇಲ್ಲಿ ಗಮನಿಸಬೇಕು.

ಅಶೋಕವನದಲ್ಲಿ ಸೀತಾಕೃತಿ - ಶ್ರೀರಾಮನ ಸೀತಾನ್ವೇಷಣೆಯ ನಾಟಕ

ಪ್ರಾಪ್ಯೈವ ರಾಕ್ಷಸ ಉತಾತ್ಮಪುರೀಂ ಸ ತತ್ರ
ಸೀತಾಕೃತಿಂ ಪ್ರತಿನಿಧಾಯ ರರಕ್ಷ ಚಾಥ ।
ರಾಮೋಽಪಿ ತತ್ ತು ವಿನಿಹತ್ಯ ಸುದುಷ್ಪರಕ್ಷಃ
ಪ್ರಾಪ್ಯಾಶ್ರಮಂ ಸ್ವದಯಿತಾಂ ನ ಹಿ ಪಶ್ಯತೀವ ॥ ೪೦ ॥

---

೪೦. ನ ಪಶ್ಯತೀವಾಭವದ್ಧೀತಿ ಯೋಜನಾ। –(ವಾ)

೪೦. 'ಏಷ ಸರ್ವಜ್ಞಃ' ಇತಿ ಶ್ರುತೇಃ ಸರ್ವಜ್ಞತ್ವಾಖ್ಯವಿರುದ್ಧಶಕ್ತಿಪ್ರಸಿದ್ಧಿಸೂಚನಾಯ 'ಹಿ'ಶಬ್ದಃ।

೪೦. .....ಚಚಾರ ಇತಿ ಶೇಷಃ। –(ವ)

ಇತಿ ಹಿ ಪ್ರಸಿದ್ಧಿರಭೂದಿತಿ ಶೇಷಃ। –(ಜ)

೪೦. ಸ್ವಸ್ಥಿತಿದಶಾಯಾಂ ಕಪಟಕರಣೇನ ಮರಣಕಾಲೇಽಪಿ ಪರಾಪಕಾರಕರಣೇನ ಚ ಇತರ ದೈತ್ಯೇಭ್ಯೋಽಪಿ ತು ವಿಶೇಷೇಣ ಸುದುಷ್ಪರಕ್ಷಃ ಇತಿ ಸಂಬಂಧಃ। –(ವಾ)

೪೦. ರಾಮಾಂತಿಕೇ ಸ್ಥಿತಾ ದೇವೀ ನ ಮಂದೈಃ ಸಮದೃಶ್ಯತ।
ರೂಪಾಂತರೇಣ ಕೈಲಾಸಂ ಗತಾ ನಿತ್ಯಾऽವಿಯೋಗಿನೀ ॥ –ಮಣಿಮಂಜರೀ(೨/೨)

ಅ: ರಾಕ್ಷಸನಾದ ಆ ರಾವಣನು ತನ್ನ ಪಟ್ಟಣವಾದ ಲಂಕೆಯನ್ನು ತಲುಪಿ ಅಲ್ಲಿ ಸೀತಾಕೃತಿಯನ್ನಿರಿಸಿ ಅದನ್ನು ರಕ್ಷಿಸತೊಡಗಿದ. ಶ್ರೀರಾಮ ತುಂಬಾ ದುಷ್ಟರಾಕ್ಷಸನಾದ ಮಾರೀಚನನ್ನು ಕೊಂದು ತನ್ನ ಆಶ್ರಮಕ್ಕೆ ಮರಳಿದ; ಅಲ್ಲಿ ತನ್ನ ಪತ್ನಿಯಾದ ಸೀತೆಯನ್ನು ಕಾಣದವನಂತೆ ವರ್ತಿಸಿದ.

ವಿ: ೧) ರಾವಣನು ಅವಳಿಂದಲೇ ತನಗೆ 'ಶೋಕ' ಎಂಬುದನ್ನರಿಯದೆ ಸೀತಾಕೃತಿಯನ್ನು 'ಅಶೋಕ'ವನದಲ್ಲಿರಿಸಿ ರಕ್ಷಿಸತೊಡಗಿದ. ರಾವಣನ ಸ್ಥಿತಿ ಉಡಿಯಲ್ಲಿ ಕೆಂಡ ಕಟ್ಟಿಕೊಂಡು ಸುಖ ಅರಸುವವನಂತೆ ಅವಿವೇಕದ ಕಾರ್ಯವಾಗಿತ್ತು ಎಂಬ ಸೂಚನೆ ಇಲ್ಲಿದೆ.

೨) ಮಾರೀಚನು ಅಂತ್ಯಕಾಲದಲ್ಲೂ ರಾವಣನಿಗೆ ಒಳಿತಾಗಲಿ (ರಾವಣಪ್ರೀತ್ಯರ್ಥಂ) ಎಂದು 'ಹಾ ಲಕ್ಷ್ಮಣ' ಎಂದು ಕರೆದು ಶ್ರೀರಾಮಸೀತೆಯರನ್ನು ವಂಚಿಸಲು ಪ್ರಯತ್ನಿಸಿದ ಮಹಾ ಪಾಪಿ ಎಂಬುದನ್ನು 'ಸುದುಷ್ಕರಕ್ಷಃ' ಎಂಬ ಪದದಿಂದ ಸೂಚಿಸಿರುವರು.

೩) ಶ್ರೀರಾಮಸೀತೆಯರು, ಲಕ್ಷ್ಮೀನಾರಾಯಣರು; ಅವರಿಗೆಂದೂ ಪರಸ್ಪರ ವಿಯೋಗವೇ ಇಲ್ಲ; ಸೀತೆ ಒಂದು ರೂಪದಿಂದ ಕೈಲಾಸಕ್ಕೆ ತೆರಳಿದರೂ ಮತ್ತೊಂದು ರೂಪದಿಂದ ಶ್ರೀರಾಮನ ಬಳಿಯೇ ಇರುವರು; ಅದೆಲ್ಲ ರಾಮನಿಗೆ ಗೊತ್ತು; ಆದರೆ ಅಸುರಮೋಹನಕ್ಕಾಗಿ ಶ್ರೀರಾಮನು ಸೀತೆ ಎದುರೇ ಇರುವುದನ್ನು ಕಂಡರೂ ಕಾಣದವನಂತೆ ವರ್ತಿಸಿದ ಎಂಬುದನ್ನು 'ಇವ' ಶಬ್ದದಿಂದ ಸೂಚಿಸಿರುವರು.

ಜಟಾಯುವಿಗೆ ಸದ್ಗತಿ

ಅನ್ವೇಷಮಾಣ ಇವ ತಂ ಚ ದದರ್ಶ ಗೃಧ್ರಂ
ಸೀತಾಂ ರಿರಕ್ಷಿಷುಮಥೋ ರಿಪುಣಾ ವಿಶಸ್ತಮ್ ।
ಮಂದಾತ್ಮಚೇಷ್ಟಮಮುನೋಕ್ತಮರೇಶ್ಚ ಕರ್ಮ
ಶ್ರುತ್ವಾ ಮೃತಂ ತಮದಹತ್ ಸ್ವಗತಿಂ ತಥಾऽದಾತ್ ॥ ೪೧ ॥

ಅ: ಸೀತೆಯನ್ನು ಹುಡುಕಿಯೋ ಎಂಬಂತೆ ಹೊರಟ ಶ್ರೀರಾಮ ಸೀತೆಯನ್ನು ರಕ್ಷಿಸಲು ಬಯಸಿ ಶತ್ರುವಾದ ರಾವಣನಿಂದ ಘಾಸಿಗೊಳಿಸಲ್ಪಟ್ಟಿದ್ದ ಜಟಾಯುವೆಂಬ ಹದ್ದನ್ನು ಕಂಡ; ಅವನ ಶರೀರವ್ಯಾಪಾರವು ಆಗಲೇ ಕ್ಷೀಣಿಸುತ್ತಿತ್ತು. ಅವ ತಿಳಿಸಿದ ಹಗೆಯಾದ ರಾವಣನ ಕುಕೃತ್ಯವನ್ನು ಕೇಳಿದ; ಬಳಿಕ ಮೃತನಾದ ಅವನನ್ನು ಶ್ರೀರಾಮ ದಹನ ಮಾಡಿದ. ಹಾಗೆಯೇ ಅವನಿಗೆ ಸದ್ಗತಿಯನ್ನೂ ನೀಡಿದ.

ಏಃ ೧) ಅಸುರಮೋಹನಕ್ಕಾಗಿ ಪಕ್ಕದಲ್ಲಿದ್ದ ಸೀತೆಯನ್ನು ಕಾಣದವನೋ ಎಂಬಂತೆ ವರ್ತಿಸಿದ ಶ್ರೀರಾಮ ಅದಕ್ಕೆಂದೇ ಅವಳನ್ನು ಹುಡುಕಿಕೊಂಡು ಹೊರಟಂತೆಯೂ ವರ್ತಿಸಿದ; ಸರ್ವಜ್ಞನಾದ ಅವನು ಕೊನೆಯುಸಿರೆಳೆಯಲಿದ್ದ ಜಟಾಯುವಿನಿಂದ ಸೀತಾಹರಣಾದಿ ಕಾರ್ಯವನ್ನು ಕೇಳಿದ; ಅನಂತರ ಮೃತನಾದ ಜಟಾಯುವಿಗೆ ಸದ್ಗತಿಯನ್ನೂ ನೀಡಿ ಅನುಗ್ರಹಿಸಿದ.

೨) ಒಂದೇ ದಿನ ಮಾರೀಚ ಮತ್ತು ಜಟಾಯು ಇಬ್ಬರೂ ಸತ್ತರು; ಮಾರೀಚ ಸತ್ತಿದ್ದು ಶ್ರೀರಾಮನಿಂದಾದರೆ, ಜಟಾಯು ಸತ್ತಿದ್ದು ರಾವಣನಿಂದ; ಅವರೀರ್ವರೂ ಸತ್ತದ್ದು ಸಹ ದಂಡಕಾರಣ್ಯಪ್ರಾಂತದಲ್ಲಿಯೇ; ಆದರೆ ಹಾಗೆ ಸತ್ತ ಮಾರೀಚ ತಮಸ್ಸಿಗೆ ನಡೆದರೆ, ಜಟಾಯು ಸದ್ಗತಿಯನ್ನೇ ಕಂಡ. ಇಬ್ಬರೂ ಸತ್ತವರೇ; ಆದರೆ ಅವರ ಸಾವಿನ ಹಿಂದಿನ ಉದ್ದೇಶ ಮಾತ್ರ ಬೇರೆಯಾಗಿತ್ತು; ಮಾರೀಚನದು ಸೀತಾಹರಣವಾಗಲೆಂದು ರಾವಣಪ್ರೀತ್ಯರ್ಥವಾದ ಸಾವು. ಆದರೆ ಜಟಾಯುವಿನದು ಸೀತಾಪಹರಣವಾಗದಿರಲೆಂದು ಶ್ರೀರಾಮಪ್ರೀತ್ಯರ್ಥವಾದ ಸಾವು; ರಾವಣ–ಪ್ರೀತ್ಯರ್ಥವಾಗಿ ಬದುಕಿದ ಮಾರೀಚನದು ಅಧೋಗತಿ; ಶ್ರೀರಾಮಪ್ರೀತ್ಯರ್ಥವಾಗಿ ಜೀವಿಸಿದ ಜಟಾಯುವಿನದು ಸದ್ಗತಿ; (ಸ್ವಧರ್ಮೇ ನಿಧನಂ ಶ್ರೇಯಃ); ಭಗವತ್ಪ್ರೀತ್ಯರ್ಥವಾದ ಜೀವನ ಮೋಕ್ಷಹೇತುವಾದರೆ ಅನ್ಯಪ್ರೀತ್ಯರ್ಥವಾದ ಬದುಕು ತಮೋಹೇತು ಎಂಬುದು ಇದರ ಸಾರ. ಇದು ಒಂದರ್ಥದಲ್ಲಿ **'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ'** ಎಂಬ ಗೀತಾವಾಕ್ಯಕ್ಕೂ ನಿದರ್ಶನ.

೩) ಒಂದು ಹದ್ದಿಗೂ ಮೋಕ್ಷ ಕರುಣಿಸುವ ಶ್ರೀರಾಮ ನಿಜಕ್ಕೂ ತನ್ನ ಪತ್ನಿಯನ್ನು ಎಂತು ತಾನೇ ಕಳೆದುಕೊಂಡಾನು? ಎಂಬ ಧ್ವನಿಯೂ ಇಲ್ಲಿದೆ.

೪) ತನಗೋಸ್ಕರ ಸತ್ತ ಮಾರೀಚನನ್ನು ಲೆಕ್ಕಿಸದೆ ತೆರಳಿದ ರಾವಣನೆಲ್ಲಿ ? ತನಗಾಗಿ ಸತ್ತ ಜಟಾಯುವಿಗೆ ಸ್ವತಃ ಅಂತ್ಯಕ್ರಿಯೆ ನಡೆಸಿ ಸದ್ಗತಿಯಿತ್ತ ಶ್ರೀರಾಮನೆಲ್ಲಿ? ಅದಕ್ಕೇಂದೇ ಜ್ಞಾನಿಗಳು ಸಾರಿರುವರುಃ **'ನಂಬಿಕೆಟ್ಟವರಿಲ್ಲವೋ ರಂಗಯ್ಯನ'**.

ಕಬಂಧನ ಉದ್ಧಾರ

ಅನ್ಯತ್ರ ಚೈವ ವಿಚರನ್ ಸಹಿತೋಽನುಜೇನ
ಪ್ರಾಪ್ತಃ ಕರೌ ಸ ಸಹಸಾಽಥ ಕಬಂಧನಾಮ್ನಃ ।
ಧಾತುರ್ವರಾದಖಿಲಜಾಯಿನ ಉಜ್ಝಿತಸ್ಯ
ಮೃತ್ಯೋಶ್ಚ ವಜ್ರಪತನಾದತಿಕುಂಚಿತಸ್ಯ ॥ ೪೨ ॥

ಛಿತ್ವಾऽಸ್ಯ ಬಾಹುಯುಗಲಂ ಸಹಿತೋऽನುಜೇನ
ತಂ ಪೂರ್ವವತ್ ಪ್ರತಿವಿಧಾಯ ಸುರೇಂದ್ರಭೃತ್ಯಮ್ ।
ನಾಮ್ನಾ ದನುಂ ತ್ರಿಜಟಯೈವ ಪುರಾऽಭಿಜಾತಂ
ಗಂಧರ್ವಮಾಶು ಚ ತತೋऽಪಿ ತದರ್ಚಿತೋऽಗಾತ್ ॥ ೪೩ ॥

ಅ: ಮತ್ತೊಂದೆಡೆ ಸಂಚರಿಸುವಾಗ ಶ್ರೀರಾಮ ಕಬಂಧನೆಂಬವನ ಕೈಗಳಿಗೆ ತಮ್ಮನಾದ ಲಕ್ಷ್ಮಣನ ಸಮೇತವಾಗಿ ಸಿಲುಕಿದ; ಆ ಕಬಂಧನು ಬ್ರಹ್ಮವರದಿಂದಾಗಿ ಎಲ್ಲರನ್ನೂ ಗೆಲ್ಲುವವನಾಗಿದ್ದ; ಸಾವಿಲ್ಲದವನಾಗಿದ್ದ; ವಜ್ರಾಯುಧದ ಪೆಟ್ಟಿನಿಂದಾಗಿ ಬಹಳ ನಲುಗಿದವನೂ ಆಗಿದ್ದ.

---

೪೨. ಅಥ ಗೃಧ್ರದಹನಾನಂತರಂ ಅನ್ಯತ್ರ ವಿಚರನ್ನೇವೇತಿ ಅಥೈವಶಬ್ದಯೋಃ ಸಂಬಂಧಃ ।

೪೨. ಕಬಂಧ ಏವ ದೃಶ್ಯತೇ ಶಿರಸ್ತು ವಜ್ರಪ್ರಾಶಾತ್ ಕಬಂಧಾಂತರ್ವಿವರ ಏವ ಲಗ್ನಂ ಅತಃ ಕಬಂಧ ಇತಿ ಆಖ್ಯಾ। –(ವಾ)

ಅನೇನ ಕಬಂಧನಾಮ್ನಃ ಕಸ್ಯ ಶಿರಸಃ ಬಂಧಃ ಕುಂಚನಂ ಯಸ್ಯ ಸಃ ಕಬಂಧಃ ತನ್ನಾಮಕಸ್ಯ ಇತ್ಯುಕ್ತಂ ಭವತಿ।

ಕ್ರಿಯಾವಾಚಿತ್ವಮಾಖ್ಯಾತುಮೇವೈಕೋರ್ಥಃ ಪ್ರದೃಶ್ಯತೇ ।
ಪ್ರಯೋಗತೋ ತು ಗಂತವ್ಯಾ ಅನೇಕಾರ್ಥಾ ಹಿ ಧಾತವಃ ॥
ಇತ್ಯಭಿಯುಕ್ತೋಕ್ತೇರ್ಬಂಧಧಾತೋಃ ಕುಂಚನಾರ್ಥತ್ವಂ ಯುಕ್ತಮಿತಿ ಜ್ಞೇಯಮ್ ।
–ಅತಿವಿಶದವಾಕ್ಯಾರ್ಥವಿವೃತಿ(ಪ್ರ)

೪೨. ಅಯಮೇವ ಶಿಶುಪಾಲಪಿತಾ ದಮಘೋಷಃ ।
ದಮಘೋಷಃ ಕಬಂಧಶ್ಚ ದನುಗಂಧರ್ವ ಉಚ್ಯತೇ । - ಇತಿ ವಿಷ್ಣುಭಟ್ಟೀಯ ತಾರತಮ್ಯಸ್ತೋತ್ರೇ ।

ಅಯಂ ಪೂರ್ವೇ ವಿಶ್ವಾವಸುಗಂಧರ್ವ ಇತಿ ಅರಣ್ಯಪರ್ವಣ್ಯುಕ್ತಮ್ ।

ಯಥಾ-

ತಸ್ಯಾಚಚಕ್ಷೇ ಗಂಧರ್ವೋ ವಿಶ್ವಾವಸುರಹಂ ನೃಪ ।
ಪ್ರಾಪ್ತೋ ಬ್ರಾಹ್ಮಣಶಾಪೇನ ಯೋನಿಂ ರಾಕ್ಷಸಸೇವಿತಾಮ್ ॥ (೩/೨೭೯/೪೨) ಇತಿ–(ಜ.)
ಗಂಧರ್ವೋऽಸ್ಮೈ ದನುನಾಮಾ ನರೋऽಭೂತ್ । - ಇತಿ (೧೬/೩೦)

೪೩. ಪ್ರತಿವಿಧಾಯಕೃತ್ವಾ। ಪ್ರತಿನಿಧಾಯ ಇತ್ಯಪಿ ಪಾಠಃ । ತತ್ರ ಪೂರ್ವವತ್ ಪ್ರತಿನಿಧಾಯ ಇತ್ಯಂತರ್ಣೀತಣಿಚ್। ಬಲಮಿತಿಶೇಷಃ ॥ –(ಜ)

೪೩. ತ್ರಿಜಟಯೈವೇತ್ಯತ್ರ ಏವಕಾರಸ್ಯ ಪೂರ್ವವದೇವ ಪ್ರತಿವಿಧಾಯ ಇತ್ಯರ್ಥಃ । –(ವಾ)

೪೩. ಅತೋऽನ್ಯಥಾ ದನುರ್ಯಥಾ ವರಾದಮೃತ್ಯುಕೋऽಪಿ ಸನ್ ।
ಸುರೇಂದ್ರವಜ್ರತಾಡಿತೋ ಬಭೂವ ಕುಕ್ಷಿಗಾಸ್ಯಯುಕ್ ॥ -ಮ.ಭಾ.ತಾ.ನಿ. ೧೭/೪೧

೪೩. ವಿಶ್ವಾವಸುಗಂಧರ್ವಸ್ಯೈವ ದನುರಿತಿ ನಾಮಾಂತರಂ– ಇತಿ ಕೇಚಿದಾಹುಃ । -(ಅತಿವಿಶದವಾಕ್ಯಾರ್ಥವಿವೃತಿ)

ಅನುಜನಾದ ಲಕ್ಷ್ಮಣನೊಂದಿಗೆ ಶ್ರೀರಾಮ ಅವನ ಎರಡೂ ತೋಳುಗಳನ್ನು ಕತ್ತರಿಸಿ, ಅವನನ್ನು ಮುಂಚಿನಂತೆ ದೇವೇಂದ್ರಭೃತ್ಯನಾದ 'ದನು' ಎಂಬ ಗಂಧರ್ವನನ್ನಾಗಿ ಮಾಡಿದ; ಆ 'ದನು' ಎಂಬ ಹೆಸರಿನ ಗಂಧರ್ವನು ತ್ರಿಜಟೆ ಎಂಬವಳ ಮಗನಾಗಿ ಜನಿಸಿದ್ದ; ಅವನಿಂದ ಪೂಜಿತನಾದ ಶ್ರೀರಾಮ ಅಲ್ಲಿಂದ ಮುಂದಕ್ಕೆ ತೆರಳಿದ.

ಎ: ೧) ಸೀತಾನ್ವೇಷಣೆಯ ನೆಪದಲ್ಲಿ ಭಕ್ತಾನುಗ್ರಹಕ್ಕಾಗಿ ತೆರಳಿದ ಶ್ರೀರಾಮ ಒಂದೆಡೆ 'ಕಬಂಧ'ನೆಂಬವನನ್ನು ಉದ್ಧರಿಸಿದ ಪ್ರಸಂಗವನ್ನು ಈ ಎರಡು ಶ್ಲೋಕಗಳಲ್ಲಿ ನಿರೂಪಿಸಿರುವರು.

೨) ಕಬಂಧ 'ದನು' ಎಂಬ ಹೆಸರಿನ ಗಂಧರ್ವ; 'ಸ್ಥೂಲಶಿರಸ್' ಎಂಬ ಮುನಿಯನ್ನು ಭಯಂಕರರೂಪದಿಂದ ಕೆಣಕಿ ಅವರ ಶಾಪದಿಂದ ತ್ರಿಜಟೆಯ ಮಗನಾಗಿ ಹುಟ್ಟಿ ರಾಕ್ಷಸನಾಗಿದ್ದ; ಬ್ರಹ್ಮದೇವರಿಂದ ಅಜೇಯತ್ವ ಮತ್ತು ಅವಧ್ಯತ್ವ ವರಗಳನ್ನು ಪಡೆದಿದ್ದ ಅವನು ಇಂದ್ರದೇವರನ್ನು ಕೆಣಕಿ ಅವರ ವಜ್ರಾಯುಧದ ಪೆಟ್ಟಿಗೆ ಗುರಿಯಾದ; ಅದರಿಂದ ಅವನ ತಲೆ ಉದರದೊಳಗೆ ಸೇರಿಹೋಯಿತು; ಇಂದ್ರವರದಿಂದ ಉದರದಲ್ಲೇ ಬಾಯಿ ಉಂಟಾಯಿತು. ಹೀಗೆ ರುಂಡವಿಲ್ಲದೆ ಬರೀ ಮುಂಡ(ಕಬಂಧ)ವನ್ನು ಹೊಂದಿದ್ದರಿಂದಾಗಿ ಅವನಿಗೆ ಕಬಂಧ ಎಂದೇ ಹೆಸರಾಗಿತ್ತು; ಇಂದ್ರವರದಿಂದ ಅವನ ಕೈಗಳು ಯೋಜನಗಟ್ಟಲೆ ಬೆಳೆಯುತ್ತಿದ್ದವು; ಅದರಿಂದ ಪ್ರಾಣಿಗಳನ್ನು ಹಿಡಿದು ತಿನ್ನುತ್ತಿದ್ದ ಅವನು ಹಾಗೆ ಮಾಡಲೆಂದು ಶ್ರೀರಾಮಲಕ್ಷ್ಮಣರನ್ನೂ ಹಿಡಿದುಕೊಂಡ. ಬ್ರಹ್ಮದೇವರ ವರವನ್ನು ಸತ್ಯಮಾಡಲೆಂದು ವಿರಾಧನ ಕೈಗೆ ಸಿಕ್ಕಿದಂತೆ ಇವನ ಕೈಗೂ ಶ್ರೀರಾಮನು ಸಿಕ್ಕಂತೆ ವರ್ತಿಸಿದ ಎಂದು ತಿಳಿಯಬೇಕು. ಅನಂತರ ಶ್ರೀರಾಮನು ಅವನ ಬಲತೋಳನ್ನೂ, ಲಕ್ಷ್ಮಣನು ಎಡತೋಳನ್ನೂ ಕತ್ತರಿಸಿ ಅವನ ಪ್ರಾರ್ಥನೆಯಂತೆ ಬಿಲದಲ್ಲಿ ಬೀಳಿಸಿ ಸುಟ್ಟುಹಾಕಿದರು. ಹೀಗೆ ಪಾಪಯೋನಿಯಿಂದಲೂ, ಶಾಪದಿಂದಲೂ ಮುಕ್ತನಾದ 'ದನು' ಗಂಧರ್ವ ಶ್ರೀರಾಮನನ್ನು ಸ್ತುತಿಸಿ ತನ್ನ ಲೋಕಕ್ಕೆ ತೆರಳಿದ.

೩) ಈ ದನುವೇ ಮುಂದೆ ಮಹಾಭಾರತಕಾಲದಲ್ಲಿ 'ದಮಘೋಷ'ನಾಗಿ ಹುಟ್ಟಿ, ಶಿಶುಪಾಲನ ತಂದೆಯಾದ.

೪) ಇವನು ಮೂಲತಃ ವಿಶ್ವಾವಸು ಎಂಬ ಗಂದರ್ವ; ತ್ರಿಜಟೆಯ ಮಗನಾಗಿದ್ದಾಗ 'ದನು' ಎಂದು ಹೆಸರಿತ್ತು; ಎಂದು ಜನಾರ್ದನಭಟ್ಟರು ಬರೆದಿರುವರು. 'ದನು'ವಿಗೆ 'ವಿಶ್ವಾವಸು' ಎಂಬ ನಾಮಾಂತರ ಇದ್ದಿತೆಂದು ತಿಳಿದಲ್ಲಿ ಯಾವ ವಿರೋಧವೂ ಇರುವುದಿಲ್ಲ.

ದನುನಾಮಾಸ್ಮಿ ಗಂಧರ್ವಃ ಶಾಪಾದ್ರಕ್ಷಸ್ತ್ವಮಾಗತಃ ।
ಅವಧ್ಯೋ ಬ್ರಹ್ಮವರತೋ ವಜ್ರಪಾತೇನ ಕುಂಚಿತಃ ॥ – ಸಂ.ರಾ.೩/೬/೨೮

ದನುಸ್ವರೂಪೀ ಪ್ರೋವಾಚ । – ಸಂ.ರಾ.೩/೬/೩೦

ಕಬಂಧೋ ದನುಗಂಧರ್ವಃ – ನಾರಾಯಣಪಂಡಿತರ 'ಅಂಶಾವತಾರ' –ಶ್ಲೋ. ೧೭

ಗಂಧರ್ವೋಽಸೌ ದನುನಾಮಾ ನರೋಽಭೂತ್ । – ಮ. ಭಾ. ತಾ. ನಿ. ೧೬ /೩೦

ದಮಘೋಷೋ ದನುರ್ನಾಮ ಗಂಧರ್ವಃ ಪ್ರಾಗುದಾಹೃತಃ ॥ –ಅಂಶಾವತಾರ (೩೪)

೫) ದೇವತೆಗಳ, ಋಷಿಗಳ ದ್ರೋಹ ರಾಕ್ಷಸಯೋನಿಗೆ ಕಾರಣ ಎಂಬ ತತ್ತ್ವವೂ ಇದರಿಂದ ಸೂಚಿತ.

೬) ಲೋಕಕಂಟಕರಿಗೆ ತಲೆ ಇರುವುದಿಲ್ಲ; ಅವರಿಗೆ ಇರುವುದು ಬರೀ ಮುಂಡ ಮಾತ್ರ ಹೊಟ್ಟೆಯಲ್ಲೇ ತಲೆ; ತಾವು ಇದ್ದಲ್ಲೇ ಇದ್ದು ಕೈಗಳನ್ನು ಬೆಳೆಸಿ ಲೋಕನಾಶಮಾಡುವುದು ಅವರ ರೀತಿ; ಭಗವಂತನನ್ನು ಹಿಡಿಯಲೂ ಇಂತಹ ಜನ ಹಿಂತೆಗೆಯುವುದಿಲ್ಲ (ವಿಗ್ರಹಚೋರರು); ಇಂತಹ ಭ್ರಷ್ಟಾಚಾರದ ಕಬಂಧಬಾಹುವನ್ನು ಭಗವಂತನೂ ಮತ್ತು ಅವನ ಅನುಗ್ರಹದಿಂದ ಅವನ ಪ್ರಿಯಭಕ್ತರು ಮಾತ್ರವೇ ನಾಶಮಾಡಬಲ್ಲರು ಮೊದಲಾದ ಅನೇಕ ತತ್ತ್ವಗಳೂ ಈ ಪ್ರಸಂಗದಲ್ಲಿ ಸೂಚಿತವಾಗಿವೆ.

ಶಬರಿಗೆ ಸದ್ಗತಿ

ದೃಷ್ಟ್ವಾ ತಮೇವ ಶಬರೀ ಪರಮಂ ಹರಿಂ ಚ
ಜ್ಞಾತ್ವಾ ವಿವೇಶ ದಹನಂ ಪುರತೋಽಸ್ಯ ತಸ್ಯೈ ।
ಪ್ರಾದಾತ್ ಸ್ವಲೋಕಮಿಮಮೇವ ಹಿ ಸಾ ಪ್ರತೀಕ್ಷ್ಯ
ಪೂರ್ವಂ ಮತಂಗವಚನೇನ ವನೇಽತ್ರ ಸಾಽಭೂತ್ ॥ ೪೪ ॥

---

೪೪. 'ದೃಷ್ಟ್ವೈವ ಮುಚ್ಯತೇ' ಇತಿ ಪ್ರಮಾಣಪ್ರಸಿದ್ಧಿದ್ಯೋತನಾಯ 'ಹಿ'ಶಬ್ದಃ ।
ಅವೈದಿಕ್ಯೈ ಶಬರ್ಯೈ ಚ ದಯಾಲುಃ ಸ್ವಗತಿಂ ದದೌ ।
ತಸ್ಮಾ ಭಕ್ತ್ಯಾಭೃಶಂ ಪ್ರೀತೋ ಭಕ್ತಿರ್ಹಿ ಭವಮೋಚನೀ ॥ –ಸಂ. ರಾ. (೩/೬/೩೯)

೪೪. ಸಾ ಶಬರೀ ಇಮಮೇವ ರಾಮಂ ಪ್ರತೀಕ್ಷ್ಯ ವನೇ ಅತ್ರಸ್ತಾ ತ್ರಾಸರಹಿತಾ ಸತೀ ಅಭೂದಿತಿ ಯೋಜನಾ । ತ್ರಸುಧಾತೋಃ ಪಚಾದ್ಯಚ ಕೃತೇ ತ್ರಸ ಇತ್ಯಪಿ ರೂಪಮಸ್ತಿ । ಅತಃಭ್ಬದ್ದ್ವಯಾಭಾವಾತ್ ನ ಪೌನರುಕ್ತ್ಯಮಿತಿ ಜ್ಞೇಯಮ್ । –(ವಾ.)

* ಅತ್ರಸಾ ಭಯರಹಿತಾ – (ವೇ.)

ತ್ರಸ್ಯತೀತಿ ತ್ರಸಾ । ನ ತ್ರಸಾ ಅತ್ರಸಾ ಉದ್ವೇಗರಹಿತಾ ಅಭೂತ್। ತ್ರಸೀ ಉದ್ವೇಗೇ ಇತಿ ಧಾತುಃ। -(ಜ.)

ಅತ್ರಸಾ ತ್ರಾಸರಹಿತಾ ಭಯರಹಿತೇತಿ ಯಾವತ್ । ಯದ್ವಾ ಅತ್ರ ವನೇ ಸಾ ಪ್ರಸಿದ್ಧಾ ಇತಿ ದ್ವಿತೀಯಾತಚ್ಚಬ್ದ ಸ ಪ್ರಸಿದ್ಧತ್ವಮಿತ್ಯರ್ಥಃ । ಸರ್ವನಾಮಪ್ರಸಿದ್ಧಾರ್ಥಂ ಇತಿ ವಚನಾತ್ । ಅತೋ ನ ಪೌನರುಕ್ತ್ಯಮಿತಿ ದ್ರಷ್ಟವ್ಯಮ್ । -(ವ)

೪೪. ಆಗಮಿಷ್ಯತಿ ಕಾಕುತ್ಸ್ಥಃ ಸುಪುಣ್ಯಂ ತವ ಚಾಶ್ರಮಮ್ ।
ಸ ತೇ ಪ್ರತಿಗೃಹೀತವ್ಯೋ ರಾಮಃ ಸೌಮಿತ್ರಿಣಾ ಸಹ ॥
ತಮರ್ಚಯಿತ್ವಾ ಧ್ರುವಂ ಸ್ವರ್ಗೋ ಭವಿಷ್ಯತಿ ತವಾಕ್ಷಯಮ್ ॥ (ಮತಂಗವಚನ)– ವಾ.ರಾ. (೩/೪೬೧)

ಅ: ಶಬರಿಯು ಆ ಶ್ರೀರಾಮನನ್ನು ಕಂಡಳು; ಅವನನ್ನು ಸರ್ವೋತ್ತಮನಾದ ಶ್ರೀಹರಿಯೆಂದೇ ತಿಳಿದಳು; ಅವನೆದುರೇ ಅಗ್ನಿಯನ್ನು ಪ್ರವೇಶಿಸಿದಳು; ಶ್ರೀರಾಮನು ಅವಳಿಗೆ ತನ್ನ ಲೋಕವನ್ನೇ ನೀಡಿದನು; ಮತಂಗರ ಮಾತಿನಂತೆ ಅವಳು ಶ್ರೀರಾಮನನ್ನು ಪ್ರತೀಕ್ಷಿಸಿಕೊಂಡೇ ಭಯರಹಿತಳಾಗಿ ಆ ಮತಂಗವನದಲ್ಲಿ ನೆಲೆಸಿದ್ದಳು.

ಋಷ್ಯಮೂಕದಲ್ಲಿ ಹನೂಮದ್ದರ್ಶನ

ಶಾಪಾದ್ವರಾಪ್ಸರಸಮೇವ ಹಿ ತಾಂ ವಿಮೋಚ್ಯ
ಶಚ್ಯಾ ಕೃತಾತ್ ಪತಿಪುರಸ್ತ್ವತಿದರ್ಪಹೇತೋಃ ।
ಗತ್ವಾ ದದರ್ಶ ಪವನಾತ್ಮಜಮೃಷ್ಯಮೂಕೇ
ಸ ಹ್ಯೇಕ ಏನಮವಗಚ್ಛತಿ ಸಮ್ಯಗೀಶಮ್ ॥ ೪೫ ॥

ಅ: ಮೂಲತಃ ಉತ್ತಮ ಅಪ್ಸರಸ್ತ್ರೀಯಾಗಿದ್ದ ಅವಳನ್ನು ಶ್ರೀರಾಮ ಹೀಗೆ ಉದ್ಧರಿಸಿದನು; ಅವಳು ಶಬರಸ್ತ್ರೀಯಾಗಿ ಹುಟ್ಟಲು ಶಚೀದೇವಿಯ ಶಾಪ ಕಾರಣವಾಗಿತ್ತು; ಅವಳು ಹಾಗೆ ಶಾಪ ನೀಡಲು ಅವಳು ತನ್ನ ಪತಿಯಾದ ಇಂದ್ರನೆದುರೇ ಬಹಳವಾಗಿ ಬಿಂಕದಿಂದ ವರ್ತಿಸಿದ್ದು ಕಾರಣವಾಗಿತ್ತು; ಶ್ರೀರಾಮ ಋಷ್ಯಮೂಕಕ್ಕೆ ತೆರಳಿ ಪವನತನಯನಾದ ಹನುಮಂತನನ್ನು ಕಂಡ; ಅವನೊಬ್ಬನೇ ಸ್ವಾಮಿಯಾದ ಶ್ರೀರಾಮನನ್ನು ಸದಾಕಾಲವೂ ಯಥಾರ್ಥವಾಗಿ ತಿಳಿಯುವವನಲ್ಲವೇ !

ವಿ: ೧) ಕಬಂಧೋದ್ಧಾರದ ಅನಂತರದ ಪ್ರಮುಖ ಘಟ್ಟ ಶಬರೀ ಮೋಕ್ಷಣ; ಅದನ್ನೂ ಶ್ರೀಮದಾಚಾರ್ಯರು ಒಂದೂವರೆ ಶ್ಲೋಕಗಳಲ್ಲಿ ನಿರೂಪಿಸಿ, ಅನಂತರದ ಭಾಗದಲ್ಲಿ ಶ್ರೀರಾಮನ ಋಷ್ಯಮೂಕಗಮನವನ್ನು ತಿಳಿಸಿರುವರು.

೨) ಶಬರಿಯು ಶಬರ(ಬೇಡ)ಜಾತಿಯಲ್ಲಿ ಹುಟ್ಟಿದ್ದ ಒಬ್ಬ ಸ್ತ್ರೀ; ಅವಳು ಮೂಲತಃ ಒಬ್ಬ ಶ್ರೇಷ್ಠ ಅಪ್ಸರೆ; ಇಂದ್ರನ ಮುಂದೆ ಒಮ್ಮೆ ಮಿತಿಮೀರಿದ ಗರ್ವವನ್ನು ತೋರಿದ ಕಾರಣ ಶಚೀದೇವಿ ಅವಳನ್ನು ಶಪಿಸಿದ್ದಳು; ಅದಕ್ಕೆಂದೇ ಅವಳು ಬೇಡತಿಯಾಗಿ ಜನಿಸಿದ್ದಳು. ತನ್ನ ಗುರುಗಳಾದ ಮತಂಗಮುನಿಗಳ ಆದೇಶದಂತೆ ಶ್ರೀರಾಮನ ಆಗಮನವನ್ನು ನಿರೀಕ್ಷಿಸಿ ಅವಳು ಕಾದಿದ್ದಳು; ಅದಕ್ಕೆಂದೇ ಅಲ್ಲಿಗೆ ಆಗಮಿಸಿದ ಶ್ರೀರಾಮನು ಅವಳನ್ನು ಉದ್ಧರಿಸಿದನು; ತನ್ನೆದುರೇ ಅಗ್ನಿಯಲ್ಲಿ ಪ್ರಾಣತೊರೆದ ಅವಳಿಗೆ ಅವನು ಸದ್ಗತಿ ಇತ್ತ

---

೪೫. ಋಜುಯೋಗಿನಾಂ ಸರ್ವಜ್ಞತ್ವಪ್ರಸಿದ್ಧ್ಯುದ್ಯೋತನಾಯ ಏನಮೀಶಮವಗಚ್ಛತಿ ಇತಿ ಹಿಶಬ್ದಃ । –(ವಾ)

೩) ಮೂಲತಃ ಅಪ್ಸರೆಯಾಗಿದ್ದ ಅವಳು ಬೇಡತಿಯಾಗಲು ಶಚಿಯ ಶಾಪ ಕಾರಣವಾಯಿತು; ಅವಳು ಪುನಃ ಅಪ್ಸರೆಯಾಗಿ ಉದ್ಧಾರವಾಗಲು ಶ್ರೀರಾಮನ ದರ್ಶನ ಕಾರಣವಾಯಿತು; ಅಂತಹ ದರ್ಶನಕ್ಕೆ ಅವಳಿಗೆ ಗುರು ಮತಂಗಮುನಿಯ ಉಪದೇಶ ಕಾರಣವಾಯಿತು. ಗುರೂಪದೇಶದಂತೆ ಅವಳು ಮಾಡಿದ ಶ್ರೀರಾಮಪ್ರತೀಕ್ಷೆ ದೊಡ್ಡ ಉಪಾಸನೆಯಾಯಿತು. ಶಬರಿಯು ಒಬ್ಬ ಬೇಡತಿಯಾದರೂ, ಅವಳು ಮೂಲತಃ ಬ್ರಹ್ಮಜ್ಞಾನಿಯಾಗಿದ್ದ ಒಬ್ಬ ಅಪ್ಸರೆಯಾಗಿದ್ದಳು; ಅದಕ್ಕೆಂದೇ ಶ್ರೀರಾಮ ಅವಳನ್ನು ಉದ್ಧರಿಸಿದ; ಭಗವದನುಗ್ರಹಕ್ಕೆ ಬ್ರಹ್ಮಜ್ಞಾನದ ಹೊರತು ಮತ್ತೊಂದು ಉಪಾಯವೇ ಇಲ್ಲ ಎಂಬ ತತ್ತ್ವವೂ ಇದರಿಂದ ಧ್ವನಿತ.

೪) ಸೀತೆಯ ಹೊರತು ಈವರೆಗೂ ಯಾರೂ ಶ್ರೀರಾಮನನ್ನು ಪೂರ್ಣ ಯಥಾರ್ಥವಾಗಿ ತಿಳಿದಿರಲಿಲ್ಲ; ಆದರೆ ಹನುಮಂತ ಹಾಗಲ್ಲ; ಅತನು ಎಂದೂ ಅಜ್ಞಾನಾದಿದೋಷಗಳನ್ನು ಹೊಂದದ ಋಜುಪುಂಗವ ಎಂಬುದನ್ನು ತಿಳಿಸಲು ಶ್ರೀರಾಮನು ಅಲ್ಲಿಗೆ ಬಂದ ಎಂದು ಭಾವ.

ಶ್ರೀರಾಮ ಹನುಮಂತರ ಅನ್ಯೋನ್ಯತೆ

ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ
ತತ್ರೈವ ವಾಯುರಿತಿ ವೇದವಚಃ ಪ್ರಸಿದ್ಧಮ್ ।
ಕಸ್ಮಿನ್ ವಹಂತ್ವಿತಿ ತಥೈವ ಹಿ ಸೋಽವತಾರೇ
ತಸ್ಮಾತ್ ಸ ಮಾರುತಿಕೃತೇ ರವಿಜಂ ರರಕ್ಷ ॥ ೪೬ ॥

೪೬. ಅಪೇರಭಿವ್ಯಾಪ್ತ್ಯರ್ಥಕತ್ವಾತ್ ಜಾತಾವೇಕವಚನಸದ್ಭಾವಾಚ್ಚ ದೇಹೇಽಪಿ ಸರ್ವಪ್ರಾಣಿ ದೇಹೇಷ್ವಪಿ ಯತ್ರ ಪವನಸ್ತತ್ರ ಹರಿರ್ಯತೋ ಯತ್ರಾಸೌ ಹರಿಸ್ತತ್ರೈವ ವಾಯುರಿತಿ 'ಕಸ್ಮಿನ್ವಹಂ ತು' ಇತಿ ವೇದವಚಃ ಪ್ರಸಿದ್ಧಮಿತಿ ಯೋಜನಾ । –(ವಾ)

ಅಥವಾ 'ವೇದವಚಃ' ಇತ್ಯನೇನ 'ಇಂದ್ರಸ್ಯ ಸಯುಜಃ ಸಖಾ' ಇತ್ಯೇತದಭಿಪ್ರೇತಿ । ಅತ್ರ ಚ ಇಂದ್ರಶಬ್ದೋ ಮುಖ್ಯಪ್ರಾಣೇ ಇತಿ ಋಗ್ಭಾಷ್ಯೇ ಏವ ಆಚಾರ್ಯೈಃ ಸಪ್ರಮಾಣಮುಕ್ತಮ್ ॥ –(ಜ)

ದ್ವಿವಿಧಾಽಪಿ ವ್ಯಾಪ್ತಿಃ । ದೇಹಿನಾಂ ದೇಹೇಷ್ವೇವ ನ ತು ಸರ್ವತ್ರೇತಿ ಭಾವೇನ 'ದೇಹೇಽಪಿ' ಇತ್ಯುಕ್ತಮ್ । ಅನ್ಯಥಾ ಹರೇಃ ಸರ್ವಗತತ್ವೇನ ವಾಯೋಸ್ತು ಮಹತತ್ತ್ವಪ್ರದೇಶೇ ಏವ ಸ್ಥಿತತ್ವೇನ ಯತ್ರ ಹರಿಃ ತತ್ರೈವ ವಾಯುರಿತಿ ದ್ವಿತೀಯವ್ಯಾಪ್ತೇರಸಂಭವಾದಿತಿ ಭಾವಃ । –(ವಾ)

೪೬. ಕಸ್ಮಿನ್ವಹಂತ್ವಿತಿ ಪ್ರತೀಕಗ್ರಹಣೇನ 'ಕಸ್ಮಿನ್ವಹಂ ತ್ವಿಹ ಉತ್ಕ್ರಾಂತೇ ಉತ್ಕ್ರಮಿಷ್ಯಾಮಿ ಕಸ್ಮಿನ್ವಹಂ ಸ್ಥಿತೇ ಸ್ಥಾಸ್ಯಾಮಿ' ಇತಿ, 'ಸ ಪ್ರಾಣಮಸೃಜತ' ಇತಿ ಶ್ರುತಿಂ (ಚ) ಸಂಗೃಹ್ಣಾತಿ । –(ವಾ)

ಯಸ್ಮಿನ್ ಗತೇ ಅಹಮಪಿ ಪ್ರೇಮವಶಾತ್ ಗಮಿಷ್ಯಾಮಿ ಯಸ್ಮಿನ್ ಸ್ಥಿತೇ ಅಹಮಪಿ ಸ್ಥಾಸ್ಯಾಮಿ ತಾದೃಶಂ ಭಕ್ತಂ ಸೃಜಾಮಿ, ಇತ್ಯಾಲೋಚ್ಯ ಸ ಪರಮಾತ್ಮಾ ಪ್ರಾಣಮಸೃಜತ ಇತಿ ಶ್ರುತೇರರ್ಥಃ । –(ವಾ)

ಏವಂ ಸ ಕೃಷ್ಣತನುರರ್ಜುನಮಪ್ಯರಕ್ಷ-
ದ್ಭೀಮಾರ್ಥಮೇವ ತದರಿಂ ರವಿಜಂ ನಿಹತ್ಯ ।
ಪೂರ್ವಂ ಹಿ ಮಾರುತಿಮವಾಪ ರವೇಃ ಸುತೋಽಯಂ
ತೇನಾಸ್ಯ ವಾಲಿನಮಹನ್ ರಘುಪಃ ಪ್ರತೀಪಮ್ ॥ ೪೭ ॥

ಅ: ಇದೇ ರೀತಿಯಾಗಿ ಕೃಷ್ಣರೂಪದ ಆ ಶ್ರೀಹರಿಯು ಭೀಮಸೇನನಿಗೋಸ್ಕರವಾಗಿ ಅವನ ವೈರಿಯಾದ ಸೂರ್ಯಪುತ್ರನಾದ ಕರ್ಣನನ್ನು ಕೊಲ್ಲಿಸಿ ಇಂದ್ರಪುತ್ರನಾದ ಅರ್ಜುನನನ್ನು ಪಾಲಿಸಿದ; ಸೂರ್ಯಪುತ್ರನಾದ ಸುಗ್ರೀವ ಮುಂಚಿತವಾಗಿ ಮಾರುತಿಯನ್ನು ಆಶ್ರಯಿಸಿದ ಎಂಬ ಕಾರಣಕ್ಕಾಗಿ ಶ್ರೀರಾಮ ಅವನ ವೈರಿಯಾದ ವಾಲಿಯನ್ನು ಸಂಹರಿಸಿದ.

ಸಕಲಪ್ರಾಣಿಗಳ ದೇಹಗಳಲ್ಲೂ ಸಹ ಎಲ್ಲಿ ವಾಯುದೇವರು ಇರುವರೋ ಅಲ್ಲಿಯೇ ಶ್ರೀಹರಿಯೂ ನೆಲೆಸಿರುವನು; ಮತ್ತು ಎಲ್ಲಿ ಶ್ರೀಹರಿಯು ನೆಲೆಸಿರುವನೋ ಅಲ್ಲಿಯೇ ಶ್ರೀವಾಯುದೇವರೂ ಇರುವರು; **'ಕಸ್ಮಿನ್ ವಹಂ ತು'** ಎಂಬ ವೇದದ ವಚನ ಪ್ರಸಿದ್ಧವಾಗಿದೆ; ಇದು ಅವತಾರಗಳಲ್ಲೂ ಹಾಗೆಯೇ; ಅದಕ್ಕೆಂದೇ ಶ್ರೀರಾಮ ಅಂತಹ ವಾಯುಪುತ್ರನಾದ ಹನುಮಂತನಿಗೋಸ್ಕರ ಸೂರ್ಯಪುತ್ರನಾದ ಸುಗ್ರೀವನನ್ನು ಪಾಲಿಸಿದನು.

---

೪೬. ಪವನಃ ದೇಹೇऽಪಿ ದೇಹೇ ದೇಹಾದ್ಬಹಿಶ್ಚ ಯತ್ರ ಯಸ್ಯ ಜೀವಸ್ಯ ರಕ್ಷಣಾರ್ಥಂ ಪ್ರವರ್ತತೇ ತತ್ರಾತ್ಮೈವ ತಸ್ಯಾಸ್ಯ ಜೀವಸ್ಯೈವ ರಕ್ಷಣಾರ್ಥಂ ಹರಿರಪಿ ಪ್ರವರ್ತತೇ ಅಸೌ ಹರಿರ್ದೇಹದೇಹಾತ್ ಬಹಿಶ್ಚ ಯತಃ ಯಸ್ಯ ಜೀವಸ್ಯ ರಕ್ಷಣಾರ್ಥಂ ಪ್ರವರ್ತತೇ ತಸ್ಯೈವ ಜೀವಸ್ಯ ರಕ್ಷಣಾರ್ಥಂ ವಾಯುರಪಿ ಪ್ರವರ್ತತ ಇತ್ಯರ್ಥಪ್ರತಿಪಾದಕಂ ಪ್ರಸಿದ್ಧಂ ವೇದವಚೋऽಸ್ತೀತಿ ॥ – (ಸ.)

೪೬. ಅತ್ರ ಹರಿವಾಯ್ವೋಃ ಸಮವ್ಯಾಪ್ತಿರುಚ್ಯತ ಇತ್ಯನಭ್ಯುಪಗಮಾತ್ ॥ – (ಸ.)

೪೬. ಅಥವಾ ನ ಕೇವಲಂ ಸ್ಥೂಲದೇಹ ಏವಾಯಂ ನಿಯಮಃ । ಕಿಂತು ಸ್ವದೇಹೇऽಪೀತ್ಯಪಿಶಬ್ದಃ । ಜೀವಹೃದಿಸ್ಥಿತಜೀವಾಂಗುಷ್ಠಪರಿಮಿತರೂಪವಿಶೇಷಾವಸ್ಥಾನ ಏವ ಪವನಾವಸ್ಥಾನಂ ನಿಮಿತ್ತಮಿತಿ ಸೂಚನಾಯ ತುಶಬ್ದಃ। ಜೀವಸ್ಥಿತೇನ ರೂಪೇಣ ವೇದಯತ್ಯಹಮಿತ್ಯಪಿ । – (ರಾ.)

೪೬. 'ಕಸ್ಮಿನ್ವಹಮುತ್ಕ್ರಾಂತೇ ಉತ್ಕ್ರಾಂತೋ ಭವಿಷ್ಯಾಮಿ । ಕಸ್ಮಿನ್ವಾ ಪ್ರತಿಷ್ಠಿತೇ
ಪ್ರತಿಷ್ಠಾಸ್ಯಾಮೀತಿ । ಸ ಪ್ರಾಣಮಸೃಜತ' ಇತಿ ಶ್ರುತಿಃ । - ಭಾ. ತಾ. (೧೦/೯೪/೧೯)

೪೭. 'ಅಹನ್ – ಹತವಾನ್ 'ಹನ ಹಿಂಸಾಗತ್ಯೋಃ' ಇತಿ ಧಾತೋರ್ಲಙ್ 'ಅಹನ್' ಇತ್ಯೇವ ಹಿ ರೂಪ-ನಿಷ್ಪತ್ತಿರ್ಭವತಿ । –(ವಾ)

೪೭. ಈಶ್ವರಾದನ್ಯತ್ರ ಆಲೋಚನೇ ಸರ್ವವಿಷಯಂ ಋಜುಯೋಗಿಜ್ಞಾನಮ್ ॥ (ಪ್ರಮಾಣಪದ್ಧತಿ)

ಏವಂ ಸುರಾಶ್ಚ ಪವನಸ್ಯ ವಶೇ ಯತೋಽತಃ
ಸುಗ್ರೀವಮತ್ರ ತು ಪರತ್ರ ಚ ಶಕ್ರಸೂನುಮ್ ।
ಸರ್ವೇ ಶ್ರಿತಾ ಹನುಮತಸ್ತದನುಗ್ರಹಾಯ
ತತ್ರಾಗಮದ್ರಘುಪತಿಃ ಸಹ ಲಕ್ಷ್ಮಣೇನ ॥ ೪೮ ॥

ಅ: ದೇವತೆಗಳು ಶ್ರೀವಾಯುದೇವರ ಅಧೀನರಾಗಿರುವರು; ಅದಕ್ಕೆಂದೇ ಈ ಅವತಾರದಲ್ಲಿ ಸುಗ್ರೀವನನ್ನೂ, ಮುಂದಿನ ಅವತಾರದಲ್ಲಿ ಇಂದ್ರಪುತ್ರನಾದ ಅರ್ಜುನನನ್ನೂ ಸಕಲದೇವತೆಗಳು ಆಶ್ರಯಿಸಿದರು; ಆದ್ದರಿಂದ ಅಂತಹ ಹನುಮಂತನನ್ನು ಅನುಗ್ರಹಿಸಲೆಂದು ಶ್ರೀರಾಮ ಲಕ್ಷ್ಮಣನ ಸಮೇತನಾಗಿ ಅವನಿದ್ದೆಡೆಗೆ ಧಾವಿಸಿದನು.

ವಿ: ೧) 'ಹನುಮಂತನ ಬಳಿಗೆ ಶ್ರೀರಾಮನು ಧಾವಿಸಲು ಆತನು ತನ್ನ ಅನನ್ಯಭಕ್ತ ಎಂಬುದೇ ಕಾರಣವಾಗಿತ್ತು' ಎಂಬುದಾಗಿ ಹಿಂದಿನ ಶ್ಲೋಕದಲ್ಲಿ ತಿಳಿಸಿದ ಶ್ರೀಮದಾಚಾರ್ಯರು ಅಂತಹ ಅನನ್ಯಭಕ್ತನಲ್ಲದ ಸುಗ್ರೀವನನ್ನು ಏತಕ್ಕೆ ರಕ್ಷಿಸಿದನು ಎಂಬುದನ್ನು ಈ ಮೂರು ಶ್ಲೋಕಗಳಲ್ಲಿ ವಿವರಿಸಿರುವರು.

೨) 'ವಾಯುವಿರುವಲ್ಲಿ ಶ್ರೀಹರಿ; ಶ್ರೀಹರಿ ಇರುವಲ್ಲಿ ವಾಯು' ಎಂಬುದು ವೇದ–ವಚನಗಳಿಂದ ಪ್ರಸಿದ್ಧವಾಗಿರುವ ಮುಖ್ಯಪ್ರಮೇಯ, ಈ ಮಾತು ಅವರ ಮೂಲರೂಪಗಳಿಗೆ ಮಾತ್ರವಲ್ಲದೆ ಅವತಾರರೂಪಗಳಿಗೂ ಅನ್ವಯಿಸುವುದು; ಅಂತಹ ವಾಯುವಾದ ಹನುಮಂತ ಈಗ ಸುಗ್ರೀವನ ಪಕ್ಷದಲ್ಲಿರುವನು. ಅದಕ್ಕೆಂದೇ ಶ್ರೀಹರಿಯಾದ ರಾಮನು ಅವನ ಪಕ್ಷವನ್ನು ವಹಿಸಿ, ವಾಲಿಯನ್ನು ಸಂಹರಿಸಿದ ಎಂದು ಭಾವ.

---

೪೮. ಪರತ್ರ ಭಾವಿಕೃಷ್ಣಾವತಾರೇ ಶಕ್ರಸುತಂ ಸಂಶ್ರಿತಾಃ । ಪರಸೇನಾಸ್ಥಿತಾ ಅಪಿ ಭೀಷ್ಮದ್ರೋಣಾದಯಃ ಅರ್ಜುನ ಏವ ಪಕ್ಷಪಾತವಂತೋ ನ ತು ಕರ್ಣೇ । ಅತಃ ಸಾಧೂಕ್ತಂ ಸರ್ವೇ ಶಕ್ರಸುತಂ ಶ್ರಿತಾ ಇತಿ । –(ವಾ)

೪೮. ಆವನನು ದೇಹದೊಳಗಿರಲು ಹರಿ ತಾನಿರುವ
ಆವವನು ತೊಲಗೆ ಹರಿ ತಾ ತೊಲಗುವ । -(ಶ್ರೀ ಶ್ರೀಪಾದರಾಜರ ಮಧ್ವನಾಮ)

ಪರಿಸರ ನೀನಿರೆ ಹರಿ ತಾನಿರುವನು ಇರದಿರೆ ತಾನಿರನು
ಕರಣನಿಯಾಮಕ ಸುರರ ಗುರುವೆ ನೀ ಕರುಣಿಸೆ ಕರುಣಿಸುವ ॥
ಮುಖ್ಯಪ್ರಾಣದೇವ ನೀನಲ್ಲದೆ ಕಾಯ್ವರ ಕಾಣೆ ಲೋಕದೊಳಗೆ ॥ –ಶ್ರೀಜಗನ್ನಾಥದಾಸರು

೪೮. ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ ।
ಅಸನ್ ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ ॥
ಸುರಾಃ ಸುಗ್ರೀವಪಕ್ಷಸ್ಥಾ ಪೂರ್ವಮಾಸಂಸ್ತಥೈವ ಹಿ ॥ ಮ. ಭಾ. ತಾ. ನಿ. (೧೮/೫೪)

೩) ಶ್ರೀಕೃಷ್ಣಾವತಾರದಲ್ಲಿ ನಡೆದದ್ದು ಸಹ ಹೀಗೆಯೇ; ಇಲ್ಲಿಯ ವಾಲಿ ಅಲ್ಲಿಯ ಅರ್ಜುನ; ಸುಗ್ರೀವ ಕರ್ಣ; ಅರ್ಜುನನದು ಶ್ರೀಭೀಮಸೇನನ ಪಕ್ಷ; ಅದಕ್ಕೆಂದೇ ಶ್ರೀಕೃಷ್ಣ ಅವನನ್ನು ಪಾಲಿಸಿ, ದುರ್ಯೋಧನನ ಪಕ್ಷವನ್ನು ವಹಿಸಿದ್ದ ಕರ್ಣನನ್ನು ಸಂಹಾರ ಮಾಡಿಸಿದ.

೪) ವಾಲಿಯು ಇಂದ್ರಾವತಾರ; ಸುಗ್ರೀವನು ಸೂರ್ಯವತಾರ; ತಾರತಮ್ಯದಲ್ಲಿ ಇಂದ್ರನು ಸೂರ್ಯನಿಗಿಂತ ಮಿಗಿಲು; ಎಂದರೆ ವಾಲಿಯು ಸುಗ್ರೀವನಿಗಿಂತ ವಯಸ್ಸಿನಲ್ಲಿ ಮಾತ್ರವಲ್ಲದೆ ಯೋಗ್ಯತೆಯಲ್ಲೂ ಹಿರಿಯ; ಆದರೂ ಶ್ರೀರಾಮ ವಹಿಸಿದ್ದು ಸುಗ್ರೀವನ ಪಕ್ಷವನ್ನೇ ಹೊರತು ವಾಲಿಯ ಪಕ್ಷವನ್ನಲ್ಲ; ಅದಕ್ಕೆ ಕಾರಣ ಅವನು ಹನುಮಂತನ ಅನುಗ್ರಹಕ್ಕೆ ಪಾತ್ರನಾದವನು, ವಾಲಿ ಹಾಗಲ್ಲದವನು ಎಂಬುದೇ ಆಗಿತ್ತು ಎಂದರೆ ಒಬ್ಬ ಮನುಷ್ಯನ ಯೋಗ್ಯತೆ ಎಂತಹುದೇ ಆಗಿದ್ದರೂ ಅವನ ಅಳಿವು ಉಳಿವುಗಳು ಅವಲಂಬಿಸಿರುವುದು ಮುಖ್ಯವಾಗಿ ಅವನು ಶ್ರೀವಾಯುದೇವರ ಅನುಗ್ರಹಕ್ಕೆ ಪಾತ್ರನಾಗಿರುವನೋ ಇಲ್ಲವೋ ಎಂಬುದರಲ್ಲೇ ಎಂಬುದು ಇಲ್ಲಿಯ ತತ್ತ್ವ; ಮುಖ್ಯಪ್ರಾಣನ ಪಕ್ಷ ವಹಿಸಿದವರ ಪ್ರಾಣ ಉಳಿಯುವುದೂ, ಬಿಟ್ಟವರ ಪ್ರಾಣಗಳು ಹೋಗುವುದೂ ಸಹಜವೇ ಅಲ್ಲವೇ!

೫) ಇನ್ನು ಇತರ ದೇವತೆಗಳ ವಿಚಾರ; ಅವರೂ ಹಾಗೆಯೇ; ಅವರೆಲ್ಲ ಶ್ರೀವಾಯು–ದೇವರಿಗೆ ಅಧೀನರು; ಎಂದರೆ ವಾಯುದೇವರು ವಹಿಸಿದ ಪಕ್ಷವನ್ನೇ ತಾವೂ ಸಹ ವಹಿಸುವವರು. ಆದ್ದರಿಂದಲೇ ಯಮಧರ್ಮನ ಅವತಾರನಾದ ಜಾಂಬವಂತ ಮೊದಲಾದ ದೇವತೆಗಳ ಅವತಾರರೆಲ್ಲ ರಾಮಾವತಾರದಲ್ಲಿ ಹನುಮಂತನ ಪಕ್ಷ ಹಿಡಿದ ಸುಗ್ರೀವನ ಪಕ್ಷವನ್ನೇ ವಹಿಸಿದರು; ಕೃಷ್ಣಾವತಾರದಲ್ಲಿ ಭೀಮಸೇನನ ಪಕ್ಷ ವಹಿಸಿದ ಅರ್ಜುನನ ಪಕ್ಷವನ್ನೇ ಹಿಡಿದರು; ಎಂದರೆ ಶ್ರೀವಾಯುದೇವರ ಪಕ್ಷವನ್ನು ಶ್ರೀಹರಿಯು ಅನುಗ್ರಹಿಸಿದರೆ, ಇತರ ಸುರರು ಅನುಸರಿಸುವರು ಎಂದರ್ಥ; ಭೀಷ್ಮ ದ್ರೋಣಾದಿಗಳು ಕೌರವ ಸೇನೆಯಲ್ಲಿದ್ದರೂ, ದೇವತೆಗಳಾಗಿದ್ದ ಅವರು ವಾಸ್ತವವಾಗಿ ಅರ್ಜುನ ಪಕ್ಷಪಾತಿಗಳಾದ್ದರೇ ಹೊರತು ಕರ್ಣಪಕ್ಷಪಾತಿಗಳಾಗಿರಲಿಲ್ಲ ಎಂದೂ ಭಾವ.

೬) ವಾಲಿಯು ಹನುಮಂತನ ದ್ವೇಷಿಯಲ್ಲವಾದರೂ ಅವರ ಬಗ್ಗೆ ಔದಾಸೀನ್ಯ ತೋರಿದವನು; ಸುಗ್ರೀವನು ಹಾಗಲ್ಲದೆ ಹನುಮಂತನನ್ನು ಮುಂಚಿನಿಂದಲೂ ಅನುಸರಿಸಿದನು. ಇದು ವಾಲಿಯ ಪತನಕ್ಕೆ ಕಾರಣವಾದರೆ ಸುಗ್ರೀವನ ಉನ್ನತಿಗೂ ಕಾರಣವಾಯಿತು. ಶ್ರೀವಾಯು–ದೇವರನ್ನು ಅನುಸರಿಸುವುದು ತಾರಕ; ಮುಂಚಿನಿಂದಲೂ ಅನುಸರಿಸುವುದು, ಮುಂಚಿತವಾಗಿಯೇ ಅನುಸರಿಸುವುದು ಇನ್ನೂ ವಿಶೇಷಾನುಗ್ರಹಹೇತು ಎಂಬುದು ಇದರಿಂದ ತಿಳಿಯುವ ಮತ್ತೊಂದು ತತ್ತ್ವ.

೭) ಶ್ರೀವಾಯುದೇವರು ಯಥಾರ್ಥಜ್ಞಾನದ ಸಂಕೇತ, ರಾವಣ, ದುರ್ಯೋಧನಾದಿ–ಗಳು ಮಿಥ್ಯಾಜ್ಞಾನದ ಸಂಕೇತ; ಭಗವಂತ ಜ್ಞಾನಪ್ರಿಯ; ಜ್ಞಾನಿಪ್ರಿಯ; ಅದಕ್ಕೆಂದೇ ಅವನದು ಶ್ರೀವಾಯುದೇವರ ಮೇಲೆ ನಿತ್ಯಾನುಗ್ರಹ, ಪೂರ್ಣಾನುಗ್ರಹ; ಅವರ ಪಕ್ಷ ತೊರೆಯುವವರೆಲ್ಲ ಒಂದು ರೀತಿಯಲ್ಲಿ ಮಿಥ್ಯಾಜ್ಞಾನಕ್ಕೆ ಮನಸೋಲುವವರು; ಭಗವಂತನದು ಮಿಥ್ಯಾಜ್ಞಾನಿಗಳ ಮೇಲೆ ಪರಮ ಆಗ್ರಹ; ಅದಕ್ಕೆಂದೇ ಅಂತಹವರನ್ನು ಅವನು ಶಿಕ್ಷಿಸುವನು ಎಂದೂ ಭಾವ.

೮) ಶ್ರೀರಾಮನು ಲಕ್ಷ್ಮಣನ ಸಮೇತ ಸುಗ್ರೀವನನ್ನು ಅನುಗ್ರಹಿಸಿದ್ದು ಇತರ ದೇವತೆಗಳೂ ಆತನ ಪಕ್ಷ ಹಿಡಿಯುವುದಕ್ಕೆ ಸೂಚಕ ಎಂಬುದನ್ನೂ ಗಮನಿಸಬೇಕು.

ಶ್ರೀಹರಿಯೆ ಆದ ರಾಮನಿಗೆ ಕಪಿಗಳ ಸಹಾಯವೇ!

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಶ್ಚ ಗಿರಿಶಃ ಸಹ ಲೋಕಪಾಲೈಃ ।
ಸರ್ವೇಶ್ವರಸ್ಯ ಪರಮಸ್ಯ ಹಿ ಸರ್ವಶಕ್ತೇಃ
ಕಿಂ ತಸ್ಯ ಶತ್ರುಹನನೇ ಕಪಯಃ ಸಹಾಯಾಃ ॥ ೪೯ ॥

ಅ: ಶ್ರೀರಾಮ ಸಾಕ್ಷಾತ್ ಶ್ರೀಹರಿ; ಅವನ ಚರಣಕಮಲಗಳ ಧೂಳಿಯನ್ನು ಮಹಾ- ಲಕ್ಷ್ಮಿ, ಮತ್ತು ಬ್ರಹ್ಮರುದ್ರರು, ಸಕಲ ಲೋಕಪಾಲಕರ ಸಮೇತ ಶಿರಸಾ ಧರಿಸಿರುವರು; ಅವನು ಸ್ವತಃ ಸಕಲರ ಸ್ವಾಮಿ; ಸರ್ವೋತ್ತಮ, ಸಕಲಕಾರ್ಯಗಳನ್ನು ಸಾಧಿಸುವ ಅಪರಿಮಿತ ಶಕ್ತಿಸಂಪನ್ನ; ಅಂತಹವನಿಗೆ ಶತ್ರುಸಂಹಾರಕಾರ್ಯದಲ್ಲಿ ಕಪಿಗಳ ನೆರವೇ?

ವಿ: ೧) 'ಶ್ರೀರಾಮನು ಸೀತಾನ್ವೇಷಣೆ, ರಾವಣಾದಿ ಶತ್ರುಸಂಹಾರರೂಪ ಕಾರ್ಯದಲ್ಲಿ ನೆರವು ಬಯಸಿ ಕಪಿಗಳ ಬಳಿ ಬಂದನು ಎಂದು ಮಾತ್ರ ಸರ್ವಥಾ ತಿಳಿಯಬಾರದು' ಎಂಬ ಪ್ರಮೇಯವನ್ನು ಇಲ್ಲಿ ನಿರೂಪಿಸಿರುವರು.

---

೪೯. ಸರ್ವಶಕ್ತೇಃ – ಸರ್ವವಿಷಯೇ ಶಕ್ತಿಮತಃ । –(ಜ)

ಸರ್ವಾ ಪರಿಪೂರ್ಣಾ ಶಕ್ತಿರ್ಯಸ್ಯ ಸಃ । –(ವ)

೪೯. ಅತೋ ಮೌಕ್ತಿಕಮಣಿನಾ ಸಹ ಸುವರ್ಣಮಣೇರ್ಯೋಗ ಇವಾಯಂ ಯೋಗಃ ಪೂರ್ಣಪ್ರಜ್ಞಾ-ಚಾರ್ಯಸ್ಯ ವಚಸೋऽಪೀತಿ ಜ್ಞೇಯಮ್ ॥ –(ವಾ)

೪೯. ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ ಶ್ರೀರಬ್ಜಜಸ್ಯ ಗಿರಿಶಃ ಸಹಲೋಕಪಾಲೈಃ ।
ಲೀಲಾತನುಃ ಸ್ವಕೃತಸೇತುಪರೀಪ್ಸಯಾ ಯಃ ಕಾಲೇ ದಧತ್ ಸ ಭಗವಾನ್ ಸ್ವಕೃತೇನ ತುಷ್ಯೇತ್ ॥
- ಭಾಗವತ (೧೦/೫೮/೩೮)

೨) ಶ್ರೀರಾಮನಿಗೆ ಮೂಲತಃ ಸೀತಾವಿಯೋಗವೇ ಆಗಿಲ್ಲ; ಸಾಲದ್ದಕ್ಕೆ ಅವನು ರಮಾ–ಬ್ರಹ್ಮಾದಿ ಸಕಲರಿಂದಲೂ ಸದಾ ವಂದಿತನಾದ ಸರ್ವೋತ್ತಮ; ಸರ್ವೇಶ್ವರ; ಸರ್ವಸಮರ್ಥ; ಸ್ವತಂತ್ರ; ಅಂತಹವನ ನೆರವು ಇತರ ಎಲ್ಲರಿಗೂ ಬೇಕು; ಅವನಿಗೆ ಮಾತ್ರ ಯಾರ ನೆರವೂ ಯಾವ ಕಾಲಕ್ಕೂ ಎಷ್ಟು ಮಾತ್ರಕ್ಕೂ ಬೇಕಾಗಿಲ್ಲ ಎಂದು ಭಾವ.

೩) 'ಶ್ರೀಃ' ಎಂಬ ಪದದಿಂದ ಅವನಿಗೆ ಸೀತಾವಿಯೋಗವಾಗಿಲ್ಲ ಎಂಬ ತತ್ತ್ವವನ್ನು ತಿಳಿಸಿರುವರು; ರಾವಣನ ಸಾಮರ್ಥ್ಯದ ಮುಖ್ಯಹಿನ್ನೆಲೆ ಬ್ರಹ್ಮದೇವರ ವರ; ಆ ಬ್ರಹ್ಮದೇವರು ಭಗವಂತನ ದಾಸಾನುದಾಸರು; ಅಂತಹ ರಾವಣನ ಸಂಹಾರಕ್ಕೆ ಅವನಿಗೆ ಕಪಿಗಳ ನೆರವು ಬೇಕಿಲ್ಲ ಎಂಬ ವಿಚಾರವೂ ಇಲ್ಲಿ ಧ್ವನಿತವಾಗಿದೆ.

೪) ಕಪಿಗಳಲ್ಲಿ ಶ್ರೀರಾಮನಿಗೆ ಮುಖ್ಯ ಸೇವಕ ಹನುಮಂತ; ಆತ ಭಾವಿಬ್ರಹ್ಮ; ಬ್ರಹ್ಮವಂದಿತಚರಣನಾದ ಶ್ರೀರಾಮನಿಗೆ ಭಾವಿಬ್ರಹ್ಮ ಮಾಡಿದ್ದು ಸೇವೆಯನ್ನೇ ಹೊರತು ಸಹಾಯವನ್ನಲ್ಲ ಎಂಬ ಅರ್ಥವೂ ಇಲ್ಲಿ ಸೂಚಿತ.

೫) ಶ್ರೀರಾಮನಿಗೆ ಕಪಿಗಳ ಸಹಾಯ ಬೇಕಿರಲಿಲ್ಲ; ವಾಸ್ತವವಾಗಿ ಕಪಿಗಳಿಗೆ ಶ್ರೀರಾಮನ ನೆರವು ಬೇಕಿತ್ತು ಎಂಬುದು ಇಲ್ಲಿಯ ಮುಖ್ಯಧ್ವನಿ.

೬) ಈ ಶ್ಲೋಕದ ಪೂರ್ವಾರ್ಧ ಶ್ರೀಮದ್ಭಾಗವತಪುರಾಣದ್ದು; ಆ ಶ್ಲೋಕದ ಪೂರ್ಣ ಪಾಠ ಹೀಗಿದೆ:

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ ಶ್ರೀರಬ್ಜಜಶ್ಚ ಗಿರಿಶಃ ಸಹ ಲೋಕಪಾಲೈಃ ।
ಲೀಲಾತನುಃ ಸ್ವಕೃತಸೇತುಪರೀಪ್ಸಯಾ ಯಃ ಕಾಲೇ ದಧತ್ ಸ ಭಗವಾನ್ ಸ್ವಕೃತೇನ ತುಷ್ಯೇತ್॥

– ಭಾಗವತ(೧೦/೫೮/೩೮)

೭) ಹೀಗೆ ಶ್ರೀವೇದವ್ಯಾಸರ ಮಾತುಗಳೊಂದಿಗೆ ತಮ್ಮ ಮಾತುಗಳ ಜೋಡಣೆ ಮಾಡಿರುವುದು ಚಿನ್ನದ ಗುಂಡುಗಳೊಂದಿಗೆ ಮುತ್ತಿನ ಮಣಿಗಳ ಜೋಡಣೆಯಂತೆ ಎಂಬುದಾಗಿ ಶ್ರೀವಾದಿರಾಜಸ್ವಾಮಿಗಳು ಬಣ್ಣಿಸಿರುವರು.

ಹನುಮಂತನಿಂದ ಸುಗ್ರೀವಾದಿಗಳಿಗೆ ಧೈರ್ಯ

ಸಮಾಗತೇ ತು ರಾಘವೇ ಪ್ಲವಂಗಮಾಃ ಸಸೂರ್ಯಜಾಃ ।
ವಿಪುಪ್ಲುವುರ್ಭಯಾರ್ದಿತಾ ನ್ಯವಾರಯಚ್ಚ ಮಾರುತಿಃ ॥ ೫೦ ॥

---

೫೦. ಇಲ್ಲಿಯ 'ಪ್ಲವಂಗಮಾಃ' ಎಂಬ ಪದದ ಸ್ವಾರಸ್ಯವು ವಾಲ್ಮೀಕಿರಾಮಾಯಣದ 'ಅಹೋ ಶಾಖಾಮೃಗತ್ವಂ ತೇ ವ್ಯಕ್ತಮೇವ ಪ್ಲವಂಗಮ್' (೪/೨/೧೭) ಎಂಬ ಮಾತಿನಿಂದ ತಿಳಿಯುತ್ತದೆ.

ಅ: ಶ್ರೀರಾಮನು ಆಗಮಿಸುತ್ತಿದ್ದಂತೆಯೇ ಭಯಪೀಡಿತರಾಗಿ ಸೂರ್ಯಪುತ್ರನಾದ ಸುಗ್ರೀವನೊಂದಿಗೆ ಸಮೇತರಾದ ಸಕಲ ಕಪಿಗಳೂ ಹಾರತೊಡಗಿದರು; ವಾಯುಪುತ್ರನಾದ ಹನುಮಂತನು ಅವರನ್ನೆಲ್ಲ ತಡೆದು ನಿಲ್ಲಿಸಿದನು.

ವಿ: ೧) ಶ್ರೀರಾಮ ಸ್ವತಃ ಭಗವಂತ; ತಮ್ಮನ್ನೆಲ್ಲ ಪಾಲಿಸಲೆಂದೇ ಬಂದವನು; ಅದನ್ನು ಅರಿಯದ ಸುಗ್ರೀವಾದಿ ಕಪಿಗಳು 'ಇವನು ವಾಲಿಯಿಂದ ತಮ್ಮ ಸಂಹಾರಕ್ಕೆಂದು ಕಳುಹಿಸಲ್ಪಟ್ಟವನು' ಎಂದು ತಪ್ಪಾಗಿ ತಿಳಿದು ಓಡತೊಡಗಿದರು; ಆದರೆ ಅಂತಹ ಮಿಥ್ಯಾಜ್ಞಾನ ಎಂದೂ ಇಲ್ಲದ ಹನುಮಂತ ಅವರನ್ನೆಲ್ಲ ಹಾಗೆ ಓಡದಂತೆ ತಡೆದುನಿಲ್ಲಿಸಿದ ಎಂದು ಭಾವ.

೨) ಸೂರ್ಯ ಲೋಕವನ್ನೆಲ್ಲ ಬೆಳಗುವ ದೇವತೆ; ಸುಗ್ರೀವ ಅವನ ಅವತಾರ; ಆದರೆ ಅವನಿಗೆ ಶ್ರೀರಾಮನ ಬಗ್ಗೆ ಆಗ ತಪ್ಪುತಿಳುವಳಿಕೆಯುಂಟಾಯಿತು. ಆದರೆ ಹನುಮಂತ ಶ್ರೀವಾಯುವಿನ ಅವತಾರ; ಅವನಿಗೆ ಅಂದು ಮಾತ್ರವಲ್ಲ ಯಾವಾಗಲೂ ಅಂತಹ ತಪ್ಪುತಿಳುವಳಿಕೆ ಇಲ್ಲವೇ ಇಲ್ಲ; ಎಂದರೆ ಸೂರ್ಯನಿಗಿಂತ ವಾಯುದೇವರು ತುಂಬಾ ಮಿಗಿಲಾದವರು ಎಂದು ಭಾವ.

೩) ಹನುಮಂತ ಸೂರ್ಯನ ಶಿಷ್ಯ; ಅವನ ಬಳಿ ವ್ಯಾಕರಣಶಾಸ್ತ್ರ ಓದಿದವ ಎಂಬ ತಪ್ಪು ತಿಳುವಳಿಕೆ ಅನೇಕರಲ್ಲಿ ಉಂಟು; ಅದನ್ನೂ ಶ್ರೀಮದಾಚಾರ್ಯರು ಈ ಪ್ರಸಂಗದಲ್ಲಿ

---

೫೦. ಅಪಿ ತ್ರಿಲೋಕ್ಯಾ ಬಹಿರುಲ್ಲಸಂತೀ ತಮೋ ಹರಂತೀ ಮುಹುರಾಂತರಂ ಚ।
ದಿಶ್ಯಾದ್ಭಶಂ ನೋ ವಿಶದಾಂ ಜಯಂತೀ ಮಧ್ವಸ್ಯ ಕೀರ್ತಿರ್ದಿನನಾಥದೀಪ್ತಿಮ್ ॥
–ಸುಮಧ್ವವಿಜಯ ೧/೩

೫೦. ಅಸೌ ಪುನರ್ವ್ಯಾಕರಣಂ ಗ್ರಹೀಷ್ಯನ್ ಸೂರ್ಯೋನ್ಮುಖಃ ಪೃಷ್ಠಗಮಃ ಕಪೀಂದ್ರಃ।
ಉದ್ಗಿರೇರಸ್ತಗಿರಿಂ ಜಗಾಮ ಗ್ರಂಥಂ ಮಹದ್ಧಾರಯನಪ್ರಮೇಯಃ।
ವಾ. ರಾ.(ಉತ್ತರಕಾಂಡ ೩೬/೪೫)

ಪರ್ಯಗ್ನಿರ್ಯಗ್ಗಣಂ ರವಿರಥತುರಗಸ್ಯಾಗ್ರತೋ ವಾऽಗ್ರಯಾಯೀ
ವಿದ್ಯಾಂ ಪ್ರದ್ಯೋತನಾದಧ್ಗಮದುರುಜವಸನ್ಮುಖಸ್ಯೋನ್ಮುಖೋ ಯಃ।
–(ಶ್ರೀವಾದಿರಾಜರು–ವಿಭೀಷಣಹನೂಮತ್ಸಂವಾದರೂಪ ವಾಯುಸ್ತುತಿ ಶ್ಲೋ. ೬)

ತರಣಿಗಭಿಮುಖನಾಗಿ ಶಬ್ದಶಾಸ್ತ್ರವ ಪಠಿಸಿ ಉರವಣಿಸಿ ಹಿಂದುಮುಂದಾಗಿ ನಡೆದು।
ಪರಮ ಪವಮಾನಸುತ ಉದಯಾಸ್ತಶೈಲಗಳ ಭರದಿ ಏರಿದನೀತಗುಪಮೆಯುಂಟೆ ॥
ಶ್ರೀ ಶ್ರೀಪಾದರಾಜರು (ಮಧ್ವನಾಮ)

೫೦. ಭಿಕ್ಷುರೂಪೇಣ ಇತಿ ವಾಲ್ಮೀಕಿರಾಮಾಯಣೇ —

ಕಪಿರೂಪಂ ಪರಿತ್ಯಜ್ಯ ಹನೂಮಾನ್ ಮಾರುತಾತ್ಮಜಃ।
ಭಿಕ್ಷುರೂಪಂ ತತೋ ಭೇಜೇ ಶಠಬುದ್ಧಿತಯಾ ಕಪಿಃ ॥ (೪/೩/೨೨) – (ವಾ.ರಾ.)

'ಸಸೂರ್ಯಜಾಃ', ಮಾರುತಿಃ' ಎಂಬ ಪದಗಳಿಂದ ತೊರೆದು ಹಾಕಿರುವರು; ಹೀಗೆ ತಪ್ಪು ತಿಳಿಯುವ ಸೂರ್ಯ ನಿಜಕ್ಕೂ ಸರ್ವಜ್ಞನಾದ ಹನುಮಂತನಿಗೆ ಎಂತು ಗುರುವಾಗಬಲ್ಲ ಎಂದು ಭಾವ. ಹನುಮಂತನು ಸೂರ್ಯನ ಬಳಿ ಓದಿದ್ದು ಶ್ರೀಕೃಷ್ಣ ಸಾಂದೀಪನಾಚಾರ್ಯರ ಬಳಿ ಓದಿದಂತೆ ಲೋಕಶಿಕ್ಷಣ ಮತ್ತು ಅಸುರಮೋಹನಕ್ಕೆ ಎಂದು ತಿಳಿಯಬೇಕು ಎಂದು ಭಾವ.

೪) ಮತಂಗರ ಶಾಪದಿಂದಾಗಿ ವಾಲಿಯು ಋಷ್ಯಮೂಕಪರ್ವತಕ್ಕೆ ಬರುವಂತಿರಲಿಲ್ಲ; ಅದಕ್ಕೆಂದೇ ಇವರನ್ನು ಕಳುಹಿಸಿರಬೇಕು ಎಂದು ಅವರೆಲ್ಲ ತಿಳಿದು ಭಯಪಟ್ಟರು ಎಂದರ್ಥ.

ಸಂಸ್ಥಾಪ್ಯಾಶು ಹರೀಂದ್ರಾನ್ ಜಾನನ್ ವಿಷ್ಣೋರ್ಗುಣಾನನಂತಾನ್ ಸಃ ।
ಸಾಕ್ಷಾದ್ಬ್ರಹ್ಮಪಿತಾऽಸಾವಿತ್ಯೇತೇನಾಸ್ಯ ಪಾದಯೋಃ ಪೇತೇ ॥ ೫೧ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ರಾಮಚರಿತೇ ಹನೂಮದ್ದರ್ಶನಂ ನಾಮ ಪಂಚಮೋऽಧ್ಯಾಯಃ ॥ ೫ ॥

ಅ: ಕಪಿಮುಖ್ಯರನ್ನು ತಡೆದು ನಿಲ್ಲಿಸಿದ ಹನುಮಂತ ಅವನು ಸಾಕ್ಷಾತ್ ಬ್ರಹ್ಮದೇವರ ಜನಕನಾದ ಶ್ರೀಹರಿ ಎಂಬ ಕಾರಣದಿಂದ ಶ್ರೀರಾಮನ ಚರಣಗಳಿಗೆ ಎರಗಿದ; ಅವನು ವಿಷ್ಣುವಿನ ಅನಂತಗುಣಗಳನ್ನು ಚೆನ್ನಾಗಿ ಬಲ್ಲವನು.

ವಿ: ೧) ಸುಗ್ರೀವಾದಿ ಕಪಿಗಳನ್ನೆಲ್ಲ ತಡೆದು ನಿಲ್ಲಿಸಿದ ಹನುಮಂತನು, ಸುಗ್ರೀವನ ಪ್ರಾರ್ಥನೆಯಂತೆ ಶ್ರೀರಾಮನ ಬಳಿಗೆ ಸನ್ಯಾಸಿ ವೇಷದಿಂದ ತೆರಳಿದನು. ಅವನು ಶ್ರೀರಾಮನನ್ನು ಬ್ರಹ್ಮಜನಕನಾದ ಪರಬ್ರಹ್ಮನೆಂದು ಬಲ್ಲವನು. ಅವನ ಚರಣಗಳಿಗೆ ಭಕ್ತಿಯಿಂದ ಎರಗಿದನು ಎಂಬ ಕಥಾಭಾಗವನ್ನು ಇದರಲ್ಲಿ ಸಂಗ್ರಹಿಸಿರುವರು.

---

೫೧. ಸಾಕ್ಷಾತ್ ಬ್ರಹ್ಮಪಿತಾ ನ ತು ಉಪಚಾರೇಣೇತ್ಯರ್ಥಃ । –(ಜ)

೫೧. ಏತೇನ– ಅನೇನ ಕಾರಣೇನ । –(ವಾ)

ಏತೇನ– ಅನೇನ ಬ್ರಹ್ಮಪಿತೇತಿ ಜ್ಞಾನೇನ । –(ಜ)

ಸಾಕ್ಷಾಜ್ಜನಕತ್ವೇನ ನಿರುಪಚಾರೇಣ ಬ್ರಹ್ಮಪಿತೇತ್ಯನೇನಾಭಿಪ್ರಾಯೇಣ । –ವಾ

೫೧. ಯದ್ವಾ ಏತೇನ ಹನುಮತಾ ಅಸ್ಯ ಪಾದಯೋಃ ಪೇತೇ ಪತಿತಮಿತಿ ಭಾವೇ ಲಿಟ್ । –(ವಾ)

೨) ಆಗಮಿಸಿರುವ ಶ್ರೀರಾಮನು ಬ್ರಹ್ಮದೇವರ ಜನಕ; ವಂದಿಸಿದ ಹನುಮಂತನು ಭಾವಿಬ್ರಹ್ಮನಾದ ವಾಯು; ಎಂಬ ಇಲ್ಲಿನ ಸ್ವಾರಸ್ಯವನ್ನು ಗಮನಿಸಬೇಕು.

೩) **''ಸ ಹ್ಯೇಕ ಏನಮವಗಚ್ಛತಿ ಸಮ್ಯಗೀಶಮ್''** ಎಂದು ಈ ಮೊದಲೇ ಹೇಳಿದ್ದು ಈ ಭಾಗದಿಂದ ಸ್ಪಷ್ಟವಾಯಿತು ಎಂದು ಭಾವ.

೪) ಇತರರಾರೂ ಅರಿಯಲಾಗದ ಶ್ರೀರಾಮನನ್ನು ಹೀಗೆ ಅರಿತು ವಂದಿಸಿದ ಹನುಮಂತ ಸಕಲಜೀವೋತ್ತಮ ಎಂದು ಭಾವ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಹನೂಮದ್ದರ್ಶನ'ವೆಂಬ ಐದನೆಯ ಅಧ್ಯಾಯ ಮುಗಿಯಿತು ॥ ೫ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ – ೬

(ಶ್ರೀರಾಮಚರಿತೇ ಹನೂಮದ್ವರ್ಧನಮ್)

(ರಾಮಸುಗ್ರೀವರ ಸಖ್ಯ, ಶ್ರೀರಾಮನಿಂದ ಸಪ್ತತಾಲಗಳ ಭೇದನ, ವಾಲಿವಧೆ, ಕಪಿಗಳ ಪ್ರೇಷಣ, ಹನುಮಂತನಿಂದ ಅಂಗದಾದಿಗಳಿಗೆ ಉಪದೇಶ, ಸಂಪಾತಿ-ಪ್ರಸಂಗ, ಸಮುದ್ರತರಣಕ್ಕೆ ಇತರರ ಅಸಾಮರ್ಥ್ಯ, ಹನೂಮದ್ವರ್ಧನ)

ವಾಯುವಾಹನನಾಗಿ ಸುಗ್ರೀವನ ಬಳಿಗೆ ಶ್ರೀರಾಮ

ಉತ್ಥಾಪ್ಯ ಚೈನಮರವಿಂದದಲಾಯತಾಕ್ಷ-
ಶ್ಚಕ್ರಾಂಕಿತೇನ ವರದೇನ ಕರಾಂಬುಜೇನ ।
ಕೃತ್ವಾ ಚ ಸಂವಿದಮನೇನ ನುತೋಽಸ್ಯ ಚಾಂಸಂ
ಪ್ರೀತ್ಯಾಽಽರುರೋಹ ಸ ಹಸನ್ ಸಹ ಲಕ್ಷ್ಮಣೇನ ॥ ೧ ॥

ಅ: ಕಮಲದಳದಂತೆ ವಿಶಾಲವಾದ ಕಣ್ಣುಗಳ ಶ್ರೀರಾಮ, ಚಕ್ರದ ಚಿಹ್ನೆಯಿಂದ ಕೂಡಿದ, ವರವನ್ನು ನೀಡುವ ತನ್ನ ಕರಕಮಲದಿಂದ ಆ ಹನುಮಂತನನ್ನು ಮೇಲೆತ್ತಿದ ಮತ್ತು ಅವನೊಂದಿಗೆ ಸಂಭಾಷಣೆ ನಡೆಸಿ ಅವನಿಂದ ಸ್ತುತನಾದ; ಮತ್ತು ಲಕ್ಷ್ಮಣಸಮೇತನಾಗಿ ಪ್ರೀತಿಯಿಂದ ನಸುನಗುತ್ತ ಅವನ ಹೆಗಲನ್ನು ಏರಿದ.

ವಿ: ೧) ಈ ಅಧ್ಯಾಯದಲ್ಲಿ ಶ್ರೀಮದಾಚಾರ್ಯರು ಕಿಷ್ಕಿಂಧಾಕಾಂಡದ ಕಥೆಯನ್ನು ನಿರ್ಣಯ ಮಾಡಿರುವರು.

೨) ಶ್ರೀರಾಮನ ಕಣ್ಣುಗಳು ಕಮಲದಳದಂತೆ ವಿಶಾಲ; ಅವನ ಕೈಗಳು ಸಹ ಕಮಲ–ದಂತೆಯೇ ಮನೋಹರ; ಅದರಲ್ಲಿ ಚಕ್ರದ ಚಿಹ್ನೆ; ಅದು ವರವನ್ನು ನೀಡುವಂತೆ ಇತರರ ವರಗಳನ್ನು ನಾಶಮಾಡಲೂ ಬಲ್ಲದು; ಅಂತಹ ಕೈಯಿಂದ ಶ್ರೀರಾಮನು ಹನುಮಂತನನ್ನು ಮೇಲೆತ್ತಿ ಆದರಿಸಿದನು; ಪ್ರೀತಿಯಿಂದ ಮಾತನಾಡಿಸಿದ; ಅವನ ಪ್ರಾರ್ಥನೆಯಂತೆ ಅವನ ಹೆಗಲೇರಿ ಕುಳಿತ ಎಂದು ಭಾವ.

---

೧. ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ ।
ನಾಸಾಮವೇದವಿದುಷಃ ಶಕ್ಯಮೇವಂ ಪ್ರಭಾಷಿತುಮ್ ॥
ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಮ್ ।
ಬಹು ವ್ಯಾಹರತಾಽನೇನ ನ ಕಿಂಚಿದಪಶಬ್ದಿತಮ್ ॥
ನ ಮುಖೇ ನೇತ್ರಯೋರ್ವಾಽಪಿ ಲಲಾಟೇ ಚ ಭ್ರುವೋಸ್ತಥಾ ।
ಅನ್ಯೇಷ್ವಪಿ ಚ ಗಾತ್ರೇಷು ದೋಷಃ ಸಂವಿದಿತಃ ಕ್ವಚಿತ್ ॥ –ವಾ. ರಾ. (೪/೩/೨೮-೩೦)

೩) ಹನುಮಂತನ ಮೇಲೆ ಬೀರಿದ್ದು ಕೃಪಾಕಟಾಕ್ಷ ಎಂಬುದನ್ನು **'ಅರವಿಂದ ದಲಾಯತಾಕ್ಷಃ'** ಎಂಬ ಪದದಿಂದ ಸೂಚಿಸಿರುವರು; ಹನುಮಂತ ಮೂಲರೂಪದಲ್ಲಿ ಸದಾ ನನ್ನನ್ನೂ, ಲಕ್ಷ್ಮಣೋಪಲಕ್ಷಿತರಾದ ಜೀವರನ್ನೂ ಭುಜದ ಮೇಲೆ ಕೂಡಿಸಿಕೊಂಡು ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ತೆರಳುವವನು ಎಂಬುದನ್ನು ತನ್ನ ಮಂದಹಾಸದಿಂದ ಶ್ರೀರಾಮನು ಸೂಚಿಸಿದ.

೪) ಶ್ರೀರಾಮನು 'ನಾರಾಯಣ' ಎಂಬುದು ಅವನನ್ನು ಸರಿಯಾಗಿ ಕಾಣುವವರಿಗೆ ಸ್ಪಷ್ಟ ಎಂಬುದನ್ನು **'ಅರವಿಂದದಲಾಯತಾಕ್ಷಃ', 'ಚಕ್ರಾಂಕಿತೇನ ವರದೇನ ಕರಾಂಬುಜೇನ'** ಎಂಬ ಪದಗಳಿಂದ ಸೂಚಿಸಿರುವರು.

ಶ್ರೀರಾಮ ಸುಗ್ರೀವರ ಸಖ್ಯ

ಆರೋಪ್ಯ ಚಾಂಸಯುಗಲಂ ಭಗವಂತಮೇನಂ
ತಸ್ಯಾನುಜಂ ಚ ಹನುಮಾನ್ ಪ್ರಯಯೌ ಕಪೀಂದ್ರಮ್ ।
ಸಖ್ಯಂ ಚಕಾರ ಹುತಭುಕ್ಪ್ರಮುಖೇ ಚ ತಸ್ಯ
ರಾಮೇಣ ಶಾಶ್ವತನಿಜಾರ್ತಿಹರೇಣ ಶೀಘ್ರಮ್ ॥೨॥

ಅ: ಆ ಭಗವಂತನಾದ ಶ್ರೀರಾಮನನ್ನು ಮತ್ತು ಅವನ ಅನುಜನಾದ ಲಕ್ಷ್ಮಣನನ್ನು ತನ್ನ ಎರಡು ಭುಜಗಳ ಮೇಲೆ ಏರಿಸಿಕೊಂಡ ಹನುಮಂತನು ಕಪಿಶ್ರೇಷ್ಠನಾದ ಸುಗ್ರೀವನ ಬಳಿಗೆ ತೆರಳಿದ; ಮತ್ತು ಸದಾ ತನ್ನನ್ನು ನಂಬಿದವರ ನೋವನ್ನು ಕಳೆಯುವ ಶ್ರೀರಾಮನೊಂದಿಗೆ ಅವನಿಗೆ ಸಖ್ಯವನ್ನು ಅಗ್ನಿಸಾಕ್ಷಿಕವಾಗಿ ಕೂಡಲೆ ಮಾಡಿಸಿದ.

ವಿ: ೧) ಭಗವಂತನೆಂಬ ಪೂಜ್ಯ ಬುದ್ಧಿಯಿಂದ ಶ್ರೀರಾಮನನ್ನೂ, ವಿಷ್ಣುಭಕ್ತ ಎಂಬ ಅನುಗ್ರಹ– ಬುದ್ಧಿಯಿಂದ ಲಕ್ಷ್ಮಣನನ್ನೂ ಹನುಮಂತನು ತನ್ನ ಭುಜಗಳ ಮೇಲೆ ಕೂಡಿಸಿಕೊಂಡ ಎಂದು ತಿಳಿಯಬೇಕು.

---

೨. ಶಾಶ್ವತನಿಜಾರ್ತಿಹರಣೇನ ಶಾಶ್ವತಃ ಶಶ್ವದೇಕಪ್ರಕಾರೋ ಯೋ ನಿಜಃ ಭಕ್ತಃ । ನ ತು ಮಧ್ಯಮ ಜೀವವತ್ ಕದಾಚಿದ್ಭಕ್ತಃ ಕದಾಚಿದಭಕ್ತ ಇತಿ ಭಾವಃ । ತಸ್ಯ ಆರ್ತಿಹರೇಣ । –(ವಾ)

ಸ ಏನಾನ್ ಬ್ರಹ್ಮಗಮಯತಿ । –(ಶ್ರುತಿ)

ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚತದನುಜ್ಞಯಾ ॥ (ಭವಿಷ್ಯತ್ಪರ್ವ)

೨. ಭಗವಂತಮಿತ್ಯನೇನ ಪೂಜ್ಯತ್ವಬುದ್ಧ್ಯೈವ ಸ್ಕಂಧೇ ರಾಮಸ್ಯ ಆರೋಪಣಂ ಲಕ್ಷ್ಮಣಸ್ಯ ತು ಅನುಜಪದೋಪಲಕ್ಷಿತವಿಷ್ಣುಭಕ್ತತ್ವಬುದ್ಧ್ಯೇತಿ ಸೂಚಿತಮ್ । –(ವಾ)

೨) ಶ್ರೀರಾಮನು ತನ್ನ ಭಕ್ತರ ಆರ್ತಿಯನ್ನು ಪರಿಹರಿಸಿ ಸಲಹುವನು; ಆದರೆ ಅಂತಹ ಭಕ್ತನು ಸದಾ ಒಂದೇ ತೆರನಾಗಿ ಭಕ್ತಿಮಾಡುವ ಉತ್ತಮಭಕ್ತನಾಗಿರಬೇಕೇ ಹೊರತು, ಒಮ್ಮೆ ಭಕ್ತ ಮತ್ತೊಮ್ಮೆ ಅಭಕ್ತನಾಗುವ ಮಧ್ಯಮ ಭಕ್ತನಾಗಿರಕೂಡದು ಎಂಬುದನ್ನು **'ಶಾಶ್ವತನಿಜಾರ್ತಿ–ಹರೇಣ'** ಎಂಬ ಪದದಿಂದ ಸೂಚಿಸಿರುವರು.

೩) ಶ್ರೀರಾಮ–ಸುಗ್ರೀವರಿಗೆ ಅಗ್ನಿಸಾಕ್ಷಿಕವಾಗಿ ಸಖ್ಯ ಮಾಡಿಸಿದವನು ಹನುಮಂತ; ಭಗವಂತ ಮತ್ತು ಭಕ್ತರನ್ನು ಹೀಗೆ ಒಂದುಗೂಡಿಸುವ ಮುಖ್ಯ ಗುರು ಶ್ರೀವಾಯುದೇವರು ಎಂಬ ತತ್ತ್ವ ಇಲ್ಲಿ ಸೂಚಿತ; ಅಗ್ನಿಸಾಕ್ಷಿಕಮೈತ್ರಿಯು ಜ್ಞಾನಪೂರ್ವಕ ಯೋಗಕ್ಕೆ ಸಂಕೇತ.

೪) ಹನುಮಂತನಿಂದಲೇ ತನಗೆ ಶ್ರೀರಾಮನ ಗುಣಗಳು ತಿಳಿಯುವಂತಾಗಿ ಅವನಲ್ಲಿ ಆದರ ಹುಟ್ಟಿದ್ದು ಎಂಬುದನ್ನು ಸ್ವತಃ ಸುಗ್ರೀವನೇ ಹೇಳಿಕೊಂಡಿರುವನು;

''ಆಖ್ಯಾತಾ ವಾಯುಪುತ್ರೇಣ ತತ್ತ್ವತೋ ಮೇ ಭವದ್ಗುಣಾಃ'' ॥ - (ವಾ. ರಾ.೪/೫/೧೦)

ವಾಲಿವಧೆಗೆ ಶ್ರೀರಾಮನ ಸಮ್ಮತಿ

ಶ್ರುತ್ವಾऽಸ್ಯ ದುಃಖಮಥ ದೇವವರಃ ಪ್ರತಿಜ್ಞಾಂ
ಚಕ್ರೇ ಸ ವಾಲಿನಿಧನಾಯ ಹರೀಶ್ವರೋऽಪಿ ।
ಸೀತಾನುಮಾರ್ಗಣಕೃತೇऽಥ ಸ ವಾಲಿನೈವ
ಕ್ಷಿಪ್ತಾಂ ಹಿ ದುಂದುಭಿತನುಂ ಸಮದರ್ಶಯಚ್ಚ ॥ ೩ ॥

ಅ: ಸುಗ್ರೀವನ ದುಃಖವನ್ನು ಕೇಳಿ ದೇವಶ್ರೇಷ್ಠನಾದ ಶ್ರೀರಾಮ ವಾಲಿಯನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿದನು; ಅಂತೆಯೇ ಕಪಿರಾಜನಾದ ಸುಗ್ರೀವ ಸೀತೆಯನ್ನು ಹುಡುಕಿಕೊಡುವುದಾಗಿ ತಾನೂ ಪ್ರತಿಜ್ಞೆ ಮಾಡಿದ; ಅನಂತರ ಸುಗ್ರೀವ ವಾಲಿ ಎಸೆದಿದ್ದ ದುಂದುಭಿ ಎಂಬ ರಾಕ್ಷಸನ ದೇಹವನ್ನು ಶ್ರೀರಾಮನಿಗೆ ತೋರಿಸಿದ.

ವಿ: ೧) ಸೀತಾರೂಪದ ರಮಾದೇವಿಯನ್ನು ಕಳೆದುಕೊಂಡವನಂತೆ ವರ್ತಿಸಿದವನು ಶ್ರೀರಾಮ; ತನ್ನ ಪತ್ನಿಯಾದ ರುಮೆಯನ್ನು ರಾಜ್ಯಸಮೇತವಾಗಿ ನಿಜಕ್ಕೂ ಕಳೆದುಕೊಂಡು, ಅಣ್ಣನಿಂದ ಗಡಿಪಾರು

---

೩. ಸಮದರ್ಶಯಚ್ಚ ಇತ್ಯತ್ರ ಚ ಶಬ್ದೇನ ಏತಾಂ ತ್ವಮಪಿ ದೂರೇ ಕ್ಷಿಪ । ತದಾ ಮಮ ವಿಶ್ವಾಸಃ ಸ್ಯಾದಿತಿ ರಾಮಾಯಣಾದಾವುದಿತೋತ್ತರಕಥಾಂ ಸಂಗೃಹ್ಣಾತಿ । –(ವಾ)

೩. ಈ ದುಂದುಭಿಯು ಮಯ ಮತ್ತು ಹೇಮೆಯರ ಮಗ. – ವಾ.ರಾ.(ಉತ್ತರಕಾಂಡ, ಅಧ್ಯಾಯ ೧೨)

ಮಾಡಿಸಿಕೊಂಡಿದ್ದವನು ಸುಗ್ರೀವ. ರಾಮನದು ರಾಜ್ಯತ್ಯಾಗವಾದರೆ, ಸುಗ್ರೀವ ರಾಜ್ಯಭ್ರಷ್ಟ ಎಂಬುದು ಮತ್ತೊಂದು ವಿಶೇಷ.

೨) ಶ್ರೀರಾಮನು ಮಾಡಿದ ಪ್ರತಿಜ್ಞೆ ಸುಗ್ರೀವನ ಪಾಲಿಗೆ ಭಯಂಕರ ಶತ್ರುವಾಗಿದ್ದ ವಾಲಿಯ ಸಂಹಾರ; ಅದರೊಂದಿಗೆ ಅವನ ರಾಜ್ಯ ಮತ್ತು ಪತ್ನಿಯನ್ನು ಮರಳಿಕೊಡಿಸುವ ಉಪಕಾರ; ಸುಗ್ರೀವನದು ಕೇವಲ (ವಾಸ್ತವವಾಗಿ ಕಳೆಯದೇ ಇದ್ದ) ಸೀತೆಯನ್ನು ಹುಡುಕಿ ಕೊಡಿಸುವ ಕೆಲಸ; ಅಪಹರಿಸಿದ ರಾವಣನ ಸಂಹಾರಾದಿಗಳಲ್ಲ; ಎಂದರೆ ನಿಜಕ್ಕೂ ಉಪಕಾರ ಮಾಡುವವನು ಶ್ರೀರಾಮನೇ ಹೊರತು ಸುಗ್ರೀವನಲ್ಲ; ಜೀವೇಶ್ವರರ ಮೈತ್ರಿಯ ಸ್ವರೂಪದ ತತ್ತ್ವವೇ ಇದರಲ್ಲಿ ಅಡಗಿದೆ; ಶ್ರೀರಾಮ ಸ್ವತಃ ಪರದೈವ; ಸುಗ್ರೀವ ಸಕಲಜೀವರ ಪ್ರತಿನಿಧಿ; ಅವರಿಬ್ಬರಲ್ಲಿ ಸಾಮ್ಯವಾಗಲಿ, ಐಕ್ಯವಾಗಲಿ ಎಂದೂ ಕೂಡಲಾರದು ಎಂದು ಭಾವ.

೩) 'ದುಂದುಭಿ' ಎಂಬ ಮಹಿಷರೂಪದ ದೈತ್ಯನನ್ನು ವಾಲಿ ಕೊಂದು ಬಿಸಾಡಿದ್ದ. ಅಂತಹ ದುಂದುಭಿಯ ಶರೀರವನ್ನು ನೀನು ದೂರಕ್ಕೆ ಚಿಮ್ಮಬಲ್ಲೆಯಾದರೆ ವಾಲಿಯನ್ನು ಕೊಲ್ಲಲು ಸಮರ್ಥ ಎಂಬುದಾಗಿ ನಾನು ನಂಬಬಲ್ಲೆ' ಎಂಬುದು ಸುಗ್ರೀವನು ದುಂದುಭಿಯ ಶರೀರವನ್ನು ತೋರಿಸಿದ್ದರ ಹಿನ್ನೆಲೆ ಎಂಬುದನ್ನು 'ಚ' ಶಬ್ದದಿಂದ ಸೂಚಿಸಿರುವರು.

ದುಂದುಭಿಯ ದೇಹದಿಂದ ರಸಾತಲದಲ್ಲಿನ ದೈತ್ಯರ ಸಂಹಾರ

ವೀಕ್ಷ್ಯೈವ ತಾಂ ನಿಪತಿತಾಮಥ ರಾಮದೇವಃ
ಸೋಽಂಗುಷ್ಠಮಾತ್ರಚಲನಾದತಿಲೀಲಯೈವ ।
ಸಂಪ್ರಾಸ್ಯ ಯೋಜನಶತೇಽಥ ತಯೈವ ಚೋರ್ವೀಂ
ಸರ್ವಾನ್ ವಿದಾರ್ಯ ದಿತಿಜಾನಹನದ್ರಸಾಸ್ಥಾನ್ ॥ ೪ ॥

ಅ: ಹಾಗೆ ಬಿದ್ದಿದ್ದ ಆ ದುಂದುಭಿಯ ಶರೀರವನ್ನು ನೋಡುತ್ತಲೇ, ಶ್ರೀರಾಮದೇವ ಅದನ್ನು ತನ್ನ ಪಾದದ ಹೆಬ್ಬೆರಳಿನ ಚಲನಮಾತ್ರದಿಂದಲೇ ಅತಿ ಲೀಲೆಯಿಂದ ನೂರು ಯೋಜನಗಳಷ್ಟು ದೂರಕ್ಕೆ ಚಿಮ್ಮಿದ; ಮತ್ತು ಅದರಿಂದಲೇ ಭೂಮಿಯನ್ನು ಭೇದಿಸಿ ರಸಾತಲದಲ್ಲಿದ್ದ ದೈತ್ಯರನ್ನೆಲ್ಲ ಸಂಹರಿಸಿದ.

---

೪. ಆಕರ್ಣಾಂತಮಾಕೃಷ್ಟವಿಸೃಷ್ಟಶರಣ್ಯೇವ ಸತ್ತ್ವವತಾ ಕ್ಷೇಪಣೀಯಾಶ್ಮನ ಇವ ಚ ನಖಾಗ್ರಸ್ಪರ್ಶಮಾತ್ರೇಣ ಬ್ರಹ್ಮಾಂಡಖರ್ಪರನಿರ್ಭೇದಿರಾಮಾಂಗುಷ್ಠಶಕ್ತ್ಯಾಹಿತಶಕ್ತ್ಯಾ ಪ್ರಾಗ್ಭೂಮಿಸ್ಥದುಂದುಭಿತನೋರೇವ ಘನತರಭೂಮಿ-ನಿರ್ಭೇದಸಾಮರ್ಥ್ಯಮಪ್ಯಭೂದಿತಿ ಭಾವೇನಾಹ । -ಅಥ ತಯೈವೇತಿ । -(ವಾ)

ರಾಘವೋ ದುಂದುಭೇಃ ಕಾಯಂ ಪಾದಾಂಗುಷ್ಠೇನ ಲೀಲಯಾ ।
ತೋಲಯಿತ್ವಾ ಮಹಾಬಾಹುಶ್ಚಿಕ್ಷೇಪ ದಶಯೋಜನಮ್ ॥ -ವಾ. ರಾ. ೪/೧೧/೮೪

ಎ: ೧) ದುಂದುಭಿಯ ಶರೀರವನ್ನು ವಾಲಿ ಎರಡೂ ಕೈಗಳಿಂದ ಎತ್ತಿ ಬಿಸುಟಿದ್ದು ಒಂದು ಯೋಜನ ಮಾತ್ರ; ಆದರೆ ಶ್ರೀರಾಮನು ತನ್ನ ಪಾದದ ಹೆಬ್ಬೆರಳಿನ ಸ್ಪರ್ಶಮಾತ್ರದಿಂದ ನೂರು ಯೋಜನ ದೂರಕ್ಕೆ ಚಿಮ್ಮಿದ; ಭೂಮಿಯನ್ನು ಅದರಿಂದಲೇ ಸೀಳಿದ; ಅದರ ಪೆಟ್ಟಿನಿಂದಲೇ ರಸಾತಲದಲ್ಲಿದ್ದ ರಾಕ್ಷಸರನ್ನು ಸಂಹರಿಸಿದ, ಇದನ್ನೆಲ್ಲ ಮಾಡಿದ ಅವನೆಲ್ಲಿ? ಕೇವಲ ಸ್ವಲ್ಪ ದೂರಕ್ಕೆತ್ತಿ ಎಸೆದಿದ್ದ ವಾಲಿ ಎಲ್ಲಿ? ಎಂದು ಭಾವ.

೨) ಹೀಗೆ ಹತರಾದ ದೈತ್ಯರಿಗೆಲ್ಲ ರುದ್ರದೇವರಿಂದ ಅವಧ್ಯತ್ವವರವಿದ್ದಿತು ಎಂಬ ವಿಚಾರವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

೩) ಇದೆಲ್ಲ ಶ್ರೀರಾಮನ ಸಾಮರ್ಥ್ಯವೇ ಹೊರತು, ಆ ಶವದ ಸಾಮರ್ಥ್ಯವಲ್ಲ ಎಂಬುದನ್ನು '**ಅಥ ತಯ್ಯೈವ**' ಎಂಬ ಪದಗಳಿಂದ ಸೂಚಿಸಿರುವರು.

ಶರ್ವಪ್ರಸಾದಜಬಲಾದ್ದಿತಿಜಾನವಧ್ಯಾನ್ ॥ ೧
ಸರ್ವಾನ್ ನಿಹತ್ಯ ಕುಣಪೇನ ಪುನಶ್ಚ ಸಖ್ಯಾ ।
ಭೀತೇನ ವಾಲಿಬಲತಃ ಕಥಿತಃ ಸ್ಮ ಸಪ್ತ
ತಾಲಾನ್ ಪ್ರದರ್ಶ್ಯ ದಿತಿಜಾನ್ ಸುದೃಢಾಂಶ್ಚ ವಜ್ರಾತ್ ॥ ೫ ॥

ಅ: ಶಿವನ ಅನುಗ್ರಹದಿಂದ ಲಭಿಸಿದ ಬಲದಿಂದಾಗಿ ಸಾವಿಲ್ಲದವರಾಗಿದ್ದ ಆ ದೈತ್ಯರನ್ನೆಲ್ಲ ಹೀಗೆ ಶ್ರೀರಾಮ ಆ ಶವದಿಂದಲೇ ಸಂಹರಿಸಿದ. ವಾಲಿಯ ಬಲದಿಂದಾಗಿ ಪುನಃ ಭಯಪಟ್ಟ ಸುಗ್ರೀವ ಅಲ್ಲಿ ಬೆಳೆದಿದ್ದ ವಜ್ರಕ್ಕಿಂತಲೂ ಕಠೋರವಾಗಿದ್ದ ಏಳು ತಾಳವೃಕ್ಷಗಳ ರೂಪದಲ್ಲಿದ್ದ ದೈತ್ಯರನ್ನು ತೋರಿಸಿ ನುಡಿದ.

ಎ: ೧) ದುಂದುಭಿಯ ಶರೀರದಿಂದ ಹಾಗೆ ದೈತ್ಯರೆಲ್ಲ ನಾಶವಾದರೂ, ಸುಗ್ರೀವನ ಹೃದಯ–ದಲ್ಲಿದ್ದ ಸಂದೇಹ ಮಾತ್ರ ನಾಶವಾಗಲಿಲ್ಲ; ಅವನು ಅಲ್ಲಿ ಬೆಳೆದಿದ್ದ ತಾಳವೃಕ್ಷಗಳನ್ನು ತೋರಿಸಿ ಪುನಃ ನುಡಿದ.

೨) ವಾಲಿ ಎಸೆದಾಗ ದುಂದುಭಿಯ ಹೆಣ ಹಸಿಯಾಗಿತ್ತು; ಮಾಂಸದಿಂದ ಕೂಡಿತ್ತು; ಆದರೆ ಈಗ ಹಾಗಿರಲಿಲ್ಲ ಒಣಗಿಹೋಗಿತ್ತು, ಅಸ್ಥಿಪಂಜರವಾಗಿತ್ತು, ಎಂದರೆ ಇದಕ್ಕಿಂತ ಅದು ಭಾರವಿತ್ತು; ಆದ್ದರಿಂದ ತನ್ನ ಸಂಶಯ ಪರಿಹಾರವಾಗಿಲ್ಲ ಎಂದು ಸುಗ್ರೀವನ ಭಾವ.

---

೫. ತಂ ತೋಲಯಿತ್ವಾ ಬಾಹುಭ್ಯಾಂ ಗತಸತ್ವಮಚೇತನಮ್ ।
ಚಿಕ್ಷೇಪ ಬಲವಾನ್ ವಾಲೀ ವೇಗೇನೈಕೇನ ಯೋಜನಮ್ ॥ –ವಾ. ರಾ. ೪/೧೧/೪೬

೫. ಆರ್ದ್ರಃ ಸಮಾಂಸಃ ಪ್ರತ್ಯಗ್ರಃ ಕ್ಷಿಪ್ತಃ ಕಾಯಃ ಪುರಾ ಸಖೇ ।
ಲಘುಃ ಸಂಪ್ರತಿ ನಿರ್ಮಾಂಸಸ್ನಣಭೂತಶ್ಚ ರಾಘವಃ ॥ -ವಾ. ರಾ. ೪/೧೧/೪೭

೩) ದುಂದುಭಿಯ ಶರೀರ ದೂರಕ್ಕೆ ಎಸೆಯಲ್ಪಟ್ಟಿದ್ದು ಸುಗ್ರೀವನಿಗೆ ಕಂಡರೂ, ಅದು ಮುಂದೆ ಮಾಡಿದ ಭೂಮಿವಿದಾರಣ, ದೈತ್ಯಸಂಹಾರಾದಿ ಕಾರ್ಯಗಳು ಅವನಿಗೆ ಕಾಣದೇ ಹೋಗಿದ್ದು ಅವನ ಸಂದೇಹ ನಿವಾರಣೆಯಾಗದಿರಲು ಕಾರಣ ಎಂದು ತಿಳಿಯಬೇಕು.

ಸಪ್ತತಾಲಗಳ ಭಂಜನಕ್ಕೆ ಸುಗ್ರೀವನ ಪ್ರಾರ್ಥನೆ

ಏಕೈಕಮೇಷು ಸ ವಿಕಂಪಯಿತುಂ ಸಮರ್ಥಃ
ಪತ್ರಾಣಿ ಲೋಪ್ತುಮಪಿ ತೂತ್ಸಹತೇ ನ ಶಕ್ತಃ ।
ವಿಷ್ವಕ್ ಸ್ಥಿತಾನ್ ಯದಿ ಭವಾನ್ ಪ್ರತಿಭೇತ್ಸ್ಯತೀಮಾ-
ನೇಕೇಷುಣಾ ತರ್ಹಿ ವಾಲಿವಧೇ ಸಮರ್ಥಃ ॥ ೬ ॥

ಅ: ''ಆ ವಾಲಿಯು ಇವುಗಳಲ್ಲಿ ಒಂದೊಂದನ್ನು ಅಲುಗಾಡಿಸಲು ಶಕ್ತನಾಗಿದ್ದ; ಎಲೆಗಳನ್ನು ಕೀಳಲು ಸಹ ಯತ್ನಿಸುತ್ತಿದ್ದ; ಆದರೆ ಸಾಧ್ಯವಾಗಿರಲಿಲ್ಲ; ಅಲ್ಲಲ್ಲಿ ನಿಂತಿರುವ ಇವೆಲ್ಲವನ್ನು ನೀನು ಒಂದೇ ಬಾಣದಿಂದ ಭೇದಿಸಬಲ್ಲೆಯಾದರೆ ಮಾತ್ರ ವಾಲಿಯನ್ನು ಕೊಲ್ಲಬಲ್ಲ ಸಮರ್ಥ''.

ಜೇತುಂ ಚತುರ್ಗುಣಬಲೋ ಹಿ ಪುಮಾನ್ ಪ್ರಭುಃ ಸ್ಯಾ-
ದ್ಧಂತುಂ ಶತಾಧಿಕಬಲೋಽತಿಬಲಂ ಸುಶಕ್ತಃ ।
ತಸ್ಮಾದಿಮಾನ್ ಹರಿಹಯಾತ್ಮಜಬಾಹ್ವಲೋಪ್ಯ-
ಪತ್ರಾನ್ ವಿಭಿದ್ಯ ಮಮ ಸಂಶಯಮಾಶು ಭಿಂಧಿ ॥ ೭ ॥

ಅ: ನಾಲ್ಕು ಪಟ್ಟು ಬಲಿಷ್ಠನಾದ ಪುರುಷ ತನ್ನ ಶತ್ರುಗಳನ್ನು ಗೆಲ್ಲಬಲ್ಲ; ನೂರು ಪಟ್ಟು ಹೆಚ್ಚು ಬಲವುಳ್ಳವನು ಶತ್ರುಗಳನ್ನು ಸಂಹರಿಸಬಲ್ಲ. ಆದ್ದರಿಂದಲೇ ಇಂದ್ರಪುತ್ರನಾದ ವಾಲಿಯ ತೋಳುಗಳಿಂದ ಎಲೆಗಳೂ ಕೀಳಲಾಗದ ಈ ವೃಕ್ಷಗಳನ್ನು ಭೇದಿಸಿ ನನ್ನ ಸಂಶಯವನ್ನು ಬೇಗನೇ ನಿವಾರಿಸು''.

---

೬. ಅನಂತಬಲಪರಿಪೂರ್ಣೇ ನಾರಾಯಣೇ ಸುಗ್ರೀವಸ್ಯ ಜ್ಞಾನದಾರ್ಢ್ಯಾಭಾವಸೂಚನಾಯ ಪ್ರಭೋಃ ಶಾಸನೋದ್ಯೋಗಾತ್ವಾಲಿಬಲಾದ್ವಾ ಭೀತ್ಯಾ ಕಂಪಮಾನಹೃದಯಸ್ಯ ತಸ್ಯ ಶಬ್ದೋಽಪಿ ನ ಸ್ಫುಟಂ ನಿಃಸೃತ ಇತಿ ಸೂಚನಾಯ ತರ್ಹಿ ಇತಿ ವಿಶಕಲಿತವರ್ಣೋಚ್ಚಾರಣಂ ಕೃತಮ್ ॥ -(ವಾ)

೭. ನ ಖಿಲ್ವಹಂ ತ್ವಾಂ ತುಲಯೇ ನಾವಮನ್ಯೇ ನ ಭೀಷಯೇ ।
ಕರ್ಮಭಸ್ಯಸ್ಯ ಭೀಮೈಸ್ತು ಕಾತರ್ಯಂ ಜನಿತಂ ಮಮ ॥ -ವಾ. ರಾ. ೪/೧೧/೮೦

೮. ಏಕಸ್ಯಾಪ್ಯವಶೇಷೋ ಯಥಾ ನ ಭವತಿ ತಥಾ ಪ್ರತಿಭೇತ್ಸ್ಯತೀತಿ ಸೂಚನಾಯ 'ಪ್ರತಿ' ಇತ್ಯುಪಸರ್ಗಃ ।-(ವಾ)

ವಿ: ೧) ಶ್ರೀರಾಮನು ವಾಲಿಯನ್ನು ಕೊಲ್ಲಬಲ್ಲ ಸಮರ್ಥ ಎಂಬುದನ್ನು ಖಚಿತಪಡಿಸಿ–ಕೊಳ್ಳಲು ಸುಗ್ರೀವನು ಅಪೇಕ್ಷಿಸುವ ಮತ್ತೊಂದು ಪ್ರತ್ಯಯ ಇದಾಗಿದೆ. ಇಂತಹ ಸವಾಲನ್ನು ಶ್ರೀರಾಮನಿಗೆ ಒಡ್ಡುವಲ್ಲಿ ಸುಗ್ರೀವನ ಮನೋಗತ 'ವಾಲಿವಧೆ' ಖಂಡಿತ ನಡೆಯಲೇಬೇಕು ಎಂಬುದೇ ಹೊರತು, ಶ್ರೀರಾಮನ ಬಲವನ್ನು ಶಂಕಿಸುವುದಲ್ಲ ಎಂಬುದನ್ನು ತಿಳಿಯಬೇಕು.

೨) ವಾಲಿಗೆ ಒಂದರ ಎಲೆಯನ್ನು ಸಹ ಕೀಳಲೂ ಸಾಧ್ಯವಾಗಿರಲಿಲ್ಲ, ಆದರೆ ನೀನು ಇವೆಲ್ಲವನ್ನು ಒಂದೇ ಬಾಣದಿಂದ ನಾಶಮಾಡಿಬಿಡಬೇಕು; ಆಗಲೇ ತನಗೆ ಪೂರ್ಣನಂಬಿಕೆ ಎಂಬುದನ್ನು 'ಪ್ರತಿ' ಎಂಬ ಮಾತಿನಿಂದ ಸೂಚಿಸಿರುವರು.

೩) ಅನಂತಬಲಪೂರ್ಣನಾದ ಶ್ರೀರಾಮನನ್ನು ಸರಿಯಾಗಿ ತಿಳಿಯದಿರುವುದು, ಅಂತಹವನನ್ನು ಪರೀಕ್ಷಿಸುವಂತಹ ಕಾರ್ಯಕ್ಕಿಳಿದಿರುವುದು, ಇದನ್ನೆಲ್ಲ ಹೇಳುವಾಗ ವಾಲಿಯ ಬಲದ ಬಗೆಗಿನ ಭಯ ಮುತ್ತಿರುವುದು, ಈ ಕಾರಣಗಳಿಂದಾಗಿ ಸುಗ್ರೀವನ ಹೃದಯ ಕಂಪಿಸಿದೆ; ಅದರಿಂದಾಗಿ ಬಾಯಿಯೂ ತೊದಲಿದೆ; ಅದಕ್ಕೆಂದೇ **'ತರ್ಹಿ'** ಎಂಬ ಪದವನ್ನು ಅವನು **'ತರ್'ಹಿ'** ಎಂದು ಬಿಡಿಸಿ ಉಚ್ಚರಿಸಿರುವನು ಎಂದು ತಿಳಿಯಬೇಕು.

೪) ''ಗೆಲ್ಲಲು ನಾಲ್ಕರಷ್ಟು ಬಲ; ಕೊಲ್ಲಲು ನೂರರಷ್ಟು ಬಲ'' ಎಂಬ ಪರಿಜ್ಞಾನ ಸುಗ್ರೀವನು ಹೀಗೆ ಶ್ರೀರಾಮನ ಬಲವನ್ನು ಪರೀಕ್ಷಿಸುವ ಹಿನ್ನೆಲೆಯಾಗಿತ್ತು ಎಂದು ಭಾವ. ದುಂದುಭಿಯ ಶವವನ್ನು ಚಿಮ್ಮಿದ ಪ್ರಸಂಗ ಶ್ರೀರಾಮನು ವಾಲಿಯನ್ನು ಗೆಲ್ಲಬಲ್ಲ ಎಂಬ ವಿಶ್ವಾಸ ಹುಟ್ಟಿಸಿದರೂ, ಕೊಲ್ಲಬಲ್ಲ ಎಂಬ ವಿಶ್ವಾಸ ಹುಟ್ಟಲು ಈ ಎರಡನೆಯ ಪರೀಕ್ಷೆ ಎಂದು ತಿಳಿಯಬೇಕು.

೫) ವಾಲಿಯು ಇಂದ್ರಾವತಾರ ಎಂಬ ಪರಿಜ್ಞಾನ ಸುಗ್ರೀವನಿಗೆ ಇದ್ದಿತು ಎಂಬ ವಿಚಾರವನ್ನು **'ಹರಿಹಯಾತ್ಮಜಬಾಹ್ವಲೋಪ್ಯಪತ್ರಾನ್'** ಎಂಬ ಪದದಿಂದ ಸೂಚಿಸಿರುವರು.

ಶ್ರೀರಾಮನಿಂದ ಸಪ್ತತಾಲರೂಪದ ದೈತ್ಯರ ಸಂಹಾರ

ಶ್ರುತ್ವಾಽಸ್ಯ ವಾಕ್ಯಮವಮೃಶ್ಯ ದಿತೇಃ ಸುತಾಂಸ್ತಾನ್
ಧಾತುರ್ವರಾದಖಿಲಪುಂಭಿರಭೇದ್ಯರೂಪಾನ್ ।
ಬ್ರಹ್ಮತ್ವಮಾಪ್ತುಮಚಲಂ ತಪಸಿ ಪ್ರವೃತ್ತಾ-
ನೇಕೇಷುಣಾ ಸಪದಿ ತಾನ್ ಪ್ರಬಿಭೇದ ರಾಮಃ ॥ ೮ ॥

---

೮. ಬ್ರಹ್ಮತ್ವಂ–ಚತುರ್ಮುಖತ್ವಮ್ । –(ವ, ಮತ್ತುಜ)

೮. ಅಚಲಂ ಅಕ್ಷಯಂ ಬ್ರಹ್ಮತ್ವಮ್ । –(ವ)

ಅ: ಶ್ರೀರಾಮ ಆ ಸುಗ್ರೀವನ ಮಾತನ್ನು ಕೇಳಿದ; ''ಆ ತಾಲವೃಕ್ಷಗಳು ನಿಜಕ್ಕೂ ಬ್ರಹ್ಮದೇವರ ವರದಿಂದಾಗಿ ಬೇರಾವ ಪುರುಷನಿಂದಲೂ ಭೇದಿಸಲಾಗದ ದೈತ್ಯರು; ಬ್ರಹ್ಮತ್ವ ಪಡೆಯಲೆಂದು ಹಾಗೆ ಸ್ಥಿರವಾಗಿ ತಪಸ್ಸಿಗೆ ತೊಡಗಿರುವವರು'' ಎಂಬುದನ್ನು ಬಲ್ಲ ಅವನು ಒಂದೇ ಬಾಣದಿಂದ ಅವುಗಳನ್ನೆಲ್ಲ ಸಂಪೂರ್ಣವಾಗಿ ಕೂಡಲೇ ಸೀಳಿಹಾಕಿದ.

ವಿ: ೧) ಸುಗ್ರೀವನಿಗೆ ತಿಳಿದುದ್ದುದು ಅವೆಲ್ಲ ತಾಳವೃಕ್ಷಗಳೆಂದು ಮಾತ್ರ; ಆದರೆ ಶ್ರೀರಾಮನಿಗೆ ಅವುಗಳ ಹಿನ್ನೆಲೆಯೆಲ್ಲ ತಿಳಿದಿತ್ತು ಎಂಬುದನ್ನು ಹೀಗೆ ವಿವರಿಸುವ ಮೂಲಕ ಅವನು ಪೂರ್ಣಬಲನು ಮಾತ್ರವಲ್ಲದೆ ಪೂರ್ಣಜ್ಞಾನನೂ ಆಗಿರುವನು ಎಂದು ತಿಳಿಸಿರುವರು.

೨) ಆ ದೈತ್ಯರು ವರಪಡೆದದ್ದು ಚತುರ್ಮುಖಬ್ರಹ್ಮನಿಂದ; ತಪಸ್ಸು ಮಾಡಿ ಪಡೆಯಬಯಸಿದ್ದು ಆ ಚತುರ್ಮುಖಬ್ರಹ್ಮಪದವಿಯನ್ನು ಎಂದರೆ ಅನ್ನವಿಟ್ಟವರ ಮನೆಗೆ ಕನ್ನವಿಡುವ ಪ್ರವೃತ್ತಿ ಅವರದಾಗಿತ್ತು ಅದಕ್ಕೆಂದೇ ಶ್ರೀರಾಮನು ಅವರನ್ನೆಲ್ಲ ನಾಶಮಾಡಿದ. ಜೀವೋತ್ತಮರಾದ ಬ್ರಹ್ಮವಾಯುಗಳ ದ್ರೋಹ ಶ್ರೀಹರಿಗೆ ಪರಮ ಅಪ್ರಿಯವಾದ ದುಷ್ಕಾರ್ಯ ಎಂಬುದು ಈ ಮೂಲಕ ಸೂಚಿತ ಎಂದು ತಿಳಿಯಬೇಕು.

೩) ತಮಗಿಂತ ಉತ್ತಮರಾದ ದೇವತೆಗಳ ಪದವಿಯನ್ನು ಅವರಿಗಿಂತ ಅಧಮರಾದ ದೇವತೆಗಳು ಸಹ ಬಯಸಕೂಡದು; ಹಾಗೆ ಬಯಸಿದರೆ ಅವರಿಗೂ ಶಿಕ್ಷೆ ತಪ್ಪಿದ್ದಲ್ಲ; ಎಂದ ಮೇಲೆ ಸ್ವತಃ ಅಸುರರಾದ ಇವರು ಹಾಗೆ ಬಯಸಿದ್ದು ಎಂತಹ ಮಹಾಪರಾಧ. ಚತುರ್ಮುಖಬ್ರಹ್ಮ ಪದವಿಯನ್ನು ಬಯಸುವುದೇ ಹೀಗೆ ಅನರ್ಥಕರವಾಗಿರುವಾಗ ಪರಬ್ರಹ್ಮಪದವಿಯನ್ನು ಎಂದರೆ ಆತ್ಮೈಕ್ಯ (ಜೀವೇಶ್ವರಾಭೇದ)ವನ್ನು ಚಿಂತಿಸುವುದು ಎಂತಹ ಮಹಾಪರಾಧ ಎಂಬ ಧ್ವನಿಯು ಇಲ್ಲಿದೆ.

ಸಂಧಾಯ ಕಾರ್ಮುಕವರೇ ನಿಶಿತೇ ತು ಬಾಣೇऽ-
ಥಾಕೃಷ್ಯ ದಕ್ಷಿಣಭುಜೇನ ತದಾ ಪ್ರಮುಕ್ತೇ ।
ರಾಮೇಣ ಸತ್ವರಮನಂತಬಲೇನ ಸರ್ವೇ
ಚೂರ್ಣೀಕೃತಾಃ ಸಪದಿ ತೇ ತರವೋ ರವೇಣ ॥ ೯ ॥

---

೮. ಅಚಲಂ ಯಥಾ ಸ್ಯಾತ್ ತಥಾ ತಪಸಿ ಪ್ರವೃತ್ತಾನ್ । –(ಜ)
ವಿರಿಂಚವರತೋऽಭೇದ್ಯಾನ್ ವಿರಿಂಚಪದಮಿಚ್ಛತಃ ।
ಅಸುರಾಂಸ್ತರುತಾಂ ಯಾತಾನ್ ಜ್ಞಾತ್ವಾ ತಾನಮುಚಚ್ಛರಮ್ ॥ -ಸಂಗ್ರಹರಾಮಾಯಣ೪/೩/೪೨

೮. ನ ದೇವಪದಮನ್ವಿಚ್ಛೇತ್ ಕುತ ಏವ ಹರೇರ್ಗುಣಾನ್ । –(ಬ್ರಹ್ಮಸೂತ್ರಭಾಷ್ಯ)೮.
ಗದಾ ತು ವಾಯುರ್ಬಲಸಂವಿದಾತ್ಮಾ । –(ಮ. ಭಾ. ತಾ. ನಿ. ೩/೮೧)

ಅ: ಅನಂತಬಲನಾದ ಶ್ರೀರಾಮ ತನ್ನ ಶ್ರೇಷ್ಠವಾದ ಧನುಸ್ಸಿನಲ್ಲಿ ಹರಿತವಾದ ಬಾಣವನ್ನು ಹೂಡಿ, ಬಲಗೈಯಿಂದ ಅದನ್ನು ಚೆನ್ನಾಗಿ ಎಳೆದು ವೇಗದಿಂದ ಬಿಡುತ್ತಿದ್ದಂತೆಯೇ ಆ ತಾಳವೃಕ್ಷಗಳೆಲ್ಲ ಭಯಂಕರ ಶಬ್ದದೊಂದಿಗೆ ಪುಡಿಪುಡಿಯಾದವು.

ಎ: ೧) ಶ್ರೀರಾಮ ಅನಂತಬಲ; ಅವನ ಧನುಸ್ಸು ಸಕಲ ಧನುಸ್ಸುಗಳಲ್ಲೂ ಶ್ರೇಷ್ಠವಾದುದು; ಬಿಟ್ಟ ಬಾಣ ತುಂಬಾ ಹರಿತವಾದುದು; ಬಿಟ್ಟಿದ್ದು ಸಹ ಬಲಗೈಯಿಂದ; ಅದೂ ವೇಗದಿಂದ; ಇವುಗಳಲ್ಲಿ ಒಂದೊಂದೂ ಸರ್ವನಾಶಕ್ಕೆ ಸಮರ್ಥವಾಗಿರುವಾಗ ಎಲ್ಲವೂ ಒಟ್ಟಿಗಿರುವಾಗ ಹೇಳುವುದೇನು? ಎಂದು ಭಾವ, ವಾಯುದ್ರೋಹಿಗಳ ಮೇಲೆ ಭಗವಂತ ಎಷ್ಟು ಉಗ್ರನಾಗುವನು ಎಂಬುದರ ಸೂಚನೆ ಇಲ್ಲಿದೆ.

೨) ಶ್ರೀರಾಮನ ಬಾಣಕ್ಕೆ ಶ್ರೀವಾಯುದೇವರೇ ಅಭಿಮಾನಿ ದೇವತೆ; ಬ್ರಹ್ಮಪದವಿ ಬಯಸಿದ್ದ ಆ ದೈತ್ಯರೆಲ್ಲ ಭಾವಿಬ್ರಹ್ಮನಾದ ವಾಯುದೇವರ ದ್ರೋಹಿಗಳು; ವಾಯುದ್ರೋಹಿಗಳನ್ನು ಸಂಹರಿಸಲು ಭಗವಂತನು ವಾಯುದೇವರನ್ನೇ ಕಳಿಸಿಕೊಟ್ಟ ಎಂಬ ಧ್ವನಿಯೂ ಇಲ್ಲಿದೆ ಎನ್ನಬಹುದು.

೩) ಶ್ರೀರಾಮನ ಒಂದೇ ಕಾರ್ಯ ಹೀಗೆ ಬಹುಕಾರ್ಯಸಾಧಕವಾದದ್ದನ್ನು ಒಂದೇ ಪ್ರಕಾಶವು ಬಹುವಸ್ತುಗಳನ್ನು ಹೇಗೆ ಬೆಳಗುವುದೋ ಹಾಗೆ[೯] ಎಂದು ನಾರಾಯಣಪಂಡಿತಾಚಾರ್ಯರು ವರ್ಣಿಸಿರುವರು.

ಪಾತಾಳದಲ್ಲಿನ ಕುಮುದಿ ರಾಕ್ಷಸರ ಸಂಹಾರ

ಭಿತ್ವಾ ಚ ತಾನ್ ಸಗಿರಿಕುಂ ಭಗವತ್ಪ್ರಮುಕ್ತಃ
ಪಾತಾಲಸಪ್ತಕಮಥಾತ್ರ ಚ ಯೇ ತ್ವವಧ್ಯಾಃ।
ನಾಮ್ನಾಽಸುರಾಃ ಕುಮುದಿನೋಽಬ್ಜವಾಕ್ಯರಕ್ಷಾಃ
ಸರ್ವಾಂಶ್ಚ ತಾನದಹದಾಶು ಶರಃ ಸ ಏಕಃ ॥ ೧೦ ॥

---

೯. ಕಿಂ ನು ತಸ್ಮಿನ್ ಕಾಲೇ ತಸ್ಮಿನ್ ದೇಶೇ ಯೇ ಯೇ ತರವಃ ಅಭೂವನ್ ತೇ ಸರ್ವೇ ಚೂರ್ಣೀಕೃತಾ ಇತ್ಯರ್ಥಂ ವಕ್ತುಂ ತದಾ ಸರ್ವ ಇತಿ ಪದದ್ವಯಂ ಪ್ರಯುಕ್ತಮಿತಿ ಸ್ವೀಕರಣಾತ್ ॥ –(ಸ.)

೧೦. ಗಿರಿಶ್ಚ ಕುಃ ಪೃಥ್ವೀ ಚ ಗಿರಿಕೂ। ಗಿರಿಕುಭ್ಯಾಂ ಸಹಿತಂ 'ಸ ಗಿರಿಕುಂ' ಇತಿ ಪಾತಾಲಸಪ್ತಕಸ್ಯ ವಿಶೇಷಣಮ್। ತಾನ್ ಸಪ್ತತಾಲಾನ್ ಭಿತ್ವಾ ಸಗಿರಿಕುಂ ಪಾತಾಲಸಪ್ತಕಂ ಚ ಭಿತ್ವೇತಿ ಯೋಜನಾ। –(ವಾ)

೧೦. ಅತಲಮಾರಭ್ಯ ಪಾತಾಲಪರ್ಯಂತಂ ಲೋಕಸಪ್ತಕಮ್। –(ವ)

೧೦. ಅತಲ, ವಿತಲ, ಸುತಲ, ರಸಾತಲ, ಮಹಾತಲ, ತಲಾತಲ ಮತ್ತು ಪಾತಾಲ ಇವು ಅತಲಾದಿ ಸಪ್ತ ಅಧೋಲೋಕಗಳು.

ಅ: ಆ ಒಂದು ಬಾಣ ಆ ಸಪ್ತತಾಳವೃಕ್ಷಗಳನ್ನು ಛೇದಿಸಿತು; ಪರ್ವತ ಮತ್ತು ಭೂಮಿ-ಗಳೊಂದಿಗೆ ಪಾತಾಲಪರ್ಯಂತವಾದ ಕೆಳಗಿನ ಏಳುಲೋಕಗಳನ್ನು ಛೇದಿಸಿತು; ಮತ್ತು ಅಲ್ಲಿದ್ದ 'ಕುಮುದಿ'ಗಳು ಎಂಬ ಹೆಸರಿನ ಬ್ರಹ್ಮವಚನದಿಂದ ಪಾಲಿತರಾಗಿದ್ದ ಅಸುರರನ್ನೆಲ್ಲ ಸುಟ್ಟುಹಾಕಿತು.

ವಿ: ೧) ರಾಮಬಾಣವು ಎದುರಿಗಿದ್ದ ಸಪ್ತ ತಾಳವೃಕ್ಷಗಳನ್ನಲ್ಲದೆ, ಭೂಮಿ ಪರ್ವತಗಳನ್ನೂ ಛೇದಿಸಿತು, ಅತಲದಿಂದ ಆರಂಭಿಸಿ ಪಾತಾಲದವರೆಗಿನ ಕೆಳಗಿನ ಏಳು ಲೋಕಗಳನ್ನೂ ಛೇದಿಸಿತು ಮತ್ತು ಹಾಗೆ ಛೇದಿಸುವಾಗ ಅಲ್ಲಿ ನೆಲೆಸಿದ್ದ 'ಕುಮುದಿ'ಗಳು ಎಂಬ ಹೆಸರಿನ ಅಸಂಖ್ಯ ಅಸುರರನ್ನೆಲ್ಲ ಸುಟ್ಟು ಹಾಕಿತು; ಆ ಅಸುರರು ಸಾಮಾನ್ಯರಾದವರಾಗಿರಲಿಲ್ಲ; ಬ್ರಹ್ಮದೇವರ ವರದಿಂದ ಅವಧ್ಯರಾಗಿದ್ದವರು.

೨) ರಾಮಬಾಣ ಬ್ರಹ್ಮವರದಿಂದ ಅವಧ್ಯರಾಗಿದ್ದ ಆ ಸಪ್ತತಾಳವೃಕ್ಷಗಳ ರೂಪದಲ್ಲಿದ್ದ ದೈತ್ಯರನ್ನು ಮಾತ್ರವಲ್ಲದೆ, ಪಾತಾಲದವರೆಗಿನ 'ಕುಮುದಿ' ಗಳು ಎಂಬ ರಾಕ್ಷಸರನ್ನೆಲ್ಲ ಸಂಹರಿಸಿತು; ಅವರೂ ಬ್ರಹ್ಮವರದಿಂದ ಅವಧ್ಯರಾಗಿದ್ದವರೇ; ಹೀಗೆ ಬ್ರಹ್ಮವರದಿಂದ ಅವಧ್ಯರಾಗಿದ್ದ ಅಸಂಖ್ಯ ಅಸುರರನ್ನು ಹೀಗೆ ಒಂದೇ ಬಾಣವನ್ನು ಒಮ್ಮೆ ಮಾತ್ರ ಪ್ರಯೋಗಿಸಿ ಸಂಹರಿಸಿದ ಶ್ರೀರಾಮನು ಸ್ವತಃ ಪರಬ್ರಹ್ಮ ಎಂಬುದು ನಿಃಸಂಶಯ ಎಂಬ ಸೂಚನೆಯೂ ಇಲ್ಲಿದೆ.

೩) ಇಷ್ಟೆಲ್ಲ ಮಾಡಿದ ರಾಮಬಾಣ ಮರಳಿ ಬಂದು ಶ್ರೀರಾಮನ ಬತ್ತಳಿಕೆಯನ್ನೇ ಸೇರಿತು ಎಂಬ ವಿಶೇಷಾಂಶವು ವಾಲ್ಮೀಕಿರಾಮಾಯಣದಲ್ಲಿ ಉಕ್ತವಾಗಿದೆ; ಮತ್ತು ಇದಕ್ಕೆಲ್ಲ ಹಿಡಿದ ಸಮಯ ಒಂದು ಮುಹೂರ್ತ ಮಾತ್ರ ಎಂಬ ಮಾತೂ ಅಲ್ಲಿದೆ.

೪) ಶ್ರೀರಾಮ ಈ ಮೊದಲು ರಸಾತಲದಲ್ಲಿದ್ದ ದೈತ್ಯರನ್ನು ಸಂಹರಿಸಿದ್ದು ಒಂದು 'ಹೆಣ'ದಿಂದ; ಈಗ ಪಾತಾಲದಲ್ಲಿದ್ದ ಅಸುರರನ್ನೆಲ್ಲ ಸಂಹರಿಸಿದ್ದು, ಯಾವನು ತೊರೆಯಲು ದೇಹ 'ಹೆಣ'ವೆನ್ನಿಸುವುದೋ ಅಂತಹ ಮುಖ್ಯಪ್ರಾಣರೂಪದ ಬಾಣದಿಂದ.

---

೧೦. 'ಲೋಕಸ್ತು ಭುವನೇ ಜನೇ' ಇತ್ಯನುಶಾಸನಾತ್ ಲೋಕಸ್ಯ ಭುವನಸ್ಯ ಜನಸ್ಯ ಚ। ತದಪಿ – ತಥಾऽಪೀದಂ ಮಂಡಲಾಕಾರತಯಾ ಸ್ಥಿತತಾಲಾನಾಂ ಛೇದನಂ ಕುಣಪೇನ ಭೂನಿರ್ಭೇದನಂ ವಿಧೇರುಲ್ಲಂಘನಂ ಚೈತ್ಯಾದಿಕಂ ಅನನ್ಯಸಾಧ್ಯಮಿತಿ ಯೋಜನಾ ॥ -(ವಾ)

೧೦. ಶರೀರಮಾಕೃತಿರ್ದೇಹಃ ಕುಃ ಪೃಥ್ವೀ ಚ ಮಹೀ ತಥಾ। -ಇತ್ಯಭಿಧಾನಮ್ ಭಾ. ತಾ. ೩/೪/೨೮

೧೦. ಸ ವಿಸೃಷ್ಟೋ ಬಲವತಾ ಬಾಣಃ ಸ್ವರ್ಣಪರಿಷ್ಕೃತಃ।
ಭಿತ್ವಾ ಸಾಲಾನ್ ಗಿರಿಪ್ರಸ್ಥಂ ಸಪ್ತ ಭೂಮಿಂ ವಿವೇಶ ಹ।
ಪ್ರವಿಷ್ಟಶ್ಚ ಮುಹೂರ್ತೇನ ಧರಾಂ ಭಿತ್ವಾ ಮಹಾಜವಃ।
ನಿಷ್ಪತ್ಯ ಚ ಪುನಸ್ತೂರ್ಣಂ ಸ್ವತೂಣೀಂ ಪುನರಾವಿಶತ್ ॥ -(೪/೧೨/೩,೪)

ಪದ್ಮಾಪತೇಃ ಪಾಣಿಪದ್ಮಂ ಸಹಸಾ ಹಂಸರೂಪವಾನ್।
ಪ್ರಾಯಾದ್ವಾಯುಮಯೋ ಬಾಣಂ ಏವಂ ಕೃತಪರಾಕ್ರಮಃ ॥ – (ಸಂಗ್ರಹರಾಮಾಯಣ. ೪/೩/೪೫)

ನೈತದ್ವಿಚಿತ್ರಮಮಿತೋರುಬಲಸ್ಯ ವಿಷ್ಣೋ-
ರ್ಯತ್ಪ್ರೇರಣಾತ್ ಸಪವನಸ್ಯ ಭವೇತ್ ಪ್ರವೃತ್ತಿಃ ।
ಲೋಕಸ್ಯ ಸಪ್ರಕೃತಿಕಸ್ಯ ಸರುದ್ರಕಾಲ-
ಕರ್ಮಾದಿಕಸ್ಯ ತದಪೀದಮನನ್ಯಸಾಧ್ಯಮ್ ॥ ೧೧ ॥

ಅ: ವಿಷ್ಣುವು(ಶ್ರೀರಾಮನು) ಅಪರಿಮಿತವಾದ ಉತ್ಕೃಷ್ಟಬಲವುಳ್ಳವನು; ವಾಯುವಿನಿಂದ, ಪ್ರಕೃತಿಯಿಂದ, ಶಿವ, ಗರುಡ, ಇಂದ್ರಾದಿ ಸಕಲರಿಂದ, ಒಡಗೂಡಿದ ಈ ಲೋಕದ ಪ್ರವೃತ್ತಿ ಎಲ್ಲವೂ ಆಗುವುದು ಅವನ ಪ್ರೇರಣೆಯಿಂದಲೇ; ಅವನಿಗೆ ಈ ಕಾರ್ಯ ಆಶ್ಚರ್ಯ-ಕರವಾದುದೇನೂ ಅಲ್ಲ; ಹಾಗೆಯೇ ಇತರರಿಗೆ ಎಂದೂ ನೀಗುವಂತಹುದೂ ಅಲ್ಲ.

ವಿ: ೧) ಇಲ್ಲಿಯ ಪ್ರಕೃತಿ, ಕಾಲ ಮತ್ತು ಕರ್ಮ ಎಂಬ ಪದಗಳಿಂದ ಅವುಗಳಿಗೆ ಕ್ರಮವಾಗಿ ಅಭಿಮಾನಿಗಳಾಗಿರುವ ಮಹಾಲಕ್ಷ್ಮಿ, ಗರುಡ ಮತ್ತು ಇಂದ್ರರು ವಿವಕ್ಷಿತ. ಮಹಾಲಕ್ಷ್ಮಿ, ವಾಯು, ಗರುಡಶೇಷರುದ್ರರು, ಇಂದ್ರ ಮೊದಲಾದ ಸಕಲಜಗತ್ತಿಗೂ ಪ್ರೇರಕನಾದ ಮಹಾವಿಷ್ಣುವೇ ಶ್ರೀರಾಮ; ಅವನಿಗೆ ಇದೆಲ್ಲ ಎಂತಹ ಆಶ್ಚರ್ಯ ಎಂದು ಭಾವ.

೨) ಶ್ರೀರಾಮನು ಸ್ವತಃ ಭಗವಂತನಾದ್ದರಿಂದ ಅವನಿಗೆ ಸಕಲ ಕಾರ್ಯವೂ ಸುಸಾಧ್ಯ. ಇತರರಿಗೆ ಅಸಾಧ್ಯ. ಅವನ ಸಕಲ ಕಾರ್ಯಗಳ ಬಗ್ಗೆಯೂ ಹೀಗೆಯೇ ತಿಳಿಯಬೇಕು.

ಮೊದಲ ಬಾರಿಗೆ ವಾಲಿಯನ್ನು ಕೊಲ್ಲದೆ ಬಿಟ್ಟ ಶ್ರೀರಾಮ

ದೃಷ್ಟ್ವಾ ಬಲಂ ಭಗವತೋಽಥ ಹರೀಶ್ವರೋಽಸಾ-
ವಗ್ರೇ ನಿಧಾಯ ತಮಗಾತ್ ಪುರಮಗ್ರಜಸ್ಯ ।
ಆಶ್ರುತ್ಯ ರಾವಮನುಜಸ್ಯ ಬಿಲಾತ್ ಸ ಚಾಗಾ-
ದಭ್ಯೇನಮಾಶು ದಯಿತಾಪ್ರತಿವಾರಿತೋಽಪಿ ॥ ೧೨ ॥

---

೧೧. ಪ್ರಕೃತ್ಯಾ – ಲಕ್ಷ್ಮ್ಯಾ ।.... –(ವ)
ಕಾಲಾಭಿಮಾನೀತ್ಯತ್ರ 'ಕಾಲಾತ್ಮಕಃ ಸೋಽಥ ಸುಪರ್ಣ ಆಸೀತ್' ಇತಿ ಮಾನಮ್ ।
ಕರ್ಮಾಭಿಮಾನೀ ಇತ್ಯತ್ರ 'ಕ್ರಿಯಾತ್ಮಾಪಾಕಶಾಸನಃ' ಇತಿ ಮಾನಮ್ । -(ಜ)

೧೧. ಲೋಕೇ ಯಥೈಕ ಏಲೋಕೋ ಬಹೂನರ್ಥಾನ್ ಪ್ರಕಾಶಯೇತ್ ।
ಏವಮೇಕಂ ಹರೇಃ ಕರ್ತು ಬಹೂನರ್ಥಾನ್ ಹಿ ಸಾಧಯೇತ್ ॥

೧೧. ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ -ಭಾಗವತ (೨/೧೦/೧೨)

ಅ: ಭಗವಂತನಾದ ಶ್ರೀರಾಮನ ಅಂತಹ ಬಲವನ್ನು ಕಣ್ಣಾರೆ ಕಂಡ ಕಪಿರಾಜನಾದ ಸುಗ್ರೀವ ಅವನನ್ನು ಮುಂದಿರಿಸಿಕೊಂಡು ಅಣ್ಣನಾದ ವಾಲಿಯ ಪಟ್ಟಣಕ್ಕೆ ತೆರಳಿದ; ಅವನ ಗರ್ಜನೆಯನ್ನು ಆಲಿಸಿ, ವಾಲಿ ತನ್ನ ಪತ್ನಿಯಾದ ತಾರೆ ಪರಿಪರಿಯಾಗಿ ತಡೆದರೂ ಲೆಕ್ಕಿಸದೆ, ತ್ವರೆಯಿಂದ ತನ್ನ ಬಿಲದಿಂದ ಹೊರಬಂದು ಅವನೆಡೆಗೆ ಧಾವಿಸಿದ.

ವಿ: ೧) ಶ್ರೀರಾಮನ ಅಂತಹ ಅದ್ಭುತಕಾರ್ಯಗಳಿಂದ ಅವನು ವಾಲಿಯನ್ನಿರಲಿ ಇಂದ್ರಾದಿ ಸಕಲ ಸುರರನ್ನು ಕೊಲ್ಲಬಲ್ಲ ಪರಮ ಸಮರ್ಥ ಎಂಬ ವಿಶ್ವಾಸವನ್ನು ತಳೆದ ಸುಗ್ರೀವ ಅವನನ್ನು ಮುಂದಿರಿಸಿಕೊಂಡೇ ವಾಲಿವಧೆಗೆಂದು ತೆರಳಿದ.

೨) ಪತ್ನಿಯಾದ ತಾರೆಯು ಪರಿಪರಿಯಿಂದ ತಡೆದರೂ ಲೆಕ್ಕಿಸದ ವಾಲಿ, ಸುಗ್ರೀವನ ಗರ್ಜನೆಯನ್ನು ಕೇಳುತ್ತಲೇ ಅವನ ಮೇಲೇರಿ ಬಂದ ಎಂದು ಭಾವ.

ತನ್ಮುಷ್ಟಿಭಿಃ ಪ್ರತಿಹತಃ ಪ್ರಯಯಾವಶಕ್ತಃ
ಸುಗ್ರೀವ ಆಶು ರಘುಪೋಽಪಿ ಹಿ ಧರ್ಮಮೀಕ್ಷನ್ ।
ನೈನಂ ಜಘಾನ ವಿದಿತಾಖಿಲಲೋಕಚೇಷ್ಟೋ-
ಽಪ್ಯೇನಂ ಸ ಆಹ ಯುಧಿ ವಾಂ ನ ಮಯಾ ವಿವಿಕ್ತೌ ॥ ೧೩ ॥

---

೧೨. ಸೇಂದ್ರಾನಪಿ ಸುರಾನ್ ಸರ್ವಾನ್ ತ್ವಂ ಬಾಣೈಃ ಪುರುಷರ್ಷಭ।
ಸಮರ್ಥಃ ಸಮರೇ ಹಂತುಂ ಕಿಂ ಪುನರ್ವಾಲಿನಂ ಪ್ರಭೋ ॥ –ವಾ. ರಾ.೪/೧೩/೮

೧೩. ಧರ್ಮಂ – ಲೋಕಧರ್ಮಂ ಈಕ್ಷನ್ – ಈಕ್ಷಯನ್ ಅಂತರ್ಣೀತೋ ಣಿಚ್ । ಧರ್ಮಂ ಪ್ರದರ್ಶಯಿತುಮೇವೇತಿ ವಕ್ಷ್ಯಮಾಣತ್ವಾತ್ । ವಿದಿತಾಖಿಲಲೋಕಚೇಷ್ಟತ್ವಾತ್ ಏತೌ ಸ್ವವೈರಂ ಮರಣೇಽಪಿ ನ ಮುಂಚತಃ ಇತಿ ಲೋಕಾನ್ ಪ್ರತಿ ಇಮಂ ವಕ್ಷ್ಯಮಾಣಂ ಧರ್ಮಂ ದರ್ಶಯನ್ನಪಿ ನ ಜಘಾನೇತಿ ಭಾವಃ। –(ವಾ)

೧೩. ಅತ್ರ ವಿಭಕ್ತಿವ್ಯತ್ಯಯೇನ ಇದಂ ವಿಡಂಬನಮಾತ್ರಂ ರಾಮೇಣ ಕೃತಮಿತಿ ಸೂಚಯತಿ। –(ವ)

'ವ್ಯತ್ಯಯೋ ಬಹುಲಂ' ಇತಿ ವಚನಾತ್ ವಾಂ ಯುವಾಂ ಮಯಾ ವಿವಿಕ್ತೌ 'ವಿಚರ್ ಪೃಥಗ್ಭಾವೇ' ಇತಿ ಧಾತೋಃ ಕರ್ತರಿ ಕ್ತ ಪ್ರತ್ಯಯೇ ಕೃತೇ ವಿಶೇಷೇಣ ಪೃಥಗ್ಭಾವವಂತೌ ನ – ನ ಜ್ಞಾತೌ। –(ವಾ)

೧೩. ಯದ್ವಾ ಮಾ – ಕಾಂತಿಃ ತಯಾ ಯುವರೋರುಭಯೋರಪಿ ಸಮಾನಕಾಂತ್ಯಾ ಕಾರಣೇನೇತ್ಯರ್ಥಃ। ವಾಂ, ವಿವಿಕ್ತೌ ವಿಶೇಷೇಣ ಪೃಥಗ್ಭಾವವಂತೌ ನ – ಅಹಂ ನಾಜ್ಞಾಸಿಷಮಿತಿ ಯೋಗ್ಯಕ್ರಿಯಾಧ್ಯಾಹಾರೇಣ ಯೋಜನಾ । ಅಸ್ಮಿನ್ ಪಕ್ಷೇ ವಿವಿಚ್ಯಾಜ್ಞಾನೇ ಹೇತೋರಪಿ ಕಥಿತತ್ವಾತ್ ಪ್ರಶಸ್ತೇಯಂ ಯೋಜನಾ । ರಾಮಾಯಣಕಥಾ-ಸಂಗ್ರಾಹಕತ್ವಾತ್ ಇಯಮೇವ ಗ್ರಂಥಕೃತೋಽಭಿಮತೇತಿ ಜ್ಞಾತವ್ಯಮ್ । –(ವಾ)

೧೩. ಏವಂ ವದತೋ ರಾಮಸ್ಯಾಭಿಪ್ರಾಯಸ್ತು ಯುವಯೋಃ ಸಾದೃಶ್ಯಾತ್ ಮಯಾ ಲೌಕಿಕಬಂಧಾ ವಿನಾ ಯುವಾಂ ನ ವಿವಿಕ್ತೌ। ನ ವಿವೇಚಿತೌ ಅತಃ ಶರೋ ನ ಮುಕ್ತ ಇತ್ಯರ್ಥಃ। ಏತದಭಿಪ್ರಾಯೇಣೈವೋತ್ತರತ್ರಲತಯಾ ವಿವೇಚನಂ ಕೃತಮಿತಿ ಜ್ಞೇಯಮ್ । ಅನ್ಯಥಾ 'ನ ವಿಷ್ಣೋರ್ವಚನಂ ಕ್ವಾಪಿ ಮೃಷಾ ಭವತಿ ಕಸ್ಯಚಿತ್' (೯/೩೯) ಇತ್ಯುಕ್ತವಿರೋಧಃ ಸ್ಯಾತ್ । –(ರಾ.)

ಅ: ವಾಲಿಯ ಮುಷ್ಟಿಯ ಪೆಟ್ಟುಗಳಿಂದ ಬಹಳವಾಗಿ ಹೊಡೆಯಲ್ಪಟ್ಟ ಸುಗ್ರೀವ ಅವುಗಳನ್ನು ತಡೆದುಕೊಳ್ಳಲು ಅಶಕ್ತನಾಗಿ ಯುದ್ಧವನ್ನು ತೊರೆದು ಪಲಾಯನ ಮಾಡಿದ. ಶ್ರೀರಾಮ ಸಕಲಲೋಕಗಳ ಸಕಲಕಾರ್ಯಗಳನ್ನು ಪೂರ್ಣವಾಗಿ ಬಲ್ಲ ಮಹನೀಯನು; ಆದರೂ ಲೋಕಕ್ಕೆ ಧರ್ಮವನ್ನು ತಿಳಿಸಲೆಂದು ಆಗಲೇ ಆ ವಾಲಿಯನ್ನು ಸಂಹರಿಸಲಿಲ್ಲ; ಮತ್ತು ಸುಗ್ರೀವನಿಗೆ ಹೇಳಿದ : ''ಯುದ್ಧದಲ್ಲಿ ನಿಮ್ಮಿಬ್ಬರನ್ನು ನಾನು ಪ್ರತ್ಯೇಕಿಸಿ ತಿಳಿಯದಾದೆ!''.

ವಿ: ೧) ಇಲ್ಲಿ **'ಧರ್ಮಮೀಕ್ಷನ್'** ಎಂಬುದಕ್ಕೆ ಧರ್ಮವನ್ನು ತೋರಿಸಿಕೊಡಲೆಂದು ಎಂದು ಅರ್ಥ. 'ಧರ್ಮಂ ಪ್ರದರ್ಶಯಿತುಮೇವ' ಎಂಬುದಾಗಿ ಶ್ರೀಮದಾಚಾರ್ಯರೇ ಮುಂದೆ (ಶ್ಲೋ.೧೬) ಹೇಳುವರು.

೨) 'ವಾಂ' ಎಂಬುದಕ್ಕೆ 'ಯುವಾಂ' ಎಂದರ್ಥ. 'ಯುವಾಂ ವಿವಿಕ್ತೌ' ಎಂಬಲ್ಲಿನ ವಿಭಕ್ತಿ ವ್ಯತ್ಯಯವು 'ಶ್ರೀರಾಮನು ಮಾಡುತ್ತಿರುವುದು ವಿಡಂಬನ ಮಾತ್ರ' ಎಂಬುದಕ್ಕೆ ಸೂಚಕ.

೩) 'ಮಾ' ಎಂದರೆ 'ಕಾಂತಿ' ಎಂದರ್ಥ. ಎಂದರೆ 'ಮಯಾ' 'ನಿಮ್ಮಿಬ್ಬರದೂ ಸಮಾನ–ಕಾಂತಿ'ಯಾದ ಕಾರಣ ಇಬ್ಬರನ್ನು ಪ್ರತ್ಯೇಕಿಸಿ ತಿಳಿಯಲಾಗಲಿಲ್ಲ ಎಂಬ ಅರ್ಥವೂ ಸೂಚಿತ.

೪) ಶ್ರೀರಾಮನು ತಿಳಿಸಬಯಸಿದ ಧರ್ಮವು ಯಾವುದು ಎಂಬುದನ್ನು ಮುಂದಿನ ಎರಡು ಶ್ಲೋಕಗಳಲ್ಲಿ ತಿಳಿಸಿರುವರು.

ಸೋದರರ ಮಧ್ಯ ಇತರರ ಮಧ್ಯಪ್ರವೇಶ ಅನುಚಿತ

ಸೌಭ್ರಾತ್ರಮೇಷ ಯದಿ ವಾಂಛತಿ ವಾಲಿನೈವ
ನಾಹಂ ನಿರಾಗಸಮಥಾಗ್ರಜನಿಂ ಹನಿಷ್ಯೇ ।
ದೀರ್ಘಃ ಸಹೋದರಗತೋ ನ ಭವೇದ್ಧಿ ಕೋಪೋ
ದೀರ್ಘೋಽಪಿ ಕಾರಣಮೃತೇ ವಿನಿವರ್ತತೇ ಚ ॥ ೧೪ ॥

---

೧೪. ಸು ಶೋಭನೋ ಭ್ರಾತಾ ಯಸ್ಯ ಚೇತಸಿ ಸುಭ್ರಾತಾ ತಸ್ಯ ಭಾವಃ ಸೌಭ್ರಾತ್ರಂ ಅಗ್ರಜೇ ಶೋಭನತ್ವ-ಬುದ್ಧಿಮಿತ್ಯರ್ಥಃ । –(ವಾ)

೧೪. ಅಥ ಅದ್ಯತನವೈರಾನಂತರಂ ವಿಷಃ ಸೌಭ್ರಾತ್ರಂ ಯದಿ ವಾಂಛತಿ ಇತಿ ಅಥ ಪದಸ್ಯ ಪೂರ್ವತ್ರಾಕರ್ಷಣೇನ ಯೋಜನಾ । ಅಥ ತರ್ಹಿ ನಿಹನಿಷ್ಯೇ ಇತಿ ವಾ । –(ವಾ)

೧೪. ಕಾರಣಂ – ಸಂಧಿಕಾರಣಂ ಧನಾದಿಕಂ ಋತೇ ವಿನಿವರ್ತತೇ ಚ ಸಹೋದರತ್ವಪ್ರಯುಕ್ತಸಹಜ-ಸ್ನೇಹೋದ್ಭೋಧೇ ಸತಿ ಸ್ವಯಮೇವ ನಿವರ್ತತೇ ಇತಿ ಭಾವಃ । –(ವಾ)

೧೪. ಹಿ – ಪ್ರಸಿದ್ಧಿಃ ಧರ್ಮಶಾಸ್ತ್ರೇಷು ಇತಿ ಶೇಷಃ । –(ಜ)

ಅ: ಇವನು ವಾಲಿಯೊಂದಿಗೆ ಸೋದರವಾತ್ಸಲ್ಯ ಬಯಸುವನಾದಲ್ಲಿ, ನಾನು ಅಪರಾಧಿಯಲ್ಲದ ಇವನ ಅಣ್ಣನನ್ನು ಕೊಲ್ಲಬೇಕಿಲ್ಲ. ಅಣ್ಣತಮ್ಮಂದಿರಲ್ಲಿನ ವಿರಸ ಬಹುಕಾಲ ಇರುವಂತಹುದಲ್ಲ; ಬಹುಕಾಲದ ಕೋಪ ಸಹ ಕಾರಣವಿಲ್ಲದೆ ಶಮನ ಹೊಂದುವುದು ಸಹ.

ಕೋಪಃ ಸಹೋದರಜನೇ ಪುನರಂತಕಾಲೇ
ಪ್ರಾಯೋ ನಿವೃತ್ತಿಮುಪಗಚ್ಛತಿ ತಾಪಕಶ್ಚ।
ಏಕಸ್ಯ ಭಂಗ ಇತಿ ನೈವ ರುಟಿತ್ಯಪಾಸ್ತ-
ದೋಷೋ ನಿಹಂತುಮಿಹ ಯೋಗ್ಯ ಇತಿ ಸ್ಮ ಮೇನೇ ॥ ೧೫ ॥

ಅ: ಸೋದರಜನರ ವಿರಸ ಮರಣಕಾಲದಲ್ಲಿ ಸಾಮಾನ್ಯವಾಗಿ ಶಮನ ಹೊಂದುವುದು; ಒಬ್ಬನ ಸಾವಿಗೆ ಕಾರಣವಾದಾಗ ತಾಪಕರವೂ ಆಗುವುದು; ಆದ್ದರಿಂದ ಯಾವ ಅಪರಾಧವನ್ನೂ ಎಸಗದ ವಾಲಿಯನ್ನು ಕೊಲ್ಲುವುದು ತರವಲ್ಲ ಎಂದು ಶ್ರೀರಾಮ ಭಾವಿಸಿದ.

ತಸ್ಮಾನ್ನ ಬಂಧುಜನಗೇ ಜನಿತೇ ವಿರೋಧೇ
ಕಾರ್ಯೋ ವಧಸ್ತದನುಬಂಧಿಭಿರಾಶ್ವಿತೀಹ।
ಧರ್ಮಂ ಪ್ರದರ್ಶಯಿತುಮೇವ ರವೇಃ ಸುತಸ್ಯ
ಭಾವೀ ನ ತಾಪ ಇತಿ ವಿಚ್ಚ ನ ತಂ ಜಘಾನ ॥ ೧೬ ॥

ಅ: ಆದ್ದರಿಂದ ಬಂಧುಜನರ ವಿಷಯದಲ್ಲಿ ವೈರ ಉಂಟಾದಾಗ ಅವರ ಬಂಧುಜನರು ಒಬ್ಬನನ್ನು ಅವಸರಪಟ್ಟು ಕೊಲ್ಲಕೂಡದು ಎಂಬ ಧರ್ಮವನ್ನು ಚೆನ್ನಾಗಿ ತಿಳಿಸಿಕೊಡಲೆಂದೇ ಶ್ರೀರಾಮ ವಾಲಿಯನ್ನು ಆ ಬಾರಿಯೇ ಕೊಲ್ಲಲಿಲ್ಲ. ಸೂರ್ಯಸುತನಾದ ಸುಗ್ರೀವನಿಗೆ ಅಣ್ಣನನ್ನು ಕೊಲ್ಲಿಸಿದ ಕಾರಣ ಮುಂದೆ ವಿಶೇಷವ್ಯಥೆಯೂ ಆಗಕೂಡದು ಎಂಬ ಮತ್ತೊಂದು ಕಾರಣದಿಂದಲೂ ಸಹ ಆಗ ವಾಲಿಯನ್ನು ಕೊಲ್ಲಲಿಲ್ಲ.

ವಿ: ೧) ಅಣ್ಣತಮ್ಮಂದಿರಲ್ಲಿನ ವೈರ ಸಾಮಾನ್ಯವಾಗಿ ಬಹುಕಾಲ ಇರುಲಾರದು; ಇದ್ದರೂ ಅದು ಯಾವ ಕಾರಣವೂ ಇಲ್ಲದೆ ಶಮನ ಹೊಂದುವುದು; ಅವರಲ್ಲಿ ಯಾರೊಬ್ಬರಾದರೂ ಸಾಯುವ ಪ್ರಸಂಗ ಒದಗಿದಾಗಲಂತೂ ಅದು ಸಾಮಾನ್ಯವಾಗಿ ಪೂರ್ಣ ನಿವೃತ್ತಿಯಾಗುವುದು ಮತ್ತು ಅವರಲ್ಲಿ ಒಬ್ಬರ ಸಾವೂ ಉಳಿದವನ ಪಾಲಿಗೆ ಅಪಾರ ನೋವಿಗೆ ಕಾರಣವಾಗುವುದು. ಆದ್ದರಿಂದ

---

೧೫. ತಾಪಕಃ। ಏಕಸ್ಯ ಭಂಗೇ ವಧೇ ಸತಿ ಪಶ್ಚಾತ್ ತಾಪಜನಕಃ। ನಿಹಂತುಮಿಹ ಯೋಗ್ಯ ಇತಿ ಸ್ಮ ಇತ್ಯತ್ರ ಇತಿ ಪೂರ್ವೋಕ್ತಪ್ರಕಾರೇಣ ಸ್ಮ ಲೌಕಿಕಪ್ರಸಿದ್ಧಿಂ ಮೇನೇ। –(ವಾ)

ಮಿತ್ರಜನರು ಅಣ್ಣತಮ್ಮಂದಿರಲ್ಲಿ ವೈರ ಉಂಟಾದಾಗ ತಕ್ಷಣ ಒಬ್ಬನ ಪಕ್ಷವನ್ನು ವಹಿಸಿ ಉಳಿದವನ ಸಾವಿಗೆ ಕಾರಣವಾಗಕೂಡದು ಎಂಬ ಧರ್ಮವನ್ನು ಲೋಕಕ್ಕೆ ತೋರಿಸಿಕೊಡುವ ಸಲುವಾಗಿ ಶ್ರೀರಾಮ ಆಗ ವಾಲಿಯನ್ನು ಕೊಲ್ಲಲಿಲ್ಲ ಎಂದು ಭಾವ.

೨) ಬಂಧುಜನರನ್ನು ಕೊಲ್ಲಬೇಕಲ್ಲ ಎಂಬ ನೋವಿನಿಂದ ಇನ್ನೇನು ಯುದ್ಧ ಪ್ರಾರಂಭ–ವಾಗಬೇಕಿದ್ದಾಗ ಶಸ್ತ್ರಸಂನ್ಯಾಸಕ್ಕೆ ಸಿದ್ಧನಾದ ಅರ್ಜುನ, ಇವನು ಸಾಯುವನಲ್ಲ ಎಂದು ಅವನ ಮೇಲೆ ಅಡ್ಡಹಿಡಿದು ತನ್ನ ರೆಕ್ಕೆಗಳನ್ನು ಸುಟ್ಟುಕೊಂಡ ಸಂಪಾತಿ (೬/೪೯, ೫೦) ಮೊದಲಾದವರು ಇದಕ್ಕೆ ನಿದರ್ಶನ.

೩) ಸಾಮನ್ಯವಾಗಿ ಇದು ಸೋದರರಿಗೆ ಸಂಬಂಧಿಸಿದ ವಿಷಯ ಎಂಬುದನ್ನು 'ಪ್ರಾಯಃ' ಎಂಬ ಪದದಿಂದ ಸೂಚಿಸಿರುವರು; ವಾಲಿ, ಸುಗ್ರೀವ, ಕರ್ಣ ಮೊದಲಾದವರ ವಿಷಯದಲ್ಲಿ ಹೀಗಾಗಲಿಲ್ಲ ಎಂಬುದನ್ನು 'ಪ್ರಾಯಃ' ಎಂಬ ಪದದಿಂದ ಸೂಚಿಸಿರುವರು.

ಶ್ರೀರಾಮನಿಗೆ ಅಜ್ಞಾನವೇ

ಯಃ ಪ್ರೇರಕಃ ಸಕಲಶೇಮುಷಿಸಂತತೇಶ್ಚ
ತಸ್ಯಾಜ್ಞತಾ ಕುತ ಇಹೇಶವರಸ್ಯ ವಿಷ್ಣೋಃ ।
ತೇನೋದಿತೋಽಥ ಸುದೃಢಂ ಪುನರಾಗತೇನ
ವಜ್ರೋಪಮಂ ಶರಮಮೂಮುಚದಿಂದ್ರಸೂನೌ ॥ ೧೭ ॥

ಅ: ಸಕಲರ ಬುದ್ಧಿಸಮೂಹಗಳನ್ನೂ ಪ್ರೇರಿಸುವ ಮಹಾವಿಷ್ಣು ಶ್ರೀರಾಮ; ಅವನು ಮನೋಭಿಮಾನಿಯಾದ ಶಿವನಿಗಿಂತ ಉತ್ತಮನು; ಅಂಥವನಿಗೆ ಇಲ್ಲಿ ಅಜ್ಞಾನವು ಹೇಗೆ ತಾನೇ ಕೂಡೀತು? ಯುದ್ಧಕ್ಕೆಂದು ಮರಳಿ ಬಂದ ಸುಗ್ರೀವನು ವಾಲಿಯನ್ನು ಕೊಲ್ಲಲೇಬೇಕೆಂದು ದೃಢವಾಗಿ ನುಡಿಯಲು ಆ ರಾಮನು ವಜ್ರಸದೃಶವಾದ ಶರವನ್ನು ಇಂದ್ರಪುತ್ರನಾದ ವಾಲಿಯ ಮೇಲೆ ಬಿಟ್ಟ.

ವಿ: ಶ್ರೀರಾಮನು ಸ್ವತಃ ಮಹಾವಿಷ್ಣು; ಸಕಲರ ಬುದ್ಧಿಗಳಿಗೂ ಮುಖ್ಯಪ್ರೇರಕನು; ಮನೋಭಿಮಾನಿ ರುದ್ರದೇವರಿಗಿಂತ ಮಿಗಿಲಾದವನು; ಎಂದ ಮೇಲೆ ಅವನಿಗೆಂತು ಅಜ್ಞಾನ? ಎಂದು ಭಾವ.

---

೧೭. ಯಸ್ಮಾದ್ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ । ಈಶಾವಾಸ್ಯಭಾಷ್ಯ

ಸುಗ್ರೀವನ ಕೊರಳಲ್ಲಿ ಹನುಮಂತ ಹಾಕಿದ ಲತಾಮಾಲೆ - ವಾಲಿವಧೆ

ರಾಮಾಜ್ಞಯೈವ ಲತಯಾ ರವಿಜೇ ವಿಭಕ್ತೇ
ವಾಯೋಃ ಸುತೇನ ರಘುಪೇಣ ಶರೇ ಪ್ರಮುಕ್ತೇ ।
ಶ್ರುತ್ವಾऽಸ್ಯ ಶಬ್ದಮತುಲಂ ಹೃದಿ ತೇನ ವಿದ್ಧ
ಇಂದ್ರಾತ್ಮಜೋ ಗಿರಿರಿವಾಪತದಾಶು ಸನ್ನಃ ॥ ೧೮ ॥

ಅ: ಶ್ರೀರಾಮನ ಆದೇಶದಂತೆ ವಾಯುಸುತನಾದ ಹನುಮಂತನಿಂದ ರವಿಸುತನಾದ ಸುಗ್ರೀವನು ಪ್ರತ್ಯೇಕಿಸಲ್ಪಡಲು, ರಘುಪತಿಯಾದ ಶ್ರೀರಾಮ ವಾಲಿಯ ಕೇಳಿ ಬಾಣವನ್ನು ವಾಲಿಯ ಮೇಲೆ ಬಿಟ್ಟ. ಇಂದ್ರಪುತ್ರನಾದ ವಾಲಿ ಸಂಕಟಕ್ಕೊಳಗಾಗಿ ಗಿರಿಯಂತೆ ತಕ್ಷಣ ಕೆಳಕ್ಕೆ ಬಿದ್ದ.

ವಿ: ೧) ಈ ಬಾರಿ ಸುಗ್ರೀವನನ್ನು ಗುರುತಿಸಲೋ ಎಂಬಂತೆ ಶ್ರೀರಾಮ ಅವನ ಕೊರಳಲ್ಲಿ ಹನುಮಂತನಿಂದ ಒಂದು ಲತಾಮಾಲೆಯನ್ನು ಹಾಕಿಸಿ ಯುದ್ಧಕ್ಕೆ ಕಳುಹಿಸಿದ; ಅದರಿಂದ ಸುಗ್ರೀವನನ್ನು ಗುರುತಿಸಿದಂತೆ ವರ್ತಿಸಿ ವಾಲಿಯನ್ನು ಬಾಣದಿಂದ ಸಂಹರಿಸಿದ ಎಂದು ಭಾವ.

೨) ಭಗವಂತನು 'ತನ್ನ ಭಕ್ತರು' ಎಂದು ಗುರುತಿಸಿ ಉದ್ಧರಿಸುವುದು ಹನುಮಂತನ (ಶ್ರೀವಾಯುದೇವರ) ಅನುಗ್ರಹದ ಮಾಲೆಯನ್ನು ಹೃದಯದಲ್ಲಿ ಧರಿಸಿದವರನ್ನು ಮಾತ್ರ ಎಂಬ ತತ್ತ್ವ ಇಲ್ಲಿ ಸೂಚಿತ.

೩) ಎಂದರೆ ಶ್ರೀವಾಯುದೇವರ ಸಿದ್ಧಾಂತನವರತ್ನಮಾಲೆಯನ್ನು ಹೃದಯದಲ್ಲಿ ಸದಾ ಧರಿಸಿದಾಗ ಮಾತ್ರ ಎಂದು ತಿಳಿಯಬೇಕು.

---

೧೮. ವಾಯೋಃ ಸುತೇನ ರವಿಜೇ ಲತಾಲಂಬನಂ ಆಜ್ಞಾಪಾಲನಾಯೈವ ಕೃತಂ ನ ತು ರಾಮಸ್ಯಾಜ್ಞಾನಶಂಕಯಾ ಇತಿ ಭಾವೇನ ರಾಮಾಜ್ಞಯೈವ ಇತಿ ಏವಕಾರಃ । 'ವಯ ಗತೌ' ಇತಿ ಧಾತೋಃ ತಾಚ್ಛೀಲ್ಯಾರ್ಥೇ ಅಣ್ ಪ್ರತ್ಯಯೇ ಕೃತೇ ಣಿಚಿ ಚೇತಿ ಧಾತ್ವಾದೇರ್ವಕಾರಸ್ಯ ವೃದ್ಧೌ ಕೃತಾಯಾಂ ಗತ್ಯರ್ಥಾನಾಂ ಜ್ಞಾನಾರ್ಥತ್ವಾತ್ ವಾಯುರನಾದಿತೋऽಷ್ಟಭಿರ್ವೃದ್ಧಜ್ಞಾನಶೀಲಃ ಇತಿ ಸಿದ್ಧ್ಯತಿ । ತತ್ಪುತ್ರಸ್ಯ ಕ್ವಾಜ್ಞಾನಮಿತಿ ಸೂಚಯಿತುಂ 'ವಾಯೋಃ ಸುತೇನ' ಇತ್ಯುಕ್ತಮ್ ॥ -(ವಾ)

೧೮. ಹನುಮನ ನಂಬದ ವಾಲಿಯು ಬಿದ್ದ -(ಶ್ರೀಪುರಂದರದಾಸರು)

೧೮. ಸುಗ್ರೀವಸ್ಯ ತದಾ ಮಾಲಾಂ ಹನುಮಾನ್ ಕಂಠ ಆಸಜತ್ ॥ - ಇತಿ ಮಹಾಭಾರತೇ (ವನ. ೨೮೦/೩೩)

೧೮. ಲಕ್ಷ್ಮಣೋ ಗಜಪುಷ್ಪೀಂ ತಾಂ ತಸ್ಯ ಕಂಠೇ ವ್ಯಸರ್ಜಯತ್ ॥ - ಇತಿ ವಾ. ರಾ. (೪/೧೨/೪೦)/ ಪುರುಷವ್ಯತ್ಯಾಸಃ ಸಂಭಾವ್ಯತೇ । ಲಕ್ಷಣಯುಕ್ತಃ - ದ್ವಾತ್ರಿಂಶಲ್ಲಕ್ಷಣೋಪೇತಃ ಹನುಮಾನ್ ಇತಿ ಯೌಗಿಕ-ಪ್ರಯೋಗೋ ವಾ ।

೪) ಇಂದ್ರದತ್ತವಾದ ಮಾಲೆ ವಾಲಿಯ ಕೊರಳಲ್ಲಿ ಆ ಮೊದಲೇ ಇತ್ತು; ಆದರೂ ಶ್ರೀರಾಮನಿಗೆ ಇವನು ಸುಗ್ರೀವ ಎಂದು ನಿರ್ಣಯವಾಗಲು ಹನುಮಂತನು ಹಾಕುವ ಮಾಲೆಯೇ ಆಗಬೇಕು ಎಂಬುದು ಶ್ರೀವಾಯುದೇವರ ಮಹತ್ತ್ವವನ್ನು ಸೂಚಿಸುವ ವಿಷಯ.

೫) ಹನುಮಂತನು ಸುಗ್ರೀವನ ಕೊರಳಲ್ಲಿ ಲತೆಯನ್ನು ತೊಡಿಸಿದ್ದು, ಶ್ರೀರಾಮದೇವರ ಆದೇಶವನ್ನು ಪಾಲಿಸಲೆಂದೇ ಹೊರತು, ಶ್ರೀರಾಮನಿಗೆ ಆದರಿಂದ ಸುಗ್ರೀವನ ಗುರುತು ಹಿಡಿಯಲು ನೆರವಾಗಲಿ ಎಂಬ ತಪ್ಪು ತಿಳುವಳಿಕೆಯಿಂದಲ್ಲ; ಶ್ರೀರಾಮದೇವರು ನಿರವಧಿಕ ಸರ್ವಜ್ಞ ಎಂದು ಬಲ್ಲ ಅವರಿಗೆ ಇಂತಹ ಮಿಥ್ಯಾಜ್ಞಾನ ಎಂತು ಬಂದೀತು? ಎಂದು ತಿಳಿಸಲೆಂದೇ 'ವಾಯೋಃ ಸುತೇನ' ಎಂಬ ಪದವನ್ನು ಬಳಸಿರುವರು.

೬) ವಾಲಿಯು ಇಂದ್ರಾವತಾರ; ಇಂದ್ರನ ವಜ್ರಾಯುಧದ ಪೆಟ್ಟಿಗೆ ಪರ್ವತಗಳು ಉರುಳುತ್ತಿದ್ದವು; ಆದರೆ ಶ್ರೀರಾಮನ ವಜ್ರದಂತಹ ಬಾಣದ ಪೆಟ್ಟಿಗೆ ಇಂದ್ರಾವತಾರನಾದ ಅವನೇ ಗಿರಿಯಂತೆ ಉರುಳಿದನು ಎಂಬಲ್ಲಿನ ಸ್ವಾರಸ್ಯವನ್ನು ಗಮನಿಸಬೇಕು. ಶ್ರೀವಾಯುದೇವರ ಅನುಗ್ರಹಕ್ಕೆ ಪಾತ್ರರಾಗದವರು ಹೀಗೆ ಶ್ರೀಹರಿಯ ಅಗ್ರಹಕ್ಕೆ ಪಾತ್ರರಾಗಿ ಕೆಳಕ್ಕೆ ಬೀಳುವುದು ಅನಿವಾರ್ಯ ಎಂದು ಭಾವ.

ವಾಲಿವಧೆಯ ಹಿನ್ನೆಲೆ

ಭಕ್ತೋ ಮಮೈಷ ಯದಿ ಮಾಮಭಿಪಶ್ಯತೀಹ
ಪಾದೌ ಧ್ರುವಂ ಮಮ ಸಮೇಷ್ಯತಿ ನಿರ್ವಿಚಾರಃ ।
ಯೋಗ್ಯೋ ವಧೋ ನ ಹಿ ಜನಸ್ಯ ಪದಾನತಸ್ಯ
ರಾಜ್ಯಾರ್ಥಿನಾ ರವಿಸುತೇನ ವಧೋಽರ್ಥಿತಶ್ಚ ॥ ೧೯ ॥

ಅ: 'ಈ ವಾಲಿಯು ನನ್ನ ಭಕ್ತ; ನನ್ನನ್ನೇನಾದರೂ ಇವನು ಕಂಡರೆ, ಯಾವ ವಿಚಾರವನ್ನೂ ಮಾಡದೆ ನಿಶ್ಚಯವಾಗಿಯೂ ನನ್ನ ಚರಣಗಳಿಗೆ ಎರಗುವನು, ಕಾಲಿಗೆ ಬಿದ್ದ ಜನರನ್ನು ಕೊಲ್ಲುವುದು ಎಂದೂ ಉಚಿತವಲ್ಲ; ಆದರೆ ರಾಜ್ಯವನ್ನು ಬಯಸಿರುವ ಸೂರ್ಯಪುತ್ರ ಸುಗ್ರೀವನು ಇವನ ವಧೆಯನ್ನೇ ಬೇಡಿರುವನು.

ವಿ: ಸುಗ್ರೀವನಂತೆ ವಾಲಿಯು ಶ್ರೀರಾಮನನ್ನು ಪರೀಕ್ಷೆ ಮಾಡುವ ಗೋಜಿಗೆ ಹೋಗದ ಉತ್ತಮಭಕ್ತ ಎಂಬುದನ್ನು 'ನಿರ್ವಿಚಾರ' ಎಂಬ ಪದದಿಂದ ತಿಳಿಸಿರುವರು.

ಕಾರ್ಯಂ ಹ್ಯಭೀಷ್ಟಮಪಿ ತತ್ಪ್ರಣತಸ್ಯ ಪೂರ್ವಂ
ಶಸ್ತೋ ವಧೋ ನ ಪದಯೋಃ ಪ್ರಣತಸ್ಯ ಚೈವ ।
ತಸ್ಮಾದದೃಶ್ಯತನುರೇವ ನಿಹನ್ಮಿ ಶಕ್ರ-
ಪುತ್ರಂ ತ್ವಿತಿ ಸ್ಮ ತಮದೃಶ್ಯತಯಾ ಜಘಾನ ॥ ೨೦ ॥

ಅ: ''ಮೊದಲು ಶರಣು ಬಂದವನ ಅಭೀಷ್ಟವನ್ನು ಈಡೇರಿಸುವುದು ಕರ್ತವ್ಯ; ಅದರಂತೆ ಶರಣು ಬಂದವನನ್ನು ಕೊಲ್ಲುವುದು ಸಹ ತರವಲ್ಲ; ಆದ್ದರಿಂದ ನಾನು ಇವನ ಕಣ್ಣಿಗೆ ಬೀಳದೆಯೇ ಇವನನ್ನು ಸಂಹರಿಸುವೆ'' ಹೀಗೆ ವಿಚಾರಮಾಡಿ ಶ್ರೀರಾಮ ಮರೆಯಲ್ಲಿದ್ದೇ ವಾಲಿಯನ್ನು ಸಂಹರಿಸಿದ.

ವಿ: ೧) ಶ್ರೀರಾಮನು ವಾಲಿಯನ್ನು ಅವನ ಕಣ್ಣಿಗೆ ಬೀಳದಂತೆ ಮರೆಯಲ್ಲಿದ್ದೇ ಏಕೆ ಸಂಹರಿಸಿದ? ಎಂಬ ಮುಖ್ಯವಾದ ಶಂಕೆಯನ್ನು ಶ್ರೀಮದಾಚಾರ್ಯರು ಈ ಎರಡು ಶ್ಲೋಕಗಳಲ್ಲಿ ಪರಿಹರಿಸಿರುವರು.

೨) ವಾಲಿಯು ಸುಗ್ರೀವನಿಗಿಂತಲೂ ಮಿಗಿಲಾದ ಭಕ್ತ; ತಾನು ಅವನ ಕಣ್ಣಿಗೆ ಬಿದ್ದರೆ, ಅವನು ತತ್ಷಣ ಧಾವಿಸಿ ಕಾಲಿಗೆ ಬೀಳುವನು, ಹಾಗೆ ಶರಣು ಬಂದವನನ್ನು ಸಂಹರಿಸುವುದು ತರವಲ್ಲ; ಸುಗ್ರೀವನು ಅವನ ಸಂಹಾರವಾಗಲೇಬೇಕು ಎಂದು ತನ್ನನ್ನು ಈಗಾಗಲೇ ಶರಣು ಹೊಕ್ಕಿರುವನು ಎಂದರೆ ಅವನನ್ನು ಕೈಬಿಡುವಂತಿಲ್ಲ; ಆದ್ದರಿಂದ ವಾಲಿಯ ಕಣ್ಣಿಗೆ ಗೋಚರಿಸದೇ ಸಂಹರಿಸುವುದೇ ಯುಕ್ತ; ಈ ವಿಚಾರದಿಂದಲೆ ಶ್ರೀರಾಮನು ವಾಲಿಯನ್ನು ಮರೆಯಾಗಿ ಕೊಂದನೇ ಹೊರತು, ಅಂಜಿಕೆ ಮೊದಲಾದ ಕಾರಣಗಳಿಂದಲ್ಲ ಎಂದು ಭಾವ.

೩) ವಾಲಿಯು ಸುಗ್ರೀವನಿಗಿಂತ ಮಿಗಿಲಾದ ಶ್ರೀರಾಮಭಕ್ತ ಎಂಬುದು ವಾಲ್ಮೀಕಿ–ರಾಮಾಯಣದಲ್ಲಿಮಾತ್ರವಲ್ಲದೆ ಭಾಸ, ಭವಭೂತಿ, ಮೊದಲಾದ ಕವಿಗಳ ಕೃತಿಗಳಲ್ಲೂ ಬಂದಿದೆ.

---

೨೦. ಶಕ್ರಪುತ್ರಂ ತ್ವಿತಿ 'ಸ್ಮ' ಇತ್ಯತ್ರ 'ಸ್ಮ' ಪದೇನ ವಾಲಿನೋ ಬಲಾದ್ಭೀತಃ ಸನ್ ವಿಲೀನ ಏವ ತಂ ಜಘಾನ ಇತಿ ಶಂಕಾವಾರಣಾಯ, 'ಭೀಷ್ಮಾಽಸ್ಮಾದ್ವಾತಃ ಪವತೇ' ಇತಿ ಶ್ರುತಿಪ್ರಸಿದ್ಧಿಂ ಸೂಚಯತಿ। ವಾಲಿನೋಽಸ್ಯ ಸಾಧ್ಯಸಪ್ತತಾಲ-ಚೂರ್ಣೀಕರಣಾದಿನಾ ವಾಲಿನೋಽಪ್ಯತಿಸಮರ್ಥಸ್ಯ ಕುತಸ್ತಸ್ಮಾದ್ಭೀತಿರಿತಿ ಪ್ರಾತ್ಯಕ್ಷಿಕಪ್ರಸಿದ್ಧಿಂ ಚ ಸೂಚಯತೀತಿ ಭಾವಃ ॥ –(ವಾ)

೨೦. ಸ್ಮಪದೇನ ಸೂಚಿತಮರ್ಥಂ ಸ್ವಯಮೇವ ಸ್ಪಷ್ಟಯತಿ । ಯಃ ಪ್ರೇರಕ ಇತಿ । –(ವಾ)

೪) ವಾಲಿಯು ತನ್ನ ಭಕ್ತನಾಗಿದ್ದರೂ ತನ್ನ ಪರಮಭಕ್ತನಾದ ಹನುಮಂತನನ್ನು ಆಶ್ರಯಿಸದೆ ಇದ್ದದ್ದರಿಂದ ಅವನ ಕಣ್ಣಿಗೆ ಕಾಣುವುದಾಗಲಿ, ಅವನಿಂದ ನಮಸ್ಕರಿಸಿಕೊಳ್ಳುವುದಾಗಲಿ ಶ್ರೀರಾಮನಿಗೆ ಬೇಕಿಲ್ಲ ಎಂಬುದು ಇಲ್ಲಿಯ ಧ್ವನಿ.

೫) ವಾಲಿಯ ಬಲದಿಂದ ಭೀತನಾಗಿ ಶ್ರೀರಾಮನು ಮರೆಯಾಗಿ ಅವನನ್ನು ಹೊಡೆದ ಎಂಬ ಶಂಕೆಯು, **'ಭೀಷಾऽಸ್ಮಾದ್ವಾತಃ ಪವತೇ'** ಎಂಬ ಶ್ರುತಿಪ್ರಸಿದ್ಧಿಗೂ, ವಾಲಿಗೂ ಅಸಾಧ್ಯ– ವಾಗಿದ್ದ ಸಪ್ತತಾಲಗಳ ಧ್ವಂಸ, ಮೊದಲಾದ ಕಾರ್ಯಗಳಿಂದ ಅವನಿಗಿಂತ ಅತ್ಯಂತ ಹೆಚ್ಚು ಸಮರ್ಥನಾದ ರಾಮನಿಗೆ ಅವನ ಭೀತಿ ಎಲ್ಲಿಯದು? ಎಂಬ ಪ್ರಾತ್ಯಕ್ಷಿಕಪ್ರಸಿದ್ಧಿಗೂ ವಿರುದ್ಧ ಎಂಬುದನ್ನು **'ಸ್ಮ'** ಎಂಬ ಪದದಿಂದ ಸೂಚಿಸಿರುವರು.

೬) ವಾಲಿಯು ತನ್ನ ತಮ್ಮನಾದ ಸುಗ್ರೀವನ ಸತಿಗಳುಪಿದ ಅಪರಾಧಿ; ಆದ್ದರಿಂದ ಅವನನ್ನು ಶ್ರೀರಾಮ ವಧಿಸಿದ; ಅಲ್ಲದೆ ಅವನೊಬ್ಬ ಕಪಿ; ಎಂದರೆ ಒಂದು ಮೃಗ; ಮೃಗದ ಬೇಟೆ ಮರೆಯಿಂದಲೇ ಹೊರತು ಎದುರಿನಿಂದಲ್ಲ; ಎಂದೇ ಅವನನ್ನು ಶ್ರೀರಾಮನು ಮರೆಯಲ್ಲಿ ನಿಂತು ಕೊಂದ ಎಂಬ ಸಮರ್ಥನೆ ವಾಲ್ಮೀಕಿರಾಮಾಯಣದಲ್ಲಿ ಬಂದಿದೆ.

ಯಃ ಪ್ರೇರಕಃ ಸಕಲಲೋಕಬಲಸ್ಯ ನಿತ್ಯಂ
ಪೂರ್ಣಾವ್ಯಯೋತ್ತಬಲವೀರ್ಯತನುಃ ಸ್ವತಂತ್ರಃ।
ಕಿಂ ತಸ್ಯ ದೃಷ್ಟಿಪಥಗಸ್ಯ ಚ ವಾನರೋऽಯಂ
ಕರ್ತೇಶಚಾಪಮಪಿ ಯೇನ ಪುರಾ ಪ್ರಭಗ್ನಮ್ ॥ ೨೧ ॥

ಅ: ಶ್ರೀರಾಮನು ಸಕಲಲೋಕಗಳ ಬಲಕ್ಕೂ ಸದಾ ಪ್ರೇರಕ; ಪೂರ್ಣವೂ, ಅವ್ಯಯವೂ, ಉತ್ತಮವೂ ಆದ ಬಲವೀರ್ಯಗಳೇ ಅವನ ಶರೀರ; ಅವನು ಸ್ವತಂತ್ರ; ಅಂತಹ ಶ್ರೀರಾಮ ಕಣ್ಣಿಗೆ ಕಂಡು ಹೊಡೆದಿದ್ದರೂ ಆ ಕಪಿಯಾದ ವಾಲಿ ಏನನ್ನು ತಾನೆ ಮಾಡಬಲ್ಲವನಾಗಿದ್ದನು? ಅವನು ಈ ಹಿಂದೆ ಶಿವನ ಧನುಸ್ಸನ್ನು ಸಹ ಮುರಿದವನಲ್ಲವೆ?

---

೨೧. ಅನೇನ ಯಸ್ತ್ವದ್ದೃಷ್ಟಿಪಥಮೇಷ್ಯತಿ ತದೀಯಂ ತಪೋಬಲಂ ಚ ತ್ವಾಮಾಯಾತ್ವಿತಿ ವಾಲಿನಂ ಪ್ರತಿ ರುದ್ರವರಾದ್ಭೀತ್ಯಾ ರಾಮೋ ಅದೃಶ್ಯೋ ಬಭೂವೇತಿ ಶಂಕಾ ಪರಾಸ್ತಾ॥ –(ವ.)

೨೧. ವಾಲೀವ ಋಗ್ಭಾಷ್ಯೇ (೨/೨೨೯)। ಯಥಾ ವಾಲೀ ಸ್ವದೃಷ್ಟಿಪಾತಮಾತ್ರೇಣ ಪರಬಲಾಪಹಾರಂ ಕರೋತಿ ತಥಾ ತ್ವಂ ದೃಷ್ಟಿಪಾತಮಾತ್ರೇಣ ರಿಪುರಥೇ ಯೋಜಿತಾನಾಮಶ್ವಾನಾಂ ಬಲಮಪಹೃತ್ಯ ತಾನಪವಾಹಯಸೀತಿ । - ಋಗ್ಭಾಷ್ಯಟೀಕಾ

೨೧. ಔರಸೀಂ ಭಗಿನೀಂ ವಾಪಿ ಭಾರ್ಯಾಂ ವಾऽಪ್ಯನುಜಸ್ಯ ಯಃ।
ಪ್ರಚರೇತ ನರಃ ಕಾಮಾತ್ ತಸ್ಯ ದಂಡೋ ವಧಃ ಸ್ಮೃತಃ ॥ -(ವಾ. ರಾ. ೪/೧೮/೨೩)

ವಿ: ೧) ವಾಲಿಯ ಭಯಕ್ಕೆ ಅಂಜಿ ಶ್ರೀರಾಮನು ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡಿದನು ಎಂಬರ್ಥದ ಕಥೆ ತತ್ತ್ವಸಂಗ್ರಹರಾಮಾಯಣ ಮೊದಲಾದ ರಾಮಾಯಣಗಳಲ್ಲಿ ಕಂಡುಬರುವುದುಂಟು. ಋಗ್ಭಾಷ್ಯ ಮೊದಲಾದ ಟೀಕೆಯಲ್ಲೂ ವಾಲಿಗಿದ್ದ ಅಂತಹ ವರದ ಉಲ್ಲೇಖವಿದೆ. ಆ ವರ ಭಗವಂತನಾದ ಶ್ರೀರಾಮನಿಗೆ ಸರ್ವಥಾ ಅನ್ವಯಿಸದು ಎಂದು ಭಾವ.

೨) ವಾಲಿ ಇಂದ್ರಾವತಾರ; ಇಂದ್ರನಿಗೆ ಬಲ ಶಿವ; ಅಂತಹ ಶಿವನ ಧನುಸ್ಸನ್ನೇ ಮುರಿದ ಶ್ರೀರಾಮನು ಸ್ವತಃ ಶಿವನಿಗೇ ಬಲನಾದ ಮಹಾವಿಷ್ಣು ಎಂದ ಮೇಲೆ ಇಂತಹ ವಾಲಿಯ ಬಲ ಅಥವಾ ಅವನಿಗಿದ್ದ ವರ ಹೇಗೆ ತಾನೆ ಅಡ್ಡಿಯಾದೀತು? ಎಂದು ಭಾವ.

ಶ್ರೀರಾಮನಿಗೆ ಶರಣಾದ ವಾಲಿ

ಸನ್ನೇऽಥ ವಾಲಿನಿ ಜಗಾಮ ಚ ತಸ್ಯ ಪಾರ್ಶ್ವಂ
ಪ್ರಾಹೈನಮಾರ್ದ್ರವಚಸಾ ಯದಿ ವಾಂಛಸಿ ತ್ವಮ್ ।
ಉಜ್ಜೀವಯಿಷ್ಯ ಇತಿ ನೈಚ್ಛದಸೌ ತ್ವದಗ್ರೇ
ಕೋ ನಾಮ ನೇಚ್ಛತಿ ಮೃತಿಂ ಪುರುಷೋತ್ತಮೇತಿ ॥ ೨೨ ॥

ಅ: ವಾಲಿ ಕೆಳಕ್ಕೆ ಬೀಳಲು ಶ್ರೀರಾಮನು ಅವನ ಬಳಿ ಸಾರಿದ ಮತ್ತು ಸ್ನೇಹ ತುಂಬಿದ ಮಾತಿನಿಂದ ಅವನಿಗೆ ಹೇಳಿದ; 'ನೀನು ಬಯಸುವಿಯಾದಲ್ಲಿ, ನಾನು ನಿನ್ನನ್ನು ಬದುಕಿಸುವೆ;' ವಾಲಿಯು ಅದನ್ನು ಅಪೇಕ್ಷಿಸದೆ 'ಹೇ ಪುರುಷೋತ್ತಮ ! ನಿನ್ನೆದುರು ಯಾವನು ತಾನೇ ಮರಣವನ್ನು ಬಯಸದಿರನು ?' ಎಂದು ನುಡಿದ.

ವಿ: ೧) ಹಾಗೆ ಮೂರ್ಛಿತನಾದ ವಾಲಿಯ ಬಳಿಗೆ ತೆರಳಿ ಶ್ರೀರಾಮನು ಅವನ ಆಕ್ಷೇಪಗಳಿಗೆ ಉತ್ತರಿಸಿ ಕೇಳಿದ; ''ನೀನು ಇಚ್ಛಿಸಿದಲ್ಲಿ ನಿನ್ನನ್ನು ಬದುಕಿಸುವೆ''. ತನ್ನ ತಪ್ಪಿನ ಅರಿವಾಗಿದ್ದ ವಾಲಿ ಅದನ್ನು ಬಯಸದೆ ಮರಣವನ್ನೇ ಅಪೇಕ್ಷಿಸಿದ ಎಂದು ಭಾವ.

೨) ವಾಲಿಯು ಒಂದು ವೇಳೆ ಬದುಕಲು ಅಪೇಕ್ಷಿಸಿದ್ದಲ್ಲಿ ಸುಗ್ರೀವನಿಗೆ ನೀಡಿದ್ದ ಶ್ರೀರಾಮನ ಮಾತು ವ್ಯರ್ಥವಾಗುತ್ತಿರಲಿಲ್ಲವೇ? ಎಂದು ಶಂಕಿಸಕೂಡದು. ಈ ಮುಂಚಿತವಾಗಿ ಅವನ ಕಣ್ಣಿಗೆ ಬಿದ್ದಿದ್ದರೆ ಅದು ಖಂಡಿತ ಹಾಗಾಗುತ್ತಿದ್ದಿತು, ಏಕೆಂದರೆ ಆಗ ಇನ್ನೂ ಶ್ರೀರಾಮನ ಪೆಟ್ಟು ತಾಗದೆ ಅವನ ಬುದ್ಧಿ ಇನ್ನೂ ತಿಳಿಯಾಗಿರಲಿಲ್ಲ. ಈಗ ಹಾಗಲ್ಲ; ಶ್ರೀರಾಮನ ಬಾಣದ

---

೨೨. ವಾಲ್ಯುಜ್ಜೀವನೇ ಕೃತಪ್ರತಿಜ್ಞಾಭಂಗಃ ಇತಿ ಜಾನನ್ ರಾಮಃ ಕುತಸ್ತತ್ರ ಜಗಾಮ ಇತಿ ಚೇತ್ ಸತ್ಯಂ, ಸಮೀಪಂ ಗತ್ವಾ ಉಜ್ಜೀವಯಿಷ್ಯಾಮೀತಿ ಮಯೋಕ್ತೇ ಅಪಿ ಅಮೋಘಮಚ್ಛರಪಾತಾನಂತರಂ ಜ್ಞಾನೀ ಸ ತಥಾ ನ ಯಾಚಿಷ್ಯತೀತಿ ಜಾನನ್ನೇವ ಜಗಾಮ । ಶರಪಾತಾದ್ ಪ್ರಾಗ್ ದರ್ಶನೇ ತು ಬಾಧಕಾಭಾವಾತ್ ಪಾದೌ ಗೃಹೀತ್ವಾ ಸ್ವಜೀವನಮೇವ ಅಭ್ಯರ್ಥಯೇತಾಪಿ । ಅತಃ ಪ್ರಾಕ್ ಸ್ವಾತ್ಮಾನಂ ನಾದರ್ಶಯಚ್ಚೇತಿ ಬ್ರೂಮಃ । -(ವಾ)

ಪೆಟ್ಟಿಗೆ ವಾಲಿಗೆ ಪ್ರಾಣ ಹೋದರೂ ಜ್ಞಾನ ಲಭಿಸಿತ್ತು ಅದಕ್ಕೆಂದೇ ಸರ್ವಜ್ಞನಾದ ಶ್ರೀರಾಮ ಅವನಿಗೆ ಈಗ ತನ್ನ ದರ್ಶನವಿತ್ತ ಮತ್ತು ಹಾಗೆ ಕೇಳಿಯೂಬಿಟ್ಟ ಎಂದು ತಿಳಿಯಬೇಕು.

೩) ಶ್ರೀರಾಮಬಾಣ ಶ್ರೀವಾಯುದೇವರ ಸಂಕೇತ. ಅದು ಹೃದಯಕ್ಕೆ ನಾಟಿದ್ದು ಮಧ್ವಶಾಸ್ತ್ರವು ಹೃದಯಕ್ಕೆ ಮುಟ್ಟಿದರೆ ಜ್ಞಾನ ಬರುವುದು, ಹಾಗಿಲ್ಲದಾಗ ಜ್ಞಾನ ಹೋಗುವುದು ಎಂಬ ತತ್ತ್ವಕ್ಕೆ ಸಂಕೇತ. ಹೊರಗೆ ಹನುಮಂತನನ್ನು ತೊರೆದ ವಾಲಿಯ ಹೃದಯಕ್ಕೆ ಬಾಣವನ್ನು ಹೊಡೆಯುವ ಮೂಲಕ ಅವನು ಏನನ್ನು ತೊರೆದಿದ್ದನೆಂಬುದನ್ನು ಶ್ರೀರಾಮ ಅವನ ಹೃದಯಕ್ಕೆ ತಿಳಿಸಿದ್ದ; ಮತ್ತು ಆ ಕೊರತೆಯನ್ನು ತುಂಬಿಸಿಯೂ ಬಿಟ್ಟ. ಅದನ್ನು ಗ್ರಹಿಸಿದ ವಾಲಿ ತತ್ತ್ವ ತಿಳಿದ ಧನ್ಯತೆಯಲ್ಲಿ ಆ ಪ್ರಾಣನನ್ನು ಹಿಡಿದೇ ಪ್ರಾಣ ತೊರೆದ. ಅದರಿಂದಾಗಿ ಮುಂದೆ ಶ್ರೀರಾಮನಿಗೆ 'ಕುಶ'ನೆಂಬ ಮಗನಾಗಿ ಜನಿಸಿ, ರಾಮರಾಜ್ಯದ ಉತ್ತರಾಧಿಕಾರಿಯಾದ. ಮುಂದಿನ ಜನ್ಮದಲ್ಲಿ ಭೀಮಾನುಜನಾಗಿ ಅರ್ಜುನರೂಪದಿಂದ ಜನಿಸಿ ಶ್ರೀಕೃಷ್ಣನಿಗೆ ಪ್ರಿಯನಾಗಿ ಭಗವದ್ಗೀತೆಯನ್ನು ಶ್ರವಣಮಾಡಿದ. ಇಲ್ಲಿ ತನ್ನನ್ನು ಕೊಲ್ಲಿಸಿ, ಕರ್ಣನಾಗಿ ಜನಿಸಿದ್ದ ಸುಗ್ರೀವನನ್ನು ಶ್ರೀಕೃಷ್ಣಭೀಮರ ಅನುಗ್ರಹದಿಂದ ತಾನೇ ಕೊಂದು ಕೃತಕೃತ್ಯನಾದ ಎಂದು ತಿಳಿಯಬೇಕು.

೪) ಶ್ರೀರಾಮನಾಮಸ್ಮರಣೆಯೇ ಅಂತ್ಯಕಾಲಕ್ಕೆ ಮಹಾಪುಣ್ಯಕರ ಎಂದ ಮೇಲೆ, ಅವನ ದರ್ಶನ ಇನ್ನೂ ಮಹಾ ಪುಣ್ಯಕರವಾದ್ದರಿಂದ ಜ್ಞಾನಿಗಳು ಅಂತಹ ಸನ್ನಿವೇಶದಲ್ಲಿ ಒದಗುವ ಸಾವನ್ನು ಎಂದೂ ನಿರಾಕರಿಸಲಾರರು ಎಂದು ಭಾವ.

೫) ಅಂತೂ ವಾಲಿಯು ಈ ಮಾತನ್ನಾಡಿ ಸತ್ತುಬದುಕಿದ ಎಂದು ಭಾವ.

೬) ತಾನು ಅಪರಾಧಿಯಾಗಿದ್ದಲ್ಲಿ ಶ್ರೀರಾಮ ವಾಲಿಯ ಬಳಿ ತೆರಳುತ್ತಲೆ ಇರಲಿಲ್ಲ; ಅವನು ಹಾಗೆ ತೆರಳಿದ ಕಾರ್ಯವೆ ಅವನ ನಿರ್ದೋಷತ್ವಕ್ಕೆ ಗಮಕ.

೭) 'ವಾಲಿವಧೆ'ಯ ಪ್ರಸಂಗ ರಾಮಾಯಣದ ಅತ್ಯಂತ ಜಟಿಲಸಮಸ್ಯೆಗಳಲ್ಲೊಂದು; ನಿರಪರಾಧಿಯಾದ ವಾಲಿಯನ್ನು ಶ್ರೀರಾಮ ಅದೆಂತು ಮರೆಯಲ್ಲಿ ನಿಂತು ಸಂಹರಿಸಿದ? ಇದು ಅವನ ಚಾರಿತ್ರ್ಯಕ್ಕೆ ತಟ್ಟಿದ ದೊಡ್ಡ ಕಲಂಕವಲ್ಲವೇ? ಎಂಬುದು ಇಲ್ಲಿಯ ಸಮಸ್ಯೆ. ಇದನ್ನು ಶ್ರೀಮದಾಚಾರ್ಯರು ಪರಿಹರಿಸಿರುವ ರೀತಿ ಅನ್ಯಾದೃಶವಾದುದು.

೮) ತನ್ನ ತಮ್ಮನ ಪತ್ನಿ ರುಮೆಯನ್ನು ಕೂಡಿದ್ದು ವಾಲಿಯ ಲೌಕಿಕ ಅಪರಾಧವಾದರೆ, ಹನುಮಂತನಂತಹ ಜೀವೋತ್ತಮನ ವ್ಯಕ್ತಿತ್ವವನ್ನು ಗುರುತಿಸದೆ ಹೋಗಿದ್ದು ಅವನ ಆಧ್ಯಾತ್ಮಿಕ ಅಪರಾಧ; ಎಂದರೆ ವಾಲಿಯು ನಿರಪರಾಧಿ ಎಂಬ ವಾದ ಸರಿಯಲ್ಲ ಎಂದರ್ಥ.

೯) ಇನ್ನು ಮರೆಯಲ್ಲಿ ನಿಂತು ಕೊಂದದ್ದು : ಶ್ರೀರಾಮನು ವಾಲಿಯ ಜೊತೆ ಯುದ್ಧಕ್ಕೆ ಬಂದಿದ್ದರೆ ಎದುರು ನಿಂತೇ ಹೋರಾಡಬೇಕಿತ್ತು ಆದರೆ ಅವನು ಬಂದಿದ್ದು ಅಪರಾಧಿಯಾದ ಅವನನ್ನು ಶಿಕ್ಷಿಸಲೆಂದು ಮಾತ್ರ. ಅಪರಾಧಿಯನ್ನು ಶಿಕ್ಷಿಸಬೇಕೇ ಹೊರತು ಅವನೊಂದಿಗೆ

ಹೋರಾಡಬೇಕಿಲ್ಲ. ಅಪರಾಧಿಯನ್ನು ನೇರವಾಗಿ ಸಂಹರಿಸಹೊರಟಾಗ ಅವನು ಶರಣಾಗುವುದು ಸ್ವಾಭಾವಿಕ. ಪ್ರಾಣದ ಮೇಲಿನ ಆಸೆಯಿಂದ ಹಾಗೆ ಶರಣುಹೊಕ್ಕವನನ್ನು ಕೊಲ್ಲುವುದು ಧರ್ಮವಲ್ಲ; ವಾಲಿಯಂತೂ ಭಕ್ತಿಯಿಂದಲೇ ಶರಣಾಗುವವನು. ಆದರೆ ಬರೀ ಕಾಲುಹಿಡಿಯುವುದು ಶಿಕ್ಷೆಯ ವಿನಾಯಿತಿಗೆ ಕಾರಣವಾಗಬಾರದು. ಅದಕ್ಕೆಂದೇ ಶ್ರೀರಾಮನು ಅವನನ್ನು ಅವನ ಕಣ್ಣಿಗೆ ಕಾಣದಂತೆಯೇ ಶಿಕ್ಷಿಸಿದ.

೧೦) ಇಂದು ಸಹ ಮರಣದಂಡನೆ ವಿಧಿಸುವಾಗ ಶಿಕ್ಷೆಗೆ ಗುರಿಯಾಗುವವನ ಕಣ್ಣಿಗೆ ಬಟ್ಟೆಕಟ್ಟುವ ಪದ್ಧತಿ ರೂಢಿಯಲ್ಲಿದೆ; ವಿದ್ಯಾರ್ಥಿಗಳಿಗೆ ಕಾಣದಂತೆ ರಹಸ್ಯಸ್ಥಳದಲ್ಲಿ ಉತ್ತರಪತ್ರಿಕೆ–ಗಳ ಮೌಲ್ಯಮಾಪನ ಮಾಡುವ ರೂಢಿಯೂ ಅದೇ ತೆರನಾಗಿದೆ; ಎಂದರೆ ಇವೆಲ್ಲ ಶ್ರೀರಾಮನು ವಾಲಿಯನ್ನು ಸಂಹರಿಸುವಾಗ ತೋರಿಸಿಕೊಟ್ಟಿರುವ ಆದರ್ಶದ ಫಲಶ್ರುತಿ; ಎಂದರೆ ಅವನು ಮರೆಯಲ್ಲಿ ನಿಂತು ಸಂಹರಿಸಿದ್ದು ಅವನ ಹಿರಿಮೆತೋರುವ ಅಂಶವೇ ಹೊರತು ಕಲಂಕಕ್ಕೆ ಕಾರಣವಾಗುವುದಿಲ್ಲ;

೧೧) ಇದನ್ನೆಲ್ಲ ಸ್ವತಃ ರಾಮನೊಂದಿಗೆ ಚರ್ಚಿಸಿ ಅರ್ಥ ಮಾಡಿಕೊಂಡದ್ದು ವಾಲಿಯ ಉದ್ಧಾರಕ್ಕೆ ಕಾರಣವಾದ ಅಂಶ. ಅನ್ಯಾಯಕ್ಕೆ ಗುರಿಯಾದವನೆಂದು ತಿಳಿದಿರುವ ವಾಲಿಯೇ ಶ್ರೀರಾಮನು ನೀಡಿದ ಉತ್ತರಕ್ಕೆ ಸಂತೃಪ್ತನಾದ ಎಂಬುದು ರಾಮಾಯಣದಲ್ಲೇ ಬಂದಿರುವ ವಿಚಾರ.

೧೨) ಎಂದರೆ ವಾಲಿವಧೆಯು ಶ್ರೀರಾಮ ಮಾಹಾತ್ಮ್ಯವನ್ನು ಸಾರುವ ಪ್ರಸಂಗವೇ ಹೊರತು ದೋಷವನ್ನು ಆರೋಪಿಸುವ ಭಾಗವಲ್ಲ ಎಂದು ತಿಳಿಯಬೇಕು.

ಕಪಿರಾಜನಾಗಿ ಸುಗ್ರೀವ

ಕಾರ್ಯಾಣಿ ತಸ್ಯ ಚರಮಾಣಿ ವಿಧಾಯ ಪುತ್ರಂ
ತ್ವಗ್ರೇ ನಿಧಾಯ ರವಿಜಃ ಕಪಿರಾಜ್ಯ ಆಸೀತ್ ।
ರಾಮೋಽಪಿ ತದ್ಗಿರಿವರೇ ಚತುರೋಽಥ ಮಾಸಾನ್
ದೃಷ್ಟ್ವಾ ಘನಾಗಮಮುವಾಸ ಸಲಕ್ಷ್ಮಣೋಽಸೌ ॥ ೨೩ ॥

---

೨೩. ಪಿತೃಕರ್ಮಣಿ ಪುತ್ರ ಏವ ಮುಖ್ಯಾಧಿಕಾರೀ ಇತ್ಯುಕ್ತಮ್ । –(ಜ)

ತಸ್ಯ ವಾಲಿನಃ ಪುತ್ರಂ ಅಂಗದಂ ತು ವಿಶೇಷೇಣ ಅಗ್ರೇ ನಿಧಾಯ ಯುವರಾಜಪಟ್ಟಂ ಬದ್ಧ್ವಾ ಇತ್ಯರ್ಥಃ । ಅತ ಏವ ಯುವರಾಜಯುಕ್ತಃ ಇತಿ ವದಿಷ್ಯತಿ । –(ವಾ)

೨೩. ತಸ್ಮಿನ್ ಪರ್ವತಶ್ರೇಷ್ಠೇ ಮಾಲ್ಯವತಿ । –(ವ)

೨೩. ಘನಾಗಮಂ – ಮೇಘಾಗಮಂ ವರ್ಷರ್ತುಮಿತಿ ಯಾವತ್ । –(ವ)

ಅ: ಅವನ ಮಗನಾದ ಅಂಗದನನ್ನು ಮುಂದಿರಿಸಿಕೊಂಡು, ಆ ವಾಲಿಯ ಅಂತ್ಯಕ್ರಿಯೆ-ಗಳನ್ನು ಸುಗ್ರೀವ ಪೂರೈಸಿದ; ಮತ್ತು ಕಪಿಗಳ ಆಧಿಪತ್ಯವನ್ನು ಪಡೆದ; ಮಳೆಗಾಲ ಸನ್ನಿಹಿತವಾದುದನ್ನು ಕಂಡು ಶ್ರೀರಾಮನೂ ಸಹ ಲಕ್ಷ್ಮಣನೊಂದಿಗೆ ನಾಲ್ಕು ತಿಂಗಳುಗಳ ಕಾಲ ಆ ಶ್ರೇಷ್ಠವಾದ ಪರ್ವತದಲ್ಲಿ ನೆಲೆಸಿದ.

ವಿ: ೧) ವಾಲಿಯ ಅಂತ್ಯಕ್ರಿಯೆಗಳನ್ನು ಸುಗ್ರೀವ ಅವನ ಪುತ್ರನಾದ ಅಂಗದನನ್ನು ಮುಂದಿರಿಸಿಕೊಂಡೇ ಶ್ರೀರಾಮನ ಆದೇಶದಂತೆ ಪೂರೈಸಿದ; ಅನಂತರ ಶ್ರೀರಾಮನು ಕಳುಹಿಸಿದ ಹನುಮಂತನ ನೇತೃತ್ವದಲ್ಲಿ ಕಪಿರಾಜ್ಯದಲ್ಲಿ ಅಭಿಷಿಕ್ತನಾದ; ವಾಲಿಪುತ್ರನಾದ ಅಂಗದನಿಗೆ ಯೌವರಾಜ್ಯವನ್ನಿತ್ತ.

೨) ಶ್ರೀರಾಮನು ಆ ಸಮಯದಲ್ಲಿ ಚಾತುರ್ಮಾಸ್ಯವೆಂಬ ಕಾರಣದಿಂದ ಆ ಮಾಲ್ಯವತ್ಪರ್ವತದಲ್ಲಿ ಲಕ್ಷ್ಮಣನೊಂದಿಗೆ ವಾಸಿಸಿದ.

೩) 'ಪುತ್ರಂ ತ್ವಗ್ರೇ ನಿಧಾಯ' ಎಂಬ ಮಾತಿನಿಂದ ಪಿತೃಕಾರ್ಯಕ್ಕೆ ಪುತ್ರನೇ ಉತ್ತರಾಧಿಕಾರಿ ಎಂಬುದನ್ನೂ ಮತ್ತು ಅವನಿಗೆ ಯೌವರಾಜ್ಯ ದೊರೆತದ್ದನ್ನೂ ಸಹ ಸೂಚಿಸಿರುವರು.

೪) ನಿಜಕ್ಕೂ ಪತ್ನಿಯನ್ನು ಕಳೆದುಕೊಂಡವನು, ಅವಳನ್ನು ಹುಡುಕುವ ಕಾರ್ಯದಲ್ಲಿ ರಾಹುಕಾಲ, ಗುಳಿಕಕಾಲ, ಚಾತುರ್ಮಾಸ್ಯಕಾಲ ಮೊದಲಾದವುಗಳನ್ನು ಎಂದೂ ಗಮನಿಸಲಾರನು. ಎಂದರೆ ಹಾಗೆ ಮಾಡಿದ ಶ್ರೀರಾಮನು ನಿಜಕ್ಕೂ ಸೀತೆಯನ್ನು ಕಳೆದುಕೊಂಡವನೇ ಅಲ್ಲ ಎಂಬ ಸೂಚನೆಯೂ ಇಲ್ಲಿದೆ.

ಸುಗ್ರೀವನಿಗೆ ಹನುಮಂತನ ಉಪದೇಶ

ಅಥಾತಿಸಕ್ತೇ ಕ್ಷಿತಿಪೇ ಕಪೀನಾಂ
ಪ್ರವಿಸ್ಮೃತೇ ರಾಮಕೃತೋಪಕಾರೇ ।
ಪ್ರಸಹ್ಯ ತಂ ಬುದ್ಧಿಮತಾಂ ವರಿಷ್ಠೋ
ರಾಮಾಂಘ್ರಿಭಕ್ತೋ ಹನುಮಾನುವಾಚ ॥ ೨೪ ॥

ಅ: ಅನಂತರ ಕಪಿರಾಜನಾದ ಸುಗ್ರೀವ ಶ್ರೀರಾಮನು ಮಾಡಿದ ಉಪಕಾರವನ್ನು ಸಂಪೂರ್ಣವಾಗಿ ಮರೆತು ಬಹಳ ಭೋಗಾಸಕ್ತನಾಗಲು, ಬುದ್ಧಿವಂತರಲ್ಲಿ ಶ್ರೇಷ್ಠನೂ ಶ್ರೀರಾಮಪಾದದ ಪರಮಭಕ್ತನೂ ಆದ ಹನುಮಂತ ಅವನನ್ನು ನಿಂದಿಸಿ ಹೀಗೆಂದ.

ವಿ: ೧) ಶ್ರೀರಾಮ ತನ್ನ ಮಾತಿನಂತೆ ವಾಲಿಯನ್ನು ಸಂಹರಿಸಿ ಸುಗ್ರೀವನಿಗೆ ರಾಜ್ಯ ಮತ್ತು ಪತ್ನಿಯನ್ನು ಅನುಗ್ರಹಿಸಿದ; ಆದರೆ ಸುಗ್ರೀವನು ಸೀತಾನ್ವೇಷಣೆಗೆ ತೊಡಗುವ ತನ್ನ ಕರ್ತವ್ಯವನ್ನು ಮರೆತು ರಾಜ್ಯಾದಿ ಭೋಗಗಳಲ್ಲಿ ಅತ್ಯಂತ ಆಸಕ್ತನಾದ. ಅದನ್ನು ಕಂಡು ಹನುಮಂತ ಅವನನ್ನು ಎಚ್ಚರಿಸಿದ; ಹಾಗೆ ಎಚ್ಚರಿಸಲು ಅವನು ತುಂಬಾ ಬುದ್ಧಿವಂತನೂ, ಶ್ರೀರಾಮನ ಪರಮಭಕ್ತನೂ ಆಗಿದ್ದುದೇ ಕಾರಣ ಎಂದು ಭಾವ.

೨) ಭಗವಂತನು ಸಾಧನಶರೀರವನ್ನು ಅನುಗ್ರಹಿಸಿರುವುದನ್ನು ಮರೆತು ಸಾಂಸಾರಿಕ ಭೋಗಗಳಲ್ಲಿ ಮಿತಿಮೀರಿ ಆಸಕ್ತರಾಗುವ ಸುಜೀವಿಗಳನ್ನು ಶ್ರೀವಾಯುದೇವರು ಹೀಗೆ ತಮ್ಮ ಮಧ್ವಾದಿ ರೂಪಗಳಿಂದ ಎಚ್ಚರಿಸಿ ಉದ್ಧರಿಸುವರು ಎಂದು ಸಹ ತಿಳಿಯಬೇಕು.

ನ ವಿಸ್ಮೃತಿಸ್ತೇ ರಘುವರ್ಯಕಾರ್ಯೇ
ಕಾರ್ಯಾ ಕಥಂಚಿತ್ ಸ ಹಿ ನೋऽಭಿಪೂಜ್ಯಃ ।
ನ ಚೇತ್ ಸ್ವಯಂ ಕರ್ತುಮಭೀಷ್ಟಮದ್ಯ ತೇ
ಧ್ರುವಂ ಬಲೇನಾಪಿ ಹಿ ಕಾರಯಾಮಿ ॥ ೨೫ ॥

ಅ: ರಘುಶ್ರೇಷ್ಠನಾದ ಶ್ರೀರಾಮನ ಕಾರ್ಯವನ್ನು ತೊರೆಯುವುದು ತರವಲ್ಲ; ಅವನು ನಮ್ಮೆಲ್ಲರಿಗೂ ಪರಮಪೂಜ್ಯನಲ್ಲವೇ! ಶ್ರೀರಾಮನ ಕಾರ್ಯವನ್ನು ನೀನಾಗಿಯೇ ಮಾಡದಿದ್ದಲ್ಲಿ ನಾನೇ ಬಲಾತ್ಕಾರದಿಂದ ಮಾಡಿಸುವೆನು.

ವಿ: ೧) 'ಶ್ರೀರಾಮನ ಕಾರ್ಯವನ್ನು ನೀನಾಗಿಯೇ ಈಗ ಮಾಡಲು ಸಿದ್ಧನಾಗದೇ ಹೋದಲ್ಲಿ ನಾನು ನನ್ನ ಬಲದಿಂದ ನಿನ್ನಿಂದ ಆ ಕಾರ್ಯವನ್ನು ಮಾಡಿಸಬೇಕಾಗುವುದು' ಎಂಬುದು ಹನುಮಂತ ಸುಗ್ರೀವನಿಗೆ ನೀಡಿದ ಎಚ್ಚರಿಕೆ.

೨) 'ಭಗವಂತನು ನಮಗೆ ಮಾಡುತ್ತಿರುವ ಉಪಕಾರಕ್ಕೆ ಪ್ರತಿಯಾಗಿ ಅವನು ನಮಗೆ ವಿಧಿಸಿರುವ ಕರ್ತವ್ಯವನ್ನು ನಿರ್ವಹಿಸುವ ಹೊಣೆ ನಮ್ಮದಾಗಿದೆ; ಹಾಗೆ ಮಾಡದೆ ಮೈಮರೆಯುವ ಕೃತಘ್ನತೆ ಅತ್ಯಂತ ಅಪಾಯಕಾರಿಯಾದುದು' ಎಂಬ ಆಧ್ಯಾತ್ಮಿಕ ತತ್ತ್ವ ಇಲ್ಲಿ ಸೂಚಿತವಾಗಿದೆ.

೩) ಹನುಮಂತನು ಸುಗ್ರೀವನಿಗೆ ನೀಡುವ ಎಚ್ಚರಿಕೆಯಲ್ಲಿ ಆತನಿಗೆ ತನ್ನ ಬಲದ ಬಗ್ಗೆ ಇರುವ ಅಪಾರ ವಿಶ್ವಾಸವೂ ಧ್ವನಿತವಾಗಿದೆ.

---

೨೫. ಹನುಮತೋ ಬಲಾಧಿಕ್ಯೇ ಯುಕ್ತ್ಯಾಧಿಕ್ಯೇ ಚ 'ವಾಯುರ್ಭೀಮಃ' ಇತ್ಯಾದಿ ಪ್ರಸಿದ್ಧಿಂ ಸೂಚಯಿತುಂ 'ಕಾರಯಾಮಿ ಹಿ' ಇತಿ ಹಿಶಬ್ದಃ । -(ವಾ)

ಹನುಮಂತ ನಡೆಸಿದ ಕಪಿಸಮ್ಮೇಳನ

ಸ ಏವಮುಕ್ತ್ವಾ ಹರಿರಾಜಸನ್ನಿಧೌ
ದ್ವೀಪೇಷು ಸಪ್ತಸ್ವಪಿ ವಾನರಾನ್ ಪ್ರತಿ ।
ಸಮ್ಮೇಲನಾಯಾಶುಗತೀನ್ ಸ್ಮ ವಾನರಾನ್
ಪ್ರಸ್ಥಾಪಯಾಮಾಸ ಸಮಸ್ತಶಃ ಪ್ರಭುಃ ॥ ೨೬ ॥

ಅ: ಕಪಿರಾಜನಾದ ಸುಗ್ರೀವನ ಬಳಿ ಹೀಗೆ ಹೇಳಿದ ಹನುಮಂತ ಸಪ್ತದ್ವೀಪಗಳಲ್ಲಿ ನೆಲೆಸಿದ್ದ ವಾನರರಿಗೆಲ್ಲ ಒಟ್ಟು ಸೇರಲು ಆಹ್ವಾನಿಸಲೆಂದು ಶೀಘ್ರಗತಿಯ ವಾನರರನ್ನು ಕಳುಹಿಸಿಕೊಟ್ಟ.

---

೨೬. ಶತಯೋಜನಪ್ರದೇಶೇ ವಿದ್ಯಮಾನಲಂಕಾದ್ವೀಪಗಮನೇ ಅಸಮರ್ಥಾನಾಂ ಕಪೀನಾಂ ದ್ವೀಪೇಷು ಸಪ್ತಸ್ವಪಿ ಇತ್ಯುಕ್ತಸಪ್ತದ್ವೀಪಗಮನಾಯ ಬಹುಲಕ್ಷಯೋಜನಾಭ್ಯಂತರಿತ ಸಪ್ತದ್ವೀಪಮರ್ಯಾದೀಭೂತಸಮುದ್ರೋಲ್ಲಂಘನೇ ಕಥಂ ಸಾಮರ್ಥ್ಯಮಿತಿ ಚೇತ್, ಸತ್ಯಮ್ । ಸಪ್ತಸ್ವಪಿ ಸಮುದ್ರೇಷು ದಶತ್ರಿಂಶಚ್ಚತ್ವಾರಿಂಶತ್ ಪಂಚಾಶದಾದಿನವತಿ-ಪರ್ಯಂತಯೋಜನೇಷು ತತ್ರ ತತ್ರ ಅವಾಂತರದ್ವೀಪಾಃ ಗಾಧಪ್ರದೇಶಾಶ್ಚ ಸಂತಿ । ತತ್ಸರ್ವಂ ಹನುಮದುಪದೇಶೇನ ವಾನರಾ ಜಾನಂತಿ । ಲಂಕಾದ್ವೀಪಾಭ್ಯಂತರೇ ತು ತದಪಿ ನಾಸ್ತೀತಿ 'ಮಾರ್ಗಜ್ಞಾಃ ಪ್ಲವಗಾನ್ ಸರ್ವಾನುರ್ವೀಶಾನ್' ಇತ್ಯಾದಿ ಪೂರ್ವಾಚಾರ್ಯೋಕ್ತರೀತ್ಯಾ ಪರಿಹಾರಸಂಭವಾತ್ । ಅತ ಏವ ಆಶುಗತೀನ್ ಆಶುಗಮನಸಮಯೇ ಏವ ಹನುಮದುಪದೇಶೇನ ಗತಿಃ ಮಾರ್ಗಾಣಾಮವಗತಿರ್ಯೇಷಾಂ ತೇ ಇತಿ ಸಮಾಸೋ ಜ್ಞೇಯಃ । -(ವಾ)

೨೬. ನ ತು ತಾರಾದ್ಯಪೇಕ್ಷಯಾ ಅಸಮರ್ಥಾನಾಂ ವಿನತಾದಿಕಪೀನಾಂ ಲವಣಾದಿಸಪ್ತಸಮುದ್ರತರಣೇ ಶಕ್ತಿರಸ್ತೀತ್ಯುಕ್ತಂ ಶತಯೋಜನಯಾಮಲವಣಸಮುದ್ರೈಕದೇಶಪ್ಲವನೇ ತಾರಾದ್ಯಾಃ ನ ಸಮರ್ಥಾ ಇತಿ ಚ ವಕ್ಷ್ಯತೇ । ಇದಮುಭಯವಿರುದ್ಧಮಿತಿ ಚೇನ್ನ । ಭಾವಿಕಾರ್ಯಾನುಸಾರೇಣ ವಿನತಾದೀನಾಂ ತಾದೃಶೀ ಶಕ್ತಿಃ ರಾಮೇಣ ದತ್ತಾ ತಾರಾದೀನಾಂ ಚ ಹನುಮದ್ಬಲಪ್ರಕಾಶನಾರ್ಥಂ ಶಕ್ತಿರ್ನ ದತ್ತಾ ಇತ್ಯವಗಂತವ್ಯಮ್ । ಅಯಮೇವ ಅರ್ಥೋ ಉಕ್ತಃ ಸ್ಕಾಂದೇ ।

ವಿನತಸ್ಯ ಸುಪರ್ಣಸ್ಯ ತಥಾ ಶತಬಲೇರಪಿ ।
ತಥಾ ತತ್ಪರಿವಾರಾಣಾಂ ಕಪೀನಾಂ ರಾಮಸೇವಿನಾಮ್ ॥
ಅತ್ಯಾಯಾಮಸಮುದ್ರಾಣಾಂ ತರಣೇ ಶಕ್ತಿರೂರ್ಜಿತಾ ।
ಇಚ್ಛಯಾ ರಾಮದೇವಸ್ಯ ತದಾಸೀತ್ ಕರುಣಾತ್ಮನಃ ॥
ಹನೂಮತಶ್ಚ ಸಾಮರ್ಥ್ಯಪ್ರಾಕಟ್ಯಾರ್ಥಂ ಮಹಾತ್ಮನಃ ।
ಅಂಗದಾದಿಕಪೀಂದ್ರಾಣಾಂ ಲವಣಾಂಬುಧಿತಾರಣೇ ॥
ನೈವಾಸೀತ್ ತಾದೃಶೀ ಶಕ್ತೀ ರಾಮಸ್ಯೈವಾಜ್ಞಯಾ ತದಾ ।
ಅತಃ ಸರ್ವಕಪೀಂದ್ರಾಣಾಂ ಲವಣಾಂಬುಧಿತಾರಣೇ ॥
ಅಸಾಮರ್ಥ್ಯಜ್ಞಾಪನಾರ್ಥಂ ರಾಮಃ ಸೇತುಂ ಬಬಂಧ ಹ ॥ - ಇತಿ ಸ್ಕಾಂದೇ । - (ಜ.)

೨೬. ಅತ್ರ ಟಪ್ಪಣಿಕಾರಾಸ್ತು ದ್ವೀಪೇಷು ಸಪ್ತಸ್ವಿತ್ಯೇತಜ್ಜಂಬುಪ್ಲಕ್ಷಾದಿಷ್ವಿತಿ ವ್ಯಾಖ್ಯಾಯ ನನು ಶತಯೋಜನಾಯಾಂ ಲವಣಸಮುದ್ರೈಕದೇಶಪ್ಲವನೇ ತಾರಾದಯೋ ನ ಶೇಕುಃ ತತ್ಕುತಃ ಕಿಷ್ಕಿಂಧಾಸ್ಥಿತಾನಾಂ ತಾರಾದ್ಯಪೇಕ್ಷಯಾ ಅಸಮರ್ಥಾನಾಂ ಕಪೀನಾಂ ಸಪ್ತಸಮುದ್ರತರಣೇ ದ್ವೀಪಗಮನೇ ಮಧ್ಯಸ್ಥಾದ್ರಿಪ್ಲವನೇನ ತಸ್ಥಕಪ್ಯಾಹ್ವಾನಶಕ್ತಿಃ ಕಥಂ ವಾ ತತ್ರತ್ಯಾನಾಂ ಬಹ್ವ್ಯಃ - ಸಮುದ್ರತರಣೇ ಶಕ್ತಿರಿತ್ಯಾಶಂಕ್ಯ ನೈವ ಭಾವಿಕಾರ್ಯಾನುಸಾರೇಣ ಮಾರುತಿಬಲ-ಪ್ರಕಟನಾಯ ತಾರಾದೀನಾಂ ತಾದೃಶಶಕ್ತೀರೀಶ್ವರೇಣ ದತ್ತತ್ವಾದಿತಿ ಪರಿಹೃತವಂತಃ ॥ -(ವ.)